1	ಪೌತ್ರಾಯಣನ ಕಥೆ—ಸಂವರ್ಗವಿದ್ಯೆಯು	೧೯೧
2	ಸತ್ಯಕಾಮನ ಕಥೆ—ವಾಸುದೇವಾದಿಗಳ ವಿದ್ಯೆಯು	೨೦೦
3	ಪರಾಪರಬ್ರಹ್ಮವಿದ್ಯೆಯು	೨೧೦
4	ಉಪಕೋಸಲನಿಗೆ ಗಾರ್ಹಪತ್ಯನ ಉಪದೇಶವು	೨೧೩
5	ಉಪಕೋಸಲನಿಗೆ ದಕ್ಷಿಣಾಗ್ನಿಯ ಉಪದೇಶವು	೨೧೩
6	ಉಪಕೋಸಲನಿಗೆ ಆಹವನೀಯಾಗ್ನಿಯ ಉಪದೇಶವು	೨೧೪
7	ವ್ಯಾಹೃತಿಹೋಮವು	೨೨೫
	ಏಳನೆಯ ಅಧ್ಯಾಯ ೧—೨೪ ಖಂಡಗಳು.	**೨೩೦–೨೭೩**
1	ಮುಖ್ಯಪ್ರಾಣನ ವಿದ್ಯೆಯು	೨೩೦
2	ಶ್ವೇತಕೇತು ಪ್ರವಾಹಣರ ಸಂವಾದವು ಪಂಚಾಗ್ನಿ ವಿದ್ಯೆಯು ಧೂಮಮಾರ್ಗವು ಅರ್ಚಿರಾದಿ ಮಾರ್ಗವು	೨೪೧
3	ಪ್ರಾಚೀನಶಾಲ ಮೊದಲಾದ ಐವರ ಸಂವಾದವು, ವೈಶ್ವಾನರವಿದ್ಯೆಯು	೨೫೬
4	ಹೋಮಪ್ರಕಾರವು	೨೬೪
	ಎಂಟನೆಯ ಅಧ್ಯಾಯ ೧—೧೬ ಖಂಡಗಳು.	**೨೭೪–೩೬೫**
1	ತಂದೆಯಾದ ಉದ್ದಾಲಕರು ಶ್ವೇತಕೇತುವಿಗೆ ಮಾಡಿದ ಭೇದೋಪದೇಶವು	೨೭೪
2	ಭೇದೋಪಯುಕ್ತವಾದ ಸೃಷ್ಟಿನಿರೂಪಣವು	೨೮೪
	ಒಂಭತ್ತನೆಯ ಅಧ್ಯಾಯ ೧—೨೬ ಖಂಡಗಳು.	**೩೬೬–೪೧೯**
1	ದೇವತೆಗಳ ತಾರತಮ್ಯವು	೩೬೬
2	ಸನತ್ಕುಮಾರರು ನಾರದರಿಗೆ ಮಾಡಿದ ತಾರತಮ್ಯೋಪದೇಶವು	೩೭೦
3	ಮುಕ್ತರ ಮಹಿಮೆಯು	೪೧೬
	ಹತ್ತನೆಯ ಅಧ್ಯಾಯ ೧—೧೫ ಖಂಡಗಳು.	**೪೨೦–೪೭೯**
1	ಮುಮುಕ್ಷುಗಳು ಮಾಡತಕ್ಕ ಭಗವನ್ಮಹಿಮೆಯು	೪೨೦
2	ಬ್ರಹ್ಮಚರ್ಯವು ಯಾಗಾದಿಗಳ ಸ್ವರೂಪವೆಂದು ನಿರೂಪಿಸುವುದು	೪೩೭
3	ಹೃದಯದಲ್ಲಿರತಕ್ಕ ಶ್ರೀ ಹರಿಯ ಉಪಾಸನೆಯು	೪೪೦
4	ಇಂದ್ರ ವಿರೋಚನರಿಗೆ ಚತುರ್ಮುಖನ ಉಪದೇಶವು	೪೪೨
	ಶ್ರೀಮದಾಚಾರ್ಯರ ಮಹಿಮೆಯು	೪೭೯–೪೮೨

ಮೇಲಿಂದಮೇಲೆ ನೋಡುವಾಗ ಅಭೇದಪರವಾಗಿ ತೋರುವ

ಪ್ರಧಾನ ವೇದವಚನಗಳು.

ಜಂಜರಾ.	ವೇದವಚನಗಳು.	ಪುಟ.
1	ಅನ್ನಂ ಬ್ರಹ್ಮೇತ್ಯುಪಾಸ್ತೇ	೩೮೧
2	ಆಪೋ ಬ್ರಹ್ಮೇತ್ಯುಪಾಸ್ತೇ	೩೮೨
3	ಆಪಮೇವೇದಃ ಸರ್ವಮಸಾನಿ	೨೩೮
4	ಆಕಾಶೋ ಬ್ರಹ್ಮೇತಿ	೧೮೫
5	ಆಕಾಶಂ ಬ್ರಹ್ಮೇತು ಪಾಸ್ತೇ	೩೮೪
6	ಆತ್ಮೈವೇದಃ ಸರ್ವಂ	೪೦೨
7	ಆದಿತ್ಯಂ ಬ್ರಹ್ಮೇತ್ಯುಪಾಸ್ತೇ	೧೮೯
8	ಆದಿತ್ಯೋ ಬ್ರಹ್ಮೇತ್ಯಾದೇಶಃ	೧೮೭
9	ಆಶಾಂ ಬ್ರಹ್ಮೇತ್ಯುಪಾಸ್ತೇ	೩೮೬
10	ಇಯಮೇವರ್ಗಗ್ನಿಃ ಸಾಮ	೩೨,೩೩
11	ಏವಮೇವ ಖಲು ಸೋನ್ಯೇನಮಾಃ ಸರ್ವಾಃ ಪ್ರಜಾಃ ಸತಿ ಸಂಪದ್ಯ ನ ವಿದುಃ	೩೨೩
12	ಐತದಾತ್ಮ್ಯಮಿದಃ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ	೩೦೪, ೩೨೩, ೩೨೫, ೩೨೭, ೩೩೦, ೩೩೩, ೩೩೫, ೩೩೭
13	ಓಂಕಾರ ಏವೇದಃ ಸರ್ವಂ	೧೦೪
14	ಗಾಯತೀ ವಾ ಇದಃ ಸರ್ವಂ ಭೂತಂ ಯದಿದಂಕಿಂಚ	೧೫೩
15	ಚಿತ್ತಂ ಬ್ರಹ್ಮೇತ್ಯುಪಾಸ್ತೇ	೩೭೭
16	ತೇಜೋ ಬ್ರಹ್ಮೇತ್ಯುಪಾಸ್ತೇ	೩೮೩
17	ಧ್ಯಾನಂ ಬ್ರಹ್ಮೇತ್ಯುಪಾಸ್ತೇ	೩೭೮
18	ನಾಮ ಬ್ರಹ್ಮೇತ್ಯುಪಾಸ್ತೇ	೩೭೪
19	ಪ್ರಾಣೋ ಹ ಓತಾ ಪ್ರಾಣೋ ಮೂತಾ ಪ್ರಾಣೋ ಧ್ಯಾತಾ	೪೦೨
20	ಪ್ರಾಣೋ ವಾ ಇದಃ ಸರ್ವಂ ಯದಿದಂಕಂಚ	೧೭೨
21	ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಏಂ ಬ್ರಹ್ಮ	೨೦೦
22	ಬಲಂ ಬ್ರಹ್ಮೇತ್ಯುಪಾಸ್ತೇ	೩೮೦
23	ಮನೋ ಬ್ರಹ್ಮೇತ್ಯುಪಾಸ್ತೇ	೩೭೩
24	ಮನೋ ಬ್ರಹ್ಮೇತ್ಯುಪಾಸೀತ	೧೮೫
25	ಯ ಏಷೋಂತರಕ್ಷಣಿ ಪುರುಷೋ ದೃಶ್ಯತೇ ಏಷ ಆತ್ಮಾ	೨೦೩
26	ಯಥಾ ಸೋನ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್	೨೭೫
27	ಯಥಾ ಸೋನ್ಯೈಕೇನ ಲೋಹಮಣಿನಾ ಸರ್ವಂ ಲೋಹಮಯಂ ವಿಜ್ಞಾತಂ ಸ್ಯಾತ್	೨೭೩
28	ಯಥಾ ಸೋನ್ಯೈಕೇನ ನಖನಿಕೃಂತನೇನ	೨೭೩
29	ಯೇನಾಶ್ರುತಂ ಶ್ರುತಂ ಭವತಿ	೨೭೪

ಜಂಜರಾ.	ವೇದವಚನಗಳು.	ಪುಟ.
30	ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ	೨೭೫
31	,, ,, ತ್ರೀಣಿ ರೂಪಾಣೀತ್ಯೇವ ಸತ್ಯಂ	೨೯೫, ೨೯೬
32	ವಾಚಂ ಬ್ರಹ್ಮೇತ್ಯುಪಾಸ್ತೇ	೩೭೧
33	ವಿಜ್ಞಾನಂ ಬ್ರಹ್ಮೇತ್ಯುಪಾಸ್ತೇ	೩೭೯
34	ಸ ಏವೇದꣳ ಸರ್ವಂ	೪೦೦
35	ಸಂಕಲ್ಪಂ ಬ್ರಹ್ಮೇತ್ಯುಪಾಸ್ತೇ	೩೭೫
36	ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ	೨೪೪, ೨೪೫
37	ಸರ್ವಂ ಖಲ್ವಿದಂ ಬ್ರಹ್ಮ	೧೩೭
38	ಸರ್ವಮಸ್ಮೀತ್ಯುಪಾಸೀತ	೯೦
39	ಸರ್ವꣳ ಹ ಭವತಿ	೪೯
40	ಸ್ಮರಂ ಬ್ರಹ್ಮೇತ್ಯುಪಾಸ್ತೇ	೩೭೫
41	ಸೋಽಹಮಸ್ಮಿ ಸ ಏವಾಹಮಸ್ಮಿ	೨೦೨, ೨೦೩, ೨೦೪

॥ ಶ್ರೀಃ ॥

ಸಭಾಷ್ಯ ಛಾಂದೋಗ್ಯೋಪನಿಷತ್ತು

ಮೂರನೇ ಅಧ್ಯಾಯವು

ಓಂ ॥ ಪೂರ್ಣಾನಂದಮಹಾವಿಬೋಧಮಖಿಲಂ ಸಂಭಾಸಯಂತಂ ರುಚಾ
ಸರ್ವತ್ರ ಪ್ರಭುಮೀಶ್ವರಂ ಗುಣನಿಧಿಂ ದಿವ್ಯಾಕೃತಿಂ ಕೇಶವಂ ।
ಜನ್ಮಾದ್ಯಸ್ಯ ಯತೋ ಹಿ ಸರ್ವಜಗತೋ ಜನ್ಮಾದಿದೋಷೋಜ್ಝಿತಂ
ನಿತ್ಯಂ ಪೂರ್ಣವಿಬೋಧಕರ್ಮಗುರುಸೋಪಾಸ್ಯಂ ಭಜೇ ನಿತ್ಯದಾ ॥

ವೇದಭೇದಸುಶಾಖೋಕ್ತಂ ಬೋಧಾದಿಫಲಸಂಯುತಂ ।
ಭಜತಾಮಿಷ್ಟದಂ ವ್ಯಾಸಸುರದ್ರುಮಮಹಂ ಭಜೇ ॥

ಹೃತ್ತಮೋನಾಶಕಂ ಶಾಸ್ತ್ರಪ್ರಭಯಾ ತತ್ಪ್ರಭಾಸಕಂ ।
ಫಲದಂ ಪೂರ್ಣಬೋಧಾಖ್ಯಚಿಂತಾಮಣಿಮಹಂ ಭಜೇ ॥

ಪ್ರಣಮ್ಯ ಚರಣೌ ವಾಣಿ ಯಾಚಯಾಮಿ ತವಾನ್ಸಹಂ ।
ಸನ್ನಿಧಿರ್ಮಮ ವಾಚ್ಯಸ್ತು ಮಾನಸೇ ಚ ನಿರಂತರಂ ॥

ಪ್ರಣಮ್ಯ ಲಕ್ಷ್ಮೀದಯಿತಂ ಗುರೂಂಶ್ಚ ಛಾಂದೋಗ್ಯಭಾಷ್ಯಸ್ಯ ಸುಧಾಷಯಾರ್ಥಂ
ಲಿಖಾಮಿ ನಾರಾಯಣಶಂತ್ರಿನಾಮಾ ಯಥಾಮತಿ ಶ್ರೀಕಮರುತ್ಪ್ರಸಾದಾತ್ ॥

ಶ್ರೀಮದ್ವರಮುನ್ಮೀಮುಮಧ್ವಾಂತರ್ಗತರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀಪಾಯಗ್ರೀವಾಯ ನಮಃ ॥ ಹರಿಃ ಓಂ

**ಭಾಷ್ಯ ॥ ಓಂ ॥ ಅತ್ಯುದ್ರಿಕ್ತವಿದೋಷಸತ್ಸುಖಮಹಾಜ್ಞಾನೈಕತಾನಪ್ರಭಾಸರ್ವ-
ಪ್ರಾಭವಶಕ್ತಿ ಭೋಗಬಲಸತ್ಕಾರಾತ್ಮದಿವ್ಯಾಕೃತಿಂ । ಸೃಷ್ಟಿಸ್ಥಾನನಿರೋಧನಿತ್ಯನಿಯತಿಜ್ಞಾ-
ನಪ್ರಕಾಶಾವೃತಿಧ್ವಾಂತಾನೋಕ್ಷವಿಮೋಕ್ಷದಂ ಹರಿಮಜಂ ನಿತ್ಯಂ ಸದೋಪಾಸ್ಮಹೇ ॥೧॥**

ಅರ್ಥ ॥ ಪರಿಪೂರ್ಣವೂ, ಉತ್ಪತ್ತಿ ಮೊದಲಾದ ದೋಷವಿರಹಿತವೂ, ಅತ್ಯುತ್ತಮವೂ ಆದ ಆನಂದವೂ, ತನ್ನ ಲ್ಲಿಯೂ ಇತರರಲ್ಲಿಯೂ ಇರುವ ಎಲ್ಲಾ ವಿಶೇಷಗಳನ್ನು ತಿಳಿದುಕೊಳ್ಳುವಕ್ಕ ಜ್ಞಾನವೂ, ಬೇರೆಯವರಲ್ಲಿ ಸರ್ವಥಾ ಇಲ್ಲದಿರುವ ವಿಶೇಷ ಕಾಂತಿಯೂ ಸರ್ವ ವಸ್ತುಗಳಲ್ಲಿರತಕ್ಕ ಪ್ರಭುತ್ವ, ಕ್ರಿಯಾಶಕ್ತಿ, ಇಚ್ಛಾಶಕ್ತಿ, ಭೋಗ, ಬಲ ಇವುಗಳು, ಇದು ಮೊದಲಾದ ಗುಣಗಳೇವೇ, ನಿರ್ದೋಷವೂ, ಶ್ರೇಷ್ಠವೂ, ದಿವ್ಯಸ್ವರೂಪವೂ ಆದ ದೇಹ ಉಳ್ಳವನೂ, (ಯಥಾಯೋಗ್ಯವಾಗಿ ಜಗತ್ತಿಗೆ) ಸೃಷ್ಟಿ, ಸ್ಥಿತಿ, ಸಂಹಾರ, ನಿತ್ಯದಲ್ಲಿಯೂ ನಿತ್ಯ ವಸ್ತುಗಳಿಗೂ ಪ್ರೇರಿಸುವಿಕೆ, ಜ್ಞಾನ, ಪ್ರಕಾಶ, ಅಜ್ಞಾನ, ಹೊರಗಿನ ಅಂಧಕಾರ, ಸಂಸಾರ, ಮೋಕ್ಷ, ಇವುಗಳನ್ನು ಕೊಡುವವನೂ, ಉತ್ಪತ್ತಿ ಮೊದಲಾದ ದೋಷವು ಸ್ವಲ್ಪವೂ

ಇಲ್ಲದವನನ್ನೂ, ಸ್ವರೂಪನಾಶ, ದೇಹನಾಶ, ದುಃಖಪ್ರಾಪ್ತಿ, ಅಪೂರ್ಣತೆ ಎಂಬ ನಾಲ್ಕು ವಿಧ ನಾಶಗಳಿಲ್ಲ ದವನೂ, ಆದ ಶ್ರೀಹರಿಯನ್ನು ಸದಾ ಸ್ವೇಚ್ಛೆಯಿಂದಲೇ ಧ್ಯಾನಿಸುವೆವು.

ವಿಶೇಷಾಂಶ ॥ (1) ಲೋಕದಲ್ಲಿ ನಾನಾವಿಧಗಳಾದ ಸಾಂಸಾರಿಕ ದುಃಖಗಳ ಅನುಭವವನ್ನು ಹೊಂದಿ ಶಮದಮಾದಿಸಂಪನ್ನರಾದ ಅಧಿಕಾರಿಗಳಿಗೆ ಸಂಪೂರ್ಣ ಆನಿಷ್ಟವನ್ನು ಹೋಗಲಾಡಿಸಿ ಇಷ್ಟಪ್ರಾಪ್ತಿಯಾಗಲಿಕ್ಕೆ ಸಾಧನವಾದ ಭಗವತ್ಸ್ವರೂಪವನ್ನು ಇದ್ದಹಾಗೆ ತಿಳಿಸುವುದಕ್ಕಾಗಿ ಛಾಂದೋ ಗ್ಯೋಪನಿಷತ್ತು ಉಂಟಾಗಿದೆ (2) ಆದಕ್ಕೆ ಆದ್ವೈತಿಗಳು ತಮ್ಮ ಇಚ್ಛಾನುಸಾರ ಅರ್ಥಮಾಡಿದ ಕಾರಣ ಆದು ಭಗವತ್ಸ್ವರೂಪವನ್ನು ಸರಿಯಾಗಿ ತಿಳಿಸಲಿಕ್ಕೆ ಸಮರ್ಥವಾಗಲಾರದೆಂದು ಶ್ರೀಮದಾ ಚಾರ್ಯರು ತಿಳಿದು ಯೋಗ್ಯವಾದ ಅರ್ಥವನ್ನು ಮಾಡಲು ಎಣಿಸಿ ತನಗೆ ಯಾವ ವಿಘ್ನಗಳು ಇಲ್ಲ ದಿದ್ದರೂ ಪ್ರತಿಯೊಬ್ಬರೂ ಕಾರ್ಯಾರಂಭದಲ್ಲಿ ಮಂಗಲಮಾಡಬೇಕೆಂದು ತಿಳಿಸಿಕೊಡುವುದಕ್ಕಾಗಿ ಶ್ರೀಹರಿಯ ಉಪಾಸನೆಯೆಂಬ ಮಂಗಲವನ್ನು ಗ್ರಂಥದ ಬುಡದಲ್ಲಿ ಮಾಡಿರುವರು. ॥ ೧ ॥

ಪೀಠಿಕೆ—(1) ದೇವತೆ, ಋಷಿ, ಛಂದಸ್ಸು ಇವುಗಳನ್ನು ತಿಳಿಯದೆ ಉಪನಿಷತ್ತನ್ನು ಓದಿದರೆ ಅರಿಷ್ಟ ವಿದ್ದಕಾರಣ ಅವುಗಳನ್ನು ತಿಳಿಸುತ್ತಾರೆ. ಗದ್ಯರೂಪವಾಗಿರುವುದರಿಂದ ಇದಕ್ಕೆ ಛಂದಸ್ಸು ಇಲ್ಲ. (2) ಈ ಉಪನಿಷತ್ತಿಗೆ ಹಯಗ್ರೀವರೂಪಿ ಶ್ರೀಹರಿಯು ಮುಖ್ಯ ಋಷಿಯು. (ಮೊದಲು ಮಂತ್ರವನ್ನು ಕಂಡುಹಿಡಿ ದವನು) ಲಕ್ಷ್ಮೀದೇವಿಯು ಅಮುಖ್ಯವಾಗಿ ಮಂತ್ರವನ್ನು ಕಂಡುಹಿಡಿದವಳು. ಶೇಷಶಾಯಿಯಾದ ಶ್ರೀಹರಿಯು ದೇವತೆಯೂ ಎನ್ನುತ್ತಾರೆ—

ಭಾ. ॥ ಹಯಗ್ರೀವಮುಖೋದ್ಗೀರ್ಣಗೀರ್ಭಿರ್ದೇವೀ ರಮಾಪತಿಂ । ಅಸ್ತು-
ವದ್ವಿಸ್ತೃತಗುಣಂ ಭೋಗಿಪ್ರಸ್ತರಶಾಯಿನಂ ॥ ೨ ॥

ಅ ॥ ಲಕ್ಷ್ಮೀ ದೇವಿಯು ಹಯಗ್ರೀವದೇವರ ಮುಖದಿಂದ ಹೊರಟಿರುವ ವಚನಗಳಿಂದ ಬಹುಗುಣ ಗಳುಳ್ಳವನೂ, ಶೇಷನೆಂಬ ಹಾಸಿಗೆಯಲ್ಲಿ ಮಲಗಿಕೊಂಡಿರುವವನೂ, (ಅಂದರೆ ಶೇಷಶಾಯಿಯೂ) ಲಕ್ಷ್ಮೀ ಪತಿಯೂ ಆದ ಶ್ರೀಪರಮಾತ್ಮನನ್ನು ಸ್ತೋತ್ರಮಾಡಿದಳು. ॥ ೨ ॥

೧ನೇ ಖಂಡವು.

ಉಪನಿಷತ್ ॥ ಹರಿಃ ಓಂ ॥ ಆಪ್ಯಾಯಂತು ಮಮಾಂಗಾನಿ ವಾಕ್ ಪ್ರಾಣಶ್ಚಕ್ಷುಃ ಶ್ರೋತ್ರಮಥೋ ಬಲಮಿಂದ್ರಿಯಾಣಿ ಚ ಸರ್ವಾಣಿ ಸರ್ವಂ ಬ್ರಹ್ಮೌಪನಿಷದಂ ಮಾಽಹಂ ಬ್ರಹ್ಮ ನಿರಾಕುರ್ಯಾಂ ಮಾ ಮಾ ಬ್ರಹ್ಮ ನಿರಾ-ಕರೋದನಿರಾಕರಣಮಸ್ತ್ವನಿರಾಕರಣಂ ಮೇ ಅಸ್ತು ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥ ಓಮಿತ್ಯೇತದಕ್ಷರಮುದ್ಗೀಥಮುಪಾಸೀತೋಮಿತಿ ಹ್ಯು-ದ್ಗಾಯತಿ ತಸ್ಯೋಪವ್ಯಾಖ್ಯಾನಂ ॥ ೧ ॥

ಅ ॥ ಉದ್ಗಾತನೆಂಬ ಋತ್ವಿಜನು ಶ್ರೀಹರಿಯನ್ನು ದ್ವೇಷಿಸಿ ಓಂ ಎಂದು ಉಚ್ಚರಿಸಿ ಉತ್ಕೃಷ್ಟಗಾನ ಮಾಡುತ್ತಾನೆ. ಆದಕಾರಣ ಓಂ ಎಂದು ಹೆಸರುಳ್ಳವನೂ, ನಿಯಾಮಕನಾಗಿ ಜಗತ್ತಿನಲ್ಲಿ ಪ್ರವೇಶಮಾಡಿ

ದವನೂ ಮತ್ತು ಸರ್ವಜ್ಞನೂ, ಸರ್ವರ ಹೃದಯದಲ್ಲಿರುವವನೂ, ನಾಶವಿಲ್ಲದವನೂ, ಸರ್ವೋತ್ತಮನೂ, ಎಲ್ಲಾ ವೇದಗಳಲ್ಲಿ ಸ್ತುತಿಸಲ್ಪಡುವವನೂ ಸರ್ವಾಶ್ರಯನೂ ಆದ ಶ್ರೀಹರಿಯನ್ನು ಉಪಾಸನಾಮಾಡ ಬೇಕು (ಅಂದರೆ ಹರಿಯನ್ನು ಸ್ತುತಿಸುವ ಶಾಸ್ತ್ರಗಳ ಶ್ರವಣ, ಮನನ, ಧ್ಯಾನಗಳನ್ನು ಮಾಡಬೇಕು.) ಸರ್ವೋತ್ತಮನೆಂದು ವೇದಗಳು ಹೇಳುವುದರಿಂದ ಓಂ ಎನ್ನಿಸಿಕೊಂಡ ಶ್ರೀಹರಿಯು ಸರ್ವರಿಂದಲೂ ಉತ್ತಮನೆಂದು ಸ್ಪಷ್ಟವಾಗಿ ಹೇಳುತ್ತೇವೆ. ಅಥವಾ ಅಕ್ಷರ ಎನ್ನಿಸಿಕೊಂಡ ಶ್ರೀಹರಿಯ ಗುಣಗಳನ್ನು ಹೇಳುವ ಪ್ರಣವಕ್ಕೆ ಶ್ರೀಹರಿಯು ಸರ್ವೋತ್ತಮನೆಂದು ಅರ್ಥ ಹೇಳಿದ್ದೂ ಯುಕ್ತವು.

ವಿ ॥ (1) * ಉದ್ಗೀಥನೆಂಬ ಸಾಮಪ್ರತಿಪಾದ್ಯನೂ, ಓಂ ಎಂಬ ಪ್ರಣವಪ್ರತಿಪಾದ್ಯನೂ ಆದ ಶ್ರೀಹರಿಯ ಉಪಾಸನೆಯನ್ನು ಆದಿಯಲ್ಲಿ ಹೇಳಿದರು. (2) **ದೇವ ಸವಿತಃ ಪ್ರಸುವ। ಯಜ್ಞಂ ಪ್ರಸುವ। ಯಜ್ಞಪತಿಂ ಭಗಾಯ** ಇದು ಮೊದಲಾದ ಎರಡೇ ಎರಡೇ ಅಧ್ಯಾಯಗಳಲ್ಲಿ ಅಂತಃಕರಣ ಶುದ್ಧಿಯಾಗಿ ಬ್ರಹ್ಮವಿದ್ಯೆಯಲ್ಲಿ ಅಧಿಕಾರವು ಸಿದ್ಧಿಸುವುದಕ್ಕಾಗಿ ಕರ್ಮಸ್ವರೂಪವನ್ನು ಹೇಳಿರುವರು. **ಓಮಿತ್ಯೇತದಕ್ಷರಂ** ಇತ್ಯಾದಿ ಎರಡೇ ಅಧ್ಯಾಯ ಮೊದಲುಗೊಂಡು ಸಂಪೂರ್ಣ ಉಪನಿಷತ್ತಿನಿಂದ ಕರ್ಮಗಳಿಂದ ಅಂತಃಕರಣವನ್ನು ಶುದ್ಧಪಡಿಸಿಕೊಂಡು ವೈರಾಗ್ಯವನ್ನು ಹೊಂದಿರುವ ಅಧಿಕಾರಿಗಳನ್ನು ದ್ವೇಶಿಸಿ ಬ್ರಹ್ಮಸ್ವರೂಪವನ್ನು ಹೇಳುತ್ತಾರೆ. (3) ಎರಡೇ ಎರಡೇ ಅಧ್ಯಾಯಗಳಲ್ಲಿ ಕರ್ಮಗಳ ವಿಷಯಗಳನ್ನು ಹೇಳುವುದರಿಂದಲೂ, ಬೇರೆ ಬಾಷ್ಯಕಾರರು ಅವುಗಳಿಗೆ ಅರ್ಥ ಬರೆಯದಿರುವ ಪ್ರಯುಕ್ತ ವಿವಾದವಿಲ್ಲದಿರುವುದರಿಂದಲೂ ಆ ಎರಡು ಅಧ್ಯಾಯಗಳನ್ನು ಬಿಟ್ಟು ಒಂದೇ ಅಧ್ಯಾಯ ಮೊದಲುಗೊಂಡು ಶ್ರೀಮದಾಚಾರ್ಯರು ಅರ್ಥ ಬರೆದಿರುವರು. ॥ ೦ ॥

ಭಾ. ॥ (೧) ಓಮಿತಿನಾಮಕಮಕ್ಷರಂ ಸರ್ವಸನ್ನಿಹಿತತ್ವಾದೇತತ್। ಉಚ್ಚತ್ವಾತ್ ಗೀತತ್ವಾತ್ಸರ್ವಸ್ಥಾನತ್ವಾಚ್ಚೋದ್ಗೀಥಂ ಭಗವಂತಮುಪಾಸೀತ ॥ (೨) ಉಕ್ತಂ ಚ ಮಹಾಸಂಹಿತಾಯಾಂ । ಹಯಗ್ರೀವೋದ್ಗೀತವಾಕ್ಯೈ ರಮಾದೇವೀ ರಮಾಸತಿಂ । ಓಮಿತ್ಯೇತನ್ಮಹೈರ್ದೇವಮಸ್ತುತ್ವಾಮವೇದಗೈಃ ॥ ಇತಿ ॥ (೩) ಓಂನಾಮಾನಮುಪಾಸೀತ ತದರ್ಥಗುಣಪೂರ್ವಕಂ । ಏತತ್ವಾದವನಾನ್ನಾನಾದಧಿಕೋಚ್ಚತ್ವಕಾರಣಾತ್ ॥ ಆನಂದಾದೋಜಸಶ್ಚೈವ ಭರಣಾದೋಮುದಾಹೃತಃ । ಇತಿ ಸಮನ್ವಯೇ ॥ (೪) ಏತಮಸ್ಮಿನ್ ಜಗತ್ಸರ್ವಮತ್ಯುಚ್ಚತ್ವಾಚ್ಚಿಲ್ಲೈರ್ಗುಣೈಃ । ಇತ್ಯೋಮಿತಿ ಸದೋಪಾಸ್ಯಃ ಸೋಽಕ್ಷಯಃ(ರಃ) ಪುರುಷೋತ್ತಮಃ ॥ ೧ ॥

ಅ ॥ (1) ಶ್ರೀಹರಿಯು ಓಂ ಎಂದೂ, ಅಕ್ಷರನೆಂದೂ, ಸರ್ವತ್ರವ್ಯಾಪಿಸಿಕೊಂಡಿರುವುದರಿಂದ ಏತತ್ ಎಂದೂ ಅನ್ನಿಸಿಕೊಳ್ಳುತ್ತಾನೆ ಸರ್ವೋತ್ತಮನಾಮದರಿಂದ **ಉತ್**, ವೇದಗಳಿಂದ ಗಾನಮಾಡಲ್ಪಡುವುದರಿಂದ **ಗೀ**, ಸರ್ವರಿಗೆ ಆಶ್ರಯನಾದುದುದರಿಂದ **ಥ**, ಹೀಗೆ ಉದ್ಗೀಥ ಎನ್ನಿಸಿಕೊಳ್ಳುವ ಶ್ರೀಹರಿಯನ್ನು ಧ್ಯಾನಿಸಬೇಕು (2) ಈ ವಿಷಯವನ್ನು ನಾವು ಮಾತ್ರ ಹೇಳಿದ್ದಲ್ಲ. ಮಹಾಸಂಹಿತೆಯಲ್ಲಿಯೂ ಹೇಳಿದೆ. ಲಕ್ಷ್ಮೀದೇವಿಯು ಕ್ರೀಡಾದಿಗುಣಗಳಿಂದ ಕೂಡಿದ ಶ್ರೀಹರಿಯನ್ನು ಸಾಮವೇದದಲ್ಲಿರತಕ್ಕ, **ಓಮಿತ್ಯೇತದಕ್ಷರಂ** ಎಂಬುದೇ ಮೊದಲಾಗಿಯುಳ್ಳ, ಹಯಗ್ರೀವದೇವರ ಮುಖದಿಂದ ಹೊರಟಿರುವ ವಾಕ್ಯ(ಮಾತು)ಗಳಿಂದ ಸ್ತೋತ್ರಮಾಡಿದಳು. (3) ಓಂ ಎನ್ನುವುದರ ಅರ್ಥಭೂತಗಳಾದ ಗುಣಗಳನ್ನು ತಿಳಿದುಕೊಂಡು ಓಂ ಎಂದು ಹೆಸರುಳ್ಳ ಶ್ರೀಹರಿಯನ್ನು ಧ್ಯಾನಿಸಬೇಕು. ಸರ್ವಗುಣಪರಿಪೂರ್ಣನು ಸರ್ವರನ್ನು ರಕ್ಷಿಸು

* ಪ್ರಸ್ತಾವ, ಪ್ರತಿಹಾರ, ಉದ್ಗೀಥ, ಉದ್ಗಾತೃವ, ಪ್ರಥನ ಎಂದು ಸಾಮದಲ್ಲಿ ಐದು ಅಂಶಗಳು.

ವವನು, ಜ್ಞಾನಸ್ವರೂಪನು, ಸರ್ವೋತ್ತಮನು, ಸರ್ವಜಗತ್ತನ್ನು ಸೃಷ್ಟಿಸುವವನು, ಆನಂದಸ್ವರೂಪನು, ಕಾಂತಿಸ್ವರೂಪನು ಸರ್ವರನ್ನು ಪೋಷಿಸುವವನು, ಆದಕಾರಣ ಶ್ರೀಹರಿಯು ಓಂ ಎಂದು ಹೇಳಿಸಿಕೊಳ್ಳುತ್ತಾನೆ, ಎಂದು ಸಮನ್ವಯವೆಂಬ ಗ್ರಂಥದಲ್ಲಿ ಇದೆ. (4) ಇಡೀ ಜಗತ್ತು ಶ್ರೀಹರಿಯನ್ನು ಆಶ್ರಯಿಸಿಕೊಂಡಿದೆ ಶ್ರೀಹರಿಯು ಸರ್ವಗುಣಗಳಿಂದ ಪರಿಪೂರ್ಣನು. ಆದಕಾರಣ ನಾಶವಿಲ್ಲದಿರುವ ಪುರುಷೋತ್ತಮನನ್ನು ಸದಾ ಓಂ ಎಂದು ಉಪಾಸನೆಮಾಡಬೇಕು. ॥ ೧ ॥

ಭಾ. ॥ (೧) ಉಚ್ಚತ್ವಾದ್ಗೀಯಮಾನತ್ವಾತ್ ಸ್ಥಾನಾದುದ್ಗೀಥ ಉಚ್ಯತೇ । ಓಮಿತ್ಯೇನಂ ಸಮುದ್ದಿ(ಮಾದಿ)ಶ್ಯ ಹ್ಯುದ್ಗಾತಾ ಗಾಯತಿ ಸ್ಫುಟಂ ॥ (೨) ವಿಷ್ಣೋರೋಮಿತಿ ನಾಮ್ನೋಽಸ್ಯ ವ್ಯಾಖ್ಯಾನಮಧಿಕೋಚ್ಚತಾ । ಅಕಾರೇಣಾಧಿಕಂ ಪ್ರೋಕ್ತಮುಕಾರೇಣೋಚ್ಚಮುಚ್ಯತೇ ॥ ತಥಾ ಮಿತಂ ಸರ್ವನೇದೈರ್ಮಕಾರೇಣಾಭಿಧೀಯತೇ । ಅಧಿಕೋಚ್ಚಮಿತಿ ಜ್ಞಾತಮೋಮಿತ್ಯಸ್ಯಾರ್ಥ ಈರಿತಃ ॥ ೧ ॥ ॥ ೨ ॥

ಅ ॥ (೧) ಉದ್ಗಾತನೆಂಬ ಋತ್ವಿಜನು ಓಂ ಎಂದು ಉಚ್ಚರಿಸಿ ಶ್ರೀಹರಿಯನ್ನು ಜೆನ್ನಾಗಿ ಸ್ಪಷ್ಟವಾಗಿ ಗಾನಮಾಡುತ್ತಾನೆ. (೨) ಶ್ರೀಹರಿಯು ಸರ್ವೋತ್ತಮನೆಂಬುದು ಶ್ರೀ ವಿಷ್ಣುವಿನ ಓಂ ಎಂಬ ನಾಮದ ಅರ್ಥವು. (ಇದು ಒಂಕಾರದ ಅರ್ಥವು ಹೇಗೆ ಆಗುವುದೆಂದರೆ,) ಓಂ ಎಂಬಲ್ಲಿದ್ದ, ಆಕಾರದಿಂದ ಸರ್ವಾಧಿಕನೆಂದೂ, ಉಕಾರದಿಂದ ಸರ್ವೋತ್ತಮನೆಂದೂ, ಮಕಾರದಿಂದ ಹಾಗೆ ಸರ್ವೋತ್ತಮನೆಂಬುವದು ವೇದಗಳಿಂದ ತಿಳಿಯಲ್ಪಡುತ್ತಾನೆ (ಅಂದರೆ ವೇದಗಳಲ್ಲಿ ಹಾಗೆ ಹೇಳಿದೆ ಎಂದೂ) ಹೀಗೆ ಓಂ ಎನ್ನುವುದಕ್ಕೆ ಸರ್ವೋತ್ತಮನೆಂದು ತಿಳಿಯಲ್ಪಡುವವನು ಎಂದು ಅರ್ಥವು. ॥ ೧ ॥ ॥ ೨ ॥

ಈ—ಬ್ರಹ್ಮಾದಿದೇವತೆಗಳಲ್ಲಿ ತಾರತಮ್ಯ ತಿಳಿದುಕೊಂಡು ಶ್ರೀಹರಿಯು ಸರ್ವೋತ್ತಮನು ಎಂದು ತಿಳಿದರೇನೇ ಮೋಕ್ಷವು ಲಭಿಸುವುದರಿಂದ ಅಂತಹ ನೀಜೋಚ್ಚಭಾವವನ್ನು ಹೇಳುತ್ತಾ ಶ್ರೀಹರಿಯೇ ಸರ್ವೋತ್ತಮನೆನ್ನುತ್ತಾರೆ—

ಉ. ॥ ಏಷಾಂ ಭೂತಾನಾಂ ಪೃಥಿವೀ ರಸಃ ಪೃಥಿವ್ಯಾ ಆಪೋ ರಸೋಽಪಾಮೋಷಧಯೋ ರಸ ಓಷಧೀನಾಂ ಪುರುಷೋ ರಸಃ ಪುರುಷಸ್ಯ ವಾಗ್ರಸೋ ವಾಚ ಋಗ್ರಸ ಋಚಃ ಸಾಮ ರಸಃ ಸಾಮ್ನ ಉದ್ಗೀಥೋ ರಸಃ ಸ ಏಷ ರಸಾನಾಂ ರಸತಮಃ ಪರಮಃ ಪರಾರ್ಧ್ಯೋಽಷ್ಟಮೋ ಯ ಉದ್ಗೀಥಃ ॥ ೨ ॥

ಅ ॥ ಪಂಚಭೂತಾಭಿಮಾನಿಗಳಾದ ಋಭ್ವಾದಿ ದೇವತೆಗಳಿಗಿಂತ ಪೃಥಿವಿಗೆ ಅಭಿಮಾನಿನಿಯಾದ ಧರಾದೇವಿಯು ಸರ್ವಗುಣಗಳೂ ಹೆಚ್ಚು ಇದ್ದವಳು. ಆ ಧರಾದೇವಿಗಿಂತ ಜಲಾಭಿಮಾನಿಯಾದ ವರುಣನು ಶ್ರೇಷ್ಠನು. ವರುಣನಿಗಿಂತ ಪಕ್ವಫಲಗಳುಳ್ಳ ವೃಕ್ಷಗಳಿಗೆ ಅಭಿಮಾನಿಯಾದ ಚಂದ್ರನು ಶ್ರೇಷ್ಠನು. ಚಂದ್ರನಿಗಿಂತ ಪುಂಸ್ತ್ವಕ್ಕೆ ಅಭಿಮಾನಿಯಾದ ಸದಾಶಿವನು ಶ್ರೇಷ್ಠನು, ಅವನಿಗಿಂತ ವಾಗಭಿಮಾನಿನಿಯಾದ ಸರಸ್ವತಿಯು ಶ್ರೇಷ್ಠಳು. ಅವಳಿಗಿಂತ ಋಗ್ವೇದಕ್ಕೆ ಅಭಿಮಾನಿನಿಯಾದ *ಸರಸ್ವತಿಯ

* ಸರಸ್ವತಿಗೆ ಚತುರ್ಮುಖನ ಸಂಯೋಗವಿಶೇಷವಿರುವಾಗ ಅವಳು ಯಗಭಿಮಾನಿನಿಯು. ಅದಿಲ್ಲದಿರುವಾಗ ವಾಗಭಿಮಾನಿನಿಯು. ಹೀಗೆ ದೇವಿದೇವರಿ ಅವಸ್ಥೆಗಳಿಂದ ಸರಸ್ವತಿಗೇನೇ ಉಕ್ತಮುಕ್ತ ಅಧಮತ್ವಗಳನ್ನು ಹೇಳಿದ್ದು

ಶ್ರೇಷ್ಠಳು. ಅವಳಿಗಿಂತ ಸಾಮವೇದಕ್ಕೆ ಅಭಿಮಾನಿಯಾದ ಮುಖ್ಯಪ್ರಾಣನು ಶ್ರೇಷ್ಠನು. ಅವನಿಗಿಂತ ಬುದ್ಧೀಶ ಎನ್ನಿಸಿಕೊಂಡ ಶ್ರೀನಾರಾಯಣನು ಶ್ರೇಷ್ಠನು. ಪೃಥಿವಿಗಿಂತ ಎಂಟನೆಯವನಾಗಿ ಹೇಳಲ್ಪಟ್ಟ ಬುದ್ಧೀಶ ಎನ್ನಿಸಿಕೊಂಡ ಶ್ರೀಹರಿಯು ಶ್ರೇಷ್ಠರಾದ ಧರಾದಿ ದೇವತೆಗಳಿಗಿಂತ ಅತಿಶ್ರೇಷ್ಠನು, ಉತ್ತಮೋತ್ತಮನು ಅತಿಶಯ ಉತ್ತಮಗಳಾದ ನಿರವಧಿಕ ಪೂರ್ಣಗುಣಗಳುಳ್ಳವನು.

ವಿ—(1) ವಾಗಾದಿಗಳಿಗಿಂತ ಮುಖ್ಯಪ್ರಾಣನಿಗೆ ಶ್ರೇಷ್ಠತ್ವವಿದ್ದಂತೆ ಮುಖ್ಯಪ್ರಾಣನಿಂದ ಶ್ರೀಹರಿಗೆ ಶ್ರೇಷ್ಠತ್ವವಲ್ಲಿ, ಮತ್ತೆ ಪರಮಪರಾರ್ಧರಸತಮಳಾದ (ಉತ್ತಮೋತ್ತಮಳಾದ) ಲಕ್ಷ್ಮೀದೇವಿಗಿಂತಲೂ ಶ್ರೀಹರಿಯು ಸಂಪ್ರೀಯಿಸ್ಪಿದೆ ಅವಧಿಯಿಸ್ಪಿದೆ ಉತ್ತಮನೆಂದು ತಿಳಿಯಬೇಕೆಂಬ ಅಭಿಪ್ರಾಯದಿಂದ ಪರಾರ್ಧ್ಯಃ ಎಂದು ಹೇಳಿದ್ದು. (2) ಏವಂಚ ಶ್ಲೋಕದಲ್ಲಿ + ಪರಾರ್ಧ ಪರ್ಯಂತವೇ ಸಂಪ್ರೀ ಹೇಳಿದ್ದು, ಆ ಮೇಲೆ ಸಂಬ್ಯಾವ್ಯವಹಾರವೇ ಇಲ್ಲ. ಆದಕಾರಣ ಶ್ರೀಹರಿಯು ಸರ್ವಥಾ ಸಂಪ್ರೀಗೆ ಗೋಚರನು ಆಗ ಲಾರನೆಂಬ ಅಭಿಪ್ರಾಯದಿಂದ ಪರಾರ್ಧ್ಯಃ ಎಂದು ಹೇಳಿದ್ದು. ॥ ೬ ॥

ಭಾ. ॥ (೧) ತದೇತತ್ಪರಮತ್ವಂ ತು ಯಥಾಕ್ರಮಮುದೀರ್ಯತೇ । ದೇವತಾನು-ಕ್ರಮಜ್ಞಾರ್ಥಂ ವಿಷ್ಣೋಃ ಪರಮತಾವಿದಃ । ಏಕಾಂತಿನಸ್ತೇ ವಿಜ್ಞೇಯಾಃ ॥ (೨) ಯಥಾ-ಕ್ರಮಪರಾಸ್ತಥಾ । ಅಸ್ಮಾದಸಾವುಚ್ಚ ಇತಿ ಕ್ರಮಸ್ಯಾಂತಗತಂ ಹರಿಂ । ಏಕಮೇವ ತು ಯೇ ವಿದ್ಯುಸ್ತೇ ಹ್ಯೇಕಾಂತಿನ ಈರಿತಾಃ ॥ (೩) ಏವಂ ಯಥಾಕ್ರಮಜ್ಞಾರ್ಥಂ ಸದೈ-ಕಾಂತಪರಾಯಣಾಃ । ಪ್ರವಿಶಂತಿ ಪರಂ ದೇವಂ ನಾರಾಯಣಮನಾಮಯಂ ॥ (೪) ಉಚ್ಚಕ್ರಮೋಂತಗತ್ವೇನ ಕುರ್ಯುಃ ಪೂಜಾಂ ಹರೇಃ ಸದಾ । ಲಕ್ಷ್ಮ್ಯಾದೇಃ ಕ್ರಮಶಃ ಪೂಜಾಂ ಜ್ಞಾತ್ವಾ ಭಾಗವತಾ ಇತಿ । ಸ್ವತಂತ್ರಪೂಜ್ಯತಾಬುದ್ಧ್ಯಾ ನ ದದ್ಯುಃ ಕಿಂ ಚ ಕಸ್ಯಚಿತ್ ॥ ೭ ॥

ಅ ॥ (೧) ವಿಷ್ಣಾಂ ಭೂತಾನಾಂ ಇತ್ಯಾದಿಗಳಿಂದ ದೇವತೆಗಳ ತಾರತಮ್ಯ ಕ್ರಮವನ್ನನುಸರಿಸಿ ಓಂಕಾರದ ಅರ್ಥವು ಉತ್ತಮೋತ್ತಮತ್ವನೆಂದು ಹೇಳಲ್ಪಡುತ್ತದೆ. (ವಿಸ್ತೃವು ಸರ್ವೋತ್ತಮನೆಂದೇ ಹೇಳಬೆ ಸಾಕು. ದೇವತೆಗಳ ತಾರತಮ್ಯವನ್ನು ಏಕೆ ಹೇಳುವುದು? ಎಂದರೆ—) ಬ್ರಹ್ಮಾದಿ ದೇವತೆಗಳಲ್ಲಿ ನೀಚೋಚ್ಚಭಾವವನ್ನು ತಿಳಿದು ಶ್ರೀಹರಿಯೇ ಸರ್ವೋತ್ತಮನೆಂದು ತಿಳಿದವರು ಏಕಾಂತಭಕ್ತರು ಎನ್ನಿಸಿಕೊಳ್ಳುತ್ತಾರೆ (೨) ತಾರತಮ್ಯಜ್ಞಾನದಲ್ಲಿ ಮುಖ್ಯತಾತ್ಪರ್ಯವಿರಬೇಕಾಗಿರುವುದರಿಂದ. ಇವನಿಗಿಂತ ಇವನು ಉತ್ತಮನು ಎಂಬ ತಾರತಮ್ಯದ ಅಂತ್ಯದಲ್ಲಿರುವವನು ಶ್ರೀಹರಿಯು ಒಬ್ಬನೇ ಎಂದು ತಿಳಿಯುವವರು ‡ ಏಕಾಂತಿಗಳು ಎನ್ನಿಸಿಕೊಳ್ಳುತ್ತಾರೆ. (೩) ಹೀಗೆ ತಾರತಮ್ಯವನ್ನು ತಿಳಿದು ಸದಾ ಶ್ರೀಹರಿಯನ್ನೇ ಮುಖ್ಯವಾಗಿ ಆಶ್ರಯಿಸಿಕೊಂಡಿರುವವರು ಸರ್ವೋತ್ತಮನೂ ನಿರ್ದೋಷನೂ ಆದ ಶ್ರೀನಾರಾಯಣನನ್ನು ಹೊಂದುತ್ತಾರೆ. (ಅಂದರೆ ಮೋಕ್ಷಕ್ಕೆ ಹೋಗುತ್ತಾರೆ.) (೪) ಶ್ರೀಹರಿಯು ಉತ್ತಮರಲ್ಲಿ ಕೊನೆಯವನು (ಅಂದರೆ ಸರ್ವೋತ್ತಮನು) ಎಂದು ತಿಳಿದು ಸದಾ ಶ್ರೀಹರಿಗೆ ಪೂಜೆಯನ್ನು ಮಾಡಬೇಕು. ಲಕ್ಷ್ಮೀ ಮೊದಲಾದವರು ಭಗವದ್ಭಕ್ತರು ಎಂದು ತಿಳಿದುಕೊಂಡು ತಾರತಮ್ಯ ಕ್ರಮ

+ ಏಕಂ ದತ ಶತಂ ಚೈವ ಸಹಸ್ರಮಯುತಂ ತಥಾ । ಲಕ್ಷಂಚ ನಿಯುತಂ ಚೈವ ಕೋಟಿರರ್ಬುದ ಮೇವ ಚ ॥ ವ್ಯಂದಂ ಖರ್ವೋ ನಿಖರ್ವಶ್ಚ ಶಂಖಃ ಪದ್ಮಕ್ಷಸಾಗರಃ । ಅಂತ್ಯಂ ಮಧ್ಯಂ ಪರಾರ್ಧಂ ಚ ದಶವೃದ್ಧ್ಯಾ ಯಥಾಕ್ರಮಂ ॥

‡ ಏಕ ಏವ ಅಂತೇ ವರ್ತತೇ = ಕೊನೆಗೆ ಇರುವವರು ಶ್ರೀಹರಿಯು ಒಬ್ಬನೇ ಏಕಾಂತಃ ವಿಷ್ಣಾಮಸ್ತಿ ಎಂಬ ವ್ಯುತ್ಪತ್ತಿಯಿಂದ ಚೆನ್ನಾಗಿ ಶ್ರೀಹರಿಯನ್ನು ತಿಳಿದುಕೊಂಡವರು

ದಿಂದಲೇ ಅವರಿಗೆ ಪೂಜೆ ಮಾಡಬೇಕು. ಅವರನ್ನು ಸ್ವತಂತ್ರವಾಗಿ ಪೂಜಿಸಬಹುದು, ಎಂಬ ಬುದ್ಧಿಯಿಂದ ಯಾವಾಗಲೂ ಯಾರಿಗೂ ಪೂಜೆ ಮಾಡಬಾರದು. (ಮತ್ತೆ ಅವರೆಲ್ಲರೂ ಶ್ರೀಹರಿಯ ಪರಿವಾರರು ಸೇವಕರು ಎಂಬ ಭಾವನೆಯಿಂದಲೇ ಅವರನ್ನು ಪೂಜಿಸಬೇಕು.) ॥ ೧ ॥

ಪೀ—ದೇವತೆಗಳನ್ನು ಸರ್ವೋತ್ತಮರೆಂದು ಪೂಜಿಸಬಾರದು. ಅಪ್ರಧಾನವಾಗಿ ಪೂಜಿಸಬಹುದೆಂದಾದರೆ—**ವಿಪ್ರಕ್ಷತ್ರಿಯವಿಟ್ ಶೂದ್ರವರ್ಣಭೇದೇನ ಸರ್ವಶಃ । ಮನವೋ ಮಾನವಾಶ್ಚೈವ ಸಂಪೂಜ್ಯಾಃ ನೈವ ದೇವತಾಃ** ಎಂಬ ವಚನವು ಹೇಗೆ ಕೂಡುತ್ತದೆ ಎಂದರೆ—

ಭಾ. ॥ (೧) ಬ್ರಹ್ಮಾದ್ಯಾ ಮನುಸಂಜ್ಞಾ ಯೇ (ಮನಸಾ ಜಾತಾಯೇ) ವರ್ಣತ್ವೇನೋದಿತಾಃ ಶ್ರುತೌ । ಮಾನವಾಖ್ಯಾಶ್ಚ ಮುನಯಸ್ತಾನ್ಯಜಂತಿ ನ ಜೇತರಾನ್ ॥ (೨) ಪಿತೃತ್ವೇನ ಗುರುತ್ವೇನ ಸಾಕ್ಷಾದ್ಭಾಗವತತ್ವತಃ ॥ (೩) ಅಪಭ್ರಷ್ಟಾ ಅದೇವಾಶ್ಚ ಬ್ರಹ್ಮಾದ್ಯಾಖ್ಯಾಯುತಾ ಅಪಿ । ದೇವಸಂಜ್ಞಾಶ್ಚ ದೀನತ್ವಾತ್ಪೂಜಯೇಯುರ್ನ ತಾನ್ ಕ್ವಚಿತ್॥ (೪) ಯದ್ಭಾಗವತಬುದ್ಧ್ಯೈವ ದತ್ತಂ ಬ್ರಹ್ಮಾದಯಃ ಸುರಾಃ । ವೈದಿಕಾಃ ಪ್ರತಿಗೃಹ್ಣೀಯುರಪಭ್ರಷ್ಟಾಸ್ತಥೇತರತ್ ॥ (೫) ಯಥಾಕ್ರಮಪರಿಜ್ಞಾನಾದೇಕಾಂತಿತ್ವಾಚ್ಚ ಕೇವಲಂ। ಅಚ್ಛಿದ್ರತ್ವಾಚ್ಚ ನಿಯತೋ ಮೋಕ್ಷೋಽನ್ಯತ್ತು ವಿಡಂಬನಂ ॥ ೨ ॥

ಅ ॥ (೧) ವೇದದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂದು ಹೇಳಲ್ಪಟ್ಟ *ಮನುಗಳು ಬ್ರಹ್ಮ ರುದ್ರಾದಿ ದೇವತೆಗಳೇ. ಅವರ ಪುತ್ರರಾದ ಮರೀಚ್ಯಾದಿ ಋಷಿಗಳು ಮಾನವರು ಎನ್ನಿಸಿಕೊಳ್ಳುತ್ತಾರೆ. ಅಂತಹ ಮನು ಮತ್ತು ಮನುಪುತ್ರರನ್ನು ಪೂಜಿಸುತ್ತಾರೆ. ಅಪಭ್ರಷ್ಟ ದೇವತೆಗಳನ್ನು ಪೂಜಿಸುವುದಿಲ್ಲ. (೨) (ಬ್ರಹ್ಮಾದಿಗಳನ್ನು ದೇವತೆಗಳೆಂದು ಪೂಜಿಸುತ್ತಿರಲಿಲ್ಲ. ಮತ್ತೆ) § ಪಿತೃಗಳೆಂದೂ, ಗುರುಗಳೆಂದೂ, ಸಾಕ್ಷಾತ್ ಭಗವದ್ಭಕ್ತರೆಂದೂ ಪೂಜಿಸುತ್ತಿದ್ದರು. (೩) (ನ ಜೇತರಾನ್ ಎಂದು ಹೇಳಿದ್ದನ್ನು ವಿವರಿಸುತ್ತಾರೆ.) ಅಪಭ್ರಷ್ಟ ದೇವತೆಗಳಿಗೆ (ಅಸುರಾದಿಗಳಿಗೆ) ‡ ಬ್ರಹ್ಮ ರುದ್ರ ಮೊದಲಾದ ನಾಮಗಳಿದ್ದರೂ ಅವರು ವಸ್ತುತಃ ದೇವತೆಗಳಲ್ಲ. ಸರ್ವದಾ ದುಃಖದಿಂದ ಕೂಡಿರುವವರಾದುದರಿಂದ ಅಸುರಾದಿಗಳಿಗೂ ದೇವ ಎಂಬ ನಾಮವಿದೆ. ಸರ್ವಥಾ ಅವರನ್ನು ಎಲ್ಲಿಯೂ ಪೂಜಿಸಬಾರದು. (೪) (ದೇವತೆಗಳಿಗೂ ಅಸುರರಿಗೂ ಬ್ರಹ್ಮಾದಿ ನಾಮಗಳಿದ್ದರೆ ಬ್ರಹ್ಮಾದಿಭ್ಯಃ ಸ್ವಾಹಾ ಎಂದು ಹೇಳಿ ಬ್ರಹ್ಮಾದಿಗಳಿಗೆ ಹವಿಸ್ಸನ್ನು ಕೊಡುವಾಗ ಅಸುರರಿಗೂ ಪ್ರಾಪ್ತಿಯಾಗುವುದರಿಂದ ಯಾಗಾದಿಗಳಲ್ಲಿ ಪ್ರಯತ್ನವು ಆಗುವುದು ಹೇಗೆ? ಎಂದರೆ—) ವೇದಗಳಲ್ಲಿ ಹೇಳಲ್ಪಟ್ಟ ಬ್ರಹ್ಮ ರುದ್ರ ಮೊದಲಾದ ದೇವತೆಗಳು ಭಗವದ್ಭಕ್ತರು, ಎಂಬ ಬುದ್ಧಿಯಿಂದಲೇ ಯಾಜ್ಞಿಕಾದಿಗಳು ಕೊಟ್ಟ ಹವಿಸ್ಸನ್ನು ಸ್ವೀಕರಿಸುತ್ತಾರೆ. ಅಪಭ್ರಷ್ಟ ದೇವತೆಗಳು (ಅಸುರಾದಿಗಳು) ಅಯೋಗ್ಯ ರೀತಿಯಿಂದ ಕೊಟ್ಟ ಹವಿಸ್ಸು ಮೊದಲಾದುದನ್ನು ಹೊಂದುತ್ತಾರೆ. (೫) (ಕೆಲವರಿಗೆ ತಾರತಮ್ಯಜ್ಞಾನ ಏಕಾಂತಿತ್ವ ಇವೆರಡಿದ್ದರೂ ಮೋಕ್ಷವು ದೊರೆಯದಿರುವುದರಿಂದ

---

*ಮನವೋ ದೋಧನ್ಯತೇಷ್ಯಾದ್ದೇವಾಃ ಬ್ರಹ್ಮಾದಯಃ ಸ್ಮೃತಾಃ । ವಿಪ್ರಾದಿವರ್ಣಭೇದೇನ ಚತ್ವಾರೋ ಬಹವೋಽಪಿತೇ । ಮರೀಚಾದ್ಯಾಸ್ತು ತತ್ಪುತ್ರಾಃ ಮಾನವಾಃ ನಾಮತಃ ಸ್ಮೃತಾಃ ॥

§ ದೇವತಾತ್ವೇನ ಜೇಜ್ಯಾಃ ಸಃ ಬ್ರಹ್ಮಾದ್ಯಾ ಮನುನಾಮಕಾಃ । ವಕ್ಷ್ಯತ್ವೇನ ಪಿತೃತ್ವೇನ ಕಾರಿತ್ವೇನೈವ ಚಾದಾತ್ ॥ ಇಜ್ಯಂತೇ ದೇವತಾಃ ಸರ್ವಾಃ ನ ತು ದೇವತಯಾ ಕ್ವಚಿತ್ ॥ ಅನನ್ಯೆಯಾಜಿನಸ್ತೇ ತು ತಸ್ಮಾತ್ಯಾರ್ತಯುಗಾ ಜನಾಃ ॥

‡ ದೇವಾದಿ ಶಬ್ದಗಳು ಅಸುರಾದಿಗಳಿಗೂ ಇವೆ. ಅದಕಾರಣ ಮನುಶಬ್ದವೇ ದೇವತೆಗಳಿಗೆ ಮುಖ್ಯವು. ಅದಕಾರಣ ದೇವತೆಗಳಲ್ಲಿ ಮನುಶಬ್ದವನ್ನೇ ಪ್ರಯೋಗಿಸಿದೆವು.

ಅವೆರಡು ಮೋಕ್ಷಕ್ಕೆ ಸಾಧನವೆಂದು ಹೇಳಿದ್ದು ಅಯುಕ್ತವೆಂದರೆ—) ಮಧ್ಯದಲ್ಲಿ ತಡೆಯಿಲ್ಲದೆ ಸರ್ವದಾ ಇರತಕ್ಕ ದೇವತೆಗಳ ತಾರತಮ್ಯಜ್ಞಾನ, ಶ್ರೀಹರಿಯೇ ಮುಖ್ಯತಃ ಆಶ್ರಯನೆಂಬ ಜ್ಞಾನ ಇವುಗಳಿಂದ ಮೋಕ್ಷವು ನಿಶ್ಚಯವಾಗಿಯೂ ಆಗುತ್ತದೆ. ಅವೆರಡೂ ಸರ್ವದಾ ಇಲ್ಲದೆ ಕೆಲವು ವೇಳೆ ಮಾತ್ರ ಇದ್ದರೆ ಅವುಗಳಿಂದ ಮೋಕ್ಷವು ಹೊರಟುಹೋಗದು ॥ ೨ ॥

ಹೀ—ಹೀಗೆ ತಾರತಮ್ಯಜ್ಞಾನ ಇದ್ದು ಸರ್ವದಾ ಏಕಾಂತಿತ್ವವು ಮೋಕ್ಷಕ್ಕೆ ಸಾಧನವೆಂದು ಎಂದನ್ನು ಹೇಳಿ ಇನ್ನೊಂದು ಮೋಕ್ಷಸಾಧನವನ್ನು ಹೇಳುತ್ತಾರೆ—

ಭಾ. ॥ (೧) ವಿಷ್ಣೌ ಭಕ್ತಿರ್ವಿಶೇಷೇಣ ಮೋಕ್ಷಾವಾಪ್ತೌ ಹಿ ಕಾರಣಂ । ತದ್ಭಕ್ತೇಷು ಕ್ರಮೇಣೈವ ರಮಾದ್ಯೇಷು ತ್ವನಂತರಂ ॥ (೨) ತೃತೀಯಮಪಿ ವೈರಾಗ್ಯಂ ನ ಚಾ(ವಾ)-ನ್ಯತ್ರೋಕ್ಷಕಾರಣಂ ॥ (೩) ಏತತ್ಸಾಧನತಾಹೇತೋಸ್ತದನ್ಯದ್ಧಿ ವಿಧೀಯತೇ । ಅತೋಽನ್ಯತ್ಸ(ಸ)ರ್ವಕೃಚ್ಚಾಪಿ ಗಚ್ಛೇದೇವಾಧರಂ ತಮಃ ॥ (೪) ಅಸ್ಮಿನ್ಸನಿಷ್ಠಿತೋ ನಿತ್ಯಂ ಮೋಕ್ಷೈವಾನ್ಯೋಜ್ಜ್ಞಕೋಽಪಿ ಸನ್ ॥ ೩ ॥

ಅ ॥ (೧)ವಿಷ್ಣುವ ಸರ್ವೋತ್ತಮನೆಂದು ತಿಳಿದು ಅತನಲ್ಲಿ ಪರಮಭಕ್ತಿಯು ಇದ್ದರೆ ಮಾತ್ರ ಅದರಿಂದ ಮೋಕ್ಷವನ್ನು ಕೊಂಡುಬರು ವಿಷ್ಣುವಿನ ನಂತರ ರಮಾದೇವಿ ಮೊದಲಾದ ವಿಷ್ಣುಭಕ್ತರಲ್ಲಿಯೂ ತಾರತಮ್ಯಕ್ರಮದಿಂದಲೇ ಭಕ್ತಿಯನ್ನು ಮಾಡಿದಲ್ಲಿ ಮೋಕ್ಷವು ಲಭಿಸುವುದು. (೨) ವೈರಾಗ್ಯದಿಂದಲೂ ಮೋಕ್ಷವು ಲಭಿಸುವುದು. ಆದರೆ ವೈರಾಗ್ಯವು ಜ್ಞಾನ ಭಕ್ತಿಗಳಿಗೆ ಸರಿಯಲ್ಲ. ಮತ್ತೆ ಜ್ಞಾನ ಭಕ್ತಿಗಳು ಹುಟ್ಟಲಿಕ್ಕೆ ಸಾಧನವು, ಎಂದು ತೋರಿಸ ವುದಕ್ಕಾಗಿ ತೃತೀಯಂ ಅಪ್ರಧಾನ ಕಾರಣವೆಂದು ಹೇಳಿದ್ದು. ಇವು ಕೊರತು ಬೇರೆ ಯಾವುದೂ ಮೋಕ್ಷಕ್ಕೆ ಕಾರಣವಿಲ್ಲ. (೩) ಜ್ಞಾನ ಭಕ್ತಿಗಳು ಹುಟ್ಟಬೇಕೆಂಬ ಉದ್ದೇಶದಿಂದಲೇ (ಮೋಕ್ಷವನ್ನು ಬಯಸುವವನಿಗೆ) ಯಾಗ, ತೀರ್ಥಸ್ನಾನ ಮೊದಲಾದವುಗಳನ್ನು ಮಾಡಬೇಕೆಂದು ಹೇಳಿದ್ದು. ಅದಕಾರಣ ಜ್ಞಾನ ಭಕ್ತಿಗಳಿಲ್ಲದೆ ಎಂತಹ ಕರ್ಮಗಳನ್ನು ಮಾಡಿದರೂ ಮೋಕ್ಷವು ಸರ್ವಥಾ ಲಭಿಸಲಾರದು. ಮಾತ್ರವಲ್ಲದೆ ಅಧರವೆಂಬ ನಿತ್ಯನರಕವನ್ನು ಹೊಂದುವನು. (೪) ಬೇರೆ ಎಲ್ಲಾ ಕರ್ಮಗಳನ್ನು ಮಾಡದಿದ್ದರೂ ನಿತ್ಯದಲ್ಲಿಯೂ ಜ್ಞಾನ, ಭಕ್ತಿ, ಇವುಗಳಲ್ಲಿ ಆಸಕ್ತರಾದ ಜ್ಞಾನಯೋಗಿಗಳಾದ ಸನಕಾದಿಗಳು ಮೋಕ್ಷವನ್ನು ಹೊಂದಿದ್ದೇ ಹೊಂದಿರುವರು. ॥ ೩ ॥

ಭಾ. ॥ (೧) ಅತಸ್ತೇಷಾಂ ಕ್ರಮಂ ವಕ್ಷ್ಯೇ ದೇವಾನಾಂ ಯಃ ಶ್ರುತೌ ಶ್ರುತಃ । ಪೃಥಿವೀ ಸರ್ವಭೂತೇಭ್ಯಃ ಸದಾ ಸರ್ವಗುಣೈರ್ವರಾ ॥ (೨) ರಸಃ ಸಾರೋ ವರಶ್ಚೇತಿ ರಬ್ಬಾ ಏಕಾರ್ಥವಾಚಕಾಃ । ಪೃಥಿವ್ಯಾ ವರುಣಃ ಶ್ರೇಷ್ಠಸ್ತಸ್ಮಾದೋಽಧಿದೇವತಾ । ಸೋಮಸ್ತಸ್ಮಾತ್ತು ಪುರುಷೋ ರುದ್ರೋ ಯಕ್ಷ್ಯಂಸ್ತದೇವತಾ ॥ (೩) ತಸ್ಮಾತ್ತಸ್ಮಾತ್ತೀ ವಾಗ್ವಿ ಶ್ರೇಷ್ಠಾಽಸ್ಯಾ ಋಕ್ಸ್ವರೂಪಿಣೀ । ಸೈವ ಶ್ರೇಷ್ಠಾ ತತೋ ವಾಯುರ್ವರಿಷ್ಠಃ ಸಾಮನಾಮಕಃ । ಸಮತ್ವಾತ್ಸರ್ವಭೂತೇಷು ಸಾಮ ಸಾಮ್ನಾಂ ಚ ದೇವತಾ ॥ (೪) ತತಃ ಶ್ರೇಷ್ಠತಮೋ ವಿಷ್ಣುಃ ಶ್ರೇಷ್ಠಶ್ರೇಷ್ಠತಮಃ ಸದಾ । ಶ್ರೇಷ್ಠಾಚ್ಛ್ರೇಷ್ಠತಮಾಚ್ಚಾಪಿ ಪರಮಾತ್ ಪರಮೋ ವಿಭುಃ ॥ ಪರಮುರ್ಧ್ವಯುತಕ್ಕಾಚ್ಚ ಪರಾರ್ಧ್ಯ ಇತಿ ಕೀರ್ತಿತಃ । ಇತಿ ಸಾರನಿರ್ಣಯೇ ॥ ೪ ॥

ಅ ॥ (೧) ದೇವತಾತಾರತಮ್ಯ ಜ್ಞಾನವು ಮೋಕ್ಷಕ್ಕೆ ಕಾರಣವಾಗಿರುವುದರಿಂದ ವೇದಗಳಲ್ಲಿ ಹೇಳಿದಂತೆ ದೇವತೆಗಳ ತಾರತಮ್ಯ ಕ್ರಮವನ್ನು ಹೇಳುವೆನು. ಧರಾದೇವಿಗೆ ಸದಾ ಋಭ್ವಾದಿದೇವತೆಗಳಿಗಿಂತ ಎಲ್ಲಾ ಗುಣಗಳೂ ಹೆಚ್ಚು ಇರುತ್ತವೆ. (೨) ರಸಃ ಸಾರಃ ವರಃ ಈ ಶಬ್ದಗಳಿಗೆ ಶ್ರೇಷ್ಠ ವೆಂಬ ಸರಿಸಮಾನವಾದ ಒಂದು ಅರ್ಥವು. ಧರಾದೇವಿಗಿಂತ ವರುಣನೂ, ವರುಣನಿಗಿಂತ ವನಸ್ಪತಿಗಳಿಗೆ ಅಭಿಮಾನಿಯಾದ ಚಂದ್ರನೂ, ಚಂದ್ರನಿಗಿಂತ ಪುರುಷರ ಪುಂಸ್ತ್ವಕ್ಕೆ ದೇವತೆಯಾದ ಸದಾಶಿವನೂ ಶ್ರೇಷ್ಠನು (೩) ಸದಾಶಿವನಿಗಿಂತ ಸಮಸ್ತ ವೇದಗಳಿಗೆ ಅಭಿಮಾನಿನಿಯಾದ ಸರಸ್ವತಿಯೂ, ಅವಳಿಗಿಂತ ಋಕ್ಕಿಗೆ ಅಭಿಮಾನಿನಿಯಾದ ಸರಸ್ವತಿಯೂ ಶ್ರೇಷ್ಠಳು. ಅವಳಿಗಿಂತ ಸಮಸ್ತ ಪ್ರಾಣಿಗಳಲ್ಲಿ ಸಮನಾದುದರಿಂದಲೂ ಸಾಮಗಳಿಗೆ ಅಭಿಮಾನಿಯಾದುದರಿಂದಲೂ ಸಾಮ ಎನ್ನಿಸಿಕೊಂಡ ಮುಖ್ಯವಾಯುವು ಶ್ರೇಷ್ಠನು. (೪) ಆ ವಾಯುವಿಗಿಂತ ವಿಷ್ಣುವು ಮುಖ್ಯ ಶ್ರೇಷ್ಠನು. ಶ್ರೇಷ್ಠರಾದ ವಾಯ್ವಾದಿಗಳಿಗಿಂತ ಮುಖ್ಯ ಶ್ರೇಷ್ಠನು. ರುದ್ರಾದಿಗಳಿಂದ ಸರಸ್ವತೀ ಭಾರತಿಯರೂ, ಅವರಿಂದ ಬ್ರಹ್ಮವಾಯುಗಳೂ. ಇವರಿಂದ ಲಕ್ಷ್ಮೀದೇವಿಯೂ ಉತ್ತಮಳು. ಇವರೆಲ್ಲರಿಂದಲೂ ಶ್ರೀಹರಿಯು ಉತ್ತಮೋತ್ತಮನು. ಸರ್ವತ್ರ ವ್ಯಾಪ್ತನು. ಅತ್ಯುತ್ತಮವಾದ ನಿರವಧಿಕವಾದ ಸಮೃದ್ಧಿಯಿಂದ ಕೂಡಿರುವವನು; ಆದಕಾರಣ ಪರಾರ್ಧ್ಯಃ ಎನ್ನಿಸಿಕೊಳ್ಳುತ್ತಾನೆ, ಎಂದು ಸಾನಿರ್ಣಯದಲ್ಲಿದೆ. ॥ ೪ ॥

ಪೀ—ಪರಾರ್ಧ್ಯ ಶಬ್ದವನ್ನು ತಾನು ವ್ಯಾಖ್ಯಾನ ಮಾಡುತ್ತಾರೆ—

ಭಾ. ॥ (೧) ಅತಿಶಯೇನ ಪರಮರ್ಧಿಗುಣಃ ಪರಮಃ ಪರಾರ್ಧ್ಯಃ । ಉತ್ತಮೋ-ಭ್ಯೋಽಪ್ಯತಿಪರಮೋತ್ತಮೋತ್ತಮೋ ರಸಾನಾಂ ರಸತಮಃ ಪರಮಃ ಪರಾರ್ಧ್ಯಃ । ರಸಾನಾಂ ಸಕಾಶಾದಪಿ ಪರಮಪರಾರ್ಧ್ಯ(ರಮರ್ಧ)ರಸತಮ ಇತ್ಯರ್ಥಃ ॥ (೨) ಪ್ರಾಣಾದೀನಾಂ ಭೂತಾದಿಭ್ಯಃ ಶ್ರೇಷ್ಠತ್ವವದಸ್ಯ ಶ್ರೇಷ್ಠತ್ವಂ ನ ಭವತಿ, ಕಿಂತು ಮಹಾನ್ವಿಶೇಷ ಇತಿ ಜ್ಞಾಪ-ಯಿತುಂ ರಸಾನಾಂ ರಸತಮ ಇತ್ಯಾದಿಬಹುವಿಶೇಷಣಂ ॥ (೩) ಭೂತೇಭ್ಯಃ ಪೃಥಿವ್ಯಾ ರಸತ್ವಂ ತೇಭ್ಯೋ ವರುಣಸ್ಯ ರಸತರತ್ವಂ ಸೋಮಸ್ಯ ರಸತಮತ್ವಂ ರುದ್ರಸ್ಯ ಪರಮ (ಚ ರಸ) ರಸತಮತ್ವಂ ವಾಚಃ ಪರಮಪರ (ಪರಮರ್ದ್ಧ) ರಸತಮತ್ವಂ ಪ್ರಾಣಸ್ಯ ಪರಮ-ಪರಾ (ರ) ರ್ಧರಸತಮತ್ವಂ ॥ (೪) ಅಯಂ ತು ಭಗವಾನ್ ಪ್ರಾಣಾದಪಿ ಪರಮಪರಾ (ರ) ರ್ಧರಸತಮಮಾತ್ಮೋನ ಭವತಿ । ಕಿಂತು ಪ್ರಾಣಸ್ಯಾಪಿ ರಸಭೂತಾಯಾ ರಮಾಯಾ ಅಪಿ ಪರಮಪರಾರ್ಧ್ಯರಸತಮಃ । ಅಸ್ಮಾದಪ್ಯತಿಶಯೇನ ಪರಮಿತ್ಯಸಂಖ್ಯಾಗೋಚರತ್ವೇನ ಪರಾರ್ಧೇನ (ರ್ಧ್ಯೇನ)ಜ್ಞೇಯಂ ಹಿ ಪರಾರ್ಧ್ಯಂ ॥ ೫ ॥

ಅ ॥ (೧) ಸರ್ವೋತ್ತಮನಾದ ಶ್ರೀಹರಿಯು ಅತಿಶಯವಾಗಿ ಅತ್ಯುತ್ತಮವಾದ ಸಮೃದ್ಧಿಯೇ ಗುಣವಾಗಿ ಉಳ್ಳವನಾದುದರಿಂದ ಪರಾರ್ಧ್ಯಃ ಎನ್ನಿಸಿಕೊಳ್ಳುತ್ತಾನೆ. ಉತ್ತಮರಿಂದಲೂ ಯಾರು ಅತ್ಯುತ್ತಮನೋ, ಅವನಿಗಿಂತಲೂ ಯಾವನು ಉತ್ತಮನೋ, ಆತನಿಗಿಂತಲೂ ಶ್ರೇಷ್ಠನಾದವನು ರಸಾನಾಂ *ರಸತಮಃ ಪರಮಃ ಪರಾರ್ಧ್ಯಃ ಎನ್ನಿಸುತ್ತಾನೆ. (ಹೀಗೆ ಅರ್ಥವಾಗುವುದು ಹೇಗೆ? ಎಂದರೆ ವಾಕ್ಯವನ್ನು ಕೂಡಿಸುವ ರೀತಿಯನ್ನು ಹೇಳುತ್ತಾರೆ.) ಉತ್ತಮರಿಗಿಂತಲೂ ‡ ಪರಮಪರಾರ್ಧ್ಯ ರಸತಮನು, (ಹೀಗೆ ವಿಶಿಷ್ಟವಾಗಿಯೇ ಇಟ್ಟುಕೊಳ್ಳಬೇಕು. ಪ್ರತ್ಯೇಕ ವಿಶೇಷಣಗಳಲ್ಲ.) ಅದಕ್ಕೆ ಅತ್ಯಂತವಾಗಿ ಉತ್ತಮೋತ್ತ

* ರಸಃ, ರಸತರಃ, ರಸತಮಃ, ಪರಮರಸತಮಃ ಹೀಗೆ ನಾಲ್ಕು ತರಗತಿ

‡ ಪರಮಪರಾರ್ಧ್ಯಃ ಎಂಬುವಲ್ಲಿಯೂ ಪರಮರ್ಧಃ, ಪರಮಪರರ್ಧಃ, ಪರಮಪರಾರ್ಧಃ, ಪರಮಪರಾರ್ಧ್ಯಃ ಎಂದು ನಾಲ್ಕು ತರಗತಿಗಳು.

ನೋತ್ತಮನು ಎಂಬ ಅರ್ಥವು ಯುಕ್ತವು. (೨) ಭೂತಾಭಿಮಾನಿ ದೇವಾದಿಗಳಿಂದ ಪ್ರಾಣಾದಿಗಳು ಶ್ರೇಷ್ಠರು ಎಂದು ಹೇಳಿದಂತೆಯೇ ಶ್ರೀಹರಿಯು ಶ್ರೇಷ್ಠನೆಂದು ಅಲ್ಲ, ಶ್ರೀಹರಿಯ ಶ್ರೇಷ್ಠತೆಯಲ್ಲಿ ಅನ್ಯರಿಂದ ಮಹಾ ವಿಶೇಷವಿದೆ, ಎಂದು ತಿಳಿಸಿಕೊಡುವುದಕ್ಕಾಗಿ ರಸಾನಾಂ ರಸತಮಃ ಇದು ಮೊದಲಾದ ಬಹು ವಿಶೇಷಣಗಳನ್ನು ಹೇಳಿದ್ದು. (೩) (ಈಗ ಪರಮಪರಾರ್ಧ್ಯರಸತಮಃ ಎಂಬುದಕ್ಕೆ ಅಕ್ಷರಾರ್ಥ ಹೇಳುತ್ತಾರೆ—) ಭೂತಾಭಿಮಾನಿಗಳಿಂದ ಪೃಥಿವ್ಯಭಿಮಾನಿಗೆ ರಸ್ಯ (ಶ್ರೇಷ್ಠತ್ವ)ವು. ಪೃಥಿವಿಗಿಂತ ವರುಣನಿಗೆ ರಸತರತ್ವ (ಅತಿಶ್ರೇಷ್ಠತ್ವ)ವು. ವರುಣನಿಗಿಂತ ಚಂದ್ರನಿಗೆ ರಸತಮತ್ವವು. ಚಂದ್ರನಿಗಿಂತ ರುದ್ರನಿಗೆ ಪರಮ ರಸತಮತ್ವವು. ರುದ್ರನಿಗಿಂತ ಸರಸ್ವತಿಗೆ ಪರಮಾರ್ಧ ರಸತಮತ್ವವು. ಸರಸ್ವತಿಗಿಂತ ಪ್ರಾಣನಿಗೆ ಪರಮಪರಾರ್ಧ ರಸತಮತ್ವವು. (೪) ಈ ಶ್ರೀಹರಿಯಾದರೂ ಮುಖ್ಯಪ್ರಾಣನಿಗಿಂತಲೂ ಪರಮ ಪರಾರ್ಧ ರಸತಮ ಮಾತ್ರನು. ಆಗುವುದಲ್ಲಿ, ಮತ್ತೆ ಪ್ರಾಣನಿಗಿಂತಲೂ ಶ್ರೇಷ್ಠಾದ, (ಪರಮಪರಾರ್ಧ ರಸತಮ ಎನ್ನಿಸಿಕೊಂಡ) ಲಕ್ಷ್ಮೀದೇವಿಯಿಂದಲೂ ಶ್ರೀಹರಿಯು ಪರಮಪರಾರ್ಧ್ಯರಸತಮನು (ಪರಾರ್ಧ್ಯ ಶಬ್ದಾರ್ಥವನ್ನು ಹೇಳುತ್ತಾರೆ—) ತನಗಿಂತಲೂ (ಲಕ್ಷ್ಮೀದೇವಿಗಿಂತಲೂ) ಅತಿಶಯನಾಗಿ ಉತ್ತಮನೆಂದು, ಹೀಗೆ ಯಾವ * ಸಂಖ್ಯೆಗೂ ವಿಷಯನಾಗದೆ ಪರಾರ್ಧ ಎನ್ನಿಸಿಕೊಂಡ ಲಕ್ಷ್ಮೀದೇವಿಯಿಂದ (ಯ) ತಿಳಿಯಲ್ಪಡುವ ಶ್ರೀಹರಿಯು ಪರಾರ್ಧ್ಯನೆನಿಸುತ್ತಾನೆ ॥ ೫ ॥

ಭಾ. ॥ (೧) ಋಗ್ರೂಪಾಯಾ ವಾಚಃ ಪೃಥಕ್ ಪರತ್ವಾಂಗೀಕಾರೇಽಪಿ ಭೂತೇಭ್ಯಃ ಪ್ರಾಣಸ್ಯ ಪರಮಪರಾರ್ಧರಸತಮತ್ವಮೇವ । ನ ತು ಪರಮಪರಾರ್ಧಿ(ರ್ಧ್ಯ) ರಸತಮತ್ವಮ್ ॥ (೨) ಪರಸ್ಮಾದಪಿ ಅ ಸಮಂತಾದ್ಬದ್ಧಂ ಹಿ ಪರಾರ್ಧಂ । (ತೇನೋತ್ತಮತ್ವೇನ-ಜ್ಞೇಯಂ ಪರಾರ್ಧಿ) ॥ (೩) ತೇನಾಸಂಖ್ಯಾಗೋಚರತ್ವೇನ ಜ್ಞೇಯಂ ಪರಾರ್ಧ್ಯಂ ಪರಾರ್ಧೋತ್ತಮಂ ಪರಾರ್ಧಿತೇನಾಸಂಖ್ಯಾಗೋಚರತ್ವೇನ ಜ್ಞೇಯಂ ಪರಾರ್ಧ್ಯಮಿತ್ಯತಃ ಪರಾರ್ಧಿತ್ವಂ ಶ್ರಿಯೋ ಭವತಿ । ಶ್ರಿಯೋಽಪಿ ಪರಾರ್ಧ್ಯೋ ಭಗವಾನ್ । ಅತೋ ರಸಾನಾಂ ರಸತಮಃ ಪರಮಃ ಪರಾರ್ಧ್ಯಃ ॥ ೬ ॥ ॥ ೬ ॥

ಅ ॥ (೧) ವಾಗಿಂದ್ರಿಯಕ್ಕೆ ಅಭಿಮಾನಿಸಿಯಾದ ಸರಸ್ವತಿಯಿಂದ ಋಗಭಿಮಾನಿಸಿಯಾದ ಸರಸ್ವತಿಗೆ ಉತ್ತಮತ್ವವನ್ನು ಹೇಳಿದರೂ ಭೂತಾಭಿಮಾನಿ ದೇವತೆಗಳಿಗಿಂತ ಪ್ರಾಣನಿಗೆ ಪರಮಪರಾರ್ಧರಸತಮತ್ವವೇ ಪರಮಪರಾರ್ಧಿರಸತಮತ್ವವಲ್ಲ. ಅದು ಲಕ್ಷ್ಮೀದೇವಿಗೆ. (೨) ಉತ್ತಮನಾದ ಮುಖ್ಯಪ್ರಾಣನಿಂದಲೂ ಚೆನ್ನಾಗಿ ಸಮ್ಯದ್ಧಳಾದ ಲಕ್ಷ್ಮೀದೇವಿಯು ಪರಾರ್ಧಳು. ಆ ಲಕ್ಷ್ಮೀದೇವಿಗೂ ಗಣನೆ ಮಾಡಲಿಕ್ಕೆ ಸಾಧ್ಯವಿಲ್ಲದ ಗುಣಗಳು ಇವೆ ಎಂದು ತಿಳಿಯಲ್ಪಡುವವನು ಪರಾರ್ಧ್ಯನು. ಪರಾರ್ಧ ಎನ್ನಿಸಿಕೊಂಡ ಮುಖ್ಯಪ್ರಾಣನಿಂದ ಉತ್ತಮಳಾದ ಲಕ್ಷ್ಮೀದೇವಿಯು ಪರಾರ್ಧಿಯು ಎನ್ನಿಸುತ್ತಾಳೆ. (೩) ಆ ಲಕ್ಷ್ಮೀದೇವಿಯಿಂದಲೂ ಎಣಿಸಲಿಕ್ಕೆ ಅಸಾಧ್ಯಗಳಾದ ಗುಣಗಳು ಇವೆ ಎಂದು ತಿಳಿಯಲ್ಪಡುವ ಶ್ರೀಹರಿಯು ಪರಾರ್ಧ್ಯನು, ಅದಕಾರಣ ಲಕ್ಷ್ಮೀದೇವಿಯು ಪರಾರ್ಧಿಯೆನ್ನಿಸುತ್ತಾಳೆ. ಲಕ್ಷ್ಮೀದೇವಿಯಿಂದಲೂ ಗಣನೆ ಮಾಡಲಿಕ್ಕೆ ಅಸಾಧ್ಯಗಳಾದ ಗುಣಗಳು ಇದ್ದುದರಿಂದ ಶ್ರೀಹರಿಯು ಪರಾರ್ಧ್ಯನು. ಅದಕಾರಣ ಶ್ರೀಹರಿಯು ರಸಾನಾಂ ರಸತಮಃ ಪರಮಃ ಪರಾರ್ಧ್ಯಃ ಎನ್ನಿಸುತ್ತಾನೆ ॥ ೬ ॥ ॥ ೬ ॥

ಟೀ - ನೀಚೋಚ್ಚಭಾವದಿಂದ ಹೇಳಲ್ಪಟ್ಟ ಪೃಥಿವ್ಯಾದ್ಯಭಿಮಾನಿ ದೇವತೆಗಳು ಪ್ರಸಿದ್ಧರಾದುದರಿಂದ

* ಸರಸ್ವತಿಗಿಂತ ಪ್ರಾಣನಿಗೆ ಇಷ್ಟು ಹೆಚ್ಚು ಗುಣಗಳು ಎಂದು ಹೇಳಿದಂತೆ ಶ್ರೀಹರಿಯ ಗುಣಗಳಿಗೆ ಸಂಖ್ಯೆಯೇ ಇಲ್ಲದಿರುವುದರಿಂದ ಲಕ್ಷ್ಮೀದೇವಿಯಿಂದ ಶ್ರೀಹರಿಗೆ ಇಷ್ಟು ಗುಣಗಳು ಹೆಚ್ಚು ಎಂದು ಹೇಳಲಿಕ್ಕಾಗುವುದಿಲ್ಲ

ಆ ವಿಷಯದಲ್ಲಿ ಪ್ರಶ್ನಿಸವೆ ಋಗಾದಿಗಳು ಅಪ್ರಸಿದ್ಧಗಳಾಗಿರುವುದರಿಂದಲೂ ಅವುಗಳ ಜ್ಞಾನವು ಉತ್ತಮ ಫಲಕ್ಕೆ ಕಾರಣವಾಗಿರುವುದರಿಂದಲೂ ಅದನ್ನು ಪ್ರಶ್ನಿ ಸುತ್ತಾರೆ—

ಉ. ॥ ಕತಮೂ ಕತಮೂ ಋಕ್ಕತಮತ್ಕತಮುತ್ಸಾಮ ಕತಮಃ ಕತಮ ಉದ್ಗೀಥ ಇತಿ ವಿಮೃಷ್ಟಂ ಭವತಿ ವಾಗೇವ ಋಕ್ ಪ್ರಾಣಃ ಸಾಮೋಮಿ-ತ್ಯೇತದಕ್ಷರಮುದ್ಗೀಥಃ ॥ ೩ ॥

ಆ ॥ ಋಕ್, ಸಾಮ, ಉದ್ಗೀಥವೆಂದರೆ ಯಾವುವು? ಎಂದು *ವಿಚಾರವು ಮಾಡಲ್ಪಡುತ್ತದೆ. ಸಮಸ್ತ ವೇದಗಳಿಗೆ ಅಭಿಮಾನಿನಿಯಾದ ಸರಸ್ವತಿಯೇ ಪ್ರಾಣನಿಂದೊಡಗೂಡಿದವಳಾಗಿ ಋಕ್ಕಿಗೆ ಅಭಿಮಾನಿನಿ ಯಾಗಿ ಋಕ್ ಎನ್ನಿಸುತ್ತಾಳೆ. ಮುಖ್ಯಪ್ರಾಣನು ಸಮಸ್ತ ಭೂತಗಳಲ್ಲಿ ಸಮನಾದುದರಿಂದಲೂ ಸಾಮಾಭಿ ಮಾನಿನಿಯಾದುದರಿಂದಲೂ ಸಾಮ ಎನ್ನಿಸುತ್ತಾನೆ. ಓಂ ಎನ್ನಿಸಿಕೊಂಡ ಸರ್ವರ ಹೃದಯದಲ್ಲಿರುವ ನಾಶ ರಹಿತನಾದ ಶ್ರೀಹರಿಯೇ ಉದ್ಗೀಥನೆನ್ನಿಸುತ್ತಾನೆ. ॥ ೩ ॥

ಭಾ. ॥ (೧) ಪೃಥಿವ್ಯಾಃ ಸೋಮವರುಣಯೋಶ್ಚೌಷಧ್ಯಬ್ದೇವತಾತ್ವೇನ ರುದ್ರಸ್ಯ ಚ ಲಿಂಗದೇವತಾತ್ವೇನ ಪ್ರಸಿದ್ಧೇಃ ಋಗಾದೀನಾಮೇವ ವಿಮರ್ಶಃ ಕ್ರಿಯತೇ ಕತಮಾ ಕತ-ಮರ್ಗಿತ್ಯಾದಿನಾ । ತಜ್ಜ್ಞಾನಸ್ಯ ವಿಶಿಷ್ಟಫಲತ್ವಾಚ್ಚ ॥ (೨) ವಾಚಶ್ಚ ಸರಸ್ವತೀತ್ವೇನ ಪ್ರಸಿದ್ಧೇರ್ವಾಗ್ಯಚೋರೈಕ್ಯಾಚ್ಚ ನ ವಿಮರ್ಶಃ ಕೃತಃ ॥ (೩) ವಿಶೇಷಾತ್ಪ್ರಾಣಸಂಯುಕ್ತಾ ವಾಗ್ಯಗಿತ್ಯಭಿಧೀಯತೇ । ಋ ಗತಾವಿತಿ ಧಾತೋರ್ಹಿ ಋಕ್ತ್ವಂ ಸರ್ಗಾಭಿಮಾನಿನೀ ॥ (೪) ವಿಶೇಷಸಂಯೋಗಹೀನಾ ಯದಾ ಸೈವ ಸರಸ್ವತೀ । ತದಾಸ್ಯಾ ಅವರಾ ಸೈವ ಪ್ರಾಣ ಸಂಯೋಗಿನೀ ಮತಾ ॥ ೧ ॥

ಆ ॥ (೧) ಪೃಥಿವಿಗೆ (ಪೃಥಿವೀ ದೇವತೆಯೆಂದೂ) ಚಂದ್ರನಿಗೆ ವನಸ್ಪತಿ ದೇವತೆಯೆಂದೂ, ವರುಣನಿಗೆ ಜಲದೇವತೆಯೆಂದೂ ರುದ್ರನಿಗೆ ಪುರುಷರ ಗುಹ್ಯೇಂದ್ರಿಯ ದೇವತೆಯೆಂದೂ ಪ್ರಸಿದ್ಧಿಯಿದ್ದು ದರಿಂದಲೂ ಋಗಾದಿಗಳ ಜ್ಞಾನಕ್ಕೆ ಅತ್ಯುತ್ತಮ ಫಲವಿದ್ದುದರಿಂದಲೂ ಕತಮಾ ಕತಮರ್ಕ್ ಇತ್ಯಾದಿ ಗಳಿಂದ ಋಗಾದಿಗಳ ವಿಚಾರವನ್ನೇ ಮಾಡಿರುತ್ತಾರೆ (೨) ವಾಗಭಿಮಾನಿನಿಯು ಸರಸ್ವತಿಯು ಎಂದು ಪ್ರಸಿದ್ಧಿಯಿದ್ದುದರಿಂದಲೂ ವಾಗೇವರ್ಕ್ ಎಂದು ವಾಕ್ ಋಕ್‌ಗಳಿಗೆ ಐಕ್ಯವನ್ನು ಹೇಳಿದುದರಿಂದಲೂ (ಋಕ್ ಯಾವುದೆಂದು ಋಗ್ವಿಚಾರ ಮಾಡುವಾಗ ವಾಕ್ ವಿಚಾರವೂ ಮಾಡಿದಂತೆ ಆಗುವುದರಿಂದ ಪ್ರತ್ಯೇಕವಾಗಿ) ವಾಗ್ವಿಚಾರವನ್ನು ಮಾಡಲಿಲ್ಲ. (೩) ವಿಶೇಷವಾಗಿ ಮುಖ್ಯಪ್ರಾಣನಿಂದೊಡಗೂಡಿದಾಗ ಸರಸ್ವತಿಗೆ ಋಕ್ ಎಂದು ಹೆಸರು (ಋಕ್ ಎನ್ನುವುದಕ್ಕೆ ಹೀಗೆ ಅರ್ಥವಾಗುವುದು ಹೇಗೆ ಎಂದರೆ—) ಋ ಗತೌ ಎಂಬ ಧಾತ್ವರ್ಥದಿಂದ ಋಕ್ ಎಂಬ ಶಬ್ದದ ಅರ್ಥವು ಋಕ್ತ್ವವು, ಗತತ್ವವು, ಸಂಯುಕ್ತ ತ್ವವು ಅಂದರೆ—ವಿಶೇಷವಾಗಿ ಪ್ರಾಣನಿಂದಲೇ ಸಂಬಂಧವನ್ನು ಹೊಂದಿರುವುದು ಋಕ್ ಶಬ್ದದ ಅರ್ಥವು. (ಪ್ರಕಾರಾಂತರದಿಂದಲೂ ಸರಸ್ವತಿಗೆ ಋಕ್ ಎಂಬ ಹೆಸರು ಇದೆ ಎನ್ನುತ್ತಾರೆ—) ಸರಸ್ವತಿಯು ಸೃಷ್ಟಿಗೆ ಅಭಿಮಾನಿನಿಯಾದುದರಿಂದಲೂ ಋಕ್ ಎನ್ನಿಸುತ್ತಾಳೆ. (೪) ವಾಗಭಿಮಾನಿನಿ ಯಾದ ಸರಸ್ವತಿಗೆ ಮುಖ್ಯಪ್ರಾಣನ ವಿಶೇಷ ಸಂಯೋಗವು ಯಾವಾಗ ಇಲ್ಲವೋ ಆಗ ಅವಳು ಪ್ರಾಣನ ಸಂಯೋಗವಿಶೇಷವಿರುವ ಋಗಭಿಮಾನಿನಿಯಾದ ಸರಸ್ವತಿಗಿಂತ ಅಧಮಳೆನ್ನಿಸುತ್ತಾಳೆ. ॥ ೧ ॥

* ಋಗಾದಿಗಳ ಸ್ವರೂಪವನ್ನು ತಿಳಿದುಕೊಳ್ಳಲಿಕ್ಕೆ ಅವು ಎಲ್ಲವಿಗೆ ಇದೆ ಎಂದು ತಿಳಿಸುವುದಕ್ಕಾಗಿ ಕತಮಾ ಇತ್ಯಾದಿ ಗಳನ್ನು ಎತ್ತಿ ಸಲ ಹೇಳಿದ್ದು.

ಪೀ—ವಾಗಭಿಮಾನಿಸಿಯೂ ಋಗಭಿಮಾನಿಸಿಯೂ ಒಬ್ಬಳೇ ಎಂದಾದರೆ—ವಾಚಃ ಋಗ್ಯಸಃ ಎಂದು ವಾಕಿನಿಂದ ಋಕ್ ಶ್ರೇಷ್ಠವು ಎಂದು ಹೇಳಿದ್ದು ಕೂಡಲಾರದು. ಭೇದವಿದೆ ಎಂದಾದರೆ ವಾಗೇ-ವರ್ಕ್ ಎಂದು ಅಭೇದ ಹೇಳಿದ್ದು ಕೂಡಲಾರದು ಎಂದರೆ—

ಭಾ. ॥ (೧) ಪ್ರಾಣ(ಪ್ರಣ) ಯೋಗವಿಯೋಗಾಭ್ಯಾಂ ಸೈಷೈಕಾಪಿ ವಿಭಿದ್ಯತೇ । ವಾಗೇವರ್ಕ್ತಾಚ್ಛ್ರುತೌ ಪ್ರೋಕ್ತಾ ॥ (೨) ಪ್ರಾಣಾ ಸಾಮೇತಿ ಕೀರ್ತಿತಃ । ಅಕ್ಷಯಾದ್ಗ (ದ್ರ)ತಿರೂಪತ್ವಾದಕ್ಷೀಷು ರಮಣಾದಪಿ । ಅಕ್ಷರಂ ಭಗವಾನ್ವಿಷ್ಣು ॥ (೩) ಓಮಿ(ಮ)ತ್ಯುಚ್ಚ-ತ್ಯಹೇಕುತಃ । ಇತಿಶಬ್ದೋಽನ್ಯಥಾಭಾವನಿವೃತ್ತ್ಯರ್ಥ ಉದಾಹೃತಃ ॥ (೪) ವಿವಮತ್ಯುಚ್ಚ ವಿವಾಸೌ ಸರ್ವದೈಕದ್ಧೃದಿ ಸ್ಥಿತಃ (ತೇಃ) । ಉದ್ಗೀಯಮಾನ ಉದ್ಗೀಥೋ ಭಗ-ವಾನ್ ಪುರುಷೋತ್ತಮಃ ॥ ೫ ॥ ॥ ೨ ॥

ಅ ॥ (೧) ವಾಗಭಿಮಾನಿಸಿಯೂ ಋಗಭಿಮಾನಿಸಿಯೂ ಸರಸ್ವತಿಯೊಬ್ಬಳೇ ಆದುದರಿಂದ ವಾಗೇವರ್ಕ್ ಎಂದು ವೇದದಲ್ಲಿ ಭೇದವಿಲ್ಲವೆಂದು ಹೇಳಿದ್ದು. ಒಬ್ಬಳೇ ಆದರೂ ಕೆಲವು ವೇಳೆ ಪ್ರಾಣನ ಸಂಬಂಧ ವಿಶೇಷವಿದೆ. ಕೆಲವು ವೇಳೆ ಇಲ್ಲ ಇದರಿಂದ ಭೇದವಿದ್ದಪ್ರಯುಕ್ತ ವಾಚಃ ಋಗ್ಯಸಃ ಎಂದು ಭೇದ ಹೇಳಿದ್ದು. (೨) ಪ್ರಾಣನು ಸಾಮ ಎನ್ನಿಸುತ್ತಾನೆ ಶ್ರೀಹರಿಯು ನಾಶವಿಲ್ಲದ ಸುಖಸ್ವರೂಪ ನಾದುದರಿಂದ ಅಥವಾ ಇಂದ್ರಿಯಗಳಲ್ಲಿ ಕ್ರೀಡಿಸಿಕೊಂಡಿರುವುದರಿಂದ ಅಕ್ಷರನೆನಿಸುತ್ತಾನೆ. (೩) ವಿಷ್ಣುವು ಸರ್ವೋತ್ತಮನಾದುದರಿಂದ ಓಂ ಎನ್ನಿಸುತ್ತಾನೆ ಓಮಿತಿ ಎಂಬುವಲ್ಲಿದ್ದ ಇತಿಶಬ್ದವು ವ್ಯತ್ಯಾಸವಿಲ್ಲ ಎಂಬ ಅರ್ಥವನ್ನು ಹೇಳುತ್ತದೆ. (ಅಂದರೆ ವಿಷ್ಣುವಿನ ಗುಣಗಳಿಗೆ ಯಾವಾಗಲೂ ಸರ್ವಥಾ ವ್ಯತ್ಯಾಸವೇ ಇಲ್ಲ. ಒಂದೇ ರೀತಿಯಾಗಿ ಇರುವವನು.) ಎಂದರ್ಥವು. (೪) ಹಿಂದೆ ಹೇಳಿದ ಪ್ರಕಾರ ಶ್ರೀಹರಿಯು ಸರ್ವದಾ ಸರ್ವೋತ್ತಮನೇ ಆಗಿರುತ್ತಾನೆ. ಸರ್ವರ ಹೃದಯದಲ್ಲಿ ಇದ್ದು ಸರ್ವೋತ್ತಮನೆಂದು ಸರ್ವರಿಂದಲೂ ಗಾನವಾಡಲ್ಪಡುವವನಾದುದರಿಂದ ಉದ್ಗೀಥನು ॥ ೫ ॥ ॥ ೨ ॥

ಪೀ—ಮಹಾಮಹಿಮೆಯುಳ್ಳ ಸರಸ್ವತೀ ಪ್ರಾಣರು ಮುಕ್ತಿಯಲ್ಲಿಯೂ ತಮಗಿಂತಲೂ ಹೆಚ್ಚು ಮಹಿಮೆಯುಳ್ಳ ಶ್ರೀಹರಿಯನ್ನು ಆಶ್ರಯಿಸುತ್ತಿರುತ್ತಾರೆ, ಎನ್ನುತ್ತಾರೆ—

ಉ. ॥ ತದ್ವಾ ಏತನ್ಮಿಥುನಂ ಯದ್ವಾಕ್ಚ ಪ್ರಾಣಶ್ಚ ಋಕ್ಚ ಸಾಮ ಚ ತದೇತನ್ಮಿಥುನಮೋಮಿತ್ಯೇತಸ್ಮಿನ್ನಕ್ಷರೇ ಸಂಸೃಜ್ಯತೇ ॥ ೪ ॥

ಅ ॥ *ವಾಕ್ ಪ್ರಾಣರು, ಋಕ್ ಸಾಮರು, ಇವರು ನಿತ್ಯದಲ್ಲಿಯೂ ದಂಪತಿಗಳಾಗಿ ವಿಯೋಗವಿಲ್ಲದೇನೇ ಇರುತ್ತಾರೆ. ಈ ದಂಪತಿಗಳು ಓಂ ಎನ್ನಿಸಿಕೊಂಡ ಸರ್ವರ ಹೃದಯದಲ್ಲಿರುವ ಅಕ್ಷರನೆನಿಸಿಕೊಂಡ ಶ್ರೀಹರಿಯ ಸನ್ನಿಧಪದಲ್ಲಿ ಮೋಕ್ಷದಶೆಯಲ್ಲಿ ಇರುತ್ತಾರೆ.

ವಿ ॥ ಶೇಷಾದಿಗಳಿಗೆ ಮುಕ್ತಿಯಲ್ಲಿ ಶ್ರೀಹರಿಯ ಸಂಬಂಧವಿದೆ. ಆದರೂ ಪ್ರಾಣನನ್ನು ಪ್ರವೇಶಿಸಿ ಪ್ರಾಣನ ಪ್ರಸಾದದಿಂದಲೇ ಅವರಿಗೆ ಶ್ರೀಹರಿಯಲ್ಲಿ ಪ್ರವೇಶವು, ಸಾಕ್ಷಾತ್ತಲ್ಲ ಸರಸ್ವತೀ ಬ್ರಹ್ಮರಿಗಾದರೂ ಇತರರ ಅನುಗ್ರಹವಿಲ್ಲದೇನೇ ಸಾಕ್ಷಾತ್ಶಾಗಿಯೇ ಶ್ರೀಹರಿಯಲ್ಲಿ ಪ್ರವೇಶವು ಅದಕಾರಣ ಸರಸ್ವತೀ ಬ್ರಹ್ಮರಿಗೆ ಇತರರಿಗಿಂತ ಸಂಬಂಧವನ್ನು ಹೇಳಿದ್ದು. ॥ ೪ ॥

* ಭಾರತೀ ಪ್ರಾಣರಿಗೇನೇ ಅವಸ್ಥಾ ಭೇದದಿಂದ ವಾಕ್ಪ್ರಾಣ, ಋಕ್ಸಾಮ ಎಂದು ಪ್ರತ್ಯೇಕ ಉಕ್ತಿಯು.

ಪೀ—ಮೋಕ್ಷವಾದ ಮೇಲೆ ವಾಕ್ಪ್ರಾಣರಿಗೆ ಆಲ್ಲಿ ಯಾವ ವಿಶೇಷವೆಂದರೆ—

ಉ. ॥ ಯದಾ ವೈ ಮಿಥುನೌ ಸಮಾಗಚ್ಛತ ಆಪಯತೋ ವೈತಾವ-ನ್ಯೋನ್ಯಸ್ಯ ಕಾಮಮಾಪಯಿತಾ ಹ ವೈ ಕಾಮಾನಾಂ ಭವತಿ ಯ ಏತದೇವಂ ವಿದ್ವಾನಕ್ಷರಮುದ್ಗೀಥಮುಪಾಸ್ತೇ ॥ ೫ ॥

ಅ ॥ ವಾಕ್ಪ್ರಾಣಾದಿ ರೂಪರಾದ ದಂಪತಿಗಳು ಯಾವಾಗ ಶ್ರೀಹರಿಯನ್ನು ಹೊಂದುತ್ತಾರೋ ಆಗ ವಾಕ್ಪ್ರಾಣರು ತಾವು ಮಾತ್ರ ಅಭೀಷ್ಟವನ್ನು ಹೊಂದುವುದಲ್ಲದೆ ಅನ್ಯರಿಗೂ ಅಭೀಷ್ಟವನ್ನು ಹೊಂದಿಸುವರು. (ಉಪಾಸಕನಿಗೆ ಫಲ ಹೇಳುತ್ತಾರೆ—) ಯಾವ ಅಧಿಕಾರಿಯು ನಾಶರಹಿತನೂ ಸರ್ವರ ಹೃದಯದಲ್ಲಿರುವವನೂ ಆದ ಉದ್ಗೀಥನೆನಿಸಿಕೊಂಡ ಶ್ರೀಹರಿಯು ಹಿಂದೆ ಹೇಳಿದ ಪ್ರಕಾರ ಮೋಕ್ಷದಲ್ಲಿ ವಾಕ್ಪ್ರಾಣರಿಗೆ ಆಶ್ರಯನೆಂದೂ ಅವರಿಗೆ ಅಭೀಷ್ಟವನ್ನು ಕೊಡತಕ್ಕವನೆಂದೂ ಆತನನ್ನು ತಿಳಿದು ಉಪಾಸನೆ ಮಾಡುತ್ತಾನೋ, ಆತನು ಎಲ್ಲಾ ಅಭೀಷ್ಟಗಳನ್ನು ಹೊಂದುತ್ತಾನೆ. ಪ್ರಸಿದ್ಧ. ॥ ೫ ॥

ಪೀ—ಶ್ರೀಹರಿಗೆ ಓಂ ಎಂಬ ನಾಮವಿದೆ, ಎಂಬುವಲ್ಲಿ ಓಮಿತಿ ಹ್ಯುದ್ಗಾಯತಿ ಎಂಬ ಯುಕ್ತಿಯನ್ನು ಮೊದಲು ಹೇಳಿಯದೆ. ಈಗ ಯುಕ್ತ್ಯಂತರದಿಂದ ಅದನ್ನೇ ಸಾಧಿಸುತ್ತಾರೆ—

ಉ. ॥ ತದ್ವಾ ಏತದನುಜ್ಞಾಕ್ಷರಂ ಯದ್ಧಿ ಕಿಂಚಾನುಜಾನಾತ್ಯೋಮಿತ್ಯೇವ ತದಾ ಹ್ಯೇಷೋ ಏವ ಸಮೃದ್ಧಿರ್ಯದನುಜ್ಞಾ ಸಮರ್ಧಯಿತಾ ಹ ವೈ ಕಾಮಾನಾಂ ಭವತಿ ಯ ಏತದೇವಂ ವಿದ್ವಾನಕ್ಷರಮುದ್ಗೀಥಮುಪಾಸ್ತೇ ॥ ೬ ॥

ಅ ॥ ಓಂ ಎಂಬ ಅಕ್ಷರವು ಅನುಜ್ಞೆಯನ್ನು ಕೊಡತಕ್ಕುದೇ. (ಹೇಗೆಂದರೆ) ನಾನು ಇದನ್ನು ಮಾಡುತ್ತೇನೆ, ತಾವು ಅದಕ್ಕೆ ಅನುಜ್ಞೆ ಕೊಡಬೇಕೆಂದು ಕೇಳಿದರೆ ತಿಳಿದವನು ನೀನು ಮಾಡತಕ್ಕುದನ್ನು ಶ್ರೀಹರಿಯು ಹಾಗೆಯೇ ಮಾಡಲಿ, ಎಂದು ಅನುಜ್ಞೆ ಕೊಡುವ ವಿಷಯದಲ್ಲಿ ಓಂ ಎಂಬ ಅಕ್ಷರವನ್ನೇ ಹೇಳುತ್ತಾನೆ. ಆದಕಾರಣ ಶ್ರೀಹರಿಗೆ ಓಂ ಎಂಬ ಹೆಸರು. (ಶ್ರೀಹರಿಗೆ ಓಂ ಎಂಬ ಹೆಸರು ಇಲ್ಲವಾದರೆ ಹಾಗೆ ಅನುಜ್ಞೆ ಕೊಡಲಿಕ್ಕೆ ಓಂ ಎಂದು ಹೇಳುವುದು ಕೂಡದೆ ಹೋಗಬೇಕಾಗುವುದು.) (ಓಂ ಎಂಬುವುದಕ್ಕೆ ಶ್ರೀಹರಿಯು ಅನುಜ್ಞೆ ಕೊಡತಕ್ಕವನೆಂದರ್ಥವು ಎಂದು ಸಮರ್ಥಿಸಿ ಈಗ ಸರ್ವಗುಣಸಂಪೂರ್ಣತ್ವವೂ ಓಂ ಎಂಬುದಕ್ಕೆ ಅರ್ಥವೆನ್ನುತ್ತಾರೆ—) ಓಂ ಎಂಬ ಅನುಜ್ಞೆ ಕೊಡತಕ್ಕ ಅಕ್ಷರವು ಸಮೃದ್ಧಿಯೆಂಬ ಅರ್ಥವನ್ನು ಹೇಳುತ್ತದೆ (ಶ್ರೀಹರಿಯು ನಿನ್ನ ಅಭೀಷ್ಟವನ್ನು ಪೂರ್ಣೇ ಕರಿಸಲಿ, ಎಂದು ಅನುಜ್ಞೆ ಕೊಡಲಿಕ್ಕೆ ತಿಳಿದವನು ಓಂ ಎಂದೇ ಹೇಳುತ್ತಾನೆ. (ಓಂ ಎಂಬುದಕ್ಕೆ ಸಮೃದ್ಧಿಯೆಂಬ ಅರ್ಥವಿಲ್ಲವಾದರೆ ಶ್ರೀಹರಿಯು ಸಮೃದ್ಧಿ ಮಾಡಲಿ ಎಂಬ ಅರ್ಥದಲ್ಲಿ ಓಂ ಎಂದು ಹೇಳುತ್ತಿರಲಿಲ್ಲ) (ಇದನ್ನು ತಿಳಿದವರಿಗೆ ಫಲ ಹೇಳುತ್ತಾರೆ—) ಭಗವಂತನಿಗೆ ಪರಿಪೂರ್ಣ ಎಂದು ಅರ್ಥವುಳ್ಳ ಓಂ ಎಂಬ ಹೆಸರು ಇದೆ, ಎಂದು ತಿಳಿದು ಶ್ರೀಹರಿಯನ್ನು ಉಪಾಸನೆ ಮಾಡುವವನು ಮುಕ್ತನಾಗಿ ಎಲ್ಲಾ ಅಭೀಷ್ಟಗಳನ್ನು ಹೊಂದಲಿಕ್ಕೆ ಸಮರ್ಥನಾಗುತ್ತಾನೆ ॥ ೬ ॥

ಭಾ. ॥ (೧) ತಸ್ಮಾದೋಮಿತ್ಯನುಜ್ಞಾನಂ ಕುರ್ವಂತ್ಯೇತೇ ಜನಾಃ ಸದಾ । ತ್ವದುಕ್ತಂ ತತ್ತಥಾ ಕುರ್ಯಾದ್ಭಗವಾನೇವ ಕೇಶವಃ । ಇತ್ಯಭಿಪ್ರಾಯತಃ ಶಬ್ದಃ ಪ್ರವೃತ್ತಃ ಸ

ಪುರಾತನ್ಯೈ ॥ (೨) ತದೇತದಜ್ಞೈಸ್ತು ಜನ್ಯೈಃ ಸ್ವಾನುಜ್ಞೇತಿ ಪ್ರತೀ(ದೀ)ಯತೇ । ಓಮಿತ್ಯ-
ಯಂ ಪೂರ್ಣವಾಚೀ ಸಮೃದ್ಧಿರ್ಹ್ಯೋಮಿತೀರಿತಾ ॥ (೩) ಸಮೃದ್ಧಸ್ತೇ ಹಿ ಕಾಮೋಽಯ-
ಮಿತ್ಯನುಜ್ಞಾಽಥವಾ ಭವೇತ್ । ಅತಃ ಸಮೃದ್ಧಿವಾಚೀ ಸ್ಯಾದ್ಧರೇರೋಂಶಬ್ದ ಈರಿತಃ ॥
(೪) ಇತಿ ವಾ ದೀಯತೇಽನುಜ್ಞಾ ಹರಿಸ್ತವ ಸಮೃದ್ಧಿದಃ ॥ ೪,೫,೬ ॥ ॥ ೧ ॥

ಅ ॥ (೧) ಓಂ ಎಂಬ ನಾಮವು ಶ್ರೀಹರಿಯನ್ನು ಹೇಳುವುದರಿಂದಲೇ ಅಭಿಜ್ಞರು ಸದಾ ಓಂ ಎಂದು ಅನುಜ್ಞೆ ಕೊಡುತ್ತಾರೆ. ಶ್ರೀಭಗವಂತನು ನೀನು ಹೇಳಿದುದನ್ನು ಹಾಗೆ ನಿಶ್ಚಯವಾಗಿಯೂ ಮಾಡುವನು. (ಅದಕಾರಣ ಓಂ ಶಬ್ದವು ಭಗವಂತನನ್ನು ಹೇಳುತ್ತದೆ.) ಈ ಅಭಿಪ್ರಾಯದಿಂದಲೇ ಲೋಕದಲ್ಲಿ ಓಂ ಎಂಬ ಶಬ್ದವು ಬಳಕೆಯಲ್ಲಿದೆ. (೨) ಓಂ ಎಂಬ ಶಬ್ದವನ್ನು ಅಜ್ಞಜನರು ತಾವು ಅನುಜ್ಞೆ ಕೊಡುವುದೆಂದು ತಿಳಿಯುವರು. (೩) ಓಂ ಎಂಬ ಶಬ್ದವು ಪೂರ್ಣ ಎಂಬ ಅರ್ಥವನ್ನು ಹೇಳುತ್ತದೆ. ಸರ್ವಸಮೃದ್ಧಿಯು ಓಂ ಎನ್ನಿಸುತ್ತದೆ. ಅಥವಾ ಈ ನಿನ್ನ ಅಭೀಷ್ಟವು ಅತಿ ಸಮೃದ್ಧವಾಗಲಿ ಎಂಬ ಅಭಿಪ್ರಾಯದಿಂದ ಓಂಕಾರವು. ಅದಕಾರಣ ಓಂ ಶಬ್ದವು ಶ್ರೀಹರಿಗೆ ಗುಣ ಸಮೃದ್ಧಿಯೆಂಬ ಅರ್ಥವನ್ನು ಹೇಳುತ್ತದೆ. (೪) ಓಂ ಶಬ್ದಕ್ಕೆ ಸಮೃದ್ಧಿಯೆಂದು ಮಾತ್ರ ಅರ್ಥವಾಗಬೇಕು. ಶ್ರೀಹರಿಯ ಗುಣಗಳ ಸಮೃದ್ಧಿ ಎಂಬ ಅರ್ಥವನ್ನು ಓಂಕಾರವು ಹೇಳುತ್ತದೆ ಎಂಬುದು ಹೇಗೆಕೂಡುತ್ತದೆ? ಎಂದರೆ— ಶ್ರೀಹರಿಯು ನಿನಗೆ ಸಮೃದ್ಧಿಯನ್ನು ಕೊಡಲಿ. ಎಂದು ಅನುಜ್ಞೆ ಕೊಡುವುದರಿಂದ ಓಂಕಾರವು ಶ್ರೀಹರಿಗೆ ಗುಣಗಳ ಸಮೃದ್ಧಿಯೆಂಬ ಅರ್ಥವನ್ನು ಹೇಳುತ್ತದೆಂದು ಸಿದ್ಧಿಸುತ್ತದೆ. ॥ ೬ ॥

ಪೀ—ಸುಲಭದಿಂದ ಜ್ಞಾನವಾಗುತ್ತದೆಂಬ ಉದ್ದೇಶದಿಂದ ೬ನೇ ಮಂತ್ರಕ್ಕೆ ಮೊದಲು ಅರ್ಥಹೇಳಿ ಈಗ ೪ನೇ ಮಂತ್ರಕ್ಕೆ ಅರ್ಥಹೇಳುತ್ತಾರೆ—

**ಭಾ. ॥ ವಾಕ್ಪ್ರಾಣೌ ದಂಪತೀ ಚಾಪಿ ಸಂಸೃಜ್ಯೇತೇ ಜನಾರ್ದನೇ । ಮುಕ್ತೌ ತು ತತ್ಪ್ರಸಾದೇನ ಸಂಸೃಜ್ಯಂತೇ ತತಃ ಪರೇ । ತದ್ದ್ವಾರೇಣೈವ ಸಾಕ್ಷಾತ್ತು ಪ್ರಾಣಃ ಸಂಸೃ-
ಜ್ಯತೇ ಹರೌ ॥ ೪ ॥ ॥ ೧ ॥**

ಅ ॥ ಸರಸ್ವತೀ ಚತುರ್ಮುಖರೆಂಬ ದಂಪತಿಗಳು ಮೋಕ್ಷದಲ್ಲಿ ಶ್ರೀಹರಿಯಲ್ಲಿ ಸೇರುತ್ತಾರೆ. ಬೇರೆ ಗರುಡಾದಿ ದೇವತೆಗಳು ವಾಕ್ಪ್ರಾಣರ ಅನುಗ್ರಹದಿಂದಲೇ ಅವರ ಮೂಲಕ ಶ್ರೀಹರಿಯಲ್ಲಿ ಸೇರುತ್ತಾರೆ. ಚತುರ್ಮುಖನು ಬೇರೆ ದೇವತೆಗಳ ಅಪೇಕ್ಷೆಯಿಲ್ಲದೇನೇ ಶ್ರೀಹರಿಯನ್ನು ಸೇರುತ್ತಾನೆ. ॥ ೪ ॥ ॥ ೧ ॥

ಪೀ—ಓಂ ಎಂಬುದು ಸಮಸ್ತ ವೇದಾರ್ಥವನ್ನು ತಿಳಿಸುತ್ತದೆ ಎನ್ನುತ್ತಾರೆ—

**ಉ. ॥ ತೇನೇಯಂ ತ್ರಯೀ ವಿದ್ಯಾ ವರ್ತತ ಓಮಿತ್ಯಾಶ್ರಾವಯತ್ಯೋ-
ಮಿತಿ ಶಸ್ತ್ರಂಸತ್ಯೋಮಿತ್ಯುದ್ಗಾಯತ್ಯೇತಸ್ಯೈವಾಕ್ಷರಸ್ಯಾಪಚಿತ್ಯೈ ಮಹಿಮ್ನಾ
ರಸೇನ ತೇನೋಭೌ ಕುರುತೋ ಯಶ್ಚೈತದೇವಂ ವೇದ ಯಶ್ಚ ನ ವೇದ॥೭॥**

ಅ ॥ ಓಂಕಾರದಿಂದ ಹೇಳಲ್ಪಡತಕ್ಕ ವಿಷ್ಣುವಿನಿಂದ, ಋಗ್ಯಜುಸ್ಸಾಮರೂಪವಾದ ವಿದ್ಯೆಯು ಉಂಟಾಗಿದೆ. ಈ ಶ್ರೀಹರಿಯ ಪೂಜೆಗೋಸ್ಕರವೇ *ಋಗಾದಿ ವೇದವು ಓಂ ಎಂದು ಹೇಳಿಕೊಂಡೇ

* ವೇದಗಳನ್ನು ಪಠನಮಾಡುವುದರ ಮೊದಲು ಓಂ ಎಂಬುದನ್ನು ಸರ್ವರೂ ಉಚ್ಚರಿಸಬೇಕು.

ವೇದಾರ್ಥವನ್ನು ಹೇಳುತ್ತದೆ. ಶಾಸ್ತ್ರರೂಪವಾದ ಮಂತ್ರರಾಶಿಯು ಓಂ ಎಂದು ಹೇಳಿಕೊಂಡು ವೇದಾರ್ಥವನ್ನು ಹೇಳುತ್ತದೆ. ಸಾಮವೇದವು ಕೂಡ ವೇದಾರ್ಥವನ್ನೇ ಗಾನಮಾಡುತ್ತದೆ. ಅಥವಾ ಅಧ್ವರ್ಯುವು ಓಂ ಎಂದು ಹೇಳಿ ಅಶ್ರಾವಮಂತ್ರವನ್ನೂ, ಹೋತನು ಶಂಸನ ಮಂತ್ರವನ್ನೂ. ಉದ್ಗಾತನು ಉದ್ಗಾನ ಮಂತ್ರವನ್ನು ಹೇಳುತ್ತಾನೆ. (ಓಂ ಎಂದು ಹೆಸರುಳ್ಳ ಶ್ರೀಪತಿಯು ಸರ್ವೋತ್ತಮನು ಮತ್ತು ಸರ್ವವೇದಗಳಿಗೆ ಅರ್ಥಭೂತನೆಂದು ಹೇಳಿ ಸರ್ವಪ್ರವರ್ತಕನೂ, ಆಗಿದ್ದಾನೆ. ಎನ್ನುತ್ತಾರೆ—) ಪೂರ್ಣನೂ. ಸರ್ವೋತ್ತಮನೂ. ಸರ್ವವೇದಪ್ರಸಿದ್ಧನೂ ಆದ ಓಂ ಎಂದು ಹೆಸರುಳ್ಳ ಶ್ರೀಹರಿಯಿಂದ ಪ್ರೇರಿತರಾಗಿ, ಭಗವತ್ಸ್ವರೂಪವನ್ನು ಹಿಂದೆ ಹೇಳಿದ ಪ್ರಕಾರ ತಿಳಿದವರೂ ತಿಳಿಯದಿದ್ದವರೂ ಇಬ್ಬರೂ ಕರ್ಮ ಮಾಡುತ್ತಾರೆ. ॥ ೬ ॥

ಭಾ. ॥ ತೇನೈವ ವಿಷ್ಣುನೇಯಂ ಚ ತ್ರಯೀ ವಿದ್ಯಾ ಪ್ರವರ್ತತೇ । ಓಮಿತ್ಯುಕ್ತ್ವಾ ಹಿ ಶಬ್ದ್ಯಾಖ್ಯಾ ಸರ್ವೈರ್ಮಂತ್ರೈಃ ಪ್ರವರ್ತತೇ॥ ಓಂನಾಮಕಸ್ಯ ಪೂಜಾರ್ಥಂ ವಿಷ್ಣೋರೇವ ಸದೈವ ಹಿ । ಮಹಿಮ್ನಾ ಸಾರಭೂತೇನ ವಿಷ್ಣುನಾ ಜ್ಞೋಽಜ್ಞ ಏವ ಚ ॥ ಕುರುತಃ ಕರ್ಮ ॥ ೭ ॥

॥ ೧ ॥

ಆ ॥ ಪ್ರಣವದ ಅರ್ಥಭೂತನಾದ ವಿಷ್ಣುವಿನಿಂದಲೇ ವೇದತ್ರಯವು ಹೊರಟಿದೆ. (ಅಂದರೆ ಪ್ರಣವದ ಅರ್ಥವೇ ಸರ್ವವೇದಾರ್ಥವು.) ಓಂ ಎಂದು ಹೆಸರುಳ್ಳ ವಿಷ್ಣುವಿನ ಪೂಜೆಗೋಸ್ಕರವೇ ಅಶ್ರವಣ ಮೊದಲಾದ ಸಮಸ್ತ ಮಂತ್ರಗಳಿಂದ ಓಂ ಎಂದು ಹೇಳಿ ವೇದಾರ್ಥವು ಹೇಳಲ್ಪಡುತ್ತದೆ. ಸರ್ವಗುಣ ಪೂರ್ಣನೂ ಸರ್ವೋತ್ತಮನೂ ಆದ ಶ್ರೀ ವಿಷ್ಣುವಿನಿಂದಲೇ ಪ್ರೇರಿತರಾಗಿ ತಿಳಿದವರೂ ತಿಳಿಯದಿದ್ದವರೂ ಕರ್ಮ ಮಾಡುತ್ತಾರೆ. ॥ ೭ ॥

॥ ೧ ॥

ಪೀ—ಎಲ್ಲಾ ಜನರೂ ಶ್ರೀಹರಿಯು ಪ್ರೇರಣೆಯಿಂದಲೇ ಕರ್ಮಮಾಡುತ್ತಾರೆಂದು ಹೇಳಿದೆ ಜ್ಞಾನಿಗಳು ಅಜ್ಞಾನಿಗಳು ಎಂದು ವಿಭಾಗ ಮಾಡಲಿಕ್ಕೆ ಏನು ಕಾರಣವು? ಎಂದರೆ—

ಉ. ॥ ನಾನಾ ತು ವಿದ್ಯಾ ಚಾವಿದ್ಯಾ ಚ ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತೀತಿ ಖಲ್ವೇತಸ್ಯೈವಾಕ್ಷರಸ್ಯೋಪವ್ಯಾಖ್ಯಾನಂ ಭವತಿ । ಅಥ ಯ ಏನಾಯಂ ಮುಖ್ಯಪ್ರಾಣಸ್ತಮುದ್ಗೀಥಮುಪಾಸೀತ ತಸ್ಯೇತರೈಃ ಪ್ರಾಸೈರುಪವ್ಯಾಖ್ಯಾನಂ ಭವತಿ ॥ ಇತಿ ಪ್ರಥಮಃ ಖಂಡಃ ॥ ೧ ॥

॥ ೮ ॥

ಆ ॥ ವಿದ್ಯೆ ಅವಿದ್ಯೆಗಳು ವಿಲಕ್ಷಣ ಫಲಗಳನ್ನು ಕೊಂದಿಸಿಕೊಡುತ್ತವೆ. (ಆದಕಾರಣ ಜ್ಞಾನಿ ಅಜ್ಞಾನಿ ಎಂಬ ಪ್ರತ್ಯೇಕ ಹೇಳಿದ್ದು.) (ವಿದ್ಯಾಫಲವನ್ನು ಹೋರಿಸುತ್ತಾರೆ—) ಶ್ರದ್ಧೆಯಿದ್ದು ತನಗೆ ಯೋಗ್ಯವಾದ ಜ್ಞಾನದಿಂದಲೇ ಯಾವ ಕರ್ಮಮಾಡುತ್ತಾನೋ, ಅದೇನೇ ಅನಂತ ಫಲವನ್ನು ಕೊಡುತ್ತದೆ. (ಅಂದರೆ ಅದೇನೇ ಕರ್ಮ ಅಪರೋಕ್ಷ ಜ್ಞಾನದಿಂದ ಮೊದಲಿನದ್ದಾದರೆ ಶ್ರೀಹರಿಯು ಪ್ರತ್ಯಕ್ಷ ಜ್ಞಾನಿಗಾಗಿ ಮೋಕ್ಷಕ್ಕೆ ಕಾರಣವಾಗುತ್ತದೆ. ಭಗವಂತನ ಸಾಕ್ಷಾತ್ಕಾರವಾದ ಮೇಲೆ ಕರ್ಮ ಮಾಡಿದ್ದಾದರೆ ಮೋಕ್ಷವಲ್ಲಿ ಅತಿಶಯ ಫಲವನ್ನು ಹುಟ್ಟಿಸುತ್ತದೆ.) ಹಿಂದೆ ಹೇಳಿದ ಪ್ರಕಾರ ಅಕ್ಷರನೆನಿಸಿಕೊಂಡ ಶ್ರೀಹರಿಯನ್ನು ಹೇಳತಕ್ಕ ಓಂ ಎಂಬುದರ ಅರ್ಥವು ಓಂ ಎನ್ನಿಸಿಕೊಂಡ ಶ್ರೀಹರಿಯನ್ನು ಉಪಾಸನಾ ಮಾಡಬೇಕೆಂದು ಹೇಳಿದ ಮೇಲೆ ಉಪಾಸನೆಗೆ ಆಶ್ರಯವು ಹೇಳಲ್ಪಡುತ್ತದೆ.

ಮುಖ್ಯಪ್ರಾಣನಲ್ಲಿ ಶ್ರೀಹರಿಯನ್ನು ಧ್ಯಾನಿಸಬೇಕು. ಆ ಮುಖ್ಯಪ್ರಾಣನು ನಾಸಿಕ್ಯ ಪ್ರಾಣಾದಿಗಳಿಂದ ಉತ್ತಮನು. ॥ ೬ ॥

ಭಾ. ॥ (೧) ನಾಜ್ಞಸ್ಯ ಮುಕ್ತಿರ್ಜ್ಞಸ್ಯ ಭವೇತ್ತು ಸಾ । ಸ್ವಯೋಗ್ಯಂ ತು ಹರಿಜ್ಞಾನಂ ಯತ್ತಸ್ಯೋಪನಿಷತ್ಸ್ಮೃತಂ ॥ (೨) ಅಕ್ಷರಂ ಭಗವಾನ್ವಿಷ್ಣುಸ್ತಸ್ಯೋಪಪ್ರಣವಃ ಸ್ಮೃತಃ । ಉಪವ್ಯಾಖ್ಯಾ ತು ಕದ್ಯಾಖ್ಯೇಕ್ಷೇವಮೂಹ ಶ್ರುತಿಃ ಪರಾ ॥ ಇತಿ ತಾರ್ತೀಯೇ ॥ (೩) ಪರರ್ಧಂ ಪರಮಾದುಚ್ಚಂ ಪರಾರ್ಧಂ ತು ತತೋಽಧಿಕಂ । ತತೋಽಧಿಕಂ ಪರಾರ್ಧಿಃ ಸ್ಯಾತ್ಪರಾರ್ಧ್ಯಮಿತಿ ತತ್ಪರಂ ॥ (೪) ಪರತಃ ಪರಮಾಚ್ಚೈವ ಪರಾರ್ಧೋಽವಾಯುರೀರಿತಃ । ಪರಾರ್ಧಿನೀ ಶ್ರೀರುದ್ದಿಷ್ಟಾ ಪರಾರ್ಧ್ಯೋಽಭಗವಾನ್ ಹರಿಃ ॥ ಇತಿ ಶಬ್ದನಿರ್ಣಯೇ ॥ ೪ ॥ ಇತಿ ಪ್ರಥಮಃ ಖಂಡಃ ॥ ೩–೧ ॥ ॥ ೧ ॥

ಅ ॥ (೧) ಅಜ್ಞಾನಿಗೆ ಮುಕ್ತಿಯಾಗುವುದಿಲ್ಲ. ಜ್ಞಾನಿಗೇನೇ ಮುಕ್ತಿಯಾಗುವುದು. ಜ್ಞಾನಿಯೂ ದನಿಗೆ ತನಗೆ ಯೋಗ್ಯವಾದ ಯಾವ ಜ್ಞಾನವಿದೆಯೋ ಅದು ಉಪನಿಷತ್ ಎನ್ನಿಸುತ್ತದೆ. (೨) ಭಗವಂತನು ಅಕ್ಷರ ಎನ್ನಿಸುತ್ತಾನೆ. ಓಂ ಎಂಬುದು ವಿಷ್ಣುವಿನ ಗುಣಗಳನ್ನು ಹೇಳತಕ್ಕುದು. ಸ್ತವನದ ಅರ್ಥವೇ ವೇದವು. ಹೀಗೆ ವೇದವು ಹೇಳುತ್ತದೆ, ಎಂದು ತಾರ್ತೀಯ ಗ್ರಂಥದಲ್ಲಿ ಇದೆ. (೩) ಗರುಡಾದಿಗಳಿಂದ ವಾಗಭಿಮಾನಿನಿಯಾದ ಸರಸ್ವತಿಯೂ, ಅವಳಿಂದ ಋಗಭಿಮಾನಿನಿಯಾದ ಸರಸ್ವತಿಯೂ, ಅವಳಿಂದ ವಾಯುವೂ, ಅವನಿಗಿಂತ ಲಕ್ಷ್ಮೀದೇವಿಯೂ, ಅವಳಿಗಿಂತ ಶ್ರೀನಾರಾಯಣನೂ ಉತ್ತಮನು. (೪) ಮುಖ್ಯಪ್ರಾಣನು ಪರಾರ್ಧನೆಂದೂ ಲಕ್ಷ್ಮೀದೇವಿಯು ಪರಾರ್ಧಿನೀ ಎಂದೂ, ವಿಷ್ಣುವು ಪರಾರ್ಧ್ಯನೆಂದೂ ಅನ್ನಿಸಿಕೊಳ್ಳುತ್ತಾರೆ, ಎಂದು ಶಬ್ದನಿರ್ಣಯ ಗ್ರಂಥದಲ್ಲಿ ಹೇಳಿದೆ. ॥ ೪ ॥ ॥ ೩–೧ ॥ ॥ ೧ ॥

ಒಂದನೇ ಖಂಡವು ಮುಗಿಯಿತು.

ಎರಡನೇ ಖಂಡವು

ಹೀ -ಆ ಉದ್ಗೀಥನಿಗೆ ವಾಯುದೇವರೇ ಮುಖ್ಯ ಪ್ರತಿಮೆಯಾಗುವುದರಿಂದ ಅವರಲ್ಲಿ ಧ್ಯಾನಿಸಬೇಕೆಂದು ಹೇಳುತ್ತಾರೆ—

ಉ ॥ ದೇವಾಸುರಾ ಹ ವೈ ಯತ್ರ ಸಂಯೇತಿರ ಉಭಯೇ ಪ್ರಾಜಾಪತ್ಯಾಸ್ತದ್ಧ ದೇವಾ ಉದ್ಗೀಥಮಾಜಹ್ರುರನೇನೈನಾನಭಿಭವಿಷ್ಯಾಮ ಇತಿ ॥೧॥

ಅ ॥ ಕಶ್ಯಪಪ್ರಜಾಪತಿಯ ಮಕ್ಕಳಾದ ದೇವತೆಗಳು, ಅಸುರರು ಎಂಬ ಎರಡು ವರ್ಗದವರು ಯುದ್ಧಮಾಡಲಿಕ್ಕೆ ಸನ್ನದ್ಧರಾದರು (ಅಸುರರ ಸಂಖ್ಯೆಯು ಅಧಿಕವಾದುದರಿಂದಲೂ ರುದ್ರದೇವರ ವರಬಲವಿದ್ದುದರಿಂದಲೂ ಅಸುರರಿಂದ ಪರಾಜಯ ಹೊಂದಿದ) ದೇವತೆಗಳು ಉದ್ಗೀಥನೆನ್ನಿಸಿಕೊಂಡ ಶ್ರೀಹರಿಯನ್ನು ಉಪಾಸನೆಮಾಡಿ ಅತನ ಅನುಗ್ರಹಬಲದಿಂದ ಅಸುರರನ್ನು ಗೆಲ್ಲುವೆವು, ಎಂಬ ಬುದ್ಧಿಯಿಂದ ಶ್ರೀಹರಿಯು ತಮಗೆ ಅಭೀಷ್ಟ ಕೊಡುವಂತೆ ಮಾಡಿಕೊಂಡರು. ॥ ೧ ॥

ಪೀ—ದೇವತೆಗಳು ಹೀಗೆ ನಿರ್ಣಯಮಾಡಿ ಉದ್ಗೀಥಾಖ್ಯ ವಿಷ್ಣುವನ್ನು ವಾಯುವಿನಲ್ಲಿ ಉಪಾಸನೆ ಮಾಡಿ ಅಭೀಷ್ಟವನ್ನು ಹೊಂದಿದರು ಎಂದು ಹೇಳುವುದಕ್ಕಾಗಿ ಉಪಾಸನಾ ಸ್ಥಾನಗಳನ್ನು ಹೇಳುತ್ತಾರೆ—

ಉ. ॥ ತೇ ಹ ನಾಸಿಕ್ಯಂ ಪ್ರಾಣಮುದ್ಗೀಥಮುಪಾಸಾಂಚಕ್ರಿರೇ ತಂ ಹಾಸುರಾಃ ಪಾಪ್ಮನಾ ವಿದಧುಸ್ತಸ್ಮಾತ್ತೇನೋಭಯಂ ಜಿಘ್ರತಿ ಸುರಭಿ ಚ ದುರ್ಗಂಧಿ ಚ ಪಾಪ್ಮನಾ ಹ್ಯೇಷ ವಿದ್ಧಃ ॥ ೨ ॥

ಅ ॥ ದೇವತೆಗಳು ಮೂಗಿಗೆ ಅಭಿಮಾನಿಯಾದ ಮುಖ್ಯವಾಯುವಿನ ಮಗನಾದ ಪ್ರಾಣನಲ್ಲಿ ಶ್ರೀಹರಿಯನ್ನು ಉಪಾಸನಾಮಾಡಿದರು. ಉದ್ಗೀಥೋಪಾಸನೆಯಿಂದ ದೇವತೆಗಳು ನಮ್ಮನ್ನು ಗೆಲ್ಲುತ್ತಾರೆಂದು ಅಸುರರು ತಿಳಿದು ಉದ್ಗೀಥೋಪಾಸನೆಗೆ ಪ್ರತಿಮಾಭೂತನಾದ ನಾಸಿಕ್ಯಪ್ರಾಣನಿಗೆ ಪಾಪವನ್ನು ಹೊಂದಿಸಿಕೊಟ್ಟರು. (ಶಕ್ತಿಯಿಲ್ಲದಹಾಗೆ ಮಾಡಿದರು.) ನಾಸಿಕ್ಯಪ್ರಾಣನು ಪಾಪಗ್ರಸ್ತನಾದುದರಿಂದಲೇ ಅವನಿಗೆ ಅಭಿಮತವಾದ ಮೂಗಿನಿಂದ ಜೀವನು ಸುಗಂಧವನ್ನೂ ದುರ್ಗಂಧವನ್ನೂ ಸ್ವೀಕರಿಸುತ್ತಾನೆ. ॥ ೨ ॥

ಉ. ॥ ಅಥ ಹ ವಾಚಮುದ್ಗೀಥಮುಪಾಸಾಂಚಕ್ರಿರೇ ತಾಂ ಹಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ತಥೋಭಯಂ ವದತಿ ಸತ್ಯಂ ಚಾನೃತಂ ಚ ಪಾಪ್ಮನಾ ಹ್ಯೇಷಾ ವಿದ್ಧಾ ॥ ೩ ॥

ಅ ॥ *ನಾಸಿಕ್ಯಪ್ರಾಣನು ಪಾಪಗ್ರಸ್ತನಾದ ಮೇಲೆ, ವಾಗಭಿಮಾನಿಯಾದ ವಹ್ನಿಯಲ್ಲಿ.....॥ ೩ ॥

ಉ. ॥ ಅಥ ಹ ಚಕ್ಷುರುದ್ಗೀಥಮುಪಾಸಾಂಚಕ್ರಿರೇ ತದ್ಧಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ತೇನೋಭಯಂ ಪಶ್ಯತಿ ದರ್ಶನೀಯಂ ಚಾದರ್ಶನೀಯಂ ಚ ಪಾಪ್ಮನಾ ಹ್ಯೇತದ್ವಿದ್ಧಂ ॥ ೪ ॥

ಅ ॥ .....ಕಣ್ಣಿಗೆ ಅಭಿಮಾನಿಯಾದ ಸೂರ್ಯನಲ್ಲಿ.....ನೋಡಲಿಕ್ಕೆ ಯೋಗ್ಯವಾದುದನ್ನೂ ನೋಡಲಿಕ್ಕೆ ಯೋಗ್ಯವಾಗದಿರುವುದನ್ನೂ..... ॥ ೪ ॥

ಉ. ॥ ಅಥ ಹ ಶ್ರೋತ್ರಮುದ್ಗೀಥಮುಪಾಸಾಂಚಕ್ರಿರೇ ತದ್ಧಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ತೇನೋಭಯꣳ ಶೃಣೋತಿ ಶ್ರವಣೀಯಂ ಚಾಶ್ರವಣೀಯಂ ಚ ಪಾಪ್ಮನಾ ಹ್ಯೇತದ್ವಿದ್ಧಂ ॥ ೫ ॥

ಅ ॥ .....ಕಿವಿಗೆ ಅಭಿಮಾನಿಯಾದ ಆಂದ್ರವಲ್ಲಿ..... ॥ ೫ ॥

ಉ. ॥ ಅಥ ಹ ಮನಃ ಉದ್ಗೀಥಮುಪಾಸಾಂಚಕ್ರಿರೇ ತದ್ಧಾಸುರಾಃ ಪಾಪ್ಮನಾ ವಿವಿಧುಸ್ತಸ್ಮಾತ್ತೇನೋಭಯಂ ಸಂಕಲ್ಪಯತೇ ಸಂಕಲ್ಪನೀಯಂ ಚಾಸಂಕಲ್ಪನೀಯಂ ಚ ಪಾಪ್ಮನಾ ಹ್ಯೇತದ್ವಿದ್ಧಂ ॥ ೬ ॥

* ಮಂತ್ರದಿಂದ ಇದು ಮುಂದಕ್ಕೆ ಗಳಲ್ಲಿಯೂ ಹೀಗೆಯೇ ಅರ್ಥಮಾಡಬೇಕು.

ಅ ॥ ..... ಮನಸ್ಸಿಗೆ ಅಭಿಮಾನಿಯಾದ ರುದ್ರ. ಅಹಂಕಾರಕ್ಕೆ ಅಭಿಮಾನಿಯಾದ ಶೇಷ, ಚಿತ್ತಕ್ಕೆ ಅಭಿಮಾನಿಯಾದ ಗರುಡ ಇವರಲ್ಲಿ..... ॥ ೬ ॥

ಉ. ॥ ಅಥ ಹ ಯ ಏವಾಯಂ ಮುಖ್ಯಃ ಪ್ರಾಣಸ್ತಮುದ್ಗೀಥಮುಪಾಸಾಂಚಕ್ರೇ ತಂ ಹಾಸುರಾ ಯುತ್ತಾ ವಿದಧ್ವಂಸುರ್ಯಥಾಽಶ್ಮಾನಮಾಖಣಮೃತ್ವಾ ವಿಧ್ವಂಸೇತೈವಂ ॥ ೭ ॥

ಅ ॥ ಇಂದ್ರಿಯಾಭಿಮಾನಿಗಳಾದ ಎಲ್ಲಾ ದೇವತೆಗಳಲ್ಲಿ ಪಾಪಗ್ರಸ್ತರಾದ ನೋಲೆ (ಅವರು ಮುಖ್ಯ ಪ್ರತಿಮೆಯಿರಲ್ಲಿ. ಎಂದು ಪ್ರಕಟೀಕರಿಸಿ) ಸ್ಥಾನ ಎನ್ನಿಸಿಕೊಂಡ ಮುಖ್ಯಪ್ರಾಣನಲ್ಲಿ ಶ್ರೇಷ್ಠರಿಯನ್ನು ಉಪಾಸನೆ ಮಾಡಿದರು. (ಮಣ್ಣಿನ ಹೆಂಟೆಯು) ಸರ್ವಥಾ ಭೇದಿಸಲಿಕ್ಕೆ ಅಶಕ್ಯವಾದ ಬಂಡೆಕಲ್ಲಿನಿಂದ ಹೇಗೆ ಭೇದಿಸಲ್ಪಡಿಯಾಗುತ್ತದೋ. ಹೀಗೆಯೇ ಅಸುರರು ಮುಖ್ಯಪ್ರಾಣನಿಂದ ದೇಶಭ್ರಷ್ಟರಾಗಿ ಓಡಿ ಹೋದರು. ॥ ೭ ॥

ಟೀ—ಮುಖ್ಯಪ್ರಾಣನನ್ನ ಹೀಗೆ ಉಪಾಸನೆ ಮಾಡಿದವನಿಗೆ ಫಲ ಹೇಳುತ್ತಾರೆ—

ಉ. ॥ ಸ ಯಥಾಽಶ್ಮಾನಮಾಖಣಮೃತ್ವಾ ವಿಧ್ವಂಸತ ಏವಂ ಹೈವ ಸ ವಿಧ್ವಂಸತೇ ಯ ಏವಂವಿದಿ ಪಾಪಂ ಕಾಮಯತೇ ಯಶ್ಚೈನಮಭಿದಾಸತಿ ಸ ಏಷೋಽಶ್ಮಾಖಣಃ ॥ ೮ ॥

ಅ ॥ ಮುಖ್ಯಪ್ರಾಣನಿಂದ ಅಸುರಸಮೂಹವು ದೇಶಭ್ರಷ್ಟವಾಗಿ ಓಡಿಹೋದಂತೆಯೇ, ಪಾಪಗ್ರಸ್ತನಾಗದಿರುವುದರಿಂದ ಮುಖ್ಯಪ್ರಾಣನು ಶ್ರೇಷ್ಠರಿಗೆ ಮುಖ್ಯಪ್ರತಿಮೆಯು ಎಂದು ಉಪಾಸನಾಮಾಡಿದವನಿಗೆ ಕೆಡಕು ಎಣಿಸುವವನೂ ಉಪಾಸಕನನ್ನು ಕೊಚ್ಚಿಒಯಿಸುವವನೂ ನುಚ್ಚುನೂರಾಗಿ ಹೋಗುತ್ತಾನೆ. ಹೀಗೆ ಪ್ರಾಣನ ಮಹಿಮೆಯನ್ನು ತಿಳಿದವನು ಅಖಂಡಾರ್ಥ ಎನ್ನಿಸುತ್ತಾನೆ.

ಟೀ – ಪ್ರಾಣಜ್ಞಾನಿಗೆ ಫಲಾಂತರವನ್ನು ಹೇಳುತ್ತಾರೆ—

ಉ. ॥ ನೈವೈತೇನ ಸುರಭಿ ನ ದುರ್ಗಂಧಿ ವಿಜಾನಾತ್ಯಪಹತಪಾಪ್ಮಾ ಹ್ಯೇಷ ತೇನ ಯದಶ್ನಾತಿ ಯತ್ಪಿಬತಿ ತೇನೇತರಾನ್ ಪ್ರಾಣಾನವತ್ಯೇತಮು ಏವಾಂತತೋ ವಿತ್ತ್ವೋತ್ಕ್ರಮತಿ ವ್ಯಾದದಾತ್ಯೇವಾಂತತ ಇತಿ ॥ ೯ ॥

ಅ ॥ ಪ್ರಾಣನ ಮಹಿಮೆಯ ಜ್ಞಾನದಿಂದ ಸುಗಂಧ ದುರ್ಗಂಧ ಎಂದು ಎರಡು ವಿಧವಾದುದನ್ನು ತಿಳಿಯುವುದೇ ಇಲ್ಲ. ಕೇವಲ ಸುಗಂಧವಿರುವುದನ್ನೇ ಸ್ವೀಕರಿಸುತ್ತಾನೆ. ಆ ಜ್ಞಾನದಿಂದ ಪ್ರಾಣ ಜ್ಞಾನಿಯು ಪಾಪಲೇಶವೂ ಇಲ್ಲದವನಾಗುತ್ತಾನೆ. ಪ್ರಾಣನು ಎಲ್ಲಾ ಪ್ರಾಣಿಗಳ ಶರೀರದಲ್ಲಿದ್ದು ಯಾವುದನ್ನು ಉಣ್ಣುತ್ತಾನೋ ಕುಡಿಯುತ್ತಾನೋ, ಅವರಿಂದ ಇಂದ್ರಿಯಾಭಿಮಾನಿ ದೇವತೆಗಳನ್ನು ರಕ್ಷಿಸುತ್ತಾನೆ. ಆದಕಾರಣ ಇಂದ್ರಿಯಾಭಿಮಾನಿ ದೇವತೆಗಳಿಂದ ನಾಯುವು ಶ್ರೇಷ್ಠನು. ಮುಖ್ಯ ಪ್ರಾಣನೇ ಸರ್ವ ಜೀವೋತ್ತಮನೆಂದು ತಿಳಿದವನು ಮುಕ್ತನಾಗುತ್ತಾನೆ. (ಮುಕ್ತಿಗೆ ಕಾರಣವಾದ ಜ್ಞಾನವನ್ನು ಭಕ್ತರಿಗೆ ಕೊಡುವವನಾದುದರಿಂದಲೂ ಶ್ರೇಷ್ಠನು) ಮುಖ್ಯಪ್ರಾಣನ ಪ್ರಸಾದದಿಂದ ವಿಷ್ಣುವೇ ಸರ್ವೋತ್ತಮನೆಂದು ಅಧಿಕಾರಯು ತಿಳಿಯುತ್ತಾನೆ. ॥ ೯ ॥

ಪೀ—ದೇವತೆಗಳು ಮಾತ್ರ ಉಪಾಸನೆ ಮಾಡಿದರೆಂದಲ್ಲ. ಋಷಿಗಳೂ ಕೂಡ ಉದ್ಗೀಥನನ್ನು ಉಪಾಸನೆ ಮಾಡಿ ತಂತಮ್ಮ ನಾಮಗಳನ್ನು ಹೊಂದಿದರೆನ್ನುತ್ತಾರೆ—

ಉ. ॥ ತೇ ಹಾಂಗಿರಾ ಉದ್ಗೀಥಮುಪಾಸಾಂಚಕ್ರ ಏತಮು ಏವಾಂ-ಗಿರಸೇಂ ಮನ್ಯಂತೇಽಂಗಾನಾಂ ಯದ್ರಸಸ್ತೇನ ॥ ೧೦ ॥

ಅ ॥ ಅಂಗಿರಾ ಎಂಬ ಋಷಿಯು ಮುಖ್ಯಪ್ರಾಣನಲ್ಲಿ ಉದ್ಗೀಥನೆಂಬ ಶ್ರೀಹರಿಯನ್ನು ಪಾಸನೆ ಮಾಡಿದನು. (ಜೇರೆ ಋಷಿಗಳೂ ಆತನನ್ನು ಉಪಾಸನೆಮಾಡಿದರು.) ಮುಖ್ಯಪ್ರಾಣನು ಎಲ್ಲಾ ಪ್ರಾಣಿಗಳ ಶರೀರಗಳಿಗೆ ಪ್ರೇರಕನು. ಅದುದರಿಂದ ಮುಖ್ಯಪ್ರಾಣನಿಗೇನೇ ಮುಖ್ಯವಾಗಿ ಅಂಗಿರಃ ಮೊದಲಾದ ನಾಮಗಳು. (ಆತನ ಅನುಗ್ರಹದಿಂದಲೇ ಋಷಿಗಳು ತಮ್ಮತಮ್ಮ ಅಭೀಷ್ಟಸಿದ್ಧಿಯನ್ನು ಮಾತ್ರ ಹೊಂದಿದ್ದಲ್ಲ. ಮತ್ತೆ ತನ್ಮತಮ್ಮ ನಾಮಗಳನ್ನೂ ಹೊಂದಿದರು.) ॥ ೧೦ ॥

ಪೀ—ಋಷಿಗಳು ಮಾತ್ರವಲ್ಲ. ದೇವತೆಗಳೂ ಕೂಡ ಉಪಾಸನೆಮಾಡಿಯೇ ತಮ್ಮತಮ್ಮ ನಾಮಗಳನ್ನು ಹೊಂದಿದರೆನ್ನುತ್ತಾರೆ—

ಉ. ॥ ತೇ ಹ ಬೃಹಸ್ಪತಿರುದ್ಗೀಥಮುಪಾಸಾಂಚಕ್ರ ಏತಮು ಏವ ಬೃಹಸ್ಪತಿಂ ಮನ್ಯಂತೇ ವಾಗ್ಘಿ ಬೃಹತೀ ತಸ್ಯಾ ಏಷ ಪತಿಸ್ತೇನ ॥ ೧೧ ॥

ಅ ॥ ಬೃಹಸ್ಪತಿಯೂ (ಜೇರೆ ದೇವತೆಗಳೂ) ಮುಖ್ಯಪ್ರಾಣನಲ್ಲಿ ಶ್ರೀಹರಿಯನ್ನು ಪಾಸನೆಮಾಡಿ ಆತನ ಅನುಗ್ರಹದಿಂದಲೇ ಬೃಹಸ್ಪತ್ಯಾದಿ ನಾಮಗಳನ್ನು ಹೊಂದಿರುವರು. ವಾಗಭಿಮಾನಿನಿಯಾದ ಸರಸ್ವತಿಯು ಸ್ತ್ರೀಯರ ಗುಣಗಳಿಂದ ಪೂರ್ಣಳಾದ ಪ್ರಯುಕ್ತ ಬೃಹತೀ ಎನ್ನಿಸುತ್ತಾಳೆ. ಅವಳಿಗೆ ಪತಿಯಾದುದರಿಂದ ವಾಯುದೇವರಿಗೇನೇ ಮುಖ್ಯವಾಗಿ ಬೃಹಸ್ಪತಿಯೆಂದು ಹೆಸರು. (ಜೇರೆ ದೇವತೆಗಳಿಗೆ ಆತನ ಅನುಗ್ರಹದಿಂದಲೇ ಆಯಾಯ ನಾಮಗಳು.) ॥ ೧೧ ॥

ಉ. ॥ ತೇ ಹಾಯಾಸ್ಯ ಉದ್ಗೀಥಮುಪಾಸಾಂಚಕ್ರ ಏತಮು ಏವಾಯಸ್ಯಂ ಮನ್ಯಂತ ಆಸ್ಯಾದ್ಧ್ಯದಯತೇ ತೇನ ॥ ೧೨ ॥

ಅ ॥ ಆಯಾಸ್ಯ ಋಷಿಯೂ.....ವಾಯುದೇವರು ಮುಖದಲ್ಲಿ ಪ್ರವೇಶಿಸಿ ಪ್ರೇರಿಸುತ್ತಾರೆ. ಅಥವಾ ಉಸಿರಾಡುವ ಮೂಲಕ ಮುಖದಿಂದ ಹೊರಹೊಮ್ಮುತ್ತಾರೆ. ಆದಕಾರಣ ವಾಯುವಿಗೆ ಆಯಾಸ್ಯನೆಂದು ಹೆಸರು. ॥ ೧೨ ॥

ಉ. ॥ ತಂ ಹ ಬಕೋ ದಾಲ್ಭ್ಯೋ ವಿದಾಂಚಕಾರ ಸ ಹ ನೈಮಿತೀ-ಯಾನಾಮುದ್ಗಾತಾ ಬಭೂವ ಸ ಹ ಸ್ಮೈಭ್ಯಃ ಕಾಮಾನಾಗಾಯತಿ ॥ ೧೩ ॥

ಅ ॥ ದಲ್ಭರಮಗನಾದ ಬಕನೆಂಬ ಋಷಿಯು ಮುಖ್ಯಪ್ರಾಣನನ್ನು ತಿಳಿದನು. ಆದಕಾರಣ ಬಕನು ನೈಮಿಷ ದೇಶದಲ್ಲಿರುವ ಋಷಿಗಳ ಯಾಗದಲ್ಲಿ ಉದ್ಗಾತನೆಂಬ ಗಾನವಾಡುವ ಋತ್ವಿಜನು ಆದನು. ಆ ಬಕನು ಮುಖ್ಯಪ್ರಾಣನನ್ನು ತಿಳಿದು ಋಷಿಗಳ ಅಭೀಷ್ಟಕ್ಕಾಗಿ ಗಾನಮಾಡಿದುದರಿಂದ ಅವರು ತಂತಮಗೆ ಯೋಗ್ಯಗಳಾದ ಇಷ್ಟಗಳನ್ನು ಹೊಂದಿರುವರು

ವಿ ॥ ಯಾಗಕ್ಕೆ ಒರತಕ್ಕ ವಿಘ್ನಗಳನ್ನು ಪರಿಹರಿಸಲಿಕ್ಕೂ ಯಜಮಾನನಿಗೆ ಇಷ್ಟವನ್ನು ಕೊಡಲಿಕ್ಕೂ ವಾಯುದೇವರಿಗೇನೇ ಶಕ್ತಿಯಿರುವುದರಿಂದ ವಾಯುದೇವರನ್ನೇ ಯಾಗದಲ್ಲಿ ಉದ್ಗಾತರನ್ನಾಗಿ ಮಾಡಬೇಕು. ಅವರು ಸಿಗದಿದ್ದರೆ ವಾಯುವಿನ ಜ್ಞಾನವುಳ್ಳವನನ್ನು ಉದ್ಗಾತನನ್ನಾಗಿ ಮಾಡಬೇಕು. ॥ ೧೩ ॥

ಉ. ॥ ಅಗಾತಾ ಹ ವೈ ಕಾಮಾನಾಂ ಭವತಿ ಯ ಏತದೇವಂ ವಿದ್ವಾನಕ್ಷರಮುದ್ಗೀಥಮುಪಾಸ್ತ ಇತ್ಯಧ್ಯಾತ್ಮಂ ॥ ಇತಿ ದ್ವಿತೀಯಃ ಖಂಡಃ ॥೩-೨॥

ಅ ॥ ಹಿಂದೆ ಹೇಳಿದ ಪ್ರಕಾರ ಪ್ರಾಣನ ಮಹಿಮೆಯನ್ನೂ ಪ್ರಾಣನಿಗಿಂತಲೂ ಶ್ರೀಹರಿಗೆ ಹೆಚ್ಚು ಮಹಿಮೆಯುಂಟೆ ಎಂದೂ ತಿಳಿದು ಉದ್ಗೀಥನನ್ನು ಪಾಸನೆ ಮಾಡಿದವನೂ ಗಾನದಿಂದ ಎಲ್ಲಾ ಇಷ್ಟಗಳನ್ನು ಕೊಂದುತ್ತಾನೆ. ಹೀಗೆ ದೇಹದಲ್ಲಿ ಪ್ರಾಣಾದಿಗಳಲ್ಲಿರತಕ್ಕ ಉದ್ಗೀಥೋಪಾಸನೆಯ ಮಹಿಮೆಯನ್ನು ಹೇಳಿರುವರು. ॥ ೧೪ ॥

ಭಾ. ॥ (೧) ಉದ್ಗೀಥಾಖ್ಯಸ್ಯ ವಿಷ್ಣೋರ್ವಿಶಿಷ್ಟ ಪ್ರತಿಮೂ ನಾಯುರೇವ । ಅತಸ್ತಸ್ಯ ಸರ್ವೋತ್ತಮತ್ವಜ್ಞಾನಪೂರ್ವಕಂ ತಸ್ಮಿಂಸ್ತತೋಽಪ್ಯುಕ್ತಮಕ್ಷೀಣೋಪಾಸಿತ ಏವ ಭಗವಾನ್ ಸಮ್ಯಕ್ ಫಲಂ ದದಾತೀತಿ ದರ್ಶಯತಿ ॥ (೨) ವಾಯೌ ಮುಖ್ಯಧಿಯೇತಿ ಚೇತಿ ಭಗವದ್ವಚನಂ ॥ (೩) ಯಸ್ಮಾದ್ವಾಯೌ ಸ್ಪೃತೋ ವಿಷ್ಣುರ್ವಾಯೋರ್ಮುಖ್ಯತಯಾಽಽಲಾತ್ । ಸ್ವಸ್ಯ ಮುಖ್ಯತಯಾ ತಸ್ಮಾತ್ಪರಾಂ ತುಷ್ಟಿಂ ಗಮಿಷ್ಯತಿ ॥ (೪) ಅತೋ ವಿಚಾರ್ಯ ಸಕಲೈರ್ದೇವೈಃ ಪ್ರಾಕೇ ಜನಾರ್ದನಃ । ಉಪಾಸಿತೋ ದೈತ್ಯಜಯಕಾರಣಾತ್ ಪಾಪವರ್ಜಕೇ ॥ ೧ ॥

ಅ ॥ (೧) ಉದ್ಗೀಥ ಎನ್ನಿಸಿಕೊಂಡ ವಿಷ್ಣುವಿಗೆ ಮುಖ್ಯಪ್ರಾಣನೇ (ಅಧಿಕಾರಿಗಳ ವರ್ಗದಲ್ಲಿ) ಮುಖ್ಯ ಪ್ರತಿಮೆಯು. ಆದಕಾರಣ ವಾಯುದೇವರು ಸರ್ವಜೀವೋತ್ತಮರು, ಎಂದು ತಿಳಿದು ಅವರಿಂದಲೂ ವಿಷ್ಣುವು ಅತ್ಯುತ್ತಮನು ಎಂದು ಉಪಾಸನೆಮಾಡಿದರೇನೇ ವಿಷ್ಣುವು ಪೂರ್ಣವಾದ ಫಲವನ್ನು ಕೊಡುತ್ತಾನೆಂದು (ವೇದಪುರುಷನು ದೇವತಾಸುರಾ ಎಂಬ ಖಂಡದಿಂದ) ತೋರಿಸುತ್ತಾನೆ. (೨) (ವಿಷ್ಣುವಿಗೆ ಮುಖ್ಯಪ್ರಾಣನೇ ಮುಖ್ಯ ಪ್ರತಿಮೆಯು ಎಂಬುದಲ್ಲಿ ಪ್ರಮಾಣ ಹೇಳುತ್ತಾರೆ-) ವಾಯುವು *ಸರ್ವಜೀವೋತ್ತಮನು ಎಂದು ತಿಳಿದುಕೊಂಡು ನನ್ನನ್ನು ಪೂಜಿಸಬೇಕು, ಎಂದು ಭಗವದ್ವಚನವೂ ಕೂಡ ಹಿಂದೆ ಹೇಳಿದ ಅರ್ಥವನ್ನು ತೋರಿಸುತ್ತದೆ. (೩) ಈ ಅರ್ಥವನ್ನು ಪ್ರಮಾಣದಿಂದ ದೃಢೀಕರಿಸುತ್ತಾರೆ—) ಇಡೀ ಜಗತ್ತಿನಿಂದ ವಾಯುವು ಶ್ರೇಷ್ಠನು, ವಾಯುವಿನಿಂದಲೂ ಶ್ರೀಹರಿಯು ಮುಖ್ಯನು ಆದಕಾರಣ ವಾಯುವಿನಲ್ಲಿ ವಿಷ್ಣುವು ಇದ್ದಾನೆಂದು ತಿಳಿದರೇನೇ ವಿಷ್ಣುವು ಪರಮಸಂತೋಷವನ್ನು ಹೊಂದುವನು. (೪) ಆದಕಾರಣ ದೇವತೆಗಳು ತಿಳಿದವರೇ ಆದರೂ ವಿಚಾರಮಾಡಿ (ವಾಯುವು ಸರ್ವಜೀವೋತ್ತಮನೆಂದು ನಿರ್ಣಯಿಸಿಕೊಂಡುವುದಕ್ಕಾಗಿ) ದೈತ್ಯರನ್ನು ಗೆದ್ದ ಪ್ರಯುಕ್ತ ಪಾಪವಿಲ್ಲದಿರುವ ಪ್ರಾಣನಲ್ಲಿ ಶ್ರೀಹರಿಯನ್ನು ಉಪಾಸನೆ ಮಾಡಿದರು. ॥ ೧ ॥

* (೧) ವಾಯುವು ವಿಷ್ಣುವಿಗೆ ಮುಖ್ಯ ಪ್ರತಿಮೆ ಯಾಗುವುದರಿಂದ ವಾಯುವು ಸರ್ವ ಜೀವೋತ್ತಮನೆಂಬ ಜ್ಞಾನವು ವಿಷ್ಣುವಿನ ಪೂಜೆಯಾಗುವುದು (೨) ಸರ್ವದೇವೋತ್ತಮೋ ವಾಯುರಿತಿ ಜ್ಞಾನಪೂರ್ವಕಂ [illegible] ಹರೇಃ ತೋಷಕೃದಿತಿ ವಾಯೋ ಹರೇರ್ಮಿತ್ರಮಿತಿ ಎಂದು ಇದೆ

೫೬–೫೯ ಹಾಸುರಾ ಪಾಪ್ಮನಾ ವಿವಿಧುಃ ಎಂಬ ೨೯ ಮಂತ್ರ ಮೊದಲುಗೊಂಡು ೫೫ ಮಂತ್ರಗಳಿಗೆ ಅರ್ಥ ಹೇಳುತ್ತಾರೆ–

ಭಾ. ॥ (೧) ನಾಯುಪುತ್ರಂ ಚ ನಾಸಿಕ್ಯಮಗ್ನಿಂ ವಾಗಾತ್ಮಕಂ ತಥಾ । ಸೋಮಂ ಶ್ರೋತ್ರಾತ್ಮಕಂ ಚೈವ ಸೂರ್ಯಂ ಚಕ್ಷುಃಸ್ವರೂಪಿಣಂ ॥ ರುದ್ರಂ ಮನಃಸ್ವರೂಪಂ ಚ ಶೇಷಂ ಚಾಹಂಸ್ವರೂಪಿಣಂ । ಚಿತ್ತಾತ್ಮಕಂ ಚ ಗರುಡಂ ಪಾಪೇನ ವಿವಿಧುಃ ಸುರಾನ್ ॥ (೨) ಅಸುರಾಸ್ತೈರ್ಯತೋ ವಿದ್ಧಾಸ್ತಸ್ಮಾತ್ತೇ ದೋಷಯೋಗಿನಃ ॥ (೩) ಮುಖ್ಯನಾಯೌ ಯದಾ ದೇವಾಃ ಶರೀರಸ್ಥೇ ಚ ಸೂರ್ಯಗೇ । ವಿಷ್ಣು ಮುದ್ಗೀಥನಾಮಾನಂ ತದಾ ತಂ ಚ ವಿದಧ್ವಸುಃ । ಯದಾ ವಿದಧ್ವಸುಃ ಪ್ರಾಣಂ ವಿಧ್ವಸ್ತಾಸ್ತೇ ತದಾಸುರಾಃ ॥ (೪) ಅಖಿಷ್ಯಾತ್ಮಾನಮೇವಾಪ್ಯ ಲೋಷ್ಟೋ ವಿಧ್ವಂಸತೇ ಯಥಾ । ಪ್ರತಿಮಾಂ ಶ್ರೇಯಸೀಂ ಪ್ರಾಪ್ಯ ವಿಷ್ಣೋಃ ಪ್ರಾಣಂ ತಥಾಸುರಾಃ ॥ ೨ ॥

ಅ ॥ (೧) ದೇವತೆಗಳು ನಾಸಿಕ್ಯ ಪ್ರಾಣಾದಿಗಳಲ್ಲಿ ಉದ್ಗೀಥನೆನಿಸಿಕೊಂಡ ವಿಷ್ಣುವನ್ನು ಪಾಸನೆ ಮಾಡಿದಾಗ) ಅಸುರರು ನಾಸಿಕಾಭಿಮಾನಿಯಾದ ವಾಯುಪುತ್ರನಾದ ಪ್ರಾಣ, ವಚನಕ್ಕೆ ಅಧಿಪತಿಯಾದ ಅಗ್ನಿ, ಕಿವಿಗೆ ಅಧಿಪತಿಯಾದ ಚಂದ್ರ, ಕಣ್ಣಿಗೆ ಅಧಿಪತಿಯಾದ ಸೂರ್ಯ, ಮನಸ್ಸಿಗೆ ಅಧಿಪತಿಯಾದ ರುದ್ರ, ಅಹಂಕಾರಕ್ಕೆ ಅಧಿಪತಿಯಾದ ಶೇಷ, ಚಿತ್ತಕ್ಕೆ ಅಧಿಪತಿಯಾದ ಗರುಡ ಹೀಗೆ ಎಲ್ಲಾ ದೇವತೆಗಳನ್ನು ಪಾಪದಿಂದ ಕೂಡಿದವರನ್ನಾಗಿ ಮಾಡಿದರು. (೨) (ತಸ್ಮಾತ್ತೇ ನೋಭಯಂ ಜಿಘ್ರತಿ ಇದು ಮೊದಲಾದ ೫ ವಾಕ್ಯಗಳಿಗೆ ಅರ್ಥ ಹೇಳುತ್ತಾರೆ–) ಈ ದೇವತೆಗಳು ಪಾಪಸಂಬದ್ಧರಾದ ಪ್ರಯುಕ್ತ ದೋಷವುಳ್ಳವರು. (೩) ದೇವತೆಗಳು ಶರೀರ ಮತ್ತು ಸೂರ್ಯ ಇವರಲ್ಲಿರತಕ್ಕ ಮುಖ್ಯವಾಯುವಿನಲ್ಲಿ ಉದ್ಗೀಥಾಖ್ಯ ವಿಷ್ಣುವನ್ನು ಉಪಾಸನೆಮಾಡಿದಾಗ ಅಸುರರು ಆ ಮುಖ್ಯಪ್ರಾಣನನ್ನು ಕೆಡಿಸಲು ಪ್ರಯತ್ನಿಸಿದರು. ಆಗ ಆ ಮುಖ್ಯಪ್ರಾಣನಿಂದಲೇ ಅಸುರರು ನುಚ್ಚುನೂರಾದರು. (೪) ಹೇಗೆ ಮಣ್ಣಿನ ಹೆಂಟೆಯು ಬೊಕ್ಕ ಬಂಡೆಕಲ್ಲಿಗೆ ತಗಲಿ ಪುಡಿಪುಡಿಯಾಗುತ್ತದೋ, ಹಾಗೆಯೇ ಅಸುರರು ವಿಷ್ಣುವಿಗೆ ಮುಖ್ಯಪ್ರಿಯನೂ ಪ್ರತಿಮಾಸ್ವರೂಪನೂ ಆದ ಮುಖ್ಯಪ್ರಾಣನಿಂದ ಬಳಲಿ ಒಡಿಹೋದರು. ೨ ॥

ಭಾ. ॥ (೧) ತಸ್ಮಾದಾದಿತ್ಯಸಂಸ್ಥೇ ವಾ ಶರೀರಸ್ಥೇಽಪಿ ಚಾ(ವಾ)ನಿಲೇ । ಬಲಜ್ಞಾನಾತ್ಮಕೇ ದಿವ್ಯಾಕೃತಿಮತ್ಕುಜ್ಜ್ವಲಾತ್ಮನಿ । ಸರ್ವದೇವೋತ್ತಮಂ ವಿಷ್ಣುಮುಪಾಸೀತ ಕತೋಽಧಿಕಂ ॥ (೨) ಅಸ್ಯೋಪಾಸನಯಾ ದೇವಾಸ್ಸರ್ವೇ ಧಾಮಾನಿ ಭೇಜಿರೇ । ಇಂದ್ರೋ ಬೃಹಸ್ಪತಿಃ ಶಂಭುರಿತ್ಯಾದ್ಯಾಃ ಪ್ರಾಣಗಾ ಯತಃ । ಪ್ರಾಣಸ್ಯ ನಾಮಶಬ್ದಾಶ್ಚ ಮುಖ್ಯತೋ ವಿಷ್ಣುಸಂಶ್ರಿತಾಃ ॥ ಇತಿ ಪ್ರಥಾನೇ ॥ ೩ ॥

ಅ ॥ (೧) ದೇವತೆಗಳು ಹೀಗೆ ಉಪಾಸನೆಮಾಡಿದುದರಿಂದ ಅನ್ಯರೂ ಕೂಡ ಆದಿತ್ಯನಲ್ಲಿಯೂ ಶರೀರದಲ್ಲಿಯೂ ಇರುವ, ಬಲಜ್ಞಾನಸ್ವರೂಪನಾದ, ದಿವ್ಯಾಕಾರವುಳ್ಳ, ವಾಯುವಿನಲ್ಲಿ ಎಲ್ಲಾ ದೇವತೆಗಳಿಂದಲೂ ಉತ್ತಮನಾದ ವಿಷ್ಣುವನ್ನು ಸರ್ವಶ್ರೇಷ್ಠನೆನ್ನಾಗಿ ಉಪಾಸನೆಮಾಡಬೇಕು. (೨) ಈ ಶ್ರೇಷ್ಠರಿಯ ಉಪಾಸನೆಯಿಂದಲೇ ದೇವತೆಗಳೂ ಋಷಿಗಳೂ ಶಂಭುಮ್ಮನಾಮಗಳನ್ನು ಹೊಂದಿದರು. ಇಂದ್ರ, ಬೃಹಸ್ಪತಿ, ಶಂಭು ಮೊದಲಾದ ದೇವತಾವಾಚಕ ಶಬ್ದಗಳೂ ಅಂಗಿರ ವಸಿಷ್ಠ ಮೊದಲಾದ

ಉಸಿವಾಚಕ ಶಬ್ದಗಳೂ ಕೂಡ ಪ್ರಾಣನಿಗೆ ವಾಚಕಗಳು. ಮುಖ್ಯಪ್ರಾಣನನ್ನು ಹೇಳುವ ಎಲ್ಲಾ ಶಬ್ದಗಳೂ ಮುಖ್ಯವಾಗಿ ವಿಷ್ಣುವನ್ನೇ ಹೇಳಶಕ್ಯವುಗಳು, ಎಂದು ಪ್ರಧಾನನೆಂಬ ಗ್ರಂಥದಲ್ಲಿದೆ. ॥ ೩ ॥

ಭಾ. ॥ (೧) ಉದ್ಗೀಥಾಖ್ಯಂ ಪರಂ ವಿಷ್ಣುಮುಪಾಸ್ಯಾಖಿಲಜಹ್ಯುರಂಜಸಾ । ತಥಾಪಿ ಪ್ರಾಣ ಏವಾಸೌ ಪ್ರೀತಿಮಾಗಾದುಪಾಸಿತಃ ॥ ಇತಿ ಚ ॥ (೨) ಪ್ರಾಣಂ ಪ್ರಾಪ್ಯೈವ ವಿಧ್ವಸ್ತಾ ಯಥಾ ಸರ್ವೇಽಸುರಾಸ್ತಥಾ । ತದುಪಾಸಕಸ್ಯ ಯಶ್ಚಾಪಿ ಪ್ರತೀಪಂ ದಾತುಮಿಚ್ಛತಿ ॥ ಇತಿ ಚ ॥ (೩) ಏತಂ ವಿದಿತ್ವಾ ಸಂಸಾರಾನ್ಮುಕ್ತಿಮೇಷ್ಯತ್ಯಸಂಶಯಂ । ವಿಷ್ಣುಮಪ್ಯಂತತೋ ವೇತ್ತಿ ಪ್ರಾಣವೇತ್ತಾ ಯತಃ ಸ್ಫುಟಂ ॥ ೪ ॥

ಅ ॥ (೧) ಯದ್ಯಪಿ ದೇವತೆಗಳು ಉದ್ಗೀಥನೆನಿಸಿಕೊಂಡ ಸರ್ವೋತ್ತಮನಾದ ವಿಷ್ಣುವನ್ನು ಶಾಸನೆ ಮಾಡಿಯೇ ಬೆನ್ನಾಗಿ ಅಭೀಷ್ಟಕೊಡುವಂತೆ ನಡಿಕೊಂಡರು. (ಬಲಾತ್ಕಾರದಿಂದ ಅಲ್ಲ.) ಆದರೂ ಪ್ರಾಣನಲ್ಲಿಯೇ ಉಪಾಸನೆ ಮಾಡಿದರೆ ಶ್ರೀಹರಿಯು ಸಂತೋಷವನ್ನು ಕೊಂದುವನು. (೨) ಹೇಗೆ ಎಲ್ಲಾ ಅಸುರರು ಮುಖ್ಯಪ್ರಾಣನನ್ನು ಹೊಂದಿಯೇ ಸೋತು ಓಡಿಹೋದರೋ, ಹಾಗೆಯೇ ಪ್ರಾಣೋಪಾಸಕನಿಗೆ ವಿರೋಧವನ್ನು ಮಾಡಬಯಸಿದವನೂ ನಾಶಹೊಂದುತ್ತಾನೆ. (೩) ಈ ಮುಖ್ಯಪ್ರಾಣನನ್ನು ತಿಳಿದವನು ಸಂಸಾರದಿಂದ ಬಿಡುಗಡೆ ಹೊಂದಿ ನಿಶ್ಚಯವಾಗಿಯೂ ಮೋಕ್ಷವನ್ನು ಹೊಂದುತ್ತಾನೆ ಹೇಗೆಂದರೆ ಪ್ರಾಣನನ್ನು ತಿಳಿದು ಅತನ ಅನುಗ್ರಹದಿಂದ ಕೊನೆಗೆ ವಿಷ್ಣುವನ್ನೂ ತಿಳಿಯುತ್ತಾನೆ ॥ ೪ ॥

ಭಾ. ॥ (೧) ವೀತಿ ವಿಷ್ಣುಃ ಸಮುದ್ದಿಷ್ಟೋ ವಿಶಿಷ್ಟತ್ವಾತ್ತು ಸರ್ವತಃ । ಅದದಾತ್ಯೇವ ತಂ ಪ್ರಾಣವೇತ್ತಾಽಂತೇ ತತ್ಪ್ರಸಾದತಃ ॥ (೨) ಪ್ರಾಣಾತ್ಪರಂ ತು ಯೇ ವಿಷ್ಣುಂ ಜೀವಾಂಶ್ಚೈವಾವರಾಂಸ್ತತಃ । ಯೇ ವಿದುಸ್ತೇ ವಿದುಃ ಪ್ರಾಣಂ ನಾನ್ಯಥಾ ತು ಕಥಂಚನ ॥ ಇತಿ ಚ ॥ (೩) ಪ್ರಾಣ ಉದ್ಗೀಥ ಇತ್ಯಾದ್ಯಾಃ ನಾಮಬ್ರುಹ್ಮಾದಿಕಾಸ್ತಥಾ । ಸಪ್ತಮ್ಯರ್ಥಾಃ ಸಮುದ್ದಿಷ್ಟಾಃ ಸಪ್ತಸು ಪ್ರಥಮಾ ಯತಃ । ಪ್ರಾಣಮುದ್ಗೀಥಮಿತ್ಯಾದ್ಯಾ ದ್ವಿತೀಯಾ ಸಪ್ತಮೀ ಮತಾ ॥ ಇತಿ ಚ ॥ ೧....೧೪ ॥ ಇತಿ ದ್ವಿತೀಯಃ ಖಂಡಃ ॥ ೩–೪ ॥ ॥ ೫ ॥

ಅ ॥ (೨) ವಿಷ್ಣುವೆ ಸರ್ವೋತ್ತಮನಾಮದರಿಂದ ವಿ ಎನ್ನಿಸುತ್ತಾನೆ. (೩) ಪ್ರಾಣಜ್ಞಾನಿಯು ಅತನ ಅನುಗ್ರಹದಿಂದ ಪ್ರಾಣನನ್ನು ತಿಳಿದಮೇಲೆ ವಿಷ್ಣುವನ್ನು ತಿಳಿಯುತ್ತಾನೆ. ಯಾರು ಪ್ರಾಣನಿಂದ ವಿಷ್ಣುವು ಉತ್ತಮನೆಂದೂ ಜೀವರು ಅಧಮರೆಂದೂ, ಅಂದರೆ ಪ್ರಾಣನು ವಿಷ್ಣುವಿನಿಂದ ಅಧಮನೆಂದೂ ಜೀವರಿಂದುತ್ತಮನೆಂದೂ ತಿಳಿದವರೇ ಪ್ರಾಣನನ್ನು ತಿಳಿಯುತ್ತಾರೆ ಇದು ಸರ್ವದಾ ವ್ಯಕ್ತಾಸವಾಗಲಾರದು. (೪) ಪ್ರಾಣ ಉದ್ಗೀಥಃ ಇದುಮೊದಲಾದ ವಾಕ್ಯಗಳಲ್ಲಿರತಕ್ಕ ಪ್ರಾಣಃ ಇದುಮೊದಲಾದ ಪ್ರಥಮಾವಿಭಕ್ತಿಗಳೂ, ನಾಮಬ್ರುಹ್ಮೇತ್ಯುವಾಚೇತ ಇದುಮೊದಲಾದ ವಾಕ್ಯಗಳಲ್ಲಿರತಕ್ಕ ನಾಮ ಇತ್ಯಾದಿ ಪ್ರಥಮಾವಿಭಕ್ತಿಗಳೂ ಸಪ್ತಮೀವಿಭಕ್ತಿಯ ಅರ್ಥವುಳ್ಳವುಗಳು. ಪ್ರಥಮಾವಿಭಕ್ತಿಗೆ ಏಳು ವಿಭಕ್ತಿಯ ಅರ್ಥವೂ ಇದೆ. ಪ್ರಾಣಮುದ್ಗೀಥಂ ಇದುಮೊದಲಾದ ವಾಕ್ಯಗಳಲ್ಲಿರತಕ್ಕ ಪ್ರಾಣಂ ಮೊದಲಾದ ದ್ವಿತೀಯಾ ವಿಭಕ್ತಿಯು ಸಪ್ತಮೀ ವಿಭಕ್ತಿಯ ಅರ್ಥವುಳ್ಳದೆ. ॥ ೫ ॥

ಎರಡನೇ ಖಂಡವು ಮುಗಿಯಿತು

೩ನೇ ಖಂಡವು

ಉ. ॥ ಅಥಾಧಿದೈವತಂ ಯ ಏವಾಸೌ ತಪತಿ ತಮುದ್ಗೀಥಮುಪಾಸೀತೋದ್ಯನ್ವಾ ಏಷ ಪ್ರಜಾಭ್ಯ ಉದ್ಗಾಯತ್ಯುದ್ಯಂಸ್ತಮೋ ಭಯಮಪಹಂಸ್ಯಪಹಂತಾ ಹ ವೈ ಉಭಯಸ್ಯ ಕಮಸೋ ಭವತಿ ಯ ಏವಂ ವೇದ ॥ ೧ ॥

ಅ ॥ ಅಧಾತ್ಮ (ದೇಹ) ದಲ್ಲಿದ್ದ ಮುಖ್ಯಪ್ರಾಣನಲ್ಲಿ ಉದ್ಗೀಥೋಪಾಸನೆಯನ್ನು ಹೇಳಿದ ಮೇಲೆ ಅಧಿದೈವತ (ಅದಿತ್ಯ) ದಲ್ಲಿದ್ದ ಮುಖ್ಯವಾಯುವಿನಲ್ಲಿ ಉದ್ಗೀಥನ ಉಪಾಸನೆಯು ಹೇಳಲ್ಪಡುತ್ತದೆ ಸೂರ್ಯಮಂಡಲದಲ್ಲಿದ್ದ ಮುಖ್ಯಪ್ರಾಣನು ಪ್ರಕಾಶಿಸುತ್ತಾನೆ. ಅವನಲ್ಲಿ ಶ್ರೀಹರಿಯನ್ನು ಪಾಸನೆಮಾಡಬೇಕು. ಆದಿತ್ಯನಲ್ಲಿದ್ದ ಮುಖ್ಯಪ್ರಾಣನಿಗೆ ಸ್ವತಃ ಉದಯ ಅಸ್ತಮಾನಗಳಿಲ್ಲದಿದ್ದರೂ ಅತನು ಪ್ರಜೆಗಳ ಗೋಸ್ಕರವೇ ಉದಯಿಸುತ್ತಾ ಶ್ರೀಹರಿಯನ್ನು ಗಾನಮಾಡುತ್ತಾನೆ. ಉದಯಿಸುವವನಾಗಿಯೇ ಒಳಗೂ ಹೊರಗೂ ಇರುವತಮಸ್ಸುಗಳನ್ನೂ ಅಥವಾ ಅಂಧಕಾರವನ್ನು ಅದರಿಂದುಂಟಾಗತಕ್ಕ ಪ್ರಾಣಿಗಳ ಭಯವನ್ನೂ ಮುಖ್ಯಪ್ರಾಣನು ಪರಿಹರಿಸುತ್ತಾನೆ. ಹೀಗೆ ಪ್ರಾಣಜ್ಞಾನಿಗೆ ಹೊರಗಿನ ಮತ್ತು ಒಳಗಿನ ಅಜ್ಞಾನವು ನಾಶವಾಗುತ್ತದೆ. ಅಥವಾ ಅಜ್ಞಾನ, ಅಜ್ಞಾನಕೃತ ಭಯಗಳು ನಾಶವಾಗುವುವು. ॥ ೧ ॥

ಭಾ. ॥ (೧) ಆದಿತ್ಯಸಂಸ್ಥಿತೋ ನಿತ್ಯಂ ಪ್ರಾಣಸ್ತಪತಿ ನಾಪರಃ । ಪ್ರಕಾಶನಂ ಚ ತಪನಂ ಕಾಷ್ಠವತ್ಸೂರ್ಯಗಂ ಭವೇತ್ ॥ (೨) ಸೂರ್ಯಮಂಡಲಗೋ ವಾಯುರುದಯಾಸ್ತಮಯೋಜ್ಝಿತಃ । ಅಪಿ ಪ್ರಜಾಭ್ಯ ಉದ್ಯಂಶ್ಚಿನ್ವೋದ್ಗಾಯತಿ ಜನಾರ್ದನಂ ॥೧॥೧॥

ಅ ॥ (೧) ಸೂರ್ಯಮಂಡಲದಲ್ಲಿದ್ದ ಪ್ರಾಣನೇ ನಿತ್ಯದಲ್ಲಿಯೂ ಪ್ರಕಾಶಿಸುತ್ತಾನೆ. ಕೇವಲ ಆದಿತ್ಯನಲ್ಲಿ. ವಸ್ತುತಃ ಕಟ್ಟಿಗೆಯು ಸುಡುವುದಲ್ಲ. ಅಗ್ನಿಯ ಸಂಬಂಧದಿಂದಲೇ ಸುಡುವುದು. ಹಾಗೆಯೇ ಸೂರ್ಯನಲ್ಲಿ ಮುಖ್ಯಪ್ರಾಣನು ಅಂತರ್ಗತನಾಗಿರುವುದರಿಂದ ಪ್ರಕಾಶವೂ ಸುಡುವಿಕೆಯೂ ಇರುವುದು. (೨) ಸೂರ್ಯಮಂಡಲದಲ್ಲಿದ್ದ ವಾಯುವಿಗೆ ಉದಯ ಅಸ್ತಮಾನಗಳಿಲ್ಲದಿದ್ದರೂ ಅತನು ಪ್ರಜೆಗಳಿಗೋಸ್ಕರವೇ ಉದಯಾಸ್ತಮಾನಗಳನ್ನು ಮಾಡುತ್ತಿರುತ್ತಾನೆ. ॥ ೧ ॥ ॥ ೧ ॥

ಉ. ॥ ಸಮಾನ ಉ ಏವಾಯಂ ಚಾಸೌ ಚೋಷ್ಣ್ಹೋಯಮುಷ್ಣ್ಹೋಸೌ ಸ್ವರ ಇತೀಮಮೂಚಿಕ್ಷತೇ ಸ್ವರ ಇತಿ ಪ್ರತ್ಯಾಸ್ವರ ಇತ್ಯಮುಂ ತಸ್ಮಾದ್ವಾ ಏತಮಿಮಮುಮುಂ ಚೋದ್ಗೀಥಮುಪಾಸೀತ ॥ ೨ ॥

ಅ ॥ ದೇಹದಲ್ಲಿಯೂ ಆದಿತ್ಯಮಂಡಲದಲ್ಲಿಯೂ ಉಷ್ಣತ್ವವು ಸಮಾನವಾಗಿರುವುದರಿಂದ ದೇಹದಲ್ಲಿರತಕ್ಕ ಮುಖ್ಯಪ್ರಾಣನೂ, ಆದಿತ್ಯನಲ್ಲಿರತಕ್ಕ ಮುಖ್ಯಪ್ರಾಣನೂ ಸಮಾನನೇ. ದೇಹದಲ್ಲಿದ್ದ ವಾಯುವನ್ನು ಪ್ರಾಜ್ಞರು ಸ್ವರಃ ಎನ್ನುತ್ತಾರೆ. ಪ್ರತಿಪುರುಷರಿಗೂ ಅಭಿಮುಖವಾಗಿರತಕ್ಕ ಸೂರ್ಯಮಂಡಲದಲ್ಲಿ ಸರ್ವಸ್ವತಂತ್ರವಾದ ವಿಷ್ಣುವಿನ ವಿಶೇಷಜ್ಞಾನವಿದ್ದು ಸೂರ್ಯಮಂಡಲದಲ್ಲಿರತಕ್ಕ ವಾಯುವನ್ನು ಪ್ರತ್ಯಾಸ್ವರಃ ಎನ್ನುತ್ತಾರೆ. ದೇಹದಲ್ಲಿಯೂ ಸೂರ್ಯಮಂಡಲದಲ್ಲಿಯೂ ಇರತಕ್ಕ ವಾಯುಗಳಿಗೆ ಉಷ್ಣತ್ವಾದಿಗಳಿಂದ ಸಾಮ್ಯವಿದ್ದ ಪ್ರಯುಕ್ತ ದೇಹದಲ್ಲಿರತಕ್ಕ ವಾಯುವಿನಲ್ಲಿಯೂ ಸೂರ್ಯನಲ್ಲಿರತಕ್ಕ ವಾಯುವಿನಲ್ಲಿಯೂ ಉದ್ಗೀಥವನ್ನು ಉಪಾಸನೆ ಮಾಡಬೇಕು. ॥ ೨ ॥

ಭಾ. ॥ (೧) ಆದಿತ್ಯಮಂಡಲಸ್ಥಶ್ಚ ಸರ್ವಪ್ರಾಣೆಗತಸ್ತಥಾ । ವಾಯುಸ್ಸಮಾನ ಏವಾಯಮುಷ್ಣೋಽಸಾವಪಿ ಚ ಸ್ಫುಟಂ ॥ (೨) ತಸ್ಮಾದಸ್ಮಿನ್ನಮುಷ್ಮಿನ್ವಾಽಪ್ಯುದ್ಗೀಥಾಖ್ಯಂ ಜನಾರ್ದನಂ । ಉಪಾಸೀತ ವಿಮೋಕ್ಷಾಯ ಸರ್ವಕಾಮಾಪ್ತಯೇ ತಥಾ ॥ ಇತಿ॥ (೩) ಕೇಶವಃ ಸ್ವಃ ಸ್ವತಂತ್ರತ್ವಾತ್ತದ್ರತೇರ್ಮಾರುತಃ ಸ್ವರಃ । ಶರೀರಸ್ಥಶ್ಚ ಸೂರ್ಯಸ್ಥಃ ಪ್ರತಿಪತ್ತ್ಯಾ ಸಮಂತತಃ । ಮಾಂ ಪ್ರತೀತ್ಯತ ಏವಾಸೌ ಪ್ರತ್ಯಾಸ್ವರ ಉದಾಹೃತಃ ॥೨॥೧॥

ಅ ॥ (೧) ಆದಿತ್ಯಮಂಡಲದಲ್ಲಿರತಕ್ಕ ವಾಯುವಿನಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿರತಕ್ಕ ವಾಯುವಿನಲ್ಲಿಯೂ ಸ್ಪಷ್ಟವಾಗಿ ಉಷ್ಣವು ಕೋರಿದುದರಿಂದ ಇವೆರಡೂ ಸಮಾನವೇ. (೨) ಆದಕಾರಣ ಮೋಕ್ಷ ಸಿಗುವುದಕ್ಕಾಗಿಯೂ ಐಹಿಕ ಎಲ್ಲಾ ಅಭೀಷ್ಟಗಳನ್ನು ಹೊಂದುವುದಕ್ಕಾಗಿಯೂ ದೇಹದಲ್ಲಿರತಕ್ಕ ವಾಯುವಿನಲ್ಲಿಯೂ ಸೂರ್ಯನಲ್ಲಿರರಕ್ಕ ವಾಯುವಿನಲ್ಲಿಯೂ ಉದ್ಗೀಥನೆನಿಸಿಕೊಂಡ ಶ್ರೀಹರಿಯನ್ನು ಉಪಾಸನೆ ಮಾಡಬೇಕು (೩) ಶ್ರೀಹರಿಯು ಸರ್ವಸ್ವತಂತ್ರನಾದುದರಿಂದ ಸ್ವಃ ಎನ್ನಿಸುತ್ತಾನೆ. ಶ್ರೀಹರಿಯ ವಿಶೇಷ ಜ್ಞಾನವಿರುವವನಾದುದರಿಂದ ದೇಹದಲ್ಲಿದ್ದ ಮುಖ್ಯಪ್ರಾಣನು ಸ್ವರಃ ಎನ್ನಿಸುತ್ತಾನೆ. ಸೂರ್ಯನಲ್ಲಿದ್ದ ಮುಖ್ಯಪ್ರಾಣನು ಪ್ರತಿಯೊಬ್ಬರಿಗೂ ತಮ್ಮತಮಗೆ ಅಭಿಮುಖವಾಗಿಯೇ ಇದ್ದಾನೆಂದು ಕಾಣುವುದರಿಂದಲೂ ವಿಷ್ಣುವಿನ ವಿಶೇಷಜ್ಞಾನವುಳ್ಳವನಾದುದರಿಂದಲೂ ಪ್ರತ್ಯಾಸ್ವರಃ ಎನ್ನಿಸುತ್ತಾನೆ ॥೨॥೧॥

ಉ. ॥ ಅಥ ಖಲು ವ್ಯಾನಮೇವೋದ್ಗೀಥಮುಪಾಸೀತ ಯದ್ವೈ ಪ್ರಾಣೆತಿ ಸ ಪ್ರಾಣೋ ಯದಪಾನಿತಿ ಸೋಽಪಾನೋಽಥ ಯಃ ಪ್ರಾಣಾಪಾನಯೋಃ ಸಂಧಿಃ ಸ ವ್ಯಾನೋ ಯೋ ವ್ಯಾನಃ ಸಾ ವಾಕ್ತಸ್ಮಾದಪ್ರಾಣನ್ನನಪಾನನ್ವಾಚಮುಭಿವ್ಯಾಹರತಿ ॥ ೪ ॥

ಅ ॥ ವ್ಯಾನ ಎಂಬ ಮುಖ್ಯಪ್ರಾಣನಲ್ಲಿಯೇ, ಉದ್ಗೀಥನೆನಿಸಿಕೊಂಡ ಶ್ರೀಹರಿಯನ್ನು ಪಾಸನೆ ಮಾಡಬೇಕು. ಉಸಿರಾಟವನ್ನು ಮಾಡಿಸುವವನು ಪ್ರಾಣ (ಶೇಷ)ನು ಮಲಾದಿಗಳನ್ನು ಶರೀರದಿಂದ ಹೊರಪಡಿಸುವವನು ಅಪಾನ (ಗರುಡ)ನು. ಪ್ರಾಣ ಅಪಾನರನ್ನು ಕೂಡಿಸುವವನು ವ್ಯಾನನು. ಇವನೇ ವಾಗಿಂದ್ರಿಯದಲ್ಲಿರುವವನು. ವಾಕ್ ಎಂದು ಹೆಸರುಳ್ಳವನು, ಮಾತನಾಡಿಸುವವನು. ವ್ಯಾನನಲ್ಲಿದ್ದ ವಿಷ್ಣುವು ವಾಕ್ ಎಂದು ಹೆಸರುಳ್ಳವನು, ವಾಗಿಂದ್ರಿಯಕ್ಕೆ ಪ್ರವರ್ತಕನು, ಮತ್ತು ಶರೀರದೊಳಗೆ ಇರುವವನು. ವ್ಯಾನನು ವಾಗಿಂದ್ರಿಯಕ್ಕೆ ಪ್ರವರ್ತಕನಾದುದರಿಂದಲೇ ಪ್ರಾಣ ಅಪಾನರ ವ್ಯಾಪಾರ ವಿಲ್ಲದೆ ಪ್ರಾಣ ಅಪಾನರ ವ್ಯಾಪಾರವನ್ನು ತಡೆದು ಮಾತನಾಡುತ್ತಾನೆ. (ಆದಕಾರಣ ಪ್ರಾಣ ಅಪಾನರು ಮಾತನಾಡಿಸುವವರಲ್ಲ. ವ್ಯಾನನೇ.) ॥ ೪ ॥

ಉ ॥ ಯಾ ವಾಕ್ ಸರ್ಕ್ತಸ್ಮಾದಪ್ರಾಣನ್ನನಪಾನನ್ವಾಚಮುಭಿವ್ಯಾಹರತಿ ಯತ್ ಋಕ್ಸಾಮ ತಸ್ಮಾದಪ್ರಾಣನ್ನನಪಾನನ್ಸಾಮ ಗಾಯತಿ ಯತ್ಸಾಮ ಸ ಉದ್ಗೀಥಸ್ತಸ್ಮಾದಪ್ರಾಣನ್ನನಪಾನನ್ನುದ್ಗಾಯತಿ ॥ ೪ ॥

ಅ ॥ ವಾಕ್ ಎಂದು ಹೆಸರುಳ್ಳ, ವಾಗಿಂದ್ರಿಯದಲ್ಲಿರುವ ವಾಗಿಂದ್ರಿಯಕ್ಕೆ ಪ್ರವರ್ತಕನಾದ ವ್ಯಾನನಿಗೆ ಋಕ್ ಎಂದು ಹೆಸರು. ಋಕ್ಕಿನಲ್ಲಿ ಇರುವವನು. ಋಕ್ಪ್ರವರ್ತಕನು. ಆ ವ್ಯಾನನಲ್ಲಿದ್ದ ವಿಷ್ಣುವು ಋಕ್ಪ್ರವರ್ತಕನಾದ ವ್ಯಾನನಲ್ಲಿರುವವನು. ಆದಕಾರಣ ಪ್ರಾಣಾಪಾನರ ವ್ಯಾಪಾರ ತಡೆದು

ಋಕ್ಕನ್ನು ಹೇಳುತ್ತಾನೆ. ಋಕ್ಕಿನಲ್ಲಿರುವ ಋಕ್ ಎಂದು ಹೆಸರುಳ್ಳ ಋಕ್ಪ್ರವರ್ತಕನಾದ ವ್ಯಾನನಿಗೆ ಸಾಮ ಎಂದು ಹೆಸರು. ಸಾಮದಲ್ಲಿ ಇರುವವನು ಸಾಮಕ್ಕೆ ಪ್ರವರ್ತಕನು. ಋಕ್ಪ್ರವರ್ತಕನಾದ ವ್ಯಾನನಲ್ಲಿಪ್ಪ ವಿಷ್ಣುವೇ ಸಾಮಪ್ರವರ್ತಕನಾದ ವ್ಯಾನನಲ್ಲಿರುವವನು ಸಾಮಪ್ರವರ್ತಕನಾದ ವ್ಯಾನನು ಉದ್ಗೀಥ ಎಂಬ ಸಾಮದಲ್ಲಿರುವವನು. ಉದ್ಗೀಥನೆನಿಸಿಕೊಂಡವನು ಉದ್ಗೀಥಪ್ರವರ್ತಕನು. ಸಾಮ ಪ್ರವರ್ತಕನಾದ ವ್ಯಾನನಲ್ಲಿಪ್ಪ ವಿಷ್ಣುವೇ ಉದ್ಗೀಥಪ್ರವರ್ತಕನಾದ ವ್ಯಾನನಲ್ಲಿರುವವನು. ವ್ಯಾನಾದಿಗಳಲ್ಲಿರುವ ಶ್ರೀಹರಿಯೇ ಉದ್ಗೀಥ ಎಂಬ ಸಾಮದಲ್ಲಿದ್ದು ಉತ್ಕೃಷ್ಟಗಾನವನ್ನು ಮಾಡಿಸುವವನು. ವ್ಯಾನನು ಪ್ರಾಣಾದಿಗಳಿಂದ ಶ್ರೇಷ್ಠನಾದಪ್ರಯುಕ್ತ ವ್ಯಾನನೆಂಬ ಮುಖ್ಯ ನಾಯುವಿನಲ್ಲಿ ಉದ್ಗೀಥನನ್ನು ಉಪಾಸನೆಮಾಡಬೇಕು. ॥ ೪ ॥

ಭಾ. ॥ (೧) ಪ್ರಾಣಾದ್ಯಾಸ್ತ್ರಿವಿಧಾಃ ಪಂಚ ಪ್ರಧಾನೋ ವಾಯುರೇವ ಚ । ಮುಖ್ಯಪಂಚಕರೂಪಸ್ಸನ್ ಗರುಡೋ ಮಧ್ಯಪಂಚಕಃ ॥ (೨) ಅವನುಃ ಪಂಚಕಸ್ತ್ವನ್ಯೇ ಪ್ರಾಣಾದ್ಯಾಸ್ತಸ್ಯ ಸೂನವಃ ॥ ಇತಿ ತ್ರೇಧಾ ವಿಭಾಗೋಽಯಂ ವಿಭಾಗೋಽನ್ಯಶ್ಚತುರ್ಧಕಃ । ಪ್ರಾಣಾಪಾನೌ ಶೇಷವೀಂದ್ರೌ ತಥೋದಾನಸಮಾನಕೌ ॥ ರುದ್ರೇಂದ್ರೌ ತತ್ಪರಃ ಶ್ರೇಷ್ಠೋ ವಾಯುರ್ವ್ಯಾನ ಉದಾಹೃತಃ ॥ (೩) ತಸ್ಮಿನ್ನುದ್ಗೀಥನಾಮಾನಮುಪಾಸೀತ ಹರಿಂ ಪರಂ । ಯೋಽಸೌ ವ್ಯಾನಗತೋ ವಿಷ್ಣುಸ್ಸ ವಾಗೃಕ್ಸಾಮಗಃ ಸದಾ ॥ ಉದ್ಗೀಥೇ ಚ ಸ ಏವೈಕಃ ತಸ್ಮಾದ್ವ್ಯಾನಾದ್ಧಿ ತಶ್ಚ್ರಯಾಃ । ಉದ್ಗೀಥನಾಮಾ ಭಗವಾನ್ ಸ್ಥಿತೋ ವ್ಯಾನಾದಿಪಂಚಕೇ ॥ ೩, ೪ ॥ ॥ ೧ ॥

ಅ ॥ (೧) ಪ್ರಾಣ ಅಪಾನ ಮೊದಲಾದ ಐವರು ಮೂರು ವಿಧ (1) ಪ್ರಧಾನ ವಾಯುವಿನದ್ದು ಮುಖ್ಯವಾದುದು ಐದು ರೂಪಗಳು, (2) ಗರುಡನದ್ದು ಪ್ರಾಣ ಮೊದಲಾದ ಹೆಸರುಳ್ಳದ್ದು ಅಮುಖ್ಯ ಐದು ರೂಪಗಳು. (೩ (3) ನಿಕೃಷ್ಟವಾದುದು ಪ್ರಾಣಮೊದಲಾದ ಪ್ರಧಾನವಾಯುವಿನ ಮಕ್ಕಳದ್ದು ಐದು ರೂಪಗಳು ಹೀಗೆ ಮೂರು ವಿಧವಾಗಿಲ್ಲದೇ ಬೇರೆ ವಿಭಾಗವು ಹೇಗೆಂದರೆ— ಪ್ರಾಣ ಅಪಾನರೆಂದರೆ ಶೇಷ ಗರುಡರು. ಉದಾನ ಸಮಾನರೆಂದರೆ ರುದ್ರ ಇಂದ್ರರು ಅವರಿಂದುತ್ತಮನು ಶ್ರೀಕೃಷ್ಣನು ವ್ಯಾನವಾಯುವು (೩) ವ್ಯಾನನಲ್ಲಿ ಉದ್ಗೀಥನೆನಿಸಿಕೊಂಡ ಸರ್ವೋತ್ತಮನಾದ ಶ್ರೀಹರಿಯನ್ನು ಉಪಾಸನೆ ಮಾಡಬೇಕು. ವ್ಯಾನನಲ್ಲಿ ಅಂತರ್ಗತನಾದ ವಿಷ್ಣುವೇ ವಾಕ್ ಋಕ್ ಸಾಮ ಉದ್ಗೀಥಸಾಮ ಇವುಗಳಲ್ಲಿ ಸದಾ ಸ್ತುತಿಸಲ್ಪಡುವವನು, ಆದಕಾರಣ ಆ ವ್ಯಾನನಿಂದಲೇ ವಾಕನಾತುವಿಕೆ, ಋಕ್ಕನ್ನು ಹೇಳುವುದು, ಸಾಮಗಾನ. ಉದ್ಗಾನರೂಪ ಕ್ರಿಯೆಗಳು ಆಗುತ್ತವೆ ಉದ್ಗೀಥನೆನಿಸಿಕೊಂಡ ಶ್ರೀಹರಿಯು ವ್ಯಾನ ಮತ್ತು ವಾಕ್, ಋಕ್, ಸಾಮ ಉದ್ಗೀಥಗಳಲ್ಲಿರತಕ್ಕ ಪಾಲ್ಯು ವ್ಯಾನರೂಪ ಹೀಗೆ ಐದರಲ್ಲಿ ಇರುವವನು. ॥ ೩ ॥ ೪ ॥ ॥ ೧ ॥

ಉ. ॥ ಅತೋ ಯಾನ್ಯನ್ಯಾನಿ ವೀರ್ಯವಂತಿ ಕರ್ಮಾಣಿ ಯಥಾಗ್ನೇರ್ಮಥನಮಾಜೇಃ ಸರಣಂ ದೃಢಸ್ಯ ಧನುಷ ಆಯಮನಮಪ್ರಾಣನ್ನನಪಾನಂ ತಾನಿ ಕರೋತ್ಯೇತಸ್ಯ ಹೇತೋರ್ವ್ಯಾನಮೇವೋದ್ಗೀಥಮುಪಾಸೀತ ॥೫॥

ಅ ॥ ಅರಣಿ (ಬೆಂಕಿಯನ್ನು ಹುಟ್ಟಿಸುವ ಕಟ್ಟಿಗೆ) ಗಳಿಂದ ಅಗ್ನಿಯನ್ನು ಹುಟ್ಟಿಸುವುದು ಯುದ್ಧಾದಿ ಹೋಗುವುದು, ದೃಢವಾದ ಧನುಸ್ಸನ್ನು ಬಗ್ಗಿಸುವುದು, ಮೊದಲಾದ ಮಹಾಪ್ರಯತ್ನಸಾಧ್ಯಗಳಾದ ಕರ್ಮಗಳನ್ನು ಪ್ರಾಣ ಅಪಾನರ ವ್ಯಾಪಾರವನ್ನು ನಿಲ್ಲಿಸಿಯೇ ವ್ಯಾನನು ಮಾಡಿಸುತ್ತಾನೆ.

(ಅದಕಾರಣ ವ್ಯಾನನೇ ಸರ್ವಕಾರ್ಯಗಳನ್ನು ಮಾಡಿಸುವವನಾಮದರಿಂದ ಸರ್ವೋತ್ತಮನು.) ಏಮದರಿಂದ ವ್ಯಾನನಲ್ಲಿಯೇ ಶ್ರೀಹರಿಯನ್ನು ಪಾಸನೆ ಮಾಡಬೇಕು ॥ ೫ ॥

ಭಾ. ॥ (೧) ವೀರ್ಯವತ್ಕರ್ಮಕೃತ್ತಸ್ಮಾದ್ವ್ಯಾನ ಏವ ಹ್ಯುದಾಹೃತಃ ॥ (೨) ತಸ್ಮಾದ್ವ್ಯಾನಗತಂ ವಿಷ್ಣುಮುಪಾಸೀತೈವ ನಿತ್ಯಶಃ । ಯದ್ಯಪ್ಯೇಕೋ ಹಿ ಭಗವಾನ್ಸರ್ವದಾ ಸರ್ವವಸ್ತುಗಃ ॥ ಅನೂನೋದ್ರಿಕ್ತಮಹಿಮೋ ನಿರ್ವಿಶೇಷಃ ಸದೈವ ಚ । ತಥಾಪಿ ತತ್ಕ್ರಿಯಾಭೇದಾನ್ನಾಮರೂಪಾದಿಕಂ ಪೃಥಕ್ । ಉಚ್ಯತೇ ಹ್ಯಪೃಥಕ್ತ್ವೇಽಪಿ ಪೂರ್ಣೈಶ್ವರ್ಯೈಕಹೇತುತಃ ॥ (೩) ಅವಿಶೇಷೋಽಪಿ ಭಗವಾನ್ ಸರ್ವಶಕ್ತ್ಯಹೇತುತಃ । ವಿಶೇಷಹೇತುಕಂ ಸರ್ವಂ ಕರೋತ್ಯವಿಕೃತಃ ಸದಾ ॥ ೬ ॥ ॥ ೧ ॥

ಅ ॥ (೧) ಶ್ರೀಹರಿಯು ವ್ಯಾನನಲ್ಲಿದ್ದ ಪ್ರಯುಕ್ತ ನ್ಯಾನನೇ ಪ್ರಬಲ ಕರ್ಮಗಳನ್ನು ಮಾಡುವವನು. ಅದಕಾರಣ ನಿತ್ಯದಲ್ಲಿಯೂ ವ್ಯಾನನಲ್ಲಿದ್ದ ವಿಷ್ಣುವನ್ನೇ ಉಪಾಸನೆ ಮಾಡಬೇಕು. (೨) ಯದ್ಯಪಿ ಭಗವಂತನು ಸರ್ವದಾ ಸರ್ವವಸ್ತುಗಳಲ್ಲಿ ಇರುವವನು ಆ ವಸ್ತುಗಳಲ್ಲಿರುವ ಭಗವದ್ರೂಪಗಳಿಗೆ ಭೇದವಿಲ್ಲ. ಶ್ರೀಹರಿಯು ಸರ್ವದಾ ಪೂರ್ಣವಾದ ಉತ್ಕೃಷ್ಟ ಮಹಿಮೆಯುಳ್ಳವನು. ವಿಶೇಷವಿಲ್ಲದವನು ಭಗವದ್ರೂಪಗಳಿಗೆ ಭೇದವಿಲ್ಲವಾದರೂ, ಅವರವರ ಕ್ರಿಯೆಗಳು ಬೇರೆಬೇರೆಯಾದ ಕಾರಣ ಪೂರ್ಣವಾದ ಐಶ್ವರ್ಯದ ಮಹಿಮೆಯಿಂದ ನಾನು, ರೂಪ ಮೊದಲಾದುದು ಬೇರೆಬೇರೆ ಇದೆ (೩) ಶ್ರೀಹರಿಗೆ ಜಗವಾಗಲೂ ಮಹಾ ಮೊದಲಾದ ವಿಕಾರಗಳಲ್ಲಿ. ಶ್ರೀಹರಿಯು ಎಲ್ಲಾ ರೂಪಗಳಲ್ಲಿಯೂ ಒಂದೇ ರೀತಿಯಾಗಿರುತ್ತಾನೆ. ಬಾದು ರೂಪಕ್ಕೆ ಸಾಮರ್ಥ್ಯ ವಿಶೇಷವಿದೆ. ಇನ್ನೊಂದಕ್ಕೆ ಇಲ್ಲ ಎಂದು ಸರ್ವಥಾ ಹೇಳಕೂಡದು. ಆದರೂ ಸಾಮರ್ಥ್ಯವಿಶೇಷದಿಂದೊಡಗೂಡಿದ ಕಾರ್ಯಗಳನ್ನು ಜೀವರಲ್ಲಿದ್ದು ತಾನೇ ಮಾಡುತ್ತಾನೆ. ॥ ೫ ॥ ೧ ॥

ಪೀ—ಬುದ್ಧೀಂದ್ರಿಯಾಕ್ಷರವಲ್ಲಿ ಹೇಳಲ್ಪಡತಕ್ಕ ಪ್ರಾಣಾದಿಗಳಲ್ಲಿರತಕ್ಕ ಶ್ರೀಹರಿಯ ಉಪಾಸನೆಯನ್ನು ಹೇಳುತ್ತಾರೆ—

ಉ. ॥ ಅಥ ಏಬೂದ್ಧೀಂದ್ರಿಯಾಕ್ಷರಾಣ್ಯುಪಾಸೀತೋದ್ಗೀಥ ಇತಿ ಪ್ರಾಣ ಏವೋತ್ಗಾನೇನ ಹ್ಯುತ್ತಿಷ್ಠತಿ ವಾಗ್ಗೀರ್ವಾಚೋ ಹಿ ಗಿರ ಇತ್ಯಾಚಕ್ಷತೇಽನ್ನಂ ಥವನ್ನೇ ಹೀದಂ ಸರ್ವಂ ಸ್ಥಿತಂ ॥ ೬ ॥

ಅ ॥ ಬುದ್ಧೀಂದ್ರಿಯಾಕ್ಷರವಲ್ಲಿ ಹೇಳಲ್ಪಡತಕ್ಕ ದೇವತೆಗಳಲ್ಲಿರತಕ್ಕ ಭಗವದ್ರೂಪಗಳನ್ನು ಪಾಸನೆ ಮಾಡಬೇಕು. ಮುಖ್ಯಪ್ರಾಣನಿಂದಲೇ ಜಗತ್ತು ಹುಟ್ಟುವುದರಿಂದ ಪ್ರಾಣನು ಉತ್ ಎನ್ನಿಸುತ್ತಾನೆ ಮಾತುಗಳನ್ನು (ವಿದ್ವಾಂಸರು) ಗಿರಃ ಎನ್ನುತ್ತಾರೆ. ಅದಕಾರಣ ಸರಸ್ವತಿಯು ಗೀಃ ಎನ್ನಿಸುತ್ತಾಳೆ. ಅನ್ನಾಭಿಮಾನಿಯಾದ ಬ್ರಹ್ಮನಿಂದಲೇ ಸಮಸ್ತ ಪ್ರಾಣಿಗಳು ಜೀವಿಸಿಕೊಂಡು ಇರುತ್ತಾರೆ. ಅದಕಾರಣ ಅನ್ನಾಭಿಮಾನಿಯಾದ ಬ್ರಹ್ಮನು ಥಂ ಎನ್ನಿಸುತ್ತಾನೆ ॥ ೬ ॥

ಉ ॥ ದ್ಯೌರೇವೋದಂತರಿಕ್ಷಂ ಗೀಃ ಪೃಥಿವೀ ಥವಾದಿತ್ಯ ಏವೋದ್ವಾಯುರ್ಗಿರಗ್ನಿಸ್ಥಂ ಸಾಮವೇದ ಏವೋದ್ಯಜುರ್ವೇದೋ ಗೀರ್ಯಗ್ವೇದಸ್ಥಂ ದುಗ್ಧೇಽಸ್ಮೈ ವಾಗ್ದೋಹಂ ಯೋ ವಾಚೋ ದೋಹೋಽನ್ನವಾನನ್ನಾ-

ದೋ ಭವತಿ ಯ ಏತಾನ್ಯೇವಂ ವಿದ್ವಾನುದ್ಗೀಥಾಕ್ಷರಾಣ್ಯುಪಾಸ್ತೇ ಉದ್ಗೀಥ ಇತಿ ॥ ೭ ॥

ಅ ॥ ಮೃಲೋಕಾಭಿಮಾನಿಯು ಉತ್ ಎಂದೂ, ಅಂತರಿಕ್ಷಾಭಿಮಾನಿಯು ಗೀಃ ಎಂದೂ, ಪೃಥಿವ್ಯಭಿಮಾನಿಯು ಥಂ ಎಂದೂ ಅನ್ನಿಸುತ್ತಾರೆ. ಆದಿತ್ಯನೇ ಉತ್ ಎಂದೂ, ಭೂತವಾಯುವಿನ ಅಧಿಪತಿಯು ಗೀಃ ಎಂದೂ, ಅಗ್ನಿಯು ಥಂ ಎಂದೂ ಅನ್ನಿಸುತ್ತಾರೆ. ಸಾಮವೇದಾಭಿಮಾನಿಯೇ ಉತ್ ಎಂದೂ, ಯಜುರ್ವೇದಾಭಿಮಾನಿಯು ಗೀಃ ಎಂದೂ ಋಗ್ವೇದಾಭಿಮಾನಿಯು ಥಂ ಎಂದೂ ಅನ್ನಿಸುತ್ತಾರೆ. ಉತ್ ಗೀ ಥ ಎಂಬ ಉದ್ಗೀಥಾಕ್ಷರಗಳಲ್ಲಿ ಹೇಳಲ್ಪಡತಕ್ಕ ಪ್ರಾಣ ಮೊದಲಾದ ನಾಲ್ಕು ವರ್ಗಗಳಲ್ಲಿರತಕ್ಕ ಶ್ರೀಹರಿಯನ್ನು ಪಾಸನೆ ಮಾಡುವವನಿಗೆ ಉದ್ಗೀಥನೆನಿಸಿಕೊಂಡ ಶ್ರೀಹರಿಯು ವೇದ ಮೊದಲಾದವುಗಳಲ್ಲಿ ಹೇಳಿದ ಮೋಕ್ಷ ಮೊದಲಾದ ವಾಗಿಂದ್ರಿಯದ ಫಲವನ್ನು ಕೊಡುತ್ತಾನೆ. ಆ ಉಪಾಸಕನು ಯಥೇಷ್ಟ ಅನ್ನವುಳ್ಳವನೂ, ಅನ್ನವನ್ನುಣ್ಣುವುದರಲ್ಲಿ ಸಮರ್ಥನೂ ಆಗುತ್ತಾನೆ. ॥ ೭ ॥

ಟೀ—ಕಾಮ್ಯಗಳು ಸಮೃದ್ಧಿಯಾಗಲಿಕ್ಕೆ ಯಾವುವು ಕಾರಣಗಳೋ ಅವುಗಳಲ್ಲಿರತಕ್ಕ ಶ್ರೀಹರಿಯ ಉಪಾಸನೆಯನ್ನು ಹೇಳುತ್ತಾರೆ—

ಉ. ॥ ಅಥ ಖಲ್ವಾತೀಷ್ಸಮೃದ್ಧಿರುಪಸರಣಾನೀತ್ಯುಪಾಸೀತ ಯೇನ ಸಾಮ್ನಾ ಸ್ತೋಷ್ಯನ್ ಸ್ಯಾತ್ತತ್ಸಾಮೋಪಧಾವೇತ್ ॥ ೮ ॥

ಅ ॥ ಇಷ್ಟಿಸಲ್ಪಡತಕ್ಕ ವಸ್ತುಗಳ ಸಮೃದ್ಧಿಕಾರಣಗಳು ಹೇಳಲ್ಪಡುತ್ತವೆ. ಸಾಮಾದಿಗಳಲ್ಲಿರತಕ್ಕ ಜೆನವದ್ರೂಪಗಳು ಜಪ್ಪವನ್ನು ಕೊಂದಿಸಿಕೊಟ್ಟು ಕಾಮಗಳ ಸಮೃದ್ಧಿಗೆ ಕಾರಣಗಳಾದುದರಿಂದ ಉಪಸರಣಗಳೆನ್ನಿಸುತ್ತವೆಂದು ತಿಳಿದು ಉಪಾಸನೆ ಮಾಡಬೇಕು. ಪುರುಷನು ಯಾವ ಬೃಹದ್ರಥಂತರ ಮೊದಲಾದ ಸಾಮವಿಶೇಷದಿಂದ ಸ್ತೋತ್ರ ಮಾಡುವವನಾಗುತ್ತಾನೋ, ಅಂತಹ ಸಾಮಗಳಲ್ಲಿರತಕ್ಕ ಶ್ರೀಹರಿಯನ್ನು ಸರ್ವೋತ್ತಮನೆಂದು ತಿಳಿದು ಆ ಸಾಮವನ್ನು ಗಾನಮಾಡಬೇಕು. ॥ ೮ ॥

ಉ. ॥ ಯಸ್ಯಾಮೃಚಿ ತಾಮೃಚಂ ಯದಾರ್ಷೇಯಂ ತಮೃಷಿಂ ಯಾಂ ದೇವತಾಮಭಿಷ್ಟೋಷ್ಯನ್ ಸ್ಯಾತ್ತಾಂ ದೇವತಾಮುಪಧಾವೇತ್ ॥ ೯ ॥

ಅ ॥ ಯಾವ ಋಕ್ಕಿನಲ್ಲಿ ಸೇರಿಸಿದ ಸಾಮದಿಂದ ಸ್ತೋತ್ರಮಾಡುವನೋ ಅಂತಹ ಋಕ್ಕನ್ನು ತಿಳಿದುಕೊಳ್ಳಬೇಕು. (ಅಂದರೆ ಆ ಋಕ್ಕಿನಲ್ಲಿ ಸ್ತುತಿಸಲ್ಪಡತಕ್ಕ ಶ್ರೀಹರಿಯನ್ನು ಸರ್ವೋತ್ತಮನೆಂದು ತಿಳಿದು ಆ ಋಕ್ಕಿನಲ್ಲಿ ಕೂಡಿಸಿದ ಸಾಮಗಾನ ಮಾಡಬೇಕು.) ಯಾವ ಋಷಿಯು ಕಂಡ ಸಾಮಸ್ತೋತ್ರ ಮಾತರಿಕ್ಕೆ ಇಷ್ಟವಾಗಿಯದೋ, ಆ ಋಷಿಯಲ್ಲಿರತಕ್ಕ ಶ್ರೀಹರಿಯನ್ನು ಸರ್ವೋತ್ತಮನೆಂದು ತಿಳಿದು ಆ ಋಷಿಯು ಕಂಡ ಸಾಮಾದಿಗಳನ್ನು ಹೇಳಬೇಕು. ಯಾವ ದೇವತೆಗಳನ್ನು ಹೆನ್ನಾಗಿ ಸ್ತುತಿಸುತ್ತಾನೋ ಆ ದೇವತೆಗಳಲ್ಲಿರತಕ್ಕ ಶ್ರೀಹರಿಯನ್ನು ಸರ್ವೋತ್ತಮನೆಂದು ತಿಳಿದು ಸ್ತುತಿಸಬೇಕು. ॥ ೯ ॥

ಉ. ॥ ಯೇನ ಛಂದಸಾ ಸ್ತೋಷ್ಯನ್ ಸ್ಯಾತ್ತಚ್ಛಂದ ಉಪಧಾವೇ-ದ್ಯೇನ ಸ್ತೋಮೇನ ಸ್ತೋಷ್ಯಮಾಣಃ ಸ್ಯಾತ್ತ್ಸ್ತೋಮಮುಪಧಾವೇತ್ ॥

॥ ೧೦ ॥

ಅ ॥ ಗಾಯತ್ರೀ ಮೊದಲಾದ ಛಂದಸ್ಸಿನಿಂದ ಸ್ತುತಿಸುವಾಗ ಛಂದೋಽಭಿಮಾನಿದೇವತೆಗಳಲ್ಲಿರತಕ್ಕ ಶ್ರೀಹರಿಯನ್ನು ಸರ್ವರಿಂದಲೂ ಉತ್ತಮನೆಂದು ತಿಳಿದು ಆ ಛಂದಸ್ಸನ್ನು ಹೇಳಬೇಕು. ಗಾನವಿಶೇಷದಿಂದ ಅಥವಾ ವಾಕ್ಯಸಮೂಹದಿಂದ ಸ್ತುತಿಸಬೇಕೆಂದು ಇಚ್ಛಿಸುವವನು ಅವರಲ್ಲಿರತಕ್ಕ ಶ್ರೀಹರಿಯನ್ನು ಸರ್ವೋತ್ತಮನೆಂದು ತಿಳಿದು ಆ ಸಾಮದಿಂದ ಕೂಡಿದ ತ್ರಿವೃತ್ ಪಂಚದಶ ಮೊದಲಾದ ಪುನ್ರುಕ್ತಿಶೇಷ ಸಮುದಾಯವನ್ನು ಹೇಳಬೇಕು ॥ ೧೦ ॥

ಉ. ॥ ಯಾಂ ದಿಶಮಭಿಷ್ಟೋಷ್ಯನ್ಸ್ಯಾತ್ತಾಂ ದಿಶಮುಪಧಾವೇತ್॥೧೧

ಅ ॥ ದಿಗ್ದೇವತೆಗಳನ್ನು ಸ್ತುತಿಸುವಾಗ ಆ ದಿಕ್ಕಿನಲ್ಲಿರತಕ್ಕ ಶ್ರೀಹರಿಯನ್ನು ಸರ್ವೋತ್ತಮನೆಂದು ತಿಳಿದು ಸ್ತುತಿಸಬೇಕು ॥ ೧೧ ॥

, ಪೀ—ಬೇರೆ ದೇವತೆಗಳನ್ನು ಸರ್ವೋತ್ತಮರೆಂದು ತಿಳಿದು ಉಪಾಸನೆ ಮಾಡಕೂಡದೆನ್ನುತ್ತಾರೆ—

ಉ. ॥ ಆತ್ಮಾನಮಂತತ ಉಪಸೃತ್ಯ ಸ್ತುವೀತ ಕಾಮಂ ಧ್ಯಾಯನ್ನಪ್ರಮತ್ತೋಽಭ್ಯಾಶೋ ಹ ಯದಸ್ಯೈ ಸ ಕಾಮಃ ಸಮೃದ್ಧ್ಯೇತ ಯತ್ಕಾಮಃ ಸ್ತುವೀತೇತಿ ಯತ್ಕಾಮಃ ಸ್ತುವೀತೇತಿ ॥ ಇತಿ ತೃತೀಯಃ ಖಂಡಃ ॥ ೩-೩ ॥೧೨॥

ಅ ॥ ಯಾವ ಕಾಮವನ್ನುದ್ದೇಶಿಸಿಕೊಂಡು ಪುರುಷನು ಶ್ರೀಹರಿಯನ್ನು ಸರ್ವೋತ್ತಮನೆಂದು ತಿಳಿದು ಬೇರೆ ದೇವತೆಗಳನ್ನು ಸ್ತುತಿಸುವನೋ, ಅತನಿಗೆ ಆ ಕಾಮವು ಚೆನ್ನಾಗಿ ಪರಿಪೂರ್ಣವಾಗುತ್ತದೆ. ಆದಕಾರಣ ತನಗೆ ಬೇಕಾದ ಇಷ್ಟವನ್ನು ಇಚ್ಛಿಸುವವನು ಅಲಸ್ಯವಿಲ್ಲದೆ ಶ್ರೀಹರಿಯೇ ಸರ್ವೋತ್ತಮನೆಂದು ತಿಳಿದು ಬೇರೆ ದೇವತೆಗಳನ್ನು ಸ್ತುತಿಸಬೇಕು ॥ ೧೨ ॥

ಭಾ. ॥ (೧) ಉದ್ಗೀಥಾಕ್ಷರಗಂ ಚೈನ ಪ್ರಾಣಾದಿಷು ಚ ಸಂಸ್ಥಿತಂ । ಆಶೀಸ್ಸಮೃದ್ಧಿಹೇತುಷ್ವಸ್ಯಖಿಲೇಷು ಮನಸ್ಥಿತಂ । ಏಕಮೇವ ಹರಿಂ ವೇದ ಯಃ ಸ ಸರ್ವೇಷ್ಟಮಾಪ್ನುಯಾತ್ ॥ ಇತಿ ಚ ॥ (೨) ಉಚ್ಚಬ್ದವಾಚ್ಯಾಃ ಪ್ರಾಣಾದ್ಯಾ ವಾಗಾದ್ಯಾ ಗೀರಿತೀರಿತಾಃ । ಅನ್ನಾದ್ಯಾಸ್ತ್ವಮಿತಿ ಪ್ರೋಕ್ತಾಸ್ತೇಷೂದ್ಗೀಥೋ ಹರಿಃ ಸ್ಥಿತಃ ॥ ಇತಿ ಚ ॥ (೩) ಆತ್ಮಾನಂ ಪರಮಾತ್ಮಾನಮಂತತಃ ಸರ್ವೋತ್ತಮತ್ವೇನ ಸರ್ವತ್ರೋಪಸೃತ್ಯ ॥ ೬, ೭, ೮, ೯, ೧೦, ೧೧, ೧೨ ॥ ಇತಿ ತೃತೀಯಃ ಖಂಡಃ ॥ ೩-೩ ॥ ॥ ೧ ॥

ಅ ॥ (೧) ಉದ್ಗೀಥಾಕ್ಷರದಲ್ಲಿ ಸ್ತುತಿಸಲ್ಪಡುವವನೂ ಅಪೇಕ್ಷಿಸಿದ್ದನ್ನು ಕೊಡತಕ್ಕ ಸಾಮದೇವತಾ ಮೊದಲಾದವುಗಳಲ್ಲಿ ಇರತಕ್ಕವನೂ ಶ್ರೀಹರಿಯು ಒಬ್ಬನೇ ಎಂದು ತಿಳಿಯುವವನು ಎಲ್ಲಾ ಇಷ್ಟಗಳನ್ನು ಹೊಂದುತ್ತಾನೆ. (೨) ಪ್ರಾಣಾದಿಗಳು ಉಚ್ ಎಂದೂ, ವಾಗಾದಿಗಳು ಗೀಃ ಎಂದೂ, ಅನ್ನಾದಿಗಳು ಥಂ ಎಂದೂ ಹೇಳಲ್ಪಡುತ್ತವೆ. ಅವುಗಳಲ್ಲಿ ಉದ್ಗೀಥನೆನಿಸಿಕೊಂಡ ಶ್ರೀಹರಿಯು ಇದ್ದಾನೆ. (೩) ಪರಮಾತ್ಮನನ್ನು ಕೊನೆಗೆ ಸರ್ವೋತ್ತಮನೆಂದು ಎಲ್ಲಾ ಉಪಾಸನೆಗಳಲ್ಲಿ ತಿಳಿದು (ಮೋಕ್ಷವನ್ನು ಹೊಂದುತ್ತಾನೆ.) ॥ ೬, ೭, ೮, ೯, ೧೦, ೧೧, ೧೨ ॥ ೩-೩ ॥ ॥ ೧ ॥

ಮೂರನೇ ಖಂಡವು ಮುಗಿಯಿತು.

ಳನೇ ಖಂಡವು

ಟೀ-ಉದ್ಗೀಥದ ವಿಕಲ್ಪರವಾದ ಪ್ರಣವದ ಉಪಾಸನೆಗೆ ಫಲ ಹೇಳುತ್ತಾರೆ---

ಉ. ॥ ಓಮಿತ್ಯೇತದಕ್ಷರಮುದ್ಗೀಥಮುಪಾಸೀತೋಮಿತಿ ಹ್ಯುದ್ಗಾಯತಿ ತಸ್ಯೋಪವ್ಯಾಖ್ಯಾನಂ ॥ ೧ ॥

ಅ ॥ ಶ್ರೀಹರಿಯನ್ನು ಪ್ರೀತಿಸಿ ಉತ್ಕೃಷ್ಟಗಾನವಮಾಡುತ್ತಾನೆ. ಆದಕಾರಣ ಓಂ ಎಂದು ಹೆಸರುಳ್ಳವನೂ, ನಾಶರಹಿತನೂ, ಆದ ಉದ್ಗೀಥನೆನಿಸಿಕೊಂಡ ಶ್ರೀಹರಿಯನ್ನು ಪಾಸನೆ ಮಾಡಬೇಕು. ಓಂ ಎಂದು ಹೆಸರುಳ್ಳವನೂ, ನಾಶರಹಿತನೂ ಆದ ಶ್ರೀಹರಿಯನ್ನು ಹೇಳುವ ಓಂ ಎಂಬುದರ ಅರ್ಥಭೂತನಾದ ಶ್ರೀಹರಿಯ ಉಪಾಸನೆಯಿಂದ ಮೋಕ್ಷವು ಸಿಗುತ್ತದೆ ಎಂಬುದನ್ನು ಪೂರ್ವದಲ್ಲಿ ನಡೆದ ಕಥೆಯನ್ನು ವಿವರಿಸಿ ಹೇಳುತ್ತೇವೆ ॥ ೧ ॥

ಉ. ॥ ದೇವಾ ವೈ ಮೃತ್ಯೋರ್ಬಿಭ್ಯತಸ್ತ್ರಯೀಂ ವಿದ್ಯಾಂ ಪ್ರಾವಿಶಂಸ್ತೇ ಛಂದೋಭಿರಾಚ್ಛಾದಯನ್ಯದೇಭಿರಾಚ್ಛಾದಯಂಸ್ತಚ್ಛಂದಸಾಂ ಛಂದಸ್ತ್ವಂ ॥ ೨ ॥

ಅ ॥ ಸಂಹರಿಸುವವರಿಂದ ಮೃತ್ಯು ಎನ್ನಿಸಿಕೊಂಡ ದುರ್ಗಾದೇವಿಗೆ ದೇವತೆಗಳು ಹೆದರಿದವರಾಗಿ ವೇದವಿದ್ಯೆಯನ್ನು ಮರೆಹೊಕ್ಕಿದರು. (ಅಂದರೆ ಪ್ರಣವ ಬಿಟ್ಟು ಕೇವಲ ಋಗಾದಿವೇದಗಳನ್ನು ಅಧ್ಯಯನ ಮಾಡುತ್ತಾ ನೇಪಾಮಿಮಾಸಿಗಳಾದ ದೇವತೆಗಳಲ್ಲಿ ಶ್ರೀಹರಿಯ ಉಪಾಸನಾದಿಗಳನ್ನು ಮಾಡಿದರು) ಆ ದೇವತೆಗಳು ವೇದಗಳಲ್ಲಿ ಶ್ರೀಹರಿಯನ್ನು ಪಾಸನೆ ಮಾಡಿದುದರಿಂದ ತಮ್ಮನ್ನು ಮರೆಮಾಡಿಕೊಂಡರು. ವೇದಗಳಿಂದ ತಮ್ಮನ್ನು ಮರೆಮಾಡಿಕೊಂಡದ್ರಿಂದಲೇ ವೇದಗಳಿಗೆ ಛಂದಸ್ ಎಂಬ ಹೆಸರು ॥ ೨ ॥

ಉ. ॥ ತಾನು ತತ್ರ ಮೃತ್ಯುರ್ಯಥಾ ಮತ್ಸ್ಯಮುದಕೇ ಪರಿಪಶ್ಯೇದೇವಂ ಪರ್ಯಪಶ್ಯದ್ಯಜಿ ಸಾಮ್ನಿ ಯಜುಷಿ ತೇಽನುವಿತ್ಕ್ಷ್ವೇರ್ಧ್ವಾ ಋಚಃ ಸಾಮ್ನೋ ಯಜುಷಃ ಸ್ವರಮೇವ ಪ್ರಾವಿಶನ್ ॥ ೩ ॥

ಅ ॥ ಪಕ್ಷಿವಿಶೇಷವು ನೀರಿನಲ್ಲಿದ್ದ ಮೀನನ್ನು ತಿನ್ನಲಿಕ್ಕೆ ನೋಡಿದಂತೆಯೇ ಮಾರಕಳಾದ ದುರ್ಗಾದೇವಿಯು ಋಕ್ ಸಾಮ ಯಜುರ್ವೇದವಿದ್ಯೆಗಳಲ್ಲಿ ಹೊಕ್ಕಿದ ದೇವತೆಗಳನ್ನು ನೋಡಿದಳು. ಉತ್ತಮರಾದ ಆ ದೇವತೆಗಳು ದುರ್ಗಾದೇವಿಯು ನಮ್ಮನ್ನು ನೋಡಿದಳೆಂದು ತಿಳಿದು ಹೆದರಿ ಋಗಾದಿಗಳನ್ನು ಬಿಟ್ಟು ಸ್ವರ ಎಂದು ಹೆಸರುಳ್ಳ ವಾಯುವಿನಲ್ಲಿರುವ, ಸ್ವರ ಎಂದು ಹೆಸರುಳ್ಳ ಪ್ರಣವದಲ್ಲಿ ಸ್ತುತಿಸಲ್ಪಡತಕ್ಕ ವಿಷ್ಣುವನ್ನು ಮರೆಹೊಕ್ಕಿದರು. ॥ ೩ ॥

ಟೀ -ಇದು ಹೇಗೆ ತಿಳಿಯುತ್ತದೆ ಎಂದರೆ -

ಉ. ॥ ಯದಾ ವಾ ಋಚಮಾಪ್ನೋತ್ಯೋಮಿತ್ಯೇವಾಭಿಸ್ವರತ್ಯೇವꣳ ಸಾಮ್ನೈನಂ ಯಜುರೇಷ ಉ ಸ್ವರೋ ಯದೇತದಕ್ಷರಮೇತದಮೃತಮಭಯಂ ತತ್ಪ್ರವಿಶ್ಯ ದೇವಾ ಅಮೃತಾ ಅಭವನ್ ॥ ೪ ॥

ಅ ॥ ಕೇವಲ ಋಗಾದಿಗಳಿಗೆ ಮೃತ್ಯುವಿನಿಂದ ರಕ್ಷಿಸಲಿಕ್ಕೆ ಶಕ್ತಿಯಿಲ್ಲದಿರುವುದರಿಂದಲೇ ಈಗಿನವರೂ ಋಗ್ವೇದವನ್ನು ಅಧ್ಯಯನಮಾಡುವಾಗ ಓಂ ಎಂಬ ಪ್ರಣವವನ್ನು ಹೇಳಿಕೊಂಡೇ ಅಧ್ಯಯನ ಮಾಡುತ್ತಾರೆ ಹೀಗೆ ಪ್ರಣವವನ್ನು ಹೇಳಿಕೊಂಡೇ ಸಾಮವೇದವನ್ನೂ ಯಜುರ್ವೇದವನ್ನೂ ಪಠಿಸುತ್ತಾರೆ. ಸರ್ವರ ಸಮೀಪದಲ್ಲಿರುವ ಸಾರವಿಲ್ಲದಿರುವ ಪರಬ್ರಹ್ಮನೇ ಸ್ವರ ಎಂಬ ಪ್ರಣವದಿಂದ ಹೇಳಲ್ಪಡತಕ್ಕವನು ಪರಬ್ರಹ್ಮನು ನಿತ್ಯಮುಕ್ತನು ಭಯವಿಲ್ಲದವನು, ಭಜಕರಿಗೆ ಅಭಯವನ್ನು ಕೊಡುವವನು ಹೀಗೆ ಶ್ರೀಹರಿಯನ್ನು ಉಪಾಸನೆಮಾಡಿ ದೇವತೆಗಳು ಮುಕ್ತರೂ ಭಯರಹಿತರೂ ಆದರು. ॥ ೪ ॥

ಉ. ॥ ಸ ಯ ಏತದೇವಂವಿದ್ವಾನಕ್ಷರಂ ಪ್ರಣೌತ್ಯೇತದೇವಾಕ್ಷರಮೇ ಸ್ವರಮಮೃತಮಭಯಂ ಪ್ರವಿಶತಿ ತತ್ಪ್ರವಿಶ್ಯ ಯದಮೃತಾ ದೇವಾಸ್ತದಮೃತೋ ಭವತಿ ॥ ಇತಿ ಚತುರ್ಥಃ ಖಂಡಃ ॥ ೩-೪ ॥ ॥ ೫ ॥

ಅ ॥ ಈ ಅಕ್ಷರ ಎಂಬ ಪರಬ್ರಹ್ಮನನ್ನು ಪ್ರಣವದ ಅರ್ಥಭೂತನೆಂದು ಉಪಾಸನೆಮಾಡಿ ಶ್ರೀಹರಿಯು ದೇವತೆಗಳಿಗೆ ಮೋಕ್ಷಾದಿಗಳನ್ನು ಕೊಡತಕ್ಕವನೆಂದು ತಿಳಿದು ಪ್ರಣವದಿಂದ ಸ್ತೋತ್ರ ಮಾಡುವವನು ಸ್ವರಪ್ರತಿಪಾದ್ಯನಾದ ಭಯರಹಿತನಾದ ಶ್ರೀಹರಿಯನ್ನು ಹೊಂದುತ್ತಾನೆ ದೇವತೆಗಳು ಶ್ರೀಹರಿಯ ಸಮೀಪಕ್ಕೆ ಹೋಗಿ ಮೃತ್ಯುವಿನ ಭಯವಿಲ್ಲದೆ ಮುಕ್ತರಾದರು ಹೀಗೆಯೇ ಅಧಿಕಾರಿಯೂ ದೇವತೆಗಳಂತೆಯೇ ಪರಬ್ರಹ್ಮನನ್ನು ಉಪಾಸನೆಮಾಡಿ ಮುಕ್ತನಾಗುತ್ತಾನೆ ॥ ೫ ॥

ಭಾ. ॥ (೧) ಸ್ವರತೇಸ್ತು ಸ್ವರೋ ವಿಷ್ಣುಸ್ತದ್ರತೇರ್ವಾಯುರುಚ್ಯತೇ । ವಾಯುಸ್ವರೇ ಸ್ವರಂ ವಿಷ್ಣುಮೋಮ್ಯಿಂ ಸಮುಪಾಸಿರೇ । ದೇವಾಸ್ತೇನಾಮೃತಂ ಪ್ರಾಪ್ತಾ ಮುಕ್ತ್ಯಾಖ್ಯಿಂ ಮೃತ್ಯುವರ್ಜಿತಾಃ ॥ (೨) ಮೂರಣಾನ್ಮೃತ್ಯುರಿತ್ಯುಕ್ತಾ ದುರ್ಗಾ ತದ್ಭಯತಃ ಸುರಾಃ । ಓಮಿತ್ಯುಪಾಸ್ಯ ತಂ ವಿಷ್ಣುಂ ಪರಮಾಮೃತಮಾಪಿರೇ ॥ ಇತಿ ಸಂಧ್ಯಾನೇ ॥ ಊರ್ಧ್ವಾ ಉತ್ತಮಾಃ ॥ ೧, ೨, ೩, ೪, ೫ ॥ ಇತಿ ಚತುರ್ಥಃ ಖಂಡಃ ॥ ೩–೪ ॥ ॥ ೧ ॥

ಅ ॥ (೧) ಸ್ವರಮಣನಾದುದರಿಂದಲೇ ವಿಷ್ಣುವು ಸ್ವರ ಎನಿಸುತ್ತಾನೆ. ಸರ್ವಸ್ವತಂತ್ರನಾದುದರಿಂದ ಸ್ವ ಎನ್ನಿಸಿಕೊಂಡ ವಿಷ್ಣುವಿನಲ್ಲಿ ಅಸಕ್ತಿಯಿರುವುದರಿಂದ ವಾಯುವು ಸ್ವರ ಎನ್ನಿಸುತ್ತಾನೆ. ಸ್ವರ ಎನ್ನಿಸಿಕೊಂಡ ವಾಯುವಿನಲ್ಲಿ ಓಂ ಎನ್ನಿಸಿಕೊಂಡ ಸ್ವರನಾಮಕ ವಿಷ್ಣುವನ್ನು ದೇವತೆಗಳು ಉಪಾಸನೆಮಾಡುತ್ತಾರೆ. ಆ ಉಪಾಸನೆಯಿಂದ ಮೃತ್ಯುವಿನ ಭಯವಿಲ್ಲದವರಾಗಿ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷವನ್ನು ಹೊಂದುತ್ತಾರೆ (೨) ದುರ್ಗಾದೇವಿಯು ಮರಣವನ್ನು ಹೊಂದಿಸುವುದರಿಂದ ಮೃತ್ಯು ಎನ್ನಿಸುತ್ತಾಳೆ. ದೇವತೆಗಳು ದುರ್ಗಾದೇವಿಗೆ ಹೆದರಿ ಓಂ ಎಂದು ಉಪಾಸನೆಮಾಡಿ ನಿತ್ಯಮುಕ್ತನಾದ ವಿಷ್ಣುವನ್ನು ಹೊಂದಿದರು. ಎಂದು ಸಂಧ್ಯಾನ ಎಂಬ ಗ್ರಂಥದಲ್ಲಿ ಹೇಳಿದೆ. ಉತ್ತಮರಾದ ದೇವತೆಗಳು (ಮೃತ್ಯುವಿನ ಭಯವಿಲ್ಲದೆ ಮುಕ್ತರಾದರು.) ॥ ೧, ೨, ೩, ೪, ೫ ॥ ೩–೪ ॥ ॥ ೧ ॥

ನಾಲ್ಕನೇ ಖಂಡವು ಮುಗಿಯಿತು.

ಏನೇ ಖಂಡವು

ಪೀ—ಎರಡನೇ ಖಂಡದಲ್ಲಿ ಉದ್ಗೀಥೋಪಾಸಕನಿಗೆ ಮೋಕ್ಷರೂಪ ಫಲವನ್ನು ಹೇಳಿರುತ್ತಾನೆ. ಈ ಖಂಡದಲ್ಲಿ ಅನೇಕ ಮುಕ್ಯಳು ಹುಟ್ಟುತ್ತಾರೆಂಬ ಫಲ ಹೇಳುತ್ತಾರೆ—

ಉ. ॥ ಅಥ ಖಲು ಯ ಉದ್ಗೀಥಃ ಸ ಪ್ರಣವೋ ಯಃ ಪ್ರಣವಃ ಸ ಉದ್ಗೀಥ ಇತ್ಯಸೌ ವಾ ಆದಿತ್ಯ ಉದ್ಗೀಥ ಏಷ ಪ್ರಣವ ಓಮಿತಿ ಹ್ಯೇಷ ಸ್ವರನ್ನೇತಿ ॥ ೧ ॥

ಅ ॥ ಶ್ರೀಹರಿಯು ಚೆನ್ನಾಗಿ ಗಾನಮಾಡಲ್ಪಡುವುದರಿಂದ ಉದ್ಗೀಥನೆನಿಸುವನು. ಸರ್ವೋತ್ಕೃಷ್ಟನು. ಸರ್ವರಿಗೆ ಪ್ರೇರಕನು, ಸರ್ವಾಶ್ರಯನು ಇವುಗಳಿಂದ ಪ್ರಣವ ಎಂದು ಹೆಸರುಳ್ಳವನಾಗಿ ಪ್ರಣವ ಎನ್ನಿಸಿಕೊಂಡ ವಾಯುವಿನಲ್ಲಿರುವವನು. ಪ್ರಣವ ಎಂಬ ವಾಯುವಿನಲ್ಲಿದ್ದವನೇ ಉದ್ಗೀಥನೆನಿಸುತ್ತಾನೆ, ಎಂಬುದು ಪ್ರಸಿದ್ಧವು. ಆದಿತ್ಯನಲ್ಲಿರತಕ್ಕ ಉದ್ಗೀಥನೆನಿಸಿಕೊಂಡ ಶ್ರೀಹರಿಯು ಆದಿತ್ಯನಲ್ಲಿರುವ ಪ್ರಣವ ಎನ್ನಿಸಿಕೊಂಡ ಮುಖ್ಯವಾಯುವಿನಲ್ಲಿ ಇರುವವನು. ಆದಿತ್ಯನಿಗೆ ನಿಯಾಮಕನಾದ ವಾಯುವಿನಲ್ಲಿರುವ ಉದ್ಗೀಥನೆಂಬ ಶ್ರೀಹರಿಯು (ಇತರಜನರೂ ಹೀಗೆಯೇ ಮಾಡಬೇಕೆಂದು ತಿಳಿಸಿಕೊಡುವದಕ್ಕಾಗಿ ತನ್ನನ್ನು) ಓಂ ಎಂದು ಜಪಿಸುತ್ತಾ ಸಂಚರಿಸುತ್ತಾನೆ. ಪ್ರಸಿದ್ಧವು. ॥ ೧ ॥

ಭಾ. ॥ (೧) ಆದಿತ್ಯಸಂಸ್ಥಿತೋ ವಾಯುಃ ಪ್ರಣವಸ್ತದ್ಗತೋ ಹರಿಃ । ಪ್ರಕೃಷ್ಟತ್ವಾಚ್ಚ ನೇತೃತ್ವಾದ್ಗತಿತ್ವಾದಖಿಲಸ್ಯ ಚ ॥ (೨) ಉದ್ಗೀಥ ಉಚ್ಚೈರ್ಗೇಯತ್ವಾತ್ಸ ಏವ ಪುರುಷೋತ್ತಮಃ ॥ ೧ ॥ ॥ ೧ ॥

ಅ ॥ (೧) ಆದಿತ್ಯನಲ್ಲಿರುವವನು ವಾಯುವು. ಆ ವಾಯುವಿನಲ್ಲಿದ್ದ ಶ್ರೀಹರಿಯು ಸರ್ವೋತ್ಕೃಷ್ಟನಾದುದರಿಂದಲೂ, ಸರ್ವರಿಗೆ ಪ್ರೇರಕನಾದುದರಿಂದಲೂ. ಸರ್ವರಿಗೆ ಆಶ್ರಯನಾದುದರಿಂದಲೂ ಪ್ರಣವ ಎನ್ನಿಸುತ್ತಾನೆ. (೨) ಪುರುಷೋತ್ತಮನಾದ ಆ ಶ್ರೀಹರಿಯೇ ಚೆನ್ನಾಗಿ ಗಾನಮಾಡಲ್ಪಡುವುದರಿಂದ ಉದ್ಗೀಥನೆನಿಸುತ್ತಾನೆ. ॥ ೧ ॥ ॥ ೧ ॥

ಪೀ—ಆದಿತ್ಯನಿಗೆ ನಿಯಾಮಕನಾದ ವಾಯುವಿನಲ್ಲಿರತಕ್ಕ ಶ್ರೀಹರಿಯನ್ನು ಉಪಾಸನೆಮಾಡಿದರೆ ಒಳ್ಳೆ ಮಗನು ಹುಟ್ಟುತ್ತಾನೆ. ಸೂರ್ಯನ ಕಿರಣಗಳಲ್ಲಿರತಕ್ಕ ವಾಯುವಿನಲ್ಲಿರತಕ್ಕ ಶ್ರೀಹರಿಯನ್ನು ಪಾಸನೆ ಮಾಡಿದರೆ ಬಹು ಮಕ್ಕಳು ಹುಟ್ಟುತ್ತಾರೆ. ಎಂಬುವಲ್ಲಿ ವಿಶ್ವಾಸ ಹುಟ್ಟುವದಕ್ಕಾಗಿ ಕಥೆ ಹೇಳುತ್ತಾರೆ—

ಉ ॥ ಏತಮು ಏವಾಹಮುಭ್ಗಾಸಿಷಂ ತಸ್ಮಾನ್ಮಮ ತ್ವನೇಕೋಽಸೀತಿ ಹ ಕೌಷೀತಕಿಃ ಪುತ್ರಮುವಾಚ ರಶ್ಮೀನಿಸ್ತ್ವಂ ಪರ್ಯಾವರ್ತಯತಾದ್ಬಹವೋ ವೈ ತೇ ಭವಿಷ್ಯಂತೀತ್ಯಧಿದೈವತಂ ॥ ೨ ॥

ಅ ॥ ಸೂರ್ಯನಿಗೆ ನಿಯಾಮಕನಾದ ಮುಖ್ಯಪ್ರಾಣನಲ್ಲಿರುವ, ಓಂ ಎಂದು ಜಪಿಸುತ್ತಿರುವ ಉದ್ಗೀಥನೆನಿಸಿಕೊಂಡ ಶ್ರೀಹರಿಯನ್ನೇ ಗಾನದಿಂದ ಸ್ತುತಿಸಿದೆನು. ಆದಕಾರಣ ಒಬ್ಬನನ್ನು ಉಪಾಸನೆ ಮಾಡಿದುದರಿಂದ ನನಗೆ ನೀನು ಒಬ್ಬ ಮಗನಾಗಿರುತ್ತಿ, ಎಂದು ಕೌಷೀತಕಿ ಎಂಬ ಮುನಿಯು ಮಗನಿಗೆ

ಹೇಳಿದನು. ಎಲೋ ಮಗನೇ ರಶ್ಮಿಗಳಲ್ಲಿರತಕ್ಕ ಪಾಯುವಿನೊಳಗಿರುವ ಭಗವದ್ರೂಪಗಳನ್ನು ಉಪಾಸನೆ ಮಾಡು. ಹೀಗೆ ಧ್ಯಾನಿಸತಕ್ಕ ನಿನಗೆ ಬಹುಮಕ್ಕಳು ಹುಟ್ಟುವರು. ಕೊನೆಗೆ ಮೋಕ್ಷವೂ ಲಭಿಸುವುದು. ಎಂದು ಮಗನಿಗೆ ಹೇಳಿದನು ಹೀಗೆ ಮುಕ್ಕಳನ್ನು ಪ್ರೇರಿಸಿಕೊಂಡಿರುವ ಉಪಾಸನೆಯು ಹೇಳಲ್ಪಟ್ಟಿತು ॥ ೨ ॥

ಉ. ॥ ಅಥಾಧ್ಯಾತ್ಮಂ ಯ ಏವಾಯಂ ಮುಖ್ಯಪ್ರಾಣಸ್ತಮುದ್ಗೀಥ-ಮುಪಾಸೀತೋಮಿತಿ ಹ್ಯೇಷ ಸ್ವರನ್ನೇತಿ ॥ ೩ ॥

ಅ ॥ ಈಗ ದೇಹದಲ್ಲಿರುವ ಮುಖ್ಯಪ್ರಾಣನ ಉಪಾಸನೆಯು ಫಲವು ಹೇಳಲ್ಪಡುತ್ತದೆ. ಶರೀರದಲ್ಲಿ ಯಾವ ಮುಖ್ಯಪ್ರಾಣನೋ ಅತನಲ್ಲಿ ಉದ್ಗೀಥನೆಂಬ ಶ್ರೇಷ್ಠರಿಯನ್ನು ಪಾಸನೆಮಾಡುತ್ತಾ ಗಾನದಿಂದ ಸ್ತೋತ್ರಮಾಡಿದನು. ಪ್ರಾಣನಲ್ಲಿರುವ ವಿಷ್ಣುವು ಓಂ ಎಂದು ಜಪಿಸುತ್ತಾ ಸಂಚರಿಸುತ್ತಾನೆ. ॥ ೩ ॥

ಉ. ॥ ಏತಮು ಏವಾಹಮಭ್ಯಗಾಸಿಷಂ ತಸ್ಮಾನ್ಮಮ ತ್ವಮೇಕೋಽ-ಸೀತಿ ಹ ಕೌಷೀತಕಿಃ ಪುತ್ರಮುವಾಚ ಪ್ರಾಣಾಂಸ್ತ್ವಂ ಭೂಮಾನಮುಭಿಗಾ-ಯತಾದ್ಬಹವೋ ವೈ ತೇ ಭವಿಷ್ಯಂತೀತಿ ॥ ೪ ॥

ಅ ॥ ಶರೀರದಲ್ಲಿ ಯಾವ ಪ್ರಾಣನೋ, ಆ ಪ್ರಾಣನಲ್ಲಿರುವ ಉದ್ಗೀಥನೆಂಬ ಶ್ರೇಷ್ಠರಿಯನ್ನು ಗಾನ ಮಂದ ಸ್ತುತಿಸಿದೆನು. ಆದಕಾರಣ ನನಗೆ ಸೀನೊನು ಮಗನಾಗಿರುತ್ತೆ. ಎಂದು ಕೌಷೀತಕಿಯು ಮಗ ನೊಡನೆ ಹೇಳಿದನು ಎಲೋ ಮಗನೇ ನಿನಗೆ ಬಹುಮಕ್ಕಳು ಹುಟ್ಟಬೇಕೆಂದು ಅಭಿಪ್ರಾಯವಿದ್ದರೆ ಇಂದ್ರಿಯಗಳೊಳಗೆ ಇರುವ ಮುಖ್ಯಪ್ರಾಣನಲ್ಲಿ ಅಂತರ್ಗತನಾದ ಗುಣಪೂರ್ಣನಾದ ಶ್ರೇಷ್ಠರಿಯನ್ನು ಚೆನ್ನಾಗಿ ಗಾನಮಾಡು ಎಂದನು. ॥ ೪ ॥

ಉ ॥ ಅಥ ಖಲು ಯ ಉದ್ಗೀಥಃ ಸ ಪ್ರಣವೋ ಯಃ ಪ್ರಣವಃ ಸ ಉದ್ಗೀಥ ಇತಿ ಹೋತೃಷದನಾದ್ಧೈವಾಪಿ ದುರುದ್ಗೀತಮನುಸಮಾಹರತೀತ್ಯ-ನುಸಮಾಹರತೀತಿ ॥ ಇತಿ ಪಂಚಮಃ ಖಂಡಃ ॥ ೩-೫ ॥ ॥ ೫ ॥

ಅ ॥ ಉದ್ಗೀಥನೆನಿಸಿಕೊಂಡ ಶ್ರೇಷ್ಠರಿಯೇ ಪ್ರಣವ ಎನ್ನಿಸುತ್ತಾನೆ. ಪ್ರಣವ ಎನ್ನಿಸಿಕೊಂಡವನೇ ಉದ್ಗೀಥನೆನಿಸುತ್ತಾನೆ, ಎಂದು ಹೋತೃಷದನ ಎಂಬ ಅಗ್ನಿಯಲ್ಲಿರತಕ್ಕ ಶ್ರೇಷ್ಠರಿಯನ್ನು ನಿಷಾಸನಾ ಮಾಡಿಯೇ ಪ್ರಮಾದದಿಂದುಂಟಾಗತಕ್ಕ ಸ್ವರಾದಿಗಳಲ್ಲಿದ ಉದ್ಗಾನವನ್ನು ತನ್ನ ಇಷ್ಟಕ್ಕೆ ಕಾರಣವನ್ನಾ ಗಿಯೇ ಮಾಡಿಕೊಳ್ಳುತ್ತಾನೆ. ॥ ೫ ॥

ಭಾ. ॥ (೧) ಸ ಏವ ಪ್ರಾಣಗೋ ದೇಹೇ ಓಮಿತ್ಯೇವ ಸದಾ ಜಪನ್ । ಏಕ್ಯೇಷ ಭಗವಾನ್ವಿಷ್ಣುರ್ಧ್ಯಾಯನ್ನೇಕಂ ತಮಕ್ಷರಂ । ಏಕಪುತ್ರೋ ಮುಕ್ತಿಮೇತಿ ॥ (೨) ಧ್ಯಾಯ-ನ್ಧ್ಯಾನೇಷು ರಶ್ಮಿಷು । ಬಹುಪುತ್ರೋ ವಿಮುಕ್ತಃ ಸ್ಯಾತ್ತಸ್ಮಾದ್ಧ್ಯಾಯೇತ್ತಥಾ ಪರಂ ॥ ಇತಿ ಚ ॥ (೩) ಪ್ರಾಣಸ್ಥಂ ಭೂಮಾನಮಭಿಗಾಯ ದುರುದ್ಗೀತಮನುಸಮಾಹರತಿ। ಅನುರೂಪ-ಮೇವ ಕರೋತಿ । ಹೋತೃಷದನಸ್ಥಮಗ್ನಿಸ್ಥಂ ಭಗವಂತಂ ಧ್ಯಾತ್ವಾ ॥ (೪) ಅನ್ಯಥಾ

ಗಾಶಬ್ದಂ ಮೋಕ್ಷಮುಗ್ನೌ ಧ್ಯಾತ್ವಾ ಹರಿಂ ಸರಂ । ಅಪಾಕರೋತಿ ತಸ್ಮಾತ್ತ್ವಂ ಧ್ಯಾಯೇ-ದೇವಾಗ್ನಿಗಂ ಸದಾ ॥ ಇತಿ ತ್ರೈವಿದ್ಯೇ ॥ ೨.೩,೪,೫ ॥ ಇತಿ ಪಂಚಮಃ ಖಂಡಃ ॥೩–೫॥

ಅ ॥ (೧) ದೇಹದಲ್ಲಿರತಕ್ಕ ಪ್ರಾಣಾಂತರ್ಗತನಾದ ಶ್ರೀಹರಿಯೇ (ಪ್ರಣವ ಎಂದೂ ಉದ್ಗೀಥ ಎಂದೂ ಅನ್ನಿಸುತ್ತಾನೆ) ಶ್ರೀಹರಿಯು (ಜೀವಿ ಜನರ ಶಿಕ್ಷಣಾರ್ಥ) ಓಂ ಎಂದೇ ಯಾವಾಗಲೂ ತನ್ನನ್ನೇ ಜಪಿಸುತ್ತ ಸಂಚರಿಸುತ್ತಾನೆ. ನಾಶರಹಿತವಾದ ಒಂದು ಭಗವದ್ರೂಪವನ್ನು ಧ್ಯಾನಿಸುವವನು ಒಬ್ಬ ಮಗನುಳ್ಳವನಾಗಿ ಮೋಕ್ಷವನ್ನು ಹೊಂದುತ್ತಾನೆ (೨) ಸೂರ್ಯನ ಕಿರಣಗಳಲ್ಲಿ ಯಾವ ಮುಖ್ಯ ವಾಯು-ರೂಪಗಳೋ ಅವುಗಳಲ್ಲಿರತಕ್ಕ ಭಗವದ್ರೂಪಗಳನ್ನು ಧ್ಯಾನಿಸುವವನು ಒಹುಮಕ್ಕಳುಗಳುಳ್ಳವನಾಗಿ ಮೋಕ್ಷವನ್ನು ಹೊಂದುವನು. ಅದಕಾರಣ ಹಾಗೆಯೇ ಶ್ರೀಹರಿಯನ್ನು ಧ್ಯಾನಿಸಬೇಕು. (ಅಂದರೆ ಸೂರ್ಯ, ಕಿರಣ, ದೇಹ, ಇಂದ್ರಿಯಗಳಲ್ಲಿ ಮುಖ್ಯಸ್ಥಾನರೂಪಗಳೂ ಅವುಗಳಲ್ಲಿ ಸರ್ವೋತ್ತಮನಾದ ಶ್ರೀಹರಿಯೂ ಇವ್ವಾನೆಂದು ಧ್ಯಾನಿಸಬೇಕು.) (೩) ಇಂದ್ರಿಯಗಳಲ್ಲಿರತಕ್ಕ ಗುಣಪೂರ್ಣನಾದ ಶ್ರೀಹರಿಯನ್ನು ಗಾನವಮಾಡು. ಸ್ವರಾದಿಗಳಲ್ಲಿದ ಗಾನವನ್ನು ಅನುರೂಪವನ್ನಾಗಿಯೇ ಮಾಡುತ್ತಾನೆ. ಅಂದರೆ, ಹೋತೃ (ಹೋಮ ಮಾಡುವ) ಗಳಿಗೆ ಆಶ್ರಯವಾದ ಅಗ್ನಿಯಲ್ಲಿರತಕ್ಕ ಶ್ರೀಭಗವಂತನನ್ನು ಧ್ಯಾನಿಸಿ ಪ್ರತಿಕೂಲವಾಗದಿದ್ದಹಾಗೆ ಮಾಡುತ್ತಾನೆ. (೪) ವಿಪರೀತವಾದ (ಅಂದರೆ ಸ್ವರಾದಿಗಳಲ್ಲಿದ) ಗಾನದಿಂದುಂಟಾದ ದೋಷವನ್ನು ಅಗ್ನ್ಯಂತರ್ಗತನಾದ ಸರ್ವೋತ್ತಮನಾದ ಶ್ರೀಹರಿಯನ್ನು ಧ್ಯಾನಮಾಡಿ ಕಳೆದುಕೊಳ್ಳುತ್ತಾನೆ. ಆದಕಾರಣ ಸದಾ ಅಗ್ನ್ಯಂತರ್ಗತನಾದ ಶ್ರೀಹರಿಯನ್ನು ಧ್ಯಾನಿಸಬೇಕೆಂದು ತ್ರೈವಿದ್ಯ ಎಂಬ ಗ್ರಂಥದಲ್ಲಿದೆ. ॥ ೨. ೩. ೪. ೫ ॥ ೩–೫ ॥ ॥ ೧ ॥

ಐದನೇ ಖಂಡವು ಮುಗಿಯಿತು.

೬ನೇ ಖಂಡವು

೫–ನೇ ಖಂಡದಲ್ಲಿ ಸಾಮಗಳು ಶ್ರೀಹರಿಯ ಪರಿವಾರಗಳಾದುದರಿಂದ ಅವುಗಳನ್ನು ಪಾಸನೆಮಾಡುತ್ತಾ ಅವರಿಂದ ಕೂಡಿದ ಉದ್ಗೀಥನ ಉಪಾಸನೆಯನ್ನು ಹೇಳುತ್ತಾರೆ—

ಉ. ॥ ಇಯಮೇವರ್ಗಗ್ನಿಃ ಸಾಮ ತದೇತದೇತಸ್ಯಾಮೃಚ್ಯಧ್ಯೂಢಂ ಸಾಮ ತಸ್ಮಾದೃಚ್ಯಧ್ಯೂಢಂ ಸಾಮ ಗೀಯತೇ ಇಯಮೇವ ಸಾಽಗ್ನಿರಮಸ್ತ-ತ್ಸಾನು ॥ ೧ ॥

ಅ ॥ ಋಕ್ಕಿಗೆ ಅಭಿಮಾನಿನಿಯಾದ ಋಕ್ ಎಂದು ಹೆಸರುಳ್ಳ ಸರಸ್ವತಿಯು ಭೂಲೋಕದಲ್ಲಿ ಇರುವವಳು. ಸಾಮಕ್ಕೆ ಅಭಿಮಾನಿಯಾದ ಸಾಮ ಎಂದು ಹೆಸರುಳ್ಳ ವಾಯುವು ಅಗ್ನಿಯಲ್ಲಿರುವವನು. ಅಗ್ನಿಯಲ್ಲಿ ಅಂತರ್ಗತವಾದ ಅಗ್ನಿಯೆಂದು ಹೆಸರುಳ್ಳ ಸಾಮವು ಪೃಥಿವ್ಯಂತರ್ಗತವಾದ ಋಗಭಿಮಾನಿನಿಯಾದ ಸರಸ್ವತಿಯಲ್ಲಿ ಆಶ್ರಿತವಾಗಿದೆ. ಆದುದರಿಂದಲೇ ಸಾಮಗಾನ ಮಾಡುವವರಿಂದ ಋಕ್ಕನ್ನು ಆಶ್ರಯಿಸುತ್ತಿರುವ ಬಾಹ್ಯಸಾಮವು ಗಾನಮಾಡಲ್ಪಡುತ್ತದೆ. (ಹೀಗೆ ಪ್ರತ್ಯೇಕವಾಗಿ ಋಕ್ ಸಾಮರೆನ್ನಿಸಿದ ಸರಸ್ವತೀ ವಾಯುಗಳು ಪೃಥಿವ್ಯಗ್ನಿಗಳಲ್ಲಿ ಇದ್ದಾರೆಂದು ಮಹಿಮೆಯು ಹೇಳಲ್ಪಟ್ಟಿತು. ಈಗ ಸರಸ್ವತೀ ವಾಯು ಇವ್ವರೂ ಕೂಡಿದೇ ಒಂದೇ ಶರೀರದಿಂದ ಅರ್ಧನಾರೀನರರೂಪರಾಗಿ ಸಾಮ ಎಂಬ ಹೆಸರುಳ್ಳವರಾಗಿ ಇರುತ್ತಾರೆ. ಅವರಲ್ಲಿ ಸಾ ಎಂಬುದು ಸರಸ್ವತೀಭಾಗವು ಅಮ ಎಂಬುದು ವಾಯು

ಭಾಗವು. ಈ ಭಾಗವೂ ಪೃಥಿವ್ಯಗ್ನಿಗಳಲ್ಲಿ ಇದೆ ಎನ್ನುತ್ತಾರೆ—) ಪೃಥಿವಿಯಲ್ಲಿರುವ ಸರಸ್ವತಿಯು ಸಾ ಎಂದೂ, ಅಗ್ನಿಯಲ್ಲಿರುವ ವಾಯುವು ಅಮ ಎಂದೂ ಅನ್ನಿಸುತ್ತಾನೆ. ಅವರಿಬ್ಬರು ಸೇರಿ ಸಾಮ ಎನ್ನಿಸುತ್ತಾರೆ. ॥ ೨ ॥

ಉ. ॥ ಅಂತರಿಕ್ಷಮೇವರ್ಗ್ಯಾಯುಃ ಸಾಮ ತದೇತದೇತಸ್ಯಾಮೃಚ್ಯ-ಧ್ಯೂಢೇ ಸಾಮ ತಸ್ಮಾದೃಚ್ಯಧ್ಯೂಢೇ ಸಾಮ ಗೀಯತೇಽಂತರಿಕ್ಷಮೇವ ಸಾ ವಾಯುರಮಸ್ತತ್ಸಾಮ ॥ ೨ ॥

ಅ ॥ ಅಂತರಿಕ್ಷಂ=ಅಂತರಿಕ್ಷಲೋಕದಲ್ಲಿರುವ ಸರಸ್ವತೀದೇವಿಯು. ವಾಯುಃ=ಧೂತ (ಬಾಹ್ಯ) ವಾಯುವಿನಲ್ಲಿರುವ ಪ್ರಾಣನು..... ॥ ೨ ॥

ಉ. ॥ ದ್ಯೌರೇವ ಋಗಾದಿತ್ಯಃ ಸಾಮ ತದೇತದೇತಸ್ಯಾಮೃಚ್ಯಧ್ಯೂ-ಢೇ ಸಾಮ ತಸ್ಮಾದೃಚ್ಯಧ್ಯೂಢೇ ಸಾಮ ಗೀಯತೇ ದ್ಯೌರೇವ ಸಾ ಆದಿತ್ಯೋ-ಽಮಸ್ತತ್ಸಾಮ ॥ ೩ ॥

ಅ ॥ ದ್ಯೌಃ=ದ್ಯುಲೋಕದಲ್ಲಿರುವ ಸರಸ್ವತಿಯು,.....ಆದಿತ್ಯಃ=ಆದಿತ್ಯನಲ್ಲಿರುವ ಪ್ರಾಣನು.... ॥ ೩ ॥

ಉ. ॥ ನಕ್ಷತ್ರಾಣ್ಯೇವ ಋಕ್ಚಂದ್ರಮಾಃ ಸಾಮ ತದೇತದೇತಸ್ಯಾಮೃ-ಚ್ಯಧ್ಯೂಢೇ ಸಾಮ ತಸ್ಮಾದೃಚ್ಯಧ್ಯೂಢೇ ಸಾಮ ಗೀಯತೇ ನಕ್ಷತ್ರಾಣ್ಯೇವ ಸಾ ಚಂದ್ರಮಾ ಅಮಸ್ತತ್ಸಾಮ ॥ ೪ ॥

ಅ ॥ ನಕ್ಷತ್ರಾಣಿ=ನಕ್ಷತ್ರಗಳಲ್ಲಿರತಕ್ಕ ಸರಸ್ವತಿಯು. ಚಂದ್ರಮಾಃ=ಚಂದ್ರನಲ್ಲಿರುವ ಪ್ರಾಣನು.... ॥ ೪ ॥

ಉ. ॥ ಅಥ ಯದೇತದಾದಿತ್ಯಸ್ಯ ಶುಕ್ಲಂ ಭಾಃ ಸೈವ ಋಗಥ ಯ-ನ್ನೀಲಂ ಪರಃ ಕೃಷ್ಣಂ ತತ್ಸಾಮ ತದೇತದೇತಸ್ಯಾಮೃಚ್ಯಧ್ಯೂಢೇ ಸಾಮ ತ-ಸ್ಮಾದೃಚ್ಯಧ್ಯೂಢೇ ಸಾಮ ಗೀಯತೇಽಥ ಯದೇವೈತದಾದಿತ್ಯಸ್ಯ ಶುಕ್ಲಂ ಭಾಃ ಸೈವ ಸಾಽಥ ಯನ್ನೀಲಂ ಪರಃ ಕೃಷ್ಣಂ ತದಮಸ್ತಸ್ಮಾತ್ಸಾಮ ॥ ೫ ॥

ಅ ॥ ಸೂರ್ಯನ ಬಿಳಿಪು ಪ್ರಕಾಶದಲ್ಲಿರತಕ್ಕ ಸರಸ್ವತಿಯು ಋಕ್ ಎನಿಸುತ್ತಾಳೆ ಸೂರ್ಯನ ಅತಿಕಪ್ಪಾದ ನೀಲವಾದ ತೇಜಸ್ಸಿನಲ್ಲಿರತಕ್ಕ ಪ್ರಾಣನು ಸಾಮ ಎನಿಸುತ್ತಾನೆ..... ॥ ೫ ॥

ಪೀ—ಸರಸ್ವತೀ ಪ್ರಾಣಾದಿಂದಲೂ ಸೇವಿಸಲ್ಪಡತಕ್ಕ ಉದ್ಗೀಥನೆಂಬ ಶ್ರೀಹರಿಯ ಮಹಿಮೆಯನ್ನು ಹೇಳುತ್ತಾರೆ—

* ಇದುವರೆಗಾಗಿರುವ ಸಾಲು ಪಾಠಗಳಲ್ಲಿಯೂ ಹಿಂದಿನಂತೆ ಅರ್ಥ ಇಟ್ಟುಕೊಳ್ಳಬೇಕು.

ಉ. ॥ ಅಥ ಯ ಏಸೋಽಂತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ ಹಿರಣ್ಮಶ್ಮಶ್ರುರ್ಹಿರಣ್ಯಕೇಶ ಆಪ್ರಣಖಾತ್ಸರ್ವ ಏವ ಸುವರ್ಣಃ ॥ ೬ ॥

ಅ ॥ ಸೂರ್ಯಾಂತರ್ಗತಸ್ಥ ಸರಸ್ವತೀ ವಾಯುಗಳ ಒಳಗೆ ಇತರರಿಂದ ವಿಲಕ್ಷಣನಾದ ಪೂರ್ಣಾನಂದ ಸ್ವರೂಪನಾದ ಅಥವಾ ಸುವರ್ಣಾದಿಗೆ ವರ್ಣವುಳ್ಳ ಪುರುಷನು ಜ್ಞಾನವೃಷ್ಟಿಯಿಂದ ಕಾಣಲ್ಪಡುತ್ತಾನೆ. (ಶ್ರೀಹರಿಯಂತೆಯೇ ಅವನ ಕೈಕಾಲು ಮೊದಲಾದ ಅವಯವಗಳೂ ಪೂರ್ಣ ಸುಖಸ್ವರೂಪಗಳೆನ್ನುತ್ತಾರೆ.) ಶ್ರೀಹರಿಯು ಕೇವಲ ಸುಖಸ್ವರೂಪವಾದ ಗಡ್ಡ ಮೀಸೆಯನು. ಪೂರ್ಣಾನಂದ ಸ್ವರೂಪವಾದ ಕೂದಲುಗಳುಳ್ಳವನು. ನಿಗುರು ಅರಂಭಿಸಿ (ಅಥವಾ ಬಿಗುರುಪರ್ಯಂತ) ಎಲ್ಲಾ ಅವಯವವೂ ಪೂರ್ಣ ಸುಖ ಸ್ವರೂಪನು ॥ ೬ ॥

ಉ. ॥ ತಸ್ಯ ಯಥಾ ಕಪ್ಯಾಸಂ ಪುಂಡರೀಕಮೇವಮಕ್ಷಿಣೀ ತಸ್ಯೋದಿತಿನಾಮ ಸ ಏಷ ಸರ್ವೇಭ್ಯಃ ಪಾಪ್ಮಭ್ಯ ಉದಿತ ಉದೇತಿ ಹ ವೈ ಸರ್ವೇಭ್ಯಃ ಪಾಪ್ಮಭ್ಯೋ ಯ ಏವಂ ವೇದ ॥ ೭ ॥

ಅ ॥ ಆದಿತ್ಯಾಂತರ್ಗತರಾದ ಸರಸ್ವತೀ ವಾಯುಗಳಲ್ಲಿರುವ ಪುರುಷನಿಗೆ, ನೀರನ್ನು ಕುಡಿಯುತ್ತಿರುವ ತಾವರೆಯು ಹೇಗಿರುವ, (ಅಂದರೆ ಬಾಡದಿರುವ, ಕೆಂಪು ಕಮಲಪುಷ್ಪದಂತೆ, ಕಣ್ಣುಗಳು ಇವೆ. (ಅಂದರೆ, ಕಮಲದಳದಂತೆಯೇ ವಿಶಾಲಗಳಾದ ಕಣ್ಣುಗಳುಳ್ಳವನು.) ಆದಿತ್ಯಾಂತರ್ಗತರಾದ ಸರಸ್ವತೀ ವಾಯುಗಳೊಳಗೆ ಇರತಕ್ಕ ಪುರುಷನು ಎಲ್ಲಾ ಪಾಪಗಳಿಂದಲೂ ಬಿಡಲ್ಪಟ್ಟವನಾದುದರಿಂದ (ಅಂದರೆ ಪಾಪ ಸಂಪರ್ಕವಿಲ್ಲದವನಾದುದರಿಂದ) ಉತ್ ಎಂದು ಗೋಪ್ಯ ನಾಮಧೇಯವು. (ಹೀಗೆ ತಿಳಿದುಕೊಂಡವನಿಗೆ ಫಲ ಹೇಳುತ್ತಾರೆ-) ಯಾವ ಪಾಪವೂ ಇಲ್ಲದವನಾದುದರಿಂದ ಶ್ರೀಹರಿಗೆ ಉತ್ ಎಂದು ಹೆಸರು, ಎಂದು ತಿಳಿದವನು ಯಾವ ಪಾಪವೂ ಇಲ್ಲದವನಾಗುತ್ತಾನೆ. ಶ್ರುತಿಸ್ಮೃತಿಪ್ರಸಿದ್ಧ. ॥ ೭ ॥

ಉ. ॥ ತಸ್ಯ ಋಕ್ಚ ಸಾಮ ಚ ಗೇಷ್ಣೌ ತಸ್ಮಾದುದ್ಗೀಥಸ್ತಸ್ಮಾತ್ತ್ವೇವೋದ್ಗಾತೈತಸ್ಯ ಹಿ ಗಾತಾ ಸ ಏಷ ಯೋ ಚಾಮುಷ್ಮಾತ್ಪರಾಂಚೋ ಲೋಕಾಸ್ತೇಷಾಂ ಚೇಷ್ಟೇ ದೇವಕಾಮಾನಾಂ ಚೇತ್ಯಧಿದೈವತಂ ॥ ಇತಿ ಷಷ್ಠಃ ಖಂಡಃ ॥ ೩-೭ ॥ ॥ ೮ ॥

ಅ ॥ ಆದಿತ್ಯಾಂತರ್ಗತರಾದ ಸರಸ್ವತೀ ವಾಯುಗಳಲ್ಲಿರತಕ್ಕ ಶ್ರೀಹರಿಗೆ ಋಗಭಿಮಾನಿನಿಯಾದ ಸರಸ್ವತಿಯೂ, ಸಾಮಾಭಿಮಾನಿಯಾದ ವಾಯುವೂ (ಋಗ್ವೇದ ಸಾಮವೇದಗಳಿಂದ) ಗಾಯನ ಮಾಡುವರು ಸರಸ್ವತೀಪ್ರಾಣರು ಶ್ರೀಹರಿಯು ಸರ್ವೋತ್ತಮನೆಂದು ಗಾನಮಾಡುವುದರಿಂದ ಆದಿತ್ಯನಲ್ಲಿ ಅಂತರ್ಗತನಾದ ಶ್ರೀಹರಿಯು ಉದ್ಗೀಥ ಎನಿಸುತ್ತಾನೆ ಸರಸ್ವತೀಪ್ರಾಣರು ಸರ್ವದಾ ಶ್ರೀಹರಿಯನ್ನು ಗಾನಮಾಡುವುದರಿಂದಲೇ ಗಾನವಾಡುವವರೆಲ್ಲರೂ ಶ್ರೀಹರಿಯನ್ನೇ ಗಾನಮಾಡುತ್ತಾರೆಂದು ತಿಳಿಯಬೇಕು. ಪ್ರಸಿದ್ಧ. (ಆ ಶ್ರೀಹರಿಯ ಸಾಮರ್ಥ್ಯವನ್ನೇ ಹೇಳುತ್ತಾರೆ—) ಸೂರ್ಯಾಂತರ್ಗತ ಸರಸ್ವತೀ ವಾಯುಗಳಲ್ಲಿರತಕ್ಕ ಉದ್ಗೀಥನೆಂಬ ಶ್ರೀಹರಿಯು ಅಂತರಿಕ್ಷಲೋಕದಿಂದ ಮೇಲಿನ ಸ್ವರ್ಗಾದಿಲೋಕಗಳಿಗೂ ಅಂತರಿಕ್ಷಲೋಕಕ್ಕೆ ಅಧಿಪತಿಯಾಗಿರುತ್ತಾನೆ ದೇವತೆಗಳಿಗೂ ನಿಯಾಮಕನು. ದೇವತೆಗಳಿಗೆ

ಇಷ್ಟನನ್ನು ಕೊಡಲಿಕ್ಕೂ ಸಮರ್ಥನಾಗಿರುತ್ತಾನೆ ಹೀಗೆ ಋಕ್ ಸಾಮ ಉದ್ಗೀಥದ ಸ್ವರೂಪವು ಹೇಳಲ್ಪಟ್ಟಿತು ॥ ೮ ॥

ಟೀ—(1) ಇಯಮೇವ ಋಕ್, ಅಗ್ನಿಃ ಸಾಮ, (2) ಅಂತರಿಕ್ಷಮೇವ ಋಕ್, ವಾಯುಃ ಸಾಮ, (3) ದ್ಯೌರೇವ ಋಕ್, ಆದಿತ್ಯಃ ಸಾಮ, (4) ನಕ್ಷತ್ರಾಣ್ಯೇವ ಋಕ್, ಚಂದ್ರಮಾಃ ಸಾಮ, (5) ಅಥ ಯದೇತತ್ ಆದಿತ್ಯಸ್ಯ ಶುಕ್ಲಂ ಭಾಃ ಸೈವ ಋಕ್, ಅಥ ಯನ್ನೀಲಂ ಪರಃ ಕೃಷ್ಣಂ ತತ್ಸಾಮ, ಎಂಬ ಏಮ ವಾಕ್ಯಗಳಿಗೆ ಅರ್ಥ ಹೇಳುತ್ತಾರೆ --

ಭಾ. ॥ (೧) ಅಗ್ನೀರಸೂರ್ಯನೀಲೇಷು ವಾಯುಸ್ಥಃ ಸಾಮದೇವತಾ । ಋರ್ವೀ-ವಿಯದ್ದ್ಯುಶುಕ್ಲೇಷು ಋಗ್ದೇವೀಸ್ಥಾ ಸರಸ್ವತೀ ॥ (೨) ಸೇತಿ ಭಾರ್ಯಾ ಹಿ ವಾಗ್ದೇವೀ ಪ್ರಾಣೋಽಮುಃ ಪತಿರೀರಿತಃ । ಏವಂ ತೌ ಸಾಮನಾಮಾನಾವುಭಾವೇತಾವುದಾಹೃತೌ ॥ (೩) ಅತೋ ಹಿ ಸಾಮವೇದೋಽಯಂ ಋಕ್ಸಾಮಾತ್ಮಕ ಈರಿತಃ ॥ (೪) ವಾಗಾದಿಷ್ವೇವ-ಮೇವೈತೌ ವಾಕ್ಪ್ರಾಣೌ ಸರ್ವದಾ ಸ್ಥಿತೌ ॥ (೫) ತಯೋರಂತಃಸ್ಥಿತೋ ವಿಷ್ಣುರ್ಗಾಯಕೌ ತಸ್ಯ ತಾವುಭೌ । ಋಕ್ಸಾಮಭ್ಯಾಂ ಸ ಉನ್ನೀಯಮಾನಃ ಪಾಶ್ಚೋದ್ಗಶ್ಚೋಚ್ಚ ಏವ ಚ ॥ ಇತ್ಯಾದಿ ಸತ್ಕೃತ್ಯೇ ॥ ೯ ॥

ಆ ॥ (೧) ಸಾಮಕ್ಕೆ ದೇವತೆಯಾದ ವಾಯುವು ಅಗ್ನಿ, ವಾಯು, ಸೂರ್ಯ, ಚಂದ್ರ, ನೀಲ (ಅತ್ಯಂತ ಕೃಷ್ಣ) ಗಳಲ್ಲಿ ಇರುತ್ತಾನೆ ಋಗಭಿಮಾನಿನಿಯಾದ ಸರಸ್ವತಿಯು ಪೃಥಿವಿ, ಅಂತರಿಕ್ಷ, ಸ್ವರ್ಗಲೋಕ, ನಕ್ಷತ್ರ, ಬೇರೆಪ್ರಕಾರ ಇವುಗಳಲ್ಲಿ ಇರುತ್ತಾಳೆ (೨) ಇಯಮೇವ ಸಾ ಅಗ್ನಿರಮಃ ತತ್ಸಾಮ ಇದುಮೊದಲಾದ ಏಮ ವಾಕ್ಯಗಳಿಗೆ ಅರ್ಥ ಹೇಳುತ್ತಾರೆ—) ವಾಗಭಿಮಾನಿಯಾದ ಪ್ರಾಣನ ಹೆಂಡತಿಯಾದ ಸರಸ್ವತಿಯು ಸಾ ಎಂದೂ, ಭಾರತೀಪತಿಯಾದ ಮುಖ್ಯ ಪ್ರಾಣನು ಅಮಃ ಎಂದೂ ಎನಿಸುತ್ತಾರೆ ಹೀಗೆ ಈ ಭಾರತೀಪ್ರಾಣರಿಬ್ಬರು ಸಾಮ ಎನಿಸುತ್ತಾರೆ. (೩) (ತಸ್ಮಾದೃಚ್ಯಧ್ಯೂಢಂ ಸಾಮ ಗೀಯತೇ ಎಂಬೀ ಏಮ ವಾಕ್ಯಗಳಿಗೆ ಅರ್ಥ ಹೇಳುತ್ತಾರೆ—) ಸಾಮವೇದಕ್ಕೆ ಅಭಿಮಾನಿಯಾದ ಮುಖ್ಯಪ್ರಾಣನು ಅಗ್ನ್ಯಾದಿಗಳಲ್ಲಿಯೂ ಋಗ್ವೇದಕ್ಕೆ ಅಭಿಮಾನಿನಿಯಾದ ಸರಸ್ವತಿಯು ಪೃಥಿವಿ ಮೊದಲಾದ ಲೋಕಗಳಲ್ಲಿಯೂ, ಸಾಮವು ಋಕ್ಕಿನಲ್ಲಿರುವುದರಿಂದ ಆಶ್ರಿತವಾಗಿದ್ದುದರಿಂದಲೇ ಸಾಮವೇದವು ಋಕ್ಸಾಮವೆನಿಸಿಸುವುದು (೪) (ಅಧ್ಯಾತ್ಮಂ ವಾಗೇವಋಕ್ ಪ್ರಾಣಃ ಸಾಮ ಇದುಮೊದಲಾದ ಏನೇ ಐದಾದಲ್ಲಿರುವ ನಾಲ್ಕು ವಾಕ್ಯಗಳಿಗೆ ಅರ್ಥ ಹೇಳುತ್ತಾರೆ—) ಹೀಗೆಯೇ ಭಾರತೀಮುಖ್ಯಪ್ರಾಣರು ವಾಕ್, ಪ್ರಾಣ, ಚಕ್ಷುಸ್ಸು, ಅಕ್ಷ, ಶ್ರೋತ್ರ, ಮನಸ್ಸು, ಶುಕ್ಲ, ನೀಲ ಇವುಗಳಲ್ಲಿ ಸರ್ವದಾ ಇರುತ್ತಾರೆ (೫) (ಯ ಏಷೋಽಂತರಾದಿತ್ಯೇ ಹಿರಣ್ಮಯಃ । ಯ ಏಷೋಽಂತರಕ್ಷಿಣಿ ಎಂಬ ಎರಡು ವಾಕ್ಯಗಳಿಗೆ ಅರ್ಥ ಹೇಳುತ್ತಾರೆ—) ಶ್ರೀವಿಷ್ಣುವೆ, ಆದಿತ್ಯ, ಚಕ್ಷುಸ್ಸು, ಇವುಗಳಲ್ಲಿರತಕ್ಕ ಮುಖ್ಯಪ್ರಾಣ ಭಾರತಿಯಜೊಳಗೆ ಇರುವವನು (ತಸ್ಯರ್ಕ್ಸ ಸಾಮ ಚ ಗೇಹ್ಯೌ ಎಂಬ ವಾಕ್ಯಕ್ಕೆ ಅರ್ಥ ಹೇಳುತ್ತಾರೆ...) ಆ ಭಾರತೀಮುಖ್ಯಪ್ರಾಣರಿಬ್ಬರು ಋಗ್ವೇದ ಸಾಮವೇದಗಳಿಂದ ಆ ಶ್ರೀಹರಿಯನ್ನು ಗಾನಮಾಡುತ್ತಿರುತ್ತಾರೆ (ತಸ್ಮೋದಿತಿನಾಮ ಎಂಬ ವಾಕ್ಯದ ಅರ್ಥ ಹೇಳುತ್ತಾರೆ---) ಆ ಶ್ರೀಹರಿಗೆ ಯಾವ ಪಾಪವು ಇಲ್ಲ ಸರ್ವೋತ್ತಮನು, ಆದುದರಿಂದ ಉತ್ ಎನ್ನಿಸುತ್ತಾನೆ, ಇದುಮೊದಲಾದ ಪ್ರಮೇಯವು ಸತ್ಕೃತ್ಸ ಎಂಬ ಗ್ರಂಥದಲ್ಲಿ ಇದೆ ॥ ೧೦ ॥

ಟೀ—ತಸ್ಯ ಯಥಾ ಕಪ್ಯಾಸಂ ಪುಂಡರೀಕಂ ಎಂಬ ವಾಕ್ಯಕ್ಕೆ ಅರ್ಥ ಹೇಳುತ್ತಾರೆ—

ಭಾ. ॥ (೧) ಕಸ್ಯಾಸರಕ್ತಪದ್ಮಾಕ್ಷಃ ಸೂರ್ಯಗರ್ಭಾಕ್ಷಿಗರ್ಭ ಸಃ । ಗಾಯಕಸ್ತಸ್ಯ ಪಿಙ್ಗೋರ್ಯಃ ಸ ಸ್ವರ್ಗಾಂಶ್ಚ ನೃಲೋಕಗಾನ್ । ಕಾಮಾನ್ ದದ್ಯಾನ್ನರಶ್ಚೈತ್ಸ್ಯಾತ್ ಸುಶಾಸ್ತಾಂ ಚ ನೃಕಾಮಪಿ ॥ ಮೋಕ್ಷದೋ ಯದಿ ವಾಯುಃ ಸ್ಯಾನ್ಮುಖ್ಯೋದ್ಗಾತಾ ತತೋಽಖಿಲಃ । ಇತಿ ಚ ॥ (೨) ತಸ್ಮಾದುದ್ಗೀಥ ಉಚ್ಚೈಃಸೌ ಗಾಯತೇ ಚ । ಇತಿ ॥ ೧, ೨, ೩, ೪, ೫, ೬, ೭, ೮ ॥ ಇತಿ ಪಷ್ಠಃ ಖಂಡಃ ॥ ೩–೬ ॥ ೨ ॥

ಅ ॥ (೧) ಶ್ರೀಹರಿಯು ನೀರನ್ನು ಕುಡಿಯುತ್ತಿರುವ ನಾಳ (ತಾವರೆಯ ದಂಡು) ಸಂಬಂಧಿ ಯಾಗಿ (ಅಂದರೆ ಬಾಡದಿರುವ) ಕೆಂಪು ತಾವರೆಯಂತೆ ಕಣ್ಣುಗಳುಳ್ಳವನು, ಸೂರ್ಯ ಮತ್ತು ಕಣ್ಣುಗಳಲ್ಲಿ ಮನವನು, ಅಂತಹ ವಿಷ್ಣುವನ್ನು ಗಾನಮಾಡುವವನು ಮನುಷ್ಯನಾಗಿದ್ದರೆ ಅತನಿಗೆ ಶ್ರೀಹರಿಯು ಸ್ವರ್ಗ ಲೋಕ ಭೂಲೋಕಗಳಲ್ಲಿರುವ ಅಭೀಷ್ಟಗಳನ್ನು ಕೊಡುತ್ತಾನೆ. ಉಪಾಸಕನು ಮುಖ್ಯಪ್ರಾಣನಾಗಿದ್ದರೆ— ಅತನು ದೇವತೆಗಳಿಗೂ ಮನುಷ್ಯರಿಗೂ ಮೋಕ್ಷವನ್ನು ಕೊಡುವವನಾಗುವನು. ಅದಕಾರಣ ಮುಖ್ಯ ಪ್ರಾಣನೇ ಮುಖ್ಯವಾಗಿ ಗಾನಮಾಡುವವನು (೨) ಶ್ರೀಹರಿಗೆ ಉಕ್ ಎಂದು ಹೆಸರು ಇದ್ದರೂ ಪ್ರಯುಕ್ತವೂ ಧಾರಕೀಪ್ರಾಣರು ಗಾಯಕರಾಗುವುದರಿಂದಲೂ ಶ್ರೀಹರಿಯು ಸರ್ವೋತ್ತಮನೆಂದು ಗಾನಮಾಡಲ್ಪಡುವ ಕಾರಣ ಉದ್ಗೀಥನೆನಿಸುತ್ತಾನೆ ॥ ೧, ೨, ೩, ೪, ೫, ೬, ೭, ೮ ॥ ೩–೬ ॥ ೨ ॥

ಆರನೇ ಖಂಡವು ಮುಗಿಯಿತು.

೭ನೇ ಖಂಡವು

ಉ. ॥ ಅಥಾಧ್ಯಾತ್ಮಂ ವಾಗೇವ ಋಕ್ ಪ್ರಾಣಃ ಸಾಮ ತದೇತದೇತ-ತ್ಸಾಮ್ನ್ಯಚ್ಯೂಢೀ ಸಾಮ ತಸ್ಮಾದ್ಯಚ್ಯೂಢೀ ಸಾಮ ಗೀಯತೇ ವಾಗೇವ ಸಾ ಪ್ರಾಣೋಽಮುಸ್ತತ್ಸಾಮ ॥ ೧ ॥

ಅ ॥ ಋಕ್ ಸಾಮ ಮೊದಲಾದ ದೇವತೆಗಳ ಸ್ವರೂಪವನ್ನು ಹೇಳಿ ಈಗ ದೇಹದಲ್ಲಿದ್ದ ಋಕ್ ಸಾಮದ ಸ್ವರೂಪವನ್ನು ಹೇಳುತ್ತಾ ಉದ್ಗೀಥನ ಸ್ವರೂಪವು ಹೇಳಲ್ಪಡುತ್ತದೆ. ವಾಗಿಂದ್ರಿಯದಲ್ಲಿದ್ದ ಧಾರಕೀಯು ಋಕ್ಕೆಂದು ಅನ್ನಿಸುತ್ತಾಳೆ. ದೇಹದೊಳಗಣ ಇಂದ್ರಿಯಗಳಲ್ಲಿರತಕ್ಕ ಮುಖ್ಯಪ್ರಾಣನು ಅಥವಾ ಶ್ವಾಸರೂಪ ಪ್ರಾಣದಲ್ಲಿರತಕ್ಕ ಮುಖ್ಯಪ್ರಾಣನು ಸಾಮ ಎನಿಸುತ್ತಾನೆ.....* ॥ ೧ ॥

ಉ. ॥ ಚಕ್ಷುರೇವ ಋಗಾತ್ಮಾ ಸಾಮ ತದೇತದಸ್ಯಾಮ್ನ್ಯಚ್ಯೂಢೀ ಸಾಮ ತಸ್ಮಾದ್ಯಚ್ಯೂಢೀ ಸಾಮ ಗೀಯತೇ ಚಕ್ಷುರೇವ ಸಾಽಽತ್ಮಾಮುಸ್ತ-ತ್ಸಾಮ ॥ ೨ ॥

ಅ ॥ ಕಣ್ಣಿನಲ್ಲಿರತಕ್ಕ ಸಚಕ್ಷುಕೆಯು ಋಕ್ ಎನಿಸುತ್ತಾಳೆ. ಜೀವನಲ್ಲಿದ್ದ ಪ್ರಾಣನು ಸಾಮ ಎನಿಸುತ್ತಾನೆ..... ॥ ೨ ॥

* ಖಂಡದಿಂದ ಅರ್ಥ ಇಟ್ಟು ಕೊಳ್ಳಬೇಕು

ಉ. ॥ ಶ್ರೋತ್ರಮೇವ ಋಙ್ಮನಃ ಸಾಮ ತದೇತದೇತಸ್ಯಾಮೃಚ್ಯ-ಧ್ಯೂಢಃ ಸಾಮ ತಸ್ಮಾದೃಚ್ಯಧ್ಯೂಢಃ ಸಾಮ ಗೀಯತೇ ಶ್ರೋತ್ರಮೇವ ಸಾ ಮನೋಽಮುಷ್ಮಾತ್ಸಾಮ ॥ ೬ ॥

ಅ ॥ ಕಿವಿಯಲ್ಲಿರುವ ಸರಸ್ವತಿಯು ಋಕ್ ಎನಿಸುತ್ತಾಳೆ. ಮನಸ್ಸಿನಲ್ಲಿರುವ ಪ್ರಾಣನು ಸಾಮ ಎನಿಸುತ್ತಾನೆ..... ॥ ೬ ॥

ಉ. ॥ ಅಥ ಯದೇತದಕ್ಷ್ಣಃ ಶುಕ್ಲಂ ಭಾಃ ಸೈವ ಋಗಥ ಯನ್ನೀಲಂ ಪರಃ ಕೃಷ್ಣಂ ತತ್ಸಾಮ ತದೇತದೇತಸ್ಯಾಮೃಚ್ಯಧ್ಯೂಢಃ ಸಾಮ ತಸ್ಮಾದೃಚ್ಯ-ಧ್ಯೂಢಃ ಸಾಮ ಗೀಯತೇ ॥ ೪ ॥

ಅ ॥ ಕಣ್ಣಿನ ಬಿಳಿಯ ಭಾಗದಲ್ಲಿರತಕ್ಕ ಸರಸ್ವತಿಯು ಋಕ್.....ಕಪ್ಪಾದ ಕಣ್ಣುಗುಡ್ಡಿನಲ್ಲಿ ಇರತಕ್ಕ ಪ್ರಾಣನು ಸಾಮ ಎನಿಸುತ್ತಾನೆ..... ॥ ೪ ॥

ಈ – ಹೀಗೆ ದೇಹದಲ್ಲಿರುವ ಋಕ್ ಸಾಮ ಎನಿಸಿಕೊಂಡ ಭಾರತೀ ಮುಖ್ಯಪ್ರಾಣರ ಮಹಿಮೆಯನ್ನು ಹೇಳಿ ಈಗ ಇವರಲ್ಲಿ ಅಂತರ್ಗತನಾದ ಉದ್ಗೀಥನೆನಿಸುವ ಶ್ರೀಹರಿಯ ಮಹಿಮೆಯನ್ನು ಹೇಳುತ್ತಾರೆ—

ಉ. ॥ ಅಥ ಯದೇವೈತದಕ್ಷ್ಣಃ ಶುಕ್ಲಂ ಭಾಃ ಸೈವ ಸಾಽಥ ಯನ್ನೀ-ಲಂ ಪರಃ ಕೃಷ್ಣಂ ತದಮುಷ್ಮಾತ್ಸಾಮೋಥ ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ ಸೈವ ಋಕ್ತತ್ಸಾಮ ತದುಕ್ಥಂ ತದ್ಯಜುಸ್ತದ್ಬ್ರಹ್ಮ ತಸ್ಯೈತಸ್ಯ ತದೇವ ರೂಪಂ ಯದಮುಷ್ಯ ರೂಪಂ ಯಾವಮುಷ್ಯ ಗೇಷ್ಣೌ ತೌ ಗೇಷ್ಣೌ ಯ-ತ್ಸಾಮ ತತ್ಸಾಮ ॥ ೫ ॥

ಅ ॥ ಕಣ್ಣಿನಲ್ಲಿರುವ ಸರಸ್ವತೀ (ಭಾರತೀ) ಮುಖ್ಯಪ್ರಾಣರಲ್ಲಿ ಅಂತರ್ಗತನಾದ ಉದ್ಗೀಥನೆನಿಸುವ ಶ್ರೀಹರಿಯನ್ನು (ಜ್ಞಾನಿಗಳು ಜ್ಞಾನದೃಷ್ಟಿಯಿಂದ) ಕಾಣುತ್ತಾರೆ. ಕಣ್ಣಿನಲ್ಲಿರುವ ಶ್ರೀಹರಿಯು ಜ್ಞಾನರೂಪನಾದುದರಿಂದ ಋಕ್, ನಿತ್ಯದಲ್ಲಿಯೂ ಲಕ್ಷ್ಮೀಸಮೇತನಾಗಿಯೇ ಇದ್ದುದರಿಂದ ಅವನು ನಿತ್ಯದಲ್ಲಿಯೂ ಸರ್ವ ಪ್ರಾಣಿಗಳಲ್ಲಿಯೂ ಸಮನಾದುದರಿಂದ ಸಾಮ, ಸರ್ವಜಗತ್ತನ್ನು ಸೃಷ್ಟಿಮಾಡತಕ್ಕವನಾದುದರಿಂದ ಉಕ್ಥಂ. ಯಾಜ್ಞೆ ಕರಿಂದ ಯಾಗಮಾಡಿಸಿಕೊಳ್ಳಲ್ಪಡುವುದರಿಂದ ಯಜುಃ, ಗುಣಪರಿಪೂರ್ಣನಾದುದರಿಂದ ಬ್ರಹ್ಮನೆನಿಸುತ್ತಾನೆ. ಸೂರ್ಯನೊಳಗಿರುವ ಭಾರತೀಮುಖ್ಯಪ್ರಾಣರಲ್ಲಿ ಅಂತರ್ಗತನಾದ ಶ್ರೀಹರಿಯು ಜ್ಞಾನಾನಂದಾದಿರೂಪವೇ ಕಣ್ಣೊಳಗಿರುವ ಭಾರತೀಮುಖ್ಯಪ್ರಾಣರ ಅಂತರ್ಗತ ಶ್ರೀಹರಿಯ ರೂಪವು. ಋಕ್ ಸಾಮ ಎಂದು ಹೆಸರುಳ್ಳ ಭಾರತೀಮುಖ್ಯಪ್ರಾಣರು ಸೂರ್ಯನಲ್ಲಿರತಕ್ಕ ಶ್ರೀಹರಿಯನ್ನು ಗಾನ ಮಾಡುತ್ತಾರೆ. ಇವರೇ ಕಣ್ಣಿನಲ್ಲಿರುವ ಶ್ರೀಹರಿಯನ್ನು ಗಾನಮಾಡುವವರು. ಸೂರ್ಯಾಂತರ್ಗತನಾದ ಶ್ರೀಹರಿಗೆ ಇದ್ದ ಉತ್ ಉದ್ಗೀಥಃ ಎಂಬ ನಾಮಗಳೇ ಕಣ್ಣೊಳಗಿರುವ ಅಂತರ್ಗತನಾದ ಶ್ರೀಹರಿಗೂ ನಾಮಧೇಯಗಳು. ॥ ೫ ॥

ಉ. ॥ ಸ ಏಷ ಬೈತಸ್ಮಾದರ್ವಾಂಚೋ ಲೋಕಾಸ್ತೇಷಾಂ ಚೇಷ್ಟೇ ಮನುಷ್ಯಕಾಮಾನಾಂ ಚೇತಿ ತದ್ಯ ಇಮೇ ವೀಣಾಯಾಂ ಗಾಯಂತ್ಯೇತಂ ತೇ ಗಾಯಂತಿ ತಸ್ಮಾತ್ತೇ ಧನಸನಯಃ ॥ ೬ ॥

ಅ ॥ ಕಣ್ಣಿನಲ್ಲಿರುವ ಶ್ರೀಹರಿಯು ಈ ಭೂಲೋಕದಿಂದ ಕೆಳಗಿನದ್ದಾದ ಪಾತಾಳಾದಿ ಲೋಕಗಳಿಗೂ ಈ ಲೋಕಕ್ಕೂ ಅಧಿಪತಿಯಾಗಿರುತ್ತಾನೆ. ಮತ್ತು ಮನುಷ್ಯರು ಇಚ್ಛಿಸಿದವುಗಳನ್ನೆಲ್ಲಾ ಕೊಡಲಿಕ್ಕೂ ಅವನೇ ಸಮರ್ಥನಾಗಿರುತ್ತಾನೆ (ಧಾರತೀಪ್ರಾಣರು ಮಾತ್ರ ಅವನನ್ನು ಗಾನಮಾಡುವುದಲ್ಲ. ಮತ್ತೆ ಲೋಕದಲ್ಲಿ ಗಾಯಕರೆಲ್ಲರೂ ಅವನನ್ನೇ ಗಾನಮಾಡುತ್ತಾರೆ. ಎನ್ನುತ್ತಾರೆ---) ಶ್ರೀಹರಿಯೇ ಮನುಷ್ಯರಿಗೆ ಇಷ್ಟವನ್ನು ಕೊಡಲಿಕ್ಕೆ ಸಮರ್ಥನಾದುದರಿಂದ ಪ್ರಸಿದ್ಧರಾದ ಗಾಯಕರು (ರಾಜಾದಿಗಳ ಮುಂದುಗಡೆ) ವೀಣೆ ಬಾರಿಸಿ ಹಾಡುತ್ತಾರೆಂಬುದು ಕಣ್ಣಿನೊಳಗಿರುವ ಶ್ರೀಹರಿಯನ್ನೇ ಗಾನಮಾಡಿದಂತಾಗುವುದು ಅದರಿಂದಲೇ ಸಂತುಷ್ಟನಾದ ರಾಜಾದಿಗಳಲ್ಲಿ ನಿಯಾಮಕನಾದ ಶ್ರೀಹರಿಯಿಂದ ಧನವನ್ನು ಗಾಯಕರು ಹೊಂದುತ್ತಾರೆ. ಏನಂಚ ರಾಜನು ಗಾಯಕರಿಗೆ ಕೊಡುವ ಪಾರಿತೋಷಕವು ರಾಜನೊಳಗಿರುವ ಶ್ರೀಹರಿಯಿಂದಲೇ ಕೊಡಲ್ಪಟ್ಟಿತೆಂದು ಧ್ಯಾನಿಸಬೇಕು. (ಇಲ್ಲವಾದಲ್ಲಿ ರಾಜಾದಿಗಳಿಗೆ ಸ್ವಾತಂತ್ರ್ಯವಿಲ್ಲದಿರುವುದರಿಂದ ಧನವು ಲಭಿಸದೆ ಹೋಗಬೇಕಾಗುವುದು.) ॥ ೬ ॥

ಓ—ಹಿಂದೆ ಹೇಳಿದ ಪ್ರಕಾರ ತಿಳಿದುಕೊಂಡು ಸಾಮಗಾನವನ್ನು ಮಾಡುವವನಿಗೆ ಫಲ ಹೇಳುತಾ ನೆ---

ಉ. ॥ ಅಥ ಯ ಏತದೇವಂವಿದ್ವಾನ್ಸಾಮ ಗಾಯತ್ಯುಭೌ ಸಾಮ ಗಾಯತಿ ಸೋಽಮುನೈವ ಸ ಏಷ ಚಾಮುಷ್ಮಾತ್ಪರಾಂಚೋ ಲೋಕಾಸ್ತಾ೭-ಶ್ಚಾಪ್ನೋತಿ ತದೇವ ಕಾಮಾ೭ಶ್ಚ ॥ ೭ ॥

ಅ ॥ ಯಾವ ಅಧಿಕಾರಿಯು ಆದಿತ್ಯನಿಗೆ ನಿಯಾಮಕರಾದ ಧಾರತೀಪ್ರಾಣರೊಳಗಿರುವ ಭಗವತ್ ಸ್ವರೂಪವನ್ನೂ, ವೇಷದ ಕಣ್ಣಿನಲ್ಲಿರುವ ಧಾರತೀಪ್ರಾಣರೊಳಗಿರುವ ಭಗವತ್ಸ್ವರೂಪವನ್ನೂ ಹಿಂದೆ ಹೇಳಿದ ಪ್ರಕಾರ ತಿಳಿದು ಸಾಮವನ್ನು ಗಾನಮಾಡುತ್ತಾನೋ ಅವನೆ ಸೂರ್ಯ, ಕಣ್ಣು, ಇವುಗಳಲ್ಲಿ ಇರುವ ಭಗವದ್ರೂಪಗಳನ್ನೇ ಗಾನಮಾಡುತ್ತಾನೆ. ಉದ್ಗಾತನು ಗಾನಮಾಡುವುದೆಂಬುದೂ ಭಗವತ್ಪ್ರೇರಣೆಯಿಂದಲೇ. ಈತನೇ ಜ್ಞಾನಪೂರ್ವಕವಾಗಿ ಶ್ರೀಹರಿಯನ್ನು ಗಾನವಾಡುತ್ತಾ ಈ ಅಂತರಿಕ್ಷ ಲೋಕದಿಂದ ಮೇಲಿನದ್ದಾದ ಸ್ವರ್ಗಾದಿಲೋಕಗಳನ್ನೂ ವೈಕುಂಠಾದಿ ಲೋಕಗಳನ್ನು ಹೊಂದುತ್ತಾನೆ. ಮತ್ತು ಕಾಮ್ಯಕ್ಕಾಗಿಂದ ಅವರವರಿಗೆ ಯೋಗ್ಯಗಳಾದ ಲೋಕಗಳನ್ನು ಹೊಂದಿಸಿಕೊಡುತ್ತಾನೆ. ಮತ್ತು ಸ್ವರ್ಗದಲ್ಲಿ ಸಿಗತಕ್ಕ ಅಭೀಷ್ಟಗಳನ್ನು ಹೊಂದಿಸಿಕೊಡುತ್ತಾನೆ. ಉದ್ಗಾತನು ಯೋಗ್ಯರಿಗೆ ಪರಲೋಕಾದಿಗಳನ್ನು ಹೊಂದಿಸಿಕೊಡುತ್ತಾನೆಂಬುದೂ ಆದಿತ್ಯನಲ್ಲಿ ಅಂತರ್ಗತನಾದ ಶ್ರೀಹರಿಯ ಪ್ರಸಾದದಿಂದಲೇ. (ತನ್ನ ಸಾಮರ್ಥ್ಯದಿಂದ ಅಲ್ಲ.) ॥ ೭ ॥

ಉ. ॥ ಅಥಾನೇನೈವ ಯೇ ಬೈತಸ್ಮಾದರ್ವಾಂಚೋ ಲೋಕಾಸ್ತಾ೭-ಶ್ಚಾಪ್ನೋತಿ ಮನುಷ್ಯಕಾಮಾ೭ಶ್ಚ ತಸ್ಮಾದು ಹೈವಂವಿದುದ್ಗಾತಾ ಬ್ರೂಯಾತ್ ॥ ೮ ॥

ಉ. ॥ ಕಂ ತೇ ಕಾಮಮೂಗಾಯಾನೀತ್ಯೇಷ ಹ್ಯೇವ ಕಾಮಗಾನಸ್ಯೇ-
ಷ್ಟೇ ಯ ಏವಂವಿದ್ವಾನ್ ಸಾಮ ಗಾಯತಿ ಸಾಮ ಗಾಯತಿ ॥ ಇತಿ ಸಪ್ತ-
ಮಃ ಖಂಡಃ ॥ ೩-೭ ॥ ॥ ೯ ॥

ಅ ॥ ಕಸ್ಮೈ ನಷ್ಟರುವ ಶ್ರೀಹರಿಯ ಅನುಗ್ರಹದಿಂದಲೇ ಭೂಲೋಕದಿಂದ ಕೆಳಗಿನ ಲೋಕಗಳನ್ನು ಹೊಂದುತ್ತಾನೆ. ಉಕ್ಥ ಗಾನ-ದ ಸಾಧಕರಿಗೆ ಹೊಂದಿಸಿಕೊಡುತ್ತಾನೆ. ಮತ್ತು ಮನುಷ್ಯರ ಇಷ್ಟ ಗಳನ್ನು ಹೊಂದಿಸಿಕೊಡುತ್ತಾನೆ. ಭಗವಂತನನ್ನು ಗಾನಮಾಡುವನಿಗೆ ಸಾಮಧ್ಯಾತಿಶಯವಿದ್ದುದ ರಿಂದಲೇ ಹೀಗೆ ತಿಳಿದು ಗಾನಮಾಡುವವನು--ಎಲೊ ಯಜಮಾನನೇ ನಿನಗೆ ಯಾವ ಇಷ್ಟವು ಸಿಗುವ ದಕ್ಕಾಗಿ ಗಾನಮಾಡಬೇಕೆಂದು ಯಜಮಾನನೊಡನೆ ಕೇಳಬೇಕು. ಹೀಗೆ ತಿಳಿದು ಸಾಮವನ್ನು ಗಾನ ಮಾಡುವನೇ ಉತ್ಕೃಷ್ಟಗಾನದಿಂದ ಯಜಮಾನನಿಗೆ ಇಷ್ಟ ಕೊಡಲಿಕ್ಕೆ ಸಮರ್ಥನಾಗಿರುತ್ತಾನೆ.

ವಿ ॥ ಭಗವಂತನನ್ನು ಮುಖ್ಯವಾಗಿ ಗಾನಮಾಡುವವನು ಮುಖ್ಯಪ್ರಾಣನು ಮನುಷ್ಯರು ಅಮು ಖ್ಯರು ಆದರಲ್ಲಿ ವಾಯುದೇವರಿಗೇನೇ ಭೂರ್ಭುವೋಲೋಕಾದಿಗಳನ್ನು ಹೊಂದಿಸಿಕೊಡತಕ್ಕ ಶಕ್ತಿಯು. ಮನುಷ್ಯರಿಗೆ ಸ್ವರ್ಗಭೂಲೋಕಗಳಲ್ಲಿನ ಇಷ್ಟಗಳನ್ನು ಹೊಂದಿಸಿಕೊಡತಕ್ಕ ಶಕ್ತಿಯು. ॥ ೩ ॥ ೯ ॥

ಈ ಚಕ್ಷುರೇವ ಋಕ್, ಆತ್ಮಾ ಸಾಮ, ಎಂಬುವ ೨ನೇ ಮಂತ್ರದಲ್ಲಿನ ಅಕ್ಷರಾರ್ಥ ವನ್ನು ಹೇಳುತ್ತಾನೆ

ಭಾ. ॥ (೧) ಆತ್ಮಾ ಜೀವಃ । ಸರಸ್ವತೀ ಹಿ ಚಕ್ಷುಷ್ಮಾ ಜೀವಸ್ಯೋ ವಾಯುರೀ-
ರಿತಃ(ಶ್ವರಃ) ॥ ವಿದಿತ್ವಾ ತಾವುಭೌ ದೇವೌ ತದ್ಧ್ಯಾಯೇದ್ಧರಿಂ ಸದಾ । ಇತಿ ಮಾನಸೇ ॥
(೨) ದೃಶ್ಯತೇ ಜ್ಞಾನದೃಷ್ಟ್ಯಾ ಯಃ ಸೂರ್ಯೇ ಚಕ್ಷುಷಿ ಚೈಕರಾಟ್ ॥ (೩) ಯಜ್ಞಾ-
ನಾಂ ಜ್ಞಾನರೂಪತ್ವಾತ್ ಸಾಮ ನಿತ್ಯಸಮತ್ವತಃ । ಉಕ್ಥಮುತ್ಥಾಪಕತ್ವಾಚ್ಚ ಯಜು-
ರ್ಯೂಜ್ಯಸ್ವರೂಪತಃ ॥ ಬ್ರಹ್ಮಾಸೌ ಗುಣಪೂರ್ಣತ್ವಾದೇವಂ ಸರ್ವಾಭಿಧಾನವಾನ್ ।
ಇತಿ ಚ ॥ (೪) ಯಥಾ ಬದರಿಕಾನಾಥೋ ದ್ವಾರಕಾನಾಥ ಇತ್ಯಪಿ । ಅರ್ವಾ(ವ)ಙ್ನಾಥಃ
ಪರಾಙ್ನಾಥ ಇತಿ ತದ್ವದಿಹೋಚ್ಯತೇ ॥ ಸರ್ವನಾಥೋಽಪಿ ಭಗವಾನ್ ಸನ್ನಿಧಾನವಿಶೇ-
ಷತಃ । ಇತಿ ಚ ॥ ೧, ೨, ೩, ೪, ೫, ೬, ೭, ೮, ೯ ॥ ಇತಿ ಸಪ್ತಮಃ ಖಂಡಃ ॥ ೩–೭ ॥

ಅ ॥ (೧) ಆತ್ಮಾ ಜೀವನು ಅಂದರೆ ಜೀವನಲ್ಲಿರುವ ಪ್ರಾಣನು. (ಈ ಅರ್ಥವನ್ನು ಇಲ್ಲಿ ಏಕೆ ಮಾಡ ಬೇಕೆಂದರೆ) ಕಣ್ಣಿಗೆ ನಿಯಾಮಕಳಾಗಿರುವವಳು ಸರಸ್ವತಿಯು. ಜೀವನಿಗೆ ನಿಯಾಮಕನಾಗಿರುವವನು ಮುಖ್ಯಪ್ರಾಣನು ಆ ದೇವತೆಗಳನ್ನು ತಿಳಿದು ಅವರೊಳಗಿರುವ ಶ್ರೀಹರಿಯನ್ನು ಸದಾ ಧ್ಯಾನಿಸಬೇಕು ಎಂದು ಮಾನಸ ಎಂಬ ಗ್ರಂಥದಲ್ಲಿದೆ. (೨) ಸೂರ್ಯ, ಕಣ್ಣು, ಇವುಗಳಲ್ಲಿ ಅಂತರ್ಗತನಾದ ಸರ್ವ ಸ್ವತಂತ್ರನಾದ ಶ್ರೀಹರಿಯನ್ನು ಜ್ಞಾನದೃಷ್ಟಿಯಿಂದಲೇ ಜ್ಞಾನಿಗಳು ಕಾಣುತ್ತಾರೆ. (ಶ್ರೀಹರಿಯು ಕಣ್ಣಿಗೆ ಗೋಚರನಲ್ಲ) (೩) ಯಜ್ಞ ಸಾಮ ಇತ್ಯಾದಿಗಳ ಅರ್ಥ ಹೇಳುತ್ತಾರೆ -) ಶ್ರೀಹರಿಯು ಜ್ಞಾನರೂಪನಾದುದರಿಂದ ಋಕ್ ಎಂದೂ, ನಿತ್ಯವಸ್ತುವಾಗಿ (ಬದಲಾಯಿಸಲಾಗದೆ ಇರುವುದರಿಂದ ಸಾಮ ಎಂದೂ, ಸರ್ವಜಗತ್ತನ್ನು ಸೃಷ್ಟಿಸತಕ್ಕವನಾದುದರಿಂದ ಉಕ್ಥ ಎಂದೂ, ಯಾಗಮಾಡಿಸಿಕೊಳ್ಳುವುದರಿಂದ ಯಜುಃ ಎಂದೂ, ಸರ್ವಗುಣಪರಿಪೂರ್ಣನಾಗಿರುವುದರಿಂದ ಬ್ರಹ್ಮ ಎಂದೂ ಎನ್ನಿಸಿಕೊಳ್ಳುತ್ತಾನೆ. ಹೀಗೆ ಶ್ರೀಹರಿಗೆ ಎಲ್ಲಾ ನಾಮಧೇಯಗಳೂ ಇವೆ (೪) (ಶ್ರೀಹರಿಯು ಸರ್ವಲೋಕಗಳಿಗೂ ಅಧಿಪತಿ

ಹೊಗುತ್ತಿರುವಾಗ ವಿಶಿಷ್ಟ ಒಂದು ರೂಪವು ಸ್ವರ್ಗಾದಿಗಳಿಗೆ ಅಧಿಪತಿಯೆಂಬುದೂ ಇನ್ನೊಂದು ರೂಪವು ಪಾತಾಳಾದಿಗಳಿಗೆ ಅಧಿಪತಿಯೆಂಬುದೂ ಹೇಗೆ ಸಂಗತವಾಗುತ್ತದೆ? ಎಂದರೆ—) ಶ್ರೀಪತಿಯು ನಾರಾಯಣ ವ್ಯಾಪಕರೂಪದಿಂದ ಬದರಿಕಾಶ್ರಮದಲ್ಲಿಯೂ ಶ್ರೀಕೃಷ್ಣರೂಪದಿಂದ ದ್ವಾರಕೆಯಲ್ಲಿಯೂ ಇದ್ದು ಬದರಿಕಾಶ್ರಮ, ದ್ವಾರಕಾನಾಥ ಎಂದು ಹೇಳಿಸಿಕೊಳ್ಳುವಂತೆಯೇ ಇಲ್ಲಿಯೂ ಒಂದು ಭಗವನ್ಮೂರ್ತಿಯು ಪಾತಾಳಾದಿಗಳಿಗೆ ಅಧಿಪತಿಯೆಂದೂ, ಇನ್ನೊಂದು ಸ್ವರ್ಗಾದಿಗಳಿಗೆ ಅಧಿಪತಿಯೆಂದೂ ವ್ಯವಹಾರವು. ॥ ೧, ೨, ೩. ೪. ೫. ೬. ೭. ೮—೭ ॥

ನಿಳನೇ ಖಂಡವು ಮುಗಿಯಿತು.

ಲನೇ ಖಂಡವು

ಟೀ- ಉದ್ಗೀಥನೇ ಶ್ರೀಪತಿಯು ಸರ್ವೋತ್ತಮನೆಂದು ಹೇಳಿದ್ದನ್ನು ವಿಚಾರವಾಡಿ ಸಮರ್ಥಿಸುತ್ತಾರೆ—

ಉ. ॥ ತ್ರಯೋ ಹೋದ್ಗೀಥೇ ಕುಶಲಾ ಬಭೂವುಃ ಶಿಲಕಃ ಶಾಲಾವತ್ಯಶ್ಚೈಕಿತಾಯನೋ ದಾಲ್ಭ್ಯಃ ಪ್ರವಾಹಣೋ ಜೈವಲಿರಿತಿ ತೇ ಹೋಚುರುದ್ಗೀಥೇ ನೈ ಕುಶಲಾಃ ಸ್ಮೋ ಹಂತೋದ್ಗೀಥೇ ಕಥಾಂ ವದಾಮ ಇತಿ ॥೧॥

ಅ ॥ ಶಲಾವತಿಯ ಮಗನಾದ ಶಿಲಕನು, ಚಿಕಿತಾಯನನ ಮಗನಾದ ದಾಲ್ಭ್ಯನು, ಜಿಬಲಿನ ಮಗನಾದ ಪ್ರವಾಹಣನು ಎಂಬ ಮೂವರು ಉದ್ಗೀಥನೆಂಬ ಭಗವಂತನನ್ನು ಹೇಗಿವ ಉದ್ಗೀಥ ಎಂಬ ನಾಮವಿಶೇಷದಲ್ಲಿ ನಿಪುಣರು. ಆ ಮೂವರು ಪರಸ್ಪರವಾಗಿ ನಾವು ಉದ್ಗೀಥ ಎಂಬ ನಾಮವಿಶೇಷದಲ್ಲಿ ಕುಶಲರಾಗಿರುತ್ತೇವೆ. ಹರ್ಷ (ನಿಮಗೆ ಅನುಮತಿಯಿದ್ದರೆ) ಉದ್ಗೀಥನ ವಿಷಯದಲ್ಲಿ ಪ್ರಶ್ನೆ ಪ್ರತ್ಯುಕ್ತಿ ರೂಪವಾದ ವಾದಕಥೆಯನ್ನು ನಾವು ಮಾಡಿಕೊಳ್ಳುವ, ಎಂದು ಹೇಳಿದರು. ॥ ೧ ॥

ಉ. ॥ ತಥೇತಿ ಹ ಸಮುಪವಿವಿಶುಃ ಸ ಹ ಪ್ರವಾಹಣೋ ಜೈವಲಿರುವಾಚ ಭಗವಂತಾವಗ್ರೇ ವದತಾಂ ಬ್ರಾಹ್ಮಣಯೋರ್ವದತೋರ್ವಾಚಂ ಶ್ರೋಷ್ಯಾಮೀತಿ ಸ ಹ ಶಿಲಕಃ ಶಾಲಾವತ್ಯಶ್ಚೈಕಿತಾಯನಂ ದಾಲ್ಭ್ಯಮುವಾಚ ಹಂತ ತ್ವಾ ಪೃಚ್ಛಾನೀತಿ ಪೃಚ್ಛೇತಿ ಹೋವಾಚ. ॥ ೨ ॥

ಅ ॥ ಹಾಗೆಯೇ ಆಗಲಿ ಎಂದು ಹೇಳಿ ಆ ಮೂವರೂ ಒಂದು ಕಡೆ ಕುಳಿತರು. ಅವರಲ್ಲಿ ಪ್ರವಾಹಣನು ಎಲೋ ಶಿಲಕ ಚೈಕಿತಾಯನರೇ ಪೂಜ್ಯರಾದ ನೀವು ಮೊದಲು ಹೇಳಬೇಕು. ನಾನು ಬ್ರಾಹ್ಮಣರಾದ ನಿಮ್ಮಿಬ್ಬರಿಂದ ತತ್ಕಥೆಯನ್ನು ಕೇಳುವೆನು ಎಂದು ಹೇಳಿದನು (ಇದರಿಂದ ಪ್ರವಾಹಣನು ಕ್ಷತ್ರಿಯನೆಂದು ತಿಳಿಯುತ್ತದೆ.) ಆಗ ಪ್ರವಾಹಣನಿಂದ ಹೇಳಿಸಿಕೊಳ್ಳಲ್ಪಟ್ಟ ಶಿಲಕರು ದಾಲ್ಭ್ಯರ ಹತ್ತಿರ (ನಿಮಗೆ ಅನುಮತಿಯಿದ್ದರೆ) ನಿಮ್ಮೊಡನೆಯೇ ನಾನು ಕೇಳುತ್ತೇನೆ, ಎಂದು ಹೇಳಿದರು. ಆಗ ದಾಲ್ಭ್ಯರು ಶಿಲಕರ ಹತ್ತಿರ ಕೇಳಿ ಎಂದು ಹೇಳಿದರು. ॥ ೨ ॥

ಈ—ಪ್ರಶ್ನೋತ್ತರ ಕ್ರಮವನ್ನು ಗೊಂದಲುತ್ತಾರೆ—

ಉ. ॥ ಕಾ ಸಾಮ್ನೋ ಗತಿರಿತಿ ಸ್ವರ ಇತಿ ಹೋವಾಚ ಸ್ವರಸ್ಯ ಕಾ ಗತಿರಿತಿ ಪ್ರಾಣ ಇತಿ ಹೋವಾಚ ಪ್ರಾಣಸ್ಯ ಕಾ ಗತಿರಿತ್ಯನ್ನಮಿತಿ ಹೋವಾಚಾನ್ನಸ್ಯ ಕಾ ಗತಿರಿತ್ಯಾಪ ಇತಿ ಹೋವಾಚ ॥ ೩ ॥

ಅ ॥ ಕೆಟ್ಟ ವಸ್ತುಗಳನ್ನಾಗಲೀ ಒಳ್ಳೆಯ ವಸ್ತುಗಳನ್ನಾಗಲೀ ವ್ಯತ್ಯಾಸವಿಲ್ಲದೆ ಸಮವಾಗಿ ಸುಡುವುದರಿಂದ ಸಾಮ ಎಂದು ಹೆಸರುಳ್ಳ ಸಾಮಕ್ಕೆ ಅಭಿಮಾನಿಯಾದ ಅಗ್ನಿಗೆ ಆಶ್ರಯನು ಯಾರು? (ಅಂದರೆ—ನೋಕ್ತದಲ್ಲಿ ಅಗ್ನಿಯು ಯಾವನ್ನು ಹೊಂದುವನು?* (ಎಂದು ಶಿಲಕರು ಪ್ರಶ್ನೆ ಮಾಡಿದಾಗ) ದಾಲ್ಭ್ಯರು 'ಸ್ವರ ಎಂದು ಹೆಸರುಳ್ಳ ಸ್ವರಾಭಿಮಾನಿಯಾದ ವರುಣನು' ಎಂದು ಉತ್ತರಿಸಿದರು. 'ಸ್ವರಾಭಿಮಾನಿಯಾದ ಆ ವರುಣನಿಗೆ ಆಶ್ರಯನು ಯಾರು? (ಎಂಬ ಪ್ರಶ್ನೆಗೆ) ಜಗತ್ತಿಗೆ ಪ್ರೇರಕನಾದುದರಿಂದಲೂ ಪ್ರಾಣನಿಂದ ಕೆಳಗಿನವರಿಗೆ ಅಭಿಮಾನಿಯಾದುದರಿಂದಲೂ ಪ್ರಾಣನೆನಿಸಿಕೊಂಡ ದೇಹದಲ್ಲಿದ್ದ ಪ್ರಾಣವಾಯುವಿಗೆ ಅಭಿಮಾನಿಯಾದ, ಸೂರ್ಯನು. (ಎಂದು ಪ್ರತ್ಯಕ್ಷರವು) ಆ ಸೂರ್ಯನಿಗೆ ಆಶ್ರಯನು ಯಾರು? ಅನ್ನಾಭಿಮಾನಿಯಾದ ವಕ್ಷ್ಯಪ್ರಜಾಪತಿಯು ಅತನಿಗೆ ಆಶ್ರಯನು ಯಾರು? ಜಲಾಭಿಮಾನಿಯಾದ ದೇವೇಂದ್ರನು ಎಂದು ಉತ್ತರಿಸಿದನು. ॥ ೩ ॥

ಉ. ॥ ಅಸ್ಯಾಂ ಕಾ ಗತಿರಿತ್ಯಸೌ ಲೋಕ ಇತಿ ಹೋವಾಚಾಮುಷ್ಯ ಲೋಕಸ್ಯ ಕಾ ಗತಿರಿತಿ ನ ಸ್ವರ್ಗಂ ಲೋಕಮತಿನಯೇದಿತಿ ಹೋವಾಚ ಸ್ವರ್ಗಂ ವಯಂ ಲೋಕಂ ಸಾಮಾಭಿಸಂಸ್ಥಾಪಯಾಮಃ ಸ್ವರ್ಗಸಂಸ್ತಾವಂ ಹಿ ಸಾಮೇತಿ ॥ ೪ ॥

ಆ ॥ ಇಂದ್ರನಿಗೆ ಆಶ್ರಯನು ಯಾರು? ದ್ಯುಲೋಕಾಭಿಮಾನಿಯಾದ ರುದ್ರನು ಈ ರುದ್ರನಿಗೆ ಆಶ್ರಯನು ಯಾರು? ಎಂದು ಪ್ರಶ್ನೆ ಮಾಡಿದಾಗ, ಸ್ವರ್ಗಲೋಕಕ್ಕೆ ಅಧಿಪತಿಯಾದ ರುದ್ರನನ್ನು ಬಿಟ್ಟು ಮತ್ತೊಬ್ಬನು ಉತ್ತಮನು ಯಾರೆಂದು ಪ್ರಶ್ನೆ ಮಾಡಬಾರದೆಂದು ದಾಲ್ಭ್ಯರು ಹೇಳಿದರು (ದಾಲ್ಭ್ಯರು ಶ್ರೇಷ್ಠರಿಯೇ ಸರ್ವೋತ್ತಮನೆಂದು ತಿಳಿದಿದ್ದರೂ ಇನ್ನಷ್ಟು ವಿಶೇಷಜ್ಞಾನವು ಹುಟ್ಟಿಸುವುದಕ್ಕಾಗಿ ರುದ್ರನು ಸರ್ವೋತ್ತಮನೆಂದು ಹೇಳಿರುವರು.) (ರುದ್ರನು ಬಿಟ್ಟು ಇನ್ನೊಬ್ಬನು ಸರ್ವೋತ್ತಮನೆಂದು ಏಕೆ ತಿಳಿಯಕೂಡದೆಂದರೆ—) ಸಾಮವೇದವು ಸ್ವರ್ಗಕ್ಕೆ ಅಧಿಪತಿಯಾದ ರುದ್ರನನ್ನು ಹೊಗಳುತ್ತದೆ. ಆದಕಾರಣ ನಾವು ಸಾಮವು ಸ್ವರ್ಗಕ್ಕೆ ಅಧಿಪತಿಯಾದ ರುದ್ರನನ್ನು ಹೇಳುತ್ತದೆಂದು ತಿಳಿಯುವೆವು ಎಂದು ದಾಲ್ಭ್ಯರು ಹೇಳಿದರು. ೪ ॥

ಉ. ॥ ತಂ ಹ ಶಿಲಕಃ ಶಾಲಾವತ್ಯಶ್ಚಿತಿತಾಯನಂ ದಾಲ್ಭ್ಯಮುವಾಚಾಪ್ರತಿಷ್ಠಿತಂ ವೈ ಕಿಲ ತೇ ದಾಲ್ಭ್ಯ ಸಾಮ ಯಸ್ತ್ವೇತರ್ಹಿ ಬ್ರೂಯಾನ್ಮೂರ್ಧಾ ತೇ ವಿಪತಿಷ್ಯತೀತಿ ಮೂರ್ಧಾ ತೇ ವಿಪತೇದಿತಿ ॥ ೫ ॥

ಅ ॥ ಹೀಗೆ ಹೇಳಿಸಿಕೊಂಡ ಶಿಲಕರು ದಾಲ್ಭ್ಯರ ಪತ್ರರ ಎಲೋ ದಾಲ್ಭ್ಯರೇ ಸಾಮವೇದದಲ್ಲಿ

* ಹೀಗೆಯೇ ಮೇಲೆಯೂ ಪ್ರಶ್ನಪ್ರಶ್ನೋತ್ತರಗಳನ್ನು ತಿಳಿದುಕೊಳ್ಳಬೇಕು.

ಹೇಳಲ್ಪಡತಕ್ಕವನೆಂದು ನಿಮ್ಮಿಂದ ತಿಳಿಯಲ್ಪಟ್ಟ ರುದ್ರನು ಕೊನೆಯವನು ಅಲ್ಲ: (ಅಂದರೆ—ಸರ್ವೋತ್ತಮನೆಂದು ಹೇಳಲಿಲ್ಲ ಅದಕಾರಣ ಸಾಮವು ರುದ್ರನನ್ನು ಸರ್ವೋತ್ತಮನೆಂದು ಹೇಳುತ್ತದೆಂದು ನೀವು ಹೇಳಿದರೆ ನಿಮ್ಮ ತಿರಸ್ಸು ಕೆಳಗೆ ಬೀಳಲಿ ಎಂದು ಬ್ರಹ್ಮಜ್ಞಾನಿಯು ಹೇಳಿದರೆ—ನಿಮ್ಮ ತಿರಸ್ಸು ನಿಷ್ಫಲವಾಗಿಯೂ ತುಂಡಾಗಿ ಕೆಳಗೆ ಬಿದ್ದೀತು. (ಆದರೆ ನನಗೆ ನಿಮ್ಮ ಮೇಲೆ ವಿಶ್ವಾಸವಿದ್ದ ಪ್ರಯುಕ್ತ ನಾನು ವಾಸ್ತವ ಹಾಗೆ ಹೇಳುವುದಿಲ್ಲ.) ಎಂದು ಶಿಲಕರು ಹೇಳಿದರು. ॥ ೫ ॥

ಈ—ಹೀಗೆ ಶಿಲಕರಿಂದ ತಿರಸ್ಕರಿಸಲ್ಪಟ್ಟ ದಾಲ್ಭ್ಯರು ಹೇಳುತ್ತಾರೆ—

ಉ. ॥ ಹಂತಾಹಮೇತದ್ಭಗವತೋ ವೇದಾನೀತಿ ವಿದ್ಧೀತಿ ಹೋವಾಚಾಮುಷ್ಯ ಲೋಕಸ್ಯ ಕಾ ಗತಿರಿತ್ಯಯಂ ಲೋಕ ಇತಿ ಹೋವಾಚಾಸ್ಯ ಲೋಕಸ್ಯ ಕಾ ಗತಿರಿತಿ ನ ಪ್ರತಿಷ್ಠಾಂ ಲೋಕಮತಿನಯೇದಿತಿ ಹೋವಾಚ ಪ್ರತಿಷ್ಠಾಂ ವಯಂ ಲೋಕಂ ಸಾಮಾಭಿಸಂಸ್ಥಾಪಯಾಮಃ ಪ್ರತಿಷ್ಠಾ ಸಂಸ್ತಾವಂ ಹಿ ಸಾಮೇತಿ ॥ ೬ ॥

ಅ ॥ ಸಾಮವು ರುದ್ರನು ಸರ್ವೋತ್ತಮನೆಂದು ಹೇಳತಕ್ಕುದಲ್ಲವೆಂದಾದರೆ ಈ ತತ್ತ್ವವನ್ನು ಪೂಜ್ಯರಾದ ನಮ್ಮಿಂದ ನೀವು ತಿಳಿಯುವೆನೆಂದು ದಾಲ್ಭ್ಯರು ಹೇಳಿದರು ಆಗ ಶಿಲಕರು ತತ್ತ್ವವನ್ನು ತಿಳಿಯಿರಿ ಎಂದರು. ಆಗ ದಾಲ್ಭ್ಯರು ಸ್ವರ್ಗಲೋಕಕ್ಕೆ ಅಧಿಪತಿಯಾದ ರುದ್ರನಿಗೆ ಆಶ್ರಯನು ಯಾರು? ಎಂದರೆ ಭೂಲೋಕಕ್ಕೆ ಅಧಿಪತಿಯಾದ ಬ್ರಹ್ಮನು ಎಂದು ಶಿಲಕರು ಉತ್ತರಿಸಿದರು. ಈ ಬ್ರಹ್ಮನಿಗೆ ಆಶ್ರಯನು ಯಾವುದು ದಾಲ್ಭ್ಯರು ಪ್ರಶ್ನಿಸಿದಾಗ ಸರ್ವಕ್ಕೂ ಆಶ್ರಯವಾದ ಭೂಲೋಕಕ್ಕೆ ಅಧಿಪತಿಯಾದ ಚತುರ್ಮುಖನನ್ನು ಬಿಟ್ಟು ಮತ್ತೊಬ್ಬನನ್ನು ಸರ್ವೋತ್ತಮನೆಂದು ತಿಳಿಯಕೂಡದು, ಎಂದು ಶಿಲಕರು ಹೇಳಿದರು *..... ॥ ೬ ॥

ಉ. ॥ ತಂ ಹ ಪ್ರವಾಹಣೋ ಜೈಬಿಲಿರುವಾಚಾಂತವದ್ವೈ ಕಿಲ ತೇ ಶಾಲಾವತ್ಯ ಸಾಮ ಯಸ್ತ್ವೇತದ್ಬ್ರೂಯಾನ್ಮೂರ್ಧಾ ತೇ ವಿಪತಿಷ್ಯತೀತಿ ಮೂರ್ಧಾ ತೇ ವಿಪತೇದಿತಿ ಹಂತಾಹಮೇತದ್ಭಗವತೋ ವೇದಾನೀತಿ ವಿದ್ಧೀತಿ ಹೋವಾಚ ॥ ಇತ್ಯಷ್ಟಮಃ ಖಂಡಃ ॥ ೩-೮ ॥ ॥ ೭ ॥

ಅ ॥ ಆಗ ಪ್ರವಾಹಣರಾಜನು ಎಲೋ ಶಿಲಕರೇ ನೀವು ಸಾಮದಲ್ಲಿ ಮುಖ್ಯವಾಗಿ ಸರ್ವೋತ್ತಮನೆಂದು ಹೇಳಲ್ಪಡುವವನು ಚತುರ್ಮುಖನು ಎಂದು ಹೇಳಿದ್ದು ಸರಿಯಲ್ಲ. ಏಕೆಂದರೆ—ಚತುರ್ಮುಖ ಬ್ರಹ್ಮನಿಂದಲೂ ಉತ್ಕೃಷ್ಟನಾದವನು ಇನ್ನೊಬ್ಬನು ಇರುತ್ತಾನೆ ಎಂದು ಶಿಲಕರಿಗೆ ಹೇಳಿದನು ‡..... ಆಗ ಶಿಲಕರು ನಿನ್ನಿಂದ ನಾನು ತತ್ತ್ವವನ್ನು ತಿಳಿಯುತ್ತೇನೆಂದು ಹೇಳಿದಾಗ ತಿಳಿದುಕೊಳ್ಳಿರಿ ಎಂದು ಪ್ರವಾಹಣರಾಜನು ಹೇಳಿದನು. ॥ ೩—೮ ॥ ॥ ೮ ॥

ಈ—ಕಾ ಸಾ ಮ್ನೋ ಗತಿಃ ಇತ್ಯಾದಿಗಳಿಂದ ಸಾಮ, ಸ್ವರ, ಪ್ರಾಣ, ಅನ್ನ, ಆಪ್, ದ್ಯುಲೋಕಗಳನ್ನು ಹೇಳಿರುವರು. ಅವುಗಳ ಅರ್ಥಗಳನ್ನು ಹೇಳುತ್ತಾರೆ—

* 'ಪ್ರತಿಷ್ಠಾಂ ವಯಂ' ; 'ಯಸ್ತ್ವೇತದ್ಬ್ರೂಯಾತ್' ಇತ್ಯಾದಿಗಳಿಗೆ ಹಿಂದಿನಂತೆ ಅರ್ಥ.

ಭಾ. ॥ (೧) ಅಗ್ನಿಃ ಸಾಮಾಭಿಮಾನೀ ಸ್ಯಾದ್ವರುಣಸ್ತು ಸ್ವರಾತ್ಮಕಃ । ಪ್ರಾಣಾಮರಾಭಿಮಾನೀ ತು ಸೂರ್ಯ ಏವ ಪ್ರಕೀರ್ತಿತಃ ॥ (೨) ಅನ್ನಾಭಿಮಾನೀ ದಕ್ಷಶ್ಚ ಶಕ್ರಸ್ತ್ವಬಭಿಮಾನವಾನ್ । ದ್ಯ್ವಾ(ದ್ಯುವಾ)ತ್ಮಕಶ್ಚ ಶಿವಃ ಪ್ರೋಕ್ತಃ ಕ್ರಮೇಣೈವೋತ್ತರೋತ್ತರಾಃ ॥ ಕ್ರಮೇಣ ಮೋಕ್ಷೇ ಪ್ರಾಪ್ಯಾಶ್ಚ ಪೂರ್ವೇಷಾಮುತ್ತರೋತ್ತರಾಃ । ಇತಿ ನಿವೃತ್ತೇ ॥ (೩) ಅಗ್ನೇರ್ವಾಗಾತ್ಮಕತ್ವಾತ್ ಸ್ವರಸ್ಯೋದಕಾತ್ಮಕತ್ವಾತ್ ॥ (೪) ಆದಿತ್ಯ ಏವ ಪ್ರಾಣೋಽನ್ನಂ ವೈ ಪ್ರಜಾಪತಿಃ । ಇತಿ ಶ್ರುತೇಃ ॥ ಆಪ ಏವೇಂದ್ರೋ ದ್ಯ್ವಾರ್ವಾವ ರುದ್ರಃ ಇತ್ಯಾದೇಶ್ಚ ॥ ೧ ॥

ಅ ॥ (೧) ಅಗ್ನಿಯು ಸಾಮಕ್ಕೂ, ವರುಣನು ಸ್ವರಕ್ಕೂ, ಸೂರ್ಯನು ಉಚ್ಛ್ವಾಸ ನಿಶ್ವಾಸ ಎಂಬ ಪ್ರಾಣವಾಯುವಿಗೂ ಅಧಿಪತಿಯು (೨) ದಕ್ಷಪ್ರಜಾಪತಿಯು ಅನ್ನಕ್ಕೂ, ದೇವೇಂದ್ರನು ಸೀರಿಗೂ, ರುದ್ರನು ದ್ಯುಲೋಕಕ್ಕೂ ಅಧಿಪತಿಯು. ಕ್ರಮವಾಗಿಯೇ ಮೇಲುಮೇಲಿನವರು ಶ್ರೇಷ್ಠರೆಂದು ಹೇಳಿದೆ ಕ್ರಮವಾಗಿ ಮೊದಲುಮೊದಲು ಹೇಳಿದವರು ಮೇಲೆಮೇಲೆ ಹೇಳಿದವರನ್ನು ಮೋಕ್ಷದಲ್ಲಿ ಹೊಂದುವರು ಎಂದು ನಿವೃತ್ತ ಎಂಬ ಗ್ರಂಥದಲ್ಲಿ ಹೇಳಿದೆ. (೩) (ಅಗ್ನಿಯು ಸಾಮಕ್ಕೆ ಅಧಿಪತಿಯು ಎಂಬುವಲ್ಲಿ ಯುಕ್ತಿಯನ್ನು ಹೇಳುತ್ತಾರೆ—) ಅಗ್ನಿಯು ವಾಗಿಂದ್ರಿಯಕ್ಕೆ ಅಧಿಪತಿಯು. ಸಾಮವೇದವು ವಾಗಿಂದ್ರಿಯದ ಅಧೀನವಾಗಿ ಪ್ರಕಟವಾಗುವುದರಿಂದ ಅಗ್ನಿಯು ಸಾಮಕ್ಕೆ ಅಧಿಪತಿಯು ಅಥವಾ ಅಗ್ನಿಯು ವೇದವಚನಗಳಿಗೆ ಅಧಿಪತಿಯು. ಸಾಮವು ವೇದವೇ ಆಗಿರುವುದರಿಂದ ಸಾಮವೇದಕ್ಕೂ ಅಧಿಪತಿಯು (ವರುಣನು ಸ್ವರಕ್ಕೆ ಅಧಿಪತಿಯು ಎಂಬುವಲ್ಲಿಯೂ ಯುಕ್ತಿ ಹೇಳುತ್ತಾರೆ—) ಸ್ವರವು (ವರ್ಣಗಳನ್ನು ತೋರಿಸುವ ಧ್ವನಿಯು) ಮುಖ ದೊಳಗಿನ ತಾಲು (ಅಂಗುಡಿ) ಮೊದಲಾದವುಗಳಲ್ಲಿರುವ ಸೀರಿನಿಂದ ಹುಟ್ಟುತ್ತದೆ. ಸೀರಿಗೆ ನಿಯಾಮಕನು ವರುಣನು. ಆದಕಾರಣ ವರುಣನು ಸ್ವರಕ್ಕೆ ಅಧಿಪತಿಯು. (೪) (ಪ್ರಾಣಶಬ್ದದಿಂದ ಸೂರ್ಯನನ್ನೂ, ಅನ್ನಶಬ್ದದಿಂದ ದಕ್ಷಪ್ರಜಾಪತಿಯನ್ನೂ ಬಿಟ್ಟುಕೊಳ್ಳಬೇಕೆಂಬ ವಿಷಯದಲ್ಲಿ ವೇದವು ಪ್ರಮಾಣವಿದೆ, ಎನ್ನುತ್ತಾರೆ—) ಸೂರ್ಯನೇ ಪ್ರಾಣನೆನಿಸುತ್ತಾನೆ ದಕ್ಷಪ್ರಜಾಪತಿಯು ಅನ್ನ ಎನ್ನಿಸುತ್ತಾನೆ, ಎಂದು ವೇದವು. (ಇಂದ್ರನು ಸೀರಿಗೆ ಸ್ವಾಮಿಯು. ರುದ್ರನು ಸ್ವರ್ಗಕ್ಕೆ ಅಧಿಪತಿಯು ಎಂಬುವಲ್ಲಿಯೂ ವೇದವನ್ನು ಹೇಳುತ್ತಾರೆ—) ಇಂದ್ರನು ಸೀರಿಗೆ ಅಧಿಪತಿಯು. ರುದ್ರನು ಸ್ವರ್ಗಲೋಕಕ್ಕೆ ಅಧಿಪತಿಯು, ಇದುಮೊದಲಾದ ವೇದವು ಪ್ರಮಾಣವಿದೆ ॥ ೧ ॥

ಪೀ—ಲೋಕದಲ್ಲಿ ಪಾಮರರೂ ಕೂಡ ನ ದೈವಂ ಕೇಶವಾತ್ಪರಂ ಶ್ರೀಕೃಷ್ಣನು ವಿನಾ ಇನ್ನೊಬ್ಬನು ಸರ್ವೋತ್ತಮನಿಲ್ಲವೆಂದು ತಿಳಿದಿರುವರು. ಆದಕಾರಣ ಬಾಲ್ಯಶಿಲಕರು ರುದ್ರಚತುರ್ಮುಖರೇ ಸರ್ವೋತ್ತಮರೆಂದು ಹೇಳಿದ್ದು ಹೇಗೆ ಕೂಡುತ್ತದೆ? ಎಂದರೆ—

ಭಾ. ॥ (೧) ವಿಶೇಷಜ್ಞಾನಸಂಪ್ರಾಪ್ತ್ಯೈ ಜ್ಞಾನಂತೋಽಪಿ ಪರಾ ಹರಿಂ । ಬ್ರೂಯುರ್ದೇವಾಶ್ಚ ಋಷಯಸ್ತದನ್ಯಸ್ಯ ಪರಾತ್ಮತಾಂ ॥ ಇತಿ ಬ್ರಹ್ಮತರ್ಕೇ ॥ (೨) ಸ್ವರ್ಗಾಭಿಮಾನಿನಂ ರುದ್ರಂ ಪ್ರತಿ ಸಾಮಾಭಿಸಂಸ್ಥಾಪಯಾಮಃ । ತಸ್ಮಾತ್ತ್ವಕಂ ಹಿ ಸಾಮ ॥ (೩) ಮೂರ್ಧಾ ತೇ ವಿಪತೇದಿತಿ ಯಃಕಶ್ಚಿದ್ ಬ್ರೂಯಾಚ್ಚೈದ್ವಿಪತಿಷ್ಯತಿ । ಬ್ರಹ್ಮೈವ ಹಿ ಹೃಥಿವ್ಯಾತ್ಮಾ ॥ ೧, ೨, ೩, ೪, ೫, ೬, ೭ ॥ ಇತ್ಯೃಗ್ವೇದ ಖಿಂಡಃ ॥ ೩-ಅ ॥ ॥ ೨ ॥

ಅ ॥ (೧) ದೇವತೆಗಳೂ ಋಷಿಗಳೂ ಕೂಡ ಶ್ರೀಹರಿಯೇ ಸರ್ವೋತ್ತಮನೆಂದು ತಿಳಿದಿದ್ದರೂ ವಿಶೇಷಜ್ಞಾನವನ್ನು ಪ್ರಕಟಿಸುವುದಕ್ಕಾಗಿ ಶ್ರೀಹರಿಯಿಂದ ಬೇರೆಯಾದ ರುದ್ರಾದಿಗಳು ಸರ್ವೋತ್ತಮ

ಲೆಂದು ಹೇಳುವರು. ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ. (೨) ಸಾಮವೇದವು ಸ್ವರ್ಗಲೋಕಕ್ಕೆ ಅಧಿಪತಿಯಾದ ರುದ್ರನನ್ನು ಹೊಗಳುವ ಕಾರಣ ಸ್ವರ್ಗಾಧಿಪತಿಯಾದ ರುದ್ರನ ಮಹಿಮೆಯನ್ನು ಹೇಳುತ್ತದೆಂದು ಹೇಳುತ್ತೇವೆ. (೩) (ಯಸ್ತ್ವೇತಮೇವಂ ಬ್ರೂಯಾತ್ ಮೂರ್ಧಾ ತೇ ವಿಪತಿಷ್ಯತಿ ಇತ್ಯಾದಿಗಳ ಅರ್ಥ ಹೇಳುತ್ತಾರೆ—) ನಿನ್ನ ತಲೆಯು ತುಂಡಾಗಿ ಕೆಳಗೆ ಬೀಳುವುದು ಎಂದು ಜ್ಞಾನಿಯು ಹೇಳಿದರೆ ನಿಶ್ಚಯವಾಗಿಯೂ ಕೆಳಗೆ ಬೀಳುವುದು. ಚತುರ್ಮುಖ ಬ್ರಹ್ಮನೇ ಭೂಲೋಕಕ್ಕೆ ಅಧಿಪತಿಯು. ೩–೮ ॥ ॥ ೧. ೨. ೩. ೫. ೫. ೬. ೭ ॥ ॥ ೭ ॥

ಎಂಟನೇ ಖಂಡವು ಮುಗಿಯಿತು.

೯ನೇ ಖಂಡವು

ಉ. ॥ ಅಸ್ಯ ಲೋಕಸ್ಯ ಕಾ ಗತಿರಿತ್ಯಾಕಾಶ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುತ್ಪದ್ಯಂತೇ ಆಕಾಶಂ ಪ್ರತ್ಯಸ್ತಂ ಯಂತ್ಯಾಕಾಶೋ ಹ್ಯೇವೈಭ್ಯೋ ಜ್ಯಾಯಾನಾಕಾಶಃ ಪರಾಯಣಂ ಸ ಏಷ ಪರೋವರೀಯಾನುದ್ಗೀಥಃ ಸ ಏಷೋಽನಂತಃ ॥ ೧ ॥

ಅ ॥ ಭೂಲೋಕಕ್ಕೆ ಅಧಿಪತಿಯಾದ ಬ್ರಹ್ಮನಿಗೆ ಆಶ್ರಯವು ಯಾರು? ಎಂದು ಶಿಲಕನು ಪ್ರಶ್ನೆ ಮಾಡಿದಾಗ ಪ್ರವಾಹಣನು ಚೆನ್ನಾಗಿ ಪ್ರಕಾಶಿಸಿಕೊಂಡಿರುವುದರಿಂದ ಆಕಾಶ ಎನಿಸಿಕೊಂಡ ವಿಷ್ಣುವು, ಎಂದು ಹೇಳಿದನು. (ಅದು ಹೇಗೆ ಕೂಡುತ್ತದೆಂದರೆ ಅವನ ಮಹಿಮೆ ಹೇಳುತ್ತಾರೆ—) ಪ್ರಸಿದ್ಧರಾದ ಬ್ರಹ್ಮರುದ್ರಾದಿಗಳೆಲ್ಲರೂ ಆಕಾಶನೆನಿಸಿಕೊಂಡ ಶ್ರೀಹರಿಯಿಂದಲೇ ಹುಟ್ಟುತ್ತಾರೆ, ನಾಶಹೊಂದುತ್ತಾರೆ. ಅತನೇ ಬ್ರಹ್ಮರುದ್ರಾದಿಗಳಿಂದ ಶ್ರೇಷ್ಠನು. ಸರ್ವರಿಗೂ ಮುಖ್ಯವಾಗಿ ಆಶ್ರಯನು ಚೆನ್ನಾಗಿ ಈತನು ಉತ್ತಮೋತ್ತಮೋತ್ತಮನು. ಚೆನ್ನಾಗಿ ಸ್ತೋತ್ರಮಾಡಿಸಿ ಕೊಳ್ಳುವವನು. ಎಲ್ಲಾ ಕಾಲಗಳಲ್ಲಿಯೂ ದೇಶಗಳಲ್ಲಿಯೂ ಇರುವವನು. ಎಲ್ಲಾ ಗುಣಗಳಿಂದ ಪರಿಪೂರ್ಣನು. ॥ ೧ ॥

ಪೀ—ಈ ರೀತಿಯಾಗಿ ಭಗವಂತನನ್ನು ಧ್ಯಾನಿಸುವವನಿಗೆ ಫಲ ಹೇಳುತ್ತಾರೆ—

ಉ. ॥ ಪರೋವರೀಯೋ ಹಾಸ್ಯ ಭವತಿ ಪರೋವರೀಯಸೋ ಹ ಲೋಕಾನ್ಜಯತಿ ಉ ಯ ಏತಮೇವಂವಿದ್ವಾನ್ ಪರೋವರೀಯಾಂಸಮುದ್ಗೀಥಮುಪಾಸ್ತೇ ॥ ೨ ॥

ಅ ॥ ಆಕಾಶ ಎಂದು ಹೆಸರುಳ್ಳ ಉತ್ತಮೋತ್ತಮೋತ್ತಮನಾದ ಶ್ರೀಹರಿಯು ಚತುರ್ಮುಖನಿಗೆ ಆಶ್ರಯನೆಂದು ತಿಳಿದುಕೊಂಡು ಧ್ಯಾನಿಸುವವನನ್ನು ಪರೋವರೀಯ ಎಂದು ಹೆಸರುಳ್ಳ ಶ್ರೀಹರಿಯು ರಕ್ಷಿಸುತ್ತಾನೆ. ಹಾಗೆ ಧ್ಯಾನಿಸುವವನು ಉತ್ತಮೋತ್ತಮಗಳಾದ ವಿಷ್ಣುಲೋಕಗಳನ್ನು (ಅಂದರೆ—ವೈಕುಂಠ ಅನಂತಾಸನ ಶ್ವೇತದ್ವೀಪಗಳನ್ನು) ಹೊಂದುತ್ತಾನೆ. ॥ ೨ ॥

ಪೀ—ಶ್ರೀಹರಿಯು ರಕ್ಷಿಸುತ್ತಾನೆ, ಎಂದು ಹೇಳಿದುದರಲ್ಲಿ ವಿಶ್ವಾಸವು ಹುಟ್ಟುವುದಕ್ಕಾಗಿ ಕಥೆ ಹೇಳುತ್ತಾರೆ—

ಉ. ॥ ತಂ ಹೈತಮೇವಂವಿದ್ವಾಂಸಂ ಶೌನಕ ಉದರಶಾಂಡಿಲ್ಯಾಯೋಕ್ತ್ವೋವಾಚ ಯೋವತ್ತ ಏನಂ ಪ್ರಜಾಯಾಮುದ್ಗೀಥಂ ವೇದಿಷ್ಯಂತೇ ಪರೋವರೀಯೋ ಹೈವೈವಾಸ್ಮಾವದಸ್ಮಿಂಲ್ಲೋಕೇ ಜೀವನಂ ಭವಿಷ್ಯತಿ ತಥಾಮುಷ್ಮಿಂಲ್ಲೋಕ ಇತಿ ಸ ಏತಮೇವಂವಿದ್ವಾನುಪಾಸ್ತೇ ಪರೋವರೀಯ ಏವ ಹಾಸ್ಮಾಸ್ಮಿಂಲ್ಲೋಕೇ ಜೀವನಂ ಭವತಿ ತಥಾಮುಷ್ಮಿಂಲ್ಲೋಕೇ ಲೋಕ ಇತಿ ಲೋಕೇ ಲೋಕ ಇತಿ ॥ ಇತಿ ನವಮಃ ಖಂಡಃ ॥ ೩-೯ ॥ ॥ ೩ ॥

ಅ ॥ ಶೌನಕನ ಮಗನಾದ ಅಭಿಪ್ರತಾರಿ ಎನ್ನುವ ವಖಿಸಿಯು ಓಂಕಾರ ಎಂದು ಹೆಸರುಳ್ಳ ಶ್ರೀಹರಿಯನ್ನು ಉದರಶಾಂಡಿಲ್ಯ ಎಂಬ ತನ್ನ ಶಿಷ್ಯನಿಗೆ ಹೇಳಿ ಫಲವನ್ನು ಹೇಳಿದನು. ಅಧಿಕಾರಿಜೀವರ ಸಮೂಹವಲ್ಲಿ ಉದ್ಗೀಥನನ್ನು ತ್ರೇತಾಯುಗದಲ್ಲಿ ತಿಳಿಯುವವರಿಗೆ ದ್ವಾಪರಾದಿಯುಗಪರ್ಯಂತ ಈ ಲೋಕದಲ್ಲಿ ಜೀವನವಾಗುವುದು ಹಾಗೆಯೇ ಪರಲೋಕದಲ್ಲಿಯೂ ಸುಖಜೀವನವಾಗುವುದು, ಎಂದು ಹೇಳಿದನು. ಹಾಗೆಯೇ ಇಂತಹ ಫಲವಿದೆ ಎಂದು ತಿಳಿದು ಉದ್ಗೀಥನನ್ನು ಧ್ಯಾನಿಸುವವನು ಶ್ರೀಹರಿಯ ಅನುಗ್ರಹದಿಂದ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವಾಗಿ ಬಾಳುತ್ತಿರುತ್ತಾನೆ. ॥ ೩-೯ ॥

೫೯–೯ನೇ ಖಂಡದ ೧ನೇ ಮಂತ್ರದಲ್ಲಿರುವ ಅಕಾರಾದಿ ಶಬ್ದಗಳ ಅರ್ಥವನ್ನು ಹೇಳುತ್ತಾರೆ—

ಭಾ. ॥ (೧) ವಿಷ್ಣುರಾಕಾರನಾಮಕಃ। ಆದೀಪ್ತತ್ವಾದ್ವರೀಯಾಂಶ್ಚ ಪರಮೋ ಹರಿರೇವ ಹಿ ॥ ಇತಿ ಸತ್ವತ್ತ್ವೇ ॥ (೨) ಶುಭಾಶುಭಾನಾಂ ದಾಹಾದ್ ಸಾಮ್ಯಾತ್ಸಾಮಾಗ್ನಿರೀರಿತಃ ॥ (೩) ಸ್ವೋ ವಿಷ್ಣುಃ ಸಾಗರೇ ರಂತಾ ವರುಣೋಽತಃ ಸ್ವರಃ ಸ್ಮೃತಃ । ಉದಯಾಜ್ಜಗತ್ಕರ್ಮಣೇತ್ಯಾತ್ಸ ಸೂರ್ಯಃ ಪ್ರಾಣ ಉದಾಹೃತಃ ॥ (೪) ಅಕ್ತಾ ರುದ್ರಸ್ತದ್ವಿರೋಧಾದ್ವಕ್ತಾ ಸ್ಯಾದನ್ನನಾಮಕಃ ॥ (೫) ಸ್ವೋ ವಿಷ್ಣುಸ್ತದ್ರತಿರ್ವಾಯುಸ್ತದ್ಭೋ ಮುಕ್ತೌ ಸದಾಶಿವಃ । ಅತಃ ಸ್ವರ್ಭೋಃ ಸುಸಂಸ್ಥತ್ವಾದಸಾವಿತಿ ಚ ಕೀರ್ತಿತಃ ॥ (೬) ಸರ್ವದೇವಾಂತರತ್ವಾತ್ತು ಬ್ರಹ್ಮಾಯಂ ಸಮುದಾಹೃತಃ । ಲೋಕೋ ಜ್ಞಾನಸ್ವರೂಪತ್ವಾದೇತೇಷಾಂ ಪರಮೋ ಹರಿಃ ॥ ಇತಿ ಬ್ರಹ್ಮತರ್ಕೇ ॥ ೧ ॥

ಅ ॥ (೧) ಜ್ಞಾನಾದಿ ಪ್ರಕಾಶಿಸಿಕೊಂಡಿರುವುದರಿಂದ ವಿಷ್ಣುವು ಅಕಾರಸೆನಿಸುತ್ತಾನೆ. (ಪರೋವರೀಯಾನ್=) ಶ್ರೀಹರಿಯೇ ಉತ್ತಮರಲ್ಲಿಯೂ ಉತ್ತಮೋತ್ತಮನು, ಎಂದು ಸತ್ವತ್ತ ಎಂಬ ಗ್ರಂಥದಲ್ಲಿದೆ. (೨) (೩ನೇ ಖಂಡದಲ್ಲಿ **ಅಗ್ನಿಃ ಸಾಮ** ಇತ್ಯಾದಿಗಳಲ್ಲಿ ಅಗ್ನಿ ಮೊದಲಾದವರು ಸಾಮವೇದಾದಿಗಳಿಗೆ ಅಧಿಪತಿಗಳಾಗಿರುವುದರಿಂದ ಅವರಿಗೆ ಸಾಮ ಮೊದಲಾದ ಹೆಸರು, ಎಂದು ಹೇಳಿದ್ದು ಹೇಗೆ ಕೂಡುತ್ತದೆ ಎಂದರೆ–) ಶುಭ=ಮಂಗಲಪ್ರದವಸ್ತು, ಕೆಟ್ಟವಸ್ತು ಇವುಗಳನ್ನು ಸುಡುವುದರಲ್ಲಿ ವ್ಯತ್ಯಾಸವಿಲ್ಲದೆ ಸಮನಾಗಿದ್ದಕಾರಣ ಅಗ್ನಿಯು ಸಾಮನೆನಿಸುತ್ತಾನೆ. (೩) (೩ನೇ ಖಂಡದ ೩ನೇ ಮಂತ್ರದಲ್ಲಿದ್ದ ಸ್ವರ ಪ್ರಾಣ ಮೊದಲಾದ ಶಬ್ದಗಳ ಅರ್ಥವನ್ನು ಹೇಳುತ್ತಾರೆ—) ಸುಖರೂಪನಾದ ಶ್ರೀವಿಷ್ಣುವು ಕ್ಷೀರಸಮುದ್ರದಲ್ಲಿ ಕ್ರೀಡಿಸಿಕೊಂಡಿರುವುದರಿಂದ ಸಮುದ್ರಕ್ಕೆ ಅಧಿಪತಿಯಾದ ವರುಣನು ಸ್ವರ ಎನ್ನಿಸುತ್ತಾನೆ. ಸೂರ್ಯನು ಉದಯಿಸಿ ಲೋಕದಲ್ಲಿದ್ದ ಜನರಿಗೆ ಕಾರ್ಯಗಳಲ್ಲಿ ಪ್ರವೃತ್ತಿ ಮಾಡಿಸುವುದರಿಂದ ಪ್ರಾಣನೆನಿಸುತ್ತಾನೆ. (೪) ರುದ್ರನು ಜಗತ್ತನ್ನು ಸಂಹರಿಸುವನು. ದಕ್ಷಪ್ರಜಾಪತಿಯು ರುದ್ರನಿಗೆ ವಿರೋಧಿಯು. ಆದುದರಿಂದ

ಅತನಿಗೆ ಅನ್ನ ಎಂದು ಹೆಸರು. (೫) (೮ನೇ ಖಂಡದ ೪ನೇ ಮಂತ್ರದಲ್ಲಿವ್ವ ಸ್ವರ್ಗಃ ಅಸೌ, ಲೋಕಃ ಈ ಶಬ್ದಗಳಿಗೆ ಅರ್ಥ ಹೇಳುತ್ತಾರೆ—) ಸ್ವತಂತ್ರನಾದ ವಿಷ್ಣುವಿಗೆ ಸ್ವಃ ಎನ್ನಿಸುತ್ತಾನೆ. ವಿಷ್ಣುವಿನಲ್ಲಿ ಸದಾ ಆಸಕ್ತಿಯಿರುವುದರಿಂದ ವಾಯುವಿಗೆ ಸ್ವಃ ಎಂದು ಹೆಸರು. ಮೋಕ್ಷದಲ್ಲಿ ಮುಖ್ಯವಾಯುವನ್ನು ಸದಾ ಆಶ್ರಯಿಸಿಕೊಂಡಿರುವುದರಿಂದ ಸದಾಶಿವನು ಸ್ವರ್ಗಃ ಎಂದೂ, ಸ್ವರ್ಗಲೋಕಕ್ಕೆ ಅಧಿಪತಿಯಾಗಿರುವುದರಿಂದ ಅಸೌ ಎಂದೂ, ಜ್ಞಾನರೂಪನಾದುದರಿಂದ ಲೋಕಃ ಎಂದೂ ಅನ್ನಿಸುತ್ತಾನೆ. (೬) (೭ನೇ ಮಂತ್ರದಲ್ಲಿದ್ದ ಅಯಂ, ಲೋಕಃ ಈ ಶಬ್ದಗಳ ಅರ್ಥ ಹೇಳುತ್ತಾರೆ—) ಬ್ರಹ್ಮನು ಎಲ್ಲಾ ದೇವತೆಗಳೊಳಗೆ ಇದ್ದು ಕಾರ್ಯಗಳನ್ನು ಮಾಡಿಸುವುದರಿಂದ ಅಯಂ ಎಂದೂ, ಜ್ಞಾನಸ್ವರೂಪನಾದುದರಿಂದ ಲೋಕಃ ಎಂದೂ ಎನಿಸುತ್ತಾನೆ. ಎಲ್ಲಾ ದೇವತೆಗಳಿಂದಲೂ ಶ್ರೀಹರಿಯೇ ಉತ್ತಮನೆಂದು ಬ್ರಹ್ಮತರ್ಕದಲ್ಲಿದೆ. ॥ ೧ ॥

ಭೀ—೮ನೇ ಖಂಡದ ೩ನೇ ಮಂತ್ರದಲ್ಲಿದ್ದ ಅಪ್ ಶಬ್ದಾರ್ಥವನ್ನು ಹೇಳುತ್ತಾರೆ—

ಭಾ. ॥ (೧) ಆ ಪಾಲನಾದಾಪ ಇಂದ್ರಃ ॥ (೨) ಅಧಿಕಂ ವರೀಯಾನ್ ಪರೋಮವೀಯಾನ್ । ತಸ್ಯರೋ ವರೀಯೋಃಸ್ಯ ರಕ್ಷಕಂ ಭವತಿ ॥ (೩) ಯಾವತ್ತಃ ದ್ವಾಪರಾದಿಪರ್ಯಂತಂ ॥ ೧, ೨, ೩ ॥ ಇತಿ ನವಮಃ ಖಂಡಃ ॥ ೩–೯ ॥ ॥ ೨ ॥

ಅ ॥ (೧) ಸರ್ವಜಗತ್ತನ್ನು ವಿನ್ನಾಗಿ ರಕ್ಷಿಸುವುದರಿಂದ ಆಪಃ ಇಂದ್ರನು. (೨) (೮ನೇ ಖಂಡದ ೧ನೇ ಮಂತ್ರದಲ್ಲಿದ್ದ ಪರೋವರೀಯಾನ್ ಎಂಬ ಶಬ್ದಾರ್ಥ ಹೇಳುತ್ತಾರೆ) ಅತ್ಯಧಿಕ ಶ್ರೀಪತ್ನನು ಪರೋವರೀಯಾನ್ ಎನಿಸುತ್ತಾನೆ. ಆ ಉತ್ತಮೋತ್ತಮನಾದ ಶ್ರೀಪತಿಯು ಹೀಗೆ ತಿಳಿದವನನ್ನು ಕಾಪಾಡುತ್ತಾನೆ. (೩) ೨ನೇ ಮಂತ್ರದಲ್ಲಿದ್ದ ಯಾವತ್ತಃ ಎಂಬುದಕ್ಕೆ ದ್ವಾಪರಾದಿಕಾಲಪರ್ಯಂತ ಎಂದರ್ಥ ॥ ೧, ೨, ೩ ॥ ೩–೯ ॥ ॥ ೨ ॥

ಒಂಭತ್ತನೇ ಖಂಡವು ಮುಗಿಯಿತು.

೧೦ನೇ ಖಂಡವು

ಭೀ—ಸಾಮದೊಳಗಣ ಪ್ರಸ್ತಾವ-ಪ್ರತಿಹಾರ-ಉದ್ಗೀಥ ಎಂಬ ಸಾಮಗಳಲ್ಲಿ ವರ್ಣಿಸಲ್ಪಡುವ ಶ್ರೀಹರಿಯ ಉಪಾಸನೆಯನ್ನು ಹೇಳಲುಪಯುಕ್ತವಾದ ಕಥೆಯನ್ನು ಹೇಳುತ್ತಾರೆ—

ಉ. ॥ ಮಟಚೀಹತೇಷು ಕುರುಷ್ವಾಥಕ್ಯಾ ಸಹ ಜಾಯಯೋಷಸ್ತಿರ್ಹ ಚಾಕ್ರಾಯಣ ಇಭ್ಯಗ್ರಾಮೇ ಪ್ರದ್ರಾಣಕ ಉನಾಸ ಸಹೇಭ್ಯಂ ಕುಲ್ಮಾಷಾನ್ ಖಾದಂತಂ ಬಿಭಿಕ್ಷೇ ॥ ೧ ॥

ಅ ॥ ಚಕ್ರಂ ಅಯನಂ ಯಸ್ಯ ಎಂಬ ವ್ಯುತ್ಪತ್ತಿಯಿಂದ ಹೆಚ್ಚಾಗಿ ರಥಚಕ್ರದ ಸಮಾಪದಲ್ಲಿರುವ ಚಕ್ರಾಯಣನ ಮಗನಾದ ಉಷಸ್ತಿ ಎಂಬುವನು ಕುರುದೇಶದಲ್ಲಿ ಅವಾಸಮಾಡುತ್ತಿರುವಾಗ, ಕುರುದೇಶವು ಕಲ್ಮಷಗಳಿಂದ ಖಾಲಿಯಾಗಿ (ಅತಿವೃಷ್ಟಿಯಿಂದ ಅಲ್ಲಿ ದುರ್ಭಿಕ್ಷೆಯುಂಟಾಗಲು) ಯೌವನವನ್ನು ಹೊಂದುತ್ತಿರುವ ತನ್ನ ಹೆಂಡತಿಯಿಂದೊಡಗೂಡಿ ಮಹಾಧನಿಕನ ಗ್ರಾಮದಲ್ಲಿ ಅನ್ನ ಪಾನಗಳಿಗಾಗಿ ಅಲ್ಲಲ್ಲಿ

ಓಡುತ್ತಾ ಅವಾಸವಮಾಡಿಕೊಂಡಿದ್ದವು. ಆ ಉಷಸ್ತಿಯು ಅತ್ಯಾರ್ತಿಯಾಗಿ ಸಂಚರಿಸುತ್ತಾ ಅರಣ್ಯದಲ್ಲಿರತಕ್ಕ ಕೆಟ್ಟ ಕಾಡು ಉದ್ದುಗಳನ್ನು ತಿನ್ನುತ್ತಿರುವ ಧನಿಕನೊಡನೆ ಬೇಡಿದನು. ॥ ೨ ॥

ಉ. ॥ ತಂ ಹೋವಾಚ ನೇತೋಽನ್ಯೇ ವಿದ್ಯಂತೇ ಯಚ್ಛ ಯೇ ಮ ಇಮ ಉಷನಿಹಿತಾ ಇತ್ಯೇತೇಷಾಂ ಮೇ ದೇಹೀತಿ ಹೋವಾಚ ತಾನಸ್ಮೈ ಪ್ರದದೌ ಹಂತಾನುಪಾನಮಿತ್ಯುಚ್ಚಿಷ್ಟಂ ವೈ ಮೇ ಪೀತಶೇ ಸ್ಯಾದಿತಿ ಹೋವಾಚ ನ ಸ್ವಿದೇತೇಽಪ್ಯುಚ್ಚಿಷ್ಟಾ ಇತಿ ॥ ೩ ॥

ಆ ॥ ಆ ಧನಿಕನು, (ಎಲೋ ಉಷಸ್ತಿಯೇ) ನನ್ನ ಸವಿಾಪದಲ್ಲಿ ನನಗೆ ತಿನ್ನಲಿಕ್ಕಾಗಿ ಇಟ್ಟಿದ್ದ ಇಷ್ಟು ಉದ್ದಿನ ರಾಶಿ ಮಾತ್ರ ಇದೆ. ಇದಕ್ಕಿಂತ ಬೇರೆ ಇಲ್ಲವೇ ಇಲ್ಲ. (ಇವುಗಳು ತಿಂದುಳಿದವುಗಳಾದುದರಿಂದ ಕೊಡಲು ಯೋಗ್ಯಗಳಲ್ಲ.) ಎಂದು ಉಷಸ್ತಿಯೊಡನೆ ಹೇಳಿದನು. ಆಗ ಉಷಸ್ತಿಯು ಆ ಧನಿಕನೊಡನೆ ನಿನಗೆ ತಿನ್ನಲಿಕ್ಕೆ ಇಟ್ಟಿದ್ದ ಉಚ್ಛಿಷ್ಟಗಳೇ ಆದ ಈ ಉದ್ದುಗಳ ಮಟ್ಟಿಗಾದರೂ ಕೆಲವು ನನಗೆ ಕೊಡು, ಎಂದನು. ಆಗ ಧನಿಕನು ಆ ಕಾಡು ಉದ್ದುಗಳನ್ನು ಉಷಸ್ತಿಗೆ ಕೊಟ್ಟನು. ಆ ಮೇಲೆ ಉಚ್ಛಿಷ್ಟ (ಕುಡಿದುಳಿದ) ನೀರನ್ನು ಕುಡಿ, ಅಥವಾ ಕೈಯಲ್ಲಿದ್ದ ಚಮ್ಮಾದ ಜೋಳಿಗೆಯಲ್ಲಿದ್ದ ನೀರನ್ನು ಕುಡಿ ಎಂದನು ಉಚ್ಛಿಷ್ಟವಾದ ನೀರನ್ನು ಕುಡಿಯಬೇಕೆಂದು ಪ್ರಾರ್ಥಿಸಿಕೊಳ್ಳಲ್ಪಟ್ಟ ಚಾಕ್ರಾಯಣನು ಈ ನೀರನ್ನು ನಾನು ಕುಡಿದರೆ ಎಂಜಲು ನೀರನ್ನೇ ನಾನು ಕುಡಿದಂತೆ ಆಗುವುದು. (ಅದಕಾರಣ ಕುಡಿಯಲಾರೆ) ಎಂದನು. ಆಗ ಧನಿಕನು ಈ ಕಾಡು ಉದ್ದುಗಳು ಉಚ್ಛಿಷ್ಟಗಳಲ್ಲವೋ? ಏನು? (ಇವುಗಳು ಉಚ್ಛಿಷ್ಟಗಳೇ ಆಗಿವೆ ಎಂದನು ॥ ೪ ॥

ಉ. ॥ ನ ವಾ ಅಜೀವಿಷ್ಯಮಿಮಾನಖಾದನ್ನಿತಿ ಹೋವಾಚ ಕಾಮೋ ಮ ಉದಪಾನಮಿತಿ ಸ ಹ ಖಾದಿತ್ವಾತಿಶೇಷಾನ್ ಜಾಯಾಯೈ ಆಜಹಾರ ಸಾಗ್ರ ಏವ ಸುಭಿಕ್ಷಾ ಬಭೂವ ತಾನ್ಪ್ರತಿಗೃಹ್ಯ ನಿದಧೌ ॥ ೪ ॥

ಆ ॥ ಆಗ ಉಷಸ್ತಿಮುನಿಯು ಹೇಳಿದನು (ಎಲೋ ಧನಿಕನೇ) ನಿನ್ನ ಉಚ್ಛಿಷ್ಟಗಳಾದ ಕಾಡು ಉದ್ದುಗಳನ್ನು ನಾನು ತಿನ್ನದೆ ಇರುತ್ತಿದ್ದರೆ ಸರ್ವಥಾ ಬದುಕುತ್ತಿರಲಿಲ್ಲ. (ಅದಕಾರಣ ನ್ಯಾಯ ಹೋಗುವ ಕಾಲದಲ್ಲಿ ಜ್ಞಾನಿಯಾದವನಿಗೆ ದೋಷವಿಲ್ಲದಿರುವುದರಿಂದ ಅವುಗಳನ್ನು ತಿಂದೆನು.) (ಎಲ್ಲೆಡೆಯಲ್ಲಿಯೂ ಮಳೆ ಬರುವುದರಿಂದ ನೀರು ಸುಲಭವಾಗಿ ಸಿಗುವ ಕಾರಣ) ಜಲಪಾನವು ನನ್ನ ಇಚ್ಛೆಯ ಅಧೀನವು. (ವೃಥಾ ಎಂಜಲುನೀರನ್ನು ಕುಡಿದರೆ ದೋಷವು ಬರುವುದರಿಂದ ನೀರನ್ನು ನಾನು ಕುಡಿಯಲಾರೆ.) ಎಂದು ಹೇಳಿದನು. ಆ ಉಷಸ್ತಿ ಋಷಿಯು ಉದ್ದನ್ನು ಜಗಿದು ತಿಂದು ಉಳಿದವುಗಳನ್ನು ಹೆಂಡತಿಗೆ ತಂದುಕೊಟ್ಟನು. ಆ ಹೆಂಡತಿಯು ಗಂಡನು ಬರುವುದಕ್ಕಿಂತ ಮೊದಲೇ ಒಳ್ಳೇ ಭಿಕ್ಷೆಯನ್ನು ಬೇಡಿತಿಂದು ಹಸಿವೆ ಇಲ್ಲದವಳಾಗಿದ್ದಳು. ಅದಕಾರಣ ಆ ಕಾಡು ಉದ್ದುಗಳನ್ನು ಗಂಡನ ಕೈಯಿಂದ ತೆಗೆದುಕೊಂಡು ಸಂಗ್ರಹ ಮಾಡಿಟ್ಟಳು. ॥ ೫ ॥

ಉ. ॥ ಸ ಹ ಪ್ರಾತಃ ಸಂಜಿಹಾನ ಉವಾಚ ಯದ್ಧ ತಾನ್ನಸ್ಯೈ ಲಭೇಮಹಿ ಲಭೇಮಹಿ ಧನಮೂತ್ರಾೀ ರಾಜಾಽಸೌ ಯಕ್ಷ್ಯತೇ ಸ ನೋ ಸರ್ವೇರಾತ್ವಿಜ್ಯೈರ್ವ್ರಣೀತೇತಿ ॥ ೪ ॥

ಅ ॥ ಆ ಜಾಕ್ಯಾಯಣ ಮುನಿಯು (ಆ ರಾತ್ರಿ ಕಳೆದು) ಬೆಳಗ್ಗೆ ಹಾಸಿಗೆಯಿಂದ ಎದ್ದೊಡನೆ (ಪ್ರತಿನಿತ್ಯವೂ ಅವಶ್ಯಕರ್ಮಾಗಿ ದುಃಖಿಸುತ್ತಿರುವ) ಹೆಂಡತಿಗೆ ಹೇಳಿದನು ಪ್ರಿಯಳೇ ಸ್ವಲ್ಪವಾದರೂ ಅನ್ನವು ಸಿಗುವುದಾದರೆ (ಅದನ್ನುಂಡು ಬಾಳಿ) ಹಣವನ್ನು ಗಳಿಸ್ಯೇನು (ಅದರಿಂದ ನಮಗೆ ಸುಖಜೀವನವಾದೀತು. ನಿನ್ನ ದುಃಖ ಪರಿಹಾರವಾದೀತು.) ಅದುಕಾರಣ ದೂರದಲ್ಲಿ ಒಬ್ಬ ರಾಜನು ಯಾಗ ಮಾಡುವನು. (ಅಲ್ಲಿಗೆ ನಾನು ಹೋಗುವೆನು.) ಆ ರಾಜನು ಎಲ್ಲಾ ಋತ್ವಿಜರ ಕರ್ಮಗಳ ವಿಚಾರಕ್ಕಾಗಿ ನನ್ನನ್ನು ನಿಯಮಿಸುವನು. (ಅದಕಾರಣ ಯಾವುದಾದರೂ ಬುತ್ತಿಯು ಇದೆಯೋ?) ಎಂದು ಕೇಳಿದನು ॥ ೪ ॥

ಉ. ॥ ತಂ ಜಾಯೋವಾಚ ಹಂತ ಪತ ಇನು ಏವ ಕುಲ್ಮಾಷಾ ಇತಿ ತಾನ್ ಖಾದಿತ್ವಾಮುಂ ಯಜ್ಞಂ ವಿತತಮೇಯಾಯ ತತ್ರೋದ್ಗಾತ್ರ್ಯಾನಾಸ್ತಾವೇ ಸ್ತೋಷ್ಯಮಾಣಾನುಪೋಪ ವಿವೇಶ ಸ ಹ ಪ್ರಸ್ತೋತಾರಮುವಾಚ ॥ ೫ ॥

ಅ ॥ ಆಗ ಹೆಂಡತಿಯು ಎಲೋ ಪ್ರಿಯರೇ ನಿನ್ನೆ ತಂದುಕೊಟ್ಟ ಉದ್ದುಗಳೇ ಇವೆ. (ಅವುಗಳನ್ನೇ ಬುತ್ತಿ ಕಟ್ಟಿಕೊಂಡು ಹೋಗಬಹುದೆಂದು ಹೇಳಿದಳು. ಆಗ) ಉಷಸ್ತಿಯು ಅವುಗಳನ್ನು ತಿಂದು ರಾಜನ ಸಮೃದ್ಧವಾದ ಯಾಗಕ್ಕೆ ಹೋದನು. ಆ ಯಾಗದಲ್ಲಿ ಆಸ್ತಾವ ಎಂಬ ಕರ್ಮದಲ್ಲಿ ಸ್ತೋತ್ರ ಮಾಡುವ ಉದ್ಗಾತೃಗಳ ಸವಿಾಪದಲ್ಲಿ ಉಷಸ್ತಿಯು ಕುಳಿತುಕೊಂಡು ಪ್ರಸ್ತೋತನ ಋತ್ವಿಕ್ಕನ್ನು ಕೇಳಿದನು. ॥ ೫ ॥

ಉ. ॥ ಪ್ರಸ್ತೋತರ್ಯಾ ದೇವತಾ ಪ್ರಸ್ತಾವಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರಸ್ತೋಷ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ॥ ೬ ॥

ಅ ॥ ಎಲೋ ಪ್ರಸ್ತೋತನೇ ಯಾವ ದೇವತೆಯು ಪ್ರಸ್ತಾವ ಎಂಬ ಸಾಮವಿಶೇಷದಲ್ಲಿ ಹೇಳಲ್ಪಡುತ್ತದೋ ಆಂತಹ ದೇವತೆಯನ್ನು ತಿಳಿಯದೆ ಹೊಗಳಿದರೆ ನಿನ್ನ ಶಿರಸ್ಸು ತುಂಡಾಗಿ ಕೆಳಗೆ ಬೀಳುವುದು, ಎಂದು ಪ್ರಸ್ತೋತನಿಗೆ ಉಷಸ್ತಿಯು ಹೇಳಿದನು. ॥ ೬ ॥

ಉ. ॥ ಏವಮೇವೋದ್ಗಾತಾರಮುವಾಚೋದ್ಗಾತರ್ಯಾ ದೇವತೋದ್ಗೀಥಮನ್ವಾಯತ್ತಾ ತಾಂ ಚೇದವಿದ್ವಾನುದ್ಗಾಸ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ॥ ೭ ॥

ಅ ॥ ಹೀಗೆಯೇ ಉದ್ಗಾತನಿಗೆ ಹೇಳಿದನು.....ಗಾನಮೂರ್ತಿವಿಶೇ.....* ॥ ೭ ॥

ಉ. ॥ ಏವಮೇವ ಪ್ರತಿಹರ್ತಾರಮುವಾಚ ಪ್ರತಿಹರ್ತರ್ಯಾ ದೇವತಾ ಪ್ರತಿಹಾರಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರತಿಹರಿಷ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ತೇ ಹ ಸಮೂಚಿರೇ ॥ ಇತಿ ದಶಮಃ ಖಂಡಃ ॥ ೩-೧೦ ॥ ॥ ೮ ॥

* ಸಿಂಧಿಸಂತೆ ಅಕ್ಷರಗಳು

ಅ ॥ ಹೀಗೆಯೇ ಪ್ರತಿಹರ್ತನ ಪತ್ನಿಯೂ ಕೇಳಬೇಕು. ನಾಮದ ಅಂತವಾದ ಅಕ್ಷರವನ್ನು ಹೇಳುವಿ.... ಹೀಗೆ ಚಾಕ್ರಾಯಣನಿಂದ ಹೇಳಲ್ಪಟ್ಟ ಪ್ರಸ್ತೋತೃ ಮೊದಲಾದವರಿಗೆ ಪ್ರಸ್ತಾವಾದಿ ದೇವತೆಗಳ ಜ್ಞಾನವಿಲ್ಲದಿರುವ ಕಾರಣ ಅವರು ತಂತಮ್ಮ ವ್ಯಾಪಾರಗಳನ್ನು ಬಿಟ್ಟು ಸುಮ್ಮನೆ ಕುಳಿತರು. ॥ ೮ ॥

ಭಾ. ॥ (೧) ಉಪಲಾ ಇಷ್ಟಕಾ ಸ್ಥೂಲಾ ಮಟಿಚೀತಿ ಪ್ರಕೀರ್ತಿತಾಃ । ಇತಿ ಶಬ್ದನಿರ್ಣಯೇ ॥ (೨) ಅಸನ್ನಯೌವನಾ ಯೋಷಿದಾಢ್ಯ(ಟಿ)ಕೇತ್ಯಭಿಧೀಯತೇ । ಇತಿ ಚ ॥ (೩) ಪ್ರದ್ರವನ್ನನ್ನಪಾನಾರ್ಥಂ ಪ್ರದ್ರಾಣಕ ಇತೀರಿತಃ । ಇತಿ ಚ ॥ ನಿ. ೨, ೩, ೪, ೪, ೫, ೫, ೬ ॥ ಇತಿ ದಶಮಃ ಖಂಡಃ ॥ ೩–೧೦ ॥ ॥ ೧ ॥

ಅ ॥ (೧) ಸೊಡ್ಡ ಕಲ್ಲುವಳಗಳು ಮಟಿಚೀ ಎನ್ನಿಸುತ್ತವೆ ಎಂದು ಶಬ್ದನಿರ್ಣಯದಲ್ಲಿದೆ. (೨) ತಾರುಣ್ಯ ಬರಲಿಕ್ಕೆ ಸಮಾರಾದ ಸ್ತ್ರೀಯು ಆಟಕೇ ಎನಿಸುತ್ತಾಳೆ (೩) ಅನ್ನಪಾನಗಳಿಗಾಗಿ ಓಡುವವನು ಪ್ರದ್ರಾಣಕನೆನಿಸುತ್ತಾನೆ ॥ ೩, ೪ ಖಂಡ, ೪, ೫ ಖಂಡ, ೩–೧೦ ॥ ॥ ೧ ॥

ಪತ್ನೀನೇ ಖಂಡವು ಮುಗಿಯಿತು.

...ನೀನೇ ಖಂಡಃ

ಉ. ॥ ಅಥ ಹೈನಂ ಯಜಮಾನ ಉವಾಚ ಭಗವಂತಂ ವಾ ಅಹಂ ವಿವಿದಿಷಾಣೀತ್ಯುಷಸ್ತಿರಸ್ಮಿ ಚಾಕ್ರಾಯಣ ಇತಿ ಹೋವಾಚ ಸ ಹೋವಾಚ ಭಗವಂತಂ ವಾ ಅಹಮೇಭಿಃ ಸರ್ವೈರಾರ್ತ್ವಿಜ್ಯೈಃ ಪರ್ಯೇಷಿಷಂ ಭಗವತೋ ವಾ ಅಹಮುವಿತ್ತಾನ್ಯಾನನೃಷಿ ಭಗವಾಂಸ್ತ್ವೇವ ಮೇ ಸರ್ವೈರಾರ್ತ್ವಿಜ್ಯೈರಿತಿ ॥ ೧ ॥

ಅ ॥ ಪ್ರಸ್ತೋತೃ ಮೊದಲಾದವರು ಸುಮ್ಮನೆ ಕೂತ ಮೇಲೆ ರಾಜನು ಬಂಜಿಪ್ರಯನ್ನು ಕುರಿತು ಪೂಜ್ಯರಾದ ನೀವು ಯಾರೆಂದು ತಿಳಿಯಲಿಚ್ಛಿಸುತ್ತೇನೆ. ಎಂದನು. ಆಗ ಮುನಿಯು ಬಂಜಿಪ್ರಿಯೆಂದು ನನ್ನ ಹೆಸರು. ನಾನು ಚಕ್ರಾಯಣನ ಮಗನಾಗಿರುತ್ತೇನೆಂದನು. ಆಗ ರಾಜನು, ' ಎಲೋ ಬಂಜಿಗಳೇ ತಮ್ಮಂತಹವರನ್ನು ಎಲ್ಲಾ ಋತ್ವಿಜರ ಕರ್ಮಗಳನ್ನು ಮಾಡಲಿಕ್ಕೂ ಹುಡುಕುತ್ತಿದ್ದೆನು. ನೀವು ಒರುವುದು ತಿಳಿದಿರುವುದರಿಂದಲೇ ಬೇರೆ ಪ್ರಸ್ತೋತೃ ಮೊದಲಾದವರನ್ನು ನಿಯಮಿಸಿರುವೆನು. ಈಗ ತತ್ತ್ವವನ್ನು ಚೆನ್ನಾಗಿ ತಿಳಿದಿರುವ ನೀವು ಬಂದಿರುವುದರಿಂದ ನಿಮ್ಮನ್ನೇ ವಿಶೇಷವಾಗಿ ನಾನು ಎಲ್ಲಾ ಋತ್ವಿಜರ ಕರ್ಮಗಳಿಗಾಗಿ ನಿಯಮಿಸುವೆನು " ಎಂದು ಹೇಳಿದನು ॥ ೧ ॥

ಉ. ॥ ತಥೇತ್ಯಥ ತರ್ಹ್ಯೇತ ಏವ ಸಮತಿಸೃಷ್ಟಾಸ್ತುವಂತಾಂ ಯಾವತ್ತೇಭ್ಯೋ ಧನಂ ದದ್ಯಾಸ್ತಾವನ್ಮನು ದದ್ಯಾ ಇತಿ ತಥೇತಿ ಹ ಯಜಮಾನ ಉವಾಚ ॥ ೨ ॥

೫ ॥ (ಆಗ ಆ ಮುನಿಯು ನಾನೇ ಎಲ್ಲಾ ಋತ್ವಿಜರ ಕರ್ಮಗಳನ್ನು ಮಾಡಿದರೆ ಬ್ರಾಹ್ಮಣರ ದ್ರೋಹವು ಬರುವದು. ಇದನ್ನು ಒಡಂಬಡದಿದ್ದರೆ ಋಣವು ನನಗೆ ಸಿಗಲಾರದು, ಎಂದು ಮನಸ್ಸಿನಲ್ಲಿ ಆಲೋಚಿಸಿ) ಖಾಗೆಯೇ ಆಗಲಿ, ಎಂದು ಹೇಳಿ ಮರಳಿ ಹೇಳಿದನು. ಎಲೋ ರಾಜನೇ ನೀನು ಹೇಳಿದಂತೆಯೇ ಆಗಬೇಕಾದರೆ ನೀನು ಮೊದಲು ಯಾವ ಋತ್ವಿಜರನ್ನು ಯಾವ ಯಾವ ಕರ್ಮಕ್ಕಾಗಿ ಹೇಳಿರುತ್ತೀಯೋ, ಅವರವರೇ ಆಯಾಯ ಕರ್ಮಗಳನ್ನು ನಾನು ಹೇಳಿದಂತೆ ಮಾಡಬೇಕು. ಆದರೆ ನೀನು ಅವರಿಬ್ಬರಿಗೂ ಒಟ್ಟು ಎಷ್ಟು ದಕ್ಷಿಣೆ ಕೊಡುತ್ತೀಯೋ, ಅಷ್ಟು ದಕ್ಷಿಣೆಯನ್ನು ನನಗೊಬ್ಬನಿಗೆ ಕೊಡಬೇಕೆಂದು ಹೇಳಿದನು. ಆಗ ಯಜಮಾನನು ನೀವು ಹೇಳಿದಂತೆ ಆಗಲಿ. ಅಷ್ಟು ದಕ್ಷಿಣೆ ಕೊಡುತ್ತೇನೆಂದು ಹೇಳಿದನು. ಇ=ಯಾವ ಬ್ರಾಹ್ಮಣರ ಅಪರಾಧವೂ ಇಲ್ಲದೆಂದಾಯಿತೆಂದು ಸಂತೋಷವುಂಟಾಯಿತು. ॥ ೬ ॥

ಓ - ಆಗ ಋತ್ವಿಜರು ತಮಗೆ ಅರಿಷ್ಟವು ಬರಬಾರದೆಂಬ ಉದ್ದೇಶದಿಂದ ಪ್ರಸ್ತಾವಾದಿ ದೇವತೆಗಳನ್ನು ತಿಳಿದುಕೊಳ್ಳುವದಕ್ಕಾಗಿ ಆ ಋಷಿಸ್ತಿಗಳ ಸಮೀಪಕ್ಕೆ ಒಂದು ಕ್ರಮವಾಗಿ ಕೇಳಿಕೊಂಡು ಆಯಾಯ ದೇವತೆಗಳನ್ನು ತಿಳಿದುಕೊಂಡರು ಎನ್ನುತ್ತಾರೆ—

ಉ.॥ ಅಥ ಹೈನಂ ಪ್ರಸ್ತೋತೋಪಸಸಾದ ಪ್ರಸ್ತೋತರ್ಯಾ ದೇವತಾ ಪ್ರಸ್ತಾವಮನ್ವಾಯತ್ತಾ ತಾಂ ಚೇದವಿದ್ವಾನ್ ಪ್ರಸ್ತೋಷ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ಮಾ ಭಗವಾನವೋಚತ್ಯತಮಾ ಸಾ ದೇವತೇತಿ ॥ ೪ ॥

ಅ ॥ ಜಾಕ್ರಾಯಣ ರಾಜ ಇವರಿಬ್ಬರು ಮಾತಾಡಿಕೊಂಡಮೇಲೆ ಪ್ರಸ್ತೋತನು ಜಾಕ್ರಾಯಣರ ಸಮೀಪಕ್ಕೆ ಒಂದು ಹೇಳಿದನು ಎಲೋ ಪೂಜ್ಯರೇ ನೀವು ಮೊದಲು ನನ್ನೊಡನೆ ಪ್ರಸ್ತಾವ ಎಂಬ ಸಾಮಕ್ಕೆ ದೇವತೆ ಯಾರೆಂದು ತಿಳಿಯದೆ ಆ ಕರ್ಮ ಮಾಡಿದರೆ ಅರಿಷ್ಟ ಬಂದೆಂದೂ ಹೇಳಿರುವಿರಿ. ನಾನು ಅದನ್ನು ತಿಳಿಯದಿರುವುದರಿಂದ ತಾವೇ ಅದನ್ನು ಹೇಳಬೇಕು. ಪ್ರಸ್ತಾವ ಎಂಬ ಸಾಮಕ್ಕೆ ದೇವತೆಯು ಯಾರು? ಎಂದು ಪ್ರಸ್ತೋತನು ಕೇಳಿದನು. ॥ ೫ ॥

ಉ. ॥ ಪ್ರಾಣ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನಿ ಪ್ರಾಣಮೇವಾಭಿಸಂವಿಶಂತಿ ಪ್ರಾಣಮುಭ್ಯುಜ್ಜಿಹತೇ ಸೈಷಾ ದೇವತಾ ಪ್ರಸ್ತಾವಮನ್ವಾಯತ್ತಾ ತಾಂ ಚೇದವಿದ್ವಾನ್ಪ್ರಸ್ತೋಷ್ಯೋ ಮೂರ್ಧಾ ತೇ ವ್ಯಪತಿಷ್ಯತ್ಯತ್ಥೋಕ್ತಸ್ಯ ಮಯೇತಿ ॥ ೪ ॥

ಅ ॥ ಆಗ ಋಷಿಸ್ತುತಿಯು. ಮುಖ್ಯಪ್ರಾಣರಲ್ಲಿ ಅಂತರ್ಯಾಮಿಯಾದ ಪ್ರಾಣ ಎಂದು ಹೆಸರುಳ್ಳ ವಿಷ್ಣುವೆ ಪ್ರಸ್ತಾವ ಎಂಬ ಸಾಮಕ್ಕೆ ದೇವತೆಯೆಂದು ಹೇಳಿದನು. (ಪ್ರಾಣಸ್ಯ ವಿಷ್ಣುವ ಪ್ರಸ್ತಾವ ದೇವತೆಯೆಂದು ಶೇಗೆ ತಿಳಿಯುತ್ತದೆಂದರೆ—) ಎಲ್ಲಾ ಜೀವರೂ ಸುಷುಪ್ತಿ (ಗಾಢನಿದ್ರೆ) ಪ್ರಳಯಗಳಲ್ಲಿ ಪ್ರಾಣಾಂತರ್ಗತ ಶ್ರೀವಿಷ್ಣುವನ್ನೇ ಕೊಂದುತ್ತಾರೆ ಜಾಗ್ರದವಸ್ಥೆಯಲ್ಲಿ ಬಿಡುತ್ತಾರೆ ಹೀಗೆಯೇ ಪ್ರಳಯಕಾಲಗಳಲ್ಲಿ ಶ್ರೀಹರಿಯನ್ನು ಪ್ರವೇಶಿಸುತ್ತಾರೆ. ಸೃಷ್ಟಿಕಾಲದಲ್ಲಿ ಬಿಡುತ್ತಾರೆ. ಪ್ರಾಣಸ್ಯ ವಿಷ್ಣುವಿನಿಂದಲೇ ಹುಟ್ಟುತ್ತಾರೆ. (ಇದರಿಂದ ಪ್ರಸೂಯಂತೇ ಅನೇನ ಪ್ರಸ್ತಾವಃ=ಸೃಷ್ಟಿಸುವವನು, ಎಂದರ್ಥವು.) ಪ್ರಾಣಾಂತರ್ಯಾಮಿಯಾದ ವಿಷ್ಣುವೇ ಸೃಷ್ಟಿಸಾಮತತ್ಕರ್ತೃವು. ಅದಕಾರಣ ಅವನೇ ಪ್ರಸ್ತಾವ ದೇವತೆಯು. ಆ ದೇವತೆಯನ್ನು ತಿಳಿಯದೆ ಪ್ರಸ್ತಾವಾಕ್ಷರವನ್ನು ಹೇಳುತ್ತಿದ್ದರೆ ನನ್ನ ಮಾತಿನಂತೆ ನಿನ್ನ

ತಿರಸ್ಸು ಜೀಳುತ್ತಿತ್ತು. (ನೀನು ಹಾಗೆ ವರ್ತಿಸಲಿಲ್ಲ. ಅದಕಾರಣ ಅದಿತ್ಯನನ್ನು ಕಳೆದುಕೊಂಡಿರುವಿ.) ಎಂದು ಉಷಸ್ತಿಯು ಹೇಳಿದನು. ॥ ೪ ॥

ಉ. ॥ ಅಥ ಹೈನಮುದ್ಗಾತೋಪಸಸಾದೋದ್ಗಾತರ್ಯಾ ದೇವತೋದ್ಗೀಥಮನ್ವಾಯತ್ತಾ ತಾಂ ಚೇದವಿದ್ವಾನುದ್ಗಾಸ್ಯಸಿ ಮೂರ್ಧಾ ತೇ ವಿಪತಿಷ್ಯತೀತಿ ವೂ ಭಗವಾನವೋಚತ್ಯತವೂ ಸಾ ದೇವತೇತ್ಯಾದಿತ್ಯ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯಾದಿತ್ಯಮುಚ್ಚೈಃ ಸಂತಂ ಗಾಯಂತಿ ಸೈಷಾ ದೇವತೋದ್ಗೀಥಮನ್ವಾಯತ್ತಾ ತಾಂ ಚೇದವಿದ್ವಾನುದಗಾಸ್ಯೋ ಮೂರ್ಧಾ ತೇ ವ್ಯಪತಿಷ್ಯತ್ತಥೋಕ್ತಸ್ಯ ಮುಯೇತಿ ॥ ೫ ॥

ಅ ॥ ಪ್ರಸ್ತಾವದೇವತೆಯು ಸರ್ಜಾಯುನಾದ ಮೇಲೆ.....ಅದಿತ್ಯನಲ್ಲಿ ಅಂತರ್ಯಾಮಿಯಾದ ಆದಿತ್ಯ ನೆನಿಸಿಕೊಂಡ ಶ್ರೀವಿಷ್ಣುವು.....(ಅದಿತ್ಯನ ವಿಷ್ಣುವೇ ಉದ್ಗೀಥ ಎಂಬ ಸಾಮಕ್ಕೆ ದೇವತೆಯು. ಅವನೇ ಗಾನದೇವತೆಯು ಎನ್ನುತ್ತಾರೆ.) ಗಾನವಮಾಡುವವರೆಲ್ಲರೂ ಆದಿತ್ಯನ ವಿಷ್ಣುವನ್ನೇ ಸರ್ವೋತ್ಕೃಷ್ಟನು ಸನ್ನಾಗಿ ಗಾನಮಾಡುತ್ತಾರೆ (ಇವರಿಂದ ಆದಿತ್ಯನಾದ ಶ್ರೀವಿಷ್ಣುವೆ ಸಮಸ್ತ ಪ್ರಾಣಿಗಳ ಗಾನಕ್ಕೂ ವಿಷಯನಾದುದರಿಂದ ಗಾನದೇವತೆಯೆಂದೆನ್ನಲಾಯಿತು.)... ... ॥ ೫ ॥

ಉ. ॥ ಅಥ ಹೈನಂ ಪ್ರತಿಹರ್ತೋಪಸಸಾದ ಪ್ರತಿಹರ್ತರ್ಯಾ ದೇವತಾ ಪ್ರತಿಹಾರಮನ್ವಾಯತ್ತಾ ತಾಂ ಚೇದವಿದ್ವಾನ್ಪ್ರತಿಹರಿಷ್ಯಸಿ ಮೂರ್ಧಾ ತೇ ವ್ಯಪತಿಷ್ಯತೀತಿ ವೂ ಭಗವಾನವೋಚತ್ಯತಮೂ ಸಾ ದೇವತೇತ್ಯನ್ನಮಿತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯನ್ನಮೇವ ಪ್ರತಿಹರಮಾಣಾನಿ ಜೀವಂತಿ ಸೈಷಾ ದೇವತಾ ಪ್ರತಿಹಾರಮನ್ವಾಯತ್ತಾ ತಾಂ ಚೇದವಿದ್ವಾನ್ಪ್ರತಿಹರಿಷ್ಯೋ ಮೂರ್ಧಾ ತೇ ವ್ಯಪತಿಷ್ಯತ್ತಥೋಕ್ತಸ್ಯ ಮುಯೇತಿ ತಥೋಕ್ತಸ್ಯ ಮುಯೇತಿ ॥ ಇತ್ಯೇಕಾದಶಃ ಖಂಡಃ ॥ ೩-೧೧ ॥ ॥ ೬ ॥

ಅ ॥ .....ತಿನ್ನುವ ವಸ್ತುಗಳಲ್ಲಿ ಇರುವ ಅನ್ನ ಎಂದು ಹೆಸರುಳ್ಳ ಶ್ರೀವಿಷ್ಣುವೆ.....(ಅನ್ನದಲ್ಲಿರುವ ವಿಷ್ಣುವು ಪ್ರತಿಹಾರದೇವತೆಯು. ಭೋಜನವೆಂಬ ಪ್ರತಿಹಾರಕಾರ್ಯಾರ್ಥವು ವಿಷ್ಣುವಿನಲ್ಲಿಯೇ ಮುಖ್ಯವೆನ್ನುತ್ತಾರೆ—) ಎಲ್ಲಾ ಪ್ರಾಣಿಗಳೂ ಅನ್ನರೂಪವಿದ್ದ ಶ್ರೀವಿಷ್ಣುವನ್ನೇ ಉಪಜೀವಿಸಿಕೊಂಡು (ಅಂದರೆ—ಅನ್ನವನ್ನು ತಿಂದುಕೊಂಡೇ) ಬದುಕುತ್ತಾರೆ.....॥ ೬ ॥ ॥ ೬ ॥

ಭಾ. ॥ (೧) ಪ್ರಾಣಸ್ಥವಿಷ್ಣುನಾ ಸರ್ವೇ ಪ್ರಸೂಯಂತೇ ಯತಸ್ತತಃ । ಪ್ರಸ್ತಾವದೇವತಾ ಸ ಸ್ಯಾತ್ತ್ರಸ್ತಾವಸ್ತು ಜನಿರ್ಯತಃ ॥ (೨) ಆದಿತ್ಯಸಂಸ್ಥಿತೋ ವಿಷ್ಣುರ್ಯತ್ಸದಾ ಸರ್ವಗೀತಭುಕ್ । ರಾಜಾದೌ ಗೀತಮಪ್ಯಚ್ಚೈರ್ಭುಂಕ್ತೇ ಗಾನಸ್ಯ ದೇವತಾ । ಉದ್ಗೀಥ ದೇವತಾ ತಸ್ಮಾತ್ಸ ಏವ ಪುರುಷೋತ್ತಮಃ ॥ (೩) ಅನ್ನಸ್ಥನ್ನೈವ ಜೀವಂತಿ ಭೂತಾನ್ಯೇತಾನಿ ವಿಷ್ಣುನಾ । ಪ್ರತಿಹಾರದೇವತಾಂಶಃ ಸ ಪ್ರತಿಹಾರೋ ಓ ಭೋಜನಂ ॥ ಇತಿ ಚ ॥ ಉಚ್ಚೈಸ್ಸಂತಮುತ್ತಮಂ ಸಂತಂ ॥ ೧,೨,೩,೪,೫,೬ ॥ ಇತ್ಯೇಕಾದಶಃ ಖಂಡಃ ॥ ೩-೧೧ ॥

ಅ ॥ (೧) ಮುಖ್ಯಪ್ರಾಣನಲ್ಲಿ ಜಂತುಗಳಶನಾದ ಶ್ರೀವಿಷ್ಣುವಿನಿಂದಲೇ ಸರ್ವರೂ ಹುಟ್ಟುತ್ತಾರೆ. ಅದಕಾರಣ ಆ ಶ್ರೀವಿಷ್ಣುವ ಪ್ರಸ್ತಾವಕ್ಕೆ ದೇವತೆಯು. ಪ್ರಸ್ತಾವ ಎಂದರೆ—ಸೃಷ್ಟಿವಾಡುವಿಕೆ. (೨) ಸೂರ್ಯನೊಳಗಿರುವ ಶ್ರೀವಿಷ್ಣುವೆ ಸದಾ ಎಲ್ಲಾ ಜನರು ಗಾನಮಾಡುವಾಗ ಆ ಗಾನರಸವನ್ನು ಅನುಭವಿಸುವವನು. ಅಜ್ಞರು ರಾಜಾದಿಗಳ ಮುಂದುಗಡೆ ಗಾಯನಮಾಡುವುದನ್ನು ಇವನೇ ಅನುಭವಿಸುವವನು. ಅದುಕಾರಣ ಗಾನಕ್ಕೆ ದೇವತೆಯು. ಅದುದರಿಂದ ಆ ಪುರುಷೋತ್ತಮನಾದ ವಿಷ್ಣುವೇ ಉದ್ಗೀಥ ಎಂಬ ಸಾಮಕ್ಕೆ ದೇವತೆಯು (೩) ಎಲ್ಲಾ ಜೀವರೂ ಅನ್ನದಲ್ಲಿದ್ದ ಶ್ರೀಹರಿಯಿಂದಲೇ ಜೀವಿಸುತ್ತಾರೆ. ಅನ್ನದಲ್ಲಿದ್ದ ಶ್ರೀವಿಷ್ಣುವ ಪ್ರತಿಹಾರಕ್ಕೆ ದೇವತೆಯು. ಪ್ರತಿಹಾರ=ಭೋಜನವು. (ಉಪಜೀವಿಸಿಕೊಂಡಿರುವುದು.) (೪ನೇ ಮಂತ್ರದಲ್ಲಿದ್ದ) ಉದ್ಗೀಥಃ=ಸರ್ವೋತ್ತಮನೆನ್ನಾಗಿ (ಗಾನಮಾಡುತ್ತಾರೆ.) ॥ ೧, ೨, ೩, ೪, ೫, ೬ ॥ ॥ ೧ ॥

ಹನ್ನೊಂದನೇ ಖಂಡವು ಮುಗಿಯಿತು

೧೨ನೇ ಖಂಡವು

ಪೀ—ಉದ್ಗೀಥನನ್ನು ಪಾಸನೆ ಮಾಡುವವನಿಗೆ ಪಾಪಪರಿಹಾರವಾಗಿ ಮೋಕ್ಷವು ಲಭಿಸುತ್ತದೆ. ಮೋಕ್ಷದಲ್ಲಿ ಅತಿಶಯ ಆನಂದವು ಸಿಗುತ್ತದೆ. ಅಲ್ಲದೆ ಈ ಲೋಕದಲ್ಲಿ ಅನೇಕ ಮಕ್ಕಳು ಹುಟ್ಟುತ್ತಾರೆ. ಅನ್ನ ಪಾನ ಮೊದಲಾದ ಫಲಗಳೂ ಸಿಗುತ್ತವೆ ಎಂದು ಮೊದಲು ಹೇಳಿದೆ. ಅದರಲ್ಲಿ ಉದ್ಗೀಥನನ್ನು ಪಾಸನೆ ಮಾಡಿ ತಮ್ಮ ಇಷ್ಟವನ್ನು ಹೊಂದಿದವರು ಇದ್ದಾರೆಂದು ಹೇಳುತ್ತಾರೆ—

ಉ. ॥ ಅಥಾತಃ ಶೌವ ಉದ್ಗೀಥಸ್ತದ್ಧ ಬಕೋ ದಾಲ್ಭ್ಯೋ ಗ್ಲಾವೋ ವಾ ಮೈತ್ರೇಯಃ ಸ್ವಾಧ್ಯಾಯಮುದ್ವವ್ರಾಜ ತಸ್ಮೈ ಶ್ವಾ ಶ್ವೇತಃ ಪ್ರಾದುರ್ಬಭೂವ ತಮನ್ಯೇ ಶ್ವಾನ ಉಪಸಮೇತ್ಯೋಚುರನ್ನಂ ನೋ ಭಗವಾನಾಗಾಯತ್ವಶನಾಯಾಮುವಾ ಇತಿ ॥ ೧ ॥

ಅ ॥ ಉದ್ಗೀಥೋಪಾಸನೆಗೆ ಪ್ರಯೋಜನವಿದ್ದ ಪ್ರಯುಕ್ತ ಶೌವ (ನಾಯಿಯಿಂದ ಹೇಳಲ್ಪಟ್ಟಿದ್ದು ನಾಯಿಗಳಿಂದ ಮಾಡಲ್ಪಟ್ಟಿದ್ದು) ಉದ್ಗೀಥವು ಹೇಳಲ್ಪಡುತ್ತದೆ ಒಂದಾನೊಂದು ವೇಳೆ ದಲ್ಭರ ಮಗನಾದ ಬಕನೆಂಬ ಮುನಿಯನ್ನು ವಿಖ್ಯಾದೇವಿಯು ತನ್ನ ಮಗನನ್ನಾಗಿ ಮಾಡಲಪೇಕ್ಷೆಯಿಂದ ಕರದಾಗ ಕಳ್ಳನಂತೆ ಸುಮ್ಮನೆ ಕುಳಿತಿರುವುದರಿಂದ ಅತನು ಗ್ಲಾವ ಎಂದು ಹೆಸರುಳ್ಳವನಾಗಿ ವಿಖ್ಯಾದೇವಿಯು ಕರದಕಾರಣ ಮೈತ್ರೇಯನೆನಿಸಿಕೊಂಡವನು ವೇದಾಧ್ಯಯನ ಮಾಡುವುದಕ್ಕಾಗಿ ಹೊರಟುಹೋದನು. ಆಗ ಬಕಮುನಿಗೂ ದೇವತೆಗಳಿಗೂ ಅನುಗ್ರಹಿಸುವುದಕ್ಕಾಗಿ ವಾಯುದೇವರು ತಾನು ನಾಯಿಯ ರೂಪವನ್ನು ತಾಳಿಕೊಂಡು ನಾಯಿಯ ರೂಪವನ್ನು ಹೊಂದಿದ ರುದ್ರಾದಿಗಳಿಂದೊಡಗೂಡಿ ಪ್ರತ್ಯಕ್ಷರಾದರು. ನಾಯಿಯ ರೂಪವುಳ್ಳ ರುದ್ರಾದಿ ದೇವತೆಗಳೂ ಬಕಮುನಿಯೂ ನಾಯಿಯ ರೂಪವುಳ್ಳ ವಾಯುದೇವರ ಸಮೀಪಕ್ಕೆ ಬಂದು ನಮಗೆ ಅನ್ನವು ಸಿಗಲಿಕ್ಕೆ ಕಾರಣವಾದ ಉದ್ಗೀಥೋಪಾಸನೆಯನ್ನು ಉಪದೇಶಿಸು. ನಾವು ಅಶನವನ್ನು ಇಚ್ಛಿಸುವೆವು, ಎಂದು ಹೇಳಿದರು. ॥ ೧ ॥

೫೧–ಪೂರ್ವನಾಮದಿಂದ ಶೌಕ್ಲೋದ್ಗೀಥದಿಂದ ಶ್ರೇಷ್ಠರಿಯನ್ನು ಪಾಸನೆ ಮಾಡಿದರೆ ಎಲ್ಲಾ ಅಭೀಷ್ಟ ಗಳನ್ನು ಅತನು ಕೊಡುತ್ತಾನೆನ್ನುತ್ತಾರೆ–

ಉ. ॥ ತಾನ್ ಹೋವಾಚೇ ಹೈವ ನೂ ಪ್ರಾತರೂಪಸೇವಾಯಾತೇತಿ ತದ್ಧ ಬಕೋ ದಾಲ್ಭ್ಯೋ ಗ್ಲಾವೋ ವಾ ಮೈತ್ರೇಯಃ ಪ್ರತಿಪಾಲಯಾಂಚಕಾರ ತೇ ಹ ಯಥ್ಸೈನೇದಂ ಬಹಿಷ್ಪವಮಾನೇನ ಸ್ತೋಷ್ಯಮಾಣಾಃ ಸೋರಬ್ಧಾಃ ಸರ್ಪಂತೀತ್ಯೇನಮುಪಸಮೇಯುಸ್ತೇ ಹ ಸಮುಪವಿಶ್ಯ ಹಿಂಚಕ್ರುರೋಷಮುದಾಮೋಂಽಶಿಷಾ ವೋಂಽಶಿಷಾ ದೇವೋ ವರುಣಃ ಪ್ರಜಾಪತಿಃ ಸವಿತಾನ್ನಸ್ಯಾಮಿಹಾನ್ನಮಾಹರದನ್ನಪತೇಽನ್ನಸ್ಯಾಮಿಹಾನ್ನಮಾಹರಾಹರೋಮಿತಿ ॥ ಇತಿ ದ್ವಾದಶಃ ಖಂಡಃ ॥ ೩-೧೨ ॥ ॥ ೨ ॥

ಅ ॥ ಸಾಯಂಕಾಲ ರೂಪವನ್ನು ತಾಳಿಕೊಂಡ ವಾಯುದೇವರು ಅತಿಥಿ ರೂಪವುಳ್ಳ ರುದ್ರಾದಿಗಳಿಗೆ ಇಷ್ಟಿಗೇನೇ ನಾಳೆಬೆಳ್ಳಿಗ್ಗೆ ನನ್ನ ಸನಿಹಕ್ಕೆ ಬನ್ನಿರಿ. ಎಂದು ಹೇಳಿದರು ಆ ಮಾತನ್ನು ಕೇಳಿ ಬಕ ಮುನಿಯು ಬೆಳಿಗ್ಗೆ ಆ ವಾಯುದೇವರನ್ನು ಸೇರಿಕೊಳ್ಳಿಚ್ಛಿಸಿದನು ಹೇಗೆ ಒಬ್ಬಿಪ್ಪವಮಾನ ಎಂಬ ಸ್ತೋತ್ರ ದಿಂದ ಋತ್ವಿಜರು ಸ್ತೋತ್ರ ಮಾಡುವಾಗ ಅತಿಶೀಘ್ರದಿಂದ ಬಿಟ್ಟಿನ ಕಟ್ಟೆ ಒಡೆದುಕೊಂಡು ಇರುವೆಯ ಹಂಡ್ರೆಯಂತೆ ಹೋಗುವಲ್ಲೋ ಹಾಗೆಯೇ ಎಂದು ನಾಯುವು (ದೇವತೆಯು) ಬಾಯಿಯಿಂದ ಬನ್ನೊಂದು ನಾಯುವು ಬಾಲವನ್ನು ಕಟ್ಟಿಕೊಳ್ಳುತ್ತಾ ಈ ಕ್ರಮದಿಂದ ನಾಯುವು ರೂಪದಿಂದ ದೇವತೆಗಳು ಬಿಂದಿನದಿನ ಹೇಳಿದ ಸ್ಥಳಕ್ಕೆ ಬಂದರು ಈ ಕ್ರಮದಿಂದನಾಯುವು ರೂಪವಾದ ದೇವತೆಗಳೂ ಹಿಂದಿನ ದಿನ ಹೇಳಿದ ಸ್ಥಳಕ್ಕೆ ಬಂದರು (ಅವರು ಬಂದೊಡನೆ ಆ ವಾಯುದೇವರು ನಿಮುದಾಮ ಇದುನೊದಲಾದ ಮಂತ್ರವನ್ನು ಅವರಿಗೆ ಉಪದೇಶಮಾಡಿದರು) ಆಗ ಆ ದೇವತೆಗಳು ಸವಿನಿಸಲ್ಪಟ್ಟ ಕಾರಣಕೊಂಡು ವಾಯು, ವಾಯುವಿನಲ್ಲಿ ಅಂತರ್ಗತ ವಿಷ್ಣು ಇವರನ್ನು ದ್ವೇಷಿಸಿ ಹಿಂ ಎಂದು ಹೇಳಿದರು ಹಿಂಕಾರ ಮಾಡಿ ಎಲೋ ಮುಖ್ಯಪ್ರಾಣನೇ ಮುಖ್ಯಪ್ರಾಣನ ಅಂತರ್ಗತನಾದ ಶ್ರೇಷ್ಠರಿಯೇ ನಾವು ಅನ್ನವನ್ನು ತಿನ್ನುವೆವೆ ನೀರು ಕುಡಿಯುವೆವೆ ಸರ್ವಜ್ಞನು ಗುಣಪೂರ್ಣನಾಮದರಿಂದ ಏಂ ಎನ್ನಿಸಿಕೊಂಡವನು. ಕ್ರೀತಾದಿಗುಣ ವಿಶಿಷ್ಟನು. ಭಜಿಸಿಕೊಳ್ಳಲ್ಪಟ್ಟನು ಪ್ರಜೆಗಳನ್ನು ರಕ್ಷಿಸುವವನು ಜಗತ್ತನ್ನು ಸೃಷ್ಟಿಸುವವನು. ಇಂತಹ ವಾಯುವೂ ವಿಷ್ಣುವೂ ಕೂಡ ನಮಗೆ ಅನ್ನವನ್ನು ಕೊಡಲಿ. (ಹೀಗೆ ಪರೋಕ್ಷವಾಗಿ ಪ್ರಾರ್ಥಿಸಿ ಪ್ರತ್ಯಕ್ಷವಾಗಿಯೂ ಪ್ರಾರ್ಥಿಸುತ್ತಾರೆ–) ಅನ್ನಕ್ಕೆ ಅಧಿಪತಿಯಾದ ವಾಯುವೇ, ವಾಯ್ವಂತರ್ಗತ ವಿಷ್ಣುವೇ ನಮಗೆ ಅನ್ನ ಕೊಡು. ಎಂಬ ಮಂತ್ರವನ್ನು ಜಪಿಸಿದರು (ಆ ಮೇಲೆ ಅಭೀಷ್ಟವನ್ನು ಕೊಂಡಿದರು.) ॥ ೩–೧೨ ॥ ॥ ೨ ॥

ಭಾ. ॥ (೧) ದಲ್ಭಪುತ್ರೋ ಬಕೋ ಮಿತ್ರಯಾ ಪುತ್ರಾರ್ಥಂ (ರ್ಥಂ) ಸ್ತೀಕೃತೋ ಗ್ಲಾ(ಗ್ರಾ)ವವತ್ತೂಷ್ಣೀಂ ಸ್ಥಿತತ್ವಾತ್ತಯಾ ಗ್ಲಾವೇತ್ಯುಕ್ತೋ ಗ್ಲಾವನಾಮಕೋ ಜಾತಃ । ಅತ ಉಭಯಥಾಸ್ಯ ನಿರ್ದೇಶೋ ಭವತೀತ್ಯರ್ಥಃ ॥ (೨) ಪ್ರಸಾದಾರ್ಥಂ ಬಕಸ್ಯಾಪಿ ವಾಯುನೋಕ್ತಃ ಸ್ವರೂಪಿಣಾ । ಶೌಕ್ಲೋದ್ಗೀಥ ಇತಿ ಪ್ರೋಕ್ತೋ ರುದ್ರಾದೀನಾಂ ಸ್ವರೂಪಿಣಾಂ ॥ (೩) ಉಪಾಸಿತಃ ಪೌರ್ಣಮಾಸ್ಯಾಂ ಶೌಕ್ಲೋದ್ಗೀಥೇನ ಕೇಶವಃ । ಸರ್ವಾಭೀ-

ಹ್ಯಂ ದದಾತೀತಿ ಪ್ರಾತರಿತ್ಯಾಹ ಮಾರುತಃ ॥ (೪) ಓಮಿದಾಮಾದಿಕಂ ಮಂತ್ರಂ ವಾಯು ನೋಕ್ತಂ ತು ದೇವತಾಃ । ವಾಯುಸ್ಥವಿಷ್ಣುಮುದ್ದಿಶ್ಯ ಹಿಂಕೃತ್ಯ ಪ್ರಾಪುರೀಪ್ಸಿತಂ ॥ (೫) ದೇವೌ ವಿಷ್ಣುಶ್ಚ ವಾಯುಶ್ಚ ಸರ್ವಜ್ಞತ್ವಾತ್ ಕ್ರಮೇಣ ತು । ವರುಣೌ ವರಣೀಯತ್ವಾತ್ ಸವಿತಾರೌ ಪ್ರಸೂತಿತಃ । ಪ್ರಜಾನಾಂ ಚ ಪತೀ ತದ್ವತ್ ಕ್ರಮಾದೇವ ಪ್ರಕೀರ್ತಿತೌ ॥ ಇತಿ ಚ ॥ ೧, ೨ ॥ ಇತಿ ದ್ವಾದಶಃ ಖಂಡಃ ॥ ೩–೧೨ ॥ ॥ ೧ ॥

ಅ ॥ (೧) ದಲ್ಭನ ಮಗನಾದ ಬಕಮುನಿಯು ಮಿತ್ರಾದೇವಿಯು ತನ್ನ ಮಗನಾಗಬೇಕೆಂಬ ಆಪೇಕ್ಷೆಯಿಂದ ರಕ್ಷಿಸಿದ ಕಾರಣ ಮೈತ್ರೇಯಃ ಎನ್ನಿಸುವವನು ರಕ್ಷಿಸುತ್ತೇನೆಂದು ಹೇಳಿ ಕರೆದರೂ ಕಲ್ಲಿನಂತೆ ಸುಮ್ಮನೆ ಕುಳಿತುಕೊಳ್ಳಲು ಮಿತ್ರಾದೇವಿಯು ಗ್ಲಾವ ಎಂದು ಹೇಳಿದುದರಿಂದ ಗ್ಲಾವ ಎಂದು ಹೆಸರುಳ್ಳವನಾದನು. ಆದಕಾರಣ ಈ ಬಕಮುನಿಯನ್ನು (೧) ಬಕಾದಾಲ್ಭ್ಯಃ (೨) ಗ್ಲಾವಃ ಮೈತ್ರೇಯಃ, ಎಂದು ಎರಡು ಪ್ರಕಾರ ಹೇಳುವರು. (೩) ನಾಯಿಯ ರೂಪವನ್ನು ತಾಳಿಕೊಂಡ ರುದ್ರಾದಿಗಳಿಗೂ, ಬಕಮುನಿಗೂ, ಅನುಗ್ರಹಿಸುವುದಕ್ಕಾಗಿ ವಾಯುದೇವರು ನಾಯಿಯ ರೂಪವನ್ನು ಹೊಂದಿ ಹೇಳಿದ ಉದ್ಗೀಥವು ಶೌಪ್ಯೋದ್ಗೀಥ ಎನ್ನಿಸುತ್ತದೆ. (೪) (ಅನ್ನವನ್ನು ಬೇಡುವ ಕಾಲದಲ್ಲಿಯೇ ಉದ್ಗೀಥವನ್ನು ಉಪದೇಶಿಸದೆ ಈ ಸ್ಥಳಕ್ಕೆ ನಾಳೆ ಬೆಳಗ್ಗೆ ಬನ್ನಿರಿ ಎಂದು ಹೇಳಲು ಕಾರಣವೇನೆಂದರೆ—) ಪೂರ್ಣಮಾದಿನ ಶೌಪ್ಯೋದ್ಗೀಥದಿಂದ ಶ್ರೀಹರಿಯನ್ನು ಉಪಾಸನೆ ಮಾಡಿದರೆ ಎಲ್ಲಾ ಅಪೇಕ್ಷೆಗಳನ್ನು ಶ್ರೀಹರಿಯು ಕೊಡುವ ಕಾರಣ ವಾಯುದೇವರು ನಾಳೆ ಬೆಳಗ್ಗೆ ಬನ್ನಿರಿ ಎಂದರು. (೪) ಆ ದೇವತೆಗಳು ವಾಯುದೇವರು ಉಪದೇಶಿಸಿದ ಓಮಿದಾಮ ಇದುನೊದಲಾದ ಮಂತ್ರವನ್ನು ವಾಯುವಿನಲ್ಲಿ ಅಂತರ್ಗತನಾದ ವಿಷ್ಣುವನ್ನುದ್ದೇಶಿಸಿ ಹಿಂ ಎಂದು ಹೇಳಿ ತಂತಮ್ಮ ಇಷ್ಟವನ್ನು ಹೊಂದಿದರು. (೫) ವಿಷ್ಣು ವಾಯು ಇಬ್ಬರೂ ಕ್ರಿಯಮದಿಂದಲೇ ಸರ್ವಜ್ಞರಾದುದರಿಂದ ದೇವ ಎಂದೂ, ಭಕ್ತರಿಂದ ಭಜಿಸಿಕೊಳ್ಳುವುದರಿಂದ ವರುಣ ಎಂದೂ, ಜಗತ್ತನ್ನು ಸೃಷ್ಟಿಸುವುದರಿಂದ ಸವಿತಾ, ಎಂದೂ, ಪ್ರಜೆಗಳನ್ನು ರಕ್ಷಿಸುವುದರಿಂದ ಪ್ರಜಾಪತಿಯೆಂದೂ ಕ್ರಮವಾಗಿ ಹೇಳಲ್ಪಡುತ್ತಾರೆ. ॥ ೧—೩ ॥ ॥ ೩– ೧೨ ॥ ೧ ॥

ಹನ್ನೆರಡನೇ ಖಂಡವು ಮುಗಿಯಿತು.

೧೩ನೇ ಖಂಡವು

ಪೀ— ಸಾಮವೊಳಗಣ ಉಪಾಸನೆಯು ಪ್ರಸ್ತುತವಾಗಿರುವುದರಿಂದ ಸಾಮವೊಳಗಣ ಹಾವ್ ಇಮುದೊದಲಾದ ೧೩ ಸ್ತೋಭಾಕ್ಷರ (ಗಾನಭಾಗವನ್ನು ಮಾತ್ರ ತೋರಿಸುವುದು. ಬೇರೆ ಅರ್ಥವಿಲ್ಲ ದಿರುವ ಅಕ್ಷರಗಳಲ್ಲಿರತಕ್ಕ ಉಪಾಸನೆ ಹೇಳುತ್ತಾರೆ—

ಉ. ॥ ಅಯಂ ವಾವ ಲೋಕೋ ಹಾವುಕಾರೋ ವಾಯುರ್ಹಾಯಿ-
ಕಾರಶ್ಚಂದ್ರಮಾ ಅಥಕಾರ ಆತ್ಮೇಹಕಾರೋಽಗ್ನಿರೀಕಾರಃ ॥ ೧ ॥

* ಶ್ರೀಕರಮು ಕಲ್ಪಿಸಿಯೂ ಕರಲಕ್ಷಿಯೂ ಇದ್ದು ಪೆಳ್ಳಿಮನ್ನು ತೀರದವನು ವಾಯುದೇವರು ವಿಷ್ಣು ವಿನಳ ಬೇರೆ ಅವಗಳಲ್ಲಿಯೂ ಅವೆಲೋಚಿಸುವುದಿಲ್ಲ ನಿರ್ಣಯವನ್ನು ತೀರ್ಮಾನಿಸಿಕೊಳ್ಳುವವರು

ಅ ॥ ಭೂಲೋಕಕ್ಕೆ ಅಭಿಮಾನಿನಿಯಾದ ಧಾತಾದೇವಿಯು *ಹಾವ್ ಎಂದು ಕರೆಯಲ್ಪಡುತ್ತಾಳೆಂದು ಉಪಾಸನೆ ಮಾಡಬೇಕು. ಮುಖ್ಯ ವಾಯುವು ಹಾಯಿಕಾರನೆಂದೂ, ಚಂದ್ರನು ಅಥಕಾರನೆಂದೂ, ವಿಷ್ಣುವು ಇಹಕಾರನೆಂದೂ, ಅಗ್ನಿಯು ಈಕಾರನೆಂದೂ ಹೇಳಲ್ಪಡುತ್ತಾನೆ ॥ ೧ ॥

ಭಾ. ॥ (೧) ಹೂಯಶೇಃಶ್ಚಾಗ್ನಿಹೋತ್ರಾದಿರ್ಹಾವ್ಕಾರಸ್ತ್ರಿಯಂ ತತಃ ॥ (೨) ಹೇತ್ಯಾಶ್ಚರ್ಯವದಾಯಾತಿ ಹೇತಿ ವಾ ಸುಖಿಕೃತ್ಪ್ರತಃ । ಹಾಯಿಕಾರಸ್ತತೋ ವಾಯುಃ ॥ (೩) ಅಥೇತ್ಯುಕ್ತಮನಂತರಂ । ಅನಂತರ್ಯಾತ್ಕಾರಸ್ಯ ಸೂರ್ಯಾಚ್ಚಂದ್ರಸ್ತ(ಸ್ತ್ರ)ಥೇರಿತಃ ॥ (೪) ಸರ್ವಸಾಮೀಪ್ಯತೋ ವಿಷ್ಣುರಿಹೇತಿ ಕಥಿತಸ್ತದಾ ॥ (೫) ಇಂಧನಾದಗ್ನಿರೀಕಾರಃ ॥ ೧ ॥ ॥ ೧ ॥

ಅ ॥ (೧) ಭೂಮಿಯಲ್ಲಿ ಅಗ್ನಿಹೋತ್ರ ಮೊದಲಾದುದು ಹೋಮಿಸಲ್ಪಡುವುದರಿಂದ ಭೂಲೋಕಕ್ಕೆ ಅಭಿಮಾನಿನಿಯಾದ ಧಾತಾದೇವಿಯು ಹಾವ್ ಎನ್ನಿಸುತ್ತಾಳೆ. ಹಾವ್ ಎಂದು ಕರೆಯಲ್ಪಡುವುದರಿಂದ ಹಾವ್ಕಾರಃ ಎಂದು ಉಪಾಸನೆ ಮಾಡಬೇಕು (೨) ಮುಖ್ಯಪ್ರಾಣನು ಅತ್ಯಾಶ್ಚರ್ಯಕರನಾಗಿ ಬರುವುದರಿಂದ ಅಥವಾ ಭಕ್ತರಿಗೆ ಸುಖವನ್ನುಂಟುಮಾಡುವುದರಿಂದ ಹಾಯಿಕಾರಃ ಎನ್ನಿಸುತ್ತಾನೆ. (೩) ಚಂದ್ರಪ್ರಕಾಶವು ಸೂರ್ಯಪ್ರಕಾಶದಿಂದ ಅನಂತರದ್ದಾದಪ್ರಯುಕ್ತ ಹಾಗೆ ಸೂರ್ಯಪ್ರಕಾಶವನ್ನು ಪ್ರಕಾಶಿಸಿದ್ದಾವಾದ ಕಾರಣ ಚಂದ್ರನು ಅಥಕಾರಃ ಎನ್ನಿಸುತ್ತಾನೆ. (೪) ವ್ಯಾಪ್ತನಾದ ನಾರಾಯಣನು ಸರ್ವರ ಸಮೀಪದಲ್ಲಿದ್ದುದರಿಂದ ಇಹಕಾರಃ ಎನ್ನಿಸುತ್ತಾನೆ (೫) ಅಗ್ನಿಯು ಯಾವಾಗಲೂ ಪ್ರಕಾಶಿಸಿಕೊಂಡಿರುವುದರಿಂದ ಈಕಾರಃ ಎನ್ನಿಸುತ್ತಾನೆ ॥ ೧ ॥ ॥ ೧ ॥

ಋ. ॥ ಆದಿತ್ಯ ಊಕಾರೋ ನಿವಹ ಏಕಾರೋ ವಿಶ್ವೇದೇವಾ ಔಹೋಯಿಕಾರಃ ಪ್ರಜಾಪತಿರ್ಹಿಂಕಾರಃ ಪ್ರಾಣಃ ಸ್ವರೋಽನ್ನಂ ಯಾಯಾ ವಾಕ್ ವಿರಾಟ್ ॥ ೨ ॥

ಅ ॥ ಸೂರ್ಯನು ಊಕಾರನೆಂದೂ ನಿಹವನೆನಿಸುವ ಇಂದ್ರನು ಏಕಾರನೆಂದೂ, ಎಲ್ಲಾ ದೇವತೆಗಳು ಔಹೋಯಿಕಾರರೆಂದೂ, ಬ್ರಹ್ಮನು ಹಿಂಕಾರನೆಂದೂ, ಶರೀರದಲ್ಲಿನ ಮುಖ್ಯಪ್ರಾಣನು ಸ್ವರನೆಂದೂ, ಅನ್ನಾಭಿಮಾನಿನಿಯಾದ ಸರಸ್ವತಿಯು ಯಾಯಾ ಎಂದೂ, ವಚನಗಳೆಲ್ಲಾ ಅಭಿಮಾನಿಯಾದ ಲಕ್ಷ್ಮೀದೇವಿಯು ವಿರಾಟ್ ಎಂದೂ ಉಪಾಸನೆ ಮಾಡಬೇಕು ॥ ೨ ॥

ಭಾ. ॥ (೧) ಊಕಾರಸ್ಸೂರ್ಯ ಉಚ್ಯತೇ । ನಿಕರಾಮಾಹ್ವಯಂತ್ಯೇನಮಿತೀಂದ್ರೋ ನಿಹವಃ ಸ್ಮೃತಃ । ಏತೀತ್ಯೇಕಾರ ಏವಾಸೌ ॥ (೨) ಔಹೋಯಿತ್ಯಮೆಲಾಸ್ಸುರಾಃ। ಉಚ್ಚತ್ವಾದ್ವಿಷ್ಣುರುಃ ಪ್ರೋಕ್ತೋ ಹೂಯಂತೇಽಸ್ಮಿನ್ಹತೋಽಮೆಲಾಃ । ಮುಕ್ತಾವೌಹೋಯಿನಸ್ತಸ್ಮಾತ್ಸರ್ವ(ರ್ವೇ)ದೇವಾಃ ಪ್ರಕೀರ್ತಿತಾಃ (೩) ಹೀತಿ ನಿಶ್ಚಯ ಉದ್ದಿಷ್ಟೋ ನಿಶ್ಚಯಜ್ಞಸ್ತತಃ ಸದಾ । ಬ್ರಹ್ಮಾ ಹಿಂಕಾರ ಇತ್ಯುಕ್ತೋ ವಾಯುಃ ಪ್ರಾಣಃ ಶರೀರಗಃ । ಸ್ವೇ ವಿಷ್ಣೌ ರಮಯತ್ಯೇನಂ ಜೀವಂ ತಸ್ಮಾತ್ ಸ್ವರಃ ಸ್ಮೃತಃ ॥ (೪) ಯಯಿರ್ನಿತ್ಯಗತೇಃ-

* ಹಾವುಕಾರಸ್ತ್ರೋಭಾಕ್ಷರವು ಸಂಹಿತಾ ಸಾಮದಲ್ಲಿಯೂ, ಹಾಯಿಕಾರ ಮೊದಲಾದ ಸ್ತೋಭಾಕ್ಷರಗಳು ಸಾಮದೇವತೆ ಮೊದಲಾದ ಸಾಮಗಳಲ್ಲಿಯೂ ಸ್ಮರಿಸಲ್ಪಟ್ಟಿಗಳಾಗಿವೆ

ರ್ವಾಯುಸ್ತದ್ಯಾ ಯಾಯಾ ಸರಸ್ವತೀ । ಸೈವಾನ್ನದೇವತಾ ಪ್ರೋಕ್ತಾ ಯತ್ತ್ರಾ ಪ್ರಾ-ಣೇನ ಕೀಯತೇ ॥ (೫) ಸರ್ವವಾಗಾತ್ಮಿಕಾ ಯಾ ತು ಶ್ರೀರ್ವಿಶೇಷೇಣ ರಾಜನಾತ್ । ವಿರಾಡುಕ್ತಾ ॥ ೨ ॥ ॥ ೧೫ ॥

ಅ ॥ (೧) ಬಿಸಿಲಿನಿಂದ ಸುಡುವ ಕಾರಣ ಸೂರ್ಯನು ಊಷ್ಣಾರ: ಎನ್ನಿಸುತ್ತಾನೆ. ಜೇಷ್ಠ ದೇವತೆಗಳಿಗಿಂತ ವಿಶೇಷವಾಗಿ ದೇವೇಂದ್ರನನ್ನೇ ಮುಖ್ಯನಾಗಿ ಕರೆಯುವುದರಿಂದ ದೇವೇಂದ್ರನು ನಿಹವ ಎನ್ನಿಸುತ್ತಾನೆ. ಅತನು ಸಂಚರಿಸುತ್ತಿರುವುದರಿಂದ ವಿಕಾರ: ಎನ್ನಿಸುತ್ತಾನೆ. (೨) ವಿಷ್ಣುವು ಸರ್ವೋತ್ತಮನಾದುದರಿಂದ ಋಚ ಎನ್ನಿಸುತ್ತಾನೆ. ಎಲ್ಲಾ ದೇವತೆಗಳು ಮೋಕ್ಷವಲ್ಲಿ ವಿಶೇಷವಾಗಿ ಋ ಎನ್ನಿಸಿಕೊಂಡ ವಿಷ್ಣುವಿನಲ್ಲಿ ಅಧೀನರಾಗಿರುವುದರಿಂದ ಔಹೋವೀನ ಎನ್ನಿಸುತ್ತಾರೆ (೩) ಓ ಎಂದರೆ ನಿಶ್ಚಯವು. ಬ್ರಹ್ಮನು ಸರ್ವದಾ ಯಥಾರ್ಥ ಜ್ಞಾನವುಳ್ಳವನಾಗಿರುವುದರಿಂದ ಹಿಂಕಾರ: ಎನ್ನಿಸುತ್ತಾನೆ ಶರೀರದಲ್ಲಿರ್ತ ಮುಖ್ಯಪ್ರಾಣನು ಜೀವನಿಗೆ ಸುಖರೂಪನಾದ ಶ್ರೀವಿಷ್ಣುವಿನಿಂದ ಸುಖವನ್ನು ಕೊಡಿಸುವುದರಿಂದ ಸ್ವರ: ಎನಿಸುತ್ತಾನೆ. (೪) ಸರ್ವಭೆಕ್ಷಕನಾದ ವಾಯುವಿನಿಂದ ಪ್ರೇರಿಸಲ್ಪಡುವ ಕಾರಣ ಅನ್ನ ಎನಿಸಿಕೊಂಡ ಅನ್ನಕ್ಕೆ ಅಭಿಮಾನಿಯಾದ ಸರಸ್ವತಿಯು ಎಷ್ಟು ಕೊಡ್ತಿಗೂ ಸಂಚರಿಸಿಕೊಂಡಿರುವುದರಿಂದ ಯಯಿ ಎನ್ನಿಸಿಕೊಂಡ ಮುಖ್ಯವಾಯುವಿನ ಅಧೀನಳಾಗಿದ್ದುದರಿಂದ ಯಾಯಾ ಎನ್ನಿಸುತ್ತಾಳೆ. ಅಥವಾ ಸರ್ವ ಪ್ರೇರಕನಾದ ಪ್ರಾಣನಿಂದ ಪ್ರೇರಿಸಲ್ಪಡುವುದರಿಂದ ಸರಸ್ವತಿಯು ಯಾಯಾ ಎನ್ನಿಸುತ್ತಾಳೆ (೫) ಎಲ್ಲಾ ವಚನಗಳಿಗೆ ನಿಯಾಮಕಳಾದ ಲಕ್ಷ್ಮೀದೇವಿಯು ಎಲ್ಲರಿಂದ ಹೆಚ್ಚು ಪ್ರಕಾಶಿಸಿಕೊಂಡಿರುವುದರಿಂದ ವಿರಾಜ್ ಎನ್ನಿಸುತ್ತಾಳೆ (೬) ॥ ೧ ॥

ಉ. ॥ ಅನಿರುಕ್ತಸ್ಯೋದಶಸ್ತೋಭಃ ಸಂಚರೋ ಹುಷ್ಕಾರೋದ-ಗ್ಗೀಸ್ಯೈ ವಾಗ್ಘೋಹಂ ಯೋ ವಾಚೋ ದೋಹೋಽನ್ನವಾನನ್ನಾದೋ ಭ-ವತಿ ಯ ಏತಾಮೇವಮಿ ಸಾಮ್ನಾಮುಪನಿಷದಂ ವೇದೋಪನಿಷದಂ ವೇದ ॥ ॥ ೩ ॥ ಇತಿ ತ್ರಯೋದಶಃ ಖಂಡಃ ॥ ೩–೧೩ ॥ ಇತಿ ಶ್ರೀಮಚ್ಛಾಂದೋ ಗ್ಯೋಪನಿಷದಿ ತೃತೀಯೋಽಧ್ಯಾಯಃ ॥ ೩ ॥

ಅ ॥ ಹೀಗೆಯೇ ಇದಾನೆಂದು ಹೇಳಲಿಕ್ಕೆ ಅಶಕ್ಯನಾದುದರಿಂದ ಅನಿರುಕ್ತನೆಂದೂ ಸರ್ವತ್ರ ಸಂಚರಿಸುವುದರಿಂದ ಸಂಚರನೆಂದೂ ಹೆಸರುಳ್ಳ ವ್ಯಾಪ್ತನಾದ ನಾರಾಯಣನು ಉನೇ ಸ್ತೋಭವಾದ ಹುಷ್ಕಾರನೆಂದೂ ಉಪಾಸನೆ ಮಾಡಬೇಕು. (ಹೀಗೆ ಉಪಾಸನೆ ಮಾಡಿದ್ದಕ್ಕೆ ಫಲ ಹೇಳುತ್ತಾರೆ—) ಯಾವ ಅಧಿಕಾರಿಯು ಸಾಮದ ಏಕದೇಶಗಳಾದ ಸ್ತೋಭಾಕ್ಷರಗಳ ಅರ್ಥವನ್ನು ತಿಳಿಯುತ್ತಾನೋ, ಅತನಿಗೆ ಅಂತಹ ಉಪಾಸನೆಯಿಂದ ವೇದ ಮೊದಲಾದವುಗಳ ಪಠನದಿಂದುಂಟಾದ ಫಲವು ಲಭಿಸುತ್ತದೆ. ಅಥವಾ ವಾಕ್ ಎಂದು ಹೆಸರುಳ್ಳ ಶ್ರೀಹರಿಯು ಅಂತಹ ಉಪಾಸಕನಿಗೆ ವೇದಾದಿಗಳ ಪಾಠಾಯಣಾದಿ ಗಳಿಂದುಂಟಾದ ಫಲವನ್ನು ಕೊಡುತ್ತಾನೆ. ಉಪಾಸಕನು ಯಥೇಚ್ಛ ಅನ್ನವುಳ್ಳವನಾಗುತ್ತಾನೆ. ಅನ್ನ ಎಂಬ ಹೆಸರುಳ್ಳ ಶ್ರೀಹರಿಯನ್ನು ಪೂಜಿಸಿಕೊಂಡು ಇರುತ್ತಾನೆ. ॥ ೩—೧೩ ॥ ॥ ೩ ॥

ಭಾ. ॥ (೧) ಅನಿರುಕ್ತಸ್ತು ವ್ಯಾಪ್ತೋ ನಾರಾಯಣಸ್ತು ಯಃ । ಆಹೂತ ಏವ ಪಾತೀತಿ ಹುಷ್ಕಾರ ಇತಿ ಕೀರ್ತಿತಃ । ಹುಬಿತ್ಕಾಕ್ರಿಯತೇ ಯಸ್ಮಾತ್ತಹುಷ್ಕಾರಸ್ತು ಜನಾ-ರ್ದನಃ ॥ (೨) ಅನಿರುಕ್ತಸ್ತ್ವವಾಚ್ಯತ್ವಾತ್ಪರಮಃ ಪುರುಷೋ ಹರಿಃ । ಇತಿ ಮಾಹಾತ್ಮ್ಯೇ ॥

ಸಮ್ಯಕ್ ಚರತೀತಿ ಸ ಏವ ಸಂಚರಃ ॥ ೩ ॥ ಇತಿ ತೃಯೋದಶಃ ಖಂಡಃ ॥ ೩–೧೩ ॥ ೧೦ ॥

ಅ ॥ (೧) ವ್ಯಾಪ್ತವಾದ ನಾರಾಯಣನು ಅನಿರುಕ್ತನು ಭೆಟ್ಟಪೂರ್ವಕವಾಗಿ ಶ್ರೀಹರಿಯನ್ನು ಧ್ಯಾನಮಾಡಿದರೇನೇ ಬಿಟ್ಟಿರುವುದರಿಂದ ಶ್ರೀಹರಿಯು ಹರಿ ಎನಿಸುತ್ತಾನೆ ಜನಾರ್ದನನು ಹರಿ ಎಂದು ಕರೆಯಲ್ಪಡುವುದರಿಂದ ಹರಿಕಾರ ಎನಿಸುತ್ತಾನೆ (೨) ಸಂಪೂರ್ಣವಾಗಿ ಶ್ರೀಹರಿಯ ಮಹಿಮೆಯನ್ನು ಹೇಳಲಸಾಧ್ಯವಾದುದರಿಂದ ಸರ್ವೋತ್ಕೃಷ್ಟವಾದ ಶ್ರೀಹರಿಯು ಅನಿರುಕ್ತ ಎನ್ನಿಸುತ್ತಾನೆ. ಶ್ರೀಹರಿಯೇ ಸರ್ವತ್ರ ಸಂಚರಿಸುವುದರಿಂದ ಸಂಚರ ಎನ್ನಿಸುತ್ತಾನೆ. (ಹೀಗೆ ಶ್ರೀಹರಿಯನ್ನು ಪಾಸನೆ ಮಾಡಬೇಕೆಂದು ಎಲ್ಲಾ ಕಡೆಗಳಲ್ಲಿಯೂ ಇಟ್ಟುಕೊಳ್ಳಬೇಕು.) ೩–೧೩ ॥ ೩ ॥

ಹದಿಮೂರನೇ ಖಂಡವು ಮುಗಿಯಿತು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಚ್ಛಾಂದೋಗ್ಯ-
ಉಪನಿಷದ್ಭಾಷ್ಯೇ ತೃತೀಯೋಽಧ್ಯಾಯಃ ॥ ೩ ॥

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಮಾಡಿದ ಶ್ರೀಮತ್
ಛಾಂದೋಗ್ಯ ಉಪನಿಷದ್ಭಾಷ್ಯದಲ್ಲಿ ಮೂರನೇ ಅಧ್ಯಾಯವು ಮುಗಿಯಿತು.

ಅಶೇಷಗುಣಪೂರ್ಣಾಯ ದೋಷದೂರಾಯ ನಿಷ್ಕಲೇ ।
ನಮಃ ಶ್ರೀರಾಜನಾಥಾಯ ಭಕ್ತಾಭೀಷ್ಟಪ್ರದಾಯಿನೇ ॥

॥ ಓಂ ತತ್ಸತ್ ಓಂ ॥

॥ ಶ್ರೀಃ ॥

ನಾಲ್ಕನೇ ಅಧ್ಯಾಯವು

ಓಂ ॥ ಪ್ರದ್ಯುಮ್ನಾದಿಸ್ವರೂಪೇಣ ಹಿಂಕಾರಾದ್ಯಭಿಧಂ ಪರಂ ।
ಸಮಸ್ತಸಾಮಗಂ ವಂದೇ ಸಾಮನಾಮಾನವಿಗ್ರಹಂ ॥

೧ನೇ ಖಂಡವು

ಪೀ—ಬುದ್ಧೀಧವೆಂಬ ಸಾಮದ ಸ್ತೋಭಾಕ್ಷರದಲ್ಲಿದ್ದ ಉಪಾಸನೆಯನ್ನು ಹೇಳಿ, ಐದು, ಏಳು ಅಂಶಗಳುಳ್ಳ ಸಾಮಗಳಲ್ಲಿರತಕ್ಕ ಉಪಾಸನೆಯನ್ನು ನಾಲ್ಕನೇ ಅಧ್ಯಾಯದಲ್ಲಿ ಹೇಳುತ್ತಾರೆ—

ಉ. ॥ ಓಂ ॥ ಸೆಮಸ್ಯ ಖಲು ಸಾಮ್ನ ಉಪಾಸನಗ್ಂ ಸಾಧು ಯತ್ ಖಲು ಸಾಧು ತತ್ಸಾಮೇತ್ಯಾಚಕ್ಷತೇ ಯದಸಾಧು ತದಸಾಮೇತಿ ॥ ೧ ॥

ಅ ॥ ಸರ್ವಗುಣಸಂಪೂರ್ಣನೂ ಸಾಮ ಎಂದು ಹೆಸರುಳ್ಳವನೂ, ಸಾಮವೇದದಲ್ಲಿ ವರ್ಣಿಸಲ್ಪಡುವವನೂ ಆದ ಶ್ರೀಹರಿಯನ್ನು ಸಾಮವು ಸಾಧುವಾದ ಕಾರಣ ಧ್ಯಾನಿಸುತ್ತಿರಬೇಕು. (ಸಾಮವು ಸಾಧುವಾಗುವುದು ಹೇಗೆ? ಎಂದರೆ—) ಎಲ್ಲಾ ವಸ್ತುಗಳಿಂದ ಶ್ರೇಷ್ಠವೆಂದು ಮನಸ್ಸಿನಿಂದ ನಿಶ್ಚಯಿಸಿಕೊಳ್ಳಲಿಕ್ಕೆ ಯೋಗ್ಯವಾದುದು ಸಾಧು. ಎಲ್ಲಾ ವಸ್ತುಗಳಿಂದ ಶ್ರೇಷ್ಠವೆಂದು ತಿಳಿದುಕೊಳ್ಳುವುದು ಸಾಮ. (ಸಾರಶ್ಚೇನ ಧಾರ್ಯಂ ಸಾಧು. ಸಾರಶ್ಚೇನ ನೇಯಂ ಸಾಮ) ಹೀಗೆ ಸಾಧು ಸಾಮ ಶಬ್ದಗಳಿಗೆ ಒಂದೇ ಅರ್ಥವು, ಎಂದು ಜ್ಞಾನಿಗಳು ಹೇಳುತ್ತಾರೆ. ಯಾವುದು ಸಾಧು ಅಲ್ಲವೋ ಅದು ಸಾಮವಲ್ಲ, ಎಂದು ಹೇಳುತ್ತಾರೆ. ॥ ೧ ॥

ಉ. ॥ ತದುತಾಸ್ಯಾಹುಃ ಸಾಮ್ನೈನಮುಪಾಗಾದಿತಿ ಸಾಧುನೈನಮುಪಾಗಾದಿತ್ಯೇವ ತದಾಹುರಸಾಮ್ನೈನಮುಪಾಗಾದಿತ್ಯಸಾಧುನೈನಮುಪಾಗಾದಿತ್ಯೇವ ತದಾಹುಃ ॥ ೨ ॥

ಅ ॥ ಸಾಧು ಸಾಮ ಶಬ್ದಗಳಿಗೆ ಒಂದೇ ಅರ್ಥವೆಂದು ಬೇರೆ ಜ್ಞಾನಿಗಳೂ ಹೇಳುತ್ತಾರೆ. ಸಾಮದಿಂದ (ಅನ್ಯರಿಗೆ ಬೇಸರ ಹುಟ್ಟಿದಂತೆ ಸಮಾಧಾನದಿಂದ) ರಾಜ, ಗುರು ಮೊದಲಾದವರ ಸಮೀಪಕ್ಕೆ ಹೋದನು, ಎಂದು ಹೇಳುವಲ್ಲಿ ಸಾಧುವಾಗಿ ಹೋದನು ಎಂದೇ ಲೋಕದಲ್ಲಿ ಹೇಳುವರು. ಸಾಮ (ಸಮಾಧಾನವಿಲ್ಲದೆ ಉಷ್ಣವನ್ನು ಹೊಂದಿದನೆಂಬ ಅರ್ಥದಲ್ಲಿ ಅಸಾಧುವಾಗಿ ಹೋದನೆಂದು ಲೋಕದಲ್ಲಿ ಪ್ರಯೋಗಿಸುವರು ಅಥವಾ **ಸಾಮ್ನೈನಮುಪಾಗಾತ್** ಎಂಬ ಮಂತ್ರವು ಹೇಳುವುದನ್ನೇ **ಸಾಧುನೈನಮುಪಾಗಾತ್** ಎಂಬುದು ಹೇಳುತ್ತದೆ. **ಅಸಾಮ್ನೈನಮುಪಾಗಾತ್** ಎಂಬ ಮಂತ್ರವು ಹೇಳುವುದನ್ನೇ **ಅಸಾಧುನೈನಮುಪಾಗಾತ್** ಎಂಬುದು ಹೇಳುತ್ತದೆಂದು ಜ್ಞಾನಿಗಳು ಹೇಳುತ್ತಾರೆ ॥ ೨ ॥

ಪೀ—೨ ವೃದ್ಧರೂ ಸ್ವಕಪೋಲಕಲ್ಪಿತವಾಗಿ ಹೇಳುವುದಲ್ಲ. ತಮಗಿಂತಲೂ ಹಿಂದಿನ ವೃದ್ಧರ ಸಮ್ಮತಿಯಿದೆ ಎನ್ನುತ್ತಾರೆ—

ಉ. ॥ ಅಥೋತಾಸ್ಯಾಹುಃ ಸಾಮ ನೋ ಬತೇತಿ ಯತ್ಸಾಧು ಭವತಿ ಸಾಧು ಬತೇತ್ಯೇವ ತದಾಹುರಸಾಮ ನೋ ಬತೇತಿ ಯದಸಾಧು ಭವತ್ಯ-ಸಾಧು ಬತೇತ್ಯೇವ ತದಾಹುಃ ॥ ೩ ॥

ಅ ॥ ಸಾಧುವಾದುದೇ ನಮಗೆ ಸಾಮವು. ಹರ್ಷ. ಹೀಗೆ ಹಿಂದಿನ ವೃದ್ಧರೂ ಹೇಳುತ್ತಾರೆ. ಅಸಾಧು ವಾದುದು ಅಸಾಮವು, ಎನ್ನುತ್ತಾರೆ ॥ ೩ ॥

ಪೀ ಹೀಗೆ ಸಾಧು ಎಂದು ಅರ್ಥವುಳ್ಳ ಸಾಮ ಎಂಬ ನಾಮವು ಶ್ರೀಪತಿಗೆ ಇದೆ. ಎಂದು ಶ್ರೀಪತಿಯನ್ನು ಉಪಾಸನೆ ಮಾಡುವವನಿಗೆ ಫಲ ಹೇಳುತ್ತಾರೆ—

ಉ. ॥ ಸ ಯ ಏತದೇವಂವಿದ್ವಾನ್ಸಾಧು ಸಾಮೇತ್ಯುಪಾಸ್ತೇಽಭ್ಯಾಶೋಹ ಯದೇನಮೇ ಸಾಧವೋ ಧರ್ಮಾ ಆ ಚ ಗಚ್ಛೇಯುರುಪ ಚ ನಮೇಯುಃ॥ ಇತಿ ಪ್ರಥಮಃ ಖಂಡಃ ॥ ೪-೧ ॥ ॥ ೪ ॥

ಅ ॥ ಅಧಿಕಾರಿಯು ಸಾಧು ಸಾಮ ರಬ್ದಗಳಿಗೆ ಒಂದೇ ಅರ್ಥವೆಂದು ತಿಳಿದು ಸಾಧು ಸಾಮವು ಎಂದು ಉಪಾಸನೆ ಮಾಡುತ್ತಾನೋ ಆ ಉಪಾಸಕನಿಗೆ ಶ್ರೀಪತಿಯಲ್ಲಿ ಸಾಧು (ಯೋಗ್ಯ) ಧರ್ಮಗಳು ಬರುತ್ತವೆ. ಮೋಕ್ಷದಲ್ಲಿ ಸ್ಥಿರಗಳಾಗಿ ಇರುತ್ತವೆ. ಈ ಲೋಕದಲ್ಲಿಯೂ ಸ್ಥಿರಗಳಾಗಿ ಫಲಿಸಲ್ಪಡಲಿಕ್ಕಾಗಿ ಇರುತ್ತವೆ. ॥ ೪-೧ ॥ ॥ ೪ ॥

ಭಾ. ॥ ಹರಿಃ ಓಂ ॥ (೧) ಸಮಸ್ತಸ್ಯ ಪೂರ್ಣಸ್ಯ ಸಾಧುತ್ವಾತ್ಸಾಮನಾಮ್ನೋ ವಿಷ್ಣೋರುಪಾಸನಂ ಸಾಧು ॥ (೨) ಸಾರತ್ವೇನ ಮೇಯಂ ಸಾಮ । ಸಾರತ್ವೇನ ಧಾರ್ಯಂ ಸಾಧ್ವಿತ್ಯೇಕ ಏವಾರ್ಥಃ ॥ (೩) ಸಾಧುತ್ವಾತ್ಸಾಮನಾಮಾನಂ ಸಮಸ್ತಗುಣಪೂರ್ತಿತಃ । ಸಮಸ್ತಂ ಯ ಉಪಾಸೀತ ನಾರಾಯಣಮನಾಮಯಂ ॥ ಸರ್ವಸಾಮ್ನಾಂ ದೇವತೇತಿ ಸ ಮುಕ್ತಃ ಸಾಧುಧರ್ಮಭಾಕ್ । ಇತಿ ಸಾಮಸಂಹಿತಾಯಾಂ ॥ ೧, ೨, ೩, ೪ ॥ ಇತಿ ಪ್ರಥಮಃ ಖಂಡಃ ॥ ೪-೧ ॥ ॥ ೧ ॥

ಅ ॥ (೧) ಸಮಸ್ತಸ್ಯ ಅಂದರೆ ಸರ್ವಗುಣಾಧಾರನಾದ ಪರಿಪೂರ್ಣತ್ವವುಳ್ಳವನಾದುದರಿಂದ ಸಾಮ ಎಂದು ಹೆಸರುಳ್ಳವನೂ, ಆದ ಶ್ರೀವಿಷ್ಣುವಿನ ಉಪಾಸನೆಯು ಶ್ರೇಷ್ಠವು (೨) ಸರ್ವಶ್ರೇಷ್ಠನೆಂದು ತಿಳಿಯಲರ್ಹನು ಸಾಮನು ಸರ್ವಶ್ರೇಷ್ಠನೆಂದು ನಿರ್ಧರಿಸಿಕೊಳ್ಳಲ್ಪಡುವವನ ಸಾಧುವು. ಹೀಗೆ ಸಾಮ ಸಾಧುಶಬ್ದಗಳಿಗೆ ಒಂದೇ ಅರ್ಥವು (೩) ಸರ್ವಗುಣಗಳಿಂದ ಪೂರ್ಣನಾದುದರಿಂದ ಸಮಸ್ತನೆನಿಸಿಕೊಂಡವನೂ, ಸರ್ವೋತ್ತಮನಾದುದರಿಂದಲೂ ಎಲ್ಲಾ ಸಾಮಗಳಿಗೆ ದೇವತೆಯಾದುದರಿಂದಲೂ ಸಾಮನೆನಿಸಿಕೊಂಡವನೂ, ದೋಷವಿಲ್ಲದವನೂ ಆದ ಶ್ರೀನಾರಾಯಣನನ್ನು ಉಪಾಸನೆ ಮಾಡಿದವನು ಸಾಧು ಧರ್ಮಗಳನ್ನು ಹೊಂದಿದವನಾಗಿ ಮುಕ್ತನಾಗುವನು. ಎಂದು ಸಾಮಸಂಹಿತೆಯಲ್ಲಿ ಹೇಳಿದೆ. ॥ ೧, ೨, ೩, ೪ ॥ ॥ ೧ ॥

೨ನೇ ಖಂಡವು

ಈ ಶ್ಲೋಕದಲ್ಲಿ ಐದು ವಿಧ ಸಾಮದಲ್ಲಿ ಸ್ತುತಿಸಲ್ಪಡತಕ್ಕ ಶ್ರೀಹರಿಯ ಉಪಾಸನೆಯನ್ನು ಹೇಳುತ್ತಾರೆ—

ಉ. ॥ ಲೋಕೇಷು ಪಂಚವಿಧಃ ಸಾಮೋಪಾಸೀತ ಪೃಥಿವೀ ಹಿಂಕಾರೋಽಗ್ನಿಃ ಪ್ರಸ್ತಾವೋಽಂತರಿಕ್ಷಮುದ್ಗೀಥ ಆದಿತ್ಯಃ ಪ್ರತಿಹಾರೋ ದ್ಯೌರ್ನಿಧನಮಿತ್ಯೂರ್ಧ್ವೇಷು ॥ ೧ ॥

ಅ ॥ ಭೂಲೋಕ ಮೊದಲಾದ ಲೋಕಗಳಲ್ಲಿ ಐದು ರೂಪಗಳುಳ್ಳವನೂ ಹಿಂಕಾರ ಮೊದಲಾದ ಐದು ವಿಧ ಸಾಮದಲ್ಲಿ ಸ್ತುತಿಸಲ್ಪಡತಕ್ಕವನೂ ಸಾಮನೆನಿಸಿಕೊಂಡ ಶ್ರೀಹರಿಯನ್ನು ಉಪಾಸನೆ ಮಾಡತಕ್ಕದ್ದು ಎಂದು ಹೇಳುತ್ತಾರೆ.) (ಅದನ್ನು ವಿವರಿಸುತ್ತಾರೆ.) (1) ಸಸ್ಯ ಮೊದಲಾದವುಗಳನ್ನು ವಿಸ್ತರಿಸುವುದರಿಂದ ಪೃಥಿವೀ ಎಂದು ಹೆಸರುಳ್ಳ ಪೃಥಿವಿಯಲ್ಲಿರತಕ್ಕ ಪ್ರದ್ಯುಮ್ನನು ಸೃಷ್ಟಿಸುವುದರಿಂದ ಹಿಂಕಾರನೆಂದು ಹೆಸರುಳ್ಳವನು. ಹಿಂಕಾರವೆಂಬ ಸಾಮದಲ್ಲಿ ಹೇಳಲ್ಪಡತಕ್ಕವನು. (2) ಸರ್ವವನ್ನು ಭಕ್ಷಿಸುವುದರಿಂದ ಅಗ್ನಿ ಯೆಂದು ಹೆಸರುಳ್ಳ ಅಗ್ನಿಯಲ್ಲಿರತಕ್ಕ ವಾಸುದೇವನು ಪ್ರಭವನಾವತಾರನಾದುದರಿಂದ ಪ್ರಸ್ತಾವನೆನಿಸಿಕೊಂಡವನು ಪ್ರಸ್ತಾವ ಎಂಬ ಸಾಮದಲ್ಲಿ ಸ್ತುತಿಸಲ್ಪಡತಕ್ಕವನು. (3) ರವೀರೊಳಗೆ ಸರ್ವವನ್ನು ನೋಡುವುದರಿಂದ ಅಂತರಿಕ್ಷನೆನಿಸಿಕೊಂಡ ಅಂತರಿಕ್ಷದಲ್ಲಿರುವ ನಾರಾಯಣನು ಪ್ರಥಮದಿಂದ ಗಾನಮಾಡಲ್ಪಡುವುದರಿಂದಲೂ ನಾಸದೇವ ಮೊದಲಾದ ಮೂರ್ತಿಗಳನ್ನು ಹೊರಡಿಸುವುದರಿಂದಲೂ ಉದ್ಗೀಥನೆನಿಸಿಕೊಂಡವನು. ಉದ್ಗೀಥವೆಂಬ ಸಾಮದಲ್ಲಿ ವರ್ಣಿಸಲ್ಪಡತಕ್ಕವನು. (4) ಜನರ ಆಯುಷ್ಯವನ್ನು ತೆಗೆದುಕೊಳ್ಳುವುದರಿಂದ ಆದಿತ್ಯನೆನಿಸಿಕೊಂಡ ಆದಿತ್ಯನಲ್ಲಿರತಕ್ಕ ಅನಿರುದ್ಧನು ಜಗತ್ತನ್ನು ಆಯಾಯ ಕಾರ್ಯಗಳಲ್ಲಿ ಪ್ರೇರೇಪಿಸುವುದರಿಂದ ಪ್ರತಿಹಾರನೆನಿಸಿಕೊಂಡವನು ಪ್ರತಿಹಾರವೆಂಬ ಸಾಮದಿಂದ ವರ್ಣಿಸಲ್ಪಡುವವನು. (5) ಕ್ರೀಡೆಗೆ ಕಾರಣನಾದುದರಿಂದ ದ್ಯು ಎನಿಸಿಕೊಂಡ ದ್ಯುಲೋಕದಲ್ಲಿರತಕ್ಕ ಸಂಕರ್ಷಣನು ಸಂಹಾರಕನಾದುದರಿಂದ ನಿಧನನೆನಿಸಿಕೊಂಡವನು. ನಿಧನವೆಂಬ ಸಾಮದಿಂದ ಸ್ತುತಿಸಲ್ಪಡುವವನು. ಹೀಗೆ ಮೇಲುಮೇಲಿನ ಶ್ಲೋಕಗಳಲ್ಲಿರತಕ್ಕ ಭಗವನ್ಮೂರ್ತಿಗಳು ಹಿಂಕಾರ ಮೊದಲಾದ ಸಾಮಗಳಿಂದ ಸ್ತುತಿಸಲ್ಪಡುವವರೆಂದು ಉಪಾಸನೆ ಮಾಡಬೇಕು. ಎಂದು ಉಕ್ತವಾಯಿತು. ೧

ಉ. ॥ ಅಥಾವೃತ್ತೇಷು ದ್ಯೌರ್ಹಿಂಕಾರ ಆದಿತ್ಯಃ ಪ್ರಸ್ತಾವೋಽಂತರಿಕ್ಷಮುದ್ಗೀಥೋಽಗ್ನಿಃ ಪ್ರತಿಹಾರಃ ಪೃಥಿವೀ ನಿಧನಂ ॥ ೨ ॥

ಆ ॥ ಈಗ ಹಿಂದೆ ಹೇಳಿದ ಕ್ರಮಕ್ಕೆ ವ್ಯತ್ಯಾಸವಾಗಿ ಸ್ವರ್ಗಲೋಕವನ್ನಾರಂಭಿಸಿ ಪೃಥಿವೀ ಪರ್ಯಂತ ಲೋಕಗಳಲ್ಲಿರತಕ್ಕ ಭಗವದ್ರೂಪಗಳು ಹಿಂಕಾರ ಮೊದಲಾದ ಸಾಮಗಳಿಂದ ಹೇಳಲ್ಪಡುವವುಗಳೆಂದು ಉಪಾಸನೆ ಮಾಡಬೇಕು. (ಹೇಗೆಂದರೆ) ದ್ಯುಲೋಕದಲ್ಲಿದ್ದ ಪ್ರದ್ಯುಮ್ನನು ಹಿಂಕಾರನು; ಆದಿತ್ಯನಲ್ಲಿದ್ದ ವಾಸುದೇವನು ಪ್ರಸ್ತಾವನು. ಅಂತರಿಕ್ಷದಲ್ಲಿದ್ದ ನಾರಾಯಣನು ಉದ್ಗೀಥನು. ಅಗ್ನಿಯಲ್ಲಿದ್ದ ಅನಿರುದ್ಧನು ಪ್ರತಿಹಾರನು. ಪೃಥಿವಿಯಲ್ಲಿದ್ದ ಸಂಕರ್ಷಣನು ನಿಧನನು.

ವಿ ॥ (1) ಸೊದಲು ಪೃಥಿವ್ಯಾದಿ ಶಬ್ದಗಳಿಂದ ಪ್ರದ್ಯುಮ್ನಾದಿಗಳನ್ನು ಇಟ್ಟುಕೊಳ್ಳಬೇಕೆಂದು ಹೇಳಿದೆ ಈಗ ಸಂಕರ್ಷಣಾದಿಗಳನ್ನು ಇಟ್ಟುಕೊಳ್ಳಬೇಕೆಂದು ಹೇಳಿದುದರಿಂದ ಪೂರ್ವೋತ್ತರ ವಿರುದ್ಧ

: ಹಿಂದಿನಂತೆ ಅರ್ಥ ಇಟ್ಟುಕೊಳ್ಳಬೇಕು.

ಯಾವುತೆಂದರೆ—ಎಲ್ಲಾ ರೂಪಗಳೂ ಸರ್ವ ಗುಣಾದಿಯುಕ್ತಗಳೇ ಆಗಿವೆ. ಆದಕಾರಣ ವಿರೋಧವಿಲ್ಲ. (೨) ಮತ್ತು ಎಲ್ಲಾ ರೂಪಗಳಲ್ಲಿಯೂ ಎಲ್ಲಾ ಗುಣಗಳೂ ಇವೆ. ಆದರೆ ಕೆಲವುಕೆಲವು ಕಾಲಗಳಲ್ಲಿ ಕೆಲವುಕೆಲವು ಗುಣಗಳಿಗೆ ಕೆಲವು ರೂಪಗಳಲ್ಲಿ ಪ್ರಕಾಶವು ಹೀಗೆ ಸ್ವಮತಕ್ಕೆ ಇಷ್ಟುಕೊಂಡು ವಿರೋಧವನ್ನು ಪರಿಹರಿಸಿಕೊಳ್ಳಬೇಕು. (೩) ಮತ್ತು ಕೆಲವು ಅಧಿಕಾರಿಗಳು ಸೃಷ್ಟಿಯಲ್ಲಿ ಪ್ರದ್ಯುಮ್ನನನ್ನೂ, ಕೆಲವರು ಸಂಕರ್ಷಣನನ್ನೂ ಧ್ಯಾನಿಸುವರು. ಹೀಗೆ ಅಧಿಕಾರಭೇದದಿಂದಲೂ ವಿರೋಧವನ್ನು ಪರಿಹರಿಸಿಕೊಳ್ಳಬೇಕು ॥ ೬ ॥

ಟೀ—ಹೀಗೆ ತೀರ್ಥ ಉದಾಹರಿಸಿದ ಪ್ರಮಾಣವಚನಗಳಿಗೆ ಕಲ್ಪ ಹೇಳುತ್ತಾರೆ

ಉ. ॥ ಕಲ್ಪಂತೇ ಹಾಸ್ಯೇ ಲೋಕಾ ಊರ್ಧ್ವಾಶ್ಚಾವೃತ್ತಾಶ್ಚ ಯ ಏತದೇವಂ ವಿದ್ವಾಂಸೋಽಲ್ಲೋಕೇಷು ಪಂಚವಿಧಂ ಸಾನೋಪಾಸ್ತೇ ॥ ಇತಿ ದ್ವಿತೀಯಃ ಖಂಡಃ ॥ ೪-೨ ॥ ॥ ೭ ॥

ಅ ॥ ಇದು ವಿಧ ಪ್ರಮಾಣದಲ್ಲಿ ಸ್ಮೃತಿಸಿದ್ಧತಕ್ಕ ಪ್ರದ್ಯುಮ್ನ ವಿರೂಪವನ್ನು ತಿಳಿದು ಹೇಳಿದ ಲೋಕಗಳಲ್ಲಿಯೂ ಕೆಳಗಿನ ಲೋಕಗಳಲ್ಲಿಯೂ ಮತ್ತು ವಿವಿಧ ಭಗವದ್ರೂಪಗಳನ್ನು ಉಂಟುಮಾಡಿ ನಾವುಮನುಷ್ಯರಿಗೆ ಆ ಲೋಕಗಳಲ್ಲಿರುವ, ಪ್ರಕಾಶಸ್ವರೂಪರಾದ ಪ್ರದ್ಯುಮ್ನ ಮೊದಲಾದ ಶಕ್ತ ಭಗವನ್ಮೂರ್ತಿಗಳು ಆಯುಷ್ಯವನ್ನು ಕೊಡುತ್ತವೆ ॥ ೬ ॥

ಭಾ. ॥ (೧) ನಾರಾಯಣಾಖ್ಯ ಉದ್ಗೀಥ ಉದ್ಗೀಯಃ ಪ್ರಣವೇನ ಯತ್ । ಉದ್ಗಚ್ಛಂತಿ ಯತೋಽಸ್ಮಾದ್ವಾ ವಾಸುದೇವಾದಿಮೂರ್ತಯಃ ॥ (೨) ಪ್ರಥಮಾವತಾರರೂಪತ್ವಾದ್ವಾಸುದೇವಃ ಪರಃ ಪುಮಾನ್ । ಪ್ರಸ್ತಾವಃ ॥ (೩) ನಿಧನಂ ಚಾಪಿ ಸಂಕರ್ಷಣ ಉದಾಹೃತಃ । ಸಂಕರ್ಷಣೋ ಽಪಿ ಸಂಹರ್ತಾ ॥ (೪) ಪ್ರದ್ಯುಮ್ನಃ ಪರಮೇಶ್ವರಃ । ಹಿಂಕಾರ ಇತಿ ಸಂಪ್ರೋಕ್ತೋ ಽಸೌ ಸೃಷ್ಟಿರುದೀರ್ಯತೇ । ಪ್ರಸಿದ್ಧಾ ಹಿ ಸೃಷ್ಟಿಃ ಸ್ಯಾತ್ ॥ (೫) ಅನಿರುದ್ಧಃ ಪರೋಽವ್ಯಯಃ ॥ ಪ್ರತಿಹಾರ ಇತಿ ಪ್ರೋಕ್ತಃ ಸ ಏಷ ಕಾರ್ಯೋಽಪ್ಯಿದಂ ಜಗತ್ । ಪ್ರತಿ ಪ್ರತಿಹರೇನ್ನಿತ್ಯಂ ಸಂಹರ್ತಾ ಪ್ರತಿಹೃತೇಃ ಪ್ರಭಾ ॥ ೭ ॥

ಅ ॥ (೧) ಪ್ರಣವ (ಓಮ್)ದಿಂದ ಹೇಳಲ್ಪಡುವ ನಾರಾಯಣನಾಮಕ ಪರಮಾತ್ಮನಿಂದಲೂ, ನಾರಾಯಣನಿಂದ ವಾಸುದೇವ ಮೊದಲಾದ ಭಗವನ್ಮೂರ್ತಿಗಳು ಪ್ರಕಟಗೊಳ್ಳುವುದರಿಂದಲೂ ನಾರಾಯಣನು ಉದ್ಗೀಥನೆನಿಸುತ್ತಾನೆ. (೨) ಸರ್ವೋತ್ತಮನಾದ ವಾಸುದೇವನು ಪ್ರಥಮಾವತಾರ ಸ್ವರೂಪನಾಗುವುದರಿಂದ ಪ್ರಸ್ತಾವನೆನಿಸುತ್ತಾನೆ (೩) ಸಂಕರ್ಷಣನು ಸಂಹಾರಕನಾಗುವುದರಿಂದ ನಿಧನನೆನ್ನಿಸುತ್ತಾನೆ (೪)ಸರ್ವೋತ್ತಮನಾದ ಪ್ರದ್ಯುಮ್ನನು ಸೃಷ್ಟಿ ಮಾಡತಕ್ಕವನಾಗುವುದರಿಂದ ಹಿಂಕಾರನೆನಿಸುತ್ತಾನೆ. ಈ ಎಂಬುದಕ್ಕೆ ಸೃಷ್ಟಿಯೆಂಬ ಅರ್ಥವು ಪ್ರಸಿದ್ಧವು. (೫) ಸರ್ವೋತ್ತಮನಾದ ಅನಿರುದ್ಧನು ಪ್ರತಿಕಾರ್ಯಗಳಲ್ಲಿಯೂ ನಿಯಮಿಸಿ ಜಗತ್ತನ್ನು ರಕ್ಷಿಸುವುದರಿಂದಲೂ, ತನ್ನ ವಿಷಯಗಳನ್ನು ತನ್ನಲ್ಲಿ ಸಂತೈಸಿಕೊಳ್ಳುವುದರಿಂದಲೂ ಪ್ರತಿಹಾರ ಎನಿಸುತ್ತಾನೆ. ॥ ೭ ॥

ಟೀ—ಹೀಗೆ ಹೇಳಿದಪ್ರಕಾರ ಶ್ರೀಹರಿಗೆ ಹಿಂಕಾರ ಮೊದಲಾದ ಹೆಸರು ಮುಖ್ಯವಾಗಬಹುದು. ಆದರೆ ಪೃಥಿವೀ ಹಿಂಕಾರಃ ಇತ್ಯಾದಿಗಳಲ್ಲಿ ಪೃಥಿವಿಯು ಹಿಂಕಾರವಾಗುತ್ತದೆ ಹಿಂಕಾರಃ. ಇದು ಮೊದಲಾದುದು ಹೇಗೆ ಕೂಡುತ್ತದೆ ಎಂದರೆ—

ಭಾ. ॥ (೧) ತೇ ಪೃಥಿವ್ಯಾದಿಷು ಸದಾ ತನ್ನಾಮಾನಃ ಪ್ರತಿಷ್ಠಿಕಾಃ । ಪೃಥಿವೀತ್ಯಾದಿ-ಶಬ್ದಾರ್ಥಾಸ್ತೇ ಹಿ ಮುಖ್ಯತ ಈರಿತಾಃ ॥ ತತ್ಸಂಬಂಧಾತ್ತದರ್ಥತ್ವಂ ಪೃಥಿವ್ಯಾದೇರಮು-ಖ್ಯತಃ । ಪ್ರಥನಾದ್ಧೇವ ಸಸ್ಯಾದೇಃ ಪೃಥಿವೀತ್ವಮುದಾಹೃತಂ ॥ (೨) ಅಗ್ನಿತ್ವಮದನಾ-ದ್ಧೈವ ಹ್ಯಂತರೀಕ್ಷಣಯೋಗತಃ । ಅಭಾವಾದ್ಯುವಧಾನಸ್ಯ ತ್ವಂತರಿಕ್ಷಮಿತೀರ್ಯತೇ ॥ ಅದಾನಾದಾಯುಷಶ್ಚೈವ (ಷಾಂ ಚೈವ) ಸ ಆದಿತ್ಯ ಉದೀರಿತಃ । ದ್ಯೌಃ ಕ್ರೀಡಾಕಾರಣತ್ವಾ-ಚ್ಚ ತತ್ಸರ್ವಂ ಹಿ ಸರೇ ಹರೌ ॥ ಇತಿ ಚ ॥ ೨ ॥

ಅ॥ (೧) ಪ್ರಮ್ಯುಮ್ನ ಮೊದಲಾದ ಭಗವದ್ರೂಪಗಳು ಸದಾ ಪೃಥಿವ್ಯಾದಿಗಳಲ್ಲಿ ನಿಯಾಮಕಗಳಾಗಿದ್ದು ಸಸ್ಯ ಮೊದಲಾದವುಗಳನ್ನು ಸಮೃದ್ಧಿಮಾಡುವುದರಿಂದ ಅವುಗಳಿಗೆ ಪೃಥಿವೀ ಮೊದಲಾದ ನಾಮಗಳು. ಅದಕಾರಣ ಆ ಪ್ರಮ್ಯುಮ್ನಾದಿಗಳೇ ಮುಖ್ಯವಾಗಿ ಪೃಥಿವೀ ಇತ್ಯಾದಿ ನಾಮಗಳಿಂದ ಹೇಳಲ್ಪಡುತ್ತಾರೆ. ಭಗವದ್ರೂಪಗಳ ಸಂಬಂಧದಿಂದಲೇ ಪೃಥಿವ್ಯಾದಿಗಳಿಗೆ ಅಮುಖ್ಯವಾಗಿ ಪೃಥಿವ್ಯಾದಿ ಶಬ್ದಗಳು. ಪೃಥಿವೀ ಎಂದರೆ—ಸಸ್ಯ ಮೊದಲಾದವುಗಳನ್ನು ವೃದ್ಧಿಗೊಳಿಸುವಿಕೆ. (೨) ಶ್ರೀಹರಿಯು ಸರ್ವಭಕ್ಷಕನಾಮದರಿಂದ ಅಗ್ನಿಯೆಂದೂ, ಶರೀರದೊಳಗೆ ಇದ್ದು ತಡೆಯಿಲ್ಲದೆ ಪ್ರತ್ಯಕ್ಷನಾಗಿ ನೋಡುವುದರಿಂದ ಅಂತರಿಕ್ಷನೆಂದೂ, ಜನರ ಆಯುಷ್ಯವನ್ನೂ, ವೀರನ್ನೂ ತೆಗೆದುಕೊಳ್ಳುವುದರಿಂದ ಆದಿತ್ಯನೆಂದೂ, ಕ್ರೀಡೆಗೆ ಕಾರಣನಾದುದ ರಿಂದ ದ್ಯೌ ಎಂದೂ ಕರೆಸಿಕೊಳ್ಳುತ್ತಾನೆ. ಈ ಎಲ್ಲಾ ಶಬ್ದಗಳು ಶ್ರೀಹರಿಯಲ್ಲಿ ಮುಖ್ಯಗಳು ॥ ೨ ॥

ಭಾ. ॥ ಪಂಚಾತ್ಮಕಂ ಯೋ ಲೋಕೇಷು ಸದೋಪಾಸ್ತೇ ಹರಿಂ ಪರಂ । ಊ-ರ್ಧ್ವಾಧಃಸಂಸ್ಥಿತಾಸ್ತಸ್ಯ ಸಂಶ್ರೈವ ದರಮೂರ್ತಯಃ ॥ ಸೋಕ್ಷಾದಿಕಮಭೀಷ್ಟಂ ಯತ್ ಕಲ್ಪಂತೇಽಸ್ಯ ಸದೈವ ಹಿ । ಇತಿ ಚ ॥ ೧, ೨, ೩ ॥ ೪–೬ ॥ ॥ ೩ ॥

ಆ ॥ ಪ್ರಮ್ಯುಮ್ನ ಮೊದಲಾದ ಐದು ರೂಪಗಳುಳ್ಳ ಶ್ರೀಹರಿಯನ್ನು ಸದಾ ಉಪಾಸನೆಮಾಡು ವವನಿಗೆ ಮೇಲಿನ ಲೋಕಗಳಲ್ಲಿವ ಐದು ಭಗವದ್ರೂಪಗಳು ಕೆಳಗಿನ ಲೋಕಗಳಲ್ಲಿನ ಐದು ಭಗವದ್ರೂಪಗಳು. ಹೀಗೆ ಹತ್ತು ಭಗವನ್ಮೂರ್ತಿಗಳು ಮೋಕ್ಷ ಮೊದಲಾದ ಅಭೀಷ್ಟವನ್ನು ಕೊಡು ತ್ತವೆ ॥ ೧, ೨, ೩ ॥ ೪–೬ ॥ ॥ ೩ ॥

ಎರಡನೇ ಖಂಡವು ಮುಗಿಯಿತು.

೩ನೇ ಖಂಡವು

ಹೀ--ಲೋಕಗಳಲ್ಲಿ ಐದು ರೂಪವುಳ್ಳ ಶ್ರೀಹರಿಯನ್ನು ಉಪಾಸನೆ ಮಾಡಬೇಕೆಂದು ಹಿಂದೆ ಹೇಳಿದರು. ಈಗ ಲೋಕವು ಉಳಿಯಬೇಕಾದರೆ ಮಳೆಯು ಅವಶ್ಯಕವಾಗಿರುವುದರಿಂದ ವೃಷ್ಟಿ (ಮಳೆ) ಯಲ್ಲಿ ಐದು ರೂಪಗಳಿಂದಿರುವ ಶ್ರೀಹರಿಯನ್ನು ಉಪಾಸನೆ ಮಾಡಬೇಕೆನ್ನುತ್ತಾರೆ—

ಉ. ॥ ವೃಷ್ಟ್ಯೈ ಪಂಚವಿಧೇ ಸಾಮೋಪಾಸೀತ ಪುರೋವಾತೋ ಹಿಂಕಾರೋ ನೇಫೋ ಜಾಯತೇ ಸ ಪ್ರಸ್ತಾವೋ ವರ್ಷತಿ ಸ ಉದ್ಗೀಥೋ ವಿದ್ಯೋತತೇ ಸ್ತನಯತಿ ಸ ಪ್ರತಿಹಾರಃ ॥ ೧ ॥

ಅ ॥ ಸಾಮದಲ್ಲಿ ಸ್ತುತಿಸಲ್ಪಡತಕ್ಕ ಮಳೆಯಲ್ಲಿರುವ ಶ್ರೀಹರಿಯ ಐದು ರೂಪಗಳನ್ನು ಪಾಸನೆ ಮಾಡಬೇಕು. ಪುರೋವಾತ(ಮಳೆ ಒರುವುದಕ್ಕಿಂತ ಮೊದಲಿನ ಗಾಳಿ)ದಲ್ಲಿದ್ದ ಪ್ರದ್ಯುಮ್ನನು ಹಿಂಕಾರನು. ಮೇಘಗಳ ಸಮೂಹದಲ್ಲಿರತಕ್ಕ ವಾಸುದೇವನು ಪ್ರಸ್ತಾವನು. ಮಳೆಯ ಧಾರೆಯಲ್ಲಿರತಕ್ಕ ನಾರಾಯಣನು ಉದ್ಗೀಥನು. ಮಿಂಚು ಮೊದಲಾಗಿ ಎಲ್ಲಿರತಕ್ಕ ಅನಿರುದ್ಧನು ಪ್ರತಿಹಾರನು. ॥ ೧ ॥

ಉ. ॥ ಉದ್ಗೃಹ್ಣಾತಿ ತಸ್ಮಿನ್ಧನಂ ವರ್ಷತಿ ಹಾಸ್ಮೈ ವರ್ಷಯತಿ ಹ ಯ ಏತದೇವಂವಿದ್ವಾನ್ ವೃಷ್ಟೌ ಪಂಚವಿಧಂ ಸಾಮೋಪಾಸ್ತೇ ॥ ಇತಿ ತೃತೀಯಃ ಖಂಡಃ ॥ ೪-೩ ॥ ॥ ೨ ॥

ಅ ॥ ಮಳೆಯು ಕೊನೆಗೊಳ್ಳುವ ಸಮಯದಲ್ಲಿರತಕ್ಕ ಸಂಕರ್ಷಣನು ನಿಧನನು. ಹೀಗೆ ಸಾಮದಲ್ಲಿ ಸ್ತುತಿಸಲ್ಪಡತಕ್ಕ ಶ್ರೀಹರಿಯು ವೃಷ್ಟಿ ಮೊದಲಾದ ಐದು ಸ್ಥಾನಗಳಲ್ಲಿದ್ದಾನೆಂದು ತಿಳಿದು ವೃಷ್ಟಿ ಮೊದಲಾದವುಗಳಲ್ಲಿ ಐದು ರೂಪಗಳುಳ್ಳ ಶ್ರೀಹರಿಯನ್ನು ಉಪಾಸನೆ ಮಾಡಿದವನಿಗೆ ಶ್ರೀಹರಿಯು ಅಭೀಷ್ಟವನ್ನು ಸುರಿಸುವನು. ॥ ೪-೩ ॥ ॥ ೩ ॥

ಭಾ. ॥ ಪಂಚರೂಪಂ ತು ಯೋ ವಿಷ್ಣುಂ ಪುರೋ ವಾತಾದಿಷು ಸ್ಥಿತಂ । ಉಪಾಸ್ತೇ ವೃಷ್ಟಿರಸ್ಮೈ ಸ್ಯಾದ್ವರ್ಷಯತ್ಯಸ್ಯ ಮುಕ್ತಿಗಾನ್ ॥ ಸರ್ವಭೋಗಾಂಶ್ಚ ಭಗವಾನ್ ಪಂಚರೂಪೀ ಜನಾರ್ದನಃ । ಇತಿ ಚ ॥ ೧, ೨ ॥ ಇತಿ ತೃತೀಯಃ ಖಂಡಃ ॥ ೪-೩ ॥ ॥ ೧ ॥

ಅ ॥ ಪುರೋವಾತ ಮೊದಲಾದವುಗಳಲ್ಲಿರತಕ್ಕ ಐದು ರೂಪಗಳುಳ್ಳ ಶ್ರೀಹರಿಯನ್ನು ಉಪಾಸನೆ ಮಾಡಿದವನಿಗೆ ಆ ಶ್ರೀಹರಿಯು ಈ ಲೋಕದಲ್ಲಿಯೂ ಮುಕ್ತಿಯಲ್ಲಿಯೂ ಎಲ್ಲಾ ಭೋಗಗಳನ್ನು ಕೊಡುವನು. ॥ ೧, ೨ ॥ ॥ ೧ ॥

ಮೂರನೇ ಖಂಡವು ಮುಗಿಯಿತು

ಳನೇ ಖಂಡವು

ಪೀ–ವೃಷ್ಟಿಯಲ್ಲಿ ಐದು ರೂಪಗಳುಳ್ಳ ಶ್ರೀಹರಿಯನ್ನು ಉಪಾಸನೆ ಮಾಡಬೇಕೆಂದು ಹೇಳಿ ಮಳೆಯಿಂದಲೇ ನೀರು ಆಗುವುದರಿಂದ ನೀರಿನಲ್ಲಿ ಶ್ರೀಹರಿಯನ್ನು ಪಾಸನೆ ಮಾಡಬೇಕೆನ್ನುತ್ತಾರೆ

ಉ. ॥ ಸರ್ವಾಸ್ವಪ್ಸು ಪಂಚವಿಧಂ ಸಾಮೋಪಾಸೀತ ಮೇಘೋ ಯತ್ಸಂಪ್ಲವತೇ ಸ ಹಿಂಕಾರೋ ಯದ್ವರ್ಷತಿ ಸ ಪ್ರಸ್ತಾವೋ ಯಾಃ ಪ್ರಾಚ್ಯಃ ಸ್ಯಂದಂತೇ ಸ ಉದ್ಗೀಥೋ ಯಾಃ ಪ್ರತೀಚ್ಯಃ ಸ ಪ್ರತಿಹಾರಃ ಸಮುದ್ರೋ ನಿಧನಂ ॥ ೧ ॥

ಅ ॥ ನೀರಿನಲ್ಲಿರತಕ್ಕ ಐದು ರೂಪಗಳುಳ್ಳ ಐದು ವಿಧ ಸಾಮದಲ್ಲಿ ಸ್ತುತಿಸಲ್ಪಡತಕ್ಕ ಶ್ರೀಹರಿಯನ್ನು ಪಾಸನೆಮಾಡಬೇಕು. ಸಂಚರಿಸಿಕೊಂಡಿರುವ ಮೇಘದಲ್ಲಿರತಕ್ಕ ಪ್ರದ್ಯುಮ್ನನು ಹಿಂಕಾರನು. ಮಳೆ ಸುರಿಯುವುದರಲ್ಲಿರತಕ್ಕ ವಾಸುದೇವನು ಪ್ರಸ್ತಾವನು. ಸ್ವರ್ಗಲೋಕಮುಖವಾಗಿ ಹರಿಯುವ ನದಿ

ಗಳಲ್ಲಿರತಕ್ಕ ಜಾರಾಯಣನು ಉದ್ಗೀಥನು. ಪಶುಮುಖವಾಗಿ ಹರಿಯುವ ನದಿಗಳಲ್ಲಿರತಕ್ಕ ಅನಿರುದ್ಧನು ಪ್ರತಿಹಾರನು. ಸಮುದ್ರದಲ್ಲಿರತಕ್ಕ ಸಂಕರ್ಷಣನು ನಿಧನನು. ॥ ೭ ॥

ಊ. ॥ ನ ಹಾಪ್ಸು ಪ್ರೈತ್ಯಪ್ಸುಮಾನ್ಭವತಿ ಯ ಏತದೇವಂವಿದ್ವಾನ್ ಸರ್ವಾಸ್ವಪ್ಸು ಪಂಚವಿಧೇ ಸಾಮೋಪಾಸ್ತೇ ॥ ಇತಿ ಚತುರ್ಥಃ ಖಂಡಃ ॥ ॥ ೬-೪ ॥ ॥ ೪ ॥

ಅ ॥ ಶ್ರೀಹರಿಯು ಮೊದಲೇ ಹೇಳಿದ ಪ್ರಕಾರ, ಗುಣಗಳುಳ್ಳವನೆಂದು ತಿಳಿದು ನೀರಿನಲ್ಲಿ ಏದು ರೂಪಗಳುಳ್ಳ ಶ್ರೀಹರಿಯನ್ನು ಉಪಾಸನೆ ಮಾಡಿದವನು ನೀರಿನಲ್ಲಿ ಮರಣ ಹೊಂದಲಾರನು. ನೀರಿನಲ್ಲಿದ್ದ ವಿಷ್ಣುವಿನ ಪೂರ್ಣಾನುಗ್ರಹವುಳ್ಳವನಾಗುತ್ತಾನೆ. ಅಂದರೆ ಮುಕ್ತನಾಗುತ್ತಾನೆ. ॥ ೪—೭ ॥ ॥ ೭ ॥

ಭಾ. ॥ (೧) ಅಪ್ಸು ಪಂಚವಿಧೋಪಾಸೀ ಯೋ ನಾರಾಯಣವಾನ್ ಭವೇತ್ । ನ ಚಾಸ್ಯ ಮೃತಿರಪ್ಸು ಸ್ಯಾದಪ್ಸುಪದ್ಯಗವಾನ್ಪರಿ ॥ ಇತಿ ಚ ॥ (೨) ಅಪ್ಸು ಸ್ಥಿತನಾರಾಯಣವಾನ್ಮುಕ್ತೋ ಭವತೀತ್ಯರ್ಥಃ । ಅಪಃ ಸೂತ ಇತ್ಯಪ್ಸ್ವರ್ಥಗಾನ್ । ದೀರ್ಘಲೋಪೇನಾಪ್ಸುಮಾನಿತಿ ವಾ ॥ ೧, ೨ ॥ ಇತಿ ಚತುರ್ಥಃ ಖಂಡಃ ॥ ೪-೪ ॥ ॥ ೧ ॥

ಅ ॥ (೧) ನೀರಿನಲ್ಲಿ ಏದು ರೂಪಗಳುಳ್ಳ ಶ್ರೀಹರಿಯನ್ನು ಉಪಾಸನೆ ಮಾಡಿದವನಿಗೆ ಶ್ರೀನಾರಾಯಣನ ಅನುಗ್ರಹವಾಗುತ್ತದೆ ಈತನಿಗೆ ನೀರಿನಲ್ಲಿ ಮರಣವಾಗಲಾರದು. ಶ್ರೀಹರಿಯು ನೀರಿನಲ್ಲಿದ್ದ ಪ್ರಯುಕ್ತ ಅಪ್ಸುಮಾನ್ ಎನ್ನಿಸುತ್ತಾನೆ. (೨) ನೀರಿನಲ್ಲಿದ್ದ ನಾರಾಯಣನ ಪೂರ್ಣಾನುಗ್ರಹ ಉಳ್ಳವನಾಗುತ್ತಾನೆ ಅಂದರೆ ಮುಕ್ತನಾಗುತ್ತಾನೆ ನೀರನ್ನು ಸೃಷ್ಟಿಸಿದಪ್ರಯುಕ್ತ ಅಪ್ಸುಃ=ಶ್ರೀನಾರಾಯಣನು. ಅಪ್ಸುಃ ಎಂಬುವಲ್ಲಿದ್ದ ದೀರ್ಘಕ್ಕೆ ಲೋಪ ಬಂದು ಅಪ್ಸುಮಾನ್ ಎಂದಾಗಿದೆ ॥ ೧, ೨ ॥ ೪-೪ ॥ ॥ ೧ ॥

ನಾಲ್ಕನೇ ಖಂಡವು ಮುಗಿಯಿತು.

ಐನೇ ಖಂಡವು

ಊ. ॥ ಋತುಷು ಕಪಂಚವಿಧೇ ಸಾಮೋಪಾಸೀತ ವಸಂತೋ ಹಿಂಕಾರೋ ಗ್ರೀಷ್ಮಃ ಪ್ರಸ್ತಾವೋ ವರ್ಷಾ ಉದ್ಗೀಥಃ ಶರತ್ಪ್ರತಿಹಾರೋ ಹೇಮಂತೋ ನಿಧನಂ ॥ ೧ ॥

ಅ ॥ ಏದು ಋತುಗಳಲ್ಲಿ ಇರತಕ್ಕ ಋತು ಎಂದು ಹೆಸರುಳ್ಳ, ಏದು ರೂಪಗಳುಳ್ಳ ಶ್ರೀಹರಿಯನ್ನು ಏದು ಸಾಮಗಳಿಂದ ವರ್ಣಿಸಲ್ಪಡತಕ್ಕವನೆಂದು ಉಪಾಸನೆಮಾಡಬೇಕು. ವಸಂತಋತುವಿನಲ್ಲಿರತಕ್ಕ ವಸಂತ ಎಂದು ಹೆಸರುಳ್ಳ ಪ್ರದ್ಯುಮ್ನನು ಹಿಂಕಾರನು. ಗ್ರೀಷ್ಮಋತುವಿನಲ್ಲಿದ್ದ ಗ್ರೀಷ್ಮ ಎನ್ನಿಸಿಕೊಂಡ ವಾಸುದೇವನು ಪ್ರಸ್ತಾವನು. ವರ್ಷ ಋತುವಿನಲ್ಲಿರತಕ್ಕ ವರ್ಷ ಎನ್ನಿಸಿಕೊಂಡ ನಾರಾಯಣನು

ಹೀಗೆಯೇ ಮುಂದಿನವುಗಳನ್ನು ವಿಶೇಷವಿಲ್ಲದೆಯೂ ಏದು ಋತುಗಳೆಂದು ಹೇಳಿದ್ದು.

ಉಪ್ಪೀಧನು. ಶರವ್ಯತುವಿನಲ್ಲಿರತಕ್ಕ ರಥ್ ಎಂದು ಹೆಸರುಳ್ಳ ಅಸಿರುದ್ಧನು ಪ್ರತಿಪಾತನು. ಹೇಮಂತ ಋತುವಿನಲ್ಲಿರತಕ್ಕ ಹೇಮಂತ ಎನ್ನಿಸಿಕೊಂಡ ಸಂಕರ್ಷಣನು ನಿಧನನು ॥ ೧೦ ॥

ಉ. ॥ ಕಲ್ಪಂತೇ ಹಾಸ್ಮಾ ಋತವ ಋತುನೂನ್ಯೃತಿ ಯ ನಿಕದೇ-
ವಂವಿದ್ವಾನೃತುಷು ಪಂಚವಿಧೇ ಸಾನೋಪಾಸ್ತೇ ॥ ಇತಿ ಪಂಚಮಃ ಖಂಡಃ॥
॥ ೪ ೫ ॥ ॥ ೨ ॥

ಅ ॥ ಬೀನೆ ತಿಳಿದುಕೊಂಡ. ಋತುಗಳಲ್ಲಿ ನಮ್ಮ ರೂಪಗಳುಳ್ಳ ಶ್ರೀಹರಿಯನ್ನು ಪಾಸನೆ ಮಾಡಿದ ವನಿಗೆ ಋತುಗಳಲ್ಲಿರತಕ್ಕ ನಮ್ಮ ರೂಪಗಳುಳ್ಳ ಶ್ರೀಹರಿಯು ಮೋಕ್ಷಾದಿ ಪುರುಷಾರ್ಥಗಳನ್ನು ಕೊಡುತ್ತಾನೆ. ಋತುಗಳಲ್ಲಿರತಕ್ಕ ನಿಮ್ಮವ ರಕ್ಷಸುತ್ತಿರುತ್ತಾನೆ ॥ ೪—೫ ॥ ॥ ೨ ॥

ಭಾ. ॥ (೧) ಹೇಮಂತತಿರಯೋರ್ಮೈಕ್ಯೇನ ಸಂಚತ್ಯಂ ॥ (೨) ಋತುನಾನೂನಮೃ-
ತುಗನ್ಯೃತುತ್ವಾದೃತುನಾಮಕಂ । ಇತ್ಯುಪಾಸೀತ ಯೋ ವಿಷ್ಣುಂ ಸಂಚಾಕ್ಷಾನಮುಮುಷ್ಯ
ಹಿಂ ॥ ಮೋಕ್ಷಾದೀನ್ ಕಲ್ಪತೇ ಚಾಸ್ಮ ಋತುಸಂಸ್ಥೋ ಜನಾರ್ದನಃ । ರಕ್ಷತ್ಯಾಪ್ತೇನ
ತದ್ವಾಂಶ್ಚ ಸದೈವ ಸ್ಯಾದುಪಾಸಕಃ ॥ ಇತಿ ಚ ॥ (೩) ವಾಸನಸ್ಯ ಸುಖಕಾರಿತ್ವಾದ್ವಸಂತಃ
ಪುರುಷೋತ್ತಮಃ । ನೀರಾದೇರ್ಗರಣಾದ್ಗ್ರೀಷ್ಮೋ ವರ್ಷಣಾದ್ವರ್ಷ ಉಚ್ಯತೇ ॥ ಶಂ
ರಾತೀತಿ ವರತ್ವೇಕ್ತೋ ಹೇಮಂತೋ ಓಮಕಾರಣಾತ್ ॥ ಇತಿ ಚ ॥ ೧, ೨ ॥ ಇತಿ
ಪಂಚಮಃ ಖಂಡಃ ॥ ೪—೫ ॥ ॥ ೧ ॥

ಅ ॥ (೧) ಹೇಮಂತಋತು ಶಿಶಿರಋತುಗಳಿಗೆ ಬೇಸನ್ನು ಇಲ್ಲಿಕೊಂಡು ಇದು ಋತುಗಳೆಂದು ಹೇಳಿದ್ದು. (೨) ವಸಂತಾದಿ ಋತುಗಳಿಗೆ ಋತುತ್ವವನ್ನು ಕೊಡುವುದರಿಂದ ಅಥವಾ ಎಲ್ಲಾ ಶಾಸ್ತ್ರಗಳ ಪ್ರಿಯೂ ಸ್ತುತಿಸಲ್ಪಡುವವನಾದುದರಿಂದ ಋತು ಎಂದು ಹೆಸರುಳ್ಳ, ಋತುಗಳಲ್ಲಿರುವ ನಮ್ಮ ರೂಪಗಳುಳ್ಳ ಶ್ರೀಹರಿಯನ್ನು ಉಪಾಸನೆ ಮಾಡಿದವನಿಗೆ ಋತುಗಳ ಅಭಿಮಾನಿಯಾದ ಶ್ರೀಹರಿಯು ಮೋಕ್ಷ ಮೊದಲಾದ ಪುರುಷಾರ್ಥಗಳನ್ನು ಕೊಡುತ್ತಾನೆ ಋತುಗಳಲ್ಲಿದ್ದ ಶ್ರೀಹರಿಯನ್ನು ಪಾಸನೆ ಮಾಡುವವನು ಆ ಶ್ರೀಹರಿಯಿಂದ ರಕ್ಷಸಲ್ಪಡುವುದರಿಂದ ಋತುವಾನ್ ಎನ್ನಿಸುತ್ತಾನೆ. (೩) ಶ್ರೀಹರಿಯು ವಾಸನಾತಿಶಕ್ತಿಯಿಂದ ಸುಖವನ್ನುಂಟುಮಾಡುವುದರಿಂದ ವಸಂತನೆಂದೂ, ನೀರು ಮೊದಲಾದುದನ್ನು ಒಣಗಿಸುವುದರಿಂದ ಗ್ರೀಷ್ಮನೆಂದೂ ಮಳೆಸುರಿಸುವುದರಿಂದ ವರ್ಷನೆಂದೂ, ಸುಖಕೊಡುವವನಾದುದರಿಂದ ವರತ್ ಎಂದೂ, ಶೈತ್ಯವನ್ನು ಕೊಡುವನಾದುದರಿಂದ ಹೇಮಂತನೆಂದೂ ಅನ್ನಿಸುತ್ತಾನೆ. ॥ ೧, ೨ ॥ ೪—೫ ॥ ॥ ೧ ॥

ಐದನೇ ಖಂಡವು ಮುಗಿಯಿತು.

ಏನೇ ಖಂಡವ್ಯ

ಟೀ—ಆದು ಋತುಗಳು ಸವ್ಯವ್ಯಗಳಾದರೆ ಪಶುಗಳೂ ಸುಖಗಳುಂಟಾಗಿರುವುದರಿಂದ ಪಶುಗಳಲ್ಲಿ ಶ್ರೀಹರಿಯನ್ನು ಉಪಾಸನೆ ಮಾಡಬೇಕೆನ್ನುತ್ತಾರೆ—

ಉ. ॥ ಪಶುಷು ಪಂಚವಿಧಂ ಸಾಮೋಪಾಸೀತಾಜಾ ಓಂಕಾರೋಽವಯಃ ಪ್ರಸ್ತಾವೋ ಗಾವ ಉದ್ಗೀಥೋಽಶ್ವಾಃ ಪ್ರತಿಹಾರಃ ಪುರುಷೋ ನಿಧನಂ ಭವಂತಿ ಹಾಸ್ಯ ಪಶವಃ ಪಶುಮಾನ್ಭವತಿ ॥ ೧ ॥

ಅ ॥ ಇವ ವಿಧ ಪಶುಗಳಲ್ಲಿರುತ್ತ ಏದು ಸಾಮಗಳಂದ ವರ್ತಿಸಲ್ಪಡತಕ್ಕ ಏದು ರೂಪಗಳನ್ನ ಶ್ರೀಹರಿಯನ್ನು ಭಾವನೆ ಮಾಡಬೇಕು ಅಡುಗಳು ಓಂಕಾರವ. ಕುರಿಗಳು ಪ್ರಸ್ತಾವವ. ಗೋವುಗಳು ಉದ್ಗೀಥವ ಕುದುರೆಗಳು ಪ್ರತಿಹಾರವ. *ಪುರುಷನ ನಿಧನನು ॥ ೧ ॥

ಭಾ. ॥ ಯ ಏತದೇವಂವಿದ್ವಾನ್ ಪಶುಷು ಪಂಚವಿಧಂ ಸಾಮೋಪಾಸ್ತೇ ॥ ಇತಿ ಷಷ್ಠಃ ಖಂಡಃ ॥ ೪-೬ ॥ ॥ ೬ ॥

ಅ ॥ ಹೀಗೆ ತಿಳಿದವನಿಗೆ ಪಶುಗಳಲ್ಲಿ ಅಂತರ್ಗತನಾದ ಶ್ರೀಹರಿಯು ಪಶುಗಳ ಸಮೃದ್ಧಿಯನ್ನು ಮಾಡುತ್ತಾನೆ ಪಶುಗಳಲ್ಲಿ ಇರುವ ಶ್ರೀಹರಿಯು ಪೂರ್ಣ ಏನುಗ್ರಹವನ್ನು ಮಾಡುತ್ತಾನೆ ॥ ೪-೬ ॥ ೬ ॥

ಭಾ. ॥ (೧) ಪಾಲಯಾತ್ಸುಖಕಾರಿ(ರೂಪ)ತ್ವಾತ್ಪ್ರಭುನಾಮಾ ಜನಾರ್ದನಃ । ಮುಕ್ತ-ಸ್ತದ್ವಾನ್ಸ್ಯವತ್ಯೇವ ಪಶುಷೂಪಾಸಕೋ ಹರೇಃ ॥ ಇತಿ ಚ ॥ (೨) ಯಜ್ಞೇನಾಂಚನ ಹೇತುತ್ವಾದಜಸ್ಯೋ ಭಗವಾನಜಃ । ಅವಿಸ್ಪಷ್ಟವಿರೇವೋಕ್ತ ಊರ್ಣಯಾಪೀತತೋ-ವನಾತ್ ॥ ಗೌಶ್ಚ ಸದ್ಗತಿಹೇತುತ್ವಾದ್ಗೋಸ್ಯಃ ಸ ಪುರುಷೋತ್ತಮಃ । ಅಶ್ನುತ್ವಾ-ಮಗಂತೃತ್ವಾತ್ಪುರುಷಃ ಪೂರ್ತಿಹೇತುತಃ ॥ ಇತಿ ಚ ॥ (೩) ಭವಂತಿ ಹಾಸ್ಯ ಪಶವ ಇತಿ ಪ್ರಸಿದ್ಧಪಶವ ಏವ । ಅಜಾ ಇತ್ಯಾದಿಬಹುವಚನಂ ಬಹುರೂಪತ್ವಾದ್ಭಗವತಃ ॥ ೧, ೨ ॥ ಇತಿ ಷಷ್ಠಃ ಖಂಡಃ ॥ ೪-೬ ॥ ॥ ೬ ॥

ಅ ॥ (೧) ಶ್ರೀಹರಿಯು ಜಗತ್ತನ್ನು ರಕ್ಷಿಸುವವನೂ ಸುಖಕರರೂಪನೂ ಆದುದರಿಂದ ಪಶು ಎನ್ನಿಸುತ್ತಾನೆ ಪಶುಗಳಲ್ಲಿ ಶ್ರೀಹರಿಯನ್ನು ಪಾಸನೆಮಾಡಿದವನು ಪಶುಗಳಲ್ಲಿ ಅಂತರ್ಗತನಾದ ಶ್ರೀಹರಿಯ ಪೂರ್ಣಾನುಗ್ರಹಕ್ಕೆ ಪಾತ್ರನಾಗಿ ಮುಕ್ತನಾಗುತ್ತಾನೆ. (೨) ಯಾಗದಿಂದ ಶ್ರೀಹರಿಯನ್ನು ಪೂಜಿಸಿದರೆ ಸದ್ಗತಿಯನ್ನು ಕೊಡುವುದರಿಂದ ಅಡಿನಲ್ಲಿದ್ದ ಶ್ರೀಹರಿಯು ಅಜಃ ಎಂದೂ. ಕಂಬಳ ಮೊದಲಾದವುಗಳಿಂದ ತೃಪ್ತಿಯಿಂದ ಸರ್ವರನ್ನು ಕಾಪಾಡುವ ಕಾರಣ ಕುರಿಯಲ್ಲಿದ್ದ ಶ್ರೀಹರಿಯು ಅವಿಃ ಎಂದೂ, ಸದ್ಗತಿಗೆ ಕಾರಣನಾಗುವುದರಿಂದ ಗೋವುಗಳಲ್ಲಿದ್ದ ಶ್ರೀಹರಿಯು ಗೌಃ ಎಂದೂ. ಶೀಘ್ರ ಗಮನರೂಪಕ್ರಿಯೆಯುಳ್ಳವನಾಗುವುದರಿಂದ ಕುದುರೆಗಳಲ್ಲಿದ್ದ ಶ್ರೀಹರಿಯು ಅಶ್ವಃ ಎಂದೂ ಇಷ್ಟಸಮೃದ್ಧಿಗೆ ಕಾರಣನಾಗುವುದರಿಂದ ಪುರುಷರಲ್ಲಿ ರುವ ಶ್ರೀಹರಿಯು ಪುರುಷನೆಂದೂ ಎನ್ನಿಸುತ್ತಾನೆ (೩) ಭವಂತಿ ಹಾಸ್ಯ ಪಶವ ಎಂಬುವಲ್ಲಿ ಪ್ರಸಿದ್ಧ ಪಶುಗಳನ್ನೇ ತಿಳಿದುಕೊಳ್ಳಬೇಕು. (೪) (ಶ್ರೀಹರಿಯೊಬ್ಬನೇ ಆದುದರಿಂದ ಅಜಾಃ ಮೊದಲಾದ ಬಹು ವಚನವು ಹೇಗೆ ಕೂಡುತ್ತದೆ ಎಂದರೆ--) ಶ್ರೀಹರಿಗೆ ಅನಂತಾನಂತರೂಪಗಳು ಇದ್ದಕಾರಣ ಅಜಾಃ ಅವಯಃ ಮೊದಲಾದ ಬಹುವಚನವು ಕೂಡುತ್ತದೆ. ॥ ೧, ೨ ॥ ೪-೬ ॥ ॥ ೬ ॥

ಆರನೇ ಖಂಡವು ಮುಗಿಯಿತು.

*ಪಶುಗಳಲ್ಲಿ ಪುರುಷನು ಸೇರಿದೆ ಇದ್ದಕಾರಣ ಪಶುಪ್ರಕರಣವಾದ್ದರಿಂದ ಪುರುಷಃ ನಿಧನಂ ಎಂದುಹೇಳಿದ್ದು;ಹೇಗೆ ಕೂಡುತ್ತ ದೆಂದರೆ--ಯಾಗ ವಿಶೇಷದಲ್ಲಿ ಪುರುಷನನ್ನೂ ಪಶುವಾಗಿ ಮಾಡುವುದರಿಂದ ಪುರುಷಃ ನಿಧನಂ ಎಂದು ಹೇಳಿದ್ದು

ಏನೇ ಖಂಡಸ್ಯ

ಈ ಪಶುಗಳಲ್ಲಿ ಶ್ರೇಷ್ಠರಿಯನ್ನು ವಾಸನೆ ಮಾಡತಬೇಕೆಂದು ಹೇಳಿ ಪಶುಪುರುಷರಲ್ಲಿ ಇಂದ್ರಿಯಗಳು ಇದ್ದಕಾರಣ ಆ ಇಂದ್ರಿಯಗಳಲ್ಲಿ ಏನು ರೂಪಗಳುಳ್ಳ ಶ್ರೇಷ್ಠರಿಯನ್ನು ಉಪಾಸನೆ ಮಾಡತಬೇಕೆಂದು ಈಗ ಹೇಳುತ್ತಾರೆ

ಉ. ॥ ಪ್ರಾಣೇಷು ಪಂಚವಿಧಂ ಪರೋವರೀಯಃ ಸಾಮೋಪಾಸೀತ ಪ್ರಾಣೋ ಹಿಂಕಾರೋ ವಾಕ್ಪ್ರಸ್ತಾವಶ್ಚಕ್ಷುರುದ್ಗೀಥಃ ಶ್ರೋತ್ರಂ ಪ್ರತಿಹಾರೋ ಮನೋ ನಿಧನಂ ಪರೋವರೀಯಾಂಸಿ ನೈತಾನಿ ॥ ೧ ॥

ಆ ॥ ಇಂದ್ರಿಯಗಳಲ್ಲಿ ಉತ್ತಮೋತ್ತಮವಾದ ಏನು ರೂಪಗಳುಳ್ಳ ಶ್ರೇಷ್ಠರಿಯನ್ನು ಉಪಾಸನೆ ಮಾಡತಬೇಕು. ಪ್ರಾಣವಾಯುವಿನಲ್ಲಿರುವ ಪ್ರಥಮವಾನು ಹಿಂಕಾರನು, ವಾಗಿಂದ್ರಿಯದಲ್ಲಿರುವ ವಾಸುದೇವನು ಪ್ರಸ್ತಾವನು, ಕಣ್ಣಿನಲ್ಲಿರುವ ನಾರಾಯಣನ ಉದ್ಗೀಥನು, ಶ್ರವಿಯಲ್ಲಿರುವ ಅನಿರುದ್ಧನು ಪ್ರತಿಹಾರನು, ಮನಸ್ಸಿನಲ್ಲಿರುವ ಸಂಕರ್ಷಣನು ನಿಧನನು

ಉ. ॥ ಪರೋವರೀಯೋ ಹಾಸ್ಯ ಭವತಿ ಪರೋವರೀಯಸೋ ಹ ಲೋಕಾನ್ ಜಯತಿ ಯ ಏತದೇವಂವಿದ್ವಾನ್ಪ್ರಾಣೇಷು ಪಂಚವಿಧಂ ಪರೋವರೀಯಃ ಸಾಮೋಪಾಸ್ತ ಇತಿ ತು ಪಂಚವಿಧಸ್ಯ ॥ ಇತಿ ಸಪ್ತಮಃ ಖಂಡಃ ॥ ॥ ೪–೭ ॥

॥ ೭ ॥

ಆ ॥ ಈ ಏಳನೆಯ ರೂಪಗಳು ಅತ್ಯುತ್ತಮೋತ್ತಮವಾಗಿವೆ. ಏಳೂ ತಿಳಿದುಕೊಂಡು ಇಂದ್ರಿಯಗಳಲ್ಲಿ ಏನು ರೂಪಗಳುಳ್ಳ ಶ್ರೇಷ್ಠರಿಯನ್ನು ಉಪಾಸನೆ ಮಾಡಿದವನನ್ನು ಶ್ರೇಷ್ಠರಿಯು ರಕ್ಷಿಸುತ್ತಾನೆ. ಆ ಉಪಾಸಕನು ಶ್ರೇಷ್ಠಗಳಾದ ವೈಕುಂಠ ಅನಂತಾಸನ ಶ್ವೇತದ್ವೀಪಾಖ್ಯ ಲೋಕಗಳನ್ನು ಹೊಂದುತ್ತಾನೆ ಹೀಗೆ ಏನು ರೂಪಗಳುಳ್ಳ ಶ್ರೇಷ್ಠರಿಯ ಉಪಾಸನೆಯನ್ನು ಹೇಳಲಾಯಿತು ೪–೭ ॥

ಭಾ. ॥ (೧) ಸರಸ್ಮಾದುತ್ತಮಂ ಶ್ರೋಕ್ತಂ ಸರೋ ಇತಿ ತತಃ ಪರಂ । ಸರೋವರಂ ಸರಂ ತಸ್ಮಾತ್ಪ್ರೋಕ್ತಂ ಪಾ(ಪ)ರೋವರೀಯಕಂ ॥ ಪರೋವರೀಯಾಂಸ್ಯೇತಾನಿ ವಿಷ್ಣೋ ರೂಪಾಣಿ ಸರ್ವಶಃ । ತೇಷಾಂ ವಿಶೇಷೋ ನೈವಾಸ್ತಿ ಸದಾ ತಾನಿ ಸಮಾನಿ ಹಿ ॥ ಉತ್ಕೃತ್ಯತೋತ್ತಮಾನ್ಯೇತಾನ್ಯಸ್ಮಾತ್ಸರ್ವತೋಽಪಿ ಕು । ಇತಿ ಚ ॥ (೨) ಪ್ರಾಣೋ ನೇತೃತ್ವತೋ ವಿಷ್ಣುರ್ವಾಕ್ಸರ್ವವಚಸಾತ್ಸದಾ । ಚಕ್ಷುಶ್ಚ ದರ್ಶನಾನ್ನಿತ್ಯಂ ಶ್ರೋತ್ರಂ ಶ್ರವಣಹೇತುಕಃ ॥ ಮನೋ ಮಂತೃತ್ವಕಶ್ಚಾಸ್ಯ ಹ್ಯೇಕ ಏವ ತು ಪಂಚಧಾ । ಇತಿ ಚ ॥ (೩) ಪರೋವರೀಯೋ ಬ್ರಹ್ಮಾಸ್ಯ ಭವತಿ ಸರ್ವಾಪೇಕ್ಷಿತದಾತೃತ್ವಾತ್ ॥ ೧, ೨ ॥ ಇತಿ ಸಪ್ತಮಃ ಖಂಡಃ ॥ ೪–೭ ॥

॥ ೧ ॥

ಆ ॥ (೧) ಗರುಡ ಶೇಷಾದಿಗಳಿಂದುತ್ತಮಳಿಂದ ಸರಸ್ವತೀ ಭೂರತಿಯರಿಂದ ಉತ್ತಮರಾದ ವಾಯು ಮೇಲಾರು ಪರೋ ಎಂದೂ ಅವರಿಂದುತ್ತಮಳಾದ ಲಕ್ಷ್ಮೀದೇವಿಯು ಪರೋವರ ಎಂದೂ,

ತ್ಯಮನಾದ ಶ್ರೀಹರಿಯು ಪಾಪೋವರೀಯಕನೆನ್ನಿಸುತ್ತಾನೆ. ಶ್ರೀಹರಿಯು ಎಲ್ಲಾರೂಪಗಳೂ ಉತ್ತಮೋತ್ತಮೋತ್ತಮಗಳು. ಅವುಗಳಿಗೆ ವ್ಯತ್ಯಾಸವಿಲ್ಲ. ಎಲ್ಲಾ ರೂಪಗಳೂ ಯಾವಾಗಲೂ ಸಮಾನಗಳೇ ಆಗಿವೆ. ಇವುಗಳು ಬೇರೆ ಎಲ್ಲಾ ವಸ್ತುಗಳಿಗಿಂತಲೂ ಎಲ್ಲರಿಗಿಂತಲೂ ಅತ್ಯುತ್ತಮೋತ್ತಮಗಳು (೨) ವಿಷ್ಣುವ ಪ್ರಮಾಣವಿದ್ದವಾದ ಎಲ್ಲಾ ಜಗತ್ತನ್ನು ಪ್ರೇರೇಪಿಸುವುದರಿಂದ ಪ್ರಾಣನೆಂದೂ, ಸರ್ವರಿಗೆ ಮಾತನಾಡುವ ಶಕ್ತಿಯನ್ನು ಕೊಡುವುದರಿಂದ ವಾಕ್ ಎಂದೂ, ನೋಡುವ ಶಕ್ತಿಯನ್ನು ಕೊಡುವುದರಿಂದ ಚಕ್ಷುಃ ಎಂದೂ, ಕೇಳುವ ಶಕ್ತಿಯನ್ನು ಕೊಡುವುದರಿಂದ ಶ್ರೋತ್ರನೆಂದೂ, ತಿಳಿಯಕೊಳ್ಳುವ ಶಕ್ತಿಯನ್ನು ಕೊಡುವುದರಿಂದ ಮನಃ ಎಂದೂ ಒಬ್ಬನೇ ಐದು ಶಬ್ದಗಳಿಂದ ಹೇಳಲ್ಪಡುತ್ತಾನೆ. (೩) ಸರ್ವೋತ್ತಮನಾದ ಶ್ರೀಹರಿಯು ಉಪಾಸಕನಿಗೆ ಅಪೇಕ್ಷಿಸಿದ್ದೆಲ್ಲವನ್ನೂ ಕೊಟ್ಟು ಉಪಾಸಕನನ್ನು ರಕ್ಷಿಸುತ್ತಾನೆ ॥ ೪-೭ ॥ ೮ ॥

ಏಳನೇ ಖಂಡವು ಮುಗಿಯಿತು

ಎಂಟನೇ ಖಂಡವು

ಓಂ ॥ ಅಥ ಸಪ್ತವಿಧಸ್ಯ ವಾಚಿ ಸಪ್ತವಿಧೇ ಸಾಮೋಪಾಸೀತ ಯತ್ಕಿಂ ಚ ವಾಚೋ ಹುಮಿತಿ ಸೆ ಹಿಂಕಾರೋ ಯತ್ಪ್ರೇತಿ ಸ ಪ್ರಸ್ತಾವೋ ಯದೇತಿ ಸ ಆದಿಃ ॥ ೧ ॥

ಅ ॥ ಏಳು ರೂಪಗಳುಳ್ಳ ಶ್ರೀಹರಿಯನ್ನು ಪಾಸನೆ ಮಾಡಬೇಕೆಂದು ಹೇಳಿ ಈಗ ಏಳು ವಿಧ ಸಾಮಗಳಿಂದ ಸ್ತುತಿಸಲ್ಪಡತಕ್ಕ ಏಳು ರೂಪಗಳುಳ್ಳ ಶ್ರೀಹರಿಯ ಉಪಾಸನೆಯು ಹೇಳಲ್ಪಡುತ್ತದೆ. ಏಳು ವಿಧ ಶಬ್ದಸಮೂಹದಲ್ಲಿ ಇರತಕ್ಕ ಏಳು ರೂಪಗಳುಳ್ಳ ಏಳು ವಚನಗಳಿಂದ ಸ್ತುತಿಸಲ್ಪಡತಕ್ಕ ಶ್ರೀಹರಿಯನ್ನು ಪಾಸನೆಮಾಡಬೇಕು. ಪ್ರದ್ಯುಮ್ನನು ಬುಡದಲ್ಲಿ ಹುಂಕಾರವುಳ್ಳ ವಾಕ್ಯದಿಂದ ತಿಳಿಯಲ್ಪಡುತ್ತಾನೆ. ವಾಸುದೇವನು ಆದಿಯಲ್ಲಿ ಪ್ರ ಶಬ್ದವಿರುವ ವಾಕ್ಯದಿಂದ ವರ್ಣಿಸಲ್ಪಡತಕ್ಕವನು. ಕಲ್ಪವ ಆದಿಗೆ ಕಾರಣನಾಮದಿಂದ ಆದಿ ಎನ್ನಿಸಿಕೊಂಡ ದಿ ಎಂಬ ನಾಮದಿಂದ ಸ್ತುತಿಸಲ್ಪಡತಕ್ಕ ವರಾಹರೂಪಿ ಶ್ರೀಹರಿಯು ಬುಡದಲ್ಲಿ ಆಕಾರ ಇದ್ದ ವಾಕ್ಯದಿಂದ ಸ್ತುತಿಸಲ್ಪಡತಕ್ಕವನು.

ವಿ ॥ (೧) ಹುಂ ಎಂಬುದನ್ನು ಆರಂಭಿಸಿ ಪ್ರ ಶಬ್ದವು ಇರುವ ವಾಕ್ಯದ ತನಕ ಹಿಂಕಾರಾರ್ಥನಾದ ಪ್ರದ್ಯುಮ್ನನನ್ನು ಹೇಳುತ್ತದೆಂದು ಉಪಾಸನೆ ಮಾಡಬೇಕು. (೨) ತಾಗೆಯೇ ಪ್ರ ಎಂಬುದನ್ನು ಆರಂಭಿಸಿ ಆ ಎಂಬ ಅಕ್ಷರಪರ್ಯಂತ ವಾಕ್ಯವು ಪ್ರಸ್ತಾವಾರ್ಥನಾದ ವಾಸುದೇವನನ್ನು ತಿಳಿಸುತ್ತದೆಂದು ಉಪಾಸನೆ ಮಾಡಬೇಕು. ಹೀಗೆಯೇ ಮುಂದೆಯೂ ಅಭಿಪ್ರಾಯ ಇಟ್ಟುಕೊಳ್ಳಬೇಕು. ॥ ೧ ॥

ಓಂ ॥ ಯದುದಿತಿ ಸ ಉದ್ಗೀಥೋ ಯತ್ಪ್ರತೀತಿ ಸ ಪ್ರತಿಹಾರೋ ಯದುಪೇತಿ ಸ ಉಪದ್ರವೋ ಯನ್ನಿತಿ ತನ್ನಿಧನಂ ॥ ೨ ॥

ಅ ॥ ನಾರಾಯಣನು ಬುಡದಲ್ಲಿ ಉತ್ ಶಬ್ದವಿರುವ ವಾಕ್ಯದಿಂದಲೂ, ಅನಿರುದ್ಧನು ಬುಡದಲ್ಲಿ ಪ್ರತಿ ಶಬ್ದವಿರುವ ವಾಕ್ಯದಿಂದಲೂ, ಮಿಕ್ಕವರಿಗೆ ಕೆಡಕುಮಾಡುವುದರಿಂದ ಉಪದ್ರವನೆನಿಸಿಕೊಂಡ ಉಪದ್ರವ ಎಂಬ ಸಾಮದಲ್ಲಿ ಸ್ತುತಿಸಲ್ಪಡತಕ್ಕ ನರಸಿಂಹನು ಬುಡದಲ್ಲಿ ಉಪ ಶಬ್ದವಿರುವ ವಾಕ್ಯದಿಂದಲೂ, ನಿಧನ ಎಂಬ ಸಾಮದಿಂದ ಸ್ತುತಿಸಲ್ಪಡತಕ್ಕ ಸಂಕರ್ಷಣನು ಬುಡದಲ್ಲಿ ನಿ ಶಬ್ದವಿರುವ ವಾಕ್ಯದಿಂದಲೂ ಸ್ತುತಿಸಲ್ಪಡುತ್ತಾನೆ. ॥ ೨ ॥

ಉ. ॥ ಪ ಗ್ಗೇಽಸ್ಯೈ ವಾಗ್ಯೋಽಹಂ ಯೋ ವಾಚೋ ದೋಽಹೋಽ-
ಸ್ಯವಾನನ್ವಾದೋ ಭವತಿ ಯ ಏತದೇವಂವಿದ್ವಾನ್ ವಾಚಿ ಸಪ್ತವಿಧಂ
ಸಾನೋಪಾಸ್ತೇ ॥ ಇತ್ಯಷ್ಟಮಃ ಖಂಡಃ ॥ ೪—೮ ॥ ॥ ೩ ॥

ಅ ॥ ಹೀಗೆ ಏಳು ರೂಪಗಳುಳ್ಳ ಬ್ರಹ್ಮನು ಸಪ್ತಸಮೂಹದಲ್ಲಿ ಇದ್ದಾನೆಂದು ತಿಳಿದು ಏಳು ವಿಧ ಸಾಮವನ್ನು ಉಪಾಸನೆಮಾಡುವವನಿಗೆ ವಾಕ್ ಎಂಬ ಹೆಸರುಳ್ಳ ಶ್ರೀಹರಿಯು ಪೋಷ್ಯಾದಿ ಪುರುಷಾರ್ಥಗಳನ್ನು ಕೊಡುತ್ತಾನೆ ಮತ್ತು ಉಪಾಸಕನು ಮಹೋತ್ಕೃಷ್ಟ ಅನ್ನಪಾನವನ್ನೂ ಅನ್ನವನ್ನು ಪಭೋಗಿಸುವ ಸಾಮರ್ಥ್ಯವನ್ನು ಪಡೆಯುತ್ತಾನೆ ೪—೮ ॥ ೪ ॥

ಪೀ – ಹಿಂಕಾರ, ಪ್ರಸ್ತಾವ, ಉದ್ಗೀಥ, ಪ್ರತಿಹಾರ, ನಿಧನ ಎಂಬ ಹೆಸರುಳ್ಳ ಐದು ಭೂಮಿಗಳನ್ನೂ ಹೇಳಿ, ಈ ಖಂಡದಲ್ಲಿ ವಿಶೇಷವಾಗಿ ಆದಿ, ಉಪದ್ರವ, ಎಂಬ ಹೆಸರುಳ್ಳ ಎರಡು ಭೂಮಿಗಳನ್ನು ಹೇಳುತ್ತಾರೆ

ಭಾ. ॥ (೧) ಆದಿಃ ಕಲ್ಪಾದಿಹೇತುತ್ವಾತ್ ಕ್ರೋಡಾತ್ಮಾ ಕೇಶವಃ ಸ್ವಯಂ ।
ದುಷ್ಟೋಪದ್ರವಕರ್ತೃತ್ವಾತ್ ನಾರಸಿಂಹ ಉಪದ್ರವಃ ॥ ಇತಿ ಚ । (೨) ಹುಂಕಾರಸಹಿತೇ
ವಾಕ್ಯೇ ಪ್ರದ್ಯುಮ್ನಸ್ತು ಸದಾ ಸ್ಮೃತಃ । ಆಕಾರಯುಕ್ತೇ ವಾಕ್ಯೇಽಹೋ ವಾಸುದೇವಃ ಪ್ರಸಂ-
ಸ್ಯತೇ ॥ ನಾರಾಯಣಸ್ತಥೋದ್ಗೀಥೇ ಪ್ರತಿಯುಕ್ತೇಽನಿರುದ್ಧಕಃ । ಉಪಯುಕ್ತೇ ನೃಸಿಂ-
ಹಸ್ತು ನಿಧೌ ಸಂಕರ್ಷಣಸ್ತಥಾ ॥ (೩) ಅಭಾವೇ ಯಾವದೇತೇಷಾಂ ಸ್ಯುಸ್ತಾವತ್ತತ್ತ್ವೈವತಂ
ಸ್ಮೃತಂ ॥ (೪) ಏವಂ ಸಪ್ತವಿಧಂ ವಿಷ್ಣುಂ ಯ ಉಪಾಸ್ತೇ ಸದಾ ವಿಭುಂ (ಪರಂ) ।
ವಾಜ್ಞಾಮೂಭಗವಾಂಸ್ತಸ್ಯ ಭವೇತ್ಸ ಸರ್ವಾರ್ಥದೋಽಚ್ಯುತಃ ॥ ಇತಿ ಚ ॥ ೧,೨,೩ ॥
ಇತ್ಯಷ್ಟಮಃ ಖಂಡಃ ॥ ೪—೮ ॥ ॥ ೧ ॥

ಆ ॥ (೧) ಪರಾಪರರೂಪವಾದ ಶ್ರೀಲಕ್ಷ್ಮೀಯ ಕಲ್ಪಾದಿಗೆ ಕಾರಣವಾಗಿರುವುದರಿಂದ ಆದಿಃ ಎಂದೂ, ನರಸಿಂಹನು ಮಜ್ಜನರಿಗೆ ಉಪದ್ರವವನ್ನು ಪರಿಹರಿಸುವುದರಿಂದ ಉಪದ್ರವನೆಂದೂ ಎನಿಸಿಕ್ಕಾನೆ. (೨ ಪ್ರದ್ಯುಮ್ನನು ಹುಂಕಾರದಿಂದ ಕೂಡಿದ ವಾಕ್ಯದಲ್ಲಿಯೂ, ವಾಸುದೇವನು ಪ್ರಶಬ್ದವಿರುವ ಆಕಾರದಿಂದ ಕೂಡಿದ ವಾಕ್ಯದಲ್ಲಿಯೂ, ವಾಸುದೇವನು ಪ್ರಶಬ್ದವಿರುವ ವಾಕ್ಯದಲ್ಲಿಯೂ ನಾರಾಯಣನು ಉತ್ ಶಬ್ದವಿರುವ ವಾಕ್ಯದಲ್ಲಿಯೂ ಅನಿರುದ್ಧನು ಪ್ರತಿ ಶಬ್ದವಿರುವ ವಾಕ್ಯದಲ್ಲಿಯೂ ನರಸಿಂಹನು ಉಪ ಶಬ್ದವಿರುವ ವಾಕ್ಯದಲ್ಲಿಯೂ, ಸಂಕರ್ಷಣನು ನಿ ಶಬ್ದವಿರುವ ವಾಕ್ಯದಲ್ಲಿಯೂ ವರ್ಣಿಸಲ್ಪಡುತ್ತಾನೆ (೩) (ಹುಂಕಾರಾದಿಗಳ್ಳವಾದಲೆ ಆ ವಾಕ್ಯಕ್ಕೆ ಯಾವ ದೇವತೆಯೆಂದರೆ -) ವಾಕ್ಯದ ಬುಡದಲ್ಲಿ ಹುಂಕಾರಾದಿಗಳಲ್ಲಿ ಯಾವುದಾದರೊಂದನ್ನು ಅರುಹಿಸಿ ಮಧ್ಯದಲ್ಲಿ ಹುಂಕಾರಾದಿಗಳ್ಳವಾದಲೆ ಅವು ಸಿಗುವವರ್ಯಂತವಿರುವ ವಾಕ್ಯಕ್ಕೆ ಅದೇ ದೇವತೆಯೆಂದು ತಿಳ್ಳಿಕೊಳ್ಳಬೇಕು. (೪) ಹೀಗೆ ಏಳು ರೂಪಗಳುಳ್ಳ ವಿಷ್ಣುವನ್ನು ಪಾಸನೆ ಮಾಡಿದವನಿಗೆ ವಾಕ್ ಎನಿಸಿಕೊಂಡ ಭಗವಂತನು ಮೋಕ್ಷ ಮೊದಲಾದ ಎಲ್ಲಾ ಅಭೀಷ್ಟಗಳನ್ನು ಕೊಡುತ್ತಾನೆ. ೧,೨,೩ ॥ ೪—೮ ॥ ॥ ೧ ॥

ಎಂಟನೇ ಖಂಡವು ಮುಗಿಯಿತು.

೯ನೇ ಖಂಡವು

ಪೀ—ಆದಿತ್ಯನಲ್ಲಿ ಏಳು ರೂಪಗಳುಳ್ಳ ಸಾಮನೆನಿಸಿದ ಶ್ರೀಹರಿಯನ್ನು ಪಾಸನೆ ಮಾಡಬೇಕೆನ್ನು ತ್ತಾ.

ಉ.॥ ಅಥ ಖಲ್ವಮುಮಾದಿತ್ಯಂ ಸಪ್ತವಿಧಂ ಸಾಮೋಪಾಸೀತ ಸರ್ವದಾ ಸಮಸ್ತೇನ ಸಾಮ ನೂಂ ಪ್ರತಿ ಮಾಂ ಪ್ರತೀತಿ ಸರ್ವೇಣ ಸಮಸ್ತೇನ ಸಾಮ ॥ ೧ ॥

ಅ ॥ ಆದಿತ್ಯನೊಳಗಿರುವ, ಆದಿತ್ಯನೆನಿಸಿದ, ಏಳುವಿಧ ನಾಮಗಳಲ್ಲಿ ವರ್ಣಿಸಲ್ಪಡತಕ್ಕ, ಏಳು ರೂಪಗಳುಳ್ಳ, ಶ್ರೀಹರಿಯನ್ನು ಪಾಸನೆ ಮಾಡಬೇಕು. ಆದಿತ್ಯನಲ್ಲಿರುವ ವಿಷ್ಣುವು ಸರ್ವಕಾಲದಲ್ಲಿಯೂ, ಒಂದೇ ರೀತಿ ರೂಪವುಳ್ಳವನಾದುದರಿಂದಲೂ, ಪ್ರತಿಯೊಬ್ಬರಿಗೂ ನನಗೆ ಅಭಿಮುಖನಾಗಿದ್ದಾನೆಂದು *ಒಂದೇ ರೀತಿ ಕಾಣುವುದರಿಂದಲೂ ಸಾಮನೆನಿಸುತ್ತಾನೆ ॥ ೧ ॥

ಪೀ—ಸರ್ವಪ್ರಾಣಿಗೂ ಶ್ರೀಹರಿಯು ಆಶ್ರಯನೆಂದುಪಾಸನೆ ಮಾಡಬೇಕೆನ್ನುತ್ತಾನೆ—

ಉ. ॥ ತಸ್ಮಿನ್ನಿಮಾನಿ ಸರ್ವಾಣಿ ಭೂತಾನ್ಯನ್ವಾಯತ್ತಾನೀತಿ ವಿದ್ಯಾತ್ತಸ್ಯ ಯತ್ಪುರೋದಯಾತ್ ಸ ಹಿಂಕಾರಸ್ತದಸ್ಯ ಪಶವೋನ್ವಾಯತ್ತಾಸ್ತಸ್ಮಾತ್ತೇ ಹಿಂಕುರ್ವಂತಿ ಹಿಂಕಾರಭಾಜನೋ ಹ್ಯೇತಸ್ಯ ಸಾಮ್ನಃ ॥ ೨ ॥

ಅ ॥ ಆದಿತ್ಯನೊಳಗಿರುವ ಆದಿತ್ಯನೆನಿಸಿಕೊಂಡ ಏಳು ರೂಪಗಳುಳ್ಳ ಶ್ರೀವಿಷ್ಣುವಿನಲ್ಲಿ ಬ್ರಹ್ಮಾದಿಗಳನ್ನು ಮೊದಲುಗೊಂಡು ಪಶು ಪಕ್ಷ್ಯಾದಿ ಸರ್ವಪ್ರಾಣಿಗಳೂ ಆಶ್ರಯಿಸಿಕೊಂಡಿವೆ. ಎಂದು ಉಪಾಸನೆ ಮಾಡಬೇಕು. (ಅದನ್ನು ವಿವರಿಸುತ್ತಾನೆ—) ಹಿವ ಎಂಬ ಸಾಮವಿದ್ದಲ್ಲಿ ಸ್ತುತಿಸಲ್ಪಡತಕ್ಕ ಪ್ರದ್ಯುಮ್ನನು, ಆದಿತ್ಯನೆನಿಸಿಕೊಂಡ ಶ್ರೀಹರಿಯು ಉದಯಿಸುವುದಕ್ಕಿಂತ ಪೂರ್ವಕಾಲದಲ್ಲಿರತಕ್ಕವನು (ಸೂರ್ಯೋದಯಕ್ಕಿಂತ ಮೊದಲಿನಕಾಲಕ್ಕೆ ಅಧಿಪತಿಯು) ಸೂರ್ಯೋದಯಕ್ಕಿಂತ ಪೂರ್ವಕಾಲದಲ್ಲಿರತಕ್ಕ ಹಿಂಕಾರನೆನಿಸಿಕೊಂಡ ಪ್ರದ್ಯುಮ್ನರೂಪವನ್ನು ಪಶುಗಳು ಆಶ್ರಯಿಸಿಕೊಂಡಿವೆ ಹಿಂಕಾರಾರ್ಥನಾದ ಪ್ರದ್ಯುಮ್ನನನ್ನು ಆಶ್ರಯಿಸಿರುವುದರಿಂದ ಕಾಮಧೇನು ಮೊದಲಾದ ಪಶುಗಳು ಹಿವ್ ಎಂದು ಶಬ್ದಮಾಡುತ್ತವೆ. ಅದನ್ನನುಸರಿಸಿ ಈಗಿನ ಪಶುಗಳೂ ಹಾಗೆಯೇ ಶಬ್ದಮಾಡುತ್ತವೆ. ॥ ೨ ॥

ಉ. ॥ ಅಥ ಯತ್ಕೃಥನೋದಿತೇ ಸ ಪ್ರಸ್ತಾವಸ್ತದಸ್ಯ ಮನುಷ್ಯಾ ಅನ್ವಾಯತ್ತಾಸ್ತಸ್ಮಾತ್ತೇ ಪ್ರಸುತಿಕಾಮಾಃ ಪ್ರಶಕ್ಸಾಕಾಮಾಃ ಪ್ರಸ್ತಾವಭಾಜನೋ ಹ್ಯೇತಸ್ಯ ಸಾಮ್ನಃ ॥ ೩ ॥

ಅ ॥ ಪ್ರಸ್ತಾವನೆನಿಸಿದ ವಾಸುದೇವನು ಸೂರ್ಯನು ಉದಯಿಸಿಕೊಂಡು ಬರುವಕಾಲಕ್ಕೆ ನಿಯಾಮಕನು ಸೂರ್ಯನೊಳಗಿರುವ ಶ್ರೀಹರಿಯ ಪ್ರಸ್ತಾವ ಎನಿಸಿದ ವಾಸುದೇವರೂಪವನ್ನು ಮನುಷ್ಯರು

* ಅಧಿಷ್ಠಾನವಾಗಿ ಸರ್ವರ ಕಣ್ಣಿಗೆ ಕಾಣುವುದು ಸೂರ್ಯಮಂಡಲವು ಶ್ರೀಹರಿಯು ಕಾಣುವುದಿಲ್ಲ ಆದರೆ ಮಂಡಲ ವಲ್ಲಿರುವ ಶ್ರೀಹರಿಯು ಸರ್ವರಿಗೂ ಸೂರ್ಯಮಂಡಲವು ಒಂದೇ ರೀತಿ ಕಾಣುವಂತೆ ಸಾಮ್ಯವನ್ನು ಸಂಪಾದಿಸಿಕೊಟ್ಟಿರುವಾದ ಕಾರಣ ಸದಃ ಸಮನು, ಸಾಮವೆನಿಸುತ್ತಾನೆ.

ಅಶ್ರಯಿಸಿರುತ್ತಾರೆ ಮನುಷ್ಯರು ಸೂರ್ಯನೊಳಗಣ ಸಾಮನೆನಿಸಿದ ಶ್ರೀಹರಿಯು ಪ್ರಸ್ತಾವನೆನಿಸಿದ "ವಾಸುದೇವನೆಂಬ ದ್ವಾರಾವತಾರವನ್ನು ಆಶ್ರಯಿಸಿದುದಂದಲೇ ಜನರು ಪ್ರಾರಂಭವನ್ನು ಇಚ್ಛಿಸುವವರೂ, ಹೊಗಳುವವರೂ, ಆಗುತ್ತಾರೆ ॥ ೩ ॥

ಉ. ॥ ಅಥ ಯತ್ಸಂಗವನೇಲಾಯೋ ಽ ಽದಿಸ್ತದಸ್ಯ ವಯೋ ಽಸ್ಯನ್ವಾ-
ಯತ್ತಾನಿ ತಸ್ಮಾತ್ತಾನ್ಯಂತರಿಕ್ಷೇಽನಾರಂಬಣಾನ್ಯಾದಾಯಾತ್ಮಾನಂ ಪರಿಪತಂ-
ತ್ಯಾದಿಭಾಜೀನಿ ಹ್ಯೇತಸ್ಯ ಸಾಮ್ನಃ ॥ ೪ ॥

ಅ ॥ ಅದಿ ಎನಿಸಿದ ಮಧ್ಯಾಹ್ನ ಸವನಕಾಲಕ್ಕೆ ಸಮಾಪ್ತವಾದ, ಸಂಗವ (6 ಘಳಿಗೆಯಿಂದ 12ರ ಪರ್ಯಂತ) ಕಾಲಕ್ಕೆ ದೇವತೆಯಾದ ಅದಿತ್ಯನೆನಿಸಿದ ಶ್ರೀಹರಿಯು ಪಶುರೂಪವನ್ನು ಪಕ್ಷಿಗಳು ಆಶ್ರಯಿಸುತ್ತಿವೆ. ಪಕ್ಷಿಗಳು ಸಾಮನೆನಿಸಿದ ಶ್ರೀಹರಿಯು ಪಶುರೂಪವನ್ನಾಶ್ರಯಿಸಿದಕಾರಣ ಅಂದರೆ ಪಶುವಿಗೆ ಎಲ್ಲಾ ಪಕ್ಷಿಗಳಿಗೂ ಆಶ್ರಯವಾದುದರಿಂದಲೇ ಪಶುರೂಪವನ್ನಾಶ್ರಯಿಸಿರುವ ಪಕ್ಷಿಗಳು ಅಕಾರವಿದ್ದಿ ಅಧಾನವಿಲ್ಲದೆ-ಸ್ವತಂತ್ರವನ್ನು ದೇಹ ಧರಿಸಿರುತ್ತಾರೆ ॥ ೪ ॥

ಉ. ॥ ಅಥ ಯತ್ಸಂಪ್ರತಿ ಮಧ್ಯಂದಿನೇ ಽ ಉದ್ಗೀಥಸ್ತದಸ್ಯ ದೇವಾ
ಅನ್ವಾಯತ್ತಾಸ್ತಸ್ಮಾತ್ತೇ ಸತ್ತಮಾಃ ಪ್ರಾಜಾಪತ್ಯಾನಾಮುದ್ಗೀಥಭಾಜಿನೋ
ಹ್ಯೇತಸ್ಯ ಸಾಮ್ನಃ ॥ ೫ ॥

ಅ ॥ ಬಿರಿದನೆನಿಸಿದ ಪ್ರಸಿದ್ಧವಾಯುವಾಗಿ ಮಧ್ಯಾಹ್ನ (12-1ಘಳಿಗೆ ಪರ್ಯಂತ) ಕಾಲಕ್ಕೆ ಸಮಾಪ್ತಿಯಾಗಿ, ಈ ಪ್ರಸಿದ್ಧವಾಯು ಸಾಮವನ್ನು ದೇವತೆಗಳು ಆಶ್ರಯಿಸಿರುತ್ತಾರೆ ದೇವತೆಗಳು ಸಾಮನೆನಿಸಿದ ಶ್ರೀಹರಿಯು ಪ್ರಾಣವಾಯುವಾಗಿರುವ ಅನುಪ್ರಾಣನಾಗಿ ಸಮಸ್ತ ಪ್ರಾಣಿಗಳಲ್ಲಿ ಪ್ರವೇಶಿಸಿರುವ ಕಾರಣದಿಂದಲೇ ಇವರು ಗುಣವಂತರಾಗಿರುವ ಉತ್ತಮ ದೇವತೆಗಳೆನಿಸಿದರು. ॥ ೫ ॥

ಉ. ॥ ಅಥ ಯದೂರ್ಧ್ವಂ ಮುಧ್ಯಂದಿನಾತ್ತಾಗಪರಾಹ್ಣಾತ್ತ್ಸ ಪ್ರತಿ-
ಹಾರಸ್ತದಸ್ಯ ಗರ್ಭಾ ಅನ್ವಾಯತ್ತಾಸ್ತಸ್ಮಾತ್ತೇ ಪ್ರತಿಹೃತಾ ನಾವಪದ್ಯಂತೇ
ಪ್ರತಿಹಾರಭಾಜಿನೋ ಹ್ಯೇತಸ್ಯ ಸಾಮ್ನಃ ॥ ೬ ॥

ಅ ॥ ಪ್ರತಿಹಾರನೆನಿಸಿದ ಅನಿರುದ್ಧನು ಮಧ್ಯಾಹ್ನದಮೇಲೆ ಅಪರಾಹ್ಣ (13-24 ಘಳಿಗೆ ಪರ್ಯಂತ) ಕಾಲಕ್ಕೆ ಅಧಿಪತಿಯು. ಶ್ರೀಹರಿಯು ಅನಿರುದ್ಧನೆಂಬ ಈ ರೂಪವನ್ನು ಗರ್ಭದೊಳಗಣ ಪ್ರಾಣಿಗಳು ಆಶ್ರಯಿಸಿರುತ್ತಾರೆ ಪ್ರತಿಹಾರನೆಂಬ ಅನಿರುದ್ಧಾವತಾರವನ್ನು ಆಶ್ರಯಿಸಿರುವುದರಿಂದಲೇ ಗರ್ಭದೊಳಗಣ ಜೀವರು ತಂದೆಯ ಶರೀರದಿಂದ ತಾಯಿಯ ಶರೀರದೊಳಗೆ ಶರಶ್ಶುಕ್ರ (ವೀರ್ಯದೊಳಗೆ) ಸಾತ ಕೊಂಡದೆ ಬೆಳೆಯುವರು. ॥ ೬ ॥

ಉ. ॥ ಅಥ ಯದೂರ್ಧ್ವಮಪರಾಹ್ಣಾತ್ತ್ಯಾಗಸ್ತಮಯಾತ್ಸ ಉಷದ್ರ-
ವಸ್ತದಸ್ಯಾರಣ್ಯಾ ಅನ್ವಾಯತ್ತಾಸ್ತಸ್ಮಾತ್ತೇ ಪುರುಷಂ ದೃಷ್ಟ್ವಾ ಕಕ್ಷಸೀ ಶ್ವಭ್ರ-
ಮಿತ್ಯುಪದ್ರವಂತ್ಯುಪದ್ರವಭಾಜಿನೋ ಹ್ಯೇತಸ್ಯ ಸಾಮ್ನಃ ॥ ೭ ॥

* ವಾಸುದೇವನು ಸೃಷ್ಟಿಯಲ್ಲಿ ಅವತರಿಸಿದವನು. ಸೃಷ್ಟಿಕರ್ತನಿಗೆ ದೇವತೆಯು.

ಅ ॥ ಬಿಸಪ್ಪವನೆನಿಸಿದ ನರಸಿಂಹನು ಅರಣ್ಯಸ್ಥಕ್ರಿಂತ ಮೇಲೆ ಅಸ್ತಮಾನಕ್ಕಿಂತ (24—30 ಘಳಿಗೆ ಪರ್ಯಂತ) ಮೊದಲಿನಕಾಲಕ್ಕೆ (ಸಾಯಂಕಾಲಕ್ಕೆ) ನಿಜಸಾಮಕನು ಕಾಡುಮೃಗಗಳು ಶ್ರೀಹರಿಯ ನರಸಿಂಹರೂಪವನ್ನು ಆಶ್ರಯಿಸಿಕೊಂಡಿವೆ. ಶ್ರೀಹರಿಯ ಬಿಸಪ್ಪವನೆನಿಸಿದ ನರಸಿಂಹಾವತಾರವು ಮೃಗಗಳನ್ನು ಕಾಪಾಡುವುದಕ್ಕಾಗಿ, ಅರಣ್ಯ (ನಿತಗಳಪ್ಪೊವರು) ವತ್ತು ಗುಹೆ. ಇವುಗಳಲ್ಲಿ ಸದಾ ಇರುತ್ತವೆ ಆ ಅವತಾರವನ್ನಾಶ್ರಯಿಸಿದುದರಿಂದಲೇ ಕಾಡುಮೃಗಗಳು ಮನುಷ್ಯರನ್ನು ಕಂಡು ಹೆದರಿದಾಗ ಅರಣ್ಯಗುಹೆಗಳಲ್ಲಿರುತ್ತ ನರಸಿಂಹನು ರಕ್ಷಕನೆಂಬ ಜ್ಞಾನವಿಲ್ಲದಿದ್ದರೂ ಅರಣ್ಯಗುಹೆಗಳು ತಮ್ಮನ್ನು ಕಾಪಾಡುತ್ತವೆಂದು ತಿಳಿದು ಅದಕ್ಕೆ ಓಡಿಹೋಗುತ್ತವೆ ॥ ೬ ॥

ಭಾ. ॥ ಅಥ ಯತ್ಕೃಷ್ಣಮಾಸ್ತಮಿತೇ ತನ್ನಿಧನಂ ತದಸ್ಯ ಪಿತರೋಽನ್ವಾಯತ್ತಾಸ್ತತ್ತಾತ್ತನ್ನಿದಧತಿ ನಿಧನಭಾಜನೋ ಹ್ಯೇತಸ್ಯ ಸಾಮ್ನ ಏವಂ ಖಲ್ವಮುಮಾದಿತ್ಯೇ ಸಪ್ತವಿಧಂ ಸಾಮೋಪಾಸ್ತೇ ॥ ಇತಿ ನವಮಃ ಖಂಡಃ ॥೪-೯॥

॥ ೮ ॥

ಅ ॥ ನಿಧನವೆಂಬ ಸಾಮವಿದ್ದಿ ವರ್ಣಿಸಲ್ಪಡುವ ಸಂಕರ್ಷಣನು ಸೂರ್ಯಾಸ್ತಮಯವಾದ ಕಾಲಕ್ಕೆ ಆಧೀನನಾಗಿಯು, ಶ್ರೀಹರಿಯು ಆ ಸಂಕರ್ಷಣರೂಪವನ್ನು ಪಿತೃಗಳು ಆಶ್ರಯಿಸಿರುತ್ತಾರೆ ಪಿತೃಗಳು ಸಂಕರ್ಷಣರೂಪವನ್ನು ಆಶ್ರಯಿಸಿದುದರಿಂದಲೇ ಪಿತೃಗಳಿಗೆ ಅಜ್ಜರು ಕೂಡ ಪಿಂಡಾದಿಗಳನ್ನು ಪಾಲಿಸುತ್ತಾರೆ. ಆದಿತ್ಯನೊಳಗಿರುವ, ಆದಿತ್ಯನೆನಿಸಿದ, ಏಳುವಿಧ ಸಾಮಗಳಲ್ಲಿ ವರ್ಣಿಸಲ್ಪಡತಕ್ಕ, ಏಳುರೂಪಗಳುಳ್ಳ ಶ್ರೀಹರಿಯನ್ನು ಧ್ಯಾನಿಸಿ ಮಾಡಿದವನು ಸಂಸಾರವಾಗರದಿಂದ ಬಿಡುಗಡೆ ಹೊಂದಿದವನಾಗಿ ಮೋಕ್ಷವನ್ನು ಹೊಂದುತ್ತಾನೆ ॥ ೭ ॥

ಪೀಠಿಕೆ: ಮುಂಚಿನ ಅಧ್ಯಾಯೋಕ್ತಾರ್ಥವನ್ನೇ—

ಭಾ. ॥ (೧) ಆದಿತ್ಯಸ್ಥಂ ಪರಂ ವಿಷ್ಣುಂ ಧ್ಯಾಯೇದಾದಿತ್ಯನಾಮಕಂ । ಸಪ್ತರೂಪಂ ಸಾಮ ಚಾ(ಸಮಶ್ನಾ)ಸೌ ಸರ್ವದಾ ಸಮರೂಪತಃ ॥ ಸರ್ವೇಷಾಂ ಮಾಂ ಪ್ರತೀತ್ಯೈವ ದೃಷ್ಟಿಸಾಮ್ನಾಚ್ಚ ಸಾಮ ಸಃ । ದೃಷ್ಟಿಸಾಮ್ನಂ ಮಂಡಲಸ್ಯ ವಿಷ್ಣುಸ್ತಸ್ಯ ಚ ಕಾರಣಂ ॥ (೨) ಕಸ್ಮಿನ್ನಮಾನಿ ಭೂತಾನಿ ಸರ್ವಾಣ್ಯೇನಾಶ್ರಿತಾನಿ ಹಿ । ಉದಯಾತ್ಪೂರ್ವಮೇವಾಸೌ ಭವೇತ್ಕೃದ್ಧುಮ್ನವಾಮಕಃ । ಪಶ್ಚಾಧಾರಸ್ತದಾತ್ಮಾಸೌ ॥ (೩) ವಾಸುದೇವಸ್ತಥೋದಯೇ । ಆಶ್ರಯಶ್ಚ ಪ್ರಜಾನಾಂ ತತ್ರ ॥ (೪) ವರಾಹಃ ಸಂಗವೇ ತು ಸಃ । ತತ್ರ ಪಕ್ಷ್ಮಾಶ್ರಯೋ ವಿಷ್ಣುಃ ॥ (೫) ತಥಾ ನಾರಾಯಣಾಭಿಧಃ । ಮಧ್ಯಂದಿನೇ ಸ ಆಧಾರೋ ದೇವಾನಾಂ ಚ

॥ ೧ ॥

ಅ ॥ (೧) ಆದಿತ್ಯನೊಳಗಿರುವ, ಆದಿತ್ಯನೆನಿಸಿದ, ಏಳುರೂಪಗಳುಳ್ಳ ಶ್ರೀಹರಿಯನ್ನು ಧ್ಯಾನಿಸಬೇಕು. ಶ್ರೀಹರಿಗೆ ಸರ್ವದಾ ಏಕರೀತಿಯಾದ ರೂಪವಿರುವುದರಿಂದಲೂ ಪ್ರತಿಯೊಬ್ಬರಿಗೂ ನನಗೆ ಅಭಿಮುಖವಾಗಿ ಇದ್ದಾನೆಂಬ ಒಂದೇರೀತಿ ತೋರಿಸುಕೊಳ್ಳುವುದರಿಂದಲೂ ಶ್ರೀಹರಿಯು ಸಾಮನೆನಿಸುತ್ತಾನೆ. (ಆದಿತ್ಯನೊಳಗಣ ವಿಷ್ಣುವು ಕಾಣದಿರುವುದರಿಂದ ಇದುಹೇಗೆ ಸಂಗತವಾಗುತ್ತದೆ? ಎಂದರೆ-) ಸರ್ವರಿಗೂ ಒಂದೇರೀತಿ ಕಾಣುವುದು ಸೂರ್ಯಮಂಡಲವು. ಹಾಗೆ ತೋರಲಿಕ್ಕೆ ವಿಷ್ಣುವು ಕಾರಣನು. (೨) (ಮುನ್ನಿನ ಮಂತ್ರಕ್ಕೆ ಅರ್ಥಹೇಳುತ್ತಾರೆ-) ಆದಿತ್ಯನೊಳಗಣ ಶ್ರೀಹರಿಯನ್ನು ಬ್ರಹ್ಮಾದಿಗಳೆಲ್ಲರೂ ಆಶ್ರಯಿಸಿ

ಕೊಡುವುದಾಗಿ ಅವಿಚ್ಛಿನ್ನವಾದ ಪ್ರಸ್ತುತಿಯು ಸೂರ್ಯೋದಯವಾಗುವುದಕ್ಕಿಂತ ಪೂರ್ವಕಾಲಕ್ಕೆ ಅಧಿಕತಮವು. ಆ ಪ್ರಸ್ತುತಿಯನ್ನು ಅನಂತರದಲ್ಲಿ ಅಭ್ಯಸಿಸುವುದು. (೩) (ಇನೇ ಮಂತ್ರದ ಅರ್ಥವನ್ನು ಹೇಳುತ್ತಾರೆ.–) ವಾಸುದೇವನು ಸೂರ್ಯೋದಯದ ಕಾಲಕ್ಕೆ ಅಧಿಕತಮವು. ಮನುಷ್ಯರಿಗೆ ಅಭ್ಯಯವು. (೪) (ಇನೇ ಮಂತ್ರದ ಅರ್ಥವನ್ನು ಹೇಳುತ್ತಾರೆ.) ಪರಾಶರಸುತನಾದ ವ್ಯಾಸನು ಸಂಗವಕಾಲಕ್ಕೆ ಅಧಿಕತಮವು. ಪಕ್ಷಿಗಳಿಗೆ ಅಭ್ಯಯವು. (೫) (ಇನೇ ಮಂತ್ರದ ಅರ್ಥವನ್ನು ಹೇಳುತ್ತಾರೆ—ಶ್ರೀನಾರಾಯಣನು ಮಧ್ಯಾಹ್ನ ಕಾಲಕ್ಕೆ ಅಧಿಕತಮವು. ದೇವತೆಗಳಿಗೆ ಅಭ್ಯಯವು. ॥ ೩ ॥

ಈ [illegible] ಮಂತ್ರದ ಅರ್ಥವನ್ನು ಹೇಳುತ್ತಾರೆ

ಭಾ॥ (೧) ತತಃ ಸರಂ । ತನಿರುದ್ಧಸ್ಯ ಅಧಾತೋ. ಗರ್ಭಸ್ಥಾನಾಂ ಸದೈವ ಹಿ ॥ (೨) ತತಃ ಸರಂ ನೃಸಿಂಹಾಖ್ಯಂ । ಸ ಅರಣ್ಯಾನ್ತರ್ಜಲೋ ಮತಃ ॥ ೩ ಅಥಾಸ್ಯ ನಿಶತಮೇಲಾಯಾಂ । ಸ ಸಂಕರ್ಷಣ ಈರಿತಃ । ಅಭ್ಯರ್ಚಯೇ । ಸ ಪಿತೃಣಾಂ ಚ ಸಸ್ಥಾತ್ಮಕಮುಪಾಸ್ಯ ತಂ । ಪ್ರಾಪ್ನೋತಿ ಸರಸಾಂ ಸ್ಥಾನಂ ಮುಕ್ತಃ ಸಂಸಾರಸಾಗರಾತ್ ॥ ಇತಿ ಚ ॥ ೪ ॥

ಆ ॥ (೧) ಮಧ್ಯಾಹ್ನದ ವೇಳೆ ಅವಿಚ್ಛಿನ್ನವಾಗಿ ಕೊಡುವ ಅನಿರುದ್ಧನು ಅಧಿಕತಮವು. ಅತನು ಗರ್ಭಸ್ಥರಿಗೆ ಅಭ್ಯಯನು. (೨) (ಇನೇ ಮಂತ್ರದ ಅರ್ಥ ಹೇಳುತ್ತಾರೆ—) ಅನಂತರದಲ್ಲಿ ಕೊಡುವ ನೃಸಿಂಹಾಖ್ಯನು ಅರಣ್ಯಮಧ್ಯದಲ್ಲಿ ಕಾಲಕ್ಕೆ ಸ್ವಲ್ಪಕಾಲ ಮೀರತಕ್ಕವನು. ಅವನು ಕ್ಷೀಣಪುಣ್ಯರಿಗೆ ಅಭ್ಯಯನು. (೩) (ಇನೇ ಮಂತ್ರದ ಅರ್ಥ ಹೇಳುತ್ತಾರೆ [illegible] ಸಾಯಂಸವನಕ್ಕೆ ಅಧಿಕತಮವು. ಅವನು ಶೇಷಾತ್ಮಕನಾದ ಸಂಕರ್ಷಣನು. ಅವನು ಪಿತೃಗಳಿಗೆ ಅಭ್ಯಯನು. ಅಧಿಕತಮವಾಗಿ ಅವಿಚ್ಛಿನ್ನವಾದ ಶ್ರದ್ಧೆಯಿಂದ ಯಾವ ಬ್ರಾಹ್ಮಣನಿಗೆ ಅನ್ನವನ್ನು ಕೊಡುವನೋ ಅವನು ಪಿತೃಗಳಿಗೆ ಪ್ರಿಯವಾದ ಬಹುಕಾಲ ಉಳಿಯುವ ತೃಪ್ತಿಯನ್ನು ಹೊಂದಿಸುತ್ತಾನೆ. ॥ ೪ ॥

ಈ [illegible] ಮಂತ್ರದ ಅರ್ಥವನ್ನು ಹಿಂಕುರ್ವಂತಿ [illegible] ಅರ್ಥ ಹೇಳುತ್ತಾರೆ.

ಭಾ. ॥ (೧) ಹಿಂಕಾರನಾಮಾನಮಾಶ್ರಿತತ್ವಾದ್ಧಿಂಕುರ್ವಂತಃ ॥ (೨) ಪ್ರಸ್ತಾನಾಶ್ರಯತ್ವಾತ್ಪ್ರಸ್ತುತಿಕಾಮಾಃ ಪ್ರಾರಂಭಕಾಮಾಃ । ಪ್ರಸ್ತಾವನಾಮಾರ್ಜ । ಪ್ರಾರಂಭಾವತಾರತ್ವಾತ್ತತ್ರಸಾದೇವತಾತ್ವಾಚ್ಚ ತಸ್ಯ ॥ (೩) ಸರ್ವಾಧಾರತ್ವಾದ್ವಾಸುದೇವಸ್ಯ ತದಾಧಾರಾಣಾಂ ಪಕ್ಷಿಣಾಮನಾಧಾರೇಣೈವ ಗಮನಂ । ನಾರಾಯಣನಾಮೂರ್ಧತ್ವೇನ ಸರ್ವಗುಣಪೂರ್ತ್ಯೋತ್ಕರ್ಷಾಪಾಸನಾದೇವ ಸರ್ವೋತ್ತಮಾ ದೇವಾಃ । ಇತರಮೂರ್ತಿಗಣಾನಾಮಪಿ ಸರ್ವಗುಣಪೂರ್ತ್ಯೋತ್ಕರ್ಷಾಪಾಸನೇ ನಾರಾಯಣೋಪಾಸನಮೇವ ಭವತಿ । ಸರ್ವಗುಣಪೂರ್ತ್ಯರ್ಥತ್ವಾನ್ನಾರಾಯಣಸ್ಯ ॥ ೫ ॥

ಆ ॥ (೧) ಹಿಂ ಎಂದು ಕೆಸರುಳ್ಳ ಪ್ರಮ್ನವನ್ನು ಅಭ್ಯಯಿಸಿರುವುದರಿಂದ (ಕಾಮಧೇನು ಮೊದಲಾದ ಗೋವುಗಳು ಹಿಂ ಎಂದು ಕೂಗುತ್ತವೆ (೨) (ಇನೇ ಮಂತ್ರದಲ್ಲಿ ಪ್ರಸ್ತುತಿಕಾಮಾಃ ಇತ್ಯಾದಿಗಳ ಅರ್ಥ ಹೇಳುತ್ತಾರೆ.) ಪ್ರಸ್ತಾವನೆಯಿಂದ ವಾಸುದೇವನನ್ನು ಪ್ರಾಪ್ತಿಯಿಸುವುದರಿಂದ (ಮನುಷ್ಯರು) ಪ್ರಾರಂಭವಾಗಬೇಕಿರುವ ಹೊಗಳಿಕೆಯುಳ್ಳವರು. (ಹೇಗೆಂದರೆ—) ಪ್ರಸ್ತಾವನೆಯಿಂದ ವಾಸುದೇವನು ಪ್ರಥಮಾವತಾರನು. ಹೊಗಳುವಿಕೆಗೆ ದೇವತೆಯು. (೩) (ಇನೇ ಮಂತ್ರದಲ್ಲಿನ

ತಸ್ಮಾತ್ತಾಸ್ಯಂಶಿಕ್ಷೇ ಇತ್ಯಾದಿಗಳ ಅರ್ಥ ಹೇಳುತ್ತಾರೆ) ಮನುಷ್ಯ ಎಲ್ಲಾ ಪಕ್ಷಿಗಳಿಗೂ ಆಶ್ರಯ ಕಾದ ಕಾರಣ ಮನುಷ್ಯನನ್ನು ಆಶ್ರಯಿಸಿಕೊಂಡಿರುವ ಪಕ್ಷಿಗಳು ಭೂಮಿ ಮೊದಲಾದ ಆಧಾರವಿಲ್ಲದೇನೇ ಆಕಾಶದಲ್ಲಿ ಸಂಚರಿಸುತ್ತವೆ (೫) (ಹೀಗೇ ಮುಂತ್ರದಲ್ಲಿನ ತಸ್ಮಾತ್ತೇ ಪತ್ನಮಾಃ ಇತ್ಯಾದಿಗಳ ಅರ್ಥ ಹೇಳುತ್ತಾರೆ—) ಯಜ್ಞ ಕರ್ಮಗಳನ್ನು ಸರ್ವರೂ ಪರಿಪೂರ್ಣರೆಂದು ಉಪಾಸನೆ ಮಾಡಿದು ದರಿಂದಲೇ ದೇವತೆಗಳು ಋತ್ವಿಗಂಧರ್ವಾದಿಗಳಿಗಿಂತ ಉತ್ತಮರಾಗಿರುತ್ತಾರೆ ಬೇರೆ ಭೋಗವನ್ಮೂರ್ತಿಗಳು ಸರ್ವರೂಪರಿಪೂರ್ಣರಾಗಿರುವರೆಂದು ಉಪಾಸನೆ ಮಾಡಿದರೂ, ಶ್ರೀನಾರಾಯಣನ ಉಪಾಸನೆಯೇ ಅಗುತ್ತದೆ (ಹೇಗೆಂದರೆ ಇವರ ದೋಷಗಳು ಅವುಗಳಿಗೆ ವಿರುದ್ಧಗಳಾದ ಗುಣಗಳು, ನಾರಾಯಣನಿಗಿರುತ್ತವೆ. ಅವುಗಳಿಗೆ ತಾತ್ಪರ್ಯವೆಂಬ ಅರ್ಥದಿಂದ) ನಾರಾಯಣಶಬ್ದವು ಸರ್ವರೂಪರಿಪೂರ್ಣನೆಂಬ ಅರ್ಥವನ್ನು ಹೇಳುತ್ತದೆ

೬೬—೬೮ನೇ ಮಂತ್ರದಲ್ಲಿನ ತಸ್ಮಾತ್ತೇ ಪ್ರತಿಹೃತಾ ನಾವಹದ್ಭಂತೇ ಎಂಬ ವಾಕ್ಯದ ಅರ್ಥ

ಭಾ. ॥ (೧) ಅನಿರುದ್ಧಾಶ್ರಯತ್ವಾದ್ಗರ್ಭಾಣಾಂ ಪಿತುಃ ಶರೀರಾದನ್ಯತ್ರ ಪ್ರತಿಹೃತಾ ಇತಿ ನವಿನಶ್ಯಂತಿ । ವರ್ಧಂತೇ ಚ ತತ್ರೈವ । ಅನ್ಯದ್ಧಿ ಭುಕ್ತಂ ಜೀರ್ಯತಿ ನವ । ಧಾತಾ ಗರ್ಭಂ ದಧಾತು ತೇ । ಇತಿ ಚ ಶ್ರುತಿಃ ॥ (೨) ಧಾತಾ ಹಿ ಭಗವಾನನಿರುದ್ಧಃ ॥ (೩) ವಿಷ್ಣುಸ್ತ್ವಷ್ಟಾ ಪ್ರಜಾಪತಿರ್ಧಾತಾ ಇತಿ ಚತುರ್ಮೂರ್ತಯೋ ಹ್ಯುಚ್ಯಂತೇ ॥ (೪) ಯೋನಿಕ್ಲೃಪ್ತಿರ್ವಾಸುದೇವಾದ್ಬ್ರಹ್ಮಂ ಸಂಕರ್ಷಣಾದ್ಭವೇತ್ । ಅಸೇಕಕರ್ಮ ಪ್ರದ್ಯುಮ್ನಾದನಿರುದ್ಧಾಚ್ಚ ಧಾರಣಂ ॥ ಇತಿ ಚ ॥ (೫) ನ್ಯಾಕ್ಪ್ರೇರ್ಷ್ಣುರ್ವಾಸುದೇವಸ್ತ್ವಷ್ಟಾ ತ್ವೇಷಾತ್ ದ್ವಿತೀಯಕಃ । ಪ್ರಜಾಪತಿಃ ಪ್ರಜಾಪಾತಾನ್ನಿಷೇಕಃ ಪಾತನಂ ತತಃ । ಪ್ರಜಾಪತಿಸ್ತು ಪ್ರದ್ಯುಮ್ನೋ ॥ (೬) ಧಾತಾ ಧಾರಣಕರ್ಮತಃ । ಅನಿರುದ್ಧ ಇತಿ ಪ್ರೋಕ್ತಃ ಕೃಷ್ಣರಾಮೌ ತಥಾಪ್ಯಿನೌ ॥ ಇತಿ ಚ ॥ ೪ ॥

ಅ ॥ (೧) ಗರ್ಭದಲ್ಲಿನ ಜೀವರು ಅನಿರುದ್ಧನನ್ನಾಶ್ರಯಿಸಿರುವದರಿಂದ ತಂದೆಯ ಶರೀರದಿಂದ ತಾಯಿಯ ಶರೀರಕ್ಕೆ ಬಂದಮಾತ್ರರೂ ನಾಶಹೊಂದದೆ ತಾಯಿಯ ಶರೀರದಲ್ಲಿಯೇ ಬೆಳೆಯುತ್ತಾರೆ. (ಗರ್ಭದೊಳಗಣ ಜೀವರು ತಾಯಿಯ ಶಕ್ತಿಯಿಂದಲೇ ನಾಶ ಹೊಂದದೆ ಬೆಳೆಯುತ್ತಾರೆ. ಎಂದು ಏಕೆ ಅಗಲಾರದು? ಅನಿರುದ್ಧನನ್ನು ಆಶ್ರಯಿಸುತ್ತಿದ್ದಾರೆಂದು. ಏಕೆ ಅನ್ನವೇಕೆಂದರೆ-) ತಾಯಿಯು ಉಂಡ, ತಾಯಿಯ ಶರೀರದೊಳಗಿರುವ ಅನ್ನ ಮೊದಲಾದುದು ಜೀರ್ಣವಾಗುವುದು. ಸರ್ವರಿಗೂ ಅನುಭವಸಿದ್ಧವು. (ತಾಯಿಯ ಶಕ್ತಿಯಿಂದಲೇ ಗರ್ಭದೊಳಗಣ ಜೀವರು ನಾಶಹೊಂದುವದಿಲ್ಲವೆಂದೆನ್ನುವದಾದರೆ ತಾಯಿಯ ಶರೀರದೊಳಗಣ ಅನ್ನ ಮೊದಲಾದುದನ್ನು ತಾಯಿಗೆ ರಕ್ಷಿಸಲು ಸಾಧ್ಯವಿದ್ದಕಾರಣ ಪ್ರತಿಸಿಕ್ಕವೂ ಭೋಜನಾದಿಗಳಲ್ಲಿ * ಪ್ರಯಾಸವೇ ಇಲ್ಲವೆಂದಾದೀತು.) (೨) (ಗರ್ಭದೊಳಗಣ ಜೀವರು ಅನಿರುದ್ಧನನ್ನು ಆಶ್ರಯಿಸುತ್ತಿದ್ದಾರೆಂದು ಏಕೆ ಒಡಂಬಡಬೇಕೆಂದರೆ —) ಧಾತಾ=ಷಡ್ಗುಣಪರಿಪೂರ್ಣನಾದ ಅನಿರುದ್ಧನು (ಪ್ರಿಯಳೇ) ನಿನ್ನ ಗರ್ಭದೊಳಗಣ ಜೀವನನ್ನು ಧರಿಸಲಿ, ಬೆಳೆಯಿಸಲಿ, ಎಂಬ ವೇದವು ಹೀಗೆ ಹೇಳಿದ ಅರ್ಥದಲ್ಲಿ ಪ್ರಮಾಣವು. (೩) ವಿಷ್ಣುರ್ಯೋನಿಂ ಕಲ್ಪಯತು ತ್ವಷ್ಟಾ ರೂಪಾಣಿ ಪಿಂಶತು । ಆಸಿಂಚತು ಪ್ರಜಾಪತಿರ್ಧಾತಾ ಗರ್ಭಂ ದಧಾತು ತೇ ॥ ಎಂಬ ವೇದದಲ್ಲಿ

* ಇಲ್ಲಿ ಸೇರಿ ಅಂಗಾಲ್ಯೆ ಜೀರ್ಣವಾಗದ ಕಾರಣ ಮುಂತ್ತೆ ಭೋಜನದೇ ದೋಷವಾದೀತು.

ವಿಷ್ಣು, ತ್ವಷ್ಟಾ, ಪ್ರಜಾಪತಿ, ಧಾತಾ ಈ ಏಳು ಶಬ್ದಗಳಿಂದ ತ್ರಿಮೂರ್ತಿ ಸಂಬಂಧಿಗಳಾದ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ಏಳು ವ್ಯೂಹ ಭಗವನ್ಮೂರ್ತಿಗಳನ್ನು ಅಭಿಧಾನಿಸಿಕೊಳ್ಳಬೇಕು. (೪) (ಈ ವೇದವಚನದಲ್ಲಿ ವಿಷ್ಣು ಮೊದಲಾದ ಏಳು ಶಬ್ದಗಳಿಂದ ಹೇಳಬೇಕಾದ ಮೊದಲಾದ ಏಳು ಭಗವದ್ರೂಪಗಳನ್ನು ವಿಶಕ್ಲೆ ಅಭಿಧಾನಿಸಿಕೊಳ್ಳುವುದು? ಅಂದಾಯ್ತು ಕವರ್ಲ್ಲಿ ಏಳು ಜೀವಕೆಗಳನ್ನೇ ವಿಶೆ ಅಭಿಧಾನಿಸಿಕೊಳ್ಳಬಾರದೆಂದು—) ರಕ್ಷಿಸುವವನು ಕಾಯುವವನು ಅರ್ಥ. ಮೋಕ್ಷವಿದ್ಯೆಯು ಮಾಡುವೀವಸಿಂದಲೂ, ಗರ್ಭದೊಳಗಣ ಮಕ್ಕಳ ಬಗೆಯ ಸಂಕರ್ಷಣವಿಂದಲೂ, ಗರ್ಭದಿಂದ ಮಕ್ಕಳನ್ನು ಹೊರಪಡಿಸುವಿಕೆಯು ಪ್ರದ್ಯುಮ್ನ ಎಂದಲೂ ಸಂಕಲ್ಪಾರ್ಥವು, ಅನಿರುದ್ಧವಾದುದು ಅಗುವುದು. (೫) (ಮಾಡುವೀವಾದಿ ಮೂರ್ತಿಗಳು ಮೋಕ್ಷವಿದ್ಯಾ ಸ್ಥ ವಾದಕ್ಕಾದಾಗಿ ವಿಷ್ಣುರ್ಯೋನಿಂ ಎಂಬ ವೇದದಲ್ಲಿ ವಿಷ್ಣು ಮೊದಲಾದ ಶಬ್ದಗಳಿಂದ ಮಾಡುವೀವಾಗಳನ್ನೇ ಅಭಿಧಾನಿಸಿಕೊಳ್ಳಬೇಕೆಂಬುವಲ್ಲಿ ಪ್ರಮಾಣವೇನೆಂದರೆ—) ಮಾಡುವೆ ಗರ್ಭ. ಸಮಸ್ತ ಮಾಡುವೀವಾಗಳಿಗಿಂತಲೂ ಪ್ರಯುಕ್ತ ವಿಷ್ಣು ಮೊದಲು ಮಾಡುವೀವಾಗಳನ್ನು ಪ್ರಕಾಶಿಸಿಕೊಂಡಿದ್ದ ಕಾರಣ ತ್ವಷ್ಟಾ ಎಂದು, ಪ್ರದ್ಯುಮ್ನನು ಮಕ್ಕಳನ್ನು ಗರ್ಭದಿಂದ ಹೊರಪಡಿಸುವ ಕಾರಣ ಪ್ರಜಾಪತಿ ಎಂದೂ ಹೇಳಲ್ಪಟ್ಟನು. (ಅಸಿಂಚನ ಪ್ರಜಾಪತಿ) ಎಂಬ ವೇದದಲ್ಲಿ ಪ್ರಾಣದಿಂದ ಮಕ್ಕಳನ್ನು ಹೊರಪಡಿಸುವೆನು ಎಂಬಲ್ಲಿ ಪ್ರಜಾಪತಿಯೆಂಬ ಪದಕ್ಕೆ ಪ್ರಜಾಪಾಲಯಿತೃ ಪ್ರದ್ಯುಮ್ನನು (೬) ಅಂದಿರುವುದು ಗರ್ಭೋಪಧಾನ ಮಾಡುವಲ್ಲಿ ವಿನಧಾತಾ ಎಂದಿರುವುದೆ ಗರ್ಭಂ ತೇ ಅಶ್ವಿನೌ ದೇವಾ ವಾಧತ್ತಾಂ ಪುಷ್ಕರಸ್ರಜೌ ಎಂಬ ಮಂತ್ರದಲ್ಲಿ ಏನು ಹೇಳಲ್ಪಟ್ಟಿರುವುದೆಂದರೆ ಅಶ್ವಿನೌ ಎಂದು ಗರ್ಭದಿಂದ ಶ್ರೀಕೃಷ್ಣ ಭಾಮೆಯರು ಪುತ್ರರನ್ನು ಹೊರಪಡಿಸಿದರೆಂದು. (೭)

೬೬ ( ) ಸಂಕರ್ಷಣಂ ಕಲ್ಪಂ ಪ್ರಪದ್ಯೇ ಇತ್ಯಾದಿಗಳು ಇದು ಹೇಳಲ್ಪಟ್ಟಿದೆ.

ಭಾ. ॥ ನಿ ಕಲ್ಪಪ್ರತಿಷ್ಠೇ ನೃಸಿಂಹಸ್ಯ ಸದಾನನ್ಯಪರಾಯಣಾತ್ । ಪುನರಂತಿ ಕಲ್ಪಪ್ರತಿಷ್ಠಾಭ್ಯಾಂ ತದಭ್ಯಾಸೇಽಪಿ ರಕ್ಷಣಾತ್ । ಮೃಗಾ ಭೀತಾ ಯತಸ್ತೇಽಪಾಂ ನೃಸಿಂಹಸ್ಯಾಪ್ರಿಯಃ ಸದಾ ॥ (೨) ನಿಕ್ಷಾಮಾಮಾಪ್ರಯೋಃ ಯಸ್ಮಾತ್ಸಂಕರ್ಷಣಃ ಉದಾಹೃತಃ । ತಸ್ಮಾನ್ನೃಸಿಂಹಾದಿಸ್ಥಿದಶೈಜ್ಞಕಾ ಅಪಿ । ಅನ್ಯಥಾ ತನ್ಮೃತಾನಾಂ ತು ಕುತ ಏವೋತ್ಥಿತಿಃ ಸತಿಷ್ಯತೆ ॥ ಇತಿ ಚ ॥ (೩) ನ ರೂಪಾಕಾರಾಂ ವಿಶೇಷೋಽಸ್ತಿ ಗುಣತೋ ನಾಮತೋಽಪಿ ವಾ । ತಥಾಪಿ ಕಲ್ಪಯಂ ನಾಮ ನಾರಾಯಣ ಇತಿ ಸ್ಮ ಹ । ವಿಶೇಷತಃ ॥ (೪) ಸಮಸ್ತಾನಾಂ ನಾಮ್ನಾಂ ತಸ್ಯಾರ್ಥ ಏವ ಕು । ನಿಷ್ಠಾಯತೇ ಗುಣೈಃ ಪೂರ್ವಿರ್ನಾಮ ಸಾಮ್ಯಂ ತದಾ ತಥಾ ॥ ಇತಿ ಚ ॥ ನಾಮ್ನೋ ನಾರಾಯಣಾಖ್ಯಸ್ಯ ಗುಣೈಃ ಪೂರ್ವಿಃ ಪಿ ॥ (೫ ದೇವತಾಃ । ನಿಷ್ಠಾಯಾರ್ಥಮುಪಾಸ್ಯೈವ ಸರ್ವಾಧಿಕ್ಯಮವಾಪಿರೇ ॥ ಇತಿ ಚ ॥ ೧, ೨, ೩, ೪, ೫, ೬, ೭, ೮, ೯ ॥ ಇತಿ ನವಮಃ ಖಂಡಃ ॥ ೪–೯ ॥ ॥ ೫ ॥

೫ ॥ (೧ ಮನುಷ್ಯರನ್ನ ನೋಡಿದೊಡನೆ ಮೃಗಗಳು ಕೆದರುತ್ತವೆ ಮೃಗಗಳಿಗೆ ನರಸಿಂಹವು ಯಾವಾಗಲೂ ಮುಖ್ಯವಾಗಿ ಇರ್ತಯನು. ಆ ನರಸಿಂಹನು ಮೃಗಗಳನ್ನು ಕಾಪಾಡುವುದಕ್ಕಾಗಿ ಅರಣ್ಯ (ನಿಡಗಳ ಮೊದಲು ಗುಹೆಗಳಲ್ಲಿ ಯಾವಾಗಲೂ ನಾಸಿಕುತ್ತಾನೆ. (ನರಸಿಂಹನು ರಕ್ಷಕನೆಂದು ಮೃಗ

ಯಸ್ಮಿನ್ ನರಮೃಗಗಳೇ ರಕ್ಷಣೆಗೆಂದು ಮೃಗಗಳು ಒಟ್ಟಿಗೆ ಅಭ್ಯಾಸಕ್ಕಾಗಿ ನರಸಿಂಹನು ರಕ್ಷಕನೆಂದು ಮೃಗಗಳು ಒಟ್ಟಿಗೆ ಅಭಯವಿಲ್ಲ ಅವನು ಅಭಿಮಗಳು. ಇವರಗಳಮನಾಂದ ಪರಮಾತ್ಮನೆಗಳು ರಕ್ಷಿಸುವುದು ಕೊಡಲಾರದಾದ ಕಾರಣ ಪರ ನಿಂಹನೇ ರಕ್ಷಕನು

ಗಳಿಗೆ ಜ್ಞಾನವಿಲ್ಲದಿದ್ದರೂ ಅರಣ್ಯ ಗೆಡ್ಡೆಗಳಿಂದ ತಮಗೆ ರಕ್ಷಣೆಯಾಗುವುದೆಂದು ಅವುಗಳು ತಮ್ಮ ಸಮೀಪಕ್ಕೆ ಓಡಿಹೋಗುತ್ತವೆ. (೭) (ಅದೇ ಮುಕ್ತವಲ್ಲದ ತಸ್ಮಾತ್ತಾನ್ನಿದಧತಿ ಇತಾ ವಿಗಿ ಅರ್ಥ ಹೇಳುತ್ತಾರೆ--) ಪಿತೃಗಳಿಗೆ ಸಂಕರ್ಷಣನು ಅಭಯನು ಆದುದಕಾರಣ ಅವರಿಗೆ ಅಜ್ಜರೂ ಕೂಡ ಪಿಂಡ ಮೊದಲಾದವನ್ನು ಕೊಡುತ್ತಾರೆ. ಸಂಕರ್ಷಣನು ಅಭಯನಾಗದಿದ್ದರೆ ಮಕ್ಕಳು ಕೊಟ್ಟ ಪಿಂಡ ಮೊದಲಾದುದು ಮರಣಹೊಂದಿರುವ ತಂದೆತಾಯಿ ಮೊದಲಾದವರಿಗೆ ಹೇಗೆ ದೊರಕೀತು. (೮) (ಪುರು ೨೩ ಧಾಮ್ನದಲ್ಲಿ ಇತರಮೂರ್ತೀನಾಂ ಎಂಬುವಲ್ಲಿ ಜೀವ ಭಗವದ್ರೂಪಗಳಿಗೂ ಸರ್ವಗುಣ ಪೂರ್ಣರಾಗಿರುವುದೇಂದು ಹೇಳಿದೆ ಆ ವಿಷಯದಲ್ಲಿ ಪ್ರಮಾಣ ಹೇಳುತ್ತಾರೆ) ಭಗವದ್ರೂಪಗಳಿಗೆ ಗುಣ ಹೀನರೂ ನಾವುಂಡಿಂದಲೂ ವಿಶೇಷವಿಲ್ಲ. ಆದರೂ ಶ್ರೀಹರಿ ನಾರಾಯಣ ಎಂಬಿಗೆ ವಿಶೇಷವಾ ಪ್ರಿಯವಾದ ನಾಮವು. (೯) (ಜೀವಿ ನಾಮಗಳಲ್ಲಿ ಒಂದೊಂದು ನಾಮಕ್ಕೆ ನಾರಾಯಣ ಎಂಬ ನಾಮದ ಸಾಮ್ಯವಿಲ್ಲವಾದರೂ ಸಮಸ್ತ ನಾಮಗಳಿಗೆ ನಾರಾಯಣ ನಾಮದ ಸಾಮ್ಯವು ಬರಬಹುದು ಎಂದರೆ—) ನಾರಾಯಣ ಎಂಬ ನಾಮದ ಅರ್ಥವಾದ ಗುಣಪರಿಪೂರ್ಣತ್ವವೇ ಸಮಸ್ತ ನಾಮಗಳಿಗೂ ಅರ್ಥವೆಂದು ಬಗಾಗ ತಿಳಿಯುವುದೋ ಆಗ ಸಮಸ್ತ ನಾಮಗಳಿಗೆ ನಾರಾಯಣ ಎಂಬ ನಾಮದ ಸಾಮ್ಯವು ಬಂದೇ ಒದಗುವುದು. (೫) ವೇದತೆಗಳು ಇಂತಹ ಪ್ರಮೇಯವನ್ನು ತಿಳಿದು [illegible] ನಾರಾಯಣನನ್ನು ಪಾಸನೆ ಮಾಡಿದೆ. ಮುಮುಕ್ಷುಗಳಾದಿಗಳಿಂತ್ರವಾಗಿರುತ್ತಾರೆ. [illegible]

ಒಂಭತ್ತನೇ ಖಂಡದ ಸಮಗ್ರಯಾ

ನಿಂನೇ ಖಂಡ

ಹೀ- ಮಾವಸೆಸಿದ ಸಂಖ ರೂಪಗಳಲ್ಲಿ ಶ್ರೀಹರಿಯು ತನ್ನ ಎಲ್ಲಾ ರೂಪಗಳಲ್ಲಿಯೂ ಜ್ಞಾನ ಆನಂದ ಮೊದಲಾದ ಗುಣಗಳಿಂದ ಸಮಾನನು. ತನ್ನಂತೆ ಕೆಳಗಿನವರಾದ ಬ್ರಹ್ಮಾದ್ಯಾದಿಗಳಿಂದ ಸಾಮ್ಯವು ಎಂದಿಗೂ ಇಲ್ಲ ಇವರಿಂತ ಉತ್ತಮೋತ್ತಮನೆಂದು ಉಪಾಸನೆ ಮಾಡಬೇಕೆನ್ನುತ್ತಾರೆ—

ಉ. ॥ ಅಥ ಖಲ್ವಾತ್ಮಸಮ್ಮಿತಮತಿಮೃತ್ಯು ಸಪ್ತವಿಧೇ ಸಾಮೋಪಾ-
ಸೀತ ಹಿಂಕಾರ ಇತಿ ತ್ರ್ಯಕ್ಷರಂ ಪ್ರಸ್ತಾವ ಇತಿ ತ್ರ್ಯಕ್ಷರಂ ತತ್ಪ್ರವಂ ॥ ೧ ॥

ಅ ॥ ಮೂಲರೂಪದಿಂದ ಸಮಾನನೇ ಆದ ಮರಣವಿಲ್ಲದಿರುವ ಪ್ರದ್ಯುಮ್ನ, ವಾಸುದೇವ ವರಾಹ, ನಾರಾಯಣ, ಅನಿರುದ್ಧ, ನರಸಿಂಹ,ಸಂಕರ್ಷಣ ಹೀಗೆ ಏಳು ರೂಪಗಳುಳ್ಳ ಏಳು ನಾಮಗಳಿಂದ ವರ್ಣಿಸಲ್ಪಡತಕ್ಕ, ಪರಬ್ರಹ್ಮನನ್ನೇ ಉಪಾಸನೆ ಮಾಡಬೇಕು (ಭಗವದ್ರೂಪಗಳೆಲ್ಲವೂ ಜ್ಞಾನ ಆನಂದ ಒಳಗಳಿಂದ ಸಮಾನಗಳಾಗಿವೆಂಬುದನ್ನು ತೋರಿಸುತ್ತಾರೆ -) (ಹಿಂಕಾರ ಎಂಬಲ್ಲಿ ಮೂರು ಅಕ್ಷರಗಳು ಕ್ರಮವಾಗಿ ಜ್ಞಾನ, ಆನಂದ, ಬಲ ಎಂಬುವುದನ್ನು ಹೇಳುತ್ತವೆ. ಹೀಗೆಯೇ ಪ್ರಸ್ತಾವ ಮೊದಲಾದ ಎಲ್ಲಾ ಪದಗಳಲ್ಲಿಯೂ ಮೂರು ಅಕ್ಷರಗಳು ಕ್ರಮವಾಗಿ ಜ್ಞಾನ, ಆನಂದ, ಬಲ ಎಂಬ ಅರ್ಥಗಳನ್ನು ಹೇಳುತ್ತವೆ, ಅವುಗಳಲ್ಲಿ ವರ್ಣಿಸಲ್ಪಡುವ ರೂಪಗಳೆಲ್ಲವೂ ಸಮಾನಗಳೇ ಆಗಿವೆ ಎನ್ನುತ್ತಾರೆ--) ಹಿಂಕಾರ ಎಂಬಲ್ಲಿ ಮೂರು ಅಕ್ಷರಗಳು. ಪ್ರಸ್ತಾವ ಎಂಬಲ್ಲಿಯೂ ಮೂರು ಅಕ್ಷರಗಳು. ಎರಡರಲ್ಲಿಯೂ ಮೂರು ಮೂರು ಅಕ್ಷರಗಳು ಇದ್ದಕಾರಣ ಎರಡು ಪದಗಳೂ ಸಮಾನಗಳೇ. (ಈ ಪದಗಳಿಂದ ಹೇಳಲ್ಪಡುವ ಪ್ರದ್ಯುಮ್ನ ವಾಸುದೇವ ರೂಪಗಳಿಗೆ ಜ್ಞಾನಾದಿಗುಣಗಳು ಸಮಾನಗಳೇ ಆಗಿವೆ) ॥ ೧ ॥

ಉ. ॥ ಅದಿರಿತಿ ದ್ವ್ಯಕ್ಷರಂ ಪ್ರತಿಹಾರ ಇತಿ ಚತುರಕ್ಷರಂ ತತ ಇಜ್ಯೇಕಂ ತತ್ಸಮಂ ॥ ೨ ॥

ಅ ॥ ಅದಿ ಎಂಬ್ಲಿ ಎರಡು ಅಕ್ಷರಗಳು. ಪ್ರತಿಹಾರ ಎಂಬ್ಲಿ ನಾಲ್ಕು ಅಕ್ಷರ. ಅದಿ ಎಂಬ ನಾಮಪದದಲ್ಲಿ ಎರಡು ಅಕ್ಷರಗಳಿದ್ದರೂ ಪ್ರತಿಹಾರ ಎಂಬ ಅನಿಯಮ ನಾಮದಲ್ಲಿ ನಾಲ್ಕು ಅಕ್ಷರಗಳು ಇದ್ದಕಾರಣ ಆ ಪ್ರತಿಹಾರ ನಾಮದಿಂದ ಪ್ರ ಎಂಬ ಒಂದು ಅಕ್ಷರವನ್ನು ಅದಿ ಎಂಬ ನಾಮದಲ್ಲಿ ಸೇರಿಸಬೇಕು ಆಪಕಾರಣ ಎರಡು ನಾಮಗಳಲ್ಲಿಯೂ ಸಮಾನವಾಗಿರುವ ಅಕ್ಷರಗಳೇ ಆಗುವವು ಶ್ರೀಹರಿಯು ತನ್ನ ಎಲ್ಲ ರೂಪಗಳಲ್ಲಿಯೂ ಬ್ರಹ್ಮನ ಆಸನದ ಮೊದಲಾದ ಗುಣಗಳಿಂದ ಸಮನು (ಅಮುಖ್ಯವಾಹ ಆಸನದ ರೂಪಗಳಿಂದಲೂ ಬ್ರಹ್ಮನ ಆಸನದಲ್ಲಿಗಿಂದ ಸಮಾನಗಳು ಆಗಿವೆ) ॥ ೨ ॥

ಉ. ॥ ಉದ್ಗೀಥ ಇತಿ ತ್ರ್ಯಕ್ಷರಮುಪದ್ರವ ಇತಿ ಚತುರಕ್ಷರಂ ತ್ರಿಭಿಸ್ತ್ರಿಭಿಃ ಸಮಂ ಭವತ್ಯಕ್ಷರಮತಿಶಿಷ್ಯತೇ ತ್ರ್ಯಕ್ಷರಂ ತತ್ಸಮಂ ॥ ೩ ॥

ಅ ॥ ಉದ್ಗೀಥ ಎಂಬ್ಲಿ ಮೂರು ಅಕ್ಷರಗಳು. ಉಪದ್ರವ ಎಂಬ್ಲಿ ನಾಲ್ಕು ಅಕ್ಷರಗಳು. ಇವ್ವ ಮೂರು ಮೂರು ಅಕ್ಷರಗಳಿಂದ ಸಮಾನಗಳು. ಅದುಕಾರಣ ಉದ್ಗೀಥ ಎಂಬುವುದಕ್ಕಿಂತ ಪ್ರ ನಾರಾಯಣ ಎಂಬ ರೂಪಗಳು ಬ್ರಹ್ಮನ ಆಸನದ ಒಲಿಗಳಿಂದ ಸಮಾನಗಳು. ಉಪದ್ರವ ಎಂಬ್ಲಿ ನಾಲ್ಕು ಅಕ್ಷರವು ಹೆಚ್ಚಾಗಿದೆ ಅದು ಶ್ರೀಲಕ್ಷ್ಮೀಯರಮಣ ನಾರಾಯಣ ಎಂಬ ಎಂಟನೇ ರೂಪದ ನಾಮವು. ಅದರಲ್ಲಿಯೂ ಪಕಾರ ಅನಾ ವಿಸರ್ಗ ಮೂರು ಅಕ್ಷರಗಳು. ಬ್ರಹ್ಮನ ಆಸನದ ಒಲಿಗಳಿಂದ ಸಮಾನಗಳು ಆಗಿವೆ ॥ ೩ ॥

ಉ. ॥ ನಿಧನಮಿತಿ ತ್ರ್ಯಕ್ಷರಂ ತತ್ಸಮೋವ ಭವತಿ ತಾನಿ ಹ ವೈತಾನಿ ದ್ವಾವಿಂಶತಿರಕ್ಷರಾಣಿ ॥ ೪ ॥

ಅ ॥ ನಿಧನವೆಂಬ್ಲಿ ಮೂರು ಅಕ್ಷರಗಳು. ಆ ನಾಮವು ಬೇರೆ ನಾಮಗಳಿಗೆ ಸಮಾನವು ನಿಧನವೆಸಿಸಿದ ಸಂಕರ್ಷಣನೂ ಬ್ರಹ್ಮನಾಮಗಳಿಂದ ಬೇರೆ ಭಗವದ್ಮೂರ್ತಿಗಳಿಗೆ ಸಮಾನನು. (ಸಂಕರ್ಷಣರೂಪಗಳನ್ನು ಶ್ರೀಪಾಂಚರಾತ್ರಾಗಮದಲ್ಲಿ ಹೇಳಿರುವುದು. ಅಹಿರ್ಬುಧ್ನ್ಯಸಂಹಿತೆಯಲ್ಲಿ ಹೇಳಿಲ್ಪಟ್ಟಿದೆ.) ಶ್ರೀಪಾಂಚರಾತ್ರಾಗಮದಲ್ಲಿ ಸಂಕರ್ಷಣರ ರೂಪಗಳು ಒಂದೊಂದು ಮೂರು ಸಿಧನವಾಗಿ ಇದ್ದು ಒಟ್ಟು ಕೂಡಿ (೨೧) ಇಪ್ಪತ್ತೊಂದು. ಪ್ರಧಾನವಾಗಿರುವ ಶ್ರೀಸಾರಾಯಣನು (೧ ಒಂದು) ಜೊತೆಗೆ ಇಪ್ಪತ್ತೆರಡು ಭಗವನ್ನಾಮಗಳು. ಹೀಗಾಗಿ ಮೊದಲಾದ ಅಕ್ಷರಗಳು (೨೨) ಇಪ್ಪತ್ತೆರಡು ಭಗವದ್ಮೂರ್ತಿಗಳನ್ನು ಹೇಳುತ್ತವೆ ಸ್ಪಷ್ಟವಿದೆ.

ವಿ ॥ ಕೇಶವಾದಿ ೨೨. ಮತ್ಸ್ಯ ಮೊದಲಾದವು ೧೦ ಹೀಗೆ ೩೨ ಆದರೆ ಕೇಶವಾದಿಗಳು ೨೨ ಮಾನಸಗಳಿಗೆ ಅಧಿಪತಿಗಳು. ಮತ್ಸ್ಯ ಮೊದಲಾದ ನವರು ಇದು ಜೀವಿಗಳಿಗೆ ಅಧಿಪತಿಗಳು. ಪರಶುರಾಮ ಮೊದಲಾದವರುನಾಲ್ಕರು ಪೃಥಿವೀ ಅಂತರಿಕ್ಷ ಸ್ವರ್ಗ ಸಮುದ್ರಗಳಿಗೆ ಅಧಿಪತಿಗಳು. ೧೪ ॥

ಪೀ—೨೧. ೨೨ನೇ ಭಗವನ್ಮೂರ್ತಿಗಳನ್ನು ಉಪಾಸನೆ ಮಾಡಿದವಕ್ಕೆ ಫಲ ಹೇಳುತ್ತಾರೆ—

ಉ. ॥ ಏಕವಿಂಶತ್ಯಾದಿತ್ಯಮಾಪ್ನೋತ್ಯೇಕವಿಂಶೋ ವಾ ಇತೋಽಸಾವಾದಿತ್ಯೋ ದ್ವಾವಿಂಶೇನ ಪರಮಾದಿತ್ಯಾಜ್ಜಯತಿ ತನ್ನಾಕಂ ತದ್ವಿಶೋಕಂ॥೫॥

ಆ ॥ ನಂ ಎಂಬ ಎರಡು ಅಕ್ಷರದಿಂದ ಹೇಳಲ್ಪಡುವ ಕಲ್ಕಿ ಸಂಕರ್ಷಣ ರೂಪವನ್ನು ಪಾಸನೆ ಮಾಡಿದುದರಿಂದ ಆದಿತ್ಯನೊಳಗಣ ಆದಿತ್ಯನೆನಿಸಿದ ಕಲ್ಕಿ ಸಂಕರ್ಷಣ ರೂಪವನ್ನು ಹೊಂದುತ್ತಾನೆ. (ಎರಡು ಅಕ್ಷರದಿಂದ ಹೇಳಲ್ಪಡುವ ಕಲ್ಕಿಯೇ ಆದಿತ್ಯನೊಳಗಿರುವವನು. ಅವನನ್ನು ಪಾಸನೆ ಮಾಡಿದವನು ಆ ಶ್ರೀಹರಿಯ ಸಾರೂಪ್ಯ ಮೋಕ್ಷವನ್ನು ಹೊಂದುತ್ತಾನೆ ಎನ್ನುತ್ತಾರೆ.) ಆದಿತ್ಯನೊಳಗಣ ಕಲ್ಕಿಯು ಜೀವಶರೀರದ ಹೃದಯದಲ್ಲಿದ್ದ ಕೇಶವನನ್ನು ಹೊದಲುಗೊಂಡು ಜನಿಯವನು. (ಕ್ಷೀರಾಬ್ಧಿವಾಸಿ ಭಗವಂತನನ್ನು ಪಾಸನೆ ಮಾಡಿದವನಿಗೆ ಫಲ ಹೇಳುತ್ತಾರೆ.) **ವಃ** ಎಂಬ ಎರಡನೇ ಅಕ್ಷರದಿಂದ ಹೇಳಲ್ಪಡುವ ಕ್ಷೀರಾಬ್ಧಿವಾಸಿಯಾದ ಶ್ರೀಹರಿಯನ್ನು ಪಾಸನೆ ಮಾಡಿದುದರಿಂದ ಆದಿತ್ಯನೊಳಗಣ ರೂಪದಿಂದ ಬೇರೆಯಾದ ಕ್ಷೀರಸಮುದ್ರದ ಮಧ್ಯದಲ್ಲಿರುವ ಶ್ವೇತದ್ವೀಪದಲ್ಲಿರತಕ್ಕ ಶ್ರೀಹರಿಯ ಸಾಮೀಪ್ಯ ಮೋಕ್ಷವನ್ನು ಉಪಾಸಕನು ಹೊಂದುತ್ತಾನೆ. ಬೇರೆ ೨೦ ಅಕ್ಷರಗಳಿಂದ ಹೇಳಲ್ಪಡುವ ೨೦ ಭಗವದ್ರೂಪಗಳ ಉಪಾಸನೆಯಿಂದ ಆಯಾಯ ರೂಪಗಳ ಸಾಮ್ಯವನ್ನು ಅಂದರೆ ಸಾರೂಪ್ಯ ಮೋಕ್ಷವನ್ನು ಹೊಂದುತ್ತಾನೆ (ಆ ೨೦ ಭಗವದ್ರೂಪಗಳ ಮಹಿಮೆ ಹೇಳುತ್ತಾರೆ—) ಆ ೨೦ ಭಗವದ್ರೂಪಗಳೂ ಪ್ರಾಣಾದಿಯಂತೆ ಸ್ವರೂಪಗಳು. ಭಜಕರ ದುಃಖಗಳನ್ನು ಪರಿಹರಿಸತಕ್ಕವುಗಳು.

ಈ—ಏನು ಭಗವದ್ರೂಪಗಳನ್ನು ಪಾಸನೆ ಮಾಡಿದವನಿಗೆ ಫಲ ಹೇಳುತ್ತಾರೆ--

ಉ. ॥ ಆಪ್ನೋತೀಹಾದಿತಸ್ಯ ಜಯಂ ಪರೋ ಹಾಸ್ಯಾದಿತ್ಯಜಯಾಜ್ಜ-ಯೋ ಭವತಿ ಯ ಏತದೇವಂವಿದ್ವಾನಾತ್ಮನ್ಯಮ್ಮಿತಮಮಿತಮೃತ್ಯುಂ ಪಪ್ತವಿಧಂ ಸಾಮೋಪಾಸ್ತೇ ಸಾಮೋಪಾಸ್ತೇ ॥ ಇತಿ ದಶಮಃ ಖಂಡಃ ॥ ೪. ೧೦ ॥ ೬ ॥

ಆ ॥ ಜ್ಞಾನಾದಿಗುಣಗಳಿಂದ ಸಮಾನಗಳಾದ, ಮರಣವಿಲ್ಲದ ಮೊದಲು ಭಗವದ್ರೂಪಗಳನ್ನು ಹಿಂದೆ ಹೇಳಿದ ಪ್ರಕಾರ ತಿಳಿದು ಉಪಾಸನೆಮಾಡಿದವನು ಪೃಥಿವ್ಯಾದಿಗಳಲ್ಲಿರತಕ್ಕ ಭಾರ್ಗವ (ಪರಶುರಾಮ) ಮೊದಲಾದ ಭಗವದ್ರೂಪಗಳ ಸಾರೂಪ್ಯವನ್ನು ಹೊಂದುತ್ತಾನೆ (ಭಗವದ್ರೂಪಗಳಿಗೆ ಭೇದವಿಲ್ಲದಿರುವುದರಿಂದಲೇ) ಪರಶುರಾಮಾದಿಗಳ ಸಾರೂಪ್ಯವನ್ನು ಹೊಂದಿದವನೂ ಆದಿತ್ಯನೊಳಗಣ ಆದಿತ್ಯನೆನಿಸಿದ ಕಲ್ಕಿಸಂಕರ್ಷಣ ರೂಪದ ಸಾಮೀಪ್ಯವನ್ನು ಹೊಂದುತ್ತಾನೆ. ಆ ಆದಿತ್ಯನೆಂಬ ಭಗವದ್ರೂಪದ ಸಾರೂಪ್ಯವನ್ನು ಹೊಂದಿದುದರಿಂದ ಭಗವದ್ರೂಪಗಳಿಗೆ ಅಭೇದವಿದ್ದ ಪ್ರಯುಕ್ತವೇ ಉಪಾಸಕನು ಪೃಥಿವ್ಯಾದಿಗಳಲ್ಲಿರತಕ್ಕ ಭಗವದ್ರೂಪಸಾರೂಪ್ಯವನ್ನು ಹೊಂದುತ್ತಾನೆ. ೧೦ ॥ ॥ ೬ ॥

ಈ—ಇನೇ ಮಂತ್ರದ ಅರ್ಥ ಹೇಳುತ್ತಾರೆ –

ಭಾ. ॥ (೧) ಯಸ್ಯಾನ್ಯಃ ಸದೃಶೋ ನಾಸ್ತಿ ಸ್ವರೂಪಾದಿ ಸಮಾನಿ ಚ । ಸ ಆತ್ಮಸ-ಮ್ಮಿತೋ ವಿಷ್ಣುಃ ॥ (೨) ಅತಿಮೃತ್ಯುರಮೃತ್ಯುತಃ । ಪ್ರದ್ಯುಮ್ನಾದಿಸ್ವರೂಪೇಣ ಸ ವಿಷ್ಣುಃ ಸಪ್ತಧಾ ಸ್ಥಿತಃ ॥ (೩) ಸಮಾನಿ ತಾನಿ ಸರ್ವಾಣಿ ಜ್ಞಾನಾನಂದಬಲೈಸ್ತಥಾ । ಜ್ಞಾನಾದಿ-ತ್ರಯವಾಚೀನಿ ತ್ರ್ಯಕ್ಷರಾಣ್ಯಪಿ ಸರ್ವಶಃ । ಹಿಂಕಾರಾದೀನಿ ನಾಮಾನಿ ಸರ್ವೇಷಾಮಪಿ ಸರ್ವಶಃ ॥ ೧ ॥

ಆ ॥ (೧) ಇವನಿಗೆ ಸದೃಶನಾದವನು ಇನ್ನೊಬ್ಬನು ಇಲ್ಲವೋ, ಯಾರ ಸ್ವರೂಪಗಳು ಸಮಾನವಾಗಿವೆಯೋ (ಅಂದರೆ—ಒಂದು ಭಗವದ್ರೂಪದಲ್ಲಿ ಬೇರೆ ಭಗವದ್ರೂಪಗಳ ಗುಣಗಳಿರುವಿಕೆ.)

ಅರವ. ಅಕ್ಷರವಿನ್ಯಾಸ. (೭) ಮಂತ್ರಗಳ್ಳಿರುವುದರಿಂದ ಅತಿಮ್ಯಸ್ಥನೆನಿಸುವವನು. ಧೃಮ್ಯವ್ಯ ನಾಗಿದ್ದೇವ. ಮಂತ್ರ ನಾಗಿರುವ. ಎಂದರೆ ಸ್ವರೂಪ. ಸಂಗತಿಗಳು ಎಂದ. ವಿದ್ಯುತ್ತಿಗೆ ಸಂಬಂಧಿಸಿದ ಮಂತ್ರಗಳು ಇಷ್ಟೆಲ್ಲವನ್ನೂ ಎಂಬ ಇದು ವಾಕ್ಯಗಳ ಅರ್ಥ ಹೇಳಿಕ್ಕಾಗಿದೆ. ಎಲ್ಲಾ ಮಂತ್ರಗಳೂ ಸಮಾನವಲ್ಲ. ಹಿಂಕಾರ ಇತಿ ತ್ರೈಕ್ಷರಂ ಇತ್ಯಾದಿಗಳ ಅರ್ಥ ಹೇಳಿಕ್ಕಾಗಿದೆ.)ಮೂರು ಮೂರು ಅಕ್ಷರಗಳುಳ್ಳ ಹಿಂಕಾರ ಮೊದಲಾದ ಎಲ್ಲಾ ನಾಮಗಳೂ ಎಲ್ಲಾ ಪ್ರಕರಣಗಳಲ್ಲಿಯೂ ಪ್ರಾಣ ಅನಂತ ಒಳಗಳನ್ನು ಹೇಳುತ್ತವೆ ಎಂದರ್ಥ ಅವರು. ಪ್ರಾಣಾದಿಗಳಿಂದ ಸಮಾನರಾಗಿ. ...ಕಾರಾದಿ ನಾಮಗಳಲ್ಲಿ ಶ್ರುತಿಯಾಗಿರುವ ಪ್ರಾಣಾದಿಗಳನ್ನು ಹೇಳುತ್ತವೆ. ॥ ೭ ॥

ಪೀ — ಮಂತ್ರದಲ್ಲಿ ಮಂತ್ರಗಳ ಅರ್ಥ ಹೇಳಿಕ್ಕಾಗಿದೆ. ಅರ್ಥದ ಆದಿ ಎಂದರೆ ಎರಡು ಅಕ್ಷರಗಳು. ಪ್ರತಿಹಾರ ಎಂದರೆ ನಾಲ್ಕು ಅಕ್ಷರಗಳು. ಇದೇ ಕಾರಣ ಇದು ಎಂದು ಬರುವ ವಿಶೇಷವನ್ನು ಸೇರಿಸಿ ಹೇಳಿದರೆ.

ಭಾ. ॥ (೧) ಆದಿನಾಮ್ನಃ ಪ್ರಕಾರಸ್ತು ಯೋಜ್ಯಃ ಸ್ಯಾತ್ಪ್ರತಿಹಾರತಃ । ಶೇಷಸ್ತು ತ್ರೈಕ್ಷರಮೇವ ನಾಮ್ನಾಮುದ್ಗಯನಮಿತಿ ಪ್ರಭೋಃ ॥ (೨) ಉಗಾದಿನೇ ತು ವಾಕಾಯೋಃ ಯಜ್ಯಸಿ ವ್ಯತಿರಿಚ್ಯತೇ । ನಾಮ ನಾರಾಯಣಸ್ಯೈವ ಸೋಽಸಿ ಕ್ಷೀರಾಬ್ಧಿಶಾಯಿನಃ ॥ ವ್ಯಂಜನಸ್ವರಸಂಗ್ಯೆಷ್ಟು ಸೋಽಸಿ ಜ್ಞಾನಾದಿವಾಚಕಃ । ತ್ರಿನರ್ಣಾತ್ಮಕನು ಸೋಽಸಿ ಜ್ಞಾನಾದ್ಯೈಃ ಪುರುಷೋತ್ತಮಃ ॥ (೩) ಮಕಾರಾರ್ಥಪರಿಜ್ಞಾನಾತ್ ಪ್ರಾಪ್ನೋತಿ ಶ್ರೀಪತಿಯನಃ ಪ್ರಭುಃ । ಏಕನಿಂಶಾರ್ಣವಿಜ್ಞಾನಾತ್ ಪ್ರಾಪ್ನೋತಿ ಸೂರ್ಯಮಂಡಲೇ ॥ ೭ ॥

ಅ ॥ ೧ ॥ ಪ್ರತಿಹಾರ ಎಂಬ ನಾಮದಿಂದ ಆದಿ ಎಂಬ ನಾಮದಲ್ಲಿ ಪ್ರ ಎಂಬ ಮೂರು ಅಕ್ಷರವನ್ನು ತೆಗೆದುಕೊಳ್ಳಬೇಕು. ಪ್ರ ಆದಿ ಅದನು ಸೃಷ್ಟಿ ಎನ್ನುವಲ್ಲಿಂದ ನಾಮವು ತಿಹಾರ ಎಂಬುವ ಹೊಂದು ನಾಮ. ಇಲ್ಲಿ ತ್ರೈಕ್ಷರವು ಎಂದು ನಾಮಗಳು. ಮೂರು ಅಕ್ಷರಗಳೇ ಆಗುವುವು (೨) ಅಕ್ಷರ ಮಾತಿತಿಷ್ಯತೇ ಎಂಬ ಸಾಲ್ಕನೇ ಮಂತ್ರದ ಅರ್ಥ ಹೇಳಿಕ್ಕಾಗಿದೆ) ಉಪದೃವ ಎಂಬಲ್ಲಿ ವ ಎಂಬುದು (ಮೂರು ಅಕ್ಷರಗಳಿಂದ) ಕೆಳ್ಳು ಇದೆ ವ ಎಂಬುದು ಕ್ಷೀರಾಬ್ಧಿಶಾಯಿಯಾದ ನಾರಾಯಣನಿಗೆ ಕೆಸರು (ವ ಎಂಬಲ್ಲಿಯೂ ಮೂರು ಅಕ್ಷರಗಳು ಇವೆ ಎನ್ನಬಹುದು. ವಕಾರ. ಅಕಾರ. ವಿಸರ್ಗ. ಇವುಗಳಿಂದ ವ ಎಂಬುವಲ್ಲಿಯೂ ಮೂರು ಅಕ್ಷರಗಳು. (ಓಂಕಾರವಿದಗಳು ಮಾತ್ರ ಅಲ್ಲ) ವಕಾರವು ಸಾಧ ಜ್ಞಾನ ಅನಂದ ಒಳಗಳನ್ನು ಹೇಳುತ್ತವೆ (ಪ್ರದು ಮಾತ್ರವಿದಗಳು. ಮಾತ್ರ ಅಲ್ಲ) ವ ಎಂಬ ಸೃಷ್ಟಿ ಕೊಂಡ ಕ್ಷೀರಾಬ್ಧಿಶಾಯಿಯಾದ ಶ್ರೀನಾರಾಯಣನು ಸಾಧ ಜ್ಞಾನ ಅನಂದ ಒಳಗಳಿಂದ ಸಮಾನನು. (೩) (ಯನೇ ಮಂತ್ರದಲ್ಲಿರುವ ದ್ಯಾನಿಂಶೇನ ಪರವಾದಿತ್ಯಾಜ್ಜಯತಿ ಎಂಬುದರ ಅರ್ಥ ಹೇಳಿಕ್ಕಾಗಿದೆ -) ವ ಎಂಬ ಎರಡನೇ ಅಕ್ಷರವನ್ನು ತೆಗೆದುಕೊಂಡು ಕ್ಷೀರಾಬ್ಧಿಶಾಯಿಯಾದ ಶ್ರೀನಾರಾಯಣನನ್ನು ಹೊಂದುವರು. (ವಿಕನಿಂಶತ್ಯಾ ಆದಿತ್ಯಮಾಪ್ನೋತಿ ಎಂಬುದರ ಅರ್ಥ ಹೇಳಿಕ್ಕಾಗಿದೆ) ಇಪ್ಪತ್ತೊಂದು ಅಕ್ಷರಗಳಿಂದ ವರ್ಣಿಸಲ್ಪಡುವ ಭಗವದ್ರೂಪಗಳನ್ನು ತಿಳಿದುಕೊಂಡು ಸೂರ್ಯಮಂಡಲದಲ್ಲಿರುವ ಶ್ರೀಹರಿಯನ್ನು ಹೊಂದುವರು. ॥ ೭ ॥

ಪೀ — ನೇ ಮಂತ್ರದಲ್ಲಿರುವ ದ್ಯಾನಿಂಶತಿರಕ್ಷರಾಣಿ ಎಂಬುದರ ಅರ್ಥ ಹೇಳಿಕ್ಕಾಗಿದೆ —

ಭಾ. ॥ (೧) ಸ ಏವ ಭಗವಾನ್ವಿಷ್ಣುರ್ದ್ಯಾನಿಂಶದ್ರೂಪವಾನ್ಯತಃ । ತಾನ್ಯೇವ ಸಪ್ತ ರೂಪಾಣಿ ವಿಭಿದ್ಯಂತೇ ತ್ರಿಧಾ ತ್ರಿಧಾ । ಏಕಃ ಪಯೋಬ್ಧಿಶಯನ ಇತಿ ದ್ಯಾನಿಂಶತಿಃ ಪ್ರ–

ಭೋಃ ॥ (೨) ಪ್ರದ್ಯುಮ್ನಾದ್ಯಾಸ್ತು ಚತ್ವಾರೋ ದ್ವಿಷಣ್ಣಾಮೇಷು ಸಂಸ್ಥಿತಾಃ । ತ್ರಿರಷ್ಟಿರಃ ಕೇಶವಾದ್ಯಾಃ ॥ (೩)ವಸಂತಾದಿಷು ಪಂಚಮಃ । ರೂಪದ್ವಯಂ ತು ಷಷ್ಠಸ್ಯ ಸ್ಥಿತಂ ಮತ್ಸ್ಯಾದಿಷಂಚಕಂ । ತೃತೀಯಂ ಪೃಥಿವೀಸಂಸ್ಥಂ ಜಾಮದಗ್ನ್ಯಮಿಮೇವ ತತ್ । ಅಂತರಿಕ್ಷದ್ಯುಸೂರ್ಯೇಷು ಸಪ್ತಮಸ್ಯ ತ್ರಿಧಾ ತನುಃ । ರಾಮಃ ಕೃಷ್ಣಃ ಕಲ್ಕಿರಿತಿ ತಜ್ಜ್ಞಾನಾತ್ತಾನ್ಯವಾಪ್ಯ ಚ । ದ್ವಾನಿಂಶೇನ ಪಯೋಬ್ಧಿಸ್ಥಂ ಪ್ರಾಪ್ಯತೇ ರೂಪಮಕ್ಷರಂ ॥ (೫) ಏತದ್ದ್ವಾವಿಂಶಕಂ ರೂಪಂ ನಾಕಂ ಚಾಸುಖವರ್ಜನಾತ್ । ಪೂರ್ಣಾನಂದಸ್ವರೂಪತ್ವಾದ್ವಿಶೋಕಂ ಶೋಕನಾರನಾತ್ ॥ ಇತಿ ಸಾಮಸಂಹಿತಾಯಾಂ ॥ ೩ ॥

ಅ ॥ ಆ ಮೇಲೆ ಬ್ರಹ್ಮಾಂಡದಲ್ಲಿ ಆದಿತ್ಯ (ಸೂರ್ಯ)ನು ಹುಟ್ಟಿದನು. ಆದಿತ್ಯನೆನಿಸಿದ ಜೀವನಿಗೆ ನಿಯಾಮಕನಾದ. ಆದಿತ್ಯಮಂಡಲದೊಳಗಣ ಆದಿತ್ಯನೆನಿಸಿದ ಶ್ರೀಹರಿಯು ನಿಯಾಮಕನಾಗಿರುತ್ತಾನೆ. ಅದುಕಾರಣ ಆದಿತ್ಯನೆನಿಸಿದ ಶ್ರೀಹರಿಯನ್ನು ಪರಬ್ರಹ್ಮನೆಂದು ಉಪಾಸನೆ ಮಾಡಬೇಕು. ಪ್ರಕಟ ನಾಗುವ ಆದಿತ್ಯಮಂಡಲದೊಳಗಣ ಶ್ರೀಹರಿಯನ್ನು ಅನುಸರಿಸಿ ಗಾಯತ್ರೀ ಮೊದಲಾದ ವೇದಗಳ ಅಭಿ ಮಾನಿ ದೇವತೆಗಳಾದ ಋಷಿಗಳೂ ಬ್ರಹ್ಮ ರುದ್ರ ಮೊದಲಾದ ಎಲ್ಲಾ ದೇವತೆಗಳೂ ಎಲ್ಲಾ ಮಂಗಲದ್ರವ್ಯಗಳೂ ಅಭಿ ವ್ಯಕ್ತಿಗಳಾದವು. ಬ್ರಹ್ಮ ರುದ್ರ ಮೊದಲಾದ ಎಲ್ಲಾ ದೇವತೆಗಳು ಗಂಧಾಕ್ಷತ ಪುಷ್ಪ ಮೊದಲಾದ ಮಂಗಲದ್ರವ್ಯಗಳನ್ನು ಸಮರ್ಪಿಸಿ ಗಾಯತ್ರೀ ಮೊದಲಾದ ವೇದಧ್ವನಿಗಳಿಂದ ಸ್ತೋತ್ರಮಾಡಿದರು. ಬ್ರಹ್ಮಾದಿಗಳು ಹೀಗೆ ಮಾಡಿದ ಕಾರಣ ಆ ರೀತಿಯನ್ನೇ ಅನುಸರಿಸಿ ಈಗಿನ ಜೀವರೂ ಆದಿತ್ಯನ ಉದಯ ಅಸ್ತಮಾನಗಳಲ್ಲಿ ಗಾಯತ್ರೀ ಮೊದಲಾದ ವೇದಧ್ವನಿಗಳಿಂದ ಸ್ತುತಿಸಿ ಗಂಧಾಕ್ಷತ ಮೊದಲಾದ ಮಂಗಲ ದ್ರವ್ಯಗಳಿಂದ ಪೂಜಿಸಿ ಅಭೀಷ್ಟಗಳನ್ನು ಹೊಂದುತ್ತಾರೆ. ॥ ೩ ॥

* (1) ಅತಲ ವಿತಲ ಸುತಲ ತಲಾತಲ ರಸಾತಲ ಮಹಾತಲ ಪಾತಾಳ, ಹೀಗೆ ಕೆಳಗಿನ ೭ ಲೋಕಗಳು
(2) ಭೂಃ ಭುವಃ ಸುವಃ ಮಹಃ ಜನಃ ತಪಃ ಸತ್ಯಂ ಎಂದು ಮೇಲಿನ ೭ ಲೋಕಗಳು.

ಪೀ—ಇದನ್ನು ತಿಳಿದವನಿಗೆ ಫಲ ಹೇಳುತ್ತಾರೆ

ಉ. ॥ ಸ ಯ ಏತದೇವಂ ವಿದ್ವಾನಾದಿತ್ಯಂ ಬ್ರಹ್ಮೇತ್ಯುಪಾಸ್ತೇಽಭ್ಯಾ-ರೋ ಹ ಯದೇನ಴ ಸಾಧವೋ ಹೋಷಾ ಆ ಚ ಗಚ್ಛೇಯುರುಪ ಚ ನಿ-ಮ್ರೋದೇರನ್ನಿಮ್ರೋದೇರನ್ ॥ ಇತ್ಯೇಕೋನವಿಂಶಃ ಖಂಡಃ ॥ ೫–೧೯ ॥ ಇತಿ ಶ್ರೀಮಚ್ಛಾಂದೋಗ್ಯೋಪನಿಷದಿ ಪಂಚಮೋಽಧ್ಯಾಯಃ ॥ ೫ ॥ ॥ ೪ ॥

ಅ ॥ ಹಿಂದೆ ಹೇಳಿದ ಪ್ರಕಾರ ತಿಳಿದು ಆದಿತ್ಯನೊಳಗಣ ಪರಬ್ರಹ್ಮನನ್ನು ಧ್ಯಾನ ಮಾಡುವವನಿಗೆ ಪ್ರಾಪ್ತಗಳಾದ ವೇದಪ್ರಸಿದ್ಧಗಳು ಒಂಬಾಗುತ್ತವೆ. (ವೇದಾರ್ಥಗಳನ್ನು ಚೆನ್ನಾಗಿ ತಿಳಿದವನಾಗುತ್ತಾನೆ.) ಮತ್ತು ಸೋಪ್ಪದಲ್ಲಿ ವೇದಾಧ್ಯಯನದಿಂದುಂಟಾದ ಪೂರ್ಣ ಫಲವನ್ನು ಹೊಂದುತ್ತಾನೆ ॥ ೫–೧೯ ॥ ೫ ॥

ಪೀ—'ನೇ ಮಂತ್ರದಲ್ಲಿನ ಅಸದೇನೇದಮಗ್ರ ಆಸೀತ್ ಎಂಬ ವಾಕ್ಯಕ್ಕೆ ಅರ್ಥ ಹೇಳುತ್ತಾರೆ.

ಭಾ. ॥ (೧) ಅಗಮ್ಯತ್ವಾದಸನ್ನಾಮ ಬ್ರಹ್ಮ ನಾರಾಯಣಾಭಿಧಂ । ಪ್ರಲಯೇ ವಾಸುದೇವಾಖ್ಯಂ ಗಮ್ಯಂ ಸದಭವದ್ವಿದಾಂ ॥ (೨) ತತ ಕೃತ್ಯಾ ಸಮಭವತ್ತತ ಆಂಡ-ಮಜಾಯತ । ತಸ್ಮಿನ್ನಾದಿತ್ಯನಾಮಾಸಾವಭವತ್ಸೂರ್ಯಮಂಡಲೇ । ನಿಯಂತೈವ ಚ ಸೂರ್ಯಸ್ಯ ಭಗವಾನ್ ಪುರುಷೋತ್ತಮಃ ॥ (೩) ತಸ್ಮಾದಾದಿತ್ಯನಾಮಾನಮಾದಿತ್ಯಸ್ಥಂ ಜನಾರ್ದನಂ । ಬ್ರಹ್ಮೋಪಾಸೀತ ಪರಮಂ ಸರ್ವವೇದಜ್ಞತಾ ತತಃ ॥ ಇತಿ ಬ್ರಹ್ಮತತ್ತ್ವೇ॥ (೪) ಉಲೂಲವ ಉರೂರನಃ । ಅತಿಮಹಾಂತೋ ಗಾಯತ್ರ್ಯಾದಿಶೋಷಾಃ ಉಪ ಚ ನಿಮ್ರೋದೇರನ್ । ಮುಕ್ತೇ ತಸ್ಮಿನ್ನೇವ ವಸೇಯುಃ ॥ (೫) ಸೂರ್ಯಬಿಂಬಸ್ಥಿತೇ ವಿಷ್ಣೌ ಜಾಯಮಾನೇ ಪರಾತ್ಮನಿ । ಗಾಯತ್ರೀಪೂರ್ವಕೈರ್ವೇದೈರ್ಬ್ರಹ್ಮಾದ್ಯಾಸ್ತಮುಪಸ್ಥಿತಾಃ ॥ ಉಪತಿಷ್ಯಂತ್ಯಶೋ ನಿತ್ಯಂ ಗಾಯತ್ರ್ಯಾದಿಭಿರಂಜಸಾ । ತದ್ವಿದ್ವಾನ್ಮುಕ್ತ ಆವಾಸೋ ವೇದಾನಾಂ ಸರ್ವದಾ ಭವೇತ್ ॥ ಇತಿ ಚ ॥ ೧,೨,೩,೪ ॥ ಇತ್ಯೇಕೋನವಿಂಶಃ ಖಂಡಃ ॥ ॥ ೫–೧೯ ॥ ॥ ೧ ॥

ಅ ॥ (೧) ಪ್ರಲಯಕಾಲದಲ್ಲಿ ನಾರಾಯಣನೆನಿಸಿದ ಪರಬ್ರಹ್ಮನು ಯಾರಿಂದಲೂ ಹೊಂದಲ್ಪಡದಿರುವುದರಿಂದ ಅಸತ್ ಎನಿಸಿಕೊಂಡನು. ಆ ನಾರಾಯಣನು ಜ್ಞಾನಿಗಳಿಂದ ಹೊಂದಲ್ಪಡುವುದರಿಂದ ಸತ್ ಎನಿಸಿದ ವಾಸುದೇವನಾಗಿ ಅವತರಿಸಿದನು. (೨) ವಾಸುದೇವನು ಲಕ್ಷ್ಮೀರೂಪಳಾದ ಮಾಯೆಯಿಂದ ಸಂಭೋಗ ಮಾಡಿದನು. ಸಂಭೋಗಾನಂತರದಲ್ಲಿ * ಕತ್ತಲ್ಸ್ಪಷ್ಟ್ಯದಿಗಳಾಗಿ ಬ್ರಹ್ಮಾಂಡವು ಹುಟ್ಟಿತು. ಬ್ರಹ್ಮಾಂಡದಲ್ಲಿ ಆದಿತ್ಯನು ಹುಟ್ಟಿದನು. ಆದಿತ್ಯಮಂಡಲದಲ್ಲಿದ್ದ ಸೂರ್ಯನಿಗೆ ನಿಯಾಮಕನೂ ಆದಿತ್ಯಮಂಡಲದಲ್ಲಿದ್ದವನೂ ಆಗಿ ಆದಿತ್ಯನೆನಿಸಿದ ಪುರುಷೋತ್ತಮನಾದ ಶ್ರೀಹರಿಯು ಪ್ರಕಟನಾದನು. (೩ನೇ ಮಂತ್ರದಲ್ಲಿ ಬ್ರಹ್ಮಾದಿ ಸಮಸ್ತ ದೇವತೆಗಳಿಂದ ಸೇವಿಸಲ್ಪಡುವವನೆಂದು ಹೇಳಿದ ಕಾರಣ ಪುರುಷೋತ್ತಮನಾದ ಭಗವಂತನೇ ಆದಿತ್ಯನೆನಿಸಿದವನು. ಪ್ರಸಿದ್ಧ ಸೂರ್ಯನಲ್ಲ.) (೪) ಅವಕಾರಣ ಆದಿತ್ಯನೊಳಗಣ ಆದಿತ್ಯನೆನಿಸಿದ ಜನಾರ್ದನನನ್ನು ಪರಬ್ರಹ್ಮನೆಂದು ಬ್ರಹ್ಮಾಸನೆಮಾಡಬೇಕು. ಆದರಿಂದ

* ಇದಪ್ರಕೃತಿಯಿಂದ ಕತ್ತ್ವರಜಸ್ತಮೋಗುಣಗಳು, ಅವುಗಳಿಂದ ಮಸತ್ತತ್ತ್ವ, ಅದರಿಂದ ವೈಕಾರಿಕ ತೈಜಸ ತಾಮಸ ವೆಂಬ ಅಹಂಕಾರತತ್ತ್ವ ಅದರಿಂದ ದೈವದೇಹ, ಮನಸ್ಸು, ದಶೇಂದ್ರಿಯ, ಆಕಾಶ,ವಾಯು,ತೇಜಸ್ಸು,ಜಲ,ಪೃಥಿವೀ ಇತ್ಯಾದಿ.

ಸಮಸ್ತ ವೇದಗಳ ತತ್ತ್ವಜ್ಞಾನಿಯಾಗುತ್ತಾನೆ, ಎಂದು ಬ್ರಹ್ಮತತ್ತ್ವವೆಂಬ ಗ್ರಂಥದಲ್ಲಿದೆ. (೪) ಉಲೂಲವಃ=ಉತ್ಕೃಷ್ಟವಾದ ಧ್ವನಿಯು ಅತಿದೊಡ್ಡದಾದ ಗಾಯತ್ರೀ ಮೊದಲಾದ ವೇದಗಳ ಧ್ವನಿಗಳು ಪೂರ್ಣಗಳಾಗಿ ಮುಕ್ತನಲ್ಲಿಯೇ ಇರುತ್ತವೆ. (೫) ಸೂರ್ಯಮಂಡಲದಲ್ಲಿರುವ ಪರಮಾತ್ಮನು ಪ್ರಕಟಾಗಲು ಬ್ರಹ್ಮ ರುದ್ರ ಮೊದಲಾದ ದೇವತೆಗಳು ಗಾಯತ್ರೀ ಮೊದಲಾದ ವೇದಗಳಿಂದ ಸ್ತೋತ್ರ ಮಾಡುತ್ತಾ ಸವಿಾಪದಲ್ಲಿ ನಿಲ್ಲುತ್ತಾರೆ. ಅದುಕಾರಣ ಈಗಿವರೂ ಕೂಡ ಜ್ಞಾನಿಗಳಾಗಿ ಗಾಯತ್ರೀ ಮೊದಲಾದವುಗಳಿಂದ ನಿತ್ಯದಲ್ಲಿಯೂ ಆದಿತ್ಯನೊಳಗಣ ಶ್ರೀಹರಿಯನ್ನು ತಿಳಿದು ಧ್ಯಾನಿಸಿ ಮುಕ್ತರಾಗುತ್ತಾರೆ. ಸರ್ವದಾ ವೇದಾರ್ಥಗಳನ್ನು ಜ್ಞಾನಿಗಳಿಂದ ತಿಳಿದವರು ಆಗುತ್ತಾರೆಂದು ಹೇಳಿದೆ. ॥ ೧, ೨, ೪ ॥ ೫-೧೯ ॥

ಹತ್ತೊಂಭತ್ತನೇ ಖಂಡವು ಮುಗಿಯಿತು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಚ್ಛಾಂದೋಗ್ಯ ಉಪನಿಷದ್ಭಾಷ್ಯೇ ಪಂಚಮೋಽಧ್ಯಾಯಃ ॥ ೫ ॥

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಛಾಂದೋಗ್ಯ ಉಪನಿಷದ್ಭಾಷ್ಯದಲ್ಲಿ ಐದನೇ ಅಧ್ಯಾಯವು ಮುಗಿಯಿತು. ॥ ೫ ॥

ಸುಖಮುಖಗುಣಪೂರ್ಣಂ ಸರ್ವದೋಷಾತಿತೀರ್ಣಂ
ಶ್ರುತಿಮತಿರತಿಮದ್ಭಿರ್ಗಮ್ಯಮಾದ್ಯಾದಿಸದ್ಭಿಃ ।
ನಿಖಿಲನಿಗಮವೇದ್ಯಂ ನಿರ್ಜರಾರಾಧ್ಯಮಾದ್ಯಂ
ನವನಲಿನಸುನೇತ್ರಂ ನೌಮಿ ಲಕ್ಷ್ಮೀಕಳತ್ರಂ ॥

ಯೋಽಂತಃ ಸ್ಥಿತ್ವಾ ಸರ್ವಕರ್ಮಕರ್ತಾ ಸ ಭಗವಾನ್ ಪ್ರಭುಃ ।
ಪ್ರೀತೋಽಸ್ತ್ವನೇನ ಮಧ್ವೇಶೋ ರೂಪ್ಯಪೀಠಗತೋ ಹರಿಃ ॥

॥ ಶ್ರೀಃ ॥

ಆರನೇ ಅಧ್ಯಾಯವು

ಅಪರಂ ಬ್ರಹ್ಮ ವಾಯುಂ ಚ ಪರಂ ಬ್ರಹ್ಮ ಸುಖಾಧಿಕಂ ।
ವಾಸುದೇವಾದಿರೂಪಂ ಚ ವಾಮನಂ ಜ್ಞಾನಿಕಂ ಭಜೇ ॥
ಧಾರತೀಶ ನಮಸ್ತುಭ್ಯಂ ರಾಮಪ್ರಿಯ ನಮೋಽಸ್ತು ತೇ ।
ನಮಸ್ತೇ ದ್ರೌಪದೀಕಾಂತ ವ್ಯಾಸತಿಷ್ಯ ನಮೋಽಸ್ತು ತೇ ॥

●

ಇನೇ ಖಂಡವು

ಪೀ— ಇದನೇ ಅಧ್ಯಾಯದ ಅಂತ್ಯದಲ್ಲಿ ಪ್ರಕಾಶಾದಿ ಗುಣಗಳನ್ನು ಕೊಡುವ ವಿದ್ಯೆಯನ್ನು ಹೇಳಿರುವರು. ಇಲ್ಲಿ ಸಾರ್ವಜ್ಞಾದಿಗಳನ್ನು ಕೊಡುವ ಸಂವರ್ಗವಿದ್ಯೆಯನ್ನು ಹಿಂದಿನ ಕಥೆಯನ್ನು ಹೇಳಿಕೊಂಡು ಹೇಳುತ್ತಾರೆ —

ಉ. ॥ ಓಂ ॥ ಜಾನಶ್ರುತಿರ್ಹ ಪೌತ್ರಾಯಣಃ ಶ್ರದ್ಧಾದೇಯೋ ಬಹುದಾಯೀ ಬಹುಪಾ(ವಾ)ಕ್ಯ ಆಸ ಸ ಹ ಸರ್ವತ ಆವಸಥಾನ್ ಮಾಪಯಾಂಚಕ್ರೇ ಸರ್ವತ ಏವ ಮೇಽತ್ಸ್ಯಂತೀತಿ ॥ ೧ ॥

ಅ ॥ ಬ್ರಾಹ್ಮಣಾದಿಗಳಿಗೆ ಕೊಡುವ ವಸ್ತುವನ್ನು ಶ್ರದ್ಧೆಯಿಂದ ಕೊಡುವವನೂ, ಯಜ್ಞೇಷ್ಟವಾಗಿ ದಾನಮಾಡುವವನೂ ಒಹುಮಾನದಿಂದ ಮಾತನಾಡುವವನೂ ಅಥವಾ ಬಹುಶಾಸ್ತ್ರ ಶ್ರವಣಮಾಡಿದವನೂ ಅಥವಾ ಪ್ರತಿದಿನದಲ್ಲಿಯೂ ಅನ್ನಾರ್ಥಿಗಳಿಗೆ ಬಹುವಿಧ ವಾಕ್ಯಮಾಡಿಸುವವನೂ ಇಂತಹ ಪೌತ್ರಾಯಣನ ಗೋತ್ರದಲ್ಲಿ ಹುಟ್ಟಿದ. ಜನಶ್ರುತನ ಮಗನಾದ ಜಾನಶ್ರುತಿ ಎಂಬ ರಾಜನು *ಪ್ರತಿಷ್ಠಾನ ಎಂಬ ಪಟ್ಟಣದಲ್ಲಿದ್ದನು. ಆ ಜಾನಶ್ರುತಿಯು ಜನರು ಎಲ್ಲಾ ದಿಕ್ಕುಗಳಿಂದ ಬಂದು ನನ್ನ ಅನ್ನವನ್ನು ಮನೆಗಳಲ್ಲಿ ಅವಾಸಮಾಡುತ್ತಾ ಭುಂಜಿಸಲಿ ಎಂಬ ಬುದ್ಧಿಯಿಂದ ಎಲ್ಲಾ ದಿಕ್ಕುಗಳಲ್ಲಿಯೂ ಗ್ರಾಮಗಳಲ್ಲಿಯೂ ನಗರಗಳಲ್ಲಿಯೂ ಅವಾಸಮಾಡಲಿಕ್ಕೆ ಯೋಗ್ಯಗಳಾದ ಅನ್ನಛತ್ರಮನೆಗಳನ್ನು ಕಟ್ಟಿಸಿದನು. ॥ ೧ ॥

ಉ. ॥ ಅಥ ಹ ಹಂಸಾ ನಿಶಾಯಾಮತಿಪೇತುಸ್ತದ್ಧೈವಮೇ ಹಂಸೋ ಹಂಸಮಭ್ಯುವಾದ ಹೋ ಹೋಯೇ ಭಲ್ಲಾಕ್ಷ ಭಲ್ಲಾಕ್ಷ ಜಾನಶ್ರುತೇಃ ಪೌತ್ರಾಯಣಸ್ಯ ಸಮಂ ದಿವಾ ಜ್ಯೋತಿರಾತತಂ ತನ್ಮಾ ಪ್ರಸಾಂಕ್ಷೀಸ್ತತ್ತ್ವಾ ಮಾ ಪ್ರಧಾಂಕ್ಷೀರಿತಿ ॥ ೨ ॥

* ಅಸ್ತಿ ಗೋದಾವರೀತೀರೇ ಪ್ರತಿಷ್ಠಾನಪುರಂ ಮಹತ್ । ತತ್ರ ಜಾನಶ್ರುತಿರ್ನಾಮ್ನಾ ಮೇದಿನೀಮಲ್ಲಭೋಗಭವತ್ । ಎಂದು ಪ್ರಮಾಣವು

ಅ ॥ ರಾಜನು ಹೀಗೆ ಇರುತ್ತಿರಲು ಒಂದಾನೊಂದು ದಿನ ರಾತ್ರಿಕಾಲದಲ್ಲಿ ಹಂಸಪಕ್ಷಿಗಳು ಬಹು ಎತ್ತರವಾದ ಉಪ್ಪರಿಗೆಯ ಮೇಲೆ ಮಂಚದಲ್ಲಿ ಮಲಗಿರುವ ಜಾನಶ್ರುತಿರಾಜನ ಸೌಲಭ್ಯಾಗದಲ್ಲಿ † ಅಂತರಿಕ್ಷಮಾರ್ಗದಲ್ಲಿ ಹಾರುತ್ತಿದ್ದವು. ಆಗಲೇ ಒಂದಾನೊಂದು ಹಂಸವು ‡ ಮುಂದೆ ಹಾರುತ್ತಿರುವ ಹಂಸ ದೊಡನೆ ಹೇಳಿತು. ಎಲೋ ಹಂಸವೇ ಮುಂದಾಕ್ಷವೇ (ಅತ್ಯಲ್ಪಜ್ಞಾನಿಯೇ) ಪೌತ್ರಾಯಣನ * ಪ್ರಕಾಶಿಸುತ್ತಿರುವ ತೇಜಸ್ಸುಮುದಾಯವು ದ್ಯುಲೋಕಪರ್ಯಂತ ಸರ್ವದಾ ವ್ಯಾಪಿಸಿಕೊಂಡಿದೆ. (ಆ ತೇಜಸ್ಸನ್ನು ನೀನು ನೋಡುವುದಿಲ್ಲವಷ್ಟೆ.) (ಆ ತೇಜಸ್ಸು ಪೌತ್ರಾಯಣನನ್ನು ದಾಟಿಕೊಂಡು ಹೋಗತಕ್ಕ ನಿನ್ನನ್ನು ಸುಟ್ಟುಬಿಡಬಾರದು. ಅದಕ್ಕಾಗಿ ಆ ತೇಜಸ್ಸಿನ ಸಂಬಂಧವನ್ನು ಮಾಡಬೇಡ. ಅಂದರೆ—ಜಾನಶ್ರುತಿಯು ತೇಜಸ್ಸನ್ನು ದಾಟಿದರೆ ನಿನ್ನನ್ನು ಸುಟ್ಟುಬಿಡುವುದೆಂದು ಹೇಳಿತು ॥ ೨ ॥

ಉ. ॥ ತಮು ಹ ಪರಃ ಪ್ರತ್ಯುವಾಚ ಕಮ್ವರ ಏನಮೇತತ್ಸೈಂತಂ ಸಯುಗ್ವಾನಮಿವ ರೈಕ್ವಮಾತ್ಥೇತಿ ಯೋ ನು ಕಥಂ ಸಯುಗ್ವಾ ರೈಕ್ವ ಇತಿ॥೩॥

ಅ ॥ ಹೀಗೆ ಹೇಳತಕ್ಕ ಹಿಂದಿನ ಹಂಸದ ಹತ್ತಿರ ಮುಂದೆ ಹಾರುತ್ತಿರುವ ಹಂಸವು ಕಟ್ಟಿಯಾಗಿ ಹೇಳಿತು. ಎಲೋ ಹಂಸವೇ ಎತ್ತರವಾದ ಉಪ್ಪರಿಗೆಯಲ್ಲಿ ಮಲಗಿರುವ ಪೌತ್ರಾಯಣನಿಗೆ ಎಂತಹ ಪ್ರಭಾವವಿದೆ, ಎಂದು ತಿಳಿದು, ನಿರ್ಮತ್ಸರನಾದ ಎರಡನೇ ಹಂಸೆ (ಬಂಡಿ ಗಳಿಂದೊಡಗೂಡಿದ ರೈಕ್ವ ನೆನ್ನಂತೆ ಪೌತ್ರಾಯಣನನ್ನು ಹೊಗಳುತ್ತಿ. (ಹೀಗೆ ಸ್ತುತಿಸಿಕೊಳ್ಳಲಿಕ್ಕೆ ರೈಕ್ವನೇ ಯೋಗ್ಯನು ಪೌತ್ರಾಯಣನಿಗೆ ಅಂತಹ ಮಹಿಮೆಯು ಇಲ್ಲವೇ ಇಲ್ಲ.) ಎಂದು ಹೇಳಿತು. ಹೀಗೆ ಉತ್ತರಿಸಲ್ಪಟ್ಟ ಹಿಂದಿನ ಹಂಸವು, ನೀನು ಹೇಳಿದ ರೈಕ್ವನು ಯಾರು? ಎಂತಹ ಮಹಿಮೆಯುಳ್ಳವನು? ಎಂದು ಕೇಳಿತು. ॥ ೩ ॥

ಉ. ॥ ಯಥಾಕೃತಾಯ ವಿಜಿತಾಯಾಧರೇಯಾಃ ಸಂಯಂತ್ಯೇವಮೇವೇಮೇ ಸರ್ವಂ ತದಭಿಸಮೇತಿ ಯತ್ಕಿಂ ಚ ಪ್ರಜಾಃ ಸಾಧು ಕುರ್ವಂತಿ ಯಸ್ತದ್ವೇದ ಯತ್ಸ ವೇದ ಸ ಮಯ್ಯೇತದುಕ್ತ ಇತಿ ॥ ೪ ॥

ಅ ॥ ಆಗ ಮುಂದಿನ ಹಂಸವು ಉತ್ತರ ಹೇಳಿತು. ಹೇಗೆ ಜೆನ್ನಾಗಿ ಸತ್ಕರ್ಮವನ್ನು ಮಾಡಿ ಕೃತಯುಗವನ್ನು ಗೆದ್ದವನಿಗೆ ತ್ರೇತಾದಿ ಯುಗಗಳನ್ನು ಗೆದ್ದಂತೆ ಆಗುತ್ತದೋ, ಹಾಗೆಯೇ ಈ ಪ್ರಜೆಗಳು ಪುಣ್ಯಕರ್ಮವನ್ನು ಮಾಡಿದರೂ ಅದೆಲ್ಲವೂ ಸಂವರ್ಗವಿದ್ಯೆಯನ್ನು ತಿಳಿದ ರೈಕ್ವರಿಗೇನೇ ಬರುತ್ತದೆ. ಯಾರು ಯಾರು ಏನೇನು ತಿಳಿಯುವರೋ ಅವೆಲ್ಲವನ್ನು ರೈಕ್ವರು ತಿಳಿದಿರುತ್ತಾರೆ. ರೈಕ್ವರ ಮಹಿಮೆಯು ಈ ರೀತಿ ಇರುವುದೆಂದು ಹಂಸವು ಹೇಳಿತು.

ವಿ ॥ ಸಮಸ್ತ ವಿಘ್ನಗಳನ್ನು ಪರಿಹರಿಸತಕ್ಕ ರೈಕ್ವರು ಆವಾಸಮಾಡುತ್ತಿರಲು ಸಮಸ್ತ ಪ್ರಜೆಗಳೂ ನಿರ್ವಿಘ್ನತಾಗಿ ಜೆನ್ನಾಗಿ ಕರ್ಮಗಳನ್ನು ಮಾಡುವರು. ಅದರ ಫಲವು ರೈಕ್ವರಿಗೇನೇ ಬರುವುದು. ॥ ೪ ॥

---

† ತತೋಽಂತರಿಕ್ಷಮಾರ್ಗೇಣ ಯೂಥಾನಾಂ ಪಕ್ಷಸಂಹತಾಃ। ಮೃತಾಲಪಂಚವೋ ದೇವಿ ದೇವಹಂಸಾ ವಿಹಾರ್ಗತಾಃ॥

‡ ಕ್ರೌಂಚಾ ಗೃಧ್ರಾಂ ತೀಷಾಮನ್ಯೋನ್ಯಂ ಮರ್ಮಭಾಷಿಣಾಂ । ಛಲ್ಲಾಕ್ಷ ಪ್ರಮುಖಾಃ ದ್ವಿತ್ರಾಃ ಪುರಸ್ತಾ-ತ್ಸಿರ್ಯಯುರ್ಯಾವಾತ್ ।

* ಯಸ್ಯ ತೀಷಾದ್ಯತೇ ಭೂಮಿಃ ಶ್ಯಾಮಲಾಃ ಕಲ್ಪಶಾಖಿನಃ । ಎಂದು ಪ್ರಮಾಣವು

‡ ಹಂಸಾ ಹಸಿತ್ವಾ ಸಾವಜ್ಞಮೂಚುರ್ವಚನಮುಚ್ಚೈಃ । ಎಂದು

ಉ. ॥ ತದು ಹ ಜಾನಶ್ರುತಿಃ ಪೌತ್ರಾಯಣ ಉಪಶುಶ್ರಾವ ಸಹ ಸಂ-
ಜಿಹಾನ ಏವ ಕ್ಷತ್ತಾರಮುವಾಚಾಂಗಾರೇ ಹ ಸಯುಗ್ವಾನಮಿವ ರೈಕ್ವನೂ-
ತ್ಥೇತಿ ಯೋ ನು ಕಥಂ ಸಯುಗ್ವಾ ರೈಕ್ವ ಇತಿ ॥ ೫ ॥

ಅ ॥ ಹೀಗೆ ಮುಂದುಗಡೆ ಇರುವ ಹಂಸವು ಹೇಳಿದ ತನ್ನ ನುಡಿ, ರೈಕ್ವರ ಪ್ರಶಂಸೆ ಮಾತುಗಳನ್ನು ಪೌತ್ರಾಯಣನು, ಕೇಳಿದನು. ಪೌತ್ರಾಯಣನು, ಹಂಸವು ಹೇಳಿದ ತಿರಸ್ಕಾರದ ಮಾತನ್ನು ಕೇಳಿ ಹಾಸಿಗೆಯಿಂದ ಎದ್ದೊಡನೆಯೇ ಎಲೋ ಸ್ನೇಹಿತನಾದ ಸಾರಥಿಯೇ ರೈಕ್ವರನ್ನು ಅವಶ್ಯವಾಗಿ ತಿಳಿದು ಕರತರಬೇಕು *ಏಕೆಂದರೆ ಹಂಸವು ರೈಕ್ವರನ್ನು ಹೊಗಳಿದುದೆ ನನ್ನನ್ನು ನಿಂದಿಸಿದುದೆ. ಎಂದು ಸಾರಥಿ ಯೊಡನೆ ಹೇಳಿದನು

ವಿ ॥ ಎಲೋ ಸಾರಥಿಯೇ ಕೇಳು. ರೈಕ್ವನು...ಎಂಗಳನ್ನು ತಿಳಿಯಬೇಕು. ಏಕೆಂದರೆ ರಾತ್ರಿಯಲ್ಲಿ ಬಿಸ್ಸರಿಗೆಯಲ್ಲಿ ಹಾನು ಮಲಗಿಕೊಂಡಿರುವಾಗ ಕೆಲವು ಹಂಸಪಕ್ಷಿಗಳು ಆಕಾಶದಲ್ಲಿ ಹಾರುತ್ತಿದ್ದವು. ಆಗ ಮುಂದಿನ ಒಂದು ಹಂಸದ ಹತ್ತಿರ ಎಲೋ ಅಬ್ಜಿಜ್ಞಾನವನ್ನು ಹಂಸವೇ ಜಾನಶ್ರೋಯ ಪ್ರಕಾರವು ದ್ಯು ಲೋಕದಯಂತ ವ್ಯಾಪಿಸಿಕೊಂಡಿದೆ. ಆ ತೇಜಸ್ಸನ್ನು ಪಾಪಿಕೊಂಡು ಹೊಗದೆಂದು. ಪಾಪಿದರೆ ಆತನ ತೇಜಸ್ಸು ನಿನ್ನನ್ನು ಸುಡುವುದು. ಎಂದು. ಹಿಂದಿನ ಹಂಸವು ಹೇಳಿದಾಗ ಮುಂದಿನ ಹಂಸವು ರೈಕ್ವನು ಏನಗಳಂತೆ ಯಾರನ್ನು ಹೊಗಳುತ್ತಿ? ಪೌತ್ರಾಯಣನನ್ನು ಹೊಗಳುವುದು. ಯೋಗ್ಯವಲ್ಲವೆಂದು ಹೇಳಿತು. ಹೀಗೆ ಹಂಸದಿಂದ ತಿರಸ್ಕೃತನಾದ ಪೌತ್ರಾಯಣನು ತನ್ನ ಸಾರಥಿಯು ಕತ್ತಿರ ರೈಕ್ವರನ್ನು ಅವಶ್ಯವಾಗಿ ತಿಳಿಯಬೇಕೆಂದನು. ॥ ೬ ॥

ಪೀ—ಆಗ ಎರಡು ಬಂಡಿಗಳಮೊತಗೂಡಿದ ರೈಕ್ವರು ಹೇಗೆ ಇರುವವರು? ಎಂದು ಸಾರಥಿಯು ಕೇಳಿದಾಗ ಪೌತ್ರಾಯಣನು ಹಂಸವು ಹೇಳಿದಂತೆ ರೈಕ್ವರ ಲಕ್ಷಣವನ್ನು ಹೇಳಿದನು.

ಉ. ॥ ಯಥಾಕೃತಾಯ ವಿಜಿತಾಯಾಧರೇಯಾಃ ಸಂಯಂತ್ಯೇವಮೇ-
ನಂ ಸರ್ವಾಂ ತದಭಿಸಮೇತಿ ಯತ್ಕಿಂಚ ಪ್ರಜಾಃ ಸಾಧು ಕುರ್ವಂತಿ ಯಸ್ತ-
ದ್ವೇದ ಯತ್ಸ ವೇದ ಸ ಮಯ್ಯೇತದುಕ್ತ ಇತಿ ॥ ೬ ॥

ಉ. ॥ ಸ ಹ ಕ್ಷತ್ತಾನ್ನಿಷ್ಕ್ರ ನಾಮಿಂದಮಿತಿ ಪ್ರತ್ಯೇಯಾಯ ತಸ್ಮೈ ಸ
ಹೋವಾಚ ಯತ್ರಾರೇ ಬ್ರಾಹ್ಮಣಸ್ಯಾನ್ವೇಷಣಾ ತದೇನಮಭ್ಯೇತಿ ॥ ೭ ॥

ಅ ॥ ಹೀಗೆ ಹೇಳಿಸಿಕೊಂಡ ಸಾರಥಿಯು ಎಲ್ಲಾಕಡೆ ಹುಡುಕಿ ರೈಕ್ವರು ಎಗಳಲ್ಲನೆಂದು ಹೇಳುತ್ತಾ ತಿರುಗಿ ಬಂದನು ಮರಳಿ ರಾಜನು ಸಾರಥಿಯೊಡನೆ ಎಲೋ ಸಾರಥಿಯೇ ಯಾವ ಪ್ರದೇಶದಲ್ಲಿ ಬ್ರಾಹ್ಮಣರು ಶಾಸ್ತ್ರವಿಚಾರ ಮಾಡುತ್ತಾರೋ ಅಲ್ಲಿ ರೈಕ್ವರನ್ನು ಹುಡುಕು. ಎಂದು ಹೇಳಿದನು ॥ ೭ ॥

ಉ. ॥ ಸೋಽಧಸ್ತಾಚ್ಛಕಟಸ್ಯ ಪಾಮಾನಂ ಕಪೂಯಾಣಮುಪೋಪವಿ-

* ತತಃ ಸಾರಥಿಮಾಹೂಯ ಭೂಪಾಲೋ ವಿಸ್ಮಯಾನ್ವಿತಃ । ಸಂದಿದೇಶ ಮಹಾಂತ್ಮಾ ಸ ರೈಕ್ವ ಆನೀಯತಾಮಿತಿ ।

* ಅನೇ ಮಂತ್ರದಂತೆಯೇ ಅರ್ಥವು

ವೇಶ ತೇ ಹಾಭ್ಯುವಾದ ತ್ವಂ ನು ಭಗವಃ ಸಯುಗ್ವಾ ರೈಕ್ವ ಇತ್ಯಹಸೀ ಹ್ಯರಾಶಿ ಇತಿ ಪ್ರತಿ ಹ ಜಜ್ಞೇ ಸಹ ಕ್ಷತ್ತಾನ್ವಿಷ್ಯಾವಿದಮಿತಿ ಪ್ರತ್ಯೇಯಾಯ ॥ ಇತಿ ಪ್ರಥಮಃ ಖಂಡಃ ॥ ೬-೧ ॥

॥ ೮ ॥

ಅ ॥ ಹೀಗೆ ಹೇಳಿಕೊಂಡ ಸಾರಥಿಯು (ಅಲ್ಲಿಂದ ಹೊಂಟು ಕಾಪಿ ಮೊದಲಾದ ಸಮಸ್ತ ತೀರ್ಥ ಕ್ಷೇತ್ರಗಳಲ್ಲಿ ಸಂಚರಿಸಿ ಎಲ್ಲಿಯೂ ಅವನನ್ನು ಹೊಂದದೆ ಕಾಶ್ಮೀರ ನಗರಕ್ಕೆ ಬಂದು ಅಲ್ಲಿ ರಾಜದ್ವಾರದಲ್ಲಿ) ಬಂಡಿಯ ಕೆಳಗೆ ಕಜ್ಜಿ ತೊರಿಸುತ್ತಿರುವ ರೈಕ್ವರನ್ನು ನೋಡಿ (ರಾಜನು ಹೇಳಿದ ಚಿಹ್ನೆಗಳಿಂದ ಇವರೇ ರೈಕ್ವರೆಂದು ನಿಶ್ಚಯಿಸಿ ನಮಸ್ಕಾರಮಾಡಿ) ಅವರ ಸವಿಾಪದಲ್ಲಿ ಕುಳಿತನು. ಸವಿಾಪದಲ್ಲಿ ಕುಳಿತ ಸಾರಥಿಯು ರೈಕ್ವರೊಡನೆ ಎಲೋ ಪೂಜ್ಯರೇ ನೀವು ಬಂಡಿಗಳಿಂದೊದಗೂಡಿದ [ರೈಕ್ವರು ಆಗಿರುತ್ತೀರೋ ಏನು? ಎಂದನು. ಆಗ ರೈಕ್ವರು ಎಲೋ ಸುಮುಖನೇ ನಾನು ರೈಕ್ವನೆಂದು ಪ್ರಸಿದ್ಧನು, ಎಂದನು (ಏಕೆ ಅಲ್ಲಿ ಕುಳಿತಿದ್ದೆಯೆಂದರೆ ನಾವು ಕೃತಕೃತ್ಯರು. ನೀವಕನಾದ ಒಬ್ಬ ಶಿಷ್ಯನು ಬೇಕು. ಎಂದನು) ಹೀಗೆ ಸಾರಥಿಯು ರೈಕ್ವರನ್ನು ಹುಡುಕಿ ತಿಳಿದುಕೊಂಡು ರಾಜನ ಸವಿಾಪಕ್ಕೆ ಬಂದು ರೈಕ್ವರನ್ನು ತಿಳಿದುಕೊಂಡು ಬಂದೆನು, ಎಂದು ಹೇಳಿ ಅಲ್ಲಿ ನಡೆದ ಎಲ್ಲಾ ವೃತ್ತಾಂತವನ್ನು ತಿಳಿಸಿದನು. ॥ ೬-೧ ॥ ೮ ॥

ಭಾ. ॥ (೧)ಫಲ್ಗ್ವಾಕ್ಷ ಮಂದಾಕ್ಷ ॥(೨)ಯಥಾ ಕೃತೇ ಜಿತೇ ತ್ರೇತಾದಿಜಯಫಲಂ ಚ ತಸ್ಯೈ ಭವತಿ ಏವಮನ್ಯೇಷಾಂ ಪುಣ್ಯಫಲಂ ಪ್ರಾಧಾನ್ಯೇನ ತಸ್ಯೈ ಭವತಿ ॥ (೩) ಅರೇ ಅಂಗ ಇಷ್ಟ ಸಯುಗ್ವಾ ರೈಕ್ವೋ ಜ್ಞಾತವ್ಯಃ । ಅಹಂ ಹ್ಯರಾ ೩ ಇತಿ ಪ್ಲುತಿಃ ಪಾವಮಕಪವಣಭಾವೇನ ॥ ೧, ೨, ೩, ೪, ೫, ೬, ೭, ೮ ॥ ಇತಿ ಪ್ರಥಮಃ ಖಂಡಃ ॥ ೬-೧ ॥ ॥ ೮ ॥

ಅ ॥ (೧-೨ನೇ ಮಂತ್ರದಲ್ಲಿದ್ದ ಫಲ್ಗ್ವಾಕ್ಷನೆಂದರೆ* ಮಂದಾಕ್ಷನೆಂದೇ (೩ನೆಯ ಮಂತ್ರದ ಅರ್ಥ ಹೇಳುತ್ತಾರೆ—) ಹೇಗೆ ಧರ್ಮಾಚರಣೆಯಿಂದ ಕೃತಯುಗವನ್ನು ಗೆದ್ದರೆ ತ್ರೇತಾದಿ ಯುಗಗಳನ್ನು ಗೆದ್ದಂತೆಯೇ ಆಗುವುದೋ ಹಾಗೆಯೇ ಬೇರೆ ಪ್ರಜೆಗಳೂ ಪುಣ್ಯಕರ್ಮ ಮಾಡಿದರೆ ಆ ಫಲವು ಮುಖ್ಯವಾಗಿ ಸಂವರ್ಗವಿದ್ಯೆಯನ್ನು ತಿಳಿದವನಿಗೇನೇ ಒದಗುತ್ತದೆ (ಮನುಷ್ಯರೂ ದೇವತೆಗಳೂ ಋಷಿಗಳೂ ಎಲ್ಲರೂ ಜಾನಶ್ರುತಿಯು ಮಾಡಿದ ಅನ್ನದಾನದಿಂದ ಸಂತುಷ್ಟರಾಗಿ ಒಂದಿರುತ್ತಾರೆಂದು ಪರರೂ ಅರ್ಥ ಹೇಳಿರುವುದರಿಂದ ಅವರಿಗೆ ಅಜ್ಞಾನಾದಿಗಳು ಕೂಡಲಾರವು. ಎಂದೆನ್ನಿಸಿತು) (೪) ಎಲೋ ಪ್ರಿಯನಾದ ಸಾರಥಿಯೇ ಬಂಡಿಗಳಿಂದೊದಗೂಡಿದ ರೈಕ್ವರನ್ನು ಅವಶ್ಯವಾಗಿ ತಿಳಿಯಬೇಕು. (೫) (ಏನೇ ಮಂತ್ರದ ಅರ್ಥ ಹೇಳುತ್ತಾರೆ—) ಅಹಂ ಹ್ಯರಾ ೩ ಎಂಬ ೩ ಪ್ಲುತವು ಕಪ್ಪಿಯನ್ನು ತೊರಿಸಿಕೊಂಡೇ ಇರುವವನೆಂಬ ಅಭಿಪ್ರಾಯದಿಂದ ॥ ೧, ೨, ೩, ೪, ೫, ೬, ೭, ೮ ॥ ೬-೧ ॥ ॥ ೮ ॥

ಒಂದನೇ ಖಂಡವು ಮುಗಿಯಿತು.

---

† ತತ್ಕೋಷವಿಶಿಷ್ಟ ತಂ ರೈಕ್ವಂ ಪ್ರತ್ಯಭ್ಯುಪಾಗತ ಕ್ಷತ್ತಾ ಹೇ ಭಗವಂಸ್ತ್ವಮೇವ ತಂ ಸಯುಗ್ವಾ ರೈಕ್ವ ಇತಿ ॥ ಎಂದು ಗೀರ್ವಾಣಾಕ್ಷರದಲ್ಲಿದೆ.

* ಜಾನಶ್ರುತಿಯ ಶ್ರದ್ಧಾತಿಶಯವನ್ನು ನೋಡಿ ಹೊಟ್ಟೆ ನೀವು ಸುಟ್ಟು ಹೋಗುವಿರಿ, ಎಂಬುದನ್ನು ಸಹ ತಿಳಿಯಲಿಲ್ಲ, ಎಂಬ ಅಧಿಕ್ಷೇಪದಿಂದ ಮಂದಾಕ್ಷ ಎಂದು ಸಂಬೋಧಿಸಿದ್ದು ಹೀಗೆ ಗೀರ್ವಾಣಾಕ್ಷರದಲ್ಲಿ ಉಕ್ತವಾಗಿದೆ ಶ್ರದ್ಧಾತಿಮಾನಂ ಪುರತಃ ದೇಖ ಪುರುಂಡಕ ಪಶ್ಯಕ್ಷ ಜಾನಶ್ರುತೇಃ ಮಹೀಭೃತುಗಃ ಪುಣ್ಯಕೀರ್ತೇರಿತಿ ಸ್ಫುಟಂ ॥

‡ ಕ್ಸ ದೀರ್ಘ ಪ್ಲುತ ಎಂದು ಮೂರು ವಿಧ ಸ್ವರವು. ಈ ಪ್ರಕ್ಷ. ಊ ದೀರ್ಘ. ಟೂ-ಪ್ಲುತವು ಅತೀ ದೀರ್ಘ ಸ್ವರವು

ಏನೇ ಖಂಡವು

ಉ. ॥ ತದು ಹ ಜಾನಶ್ರುತೇಃ ಪೌತ್ರಾಯಣಸ್ಯ ಷಟ್ ಶತಾನಿ ಗವಾಂ ನಿಷ್ಕಮಶ್ವತರೀರಥಂ ತದಾದಾಯ ಪ್ರತಿಚಕ್ರಮೇ ತೇ ಹಾಭ್ಯುವಾದ ॥ ೧ ॥

ಅ ॥ ಸಾರಥಿಯು ರೈಕ್ವರ ವೃತ್ತಾಂತವನ್ನು ಹೇಳಿದುದರಿಂದಲೇ ಪೌತ್ರಾಯಣನ ಗೋತ್ರದಲ್ಲಿ ಹುಟ್ಟಿದ ಜನಶ್ರುತನ ಮಗನಾದ ಜಾನಶ್ರುತಿ ರಾಜನು ಆರುನೂರು (೬೦೦) ಗೋವುಗಳನ್ನು ಮುಷ್ಟಿನ ಸರವನ್ನು ಅಶ್ವತರಿ (ಕುದುರೆಗಿಂತ ಹೆಚ್ಚು ಕತ್ತೆಗಳಲ್ಲಿ ಹುಟ್ಟಿದವುಗಳು ಅತಿ ವೇಗದಿಂದ ಓಡುವವುಗಳು.) ಗಳಿಂದೊತ್ತಾಗಿರುವ ರಥವನ್ನು ಗುರುವಿನ್ನೆಯಾಗಿ ಒಯ್ದುಕೊಂಡು ರೈಕ್ವರ ಸ್ಥಳಕ್ಕೆ ಹೋದನು. ಅಲ್ಲಿಗೆ ಹೋಗಿ ಪೌತ್ರಾಯಣನು ರೈಕ್ವರಿಗೆ ಹೇಳಿದನು ॥ ೧ ॥

ಉ. ॥ ರೈಕ್ವೇಮಾನಿ ಷಟ್ಶತಾನಿ ಗವಾಮಯಂ ನಿಷ್ಕೋಽಯಮಶ್ವತರೀರಥೋ ನು ಮ ಏತಾಂ ಭಗವೋ ದೇವತಾಂ ಶಾಧಿ ಯಾಂ ದೇವತಾಮುಪಾಸ್ಸ ಇತಿ ॥ ೨ ॥

ಅ ॥ ಎಲೋ ರೈಕ್ವರೇ ಒಂದು ಗೋವುಗಳೂ ಈ ಮುಷ್ಟಿನ ಸರವೂ ಈ ಅಶ್ವತರೀರಥವೂ ಇತ್ತಗಳಲ್ಲವು ನಿಮಗೆ ಗುರುವಿನ್ನೆಗಳಾಗಿವೆ. ಎಲೋ ಪೂಜ್ಯರೇ ಇವುಗಳನ್ನು ತೆಗೆದುಕೊಂಡು ಸಂತೋಷಿಸಿರಿ. ನೀವು ಉಪಾಸನೆಮಾಡುವ ದೇವತೆಯನ್ನು ನನಗೆ ಉಪದೇಶಿಸಿರಿ. ಎಂದನು ॥ ೨ ॥

ಉ. ॥ ತಮು ಹ ಪರಃ ಪ್ರತ್ಯುವಾಚಾಹಹಾರೇ ತ್ವಾ ಶೂದ್ರ ತವೈವ ಸಹ ಗೋಭಿರಸ್ತ್ವಿತಿ ತದು ಹ ಪುನರೇವ ಜಾನಶ್ರುತಿಃ ಪೌತ್ರಾಯಣಃ ಸಹಸ್ರಂ ಗವಾಂ ನಿಷ್ಕಮಶ್ವತರೀರಥಂ ದುಹಿತರಂ ಕದಾದಾಯ ಪ್ರತಿಚಕ್ರಮೇ ॥ ೩ ॥

ಅ ॥ ಶೋಕವಿಲಕ್ಷಣನಾದ ರೈಕ್ವಮುನಿಯು ಪೌತ್ರಾಯಣನಿಗೆ ಹೇಳಿದನು (ಹಂಸನು ಎರಡಾದ ಮಾತಿನಿಂದರಿಂದಾಂಬೋದ ಶೋಕವಿರುವುದರಿಂದ ಶೂದ್ರನೆನಿಸಿಕೊಂಡ) ಎಲೋ ಪೌತ್ರಾಯಣನೇ ನಿಮ್ಮಿನ ಸರ, ಒಂಡಿ ಗೋವುಗಳು ಎಲ್ಲವು ನಿನಗೇನೇ ದೊರಲಿ. ಎಂದನು ರೈಕ್ವರು ಹೀಗೆ ಎರಡಾಂಬೋದರಿಂದಲೇ ಪೌತ್ರಾಯಣನು (ಅಕ್ಷಲ್ಪ ಧನವನ್ನು ತಂದದ್ದೆಂದು ರೈಕ್ವರಿಗೆ ಕೋಪವೇನು. ತೀರ್ಥ ಮರಳಿ ಪಟ್ಟಣಕ್ಕೆ ಬಂದು) ಸಹಸ್ರ (೧೦೦೦) ಗೋವುಗಳನ್ನೂ ಮುಷ್ಟಿನ ಸರವನ್ನೂ ಅಶ್ವತರೀರಥವನ್ನೂ ಹಿಡಿದುಕೊಂಡು (ಮುನಿಗೆ ಮದುವೆಮಾಡಿಕೊಡುವುದಕ್ಕಾಗಿ ತನ್ನ) ಮಗಳನ್ನು ಕರೆದುಕೊಂಡು ಅಲ್ಲಿಗೆ ಹೊರಟು ಹೋದನು ॥ ೩ ॥

ಉ. ॥ ತೇ ಹಾಭ್ಯುವಾದ ರೈಕ್ವೇದಂ ಸಹಸ್ರಂ ಗವಾಮಯಂ ನಿಷ್ಕೋಽಯಮಶ್ವತರೀರಥ ಇಯಂ ಜಾಯಾಽಯಂ ಗ್ರಾಮೋ ಯಸ್ಮಿನ್ನಾಸ್ಸೇಽಸ್ಸೇವ ಮಾ ಭಗವಃ ಶಾಧೀತಿ ॥ ೪ ॥

ಅ ॥ ಪೌತ್ರಾಯಣನು ಅಲ್ಲಿಗೆ ಹೋಗಿ ರೈಕ್ವರಿಗೆ ನಮಸ್ಕರಿಸಿದನು. ಎಲೋ ರೈಕ್ವರೇ ಈ ಸಹಸ್ರ ಗೋವುಗಳೂ, ಈ ಮುತ್ತಿನ ಸರವೂ, ಅಶ್ವತರೀರಥವೂ, ನಿಮಗೆ ಹೆಂಡತಿಯಾಗಲಿಕ್ಕೆ ಯೋಗ್ಯಳಾದ ನನ್ನ ಮಗಳೂ, ನೀವು ಇರುವ ಗ್ರಾಮವೂ ಎಲ್ಲವೂ ನಿಮಗೆ ದಕ್ಷಿಣೆಯಾಗಿ ಇರಲಿ, ಎಲೋ ಪೂಜ್ಯರೇ ನೀವು ಉಪಾಸನೆಮಾಡುವ ದೇವತೆಯನ್ನು ಹೆಸರಾಗಿ ಉಪದೇಶಿಸಿರಿ. ॥ ೬ ॥

ಉ. ॥ ತಸ್ಮಾ ಹ ಮುಖಮುಪೋದ್ಗೃಹ್ಣನ್ನುವಾಚಾಜಹಾರೇಮಾಃ ಶೂದ್ರಾನೇನೈನ ಮುಖೇನಾಲಾಪಯಿಷ್ಯಥಾ ೩ ಇತಿ ತೇ ಹೈತೇ ರೈಕ್ವಪರ್ಣಾ ನಾಮ ಮಹಾವೃಷೇಷು ಯತ್ರಾಸ್ಯಾ ಉವಾಸ ತಸ್ಮೈ ಹೋವಾಚ ॥ ಇತಿ ದ್ವಿತೀಯಃ ಖಂಡಃ ॥ ೬-೨ ॥ ॥ ೫ ॥

ಅ ॥ ರೈಕ್ವರು ರಾಜಕನ್ನೆಯ ಮುಖವನ್ನು ನೋಡುತ್ತಾ ಈ ಗುರುದಕ್ಷಿಣೆಯನ್ನು ಸ್ವೀಕರಿಸಿದನು. ರೈಕ್ವರು ರಾಜನೊಡನೆ ಎಲೋ ರಾಜನೇ ಗುರುಗಳ ಶುಶ್ರೂಷೆಯಿಲ್ಲದೆ ಮುತ್ತಿನ ಸರ ಮೊದಲಾದವು ಗಳನ್ನು ಮಾತ್ರ ಹಿಡಿದುಕೊಂಡು ಬಂದಿರುತ್ತಿ, ಎಂದನು (ಅಥವಾ ಹೀಗೆ ಹೇಳಿಸಿಕೊಂಡ ರೈಕ್ವರು ಮನಸೆ ಮಾಡಿಕೊಂಡವರಾಗಿ ಕರೆದುಕೊಂಡು ಬಂದ ರಾಜನ ಮಗಳ ಮುಖವನ್ನು ಮೆಲ್ಲಗೆ ನೋಡುತ್ತಾ *ಕೋಪಗೊಂಡವನಾಗಿ ಹೇಳಿದನು. ಎಲೋ ರಾಜನೇ ಈ ಗುರುದಕ್ಷಿಣೆಯನ್ನು ವಾಪಾಸು ತೆಗೆದುಕೊಂಡು ಹೋಗು. ನಿರ್ಲಕ್ಷನಾದ ನನಗೆ ಇದರಿಂದ ಪ್ರಯೋಜನವಿಲ್ಲ ಸೇವೆ ಮಾಡತಕ್ಕ ಬ್ರಹ್ಮ ಚಾರಿಯೇ ನನಗೆ ಬೇಕಾದದ್ದು. ಅವನನ್ನು ತರಲಿಲ್ಲ ಸೇವೆಯಿಲ್ಲದೆ ಗವಾದಿಗಳನ್ನೇ ತಂದು ಮಾತ ನಾಡಿಸುವಿ, ಎಂದನು.) ಹೀಗೆ ಹೇಳಿದೊಡನೆ ರಾಜನು ಶಾಪಕ್ಕೆ ಹೆದರಿ ರೈಕ್ವರನ್ನು ಸಂತೋಷಗೊಳಿ ಸಿದನು. ಆ ಮೇಲೆ ರೈಕ್ವರು ರಾಜನಿಗೆ ಉಪದೇಶಿಸಿದರು ರೈಕ್ವರು ಉಪಾಸನೆಮಾಡತಕ್ಕ (ರಾಜನು ಕೊಟ್ಟ ಗ್ರಾಮದ ಹೆಸರನ್ನು ನೇದವು ಹೇಳುತ್ತದೆ) ಯಾವ ಗ್ರಾಮಗಳಲ್ಲಿ ರೈಕ್ವರು ರಾಜನಿಗೆ ಉಪದೇಶವು ದಕ್ಕಾಗಿ ಅವಾಸಮಾಡಿರುವರೋ ಅಂತಹ ರಾಜನು ಕೊಟ್ಟಿರುವ ಗ್ರಾಮಗಳ ಹೆಸರಿನಿಂದ ಮಹಾವೃಷಪ್ರದೇಶಗಳಲ್ಲಿ ರೈಕ್ವಪರ್ಣಗಳೆಂದು ಪ್ರಸಿದ್ಧಗಳಾದ ಗ್ರಾಮಗಳು ದಕ್ಷಿಣೆಯನ್ನು ತೆಗೆದುಕೊಂಡು ಸಂತುಷ್ಟರಾದ ರೈಕ್ವರು ರಾಜನಿಗೆ ಸಂವರ್ಗ ವಿದ್ಯೆಯನ್ನು ಹೇಳಿದರು. ॥ ೬—೨ ॥ ॥ ೫ ॥

ಭಾ. ॥ ಶುಚಾ ದ್ರವಣಾಚ್ಛೂದ್ರಃ । ರಾಜಾ ಪೌತ್ರಾಯಣಃ ಶೋಕಾಚ್ಛೂದ್ರೇತಿ ಮುನಿನೋದಿತಃ । ಪ್ರಾಣವಿದ್ಯಾಮನಾಪ್ಯಾತ್ಪರಂ ಧರ್ಮಮವಾಪ್ತವಾನ್ ॥ ಇತಿ ಪಾದ್ಮೇ ॥ ೧, ೨, ೩, ೪, ೫ ॥ ಇತಿ ದ್ವಿತೀಯಃ ಖಂಡಃ ॥ ೬—೨ ॥ ॥ ೧ ॥

ಆ ॥ ಪೌತ್ರಾಯಣರಾಜನು ಹಂಸವು ತಿರಸ್ಕಾರ ಮಾಡಿದುದರಿಂದುಂಟಾದ ಶೋಕದಿಂದೊಡ ಗೂಡಿರುವುದರಿಂದ ಶೂದ್ರನೆನಿಸುತ್ತಾನೆ. ಅಯಮಶ್ವತರೀರಥಃ ಎಂದು ಹೇಳಿದ ಪ್ರಕಾರ ಇದ್ದುದರಿಂದ ಪೌತ್ರಾಯಣನು ರಾಜನೇ. ಪೌತ್ರಾಯಣರಾಜನು ಮಹಾಶೋಕದಿಂದೊಡಗೂಡಿದವನಾದುದರಿಂದ ಶೂದ್ರನೆಂದು ಮುನಿಯಿಂದ ಹೇಳಿಸಿಕೊಂಡಿದ್ದಾನೆ ರಾಜನು ರೈಕ್ವರಿಂದ ಸಂವರ್ಗ (ಪ್ರಾಣ) ವಿದ್ಯೆಯನ್ನು ಕಲಿತು ಮಹಾಧರ್ಮವನ್ನು ಹೊಂದಿರುತ್ತಾನೆ. ಎಂದು ಪಾದ್ಮ ಪುರಾಣದಲ್ಲಿದೆ. ॥ ೧—೫ ॥

ಎರಡನೇ ಖಂಡವು ಮುಗಿಯಿತು.

* ಕತೋ ವಿರೋಕ್ಕ ಶಕ್ಷದಂ ರೈಕ್ವೋ ರಾಜ್ಞೇ ಚುಕೋಪ ಹ । ರೇ ಶೂದ್ರ ಮಾನುಷಂ ವೃತ್ತಂ ನ ಜಾನಾಸಿ ದುರೀಶ್ವರ ॥ ಎಂದು ಶೇಷ.

ಹನ್ನೆರಡನೇ ಖಂಡವು

ಟೀ-ಶೈಕ್ಷರು ಹೇಳಿದ ಸಂವರ್ಗವಿದ್ಯೆಯನ್ನು, ಸಂವರ್ಗಸ್ವರೂಪವನ್ನೂ ವಿಸ್ತರಿಸಲಾಗಿ ಹೇಳಿದ ಪುರುಷನು ಹೇಳುತ್ತಾನೆ—

ಉ. ॥ ವಾಯುರ್ವಾವ ಸಂವರ್ಗೋ ಯದಾ ವಾ ಮಹಾಪ್ರಲಯೋ ಅಗ್ನಿರುದ್ವಾಯತಿ ವಾಯುಮೇವಾಪ್ಯೇತಿ ಯದಾ ಸೂರ್ಯೋಽಸ್ತಮೇತಿ ವಾಯುಮೇವಾಪ್ಯೇತಿ ಯದಾ ಚಂದ್ರೋಽಸ್ತಮೇತಿ ವಾಯುಮೇವಾಪ್ಯೇತಿ ॥೧॥

ಅ ॥ ಮುಖ್ಯವಾಯುವೇ ಸಂಹರಿಸುವವನಾದುದರಿಂದ ಸಂವರ್ಗವೆನಿಸುತ್ತಾನೆ ಮಹಾಪ್ರಲಯ ಕಾಲದಲ್ಲಿ ಅಗ್ನಿಯು ಶಾಂತನಾಗಿ ವಾಯುವಿನಲ್ಲಿ ಲಯಹೊಂದುತ್ತಾನೆ ಸೂರ್ಯ ಚಂದ್ರರು ಅಸ್ತಮಾನಹೊಂದಿಯೂ ಕೂಡ ವಾಯುವಿನಲ್ಲಿಯೇ ಲಯಹೊಂದುತ್ತಾರೆ. ೧ ॥

ಉ. ॥ ಯದಾಽಽಪ ಉಚ್ಛ್ವಸ್ಯಂತಿ ವಾಯುಮೇವಾಪಿಯಂತಿ ವಾಯುರ್ಹ್ಯೇವೈತಾನ್ಸರ್ವಾನ್ ಸಂವೃಂಕ್ತ ಇತ್ಯಧಿದೈವತಂ ॥ ೨ ॥

ಅ ॥ ಜಲಗಳು ಒಣಗಿದಾಗ ಜಲಾಳವಾಸಿಯಾದ ಇಂದ್ರನು ಶಾಂತನಾಗಿ ವಾಯುವಿನಲ್ಲಿ ಲಯಹೊಂದುತ್ತಾನೆ ಮುಖ್ಯಪ್ರಾಣನೇ ಅಗ್ನ್ಯಾದಿ ದೇವತೆಗಳನ್ನು ಸಂಹರಿಸುತ್ತಾನೆಂದು ಪ್ರಸಿದ್ಧ ಅಧಿದೈವತದಲ್ಲಿ ಸಂವರ್ಗವೆನಿಸಿದ ವಾಯುವಿನ ರೂಪವು ಹೇಳಲ್ಪಟ್ಟಿತು ೨ ॥

ಉ. ॥ ಅಥಾಧ್ಯಾತ್ಮಂ ಪ್ರಾಣೋ ವಾವ ಸಂವರ್ಗಃ ಸ ಯದಾ ಸ್ವಪಿತಿ ಪ್ರಾಣನೇವ ವಾಗಪ್ಯೇತಿ ಪ್ರಾಣಂ ಚಕ್ಷುಃ ಪ್ರಾಣಂ ಶ್ರೋತ್ರಂ ಪ್ರಾಣಂ ಮನಃ ಪ್ರಾಣೋ ಹ್ಯೇವೈತಾನ್ಸರ್ವಾನ್ ಸಂವೃಂಕ್ತ ಇತಿ ॥ ೩ ॥

ಅ ॥ ಇನ್ನು ಮುಂದೆ ಅಧ್ಯಾತ್ಮದಲ್ಲಿ ಸಂವರ್ಗಸ್ವರೂಪವು ಹೇಳಲ್ಪಡುತ್ತದೆ. ಮುಖ್ಯಪ್ರಾಣನು ಸಂವರ್ಗವೆನಿಸುತ್ತಾನೆ ಮುಖ್ಯಪ್ರಾಣನು ಜೀವನನ್ನು ಮಲಗಿಸುವಾಗ ವಾಗಾದಿ ದೇವತೆಗಳು ಇಂದಿನ ಅಧ್ಯಾತ್ಮದಲ್ಲಿದ್ದ ಅಗ್ನ್ಯಾದಿ ದೇವತೆಗಳು ಮುಖ್ಯಪ್ರಾಣನನ್ನು ಕೊಂದುತ್ತಾರೆ ಮುಖ್ಯಪ್ರಾಣನೇ ಇವರೆಲ್ಲರನ್ನು ಸಂಹರಿಸುತ್ತಾನೆ. ೩ ॥

ಟೀ—ಹೇಳಿದ ಅರ್ಥವನ್ನು ಸಂಗ್ರಹಿಸಿ ಹೇಳುತ್ತಾರೆ

ಉ. ॥ ತೌ ವಾ ಏತೌ ದ್ವೌ ಸಂವರ್ಗೌ ವಾಯುರೇವ ದೇವೇಷು ಪ್ರಾಣಃ ಪ್ರಾಣೇಷು ॥ ೪ ॥

ಅ ॥ ದೇವತೆಗಳ ವಿಷಯದಲ್ಲಿ ಮುಖ್ಯವಾಯುವೇ ವಾಗಾದಿ ಇಂದ್ರಿಯಗಳ ವಿಷಯದಲ್ಲಿ ಮುಖ್ಯಪ್ರಾಣನೇ ಹೀಗೆ ಇವರಿಬ್ಬರೇ ಸಂವರ್ಗವೆನಿಸಿದವರು. ೪ ॥

ಟೀ—ಮುಖ್ಯವಾಯುವೇ ಸಂವರ್ಗವೆನಿಸಿದವನೆಂಬ ವಿಷಯದಲ್ಲಿ ಹಿಂದಿನ ಶ್ರುತಿ ಹೇಳುತ್ತಾರೆ—

ಉ. ॥ ಅಥ ಹ ಶೌನಕಂ ಚ ಕಾಪೇಯಮಭಿಪ್ರತಾರಿಣಂ ಚ ಕಾಕ್ಷ-ಸೇನಿಂ ಪರಿವಿಷ್ಯಮಾಣೌ ಬ್ರಹ್ಮಚಾರೀ ಬಿಭಿಕ್ಷೇ ತಸ್ಮಾ ಉ ಹ ನ ದದತುಃ ॥ ॥ ೫ ॥

ಅ ॥ ಕಪಿಗೋತ್ರದಲ್ಲಿ ಹುಟ್ಟಿದ ಶುನಕನ ಮಗನಾದ ಶೌನಕನೂ, ಕಕ್ಷಸೇನನ ಮಗನಾದ ಅಭಿಪ್ರತಾರಿಯು, ಇವರಿಬ್ಬರೂ ಅನ್ನವನ್ನು (ಅತಿಥಿಗಳಿಗೆ) ಬಡಿಸುತ್ತಿರುವಾಗ ಇವರೊಡನೆ ಒಬ್ಬಾನೊಬ್ಬ ಬ್ರಹ್ಮಚಾರಿಯು ಅನ್ನವನ್ನು ಬೇಡಿದನು ಇವರಿಬ್ಬರೂ ಆತನಿಗೆ ಕೊಡಲಿಲ್ಲ. ಅಶ್ರುಯಾ. ॥ ೫ ॥

ಉ. ॥ ಸ ಹೋವಾಚ ಮಹಾತ್ಮನಶ್ಚತುರೋ ದೇವ ಏಕಃ ಕಃ ಸೋ ಜಗಾರ ಭುವನಸ್ಯ ಗೋಪಾಸ್ತಂ ಕಾಪೇಯ ನಾಭಿಪಶ್ಯಂತಿ ಮತ್ಯಾ ಅಭಿ-ಪ್ರತಾರಿನ್ ಬಹುಧಾ ನಸಂತಂ ಯಸ್ಯೈ ವಾ ಏತದನ್ನಂ ತಸ್ಮಾ ಏತನ್ನ ದತ್ತ-ಮಿತಿ ॥ ೬ ॥

ಅ ॥ ಆಗ ಬ್ರಹ್ಮಚಾರಿಯು ಅವರೊಡನೆ ಹೇಳಿದನು. ಎಲೋ ಕಾಪೇಯನೇ. ಎಲೋ ಅಭಿಪ್ರತಾರಿಯೇ, ಯಾವನು ಸಮಸ್ತ ಜಗತ್ತನ್ನು ರಕ್ಷಿಸುವವನೋ, ಒಬ್ಬ ದೇವನು ಅಧಿದೈವದಲ್ಲಿ ನಾಲ್ಕು ಮಹಾನುಭಾವರಾದ ಅಗ್ನ್ಯಾದಿಗಳನ್ನೂ, ಅಧ್ಯಾತ್ಮದಲ್ಲಿ ವಾಗಾದಿಗಳನ್ನೂ ನುಂಗಿರುವನೋ, ಮನುಷ್ಯರಲ್ಲಿ ಬಹುರೂಪದಿಂದ ಆವಾಸಮಾಡುತ್ತಿರುವವನನ್ನು ಮನುಷ್ಯರು ತಿಳಿಯುವುದಿಲ್ಲವೋ, (ಅವನು ಯಾರು? ಅವನ ಹೆಸರೇನು? ಆತನ ಮಹಿಮೆಯೇನು? ಅವನನ್ನು ನಾನು ತಿಳಿದಿರುತ್ತೇನೆ. ನೀವು ತಿಳಿದಿದ್ದರೆ ಹೇಳಿರಿ. ಇದುಕಾರಣ) ಯಾವ ದೇವತೆಯದ್ದು ಅನ್ನವೋ ಅದನ್ನೇ ಆ ದೇವತೆಗೆ ನೀವು ಕೊಡಲಿಲ್ಲ. ಅದುದರಿಂದ ಕೊಡಿರಿ. ॥ ೬ ॥

ಉ. ॥ ತದು ಹ ಶೌನಕಃ ಕಾಪೇಯಃ ಪ್ರತಿಮನ್ವಾನಃ ಪ್ರತ್ಯೇಯಾಯ ಆತ್ಮಾ ದೇವಾನಾಂ ಜನಿತಾ ಪ್ರಜಾನಾಂ ಹಿರಣ್ಯದಂಷ್ಟ್ರೋ ಬಭಸೋಽನ ಸೂರಿರ್ಮಹಾಂತಮಸ್ಯ ಮಹಿಮಾನಮಾಹುರನದ್ಯಮಾನೋ ಯದನನ್ನಮ-ತ್ತೀತಿ ವೈ ವಯಂ ಬ್ರಹ್ಮಚಾರಿನ್ನಿದಮುಪಾಸ್ಮಹೇ ದತ್ತಾಸ್ಯೈ ಭಿಕ್ಷಾಮಿತಿ ॥೭॥

ಅ ॥ ಬ್ರಹ್ಮಚಾರಿಯು ಹೀಗೆ ಹೇಳಲಾಗಿ ಕಪಿಗೋತ್ರದಲ್ಲಿ ಹುಟ್ಟಿದ ಶೌನಕನು ಬ್ರಹ್ಮಚಾರಿಯು ಹೇಳಿದ್ದನ್ನೇ ವಿಚಾರಮಾಡುತ್ತಾ ತಿಳಿದನು. ತಿಳಿದು ಬ್ರಹ್ಮಚಾರಿಗೆ ಹೇಳಿದನು. ಬ್ರಹ್ಮಚಾರಿಯೇ ನೀನು ಹೇಳಿದ ದೇವತೆಯು ಅಗ್ನ್ಯಾದಿ ದೇವತೆಗಳಿಗೆ ಸ್ವಾಮಿಯು. ಪ್ರಜೆಗಳಿಗೆ ಉತ್ಪಾದಕನು, ಸರ್ವಭಕ್ಷಕನು, ಅಂತಹವನು ಸರ್ವರಿಗೆ ಜ್ಞೇಯಕನಾಮದರಿಂದಲೂ ಜ್ಞಾನಿಯಾದುದರಿಂದಲೂ ಅನಸೂರಿ ಎನಿಸಿದ ಮುಖ್ಯಪ್ರಾಣನು ಈ ಮುಖ್ಯಪ್ರಾಣನ ಮಹಿಮೆಯನ್ನು ಸ್ತ್ರಾಜ್ಞರು ಹೇಳುತ್ತಾರೆ. ಮುಖ್ಯಪ್ರಾಣನು ವಿಷ್ಣುವನ್ನು ಹೊರತು ಬೇರೆ ದೇವತೆಗಳಿಗೆ ತಿನ್ನಲಶಕ್ಯನು, ತಾನು ಎಲ್ಲಾ ದೇವತೆಗಳ ಸಮುದಾಯವನ್ನು ತಿನ್ನುವವನು, ಸಂಹಾರಕನವನು, ಹೀಗೆ ಈ ದೇವತೆಯನ್ನು ಬಾಸಾಸನಮಾಡುತ್ತೇವೆ. ವಾಯು ದೇವತೆಯನ್ನು ತಿಳಿದ ಬ್ರಹ್ಮಚಾರಿಗೆ ಬಿಳಿವಾ ಬ್ರಹ್ಮಚಾರಿಯಲ್ಲಿದ್ದ ಪ್ರಾಣನಿಗೆ ಎಲೋ ಭೃತ್ಯರೇ ಭಿಕ್ಷೆಯನ್ನು ಕೊಡಿರಿ, ಎಂದು ಕಾಪೇಯನು ಹೇಳಿದನು. ॥ ೭ ॥

ಉ. ॥ ತಸ್ಮಾ ಉ ಹ ದದುಸ್ತೇ ವಾ ಏತೇ ಪಂಚಾನ್ಯೇ ಪಂಚಾನ್ಯೇ ದಶ ಸಂತಸ್ತತ್ಕೃತಂ ತಸ್ಮಾತ್ಸರ್ವಾಸು ದಿಕ್ಷ್ವನ್ನಮೇವ ದಶಕೃತಃ ಸೈಷಾ ವಿರಾಡನ್ನಾದೀ ತಯೇದಂ ಸರ್ವಂ ದೃಷ್ಟ್ವೇ ಸರ್ವಮಸ್ಯೇದಂ ದೃಷ್ಟಂ ಭವತ್ಯನ್ನಾದೋ ಭವತಿ ಯ ಏವಂ ವೇದ ಯ ಏವಂ ವೇದ ॥ ಇತಿ ತೃತೀಯಃ ಖಂಡಃ ॥ ೬-೩ ॥

॥ ೮ ॥

ಅ ॥ ಅಗ ಕೆಲವು ಒಡಿಸುವವರು ಆ ಬ್ರಹ್ಮಚಾರಿಗೆ ಅಗಲೇ ಭಿಕ್ಷೆ ಕೊಟ್ಟರು. (ಹೀಗಾದರೆ ಪ್ರಾಣನೇ ಸರ್ವೋತ್ಕೃಷ್ಟವಾದ ಸರ್ವಸಂಪಾದಕನೋ, ಏನು? ಎಂದರೆ—ವೈಕ್ಷರು ಅಲ್ಲವೆನ್ನುತ್ತಾರೆ—) ಅಧಿದೈವದಲ್ಲಿ ಅಗ್ನ್ಯಾದಿಗಳು ನಾಲ್ವರು, ಮುಖ್ಯವಾಯು ಹೀಗೆ ಐವರು, ಹಾಗೆಯೇ ಅಧ್ಯಾತ್ಮದಲ್ಲಿ ವಾಙ್ಮನಿಗಳು ನಾಲ್ವರು, ಮುಖ್ಯಪ್ರಾಣನು ಹೀಗೆ ಇವರು. ಹೀಗೆ ಹತ್ತು ಮಂದಿಯೂ ಹತ್ತು ದೇವತೆಗಳು ಕೃತಂ (ಪೂರ್ಣವಾದ ಅನ್ನವು) ಎನಿಸುತ್ತಾರೆ. (ಕೃತಯುಗದ ಪೂರ್ಣವಾದ ಧರ್ಮವೆಲ್ಲವನ್ನು ಹೇಗೋ, ಹಾಗೆಯೇ ಹತ್ತು ದೇವತೆಗಳು ಪೂರ್ಣರಾಗಿದ್ದಾರೆ.) ಅಗ್ನ್ಯಾದಿಗಳು ಅಧಿದೈವ ಅಧ್ಯಾತ್ಮ ಭೇದದಿಂದ ಎಂಟು ಮಂದಿಯಾದರೂ ಮುಖ್ಯವಾಯು, ಮುಖ್ಯಪ್ರಾಣ ಇವರಿಂದೊದಗಿಂಡಿ ಹತ್ತು ಮಂದಿಯಾಗುವುದರಿಂದ, ಹತ್ತು ದಿಕ್ಕುಗಳಲ್ಲಿರತಕ್ಕ ಹತ್ತು ದೇವತೆಗಳು ಪೂರ್ಣವಾದ ಅನ್ನ ಎನಿಸುತ್ತಾರೆ. (ಈ ದೇವತೆಗಳು ಯಾರಿಗೆ ಅನ್ನ ವೆಂದರೆ—) ಪ್ರಸಿದ್ಧವಾದ ಸರ್ವಾನ್ನಕ್ಕೂ ದೇವತೆಯಾದವನು ವಿಶೇಷವಾಗಿ ಪ್ರಕಾಶಿಸಿಕೊಂಡಿರುವ ವಿಷ್ಣುವೇ ಸರ್ವವನ್ನು ತಿನ್ನುವವನು. (ಅವನಿಗೆ ಸರ್ವವನ್ನು ಗಳ ಅನ್ನವಿಲ್ಲದಿದ್ದರೆ ಸರ್ವವನ್ನು ಭಕ್ಷಿಸುವವನು ಹೇಗೆಂದರೆ) ಆ ವಿಷ್ಣುವಿನಿಂದ ವಾಯು ಮೊದಲಾದ ಎಲ್ಲ ಜಗತ್ತು ಕಾರ್ಯರೂಪವಾಗಿದೆ. (ಅದಕ್ಕೆ ಕಾರಣ ಅವನು ಸರ್ವಜ್ಞನೇ.) (ಹೀಗೆ ವಿಷ್ಣುವನ್ನು ಪಾಸನೆ ಮಾಡುವವನಿಗೆ ಆದಕ್ಕೆ ಅನುಗುಣವಾದ ಫಲ ಹೇಳುತ್ತಾರೆ—) ಮುಖ್ಯವಾಯುವು ತಾನು ಸಮಸ್ತ ಜಗತ್ತನ್ನು ಸಂಹರಿಸುವುದರಿಂದ ಸಂವರ್ಗನೆನಿಸಿಕೊಂಡವನಾಗಿ ಶ್ರೇಷ್ಠರಿಗೆ ಅನ್ನನಾಗುತ್ತಾನೆಂದು ತಿಳಿದವನು ಯಜ್ಞೇಷ್ಟ ಭೋಗ್ಯವಸ್ತುವನ್ನುಣ್ಣುತ್ತಾನೆ ಉಪಾಸಕನು ಸ್ವಭೋಗ್ಯವಾಗಿದೆಲ್ಲವನ್ನು ಕಾಣುತ್ತಾನೆ ಸರ್ವಜ್ಞನಾಗುತ್ತಾನೆ.(೬-೩)

॥ ೮ ॥

ಪೀ—ಹುಲ್ಲು ಮೊದಲಾದುವನ್ನು ಬಂಧು ಕಟ್ಟಿ ಸೇರಿಸುವುದರಿಂದ ಜಡವಾಯುವು ಸಂವರ್ಗನೆನಿಸುತ್ತದೆ ಎಂದು ಪರರು ಹೇಳುವುದು ಅಯುಕ್ತವೆಂಬ ಅಭಿಪ್ರಾಯದಿಂದ ಪ್ರವಾಹಣ ಹೋಮದ ಮಂತ್ರಕ್ಕೆ ಅರ್ಥ ಹೇಳುತ್ತಾರೆ.

ಭಾ. ॥ (೧) ಸಂವೃಂಕ್ತೇ ಸರ್ವದೇವಾನ್ಯದ್ವಾಯುಃ ಸಂವರ್ಗ ಈರಿತಃ । ಮುಖ್ಯಸ್ಯ ಮಹಾನೇಷ ಯದನದ್ಯೋಽತ್ತಿ ದೇವತಾಃ ॥ ಇತಿ ಪ್ರಭಂಜನೇ ॥ (೨) ದಶೇತಿ ನೈ ಸರ್ವಮಿತಿ ಶ್ರುತೇಃ । ಕೃತಸ್ಯ ಚ ಪೂರ್ಣಾತ್ಮಕತ್ವಾದಧ್ಯಾತ್ಮಾಧಿದೈವತಭೇದೇನ ಪಂಚ ದೇವತಾ ದಶಭೂತಾಃ ಕೃತಂ ॥ (೩) ತಸ್ಮಾದ್ವಾಯುನಾ ಸಹ ದಶಸಂಖ್ಯಾಪೂರಣಾತ್ ಸರ್ವದಿಕ್ಷು ಸ್ಥಿತಾ ದೇವತಾ ವಾಯುನಾ ಸಹಾನ್ನಮೇವ ॥ (೪) ಅನ್ನಾದೀ ದೇವತಾ ವಿರಾಡ್ವಿಷ್ಣುರೇವ ॥ (೫) ಅನದ್ಯಮಾನ ಇತ್ಯನ್ಯೈರನದ್ಯಮಾನಃ ॥ (೬) ವಾಯುಸ್ತು ಸರ್ವದೇವಾತ್ಮಾ ವಾಯೋರಪಾ ಜನಾರ್ದನಃ । ನ ತಸ್ಯ ಕಶ್ಚಿದಶ್ನಾತ್ಯಸ್ತಿ ಸ ವಿರಾಡಧಿರಾಜನಾಶ್ ಇತಿ ಚ ॥ ೧, ೨, ೩, ೪, ೫, ೬, ೭, ೮ ॥ ಇತಿ ತೃತೀಯಃ ಖಂಡಃ ॥ ೬-೩ ॥ ॥ ೧ ॥

ಅ ॥ (೧) ವಾಯುವು ಸಮಸ್ತ ದೇವತೆಗಳನ್ನು ಸಂಹರಿಸುವುದರಿಂದ ಸಂವರ್ಗನೆನಿಸುತ್ತಾನೆ. (ಏನೇ ಮುಂತ್ರದಲ್ಲಿದ್ದ ಮಹಾಂತಮಸ್ಯ ಎಂಬುದರ ಅರ್ಥ ಹೇಳುತ್ತಾರೆ—) ಮುಖ್ಯವಾಯುವು ವಿಷ್ಣು

ಹೊರತು ಬೇರೆಯವರಿಂದ ಸಂಪರಿಸಲ್ಪಡದಿರುವವನು. ತಾನು ಸಮಸ್ತ ದೇವತೆಗಳನ್ನು ಸಂಪರಿಸುವವನು. ಅದುಕಾರಣ ವಾಯುವಿನ ಮಹಿಮೆಯು ಅತಿಶ್ರೇಷ್ಠವಾಗಿದೆ. ಎಂದು ಪ್ರಥಂಜನನೆಂಬ ಗ್ರಂಥದಲ್ಲಿ ಹೇಳಿದೆ (೨) ಇನೇ ಮುಂತಾದಲ್ಲಿದ್ದ ದಶ ಎಂಬುವುದಕ್ಕೆ ಪೂರ್ಣವೆಂಬ ಅರ್ಥವಿದೆ ಎಂಬುವಲ್ಲಿ ವೇದ ಪ್ರಮಾಣ ಹೇಳುತ್ತಾರೆ) ದಶ ಎಂಬುವುದಕ್ಕೆ ಸರ್ವವೆಂದು ಅರ್ಥವು. **ಸರ್ವಂ ಪೂರ್ಣಮಿಹೋಚ್ಯತೇ** ಎಂಬ ಸ್ಮೃತಿಯಿಂದ ಸರ್ವವೆಂದರೆ ಪೂರ್ಣವು. ಅಂತೂ ದಶ ಎಂಬುದಕ್ಕೆ ಪೂರ್ಣವೆಂದು ಅರ್ಥವು. ಆ ಹತ್ತು ದೇವತೆಗಳು ಪೂರ್ಣರಾಗಿದ್ದರೂ **ಕೃತಂ** ಎಂದು ಹೇಳಿದ್ದು ಹೇಗೆ? ಎಂದರೆ--) ಕೃತಯುಗದ ಪೂರ್ಣ ಧರ್ಮವೃದ್ಧಿಯಾದುದರಿಂದ ಅಧ್ಯಾತ್ಮ ಅಧಿದೈವತ ಎಂಬ ಭೇದದಿಂದ ಐದು ದೇವತೆಗಳು ಹತ್ತು ಮಂದಿಯಾಗಿ ಕೃತಂ ಎನಿಸುತ್ತಾರೆ (೩) ಅಧ್ಯಾತ್ಮ ಅಧಿದೈವತ ಎಂಬ ಭೇದದಿಂದ ವಾಯುದೇವರು ಮುಖ್ಯವಾಯುರೂಪ, ಮುಖ್ಯಪ್ರಾಣರೂಪ, ಈ ಎರಡೂ ರೂಪಗಳು ಒಟ್ಟು ಸೇರಿ ಹತ್ತು ಮಂದಿಯಾಗುವುದರಿಂದ ಹತ್ತು ದಿಕ್ಕುಗಳಲ್ಲಿರತಕ್ಕ ಹತ್ತುದೇವತೆಗಳು ಅನ್ನ ವೆಂದೇ ಎನಿಸುತ್ತಾರೆ. (೪) (ಹೀಗಾದರೆ— **ಸೈಷಾ ವಿರಾಡನ್ನಾದೀ** ಎಂಬ ಉತ್ತರವಾಕ್ಯದಲ್ಲಿ ವಾಯುದೇವರು ಅನ್ನಾದಿಗಳು ಅನ್ನವನ್ನುಣ್ಣುವವರು ಎಂದು ಹೇಳಿದುದರಿಂದ ಆ ವಾಕ್ಯದಿಂದ ವಿರೋಧವು ಎಂದರೆ—) ಹಿಂದಿನ ವಾಕ್ಯದಲ್ಲಿ ವಾಯುದೇವರನ್ನು ಅನ್ನ ಎಂದು ಹೇಳಿದುದರಿಂದ ಇಲ್ಲಿ ಅನ್ನಾದಿ ಎಂದು ಹೇಳುವುದಿಲ್ಲ. ವಾಯುವೇ ಅನ್ನವೂ ಅನ್ನಾದಿಯೂ ಅಂದರೆ— ತಿನ್ನಲ್ಪಡುವ ಅನ್ನವು ತಿನ್ನುವ ಜೀವನು ಆಗಲಾರನು. ಅದುಕಾರಣ ಅನ್ನಾದಿ ದೇವತೆಯು (೧೦ ದೇವತೆಗಳನ್ನು ಸಂಪರಿಸುವವನು) ವಿಶೇಷವಾಗಿ ಪ್ರಕಾಶಿಸುವ ಶ್ರೀವಿಷ್ಣುವೇ. (೫) (ವಿಷ್ಣುವೆ ಅನ್ನವನ್ನು ತಿನ್ನುವವನೆಂದಂಗೀಕರಿಸಿ ವಾಯುವು ಅನ್ನವೆಂದಂಗೀಕರಿಸಿದರೆ **ಅನದ್ಯಮಾನಃ** ಎಂದು ಹೇಳಿದ್ದು ವಿರುದ್ಧವಾಯಿತೆಂದರೆ—) ವಿಷ್ಣು ವಿನಹ ಇತರರಿಂದ ಸಂಪರಿಸಲ್ಪಡದಿರುವವನು, ಎಂದರ್ಥವು. (೬) (**ಯದನನ್ನಮತ್ತಿ** ಎಂದು ವಾಯುದೇವರು ಸಮಸ್ತ ದೇವತೆಗಳನ್ನು ಸಂಪರಿಸುವವರು ಎಂದು ಹೇಳಿದುದರಿಂದ ವಾಯುದೇವರು ವಿಷ್ಣುವಿಗೆ ಅನ್ನರಾಗುವುದು ಹೇಗೆ ಎಂದರೆ—) ಸಮಸ್ತ ದೇವತೆಗಳನ್ನು ಸಂಪರಿಸುವವರು ವಾಯುದೇವರು. ವಾಯುದೇವರನ್ನು ಸಂಪರಿಸುವವನು ಶ್ರೀಹರಿಯು. ಶ್ರೀಹರಿಗೆ ಸಂಪಾರಕನು ಯಾರೂ ಇಲ್ಲ. ಜೆನ್ನಾಗಿ ಪ್ರಕಾಶಿಸುವುದರಿಂದ ವಿರಾಟ್ ಎನಿಸುತ್ತಾನೆ. ॥ ೧. ೩. ೩. ೪. ೫. ೬ ॥ ೬ - ೫ ॥ ॥ ೯ ॥

ಮೂರನೇ ಖಂಡವು ಮುಗಿಯಿತು.

ಎನೇ ಖಂಡವು

ಹೀ—ಪರಾಪರವಿಷಯಕ ಸಂವರ್ಗವಿದ್ಯೆಯನ್ನು ಹೇಳಿದರು. ಈಗ ಪರಬ್ರಹ್ಮವಿಷಯಕವೇ ಆದ ವಾಸುದೇವ ಮೊದಲಾದ ನಾಲ್ಕು ಭಗವನ್ಮೂರ್ತಿಗಳ ವಿದ್ಯೆಯನ್ನೂ ಹಿಂದಿನ ಕಥೆಯನ್ನೂ ವಿವರಿಸುತ್ತಾ ಹೇಳುತ್ತಾರೆ - ಅಥವಾ ಮೊದಲು **ಚತುಷ್ಪಾತ್ ಬ್ರಹ್ಮ** ಇತ್ಯಾದಿಗಳಿಂದ ವಾಸುದೇವ ಮೊದಲಾದ ನಾಲ್ಕು ಭಗವನ್ಮೂರ್ತಿಗಳ ವಿದ್ಯೆ ಹೇಳಿದರು. ಈಗ ಪ್ರತ್ಯೇಕವಾಗಿ ವಾಸುದೇವಾದಿ ನಾಲ್ಕು ರೂಪಗಳ ವಿದ್ಯೆಯನ್ನು ಹಿಂದಿನ ಕಥೆ ವಿವರಿಸುತ್ತಾ ಆರು ಖಂಡಗಳಲ್ಲಿ ಹೇಳುತ್ತಾರೆ—

ಓಂ. ॥ ಸತ್ಯಕಾಮೋ ಹ ಜಾಬಾಲೋ ಜಬಾಲಾಂ ಮಾತರಮಾಮಂ-ತ್ರಯಾಂಚಕ್ರೇ ಬ್ರಹ್ಮಚರ್ಯಂ ಭವತಿ ವಿವತ್ಸ್ಯಾಮಿ ಕಿಂಗೋತ್ರೋನ್ವಹ-ಮಸ್ಮೀತಿ ॥ ೧ ॥

ಅ ॥ ಜಬಾಲೆಯ ಮಗನಾದ ಸತ್ಯಕಾಮನು ಜಬಾಲೆಯೆಂಬ ತಪ್ಪ ತಾಯಿಯನ್ನು ಕರೆದು ಹೇಳಿದನು. ತಾಯಿಯೇ ನಾನು ವೇದಾಧ್ಯಯನಕ್ಕಾಗಿ (ದೇಶಾಂತರಕ್ಕೆ ಹೋಗಿ) ಆಚಾರ್ಯರ ಸಮೀಪದಲ್ಲಿ ಅವಾಸಮಾಡುವೆನು. (ಇವನಿಗೆ ಈ ತನಕ ಉಪನಯನವಾಗಲಿಲ್ಲ. ಗೋತ್ರ ನಿರ್ಣಯವಾಗದಿದ್ದರೆ ಆಚಾರ್ಯರು ಉಪನಯನವನ್ನಾಡಲಾರರು. ಅದುಕಾರಣ) ನನ್ನ ಗೋತ್ರವು ಯಾವುದು? ಎಂದನು. ॥ ೧ ॥

ಉ. ॥ ಸಾ ಹೈನಮುವಾಚ ನಾಹಮೇತದ್ವೇದ ತಾತ ಯದ್ಗೋತ್ರಸ್ತ್ವಮಸಿ ಬಹ್ವಹಂ ಚರಂತೀ ಪರಿಚಾರಿಣೀ ಯೌವನೇ ತ್ವಾಮಲಭೇ ಸಾಹಮೇತನ್ನ ವೇದ ಯದ್ಗೋತ್ರಸ್ತ್ವಮಸಿ ಜಬಾಲಾ ತು ನಾಮಾಹಮಸ್ಮಿ ಸತ್ಯಕಾಮೋ ನಾಮ ತ್ವಮಸಿ ಸ ಸತ್ಯಕಾಮೋ ಜಾಬಾಲೋಽಬ್ರವೀಥಾ ಇತಿ ॥ ೨ ॥

ಅ ॥ ಆಗ ತಾಯಿಯು ಮಗನಿಗೆ ಹೇಳಿದಳು ಮಗನೇ ನಿನ್ನ ಗೋತ್ರವು ಯಾವುದೆಂದು ನಾನು ತಿಳಿಯಲಾರೆ (ಏಕೆಂದರೆ) ನಾನು ಬೇರೆಯವರ ಮನೆಯಲ್ಲಿ ಬಹು ಕರ್ಮಗಳನ್ನು ಯಜಮಾನರಾ ನಾಡಿಕೊಂಡು ದಾಸಿಯಾಗಿ ಯೌವನಕಾಲದಲ್ಲಿ ನಿನ್ನನ್ನು ಪಡೆದಿರುವೆನು ಅದುಕಾರಣ ವಿಲಾಸ ಭೋಗದಲ್ಲಿ ಆಸಕ್ತಳಾದ ಕಾರಣ ನಿನ್ನ ಗೋತ್ರವು ಯಾವುದೆಂದು ನಾನು ತಿಳಿಯಲಾರೆ. ಜಬಾಲಾ ಎಂದು ನನ್ನ ಹೆಸರು. ಸತ್ಯಕಾಮನೆಂದು ನಿನ್ನ ಹೆಸರು ಆದಪ್ಯಯುಕ್ತ ಗುರುಗಳಲ್ಲಿ ಸತ್ಯಕಾಮನೆಂದು ನನ್ನ ಹೆಸರು. ಜಬಾಲೆಯ ಮಗನು ಎಂದೇ ಹೇಳು. ಎಂದು ಹೇಳಿದಳು ॥ ೩ ॥

ಉ. ॥ ಸ ಹ ಹಾರಿದ್ರುಮತಂ ಗೌತಮಮೇತ್ಯೋವಾಚ ಬ್ರಹ್ಮಚರ್ಯಂ ಭಗವತಿ ವತ್ಸ್ಯಾಮ್ಯುಪೇಯಾಂ ಭಗವಂತಮಿತಿ ॥ ೪ ॥

ಅ ॥ ಸತ್ಯಕಾಮನು ಹರಿದ್ರುಮರ್ ಋಷಿಗಳ ಮಗನಾದ ಗೌತಮಋಷಿಗಳ ಬಳಿಗೆ ಬಂದು ಪೂಜ್ಯರಾದ ತಮ್ಮಲ್ಲಿ ಬ್ರಹ್ಮಚರ್ಯಾಶ್ರಮವನ್ನು ಸಾಧಿಸುವುದಕ್ಕಾಗಿ ಅವಾಸಮಾಡುವೆನು. ಪೂಜ್ಯರಾದ ತಮಗೆ ಶಿಷ್ಯನಾಗುವೆನೆಂದನು.

ಉ. ॥ ತಕ್ಂ ಹೋವಾಚ ಕಿಂಗೋತ್ರೋ ನು ಸೋಮ್ಯಾಸೀತಿ ಸ ಹೋವಾಚ ನಾಹಮೇತದ್ವೇದ ಭೋ ಯದ್ಗೋತ್ರೋಽಹಮಸ್ಮ್ಯಪೃಚ್ಛಂ ಮಾತರಂ ಸಾ ಮಾ ಪ್ರತ್ಯಬ್ರವೀದ್ಬಹ್ವಹಂ ಚರಂತೀ ಪರಿಚಾರಿಣೀ ಯೌವನೇ ತ್ವಾಮಲಭೇ ಸಾಹಮೇತನ್ನ ವೇದ ಯದ್ಗೋತ್ರಸ್ತ್ವಮಸಿ ಜಬಾಲಾ ತು ನಾಮಾಹಮಸ್ಮಿ ಸತ್ಯಕಾಮೋ ನಾಮ ತ್ವಮಸೀತಿ ಸೋಽಹಂ ಸತ್ಯಕಾಮೋ ಜಾಬಾಲೋಽಸ್ಮಿ ಭೋ ಇತಿ ॥ ೪ ॥

ಅ ॥ ಸತ್ಯಕಾಮನ ಪತ್ತಿರ ಗೌತಮರು ಎಲೋ ಸುಮುಖನೇ ನಿನ್ನ ಗೋತ್ರವು ಯಾವುದು? ಎಂದು ಕೇಳಿದರು. ಆಗ ಸತ್ಯಕಾಮನು. ನನ್ನ ಗೋತ್ರವು ಯಾವುದೆಂದು ನಾನು ತಿಳಿಯಲಿಲ್ಲ. ತಾಯಿಯ ಪತ್ತಿರ ಕೇಳಿದೆನು. ಆಗ ಅವಳು ಹೇಳಿದಳು ನಾನು ತಿಳಿಯಲಾರೆ ಬೇಸಕನ ಮನೆ

ಈ ಲೋಕದಲ್ಲಿ ಪ್ರಕಾಶವುಳ್ಳವನೂ ಪ್ರಖ್ಯಾತಿಪಟ್ಟವನೂ ಆಗುತ್ತಾನೆ, ಹೀಗೆ ತಿಳಿದವನಿಗೆ ಐಹಿಕ ಫಲವಾತ್ರವಲ್ಲ, ಮತ್ತೆ ಅತನು ಪ್ರಕಾಶವುಳ್ಳ ನೈಕುಂಠಾದಿ ಲೋಕಗಳನ್ನು ಹೊಂದುತ್ತಾನೆ. [೬-೫] ॥ ೬ ॥

ಐದನೇ ಖಂಡವು ಮುಗಿಯಿತು.

೬ನೇ ಖಂಡವು

ಉ. ॥ ಅಗ್ನಿಷ್ಟೇ ಪಾದಂ ವಕ್ತೇತಿ ಸ ಹ ಶ್ಮೋಭೂತೇ ಗಾ ಅಭಿಪ್ರಸ್ಥಾಪಯಾಂಚಕಾರ ತಾ ಯತ್ರಾಭಿಸಾಯಂ ಬಭೂವುಸ್ತತ್ರಾಗ್ನಿಮುಪಸಮಾಧಾಯ ಗಾ ಉಪರುಧ್ಯ ಸನಿಧಮಾಧಾಯ ಪಶ್ಚಾದಗ್ನೇಃ ಪ್ರಾಙುಪೋಪವಿವೇಶ

॥ ೧ ॥

ಅ ॥ ವೃಷಭಾಪಿಪ್ಪರಾದ ವಾಯುದೇವರು ವಾಸುದೇವ ಎಂಬ ಬ್ರಹ್ಮನ ಒಂದು ರೂಪವನ್ನು ಉಪದೇಶಿಸಿ ನಿನಗೆ ಅಗ್ನಿದೇವತೆಯು ಪರಬ್ರಹ್ಮನ ಸಂಕರ್ಷಣವೆಂಬ ಒಂದು ಪಾದವನ್ನು ಹೇಳುವನು, ಎಂದು ಹೇಳಿ ಹೊರಟುಹೋದರು ಸತ್ಯಕಾಮನು ಮರುದಿವಸ (ನಿತ್ಯಕರ್ಮಗಳನ್ನು ಮಾಡಿ) ಗೋವುಗಳನ್ನು ಆಚಾರ್ಯರ ಮನೆಯ ಇದಿರು ಒಯ್ಯುತ್ತಾ ಇದ್ದನು. ಅವುಗಳು ಮೆಲ್ಲಗೆ ಸಂಚರಿಸುತ್ತಾ ಆಚಾರ್ಯರ ಮನೆಯ ಇದಿರು ನಿಂತವು. ಯಾವ ಪ್ರದೇಶದಲ್ಲಿ ಸಾಯಂಕಾಲವಾಯಿತೋ ಅಲ್ಲಿ ಗೋವುಗಳನ್ನು ತಡೆದು ನಿಲ್ಲಿಸಿ ಅಗ್ನಿ ಪ್ರತಿಷ್ಠಮಾಡಿ ಅಗ್ನಿಗೆ ಸವಿ.ಛೆ ಹಾಕಿ ಅಗ್ನಿಯ ಇದಿರು ಮೂಡುನುಖನಾಗಿ ಋಷಭನ ಉಪದೇಶದಂತೆ ದೇವಂನ್ನು ಧ್ಯಾನಿಸುತ್ತಾ ಅಗ್ನಿಯ ಸವಿಾಪದಲ್ಲಿ ಕುಳಿತನು. ॥ ೬ ॥

ಉ. ॥ ತಮಗ್ನಿರಭ್ಯವಾದ ಸತ್ಯಕಾಮಾ ೩ ಇತಿ ಭಗವ ಇತಿ ಹ ಪ್ರತಿಶುಶ್ರಾವ

॥ ೨ ॥

ಅ ॥ ಸತ್ಯಕಾಮನಿಗೆ ಅಗ್ನಿಯು ಪ್ರತ್ಯಕ್ಷನಾಗಿ ಸತ್ಯಕಾಮನೇ ಎಂದನು. ಸತ್ಯಕಾಮನು ಆ ಅಗ್ನಿಗೆ 'ಹೇ ಭಗವನ್' ಎಂದು ಉತ್ತರಿಸಿದನು. ॥ ೨ ॥

ಉ. ॥ ಬ್ರಹ್ಮಣಃ ಸೋಮ್ಯ ತೇ ಪಾದಂ ಬ್ರವಾಣೀತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚ ಪೃಥಿವೀ ಕಲಾಂತರಿಕ್ಷಂ ಕಲಾ ದ್ಯೌಃ ಕಲಾ ಸಮುದ್ರಃ ಕಲೈಷ ವೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣೋನಂತವಾನ್ನಾಮ

॥ ೩ ॥

ಅ ॥ ಸುಮುಖನೇ ಪರಬ್ರಹ್ಮನ ಅಂಶವಾದ ಸಂಕರ್ಷಣನಿಗೆ ನಾಲ್ಕು ಸ್ವರೂಪಾಂಶಗಳಿವೆ, ಎಂದು ನಾನು ನಿನಗೆ ಹೇಳುತ್ತೇನೆಂದು ಅಗ್ನಿಯು ಹೇಳಿದನು. ಹೇಳಬೇಕೆಂದು ಕೇಳಿಕೊಂಡ ಮೇಲೆ ಅಗ್ನಿಯು ಸತ್ಯಕಾಮನಿಗೆ ಹೇಳಿದನು. ಪೃಥಿವೀ ಎನಿಸಿಕೊಂಡ ಪೃಥಿವಿಗೆ ನಿಯಾಮಕನಾಗಿ ಪೃಥಿವಿಯಲ್ಲಿರುವ ಸಂಕರ್ಷಣ ವಾಸುದೇವ ರೂಪವೆ ಪರಬ್ರಹ್ಮನ ಅಂಶಭೂತನಾದ ಸಂಕರ್ಷಣನ ಮೊದಲಿನ ರೂಪವು.

ಅಂತರಿಕ್ಷಕ್ಕೆ ನಿಯಾಮಕನಾಗಿ ಅಂತರಿಕ್ಷದಲ್ಲಿರತಕ್ಕ ಅಂತರಿಕ್ಷನೆನಿಸಿಕೊಂಡ ಸಂಕರ್ಷಣ ಸಂಕರ್ಷಣ ರೂಪವು ಎರಡನೇ ರೂಪವು ದ್ಯುಲೋಕಕ್ಕೆ ನಿಯಾಮಕನಾಗಿ ದ್ಯುಲೋಕದಲ್ಲಿರುವ ದ್ಯು ಎನಿಸಿಕೊಂಡ ಸಂಕರ್ಷಣ ಪ್ರದ್ಯುಮ್ನ ರೂಪವು ಮೂರನೇ ರೂಪವು. ಸಮುದ್ರಕ್ಕೆ ನಿಯಾಮಕನಾಗಿ ಸಮುದ್ರದಲ್ಲಿರತಕ್ಕ ಸಮುದ್ರನೆನಿಸಿಕೊಂಡ ಸಂಕರ್ಷಣನಾಗಿರುವ ರೂಪವು ಕಾಲ್ಕನೇ ರೂಪವು. ಹೀಗೆ ಪರಬ್ರಹ್ಮನ ಅಂಶನಾದ ಸಂಕರ್ಷಣನಿಗೆ ಸಂಕರ್ಷಣ ವಾಸುದೇವ ಮೊದಲಾದ ನಾಲ್ಕು ರೂಪಗಳು. ನಾಶವಿಲ್ಲದಿರುವುದರಿಂದ ಅನಂತವಾನ್ ಎಂದು ಹೆಸರು.

ಉ. ॥ ಸ ಯ ಏತಮೇವಂವಿದ್ವಾನೇತಂ ಷೋಡಶಕಲಂ ಪಾದಂ ಬ್ರಹ್ಮಣೋ ಽನಂತವಾನಿತ್ಯುಪಾಸ್ತೇಽನಂತವಾನಸ್ಮಿಁಲ್ಲೋಕೇ ಭವತ್ಯನಂತವತೋ ಹ ಲೋಕಾನ್ ಜಯತಿ ಯ ಏತಮೇವಂವಿದ್ವಾನೇತಂ ಷೋಡಶಕಲಂ ಪಾದಂ ಬ್ರಹ್ಮಣೋ ಽನಂತವಾನಿತ್ಯುಪಾಸ್ತೇ ॥ ಇತಿ ಷಷ್ಠಃ ಖಂಡಃ ॥ ೬-೬ ॥ ॥ ೪ ॥

ಅ ॥ ಪರಬ್ರಹ್ಮನ ನಾಲ್ಕು ರೂಪಗಳನ್ನು ತಿಳಿದು ಅನಂತವಾನ್ ಎಂದು ಉಪಾಸನ ಮಾಡಿದವನು ನಾಶವಿಲ್ಲದವನಾಗುತ್ತಾನೆ ಫಲಪ್ರದಿಯುಳ್ಳವನಾಗುತ್ತಾನೆ. ನಾಶವಿಲ್ಲದ ಲೋಕವಿಗಳನ್ನು ಹೊಂದುತ್ತಾನೆ

ಆರನೇ ಖಂಡವು ನುಗಿಯಿತು.

ಏನೇ ಖಂಡವು

ಉ. ॥ ಹಸಿಸಸ್ತೇ ಪಾದಂ ವಕ್ತೇತಿ ಸ ಹ ಶ್ವೋಭೂತೇ ಗಾ ಅಭಿಪ್ರಸ್ಥಾಪಯಾಂಚಕಾರ ತಾ ಯತ್ರಾಭಿಸಾಯಂ ಬಭೂವುಸ್ತತ್ರಾಗ್ನಿಮುಪಸಮಾಧಾಯ ಗಾ ಉಪರುಧ್ಯ ಸಮಿಧಮಾಧಾಯ ಪಶ್ಚಾದಗ್ನೇಃ ಪ್ರಾಙುಪೋಪವಿವೇಶ ॥ ೧ ॥

ಅ ॥ ಅಗ್ನಿದೇವನು ಪರಬ್ರಹ್ಮನ ರೂಪವಾದ ಸಂಕರ್ಷಣನೆನ್ನುವ ನಾಲ್ಕು ರೂಪಗಳನ್ನು ಹೇಳಿ, ಎಲೋ ಸತ್ಯಕಾಮನೇ ನಿನಗೆ ಚತುರ್ಮುಖ ಬ್ರಹ್ಮನು ಹಂಸರೂಪವನ್ನು ತಾಳಿಕೊಂಡು ಪರಬ್ರಹ್ಮನ ಪ್ರದ್ಯುಮ್ನವೆಂಬ ಒಂದು ರೂಪವನ್ನು ಉಪದೇಶಿಸುವನು ಎಂದು ಹೇಳಿ ಹೊರಟುಹೋದನು. ಸತ್ಯಕಾಮನು ಮರುದಿನ... ..... ॥ ೧ ॥

ಉ. ॥ ತಸೈ ಹಸಿಸ ಉಪನಿನಸತ್ಯಾಭ್ಯುವಾದ ಸತ್ಯಕಾಮೇತಿ ಭಗವ ಇತಿ ಹ ಪ್ರತಿಶುಶ್ರಾವ ॥ ೨ ॥

ಅ ॥ ಹಂಸರೂಪಿಯಾದ ಬ್ರಹ್ಮನು ಸತ್ಯಕಾಮನ ಬಳಿಗೆ ಬಂದು... ..... ॥ ೨ ॥

ಉ. ॥ ಬ್ರಹ್ಮಣಃ ಸೋಮ್ಯ ತೇ ಪಾದಂ ಬ್ರವಾಣೀತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚಾಗ್ನಿಃ ಕಲಾ ಸೂರ್ಯಃ ಕಲಾ ಚಂದ್ರಃ ಕಲಾ ವಿದ್ಯುತ್ತಸ್ಯೈವ ನೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣೋ ಜ್ಯೋತಿಷ್ಮಾನ್ನಾಮ ॥ ೩ ॥

ಅ ॥ ಪರಬ್ರಹ್ಮನ ರೂಪನಾದ ಪ್ರದ್ಯುಮ್ನ ವೆಂಬ ರೂಪವನ್ನು ಹೇಳುವೆನೆಂದು ಹೇಳಿದರು. ಆಗ ಸತ್ಯಕಾಮನು ಹಂಸದ ಹತ್ತಿರ ಹೇಳಬೇಕೆಂದನು. ಆಗ ಹಂಸರೂಪಿಯಾದ ಬ್ರಹ್ಮನು ಹೇಳಿದನು. ಪರ ಬ್ರಹ್ಮನ ಅಂಶಭೂತನಾದ ಪ್ರದ್ಯುಮ್ನನಿಗೆ ಅಗ್ನಿಗೆ ನಿಯಾಮಕನಾಗಿ ಅಗ್ನಿಯೊಳಗಣ ಅಗ್ನಿ ಎನಿಸಿದ ಪ್ರದ್ಯುಮ್ನ ವಾಸುದೇವರೂಪವು ಒಂದನೇ ರೂಪವು ಸೂರ್ಯನಿಗೆ ನಿಯಾಮಕನಾಗಿ ಸೂರ್ಯನೊಳಗಣ ಸೂರ್ಯನೆನಿಸಿದ ಪ್ರದ್ಯುಮ್ನ ಸಂಕರ್ಷಣರೂಪವು ಎರಡನೇ ರೂಪವು. ಚಂದ್ರನಿಗೆ ನಿಯಾಮಕನಾಗಿ ಚಂದ್ರನೊಳಗಣ ಚಂದ್ರನೆನಿಸಿದ ಪ್ರದ್ಯುಮ್ನ ಪ್ರದ್ಯುಮ್ನ ರೂಪವು ಮೂರನೇ ರೂಪವು ಮಿಂಚಿಗೆ ನಿಯಾಮಕನಾಗಿ ಮಿಂಚಿನಲ್ಲಿರುವ ವಿದ್ಯುತ್ ಎನಿಸಿಕೊಂಡ ಪ್ರದ್ಯುಮ್ನ ನಿರುದ್ಧ ರೂಪವು ಬ್ರಹ್ಮನ ರೂಪನಾದ ಪ್ರದ್ಯುಮ್ನನ ನಾಲ್ಕನೇ ರೂಪವು.....ಆ ಪ್ರದ್ಯುಮ್ನನಿಗೆ ಜ್ಯೋತೀಷ್ಮಾನ್ ಎಂದು ಹೆಸರು. ॥ ೩ ॥

ಉ. ॥ ಸ ಯ ಏತಮೇವಂವಿದ್ವಾಂಶ್ಚತುಷ್ಕಲಂ ಪಾದಂ ಬ್ರಹ್ಮಣೋ ಜ್ಯೋತಿಷ್ಮಾನಿತ್ಯುಪಾಸ್ತೇ ಜ್ಯೋತಿಷ್ಮಾನಸ್ಮಿಂಲ್ಲೋಕೇ ಭವತಿ ಜ್ಯೋತಿಷ್ಮತೋ ಹ ಲೋಕಾನ್ ಜಯತಿ ಯ ಏತಮೇವಂವಿದ್ವಾಂಶ್ಚತುಷ್ಕಲಂ ಪಾದಂ ಬ್ರಹ್ಮಣೋ ಜ್ಯೋತಿಷ್ಮಾನಿತ್ಯುಪಾಸ್ತೇ ॥ ಇತಿ ಸಪ್ತಮಃ ಖಂಡಃ ॥೬-೭॥ ೪ ॥

ಅ ॥ ಪರಬ್ರಹ್ಮನ ರೂಪನಾದ ಪ್ರದ್ಯುಮ್ನನಿಗೆ ಪ್ರದ್ಯುಮ್ನ ವಾಸುದೇವ ಮೊದಲಾದ ನಾಲ್ಕು ರೂಪಗಳನ್ನು ತಿಳಿದು ಉಪಾಸನೆ ಮಾಡುವವನು ಈ ಲೋಕದಲ್ಲಿ ಪ್ರಕಾಶಿಸಿಕೊಂಡಿರುತ್ತಾನೆ..... ಮತ್ತು ಸರ್ವದಾ ಪ್ರಕಾಶವುಳ್ಳ ವೈಕುಂಠಾದಿಲೋಕಗಳನ್ನು ಹೊಂದುತ್ತಾನೆ. ॥ ೬—೭ ॥ ॥ ೪ ॥

ಏಳನೇ ಖಂಡವು ಮುಗಿಯಿತು.

ಎಂಟನೇ ಖಂಡವು

ಉ. ॥ ಮದ್ಯುಷ್ಟೇ ಪಾದಂ ವಕ್ಷ್ಯೇತಿ ಸ ಹ ಶ್ವೋಭೂತೇ ಗಾ ಅಭಿಪ್ರಸ್ಥಾಪಯಾಂಚಕಾರ ತಾ ಯತ್ರಾಭಿಸಾಯಂ ಬಭೂವುಸ್ತತ್ರಾಗ್ನಿಮುಪಸಮಾಧಾಯ ಗಾ ಉಪರುಧ್ಯ ಸಮಿಧಮಾಧಾಯ ಪಶ್ಚಾದಗ್ನೇಃ ಪ್ರಾಙುಪೋಪವಿವೇಶ ॥ ೧ ॥

ಅ ॥ ಹೀಗೆ ಚತುರ್ಮುಖ ಬ್ರಹ್ಮನು ಹಂಸರೂಪವನ್ನು ತಾಳಿಕೊಂಡು ಬ್ರಹ್ಮನ ರೂಪನಾದ ಪ್ರದ್ಯುಮ್ನನು ವಾಸುದೇವಾದಿ ನಾಲ್ಕು ರೂಪದಿಂದ ಇದ್ದಾನೆಂದು ಹೇಳಿ, ಸತ್ಯಕಾಮನೇ ನಿನಗೆ ವರು

ಹಾನು ನೀರುಕಾಗೆಯ ರೂಪವನ್ನು ಕೊಂಬಿ ಪ್ರಿಯನ ಶಿಷ್ಯನಾದ ಅಂಗಿರಸರೂಪವನ್ನು ಬಾಹುದೇಶಿಸಿದ ನೆಂದು ತೋಳಿ ಹೊರಟುಹೋದನು. ಸತ್ಯಕಾಮನು.....

ಓಂ ॥ ತಂ ಮದ್ಯರುಚಸಿಹತ್ಯಭ್ಯುವಾದ ಸತ್ಯಕಾಮಾ ೪ ಇತಿ ಭಗವ ಇತಿ ಪ್ರತಿಶುಶ್ರಾವ ॥ ೨ ॥

ಅ ॥ ಎಲೈ ಸತ್ಯಕಾಮನೆ ಎಂದು ರೂಪವಾದ ಅಂಗಿರಸನು ಸತ್ಯಕಾಮನನ್ನು ಕರೆದನು. ಭಗವಾನ್ ಎಂದು.....

ಓಂ. ॥ ಬ್ರಹ್ಮಣಾ ಸೋಮ್ಯ ತೇ ಪಾದಂ ಬ್ರವಾಣೀತಿ ಬ್ರವೀತು ಮೇ ಭಗವಾನಿತಿ ತಸ್ಮೈ ಹೋವಾಚ ಪ್ರಾಣಃ ಕಲಾ ಚಕ್ಷುಃ ಕಲಾ ಶ್ರೋತ್ರಂ ಕಲಾ ಮನಃ ಕಲೈಷ ವೈ ಸೋಮ್ಯ ಚತುಷ್ಕಲಃ ಪಾದೋ ಬ್ರಹ್ಮಣ ಆಯತನವಾನ್ನಾನು ॥ ೪ ॥

ಅ ॥ ಎಲೈ ಸತ್ಯಕಾಮನೇ ಪರಬ್ರಹ್ಮನ ರೂಪವಾದ ಅಂಗಿರಸನನ್ನು ನನಗೆ ತೋಳಿ ಕೊಡಬೇಕು ಹೇಳಿದನು. ಹೇಳಬೇಕೆಂದು ನಿಶ್ಚಯಿಸಿದಾಗ ಸತ್ಯಕಾಮನಿಗೆ ಉಪದೇಶಿಸಿದನು. ಪರಬ್ರಹ್ಮನ ರೂಪವಾದ ಅಂಗಿರಸನಿಗೆ ಘ್ರಾಣೇಂದ್ರಿಯಕ್ಕೆ ನಿಯಾಮಕನಾದ ಧ್ರಾಣ ಪ್ರಿಯದೊಳಗಣ ವ್ಯಾಖ್ಯಾನಿಸಿದ. ಅವಿರ್ಭಾವ ಪೊಂದಿದ ಒಂದನೆ ರೂಪವ ಚಕ್ಷುರಿಂದ್ರಿಯಕ್ಕೆ ನಿಯಾಮಕನಾಗಿ ಚಕ್ಷುರಿಂದ್ರಿಯ ದೊಳಗಣ ಚಕ್ಷುವೆನಿಸಿದ ಅನಿರುದ್ಧ ಸಂಜ್ಞಿತನಾದ ಎರಡನೆಯ ರೂಪವು ಶ್ರೋತ್ರದೊಳಗಣ ಶ್ರೋತ್ರವೆನಿಸಿದ ಅನಿರುದ್ಧ ಪ್ರದ್ಯುಮ್ನನು ಮನಸ್ಸಿನೊಳಗಣ ಮನವೆನಿಸಿದ ಅನಿರುದ್ಧನಿರುದ್ಧನು. ನಾಲ್ಕನೇ ರೂಪವು ಈಗೆ ಪರಬ್ರಹ್ಮನ ರೂಪವಾದ ಅನಿರುದ್ಧನು. ನಾಲ್ಕು ರೂಪಗಳವನು ಎಲ್ಲರೂ ಅಶ್ರಯಿಸಿಕೊಂಡಿರುವುದರಿಂದ ಇವನಿಗೆ ಆಯತನವಾನ್ ಎಂದು ಹೆಸರು. ೪

ಓಂ ॥ ಸ ಯ ಏತಮೇವಂವಿದ್ವಾಂಶ್ಚತುಷ್ಕಲಂ ಪಾದಂ ಬ್ರಹ್ಮಣ ಆಯತನವಾನಿತ್ಯುಪಾಸ್ತ ಆಯತನವಾನಸ್ಮಿಲ್ಲೋಕೇ ಭವತ್ಯಾಯತನವತೋ ಹ ಲೋಕಾನ್ ಜಯತಿ ಯ ಏತಮೇವಂವಿದ್ವಾಂಶ್ಚತುಷ್ಕಲಂ ಪಾದಂ ಬ್ರಹ್ಮಣ ಆಯತನವಾನಿತ್ಯುಪಾಸ್ತೇ ॥ ಇತ್ಯಷ್ಟಮಃ ಖಂಡಃ ॥ ೫-೮ ॥ ೪ ॥

ಅ ॥ ಪರಬ್ರಹ್ಮನ ರೂಪವಾದ ಅನಿರುದ್ಧನು ನಾಲ್ಕು ರೂಪಗಳವನೆಂದು ತಿಳಿದು. ಉಪಾಸನೆ ಮಾಡುವವನು ಈ ಲೋಕದಲ್ಲಿ ಉತ್ತಮವಾದ ಆವಾಸನಾಡಲಿಕ್ಕೆ ಯೋಗ್ಯವಾದ ಮನಸುಳ್ಳವನಾಗು ತ್ತಾನೆ. ಉತ್ತಮ ಆವಾಸಸ್ಥಾನವುಳ್ಳ ವೈಕುಂಠಾದಿ ಲೋಕಗಳನ್ನು ಹೊಂದುತ್ತಾನೆ. ॥ ೬ ॥ ೪ ॥

ಎಂಟನೇ ಖಂಡವು ಮುಗಿಯಿತು.

೯ನೇ ಖಂಡವು

ಉ॥ ಪ್ರಾಸ ಹಾಚಾರ್ಯಕುಲಂ ತಮಾಚಾರ್ಯೋಽಭ್ಯನಾದ ಸತ್ಯ-ಕಾಮಾ ೩ ಇತಿ ಭಗವ ಇತಿ ಹ ಪ್ರತಿಶುಶ್ರಾವ ॥ ೧ ॥

ಅ॥ ಆ ಮೇಲೆ ಅರಣ್ಯದಿಂದ ಹೊರಟ ಸತ್ಯಕಾಮನು ಮಾರ್ಗದಲ್ಲಿ ಮೂರು ರಾತ್ರಿ ಕಳೆದು ನಾಲ್ಕನೇ ದಿನ ಆಚಾರ್ಯರ ಮನೆಗೆ ಹಿಂತಿರುಗಿ ಬಂದನು. ಬಂದ ಸತ್ಯಕಾಮನನ್ನು ಆಚಾರ್ಯರಾದ ಗೌತಮರು ಸತ್ಯಕಾಮನೇ ಎಂದು ಕರೆದರು. ಆಗ ಸತ್ಯಕಾಮನು ಪೂಜ್ಯರೇ ಎಂದು ಉತ್ತರಿಸಿದನು. ॥ ೧ ॥

ಉ. ॥ ಬ್ರಹ್ಮವಿದಿವ ವೈ ಸೋಮ್ಯ ಭಾಸಿ ಕೋ ನು ತ್ವಾನುಶಶಾಸೇತ್ಯೇ ಮನುಷ್ಯೇಭ್ಯ ಇತಿ ಹ ಪ್ರತಿಜಜ್ಞೇ ಭಗವಾಂಸ್ತ್ವೇವ ಮೇ ಕಾಮೇ ಬ್ರೂಯಾತ್ ॥ ೨ ॥

ಅ॥ ಎಲೋ ಸತ್ಯಕಾಮನೇ ಬ್ರಹ್ಮಜ್ಞಾನಿಯಂತೆ ಸ್ಪಷ್ಟವಾಗಿ ತೋರುತ್ತಿ. ನಿನಗೆ ಯಾರು ಉಪದೇಶಿಸಿರುವರು, ಎಂದು ಗೌತಮರು ಕೇಳಿದರು ಆಗ ಸತ್ಯಕಾಮನು ಮನುಷ್ಯರಲ್ಲದ ದೇವತೆಗಳು ನನಗೆ ಉಪದೇಶಿಸಿರುವರು, ಎಂದನು. (ಹಾಗಾದರೆ ನಾನು ಉಪದೇಶಿಸುವ ಅಂಶವು ಇಲ್ಲವೇನು? ಎಂದರೆ—) ನನ್ನ ಅಭೀಷ್ಟವು ಸಿದ್ಧಿಯಾಗಲಿಕ್ಕೆ ತಾವೇ ಉಪದೇಶಿಸಬೇಕೆಂದನು. ॥ ೨ ॥

ಉ. ॥ ಶ್ರುತಂ ಹ್ಯೇವ ಮೇ ಭಗವದ್ದೃಶೇಭ್ಯ ಆಚಾರ್ಯಾದ್ಧ್ಯೇವ ವಿದ್ಯಾ ವಿದಿತಾ ಸಾಧಿಷ್ಠಂ ಪ್ರಾಪಯತೀತಿ ತಸ್ಮೈ ಹೈತದೇವೋವಾಚಾತ್ರ ಹ ನ ಕಿಂಚನ ವೀಯಾಯೇತಿ ವೀಯಾಯೇತಿ ॥ ಇತಿ ನವಮಃ ಖಂಡಃ ॥೬-೯॥

ಅ॥ ಯದ್ಯಪಿ ಮಯಾನುಭಾವರಾದ ದೇವತೆಗಳಿಂದ ಪರಬ್ರಹ್ಮಸ್ವರೂಪವನ್ನು ಕೇಳಿ ನಾನು ತಿಳಿದಿರುತ್ತೇನೆ. ಆದರೂ ಪೂಜ್ಯರಾದ ತಾವೇ ನನ್ನ ಶುಭಕ್ಕಾಗಿ ಹೇಳಬೇಕು ಏಕೆಂದರೆ—ಆಚಾರ್ಯರ ಉಪದೇಶದಿಂದಲೇ ತಿಳಿದ ವಿದ್ಯೆಯು ಸ್ಥಿರವಾಗುತ್ತದೆ. ಮತ್ತು ಅತ್ಯುತ್ತಮವಾಗುತ್ತದೆ. ಎಂದು ತಮ್ಮಂತಹವರು ಹೇಳಿದುದನ್ನು ಕೇಳಿರುತ್ತೇನೆ (ಅದುಕಾರಣ ನಾನು ತಮ್ಮನ್ನೇ ಆಚಾರ್ಯರನ್ನಾಗಿ ಸ್ವೀಕರಿಸಿರುತ್ತೇನೆ. ದೇವತೆಗಳನ್ನು ಆಚಾರ್ಯರನ್ನಾಗಿ ಸ್ವೀಕರಿಸಲಿಲ್ಲ ಪರಂತು ವಾಯು, ಅಗ್ನಿ, ಬ್ರಹ್ಮ, ವರುಣರು ದಯೆಯಿಂದ ತಾವಾಗಿಯೇ ಬಂದು ಉಪದೇಶಿಸಿರುವರು ಆಚಾರ್ಯರೆಂಬ ಬುದ್ಧಿಯಿಂದ ಅವರು ಉಪದೇಶಿಸಲಿಲ್ಲ. ಅದುಕಾರಣ ನೀವೇ ನನಗೆ ಉಪದೇಶಿಸಬೇಕೆಂದು ಪ್ರಾರ್ಥಿಸಿದನು.) ಹೀಗೆ ಪ್ರಾರ್ಥಿತರಾದ ಗೌತಮರು ಸತ್ಯಕಾಮನಿಗೆ ವಾಯು ಮೊದಲಾದವರು ಉಪದೇಶಿಸಿದುದನ್ನೇ ಉಪದೇಶಿಸಿದರು (ಪೂಜ್ಯರೇ ತಮ್ಮನ್ನೇ ಗುರುಗಳೆಂದು ಸ್ವೀಕರಿಸಿ, ತಮಗಿಂತ ಜೇಷ್ಠರಾದ ದೇವತೆಗಳಿಂದ ಪರಬ್ರಹ್ಮನನ್ನು ಕೇಳಿದುದರಿಂದ ನನಗೆ ಅಪರಾಧವು ಬಂದಾಯಿತೇನು? ಎಂದರೆ—) ದೇವತೆಗಳಿಂದ ಕೇಳಿದ ತತ್ತ್ವ ವಿಷಯದಲ್ಲಿ ಯಾವುದೊಂದು ಹಾನಿಯೂ ನಿನಗೆ ಆಗಲಿಕ್ಕಿಲ್ಲ. ಅಂದರೆ ಗುರುಗಳೆಂದು ಸ್ವೀಕರಿಸಲ್ಪಡದಿರುವ ದೇವತೆಗಳಿಂದ ಕೇಳಿದಪ್ರಯುಕ್ತ ನಿನಗೆ ಯಾವ ಅಪರಾಧವೂ ಬಂದಾಗಲಿಲ್ಲ. ॥ ೬-೯ ॥ ॥ ೯ ॥

ಭಾ. ॥ (೧) ವಾಯುರ್ಮಹಭೂರೂಪಃ ಸನ್ನಗ್ನಿರ್ಹಂಸಶ್ಚತುರ್ಮುಖಃ । ಮದ್ಭೂರೂಪಶ್ಚ ವರುಣಃ ಸತ್ಯಕಾಮಾಯ ಹೋಚಿರೇ ॥ (೨) ಪ್ರಕಾಶಾನಂತತೇಜೋವತ್ಸ್ವಾನವತ್

ಸಂಜ್ಞಿಕಾ ಹರೇಃ । ವಾಸುದೇವಾದಿಕಾ ಮೂರ್ತೀಃ ಪ್ರತ್ಯೇಕಂ ಚತುರಾತ್ಮನಃ । ದಿಗಾದಿಷು ಸ್ಥಿತಾಸ್ತೇಷಾಮಧಿಪಾಶ್ಚ ತದಾಖ್ಯಕಾಃ ॥ (೩) ನಾಚಾರ್ಯಬುದ್ಧ್ಯಾ ಶೈರುಕ್ತಮತೋಽನುಜ್ಞಾಂ ಗುರೋರಗಾತ್ ॥ (೪) ಉತ್ತಮಾಚಾರ್ಯಸಂಶ್ರಾಪ್ತ್ಯೈ ನಾವರಾಚಾರ್ಯತಃ ಕ್ವಚಿತ್ । ಇಚ್ಛೇದನುಜ್ಞಾಂ ಶ್ರುತ್ವಾಽಪಿ ನಾನುಜ್ಞಾಂ ಪ್ರಾರ್ಥಯೇತ್ತತಃ ॥ (೫) ಋಷಿಭ್ಯಸ್ತೂತ್ತಮೋ ದೇವಾ ದೇವೇಭ್ಯೋ ವಾಯುರುತ್ತಮಃ । ವಾಯೋಶ್ಚ ಭಗವಾನ್ ವಿಷ್ಣುರ್ನ ತಸ್ಮಾದುತ್ತಮೋ ಗುರುಃ ॥ ಇತ್ಯಾಚಾರ್ಯಸಂಹಿತಾಯಾಂ ॥ (೬) ಅತ್ರ ಹ ನ ಕಂಚನ ವೀಯಾಯ ದೇವೇಭ್ಯಃ ಶ್ರುತ್ವಾ ನ ಚ ಕೇ ಕಾಚಿದ್ವಾ ನಿರಭವದಿತ್ಯರ್ಥಃ ॥ ೬-೫, ೬, ೭, ೮, ೯ ॥ ॥ ೧ ॥

ಅ ॥ (೧) ಸತ್ಯಕಾಮನಿಗೆ ಎತ್ತಿನ ರೂಪವನ್ನು ತಾಳಿದ ವಾಯುವೂ, ಅಗ್ನಿಯೂ, ಹಂಸರೂಪವನ್ನು ತಾಳಿದ ಚತುರ್ಮುಖಬ್ರಹ್ಮನೂ ನೀರುಕಾಗೆಯ ರೂಪವನ್ನು ತಾಳಿದ ವರುಣನೂ ಈ ಮಾತ್ರರೂ ಪರಬ್ರಹ್ಮಸ್ವರೂಪವನ್ನು ಉಪದೇಶಿಸಿದರು. (೨) ಪ್ರಕಾಶವಾನ್, ಅನಂತವಾನ್ ಜ್ಯೋತಿಷ್ಮಾನ್ ಆಯತನವಾನ್ ಎಂದು ಹೆಸರುಳ್ಳ ಪೂರ್ವಾದಿ ದಿಕ್ಕುಗಳಲ್ಲಿರುವ ಪ್ರಸಿದ್ಧರಾದ ಆದಿತ್ಯಗಳಾಗಿರುವುದರಿಂದಲೂ ಸಾಕ್ಷೀದಿತ್ ಇತ್ಯಾದಿ ಹೆಸರುಗಳುಳ್ಳ, ಪ್ರತ್ಯೇಕವಾಗಿ ನಾಲ್ಕು ನಾಲ್ಕು ರೂಪಗಳುಳ್ಳ ಶ್ರೀಹರಿಯ ವಾಸುದೇವ ಮೊದಲಾದ ಮೂರ್ತಿಗಳನ್ನು ವಾಯು ಮೊದಲಾದವರು ಉಪದೇಶಿಸಿದರು. (೩) ಪೂರ್ವಸ್ಮಾದುತ್ತಮೋ ಲಬ್ಧಾ ಸ್ವಯಮೇವ ಗುರುರ್ಯದಿ । ಗೃಹ್ಣೀಯಾದವಿಚಾರೇಣ ಎಂಬ ಶ್ರುತಿಪ್ರಮಾಣದಲ್ಲಿ ಮೊದಲಿನವರಿಂತ ಉತ್ತಮರು ಸಿಕ್ಕಿದರೆ ಸರ್ವವಿಚಾರವಾಗಿ ಅವರನ್ನು ಗುರುಗಳನ್ನಾಗಿ ಸ್ವೀಕರಿಸಬೇಕೆಂದು ಹೇಳಿದುದರಿಂದ ವೃಷಭಾದಿಗಳು ಗುರುಗಳೆಂದೇ ಅಗಿದ್ದರೆ ಅವರು ಉಪದೇಶಿಸಿದ ಮೇಲೆ ಸತ್ಯಕಾಮನು ಮರಳಿ ಗೌತಮರಲ್ಲಿ ಪ್ರಾರ್ಥಿಸಿದ್ದು ಏಕೆ? ಎಂದರೆ-) (ವೃಷಭಾದಿಗಳು ಯದೃಚ್ಛೆಯಿಂದ ಉಪದೇಶ ಮಾಡಿದವರು. ಸತ್ಯಕಾಮನು ಅವರನ್ನು ಗುರುಗಳನ್ನಾಗಿ ಸ್ವೀಕರಿಸಲಿಲ್ಲ. ಆದುದರಿಂದಲೇ) ವೃಷಭಾದಿರೂಪಗಳನ್ನು ಹೊಂದಿದ ವಾಯು ಮೊದಲಾದವರು ಸತ್ಯಕಾಮನಿಗೆ ಪೂರ್ವಾನುಗ್ರಹ ಮಾಡಿಕೊಂಡು ನಾವೆ ಉಪದೇಶ ಮಾಡುವವರೆಂಬ ಬುದ್ಧಿಯಿಂದ ಉಪದೇಶಿಸಲಿಲ್ಲ. ಆದುಕಾರಣ ಗುರುಗಳಾದ ಗೌತಮರಲ್ಲಿ ವಾಯು ಮೊದಲಾದವರ ಮುಖದಿಂದ ಕೇಳಿದುದರಿಂದ ದೋಷವು ಬರಲಾರದೆಂದು ಪ್ರಾರ್ಥಿಸಿ ಅನುಜ್ಞೆ ಪಡೆದನು. (೪) (ಸತ್ಯಕಾಮನು ವಾಯ್ವಾದಿಗಳನ್ನು ಆಚಾರ್ಯರೆಂದು ಸ್ವೀಕರಿಸಿದ ಮೇಲೆಯೇ ಗೌತಮರಿಂದ ಅನುಜ್ಞೆ ಪಡೆದನೆಂದು ಏಕೆ ಅಗಲಾರದೆಂದರೆ-) ಉತ್ತಮಗುರುಗಳನ್ನು ಹೊಂದಲಿಕ್ಕೆ ಅಧಮಗುರುಗಳಿಂದ ಎಲ್ಲಿಯೂ ಅನುಜ್ಞೆ ಪಡೆಯಬೇಕಾಗಿಲ್ಲ. ಆದುಕಾರಣ ಉತ್ತಮಗುರುಗಳಿಂದ ಕೇಳಿದ ಮೇಲೆ ಗೌತಮರಿಂದ ಅನುಜ್ಞೆಯನ್ನು ಪ್ರಾರ್ಥಿಸದೆ ಇರಬೇಕಿತ್ತು. (ಸಮಾನಿಕರಾದ ಗುರುಗಳಲ್ಲಿ ಒಬ್ಬರನ್ನು ಬಿಟ್ಟು ಇನ್ನೊಬ್ಬರನ್ನು ಸ್ವೀಕರಿಸಲಿಕ್ಕೆ ಏಂದಿನವರ ಅನುಜ್ಞೆಯು ಬೇಕು) (೫) (ಸತ್ಯಕಾಮನು ವಾಯ್ವಾದಿಗಳಿಂದ ಕೇಳಿದರೂ ಮರಳಿ ಗೌತಮರ ಅನುಜ್ಞೆಯನ್ನು ಪ್ರಾರ್ಥಿಸಿದುದರಿಂದ ಗೌತಮರು ವಾಯ್ವಾದಿಗಳಿಗೆ ಸಮಾನಿಕರೆಂದು ಏಕೆ ಅಗಲಾರದೆಂದರೆ-) ಋಷಿಗಳಿಗಿಂತ ದೇವತೆಗಳು ಉತ್ತಮರು, ಅವರಿಗಿಂತ ವಾಯುವು ಉತ್ತಮನು ವಾಯುವಿಗಿಂತ ವಿಷ್ಣುವು ಉತ್ತಮನು. ಅವನಿಗಿಂತ ಉತ್ತಮನಾದ ಗುರುವು ಇಲ್ಲವೇ ಇಲ್ಲ. ಎಂದು ಆಚಾರ್ಯಸಂಹಿತೆಯಲ್ಲಿದೆ. (೬)(೯ನೇ ಖಂಡದ ೩ನೇ ಮಂತ್ರದಲ್ಲಿರುವ **ಅತ್ರ ಹ ನ ಕಂಚನ ವೀಯಾಯ** ಎಂಬುವ ಅನುಜ್ಞೆಯನ್ನು ಕೊಡುವ ವಚನಕ್ಕೆ ಅರ್ಥ ಹೇಳುತ್ತಾರೆ—) ವಾಯು ಮೊದಲಾದ ದೇವತೆಗಳಿಂದ ಪರಬ್ರಹ್ಮ ಸ್ವರೂಪವನ್ನು ಕೇಳಿದ ನಿನಗೆ ಯಾವ ಅಪರಾಧವೂ ಉಂಟಾಗಲಿಲ್ಲ. ಯಾವ ದೋಷವೂ ಬರಲಿಲ್ಲ. ಎಂದು ಗೌತಮರು ಹೇಳಿದರು ಎಂದರ್ಥವು (೬-೫) ೬, ೭, ೮, ೯ ॥

ಒಂಭತ್ತನೇ ಖಂಡವು ಮುಗಿಯಿತು.

೧೦ನೇ ಖಂಡವು

ಟೀ—ಪ್ರಾಚೀನ ಕಥೆಯನ್ನು ಹೇಳುತ್ತಾ ಪರಾಪರ ಬ್ರಹ್ಮವಿದ್ಯೆಯನ್ನೂ ಬ್ರಹ್ಮಪ್ರಾಪ್ತಿಕಾಲದಲ್ಲಿ ಹೋಗತಕ್ಕ ಮಾರ್ಗವನ್ನೂ ಹೇಳುತ್ತಾರೆ—

ಉ. ॥ ಉಪಕೋಸಲೋ ಹ ವೈ ಕಾಮಲಾಯನಃ ಸತ್ಯಕಾಮೇ ಜಾಬಾಲೇ ಬ್ರಹ್ಮಚರ್ಯಮುವಾಸ ತಸ್ಯ ಹ ದ್ವಾದಶ ವರ್ಷಾಣ್ಯಗ್ನೀನ್ಪರಿಚಚಾರ ಸ ಹ ಸ್ಮಾ ಅನ್ಯಾನಂತೇವಾಸಿನಃ ಸಮಾವರ್ತಯನ್ನಿಸ್ತ್ಸ ಹ ಸ್ಮೈವ ನ ಸಮಾವರ್ತಯತಿ ॥ ೧ ॥

ಅ ॥ ಕಾಮಲನ ಮಗನಾದ ಉಪಕೋಸಲನೆನ್ನುವವನು ಜಬಾಲೆಯ ಮಗನಾದ ಸತ್ಯಕಾಮನಲ್ಲಿ ಬ್ರಹ್ಮಚರ್ಯ (ಪರಬ್ರಹ್ಮನನ್ನು ಹೊಂದುವುದಕ್ಕಾಗಿ ಮಾಡುವ ವ್ರತವಿಶೇಷ)ಕ್ಕಾಗಿ ಆವಾಸ ಮಾಡುತ್ತಿದ್ದನು. ಆ ಗುರುಕುಲದಲ್ಲಿ ಆ ಸತ್ಯಕಾಮರ ಗಾರ್ಹಪತ್ಯ ಆಹವನೀಯ ಅನ್ವಾಹಾರ್ಯಪಚನ ಎಂಬ ಮೂರು ಅಗ್ನಿಗಳನ್ನು ಹನ್ನೆರಡು ವರ್ಷಗಳಲ್ಲಿ ಸೇವಿಸುತ್ತಿದ್ದನು. ಆ ಸತ್ಯಕಾಮರು ಬೇರೆ ಶಿಷ್ಯರಿಗೆ ಪರಬ್ರಹ್ಮನನ್ನು ಪದೇಶಿಸಿ ಅವರವರ ಮನೆಗೆ ಹೋಗಲಿಕ್ಕೆ ಅನುಜ್ಞೆ ಕೊಡುವವರಾಗಿ ಉಪಕೋಸಲನೊಬ್ಬನೇನೆ ಮನೆಗೆ ಹೋಗಲಿಕ್ಕೆ ಅನುಜ್ಞೆ ಕೊಡಲಿಲ್ಲ. ದೊಡ್ಡವರ ಮನೋವ್ಯಾಪಾರವು ಅತ್ಯಾಶ್ಚರ್ಯಕರವು. ॥ ೧ ॥

ಉ. ॥ ತಂ ಜಾಯೋವಾಚ ತಪ್ಯೋ ಬ್ರಹ್ಮಚಾರೀ ಕುಶಲಮಗ್ನೀನ್ಪರಿಚಚಾರೀನ್ನಾ ತ್ವಾಗ್ನಯಃ ಪರಿಪ್ರವೋಚನ್ ಪ್ರಬ್ರೂಹ್ಯಸ್ಮಾ ಇತಿ ತಸ್ಮೈ ಹಾಪ್ರೋಚ್ಯೈವ ಪ್ರವಾಸಾಂಚಕ್ರೇ ॥ ೨ ॥

ಅ ॥ ಗಂಡನಾದ ಸತ್ಯಕಾಮನಿಗೆ ಹೆಂಡತಿಯು ಹೇಳಿದಳು. ಬ್ರಹ್ಮಚಾರಿಯು ಬಹುಕ್ಲೇಶದಿಂದ ಅಗ್ನಿಗಳನ್ನು ಜಾಣತನದಿಂದ ಸೇವಿಸುತ್ತಿದ್ದಾನೆ. (ನಮ್ಮಿಬ್ಬರನ್ನೂ ಜಾಣತನದಿಂದ ಸೇವಿಸಿರುವನು. ಆದರೂ ನೀವು ಪರಬ್ರಹ್ಮನನ್ನು ಉಪದೇಶಿಸಲೇ ಇಲ್ಲ.) ನಮ್ಮ ಅಗ್ನಿಗಳೂ ಕೂಡ ಬ್ರಹ್ಮಚಾರಿಯಿಂದ ಚೆನ್ನಾಗಿ ಸೇವಿಸಲ್ಪಟ್ಟವೆ. ಆ ಅಗ್ನಿಗಳೂ ಕೂಡ ಇವನಿಗೆ ಪರಬ್ರಹ್ಮನನ್ನು ಉಪದೇಶಿಸು ಎಂದು ನಿಮಗೆ ಹೇಳಲೇ ಇಲ್ಲ. ಅದುಕಾರಣ ಇವನಿಗೆ ಪರಬ್ರಹ್ಮನನ್ನು ಉಪದೇಶಿಸಿರಿ ಎಂದು ಹೆಂಡತಿಯು ಹೇಳಿದಳು. ಹೀಗೆ ಹೆಂಡತಿಯು ಹೇಳಿದಾಗ್ಯೂ ಸತ್ಯಕಾಮರು ಉಪಕೋಸಲನಿಗೆ ಪರಬ್ರಹ್ಮನನ್ನು ಉಪದೇಶಿಸದೇನೆ ದೇಶಾಂತರಕ್ಕೆ ಹೊರಟು ಹೋದರು. ॥ ೨ ॥

ಉ. ॥ ಸ ಹ ವ್ಯಾಧಿನ್ಯಾನಶಿತುಂ ದಧ್ಯೌ ತಮಾಚಾರ್ಯಜಾಯೋವಾಚ ಬ್ರಹ್ಮಚಾರಿನ್ನಶಾನ ಕಿಂ ನು ನಾಶ್ನಾಸೀತಿ ಸ ಹೋವಾಚ ಬಹವ ಇಮೇಽಸ್ಮಿನ್ಪುರುಷೇ ಕಾಮಾ ನಾನಾತ್ಯಯಾ ವ್ಯಾಧಿಭಿಃ ಪ್ರತಿಪೂರ್ಣೋಽಸ್ಮಿ ನಾತಿಷ್ಯಾನ್ನಿತಿ ॥ ೩ ॥

ಅ ॥ ಉಪಕೋಸಲನು ಮನಸ್ಸಿನ ಮಬಬದಿಂದ ಆನಶನ ವ್ರತಮಾಡಲಿಕ್ಕೆ ಮನಸ್ಸು ಮಾಡಿದನು. ಆಗ ಗುರುಗಳ ಹೆಂಡತಿಯು ಉಪಕೋಸಲನೇ ಉಣ್ಣು. ಏಕೆ ಉಣ್ಣುವುದಿಲ್ಲ, ಎಂದಳು. ಆಗ ಉಪ

ಕೋಸಲನು ಪುರುಷನಲ್ಲಿ ನಾನಾಪ್ರಕಾರಗಳಾವ ಬಹು ಇಷ್ಟಗಳು ಇರುತ್ತವೆ. ಅವು ನಿಗದಿಯಾಗುವುದರಿಂದ ಮನಸ್ಸಿನಲ್ಲಿ ವ್ಯಥೆಗಳು ತುಂಬಿವೆ. ಅದುಕಾರಣ ಉಣ್ಣುವುದಿಲ್ಲವೆಂದು ಹೇಳಿ ಸುಮ್ಮನೆ ಕುಳಿತನು. ॥ ೩ ॥

ಉ. ॥ ಅಥ ಹಾಗ್ನಯಃ ಸಮೂದಿರೇ ತಪ್ತೋ ಬ್ರಹ್ಮಚಾರೀ ಕುಶಲಂ ನಃ ಪರಿಚೇಚಾರೀದ್ಧಂತಾಸ್ಮೈ ಪ್ರಬ್ರವಾಮೇತಿ ತಸ್ಮೈ ಹೋಚುಃ ॥ ೪ ॥

ಅ ॥ ಗುರುಗಳು ಹೊರಟುಹೋದ ಮೇಲೆ ಅಥವಾ ಗುರುಗಳು ಉಪದೇಶ ಮಾಡದಿರುವುದರಿಂದ ಅಥವಾ ಗಾರ್ಹಪತ್ಯ ಮೊದಲಾದ ಮೂರು ಅಗ್ನಿದೇವತೆಗಳು ತಮ್ಮ ಸೇವೆಯನ್ನು ಜೆನ್ನಾಗಿ ಮಾಡಿರುವ ಪ್ರಯುಕ್ತ ಕೃಪೆಯಿಂದ ಪರಸ್ಪರ ಮಾತಾಡಿಕೊಂಡರು. ಬಹು ಕಷ್ಟದಿಂದ ಬ್ರಹ್ಮಚಾರಿಯು ಜೆನ್ನಾಗಿ ನಮ್ಮನ್ನು ಸೇವಿಸಿರುವನು. ಈ ಬ್ರಹ್ಮಚಾರಿಗೆ ಪರಬ್ರಹ್ಮವಿದ್ಯೆಯನ್ನು ಸಂತೋಷದಿಂದ ಹೇಳುವ. ಹೀಗೆ ಪರಸ್ಪರ ಮಾತಾಡಿಕೊಂಡು ಹೋಮ ಕುಂಡಗಳಿಂದ ಮೂರು ಅಗ್ನಿದೇವತೆಗಳು ಮೇಲಕ್ಕೆ ಬಂದು ಉಪಕೋಸಲನಿಗೆ ಪರಬ್ರಹ್ಮ ವಿದ್ಯೆಯನ್ನು ಹೇಳಿದರು. ॥ ೪ ॥

ಉ. ॥ ಪ್ರಾಣೋ ಬ್ರಹ್ಮ ಕಂ ಬ್ರಹ್ಮ ಖಂ ಬ್ರಹ್ಮೇತಿ ಸ ಹೋವಾಚ ವಿಜಾನಾನ್ಯಹಂ ಯತ್ತ್ರಾಣೋ ಬ್ರಹ್ಮ ಕಂ ಚ ತು ಖಂ ಚ ನ ವಿಜಾನಾಮೀತಿ ತೇ ಹೋಚುರ್ಯದ್ವಾವ ಕಂ ತದೇವ ಖಂ ಯದೇವ ಖಂ ತದೇವ ಕಮಿತಿ ಪ್ರಾಣಂ ಚ ಹಾಸ್ಮೈ ತದಾಕಾಶಂ ಚೋಚುಃ ॥ ಇತಿ ದಶಮಃ ಖಂಡಃ ॥೫॥

ಅ ॥ ಬಲದೇವತೆಯಾದ ಮುಖ್ಯವಾಯುವು ಅಪರಬ್ರಹ್ಮನು. (ಕಂ-) ಸ್ವಾಭಾವಿಕವಾದ ಪರಿಪೂರ್ಣ ಸುಬುರೂಪನು ವಿಷ್ಣುವೆನಿಸಿದ ಪರಬ್ರಹ್ಮನು. (ಖಂ) ಪರಿಪೂರ್ಣ ಜ್ಞಾನಬಲ ರೂಪನು ವಿಷ್ಣುವೆನಿಸಿದ ಪರಬ್ರಹ್ಮನು, ಎಂದು ಅಗ್ನಿದೇವತೆಗಳು ಹೇಳಿದರು. ಆಗ ಉಪಕೋಸಲನು ಹೇಳಿದನು ಪ್ರಾಣನೆಂದರೆ ಮುಖ್ಯವಾಯುವೆಂದು ಪ್ರಸಿದ್ಧಿಯಿದ್ದುದರಿಂದ ಪ್ರಾಣೋ ಬ್ರಹ್ಮ ಪ್ರಾಣನು ಅಪರ ಬ್ರಹ್ಮನು ಎಂದು ಹೇಳಿದುದನ್ನು ನಾನು ತಿಳಿದಿರುತ್ತೇನೆ. ಪರಂತು ಪ್ರಾಣನಿಗಿಂತ ಪರಬ್ರಹ್ಮನಿಗೆ ಭೇದವಿದ್ದಂತೆಯೇ ಕ ಬಗಳಿಗೆ ಭೇದವೋ ಅಭೇದವೋ ಎಂದು ತಿಳಿಯಲಿಲ್ಲ, ಎಂದನು ಆಗ ಅಗ್ನಿದೇವತೆಗಳು ಕ ಬಗಳಿಗೆ ಅಭೇದವೆಂದರು. ಕ ಎನಿಸುವುದೇ ಖ ಎನಿಸುವುದು. ಖ ಎನಿಸುವುದೇ ಕ ಎನಿಸುವುದು. ಸ್ವಲ್ಪವೂ ವ್ಯತ್ಯಾಸವಿಲ್ಲ. (ಸ್ವಲ್ಪವೂ ಭೇದವಿಲ್ಲ. ವಿಶೇಷಬಲದಿಂದಲೇ ಅನಂದರೂಪನು ಜ್ಞಾನಬಲದೂಪನು. ಎಂದು ಬೇರೆಯಾಗಿ ವ್ಯವಹಾರ ಮಾತ್ರ.) ಹೀಗೆ ಆ ಅಗ್ನಿಗಳು ಒಟ್ಟು ಕೂಡಿ ಉಪಕೋಸಲನಿಗೆ ಮುಖ್ಯವಾಯುವು ಅಪರಬ್ರಹ್ಮನೆಂದೂ, ಕಂ ಖಂ ಎಂದು ಹೇಳಲ್ಪಟ್ಟ ಜೆನ್ನಾಗಿ ಪ್ರಕಾಶಿಸಿರುವುದರಿಂದ ಆಕಾಶನೆನಿಸಿದ ವ್ಯಾಪ್ತನಾದ ಪ್ರೇಕರಿಯು ಪರಬ್ರಹ್ಮನೆಂದೂ ಉಪದೇಶಿಸಿದರು. ಎಂದು ವೇದಪುರುಷನ ಮಾತು. ॥ ೬—೧೦ ॥ ॥ ೫ ॥

ಈ—ನನೇ ಮಂತ್ರದ ಅರ್ಥ ಹೇಳುತ್ತಾರೆ—

ಭಾ. ॥ (೧) ಪ್ರಾಣೋ ಬ್ರಹ್ಮ ಬಲರೂಪಂ ಬ್ರಹ್ಮ ಕಮಾನಂದರೂಪಂ ಖಂ ಜ್ಞಾನರೂಪಂ ॥ (೨) ಅಪರಂ ಬ್ರಹ್ಮ ಸ ಪ್ರಾಣಃ ಸಾಕ್ಷಾದ್ವೋ ಬಲದೇವತಾ । ಜ್ಞಾನಾನಂದಾತ್ಮಕಂ ಪೂರ್ಣಂ ಪರಂ ಬ್ರಹ್ಮ ಸ್ವಯಂ ಹರಿಃ ॥ (೩) ನೈಜಾನಂದಬಲೋದ್ರೇಕಃ ಕ-

ಮಿತ್ಯುಕ್ತೋ ಮುನೀಸಿಭಿಃ । ಬಲಜ್ಞಾನಸಮೂಹಾರಃ ಪೂರ್ಣಃ ಖಮಿತಿ ಶಬ್ದಿತಃ ॥ (೪) ತದಾತ್ಮಕಃ ಪರೋ ವಿಷ್ಣುರಾಕಾಶ ಇತಿ ಕೀರ್ತಿತಃ । ಏವಂ ಪ್ರಾಣಸ್ತಥಾಽಽಕಾಶೋ ಬ್ರಹ್ಮಣೇ ದ್ವೇ ಪ್ರಕೀರ್ತಿತೇ ॥ ಇತಿ ಚ ॥ (೫) ಪ್ರಾಣಶಬ್ದಸ್ಯ ವಾಯುರರ್ಥಃ ಪ್ರಸಿದ್ಧಃ । ಕಖಯೋರ್ಭಿನ್ನಾರ್ಥತ್ವಶಂಕಯಾ ಕಂ ಚ ತು ಖಂ ಚ ನ ವಿಜಾನಾಮೀತ್ಯಾಹ । ಅತ ಏವೈಕ್ಯಾಭಿಪ್ರಾಯೇಣ ಯದ್ವಾ ವ ಕಂ ತದೇವ ಖಂ ಯದೇವ ಖಂ ತದೇವ ಕಮಿತ್ಯುಭುಃ ॥ ೧, ೨, ೩, ೪, ೫ ॥ ಇತಿ ದಶಮಃ ಖಂಡಃ ॥ ೬—೧೦ ॥ ॥ ೧ ॥

ಅ ॥ (೧) ಬಲರೂಪನಾದ ಮುಖ್ಯವಾಯುವು ಅಪರಬ್ರಹ್ಮನು. ಪರಬ್ರಹ್ಮನು ಕಂ=ಆನಂದ ರೂಪನು ಖಂ=ಬಲಜ್ಞಾನರೂಪನು. (೨)(ಈ ವಿಷಯದಲ್ಲಿ ಪ್ರಮಾಣ ಹೇಳುತ್ತಾರೆ—) ಸಾಕ್ಷಾತ್ ಬಲದೇವತೆಯಾದ ಮುಖ್ಯಪ್ರಾಣನು ಅಪರಬ್ರಹ್ಮನೆನಿಸುತ್ತಾನೆ. ಪರಿಪೂರ್ಣವಾದ ಜ್ಞಾನಬಲರೂಪನಾದವನು ಪರಬ್ರಹ್ಮನು ಸಾಕ್ಷಾತ್ ಹರಿಯು (೩) ಪರಾಧೀನವಾಗದಿರುವ ಪೂರ್ಣವಾದ ಆನಂದ ಬಲಗಳು ಕಂ ಎನಿಸುತ್ತವೆ. ಪೂರ್ಣವಾದ ಬಲಜ್ಞಾನ ಸಮೂಹವು ಖಂ ಎನಿಸುತ್ತದೆ. (೪) ಜ್ಞಾನಾನಂದಾದಿಸ್ವರೂಪನಾದ ಸರ್ವೋತ್ತಮನಾದ ಶ್ರೀವಿಷ್ಣುವು ಆಕಾಶನೆನಿಸುತ್ತಾನೆ. ಹೀಗೆ ಪ್ರಾಣನು ಅಪರಬ್ರಹ್ಮನೆಂದೂ ಆಕಾಶನು ಪರಬ್ರಹ್ಮನೆಂದೂ ಹೇಳಲ್ಪಡುತ್ತಾರೆ (೫) ಪ್ರಾಣಶಬ್ದಕ್ಕೆ ಮುಖ್ಯವಾಯು ವೆಂಬ ಅರ್ಥವು ಪ್ರಸಿದ್ಧವು. ಕಕಾರ ಖಕಾರಗಳಿಗೆ ಬೇರೆಬೇರೆ ಅರ್ಥವೆಂದು ಸಂದೇಹಪಟ್ಟು ಕ ಮತ್ತು ಖ ಗಳನ್ನು ವಿಶೇಷವಾಗಿ ತಿಳಯಲಿಲ್ಲವೆಂದನು. ಆದುದರಿಂದಲೇ ಕ ಖ ಗಳಿಗೆ ಏಕ್ಯವೆಂಬ ಅಭಿಪ್ರಾಯ ವಿಂದ ಕಕಾರವೇ ಖಕಾರವು ಖಕಾರವೇ ಕಕಾರವು. ಎಂದರು. ॥ ೬—೧೦ ॥ ॥ ೧ ॥

ಹತ್ತನೇ ಖಂಡವು ಮುಗಿಯಿತು.

೧೧ನೇ ಖಂಡವು

ಪೀ—ಹೀಗೆ ಅಗ್ನಿಗಳು ಒಟ್ಟು ಸೇರಿ ಹೇಳಿದ ಪರಾಪರ ಬ್ರಹ್ಮವಿದ್ಯೆಯನ್ನು ವಿವರಿಸಿ, ಈಗ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಿದ ಪರಬ್ರಹ್ಮವಿದ್ಯೆಯನ್ನೇ ವಿವರಿಸುತ್ತಾರೆ—

ಉ. ॥ ಅಥ ಹೈನಂ ಗಾರ್ಹಪತ್ಯೋಽನುಶಶಾಸ ಪೃಥಿವ್ಯಗ್ನಿರನ್ನಮಾದಿತ್ಯ ಇತಿ ಯ ಏಷ ಆದಿತ್ಯೇ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮೀತಿ ॥ ೧ ॥

ಅ ॥ ಅಗ್ನಿಗಳು ಒಟ್ಟು ಸೇರಿ ಉಪದೇಶಿಸಿದ ಮೇಲೆ ಉಪಕೋಸಲನಿಗೆ ಗಾರ್ಹಪತ್ಯನೆಂಬ ಅಗ್ನಿಯು ಉಪದೇಶ ಮಾಡಿದನು. ಪರಬ್ರಹ್ಮನು ವ್ಯಾಪ್ತನಾದುದರಿಂದ ಪೃಥಿವೀ ಎನಿಸಿಕೊಂಡವನು, ಪೃಥಿವಿಯೊಳಗಣವನು. ಅಂಗಗಳಿಗೆ ಪ್ರೇರಕನಾದುದರಿಂದ ಅಂಗನೆನಿಸಿಕೊಂಡವನು, ಅಂಗಗಳೊಳಗಣನು ಸರ್ವಸಂಹಾರಕನಾದುದರಿಂದ ಅನ್ನನೆನಿಸಿಕೊಂಡವನು ಅನ್ನದೊಳಗಣನು. ಸರ್ವದಾ ಅದಿರೂಪನಾದುದರಿಂದ ಅದಿತ್ಯನೆನಿಸಿದವನು ಅದಿತ್ಯನೊಳಗಣನು ಹೀಗೆ ಪೃಥಿವೀ ಮೊದಲಾದ ಹೆಸರುಳ್ಳ ನಾಲ್ಕು ಪರಬ್ರಹ್ಮರೂಪಗಳನ್ನು ಉಪದೇಶ ಮಾಡಿದನು. (ಸ್ಥಾನಭೇದದಿಂದ ರೂಪಗಳಿಗೆ ಭೇದವನ್ನು ತಿಳಯಲೂಪಡದೆನ್ನುತ್ತಾರೆ—) ಪೃಥಿವೀ ಅಗ್ನಿ ಅನ್ನ ಆದಿತ್ಯರಲ್ಲಿ ದಿವ್ಯದೃಷ್ಟಿಗೆ ಗೋಚರನಾದ ಗುಣಪರಿ

ಪೂರ್ಣನಾದ ಶ್ರೀಹರಿಯೇ, ಎಲ್ಲರಿಂದಲೂ ಬಡಲ್ಪಡದಿರುವುದರಿಂದ ಆತಂ ಎನಿಸಿಕೊಂಡವನಾಗಿ ನಾರ್ಪಪತ್ಯನೊಳಗಣನು. ಅದಿಶ್ಯನೊಳಗಣನೇ ನನ್ನೊಳಗಣನು. (ಅಂದರೆ—ನಾರ್ಪಪತ್ಯನೊಳಗಣನು) (ಇಂದ್ರಾಗ್ನಿಗಳು, ವಿಮರ್ಶಧರ್ಮರಾಜರು ಇತ್ಯಾದಿಗಳಂತೆ ಜೀವಾಂತರ್ಯಾಮಿಯಾದ ಶ್ರೀಹರಿಗೆ ಸ್ವಲ್ಪವೂ ವಿಶೇಷವಿಲ್ಲ.) (೨-೬)

ಉ. ॥ ಸ ಯ ಏತಮೇವಂವಿದ್ವಾನುಪಾಸ್ತೇಽಪಹತೇ ಪಾಪಕೃತ್ಯಾಂ ಲೋಕೇಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ನಾಸ್ಯಾಪ್ರ(ವ)ರಪುರುಷಾಃ ಕ್ಷೀಯಂತ ಉಪವಯಂತಂ ಭುಂಜಾನೋಽಸ್ಮಿಂಶ್ಚ ಲೋಕೇಽಮುಷ್ಮಿಂಶ್ಚ ಯ ಏತಮೇವಂವಿದ್ವಾನುಪಾಸ್ತೇ ॥ ಇತ್ಯೇಕಾದಶಃ ಖಂಡಃ ॥ ೬-೧೧ ॥೨॥

ಅ ॥ ಪೃಥಿವ್ಯಾದಿಗಳೊಳಗಣನೆಲ್ಲ ನಾರ್ಪಪತ್ಯನೊಳಗಣನೆಂದು ತಿಳಿದು ಉಪಾಸನೆ ಮಾಡುವವನು ಪಾಪವನ್ನು ಕಳೆದುಕೊಳ್ಳುತ್ತಾನೆ. ವೈಕುಂಠಕ್ಕೆ ಹೋಗುತ್ತಾನೆ. ಭೂರ್ಭುವಸ್ಸುವರ್ಲೋಕವನ್ನು ಹೊಂದುತ್ತಾನೆ. ಸರ್ವಜ್ಞನಾಗಿ ಬಾಳುತ್ತಾನೆ ಉಪಾಸಕನ ಪೃಥ್ವಿಯ ಸಾರವೆಲ್ಲವನ್ನೂ. (ಸರ್ವದಾ ಪೃಥ್ವಿಯುಳ್ಳವನೇ ಆಗುತ್ತಾನೆ.) ಹೀಗೆ ತಿಳಿದು ಉಪಾಸನೆ ಮಾಡುವವನನ್ನು ನಾವೆಲ್ಲರೂ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಕೂಡ ರಕ್ಷಿಸುವೆವು. ಹೀಗೆ ಅಗ್ನಿದೇವತೆಗಳು ಹೇಳಿದರು. (೬-೧೧)೨

ಹನ್ನೊಂದನೇ ಖಂಡವು ಮುಗಿಯಿತು.

೧೨ನೇ ಖಂಡವು

ಉ. ॥ ಅಥ ಹೈನಮನ್ವಾಹಾರ್ಯಪಚನೋಽನುಶಶಾಸಾಪ್ಸೋ ದಿತೋ ನಕ್ಷತ್ರಾಣಿ ಚಂದ್ರಮಾ ಇತಿ ಯ ಏಷ ಚಂದ್ರಮಸಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ಏವಾಹಮಸ್ಮೀತಿ ॥ ೧ ॥

ಅ ॥ ನಾರ್ಪಪತ್ಯಾಗ್ನಿಯು ಉಪದೇಶಿಸಿದ ದೇವರೆ ಈ ದಕ್ಷಿಣಾಗ್ನಿಯು. ಇದನ್ನು ಇ ಕಮಾಡುವುದರಿಂದ ಅನ್ವಾಹಾರ್ಯ ಪಚನನೆನಿಸಿಕೊಂಡ ದಕ್ಷಿಣಾಗ್ನಿಯು ಉಪದೇಶಿಸಿದನು ಹೇಗೆಂದರೆ ಪೃಥ್ವಾಗಿ ರಕ್ಷಿಸುವುದರಿಂದ ಅಪಃ ಎನಿಸಿಕೊಂಡು ಜಲಗಳೊಳಗಣನೂ, ಅಭೀಷ್ಟಗಳನ್ನು ಕೊಡುವುದರಿಂದ ದಿಕ್ ಎನಿಸಿಕೊಂಡು ದಿಕ್ಕುಗಳೊಳಗಣನೂ, ದೇವೆಯವರ ವಶನಾಗದಿರುವುದರಿಂದ ನಕ್ಷತ್ರನೆನಿಸಿಕೊಂಡು ನಕ್ಷತ್ರನೊಳಗಣನೂ, ಆನಂದರೂಪನಾದುದರಿಂದ ಚಂದ್ರನೆನಿಸಿಕೊಂಡು ಚಂದ್ರನೊಳಗಣನೂ ಪರಬ್ರಹ್ಮನು. ಜಲಾದಿಗಳಲ್ಲಿ ದಿವ್ಯ ದೃಷ್ಟಿಗೆ ಗೋಚರನಾದವನೇ ಅನ್ವಾಹಾರ್ಯ ಪಚನನೊಳಗಣನು. ॥೧॥

ಉ. ॥ ಸ ಯ ಏತಮೇವಂವಿದ್ವಾನುಪಾಸ್ತೇಽಪಹತೇ ಪಾಪಕೃತ್ಯಾಂ ಲೋಕೇಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ನಾಸ್ಯಾವರಪುರುಷಾಃ ಕ್ಷೀಯಂತ ಉಪವಯಂತಂ ಭುಂಜಾನೋಽಸ್ಮಿಂಶ್ಚ ಲೋಕೇಽಮುಷ್ಮಿಂಶ್ಚ ಯ ಏತಮೇವಂವಿದ್ವಾನುಪಾಸ್ತೇ ॥ ಇತಿ ದ್ವಾದಶಃ ಖಂಡಃ ॥೬-೧೨॥ ೨ ॥

ಅ ॥ (ಹಿಂದಿನಂತೆ ಅರ್ಥ.) ॥ ೬ ॥

ಹನ್ನೆರಡನೇ ಖಂಡವು ಮುಗಿಯಿತು.

೧೩ನೇ ಖಂಡವು

ಉ. ॥ ಅಥ ಹೈನಮಾಹವನೀಯೋಽನುಶಶಾಸ ಪ್ರಾಣ ಆಕಾಶೋ ದ್ಯೌರ್ವಿದ್ಯುದಿತಿ ಯ ಏಷ ವಿದ್ಯುತಿ ಪುರುಷೋ ದೃಶ್ಯತೇ ಸೋಽಹಮಸ್ಮಿ ಸ ವಿನಾಹಮಸ್ಮೀತಿ ॥ ೧ ॥

ಅ ॥ ಬಳಿಕ ಆಹವನೀಯನೆಂಬ ಅಗ್ನಿಯು ಉಪದೇಶಿಸಿದನು. ಬಲರೂಪನಾದುದರಿಂದ ಪ್ರಾಣನೆನಿಸಿಕೊಂಡು ಪ್ರಾಣನೊಳಗಣನೂ, ಪದಾರ್ಥಗಳನ್ನು ತುಂಬಿಸಲಿಕ್ಕೆ ಅವಕಾಶ ಕೊಡುವುದರಿಂದ ಆಕಾಶನೆನಿಸಿಕೊಂಡು ಆಕಾಶನೊಳಗಣನೂ, ಪ್ರಕಾಶರೂಪನಾದುದರಿಂದ ದ್ಯೌಃ ಎನಿಸಿಕೊಂಡು ದ್ಯುಲೋಕದೊಳಗಣನೂ, ತಿಳಿಸಿಕೊಡುವುದರಿಂದ ವಿದ್ಯುತ್ ಎನಿಸಿಕೊಂಡು ವಿದ್ಯುದೊಳಗಣನೂ ಪರ ಬ್ರಹ್ಮನು. ಪ್ರಾಣಾದಿಗಳೊಳಗಣನೇ ಆಹವನೀಯಾಗ್ನಿಗಳೊಳಗಣನಾಗಿರುತ್ತೇನೆ..... ॥ ೧ ॥

ಉ. ॥ ಸ ಯ ಏತಮೇವಂವಿದ್ವಾನುಪಾಸ್ತೇಽಪಹತೇ ಪಾಪಕೃತ್ಯಾಂ ಲೋಕೇಭವತಿ ಸರ್ವಮಾಯುರೇತಿ ಜ್ಯೋಗ್ಜೀವತಿ ನಾಸ್ಯಾವರಪುರುಷಾಃ ಕ್ಷೀಯಂತ ಉಪನಯಂತಂ ಭುಂಜಾನೋಽಸ್ಮಿಂಶ್ಚ ಲೋಕೇಽಮುಷ್ಮಿಂಶ್ಚ ಯ ಏತಮೇವಂವಿದ್ವಾನುಪಾಸ್ತೇ ॥ ಇತಿ ತ್ರಯೋದಶಃ ಖಂಡಃ ॥ ೬-೧೩ ॥ ೭ ॥

ಅ ॥ (ಹಿಂದಿನಂತೆ ಅರ್ಥ.) ॥ ೬—೧೩ ॥ ೭ ॥

ಹದಿಮೂರನೇ ಖಂಡವು ಮುಗಿಯಿತು.

೧೪ನೇ ಖಂಡವು

ಟೀ—ಮೂರು ಅಗ್ನಿ ದೇವತೆಗಳು ಒಟ್ಟು ಸೇರಿಯೂ ಬೇರೆ ಬೇರೆಯಾಗಿಯೂ ಉಪದೇಶಿಸಿದುದನ್ನು ಅನುವಾದಮಾಡಿ ಬೇರೆ ಪರತತ್ತ್ವವನ್ನು ಅವರು ಹೇಳಿರುವರೆಂದು ವೇದವೆ ಹೇಳುತ್ತದೆ, ಎನ್ನುತ್ತಾರೆ—

ಉ. ॥ ತೇ ಹೋಚುರುಪಕೋಸಲೈಷಾ ಸೋಮ್ಯ ತೇಽಸ್ಮದ್ವಿದ್ಯಾಽಽತ್ಮ-ವಿದ್ಯಾ ಚಾಽಚಾರ್ಯಸ್ತು ತೇ ಗತಿಂ ವಕ್ತೇತ್ಯಾಜಗಾಮ ಹಾಸ್ಯಾಽಚಾರ್ಯಸ್ತ-ಮುವಾಚಾರ್ಯೋಽಭ್ಯುವಾದೋಪಕೋಸಲಾ ॥ ಇತಿ ॥ ೧ ॥

ಅ ॥ ಆ ಅಗ್ನಿಗಳು ಒಟ್ಟು ಸೇರಿಯೂ ಬೇರೆಬೇರೆಯಾಗಿಯೂ ಉಪದೇಶಿಸಿ ಹೇಳಿದರು. ಎಲೋ ಉಪಕೋಸಲನೇ ನಿನಗೆ ಅಂತಯರ್ಯಾಮಿ ವಿದ್ಯೆಯೂ, ತಂ ಬ್ರಹ್ಮಾ ಇತ್ಯಾದಿಗಳಿಂದ ವ್ಯಾಪ್ತರೂಪ

ವನ್ನು ಹೇಳುವ ಆತ್ಮವಿದ್ಯೆಯನ್ನೂ ಉಪದೇಶಿಸಲ್ಪಟ್ಟಿಲ್ಲ. (ಈ ವಿದ್ಯೆಯನ್ನು ನಿನಗೆ ತಿಳಿಯುವಹಾಗಾಗಿ ಹೇಳಿದುದಲ್ಲದೆ ಉಪಾಸನೆಯೊಂದಲಿಕ್ಕೆ ಹೇಳಿದುದಲ್ಲ. ಅದುಕಾರಣ ಆಚಾರ್ಯರೇ ನಿನಗೆ ಉಪಾಸನೆ ಮಾಡಿ ಹೊಂದಲ್ಪಡುವ ಭಗವದ್ರೂಪವನ್ನೂ. ಆತನನ್ನು ಹೊಂದಲಿಕ್ಕೆ ಉಪಾಯಭೂತವಾದ ಮಾರ್ಗವನ್ನೂ ಉಪದೇಶಿಸುವರು. ಏನು ಅಗ್ನಿಗಳು ಹೇಳಿದರು ಆಚಾರ್ಯರು ಬಂದರು ಆವರು ಉಪಶೋಸಲ ಏಂದು ಕರೆದರು. ೭-೧

ಉ. ॥ ಭಗವ ಇತಿ ಹ ಪ್ರತಿಶುಶ್ರಾವ ಬ್ರಹ್ಮವಿದ ಇವ ಸೋಮ್ಯ ತೇ ಮುಖಂ ಭಾತಿ ಕೋ ನು ತ್ವಾನುಶಶಾಸೇತಿ ಕೋ ನು ಮಾನುಶಿಷ್ಯಾದ್ಯೋ ಇತೀಹಾನೇ ವ ನಿಹ್ನುತ ಇವೇ ನೂನಮಿಂದ್ರಶಾ ಅನ್ಯಾದೃಶಾ ಇತೀಹಾಗ್ನೀನಭ್ಯೂದೇ ಕಂ ನು ಸೋಮ್ಯ ಕಿಲ ತೇಽಪ್ರೋಚನ್ನಿತಿ ॥ ೫ ॥

ಅ ॥ ಉಪಕೋಸಲನು ಪೂಜ್ಯರೇ ಎಂದುತ್ತರವಿತ್ತನು. ಆಗ ಸತ್ಯಕಾಮರು ಬ್ರಹ್ಮಕೋಸಲನೇ ನಿನ್ನ ಮುಖವು ಬ್ರಹ್ಮಜ್ಞಾನಿಯು ಮುಖದಂತೆ ಅತಿ ಪ್ರಸನ್ನವಾಗಿ ಕೋಭಿಸುತ್ತಿದೆ. ನಿನಗೆ ಯಾರು ಉಪದೇಶಿಸಿರುವರು ದೇವತೆಗಳೋ? ದೇಶಿಯುವರೋ? ಎಂದರು. ಆಗ ಉಪಕೋಸಲನು. ಏನೋ ಪೂಜ್ಯರೇ ಮನುಷ್ಯನಾಗಲೀ ಅಮರನಾಗಲೀ ಯಾರನು ಉಪದೇಶಿಸಿಯಾನೋ ಯಾರೂ ಉಪದೇಶಿಸಲಿಕ್ಕೆ ಸಮರ್ಥರಲ್ಲ. ಏಕೆಂದರೆ ಭೂಲೋಕದಲ್ಲಿನ ಮನುಷ್ಯರೂ. ಪಾತಾಳ ಲೋಕದಲ್ಲಿನ ಅಸುರರೂ ಕೂಡ ಶ್ರೀಹರಿಯನ್ನು ತಿಳಿಸಲಾಪ (ಇವ್ಯವನ್ನು ಮಾರಿ) ಮಾಡುತ್ತಾರೆ (ಅಂದರೆ ಶ್ರೀಹರಿಯು ಗುಣಗಳನ್ನು ತಿಳಿಯಲಿರುವುದರಿಂದ ಹೇಳಲಿಕ್ಕೂ ಅಶಕ್ತರು ಮತ್ತು ವ್ಯತ್ಯಾಸವಾಗಿಯೂ ಹೇಳುತ್ತಾರೆ.) ಅದುಕಾರಣ ದೇವತೆಗಳೇನೇ ನನಗೆ ಉಪದೇಶಿಸಿರುವರು. (ಯಾವ ದೇವತೆಗಳೆಂದರೆ) ಅಗ್ನಿಯು ಕತ್ತಿಯಂತೆ ಜ್ವಲಿಸುವ ಒಳ್ಳೆಯ ಕೈಕಾಲು ಮೊದಲಾದ ಅವಯವಗಳುಳ್ಳ ಅಗ್ನಿದೇವತೆಗಳು ಪ್ರತ್ಯಕ್ಷವಾಗಿ ನನಗೆ ಉಪದೇಶಿಸಿರುವರು ಹೀಗೆ ಗುರುಗಳ ಸಮಾಧದಲ್ಲಿ ಅಗ್ನಿಗಳು ತನಗೆ ಉಪದೇಶಿಸಿರುವರು ಎಂದು ಉಪಕೋಸಲನು ಸ್ಪಷ್ಟವಾಗಿ ಹೇಳಿದನು. ಆಗ ಆಚಾರ್ಯರು ಬ್ರಹ್ಮಕೋಸಲನೇ ಅಗ್ನಿಗಳು ನಿನಗೆ ಏನು ಉಪದೇಶಿಸಿರುವರು ಎಂದರು.

ಉ. ॥ ಇದಮಿತಿ ಹ ಪ್ರತಿಜಜ್ಞೇ ಲೋಕಾನ್ವಾವ ಕಿಲ ಸೋಮ್ಯ ತೇಽಪ್ರೋಚನ್ನಹಂ ತು ತೇ ತದ್ವಕ್ಷ್ಯಾಮಿ ಯಥಾ ಪುಷ್ಕರಪಲಾಶ ಆಪ್ತೋ ನ ಶ್ಲಿಷ್ಯಂತ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತ ಇತಿ ಬ್ರವೀತು ನೋ ಭಗವಾನಿತಿ ತಸ್ಮೈ ಹೋವಾಚ ॥ ಇತಿ ಚತುರ್ದಶಃ ಖಂಡಃ ॥ ೬-೧೪ ॥ ೭ ॥

ಅ ॥ ಅಗ್ನಿದೇವತೆಗಳು ಇವನ್ನು ಉಪದೇಶಿಸಿರುವರೆಂದು ಉಪಕೋಸಲನು ಪ್ರತಿಜ್ಞೆಮಾಡಿದನು. ಅಂದರೆ – ಅಗ್ನಿದೇವತೆಗಳು ಹೇಳಿದುದನ್ನು ಅನುವಾದಮಾಡಿದನು. ಆಗ ಸತ್ಯಕಾಮರು ಎಲೋ ಉಪಕೋಸಲನೇ ನಿನಗೆ ಅಗ್ನಿದೇವತೆಗಳು ಪೃಥಿವ್ಯಾದಿ ಲೋಕಗಳಲ್ಲಿರ್ದ ಭಗವದ್ರೂಪಗಳನ್ನು ಅವಶ್ಯವಾಗಿ ತಿಳಿಯಬೇಕೆಂದು ಹೇಳಿರುವರಷ್ಟೆ. (ಪರಂತು ಆ ರೂಪಗಳನ್ನು ನೀನು ತಿಳಿಯಬೇಕೆಂಬ ಹೇಳಿರುವರಾದರೂ ಅದು ನಿನಗೆ ಉಪಾಸನೆಗೆ ಉಪಯುಕ್ತವಾಗುವುದಿಲ್ಲ. ನಾನು ನಿನಗೆ ಉಪಾಸ್ಯರೂಪವನ್ನೂ. ಶ್ರೀಹರಿಯ ಸಾಮೀಪ್ಯವನ್ನು ಹೊಂದಲಿಕ್ಕೆ ಉಪಾಯಭೂತವಾದ ಮಾರ್ಗವನ್ನೂ ಹೇಳುವೆನೆಂದರು. ಹೇಗೆ ತಾವರೆಯ ಎಲೆಯಲ್ಲಿ ನೀರನ್ನು ಹಾಕಿದರೆ ಅದು ಅದಕ್ಕೆ ಅಂಟಿಕೊಳ್ಳುವುದಿಲ್ಲವೋ. ಅಂತೆಯೇ

ಅಪರೋಕ್ಷಜ್ಞಾನಿಗೆ ಪಾಪಕರ್ಮವು ಅಂಟಿಕೊಳ್ಳುವುದಿಲ್ಲ. ಆಂದರೆ—ಯಾವ ಶ್ರೀಹರಿಯ ಜ್ಞಾನದಿಂದ ಪಾಪಸಂಬಂಧವಿಲ್ಲದಿರುವ ಮುಕ್ತಿಯಾಗುತ್ತದೋ ಆ ಶ್ರೀಹರಿಯನ್ನು ನಾನು ನಿನಗೆ ಉಪದೇಶಿಸುವೆ ನೆಂದು ಗುರುಗಳು ಹೇಳಿದರು. ಆಗ ಉಪಕೋಸಲನು ಗುರುಗಳೇ ಉಪದೇಶಿಸಿರಿ ಎಂದಾಗ ಗುರು ಗಳಾದ ಸತ್ಯಕಾಮರು ಉಪಕೋಸಲನಿಗೆ ಉಪದೇಶಿಸಿದರು. ॥ ೬—೧೪ ॥ ॥ ೫ ॥

ಪದಿನಾಲ್ಕನೇ ಖಂಡವು ಮುಗಿಯಿತು.

೧೫ನೇ ಖಂಡವು

ಪೀ—ಗುರುಗಳು ಉಪದೇಶಿಸಿದ ವಿಷ್ಯೆಯನ್ನು ವೇದವು ಹೇಳುತ್ತದೆ

ಉ. ॥ ಯ ಏಷೋಂತರಕ್ಷಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ಬ್ರಹ್ಮೈತಸ್ಮಿನ್ನ ಕಿಂಚನ ಶ್ಲಿಷ್ಯತಿ ತದ್ಯ-ದ್ಯಪ್ಯಸ್ಮಿನ್ ಸರ್ಪಿರ್ವೋದಕಂ ವಾ ಸಿಂಚತಿ ವರ್ತ್ಮನೀ ಏವ ಗಚ್ಛತಿ ॥ ೧ ॥

ಅ ॥ ಕಣ್ಣಿನೊಳಗೆ ಪೂರ್ಣಗಳಾದ ಅರು ಗುಣಗಳಿರುವುದರಿಂದ ಪುರುಷನೆನಿಸಿಕೊಂಡವನು ಯಾವನು ದಿವ್ಯದೃಷ್ಟಿಗೆ ಗೋಚರನಾಗಿದ್ದಾನೋ, ಈತನು ಪೂರ್ಣ ಸುಖಸ್ವರೂಪನಾದುದರಿಂದ ಆತ್ಮ ನೆನಿಸಿದ ವಾಮನನು, ಎಂದು ಗುರುಗಳು ಹೇಳಿದರು ಈ ಕಣ್ಣಿನೊಳಗಣ ಪುರುಷನು ಸ್ವತ ಏವ ನಿತ್ಯ ಮುಕ್ತನು. ಸ್ವತಃ ಭಯವಿಲ್ಲದವನು. ಗುಣಪರಿಪೂರ್ಣನು. ಅಸಂಗನು. ಅಂದರೆ—ಯಾವುದರ ಸಂಗವೂ ಇಲ್ಲದವನೂ, ಕಣ್ಣು ಅಸಂಗನಾದ ಶ್ರೀಹರಿಗೆ ವ್ಯಾಪ್ಯವಾಗಿರುವುದರಿಂದ ಕಣ್ಣಿಗೆ ಯಾವನಾದರೂ ತುಪ್ಪ, ನೀರು ಅಥವಾ ಜೇರೆ ಯಾವುದನ್ನಾದರೂ ಪ್ರೋಕ್ಷಿಸಿದರೆ—ಅದು ಕಣ್ಣಿನಲ್ಲಿ ಅಂಟಿಕೊಳ್ಳದೆ ಮೇಲುಕೆಳಗಿನ ರೆಪ್ಪೆಗಳ ಮಾರ್ಗದಲ್ಲಿ ಇಳಿದುಹೋಗುತ್ತವೆ ॥ ೧ ॥

ಪೀ—ಹೀಗೆ ಶ್ರೀಹರಿಯ ಸ್ಥಾನಶಕ್ತಿಯನ್ನು ಹೇಳಿ ಸ್ವರೂಪಶಕ್ತಿಯನ್ನು ಹೇಳುತ್ತಾರೆ—

ಉ. ॥ ವಿತ್ತೇ ಸಂಯದ್ವಾಮ ಇತ್ಯಾಚಕ್ಷತ ವಿತ್ತೇ ಹಿ ಸರ್ವಾಣಿ ವಾ-ಮಾನ್ಯಭಿಸಂಯಂತಿ ಸರ್ವಾಣ್ಯೇನಂ ವಾಮಾನ್ಯಭಿಸಂಯಂತಿ ಯ ಏವಂ ವೇದ ॥ ೨ ॥

ಅ ॥ ಎಲ್ಲಾ ಮಂಗಲಗಳು ಅಥವಾ ಸೌಂದರ್ಯಗಳು ಕಣ್ಣಿನೊಳಗಣ ವಾಮನನನ್ನೇ ಹೊಂದಿರುವುದರಿಂದ ಈತನನ್ನು ಜ್ಞಾನಿಗಳು ಸಂಯದ್ವಾಮನೆನ್ನುತ್ತಾರೆ. ಹೀಗೆ ತಿಳಿದು ಉಪಾಸನೆ ಮಾಡುವವನಿಗೆ ಎಲ್ಲಾ ಮಂಗಲಗಳೂ ಸೌಂದರ್ಯಗಳೂ ಬರುತ್ತವೆ. ॥ ೨ ॥

ಉ. ॥ ವಿಷ ಉ ಏವ ವಾನುನೀರೇಷ ಹಿ ಸರ್ವಾಣಿ ವಾಮಾನಿ ನಯತಿ ಸರ್ವಾಣಿ ವಾಮಾನಿ ನಯತಿ ಯ ಏವಂ ವೇದ ॥ ೩ ॥

ಅ ॥ ಚಕ್ಷುವಿನೊಳಗಣ ಶ್ರೀಪುರಿಯು, ಸೌಂದರ್ಯಪ್ರಧಾನರಾದ ಸ್ತ್ರೀಯರ ಸಮೂಹಗಳಿಗೆ ಪ್ರೇರಕನಾಗಿರುವುದರಿಂದ ವಾಮನಿ ಎನಿಸುತ್ತಾನೆ. ಹೀಗೆ ತಿಳಿದು ಉಪಾಸನೆಮಾಡುವವನು ಈ ಲೋಕದಲ್ಲಿಯೂ ಮೋಕ್ಷದಲ್ಲಿಯೂ ಅನೇಕ ಸ್ತ್ರೀಯರಿಗೆ ಅಧಿಪತಿಯಾಗಿರುತ್ತಾನೆ. ॥ ೬ ॥

ಉ. ॥ ಏಷ ಉ ಏವ ಭಾನುರೇಷ ಹಿ ಸರ್ವೇಷು ಲೋಕೇಷು ಭಾತಿ ಸರ್ವೇಷು ಲೋಕೇಷು ಭಾತಿ ಯ ಏವಂ ವೇದ ॥ ೪ ॥

ಅ ॥ ಚಕ್ಷುವಿನೊಳಗಣ ಶ್ರೀಪುರಿಯೇ ಕಾಂತಿಪ್ರಧಾನರಾದ ಪುರುಷರ ಸಮೂಹಗಳಿಗೆ ಪ್ರೇರಕನಾಗುವುದರಿಂದ ಮತ್ತು ಸಮಸ್ತಲೋಕಗಳಲ್ಲಿ ಪ್ರಕಾಶಿಸುವುದರಿಂದ ಭಾನುನಿ ಎನಿಸುತ್ತಾನೆ. (ಸಮಸ್ತ ಪುರುಷರಿಗೆ ಪ್ರೇರಕನು.) ಹೀಗೆ ತಿಳಿದವನು ಸಮಸ್ತಲೋಕಗಳಲ್ಲಿ ಪ್ರಕಾಶಿಸುತ್ತಾನೆ ॥ ೪ ॥

ಪೀ—ಕಣ್ಣಿನೊಳಗಣ ಶ್ರೀಪುರುಷನ್ನು ತಿಳಿದವನ ಮಹಿಮೆಯನ್ನು ಪ್ರಕಾಶನೋಪಾಯವಾಗಿ ಅವನ ಸದ್ಗತಿಮಾರ್ಗವನ್ನು ಹೇಳುತ್ತಾರೆ—

ಉ. ॥ ಅಥ ಯದು ಚೈನಾಸ್ಮಿಂಶ್ಚವ್ಯಂ ಕುರ್ವಂತಿ ಯದು ಚ ನಾರ್ಚಿಷಮೇವಾಭಿಸಂಭವಂತ್ಯರ್ಚಿಷೋಽಹರಹ್ನ ಆಪೂರ್ಯಮಾಣಪಕ್ಷಮಾಪೂರ್ಯಮಾಣಪಕ್ಷಾದ್ಯಾನ್ ಷಡುದಙ್ಙೇತಿ ಮಾಸಾಂಸ್ತಾನ್ ಮಾಸೇಭ್ಯಸ್ಸಂವತ್ಸರಂ ಸಂವತ್ಸರಾದಾದಿತ್ಯಮಾದಿತ್ಯಾಚ್ಚಂದ್ರಮಸಂ ಚಂದ್ರಮಸೋ ವಿದ್ಯುತಂ ತತ್ಪುರುಷೋ ಮಾನವಃ ॥ ೫ ॥

ಅ ॥ ಕಣ್ಣಿನೊಳಗಣ ಶ್ರೀಪುರಿಯ್ಲಾನಿಯು ಮರಣವನ್ನು ಹೊಂದುತ್ತಿರಲು ಅವಸಂಬಂಧಿಯಾದ ದಹನ ಮೊದಲಾದ ಉತ್ತರಕ್ರಿಯೆಯನ್ನು ಮಾಡಿದರೂ ಮಾಡದಿದ್ದರೂ ಜ್ಯಾನಿಗಳು (ತಮ್ಮ ಜ್ಞಾನದಿಂದ ಸಂತುಷ್ಟನಾದ ಶ್ರೀಪುರಿಯು ಸಾಮರ್ಥ್ಯದಿಂದ ಬ್ರಹ್ಮನಾಡಿಯು ಮಾರ್ಗವಾಗಿ ದೇಹದಿಂದ ಹೊರಟು ಹೋದವರಾಗಿ) ಅರ್ಚಿಃ ಎನ್ನುವ ಜ್ಯೋತಿರ್ಲೋಕಕ್ಕೆ ಹೋಗುತ್ತಾರೆ. (ಅಲ್ಲಿ ಕೆಲವು ಕಾಲ ನೀತು ಸುಜಿಸಲ್ಪಟ್ಟವರಾಗಿ) ಆ ಅರ್ಚಿರ್ಲೋಕದಿಂದ (ಅಹಿವಾಹಿಕ ಎನ್ನುವ ವಾಯುಲೋಕಕ್ಕೆ ಹೋಗಿ ಅಲ್ಲಿಂದ) ಅಹರಭಿಮಾನಿದೇವತಾಲೋಕಕ್ಕೆ ಹೋಗುತ್ತಾರೆ ಅಲ್ಲಿಂದ ಶುಕ್ಲಪಕ್ಷಾಭಿಮಾನಿ ದೇವತಾಲೋಕಕ್ಕೂ, ಅಲ್ಲಿಂದ ಉತ್ತರಾಯಣಾಭಿಮಾನಿ ದೇವತಾಲೋಕಕ್ಕೂ, ಅಲ್ಲಿಂದ ಸಂವತ್ಸರಾಭಿಮಾನಿ ದೇವತಾಲೋಕಕ್ಕೂ ಅಲ್ಲಿಂದ (ತಟಿಲ್ಲೋಕ, ವರುಣಲೋಕ, ಪ್ರಜಾಪತಿ ಲೋಕಗಳಿಗೆ ಕ್ರಮದಿಂದ ಹೋಗಿ ಅಲ್ಲಿಂದ) ಆದಿತ್ಯಲೋಕಕ್ಕೂ, ಆ ಲೋಕದಿಂದ ಚಂದ್ರಲೋಕಕ್ಕೂ, ಅಲ್ಲಿಂದ (ವೈದ್ಯುತಾಗ್ನಿ ಚಂದ್ರ, ಧ್ರುವಲೋಕಗಳನ್ನು ಹೊಂದಿ) ವಿದ್ಯುತ್ ಎನ್ನಿಸುವ ಜಾಠರಾಗ್ನಿ ಲೋಕಕ್ಕೂ ಹೋಗುತ್ತಾರೆ. ಅಲ್ಲಿಂದ ಭಾವಶರೀರವನ್ನು ಹೊಂದಿದ ವಾಯುವಿನ ಲೋಕಕ್ಕೆ ಹೋಗುತ್ತಾರೆ ॥ ೫ ॥

ಉ. ॥ ಸ ಏನಾನ್ ಬ್ರಹ್ಮ ಗಮಯತ್ಯೇಷ ದೇವಪಥೋ ಬ್ರಹ್ಮಪಥ ಏತೇನ ಋಲು ಪ್ರತಿಪದ್ಯಮಾನಾ ಇಮಂ ಮಾನವಮಾವರ್ತಂ ನಾವರ್ತಂತೇ ನಾವರ್ತಂತೇ ॥ ಇತಿ ಪಂಚದಶಃ ಖಂಡಃ ॥ ೬-೧೫ ॥ ॥ ೬ ॥

ಅ ॥ ಮುಖ್ಯವಾಯುದೇವರು ಕಣ್ಣಿನೊಳಗಣ ಪುರುಷ ಜ್ಞಾನಿಗಳನ್ನು (ಪ್ರತೀಕಾಲಂಬನವನ್ನು) ಅಪರ ಬ್ರಹ್ಮನ (ಚತುರ್ಮುಖ ಬ್ರಹ್ಮನ) ಸವಿಾಪಕ್ಕೂ, ಅಪ್ರತೀಕಾಲಂಬನವನ್ನು ಪರಬ್ರಹ್ಮನ ಸವಿಾಪಕ್ಕೂ

ಹೊಂದಿಸಿಕೊಡುತ್ತಾರೆ. *ಪರಬ್ರಹ್ಮನನ್ನು ಹೊಂದತಕ್ಕ ಮಾರ್ಗವು ಅಭಿಮಾನಿಗಳಾದ ಅಯಾಯ ದೇವತೆಗಳ ಅಧೀನದಲ್ಲಿ ಇರುತ್ತದೆ. ಈ ಅರ್ಚಾದಿವರ್ತ್ಮದಿಂದ ಪರಬ್ರಹ್ಮನನ್ನು ಹೊಂದುತ್ತಾರೆ. ಮನುಷ್ಯರು ಎಲ್ಲಿ ತಿರುಗಾಡಿಕೊಂಡಿರುತ್ತಾರೋ ಅಂತಹ ಜನನಮರಣಾದಿರೂಪವಾದ ಸಂಸಾರವನ್ನು ಹೊಂದುವುದಿಲ್ಲ ಅವರು ಮುಕ್ತರೇ ಆಗುತ್ತಾರೆ. ॥ ೬ ॥

ಪೀ—೧೫ನೇ ಖಂಡದಲ್ಲಿದ್ದ ಪೃಥಿವ್ಯಾದಿಶಬ್ದಗಳ ಅರ್ಥಹೇಳುತ್ತಾರೆ—

ಭಾ. ॥ (೧) ಪೃಥುತ್ವಾತ್ಪೃಥಿವೀ ವಿಷ್ಣುರಗ್ನಿಶ್ಚಾಪ್ಯಂಗನೇತೃತಃ । ಅನ್ನಮತ್ತೃತ್ವಶೋ ನಿತ್ಯಮಾದಿತ್ಯಶ್ಚಾದಿರೂಪತಃ ॥ (೨) ಆಪ ಆಪಾಲನಾಚ್ಚೈವ ದೇಶನಾದ್ದಿಶ ಏವ ಚ । ಅನನ್ಯರಾಜೋ ನಕ್ಷತ್ರಮಾನಂದತ್ವಾಚ್ಚ ಚಂದ್ರಮಾಃ ॥ (೩) ಪ್ರಾಣೋಽಸೌ ಬಲರೂಪತ್ವಾದಾಕಾಶಃ ಪೂರ್ತಿಹೇತುತಃ । ದ್ಯೌಃ ಪ್ರಕಾಶಸ್ವರೂಪತ್ವಾದ್ವೈದನಾದ್ವಿದ್ಯುದೇವ ಚ ॥ (೪) ಯಸ್ಸೂರ್ಯಸೋಮವಿದ್ಯುತ್ಸು ತತ್ತನ್ನಾಮಾ ಹರಿಃ ಪರಃ । ಅಹೇಯತ್ವಾದಹಂನಾಮಾ ಗಾರ್ಹಪತ್ಯಾದಿಸಂಸ್ಥಿತಃ ॥ ಇತಿ ತತ್ತ್ವಸಂಹಿತಾಯಾಂ ॥ ೧ ॥

ಅ ॥ (೧) ವಿಷ್ಣುವು ಸರ್ವತ್ರ ವ್ಯಾಪ್ತನಾದುದರಿಂದ ಪೃಥಿವೀ ಎಂದೂ, ಶರೀರಕ್ಕೆ ಆಥವಾ ಅಪ್ರಧಾನವಾದ ಜಗತ್ತಿಗೆ ಪ್ರೇರಕನಾದುದರಿಂದ ಅಗ್ನಿ ಯೆಂದೂ, ಸರ್ವಭೆಕ್ಷಕನಾದುದರಿಂದ ಅನ್ನನೆಂದೂ, ಕಾರಣರೂಪನಾದುದರಿಂದ ಅಥವಾ ಆದಿಯಲ್ಲಿಯೇ ಇರತಕ್ಕವನಾದುದರಿಂದ ಆದಿತ್ಯನೆಂದೂ ಅನಿಸುತ್ತಾನೆ (೨) (೧೫ನೇ ಖಂಡದಲ್ಲಿದ್ದ ಆಪಃ ಇತ್ಯಾದಿಗಳ ಅರ್ಥಹೇಳುತ್ತಾರೆ—) ಶ್ರೀಹರಿಯು ಜೀವನ್ನಾಗಿ ರಕ್ಷಿಸುವುದರಿಂದ ಆಪಃ ಎಂದೂ, ಭಕ್ತರಿಗೆ ಅಭೀಷ್ಟವನ್ನು ಕೊಡುವವನಾದುದರಿಂದ ದಿಶಃ ಎಂದೂ, ತನಗೆ ಇನ್ನೊಬ್ಬ ನಿಯಾಮಕನಿಲ್ಲದಿರುವುದರಿಂದ ನಕ್ಷತ್ರನೆಂದೂ, ಆನಂದ ಸ್ವರೂಪನಾದುದರಿಂದ ಚಂದ್ರನೆಂದೂ ಅನಿಸುತ್ತಾನೆ. (೩) (೧೫ನೇ ಖಂಡದ ಪ್ರಾಣಾದಿ ಶಬ್ದಗಳ ಅರ್ಥಹೇಳುತ್ತಾರೆ—) ಶ್ರೀಹರಿಯು ಬಲರೂಪನಾದುದರಿಂದ ಪ್ರಾಣನೆಂದೂ, ಪದಾರ್ಥಗಳನ್ನು ತುಂಬಿಸಲಿಕ್ಕೆ ಅವಕಾಶವನ್ನು ಕೊಡುವುದರಿಂದ ಅಥವಾ ಪೂರ್ಣತೆಗೆ ಕಾರಣನಾದುದರಿಂದ ಆಕಾಶನೆಂದೂ, ಪ್ರಕಾಶ ಸ್ವರೂಪನಾದುದರಿಂದ ದ್ಯೌಃ ಎಂದೂ, ಜ್ಞಾನದಾಯಕನಾದುದರಿಂದ ವಿದ್ಯುತ್ ಎಂದೂ ಎನಿಸುತ್ತಾನೆ. (೪) (೧೫ನೇ ಖಂಡದಲ್ಲಿದ್ದ **ಯ ಏಷ ಆದಿತ್ಯೇ**, ೧೫ನೇ ಖಂಡದಲ್ಲಿದ್ದ **ಯ ಏಷ ಚಂದ್ರಮಸಿ**, ೧೫ನೇ ಖಂಡದಲ್ಲಿದ್ದ **ಯ ಏಷ ವಿದ್ಯುತಿ** ಎಂಬ ಮೂರು ವಾಕ್ಯಗಳಲ್ಲಿ ಗಾರ್ಹಪತ್ಯಾದಿಗಳಿಗೂ ಆದಿತ್ಯಾದಿಗಳಿಗೂ ಐಕ್ಯವು ಹೇಳಲ್ಪಡುತ್ತದೆಂದು ಪರರು ಹೇಳುವುದು ಅಯುಕ್ತವೆನ್ನುತ್ತಾರೆ—) ಸೂರ್ಯ, ಚಂದ್ರ, ಮಿಂಚು ಇವುಗಳಲ್ಲಿದ್ದು ಸೂರ್ಯ, ಚಂದ್ರ, ವಿದ್ಯುತ್ ಎನಿಸಿಕೊಂಡ ಸರ್ವೋತ್ತಮನಾದ ಶ್ರೀಹರಿಯೇ ಯಾರಿಂದಲೂ ಬಿಡಲ್ಪಡದಿರುವುದರಿಂದ ಅಹಂ ಎನಿಸಿಕೊಂಡವನಾಗಿ ಗಾರ್ಹಪತ್ಯಾದಿಗಳಲ್ಲಿರುತ್ತಾನೆ, ಎಂದು ತತ್ತ್ವಸಂಹಿತೆಯಲ್ಲಿ ಹೇಳಿದೆ. ॥ ೧ ॥

---

*(೧) ಪ್ರತೀಕಂ ದೇಹ ಉದ್ದಿಷ್ಟಃ ಯೇಷಾಂ ತತ್ಪ್ರೇವ ದರ್ಶನಂ । ನ ತು ವ್ಯಾಪ್ತತಯಾ ಕ್ವಾಪಿ ಪ್ರತೀಕಾಲಂಬನಾಸ್ತು ತೇ ॥ ಎಂಬ ಪ್ರಮಾಣದಿಂದ ದೇಹ ಇಂದ್ರಿಯಾದಿಗಳಲ್ಲಿಯೇ ಪರಬ್ರಹ್ಮನನ್ನು ಪ್ರತ್ಯಕ್ಷೀಕರಿಸಿಕೊಂಡವರು ಪ್ರತೀಕಾಲಂಬನರು. (೨) ಅಪ್ರತೀಕಾ ದೇವತಾಸ್ತು ಋಷೀಣಾಂ ಶತಮೇವ ಚ । ರಾಜ್ಞಾಂ ಚ ಶತಮುದ್ದಿಷ್ಟಂ ಗಂಧರ್ವಾಣಾಂ ತಥಾ ಶತಂ ॥ ವಿತೇಽಧಿಕಾರಿಣೋ ವ್ಯಾಪ್ತದರ್ಶನೇಚ್ಛೇ ನ ತು ಕ್ವಚಿತ್ ॥ ಎಂಬ ಪ್ರಮಾಣದಿಂದ ದೇವತೆಗಳು, ೧೦೦ ಋಷಿಗಳು, ೧೦೦ ರಾಜರು, ೧೦೦ ಗಂಧರ್ವರು ಇವರು ಅಪ್ರತೀಕಾಲಂಬನರು ಈ ಅಧಿಕಾರಗಳು ಸರ್ವತ್ರ ವ್ಯಾಪ್ತವಾದ ಭಗವದ್ಸ್ವರೂಪವನ್ನು ಉಪಾಸನೆ ಮಾಡಲಿಕ್ಕೆ ಯೋಗ್ಯರು ಬೇರೆ ಯಾರೂ ವ್ಯಾಪ್ತ ಭಗವದ್ಸ್ವರೂಪೋಪಾಸನೆಗೆ ಯೋಗ್ಯರಲ್ಲ. (೩) ಸಪ್ರತೀಕಾತ್ಪತ್ತುರ್ಮುಖಮಪ್ರತೀಕಾ ಪರಮಿಚ್ಛೆತೇ ಗಚ್ಛಂತಿ ಎಂದು ವೇದವು.

೫—ಅದಿತ್ಯನೊಳಗಣ ಶ್ರೀಪುರುಷನಿಗೂ ಗಾರ್ಹಪತ್ಯನೊಳಗಣ ಶ್ರೀಪುರುಷನಿಗೂ ವಕ್ಯ ಹೇಳಲಿಕ್ಕೆ ಈ ವಾಕ್ಯಗಳು ಹೊರಟಿವೆ ಎಂದು ಏಕೆ ಹೇಳುವುದು? ಗಾರ್ಹಪತ್ಯಾದಿ ಜೀವರಿಗೆ ಆದಿತ್ಯಾದಿ ಜೀವರಿಂದ ವಕ್ಯವೇ ಹೇಳಲ್ಪಡುತ್ತದೆಂದು ಏಕೆ ಅಗಲಾರದೆಂದರೆ—

ಭಾ. ॥ (೧) ಜೀವೈಕ್ಯಪಕ್ಷೇ ಆದಿತ್ಯೇ ಪುರುಷಃ ಚಂದ್ರಮಸಿ ವಿದ್ಯುತೀತಿ ಭೇದವ್ಯಪದೇಶೋ ನ ಯುಜ್ಯತೇ ॥ (೨) ಪೃಥಿವ್ಯಗ್ನಿರನ್ನಮಾದಿತ್ಯ ಆದಿತ್ಯೇ ಪುರುಷ ಇತ್ಯಾದಿನಾ ಆದಿತ್ಯಾದಿರಬ್ರುವಾಚ್ಯೋ ಸಪ್ತಮ್ಯರ್ಥಃ ಪ್ರಥಮಾರ್ಥರ್ಚ್ಯೋ ಪ್ರತೀಯೇತೇ । ಅತೋ ನೈಕ್ಯಮುಚ್ಯತೇ ॥ (೩) ಸ ಏನಾಮಮುಷ್ಮಿಂಶ್ಚತುರ್ಥ್ಯಾಮಿತೋಽಃ ಸರ್ವವಿದೇಷಾಭಾವಮಜ್ಞಾಪನಾರ್ಥಃ(ರ್ಥಂ)॥ (೪) ಪೂರ್ವಂ ಸೋಽಮುಷ್ಮಿನ್ಭೇದೇ ಶಾಸ್ತ್ರಯೋನಿತ್ವಜ್ಞಾಪನಾಯ ॥ ೫) ಅಮುನೈವಾದಿಕಾ ರಜ್ಞಾ ಆಂತರ್ಯಾಮಿಣಿ ಮುಖ್ಯಃ । ತತ್ಸಂಬಂಧಾಚ್ಚೇತನಾರ್ಥ್ಯ ತಚ್ಚಾದ್ಯೇದಗತಾ ಹರೌ ॥ (೬) ಅನ್ಯತ್ರಬ್ರೋದಿತೋಽಂತಸ್ಯ ಅತ್ರಾನ್ಯಾಶ್ರುತೇ ಜನಾರ್ದನಃ । ಅಗ್ನೆಯೋ ದ್ವಿವಿಧಂ ವಿದ್ಯುನ್ಮನ್ವೋಚನ್ಮುನಯೋಽಸಲೇ ॥ ಇತಿ ಸಾನುಸಂಪಿತಾಯಾಂ ॥ ೬ ॥

ಅ ॥ (೧) ಗಾರ್ಹಪತ್ಯಾದಿ ಜೀವರಿಗೂ ಆದಿತ್ಯಾದಿ ಜೀವರಿಗೂ ವಕ್ಯನನ್ನು ಹೇಳಲಿಕ್ಕೆ ಕಂಡಿದೆ—ಆದಿತ್ಯೇ ಪುರುಷಃ ಆದಿತ್ಯನಲ್ಲಿ ಪುರುಷನು, ಚಂದ್ರಮಸಿ ಪುರುಷಃ ಚಂದ್ರನಲ್ಲಿ ಪುರುಷನು, ವಿದ್ಯುತಿ ಪುರುಷಃ ಮಿಂಚಿನಲ್ಲಿ ಪುರುಷನು ಎಂದು ಸಪ್ತಮಿ ವಿಭಕ್ತಿಯಿಂದ ಭೇದ ಹೇಳಲ್ಪಟ್ಟಿರುವ ಪಾರಾಯ. (ಅಂದರೆ—ಹಿಂದೆ ಹೇಳಿದ ಪ್ರಕಾರ ಜೀವನಿಗೆ ವಕ್ಯವು ಇಷ್ಟವಾಗಿದ್ದಲ್ಲಿ—ಆದಿತ್ಯೇ ಪುರುಷಃ ಆದಿತ್ಯನು ಪುರುಷನು, ಚಂದ್ರಮಸಿ ಪುರುಷಃ ಚಂದ್ರನು ಪುರುಷನು, ವಿದ್ಯುತಿ ಪುರುಷಃ ಮಿಂಚಿನಲ್ಲಿ ಪುರುಷನು ಎಂದು ಸಪ್ತಮಿವಿಭಕ್ತಿಯನ್ನು ಹೇಳಬೇಕಿತ್ತು. ಆದಿತ್ಯೇ ಪುರುಷಃ ಇತ್ಯಾದಿಪ್ರಕಾರ ಪ್ರಥಮಾ ವಿಭಕ್ತಿಯನ್ನು ಹೇಳಿದ್ದು ಏಕೆಂದರೆ ಹೋಗುವುದು. ಪರಂತು, ಆದಿತ್ಯನೊಳಗಣ ಪುರುಷನಿಗೆ ವಕ್ಯವು ಏಪಿಸಲಾರದು ಏಕೆಂದರೆ ಜೀವರಿಗೆ ವಕ್ಯವು ಲಭಿಸುವುದಿಲ್ಲ. ಆದಿತ್ಯಾದಿ ದೇವತಾ ಸೂರ್ಯಮಂಡಲ ಮೊದಲಾದ ಅಯಾಯ. ಮಂಡಲವನ್ನು ಪ್ರವೇಶಿಸಿ ಹೋಗುತ್ತಿದೆಂದು ಶ್ರುತಿಯಿಂದ ಕೇಳಿಬರುವುದರಿಂದ ಅವರಿಗೆ ಮುಖ್ಯಾರ್ಥವನ್ನು ಬಿಟ್ಟು ಅಗುವುದು.) (೨) (ಪೃಥಿವ್ಯಗ್ನಿರನ್ನಮಾದಿತ್ಯಃ ಇತ್ಯಾದಿಗಳಲ್ಲಿ ಹೇಳಿದ ಆದಿತ್ಯಾದಿಗಳು ಯಾವ ವಿಷಯ ಆದಿತ್ಯೇ ಪುರುಷಃ ಎಂಬೊಂದಾದ ಮೇಲಿನ ವಾಕ್ಯದಲ್ಲಿ ಹೇಳಲ್ಪಡುತ್ತಾರೆಂದು. ಪರರು ಹೇಳುವುದು ಅಯುಕ್ತವನ್ನುತ್ತಾರೆ [illegible] ಅನ್ನವಾದಿತ್ಯಃ ಆದಿತ್ಯೇ ಪುರುಷಃ, ಇತ್ಯಾದಿ ವಾಕ್ಯಗಳಿಂದ ಸಪ್ತಮಿ ವಿಭಕ್ತಿಯಿಂದ ಯಾವುದನ್ನು ಹೇಳಲ್ಪಡುವನೆಂಬುದನ್ನು ಸೊನ್ನೆನು. ಪ್ರಥಮಾ ವಿಭಕ್ತಿಯಿಂದ ಹೇಳಲ್ಪಡುವವನನ್ನೂ ಸೊನ್ನೆನು. ಏಕೆ ಆದಿತ್ಯ ಮೊದಲಾದ [illegible] ಗಳಿಂದ ಹೇಳಲ್ಪಡುವವರಿಬ್ಬರು ಹೋಗುತ್ತಾರೆ. (ಅದುಕಾರಣ ಈ ಪ್ರಕರಣದಲ್ಲಿ ಹಿಂದೆ [illegible] ಆದಿತ್ಯಾದಿ ರಿಬ್ಬರಿಂದ ಒಬ್ಬರು ಹೇಳಲ್ಪಡುವುದಿಲ್ಲ.) ಹೀಗೆ ಬಾಧಕವಿದ್ದ ಪ್ರಯುಕ್ತ ಸೋಽಮುಷ್ಮಿನ್ಭೇದೇ ಎಂಬ ವಾಕ್ಯದಿಂದ ಜೀವೈಕ್ಯವು ಹೇಳಲ್ಪಡುವುದಿಲ್ಲ. (೩) [illegible] ಈ ಮುಂದಿನ ಎಂಟಿಗಳಲ್ಲಿ ಸೋಽಮುಷ್ಮಿನ್ಭೇದೇ ಎಂಬ ಹಿಂದಿನ ವಾಕ್ಯದಿಂದಲೇ ಜೀವತನಗಳಿಗೆ ವಕ್ಯವನ್ನು ಹೇಳಲಾದುದರಿಂದ ಸ ಏನಾಮಮುಷ್ಮಿನ್ಭೇದೇ ಎಂಬ ವಾಕ್ಯವು ವ್ಯರ್ಥವೆಂದರೆ—) ಸ ಏನಾಮಮುಷ್ಮಿನ್ಭೇದೇ ಎಂಬ ಮೇಲಿನ ವಕ್ಯವು ಆದಿತ್ಯಾದಿಗಳೊಳಗಣ ಶ್ರೀಪುರುಷನಿಗೂ, ಗಾರ್ಹಪತ್ಯಾದಿಗಳೊಳಗಣ ಶ್ರೀಪುರುಷನಿಗೂ ಮಾತ್ರವೆಂದು ಅಕ್ಷಪಾದನಾದಿಗಳಲ್ಲಿಯೂ ಇಷ್ಟವೇ ಇದ್ದು, ಎಂದು ತಿಳಿಸಿಕೊಡುವುದಕ್ಕಾಗಿ. (ಅಂದರೆ—ಪರಮೇಶ್ವರನು ಬ್ರಾಹ್ಮಣಕ್ಕೆ ಉಪಾಸನಾದಿ ಪ್ರಯೋಜನವಿದ್ದಲ್ಲಿ ವಕ್ಯವಿದ್ದರೂ ಸ್ವಲ್ಪ ವಿಶೇಷವಿದೆ. ದೇವತೆಗಳಿಗೆ ಇದ್ದಲ್ಲಿಲ್ಲವು ವಿಶೇಷ [illegible] ಮನುಷ್ಯರಿಗೆ ಇದ್ದಲ್ಲಿಲ್ಲವು ವಿಶೇಷವಿದೆ.

ಇದ್ದುದೆಲ್ಲವೂ ಇಂದ್ರನಿಗೆ ಇಲ್ಲ. ಹೀಗೆಯೇ ಇಷ್ಟಿಯೂ **ಸೋಽಹಮಸ್ಮಿ** ಎಂದು ಗಾರ್ಹಪತ್ಯಾದಿಗಳೊಳಗಣ ಶ್ರೀಹರಿಗೆ ಸೂರ್ಯಾದಿಗಳೊಳಗಣ ಶ್ರೀಹರಿಯಿಂದ ಏಕ್ಯ ಹೇಳಿದರೆ—ಧರ್ಮ ವಿದುರ, ಇಂದ್ರ ಅರ್ಜುನ, ಇತ್ಯಾದಿಗಳಂತೆಯೇ ಏಕ್ಯವೆಂದು ಶಂಕಾ ಬರುವುದು. ಅದನ್ನು ಹೋಗಲಾಡಿಸುವುದಕ್ಕಾಗಿ **ಸ ಏವಾಹಮಸ್ಮಿ** ಅವನೇ ನಾನಾಗಿರುತ್ತೇನೆ ಎಂದು ಹೇಳಿದ್ದು. ಈ ಭಗವದ್ರೂಪಗಳಿಗೆ ಅಲ್ಪವೂ ವಿಶೇಷವಿಲ್ಲದ ಏಕ್ಯವು ಎಂದು ತಿಳಿಸುವುದಕ್ಕಾಗಿ **ಸ ಏವಾಹಮಸ್ಮಿ** ಎಂದು ಹೇಳಿದ್ದು. (೪) (ಹಾಗಾದರೆ—**ಸ ಏವಾಹಮಸ್ಮಿ** ಎಂಬ ವಾಕ್ಯದಿಂದಲೇ ಯಾವುದೊಂದು ವಿಶೇಷವೂ ಇಲ್ಲದ ಪೂರ್ಣಾಭೇದವು ಸಿದ್ಧಿಸುವುದರಿಂದ **ಸೋಽಹಮಸ್ಮಿ** ಎಂಬ ಹಿಂದಿನ ವಾಕ್ಯವು ವ್ಯರ್ಥವೆಂದರೆ—) ಆ ಅಂತರ್ಯಾಮಿ ರೂಪಗಳಿಗೆ ಅಭೇದವೆಂದು ಹೇಳುವುದರಲ್ಲಿ **ಸೋಽಹಮಸ್ಮಿ** ಎಂಬ ಹಿಂದಿನ ವಾಕ್ಯಕ್ಕೆ ಮುಖ್ಯ ತಾತ್ಪರ್ಯವಿದೆ ಎಂದು ತಿಳಿಸಿಕೊಡುವುದಕ್ಕಾಗಿ ಆ ವಾಕ್ಯವು ಹೊರಟಿದೆ (೫) (ಅಂತರ್ಯಾಮಿಯಲ್ಲಿ ಅಹಂ ಮೊದಲಾದ ಶಬ್ದಗಳು ಇವೆ ಎಂಬಲ್ಲಿ ಸ್ಮೃತಿ ಹೇಳುತ್ತಾರೆ—) ಅಹಂ ಅಸ್ಮಿ ಮೊದಲಾದ ಶಬ್ದಗಳು ಮುಖ್ಯವಾಗಿ ಅಂತರ್ಯಾಮಿಯಲ್ಲಿಯೇ ಇರುತ್ತವೆ. ಆ ಶಬ್ದಗಳು ಅಂತರ್ಯಾಮಿಯ ಸಂಬಂಧದಿಂದಲೇ ಜೀವರಲ್ಲಿರುತ್ತವೆ. ಅದುಕಾರಣ ಜೀವಗಳಲ್ಲಿರುವ ಅಹಂ ಅಸ್ಮಿ ಮೊದಲಾದ ಶಬ್ದಗಳು ಜೀವರೊಳಗಣ ಭಗವದ್ರೂಪವನ್ನು ಹೇಳುತ್ತವೆ. (ಮುಖ್ಯಾರ್ಥವು ಕೂಡದಿರುವ ಸ್ಥಳದಲ್ಲಿಯೇ ಅಮುಖ್ಯವಾದ ಅರ್ಥವನ್ನು ಇಟ್ಟುಕೊಳ್ಳಬೇಕು.) (೬) (ಎರಡನೇ ಖಂಡದಲ್ಲಿ **ಸ್ಯಾಜೋ ಬ್ರಹ್ಮ ಕಂ** ಎಂಬ ವಿದ್ಯೆಯನ್ನು ಹೇಳಿ ಮೂರನೇ ಖಂಡದಲ್ಲಿ **ಪೃಥಿವ್ಯಗ್ನಿರನ್ನಮಾದಿತ್ಯಃ** ಇತ್ಯಾದಿ ವಿದ್ಯೆಗಳನ್ನು ಹೇಳಿ ಮೇಲಿನ ಮೂರನೇ ಖಂಡದಲ್ಲಿ **ಉಪಕೋಸಲೇಹಾ ಸೋಮ್ಯ ತೇಽಸ್ಮದ್ವಿದ್ಯಾ ಚಾತ್ಮವಿದ್ಯಾ ಚ** ಎಂದು ಹೇಳಿದುದರಿಂದ ಒಂದನೇದ್ದು ಪ್ರತ್ಯವಿದ್ಯೆಯು, ಎರಡನೇದ್ದು ಅಗ್ನಿ ವಿದ್ಯೆಯೇ ಎಂದು ಪರರು ಹೇಳುವುದು ತಯುಕ್ತವಲ್ಲ. ಏಕೆಂದರೆ **ಅಹಂ** ಮೊದಲಾದ ಶಬ್ದಗಳು ಅಂತರ್ಯಾಮಿ ರೂಪವನ್ನು ಹೇಳುವುದರಿಂದ **ಅಸ್ಮದ್ವಿದ್ಯಾ** ಎಂಬುವುದಕ್ಕೆ ಅಂತರ್ಯಾಮಿವಿದ್ಯೆಯು ಎಂದರ್ಥವು. **ಆತ್ಮವಿದ್ಯಾ** ಎನ್ನುವುದಕ್ಕೆ **ಕಂ ಬ್ರಹ್ಮ** ಇತ್ಯಾದಿಗಳಿಂದ ಹೇಳಲ್ಪಟ್ಟ ವ್ಯಾಪ್ತನಾದ ಶ್ರೀಹರಿಯ ವಿದ್ಯೆಯು ಎಂದರ್ಥವೆನ್ನುತ್ತಾರೆ—ಅಸ್ಮದ್ವಿದ್ಯಾ ಎಂಬುವಲ್ಲಿ ಅಸ್ಮತ್ಶಬ್ದದಿಂದ ಹೇಳಲ್ಪಟ್ಟವನು ಅಂತರ್ಯಾಮಿಯು, ಆತ್ಮವಿದ್ಯಾ ಎಂಬಲ್ಲಿ ಆತ್ಮನೆಂದರೆ ವ್ಯಾಪ್ತನಾದ ಶ್ರೀಪರಮಾತ್ಮನು. ಹೀಗೆ ಅಂತರ್ಯಾಮಿಯೂ ವ್ಯಾಪ್ತನೂ ಆದ ಶ್ರೀಹರಿಯನ್ನು ಮೂರು ಅಗ್ನಿ ದೇವತೆಗಳು ಉಪಕೋಸಲನಿಗೆ ಉಪದೇಶಿಸಿರುವರು ಎಂಬ ಸಾಮಂಜಸ್ಯವಲ್ಲಿ ಹೇಳಿದೆ. (ಮತ್ತು **ಪೃಥಿವ್ಯಗ್ನಿಃ** ಇತ್ಯಾದಿ ವಿದ್ಯೆಗಳನ್ನು ಹೇಳಿ **ಅಪಹತೇ ಪಾಪಕೃತ್ಯಾಂ** ಇತ್ಯಾದಿಗಳಿಂದ ಅಂತರ್ಯಾಮಿಯ ಜ್ಞಾನದಿಂದ ಮೋಕ್ಷವಾಗುತ್ತದೆಂದು ಹೇಳಿದೆ. ಅಗ್ನಿಜ್ಞಾನದಿಂದ ಮೋಕ್ಷವಾಗುವುದಿಲ್ಲ. ಅದುಕಾರಣ ಸರ್ವಾಂಗಗಳಿಗೂ ಪ್ರೇರಕನಾದ ಅಗ್ನ್ಯಂತರ್ಯಾಮಿಯ ಜ್ಞಾನದಿಂದಲೇ ಮೋಕ್ಷವೆಂದು ಅವಶ್ಯವಾಗಿ ಹೇಳಬೇಕು. ॥ ೬ ॥

ಈ—ಅಪಹತೇ ಪಾಪಕೃತ್ಯಾಂ ಎಂಬುದು ಮುಖ್ಯವಾದುದು ಸಂಸಾರಿಯಲ್ಲಿ ಕೂಡುವುದಿಲ್ಲ. **ಅಂತೆಯೇ ನಾಸ್ಯಾಪರಪುರುಷಾಃ ಕ್ಷೀಯಂತೇ** ಎಂಬ ವಾಕ್ಯವು ಮುಕ್ತರನ್ನು ಹೇಳುತ್ತದೆಂದೇ ತಿಳಿಸುತ್ತದೆ, ಎನ್ನುತ್ತಾರೆ—

ಭಾ. ॥ (೧) ನಾಸ್ಯಾಪರಪುರುಷಾಃ ಕ್ಷೀಯಂತೇ ಭೃತ್ಯವಾನೇವ ಭವತಿ । ಲೋಕೇ ಭಗವಲ್ಲೋಕೇ ಭವತಿ ॥ (೨) ಇಹ ಚ ಅವ ಚ ಇಹಾವೇ । ಇಹೇತಿ ಮನುಷ್ಯಲೋಕಸ್ಯಾ ಉಚ್ಚೈಂತೇ ಅವೇತಿ ಪಾತಾಲಸ್ಯಾಃ । ಮಾನುಷಾಸುರಾ ಭಗವಂತಂ ನಿಹ್ನುತ ಏವ ನ ವಕ್ತುಂ ಸಮರ್ಥಾ । ಅಕೋ ದೇವಾ ಏವ ಮಾನುಷಶಾಸುರಿತ್ಯರ್ಥಃ ॥ (೩) ಈದೃಶಾ ಇತಿ ವರ್ಣಕೋ ಜ್ವಾಲಾವರ್ಣಾ ಇತಿ । ಅನ್ಯಾದೃಶಾಶ್ಚ ಕರಶಿರಶ್ಚರಣಾದಿಮಂತಃ ॥ (೪)

ಚಂದ್ರಾದಿಸರ್ವನಾಮವತ್ತ್ವಾತ್ । ಯೋ ದೇವಾನಾಂ ನಾಮಧಾ ಏಕ ಏನೇತಿ ಶ್ರುತೇಃ ವಿಷ್ಣೋರೇವ ಸರ್ವನಾಮಾನಿ ॥ ೬ ॥

ಅ ॥ (೧) ಮೊದಲೆ ಹೇಳಿದ ಪ್ರಕಾರ ಉದಾಹರಣೆ ಮಾಡುವವನಿಗೆ ಯಾವಾಗಲೂ ಶ್ರೇಷ್ಠಜನರು ಇಷ್ಟವೆಂದಾಗುವುದರಿಂದ ಸರ್ವದಾ ಶ್ರೇಷ್ಠರುಳ್ಳವನೇ ಆಗುತ್ತಾನೆ ಸುಸಾಲಿಯೂ ಕೆಲವು ಮೇಲೆ ಶ್ರೇಷ್ಠರಿಲ್ಲದವನೂ ಆಗಿರುತ್ತಾನೆ. (ಇದುಕಾರಣ ಮುಕ್ತರಲ್ಲವೆಂದೇ ಸಿದ್ಧಿಸುತ್ತದೆ.) ಲೋಕೇಷ್ವೈಕುಂಠ ಲೋಕವುಳ್ಳವನಾಗುತ್ತಾನೆ (೨) (ಆನೇ ಎಂಬದ ಎನೇ ಮಂತ್ರದಲ್ಲಿರುವ ಇಹಾನೇ ಎಂಬುದಕ್ಕೆ ಅರ್ಥ ಹೇಳುತ್ತಾರೆ--) ಇಹ ಚ ಅವ ಚ ಇಹಾನೇ ಎಂದು ವಿಗ್ರಹವು. ಇಹ ಎಂಬುವುದರಿಂದ ಮನುಷ್ಯಲೋಕದಲ್ಲಿರುವ ಜನರನ್ನು. ಅವ ಎಂಬುದರಿಂದ ದಾನಾಲಲೋಕದಲ್ಲಿರುವ ಜನರನ್ನು ಇಟ್ಟು ಕೊಳ್ಳುವೇಕು (ಶಾಸ್ತ್ರದಲ್ಲಿ ಹೇಳುತ್ತಾರೆ) ಮನುಷ್ಯರು ಮತ್ತ ಅಮರರು ಪ್ರೀತಿಯಿಯನ್ನು ಅಪೇಕ್ಷಿಸುವವನಾಗುತ್ತಾನೆ. (ಅಂದರೆ ಮನುಷ್ಯರು ತಾವು ತಿಳಿದಿರುವುದರಿಂದಲೂ ಶ್ರೇಷ್ಠತೆಯುಳ್ಳ ವರಾದುದರಿಂದಲೂ ಇನ್ನೊಬ್ಬರಿಗೆ ತಿಳಿಸಲಾರರು. ಅಮರರು ಸ್ವಭಾವತಃ ವಿಪರೀತ ಜ್ಞಾನವುಳ್ಳವರಾದುದರಿಂದಲೂ ವಿಷ್ಣುವೈಷ್ಣವರಲ್ಲಿ ದ್ವೇಷವಿಗಾದುದರಿಂದಲೂ ಇನ್ನೊಬ್ಬರಿಗೆ ತಿಳಿಸಲಾರರು. ಅದು ಕಾರಣ ಭಗವತ್ಸ್ವರೂಪವನ್ನು ಹೇಳಲಿಕ್ಕೆ ಶಕ್ತರಲ್ಲ. ದೇವತೆಗಳು ನನಗೆ ಬುದ್ಧಿಯಿತ್ತಿರುವರು. (೩) (ಆನೇ ಎಂದು ಎನೇ ಮಂತ್ರದಲ್ಲಿರುವ ಈಷ್ಟಶಾ. ಅನ್ಯಾಷ್ಟಶಾ ಎಂಬುದಕ್ಕೆ ಅರ್ಥ ಹೇಳುತ್ತಾರೆ--) ಈಷ್ಟಶಾ-ಕರ್ಮಗೆ ಕಾರಣವಾದ ಲೋಕದಲ್ಲಿ ಸಿದ್ಧವಾದ ಜಠರಾಗ್ನಿಯಂತೆ ಜ್ವಲಿಸುವ ಬ್ರಾಹ್ಮಣಳ್ಳವರಿಗಿಂತ ಅನ್ಯವಾದ ಜಠರಾಗ್ನಿಗಿಂತ ಬೇರೆಯಾದವರು. ಕೈ, ಶಿರಸ್ಸು, ಕಾಲು, ಮೊದಲಾದ ಅಂಗಗಳುಳ್ಳವರು (೪) (ಆನೇ ಎಂಬದಲ್ಲಿರುವ ಪೃಥಿವ್ಯಗ್ನಿ ಮುಮೊದಲಾದ ನಾಮಗಳು ವಿಷ್ಣುವಿಗೇನೇ ಇರುತ್ತವೆಂಬುವದನ್ನು ಮುಂದೆ ಹೇಳುತ್ತಾರೆ--) (ಇದ್ದ ದೇವತೆಗಳನ್ನು ಹೇಳುವ ಚಂದ್ರ. ಆದಿತ್ಯ. ವಿದ್ಯುತ್ ಶಬ್ದಗಳು ಇದ್ದುದರಿಂದ) ಅಗ್ನಿ ಪೃಥಿವೀ ಮೊದಲಾದ ಸರ್ವನಾಮಗಳು ವಿಷ್ಣುವಿಗೇನೇ. **ಯೋ ದೇವಾನಾಂ ನಾಮಧಾ ಏಕ ಏವ** ಎಂಬ ವೇದದಿಂದ ಚಂದ್ರ ಮೊದಲಾದ ಎಲ್ಲಾ ನಾಮಗಳು ಮುಖ್ಯವಾಗಿ ವಿಷ್ಣುವಿನಲ್ಲಿಯೇ ಇರುತ್ತವೆ ಆ ನಾಮಗಳಿಗೆ ಅಮುಖ್ಯವಾಗಿ ಉಳಿದ ದೇವತೆಗಳಲ್ಲಿ ವ್ಯವಹಾರವು. ಏವಂಚ ವಿಷ್ಣುವಿಗೇನೇ ಚಂದ್ರ ಮೊದಲಾದ ಸಮಸ್ತ ನಾಮಗಳವೆ ಎಂದು ತಿಳಿದಿರುವುದರಿಂದ ಅತನಿಗೇನೇ ಪೃಥಿವೀ ಮೊದಲಾದ ಸಮಸ್ತ ನಾಮಗಳು.

ಪೀ - ಕಣ್ಣಿನೊಳಗಣನು ವಿಷ್ಣುವಾಗಿರುವುದರಿಂದ ಯಾವ ಎಂಬಿದ ಎನೇ ಮಂತ್ರದಲ್ಲಿ ವಿತಸ್ಮಿನ್ನ ಕಂಚನ ಶಿಷ್ಯತಿ ಎಂದು ಹೇಳಲ್ಪಟ್ಟ ಅಸಂಗನು ವಿಷ್ಣುವೇ. ಚಕ್ಷುಸ್ಸು. ಅದುಕಾರಣ ಯದ್ಯಸ್ಮಿನ್ ಸರ್ವಿವಾ ಎಂಬ ವಾಕ್ಯದಲ್ಲಿ ಚಕ್ಷುಸ್ಸಿಗೆ ಅಸಂಗತ್ವ ಹೇಳಿದುದು ಅಸಂಗತವಲ್ಲವೆಂದೆ—

ಭಾ. ॥ (೧) ಅಸಂಗಭಗವತ್ತ್ವಾನತ್ವಾಚ್ಚಕ್ಷುಷೋಃ ಸಂಗತ್ವಮುಚ್ಯತೇ ॥ (೨) ಯತ್ತ್ವಾನತ್ವಾದಿದಂ ಚಕ್ಷುರಸಂಗಂ ಸರ್ವದಸ್ತುಷು । ತಸ್ಮೈ ನಮೋ ಭಗವತೇ ನಾಮನಾಯ ಪರಾತ್ಮನೇ ॥ ಇತಿ ಚ ಮಹಾಕೌರ್ಮೇ ॥ (೩) ಇಮಂ ಮಾನವಮಾನರ್ತಂ ನಾವರ್ತಂತೇ । ಮಾನವಾ ಯತ್ರಾವರ್ತಂತೇ ಸ ಮಾನವಾನಾವರ್ತಃ । ತಂ ಮಾನವಾನಾವರ್ತಂ ಪ್ರತಿ ನಾವರ್ತಂತೇ ॥ (೪) ಚಕ್ಷುಷ್ಮಂ ವಾಮನಂ ವೇದ ಸ ಪುನರ್ನೈವ ಜಾಯತೇ । ಮುಕ್ತೋ ದುಸ್ತರಸಂಸಾರಾದ್ವಾಮನಂ ಪ್ರಾಪ್ನೋತೇಽಚಿರಾತ್ ॥ ಇತಿ ಚ ॥ ಇತಿ ಪಂಚದಶಃ ಖಂಡಃ ॥ ೬—೧೫ ॥ ॥ ೪ ॥

ಅ ॥ (೧) ಕಣ್ಣು ಅಸಂಗನಾದ ಶ್ರೀಹರಿಗೆ ಸ್ಥಾನವಾಗಿರುವುದರಿಂದ ಅದೂ ಅಸಂಗವೆನಿಸುತ್ತದೆ. (೨) (ಈ ಅರ್ಥದಲ್ಲಿ ಪ್ರವರಣ ಹೇಳುತ್ತಾರೆ—) ಈ ಕಣ್ಣು ಯಾವ ವಾಮನನಿಗೆ ಸ್ಥಾನವಾಗಿರುವುದರಿಂದ ಅದಕ್ಕೆ ಸರ್ವವಸ್ತುಗಳ ಸಂಬಂಧವಿಲ್ಲವೋ, ಅಂತಹ ಸರ್ವೋತ್ತಮನಾದ ವಾಮನನಿಗೆ ನಮಸ್ಕಾರವು, ಎಂದು ಮಹಾಕೌರ್ಮದಲ್ಲಿದೆ (೩) (೬ನೇ ಮಂತ್ರದಲ್ಲಿದ್ದ ಇಮಂ ಮಾನವಮಾವರ್ತಂ ನಾವರ್ತಂತೇ ಎಂಬುದಕ್ಕೆ ಅರ್ಥ ಹೇಳುತ್ತಾರೆ –)ಮನುಷ್ಯರು ಜನನಮರಣಾದಿರೂಪವಾದ ಯಾವ ಸಂಸಾರದಲ್ಲಿ ತಿರುಗಾಡುತ್ತಿರುತ್ತಾರೋ ಅದು ಮಾನವಾವರ್ತವೆನಿಸುತ್ತದೆ. ಅಂತಹ ಸಂಸಾರಕ್ಕೆ ಮುಕ್ತರಾದ ಮೇಲೆ ತಿರುಗಿ ಬರುವುದಿಲ್ಲ. (೪) ಚಕ್ಷುರೊಳಗಣ ವಾಮನನನ್ನು ತಿಳಿದು ಧ್ಯಾನಿಸುವವನು ತಿರುಗಿ ಹುಟ್ಟುವುದಿಲ್ಲ. ಭಯಂಕರವಾದ ಸಂಸಾರದಿಂದ ಬಿಡುಗಡೆ ಹೊಂದಿ ಮುಕ್ತನಾಗಿ ವಾಮನರೂಪಿ ಶ್ರೀಹರಿಯ ಸವಿಾಪದಲ್ಲಿರುತ್ತಾನೆ. ॥ ೬—೧೫ ॥ ॥ ೧ ॥

ಹದಿನೈದನೇ ಖಂಡವು ಮುಗಿಯಿತು.

೧೬ನೇ ಖಂಡವು

ಪೀ—ವಾಯುರ್ವಾವ ಸಂವರ್ಗಃ ಪ್ರಾಣೋ ಬ್ರಹ್ಮ ಎಂದು ಅಪರಬ್ರಹ್ಮ ವಿದ್ಯೆಯನ್ನು ಹೇಳಿರುವರು.. ಈಗ ಇನ್ನೊಂದು ವಿದ್ಯೆಯನ್ನು ಹೇಳುತ್ತಾರೆ—

ಉ. ॥ ಏಷ ಹ ವೈ ಯಜ್ಞೋ ಯೋಽಯಂ ಪವತ ಏಷ ಯನ್ನಿದꣳ ಸರ್ವಂ ಪುನಾತಿ ಯದೇಷ ಯನ್ನಿದꣳ ಸರ್ವಂ ಪುನಾತಿ ತಸ್ಮಾದೇಷ ಏವ ಯಜ್ಞಸ್ತಸ್ಯ ಮನಶ್ಚ ವಾಕ್ಚ ವರ್ತನೀ ॥ ೧ ॥

ಅ ॥ ಬೀಸುವ ಗಾಳಿಗೆ ನಿಯಾಮಕನಾದ ಮುಖ್ಯಪ್ರಾಣನೇ ಸಮಸ್ತ ಯಜ್ಞಗಳಿಗೆ ಅಭಿಮಾನಿಯಾಗಿ ಯಜ್ಞಗಳಲ್ಲಿ ಸನ್ನಿಹಿತನಾಗಿ ಯಜ್ಞನೆನಿಸಿಕೊಂಡವನು. (ಹೇಗೆಂದರೆ—) ಈ ಮುಖ್ಯವಾಯುವು ಸಂಚರಿಸುತ್ತಿರುವಾಗಲೇ ಯೋಗ್ಯವಾದ ಎಲ್ಲಾ ವಸ್ತುಗಳನ್ನು ಪವಿತ್ರೀಕರಿಸುತ್ತಾನೆ. ಆದಕಾರಣ ಇವನೇ ಯಜ್ಞನೆನಿಸಿದವನು. (ಯಜ್ಞಮೂರ್ತಿಯಾದ ವಾಯುವಿನ ಪಾವಗಳಿರುವ ಸ್ಥಾನಗಳನ್ನು ಹೇಳುತ್ತಾರೆ–) ಆ ಮುಖ್ಯ ವಾಯುದೇವರ ಎರಡು ಪಾದಗಳು ಋತ್ವಿಜರ ಮನಸ್ಸು ವಚನಗಳಲ್ಲಿರುತ್ತವೆ. ಅವುಗಳಲ್ಲಿ ಬಲಪಾದವು ಮನಸ್ಸಿನಲ್ಲಿಯೂ, ಎಡಪಾದವು ವಾಗಿಂದ್ರಿಯದಲ್ಲಿಯೂ ಇರುತ್ತದೆ. ॥ ೧ ॥

ಪೀ—ಆ ಪಾದಗಳನ್ನು ಪೂಜಿಸುವವರು ಯಾರೆಂದರೆ—

ಉ. ॥ ತಯೋರನ್ಯತರಾಂ ಮನಸಾ ಸꣳಸ್ಕರೋತಿ ಬ್ರಹ್ಮಾ ವಾಚಾ ಹೋತಾಽಧ್ವರ್ಯುರುದ್ಗಾತ್ಯನ್ಯತರಾꣳ ಸ (ಆಥ)ಯತ್ರೋಪಾಕೃತೇ ಹ್ಯಾತರನುವಾಕೇ ಪುರಾ ಪರಿಧಾನೀಯಾ ಯಾ ಬ್ರಹ್ಮಾ ವ್ಯಪವದತಿ ॥ ೨ ॥

ಉ. ॥ ಅನ್ಯತರಾಮೇವ ವರ್ತನೀꣳ ಸಂಸ್ಕುರ್ವಂತಿ ಹೀಯತೇಽನ್ಯತರಾ ಸ ಯಥೈಕಪಾದ್ಯಜನ್ಪಥೋ ನೈಕೇನ ಚಕ್ರೇಣ ವರ್ತಮಾನೋ ರಿಷ್ಯ-

ತ್ಯೇವಮಸ್ಯ ಯಜ್ಞೋ ರಿಷ್ಯತಿ ಯಜ್ಞರೀ ರಿಷ್ಯಂತಂ ಯಜಮಾನೋ ನು ರಿಷ್ಯತಿ ಸ ಇಷ್ಟ್ವಾ ಪಾಪೀಯಾನ್ ಭವತಿ ॥ ೩ ॥

ಅ ॥ ಆ ಪಾದಗಳ ಮನುಷ್ಯನಲ್ಲಿ ಮನಸ್ಸಿನಲ್ಲಿರತಕ್ಕ ಬಲವಾದವನ್ನು ಪ್ರಶ್ನನೆಂಬ ಋತ್ವಿಜನು ಮನಸ್ಸಿನ ವ್ಯಾಪಾರವಾದ ಮೌನದಿಂದಲೇ ಪೂಜಿಸುತ್ತಾನೆ. ಹೋತೃ, ಅಧ್ವರ್ಯು, ಬ್ರಹ್ಮತ್ವಗೆಂಬ ಮೂರು ಋತ್ವಿಜರಲ್ಲಿ ಹೋತೃವು ಮಂತ್ರೋಚ್ಚಾರಣದಿಂದ, ಅಧ್ವರ್ಯುವು ಹೋಮ ಮೊದಲಾದ ಕರ್ಮದಿಂದ, ಬ್ರಹ್ಮತನು ಸಾಮಗಾನದಿಂದ, ಹಿಗೆ ಈ ಮೂವರು ವಾಗಿಂದ್ರಿಯದಲ್ಲಿರತಕ್ಕ ಎತಪಾದವನ್ನು ಪೂಜಿಸುತ್ತಾರೆ. (ಪ್ರಶ್ನನೆಂಬ ಋತ್ವಿಜನಿಗೆ ಮೌನವು ಯಾವಾಗ ಅದು ತಪ್ಪಿ ಹೋದರೆ ಅನಿಷ್ಟವೇನು? ಎಂದರೆ) ಪ್ರಶ್ನನೆಂಬ ಋತ್ವಿಜನು ಮೌನ ವ್ರತದಿಂದ ಮುಖ್ಯಪ್ರಾಣನನ್ನು ಪೂಜಿಸಲಿಲ್ಲ. ಆದುದರಿಂದ ಪ್ರಾತರನುವಾಕವಾದ ಶಸ್ತ್ರ ಪ್ರಾರಂಭವಾದ ಮೇಲೆ ಯಾಗವನ್ನು ಸಮಾಪ್ತಿಗೊಳಿಸುವ ಅಂತಿಮವಾದ ಋಕ್ಕನ್ನು ಜಪಿಸುವುದಕ್ಕಿಂತ ಮೊದಲು ಮೂತಸಾತಿದರೆ (ಆ ಹೋತೃ ಮೊದಲಾದ ಮೂವರು ಋತ್ವಿಜರು ವಾಗಿಂದ್ರಿಯದಲ್ಲಿರತಕ್ಕ ಎತಪಾದವನ್ನು ಪೂಜಿಸುತ್ತಿದ್ದರೂ ಬಲವಾದ ಪ್ರಾಣವಾದ ಮೌನವ್ರತವನ್ನು ಬಿಟ್ಟುದರಿಂದ ವಾಗಿಂದ್ರಿಯದಲ್ಲಿರತಕ್ಕ ಬಲವಾದವು ಹಾಳಾಯಿತು. (ಯಜ್ಞದ ಪಾದವು ಹಾಳಾದುದರಿಂದುಂಟಾದ ಅನರ್ಥವನ್ನು ವ್ಯಾಖ್ಯಾನಿಸಿಕೊಟ್ಟು) ಹೇಗೆ ಒಂಟಿಕಾಲಿನ ಮನುಷ್ಯನು ಹೋಗುವಾಗ ಬಿದ್ದು ಸಾರಹೊಂದುತ್ತಾನೋ, ಒಂದೇ ಚಕ್ರವಿರುವ ರಥವು ಎತನ ಬೀಳುತ್ತದೋ ಹಾಗೆಯೇ ಯಜಮಾನನ ಯಾಗವು ಕೆಟ್ಟುಹೋಗುತ್ತದೆ ಅದನ್ನನುಸರಿಸಿ ಯಜಮಾನನೂ ನಾಶಹೊಂದುತ್ತಾನೆ. ಆದರೆ ಆ ಯಜಮಾನನು ಯಾಗದಲ್ಲಿ ಸಾಮಸ್ತಾಗುತ್ತಾನೆ ॥ ೨ ॥

ಉ. ॥ ಅಥ ಯತ್ರೋಪಾಕೃತೇ ಪ್ರಾತರನುವಾಕೇನ ಪುರಾ ಪರಿಧಾನೀಯಾಯಾ ಬ್ರಹ್ಮಾ ಮನಸವದತ್ಯುಭೇ ನಿವ ನರ್ತನೀ ಸಸಿಸ್ಮರ್ಯಂತಿ ನ ಹೀಯತೇಽನ್ಯತರಾ ॥ ೪ ॥

ಅ ॥ ಪ್ರಶ್ನನೆಂಬ ಋತ್ವಿಜನು ಮೌನ ಬಿಟ್ಟರೆ ಅನರ್ಥವಿದ್ದ ಪ್ರಯುಕ್ತ ಪ್ರಾತರನುವಾಕವ ಪ್ರಾರಂಭವಾದ ಮೇಲೆ ಯಾಗವ ಸಮಾಪ್ತಿಯಾಗುವುದಕ್ಕಿಂತ ಮೊದಲು ಮೌನವಾಗಿಯೇ ಇದ್ದರೆ ಋತ್ವಿಜರು ಎರಡು ಪಾದಗಳನ್ನು ಪೂಜಿಸುತ್ತಾರೆ ಎಂದರಲ್ಲಿ ಒಂದೂ ಕೆಟ್ಟುಹೋಗುವುದಿಲ್ಲ ॥

ಪೀ – ಅದರಿಂದುಂಟಾಗತಕ್ಕ ಸ್ವರೂಪಾರ್ಥವನ್ನು ದೃಷ್ಟಾಂತ ಕೊಟ್ಟು ಹೇಳುತ್ತಾರೆ

ಉ. ॥ ಸ ಯಥೋಭಯಪಾದ್ಯ ಜನ್ರಥೋ ವೋಭಾಭ್ಯಾಂ ಚಕ್ರಾಭ್ಯಾಂ ವರ್ತಮಾನಃ ಪ್ರತಿತಿಷ್ಠತ್ಯೇವಮಸ್ಯ ಯಜ್ಞಃ ಪ್ರತಿತಿಷ್ಠತಿ ಯಜ್ಞಂ ಪ್ರತಿತಿಷ್ಠಂತಂ ಯಜಮಾನೋ ನು ಪ್ರತಿತಿಷ್ಠತಿ ಸ ಇಷ್ಟ್ವಾ ಶ್ರೇಯಾನ್ಭವತಿ॥ ಇತಿ ಷೋಡಶಃ ಖಂಡಃ ॥ ೬-೧೬ ॥ ॥ ೫ ॥

ಅ ॥ ಹೇಗೆ ಎರಡು ಪಾದಗಳುಳ್ಳ ಮನುಷ್ಯನು ಸಂಚರಿಸುವಾಗ ಏಳ್ಗೆಯುಳ್ಳವನಾಗಿರುತ್ತಾನೋ, ಎರಡು ಚಕ್ರಗಳಿಂದೊಡಗೂಡಿದ ರಥವು ಸರಿಯಾಗಿ ನಡೆಯುತ್ತದೋ ಹಾಗೆಯೇ ಈತನ ಯಜ್ಞವು ಚೆನ್ನಾಗಿ ಸಫಲವಾಗುತ್ತದೆ ಆ ಯಾಗವನ್ನನುಸರಿಸಿ ಯಜಮಾನನೂ ಪ್ರಣಾಶವನ್ನು ಹೊಂದುತ್ತಾನೆ ಹೀಗೆ ಯಜಮಾನನು ಯಜ್ಞವಂತನಾಗಿ ಶ್ರೇಯಸ್ಸುಳ್ಳವನಾಗುತ್ತಾನೆ. ೬-೧೬ ॥ ೫ ॥

ಭಾ. ॥ (೧) ಯಜ್ಞಾಭಿಮಾನೀ ಯಜ್ಞಾಙ್ಗೋ ವಾಯುರ್ಯಜ್ಞೇ ಪ್ರತಿಷ್ಠಿತಃ । ಜ್ಞಶುದ್ಧಭಾವ ಇತ್ಯಸ್ಮಾದ್ಧನ್ನಯಂ ಪಾವಯೇದ್ಯತಃ । ಅತೋ ವಾಯುರ್ಯಜ್ಞನಾಮಾ॥ (೨) ತಕ್ಪಾದೌ ನಾಙ್ಮನಃಸ್ಥಿತೌ । ದಕ್ಷಿಣೋಽಸ್ಯ ಮನಸ್ಸಂಸ್ಥೋ ಬ್ರಹ್ಮರ್ತ್ವಿಕ್ತಸ್ಯ ಪೂಜಕಃ। ಹೋತ್ರಾದ್ಯಾ ನಾಜೆ ಸಂಸ್ಥಸ್ಯ ವಾಮಪಾದಸ್ಯ ಪೂಜಕಾಃ ॥ (೩) ತಸ್ಮಾತ್ತಾತರನೂವಾಕ ಪರಿಧಾನ್ಯೋರ್ಯದಂತರಾ । ಬ್ರಹ್ಮಾ ಚೇದುತ್ಸೃಜೇದ್ವಾಚಂ ಯಜ್ಞಪಾಲ್ಲೋಪಕೃದ್ಭವೇತ್ ॥ (೪) ನಾಙ್ಮನಃಪಾದಯಜ್ಞರ್ತ್ವಿಪ್ರತಿಮೋ ವಾಯುರೀರಿತಃ । ಧ್ಯಾಯನ್ವಾಯುಂ ಹರಿಂ ಚೈವ ಕತೋ ಬ್ರಹ್ಮಾ ಮುನಿರ್ಭವೇತ್ ॥ ೧, ೨, ೩, ೪, ೫ ॥ ಇತಿ ಹೋಡಶಃ ಖಂಡಃ ॥ ೬–೧೬ ॥ ॥ ೧ ॥

ಆ ॥ (೧) ಈ ಮುಖ್ಯವಾಯುವು ಎಲ್ಲಾ ಯಜ್ಞಗಳಿಗೆ ಅಭಿಮಾನಿಯಾಗಿ ಯಜ್ಞಗಳಲ್ಲಿ ಸನ್ನಿಹಿತನಾಗಿ ಯಜ್ಞನೆನಿಸಿಕೊಂಡವನು. (ಮುಖ್ಯಪ್ರಾಣನು ಯಜ್ಞನೆನಿಸಿಕೊಳ್ಳುವುದು ಹೇಗೆಂದರೆ—) ಜ್ಞ ಶುದ್ಧಭಾವೇ ಎಂಬ ಧಾತುವ್ಯಾಖ್ಯಾನದಿಂದ ಜ್ಞ ಎಂಬ ಶಬ್ದಕ್ಕೆ ಶುದ್ಧೀಕರಿಸುವುದು ಪವಿತ್ರೀಕರಿಸುವುದು ಎಂದರ್ಥವೆಂದು ತಿಳಿಯುತ್ತದೆ. ಆದುಕಾರಣ ವಾಯುವು ಸಂಚರಿಸುವವನಾಗಿಯೇ ಸರ್ವ ಜಗತ್ತನ್ನು ಪವಿತ್ರೀಕರಿಸುವುದರಿಂದ ಯಜ್ಞನೆನಿಸಿಕೊಳ್ಳುವನು. (೨) ಯಜ್ಞನೆನಿಸಿದ ವಾಯುವಿನ ಪಾದಗಳು ವಾಗಿಂದ್ರಿಯ ಮನಸ್ಸುಗಳಲ್ಲಿವೆ. ಅವುಗಳಲ್ಲಿ ಬಲಪಾದವು ಮನಸ್ಸಿನಲ್ಲಿರುವುದು. ಅದನ್ನು ಬ್ರಹ್ಮನೆಂಬ ಋತ್ವಿಜನು ಪೂಜಿಸುತ್ತಾನೆ. ಹೋತೃ, ಅಧ್ವರ್ಯು, ಉದ್ಗಾತೃಗಳು ವಾಗಿಂದ್ರಿಯದಲ್ಲಿ ಇರತಕ್ಕ ಎಡಪಾದವನ್ನು ಪೂಜಿಸುತ್ತಾರೆ. (೩) ಬ್ರಹ್ಮನೆಂಬ ಋತ್ವಿಜನು ಮೌನವ್ರತದಿಂದಲೇ ಪೂಜಿಸಬೇಕಾದ ಕಾರಣ ಪ್ರಾತರನುವಾಕ ಪ್ರಾರಂಭವಾಗಿ ಕರ್ಮ ಸಮಾಪ್ತಿಯಾಗುವುದಕ್ಕಿಂತ ಮೊದಲು ಅವುಗಳ ಮಧ್ಯದಲ್ಲಿ ಬ್ರಹ್ಮನೆಂಬ ಋತ್ವಿಜನು ಮಾತನಾಡಿದರೆ ಯಜ್ಞದ ಪಾದವನ್ನು ನಾಶಮಾಡುತ್ತಾನೆ. (ಕೆಡಿಸುತ್ತಾನೆ.) (೪) (ಮುಖ್ಯವಾಯುವಿನ ಪಾದವನ್ನು ಪ್ರಾರಂಭಿಸಿ ಯಜ್ಞಪಾದವನ್ನು ಕೆಡಿಸುತ್ತಾನೆಂದು ಹೇಳಿದುದು ಅಸಂಗತವೆಂದರೆ) ಯಜ್ಞಮೂರ್ತಿಯಾದ ಮುಖ್ಯಪ್ರಾಣನಿಗೆ ಋತ್ವಿಜರ ವಾಕ್ ಮನಸ್ಸುಗಳು ಪಾದಗಳು. (ಅಂದರೆ ವಾಕ್ ಮನಸ್ಸುಗಳಿಗೆ ಪ್ರೇರಕಗಳು.) ಯಜ್ಞವು ಪ್ರತಿಮೆಯು. (ಪ್ರತಿಮೆಯ ಸ್ಥಾನವಾದ ಯಜ್ಞಪಾದಕ್ಕೆ ನಾಶವೆಂದು ಹೇಳುವಲ್ಲಿ ಯಜ್ಞದ ದೇವತೆಯಾದ ಮುಖ್ಯವಾಯುವಿನ ಪಾದಕ್ಕೆ ಲೋಪವೆಂದು ಅಮುಖ್ಯಪ್ರಯೋಗವು. (ಅಂದರೆ—ಯಜ್ಞಪಾದವು ಕೆಟ್ಟುಹೋದಪ್ರಯುಕ್ತ ಯಜ್ಞಾಭಿಮಾನಿಯಾದ ಮುಖ್ಯವಾಯುವಿನ ಪಾದವು ನಾಶಹೊಂದಿತೆಂದು ಹೇಳಿದ್ದು.) ಆದಕಾರಣ ಬ್ರಹ್ಮನೆಂಬ ಋತ್ವಿಜನು ಮುಖ್ಯಪ್ರಾಣನನ್ನೂ, ಅವನೊಳಗಣ ಶ್ರೀಹರಿಯನ್ನೂ ಧ್ಯಾನಿಸುವವನಾಗಿಯೇ ಮೌನಿಯಾಗಿರಬೇಕು. ಮಾತಾಡಬಾರದು. ॥ ೬–೧೬ ॥ ॥ ೧ ॥

ಹದಿನಾರನೇ ಖಂಡವು ಮುಗಿಯಿತು.

೧೭ನೇ ಖಂಡವು

ಹೀ—ಬ್ರಹ್ಮಾದಿ ಋತ್ವಿಜರಿಗೆ ಮೌನವಾಡಬೇಕು ಇದುಮೊದಲಾದ ನಿಯಮಗಳು ಜಾಗ್ರತೆಯಿಲ್ಲದೆ ಕೆಟ್ಟುಹೋದರೆ ಅದಕ್ಕೆ ಪ್ರಾಯಶ್ಚಿತ್ತವಾಗಿ ವ್ಯಾಹೃತಿಯು ಮಹಿಮೆ ಹೇಳುತ್ತಾ ವ್ಯಾಹೃತಿ ಹೋಮವನ್ನು ಮಾಡಬೇಕೆನ್ನುತ್ತಾರೆ—

ಉ. ॥ ಪ್ರಜಾಪತಿರ್ಲೋಕಾನಭ್ಯತಪತ್ತೇಷಾಂ ತಪ್ಯಮಾನಾನಾಗ್ಂ ರಸಾನ್ನಿರ್ವ್ಯಹದಗ್ನಿಂ ಪೃಥಿವ್ಯಾ ವಾಯುಮಂತರಿಕ್ಷಾದಾದಿತ್ಯಂ ದಿವಃ ॥ ೧ ॥

ಅ ॥ ಪರಬ್ರಹ್ಮನು ಪೃಥಿವೀ ಅಂತರಿಕ್ಷ ದ್ಯು ಎಂಬ ಲೋಕಗಳನ್ನು ಶ್ರೇಷ್ಠಗಳೆಂದು ತಿಳಿದನು. ಈ ಲೋಕಗಳಿಗಿಂತ ಶ್ರೇಷ್ಠರಾದವರನ್ನು ನಿಷ್ಪಾದಿಸಿ ತಿಳಿದುಕೊಂಡನು. (ಯಾವ ಯಾವ ಲೋಕಗಳಿಗಿಂತ ಯಾರು ಯಾರನ್ನು ಶ್ರೇಷ್ಠರೆಂದು ನಿಶ್ಚಯಿಸಿಕೊಂಡನೆಂದರೆ —) ಭೂಮಿಗಿಂತ ಅಗ್ನಿಯನ್ನೂ ಅಂತರಿಕ್ಷಲೋಕಕ್ಕಿಂತ ವಾಸಿಕ್ಯವಾಯುವನ್ನೂ ದ್ಯುಲೋಕಕ್ಕಿಂತ ಆದಿತ್ಯನನ್ನೂ ಶ್ರೇಷ್ಠನೆಂದು ತಿಳಿದನು.(೧)

ಉ. ॥ ಸ ಏತಾಸ್ತಿಸ್ರೋ ದೇವತಾ ಅಭ್ಯತಪತ್ತಾಸಾಂ ತಪ್ಯಮಾನಾನಾಗ್ಂ ರಸಾನ್ನಿರ್ವ್ಯಹದಗ್ನೇರ್ಯಜೋ ವಾಯೋರ್ಯಜೂಗ್ಂಷಿ ಸಾಮ್ನ ಆದಿತ್ಯಾತ್ ॥ ೨ ॥

ಅ ॥ ಆ ಪರಬ್ರಹ್ಮನು ಅಗ್ನ್ಯಾದಿ ಮೂರು ದೇವತೆಗಳನ್ನು ಶ್ರೇಷ್ಠರೆಂದು ತಿಳಿದುಕೊಂಡನು. ಆ ದೇವತೆಗಳಿಗಿಂತಲೂ ಬೇರೆ ಶ್ರೇಷ್ಠರಾದವರನ್ನು ತಿಳಿದುಕೊಂಡನು. ಹೇಗೆಂದರೆ — ಅಗ್ನಿಗಿಂತ ಋಗ್ವೇದಕ್ಕೆ ಅಭಿಮಾನಿಯಾದ ಬ್ರಹ್ಮನನ್ನೂ, ವಾಸಿಕ್ಯವಾಯುವಿಗಿಂತ ಯಜುರ್ವೇದಾಭಿಮಾನಿಯಾದ ರುದ್ರನನ್ನೂ, ಆದಿತ್ಯನಿಗಿಂತ ಸಾಮವೇದಾಭಿಮಾನಿಯಾದ ಮುಖ್ಯವಾಯುವನ್ನೂ ಶ್ರೇಷ್ಠನೆಂದು ತಿಳಿದುಕೊಂಡನು ॥ ೨ ॥

ಉ. ॥ ಸ ಏತಾಂ ತ್ರಯೀಂ ವಿದ್ಯಾಮಭ್ಯತಪತ್ತಸ್ಯಾಸ್ತಪ್ಯಮಾನಾಯಾ ರಸಾನ್ನಿರ್ವ್ಯಹದ್ಭೂರಿತ್ಯೃಗ್ಭ್ಯೋ ಭುವ ಇತಿ ಯಜುರ್ಭ್ಯಃ ಸ್ವರಿತಿ ಸಾಮಭ್ಯಃ ॥ ೩ ॥

ಅ ॥ ಆ ಪರಬ್ರಹ್ಮನು ಮೂರು ವೇದಗಳಿಗೆ ಅಭಿಮಾನಿಗಳಾದ ದೇವತೆಗಳನ್ನು ಶ್ರೇಷ್ಠರೆಂದು ತಿಳಿದುಕೊಂಡನು. ಆ ದೇವತೆಗಳಿಗಿಂತಲೂ ಇತರರನ್ನು ಶ್ರೇಷ್ಠರನ್ನಾಗಿ ತಿಳಿದುಕೊಂಡನು. ಋಗ್ವೇದಕ್ಕೆ ಅಭಿಮಾನಿಯಾದ ಚತುರ್ಮುಖನಿಗಿಂತ **ಭೂಃ** ಎನಿಸಿಕೊಳ್ಳುವ ವರಾಹನನ್ನೂ, ಯಜುರ್ವೇದಕ್ಕೆ ಅಭಿಮಾನಿಯಾದ ರುದ್ರನಿಗಿಂತ **ಭುವಃ** ಎನಿಸಿಕೊಳ್ಳುವ ನರಸಿಂಹನನ್ನೂ, ಸಾಮವೇದಕ್ಕೆ ಅಭಿಮಾನಿಯಾದ ವಾಯುವಿಗಿಂತ **ಸ್ವಃ** ಎನಿಸಿದ ಕಪಿಲನನ್ನು ಶ್ರೇಷ್ಠರೆಂದು ತಿಳಿದನು (ಈ ರೂಪಗಳೆಲ್ಲವೂ ಆ ಪರಬ್ರಹ್ಮನ ಸ್ವರೂಪಗಳೇ ಆಗಿವೆ.) ॥ ೩ ॥

ಉ. ॥ ತದ್ಯದ್ಯಕ್ತೋ ರಿಷ್ಯೇದ್ಭೂಃ ಸ್ವಾಹೇತಿ ಗಾರ್ಹಪತ್ಯೇ ಜುಹುಯಾದ್ಯಚಾಮೇವ ತದ್ರಸೇನಚರ್ಚಾಂ ವೀರ್ಯೇಣಚರ್ಚಾಂ ಯಜ್ಞಸ್ಯ ವಿರಿಷ್ಟ್ಯೈ (ಷ್ಟಿ)ಸಂದಧಾತಿ ॥ ೪ ॥

ಅ ॥ ವ್ಯಾಹೃತಿಗಳು ಎಲ್ಲಾ ಮಂತ್ರಗಳಿಗಿಂತಲೂ ಶ್ರೇಷ್ಠಗಳಾದ ಕಾರಣ, ಋಗ್ವೇದವನ್ನು ಜಪಿಸದಿರುವುದು, ಮೌನವನ್ನು ವಹಿಸದಿರುವುದು, ಇತ್ಯಾದಿಗಳಿಂದ ಯಜ್ಞವು ಕೆಟ್ಟರೆ ಬ್ರಹ್ಮನೆಂಬ ಋತ್ವಿಜನು **ಭೂಃ** ಎನಿಸಿದ ವರಾಹರೂಪಿಶ್ರೀಹರಿಯನ್ನು ಧ್ಯೇಯಿಸಿ **ಭೂಃ ಸ್ವಾಹಾ** ಎಂಬ ಮಂತ್ರದಿಂದ ಗಾರ್ಹಪತ್ಯಾಗ್ನಿಯಲ್ಲಿ ಹೋಮಿಸಬೇಕು. (ಅದಕ್ಕೆ ಅದು ಪ್ರಾಯಶ್ಚಿತ್ತವು.) ಹೀಗೆ **ಭೂಃ ಸ್ವಾಹಾ** ಎಂದು

ಹೇಳಿ ಹೋಮ ಮಾಡಿದರೆ ಋಗ್ವೇದಕ್ಕೆ ಅಭಿಮಾನಿಯಾದ ಚತುರ್ಮುಖನಿಂದ ಶ್ರೇಷ್ಠನಾದ ಅಂದರೆ—ಚತುರ್ಮುಖನಿಗಿಂತ ಬಲವುಳ್ಳ ವರಾಹರೂಪಿ ಶ್ರೀಹರಿಯ ಅನುಗ್ರಹದಿಂದ ಯಜ್ಞಕ್ಕೆ ಋಗ್ವೇದವನ್ನು ಜಪಿಸದಿರುವುದರಿಂದುಂಟಾದ ವೈಗುಣ್ಯವನ್ನು ಪರಿಹರಿಸುತ್ತಾನೆ. (ಋತ್ವಿಜರೆಲ್ಲರನ್ನು ರಕ್ಷಿಸುತ್ತಾನೆ.)

॥ ೪ ॥

ಉ. ॥ ಅಥ ಯದಿ ಯಜುಷ್ಟೋ ರಿಷ್ಯೇದ್ಭುವಃ ಸ್ವಾಹೇತಿ ದಕ್ಷಿಣಾಗ್ನೌ ಜುಹುಯಾದ್ಯಜುಷಾಮೇವ ತದ್ರಸೇನ ಯಜುಷಾಂ ವೀರ್ಯೇಣ ಯಜುಷಾಂ ಯಜ್ಞಸ್ಯ ವಿರಿಷ್ಟ(ಷ್ಟಿ)ಂ ಸಂದಧಾತಿ

॥ ೫ ॥

ಅ ॥ .....*ಯಜ್ಞದಲ್ಲಿ ಯಜುರ್ವೇದವನ್ನು ಜಪಿಸದಿರುವುದರಿಂದುಂಟಾದ ವೈಗುಣ್ಯವು ಬಂದರೆ ಭುವಃ ಎನಿಸಿದ ನರಸಿಂಹನನ್ನು ದ್ವೇಷಿಸಿ ಭುವಃ ಸ್ವಾಹಾ ಎಂದು ಹೇಳಿ ದಕ್ಷಿಣಾಗ್ನಿಯಲ್ಲಿ ಹೋಮಿಸಬೇಕು. ಯಜುರ್ವೇದಾಭಿಮಾನಿಯಾದ ರುದ್ರನಿಗಿಂತ ಶ್ರೇಷ್ಠನಾದ ಹೆಚ್ಚು ಬಲವುಳ್ಳ ನರಸಿಂಹನ ಅನುಗ್ರಹದಿಂದ.....

॥ ೫ ॥

ಉ. ॥ ಅಥ ಯದಿ ಸಾಮತೋ ರಿಷ್ಯೇತ್ ಸ್ವಃ ಸ್ವಾಹೇತ್ಯಾಹವನೀಯೇ ಜುಹುಯಾತ್ಸಾಮ್ನಾಮೇವ ತದ್ರಸೇನ ಸಾಮ್ನಾಂ ವೀರ್ಯೇಣ ಸಾಮ್ನಾಂ ಯಜ್ಞಸ್ಯ ವಿರಿ(ಷ್ಟಿ)ಷ್ಟಿಂ ಸಂದಧಾತಿ

॥ ೬ ॥

ಅ ॥ ಸಾಮವೇದವನ್ನು ಜಪಿಸದಿರುವುದರಿಂದುಂಟಾದ ವೈಗುಣ್ಯವು ಬಂದರೆ—ಸ್ವಃ ಎನಿಸಿದ ನರಸಿಂಹನ ಪ್ರೀತಿಗಾಗಿ ಸ್ವಃ ಸ್ವಾಹಾ ಎಂದು ಹೇಳಿ ಆಹವನೀಯಾಗ್ನಿಯಲ್ಲಿ ಹೋಮಿಸಬೇಕು. ಸಾಮವೇದಕ್ಕೆ ಅಭಿಮಾನಿಯಾದ ವಾಯುದೇವರಿಗಿಂತ ಶ್ರೇಷ್ಠನಾದ ಬಲವುಳ್ಳ ಕಪಿಲರೂಪಿ ಶ್ರೀಹರಿಯ ಅನುಗ್ರಹದಿಂದ.....

॥ ೬ ॥

ಈ—ಋಗಾದಿಗಳನ್ನು ಜಪಿಸದಿರುವುದರಿಂದುಂಟಾದ ವೈಗುಣ್ಯಪರಿಹಾರವನ್ನು ದೃಷ್ಟಾಂತಕೊಟ್ಟು ಹೇಳುತ್ತಾರೆ—

ಉ. ॥ ತದ್ಯಥಾ ಲವಣೇನ ಸುವರ್ಣಂ ಸಂದಧ್ಯಾತ್ತುವರ್ಣೇನ ರಜತಂ ರಜತೇನ ತ್ರಪು ತ್ರಪುಣಾ ಸೀಸಂ ಸೀಸೇನ ಲೋಹಂ ಲೋಹೇನ ದಾರು ದಾರು ಚರ್ಮಣಾ

॥ ೭ ॥

ಉ. ॥ ಏವಮೇಷಾಂ ಲೋಕಾನಾಮೂಷಾಂ ದೇವತಾನಾಮುಸ್ಯಾಶ್ರಯ್ಯಾ ವಿದ್ಯಾಯಾ ವೀರ್ಯೇಣ ಯಜ್ಞಸ್ಯ ವಿರಿಷ್ಟ(ಷ್ಟಿ)ಂ ಸಂದಧಾತಿ ಭೇಷಜಕೃತೋ ಹ ವಾ ಏಷ ಯಜ್ಞೋ ಯತ್ರೈವಂವಿದ್ಬ್ರಹ್ಮಾ ಭವತಿ ॥ ೮ ॥

ಅ ॥ ಚಿನ್ನವಾದನ್ನು ತುಂಡುತುಂಡಾದ ಸುವರ್ಣ (ಚಿನ್ನ)ಗಳನ್ನು ಬೆಂಕಿಯಲ್ಲಿ ಪುಟಕ್ಕೆ ಇಟ್ಟು ಟಂಕಣ (ಕಂ) ಕಾರ (ಬುಸ್ಪ) ಮೊದಲಾದುದನ್ನು ಕರಗಿಸಿ ಒಯ್ದು ಭಂಗಾರವನ್ನು ಒಟ್ಟು ಸೇರಿಸಿ

* ಸಿಂಹಸಂಕೆ ಅಥವಾ

ದಂತೆಯೇ, ತುಂಡಾಗಿ ಒಟ್ಟು ಸೇರದ ಬೆಳ್ಳಿಯನ್ನು ಚಿನ್ನ ಕರಗಿಸಿ ಅದನ್ನು ಒಟ್ಟು ಸೇರಿಸಿದಂತೆಯೇ (ತೃಪ್ತಿ) ತುಂಡಾದ ತವರವನ್ನು ಬೆಳ್ಳಿ ಕರಗಿಸಿ ಒಟ್ಟು ಒಟ್ಟು ಸೇರಿಸಿದಂತೆಯೇ. ತುಂಡಾದ ಸೀಸವನ್ನು ತವರ ಕರಗಿಸಿ ಒಟ್ಟು ಒಟ್ಟು ಸೇರಿಸಿದಂತೆಯೇ ತುಂಡಾದ ಕಬ್ಬಿಣವನ್ನು ಸೀಸ ಕರಗಿಸಿ ಒಟ್ಟು ಒಟ್ಟು ಸೇರಿಸಿದಂತೆಯೇ. ತುಂಡಾದ ಮರವನ್ನು ಕಬ್ಬಿಣದಿಂದ ಒಟ್ಟಿಗೆ ಸೇರಿಸಿದಂತೆಯೇ, ಮತ್ತು ಮರವನ್ನು ಚರ್ಮದ ಕಟ್ಟುವಿಕೆಯಿಂದ ಒಟ್ಟಿಗೆ ಸೇರಿಸಿದಂತೆಯೇ. ಹೀಗೆಯೇ ಈ ಪೃಥ್ವಿಯಾದಿ ಲೋಕಗಳೂ, ಅಗ್ನಿ ಮೊದಲಾದ ದೇವತೆಗಳೂ, ಮೂರು ವೇದಗಳಿಗೆ ಅಧಿಮಾನಿಗಳಾದ ಚತುರ್ಮುಖಾದಿ ದೇವತೆಗಳೂ ಇವರಿಂತ ಶ್ರೇಷ್ಠನಾದ ಭೂಃ ಭುವಃ ಸ್ವಃ ಎನಿಸಿದ ವರಾಹ, ನರಸಿಂಹ, ಕಪಿಲ ಎಂಬ ಭಗವದ್ರೂಪಗಳ ಅನುಗ್ರಹದಿಂದ ಯಜ್ಞದ ವೈಗುಣ್ಯ (ಕರ್ಮದೋಷರಹಿತವಾಗಿ ಮಾಡಿದ ದೋಷ) ಕಳೆದು ಕರ್ಮ ಪೂರ್ತಿಯಾಗುವಂತೆ ಮಾಡುತ್ತಾನೆ. ವೈಗುಣ್ಯವಿಲ್ಲದ ಹಾಗೆ ಮಾಡುತ್ತಾನೆ. ಹೀಗೆ ಯಜ್ಞದಲ್ಲಿ ಯಜ್ಞದ ಫಾಲವು ಸಾರವಾದುದಕ್ಕೆ ಈ ರೀತಿಯಾಗಿ ಸರಿಹಾರವಿದೆ. ಎಂದ. ತಿಳಿದವನು ಬ್ರಹ್ಮನೆನ್ನುವ ಋತ್ವಿಜನಾಗುತ್ತಾನೋ ಈ ಯಜ್ಞಕ್ಕೆ ಪೂರ್ಣಯನ್ನು ಸಿದ್ಧಿಸಾಧನವಾದ ವೈಭವನ್ನು ಒಳ್ಳೆಯದನ್ನು ಕೊಟ್ಟು ಸೀರೋಗಿಯನ್ನಾಗಿ ಮಾಡುವಂತೆಯೇ ಪ್ರಾಯಶ್ಚಿತ್ತರೂಪ ವಾಕ್ಯತಿ ಹೋಮದಿಂದ ಯಜ್ಞವನ್ನು ಸಂಪೂರ್ತಿಗೊಳಿಸುತ್ತಾನೆ ॥ ೬ ॥

ಉ. ॥ ಏಷ ಹ ವಾ ಉದಕ್ಯವಸ್ಯೋ ಯಜ್ಞೋ ಯತ್ರೈವಂವಿದ್ಬ್ರಹ್ಮಾ ಭವತ್ಯೇವಂವಿದೇ ಹ ವಾ ಏಷಾ ಬ್ರಹ್ಮಾಣನುನುಗಾಧಾ ಯತೋ ಯತ ಆವರ್ತತೇ ತತ್ಪ್ರಚ್ಯುತಿ ॥ ೯ ॥

ಅ ॥ ಯಾವ ಯಜ್ಞದಲ್ಲಿ ಹೀಗೆ ತಿಳಿದವನು ಬ್ರಹ್ಮನಾಗುತ್ತಾನೋ ಅಂತಹ ಯಜ್ಞವು ಮೇಲಿನ ಲೋಕಗಳನ್ನು ಹೊಂದಿಸಿಕೊಡಲಿಕ್ಕೆ ಉಪಯುಕ್ತವಾಗುವುದು. (ಹೀಗೆ ತಿಳಿದ ಬ್ರಹ್ಮನಿಗೆ ಇಂತಹ ಸಾಮರ್ಥ್ಯವಿದೆ ಎಂಬುದಕ್ಕೆ ಒಂದಿನ ಗಾಥೆ ಹೇಳುತ್ತಾರೆ -) ಕೆಟ್ಟುಹೋದ ಯಜ್ಞವನ್ನು ಸರಿಪಡಿಸುವ ಪ್ರಕಾರವನ್ನರಿತ ಬ್ರಹ್ಮನೆಂಬ ಋತ್ವಿಜನನ್ನು ಹೊಗಳುವ ಗಾಥೆಯಿದೆ ಯಜಮಾನನು ಯಜ್ಞ ಮಾಡಿದುದರಿಂದ ಹೊಂದಲು ಶಕ್ಯವಾದ ಯಾವಯಾವ ಪುಣ್ಯಲೋಕದಿಂದ ಯಜ್ಞವು ಕೆಟ್ಟುಹೋದ ಕಾರಣ ಒಂತಿರುಗಿ ಬರುತ್ತಾನೋ, ಆಯಾಯ ಸ್ಥಾನಕ್ಕೆ ಹೀಗೆ ತಿಳಿದ ಬ್ರಹ್ಮನೆಂಬ ಋತ್ವಿಜನಿಂದ ಭಗವದ್ರೂಪನಾದ ಯಜಮಾನನ ಹೊಗಳುತ್ತಾನೆ ॥ ೯ ॥

ಉ. ॥ ಮಾನವೋ ಬ್ರಹ್ಮೈವೈಕರ್ತ್ವಿಕ್ಯರೂನಶ್ವಾಭಿರಕ್ಷತ್ಯೇವಂವಿದ್ಧ ಹ ವೈ ಬ್ರಹ್ಮಾ ಯಜ್ಞಂ ಯಜಮಾನಂ ಸರ್ವಾಸ್ಮಿಶ್ಚರ್ತ್ವಿಜೋಽಭಿರಕ್ಷತಿ ತಸಾದೇವಂವಿದಮೇವ ಬ್ರಹ್ಮಾಣಂ ಕುರ್ವೀತ ನಾನೇವಂವಿದಂ ನಾನೇವಂವಿದಂ॥

ಇತಿ ಸಪ್ತದಶಃ ಖಂಡಃ ॥ ೬-೧೭ ॥ ॥ ೧೦ ॥

ಇತಿ ಶ್ರೀಮಚ್ಛಾಂದೋಗ್ಯೋಪನಿಷದಿ ಷಷ್ಠೋಽಧ್ಯಾಯಃ ॥ ೬ ॥

ಅ ॥ ಮೌನವ್ರತದಿಂದ ಶ್ರೀಹರಿಯನ್ನು ಧ್ಯಾನಿಸುವ ಬ್ರಹ್ಮನೆಂಬ ಒಬ್ಬ ಋತ್ವಿಜನೇ ಯಜ್ಞವನ್ನು ಮಾಡುವ ಯಜಮಾನನೇ ಮೊದಲಾದ ಬೇರೆ ಋತ್ವಿಜರನ್ನು ತೀಕ್ಷ್ಣದಲ್ಲಿ ಅವರವರ ದೋಷಗಳನ್ನು ತಿಳಿದು ಪ್ರಾಯಶ್ಚಿತ್ತ ಹೋಮವನಾಡಿ ರಕ್ಷಿಸುತ್ತಾನೆ ಅಂದರೆ ಹೀಗೆ ತಿಳಿದ ಬ್ರಹ್ಮನು ಯಜ್ಞವನ್ನೂ ಯಜಮಾನನನ್ನೂ ಎಲ್ಲಾ ಋತ್ವಿಜರನ್ನೂ ರಕ್ಷಿಸುತ್ತಾನೆ. ಆದಕಾರಣ ಕೆಟ್ಟುಹೋದ ಯಜ್ಞವನ್ನು

ಸರಿಪಡಿಸತಕ್ಕ ಶಕ್ತಿಯಿರುವವನನ್ನೇ ಬ್ರಹ್ಮನೆಂಬ ಋತ್ವಿಜನನ್ನಾಗಿ ಮಾಡಬೇಕು. ಪ್ರಾಯಶ್ಚಿತ್ತಾದಿಗಳನ್ನ ರಿಯದಿರುವನನನ್ನು ಸರ್ವಥಾ ಬ್ರಹ್ಮನೆಂಬ ಋತ್ವಿಜನನ್ನಾಗಿ ಮಾಡಕೂಡದು. ॥ ೬-೧೬ ॥ ॥ ೧೦ ॥

ಪೀ—೧೦ನೇ ಮಂತ್ರದಲ್ಲಿದ್ದ ಅಗ್ನಿಂ ಪೃಥಿವ್ಯಾಃ ಇತ್ಯಾದಿಗಳಿಗೆ ಪ್ರಮಾಣ ಕೊಟ್ಟು ಅರ್ಥ ಹೇಳುತ್ತಾರೆ—

ಭಾ. ॥ (೧) ಅಗ್ನಿರ್ವಾನಿಕ್ಯವಾಯುಶ್ಚ ಸೂರ್ಯೋ ಲೋಕರಸಾಸ್ತ್ರಯಃ ॥ (೨) ಅಗ್ನೇ ರಸಸ್ತು ಋಗ್ವೇದಮಾನೀ ಬ್ರಹ್ಮಾ ಪ್ರಕೀರ್ತಿತಃ । ನಾಸಿಕ್ಯವಾಯೋಸ್ತು ರಸೋ ಯಜುರ್ವೇದಾತ್ಮಕೋ ಹರಃ । ಸಾಮವೇದಾಭಿಮಾನೀ ತು ವಾಯುಃ ಸೂರ್ಯರಸಃ ಸ್ಮೃತಃ ॥ (೩) ವರಾಹಸಿಂಹಕಪಿಲಾಸ್ತೇಷಾಂ ಭೂರಾದಿನಾಮಕಾಃ ॥ (೪) ವ್ಯಾಹೃತೀ-ಭಿಸ್ತತೋ ಜುಹ್ವನ್ ಬ್ರಹ್ಮೈವಂವಿದ್ವಿರಿಷ್ಟಿತಃ । ಸರ್ವಾನ್ಸ ಋತ್ವಿಜೋ ರಕ್ಷೇದ್ಬ್ರಹ್ಮೈವಂವಿತ್ತತೋ ಭವೇತ್ ॥ ಇತಿ ಚ ॥ ೧ ॥

ಅ ॥ (೧) ಅಗ್ನಿಯು, ನಾಸಿಕ್ಯವಾಯುವು, ಸೂರ್ಯನು ಇವರು ಮೂವರು ಲೋಕಗಳಿಗಿಂತ ಶ್ರೇಷ್ಠರು. (೨) (೨ನೇ ಮಂತ್ರದಲ್ಲಿದ್ದ ಅಗ್ನೇಃ ಋಚಃ ಇತ್ಯಾದಿಗಳ ಅರ್ಥ ಹೇಳುತ್ತಾರೆ—) ಅಗ್ನಿಗಿಂತ ಋಗ್ವೇದಕ್ಕೆ ಅಭಿಮಾನಿಯಾದ ಚತುರ್ಮುಖನು ಶ್ರೇಷ್ಠನು ನಾಸಿಕ್ಯವಾಯುವಿಗಿಂತ ಯಜುರ್ವೇದಾಭಿಮಾನಿಯಾದ ರುದ್ರನು ಶ್ರೇಷ್ಠನು. ಸೂರ್ಯನಿಗಿಂತ ಸಾಮವೇದಕ್ಕೆ ಅಭಿಮಾನಿಯಾದ ಮುಖ್ಯಪ್ರಾಣನು ಶ್ರೇಷ್ಠನು. (೩) (೩ನೇ ಮಂತ್ರದಲ್ಲಿದ್ದ ಭೂರಿತ್ಯೃಗ್ಭ್ಯಃ ಇತ್ಯಾದಿಗಳ ಅರ್ಥ ಹೇಳುತ್ತಾರೆ—) ಆ ದೇವತೆಗಳಿಗಿಂತ ಭೂಃ ಭುವಃ ಸ್ವಃ ಎಂದು ಹೆಸರುಳ್ಳ ವರಾಹ, ನರಸಿಂಹ, ಕಪಿಲರು ಶ್ರೇಷ್ಠರು. (೪) (೪ನೇ ಮಂತ್ರದಲ್ಲಿದ್ದ ತದ್ಯದೃಕ್ತಃ ಇತ್ಯಾದಿಗಳ ಅರ್ಥ ಹೇಳುತ್ತಾರೆ—) ಭೂಃ ಇತ್ಯಾದಿ ವ್ಯಾಹೃತಿಗಳು ಶ್ರೀಹರಿಯ ನಾಮಗಳಾಗಿರುವುದರಿಂದ ಹೀಗೆ ತಿಳಿದು ವ್ಯಾಹೃತಿಗಳಿಂದ ಹೋಮಿಸುವ ಬ್ರಹ್ಮನೆಂಬ ಋತ್ವಿಜನು ಯಜ್ಞಭ್ರಂಶದಿಂದುಂಟಾದ ಅರಿಷ್ಟವನ್ನು ಕಳೆದು ಎಲ್ಲಾ ಋತ್ವಿಜರನ್ನು ರಕ್ಷಿಸುತ್ತಾನೆ. ಅದುಕಾರಣ ಎಲ್ಲವನ್ನೂ ಚೆನ್ನಾಗಿ ತಿಳಿದವನೇ ಬ್ರಹ್ಮನೆಂಬ ಋತ್ವಿಜನಾಗಬೇಕು. ॥ ೧ ॥

ಪೀ—೧೧ನೇ ಮಂತ್ರದಲ್ಲಿದ್ದ ಉದಕ್ಯವಣಃ ಇತ್ಯಾದಿಗಳ ಅರ್ಥ ಹೇಳುತ್ತಾರೆ—

ಭಾ. ॥ (೧) ಉದಕ್ಯವಣ ಊರ್ಧ್ವಪ್ರವಣಃ ಊರ್ಧ್ವಲೋಕಾನುಸಾರೀ । ಯಜ್ಞಸ್ಯ ದುರಿಷ್ಟಾಚ್ಚ ಯತೋಯತಃ ಸ್ಥಾನಾದಾವರ್ತತೇ ತತ್ತತ್ಸ್ಥಾನಮೇವಂವಿದಾ ಬ್ರಹ್ಮಣಾ ಗಚ್ಛತಿ ॥ (೨) ತದ್ಬ್ರಹ್ಮೈವೈಕರ್ತ್ವಿಕ್ಕುರೂನ್ಕರ್ತೃನ್ ಯಜಮಾನಾದೀನಭಿ-ರಕ್ಷತಿ ॥ (೩) ಅಶ್ವಾ ಆಶುಜ್ಞಾನೀ । ವಾ ಗತಿಗಂಧನಯೋರಿತಿ ಧಾತೋಃ । ಗತಿಶಬ್ದಶ್ಚಾ-ವಗತೌ ಭವತಿ । ದೀರ್ಘಬಿಂದುವಿಸರ್ಗಾದೀನಾಂ ಲೋಪೋ ವೇತಿ ಸೂತ್ರಾದಾಶು ಏವ ನಾಶ್ವಾ ॥ ೧,೨,೩,೪,೫,೬,೭,೮,೯,೧೦ ॥ ಇತಿ ಸಪ್ತದಶಃ ಖಂಡಃ ॥ ೬-೧೭ ॥ ॥ ೨ ॥

ಅ ॥ (೧) ಉದಕ್ಯವಣಃ ಎಂಬುದಕ್ಕೆ ಊರ್ಧ್ವಲೋಕವನ್ನು ಹೊಂದಿಸಿಕೊಡತಕ್ಕುದು. ಯಜ್ಞದ ಭ್ರಂಶದಿಂದ ಯಾವಯಾವ ಸ್ಥಾನದಿಂದ ಹಿಂತಿರುಗಿ ಬರುತ್ತಾನೋ, ಆಯಾಯ ಸ್ಥಾನಕ್ಕೆ ಯಜ್ಞಭ್ರಂಶವನ್ನು ಸರಿಪಡಿಸುವ ರೀತಿಯನ್ನು ತಿಳಿದ ಬ್ರಹ್ಮನೆಂಬ ಋತ್ವಿಜನಿಂದ ಹೋಗುತ್ತಾನೆ. (೨) (೧೦ನೇ ಮಂತ್ರದ ಅರ್ಥವಹೇಳುತ್ತಾರೆ—) ಬ್ರಹ್ಮನೆಂಬ ಒಬ್ಬ ಋತ್ವಿಜನೇ ಯಜ್ಞವನ್ನು ಮಾಡುವ ಯಜ

ಎಂಬ ಧಾತುನ್ಯಾಸ್ಯನದಿಂದ **ಅತ್ಯಾ** ಎಂಬಲ್ಲಿನ **ವಾ** ಎಂಬುದಕ್ಕೆ ಗತಿಯೆಂದು ಅರ್ಥವು. ಗತಿ ಶಬ್ದವು ಅವಗತಿ-ತಿಳಿದುಕೊಳ್ಳುವಿಕೆ ಎಂಬ ಅರ್ಥದಲ್ಲಿದೆ. (ಅಂತೂ ಅರ್ಜುನ-ತಿಳಿದು ಕ್ಷಾನೆ ಅದುಕಾರಣ ಅರುವಾ ಎಂದಾಗುವುದಿಲ್ಲ. ಅಶ್ವಾ ಎಂದು ಹೇಗಾಯಿತೆಂದರೆ—) **ವೀರ್ಣ-ಬಿಂದುವಿಸರ್ಗಾದೀನಾಂ ಲೋಪೋ ವಾ** ಎಂಬ ಸೂತ್ರದಿಂದ, ಅಂದರೆ ವೀರ್ಣ, ಅನುಸ್ವಾರ ವಿಸರ್ಗ, ಸ್ವರ ಮೊದಲಾದವುಗಳಿಗೆ ಲೋಪವೂ ಆಗುವುದು ಎಂಬ ಸೂತ್ರದಿಂದ **ಅತು** ಎಂಬಲ್ಲಿನ ಅ ಕಾರಕ್ಕೂ ಉ ಕಾರಕ್ಕೂ ಲೋಪವು. ಅಶ್ ವಾ ಅಶ್ವಾ ಎಂದಾಯಿತು. (೬—೧೭) ॥ ೨ ॥

ಪದಿನೇಳನೇ ಖಂಡವು ಮುಗಿಯಿತು

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಚ್ಛಾಂದೋಗ್ಯ-ಭಾಷ್ಯವಿವರಣೇ ಷಷ್ಠೋಽಧ್ಯಾಯಃ ॥ ೬ ॥

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರವರಿಂದ ರಚಿಸಲ್ಪಟ್ಟ ಶ್ರೀ ಛಾಂದೋಗ್ಯ ಭಾಷ್ಯವಿವರಣೆಯಲ್ಲಿ ಆರನೇ ಅಧ್ಯಾಯವು ಮುಗಿಯಿತು.

ರಮಾನಾಥಾಯ ಪರಮೇ ಪೂರ್ಣಾನಂದಶರೀರಿಣೇ ।
ನಿರ್ದೋಷಗುಣಪೂರ್ಣಾಯ ಸರ್ವಯಜ್ಞಭುಜೇ ನಮಃ ॥
ದುರಂತದುರ್ಮತಧ್ವಾಂತಧ್ವಂಸಕೈಕಧೃಭಾಸ್ಕರಃ ।
ಬಳಿಶ್ಠೇತ್ಯಾದಿಸೂಕ್ತೋಕ್ತಗುಣಃ ಶ್ರೀಕೋಽಸ್ತು ಮೇ ಸದಾ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಏಳನೇ ಅಧ್ಯಾಯವು

ದೇವೋತ್ತಮಾಯ ಪ್ರಾಣಾಯ ಪಂಚರೂಪಾಯ ವಿಷ್ಣವೇ ।
ವೈಶ್ವಾನರಾಯ ದೇವಾಯ ನಮೋ ಭಗವತೇ ಸದಾ ॥

೧ನೇ ಖಂಡವು

ಪೀ—ಮುಖ್ಯಪ್ರಾಣನು ಸಂವರ್ಗವಿದ್ಯೆಯಲ್ಲಿ ಅಗ್ನಿ ಮೊದಲಾದವರೆಲ್ಲರನ್ನು ಭಕ್ಷಿಸುವವನೆಂದೂ ಯಜ್ಞವಿದ್ಯೆಯಲ್ಲಿ ಸರ್ವ ಸಿದ್ಧಿಯನ್ನು ಮಾಡುವವನೆಂದೂ ಹಿಂದಿನ ಅಧ್ಯಾಯದಲ್ಲಿ ಹೇಳಿರುತ್ತಾರೆ ಅದು ಕಾರಣ ಆ ಮೋಕ್ಷಾಪೇಕ್ಷಿಗಳಿಗೆ ಮುಖ್ಯಪ್ರಾಣನ ಪ್ರಸಾದವು ಅತ್ಯಾವಶ್ಯಕವಾದುದರಿಂದ ಮುಖ್ಯ ಪ್ರಾಣನ ಸಂಬಂಧಿಯಾದ ಪ್ರಾಣವಿದ್ಯೆಯನ್ನು ಹೇಳುತ್ತಾರೆ—

ಉ. ॥ ಓಂ ॥ ಯೋ ಹ ವೈ ಜ್ಯೇಷ್ಠಂ ಚ ಶ್ರೇಷ್ಠಂ ಚ ವೇದ ಜ್ಯೇಷ್ಠಶ್ಚ ಹ ವೈ ಶ್ರೇಷ್ಠಶ್ಚ ಭವತಿ ಪ್ರಾಣೋ ವಾವ ಜ್ಯೇಷ್ಠಶ್ಚ ಶ್ರೇಷ್ಠಶ್ಚ ॥ ೧ ॥

ಅ ॥ ಮುಖ್ಯಪ್ರಾಣನೇ ಜ್ಯೇಷ್ಠನೂ ಶ್ರೇಷ್ಠನೂ ಆಗಿರುತ್ತಾನೆ. ಆದುಕಾರಣ ಮುಖ್ಯಪ್ರಾಣನು ಎಲ್ಲಾ ದೇವತೆಗಳಿಗಿಂತಲೂ ವಯಸ್ಸಿನಿಂದ ಜ್ಯೇಷ್ಠನು, ಗುಣಗಳಿಂದ ಉತ್ತಮನು, ಎಂದು ಯಾವ ಅಧಿಕಾರಿಯು ತಿಳಿಯುತ್ತಾನೋ, ಆತನು ಮುಕ್ತನಾಗಿ ಮೋಕ್ಷದಲ್ಲಿ ತನ್ನ ಸಮಾನಿಕರ ಮಧ್ಯದಲ್ಲಿ ಜ್ಯೇಷ್ಠನೂ ಶ್ರೇಷ್ಠನೂ ನಿಶ್ಚಯವಾಗಿಯೂ ಆಗುತ್ತಾನೆ. ॥ ೧ ॥

ಉ. ॥ ಯೋ ಹ ವೈ ವಸಿಷ್ಠಂ ವೇದ ವಸಿಷ್ಠೋ ಹ ಸ್ವಾನಾಂ ಭವತಿ ವಾಗ್ವಾವ ವಸಿಷ್ಠಃ ॥ ೨ ॥

ಅ ॥ ವಾಗಿಂದ್ರಿಯಕ್ಕೆ ಅಭಿಮಾನಿಯಾದ ವಹ್ನಿಯು ಸವಿಾಪದಲ್ಲಿ ಅವಾಸ ಮಾಡುವವರಲ್ಲಿ ಉತ್ತಮನು. ಆತನನ್ನು ಯಾವ ಅಧಿಕಾರಿಯು ವಾಸಮಾಡುವವರಲ್ಲಿ ಉತ್ತಮನನ್ನಾಗಿ ತಿಳಿಯುತ್ತಾನೋ ಆತನು ಸ್ವಕೀಯರ ಮಧ್ಯದಲ್ಲಿ ವಾಸಮಾಡುವವರಲ್ಲಿ ಉತ್ತಮನಾಗುತ್ತಾನೆ ॥ ೨ ॥

ಉ ॥ ಯೋ ಹ ವೈ ಪ್ರತಿಷ್ಠಾಂ ವೇದ ಪ್ರತಿ ಹ ತಿಷ್ಠತ್ಯಸ್ಮಿಂಶ್ಚ ಲೋಕೇಽಮುಷ್ಮಿಂಶ್ಚ ಚಕ್ಷುರ್ವಾವ ಪ್ರತಿಷ್ಠಾ ॥ ೩ ॥

ಅ ॥ ಚಕ್ಷುರಿಂದ್ರಿಯಕ್ಕೆ ಅಭಿಮಾನಿಯಾದ ಸೂರ್ಯನು ಸ್ಥಿತಿ (ಇರುವಿಕೆ)ಗೆ ಕಾರಣವಾದ ಇಂದ್ರಿಯದೇವತೆಯು. ಯಾವ ಅಧಿಕಾರಿಯು ಆ ಸೂರ್ಯನನ್ನು ಸ್ಥಿತಿಗೆ ಕಾರಣವಾದ ಇಂದ್ರಿಯಕ್ಕೆ ದೇವತೆಯನ್ನಾಗಿ ತಿಳಿಯುತ್ತಾನೋ, ಆತನು ಈ ಲೋಕದಲ್ಲಿ ಅಥವಾ ಪರಲೋಕದಲ್ಲಿ ಎಲ್ಲಿ ಇರಬೇಕೆಂದು ಇಚ್ಛಿಸುತ್ತಾನೋ, ಅಲ್ಲಿ ಸುಖವಾಗಿ ಇರುತ್ತಾನೆ. ॥ ೩ ॥

ಉ. ॥ ಯೋ ಹ ವೈ ಸಂಪದಂ ವೇದ ಸೇ ಹಾಸ್ಮೈ ಕಾಮಾಃ ಸಂಪ್ರ-ಪದ್ಯಂತೇ ದೈವಾಶ್ಚ ಮಾನುಷಾಶ್ಚ ಶ್ರೋತ್ರಂ ವಾವ ಸಂಪತ್ ॥ ೪ ॥

ಅ ॥ ಶ್ರೋತ್ರಕ್ಕೆ ಅಭಿಮಾನಿಯಾದ ಇಂದ್ರನು ಸಂಪತ್ತಿಗೆ ಕಾರಣವಾದ ಇಂದ್ರಿಯಕ್ಕೆ ಅಭಿಮಾನಿಯು. ಯಾವ ಅಧಿಕಾರಿಯು ಇಂದ್ರನನ್ನು ಸಂಪತ್ತಿಗೆ ಕಾರಣವಾದ ಇಂದ್ರಿಯಾಭಿಮಾನಿಯನ್ನಾಗಿ ತಿಳಿಯುತ್ತಾನೋ, ಅತನಿಗೆ ದೈವಕಾಮ್ಯಗಳೂ ಮಾನುಷ ಕಾಮ್ಯಗಳೂ ಸಿಗುತ್ತವೆ. (ಅಂದರೆ ಬಹಿಷ್ಕಾಮುಷ್ಮಿಕವಿಷಯ ಸಂಪತ್ತುಗಳೂ ಬರುತ್ತವೆ) ॥ ೪ ॥

ಉ. ॥ ಯೋ ಹ ವಾ ಆಯತನಂ ವೇದಾಯತನಂ ಹ ಸ್ವಾನಾಂ ಭವತಿ ಮನೋ ಹ ವಾ ಆಯತನಂ ॥ ೫ ॥

ಅ ॥ ಮನಸ್ಸಿಗೆ ಅಭಿಮಾನಿಯಾದ ರುದ್ರನು (ಆಯತನಂ) ಗೃಹ ವ್ಯಾಪಾರ ಮೊದಲಾದ ಆಯತನಗಳಿಗೆ ಕಾರಣವಾದ ಇಂದ್ರಿಯಕ್ಕೆ ಅಭಿಮಾನಿಯು. ಯಾವನು ರುದ್ರನನ್ನು ಹೀಗೆ ಆಯತನನನ್ನಾಗಿ ತಿಳಿಯುತ್ತಾನೋ, ಅತನ, ತಮ್ಮವರಿಗೆ ಆಶ್ರಯನಾಗಿರುತ್ತಾನೆ. ಮತ್ತು ಸುಂದರಗಳಾದ ಮಂದಿರಾದಿಗಳನ್ನೂ ಪಡೆಯುತ್ತಾನೆ. ೫ ॥

ಹೀ ಮುಖ್ಯಪ್ರಾಣನು ಸಿಟ್ಟಿಲಿ ಜಗತ್ತಿಗೆ ಸಂಹಾರಕನಾಗುವುದಾದ ಅದಕ್ಕೆ ಬೆದರಿಯುಕ್ತವಾದ ಅತಿಬಲಿಷ್ಠ ಮುಖ್ಯ ಪ್ರಾಣನಿಗೆ ಇವೆ ಎಂದು ಹೇಳುತ್ತಾರೆ -

ಉ. ॥ ಅಥ ಹ ಪ್ರಾಣಾ ಅಹಂ ಶ್ರೇಯಸಿ ವ್ಯೂದಿರೇಽಹಂ ಶ್ರೇಯಾನಸ್ಮ್ಯಹಂ ಶ್ರೇಯಾನಸ್ಮೀತಿ ॥ ೬ ॥

ಅ ॥ ನಾನಾದಿ ಇಂದ್ರಿಯಾಭಿಮಾನಿ ದೇವತೆಗಳು ನಾನೇ ಶ್ರೇಷ್ಠನು ನಾನೇ ಶ್ರೇಷ್ಠನು ಎಂದು ತಮ್ಮತಮ್ಮ ಶ್ರೈಷ್ಠ್ಯ ವಿಷಯದಲ್ಲಿ ವಿವಾದಮಾಡಿಕೊಂಡರು ॥ ೬ ॥

ಉ. ॥ ತೇ ಹ ಪ್ರಾಣಾಃ ಪ್ರಜಾಪತಿಂ ಪಿತರಮೇತ್ಯೋಚುರ್ಭಗವನ್ ಕೋ ನಃ ಶ್ರೇಷ್ಠ ಇತಿ ತಾನ್ಹೋವಾಚ ಯಸ್ಮಿನ್ವ ಉತ್ಕ್ರಾಂತೇ ಇದಂ ಶರೀರಂ ಪಾಪಿಷ್ಠತರಮಿವ ದೃಶ್ಯೇತ ಸ ನಃ ಶ್ರೇಷ್ಠ ಇತಿ ॥ ೭ ॥

ಅ ॥ ಹೀಗೆ ವಿವಾದ ಮಾಡಿಕೊಂಡಿರುವ ವಾಗಾದಿ ಇಂದ್ರಿಯಗಳಿಗೆ ಅಭಿಮಾನಿಗಳಾದ ವಹ್ನಿ ಮೊದಲಾದ ದೇವತೆಗಳು ತಂದೆಯಾದ ಬ್ರಹ್ಮದೇವರ ಬಳಿಗೆ ಹೋಗಿ ಎಲೋ ಪೂಜ್ಯರೇ ನಮ್ಮಲ್ಲಿ ಶ್ರೇಷ್ಠರು ಯಾರು ಎಂದು ಕೇಳಿದರು. ಆಗ ಬ್ರಹ್ಮನು ನಿಮ್ಮಲ್ಲಿ ಯಾರು ಹೊರಟು ಹೋದೊಡನೆ ಈ ನನ್ನ ಶರೀರವು, ಹೆಚ್ಚಾದಂತೆ ತ್ಯಾಜ್ಯವಾಗಿ ಹೋಗುತ್ತದೋ ಅತನು ನಿಮ್ಮಲ್ಲಿ ಶ್ರೇಷ್ಠನು ಎಂದು ಇಂದ್ರಿಯಾಭಿಮಾನಿ ದೇವತೆಗಳಿಗೆ ಹೇಳಿದನು. ॥ ೭ ॥

ಹೀ—ಆಗ ದೇವತೆಗಳಲ್ಲಿ ಒಬ್ಬೊಬ್ಬರೇ ಬ್ರಹ್ಮನ ಶರೀರದಿಂದ ಹೊರಟುಹೋದರು ಆದರೂ ಶರೀರವು ಬೀಳಲಿಲ್ಲ. ಮುಖ್ಯ ಪ್ರಾಣನು ಹೊರಟುಹೋದೊಡನೆ ಶರೀರವು ಬಿದ್ದಿತೆನ್ನುತ್ತಾರೆ —

ಉ. ॥ ಸಾ ಹ ವಾಗುಚ್ಚಕ್ರಾಮ ಸಾ ಸಂವತ್ಸರಂ ಪ್ರೋಷ್ಯ ಪರ್ಯೇತ್ಯೋವಾಚ ಕಥಮಶಕತರ್ತೇ ಮಜ್ಜೀವಿತುಮಿತಿ ಯಥಾಽಕಲಾ ಅವದಂತಃ ಪ್ರಾಣಂತಃ ಪ್ರಾಣೇನ ಪಶ್ಯಂತಶ್ಚಕ್ಷುಷಾ ಶೃಣ್ವಂತಃ ಶ್ರೋತ್ರೇಣ ಧ್ಯಾಯಂತೋ ಮನಸೈವಮಿತಿ ಪ್ರವಿವೇಶ ಹ ವಾಕ್ ॥ ೬ ॥

ಅ ॥ ಹೀಗೆ ಬ್ರಹ್ಮನು ಹೇಳಿದಾಗ ಅದನ್ನು ಪರೀಕ್ಷಿಸುವುದಕ್ಕಾಗಿ ಅವರ ಮಧ್ಯದಲ್ಲಿ ವಾಗಭಿಮಾನಿಯಾದ ಅಗ್ನಿಯು ಬ್ರಹ್ಮನ ಶರೀರದಿಂದ ಹೊರಟುಹೋದನು. ಆದರೂ ಶರೀರವು ಬೀಳಲಿಲ್ಲ. ಆ ಅಗ್ನಿಯು ಸಂವತ್ಸರಪರ್ಯಂತ ದೇಶಾಂತರದಲ್ಲಿ ಅವಾಸಮಾಡಿ ತಿರುಗಿಬಂದು ನಾನಿಲ್ಲದೆ ನೀವು ಜೀವಿಸಲಿಕ್ಕೆ ಹೇಗೆ ಶಕ್ತರಾಗಿರುವಿರಿ, ಎಂದು ಶರೀರದೊಳಗಣ ಜೀರೆ ದೇವತೆಗಳಿಗೆ ಕೇಳಿದನು. ಆಗ ಆ ಶರೀರದೊಳಗಣ ಇಂದ್ರಿಯಾಭಿಮಾನಿ ದೇವತೆಗಳು, ಎಲೋ ಅಗ್ನಿಯೇ ಮೂಕರು ಮಾತನಾಡದಿದ್ದರೂ ಪ್ರಾಣಾದಿಗಳಿಂದ ಶ್ವಾಸಾದಿಗಳನ್ನು ಬಿಡುತ್ತಾ ಅಂದರೆ—ಕಣ್ಣಿನಿಂದ ನೋಡುತ್ತಾ, ಕಿವಿಯಿಂದ ಕೇಳುತ್ತಾ, ಮನಸ್ಸಿನಿಂದ ಧ್ಯಾನಿಸುತ್ತಾ, ಹೇಗೆ ಜೀವಿಸುತ್ತಾರೋ, ಹಾಗೆಯೇ ಜೀವಿಸಿದೆವು, ಎಂದರು. ಆಗ ಆ ಅಗ್ನಿಯು (ನಾನು ಶ್ರೇಷ್ಠನಲ್ಲವೆಂದು ನಿಶ್ಚಯಿಸಿ) ಆ ಬ್ರಹ್ಮನ ಶರೀರದಲ್ಲಿ ಪ್ರವೇಶಮಾಡಿದನು. ॥ ೬ ॥

ಉ. ॥ ಚಕ್ಷುರ್ಹೋಚ್ಚಕ್ರಾಮ ತತ್ಸಂವತ್ಸರಂ ಪ್ರೋಷ್ಯ ಪರ್ಯೇತ್ಯೋವಾಚ ಕಥಮಶಕತ ರ್ತೇ ಮಜ್ಜೀವಿತುಮಿತಿ ಯಥಾಂಧಾ ಅಪಶ್ಯಂತಃ ಪ್ರಾಣಂತಃ ಪ್ರಾಣೇನ ವದಂತೋ ವಾಚಾ ಶೃಣ್ವಂತಃ ಶ್ರೋತ್ರೇಣ ಧ್ಯಾಯಂತೋ ಮನಸೈವಮಿತಿ ಪ್ರವಿವೇಶ ಹ ಚಕ್ಷುಃ ॥ ೯ ॥

ಅ ॥ * ಹೀಗೆಯೇ ಚಕ್ಷುರಭಿಮಾನಿಯೂ .. .... ಕುರುಡರು ನೋಡದಿದ್ದರೂ, ಪ್ರಾಣದಿಂದ ಜೀವಿಸುತ್ತಾ ವಾಗಿಂದ್ರಿಯದಿಂದ ಮಾತಾಡುತ್ತಾ..... ॥ ೯ ॥

ಉ. ॥ ಶ್ರೋತ್ರಂ ಹೋಚ್ಚಕ್ರಾಮ ತತ್ಸಂವತ್ಸರಂ ಪ್ರೋಷ್ಯ ಪರ್ಯೇತ್ಯೋವಾಚ ಕಥಮಶಕತರ್ತೇ ಮಜ್ಜೀವಿತುಮಿತಿ ಯಥಾ ಬಧಿರಾ ಅಶೃಣ್ವಂತಃ ಪ್ರಾಣಂತಃ ಪ್ರಾಣೇನ ವದಂತೋ ವಾಚಾ ಪಶ್ಯಂತಶ್ಚಕ್ಷುಷಾ ಧ್ಯಾಯಂತೋ ಮನಸೈವಮಿತಿ ಪ್ರವಿವೇಶ ಹ ಶ್ರೋತ್ರಂ ॥ ೧೦ ॥

ಅ ॥ ಶ್ರೋತ್ರಾಭಿಮಾನಿಯು.....ಕಿವುಡರು ಕೇಳದಿದ್ದರೂ..... ॥ ೧೦ ॥

ಉ. ॥ ಮನೋ ಹೋಚ್ಚಕ್ರಾಮ ತತ್ಸಂವತ್ಸರಂ ಪ್ರೋಷ್ಯ ಪರ್ಯೇತ್ಯೋವಾಚ ಕಥಮಶಕತರ್ತೇ ಮಜ್ಜೀವಿತುಮಿತಿ ಯಥಾ ಬಾಲಾ ಅಮನಸಃ ಪ್ರಾಣಂತಃ ಪ್ರಾಣೇನ ವದಂತೋ ವಾಚಾ ಪಶ್ಯಂತಶ್ಚಕ್ಷುಷಾ ಶೃಣ್ವಂತಃ ಶ್ರೋತ್ರೇಣೈವಮಿತಿ ಪ್ರವಿವೇಶ ಹ ಮನಃ ॥ ೧೧ ॥

* ೯—೧೦—೧೧ ಮಂತ್ರಗಳಲ್ಲಿ ಹಿಂದಿನಂತೆ ಅರ್ಥ.

ಅ ॥ ಮನೋಭಿವಾಸಿಯು.....ಅಲು ತಿಂಗಳನೊಳಗಿನ ಬಾಲಕರು. ಪ್ರಾಣನ. ವಿನಯ ಬೇರೆ ಮನೋಭಿವಸಿಗಳಾದ ವಿದ್ವಾಂಸರಿಂದ ಶ್ರೇಷ್ಠತ್ವವುಳ್ಳ ಮನಸ್ಸು ಇಲ್ಲವಾಗಿರಲು.... ೧೦೧

ಉ. ॥ ಅಥ ಹ ಪ್ರಾಣ ಉಚ್ಚಕ್ರಮಿಷನ್ಸ ಯಥಾ ಸುಹಯಃ ಪಟ್ವೀ ಶಶಂಕೂನ್ಸಂಪಿದೇದೇವಮಿತರಾನ್ಪ್ರಾಣಾನ್ಸಂಪಿದತ್ಸ್ಕೀ ಹಾಭಿಸಮೇತ್ಯೋ-ಚುರ್ಭಗವನ್ನೇಧಿ ತ್ವಂ ನಃ ಶ್ರೇಷ್ಠೋಽಸಿ ನೋಕ್ರಮಿಷ್ಠಿತಿ ॥ ೧೨ ॥

ಅ ॥ ಮ್ಮ ಮೊದಲಾದ ಎಲ್ಲಾ ದೇವತೆಗಳೂ ಶ್ರೇಷ್ಠರೆಂದು ನಿಶ್ಚಯವಾದ ಮೇಲೆ ಮುಖ್ಯ ಪ್ರಾಣನು ಒಕ್ಕನ ರೀತಿಯಿಂದ ಹೊರಟಲಿಚ್ಛಿಸಿದವನಾಗಿ ಕೆಳಗೆ ಕೊಂಕಾದಕ್ಕೆ ಒಳ್ಳೇ ಕುದುರೆಯು ಅತಿ ವೇಗದಿಂದ ಓಡುವ ಕುದುರೆಯನ್ನು ಕಟ್ಟುವಕ್ಕ ಹಗಕ್ಕೆ ಅಕ್ಕಪಕ್ಕಗಳಾದ ಕೀಲುಗಳನ್ನು (ಕುದುರೆಯ ಕಾಲ್ಗಳನಂತ ಹೊರಪೆಯಲ್ಲಿರುವ) ಕಟ್ಟುವಂತೆ ಹೊಗಳುತ್ತಾ ಬೇರೆಯ ಬೇರೆ ಇಂದ್ರಿಯಾಭಿಮಾನಿ ದೇವತೆಗಳನ್ನೆಲ್ಲಾ ಕಟ್ಟುವಂತೆ ಕಟ್ಟಿಕೊಂಡು. ಹೊರಟನು.. (ಆಗ ಆ ದೇವತೆಗಳು ತಮ್ಮ ತಮ್ಮ ಸ್ಥಾನಗಳನ್ನು ಸ್ವೀಕರಿಸಿ ಅಕ್ಕಿರಲಾಗಿ, ಮುಖ್ಯಪ್ರಾಣನ ಒಳಗೆ ಒಂದು ವಿಶೇಷ ಸ್ಥಾನವನ್ನು ಪಡೆದ ಈ ರೀತಿಯಲ್ಲಿ ಅಭಿವೃದ್ಧರಾಗಿರಿ ನಮ್ಮ ಮಧ್ಯದಲ್ಲಿ ಶ್ರೇಷ್ಠರಾಗಿರುತ್ತೀರಿ. ಈ ರೀತಿಯಾಗಿ ಕೊಂದೆಯೂ ಹೋಗದೇಇರಿ ಎಂದು ಸ್ತುತಿಸಿದರು-ಇತಿ ॥ ೨ ॥

ಈ ಪ್ರಾಣನಲ್ಲಿ ಬೆಸೆದುಕೊಂಡ ನನಗೆ ಭಯವಾಗಿರಿ. ಏಂದನ. ಆಗ ದೇವತೆಗಳು ಹಾಗೆಯೇ ಆಗಲಿ ಎಂದು ಮುಖ್ಯಪ್ರಾಣನ ಶ್ರೇಷ್ಠತ್ವ ಗುಣಗಳನ್ನು ಹೊಗಳುವವನೆನ್ನುತ್ತಾರೆ-

ಉ. ॥ ಅಥ ಹೈನಂ ವಾಗುವಾಚ ಯದಹಂ ವಸಿಷ್ಠಾಽಸ್ಮಿ ತ್ವಂ ತದ್ವಸಿ-ಷ್ಠೋಽಸೀತ್ಯಥ ಹೈನಂ ಚಕ್ಷುರುವಾಚ ಯದಹಂ ಪ್ರತಿಷ್ಠಾಽಸ್ಮಿ ತ್ವಂ ತತ್ಪ್ರತಿ-ಷ್ಠೋಽಸೀತಿ ॥ ೧೩ ॥

ಅ ॥ ಆ ಮೇಲೆ ವಾಗಭಿವಸಿಯಾದ ಅಗ್ನಿಯು ಮುಖ್ಯಪ್ರಾಣನನ್ನು ಪ್ರಾರ್ಥಿಸಿಕೊಂಡನು ಎಲೋ ಮುಖ್ಯಪ್ರಾಣನೇ ನಾನು ವಾಸನಾಮಾತ್ರವರಲ್ಲಿ ಶ್ರೇಷ್ಠತ್ವವನ್ನಾಗಿರುತ್ತೇನೆಂಬುದು ನೀನೇ ನನ್ನಲ್ಲಿ ನನ್ನ ಶ್ರೇಷ್ಠತ್ವಕ್ಕೆ ನಿಮಿತ್ತವುಳ್ಳವನಾಗಿರುತ್ತೀ. ಆ ಮೇಲೆ ಚಕ್ಷುರಭಿವಸಿಯಾದ ಸೂರ್ಯನು ನಾನು ಸರ್ವರ ದೃಷ್ಟಿಗೆ ಕಾರಣನೆಂಬುದು ನಿಮ್ಮ ಅಧೀನವು, ಎಂದು ಹೇಳಿದನು. ೧೩

ಉ. ॥ ಅಥ ಹೈನಂ ಶ್ರೋತ್ರಮುವಾಚ ಯದಹಂ ಸಂಪದಸ್ಮಿ ತ್ವಂ ತತ್ಸಂಪದಸೀತ್ಯಥ ಹೈನಂ ಮನ ಉವಾಚ ಯದಹಮಾಯತನಮಸ್ಮಿ ತ್ವಂ ತದಾಯತನಮಸೀತಿ ॥ ೧೪ ॥

ಅ ॥ ಆ ಮೇಲೆ ಶ್ರೋತ್ರಾಭಿವಸಿಯಾದ ಇಂದ್ರನು ಹೇಳಿದನು ನಾನು ಸಂಪತ್ತಿಗೆ ಕಾರಣನೆಂಬುದು ನಿಮ್ಮ ಅಧೀನವು.....ಆ ಮೇಲೆ ಮನೋಭಿವಸಿಯಾದ ರುದ್ರನು ನಾನು ಸರ್ವರಿಗೆ ಆಶ್ರಯನೆಂಬುದೂ ನಿಮ್ಮ ಅಧೀನವೆಂದು ಪ್ರಾರ್ಥಿಸಿದನು

ವಿ ॥ ವಾಗಾದಿಗಳಿಗೆ ಅಭಿವಸಿಗಳಾದ ವಸ್ವಾದಿಗಳಿಗೆ ಶ್ರೇಷ್ಠತ್ವ ಮೊದಲಾದ ಯಾವ ಗುಣಗಳಿವೆಯೋ, ಅವುಗಳೆಲ್ಲವೂ ಮುಖ್ಯಪ್ರಾಣನಿಗೇನೇ ಮುಖ್ಯಗಳು ಮ್ಮ ಮೊದಲಾದ ನವ್ಯಲ್ಲಿ

ಅಮುಖ್ಯಗಳು. ನಿಮ್ಮ ಅಧೀನಗಳು, ಹೀಗೆ ವಹ್ನಿ ಮೊದಲಾದ ದೇವತೆಗಳು ಮುಖ್ಯಪ್ರಾಣನೊಡನೆ ವಿಜ್ಞಾಪಿಸಿಕೊಂಡರು. ॥ ೧೪ ॥

ಪೀ—ವಾಗಾದಿಗಳಲ್ಲರತಕ್ಕ ಉತ್ತಮತ್ವ ಮೊದಲಾದುದು ಮುಖ್ಯಪ್ರಾಣನ ಅಧೀನವೆಂಬಲ್ಲಿ ನಿಯಾಮಕ ಹೇಳುತ್ತಾರೆ—

ಉ. ॥ ನ ವೈ ವಾಚೋ ನ ಚಕ್ಷೂಂಷಿ ನ ಶ್ರೋತ್ರಾಣಿ ನ ಮನಾಂಸೀತ್ಯಾಚಕ್ಷತೇ ಪ್ರಾಣಾ ಇತ್ಯೇವಾಚಕ್ಷತೇ ಪ್ರಾಣೋ ಹ್ಯೇವೈತಾನಿ ಸರ್ವಾಣಿ ಭವತಿ ॥ ಇತಿ ಪ್ರಥಮಃ ಖಂಡಃ ॥ ೭-೧ ॥ ॥ ೧೫ ॥

ಅ ॥ ವಾಕ್ ಚಕ್ಷುಸ್ಸು ಶ್ರೋತ್ರ ಮನಸ್ಸುಗಳಿಗೆ ಅಭಿಮಾನಿಗಳಾದ ಅಗ್ನಿ, ಸೂರ್ಯ, ಇಂದ್ರ, ರುದ್ರರು ವಾಗಾದಿಗಳಾಗುವುದಿಲ್ಲ ಅಂದರೆ—ಸ್ವತಂತ್ರವಾಗಿ ತಮ್ಮತಮ್ಮ ವ್ಯಾಪಾರಗಳನ್ನು ಮಾಡಲಿಕ್ಕೆ ಶಕ್ತರಾಗುವುದಿಲ್ಲ, ಎಂದು ಪ್ರಾಜ್ಞರು ಹೇಳುತ್ತಾರೆ. (ಹಾಗಾದರೆ ಆ ಅಗ್ನ್ಯಾದಿಗಳು ಯಾರ ಅಧೀನದಲ್ಲಿದ್ದು ತಮ್ಮ ತಮ್ಮ ವ್ಯಾಪಾರಗಳನ್ನು ಮಾಡಲಿಕ್ಕೆ ಶಕ್ತರಾಗುತ್ತಾರೆಂದರೆ—) ವಾಕ್ ಮೊದಲಾದ ಇಂದ್ರಿಯಗಳ ಸಮೂಹವನ್ನು ಪ್ರಾಣ ಎಂದೇ ಹೇಳುತ್ತಾರೆ ಅದುಕಾರಣ ವಾಗಾದಿಗಳು ಪ್ರಾಣ, ಎಂದೆ ಎನಿಸಿಕೊಳ್ಳುತ್ತವೆ. ಅಂದರೆ—ಅವುಗಳಿಗೆ ಪ್ರಾಣನು ನಿಯಾಮಕನು. ಪ್ರಾಣನು ಎಲ್ಲಾ ಇಂದ್ರಿಯಾಭಿಮಾನಿ ದೇವತೆಗಳಲ್ಲಿ ಇದ್ದು ಅವರವರಿಗೆ ನಿಯಾಮಕನು ಆಗುತ್ತಾನೆ ॥ ೭-೧ ॥ ॥ ೧೫ ॥

ಪೀ—ಪ್ರಮಾಣವನ್ನು ಹೇಳಿ ಈ ಖಂಡದ ಅರ್ಥವನ್ನು ವಿವರಿಸುತ್ತಾರೆ—

ಭಾ. ॥ ಓಂ ॥ (೧) ಯಃ ಶ್ರೇಷ್ಠಂ ಜ್ಯೇಷ್ಠಮಬಿಲದೇವಾನಾಂ ವಾಯುಮಂಜಸಾ । ವೇದ ಸ ಸ್ವಸಮಾನಾನಾಂ ಜ್ಯೇಷ್ಠಶ್ರೇಷ್ಠೋ ವಿಮುಕ್ತಿಗಃ ॥ (೨) ಸಮಾಪೇ ವಸಕಾಂ ಶ್ರೇಷ್ಠೋ ವಸಿಷ್ಠಸ್ಯೈವ ವೇದನಾತ್ ॥ (೩) ಏಕಸ್ಥಾನೇ ಸ್ಥಿತಿಸ್ತು ಸ್ಯಾತ್ಪ್ರತಿಷ್ಠಾ ಜ್ಞಸ್ಯ ಚೇಚ್ಛತಃ ॥ (೪) ಸಂಪದ್ವೇತ್ತುಃ ಸಂಪದಃ ಸ್ಯುಃ ॥ (೫) ಗೃಹಂ ಚಾಯತನಂ ವಿದಃ । ಜ್ಯೇಷ್ಠಃ ಶ್ರೇಷ್ಠಃ ॥ ೧ ॥

ಅ ॥ (೧) ಮುಖ್ಯಪ್ರಾಣನು ಎಲ್ಲಾ ದೇವತೆಗಳಿಗಿಂತಲೂ ವಯಸ್ಸಿನಿಂದ ಜ್ಯೇಷ್ಠನು ಗುಣಗಳಿಂದ ಶ್ರೇಷ್ಠನು ಎಂದು ಜ್ಞಾನಿಗಿ ತಿಳಿಯುವವನು ಮೋಕ್ಷದಲ್ಲಿ ತನ್ನ ಸಮಾನಿಕರಲ್ಲಿ ಜ್ಯೇಷ್ಠನೂ ಶ್ರೇಷ್ಠನೂ ಆಗುತ್ತಾನೆ. (೨) ಯೋ ಹ ವೈ ವಸಿಷ್ಠಂ ಎಂಬ ೨ನೇ ಮಂತ್ರದ ಅರ್ಥ ಹೇಳುತ್ತಾರೆ—) ಅಗ್ನಿಯು ವಾಸಮಾಡುವವರಲ್ಲಿ ಉತ್ತಮನೆಂದು ತಿಳಿಯುವವನು ಸಮಾಪದಲ್ಲಿ ಅವಾಸಮಾಡುವ ಸಮಾನಿಕರಲ್ಲಿ ಉತ್ತಮನಾಗುತ್ತಾನೆ. (೩) (ಯೋ ಹ ವೈ ಪ್ರತಿಷ್ಠಾಂ ಎಂಬ ೩ನೇ ಮಂತ್ರದ ಅರ್ಥ ಹೇಳುತ್ತಾರೆ—) ಚಕ್ಷುರಭಿಮಾನಿಯಾದ ಸೂರ್ಯನು ಸ್ಥಿತಿಗೆ ಕಾರಣನು, ಎಂದು ತಿಳಿದವನಿಗೆ ತನ್ನ ಇಚ್ಛಾನುಸಾರವಾಗಿ ಒಂದು ಸ್ಥಳದಲ್ಲಿ ಇರುತ್ತಾನೆ. (ಅಮಕಾರಣ ಒಬ್ಬನು ಏಕಕಾಲದಲ್ಲಿ ಈ ಲೋಕಪರಲೋಕಗಳಲ್ಲಿರುತ್ತಾನೆಂದು ಅರ್ಥವಲ್ಲ. ಮತ್ತು ನಮಗೆ ಇಚ್ಛಾನುಸಾರ ಇಷ್ಟಸ್ಥಾನದಲ್ಲಿ ಇರಲು ಸಾಧ್ಯವಿಲ್ಲ. ಸೂರ್ಯನು ಸ್ಥಿತಿಗೆ ಕಾರಣನೆಂದು ತಿಳಿದವನಿಗೆ ಸ್ವೇಚ್ಛಾನುಸಾರ ಎಲ್ಲಿಯೂ ಇರಬಹುದು) (೪) (ಸ ಯೋ ಹ ವೈ ಸಂಪದಂ ಎಂಬ ೪ನೇ ಮಂತ್ರದ ಅರ್ಥ ಹೇಳುತ್ತಾರೆ—) ಶ್ರೋತ್ರಾಭಿಮಾನಿಯಾದ ಇಂದ್ರನು ಸಂಪತ್ತಿಗೆ ಕಾರಣನೆಂದು ತಿಳಿದವನಿಗೆ ಐಹಿಕಾಮುಷ್ಮಿಕ ಎಲ್ಲಾ ಸಂಪತ್ತುಗಳೂ ಬರುತ್ತವೆ. (೫) ಯೋ ಹವಾ

ಆಯತನಂವೇದ ಎಲ್ಲಾ ಗಳಿಗೆ ಮುಕ್ತವಾದ ಅರ್ಥ ಹೇಳುತ್ತಾರೆ–) ರುದ್ರನು ಸಂಸಾರಕ್ಕೆ ಕಾರಣನೆಂದು ತಿಳಿದವನಿಗೆ ಸಂತೋಷವಾದ ಮನೆ ದೊರೆಯಲಾರದು ಏಕೆಂದರೆ ಸಂಸಾರವೇ ದುಃಖಕರವಾಗಿರುತ್ತದೆ ॥ ೧೯ ॥

ಈ– ಎಲ್ಲಾ ಮಂತ್ರಗಳಲ್ಲಿಯೂ ಯದಹಂ ವಸಿಷ್ಠೋಽಸ್ಮಿ ಎಂಬಾರಂಭದಿಂದ ಆಯತನಮಸಿ ಎಂಬ ಪರ್ಯಂತವಾಗಿ ಶ್ರೇಷ್ಠನಾಗಿ ಹೇಳುತ್ತಾರೆ–

ಭಾ.॥(೧) ನಸಿಷ್ಠಸ್ಯ ಸಂಪದಾಯತನಂ ತಥಾ । ವಾಯುಬೀಜಸ್ಯ ಮಹಾಂಸ್ತಸ್ಯ ಪ್ರಸಾದಾದ್ಗುಣೀವ ತು ॥ ಉಮಾಭಾವತೋಽನಿಷ್ಠಃ ಸ್ಥಾತ್ರಿಷ್ಠೋನಂ ರವಿಸ್ತಕಃ । ಸಂಪದಿಂದ್ರಸ್ಯೈವೋಕ್ತೋ ರುದ್ರ ಆಯತನಂ ತಥಾ ॥ ೨೦ ಪ್ರಭಾವೇ ॥ (೨) ಸರ್ವೇಽಪೀಂದ್ರಿಯಜ್ಞಾನಾ ಜ್ಞಾನಾತಾಸ್ತೇ ಪ್ರಾಣ ಏವ ಶರೀರೋತ್ಕ್ರಮಂ । ಇಂದ್ರಿಯಸ್ಯ ಸ್ವಭಕ್ಷ್ಯಾಸ್ತೇ ಶಕ್ತ್ಯೋಽಪಿ ಸ್ವಯಮೇವ ಮೇ ॥ (೩) ಪ್ರಕಾಶಾತ್ಮನ್ಯವಸಾಯಾತ್ಮನಾಂ ಕೇನಲಪ್ರಾಣತೋ ಭವೇತ್ । ಜ್ಞಾನಾಯುಷಾಂ ಮನಸಾ ಸರ್ವಮನುತಃ ಪ್ರಾಪ್ತಪ್ರಸಂಪ್ಕ್ಷಯಃ ॥ (೪) ಬುದ್ಧೀಯಾಯಮಾಮವಜ್ಞಾನಾಯಾಂ ಜ್ಞಾನಾಪ್ತೇನ ನಿಬೋಧನಂ ॥ (೫) ತಥಾಽಪಿ ಸಂಪ್ತಿಪಿಸ್ತಶ್ರ ಪ್ರಾಣಾನರ್ಕತಯಾ ಭವೇತ್ ॥ (೬) ಜ್ಞಾನಸ್ಯ ನಪ್ತಕಾ ನಾಮ ಭೂತ್ವಾ ದ್ಯಾತ್ಮತತ್ಪಸಾದತಃ । ಪ್ರಾಣೇ ನಪ್ತೇ ಮನೋ ನಪ್ತಮಿಂದ್ರಿಯಾಣಿ ಚ ಸರ್ವದಾ ॥ ೨೬ ಚ ॥ ೧, ೨,...೧೫ ॥ ಇತಿ ಪ್ರಥಮಃ ಖಂಡಃ ॥ ೬–೧ ॥ ॥ ೬ ॥

ಆ ॥ (೧) ಮುಖ್ಯ ಪ್ರಾಣನು ನಮಿಷಾದಿ ನವಮಿಷ್ಠ ಪ್ರತಿಷ್ಠಾ ಸಂಪತ್ತಿ ಆಯತನ ಎನಿಸುವನು ॥ ೧೯ ॥ ಇದಕ್ಕೆ ಸಾಗ್ನಾವ ವಸಿಷ್ಠ ಬಕ್ಷಾರ್ಥವು ಹೇಗೆ ಕಾಯಿತ್ತಾನೆ ಎಂದರೆ–) ೧ ಮುಖ್ಯ ಪ್ರಾಣನ ಅನುಗ್ರಹದಿಂದಲೇ ಅಗ್ನಿ ದೇವತೆಯು ಉಷ್ಣವಾಗಿ ವಿಷ್ಣು ವಾಸವು ಮಹಾಬಲಶಾಲಿಯಾಗಿ ಬೆಳಗುವನು. ಅಮುಖ್ಯವಾಯುವೇ ಸೂರ್ಯನು ಪ್ರಕಾಶಕನಾಗಿ ಇರಲು ಕಾರಣನು. ಇಂತಹ ಸಂಪತ್ತು ಸಂಪತ್ತಿಗೆ ಆಗಾರನು. ರುದ್ರನು ಆಯತನ ಗಳಾಗಿರಲು ಕಾರಣನು. ಇವೆಲ್ಲವೂ ಮುಖ್ಯಪ್ರಾಣನ ಅನುಗ್ರಹದ ಮೇಲೆಯೇ ತಮ್ಮ ತಮ್ಮ ಕಾರ್ಯವನ್ನು ನಡೆಸಲ್ಪಡುವವು. ಸ್ವತಃ ಸ್ವತಂತ್ರವಾಗಿ ಇರುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿದೆ. (೨) ಮುಖ್ಯಪ್ರಾಣನು ತಾನೇ ಸ್ವತಂತ್ರವಾಗಿ ಆಯಾಯ ಇಂದ್ರಿಯಗಳ ವ್ಯಾಪಾರಗಳನ್ನು ನಡಸಲಿಕ್ಕೆ ಶಕ್ತನಾಗಿದ್ದರೂ ಬೇರೆಬೇರೆ ರೂಪಗಳಾಗಿ ಆಯಾಯ ಇಂದ್ರಿಯಗಳಲ್ಲಿಯೂ ಇಂದ್ರಿಯಗಳಿಗೆ ಅಧಿಷ್ಠಾನ ದೇವತೆಗಳಲ್ಲಿಯೂ ಇದ್ದು ಎಲ್ಲಾ ಇಂದ್ರಿಯಗಳ ವ್ಯಾಪಾರಗಳನ್ನು ನಡಿಸುತ್ತಾನೆ. (೩) ಮುಖ್ಯ ಪ್ರಾಣನು ಅಗ್ನ್ಯಾದಿಗಳು ಅಧಿಷ್ಠಾನಿಗಳಾಗಿ ಬಳಿ ಇಂದ್ರಿಯಗಳಲ್ಲಿದ್ದು ವ್ಯಾಪಾರ ನಡಿಸುತ್ತಾನೆ – ಈ ಪ್ರಾಣನಿಂದ ಪ್ರಯೋಜನವಿಲ್ಲವೆಂದಾಗುವುದು. ಅಗ್ನ್ಯಾದಿಗಳು ಅಧಿಷ್ಠಾನಿಗಳಾಗದೆ ಇಂದ್ರಿಯಗಳಲ್ಲಿದ್ದು ವ್ಯಾಪಾರ ನಡಿಸುತ್ತಾನೆಂದಾದರೆ–ಈ ದೇವತೆಗಳಿಂದ ಪ್ರಯೋಜನವಿಲ್ಲವೆಂದಾಗುವುದು ಎಂದರೆ– ಬೇರೆ ದೇವತೆಗಳು ಅಧಿಷ್ಠಾನಿಗಳಾಗಿ ಬಳಿ ಇಂದ್ರಿಯಗಳಲ್ಲಿದ್ದು ಮುಖ್ಯಪ್ರಾಣನು ವ್ಯಾಪಾರ ನಡಿಸುತ್ತಾನೆ ಮತ್ತು ಬೇರೆ ದೇವತೆಗಳ ವ್ಯಾಪಾರವಿಲ್ಲದೇನೂ ಮುಖ್ಯಪ್ರಾಣನೇ ಎಲ್ಲಾ ಕಾರ್ಯಗಳನ್ನು ಮಾಡುತ್ತಾನೆನ್ನುತ್ತಾರೆ–) (ಬೇರೆ ದೇವತೆಗಳು ಇದ್ದರೂ) ಆಯಾಯ ದೇವತೆಗಳ ವ್ಯಾಪಾರಗಳ ಆಶೆಯಿಲ್ಲದೆ ಮುಖ್ಯಪ್ರಾಣನಿಂದಲೇ ಆಯಾಯ ವ್ಯಾಪಾರಗಳಾಗುತ್ತವೆ ಅದು ತಿರುಗಾಡುತ್ತ ಕುಳಿತ ವಯಸ್ಸಿನ ಜ್ಞಾನದಿಂದ ಪ್ರಾಣನಿಂದಲೇ ಸರ್ವೇಂದ್ರಿಯಗಳೆಂದು ಬೋಧಿಸಿದ ಜ್ಞಾನವು ಉಪಯುಕ್ತವಾಗುತ್ತದೆ ಅದು ತಿಂಗಳು ಆದಮೇಲೆ ಮಾತುಗಳಿಗೆ ಅಧಿಷ್ಠಾನಿಗಳಾದ ಅಗ್ನ್ಯಾದಿಗಳಾಗಲಿ ಆಯಾಯ ಜ್ಞಾನವು ಹುಟ್ಟುತ್ತದೆ.

(ಏಕೆಂದರೆ -) ಅಕುಂಠಿತಗಳಾಗಿರುವ ಮೊದಲು ರುದ್ರಾದಿಗಳು ಮನಸ್ಸು ಮೊದಲಾದ ಇಂದ್ರಿಯಗಳಿಗೆ ನಿಯಾಮಕರಾಗದಿರುವುದರಿಂದಲೇ ಆ ಕಾಲದಲ್ಲಿ ಅನುಭೂತವಾದುದು ಮುಂದಕ್ಕೆ ಸ್ಮರಣೆ ಬರುವುದಿಲ್ಲ. (ಇಲ್ಲವಾದರೆ ಮೊದಲು ಅನುಭೂತವಾದ ಪದಾರ್ಥಗಳ ಸ್ಮರಣೆಯು ಬರಬೇಕಾಗುವುದು.) (೪)(ಪ್ರಾಣನು ಬೇರೆ ದೇವತೆಗಳ ಅಪೇಕ್ಷೆಯಿಲ್ಲದೆ ವ್ಯಾಪಾರ ಮಾಡುತ್ತಾನೆಂಬುದನ್ನು ಸಮರ್ಥಿಸುತ್ತಾರೆ—) ಮೋಕ್ಷಾವಸ್ಥೆಯಲ್ಲಿ (ಪ್ರಾಕೃತ ಇಂದ್ರಿಯಗಳೇ ಇಲ್ಲದಿರುವುದರಿಂದ ಅಗ್ನ್ಯಾದಿ ದೇವತೆಗಳ ವ್ಯಾಪಾರಗಳಿಲ್ಲ. ಅದುಕಾರಣ) ಮುಖ್ಯಪ್ರಾಣನಿಂದಲೇ ಎಲ್ಲಾ ಇಂದ್ರಿಯಗಳಿಂದುಂಟಾಗತಕ್ಕ ಜ್ಞಾನವು ಬರುತ್ತದೆ. (೫) (ಮೋಕ್ಷಾವಸ್ಥೆಯಲ್ಲಿ ಸ್ವರೂಪೇಂದ್ರಿಯಕ್ಕೆ ನಿಯಾಮಕನಾದ ಮುಖ್ಯಪ್ರಾಣನಿಂದಲೇ ಎಲ್ಲಾ ಇಂದ್ರಿಯಗಳಿಂದುಂಟಾಗತಕ್ಕ ಜ್ಞಾನವು ಹುಟ್ಟುತ್ತದೆಂದಾದರೆ, ಸಂಸಾರಕಾಲದಲ್ಲಿ ಮನಸ್ಸು ಮೊದಲಾದವುಗಳಿಗೆ ಪ್ರವರ್ತಕರಾದ ರುದ್ರಾದಿಗಳು ಮೋಕ್ಷಕಾಲದಲ್ಲಿ ಪ್ರವರ್ತಕರಾಗದಿರುವುದರಿಂದ ಸಂಸಾರದಲ್ಲಿ ಅನುಭೂತವಾದುದು ಮೋಕ್ಷಕಾಲದಲ್ಲಿ ಸ್ಮರಿಸಲ್ಪಡದೆ ಹೋಗುವುದು ಎಂದರೆ—) ಮೋಕ್ಷಕಾಲದಲ್ಲಿ ಬೇರೆ ದೇವತೆಗಳ ವ್ಯಾಪಾರಗಳಿಲ್ಲವಾದರೂ ಕೇವಲ ಪರಮಾತ್ಮನ ಅಧೀನದಲ್ಲಿರುವ ಮುಖ್ಯಪ್ರಾಣನ ಅಧೀನನಾಗಿದ್ದುದರಿಂದ ಸಂಸಾರಕಾಲದಲ್ಲಿ ಅನುಭೂತಗಳಾದ ವಸ್ತುಗಳ ಸ್ಮೃತಿಯು ಅತನಿಗೆ ಬರುವುದು. (೬) ಭಕ್ತಿಯಿಂದ ಮುಖ್ಯಪ್ರಾಣನನ್ನು ಉಪಾಸನೆಮಾಡಿ ಆ ಮುಖ್ಯಪ್ರಾಣನ ಅನುಗ್ರಹವನ್ನು ಸಂಪಾದಿಸಿ ಅದರಿಂದ ಪ್ರಾಣನು ವಶನಾಗುತ್ತಾನೆ ಪ್ರಾಣನನ್ನು ವಶೀಕರಿಸಿಕೊಂಡರೆ ಮನಸ್ಸು ಮತ್ತು ಎಲ್ಲಾ ಇಂದ್ರಿಯಗಳೂ ಅಧೀನಗಳಾಗುತ್ತವೆ. ॥ ೭—೧ ॥ ॥ ೨ ॥

ಒಂದನೇ ಖಂಡವು ಮುಗಿಯಿತು.

ಎರಡನೇ ಖಂಡವು

ಪೀ—ಎಲೋ ದೇವತೆಗಳೇ ನಾನು ಶ್ರೇಷ್ಠನೆಂದಾದರೆ ನೀವೆಲ್ಲರೂ ನನಗೆ ಅನ್ನವನ್ನು ಕಲ್ಪಿಸಿರಿ, ಎಂದು ಮುಖ್ಯಪ್ರಾಣನು ಹೇಳಿದನು ಎನ್ನುತ್ತಾರೆ—

ಉ. ॥ ಸ ಹೋವಾಚ ಕಿಂ ಮೇಽನ್ನಂ ಭವಿಷ್ಯತೀತಿ ಯತ್ಕಿಂಚಿದಿದಮಾಶ್ವಭ್ಯ ಆಶಕುನಿಭ್ಯ ಇತಿ ಹೋಚುಸ್ತದ್ವಾ ಏತದನಸ್ಯಾನ್ನಮನೋ ಹೈವೈ ನಾಮ ಪ್ರತ್ಯಕ್ಷಂ ನ ಪ ವಾ ಏವಂವಿದಿ ಕಿಂಚನಾನನ್ನಂ ಭವತೀತಿ ॥ ೧ ॥

ಅ ॥ ನನಗೆ ಯಾವುದು ಅನ್ನವಾಗುವುದು? ಎಂದು ಮುಖ್ಯಪ್ರಾಣನು ಕೇಳಿದನು. ಆಗ ದೇವತೆಗಳು ಎಲೋ ಮುಖ್ಯಪ್ರಾಣನೇ ಜೀವವರ್ಗದಲ್ಲಿ ಉತ್ತಮಜೀವರನ್ನಾರಂಭಿಸಿ ನಾಯಿ ಹಕ್ಕಿಪರ್ಯಂತ ಪ್ರಾಣಿಗಳ ಸಮುದಾಯವು ಯೋಗ್ಯವಾದ ಯಾವ ಅನ್ನವನ್ನು ತಿನ್ನುತ್ತದೋ, ಅದೆಲ್ಲವೂ ನಿನಗೆ ಅನ್ನವು. ಎಂದು ಹೇಳಿದರು. (ಇಂದ್ರಿಯಾಭಿಮಾನಿಗಳಾದ ಅಗ್ನ್ಯಾದಿಗಳು ಮುಖ್ಯಪ್ರಾಣನಿಗೆ ಅನ್ನವನ್ನು ಸಮರ್ಪಿಸಿರುವರು. ಎಂದು ಮುಖ್ಯಪ್ರಾಣನಿಗೆ ಅನ್ನವನ್ನು ಕೊಟ್ಟರೆಂದು ಹೇಳಿದುದು ಮೊದಲೇ ಮುಖ್ಯಪ್ರಾಣನ ಅಧೀನವಲ್ಲಿರುವ ಅನ್ನವನ್ನು ಸಮರ್ಪಿಸಿರುವರು ಎನ್ನುತ್ತಾರೆ—) ಎಲ್ಲಾ ಪ್ರಾಣಿಗಳೂ ತಿನ್ನತಕ್ಕ ಅನ್ನವೆಲ್ಲವೂ ಮುಖ್ಯಪ್ರಾಣನ ಅನ್ನವೇ. (ಹೇಗೆಂದರೆ -) ಮುಖ್ಯಪ್ರಾಣನೇ ಎಲ್ಲಾ ಇಂದ್ರಿಯಗಳಲ್ಲಿಯೂ ಪ್ರೇರಕನಾಗಿ ಪ್ರತ್ಯಕ್ಷನಾಗಿರುವವನು. (ಹೀಗೆ ಪ್ರಾಣನನ್ನು ತಿಳಿದವನಿಗೆ ಫಲಹೇಳುತ್ತಾರೆ—)

ಎಲ್ಲಿಗೆ ಸ್ವಾಣನು ಹೋಗುತ್ತಾನೆಂದು ತಿಳಿದವನಿಗೆ ಅನ್ನವಾಗದಿರುವುದು ಬಹಳವೂ ಇಲ್ಲ. ಎಲ್ಲವು ತನಗೆ ಅನ್ನವೇ ಆಗುವುದು. (೮)

ಉ. ॥ ಸ ಹೋವಾಚ ಕಿಂ ನೋ ವಾಸೋ ಭವಿಷ್ಯತೀತ್ಯಾಪ ಇತಿ ಹೋ-ಚುಸ್ತಸ್ಮಾದ್ಯಾ ನಿಶದಲಿಷ್ಯಂತಃ ಪುರಸ್ತಾಚ್ಚೋಪರಿಷ್ಟಾಚ್ಚಾದ್ಭಿಃ ಪರಿದಧತಿ ಲಂಧುಕೋ ಹ ವಾಸೋ ಭವತ್ಯನಗ್ನೋ ಹ ಭವತಿ ॥ ೨ ॥

ಅ ॥ ಆ ನಿಲೆಗೆ ಮುಖ್ಯಪ್ರಾಣನು ತನಗೆ ವಸ್ತ್ರವು ಬೇಕಾದೆಡೆಯ ಮುಂದೆ ಕೇಳಲನು. ಆಗ ದೇವತೆಗಳು ಎಲ್ಲಿ ವ್ಯಾಪಿಸಿಗಳು ಕೊಡುವರೋ, ಅಲ್ಲಿ ನಿನಗೆ ವಸ್ತ್ರವು. ಎಂದು ಹೇಳಿದರು. (ಆ ವಿಷಯವನ್ನು ಜ್ಞಾನಿಗಳು ಅಭಾರವು ಸ್ವಯಾಗಿದೆ ಎನ್ನುತ್ತಾರೆ.) ನೀರು ಸ್ವಾಣನಿಗೆ ವಸ್ತ್ರವಾಗುವುದೆಂದಲೇ ಅನ್ನವನ್ನು ಪಾತ್ರವಿಶೇಷವಾದ ಶ್ರೋತ್ರಿಯು ಬ್ರಾಹ್ಮಣರು ಬಂಧುವಾಡುವುದಕ್ಕಿಂತ ಮೊದಲೂ ನೀರಿನಿಂದ ಅನ್ನವನ್ನು ಮುಚ್ಚುತ್ತಾರೆ. ಹಾಗೆ "ಪ್ರಾಣೋತ್ತರಗಳನ್ನು ಆಪೋಶನ ತೆಗೆದುಕೊಳ್ಳುತ್ತಾನೆ (ಮುಖ್ಯಪ್ರಾಣನಿಗೆ ವಸ್ತ್ರ ಎಂಬ ಬುದ್ಧಿಯಿಂದ ಭೋಜನಮಾಡುವುದಕ್ಕಿಂತ ಮೊದಲೂ ನೀರಿನಿಂದ ಆಪೋಶನ ತೆಗೆದುಕೊಳ್ಳುವವರಿಗೆ ಫಲ ಹೇಳುತ್ತಾರೆ.) ಜ್ಞಾನಸ್ವರೂಪವಾಗಿ ಆಪೋಶನ ತೆಗೆದುಕೊಳ್ಳುವವನು ದಿವ್ಯವಾದ ವಸ್ತ್ರವನ್ನು ಹೊಂದುತ್ತಾನೆ. ನನ್ನ (ಒತ್ತಕ್ಕೆ) ಯಾವನಾಗುವನೋ ಇವ ಎಂದರೆ—ಈ ದೇಹಕದಲ್ಲಿಯೂ ಪರಲೋಕದಲ್ಲಿಯೂ ದಿವ್ಯ ವಸ್ತ್ರಗಳಿಂದ ಅಲಂಕೃತನಾಗುತ್ತಾನೆ. (೯)

ಈ ಈ ಪ್ರಾಣವಿದ್ಯೆಯು ಪರಂಪರೆಯಿಂದ ಬಂದಿದೆಯೆಂದು ಎನ್ನುತ್ತಾರೆ

ಉ. ॥ ತದ್ಧೈತತ್ಸತ್ಯಕಾಮೋ ಜಾಬಾಲೋ ಗೋಶ್ರುತಯೇ ವೈಯಾ-ಘ್ರಪದ್ಯಾಯೋಕ್ತ್ವೋವಾಚ ಯದ್ಯಹ್ಯೇತಚ್ಛುಷ್ಕಾಯ ಸ್ಥಾಣವೇ ಬ್ರೂಯಾ-ಚ್ಛಾಯೇರನ್ನೇವಾಸ್ಮಿಂಚ್ಚಾಯಾ ಪ್ರರೋಹೇಯುಃ ಪಲಾಶಾನೀತಿ ॥ ೩ ॥

ಅ ॥ ಈ ಪ್ರಾಣವಿದ್ಯೆಯನ್ನು ಜಬಾಲೆಯ ಮಗನಾದ ಸತ್ಯಕಾಮನು ವ್ಯಾಘ್ರಪದ್ಯ ಎಂಬವನ ಮಗನಾದ ಗೋಶ್ರುತಿ ಎಂಬವನಿಗೆ ಉಪದೇಶಿಸಿ ಹೀಗೆಂದನು. ಪ್ರಾಣವಿದ್ಯೆಗೆ ಯೋಗ್ಯನಾದ ಅಧಿಕಾರಿಯು ಜನ್ಮಾಂತರ ಕರ್ಮಾನುಸಾರ ಸ್ಥಾಣು (ವೃಕ್ಷ) ಭಾವವನ್ನು ಹೊಂದಿದರೆ ಅಂತಹ ಒಣಗಿದ ಸ್ಥಾಣುವಿಗೂ ಈ ಪ್ರಾಣವಿದ್ಯೆಯನ್ನು ಯೋಗ್ಯನು ಉಪದೇಶಿಸಿದರೆ ಆ ಶುಷ್ಕವೃಕ್ಷದಲ್ಲಿಯೂ ಚಿಲ್ಲುಗಳು ಹುಟ್ಟುತ್ತವೆ ಎಲೆಗಳು ಬೆಳೆಯುವವು ಎಂದು ಹೇಳಿದರು. (೧೦)

ಈ - ತನಗೆ ಐಹಿಕ ಪಾರತ್ರಿಕ ಮಹತ್ವ ಸಿಗಬೇಕೆಂದು ಇಚ್ಛಿಸುವವನು ಪ್ರಾಣಾದಿಗಳೇ ದೇವತೆಯಾಗಿ ಯಜ್ಞ ಹೋಮವನ್ನು ಮಾಡಬೇಕೆನ್ನುತ್ತಾರೆ—

ಉ. ॥ ಅಥ ಯದಿ ಮಹಜ್ಜಿಗಮಿಷೇದಮೂವಾಸ್ಯಾಯಾಂ ದೀಕ್ಷಿತ್ವಾ

* ಅಮೃತೋಪಸ್ತರಣಮಸಿ ಎಲೋ ಬಿದಿ ಬೀಜ ಹಾಸುವ ವಸ್ತ್ರವಾಗಿರುವ ನೀನೆ ಫಲೋಪನದ ಆವಿಯಲ್ಲಿ ಆಪೋಶನ ತೆಗೆದುಕೊಂಡು ಆ ನೀರೆ ಪ್ರಾಣಾಯ ಸ್ವಾಹಾ ಇತ್ಯಾದಿ ಮಂತ್ರಗಳಿಂದ ಅನ್ನವನ್ನು ಆದರ ನೀರೆ ಅಮೃತಾಪಿಧಾನಮಸಿ ಎಲೋ ಬಿದಿ ಬೀಜ ಮುಚ್ಚುವ ಬಟ್ಟೆಯಾಗಿದ್ದಿ ಎನ್ನುತ್ತಾ ಅನ್ನವನ್ನು ಮುಚ್ಚುತ್ತಾರೆ

ಪೌರ್ಣಮಾಸ್ಯಾಂ ರಾತ್ರೌ ಸರ್ವೌಷಧಸ್ಯ ಮಂಥಂ ದಧಿಮಧುನೋರುಪ-ಮಥ್ಯ ಜ್ಯೇಷ್ಠಾಯ ಶ್ರೇಷ್ಠಾಯ ಸ್ವಾಹೇತ್ಯಗ್ನಾವಾಜ್ಯಸ್ಯ ಹುತ್ವಾ ಮಂಥೇ ಸಂಪಾತಮವನಯೇತ್ ॥ ೪ ॥

ಅ ॥ ಐಹಿಕ ಪಾರತ್ರಿಕ ಮಹತ್ತ್ವವನ್ನು ಹೊಂದಲಿಚ್ಛಿಸುವವನು ಅಮಾವಾಸ್ಯಾ ದಿನ ದೀಕ್ಷೆಗೆ ಕುಳಿತುಕೊಂಡು ಅಂದರೆ—ಪಕ್ಷಪರ್ಯಂತ ಕ್ಷೀರವ್ರತಾದಿಗಳನ್ನು ಮಾಡಿ ಮರಳಿ ಪೂರ್ಣಿಮಾದಿನ ರಾತ್ರಿಯಲ್ಲಿ ವ್ರೀಹಿ (ಬತ್ತ) ಯವ ಮೊದಲಾದ ಏಕತ್ತು ಧಾನ್ಯಗಳ ಜಳ್ಳು ಉಮಿ ತೌಡು ತೆಗೆದು ಕುಟ್ಟಿ ಮಾಡಿದ ಹಿಟ್ಟನ್ನು ಮಸುರು ಜೇನುತುಪ್ಪಗಳಿಂದ ಕಲಸಿ **ಜ್ಯೇಷ್ಠಾಯ ಶ್ರೇಷ್ಠಾಯ ಸ್ವಾಹಾ** ಎಂಬ ಮಂತ್ರದಿಂದ ಅಗ್ನಿಯಲ್ಲಿ ಆ ತುಪ್ಪದಿಂದ ಪರಿಶುದ್ಧವಾದ ಹಿಟ್ಟಿನ ಪಿಂಡವನ್ನು ಹೋಮಿಸಿ ಸ್ರುವ (ದ್ರವದ್ರವ್ಯವನ್ನು ತೆಗೆಯುವ ಸಾಧನ)ದಲ್ಲಿ ಸಂಬದ್ಧವಾದ ತುಪ್ಪವನ್ನು ಹೋಮಿಸಿದ ಹಿಟ್ಟಿನ ಪಿಂಡದಲ್ಲಿ ಧಾರಾಪೂರ್ವಕವಾಗಿ ಎರೆಯಬೇಕು. ॥ ೪ ॥

ಉ. ॥ ವಸಿಷ್ಠಾಯ ಸ್ವಾಹೇತ್ಯಗ್ನಾವಾಜ್ಯಸ್ಯ ಹುತ್ವಾ ಮಂಥೇ ಸಂಪಾತಮವನಯೇತ್ಪ್ರತಿಷ್ಠಾಯೈ ಸ್ವಾಹೇತ್ಯಗ್ನಾವಾಜ್ಯಸ್ಯ ಹುತ್ವಾ ಮಂಥೇ ಸಂಪಾತಮವನಯೇತ್ಸಂಪದೇ ಸ್ವಾಹೇತ್ಯಗ್ನಾವಾಜ್ಯಸ್ಯ ಹುತ್ವಾ ಮಂಥೇ ಸಂಪಾತಮವನಯೇದಾಯತನಾಯ ಸ್ವಾಹೇತ್ಯಗ್ನಾವಾಜ್ಯಸ್ಯ ಹುತ್ವಾ ಮಂಥೇ ಸಂಪಾತಮವನಯೇತ್ ॥ ೫ ॥

ಅ ॥ ಹೀಗೆಯೇ **ವಸಿಷ್ಠಾಯ ಸ್ವಾಹಾ, ಪ್ರತಿಷ್ಠಾಯೈ ಸ್ವಾಹಾ, ಸಂಪದೇ ಸ್ವಾಹಾ, ಆಯತನಾಯ ಸ್ವಾಹಾ** ಎಂಬ ನಾಲ್ಕು ವಾಕ್ಯಗಳಲ್ಲಿಯೂ ಹೀಗೆಯೇ ಅರ್ಥವನ್ನು ಇಟ್ಟುಕೊಳ್ಳಬೇಕು ॥೫॥

ಓ—ಹೋಮಮಾಡಿ ಉಳಿದ ಹಿಟ್ಟಿನ ಪಿಂಡವನ್ನು ಏನು ಮಾಡಬೇಕೆಂದರೆ—

ಉ. ॥ ಅಥ ಪ್ರತಿಸೃಪ್ಯಾಂಜಲೌ ಮಂಥಮಾಧಾಯ ಜಪತ್ಯನೋನಾಮಾಸ್ಯಮಾಹಿ ತೇ ಸರ್ವಮಿದಂ ಸ ಹಿ ಜ್ಯೇಷ್ಠಃ ಶ್ರೇಷ್ಠೋ ರಾಜಾಽಧಿಪತಿಃ ಸ ಮಾ ಜ್ಯೈಷ್ಠ್ಯಂ ಶ್ರೈಷ್ಠ್ಯಂ ರಾಜ್ಯಮಾಧಿಪತ್ಯಂ ಗಮಯತ್ಯ(ತ್ವ)ಹಮೇವೇದꣳ ಸರ್ವಮಸಾನೀತಿ ॥ ೬ ॥

ಅ ॥ ಹೋಮಿಸಿದ ಮೇಲೆ ಹೋಮಿಸಿ ಉಳಿದ ಹಿಟ್ಟಿನ ಪಿಂಡವನ್ನು ತೆಗೆದು ಅಗ್ನಿಗೆ ಸ್ವಲ್ಪ ಪಾಕಿ ಅಂಗೈಯಲ್ಲಿ ಇಟ್ಟುಕೊಂಡು ಯಜ್ಞದೇವತೆಯಾದ ಪ್ರಾಣನನ್ನು ಜಪಿಸಬೇಕು. ಎಲೋ ಮಂಥಾಭಿಮಾನಿಯಾದ ಪ್ರಾಣನೇ ನಿನಗೆ ಅಮಸ್ಕೆಂಮ ಹೆಸರು ಸಮಸ್ತ ಜಗತ್ತಿಗೆ ನೀನೇ ಸ್ವಾಮಿಯು ನಿನ್ನಿಂದೊಡಗೂಡಿ ನಿನ್ನ ಅಧೀನದಲ್ಲಿಯೇ ಇರುತ್ತದೆ. ಅದುಕಾರಣ ಮಂಥಾಭಿಮಾನಿಯಾದ ಮುಖ್ಯಪ್ರಾಣನು ವಯಸ್ಸಿನಿಂದ ಜ್ಯೇಷ್ಠನು, ಗುಣಗಳಿಂದ ಶ್ರೇಷ್ಠನು ತೃಪ್ತಿಗೊಳಿಸುವವನು, ಜೀವನ್ಮಾಗಿ ರಕ್ಷಿಸುವವನು, ಆ ದೇವತೆಯು ನನ್ನನ್ನು ಸವಾನಿಕರಿಂಗಿತ ಜ್ಯೇಷ್ಠನನ್ನಾಗಿಯೂ ಶ್ರೇಷ್ಠನನ್ನಾಗಿಯೂ ಮಾಡಲಿ, ರಾಜ್ಯವನ್ನು ಆಧಿಪತ್ಯವನ್ನು ಕೊಡಿಸಿಕೊಡಲಿ. ನಾನು ಸ್ವಯೋಗ್ಯ ಗುಣಗಳಿಂದ ಪೂರ್ಣನಾಗುವಂತೆ ಮಾಡಲಿ ಎಂದು ಜಪಿಸಬೇಕು. ॥ ೬ ॥

ಪೀ—ಮೀಗೆ ಜಪಿಸಿ ಮಂತ್ರವನ್ನು ಹೇಳಿಕೊಂಡು ಅದನ್ನು ಭಕ್ಷಿಸಬೇಕೆನ್ನುತ್ತಾರೆ—

ಉ. ॥ ಅಥ ಏಲ್ವೇತಯರ್ಚಾ ಸಚ್ಚ ಆಚಾಮತಿ ತತ್ಸವಿತುರ್ವೃಣೀಮಹ ಇತ್ಯಾಚಾಮತಿ ವಯಂ ದೇವಸ್ಯ ಭೋಜನಮಿತ್ಯಾಚಾಮತಿ ಶ್ರೇಷ್ಠಂ ಸರ್ವಧಾತಮಮಿತ್ಯಾಚಾಮತಿ ತುರಂ ಭಗಸ್ಯ ಧೀಮಹೀತಿ ಸರ್ವಂ ಪಿಬತಿ ॥

॥ ೭ ॥

ಅ ॥ ಬ್ರಾಹ್ಮಣನು ಮಾಡಿದ ನೀರು ಹೋಮವಾದ ಮೇಲೆ ಹೋಮವಾದ ಬಳಿಕ ಉಳಿದ ಮಂತ್ರ (ಭಿಕ್ಷೆಯ ಪಿಂಡ) ವನ್ನು ಸಾಲ್ಯ ಇಂಬಾಗಿ ಮುಂದೆ ಹೇಳುವ ಋಕ್ಕಿನಿಂದ ಒಂದೊಂದು ತುತ್ತನ್ನು ತಿನ್ನಬೇಕು. ತತ್ಸವಿತುರ್ವೃಣೀಮಹೇ ಎಂಬ ಮಂತ್ರದಿಂದ ಒಂದು ಪಾಪದಿಂದ ಒಂದನೇ ಕವಳವನ್ನೂ, ವಯಂ ದೇವಸ್ಯ ಭೋಜನಂ ಎಂಬ ಪಾದದಿಂದ ಎರಡನೇ ಕವಳವನ್ನೂ ಶ್ರೇಷ್ಠಂ ಸರ್ವಧಾತಮಂ ಎಂಬ ಪಾದದಿಂದ ಮೂರನೇ ಕವಳವನ್ನೂ ತುರಂ ಭಗಸ್ಯ ಧೀಮಹಿ ಎಂ. ನಾಲ್ಕನೇ ಪಾದದಿಂದ ನಿಷೇಧ ವಾಗಿಯೂ ಭಕ್ಷಿಸಬೇಕು ಹೀಗೆ ಇಪ್ಪತ್ತೊಕ್ಷಣ ಮಾಡಬೇಕು. ಸರ್ವಜಗತ್ತನ್ನು ಸೃಷ್ಟಿಸಿರುವ ತ್ರೀವನ್ನು ವಿ ಎಂದು ನಾವು ಭೋಜನವನ್ನೂ, ರಕ್ಷಣೆಯನ್ನೂ, ಸಮಸ್ತ ಭೋಗಗಳನ್ನೂ ಕೊಡುವವೆಂದು ಇಕ್ಷ್ವಾಕು ಮೊದಲಾದ ಸಮಸ್ತ ಗುಣಸ್ವರೂಪನಾದ ವಿಷ್ಣುವಿನ ಶ್ರೇಷ್ಠನಾದ ಮುಖ್ಯಪ್ರಾಣನನ್ನು ಸವಿಸ್ತ ದೇವತೆಗಳ ಬಿಕ್ಷವನ್ನಾಗಿ ಧ್ಯಾನಿಸುವೆವು ಎಂದು ವಿಶಿಷ್ಟಮಂತ್ರದ ಅರ್ಥವು. ೭ ॥

ಉ.॥ ನಿರ್ಗೃಜ್ಯ ಕಕ್ಷೇ ಸಂ ಚಮಸಂ ವಾ ಸಶ್ಚಾದಗ್ನೇಃ ಸಂವಿಶತಿ ಚರ್ಮಣಿ ವಾ ಸ್ಥಂಡಿಲೇ ವಾ ವಾಚಂಯಮೋಽಪ್ರಸಾಹಃ ಸ ಯದಿ ಸ್ತ್ರಿಯಂ ಪಶ್ಯೇತ್ ಸಮೃದ್ಧಂ ಕರ್ಮೇತಿ ವಿದ್ಯಾತ್ ॥ ೮ ॥

ಅ ॥ ಕಾಂಸ್ಯ (ಕಂಚಿನ) ಪಾತ್ರೆ ಮಯವಾದ ಅಥವಾ ಅತ್ತಿಮರದಾದ ಮಂಥಪಾತ್ರೆಯನ್ನು ಕೊಳೆದಿಟ್ಟು ಅಗ್ನಿಯ ಪಡುಭಾಗದಲ್ಲಿ ಕೃಷ್ಣಾಜಿನದಲ್ಲಿ ಅಥವಾ ವ್ಯಾಘ್ರ(ಹುಲಿ)ಚರ್ಮದಲ್ಲಿ ಸ್ಥಂಡಿಲದಲ್ಲಿ (ಕೇವಲ ಭೂಮಿಯಲ್ಲಿ) ಪೂರ್ವಾಗ್ರವಾಗಿ ಪಶ್ಚಿಮಕಂಠಗರ್ವಿತ ತಾನೊಬ್ಬನೇ ಯಜಮಾನನು ಸಿದ್ಧಿಸ ಬೇಕು. ಆ ಯಜಮಾನನು ಸ್ವಪ್ನಗಳಲ್ಲಿ ಮುತ್ತೈದೆಯರನ್ನು ಕಂಡರೆ ತನ್ನ ಕರ್ಮವು ಸಫಲವಾಯಿ ತೆಂದು ತಿಳಿಯಬೇಕು ॥ ೮ ॥

ಪೀ—ಸ್ವಪ್ನಕಾಲದಲ್ಲಿ ಮುತ್ತೈದೆಯರನ್ನು ನೋಡುವುದು ಕರ್ಮಸಮೃದ್ಧಿಯನ್ನು ಸೂಚಿಸಿದಂತೆ ಎಂಬಲ್ಲಿ ಪ್ರಮಾಣ ಹೇಳುತ್ತಾರೆ—

ಉ. ॥ ತದೇಷ ಶ್ಲೋಕಃ—ಯದಾ ಕರ್ಮಸು ಕಾಮ್ಯೇಷು ಸ್ತ್ರಿಯಂ ಸ್ವಪ್ನೇಷ್ವಭಿಪಶ್ಯತಿ । ಸಮೃದ್ಧಿಂ ತತ್ರ ಜಾನೀಯಾತ್ತಸ್ಮಿನ್ ಸ್ವಪ್ನನಿದರ್ಶನೇ ತಸ್ಮಿನ್ ಸ್ವಪ್ನನಿದರ್ಶನ ಇತಿ ॥ ಇತಿ ದ್ವಿತೀಯಃ ಖಂಡಃ ॥ ೨-೨ ॥ ॥ ೯ ॥

ಅ ॥ ಆ ಅರ್ಥದಲ್ಲಿ ಮುಂದಿನ ಶ್ಲೋಕವು ಸಮ್ಮತಿಯಾಗುತ್ತದೆ. ಕಾಮ್ಯಕರ್ಮಗಳನ್ನು ಮಾಡು ವಾಗ ಸ್ವಪ್ನಗಳಲ್ಲಿ ಸ್ತ್ರೀಯರನ್ನು ಕಂಡರೆ ಅಂತಹ ಸ್ವಪ್ನ ಎಂಬ ನಿಮಿತ್ತದಿಂದ ಯಾಜಮಾನ್ಯರಲ್ಲಿ

ಕರ್ಮಸಮೃದ್ಧಿಯನ್ನು ತಿಳಿಯಬೇಕು. ಈ ಅರ್ಥವು ಪ್ರಾವಾಣಿಕವೆಂದು ತಿಳಿಸುವುದಕ್ಕಾಗಿ ಎರಡು ಸಲ ಹೇಳಿದ್ದು. ॥ ೬—೭ ॥ ॥ ೯ ॥

ಟೀ—೧೯ನೇ ಮಂತ್ರದ ಅರ್ಥ ಹೇಳುತ್ತಾರೆ—

ಭಾ. ॥ (೧) ಅಕ್ಷೇಷು ಪ್ರತಿಪ್ರತಿ ಸ್ಥಿತತ್ವಾದನಃ ಪ್ರತ್ಯಕ್ಷಂ ॥ (೨) ಪ್ರಾಣವಿಜ್ಞಾನಯೋಗ್ಯಸ್ತು ರುದ್ರೋ ಮುಖ್ಯತಯಾ ಸೃಷ್ಟಃ । ತಸ್ಮಾತ್ಸ ಸರ್ವಭೋಕ್ತಾ ಸ್ಯಾತ್ತದನ್ಯೇಷಾಂ ಸ್ವಯೋಗ್ಯತಃ ॥ ಇತಿ ಚ ॥ (೩) ಸಿದ್ಧಮೇವಾನ್ನವಸ್ತ್ರಾದ್ಯಂ ವಿಷ್ಣೋಃ ಸ್ವಾತಂತ್ರ್ಯತಸ್ತದಾ। ಸ್ವಾರ್ಥಂ ಸಮರ್ಪಯೇದ್ವಿಷ್ಣೌ ಯಥಾ ಪ್ರಾಣೇ ಸುರಾಃ ಪುರಾ ॥ ಇತಿ ಕರ್ಮಾನುಪೂರ್ವ್ಯಾಂ ॥ (೪) ಪ್ರಾಣಸ್ಯ ವಸ್ತ್ರಬುದ್ಧ್ಯಾ ತು ಭೋಜನೋಭಯತಃ ಪಿಬನ್ । ಸ್ವರ್ಗೇ ಮುಕ್ತೌ ತಥಾ ದಿವ್ಯವಸ್ತ್ರಲಾಭೇ ಭವತ್ಯಲಂ ॥ ಇತಿ ಪ್ರಭಂಜನೇ ॥ ೧೦ ॥

ಅ ॥ (೧) ಪ್ರತಿ ಇಂದ್ರಿಯ ಮತ್ತು ಇಂದ್ರಿಯಾಭಿಮಾನಿ ದೇವತೆ ಇವರಲ್ಲಿ ನಿಯಾಮಕನಾಗಿ ಇದ್ದುದರಿಂದ ಮುಖ್ಯಪ್ರಾಣನು ಪ್ರತ್ಯಕ್ಷನೆನಿಸಿಸುತ್ತಾನೆ. (೨) (ನ ಹ ವಾ ಏವಂವಿದಿ ಕಿಂಚನಾನನ್ನಂ ಭವತಿ ಎಂಬುದರ ಅರ್ಥ ಹೇಳುತ್ತಾರೆ—) ಮುಖ್ಯವಾಗಿ ರುದ್ರನೇ ಪ್ರಾಣನನ್ನು ತಿಳಿಯಲಿಕ್ಕೆ ಯೋಗ್ಯನು ಏಕಕಾರಣ ಅವನೇ ಸರ್ವಭೋಕ್ತನು. ಬೇರೆಯವರಿಗೆ ಅವರವರ ಯೋಗ್ಯತಾನುಸಾರ ಸರ್ವಭೋಕ್ತೃತ್ವವನ್ನು (೩) (ಮುಖ್ಯಪ್ರಾಣನಿಗೆ ಅನ್ನವನ್ನೂ ವಸ್ತ್ರವನ್ನೂ ದೇವತೆಗಳು ಕೊಡುತ್ತಾರೆಂಬ ಹೇಳಿದುದು ಮೊದಲು ಇದ್ದುದನ್ನೇ ಕೊಡುವುದೋ, ಮೊದಲು ಆ ಮುಖ್ಯಪ್ರಾಣನಿಗೆ ಇಲ್ಲದಿದ್ದನ್ನು ಕೊಡುವುದೋ, ಮೊದಲು ಇರುದನ್ನೇ ಕೊಡುತ್ತಾರೆಂದು ಹೇಳಲಾಗುವುದಿಲ್ಲ. (ಏಕೆಂದರೆ—) ಮುಖ್ಯಪ್ರಾಣನದ್ದನ್ನೇ ಮುಖ್ಯಪ್ರಾಣನಿಗೆ ಕೊಡುತ್ತಾರೆಂಬುದು ಕೂಡಲಾರದು. ಮುಖ್ಯಪ್ರಾಣನಿಗೆ ಮೊದಲು ಇಲ್ಲದಿದ್ದುದನ್ನು ಕೊಡುತ್ತಾರೆಂಬುದೂ ಕೂಡುವುದಿಲ್ಲ. ಏಕೆಂದರೆ—ಮುಖ್ಯಪ್ರಾಣನು ದೇವತೆಗಳ ಅಧೀನದಲ್ಲಿದ್ದಾನೆಂದು ಅನ್ನ ಬೇಕಾಗುವುದು. ಎಂದರೆ—) ಶ್ರೀವಿಷ್ಣುವು ಸರ್ವಸ್ವತಂತ್ರನಾದುದರಿಂದ ಮೊದಲೇ ಆತನ ಅಧೀನದಲ್ಲಿರುವ ಅನ್ನವಸ್ತ್ರ ಮೊದಲಾದುದನ್ನು ಭಕ್ತರು ತಮ್ಮ ಪ್ರಯೋಜನಕ್ಕಾಗಿ ಹೇಗೆ ಸಮರ್ಪಿಸುತ್ತಾರೋ, ಹಾಗೆಯೇ ದೇವತೆಗಳೂ ಮೊದಲೇ ಆತನ ಅಧೀನದಲ್ಲಿರುವ ಅನ್ನವಸ್ತ್ರಗಳನ್ನು ಸಮರ್ಪಿಸಿದರು ಹೀಗೆ ಕರ್ಮಾನುಪೂರ್ವೀ ಎಂಬ ಗ್ರಂಥದಲ್ಲಿದೆ (೪) ೨೦ನೇ ಮಂತ್ರದಲ್ಲಿದ್ದ **ಲಂಭುಕೋ ಹ ವಾಸಃ** ಇತ್ಯಾದಿಗಳ ಅರ್ಥ ಹೇಳುತ್ತಾರೆ—) ಮುಖ್ಯಪ್ರಾಣನಿಗೆ ವಸ್ತ್ರವೆಂಬ ಬುದ್ಧಿಯಿಂದ ಭೋಜನದ ಪೂರ್ವೋತ್ತರಗಳಲ್ಲಿ ಆಪೋಶನ ತೆಗೆದುಕೊಳ್ಳುವವನು ಸ್ವರ್ಗದಲ್ಲಿಯೂ ಮೋಕ್ಷದಲ್ಲಿಯೂ ದಿವ್ಯವಾದ ವಸ್ತ್ರವನ್ನು ನಿಶ್ಚಯವಾಗಿಯೂ ಹೊಂದುತ್ತಾನೆ, ಎಂದು ಪ್ರಭಂಜನವೆಂಬ ಗ್ರಂಥದಲ್ಲಿದೆ. ॥ ೧೦ ॥

ಟೀ—**ಯದ್ಯಹ್ಯೇತತ್ ಶುಷ್ಕಾಯ ಸ್ಥಾಣವೇ ಬ್ರೂಯಾತ್** ಇತ್ಯಾದಿ ೨೩ನೇ ಮಂತ್ರದ ಅರ್ಥ ಹೇಳುತ್ತಾರೆ—

ಭಾ. ॥ (೧) ಯೋಗ್ಯಸ್ಯ ಪ್ರಾಣವಿದ್ಯಾಯಾಂ ಸ್ಥಾಣೋರಪಿ ಹಿ ತಚ್ಛ್ರುತೇಃ । ಪಲಾಶಾಷ್ಠಂ ಭವೇದತ್ರ ಪರತೋ ಮುಕ್ತಿರೇವ ಚ ॥ ವಿಷ್ಣೋರ್ಜ್ಞಾನಮನುಪ್ರಾಪ್ಯ ಭವೇನ್ನಾಸ್ಯಾತ್ರ ಸಂಶಯಃ । ಇತಿ ಪ್ರಾಣಸಂಹಿತಾಯಾಂ ॥ (೨) ಜ್ಯೇಷ್ಠಶ್ರೇಷ್ಠಾದಿಕೈರ್ಹರ್ತ್ಯಾ ಪ್ರಾಣಾಯಾತ್ರ ಪರತ್ರ ಚ । ಜ್ಯೇಷ್ಠಃ ಶ್ರೇಷ್ಠಃ ಸಮಾನೇಭ್ಯೋ ಭವೇನ್ನಾತ್ರ ವಿಚಾರಣಾ ॥

ಇತಿ ಚ ॥ (೩) ಸವಿತುರ್ಜಗತ್ಪ್ರಸವಿತುರ್ವಿಷ್ಣೋಃ ಸಕಾಶಾದ್ಯಯಂ ಭೋಜನಂ ರಕ್ಷಾಂ ಸರ್ವಭೋಗಾಂಶ್ಚ ಮೃಗೇಮಹೇ । ಭಗಸ್ಯ ಸಮಗ್ರೈಶ್ವರ್ಯಾದಿಸರ್ವಗುಣಾತ್ಮರೂಪಸ್ಯ ವಿಷ್ಣೋಃ । ಪುರುಷಂ ಪುರು ವಾಯುಂ ಶ್ರೇಷ್ಠಂ ಸರ್ವಧಾತ್ಮಕಾಣಾಂ ಉತ್ತಮಂ ಚ ಧೀಮಹಿ ॥ (೪) ನಾರಾಯಣೇಯಂ ತು ವಾಯುಂ ಚಿಂತಯಿತ್ವೋತ್ತಮೋತ್ತಮಂ । ಜಗತ್ಪ್ರಸವಿತುರ್ವಿಷ್ಣೋಃ ಸಕಾಶಾದ್ಭೋಗಮಾಪ್ನುಯಾತ್ ॥ ಇತಿ ಚ ॥ ೧....೪ ॥ ಇತಿ ದ್ವಿತೀಯಃ ಖಂಡಃ ॥ ೭–೨ ॥ ॥ ೨ ॥

ಅ ॥ (೧) ಪ್ರಾಣವಿದ್ಯೆಯನ್ನು ಯೋಗ್ಯಸಾಧನವನ್ನು ಜನ್ಮಾಂತರದ ಕರ್ಮಾನುಸಾರವಾಗಿ ವೃದ್ಧಿಯನ್ನು ಹೊಂದಿದರೆ—ಅಂತಹ *ಮುಂದಿನ ಪ್ರಾಣವಿದ್ಯೆಯನ್ನು ಪಡೆಯಿಬೇಕೆಂಬ ಆಸಕ್ತಿಯುಳ್ಳವನಾಗಿ ಎಲೆ ನೊದಲಾದವುಗಳು ತಾವು ಶ್ರೇಷ್ಠವೆಂಬ (ವೈಶ್ವಿಷ್ಟಭಾವವನ್ನು ಬಿಟ್ಟು ಮನುಷ್ಯನಾಗಿ ಹುಟ್ಟಿ ವಿಷ್ಣುವಿನ ಸ್ಥಾನವನ್ನು ಸಂಪಾದಿಸಿ ಸೋಮ್ಯನನ್ನು ಹೊಂದುತ್ತಾನೆ ಈ ವಿಷಯದಲ್ಲಿ ಸಂದೇಹವಿಲ್ಲ. ಏನು ಪ್ರಾಣನು ಎಲೆಯೆಲ್ಲದೆ (೨) (೧, ೫ ಮಂತ್ರಗಳಲ್ಲಿರುವ ಜ್ಯೇಷ್ಠಾಯ ಸ್ವಾಹಾ ಇತ್ಯಾದಿಗಳ ಅರ್ಥವನ್ನು ಪ್ರಮಾಣ ಹೇಳುತ್ತಾರೆ—) ಮುಖ್ಯಪ್ರಾಣನನ್ನೆ ಕ್ರೇಷ್ಠಿಸಿ ಜ್ಯೇಷ್ಠಾಯ ಶ್ರೇಷ್ಠಾಯ ಸ್ವಾಹಾ ಇತ್ಯಾದಿ ಮಂತ್ರಗಳಿಂದ ಹೋಮವನ್ನು ಮಾಡಿ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸಮಾನಕರಿಂತ ಶ್ರೇಷ್ಠನೂ ಶ್ರೇಷ್ಠನೂ ಆಗುವನು. ಈ ವಿಷಯದಲ್ಲಿ ಸಂದೇಹವಿಲ್ಲ. (೩) (ಮುಖ್ಯಪ್ರಾಣನೇ ದೇವತೆಯಾಗಿ ಯಜ್ಞ ಯಾಗವನ್ನು ಪ್ರಾರಂಭಿಸಿ ತತ್ಸವಿತುಃ ಎಂಬ ಸವಿತೃಮಂತ್ರವನ್ನು ಹೇಳಿದ್ದು ಹೇಗೆ ಕೂಡುತ್ತದೆ ಎಂದರೆ) ಸವಿತುಃ ಜಗತ್ತನ್ನು ಸೃಷ್ಟಿಮಾಡಿದ ವಿಷ್ಣುವಿನಿಂದ. ನಾವು †ಭೋಜನಂ ರಕ್ಷಣೆಯನ್ನೂ ಸಮಸ್ತ ಭೋಗಗಳನ್ನೂ ಹೊಂದುವೆವು. ಭಗಸ್ಯ ಸಂಪೂರ್ಣ ಐಶ್ವರ್ಯಾದಿ ಸರ್ವಗುಣ ಸ್ವರೂಪನಾದ ವಿಷ್ಣುವಿನ ಶ್ರೇಷ್ಠನಾದ ಮುಖ್ಯವಾಯುವನ್ನು ಸರ್ವಶ್ರೇಷ್ಠನನ್ನಾಗಿಯೂ, ಸರ್ವಜಗದ್ರಕ್ಷಕರಾದ ರುದ್ರಾದಿದೇವತೆಗಳಲ್ಲಿ ಉತ್ತಮನನ್ನಾಗಿಯೂ ಧ್ಯಾನಿಸುವೆವು. (ಅಮುಕಾರಣ ಪ್ರಾಣವಿಗೂ ಅದಿಕ್ಷನಿಗೂ ಜಕ್ಕಳೆಂಬ ಅಭಿಪ್ರಾಯದಿಂದ ಪ್ರಾಣನೇ ದೇವತೆಯಾಗಿ ಉಳ್ಳ ಯಾಗವನ್ನು ಪ್ರಾರಂಭಿಸಿ ಸಾವಿತ್ರ (ಸೂರ್ಯನ) ಮಂತ್ರವನ್ನು ಹೇಳಿದ್ದು ಎಂದು ಪರರು ಹೇಳುವುದು ಅಯುಕ್ತವು.) (೪) (ಪರರು ಹೇಳಿದ ಅರ್ಥವೇ ಏಕೆ ಅಗಲಾರದೆಂದರೆ—ಈ ಋಕ್ಕಿನ ಅರ್ಥವನ್ನು ಪ್ರಮಾಣ ಹೇಳಿ ವ್ಯಕ್ತೀಕರಿಸುತ್ತಾರೆ—) ಶ್ರೀನಾರಾಯಣನ ಶ್ರೇಷ್ಠನಾದ ಮುಖ್ಯಪ್ರಾಣನನ್ನು ಉತ್ತಮೋತ್ತಮನನ್ನಾಗಿ ಧ್ಯಾನಿಸಿ ಜಗತ್ತನ್ನು ಸೃಷ್ಟಿಸಿರುವ ವಿಷ್ಣುವಿನಿಂದ ನಿಖಿಲಭೋಗಗಳನ್ನು ಹೊಂದುವೆವು. ॥ ೭–೨ ॥ ॥ ೨ ॥

ಎರಡನೇ ಖಂಡವು ಮುಗಿಯಿತು.

೩ನೇ ಖಂಡವು

೨೯ ಖಂಡಗಳಲ್ಲಿ ಅತಿರಹಸ್ಯವಾದ ಮುಖ್ಯಪ್ರಾಣನ ವಿದ್ಯೆಯನ್ನು ಹೇಳಿರುವರು. ಈಗ ವೈರಾಗ್ಯವು ಹುಟ್ಟುವುದಕ್ಕಾಗಿ ಪರಬ್ರಹ್ಮನನ್ನು ಹೇಳುವ ಪಂಚಾಗ್ನಿ ವಿದ್ಯೆಯನ್ನೂ, ಧೂಮಮಾರ್ಗವನ್ನೂ ಅರ್ಚಿರಾದಿ ಮಾರ್ಗವನ್ನೂ ಪ್ರಾಚೀನಕಥೆ ಹೇಳಿಕೊಂಡು ಹೇಳುತ್ತಾರೆ—

* ಸ್ಥೂಲ ಜಂಗಮಾತ್ಮಕವಾದ ಈ ಪ್ರಪಂಚದಲ್ಲಿ ಸ್ಥೂಲದೇಹದ ಪ್ರತ್ಯಕ್ಷಜೀವನೂ ಯೋಗ್ಯನಾಗಿದ್ದು ಈ ಪ್ರಾಣವಿದ್ಯೆಯನ್ನು ಕೇಳಿದರೆ ಮೋಕ್ಷವನ್ನು ಹೊಂದುತ್ತಾನೆನ್ನುವಾಗ ಅಧಿಕಾರ ಜಂಗಮಜೀವರು ಈ ವಿದ್ಯೆಯನ್ನು ಕೇಳಿದರೆ ಮೋಕ್ಷ ಹೊಂದುತ್ತಾನೆಂಬುದು ಸುತರಾಂ ಸಿದ್ಧವಾಗುತ್ತದೆ

† ಭುಜ ಪಾಲನಾಭ್ಯವಹಾರಯೋಃ ಎಂಬ ಧಾತುವಿನ್ನಿಂದ ಈ ಎರಡು ಅಕ್ಷರಗಳು ಸಿದ್ಧವಾಗುತ್ತವೆ

ಉ. ॥ ಶ್ವೇತಕೇತುರ್ಹಾರುಣೇಯಃ ಪಂಚಾಲಾನಾಗ್ಂ ಸಮಿತಿಮೇ-ಯಾಯ ತಗ್ಂ ಹ ಪ್ರವಾಹಣೋ ಜೈಬಲಿರುವಾಚ ಕುಮಾರಾಕ್ನು ತ್ವಾsಶಿಷ-ತ್ಪಿತೇತ್ಯನು ಹಿ ಭಗವ ಇತಿ ॥ ೧ ॥

ಅ ॥ ಅರುಣೆಯ ಮಗನಾದ ಶ್ವೇತಕೇತು ಎಂಬವನು (ತಂದೆಯವರಿಂದ ವಿದ್ಯಾಭ್ಯಾಸ ಮಾಡಿ ತನ್ನ ಪಾಂಡಿತ್ಯವನ್ನು ತೋರ್ಪಡಿಸುವುದಕ್ಕಾಗಿ) ಪಂಚಾಲ ದೇಶಾಧಿಪತಿಯ ಸಭೆಗೆ ಹೋದನು. ಆಗ ಜಿಬಲನ ಮಗನಾದ ಪ್ರವಾಹಣ ರಾಜನು ಶ್ವೇತಕೇತುವಿಗೆ ಎಲೋ ಕುಮಾರನೇ ನಿನ್ನ ತಂದೆಯು ನಿನಗೆ ವಿದ್ಯೆಯನ್ನು ಉಪದೇಶ ಮಾಡಿರುವನೊ ಏನು? ಎಂದು (ಅಹಂಕಾರವನ್ನು ಕಳೆಯುವುದಕ್ಕಾಗಿ) ಕೇಳಿದನು. ಆಗ ಕುಮಾರನು ಪೂಜ್ಯನಾದ ರಾಜನೇ ತಂದೆಯವರು ನನಗೆ ಉಪದೇಶ ಮಾಡಿರುವರು, ಎಂದನು. ॥ ೧ ॥

ಪೀ—ಆಗ ಪ್ರವಾಹಣರಾಜನು ಕೇಳುತ್ತಾನೆ—

ಉ. ॥ ವೇತ್ಥ ಯದಿತೋsಧಿಪ್ರಜಾಃ ಪ್ರಯಂತೀತಿ ನ ಭಗವ ಇತಿ ವೇತ್ಥ ಯಥಾ ಪುನರಾವರ್ತಂತಾಗ್ಂ ಇತಿ ನ ಭಗವ ಇತಿ ವೇತ್ಥ ಪಥೋರ್ದೇ-ವಯಾನಸ್ಯ ಪಿತೃಯಾಣಸ್ಯ ಚ ವ್ಯಾವರ್ತನಾಗ್ಂ ಇತಿ ನ ಭಗವ ಇತಿ ॥ ೨ ॥

ಅ ॥ (1) ಈ ಲೋಕದಿಂದ ಲೋಕಾಂತರಕ್ಕೆ ಹೋಗುವ ಪ್ರಜೆಗಳು ಯಾವ ಮಾರ್ಗದಿಂದ ಬ್ರಹ್ಮ ಲೋಕಕ್ಕಾಗಲೀ ಚಂದ್ರಲೋಕಕ್ಕಾಗಲೀ ಹೋಗುತ್ತಾರೋ ಅಂತಹ ಮಾರ್ಗವನ್ನು ತಿಳಿದಿರುತ್ತೀಯೋ ಏನು? ಎಂದು ಪ್ರವಾಹಣರಾಜನು ಕೇಳಿದನು. ಆಗ ಶ್ವೇತಕೇತ ವು ರಾಜನೇ ನಾನು ಅದನ್ನು ತಿಳಿಯಲಿಲ್ಲವೆಂದನು. (2) ಮರಳಿ ರಾಜನು ಪುನರಾವೃತ್ತಿಯುಳ್ಳ ಚಂದ್ರಲೋಕಕ್ಕೆ ಹೋದ ಪ್ರಜೆಗಳು ಯಾವ ಮಾರ್ಗದಿಂದ ಈ ಲೋಕಕ್ಕೆ ತಿರುಗಿಬರುತ್ತಾರೋ ಅದನ್ನು ತಿಳಿದಿರುತ್ತೀಯೋ ಏನು? ಎಂದು ಕೇಳಿದನು. (ಅಂದರೆ—ಹೋದ ಮಾರ್ಗದಿಂದಲೇ ತಿರುಗಿಬರುವುದೋ, ಬೇರೆ ಮಾರ್ಗದಿಂದಲೋ ಎಂದನು.) ಶ್ವೇತ ಕೇತುವು ಅದನ್ನು ತಿಳಿಯಲಿಲ್ಲವೆಂದನು. (3) ಮರಳಿ ಪ್ರವಾಹಣರಾಜನು ಮೂರನೇ ಪ್ರಶ್ನೆ ಕೇಳುತ್ತಾನೆ. ದೇವಯಾನ (ಅಹರಾದಿಮಾರ್ಗ) ಪಿತೃಯಾನ (ಧೂಮಾದಿಮಾರ್ಗ) ಗಳೆಂಬ ಮಾರ್ಗಗಳ ಮಧ್ಯದಲ್ಲಿ ಹೊಂದಲ್ಪಡತಕ್ಕ ಸ್ಥಾನಗಳು ಯಾವ ರೀತಿಯಾಗಿ ಇರುತ್ತವೋ ಆ ಪ್ರಕಾರವನ್ನು ತಿಳಿದಿರುತ್ತೀಯೋ ಏನು? ಎಂದನು. ಅಥವಾ ದೇವಯಾನವನ್ನು ಹೊಂದುವ ಸಾಧನವನ್ನೂ ಪಿತೃಯಾನವನ್ನು ಹೊಂದುವ ಸಾಧನವನ್ನೂ ತಿಳಿದಿರುತ್ತೀಯೋ ಏನು? ಎಂದನು. ಶ್ವೇತಕೇತುವು ಅದನ್ನು ತಿಳಿಯಲಿಲ್ಲವೆಂದನು. ॥೨॥

ಪೀ—ನಾಲ್ಕನೇ ಪ್ರಶ್ನೆ ಕೇಳುತ್ತಾನೆ—

ಉ. ॥ ವೇತ್ಥ ಯಥಾಸೌ ಲೋಕೋ ನ ಸಂಪೂರ್ಯತಾ ಇತಿ ನ ಭಗವ ಇತಿ ವೇತ್ಥ ಯಥಾ ಪಂಚಮ್ಯಾಮಾಹುತಾವಾಪಃ ಪುರುಷವಚಸೋ ಭವಂತೀತಿ ನೈವ ಭಗವ ಇತಿ ॥ ೩ ॥

ಅ ॥ ಭೂಲೋಕದಿಂದ ಮತ್ತೊಮತ್ತು ಮೇಲಿನ ಲೋಕಕ್ಕೆ ಹೋದವರಿಂದ ಪರಲೋಕವು ತುಂಬದಿರಲು ಕಾರಣವೇನು? ಅದನ್ನು ತಿಳಿದಿರುತ್ತೀಯೋ ಏನು? ಎಂದು ಪ್ರವಾಹಣನ ಪ್ರಶ್ನೆಗೆ ಶ್ವೇತ

ಕೇತುವು ತಿಳಿಯಲಿಲ್ಲವೆಂದು ಉತ್ತರವಿಡಿದನು. (ಮನೇ ಪ್ರಶ್ನೆಯನ್ನು ಕೇಳುತ್ತಾನೆ) ಯಾವ ಕ್ರಮದಿಂದ ಯಾವ ಪ್ರಕಾರದಿಂದ ಇದನೇ ಅಮುತಿಯು ಹೋಮಿಸಲ್ಪಡುತ್ತಿರಲು (ಅಂದರೆ—ಸ್ತ್ರೀಯರಲ್ಲಿ ರೇತಸ್ಸನ್ನು ಇಟ್ಟಾಗ) ಜಲ ಮೊದಲಾದ ಪಂಚಮುಪಾಧೂತಗಳಿಂದ ಕೂಡಿದ ಜೀವರು, ಪುರುಷರು, ಸ್ತ್ರೀಯರು ಎಂಬ ಹೆಸರುಳ್ಳವರಾಗುತ್ತಾರೋ, ಆ ಕ್ರಮವನ್ನು ಆ ಪ್ರಕಾರವನ್ನು ತಿಳಿದಿರುತ್ತೀಯೋ ಏನು? ಎಂದನು. ಆಗ ಶ್ವೇತಕೇತುವು ಅದನ್ನು ನಾನು ತಿಳಿಯಲಿಲ್ಲವೆಂದನು. ॥ ೩ ॥

ಪೀ— ಪ್ರವಾಹಣರಾಜನು ಹೇಳುತ್ತಾನೆ—

ಉ. ॥ ಅಥ ನು ಕಿಮನುಶಿಷ್ಯೋವೋಚಥಾ ಯೋ ಹೀಮಾನಿ ನ ವಿದ್ಯಾತ್ಕಥಂ ಸೋಽನುಶಿಷ್ಯೋ ಬ್ರುವೀತೇತಿ ಸ ಹಾಯಸ್ತ ಪಿತುರರ್ಧಮೇಯಾಯ ತಂ ಹೋವಾಚಾನನುಶಿಷ್ಯ ವಾವ ಕಿಲ ಮಾ ಭಗವಾನಬ್ರವೀದನುತ್ಥಾಶಿಷಮಿತಿ ॥ ೪ ॥

ಅ ॥ ಎಲೋ ಶ್ವೇತಕೇತುವೇ, ಏನಿಗೆ ತಿಳಿಯದಿದ್ದ ನೀನು ತಂದೆಯಿಂದ ಉಪದೇಶಿಸಲ್ಪಟ್ಟವನು ಆಗಿರುತ್ತೀಯೆಂದ. ಹೇಗೆ ಹೇಳಿದಿ. ನಾನು ಹೇಳಿದ ಪ್ರಮೇಯಗಳಲ್ಲಿ ಒಂದನ್ನೂ ತಿಳಿಯದವನು ವಿದ್ವಾಂಸನು. ತಂದೆಯವರಿಂದ ಉಪದೇಶ ಪಡೆದವನು ಎಂದು ಹೇಗೆ ಹೇಳಿಯಾನು? ಎಂದು ಪ್ರವಾಹಣನು ಕೇಳಿದನು. ಆಗ ಶ್ವೇತಕೇತುವು ಉತ್ತರಕೊಡಲಿಕ್ಕೆ ಅಶಕ್ತನಾಗಿ ದುಃಖದಿಂದ ತನ್ನ ತಂದೆಯು ಸ್ಥಾನಕ್ಕೆ ಹೋಗಿ ತಂದೆಗೆ ಹೇಳಿದನು ಎಲೋ ಪೂಜ್ಯರೇ ನನಗೆ ಚೆನ್ನಾಗಿ ವಿದ್ಯೋಪದೇಶ ಮಾಡದೇನೇ ನಿನಗೆ ವಿದ್ಯೋಪದೇಶ ಮಾಡಿರುವೆನೆಂದು ನನಗೆ ನೀವು ಹೇಳಿರುವಿರಲ್ಲ. ॥ ೪ ॥

ಉ. ॥ ಪಂಚನೂ ರಾಜನ್ಯಬಂಧೂ ಶ್ರುಶ್ಮಾನಪ್ರಾಕ್ರೀತ್ತೇಷಾಂ ನೈಕಂಚನಾಶಕಂ ವಿನಕ್ತುಮಿತಿ ಸ ಹೋವಾಚ ಯಥಾ ಮಾ ತ್ವಂ ತಾತ್ತೈತಾನವದೋ ಯಥಾಽಹಮೇಷಾಂ ನೈಕಂಚನ ವೇದ ಯದ್ಯಹಮಿಮಾನವೇದಿಷ್ಯಂ ಕಥಂ ತೇನಾವಕ್ಷ್ಯಮಿತಿ ॥ ೫ ॥

ಅ ॥ *ರಾಜಾಧಮನು ನನ್ನೊತನೆ ಏನು ಕೇಳಲರ್ಹಗಳಾದ ಪ್ರಮೇಯಗಳನ್ನ ಕೇಳಿರುವನು. ಅವುಗಳಲ್ಲಿ ಒಂದು ಪ್ರಶ್ನೆಗೂ ಉತ್ತರಕೊಡಲಿಕ್ಕೆ ನಾನು ಶಕ್ತನಾಗಿರಲಿಲ್ಲವೆನ್ನುತ್ತಾ ಪ್ರಶ್ನೆ ವಾಕ್ಯಗಳನ್ನೆಲ್ಲಾ ಹೇಳಿ ಅವುಗಳಿಗೆ ಉತ್ತರಕೊಡದೇಕೆಂದು ಪ್ರಾರ್ಥಿಸಿಕೊಂಡನು. ಆಗ ತಂದೆಯು ಮಗನನ್ನು ಸಮಾಧಾನಗೊಳಿಸಿ ಎಲೋ ಮಗನೇ ಈ ಪ್ರಶ್ನೆಗಳಿಗೆ ಉತ್ತರ ಕೊಡದೇಕೆಂದು ನನ್ನೊತನೇ ನೀನು ಕೇಳಿರುತ್ತಿ. ನಾನು ಈ ಪ್ರಶ್ನೆಗಳಲ್ಲಿ ಒಂದಕ್ಕೂ ಉತ್ತರವನ್ನು ತಿಳಿಯಲಾರೆ ನಾನು ತಿಳಿದಿದ್ದರೆ ಪ್ರಿಯನಾದ ನಿನಗೆ ಹೇಗೆ ಹೇಳದಿರುವೆನು. (ತಿಳಿದ ಪ್ರಮೇಯವನ್ನೆಲ್ಲಾ ನಿನಗೆ ನಾನು ಹೇಳಿರುವೆನು. ರಾಜನು ಕೇಳಿದ ವಿದ್ಯೆಯಲ್ಲಿ ಇಚ್ಛೆಯಿದ್ದರೆ ರಾಜನ ಬಳಿಗೆ ಬಾ ಅಲ್ಲಿ ವಿದ್ಯಾಭ್ಯಾಸಕ್ಕಾಗಿ ಬ್ರಹ್ಮಚರ್ಯವನ್ನು ಕೈಗೊಳ್ಳುವ ಎಂದು ತಂದೆಯು ಹೇಳಿದಾಗ ಮಗನು ನೀನೇ ಹೋಗಿರಿ ಎಂದನು.) ॥ ೫ ॥

* ಪ್ರವಾಹಣನು ಯಜ್ಞಸಿ ಕ್ಷತ್ರಿಯರಲ್ಲಿ ಶ್ರೇಷ್ಠನೇ ಆಗಿರುತ್ತಾನೆ ಆದರೂ ಶ್ವೇತಕೇತುವಿಗೆ ಉತ್ತರಕೊಡಲಿಕ್ಕೆ ಸಾಧ್ಯವಾಗದಿರುವುದರಿಂದ ಇಲ್ಲಿ ಏಂಬ ರಾಜನ್ಯಬಂಧು: ಕ್ಷತ್ರಿಯಾಧಮನೆಂದು ಹೇಳಿದ್ದು

ಉ. ॥ ಸ ಹ ಗೌತಮೋ ರಾಜ್ಞೋಽರ್ಧಮೇಯಾಯ ತಸ್ಮೈ ಹ ಪ್ರಾಪ್ತಾಯಾರ್ಹಾಂ ಚಕಾರ ಸ ಹ ಪ್ರಾತಃ ಸಭಾಗ ಉದೇಯಾಯ ತಂ ಹೋವಾಚ ಮಾನುಷಸ್ಯ ಭಗವನ್ ಗೌತಮ ವಿತ್ತಸ್ಯ ವರಂ ವೃಣೀಷ್ಠಾ ಇತಿ ಸ ಹೋವಾಚ ತವೈವ ರಾಜನ್ಮಾನುಷಂ ವಿತ್ತಂ ಯೂಮೇವ ಕುಮಾರಸ್ಯಾಂತೇ ವಾಚನುಭಾಷಥಾಸ್ತಾಮೇವ ಮೇ ಬ್ರೂಹೀತಿ ॥ ೬ ॥

ಅ ॥ ಆ ಮೇಲೆ ತಂದೆಯಾದ ಗೌತಮರು ರಾಜನ ಸ್ಥಾನಕ್ಕೆ ಹೋದರು. ರಾಜನು ಬಂದಿರತಕ್ಕ ಗೌತಮರಿಗೆ ಪೂಜೆಮಾಡಿದನು. ಗೌತಮರು ಆ ದಿನ ಅಲ್ಲಿ ಉಳಿದು ಮರುದಿನ ಪ್ರಾತಃಕಾಲದಲ್ಲಿ ರಾಜನು ಸಭೆಗೆ ಹೋದಾಗ ಕೈಕಾಣಿಕೆ ಹಿಡಿದುಕೊಂಡು ರಾಜನ ಬಳಿಗೆ ಹೋದರು. ರಾಜನು ದೈವವಿತ್ತ (ವಿದ್ಯೆ) ವನ್ನ ಪೇಕ್ಷಿಸಿ ಗೌತಮರು ಬಂದದ್ದೆಂದು ಅವರ ಮನಸ್ಸಿನ ಅಭಿಪ್ರಾಯ ತಿಳಿದು, ಎಲೋ ಗೌತಮರೇ ಆನೆ. ಕುದುರೆ. ಗೋವು, ಹಿರಣ್ಯ ಮೊದಲಾದ ಮಾನುಷವಿತ್ತವನ್ನು ಹೊಂದಿರಿ ಎಂದನು. ಆಗ ಗೌತಮರು ಎಲೋ ರಾಜನೇ ಮನುಷ್ಯವಿತ್ತವೆಲ್ಲವೂ ನಿನಗೇನೇ ಇರಲಿ. ನನ್ನ ಮಗನಿಗೆ ಯಾವ ಪ್ರಶ್ನೆ ಕೇಳಿರುತ್ತೀಯೋ, ಆದನ್ನೇ (ಆದಕ್ಕೆ ಉತ್ತರವನ್ನೇ) ನನಗೆ ಹೇಳು ಎಂದು ಗೌತಮರು ಹೇಳಿದರು. ॥ ೬ ॥

ಉ.॥ ಸ ಹ ಕೃಚ್ಛ್ರೀ ಬಭೂವ ತಂ ಹ ಚಿರಂ ವಸೇತ್ಯಾಜ್ಞಾಪಯಾಂಚಕಾರ ತಂ ಹೋವಾಚ ಯಥಾ ಮಾ ತ್ವಂ ಗೌತಮಾವದೋ ಯಥೇಯಂ ನ ಪ್ರಾಕ್ತ್ವತ್ತು ಪುರಾ ವಿದ್ಯಾ ಬ್ರಾಹ್ಮಣಾನ್ ಗಚ್ಛತಿ ತಸ್ಮಾದು ಸರ್ವೇಷು ಲೋಕೇಷು ಕ್ಷತ್ರಸ್ಯೈವ ಪ್ರಶಾಸನಮಭೂದಿತಿ ತಸ್ಮೈ ಹೋವಾಚ ॥ ಇತಿ ತೃತೀಯಃ ಖಂಡಃ ॥ ೭-೩ ॥ ॥ ೭ ॥

ಅ ॥ ಆಗ ರಾಜನು ಗೌತಮರು ಕೇಳಿದ ಪ್ರಮೇಯವು ಅತಿ ಗೋಪ್ಯವಾಗಿರುವ ಪ್ರಯುಕ್ತ (ಏನು ಮಾಡುವುದೆಂದು ತಿಳಿಯದೆ) ಕ್ಲೇಶಪಟ್ಟನು. (**ನಾಸಂವತ್ಸರವಾಸಿನೇ ಪ್ರಬ್ರೂಯಾತ್** ಸಂವತ್ಸರ ಪರ್ಯಂತ ಅವಾಸಮಾಡದಿರುವವನಿಗೆ ಉಪದೇಶಿಸಬಾರದು, ಎಂಬ ಶಾಸ್ತ್ರಾನುಸಾರ) ರಾಜನು ಆ ಗೌತಮರಿಗೆ ಬಹುಕಾಲ ಅವಾಸ ಮಾಡಿರಿ. ಎಂದರುಹಿದನು. ರಾಜನು ಗೌತಮರಿಗೆ ಹೇಳಿದನು. ಎಲೋ ಗೌತಮರೇ ನೀವು ಯಾವ ವಿದ್ಯೆಯನ್ನು ಹೇಳಬೇಕೆಂದು ನನ್ನೊಡನೆ ಹೇಳಿರುವಿರೋ, ಈ ಪಂಚಾಗ್ನಿ ವಿದ್ಯೆಯು ನಿಮಗಿಂತ ಮೊದಲು ಬ್ರಾಹ್ಮಣರಲ್ಲಿ ಇರಲೇ ಇಲ್ಲ. (ಈ ವಿದ್ಯೆಯು ಕ್ಷತ್ರಿಯರಿಗೇನೇ ಅಸಾಧಾರಣವಾದ ವಿದ್ಯೆಯು.) ಈ ವಿದ್ಯೆಯು ಕ್ಷತ್ರಿಯರಲ್ಲಿ ಮಾತ್ರ ಇರತಕ್ಕುದಾದಪ್ರಯುಕ್ತವೇ ಈ ವಿದ್ಯಾಭ್ಯಾಸದಿಂದಲೇ ಎಲ್ಲಾ ಲೋಕಗಳಲ್ಲಿ ಕ್ಷತ್ರಿಯರಿಗೇನೇ ರಾಜ್ಯಪರಿಪಾಲನಾದಿ ಅಧಿಕಾರಗಳು ಬಂದಿವೆ. ಎಂದು ಹೇಳಿ ರಾಜನು ಗೌತಮರಿಗೆ ವಿದ್ಯೆಯನ್ನು ಹೇಳಿದನು. ॥ ೭—೩ ॥ ॥ ೭ ॥

ಮೂರನೇ ಖಂಡವು ಮುಗಿಯಿತು.

ಎನೇ ಖಂಡವು

೫–ಶ್ರದ್ಧಮದ ಸಾಲ್ಕ ಪ್ರಶ್ನೆಗಳಿಗೆ ಉತ್ತರ ಹೇಳಲಿಕ್ಕೆ ಐದನೇ ಪ್ರಶ್ನೆಯು ಬುತ್ತರದ ಅಪೇಕ್ಷೆಯಿದ್ದಪ್ರಯುಕ್ತ ಮೊದಲು ಐದನೇ ಪ್ರಶ್ನೆಗೆ ರಾಜನು ಉತ್ತರ ಹೇಳುತ್ತಾ ಅದಕ್ಕೆ ಜೀವನಿಗೆ ವೈರಾಗ್ಯವು ಹುಟ್ಟುವದಕ್ಕಾಗಿ ಜೀವನು ಸ್ವರ್ಗದಿಂದ ಬರುವ ಪ್ರಕಾರವನ್ನು ಹೇಳುತ್ತಾ ಪಂಚಾಗ್ನಿ ವಿದ್ಯೆಯನ್ನು ಐದು ಖಂಡಗಳಲ್ಲಿ ಹೇಳುತ್ತಾರೆ.

ಓ. ॥ ಅಸೌ ವಾವ ಲೋಕೋ ಗೌತಮಾಗ್ನಿಸ್ತಸ್ಯಾದಿತ್ಯ ಏವ ಸಮಿ-ದ್ರಶ್ಮಯೋ ಧೂಮೋಽಹರರ್ಚಿಶ್ಚಂದ್ರಮಾ ಅಂಗಾರಾ ನಕ್ಷತ್ರಾಣಿ ವಿಸ್ಫು-ಲಿಂಗಾ ॥ ೧ ॥

ಅ ॥ ಎಲೋ ಗೌತಮನೇ, ಮನುಷ್ಯಾಗ್ನಿಸಂಜ್ಞಕನಿಗೆ ಪ್ರಕಾರವೂಪವಾದ ದ್ಯುಲೋಕವಷ್ಟಿದ್ದ ಶ್ರೀನಾರಾಯಣನೇ ಸರ್ವಜಂತುಗಳಿಗಾದಿಯವನೆಂದರಿಂದಲೂ ಸರ್ವಾಂಗಗಳಿಗೆ ಪ್ರೇರಕನಾದುದರಿಂದಲೂ ಅಗ್ನಿ ಎನಿಸಿಕೊಂಡವನು. ಆ ದ್ಯುಲೋಕದಲ್ಲಿದ್ದ ನಾರಾಯಣನು ಪುನ: ನಾರಾಯಣಾವಿದೂರದಿಂದ ಬರುವ ರೂಪಗಳುಳ್ಳವನು. ಆ ದ್ಯುಲೋಕದೊಳಗಣ ನಾರಾಯಣನೆಂಬ ಅಗ್ನಿಗೆ ಆಯುಷ್ಯವನ್ನು ತೆಗೆದು ಕೊಳ್ಳುವದರಿಂದ ಅದಿತ್ಯನೇ ಆದಿತ್ಯದೊಳಗಣ ನಾರಾಯಣ ನಾರಾಯಣನು ತನ್ನಾ ಪ್ರಕಾರಗೊಳಿಸುವದರಿಂದ ಸಮಿತ್ ಎನಿಸಿಕೊಂಡವನು ಸಮಿಧೆಯು ಸ್ಥಾನವು. ಶ್ರೀಪತಿಯು ಸುಖಸ್ವರೂಪವಾದುದರಿಂದ ರಶ್ಮಿ ಎನಿಸಿಕೊಂಡ ರಶ್ಮಿಯೊಳಗಣ ನಾರಾಯಣ ವಾಸುದೇವನು ಭಕ್ತರ ಅಜ್ಞಾನಾದಿಗಳನ್ನು ಕಳೆಯುವದರಿಂದ ಧೂಮ (ಹೊಗೆ) ನೆನಿಸಿಕೊಂಡವನು. ಧೂಮಸ್ಥಾನವಾಗಿರುವವನು. ತಮ (ಕಗ್ಗತ್ತಲೆ) ಸ್ವರೂಪಕ್ಕಿಂತಲೂ ಅಧಿಕವಾದುದರಿಂದ ಅಹ: (ಹಗಲು) ಎನಿಸಿಕೊಂಡು ಅಹ್ನಿನಲ್ಲಿ (ಹಗಲಲ್ಲಿ) ಇರುವ ನಾರಾಯಣ ಸಂಕರ್ಷಣನು ಅರ್ಚಿ: (ಪ್ರಕಾಶ) ಎನಿಸಿಕೊಂಡವನು ಅರ್ಚಿನ್ನಿನ ಸ್ಥಾನವು. ಸುಖಸ್ವರೂಪವಾದುದರಿಂದ ಚಂದ್ರನೆನಿಸಿಕೊಂಡ ಚಂದ್ರನಲ್ಲಿರುವ ನಾರಾಯಣಪ್ರದ್ಯುಮ್ನನು ಸರ್ವಾಂಗಗಳಲ್ಲಿಯೂ ಕ್ರೀಡಿಸುವುದರಿಂದ ಅಂಗಾರಾ ಎಂಬಿಕೊಂಡವನು ಅಂಗಾರಸಂತಿರುವವನು. ಜೀವಿಸುವರು. ನಿಯಾಮಕನಿಂತಿರುವುದರಿಂದ ನಕ್ಷತ್ರವೆನಿಸಿಕೊಂಡ ನಕ್ಷತ್ರದೊಳಗಣ ನಾರಾಯಣಾನಿರುದ್ಧನು ವಿಶ್ವಾಮಿರೂಪದಿಂದ ಬಹುಪ್ರಕಾರ ಪ್ರಕಾಶಿಸುವುದರಿಂದ ವಿಸ್ಫುಲಿಂಗಾ ಎನಿಸಿಕೊಂಡವನು. ವಿಸ್ಫುಲಿಂಗ (ಅಗ್ನಿಯ ಕಿಡಿ) ದಂತೆ ಇರುವವನು.

ಓ. ॥ ತಸ್ಮಿನ್ನೇತಸ್ಮಿನ್ನಗ್ನೌ ದೇವಾಃ ಶ್ರದ್ಧಾಂ ಜುಹ್ವತಿ ತಸ್ಯಾ ಆಹುತೇಃ ಸೋಮೋ ರಾಜಾ ಸಂಭವತಿ ॥ ಇತಿ ಚತುರ್ಥಃ ಖಂಡಃ ॥ ೭-೪ ॥ ॥ ೨ ॥

ಅ ॥ ದ್ಯುಲೋಕದೊಳಗಣ ನಾರಾಯಣನೆನಿಸಿಕೊಂಡ, ನಾರಾಯಣನಾರಾಯಣಾದಿ ಐದು ರೂಪದಿಂದ ಪ್ರತ್ಯೇಕವಾಗಿ ಇರುವ, ಜೀವನೆಂಬ ಹವಿಸ್ಸನ್ನು ಹೋಮಿಸಲಿಕ್ಕೆ ಆಧಾರವಾದ ಅಗ್ನಿ ಸ್ಥಾನನಾದ ಅಗ್ನಿ ಎನಿಸಿಕೊಂಡ ಶ್ರೀಹರಿಯಲ್ಲಿ ದ್ಯುಲೋಕಕ್ಕೆ ಅಧಿಪತಿಗಳಾದ ದೇವತೆಗಳು ಶ್ರದ್ಧೆಯಿಂದ ಯಜ್ಞಾದಿಗಳನ್ನು ಮಾಡಿದ, ಜಲ ಮೊದಲಾದ ಪಂಚಭೂತ (ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ)ಗಳಿಂದ ಕೂಡಿದ ಜೀವನನ್ನು ಕೊಡುತ್ತಾರೆ. (ಇದರಿಂದ ಯಜಮಾನನ ಭಸ್ಮೀಕರಣಾನಂತರವೇ ಜಲಾದಿಗಳು ಒಟ್ಟಿಗೆ ಇರುತ್ತವೆಂದು ಸಿದ್ಧಿಸುತ್ತದೆ) ಆ ನಾರಾಯಣನೆಂಬ ದ್ಯುಲೋಕಾಗ್ನಿಯಿಂದ ದೇವತೆಗಳು ಯಜಮಾನನನ್ನು ಸೋಮರಾಜನ ಲೋಕಕ್ಕೆ ಕಳುಹಿಸಿಕೊಡುತ್ತಾರೆ

ವಿ॥ ಯಜ್ಞಾದಿಗಳನ್ನು ಮಾಡಿದುದರಿಂದುಂಟಾದ ಪುಣ್ಯದಿಂದ ಯಜಮಾನನನ್ನು ದೇವತೆಗಳು ದ್ಯುಲೋಕ (ಸ್ವರ್ಗ)ಕ್ಕೆ ಕಳುಹಿಸುತ್ತಾರೆ. ಆ ಯಜಮಾನನು ಪುಣ್ಯಾವಸಾನಕಾಲದಲ್ಲಿ ಭೂಲೋಕಕ್ಕೆ ಹೊರಡಲು ಉದ್ಯುಕ್ತನಾಗುತ್ತಾನೆ. ಆಗ ಆತನನ್ನು ದೇವತೆಗಳು ದ್ಯುಲೋಕದಿಂದ ಸೋಮ (ಚಂದ್ರ) ಲೋಕಕ್ಕೆ ಕಳುಹಿಸುತ್ತಾರೆ. ॥ ೭—೪ ॥ ॥ ೨ ॥

ನಾಲ್ಕನೇ ಖಂಡವು ಮುಗಿಯಿತು.

೫ನೇ ಖಂಡವು

ಉ. ॥ ಪರ್ಜನ್ಯೋ ವಾವ ಗೌತಮಾಗ್ನಿಸ್ತಸ್ಯ ವಾಯುರೇವ ಸಮಿದ-ಭ್ರಂ ಧೂಮೋ ವಿದ್ಯುದರ್ಚಿರಶನಿರಂಗಾರಾ ಹ್ರಾದುನಯೋ ವಿಷ್ಫುಲಿಂಗಾಃ ॥ ೧ ॥

ಅ॥ ಪರ್ಜನ್ಯನೆನಿಸಿಕೊಂಡ ಮೇಘಚಕ್ರದೊಳಗಣ ವಾಸುದೇವನು ಅಗ್ನಿ ಎನಿಸಿಕೊಂಡವನು, ಅಗ್ನಿಯಂತಿರುವವನು. ಆ ಪರ್ಜನ್ಯನೊಳಗಣ ವಾಸುದೇವನಿಗೆ ವಾಯುವೆನಿಸಿಕೊಂಡ ವಾಯುವಿನಲ್ಲಿರುವ ವಾಸುದೇವನಾರಾಯಣನು ಸಮಿತ್ ಎನಿಸುತ್ತಾನೆ. ಅಭ್ರನೆನಿಸಿಕೊಂಡ ಅಭ್ರ (ಮೇಘ) ದಲ್ಲಿರುವ ವಾಸುದೇವವಾಸುದೇವನು ಧೂಮನೆನಿಸಿದವನು. ವಿದ್ಯುತ್ ಎನಿಸಿಕೊಂಡ ವಿದ್ಯುತ್ (ಮಿಂಚು)ನಲ್ಲಿರುವ ವಾಸುದೇವ ಸಂಕರ್ಷಣನು ಅರ್ಚಿಃ ಎನಿಸುತ್ತಾನೆ. ಅಶನಿ ಎನಿಸಿಕೊಂಡ ಅಶನಿ (ವಜ್ರಾಯುಧ)ಯಲ್ಲಿರತಕ್ಕ ವಾಸುದೇವಪ್ರದ್ಯುಮ್ನನು ಅಂಗಾರಾಃ ಎನಿಸುತ್ತಾನೆ. ಹ್ರಾದುನಿ ಎನಿಸಿಕೊಂಡ ಹ್ರಾದುನಿ (ಮೇಘ ಗರ್ಜನೆ) ಯಲ್ಲಿ ಇರತಕ್ಕ ವಾಸುದೇವಾನಿರುದ್ಧನು ವಿಷ್ಫುಲಿಂಗಾಃ ಎನಿಸುತ್ತಾನೆ. ॥ ೧ ॥

ಉ. ॥ ತಸ್ಮಿನ್ನೇತಸ್ಮಿನ್ನಗ್ನೌ ದೇವಾಃ ಸೋಮಂ ರಾಜಾನಂ ಜುಹ್ವತಿ ತಸ್ಯಾ ಆಹುತೇರ್ವರ್ಷಃ ಸಂಭವತಿ ॥ ಇತಿ ಪಂಚಮಃ ಖಂಡಃ ॥೭-೫॥ ೨ ॥

ಅ॥ ನಾರಾಯಣಾದಿ ಐದು ರೂಪಗಳಿಂದ ವಾಯು ಮೊದಲಾದವರಲ್ಲಿರುವ ಪರ್ಜನ್ಯನೊಳಗಣ ವಾಸುದೇವನಲ್ಲಿ ಸೋಮಲೋಕಕ್ಕೆ ಬಂದ ಜೀವನನ್ನು ದೇವತೆಗಳು ಕೊಡುತ್ತಾರೆ. ಆ ಪರ್ಜನ್ಯಾಖ್ಯ ಸ್ಥಾನದಿಂದ ವೃಷ್ಟಿಯಲ್ಲಿದ್ದವನನ್ನಾಗಿ ದೇವತೆಗಳು ಮಾಡುತ್ತಾರೆ. ಅಂದರೆ, ಆ ಜೀವನು ಮಳೆಯೊಳಗೆ ಸೇರುತ್ತಾನೆ. ॥ ೭—೬ ॥ ॥ ೨ ॥

ಐದನೇ ಖಂಡವು ಮುಗಿಯಿತು.

೬ನೇ ಖಂಡವು

ಉ. ॥ ಪೃಥಿವೀ ವಾವ ಗೌತಮಾಗ್ನಿಸ್ತಸ್ಯಾಃ ಸಂವತ್ಸರ ಏವ ಸಮಿ-ದಾಕಾಶೋ ಧೂಮೋ ರಾತ್ರಿರರ್ಚಿರ್ದಿಶೋಽಂಗಾರಾ ಅವಾಂತರದಿಶೋ ವಿಷ್ಫುಲಿಂಗಾಃ

ಅ ॥ ಪೃಥಿವೀ ಎನಿಸಿಕೊಂಡ ಪೃಥಿವಿಯೊಳಗಣ ಸಂಕರ್ಷಣನು ಅಗ್ನಿಯು. ಪೃಥಿವಿಯೊಳಗಣ ಸಂಕರ್ಷಣನಿಗೆ ಸಂವತ್ಸರವೆನಿಸಿಕೊಂಡ ಸಂವತ್ಸರದಲ್ಲಿರುವ ಸಂಕರ್ಷಣ ನಾರಾಯಣನು ಚೆನ್ನಾಗಿ ಪ್ರಕಾಶಗೊಳಿಸುವುದರಿಂದ ಸಮಿತ್ ಎನಿಸಿಕೊಳ್ಳುವನು. ಆಕಾಶವೆನಿಸಿಕೊಂಡ ಆಕಾಶದೊಳಗಣ ಸಂಕರ್ಷಣನಾಗುವದೇವನು ಧೂಮವೆನಿಸಿಹನು. ರಾತ್ರಿ ಎನಿಸಿಕೊಂಡ ರಾತ್ರಿಯೊಳಗಣ ಸಂಕರ್ಷಣಸಂಕರ್ಷಣನು ಅರ್ಚಿ ಎನಿಸುವನು. ದಿಕ್ ಎನಿಸಿಕೊಂಡ ದಿಕ್ಕುಗಳೊಳಗಣ ಸಂಕರ್ಷಣಪ್ರದ್ಯುಮ್ನನು ಅಂಗಾರಾ ಎನಿಸುವನು. ಅವಾಂತರದಿಕ್ ಎನಿಸಿಕೊಂಡ ಅನಾಂತರದಿಕ್ಕುಗಳಲ್ಲಿರುವ ಸಂಕರ್ಷಣಾನಿರುದ್ಧನು ವಿಸ್ಫುಲಿಂಗಾ ಎನಿಸುವನು ॥ ೧ ॥

ಉ. ॥ ತಸ್ಮಿನ್ನೇತಸ್ಮಿನ್ನಗ್ನೌ ದೇವಾ ವರ್ಷಂ ಜುಹ್ವತಿ ತಸ್ಯಾ ಆಹುತೇರನ್ನಮಿ ಸಂಭವತಿ ॥ ಇತಿ ಷಷ್ಠಃ ಖಂಡಃ ॥ ೭-೬ ॥ ॥ ೭ ॥

ಅ ॥ ಸಂವತ್ಸರಾದಿಗಳಲ್ಲಿ ನಾರಾಯಣ ಮೊದಲಾದ ನಮ್ಮ ದೂರದಲ್ಲಿಂದ ಇರುವ ಪೃಥಿವಿಯೊಳಗಣ ಸಂಕರ್ಷಣನಲ್ಲಿ ದೇವತೆಗಳು ಮಳೆಯೊಳಗೆ ಸೇರಿದ ಜೀವನನ್ನು ಕೊಡುತ್ತಾರೆ. ಆ ಪೃಥಿವೀಸ್ಥಾನದಿಂದ ತಿನ್ನುವ ವಸ್ತುಗಳೊಳಗೆ ಜೀವನನ್ನು ದೇವತೆಗಳು ಸೇರಿಸುತ್ತಾರೆ. ॥ ೬ ॥ ॥ ೭ ॥

ಆರನೇ ಖಂಡವು ಮುಗಿಯಿತು.

ಏನೇ ಖಂಡವು

ಉ. ॥ ಪುರುಷೋ ವಾವ ಗೌತಮಾಗ್ನಿಸ್ತಸ್ಯ ವಾಗೇವ ಸಮಿತ್ ಪ್ರಾಣೋ ಧೂಮೋ ಜಿಹ್ವಾರ್ಚಿಶ್ಚಕ್ಷುರಂಗಾರಾಃ ಶ್ರೋತ್ರಂ ವಿಸ್ಫುಲಿಂಗಾಃ ॥ ೧ ॥

ಅ ॥ ಪುರುಷನೆನಿಸಿಕೊಂಡ ಪುರುಷನೊಳಗಣ ಪ್ರದ್ಯುಮ್ನನು ಅಗ್ನಿಯು. ಆ ಪುರುಷಾಂತರ್ಗತ ಪ್ರದ್ಯುಮ್ನನಿಗೆ ವಾಕ್ ಎನಿಸಿಕೊಂಡ ವಾಗಿಂದ್ರಿಯದೊಳಗಣ ಪ್ರದ್ಯುಮ್ನನಾರಾಯಣನು ಸಮಿತ್ ಎನಿಸುವನು. ಪ್ರಾಣವೆನಿಸಿಕೊಂಡ ಪ್ರಾಣನೊಳಗಣ ಪ್ರದ್ಯುಮ್ನ ವಾಸುದೇವನು ಧೂಮವೆನಿಸಿಹನು. ಜಿಹ್ವಾ ಎನಿಸಿಕೊಂಡ ಜಿಹ್ವೆ (ನಾಲಿಗೆ) ಯಲ್ಲಿರುವ ಪ್ರದ್ಯುಮ್ನ ಸಂಕರ್ಷಣನು ಅರ್ಚಿ ಎನಿಸುವನು. ಚಕ್ಷುಃ ಎನಿಸಿಕೊಂಡ ಚಕ್ಷುರೊಳಗಣ ಪ್ರದ್ಯುಮ್ನನ ಪ್ರದ್ಯುಮ್ನನು ಅಂಗಾರಾ ಎನಿಸುವನು. ಶ್ರೋತ್ರದೊಳಗಣ ಪ್ರದ್ಯುಮ್ನನಿರುದ್ಧನು ವಿಸ್ಫುಲಿಂಗಾ ಎನಿಸುತ್ತಾನೆ. ॥ ೧ ॥

ಉ. ॥ ತಸ್ಮಿನ್ನೇತಸ್ಮಿನ್ನಗ್ನೌ ದೇವಾ ಅನ್ನಂ ಜುಹ್ವತಿ ತಸ್ಯಾ ಆಹುತೇ ರೇತಃ ಸಂಭವತಿ ॥ ಇತಿ ಸಪ್ತಮಃ ಖಂಡಃ ॥ ೭-೭ ॥ ॥ ೭ ॥

ಅ ॥ ನಾರಾಯಣಾದಿರೂಪದಿಂದ ನಮ ವಿಧವಾಗಿ ವಾಗಾದಿಗಳಲ್ಲಿರುವ ಪ್ರದ್ಯುಮ್ನನೆನಿಸಿದ ಪುರುಷನೊಳಗಣ ಅಗ್ನಿಯಲ್ಲಿ ತಿನ್ನುವ ವಸ್ತುಗಳೊಳಗಣ ಜೀವನನ್ನು ದೇವತೆಗಳು ಕೊಡುತ್ತಾರೆ. ಪುರುಷನೆಂಬ ಜೀವನನ್ನು ದೇವತೆಗಳು ಸ್ಥಾನದಿಂದ ರೇತಸ್ಸಿನೊಳಗೆ ಸೇರಿಸುತ್ತಾರೆ. ॥ ೭ ॥ ॥ ೭ ॥

ಏಳನೇ ಖಂಡವು ಮುಗಿಯಿತು.

೮ನೇ ಖಂಡವು

ಉ. ॥ ಯೋಷಾ ವಾವ ಗೌತಮಾಗ್ನಿಸ್ತಸ್ಯಾ ಉಪಸ್ಥ ಏವ ಸಮಿದ್ಯದುಪಮಂತ್ರಯತೇ ಸ ಧೂಮೋ ಯೋನಿರರ್ಚಿರ್ಯದಂತಃ ಕರೋತಿ ತೇಽಂಗಾರಾ ಅಭಿನಂದಾ ವಿಷ್ಫುಲಿಂಗಾಃ ॥ ೧ ॥

ಅ ॥ ಯೋಷಾ ಎನಿಸಿಕೊಂಡ, ಸ್ತ್ರೀಯರಲ್ಲಿರುವ ಅನಿರುದ್ಧನು ಅಗ್ನಿಯು. ಸ್ತ್ರೀಯರಲ್ಲಿರುವ ಅನಿರುದ್ಧನೆಂಬ ಅಗ್ನಿಗೆ ಉಪಸ್ಥನೆನಿಸಿಕೊಂಡ ಉಪಸ್ಥದೊಳಗಣ ಅನಿರುದ್ಧನಾರಾಯಣನು ಸಮಿತ್ ಎನಿಸುವನು. ಸಂಭೋಗಾರ್ಥವಾದ ಸಂಭಾಷಣೆಯಲ್ಲಿರುವ ಅನಿರುದ್ಧವಾಸುದೇವನು ಧೂಮನೆನಿಸುವನು. ಯೋನಿಯೆನಿಸಿದ ಯೋನಿಯೊಳಗಣ ಅನಿರುದ್ಧಸಂಕರ್ಷಣನು ಅರ್ಚಿಃ ಎನಿಸುವನು. ಸಂಭೋಗ ವ್ಯಾಪಾರದಲ್ಲಿರುವ ಅನಿರುದ್ಧಪ್ರದ್ಯುಮ್ನನು ಅಂಗಾರಾಃ ಎನಿಸಿದವನು ಸಂತೋಷಗೊಳ್ಳುವುದರಿಂದ ಅಭಿನಂದನೆನಿಸಿದ ಅಭಿನಂದದಲ್ಲಿರುವ ಅನಿರುದ್ಧಾನಿರುದ್ಧನು ವಿಷ್ಫುಲಿಂಗಾಃ ಎನಿಸುವನು. ॥ ೧ ॥

ಉ. ॥ ತಸ್ಮಿನ್ನೇತಸ್ಮಿನ್ನಗ್ನೌ ದೇವಾ ರೇತೋ ಜುಹ್ವತಿ ತಸ್ಯಾ ಆಹುತೇರ್ಗರ್ಭಃ ಸಂಭವತಿ ॥ ಇತ್ಯಷ್ಟಮಃ ಖಂಡಃ ॥ ೭-೮ ॥ ॥ ೨ ॥

ಅ ॥ ನಾರಾಯಣಾದಿ ಐದು ರೂಪಗಳಿಂದ ಉಪಸ್ಥಾದಿಗಳಲ್ಲಿ ಇರುವ, ಸ್ತ್ರೀಯರಲ್ಲಿರುವ ಅನಿರುದ್ಧನೆಂಬ ಅಗ್ನಿಯಲ್ಲಿ ರೇತಸ್ಸಿನೊಳಗಣ ಜೀವನನ್ನು ತತ್ತ್ವಾಭಿಮಾನಿಗಳಾದ ದೇವತೆಗಳು ಯೋನಿದ್ವಾರಾ ಪ್ರವೇಶಿಸುತ್ತಾರೆ. ಆ ಜೀವನು ಯೋಷಿತ್ ಎಂಬ ಹೋಮಸ್ಥಾನದಿಂದ ಗರ್ಭದಲ್ಲಿದ್ದು ಶರೀರ ಪುಳ್ಕನನಾಗುತ್ತಾನೆ. ॥ ೭ ॥ ೨ ॥

ಎಂಟನೇ ಖಂಡವು ಮುಗಿಯಿತು.

೯ನೇ ಖಂಡವು

ಪೀ—ವೇತ್ಥ ಯಥಾ ಪಂಚಮ್ಯಾಂ ಎಂದು ತಾನು ಮಾಡಿದ ಪ್ರಶ್ನೆಗೆ ಅವಶ್ಯಕವಾದುದನ್ನು **ವಿವರಿಸಿ ಯೋಷಿತ್** ಎಂಬ ಐದನೇ ಅಗ್ನಿಯನ್ನು ಹೇಳಿ ಈಗ ಆ ಪ್ರಶ್ನೆಗೆ ಉತ್ತರ ಹೇಳುತ್ತಾರೆ—

ಉ. ॥ ಇತಿ ತು ಪಂಚಮ್ಯಾಮಾಹುತಾವಾಪಃ ಪುರುಷವಚಸೋ ಭವಂತೀತಿ ಸ ಉಲ್ವಾವೃತೋ ಗರ್ಭೋ ದಶ ವಾ ಮಾಸಾನಂತಃ ಶಯಿತ್ವಾ ಯಾವದ್ವಾಽಥ ಜಾಯತೇ ॥ ೧ ॥

ಅ ॥ ಹಿಂದೆ ಹೇಳಿದ ಪ್ರಕಾರ ಐದನೇ ಯೋಷಾ ಎಂಬ ಅಗ್ನಿಯಲ್ಲಿ ಹೋಮಿಸಲ್ಪಡುತ್ತಿರಲು (ಅಂದರೆ ಸ್ತ್ರೀಯರಲ್ಲಿ ರೇತಸ್ಸನ್ನು ಇಡುತ್ತಿರಲು) ಮರಣಕಾಲದಲ್ಲಿ ಜೀವನೊಂದಿಗೆ ಹೋದ ಪಂಚಭೂತಗಳಿಂದ ದೇಹವನ್ನು ಹೊಂದಿದ ಜೀವನು ಪುರುಷನೆಂದು ಹೆಸರುಳ್ಳವನಾಗುತ್ತಾನೆ. (ಹೀಗೆ ೫ನೇ ಪ್ರಶ್ನೆಗೆ ಉತ್ತರ ಹೇಳಿ ಉಳಿದ ೪ ಪ್ರಶ್ನೆಗಳಿಗೂ ಉತ್ತರ ಹೇಳಲಿಕ್ಕೆ ಇಚ್ಛಿಸುತ್ತಾ ಅದಕ್ಕೆ ಉಪಯುಕ್ತ

ವಾದುದನ್ನು ಹೇಳುತ್ತಾರೆ—)ಅಥವಾ ವೈರಾಗ್ಯವು ಹುಟ್ಟುವುದಕ್ಕಾಗಿ ಸ್ವರ್ಗದಿಂದ ಬರತಕ್ಕ ಪ್ರಕಾರವನ್ನು ಹೇಳಿ ಈಗ ಗರ್ಭವಾಸವನ್ನು ಮುಂದಿನಗಳನ್ನು ಹೇಳುತ್ತಾರೆ—) ಆ ಗರ್ಭದೊಳಗಣ ಜೀವವು ಗರ್ಭವನ್ನು ಮುಚ್ಚತಕ್ಕ ಚರ್ಮದಿಂದ (ಗರ್ಭದ ಜರಾಯುವೆಂಬ ಚರ್ಮದ ಮುಸುಕಿನಿಂದ) ಮುಚ್ಚಲ್ಪಟ್ಟವನಾಗಿ ೧೦ ತಿಂಗಳಲ್ಲಿ ಅಥವಾ ಎಷ್ಟು ಕಾಲವಿರಬೇಕೋ ಅಷ್ಟುಕಾಲ ತಾಯಿಯ ಹೊಟ್ಟೆಯೊಳಗೆ ಮಲಗಿದ್ದು ಆ ಮೇಲೆ ಹುಟ್ಟುತ್ತಾನೆ. ॥ ೧ ॥

ಉ. ॥ ಸ ಜಾತೋ ಯಾವದಾಯುಷಂ ಜೀವತಿ ತಂ ಪ್ರೇತಂ ದಿಷ್ಟ-
ಮಿತೋಽಗ್ನಯ ಏನಂ ಹರಂತಿ ಯತ ಏನೇತೋ ಯತಃ ಸಂಭೂತೋ ಭವತಿ॥
ಇತಿ ನವಮಃ ಖಂಡಃ ॥ ೭-೯ ॥ ॥ ೩ ॥

ಅ ॥ ಹುಟ್ಟಿದವನು ಆಯುಸ್ಸು ಇರುವಷ್ಟುಕಾಲ ಬದುಕುತ್ತಾನೆ ಆ ಮೇಲೆ ಸಾಯುತ್ತಾನೆ. ಆ ಮೃತನಾದ ಕರ್ಮಿಯನ್ನು ಹೋಮ್ಯಗಳಾದ ದೇವತೆಗಳು ಈ ಲೋಕದಿಂದ ಯಾವ ದ್ಯುಲೋಕವೆಂಬ ಅಗ್ನಿಯೋ ಈ ಲೋಕಕ್ಕೆ ಒಂದಿರುವನೋ ಮತ್ತು ಯಾವ ಪೃಥಿವೀ ಎಂಬ ಅಗ್ನಿಯಿಂದ ಹುಟ್ಟಿರುವನೋ ಅಂತಹ ದ್ಯು ಮೊದಲಾದ ಅಗ್ನಿಗೇನೇ ಒಯ್ಯುತ್ತಾರೆ. (ಅಂದರೆ—ಆ ಜೀವನನ್ನು ದೇವತೆಗಳು ಸ್ವರ್ಗಾದಿಗಳಿಗೆ ಕರೆದುಕೊಂಡು ಹೋಗುತ್ತಾರೆ) ॥ ೭-೯ ॥ ॥ ೩ ॥

ಒಂಭತ್ತನೇ ಖಂಡವು ಮುಗಿಯಿತು.

ಹತ್ತನೇ ಖಂಡವು

ಹೀಗೆ ಯಾವ ಮಾರ್ಗದಿಂದ ಕರೆದುಕೊಂಡು ಹೋಗುತ್ತಾರೆ ಎಂಬ ವಿಂಶೆಯನ್ನು ಪರಿಹರಿಸುತ್ತಾ ನೇತ್ಥ ಯಥಾ ದೇವಯಾನಸ್ಯ ಎಂಬ ಮೇನೇ ಪ್ರಶ್ನೆಗೆ ಉತ್ತರ ಹೇಳುತ್ತಾರೆ ಇದರಿಂದಲೇ ಹತ್ತನೇ ಪ್ರಶ್ನೆಗೂ ಒಂಭತ್ತನೇ ಪ್ರಶ್ನೆಗೂ ಉತ್ತರವು ಸೂಚಿಸಲ್ಪಡುತ್ತದೆ ಎನ್ನುತ್ತಾರೆ—

ಉ. ॥ ತದ್ಧ ಇತ್ಥಂ ವಿದುರ್ಯೇ ಚೇಮೇಽರಣ್ಯೇ ಶ್ರದ್ಧಾ ತಪ ಇತ್ಯು-
ಪಾಸತೇ ತೇಽರ್ಚಿಷಮಭಿಸಂಭವಂತ್ಯರ್ಚಿಷೋಽಹರಹ್ನ ಆಪೂರ್ಯಮಾಣ-
ಪಕ್ಷಮಾಪೂರ್ಯಮಾಣಪಕ್ಷಾದ್ಯಾನ್ಷಡುದಙ್ಏತಿ ಮಾಸಾಂಸ್ತಾನ್ ॥ ೧ ॥

ಅ ॥ ಕಾಮ್ಯಕರ್ಮವು ಗಮನಾಗಮನಗಳಿಗೆ ಕಾರಣವಾಗಿರುವುದರಿಂದ ಅಲ್ಲಿ ವೈರಾಗ್ಯವನ್ನು ಹೊಂದಿದ ಯಾವ ಅಧಿಕಾರಿಗಳು ಪಂಚಾಗ್ನಿ ವಿದ್ಯೆಯಲ್ಲಿ ಹೇಳಿದ ಪ್ರಕಾರ ಶ್ರೀಕರಿಯನ್ನು ತಿಳಿದಿರುವರೋ, ಯಾರು ತಪಸ್ಸಿಗೆ ಯೋಗ್ಯವಾದ ಪ್ರದೇಶದಲ್ಲಿ ಶ್ರದ್ಧಾಪೂರ್ವಕವಾಗಿ ನಿವೃತ್ತಕರ್ಮಗಳನ್ನು ಮಾಡುತ್ತಾ ಶ್ರೀಕರಿಯ ಧ್ಯಾನಾದಿಗಳನ್ನು ಮಾಡುತ್ತಾರೋ, ಅಂತಹ ಜ್ಞಾನಪ್ರಧಾನರೂ ಕರ್ಮ ಪ್ರಧಾನರೂ ಆದವರು ಅರ್ಚಿರಭಿಮಾನಿಯಾದ ದೇವತೆಯನ್ನು ಹೊಂದುತ್ತಾರೆ ಅರ್ಚಿರಭಿಮಾನಿಯಿಂದ ಅಹರಭಿಮಾನಿಯಾದ ದೇವತೆಯನ್ನು ಹೊಂದುತ್ತಾರೆ ಅಹರಭಿಮಾನಿಯಿಂದ ಶುಕ್ಲಪಕ್ಷಾಭಿಮಾನಿಯಾದ ದೇವತೆಯನ್ನು ಹೊಂದುತ್ತಾರೆ ಶುಕ್ಲಪಕ್ಷಾಭಿಮಾನಿಯಿಂದ ಉತ್ತರಾಯಣಾಭಿಮಾನಿಯಾದ ದೇವತೆಯನ್ನು ಹೊಂದುತ್ತಾರೆ. ॥ ೧ ॥

ಉ. ॥ ಮಾಸೇಭ್ಯಃ ಸಂವತ್ಸರꣳ ಸಂವತ್ಸರಾದಾದಿತ್ಯಮಾದಿತ್ಯಾಚ್ಚಂದ್ರಮಸಂ ಚಂದ್ರಮಸೋ ವಿದ್ಯುತಂ ತತ್ಪುರುಷೋ ಮಾನವಃ ಸ ಏನಾನ್ ಬ್ರಹ್ಮ ಗಮಯತ್ಯೇಷ ದೇವಯಾನಃ ಪಂಥಾ ಇತಿ ॥ ೨ ॥

ಅ ॥ ಮಾಸಾಭಿಮಾನಿ ದೇವತಾಲೋಕದಿಂದ ಸಂವತ್ಸರಾಭಿಮಾನಿ ದೇವತಾಲೋಕಕ್ಕೂ, ಅದರಿಂದ ಆದಿತ್ಯಲೋಕಕ್ಕೂ, ಅದರಿಂದ ಚಂದ್ರಲೋಕಕ್ಕೂ, ಅದರಿಂದ ವಿದ್ಯುದಭಿಮಾನಿ ದೇವತೆಯಾದ ಭಾರತೀಲೋಕಕ್ಕೂ ಕರೆದುಕೊಂಡು ಹೋಗುತ್ತಾರೆ. ಆ ವಿದ್ಯುದಭಿಮಾನಿಯಾದ ಭಾರತೀಪತಿಯಾದ ಮುಖ್ಯಪ್ರಾಣನು ಅರ್ಚಿರ್ಲೋಕವನ್ನಾರಂಭಿಸಿ ವಿದ್ಯುಲ್ಲೋಕಪರ್ಯಂತ ಬಂದವರನ್ನು ಪರಬ್ರಹ್ಮನ ಸಮೀಪಕ್ಕೆ ಕಳುಹಿಸಿಕೊಡುತ್ತಾನೆ. ಇದು ದೇವಯಾನಮಾರ್ಗವು. ॥ ೨ ॥

ಪೀ—ಹೀಗೆ ದೇವಯಾನವನ್ನೂ ಅದರ ಸಾಧನವನ್ನೂ ಹೇಳಿ ಈಗ ಪಿತೃಯಾನವನ್ನೂ ಅದರ ಸಾಧನವನ್ನೂ ಹೇಳುತ್ತಾರೆ—

ಉ. ॥ ಅಥ ಯ ಇಮೇ ಗ್ರಾಮ ಇಷ್ಟಾಪೂರ್ತೇ ದತ್ತಮಿತ್ಯುಪಾಸತೇ ತೇ ಧೂಮಮಭಿಸಂಭವಂತಿ ಧೂಮಾದ್ರಾತ್ರಿꣳ ರಾತ್ರೇರಪರಪಕ್ಷಮಪರಪಕ್ಷಾದ್ಯಾನ್ಷಡ್ದಕ್ಷಿಣೈತಿ ಮಾಸಾꣳಸ್ತಾನೇತಿ ಸಂವತ್ಸರಮಭಿಪ್ರಾಪ್ನುವಂತಿ ॥ ೩ ॥

ಅ ॥ ಯಾವ ಕಾಮ್ಯಕರ್ಮಗಳು ಗ್ರಾಮದಲ್ಲಿದ್ದವರಾಗಿ ಯಾಗ, ಸರೋವರಾದಿ ನಿರ್ಮಾಣ ಸತ್ಪಾತ್ರದಲ್ಲಿ ದಾನ, ಪಿತೃಶ್ರಾದ್ಧ ಮೊದಲಾದುದು, ಇವುಗಳನ್ನು ಮಾಡುತ್ತಾರೋ, ಅಂತಹ ಗ್ರಾಮದಲ್ಲಿದ್ದು ಪ್ರವೃತ್ತ (ಕಾಮ್ಯ) ಕರ್ಮ ಮಾಡುವವರು ಧೂಮಾಭಿಮಾನಿ ದೇವತಾಲೋಕಕ್ಕೂ, ಅಲ್ಲಿಂದ ರಾತ್ರ್ಯಭಿಮಾನಿ ದೇವತಾಲೋಕಕ್ಕೂ, ಅದರಿಂದ ಕೃಷ್ಣಪಕ್ಷಾಭಿಮಾನಿ ದೇವತಾಲೋಕಕ್ಕೂ, ಅದರಿಂದ ದಕ್ಷಿಣಾಯನಾಭಿಮಾನಿ ದೇವತಾಲೋಕಕ್ಕೂ ಹೋಗುತ್ತಾರೆ. ಅದರಿಂದ ಸಂವತ್ಸರಾಭಿಮಾನಿ ದೇವತಾಲೋಕಕ್ಕೆ ಹೋಗುತ್ತಾರೆ ॥ ೩ ॥

ಪೀ—ಮಾಸಾಭಿಮಾನಿ ದೇವತಾಲೋಕದಿಂದ ಎಲ್ಲಿಗೆ ಹೋಗುತ್ತಾರೆಂದರೆ—

ಉ. ॥ ಮಾಸೇಭ್ಯಃ ಪಿತೃಲೋಕಂ ಪಿತೃಲೋಕಾದಾಕಾಶಮಾಕಾಶಾಚ್ಚಂದ್ರಮಸಮೇಷ ಸೋಮೋ ರಾಜಾ ತದ್ದೇವಾನಾಮನ್ನಂ ತಂ ದೇವಾ ಭಕ್ಷಯಂತಿ ॥ ೪ ॥

ಅ ॥ ದಕ್ಷಿಣಾಯನ ಎಂದು ಹೆಸರುಳ್ಳ ಮಾಸಾಭಿಮಾನಿ ದೇವತಾಲೋಕದಿಂದ, ಸಂವತ್ಸರಾಭಿಮಾನಿ ದೇವತಾಲೋಕಕ್ಕೂ, ಅದರಿಂದ ಪಿತೃಲೋಕಕ್ಕೂ, ಅದರಿಂದ ವಿನಾಯಕ (ಆಕಾಶ)ಲೋಕಕ್ಕೂ, ಅದರಿಂದ ಚಂದ್ರಲೋಕಕ್ಕೂ ಹೋಗುತ್ತಾರೆ. ಈ ಚಂದ್ರನು ಸೋಮಲತೆಗೆ ಅಭಿಮಾನಿಯು. ಆ ಚಂದ್ರಮ ದೇವತೆಗಳಿಗೆ ಅಮೃತವೆಂಬ ಅನ್ನ ಸ್ವಾನನು. ಆ ಅನ್ನವನ್ನು ದೇವತೆಗಳು ಭಕ್ಷಿಸುತ್ತಾರೆ. (ಹೊಂದುತ್ತಾರೆ.) ॥ ೪ ॥

ಪೀ—೩ನೇ ಖಂಡದ ೩ನೇ ಮಂತ್ರದಲ್ಲಿದ್ದ **ನೇತ್ಥ ಯಥಾಽಸೌ ಲೋಕೋ ನ ಸಂಪೂರ್ಯತೇ** ಎಂಬ ಪ್ರಶ್ನೆಗೆ ಉತ್ತರ ಹೇಳುತ್ತಾರೆ—

ಉ. ॥ ತಸ್ಮಿನ್ಯಾವತ್ಸಂಪಾತಮುಷಿತ್ವಾಥೈತಮೇವಾಧ್ವಾನಂ ಪುನರ್ನಿವರ್ತಂತೇ ಯಥೇತಮಾಕಾಶಮಾಕಾಶಾದ್ವಾಯುಂ ವಾಯುರ್ಭೂತ್ವಾ ಧೂಮೋ ಭವತಿ ಧೂಮೋ ಭೂತ್ವಾಭ್ರಂ ಭವತಿ ॥ ೫ ॥

ಅ ॥ ಚಂದ್ರನನ್ನು ಹೊಂದಿದ ಕಾಮ್ಯಕರ್ಮಿಗಳು ಚಂದ್ರಲೋಕದಲ್ಲಿ ನಿಯತಕಾಲದಲ್ಲಿ ವಾಸ ಮಾಡಿ ಆ ಮೇಲೆ ಕರ್ಮಕ್ಷಯವಾದಾಗ ಈ ಮಾರ್ಗದಲ್ಲಿಯೇ ತಿರುಗಿ ಬರುತ್ತಾರೆ. (ಯಾವ ಮಾರ್ಗದಲ್ಲಿ ಎಂದರೆ—) ಯಾವ ಮಾರ್ಗದಿಂದ ಚಂದ್ರಲೋಕಕ್ಕೆ ಹೋಗಿರುತ್ತಾನೋ ಅದೇ ಮಾರ್ಗದಿಂದ ತಿರುಗಿ ಬರುತ್ತಾರೆ (ಅಂದರೆ—ಚಂದ್ರಲೋಕದಿಂದ ಆಕಾಶಪರ್ಯಂತ ಲೋಕಕ್ಕೆ ಹೋದಹಾಗೆ ತಿರುಗಿಬರುವುದು. ಆ ಮೇಲೆ ವ್ಯತ್ಯಾಸವಿದೆ ಎನ್ನುತ್ತಾರೆ—) ಆಕಾಶಾಭಿಮಾನಿ ದೇವತಾಲೋಕಕ್ಕೆ ಹೇಗೆ ಹೋಗಿರುತ್ತಾನೋ ಹಾಗೆಯೇ ಆ ಲೋಕಕ್ಕೆ ತಿರುಗಿಬರುತ್ತಾರೆ.) (ಅಂದರೆ—ಚಂದ್ರಲೋಕದಿಂದ ಆಕಾಶಲೋಕಕ್ಕೆ ಬರುತ್ತಾರೆ. ಅದರಿಂದ ವಾಯುದೇವತಾಲೋಕಕ್ಕೂ ಅದರಿಂದ ಧೂಮನಾಭಿಮಾನಿ ದೇವತಾಲೋಕಕ್ಕೂ, ಅದರಿಂದ ಮೇಘಾಭಿಮಾನಿ ದೇವತಾಲೋಕಕ್ಕೂ ಬರುತ್ತಾರೆ.) ಅಂದರೆ—ಆಕಾಶಲೋಕದಿಂದ ನಿಳ್ಯ ಲೋಕಾದಿಗಳನ್ನು ಹೊಂದದೆ ನಾಮ್ನಾವಿ ದೇವತಾಲೋಕಕ್ಕೆ ಹೋಗುತ್ತಾರೆ—) ॥ ೫ ॥

ಉ. ॥ ಅಭ್ರಂ ಭೂತ್ವಾ ಮೇಘೋ ಭವತಿ ಮೇಘೋ ಭೂತ್ವಾ ಪ್ರವರ್ಷತಿ ತ ಇಹ ವ್ರೀಹಿಯವಾ ಓಷಧಿವನಸ್ಪತಯಸ್ತಿಲಮಾಷಾ ಇತಿ ಜಾಯಂತೇ ತತೋ ನೈ ಖಲು ದುರ್ನಿಷ್ಪ್ರಪತನಂ ಯೋ ಯೋ ಹ್ಯನ್ನಮತ್ತಿ ಯೋ ರೇತಃ ಸಿಂಚತಿ ತದ್ಭೂಯ ಏವ ಭವತಿ ॥ ೬ ॥

ಅ ॥ ಅಭ್ರ (ತಿಳಿಲಾವಯವವಳ್ಳದ್ದು) ಅಭಿಮಾನಿ ದೇವತಾಲೋಕದಿಂದ ಮೇಘ (ನಿಬಿಡಾವಯವುಳ್ಳದ್ದು) ಅಭಿಮಾನಿ ದೇವತಾಲೋಕಕ್ಕೆ ಹೋಗುತ್ತಾರೆ. ಆಮೇಲೆ ವೃಷ್ಟಿ (ಮಳೆ) ಯೊಳಗೆ ಸೇರುತ್ತಾರೆ. ಮಳೆಯೊಳಗಣ ಕರ್ಮಿಗಳು ಈ ಲೋಕಗಳಲ್ಲಿ ಕೆಲವರು ಬ್ರಹ್ಮ, ಯವ ಸಸ್ಯ, ಮರಗಳಾಗಿಯೂ ಕೆಲವರು ಎಳ್ಳು, ಬದು, ನೊವರಾವ ಧಾನ್ಯಗಳಾಗಿಯೂ ಹುಟ್ಟುತ್ತಾರೆ (ಅಂದರೆ—ಮತ್ತೊಬ್ಬನ ಮನೆಯಲ್ಲಿ ದಾನಲೋಕನು ಪ್ರವೇಶ ಮಾಡಿದಂತೆಯೇ, ಬೇರೆ ಜೀವದು ಅಭಿಮಾನಿಗಳಾಗಿ ಬಳ್ಳ ವ್ರೀಹಿ, ಯವ ಮೊದಲಾದವುಗಳಲ್ಲಿ ಆ ಕರ್ಮಿಗಳು ಪ್ರವೇಶಮಾಡಿದವರಾಗಿ ಇರುತ್ತಾರೆ ಆ ವ್ರೀಹ್ಯಾದಿಗಳಿಗೆ ಅಭಿಮಾನಿಗಳಾಗುವದಿಲ್ಲ ಆ ವ್ರೀಹ್ಯಾದಿಗಳು ಹುಟ್ಟಿದಾಗ ಈ ಕರ್ಮಿಗಳು ಹುಟ್ಟಿದರೆನ್ನುತ್ತಾರೆ.) ಆ ವ್ರೀಹ್ಯಾದಿಗಳಲ್ಲಿ ಪ್ರವೇಶಮಾಡಿದ ಮೇಲೆ ಅತಿಕಷ್ಟದಲ್ಲಿ ಬೀಳುತ್ತಾರೆ. (ಅಂದರೆ—ಬಹುಕ್ಲೇಶದಿಂದ ಹುಟ್ಟುತ್ತಾರೆ—) (ಅದನ್ನೇ ವಿವರಿಸುತ್ತಾರೆ—) ಯಾವ ಯಾವ ಜನರು ವ್ರೀಹ್ಯಾದಿರೂಪವಾದ ತಿನ್ನಲು ಯೋಗ್ಯವಾದುದನ್ನು ತಿನ್ನುತ್ತಾರೋ, ಅವರಲ್ಲಿ ಯಾವನು ಪ್ರೌಢನಲ್ಲಿ ರೇತಸ್ಸೇಕಮಾಡುತ್ತಾನೋ, ಅವನನ್ನೇ ಕರ್ಮವು ಪ್ರವೇಶಮಾಡುತ್ತಾನೆ. (ಅಂದರೆ—ತಿನ್ನಲ್ಪಡುವ ಅನ್ನ ಮೊದಲಾದ ವಸ್ತುಗಳ ದ್ವಾರಾ ರೇತಸ್ಸನ್ನು ಸೇಚನಮಾಡುವ ಪುರುಷನಲ್ಲಿ ಪ್ರವೇಶಮಾಡಿ ಅವನು ತಿಂದ ಅನ್ನವು ಪರಿಣಾಮವಾಗಿ ಅನ್ನದ ಸಾರಭೂತವಾದ ರೇತಸ್ಸಿನಲ್ಲಿದ್ದವನಾಗಿ ರೇತೋರೂಪವನ್ನು ಹೊಂದುತ್ತಾನೆ.) ॥ ೬ ॥

ಏ—ಏತಮಧ್ವಾನಮಾವರ್ತಂತೇ ಎಂಬ ಹೇಳಿ ಬಿಂದೆ ಬರಲಿಕ್ಕೆ ಆಕಾಶ ವಾಯು ಮೊದಲಾದ ಮಾರ್ಗಗಳನ್ನಾ ರಂಭಿಸಿ ರೇತಸ್ಸೇಕ ಮಾಡತಕ್ಕ ಪಿತೃಪರ್ಯಂತ ಅನೇಕ ಸ್ಥಾನಗಳನ್ನು ಹೇಳಲಾರುವರು. ಹಾಗಾದರೆ - ಅನೇಕ ಸ್ಥಾನಗಳಿಗೆ ಹೋಗುವುದರಿಂದ ಕಲ್ಪಪರ್ಯಂತವಾಗಿಯೂ ಕರ್ಮಜೀವರು ಈ ಭೂಲೋಕಕ್ಕೆ ಬರುತ್ತಿರುತ್ತಾರೋ ಏನು? ಎಂದರೆ—

ಯು. ॥ ತದ್ಯ ಇಹ ರಮಣೀಯಚರಣಾ ಅಭ್ಯಾಶೋ ಹ ಯತ್ತೇ ರಮಣೀಯಾಂ ಯೋನಿಮಾಪದ್ಯೇರನ್ ಬ್ರಾಹ್ಮಣಯೋನಿಂ ವಾ ಕ್ಷತ್ರಿಯಯೋನಿಂ ವಾ ವೈಶ್ಯಯೋನಿಂ ವಾಽಥ ಯ ಇಹ ಕಪೂಯಚರಣಾ ಅಭ್ಯಾಶೋ ಹ ಯತ್ತೇ ಕಪೂಯಾಂ ಯೋನಿಮಾಪದ್ಯೇರಂಶ್ವ್ಪಯೋನಿಂ ವಾ ಸೂಕರಯೋನಿಂ ವಾ ಚಂಡಾಲಯೋನಿಂ ವಾ ॥ ೭ ॥

ಅ ॥ ಕರ್ಮಿಗಳ ಮಧ್ಯದಲ್ಲಿ ಈ ಭೂಲೋಕದಲ್ಲಿ ಯಾರು ಯೋಗ್ಯ ಯಜ್ಞ ಮೊದಲಾದ ಕರ್ಮಗಳನ್ನು ಮಾಡಿದವರೋ ಅವರು ಈ ಲೋಕದಲ್ಲಿ ನಿರ್ದಿಷ್ಟವಾದ ಯೋನಿಯನ್ನು ಅಂದರೆ—ಬ್ರಾಹ್ಮಣ ಅಥವಾ ಕ್ಷತ್ರಿಯ ವೈಶ್ಯರ ಯೋನಿಯನ್ನು ಹೊಂದುವರು. ಅಂತೂ ಸತ್ಕುಲದಲ್ಲಿ ಹುಟ್ಟುತ್ತಾರೆ. ಈ ಜನ್ಮವು *ಒಂದು ಸಂವತ್ಸರದೊಳಗೆ ಶೀಘ್ರದಲ್ಲಿಯೇ ಆಗುವುದು. ಏವಂಜೆ ಸ್ವರ್ಗಲೋಕದಿಂದ ಕೆಳಗೆ ಇಳಿದವರು ಒಂದು ಸಂವತ್ಸರದೊಳಗೆ ತಾಯಿಯ ಶರೀರಕ್ಕೆ ಪ್ರವೇಶಿಸುತ್ತಾರೆ. ದುರಾಚಾರವುಳ್ಳವರು ಕೆಟ್ಟ ಯೋನಿಯನ್ನು ಅಂದರೆ—ನಾಯಿ, ಹಂದಿ. ಚಂಡಾಲರ ಯೋನಿಯನ್ನು ಹೊಂದುತ್ತಾರೆ. ಅಂದರೆ, ಅತಿ ಹೇಯವಾದ ನಾಯಿ ಮೊದಲಾದ ಜನ್ಮವನ್ನು ಹೊಂದುತ್ತಾರೆ ॥ ೭ ॥

ಪೀ—ವಿದ್ಯೆಯನ್ನು ಸಂಪಾದಿಸಿದ ಜ್ಞಾನಿಗಳಿಗೆ ಬ್ರಹ್ಮಪ್ರಾಪ್ತಿಯು, ಕರ್ಮಿಗಳಿಗೆ ಚಂದ್ರಪ್ರಾಪ್ತಿಯು ಆಗಲಿ ಇವೆರಡೂ ಇಲ್ಲದವರಿಗೆ ಗತಿಯಾವುದೆಂದರೆ—ಅಥವಾ ಇನೇ ಪ್ರಶ್ನೆಗೆ ಪರಿಹಾರ ಹೇಳುತ್ತಾರೆ—

ಯು. ॥ ಅಥೈತಯೋಃ ಪಥೋರ್ನೈಕತರೇಣ ಚ ತಾನೀಮಾನಿ ಕ್ಷುದ್ರಮಿಶ್ರಾಣ್ಯಸಕೃದಾವರ್ತೀನಿ ಭೂತಾನಿ ಭವಂತಿ ಜಾಯಸ್ವ ಮ್ರಿಯಸ್ವೇತ್ಯೇತತ್ತೃತೀಯಂ ಸ್ಥಾನಂ ತೇನಾಸೌ ಲೋಕೋ ನ ಸಂಪೂರ್ಯತೇ ತಸ್ಮಾಜ್ಜುಗುಪ್ಸೇತ ॥ ೮ ॥

ಅ ॥ ತದ್ಯ ಇತ್ಥಂ ವಿದುಃ ಇತ್ಯಾದಿಗಳಿಂದ ಪ್ರಸ್ತುತವಾದ ದೇವಯಾನಮಾರ್ಗ, ಅಥ ಯ ಇಮೇ ಗ್ರಾಮೇ ಇತ್ಯಾದಿಗಳಿಂದ ಪ್ರಸ್ತುತವಾದ ಪಿತೃಯಾನಮಾರ್ಗ, ಇವುಗಳಿಗೆ ಸಾಧನಗಳಾದ ಜ್ಞಾನ ಕರ್ಮಗಳಲ್ಲಿ ಜ್ಞಾನವೆಂಬ ದೇವಯಾನ ಮಾರ್ಗೋಪಾಯ; ಕರ್ಮವೆಂಬ ಪಿತೃಯಾಣ ಮಾರ್ಗೋಪಾಯ, ಇವುಗಳಲ್ಲಿ ಒಂದರಲ್ಲಿಯೂ ಯಾರು ಇರುವುದಿಲ್ಲವೋ ಅಂದರೆ—ಜ್ಞಾನವನ್ನಾಗಲೀ ಕರ್ಮವನ್ನಾಗಲೀ ಯಾರು ಸಂಪಾದಿಸುವುದಿಲ್ಲವೋ ಆ ಪ್ರಾಣಿಗಳು ಸುಖದುಃಖ ಮಿಶ್ರಗಳಾಗಿರುತ್ತವೆ. ಯಾವಾಗಲೂ ಗಮನಾಗಮನಾದಿಗಳುಳ್ಳವರು. ಅಂದರೆ—ಮರಳಿಮರಳಿ ಹುಟ್ಟುತ್ತಾರೆ, ಸಾಯುತ್ತಾರೆ, ಎಂಬುವುದು ಸ್ವರ್ಗಮೋಕ್ಷಗಳಿಗಿಂತ ಮೂರನೇ ಸ್ಥಾನವು. ಹೀಗೆ ಸದಾ ತಿರುಗಾಡಿಕೊಂಡಿರುವುದರಿಂದ ಮೂರನೇ ಸ್ಥಾನವು ತುಂಬಲ್ಪಡುವುದಿಲ್ಲ. ಆದುಕಾರಣ ಆ ಮೂರನೇ ಸ್ಥಾನದಲ್ಲಿ ವಿರಕ್ತನಾಗಬೇಕು. ॥ ೮ ॥

ಪೀ—ಪಂಚಾಗ್ನಿ ವಿದ್ಯೆಯನ್ನು ತಿಳಿದವನಿಗೆ ಪಾತಕಿಗಳ ಸಂಸರ್ಗದಿಂದ ದೋಷವು ಬರುವುದಿಲ್ಲವೆಂದು ಹೇಳುವುದಕ್ಕಾಗಿ ಪಾತಕಿಗಳ ಸಂಸರ್ಗವು ದೋಷವೆಂಬುವಲ್ಲಿ ಪ್ರಮಾಣ ಹೇಳುತ್ತಾರೆ. ಅಥವಾ ಕಪೂಯಚರಣರನ್ನು ಹೇಳುತ್ತಾರೆ –

* ಸ್ವರ್ಗಾಲ್ಲೋಕಾದಮುಷ್ಮಾತ್ಪೋ ವತ್ಸರಾತ್ಪೂರ್ವಮೇವತು । ಮಾತುಃ ಶರೀರಮಾಪ್ನೋತಿ ಪರ್ಯಟನ್ನತ್ರ ತತ್ರ ಚ ॥ ಎಂದು ಪ್ರಮಾಣವು

ಉ. ॥ ತದೇಷ ಶ್ಲೋಕಃ ಸ್ತೇನೋ ಹಿರಣ್ಯಸ್ಯ ಸುರಾಂ ಪಿಬಂಶ್ಚ ಗುರೋಸ್ತಲ್ಪಮಾವಸನ್ ಬ್ರಹ್ಮಹಾ ಚ ॥ ನಿತೇ ಪತಂತಿ ಚತ್ವಾರಃ ಪಂಚಮಶ್ಚಾಚರಂಸ್ತು ತೈರಿತಿ ॥ ೯ ॥

ಅ ॥ ಇವಕಿಗೆ ಸಂಸರ್ಗವಪ್ಪ, ಪೋಪನೆಂಬಲ್ಲಿ ಮುಂದಿನ ಶ್ಲೋಕವು ಪ್ರಮಾಣವು. ಸುವರ್ಣವನ್ನು ಕದ್ದುಕೊಂಡವನು, ಮದ್ಯವಾಮು, (ಕಳ್ಳು ಕುಡಿವುದು) ಗುರುಪತ್ನೀ ಸಂಸರ್ಗ ಮಾಡಿದವನು, ಬ್ರಹ್ಮಹತ್ಯಾ ಮಾಡಿದವನು, ಇವರು ನಾಲ್ವರು ಪತಿತರು. ಈ ನಾಲ್ವರೊಂದಿಗೆ ಸಂಸರ್ಗ ಮಾಡಿದವನೂ ಪತಿತನಾಗುವನು. ॥೯॥

ಪೀ—ಪಂಚಾಗ್ನಿವಿದ್ಯೆಯನ್ನು ಸ್ತುತಿಸುತ್ತಾರೆ :

ಉ. ॥ ಅಥ ಹೈ ಯ ಏತಾನೇವಂ ಪಂಚಾಗ್ನೀನ್ವೇದ ನ ಸಹ ತೈರಪ್ಯಾಚರನ್ ಪಾಪ್ಮನಾ ಲಿಪ್ಯತೇ ಶುದ್ಧಃ ಪೂತಃ ಪುಣ್ಯಲೋಕೋ ಭವತಿ ಯ ಏವಂ ವೇದ ಯ ಏವಂ ವೇದ ॥ ಇತಿ ದಶಮಃ ಖಂಡಃ ॥ ೭-೧೦ ॥ ೧೦ ॥

ಅ ॥ ಮುಂದೆ ಹೇಳಿದ ಪ್ರಕಾರ ಮೂ ಮೊದಲಾದ ಪಂಚಾಗ್ನಿಗಳನ್ನು ತಿಳಿದವನು ಪಂಚಮಹಾಪಾತಕಿಗಳ ಸಂಸರ್ಗ ಮಾಡಿದರೂ ಪಾಪದಿಂದ ಲಿಪ್ತನಾಗುವುದಿಲ್ಲ. ಮತ್ತು ಹೀಗೆ ತಿಳಿದವನು ಬೇರೆಯ ಕೊರಗೂ ತಾನು ಪವಿತ್ರನಾಗಿ (ನಿರ್ಮಲವಾದ ದೇಹಾದಿಗಳುಳ್ಳವನಾಗಿ) ಪೇರೆಯವರನ್ನು ಪವಿತ್ರೀಕರಿಸುತ್ತಾನೆ. ಮತ್ತು ನಿರ್ಮಲ (ಅಕಾಮ) ಫಲವಿಂದ ಸಾಧ್ಯವಾದ ವೈಕುಂಠಾದಿಲೋಕವನ್ನು ಹೊಂದುತ್ತಾನೆ

ಪೀ -ಪಂಚಾಗ್ನಿವಿದ್ಯೆಯು ಭಗವತ್ಪ್ರಾಪ್ತಿಯೆ ಎಂಬುದಕ್ಕೆ ಪ್ರಮಾಣ ತೋರುತ್ತಾ ಶ್ರೀ. ಭಾ. ೬. ೭ - ಮಂದಗಳಲ್ಲಿರುವ ಚಿತ್ರಶಬ್ದದ ಅರ್ಥ ತೋರುತ್ತಾರೆ--

ಭಾ. ॥ (೧) ನಾರಾಯಣಾದಯಃ ಪಂಚ ಕ್ರಮಾತ್ಪಂಚಾಗ್ನಯಃ ಸ್ಮೃತಾಃ । ಅದನಾದಂಗನೇತೃತ್ವಾನ್ನಿತರಾಮಚಲತ್ವತಃ ॥ (೨) ಸಮೇಧನಾತ್ಸಪಿದ್ಧಿಷ್ಣುರ್ದೂರ್ತ್ವಾದ್ಧೂಮ ಉಚ್ಯತೇ । ಅರಂಚಿತತ್ವಾದರ್ಚಿರ್ವ ಸೋಂಗಾರೋಂಗರತೇರಪಿ ॥ ವಿವಿಧಂ ಸ್ಫುರಣಾಚ್ಚೈವ ವಿಸ್ಫುಲಿಂಗ ಇತೀರಿತಃ । ಪುನರ್ನಾರಾಯಣಾದ್ಯಾತ್ಮಾ ಪ್ರತ್ಯೇಕಂ ಪಂಚರೂಪವಾನ್ ॥ (೩) ಆದಿತ್ಯಸ್ಯ ತಥಾಂದಾನಾದ್ರಶ್ಮೀರತಿರ(ಶ್ಮಿಸ್ಸ ರತಿ)ರೂಪತಃ । ತಮಸಾಂಹನನೀಯತ್ವಾದಹರ್ಚಂದ್ರಃ ಪರಸ್ಪುಟಂ । ಅನನ್ಯರಾಜೋನಕ್ಷತ್ರಂ ॥ (೪) ವಾಯುಜ್ಯಾರ್ನಾಯುರೂಪತಃ । ಅಭ್ರಮಬ್ಭರಣಾದ್ವಿಷ್ಣುರ್ನಿರ್ದುದ್ಯುದ್ಯೋತನಾದಪಿ । ಅತನಾದಶನಿಶ್ಚೈವ ನಿರ್ಹಾರಾದಾದ್ರಾದನಿಸ್ತಥಾ ॥ ೧ ॥

ಅ ॥ (೧) ಮೃ. ಪರ್ಜನ್ಯ. ಧರಾ. ಪುರು. ಸ್ತ್ರೀ ಎಂಬ ಐದು ಅಗ್ನಿಗಳು ಕ್ರಮವಾಗಿ ನಾರಾಯಣ ವಾಸುದೇವಾದಿ ರೂಪಗಳೇ ಆಗುತ್ತವೆ. (ಅಗ್ನಿಶಬ್ದಕ್ಕೆ ನಾರಾಯಣಾದಿಗಳಲ್ಲಿ ಅವಯವಾರ್ಥವನ್ನು ತೋರಿಸುತ್ತಾರೆ --) ನಾರಾಯಣನು ಸರ್ವಸಂಚಾರಕನಾಮದರಿಂದ ಅಥವಾ ಸರ್ವಾಂಗಗಳಿಗೆ ಪ್ರೇರಕನಾಮದರಿಂದ ಅಥವಾ ಸ್ವತಃ ಪ್ರವೃತ್ತಿನಾಶರಿಕ್ಕೆ ಶಕ್ತಿಯು ಳುದಿರುವ ಜಗತ್ತಿಗೆ ಪ್ರವರ್ತಕನಾಮದರಿಂದ,

ಮತ್ತು ಅತ್ಯಂತವಾಗಿ ಹಂಬಾಡದೆ ಇರುವುದರಿಂದಲೂ ಅಗ್ನಿ ಎನಿಸಿಕೊಳ್ಳುವನು. (೨) (ಈಗ ಪ್ರತಿ ಅಗ್ನಿಗಳಿಗೂ ಸಮಿತ್, ಧೂಮ, ಅರ್ಚಿ, ಅಂಗಾರ, ವಿಷ್ಫುಲಿಂಗ ಎಂದು ಏನು ಆವಶ್ಯಕಗಳೆಂದು ಹೇಳಿವೆ. ಅವುಗಳ ಅರ್ಥ ಹೇಳುತ್ತಾರೆ.) ವಿಷ್ಣುವ ಜೆನ್ನಾಗಿ ಅಭಿವೃದ್ಧನಾಗಿರುವುದರಿಂದ ಅಂದರೆ, ಸರ್ವೋತ್ತಮನಾಮದರಿಂದ ಸಮಿತ್ ಎಂದೂ, ಶತ್ರುಗಳನ್ನು ನಡುಗಿಸುವುದರಿಂದ ಧೂಮನೆಂದೂ, ಜೆನ್ನಾಗಿ ಪೂಜಿಸಲ್ಪಡುವುದರಿಂದ ಅರ್ಚಿಃ ಎಂದೂ, ಜೀವರ ಶರೀರದಲ್ಲಿ ಕ್ರೀಡಿಸುವುದರಿಂದ ಅಥವಾ ತನ್ನ ಶರೀರದಲ್ಲಿ ಕ್ರೀಡಿಸುವುದರಿಂದ ಅಂಗಾರನೆಂದೂ ಜ್ಞಾನಿಗೆ ಬಹುಪ್ರಕಾರ ಪ್ರಕಾಶಗೊಳ್ಳುವುದರಿಂದ ವಿಷ್ಫುಲಿಂಗನೆಂದೂ ಎನಿಸುತ್ತಾನೆ. ನಾರಾಯಣಾದಿರೂಪನಾದ ವಿಷ್ಣುವು ಪ್ರತಿ ಒಬ್ಬನೂ ಏಳೈದು ರೂಪಗಳುಳ್ಳವನು. ಅತನು ಸಮಿತ್ ಇತ್ಯಾದಿ ಪ್ರಕಾರ ಹೇಳಲ್ಪಡುತ್ತಾನೆ. (೩) (ಳನೇ ಖಂಡದ ಪ್ರಥಮಾಗ್ನಿಯಲ್ಲಿ ಹೇಳಿದ ಆದಿತ್ಯ, ರಶ್ಮಿ, ಅಹಃ, ಚಂದ್ರ, ನಕ್ಷತ್ರ ಶಬ್ದಗಳಿಗೆ ಅರ್ಥಹೇಳುತ್ತಾರೆ—) ವಿಷ್ಣುವ ಆಯುಸ್ಸು ಮೊದಲಾದವುಗಳನ್ನು ತೆಗೆದುಕೊಳ್ಳುವುದರಿಂದ ಆದಿತ್ಯನೆಂದೂ ತೃಪ್ತಿ ಮತ್ತು ಸುಖಸ್ವರೂಪನಾದುದರಿಂದ ರಶ್ಮಿಃ ಎಂದೂ, ನಿತ್ಯದಲ್ಲಿಯೂ ಅಜ್ಞಾನಲೇಶವಿಲ್ಲದವನಾದುದರಿಂದ ಅಹಃ ಎಂದೂ, ಪೂರ್ಣಸುಖಸ್ವರೂಪನಾದುದರಿಂದ ಚಂದ್ರನೆಂದೂ, ಇನ್ನೊಬ್ಬ ರಕ್ಷಕನಿಲ್ಲದಿರುವುದರಿಂದ ನಕ್ಷತ್ರನೆಂದೂ ಎನಿಸುತ್ತಾನೆ (೪) (ಈಗ ಐದನೇ ಖಂಡದಲ್ಲಿ ಎರಡನೇ ಪರ್ಜನ್ಯ ಅಗ್ನಿಯಲ್ಲಿ ಹೇಳಿದ ವಾಯು, ಅಭ್ರ, ವಿದ್ಯುತ್, ಅಶನಿ, ಹ್ರಾದುನಿ ಶಬ್ದಗಳಿಗೆ ಅರ್ಥ ಹೇಳುತ್ತಾರೆ—) ಶ್ರೀವಿಷ್ಣುವು ಜ್ಞಾನಸ್ವರೂಪನೂ, ಆಯುಸ್ಸುವನ್ನು ಕೊಡುವವನೂ ಆದುದರಿಂದ ವಾಯುವೆಂದೂ, ಜಲಗಳನ್ನು ಹೊತ್ತುಕೊಳ್ಳುವುದರಿಂದ ಅಭ್ರನೆಂದೂ, ವಿಶೇಷವಾಗಿ ಪ್ರಕಾಶಿಸುವುದರಿಂದ ವಿದ್ಯುತ್ ಎಂದೂ, ಸರ್ವವನ್ನು ಭಕ್ಷಿಸುವುದರಿಂದ ಅಶನಿಯೆಂದೂ, ಅತ್ಯಂತವಾಗಿ ಸಂತೋಷಗೊಳ್ಳುವುದರಿಂದ ಹ್ರಾದುನಿ ಎಂದೂ ಅನಿಸುತ್ತಾನೆ.

॥ ೧ ॥

ಓ—ಈಗ ೬ನೇ ಖಂಡದಲ್ಲಿ ೩ನೇ ಧರಾ ಎಂಬ ಅಗ್ನಿಯಲ್ಲಿ ಹೇಳಿದ ಸಂವತ್ಸರ, ಆಕಾಶ, ರಾತ್ರಿ, ದಿಕ್, ಅವಾಂತರದಿಕ್ ಎಂಬ ಶಬ್ದಗಳಿಗೆ ಅರ್ಥ ಹೇಳುತ್ತಾರೆ—

ಭಾ.॥ (೧) ಸಂವತ್ಸರೋ ವಾಸನಾಚ್ಚ ಸ ಆಕಾಶಃ ಪ್ರಕಾಶನಾತ್ । ರಾತ್ರಿಶ್ಚ ರತಿದಾನಾತ್ಸ ದಿಶತೀತಿ ದಿಶಃ ಸ್ಮೃತಃ । ಅವಾಂತರಂ ದಿಶೇದ್ಯಸ್ಮಾದವಾಂತರದಿಗುಚ್ಯತೇ ॥ (೨) ವಚನಾದ್ವಾಕ್ತಥಾ ಪ್ರಾಣಸ್ಪನನಾಚ್ಚಕ್ಷುರುಚ್ಯತೇ । ದರ್ಶನಾಚ್ಛ್ರವಣಾಚ್ಛ್ರೋತ್ರಂ ಜಿಹ್ವಾ ವೈ ಹೋಮತಃ ಸ್ಮೃತಃ ॥ (೩) ಉಪಸ್ಥಿತೇರುಪಸ್ಥಸ್ಯ ಉಪಮಂತ್ರಕೃದೇವ ಸಃ । ಯೋನಿರ್ಯಜನಕ್ತಿ ಯಸ್ಮಾತ್ಸ ಸರ್ವಾ(ಚಾ)ಂತಃಕೃಚ್ಚ ನಂದನಃ ॥ (೪) ಅಸೌ ಲೋಕಃ ಪ್ರಕಾಶತ್ವಾತ್ತಾಣಸ್ಥತ್ವಾಚ್ಚ ಕೇಶವಃ । ಪರ್ಜನ್ಯೋ ಜನಕೋ ಯಸ್ಮಾತ್ ಪೃಥಿವೀ ಪ್ರಥಿತತ್ವತಃ ॥ ಪುರುಷಃ ಪುರು ಯಸ್ಮಾತ್ಸ ಯೋಷಾ ಜೋಷ್ಯೋ ಯತೋಽಖಿಲೈಃ । ಇತಿ ಸಾಮಸಂಹಿತಾಯಾಂ

॥ ೨ ॥

ಅ ॥ (೧) ವಿಷ್ಣುವ ಜೆನ್ನಾಗಿ ಭಕ್ತರನ್ನು ನಾಸಗೊಳಿಸುವುದರಿಂದ ಅಥವಾ ಸಂತೋಷಗೊಳಿಸುವುದರಿಂದ ಅಥವಾ ಮಕ್ಕಳಾದ ಬ್ರಹ್ಮಾದಿಗಳನ್ನು ಜೆನ್ನಾಗಿ ಸಂತೋಷಗೊಳಿಸುವುದರಿಂದ ಸಂವತ್ಸರನೆಂದೂ, ಜೆನ್ನಾಗಿ ಪ್ರಕಾಶಿಸುವುದರಿಂದ ಆಕಾಶನೆಂದೂ, ಸುಖವನ್ನು ಕೊಡುವುದರಿಂದ ರಾತ್ರಿ ಎಂದೂ, ಪರತತ್ತ್ವವನ್ನು ಪದೇಶಿಸುವುದರಿಂದ ದಿಕ್ ಎಂದೂ, ಅಪರತತ್ತ್ವವನ್ನು ಪದೇಶಿಸುವುದರಿಂದ ಅವಾಂತರದಿಕ್ ಎಂದೂ ಅನಿಸುತ್ತಾನೆ. (೨)(೭ನೇ ಖಂಡದಲ್ಲಿದ್ದ ೪ನೇ ಪುರುಷ ಎಂಬ ಅಗ್ನಿಯಲ್ಲಿದ್ದ ವಾಕ್, ಪ್ರಾಣ, ಜಿಹ್ವಾಚಕ್ಷುಃ. ಶ್ರೋತ್ರ ಶಬ್ದಗಳಿಗೆ ಅರ್ಥ ಹೇಳುತ್ತಾರೆ -) ಶ್ರೀಹರಿಯು ಮಾತನಾಡುವುದರಿಂದ ವಾಕ್ ಎಂದೂ, ಜೆನ್ನಾಗಿ ಜಗತ್ತಿನ ವ್ಯಾಪಾರ ನಡಿಸುವುದರಿಂದ ಪ್ರಾಣನೆಂದೂ ಎಲ್ಲಾದನ್ನೂ ನೋಡುವುದ

ರಿಂದ ಜಕ್ಷ್ಣುಃ ಎಂದೂ, ಕೇಳುವುದರಿಂದ ಶ್ರೋತ್ರವೆಂದೂ. ಹೋಮಕ್ಕೆ ಅರ್ಪಯನಾದುದರಿಂದ ಅಥವಾ ಹೋಮವನ್ನು ಮಾಡುವವನಾದುದರಿಂದ ಜಿಹ್ವಾ ಎಂದೂ ಎನಿಸುತ್ತಾನೆ. (೩) (ಏನೇ ಖಂಡದಲ್ಲಿವ ಏನೇ ಯೋಷಾ ಅಗ್ನಿಯಲ್ಲಿ ಹೇಳಿದ ಉಪಸ್ಥಾದಿ ಶಬ್ದಗಳ ಅರ್ಥ ಹೇಳುತ್ತಾರೆ.) ಶ್ರೀಹರಿಯು ಸಮಸ್ತ ಜೀವರ ಹೃದಯದಲ್ಲಿದ್ದು ಸನ್ನಿಹಿತದಲ್ಲಿದ್ದ ಪ್ರಯುಕ್ತ ಉಪಸ್ಥನೆಂದೂ, ಸಂಭೋಗಕ್ಕಾಗಿ ಮಾತೃತ್ವ ಸಂಭಾವನೆಯಲ್ಲಿದ್ದುದರಿಂದ ಉಪಮಂತ್ರಣನೆಂದೂ, ಮಿಶ್ರೀಕರಿಸುವುದರಿಂದ ಯೋನಿಯೆಂದೂ, ಯೋನಿಯೊಳಗೆ ಸುರತವ್ಯಾಪಾರ ನಡಿಸುವುದರಿಂದ ಅಂಶುಕರಣ ಕರ್ತನೆಂದೂ, ಸಂತೋಷಗೊಳಿಸುವುದರಿಂದ ಅಭಿನಂದನೆಂದೂ ಎನಿಸುತ್ತಾನೆ. (೪) (ಏದು ಅಗ್ನಿಗಳಲ್ಲಿ ಹೇಳಿದ ಅಸೌ ಲೋಕ, ಪರ್ಜನ್ಯ, ಪೃಥಿವೀ, ಪುರುಷ ಯೋಷಾ ಶಬ್ದಗಳಿಗೆ ಅರ್ಥ ಹೇಳುತ್ತಾರೆ—) ಶ್ರೀಹರಿಯು ಮುಖ್ಯಪ್ರಾಣನಲ್ಲಿದ್ದ ಪ್ರಯುಕ್ತವೂ ಪ್ರಕಾಶಸ್ವರೂಪನಾದುದರಿಂದಲೂ ಅಸೌಲೋಕನೆಂದೂ, ಸರ್ವಕ್ಕೂ ಸೃಷ್ಟಿಕರ್ತನಾದುದರಿಂದ ಪರ್ಜನ್ಯನೆಂದೂ ಸರ್ವತ್ರ ಪ್ರಸಿದ್ಧನಾದುದರಿಂದ ಪೃಥಿವೀ ಎಂದೂ, ಸರ್ವಗುಣಪರಿಪೂರ್ಣನಾದುದರಿಂದ ಪುರುಷನೆಂದೂ, ಎಲ್ಲರಿಂದಲೂ ಪ್ರೀತಿಯಿಂದ ಸೇವಿಸಲ್ಪಡುವುದರಿಂದ ಯೋಷಾ ಎಂದೂ ಅರಿಯುತ್ತಾನೆ. ಎಂದು ಸಾಮಸಂಹಿತೆಯಲ್ಲಿದೆ. ॥ ೩ ॥

ಶೀ—ಧೂಮೋ ಧೂತ್ಯಾಧ್ಯಂ ಭವತಿ ಇತ್ಯಾದಿಗಳಲ್ಲಿ ಕರ್ಮಿಗಳಿಗೆ ಧೂಮಾದಿ ದೇವತೆಗಳಿಂದ ಜನ್ಮವು ಅಥವಾ ಧೂಮಾದಿ ದೇವತೆಗಳ ಪದಪ್ರಾಪ್ತಿಯು ಹೇಳಲ್ಪಡುತ್ತದೆ. ಏನೂ ಅಲ್ಲ ಎಂದು ಶ್ರುತಿಯಿಂದ ಹೇಳುತ್ತಾರೆ—

ಭಾ. ॥ (೧) ಅಭ್ರಧೂಮಾದಿಭಾವಸ್ತು ಜೀವಸ್ಯಾಭ್ರಾದಿಸಂಸ್ಥಿತೇಃ । ಅಭ್ರಾದಿಮೂರ್ತಿರೂಪಂ ತು ಜ್ಞಾನಿ(ನ)ಪ್ರಾಪ್ಯಂ ಯತೋ ಭವೇತ್ ॥ ಇತಿ ಚ ॥ (೨) ಪರಮಸ್ಯ ಜನ್ಯಮಿತಿ ಪರ್ಜನ್ಯಃ ॥ (೩) ಪುಂಪಪುಂಚಿಸ್ವರೂಪೇಣ ಸೂರ್ಯಾದೌ ಸಂಸ್ಥಿತೋ ಹರಿಃ । ಸ್ವರ್ಗಾದೌ ಚಾಪಿ ತನ್ನಾಮಾ ತದ್ಯೋಗಾನ್ನಾಮಿನಃ ಸದೇ ॥ ಇತಿ ಚ ॥ ಇತಿ ದರಮಃ ಖಂಡಃ ॥ ೭–೧೦ ॥ ॥ ೪ ॥

ಅ ॥ (೧) ಜೀವನಿಗೆ ಅಭ್ರಧೂಮಾದಿಭಾವವೆಂದರೆ— ಅಭ್ರಾದಿಗಳಲ್ಲಿ ಇರುವುದು (ಅಂದರೆ— ಮೇಘಾದಿಗಳಲ್ಲಿ ಪ್ರವೇಶವಾಗಿ ಅವುಗಳು ಹೋಗುವಾಗ ಹೋಗುವುದು. ಅವುಗಳು ಸಿಲ್ಲಿದಾಗ ಸಿಲ್ಲುವುದು. ಇತ್ಯಾದಿ ಅವುಗಳ ಧರ್ಮ ಒರಿವುದು) ಅಂದರೆ ಧೂಮಾದಿಗಳಿಂದ ಜನ್ಮವಾಗಲೀ, ಅವುಗಳ ಪದ ಪ್ರಾಪ್ತಿಯಾಗಲೀ ಅಲ್ಲವೇ ಅಲ್ಲ.) (ಜ್ಞಿಗ್ರನು ವೈತ್ರಸಾಗುವುದು ಎಲ್ಲಿಯೂ ಕಂತುಬಾಧವಿರುವುದರಿಂದ ಜನ್ಮವು ಕೂಡದಿದ್ದರೂ ಧೂಮಾದಿ ದೇವತೆಗಳ ಪದಪ್ರಾಪ್ತಿಯು ಕೂಡುಬಹುದಷ್ಟೆ. ಎಂದರೆ—) ಆಯಾದಿ ದೇವತೆಗಳ ಪದಪ್ರಾಪ್ತಿಯು ಅವಕ್ಕೆ ಹೋಗ್ಯರಾದ ಜ್ಞಾನಿಗಳಿಂದಲೇ ಜ್ಞಾನದಿಂದ ಹೊಂದಲ್ಪಡುವುದು. ಕರ್ಮಿಗಳಿಗೆ ಜ್ಞಾನವಿಲ್ಲದಿರುವುದರಿಂದ ಹೊಂದಲು ಶಕ್ಯವಿಲ್ಲ. (೨) ಉತ್ತಮವಾದ ಚತುರ್ಮುಖನು ಶ್ರೀಹರಿಯಿಂದ ಹುಟ್ಟಿದಪ್ರಯುಕ್ತ ಶ್ರೀಹರಿಯು ಪರ್ಜನ್ಯನೆನಿಸುತ್ತಾನೆ. (೩) (ತಸ್ಮಾದಿತ್ಯ ವಿವ ಸಮಿತ್ ಇತ್ಯಾದಿಗಳಲ್ಲಿ ಹೇಳಿದ ಆದಿತ್ಯ ಮೊದಲಾದ ೫೫ ಶಬ್ದಗಳೂ ಅಸೌಲೋಕಃ ಇದುಮೊದಲಾದ ಇದು ಶಬ್ದಗಳೂ ಅವಯವಾರ್ಥದಿಂದ ಶ್ರೀಹರಿಯನ್ನು ಹೇಳುತ್ತವೆಂದರು. ಈಗ ರೂಢಿಯಿಂದಲೂ ಶ್ರೀಹರಿಯು ಎಂದೇ ಸಿದ್ಧನಾಗುತ್ತಾನೆನ್ನುತ್ತಾರೆ—) ೫೫ ರೂಪಗಳಿಂದ ಸೂರ್ಯಾದಿಗಳಲ್ಲಿಯೂ ಸ್ವರ್ಗಾದಿಗಳಲ್ಲಿಯೂ ಇರುವ ಶ್ರೀಹರಿಯೇ ಆದಿತ್ಯ ಮೊದಲಾದ ಹೆಸರುಗಳುಳ್ಳವನು. ದೇಶಿಯವರು ಅವನ ಅಧೀನದಲ್ಲಿದ್ದುದರಿಂದಲೇ ಆದಿತ್ಯ ಮೊದಲಾದ ಹೆಸರುಳ್ಳವರು. ॥ ೭–೧೦ ॥ ॥ ೪ ॥

ಪತ್ತನೇ ಖಂಡವು ಮುಗಿಯಿತು.

೧೧ನೇ ಖಂಡವನ್ನು

ಹೀ—ಸಮಸ್ತಪಾಪಗಳ ಪರಿಹಾರವಾಗಿ ವೈಕುಂಠಾದಿಲೋಕಗಳ ಪ್ರಾಪ್ತಿಗೆ ಕಾರಣವಾದ ಪಂಚಾಗ್ನಿವಿದ್ಯೆಯನ್ನು ಹೇಳಿರುವರು. ಈಗ ೮ ಖಂಡಗಳಿಂದ ವೈಶ್ವಾನರವಿದ್ಯೆಯನ್ನು ಕಥೆಯ ಮೂಲಕ ಹೇಳುತ್ತಾರೆ—

ಉ. ॥ ಪ್ರಾಚೀನಶಾಲ ಔಪಮನ್ಯವಃ ಸತ್ಯಯಜ್ಞಃ ಪೌಲುಷಿರಿಂದ್ರ-ದ್ಯುಮ್ನೋ ಭಾಲ್ಲವೇಯೋ ಜನಃ ಶಾರ್ಕರಾಕ್ಷ್ಯೋ ಬುಡಿಲ ಆಶ್ವತರಾಶ್ವಿಸ್ತೇ ಹ್ಯೇತೇ ಮಹಾಶಾಲಾ ಮಹಾಶ್ರೋತ್ರಿಯಾಃ ಸಮೇತ್ಯ ಮಿಮಾಂಸಾಂಚಕ್ರ್ರುಃ ಕೋ ನ ಆತ್ಮಾ ಕಿಂ ಬ್ರಹ್ಮೇತಿ

॥ ೧ ॥

ಅ ॥ ಉಪಮನ್ಯುವಿನ ಮಗನಾದ ಪ್ರಾಚೀನಶಾಲನೆನ್ನುವವನೂ, ಪುಲುಷನ ಮಗನಾದ ಸತ್ಯಯಜ್ಞನೆನ್ನುವವನೂ, ಭಲ್ಲವೆಯ ಮಗನಾದ ಇಂದ್ರದ್ಯುಮ್ನನೆನ್ನುವವನೂ, ಶರ್ಕರಾಕ್ಷನ ಮಗನಾದ ಜನನೆನ್ನುವವನೂ, ಅಶ್ವತರಾಶ್ವನ ಮಗನಾದ ಬುಡಿಲನೆನ್ನುವವನೂ ಪ್ರತಿಸಂವತ್ಸರದಲ್ಲಿ ಜಿನ್ನಾಗಿ ಯಾಗವನ್ನು ಮಾಡಿರುವುದರಿಂದ ಮಹಾಶಾಲಾ ಎನಿಸಿಕೊಂಡ. ಜಿನ್ನಾಗಿ ವೇದವೇದಾರ್ಥಗಳನ್ನು ವಿಚಾರ ಮಾಡಿರುವುದರಿಂದ ಮಹಾಶ್ರೋತ್ರಿಯರೆನಿಸಿಕೊಂಡ ಈ ಐವರು ಒಂದು ಕಡೆ ಒಟ್ಟುಸೇರಿ ನಮ್ಮಿಂದ ಉಪಾಸ್ಯನಾದ ವೈಶ್ವಾನರನಿಗೆ ಏನು ಲಕ್ಷಣವು? ಗುಣಪೂರ್ಣನಾದವನು ಯಾರು? ಎಂದು ವಿಚಾರ ಮಾಡಿದರು.

॥ ೧ ॥

ಉ.॥ ತೇ ಹ ಸಂಪಾದಯಾಂಚಕ್ರುರುದ್ದಾಲಕೋ ವೈ ಭಗವಂತೋ-ಽಯಮಾರುಣಿಃ ಸಂಪ್ರತೀಮಮಾತ್ಮಾನಂ ವೈಶ್ವಾನರಮಧ್ಯೇತಿ ತꣳ ಹಂತಾ-ಭ್ಯಾಗಚ್ಛಾಮೇತಿ ತꣳ ಹಾಭ್ಯಾಜಗ್ಮುಃ

॥ ೨ ॥

ಅ ॥ ಹೀಗೆ ಪರಸ್ಪರವಾಗಿ ಆತ್ಮಸ್ವರೂಪವನ್ನು ವಿಚಾರಮಾಡಿದರೂ ವಿಶೇಷ ನಿರ್ಣಯವನ್ನು ಹೊಂದದಿರುವ ಆ ಐವರು ವಿಶೇಷನಿರ್ಣಯಕ್ಕಾಗಿ ಉದ್ದಾಲಕರ ಸಮೀಪಕ್ಕೆ ಹೋಗಿ ಪರಸ್ಪರವಾಗಿ ಹೇಳಿಕೊಂಡರು. (ಅಂದರೆ—ತಾವೇ ಮಾತಾಡಿಕೊಂಡರು.) ಎಲೋ ಪೂಜ್ಯರೇ. ಅರುಣನ ಪುತ್ರರಾದ ಉದ್ದಾಲಕರು ಈಗ ನಮಗೆ ಅಭಿಮತನಾದ ಸರ್ವರಿಗೂ ಸ್ವಾಮಿಯಾದ ವೈಶ್ವಾನರನನ್ನು ಜಿನ್ನಾಗಿ ತಿಳಿದಿರುತ್ತಾರೆ. ಸಂತೋಷದಿಂದ ಉದ್ದಾಲಕರ ಸಮೀಪಕ್ಕೆ ಹೋಗುವ, ಎಂದು ಪರಸ್ಪರವಾಗಿ ಹೇಳಿಕೊಂಡರು. ಹೀಗೆ ನಿಶ್ಚಯಮಾಡಿ ಉದ್ದಾಲಕರ ಸಮೀಪಕ್ಕೆ ಹೋದರು. ॥ ೩ ॥

ಉ. ॥ ಸ ಹ ಸಂಪಾದಯಾಂಚಕಾರ ಪ್ರಕ್ಷ್ಯಂತಿ ಮಾಮಿಮೇ ಮಹಾ-ಶಾಲಾ ಮಹಾಶ್ರೋತ್ರಿಯಾಸ್ತೇಭ್ಯೋ ನ ಸರ್ವಮಿವ ಪ್ರತಿಪತ್ಸ್ಯೇ ಹಂತಾ-ಹಮನ್ಯಮಭ್ಯನುಶಾಸಾನೀತಿ

॥ ೪ ॥

ಅ ॥ ಆಗ ಉದ್ದಾಲಕರು ಆ ಋಷಿಗಳು ಬಂದ ಉದ್ದೇಶ ತಿಳಿದು ಇವರಿಗೆ ಉಪದೇಶಕನು ಮತ್ತೊಬ್ಬನೆಂದು ಮನಸ್ಸಿನಲ್ಲಿ ನಿಶ್ಚಯಮಾಡಿಕೊಂಡರು. (ಏಕೆಂದರೆ—) ಪ್ರತಿಸಂವತ್ಸರದಲ್ಲಿ ಯಜ್ಞ ಮಾಡುವ ಮಹಾಶ್ರೋತ್ರಿಯರಾದ ಇವರು ನನಗೆ ಪ್ರಶ್ನೆ ಮಾಡುತ್ತಾರೆ—ಅವರು ಕೇಳಿದುದೆಲ್ಲವನ್ನೂ

ಇವರಿಗೆ ಹೇಳಲಿಕ್ಕೆ ಸಾಧು ತೀಡುಬಾರಿ. ಅದುಕಾರಣ ಮಕ್ಕಳಿಬ್ಬರನ್ನೂ ಅವರಿಗೆ ಉಪದೇಶಕರನ್ನಾಗಿ ಹೋಗುವೆನು. ಹೀಗೆ ನಿಶ್ಚಯಿಸಿಕೊಂಡು ॥ ೩ ॥

ಉ. ॥ ತಾನ್ಹೋವಾಚಾಶ್ವಪತಿರ್ವೈ ಭಗವಂತೋ ಯಂ ಕೈಕೇಯಃ ಸಂಪ್ರತೀದಮನುಮಾತ್ಮಾನಂ ವೈಶ್ವಾನರಮ-ಧ್ಯೇತಿ ತಸ್ಮೈ ಹಾಭ್ಯಾಗಚ್ಛಾಮೇತಿ ತಸ್ಮೈ ಹಾಭ್ಯಾಜಗ್ಮುಃ ॥ ೪ ॥

ಅ ॥ ಇವರಿಗೆ ಹೇಳಿದರು ಎಲೋ ಪೂಜ್ಯರೇ ಕೇಕಯದೇಶಕ್ಕೆ ಅಧಿಪತಿಯಾದ ಅಶ್ವಪತಿಯೆಂಬ ರಾಜನು ಈಗ ಈ ವೈಶ್ವಾನರನನ್ನು ಚೆನ್ನಾಗಿ ತಿಳಿದಿರುತ್ತಾನೆ ಅವನ ಸಮೀಪಕ್ಕೆ ಹೋಗುವ, ಎಂದರು ಆಗ ಅವರೆಲ್ಲರೂ ಅಶ್ವಪತಿಯ ಸಮೀಪಕ್ಕೆ ಬಂದರು. ॥ ೪ ॥

ಉ. ॥ ತೇಭ್ಯೋ ಹ ಪ್ರಾತಃ ಪ್ರತ್ಯುತ್ಥಾಯ ಪೃಥಗರ್ಘಾಣಿ ಕಾರಯಾಂಚಕಾರ ನ ಹ ಪ್ರಾತಃ ಸಂಜಿಹಾನ ಉವಾಚ ನ ಮೇ ಸ್ತೇನೋ ಜನಪದೇ ನ ಕದರ್ಯೋ ನ ಮದ್ಯಪೋ ನಾನಾಹಿತಾಗ್ನಿರ್ನಾವಿದ್ವಾನ್ನ ಸ್ವೈರೀ ಸ್ವೈರಿಣೀ ಕುತೋ ಯಕ್ಷ್ಯಮಾಣೋ ವೈ ಭಗವಂತೋಽಯಮುಸ್ಮಿ ಯಾವದೇಕೈಕಸ್ಮಾ ಋತ್ವಿಜೇ ಧನಂ ದಾಸ್ಯಾಮಿ ತಾವದ್ಭಗವದ್ಭ್ಯೋ ದಾಸ್ಯಾಮಿ ವಸಂತು ಭಗವಂತ ಇತಿ ॥ ೫ ॥

ಅ ॥ ಬಂದ ಆ ಬ್ರಾಹ್ಮಣರಿಗೆ ರಾಜನು ಪ್ರತ್ಯೇಕ ಪ್ರತ್ಯೇಕ ಎಲ್ಲರಿಗೂ ಬೇರಾಗಿ ಗೌರವಾರ್ಘಗಳನ್ನು ಪ್ರತ್ಯೇಕವಾಗಿ ಮಾಡಿಸಿದನು ಆ ರಾಜನು ಮರುದಿನ ಬೆಳಿಗ್ಗೆ ಮಾತಿನಿಂದ ಎಬ್ಬಿಸುತ್ತ ಹೇಳಿದನು. (ಎಲೋ ಪೂಜ್ಯರೇ ನೀವೆಲ್ಲರೂ ಒಬ್ಬರು ಕಾರಣವೇನು? ನನ್ನ ರಾಜ್ಯದಲ್ಲಿ ಕಳ್ಳರು ಸೊಲ್ಲರು ಇಲ್ಲದಿರುವುದರಿಂದ ಅವರಿಂದ ಬಹುವು ಎರಲಾರದೆನ್ನುತ್ತಾ ನಿಶೆಯೆ ನನ್ನ ರಾಜ್ಯದಲ್ಲಿ ಇಲ್ಲವಾಗಿದ್ದು ದಾನವಾಡದಿರುವವನೂ, ಅಧಮಾಧಮ ಕಾಲದಲ್ಲಿ ಹೇಳಿದ ಸದಾಚಾರಗಳನ್ನು ಮಾಡದಿರುವವನೂ ಇಲ್ಲ. ಕಳ್ಳಕಾಮುಕನು ಇಲ್ಲ ಅಗ್ನಿಹೋತ್ರ(ಅಗ್ನಿಹೋತ್ರಾದಿ) ವಿದ್ಯೆಯವನೂ ಇಲ್ಲ ವಿದ್ವಾಂಸನಾಗದಿದ್ದವನೂ ಇಲ್ಲ ಪಾರನೂ ಇಲ್ಲ. ಅದುದರಿಂದಲೇ ವ್ಯಭಿಚಾರಿಣಿ ಸ್ತ್ರೀಯರೂ ಸುಲಭರಾಂ ಇಲ್ಲ (ನೀವು ಧನದ ಆಪೇಕ್ಷೆಯಿಂದ ಬಂದವರಾದರೆ ಧನವಾನ ಮಾಡಿನೆನು ಎನ್ನುತ್ತಾನೆ—) ಎಲೋ ಪೂಜ್ಯರೇ ನಾನು ಯಾಗಮಾಡುವೆನು ಅದರಲ್ಲಿ ಒಬ್ಬೊಬ್ಬ ಋತ್ವಿಜನಿಗೆ ಎಷ್ಟು ದಕ್ಷಿಣೆ ಕೊಡುವೆನೋ ಅಷ್ಟು ನಿಮಗೆ ಕೊಡುವೆನು ನೀವು ತಂಗಿರಿ ಅವಕಾಶವಾದಾಗ, ಎಂದು ರಾಜನು ಹೇಳಿದನು. ॥ ೫ ॥

ಉ. ॥ ತೇ ಹೋಚುರ್ಯೋನ ಏವಾರ್ಥೇನ ಪುರುಷಶ್ಚರೇತ್ತ್ಯೇ ಏವ ವದೇದಾತ್ಮಾನಮೇವೇಮಂ ವೈಶ್ವಾನರꣳ ಸಂಪ್ರತ್ಯಧ್ಯೇಷಿ ತಮೇವ ನೋ ಬ್ರೂಹೀತಿ ॥ ೬ ॥

ಅ ॥ ಆಗ ಆ ಬ್ರಾಹ್ಮಣರು ಹೇಳಿದರು ಜ್ಞಾನನಿಷ್ಠ ಅರ್ಥವನ್ನು ಸಂಪಾದಿಸಿದರೆ ಪುರುಷನು ಮೋಕ್ಷಕ್ಕೆ ಹೋಗುವನೆಂದು ಅಂತಹ ಜ್ಞಾನವನ್ನು ನೀನು ಚೆನ್ನಾಗಿ ತಿಳಿದಿರುವೆಯಲ್ಲವೇ. (ನಾವು

ದ್ಯನ್ಯದ ಅಭಿಲಾಷೆಯಿಂದ ಇಲ್ಲಿಗೆ ಬಂದುದಲ್ಲ. ಪರಂತು ಬ್ರಹ್ಮಜ್ಞಾನವನ್ನು ಸಂಪಾದಿಸಬೇಕೆಂಬ ಇಚ್ಛೆಯಿಂದ ಬಂದಿರುತ್ತೇವೆ. ನೀನು ಸರ್ವಸ್ವಾಮಿಯಾದ ವೈಶ್ವಾನರನನ್ನು ಚೆನ್ನಾಗಿ ತಿಳಿದಿರುತ್ತಿ. ಅವನನ್ನೇ ನಮಗೆ ಉಪದೇಶಿಸು. ಎಂದರು

॥ ೬ ॥

ಉ. ॥ ತಾನ್ಹೋವಾಚ ಪ್ರಾತರ್ವಃ ಪ್ರತಿವಕ್ತಾಽಸ್ಮೀತಿ ತೇ ಹ ಸಮಿತ್ಪಾಣಯಃ ಪೂರ್ವಾಹ್ಣೇ ಪ್ರತಿಚಕ್ರಮಿರೇ ತಾನ್ಹಾನುಪನೀಯೈವೈತದುವಾಚ ಇತ್ಯೇಕಾದಶಃ ಖಂಡಃ ॥ ೭-೧೧ ॥

॥ ೭ ॥

ಅ ॥ ಆಗ ರಾಜನು ನಿಮಗೆ ನಾಳೆ ಮುಂಜಾನೆ ನಾನು ಹೇಳುವೆನು. ಎಂದು ಬ್ರಾಹ್ಮಣರಿಗೆ ಹೇಳಿದನು. ಆ ಆರು ಬ್ರಾಹ್ಮಣರು ಮರುದಿನವು ಮುಂಜಾನೆ ಕೈಗಳಲ್ಲಿ ಸಮಿಧೆ ಹಿಡಿದುಕೊಂಡು ರಾಜನ ಸಮೀಪಕ್ಕೆ ಬಂದರು (ಕ್ಷತ್ರಿಯರಿಗಿಂತ ಬ್ರಾಹ್ಮಣರು ಉತ್ತಮರಾದಪ್ರಯುಕ್ತ) ರಾಜನು ಆ ಆರುಮಂದಿಯನ್ನು ಶಿಷ್ಯರನ್ನಾಗಿ ಸ್ವೀಕರಿಸದೇನೇ ಮುಂದೆ ಹೇಳುವ ಪ್ರಮೇಯವನ್ನು ಹೇಳಿದನು. ॥೭-೧೧॥ ॥೭॥

ಹನ್ನೊಂದನೇ ಖಂಡವು ಮುಗಿಯಿತು.

೧೨ನೇ ಖಂಡವು

ಪೀ—ಆ ಆರು ಮಂದಿ ಬ್ರಾಹ್ಮಣರು ತಾವ ವೈಶ್ವಾನರನ ತಿಳಿದ ಅಂಶವನ್ನು ಹೇಳಿದರು. ಆ ಮೇಲೆ ರಾಜನು ಅವನ ಹೆಸರನ್ನೂ ಫಲವನ್ನೂ ತಾನು ಹೇಳುತ್ತಾ ವಿಶೇಷವಾಗಿ ತಿಳಿಯದಿದ್ದರೆ ಬಾಧಕ ಹೇಳುತ್ತಾನೆ –

ಉ. ॥ ಔಪಮನ್ಯವ ಕಂ ತ್ವಮಾತ್ಮಾನಮುಪಾಸ್ಸ ಇತಿ ದಿವಮೇವ ಭಗವೋ ರಾಜನ್ನಿತಿ ಹೋವಾಚೈಷ ವೈ ಸುತೇಜಾ ಆತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ ತಸ್ಮಾತ್ತವ ಸುತಂ ಪ್ರಸುತಮಾಸುತಂ ಕುಲೇ ದೃಶ್ಯತೇ

॥ ೧ ॥

ಅ ॥ ಎಲೋ ಔಪಮನ್ಯವನೇ ಸರ್ವಸ್ವಾಮಿಯಾದ ವೈಶ್ವಾನರನನ್ನು ನೀನು ಹೆಸರುಳ್ಳವನನ್ನಾಗಿ ಉಪಾಸನೆ ಮಾಡುತ್ತಿ ಎಂದು ರಾಜನು ಕೇಳಿದನು. ಆಗ ಎಲೋ ರಾಜನೇ ಕ್ರೀಡಾರೂಪನಾದುದರಿಂದ ದ್ಯು ಎನಿಸಿಕೊಂಡ ಸ್ವರ್ಗಕ್ಕೆ ಆಧಾರನಾದ ವೈಶ್ವಾನರನನ್ನು ಉಪಾಸನೆ ಮಾಡುತ್ತೇನೆಂದಿಷ್ಟೇ ಪ್ರಾಜ್ಞೇನ ಶಾಲನು ಹೇಳಿದನು (ರಾಜನು ವೈಶ್ವಾನರನಲ್ಲಿ ವಿಶೇಷ ಗುಣಗಳನ್ನು ಹೇಳುತ್ತಾನೆ.) ನೀವು ಉಪಾಸನೆ ಮಾಡತಕ್ಕ ದ್ಯುಲೋಕದೊಳಗಣ ವೈಶ್ವಾನರನ. ಎಲ್ಲಾ ಜೀವರಿಗೂ ಅನುಗ್ರಹ ಮಾಡತಕ್ಕವನಾದುದರಿಂದ ವೈಶ್ವಾನರನೆನಿಸಿಕೊಂಡವನು. ವ್ಯಾಪ್ತನು. ಬಹುತೇಜಸ್ಸುಳ್ಳವನು. ನೀವು ದ್ಯುಲೋಕದೊಳಗಣ ವೈಶ್ವಾನರನನ್ನು ಉಪಾಸನೆ ಮಾಡಿರುವುದರಿಂದ ನಿಮ್ಮ ಕುಲದಲ್ಲಿ ಸ್ವರ್ಗಪ್ರಾಪ್ತಿಗಾಗಿ ಸೋಮಲತೆಯು ಹಿಂಡಲ್ಪಡುತ್ತಿದೆ. ಪ್ರಾತಃಸವನ, ಮಾಧ್ಯಂಸವನ, ಸಾಯಂಸವನ ಎಂಬ ಮೂರು ಸವನಗಳೂ ಮಾಡಲ್ಪಡುತ್ತಿವೆ. (ಅಂದರೆ—ನಿಮ್ಮ ಕುಲದವರು ಪರಿಚಿದ್ಧವಾದ ಕರ್ಮವನ್ನಾಚರಿಸಿದವರು.) ಅಥವಾ ನಿಮ್ಮ ಕುಲದಲ್ಲಿ ಮಕ್ಕಳೂ ಮೊಮ್ಮಕ್ಕಳೂ ಮರಿಮಕ್ಕಳೂ ಕಾಣಲ್ಪಡುತ್ತಾರೆ.

॥ ೧ ॥

ಉ. ॥ ಅಶ್ವಪ್ನಂ ಪಶ್ಯಸಿ ಪ್ರಿಯಮಿತ್ಯನ್ನಂ ಪಶ್ಯತಿ ಪ್ರಿಯಂ ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ ಮೂರ್ಧಾ ತ್ವೇಷ ಆತ್ಮನ ಇತಿ ಹೋವಾಚ ಮೂರ್ಧಾ ತೇ ವ್ಯಪತಿಷ್ಯದ್ಯನ್ನಾಂ ನಾಗಮಿಷ್ಯ ಇತಿ ॥ ಇತಿ ದ್ವಾದಶಃ ಖಂಡಃ ॥ ೭-೧೫ ॥ ॥ ೨ ॥

ಅ ॥ ಅನ್ನವನ್ನುಣ್ಣುತ್ತಿ. ಪ್ರಿಯವಾದುದನ್ನು ನೋಡುತ್ತಿ. ಯಾವನು ಸೀವು ಉಪಾಸನೆ ಮಾಡಿದ ವೈಶ್ವಾನರನನ್ನು ಒಳ್ಳೇ ತೇಜಸ್ಸುಳ್ಳವನು ಇತ್ಯಾದಿ ಪ್ರಕಾರ ಉಪಾಸನೆ ಮಾಡುತ್ತಾನೋ ಅವನು ಇಷ್ಟವಾದ ಅನ್ನವನ್ನುಣ್ಣುವನೆ ಪ್ರಿಯವಾದುದನ್ನೇ ನೋಡುವನೆ ಈ ಉಪಾಸಕನ ಕುಲದಲ್ಲಿ ಬ್ರಹ್ಮವರ್ಚಸ್ಸು ಹೆಚ್ಚಾಗುತ್ತದೆ ವೈಶ್ವಾನರನ ತಲೆಯು ದ್ಯುಲೋಕವಾಗಿರುತ್ತದೆ. ದ್ಯು ಎಂದು ಹೆಸರು ಬಂದಿದ್ದು. ಒಳ್ಳೇ ತೇಜಸ್ಸು ಇದ್ದುದರಿಂದ ಸುತೇಜಾ ಎಂದು ಹೆಸರುಳ್ಳದ್ದು. ಎಂದು ಅವಯವವನ್ನು ಪಾಸನೆ ಮಾಡುತಕ್ಕ ನೀನು ನನ್ನ ಸಮೀಪಕ್ಕೆ ಬಾರದೆ ಇರುತ್ತಿದ್ದೆ (ಉಪಾಸನೆಯ ವೈಶ್ವಾನರನ ತಲೆಯಿನ ರಿಜ್ಞಾನವಿಲ್ಲದಿರುವುದರಿಂದ) ನನ್ನ ತಲೆಯು ಕುಸಿದಾಗ ಕೆಳಗೆ ಬೀಳುತ್ತಿತ್ತು ಎಂದು ರಾಜನು ಹೇಳಿದನು ॥ ೭—೧೫ ॥

ಹನ್ನೆರಡನೇ ಖಂಡವು ಮುಗಿಯಿತು.

ಹದಿನೇ ಖಂಡವು

ಉ. ॥ ಅಥ ಹೋವಾಚ ಸತ್ಯಯಜ್ಞಂ ಪೌಲುಷಿಂ ಪ್ರಾಚೀನಯೋಗ್ಯಂ ತ್ವಮಾತ್ಮಾನಮುಪಾಸ್ಸ ಇತ್ಯಾದಿತ್ಯನೇನ ಭಗವೋ ರಾಜನ್ನಿತಿ ಹೋವಾಚೈಷ ವೈ ವಿಶ್ವರೂಪ ಆತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ ತಸ್ಮಾತ್ತವ ಬಹುವಿಶ್ವರೂಪಂ ಕುಲೇ ದೃಶ್ಯತೇ ॥ ೧ ॥

ಅ ॥ ಪ್ರಾಚೀನಶಾಲನಿಗೆ ಬಿರುದೆನಿಸಿದ ಮೇಲೆ ಪುಲುಷನ ಮಗನಾದ ಸತ್ಯಯಜ್ಞನಿಗೆ ಕೇಳಿದನು ಎಲೋ ಅನಾದಿಯೋಗ್ಯತೆಯುಳ್ಳವನೇ ನೀನು ಎಂತಹ ವೈಶ್ವಾನರನನ್ನು ಉಪಾಸನೆ ಮಾಡುತ್ತೀ, ಎಂದನು ಆಗ ಸತ್ಯಯಜ್ಞನು ಎಲೋ ರಾಜನೇ ವೈಶ್ವಾನರನು ಜನರ ಅಮುಸ್ಯನನ್ನು ತಿಳಿದುಕೊಳ್ಳುವುದರಿಂದ ಅದಿತ್ಯನೆನಿಸಿದವನು, ಅದಿತ್ಯನೊಳಗಾನು ಎಂದು ಉಪಾಸನೆ ಮಾಡುತ್ತೇನೆಂದನು. ಆಗ ರಾಜನು ನೀನು ಉಪಾಸನೆ ಮಾಡತಕ್ಕ ಆದಿತ್ಯನೆನಿಸಿದ ವೈಶ್ವಾನರನು ಸರ್ವರೂಪಗಳನ್ನು ನೋಡುವುದರಿಂದ ವಿಶ್ವರೂಪನೆನಿಸಿದವನು. ವಿಶ್ವರೂಪವನ್ನು ಪಾಸನೆಮಾಡಿದರಿಂದಲೇ ನಿನ್ನ ಮನೆಯಲ್ಲಿ ಬಹುವಸ್ತುಗಳ ಸಮುದಾಯವು ಕಾಣಲ್ಪಡುತ್ತದೆ ॥ ೧ ॥

ಉ. ॥ ಪ್ರವೃತ್ತೋಽಶತರೀರಥೋ ದಾಸೀ ನಿಷ್ಕೋಽಶ್ವಪ್ನಂ ಪಶ್ಯಸಿ ಪ್ರಿಯಮಿತ್ಯನ್ನಂ ಪಶ್ಯತಿ ಪ್ರಿಯಂ ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ ಚಕ್ಷುಷ್ಟ್ವೇತದಾತ್ಮನ ಇತಿ

ಹೋವಾಚಾಂಧೋ ಭವಿಷ್ಯೋ ಯನ್ಮಾಂ ನಾಗಮಿಷ್ಯ ಇತಿ ॥ ಇತಿ ತ್ರಯೋದಶಃ ಖಂಡಃ ॥ ೭-೧೩ ॥ ॥ ೭ ॥

ಅ ॥ ನಿಮ್ಮ ಮನೆಯಲ್ಲಿ ಅಶ್ವತರೀ (ಹೆಣ್ಣು ಕತ್ತೆಯಲ್ಲಿ ಕುದುರೆಯಿಂದ ಹುಟ್ಟಿದ್ದು) ಯಿಂದ ಕೂಡಿದ ರಥವೂ, ದಾಸಿಯರೂ, ಬಹುನಾಣ್ಯಗಳೂ ಇವೆ. ಯಥೇಷ್ಟ ಅನ್ನವನ್ನುಣ್ಣುತ್ತಿ. ಪ್ರಿಯ ವಸ್ತುವನ್ನು ನೋಡುತ್ತಿ, ಎಂದನು. ಹೀಗೆ ತಿಳಿದು ಉಪಾಸನೆ ಮಾಡುವವನು ಯಥೇಷ್ಟ ಅನ್ನವನ್ನುಣ್ಣುತ್ತಾನೆ. ಪ್ರಿಯವಾದುದನ್ನೇ ನೋಡುತ್ತಾನೆ. ಇವನ ಕುಲದಲ್ಲಿ ಬ್ರಹ್ಮವರ್ಚಸ್ಸು ಪ್ರಾಪ್ತಿಯಾಗುತ್ತದೆ. ನಿನ್ನಿಂದ ಉಪಾಸನೆಮಾಡಲ್ಪಡುವ ಆದಿತ್ಯನೆನಿಸಿದ ಆದಿತ್ಯನಿಗೆ ಆಧಾರವಾದ ವೈಶ್ವಾನರನ ಅಂಗವು ಚಕ್ಷುಸ್ಸೇ. (ಕಣ್ಣೇ) (ಸರ್ವಾಂಗಗಳಲ್ಲ.) ನೀನು ನನ್ನ ಸಮೀಪಕ್ಕೆ ಬಾರದೆ ಇರುತ್ತಿದ್ದರೆ ಅಂಧನೇ (ಕುರುಡನೇ) ಆಗುತ್ತಿರುವಿ. ॥ ೭—೧೩ ॥

ಹದಿಮೂರನೇ ಖಂಡವು ಮುಗಿಯಿತು.

೧೪ನೇ ಖಂಡವು

ಉ. ॥ ಅಥ ಹೋವಾಚೇಂದ್ರದ್ಯುಮ್ನಂ ಭಾಲ್ಲವೇಯಂ ವೈಯಾಘ್ರಪದ್ಯ ಕಂ ತ್ವಮಾತ್ಮಾನಮುಪಾಸ್ಸ ಇತಿ ವಾಯುಮೇವ ಭಗವೋ ರಾಜನ್ನಿತಿ ಹೋವಾಚೈಷ ವೈ ಪೃಥಗ್ವರ್ತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ ತಸ್ಮಾತ್ತ್ವಾ ಪೃಥಗ್ವಲಯ ಆಯಂತಿ ಪೃಥಗ್ರಥಶ್ರೇಣಯೋಽನುಯಂತಿ ॥ ೧ ॥

ಅ ॥ ಆ ಮೇಲೆ ಭಲ್ಲವೆಯ ಮಗನಾದ ಇಂದ್ರದ್ಯುಮ್ನನಿಗೆ ಕೇಳಿದನು ವ್ಯಾಘ್ರಪದ್ಯನ ಮಗನೇ, *.....ವೈಶ್ವಾನರನು, ಜ್ಞಾನರೂಪನೂ ಆಯುಷ್ಯವನ್ನು ಕೊಡುವವನೂ ಆದುದರಿಂದ ವಾಯುವೆನಿಸಿ ವಾಯುವಿಗೆ ಆಧಾರನನ್ನಾಗಿ ತಿಳಿಯುತ್ತೇನೆಂದನು.....ನಿನ್ನಿಂದ ಉಪಾಸ್ಯನಾದ ವಾಯುವು ಪ್ರಾಣಾದಿಗಳಿಗೆ ಮಾಡಲಸಾಧ್ಯವಾದ ಕಾರ್ಯವನ್ನು ಮಾಡುವುದರಿಂದ **ಪೃಥಗ್ವರ್ತ್ಮಾ** ಎನಿಸುತ್ತಾನೆ.....ವಿಲಕ್ಷಣಗಳಾದ ಪೂಜಾ ಸಾಧನಗಳೂ, ವಿಲಕ್ಷಣಗಳಾದ ರಥಗಳ ಪಂಕ್ತಿಗಳೂ, ಅನೆ ಕುದುರೆ ಮೊದಲಾದವುಗಳೂ ನಿಮ್ಮನ್ನು ಹಿಂಬಾಲಿಸುತ್ತಿವೆ. ॥ ೧ ॥

ಈ—ಉಪಾಸಕನಿಗೆ ಫಲ ಹೇಳುತ್ತಾರೆ—

ಉ. ॥ ಅಶ್ವತ್ಥಂ ಪಶ್ಯಸಿ ಪ್ರಿಯಮಶ್ವತ್ಥಂ ಪಶ್ಯತಿ ಪ್ರಿಯಂ ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ ಪ್ರಾಣಿಸ್ತ್ವೇಷ ಆತ್ಮನ ಇತಿ ಹೋವಾಚ ಪ್ರಾಣಸ್ತ ಉದಕ್ರಮಿಷ್ಯದನ್ಯಾಂ ನಾಗಮಿಷ್ಯ ಇತಿ ॥ ಇತಿ ಚತುರ್ದಶಃ ಖಂಡಃ ॥ ೭-೧೪ ॥ ॥ ೭ ॥

* ಹಿಂದಿನಂತೆ ಆರ್ಷ ಇಟ್ಟು ಓದಿಕೊಳ್ಳಬೇಕು

ಅ ॥ ... .ನಿಸ್ಸಿಂದ ಉಪಾಸನೆಯ ನಾಮವು. ಸ್ವಾಹಾವಾಹುವು ಸ್ವಾಹೆಯೆಂಬ ಅವ
ಪವವು.....ನಿನ್ನ ಸ್ವಾಹಾಪ್ರಿಯವಾದ ಶರೀರದಿಂದ ಹೊಗಳುತ್ತಿತ್ತು. ೭-೮ ॥ ೨೬೪

ಪದಿನಾಲ್ಕನೇ ಖಂಡವು ಮುಗಿಯಿತು.

೧೫ನೇ ಖಂಡವು

ಉ. ॥ ಅಥ ಹೋವಾಚ ಜನಂ ಶಾರ್ಕರಾಕ್ಷ್ಯಂ ಶಾರ್ಕರಾಕ್ಷ್ಯ ಕಂ
ತ್ವಮಾತ್ಮಾನಮುಪಾಸ್ಸ ಇತ್ಯಾಕಾಶಮೇವ ಭಗವೋ ರಾಜನ್ನಿತಿ ಹೋವಾ-
ಚೈಷ ವೈ ಬಹುಲ ಆತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ ತಸ್ಮಾ-
ತ್ತ್ವಂ ಬಹುಲೋಽಸಿ ಪ್ರಜಯಾ ಚ ಧನೇನ ಚ ॥ ೧ ॥

ಅ ॥ ಆ ವೇಳೆ ಶರ್ಕರಾಕ್ಷನ ಮಗನಾದ ಜನನಿಗೆ ಹೇಳಿದನು... .....ಯೆನ್ನಾ ಪ್ರಕಾಶಿಸುವುದ
ರಿಂದ ಆಕಾಶವೆನಿಸಿದನನು..... ..... ಸರ್ವತ್ರ ವ್ಯಾಪಿಸಿರುವುದರಿಂದ ಬಹುಲನೆನಿಸಿದನು ... .
ಬಹುಲೆಂದು ಯಾಕನೆ ಮಾಡಿಮುದರಿಂದಲೇ ಬಹುಪ್ರಜೆಗಳಿಂದ ಪ್ರಸಿದ್ಧನು ಐಶ್ವರ್ಯವಂತನಾಗಿರುತ್ತಿ. ೧-೨ ॥

ಉ. ॥ ಅತ್ಯನ್ನಂ ಪಶ್ಯಸಿ ಪ್ರಿಯಮತ್ಯನ್ನಂ ಪಶ್ಯತಿ ಪ್ರಿಯಂ ಭವತ್ಯಸ್ಯ
ಬ್ರಹ್ಮವರ್ಚಸಂ ಕುಲೇ ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ
ಸಂದೇ(ದೋ)ಹಸ್ತ್ವೇಷ ಆತ್ಮನ ಇತಿ ಹೋವಾಚ ಸಂದೇ(ದೋ)ಹೆಸ್ತೇ ವ್ಯಶೀ-
ರ್ಯದ್ಯನ್ನಾಂ ನಾಗಮಿಷ್ಯ ಇತಿ ॥ ಇತಿ ಪಂಚದಶಃ ಖಂಡಃ ॥ ೭-೧೫ ॥ ೨ ॥

ಅ ॥ .....ನಿಸ್ಸಿಂದ ಉಪಾಸನೆಯಾದ ಬಹುಲವು ವೈಶ್ವಾನರನ ಮಹತ್ವವೇಷವು .....ನಿನ್ನ
ಮಹತ್ವವನ್ನು ಪ್ರತಿಪಾದಿಸುತ್ತಿತ್ತು ... ೧-೨ ॥

ಪದಿನೈದನೇ ಖಂಡವು ಮುಗಿಯಿತು.

೧೬ನೇ ಖಂಡವು

ಉ. ॥ ಅಥ ಹೋವಾಚ ಬುಡಿಲಮಾಶ್ವತರಾಶ್ವಿಂ ವೈಯಾಘ್ರಪದ್ಯ ಕಂ
ತ್ವಮಾತ್ಮಾನಮುಪಾಸ್ಸ ಇತ್ಯಾಪ ಏವ ಭಗವೋ ರಾಜನ್ನಿತಿ ಹೋವಾಚೈಷ
ವೈ ರಯಿರಾತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ ತಸ್ಮಾತ್ತ್ವಂ
ರಯಿಮನ್ನವ್ಯಷ್ಟಿಮಾನಸಿ ॥ ೧ ॥

ಅ ॥ ಆಶ್ವತರಾಶ್ವನ ಮಗನಾದ ಬುಡಿಲನಿಗೆ..... ವ್ಯಾಘ್ರಪಾತ್ ಎಂಬುವನ ಗೋತ್ರದಲ್ಲಿ
ಹುಟ್ಟಿದವನೂ... ... ... ಸರ್ವತ್ರ ವ್ಯಾಪ್ತನಾಮುದರಿಂದ ಅಪ್ ಎನಿಸಿಕೊಂಡ ಜಲನಿಧಿಯ ವೈಶ್ವಾನರ

ನನ್ನು ಪಾಸನೆಮಾಡುತ್ತೀನೆ..... ..... ಸಂತೋಷವನ್ನು ಂಟುಮಾಡುವದರಿಂದ ರಯಿ ಎನಿಸಿಕೊಂಡವನು .....ಪ್ರಪಂಚವುಳ್ಳವನೂ ಪುಷ್ಟಿಯಾದವನೂ ಆಗಿರುತ್ತಿ. ॥ ೧ ॥

ಉ. ॥ ಅತ್ಸ್ಯನ್ನಂ ಪಶ್ಯಸಿ ಪ್ರಿಯಮತ್ಯನ್ನಂ ಪಶ್ಯತಿ ಪ್ರಿಯಂ ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ ವಸ್ತಿಸ್ತ್ವೇಷ ಆತ್ಮನ ಇತಿ ಹೋವಾಚ ವಸ್ತಿಸ್ತೇ ವೃಭೇತ್ಸ್ಯದ್ಯನ್ನಾಂ ನಾಗಮಿಷ್ಯ ಇತಿ ॥ ಇತಿ ಷೋಡಶಃ ಖಂಡಃ ॥ ೭ ೧೬ ॥ ॥ ೨ ॥

ಅ ॥ .....ವೈಶ್ವಾನರನ ವಸ್ತಿ (ಕಟಿಪ್ರದೇಶ) ರೂಪವಾದ ಅವಯವವು ಅಥವಾ ಹೊಕ್ಕಳಿನ ಕೆಳಗಿನ ಕುಹರವು.....ನಿನ್ನ ವಸ್ತಿಯು ಕುಂಡಾಗುತ್ತಿತ್ತು. ॥ ೭—೧೬ ॥ ॥ ೨ ॥

ಹದಿನಾರನೇ ಖಂಡವು ಮುಗಿಯಿತು.

೧೭ನೇ ಖಂಡವು

ಉ. ॥ ಅಥ ಹೋವಾಚೋದ್ದಾಲಕಮಾರುಣಿಂ ಗೌತಮ ಕಂ ತ್ವಮಾತ್ಮಾನಮುಪಾಸ್ಸ ಇತಿ ಪೃಥಿವೀಮೇವ ಭಗವೋ ರಾಜನ್ನಿತಿ ಹೋವಾಚೈಷ ವೈ ಪ್ರತಿಷ್ಠಾಮ್ಯಾತ್ಮಾ ವೈಶ್ವಾನರೋ ಯಂ ತ್ವಮಾತ್ಮಾನಮುಪಾಸ್ಸೇ ತಸ್ಮಾತ್ತ್ವಂ ಪ್ರತಿಷ್ಠಿತೋಽಸಿ ಪ್ರಜಯಾ ಚ ಪಶುಭಿಶ್ಚ ॥ ೧ ॥

ಅ ॥ ಆ ಮೇಲೆ ಆರುಣನ ಮಗನಾದ ಉದ್ದಾಲಕರಿಗೆ ಹೇಳಿದನು. ಗೌತಮಗೋತ್ರದಲ್ಲಿ ಹುಟ್ಟಿದವನೇ,.....ವಿಶಾಲಗಳಾದ ಬಹುಗುಣಗಳು ಇದ್ದುದರಿಂದ ಪೃಥಿವೀ ಎನಿಸಿಕೊಂಡ. ಪೃಥಿವಿಯಲ್ಲಿರತಕ್ಕ..... ಸರ್ವರ ಸ್ಥಿತಿಗೆ ಕಾರಣನಾದುದರಿಂದ ಪ್ರತಿಷ್ಠಾ ಎನಿಸಿದವನು..... ಪ್ರಜೆಗಳಿಂದಲೂ ಪಶುಗಳಿಂದಲೂ ಸಮೃದ್ಧನಾಗಿರುತ್ತಿ..... ॥ ೧ ॥

ಉ. ॥ ಅತ್ಸ್ಯನ್ನಂ ಪಶ್ಯಸಿ ಪ್ರಿಯಮತ್ಯನ್ನಂ ಪಶ್ಯತಿ ಪ್ರಿಯಂ ಭವತ್ಯಸ್ಯ ಬ್ರಹ್ಮವರ್ಚಸಂ ಕುಲೇ ಯ ಏತಮೇವಮಾತ್ಮಾನಂ ವೈಶ್ವಾನರಮುಪಾಸ್ತೇ ಪಾದೌ ತ್ವೇತಾವಾತ್ಮನ ಇತಿ ಹೋವಾಚ ಪಾದೌ ತೇ ವ್ಯಮ್ಲಾಸ್ಯೇತಾಂ ಯನ್ನಾಂ ವಾಗಮಿಷ್ಯ ಇತಿ ॥ ಇತಿ ಸಪ್ತದಶಃ ಖಂಡಃ ॥ ೭-೧೭ ॥ ॥ ೨ ॥

ಅ ॥ .....ವೈಶ್ವಾನರನ ಪಾದಗಳು....ನಿನ್ನ ಪಾದಗಳು ಕುಂಡಾಗುತ್ತಿದ್ದುವು. ॥೭-೧೭॥ ॥ ೨ ॥

ಹದಿನೇಳನೇ ಖಂಡವು ಮುಗಿಯಿತು.

೧೨ನೇ ಖಂಡ

ಟೀ—ಹೀಗೆ ಜನಕ ಪ್ರತ್ಯೇಕವಾಗಿ ಬ್ರಾಹ್ಮಣನಿಗೆ ಉಪದೇಶಿಸಿದಾಗಿತ್ತು ಸುತೇಜಾ ಮೊದಲಾದ ಹೆಸರುಳ್ಳ ತಿರಸ್ಸು ಮೊದಲಾದ ಅಂಗವನ್ನೇ ಉದಯಿಸಿ ಸಂಪೂರ್ಣ ವೈಶ್ವಾನರನ ಸ್ವರೂಪವನ್ನೂ ವೈಶ್ವಾನರನ ಉಪಾಸನೆಫಲವನ್ನೂ ರಾಜನು ಹೇಳುತ್ತಾನೆಂದು ದೇವವ್ರತ ಹೇಳುತ್ತಾನೆ—

ಉ. ॥ ತಾನ್ಹೋವಾಚೈತೇ ವೈ ಖಲು ಯೂಯಂ ಪೃಥಗಿವೇಮಮಾತ್ಮಾನಂ ವೈಶ್ವಾನರಂ ವಿದ್ವಾಂಸೋಽನ್ನಮತ್ಥ ಯಸ್ತ್ವೇತಮೇವಂ ಪ್ರಾದೇಶಮಾತ್ರಮಭಿವಿಮಾನಮಾತ್ಮಾನಂ ವೈಶ್ವಾನರಮುಪಾಸ್ತೇ ಸ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷ್ವಾತ್ಮಸ್ವನ್ನಮತ್ತಿ ॥ ೧ ॥

ಅ ॥ (ರಾಜನು ಪ್ರತ್ಯೇಕವಾಗಿ ಉಪದೇಶಿಸಿ) ಆ ಬ್ರಾಹ್ಮಣರಿಗೆ ಹೇಳಿದನು (ಎಲೋ ಬ್ರಾಹ್ಮಣರೇ) ಪ್ರಸಿದ್ಧರಾದ ನೀವು ಸರ್ವಾತ್ಮವಿಷಯವಾದ ಈ ವೈಶ್ವಾನರನ *ಒಂದೊಂದು ಅವಯವವನ್ನು ತಿಳಿದವರಾಗಿ ಅನ್ನವನ್ನು ತಿನ್ನುವಿರಿ (ಹಾಗೆ ಸಂಪೂರ್ಣ ಆತ್ಮನನ್ನು ಉಪಾಸನೆ ಮಾಡಿದವನಿಗೆ ಫಲ ಹೇಳುತ್ತಾನೆ—) ಯಾವ ಅಧಿಕಾರವು (ದೇವತೆಯು) ಸರ್ವಾತ್ಮಗಳಲ್ಲಿರುವ ವೈಶ್ವಾನರನನ್ನು ಪ್ರಾದೇಶ (ಅಂಗುಷ್ಠದ ತುದಿಯಿಂದ ತೋರ್ಬೆರಳಿನ ಕೊನೆ ವರೆಗಿನ ಒಂದು ಜೋಡಿ ಬಿದ್ದ) ಪರಿಮಾಣ (ಅಳತೆಯುಳ್ಳ) ನ ಪಯಸ್ಸಿನಲ್ಲಿದ್ದ ವ್ಯಾಪಿಸಿಕೊಂಡಿದ್ದ ಪ್ರದೇಶವು. ಪ್ರಾದೇಶ ಪರಿಮಾಣದಲ್ಲಿ ಪ್ರಕಟನಾಗುವುದರಿಂದ ಪ್ರಾದೇಶವೆಂಬ ಹೆಸರಿಸಿಕೊಂಡು. ಸರ್ವತ್ರ ವ್ಯಾಪ್ತನಾಗಿ ಒಂದೆ ಹೇಳಿದ ಪ್ರಕಾರ ತಿರಸ್ಸು ಮೊದಲಾದ ಸರ್ವಾಂಗಗಳಿಂದೊಡಗೂಡಿದವನೆಂದು ಉಪಾಸನೆ ಮಾಡುತ್ತಾನೋ, ಅವನು, ಸಮಸ್ತಲೋಕಗಳಲ್ಲಿರತಕ್ಕ ಸಮಸ್ತ ಜೀವರಾದಿ ಜಡಾಜಡರೂಪ ಭೋಕ್ತರಲ್ಲಿಯು ಎಲ್ಲಾ ಅನ್ನವನ್ನು ತಿನ್ನುತ್ತಾನೆ

* (1) ಉಪಾಸಕನು ದೇವತೆಯಾದರೆ ಮುಖ್ಯ ಪ್ರಾಣ ಇತರರಿಗೆ ಬುದ್ಧಾಪೋಗೆಯಾಗಿ ಸಲವ (2) ವೈಶ್ವಾನರನೆಂದರೆ—ವಿಶ್ವವನ್ನೇ ತನ್ನ ಶರೀರವಾಗಿ ಭೋಕ್ತಾಗಿರುವ ಪರಮಾತ್ಮ ಗತಿ. ಮೊತ್ತಮೊದಲಿಗೆ ಅಭಿಮಾನಿಯಾದ ದೇವತೆಯಾಗಿರಲಿ ಅಲ್ಲ

ಟೀ—ಶ್ರೇಷ್ಠರಿರುವ ಅಂಗಗಳಿಗೆ ಹೇಳಿದ ಪ್ರಾಮಪ್ರೇಯಾನನ್ನ ಸರ್ವಾತ್ಮ ಪ್ರಾಣಸಂಪತ್ತಿಗೆಗಳ ಹೇತುವಿನಿಂದ ವೈಶ್ವಾನರನ ಸಂಪೂರ್ಣ ಸ್ವರೂಪವನ್ನು ಹೇಳುತ್ತಾನೆ—

ಉ. ॥ ತಸ್ಯ ಹ ವಾ ಏತಸ್ಯಾತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾತ್ಮಾ ಸಂದೇ(ದೋ)ಹೋ ಬಹುಲೋ ವಸ್ತಿರೇವ ರಯಿಃ ಪೃಥಿವ್ಯೇವ ಪಾದಾವುರ ಏವ ವೇದಿರ್ಲೋಮಾನಿ ಬರ್ಹಿರ್ಹೃದಯಂ ಗಾರ್ಹಪತ್ಯೋ ಮನೋಽನ್ವಾಹಾರ್ಯಪಚನ ಆಸ್ಯಮಾಹವನೀಯಃ ॥ ಇತ್ಯಷ್ಟಾದಶಃ ಖಂಡಃ ॥ ೭-೧೮ ॥ ॥ ೫ ॥

* ಶ್ರೀಕರಭಾಷ್ಯ ಅಷ್ಟಾಯಿಸಲಿಗೆ ಛೇದಿಸಿಕೊಳ್ಳಿದು ತೀರ್ಮಾನಿಸಿರುವುದರಿಂದ ಸೃಷ್ಟಿಗಿದೆ ಎಂದು ಗೌರವಿಸಲಾಗಿದೆ

ಅ ॥ ವೈಶ್ವಾನರವೆನ್ನುವ ಶ್ರೀಹರಿಯ ಶಿರಸ್ಸೇ ಒಳ್ಳೇ ಕಾಂತಿಯಿದ್ದುದರಿಂದ ಸುತೇಜಾಃ ಎಂದು ಹೆಸರುಳ್ಳದ್ದು. ಮ್ಯಲೋಕಕ್ಕೆ ಆಶ್ರಯವು ಆತನ ಕಣ್ಣು ಎಲ್ಲಾ ವಸ್ತುಗಳನ್ನು ತಿಳಿದುಕೊಳ್ಳುವುದರಿಂದ ವಿಶ್ವರೂಪನೆನಿಸಿಕೊಂಡದ್ದು. ವಿಶ್ವರೂಪನೆಂಬ ಆದಿತ್ಯನಿಗೆ ಆಶ್ರಯವು. ಶ್ರೀಹರಿಯ ಪ್ರಾಣವು ಸ್ಯಾಣಾದಿಗಳಿಗೆ ಮಾಡಲು ಅಸಾಧ್ಯವಾದ ಕಾರ್ಯವನ್ನು ಮಾಡುವುದರಿಂದ ಪೃಥಗ್ವರ್ತ್ಮಾ ಎಂದು ಹೆಸರುಳ್ಳದ್ದು. ವಾಯುವಿನ ಆಶ್ರಯವು. ಶ್ರೀಹರಿಯ ವಿಘ್ನವೇಹವು ಬಹುಲವೆಂದು ಹೆಸರುಳ್ಳದ್ದು. ಆಕಾಶಕ್ಕೆ ಅಭಿಮಾನಿಯಾದ ವಿನಾಯಕನಿಗೆ ಆಶ್ರಯವು. ಶ್ರೀಹರಿಯ ಹೊಕ್ಕುಳಿನ ಕೆಳಭಾಗದಲ್ಲಿನ ವಸ್ತಿರೂಪ ಅವಯವವು ಸುಖವನ್ನು ಕೊಡುವುದರಿಂದ ರಯಿ ಎನಿಸಿಕೊಂಡದ್ದು. ಜಲಗಳಿಗೆ ಆಶ್ರಯವು. ಆತನ ಪಾದಗಳು ಸರ್ವತ್ರ ಪ್ರಸಿದ್ಧವಾದ ಪ್ರಯುಕ್ತ ಪೃಥಿವೀ ಎನಿಸಿಕೊಂಡಿವೆ. ಪೃಥಿವಿಗೆ ಆಶ್ರಯಗಳು. (ವೈಶ್ವಾನರನಲ್ಲಿ ಹೋಮ ಹೇಳುವುದಕ್ಕಾಗಿ ಅದಕ್ಕೆ ಬೇಕಾದುದನ್ನು ಹೇಳುತ್ತಾರೆ—) ಆ ವೈಶ್ವಾನರನ ವಕ್ತ್ರಸ್ಥಳವು ಯಜ್ಞಕುಂಡಕ್ಕೆ ಅಭಿಮಾನಿಯು. ಯಜ್ಞಕುಂಡದಲ್ಲಿ ಆಶ್ರಿತವಾಗಿದೆ. ವೈಶ್ವಾನರನ ರೋಮಗಳು ಬರ್ಹಿಸ್ಸಿಗೆ ಅಭಿಮಾನಿಗಳು. ವೈಶ್ವಾನರನ ಹೃದಯವು ಗಾರ್ಹಪತ್ಯ ಅಗ್ನಿಗೆ ಅಭಿಮಾನಿಯು. ವೈಶ್ವಾನರನ ಮನಸ್ಸು ಅನ್ವಾಹಾರ್ಯಪಚನಾಭಿಮಾನಿಯು. ವೈಶ್ವಾನರನ ಮುಖವು ಆಹವನೀಯಾಗ್ನಿಗೆ ಅಭಿಮಾನಿಯು. ಅಂದರೆ, ವೇದ್ಯಾದಿಗಳಿಗೆ ಅಭಿಮಾನಿಗಳಾದ ದೇವತೆಗಳು ವೈಶ್ವಾನರನ ವಕ್ಷಸ್ಥಳ ಮೊದಲಾದವುಗಳನ್ನು ಆಶ್ರಯಿಸಿರುತ್ತಾರೆ. ॥ ೭ ೧೯ ॥ ॥ ೨ ॥

ಹದಿನೆಂಟನೇ ಖಂಡವು ಮುಗಿಯಿತು.

೧೯ನೇ ಖಂಡವು

ಪೀ—ಹೋಮಿಸುವ ಪ್ರಕಾರವನ್ನೂ ಹೋಮವನ್ನೂ ಹೇಳುತ್ತಾರೆ—

ಉ. ॥ ತದ್ಯದ್ಭಕ್ತಂ ಪ್ರಥಮಮಾಗಚ್ಛೇತ್ತದ್ಧೋಮೀಯಂ ಸ ಯಾಂ ಪ್ರಥಮಾಮಾಹುತಿಂ ಜುಹುಯಾತ್ತಾಂ ಜುಹುಯಾತ್ಪ್ರಾಣಾಯ ಸ್ವಾಹೇತಿ ಪ್ರಾಣಸ್ತೃಪ್ಯತಿ

॥ ೧ ॥

ಅ ॥ ಭೋಜನಕಾಲದಲ್ಲಿ ಭೋಜ್ಯವಾದ ಯಾವ ಅನ್ನವನ್ನು ಪ್ರಥಮತಃ ಬಾಯಿಯೊಳಗೆ ಹಾಕುತ್ತಾನೋ, ಅದು ಹೋಮಸಾಧನ ದ್ರವ್ಯವು. ಉಣ್ಣುವವನು ಯಾವ ಆಹುತಿಯನ್ನು ಪ್ರಥಮತಃ ಹೋಮಿಸುತ್ತಾನೋ, ಅದನ್ನು ಪ್ರಾಣಾಯ ಸ್ವಾಹಾ ಎಂಬ ಮಂತ್ರದಿಂದ ಹೋಮಿಸಬೇಕು. (ಅಂದರೆ—ಪ್ರಾಣಾಯ ಸ್ವಾಹಾ ಎಂದು ಹೇಳಿ ಆಹುತಿ ಕೊಡಬೇಕು.) (ಆಹುತಿಯಿಂದ ಸಂತೋಷಗೊಳ್ಳುವ ದೇವತೆಗಳನ್ನು ಹೇಳುತ್ತಾರೆ—) ಪ್ರಾಣವಾಯುವಿಗೆ ಅಭಿಮಾನಿಯಾಗಿರುವ ಆದಿತ್ಯನ ರೂಪವು ಹೃದಯಕಮಲದಲ್ಲಿರುವ ವೈಶ್ವಾನರನ ಪೂರ್ವದ್ವಾರವನ್ನು ರಕ್ಷಿಸುವುದಾಗಿ ಸಂತೋಷಗೊಳ್ಳುತ್ತದೆ. ॥ ೧ ॥

ಉ. ॥ ಪ್ರಾಣೇ ತೃಪ್ಯತಿ ಚಕ್ಷುಸ್ತೃಪ್ಯತಿ ಚಕ್ಷುಷಿ ತೃಪ್ಯತ್ಯಾದಿತ್ಯಸ್ತೃಪ್ಯತ್ಯಾದಿತ್ಯೇ ತೃಪ್ಯತಿ ದ್ಯೌಸ್ತೃಪ್ಯತಿ ದಿವಿ ತೃಪ್ಯಂತ್ಯಾಂ ಯಕ್ಷ್ಯಾಂ ಚ ದ್ಯೌಶ್ಚಾದಿತ್ಯಶ್ಚಾಧಿತಿಷ್ಠತಸ್ತತ್ತೃಪ್ಯತಿ ತಸ್ಯಾನುತೃಪ್ತಿಂ ತೃಪ್ಯತಿ ಪ್ರಜಯಾ ಪಶುಭಿರನ್ನಾದ್ಯೇನ ತೇಜಸಾ ಬ್ರಹ್ಮವರ್ಚಸೇನೇತಿ ॥ ಇತ್ಯೇಕೋನವಿಂಶಃ ಖಂಡಃ॥೨-೧೯॥

ಅ ॥ ಪ್ರಾಣಾಧಿವನಾಸಿರೂಪವು ಸಂತೋಷಗೊಂಡಾಗ ಚಕ್ಷುಸ್ಸಿಗೆ ಅಧಿಮಾನಿಯಾದ ಆದಿತ್ಯನ ರೂಪವು ಸಂತೋಷಗೊಳ್ಳುತ್ತದೆ. ಚಕ್ಷುಸ್ಸಿಗೆ ಅಧಿಮಾನಿಯಾದ ರೂಪವು ಸಂತೋಷಗೊಂಡಾಗ ಸೂರ್ಯಮಂಡಲಕ್ಕೆ ಅಧಿಮಾನಿಯಾದ ಸೂರ್ಯರೂಪವು ಸಂತೋಷಗೊಳ್ಳುತ್ತದೆ. ಮೂರು ರೂಪಗಳುಳ್ಳ ಆದಿತ್ಯನು ಸಂತೋಷಗೊಂಡಾಗ ದ್ಯುಲೋಕಕ್ಕೆ ಅಧಿಮಾನಿಯಾದ ಭಾರತೀದೇವಿಯು ತೃಪ್ತಳಾಗುತ್ತಾಳೆ ಭಾರತಿಯು ಸಂತೋಷಗೊಂಡಾಗ ಲಕ್ಷ್ಮೀದೇವಿಯೂ, ಪ್ರಾಣ ಚಕ್ಷುಮಂಡಲಗಳಿಗೆ ಅಧಿಮಾನಿಯಾದ ಆದಿತ್ಯನೂ ಜ್ಞಾನಾನಂದಸ್ವರೂಪನಾದ ಯಾವ ಪರಬ್ರಹ್ಮನನ್ನು ಆಶ್ರಯಿಸುತ್ತಿರುತ್ತಾನೋ ಅಂತಹ ಪರಬ್ರಹ್ಮನು ಸಂತೋಷಗೊಳ್ಳುತ್ತಾನೆ. ಪರಬ್ರಹ್ಮನ ತೃಪ್ತಿಯನ್ನಪುಸರಿಸಿ ಯಜಮಾನನು ಮುಕ್ತಳಾದಲೂ, ಪರಲೋಕಕ್ಕಾದಲೂ ತೇಜಸ್ಸಿನಿಂದಲೂ ಬ್ರಹ್ಮವರ್ಚಸ್ಸಿನಿಂದಲೂ ಸಂತೋಷಗೊಳ್ಳುತ್ತಾನೆ. ॥ ೭—೯ ॥ (೨)

ಪತ್ತೊಂಭತ್ತನೇ ಖಂಡವು ಮುಗಿಯಿತು.

ಎಂಟನೇ ಖಂಡವು

ಉ. ॥ ಅಥ ಯಾಂ ದ್ವಿತೀಯಾಂ ಜುಹುಯಾತ್ತಾಂ ಜುಹುಯಾದ್ವ್ಯಾನಾಯ ಸ್ವಾಹೇತಿ ವ್ಯಾನಸ್ತೃಪ್ಯತಿ ॥ ೧ ॥

ಅ ॥ ಓಂ ವ್ಯಾನಾಯ ಸ್ವಾಹಾ ಎಂದು ಹೇಳಿ ಎರಡನೇ ಆಹುತಿಯನ್ನು ಕೊಡಬೇಕು ಇದರಿಂದ ದಕ್ಷಿಣದ್ವಾರಕ್ಕೆ ಅಧಿಪತಿಯಾದ ವ್ಯಾನವಾಯು, ಶ್ರೋತ್ರ, ಚಂದ್ರ ಎಂಬಿಗಳಿಗೆ ಅಧಿಮಾನಿಯಾಗಿ ಮೂರು ರೂಪಗಳುಳ್ಳ ಚಂದ್ರನು ವ್ಯಾನಾಯ ಸ್ವಾಹಾ ಎಂಬ ಮಂತ್ರ ಹೇಳಿ ಕೊಡತಕ್ಕ ಎರಡನೇ ಆಹುತಿಯಿಂದ ತೃಪ್ತನಾಗುತ್ತಾನೆ. ॥ ೧ ॥

ಉ. ॥ ವ್ಯಾನೇ ತೃಪ್ಯತಿ ಶ್ರೋತ್ರಂ ತೃಪ್ಯತಿ ಶ್ರೋತ್ರೇ ತೃಪ್ಯತಿ ಚಂದ್ರಮಾಸ್ತೃಪ್ಯತಿ ಚಂದ್ರಮಸಿ ತೃಪ್ಯತಿ ದಿಶಸ್ತೃಪ್ಯಂತಿ ದಿಕ್ಷು ತೃಪ್ಯಂತೀಷು ಯತ್ಕಿಂ ಚ ದಿಶಶ್ಚಂದ್ರಮಾಶ್ಚಾಧಿತಿಷ್ಠಂತಿ ತತ್ತೃಪ್ಯತಿ ತಸ್ಮಾನ್ತೃಪ್ತಿಂ ತೃಪ್ಯಂತಿ ಪ್ರಜಯಾ ಪಶುಭಿರನ್ನಾದ್ಯೇನ ತೇಜಸಾ ಬ್ರಹ್ಮವರ್ಚಸೇನೇತಿ ॥ ಇತಿ ವಿಂಶಃ ಖಂಡಃ ॥ ೭-೩೦ ॥ ॥ ೨ ॥

ಅ ॥ ವ್ಯಾನವಾಯುವು ತೃಪ್ತನಾಗುತ್ತಿರಲು ಶ್ರೋತ್ರಾಧಿಮಾನಿಯು ತೃಪ್ತನಾಗುತ್ತಾನೆ. ಅವನು ತೃಪ್ತನಾಗುತ್ತಿರಲು ಚಂದ್ರನು ತೃಪ್ತನಾಗುತ್ತಾನೆ. ಚಂದ್ರನು ತೃಪ್ತನಾಗಲು ದಿಕ್ಕುಗಳಿಗೆ ಅಧಿಮಾನಿನಿಯಾದ ಲಕ್ಷ್ಮೀದೇವಿಯು ತೃಪ್ತಳಾಗುತ್ತಾಳೆ. ಅವಳು ತೃಪ್ತಳಾದಾಗ, ಅವಳಿಗೂ ಮೂರು ರೂಪಗಳುಳ್ಳ ಚಂದ್ರನಿಗೂ ಆಶ್ರಯನಾದ ಜ್ಞಾನರೂಪನೂ ಸುಖಸ್ವರೂಪನೂ ಆದ ಪರಬ್ರಹ್ಮನು ತೃಪ್ತನಾಗುತ್ತಾನೆ. .....॥ ೭—೩೦ ॥ ॥ ೨ ॥

ಇಪ್ಪತ್ತನೇ ಖಂಡವು ಮುಗಿಯಿತು.

೨೧ನೇ ಖಂಡವು

ಪೀ—ಅಪಾನವಾಯು, ವಾಯು, ಭೂತಾಗ್ನಿಗಳಿಗೆ ಅಭಿಮಾನಿಯಾದ ಪಶ್ಚಿಮದ್ವಾರಕ್ಕೆ ಅಧಿಪತಿಯಾದ ಮೂರು ರೂಪಗಳುಳ್ಳ ಅಗ್ನಿ ದೇವತೆಯು **ಅಪಾನಾಯ ಸ್ವಾಹಾ** ಎಂಬ ಮಂತ್ರ ಹೇಳಿ ಕೊಡತಕ್ಕ ಆಹುತಿಯಿಂದ ತೃಪ್ತನಾಗುತ್ತಾನೆನ್ನುತ್ತಾರೆ—

ಉ. ॥ ಅಥ ಯಾಂ ತೃತೀಯಾಂ ಜುಹುಯಾತ್ತಾಂ ಜುಹುಯಾದಪಾನಾಯ ಸ್ವಾಹೇತ್ಯಪಾನಸ್ತೃಪ್ಯತಿ ॥ ೧ ॥

ಅ ॥ ಅಪಾನಾಯ ಸ್ವಾಹಾ ಎಂದು ಹೇಳಿ ಮೂರನೇ ಆಹುತಿಯನ್ನು ಹೋಮಿಸಬೇಕು. ಆದರಿಂದ ಅಪಾನನು ತೃಪ್ತನಾಗುತ್ತಾನೆ. ॥ ೧ ॥

ಉ. ॥ ಅಪಾನೇ ತೃಪ್ಯತಿ ವಾಕ್ ತೃಪ್ಯತಿ ವಾಚಿ ತೃಪ್ಯಂತ್ಯಾಮಗ್ನಿಸ್ತೃಪ್ಯತ್ಯಗ್ನೌ ತೃಪ್ಯತಿ ಪೃಥಿವೀ ತೃಪ್ಯತಿ ಪೃಥಿವ್ಯಾಂ ತೃಪ್ಯಂತ್ಯಾಂ ಯಸ್ಮಿಂ ಚ ಪೃಥಿವೀ ಚಾಗ್ನಿಶ್ಚಾಧಿತಿಷ್ಠತಸ್ತತ್ತೃಪ್ಯತಿ ತಸ್ಯಾನುತೃಪ್ತಿಂ ತೃಪ್ಯತಿ ಪ್ರಜಯಾ ಪಶುಭಿರನ್ನಾದ್ಯೇನ ತೇಜಸಾ ಬ್ರಹ್ಮವರ್ಚಸೇನೇತಿ॥ ಇತ್ಯೇಕವಿಂಶಃ ಖಂಡಃ॥ ॥ ೭–೨೧ ॥ ॥ ೨ ॥

ಅ ಅಪಾನನು ತೃಪ್ತನಾಗಲು ವಾಗಭಿಮಾನಿಯು ತೃಪ್ತನಾಗುತ್ತಾನೆ ಅವನು ತೃಪ್ತನಾಗುತ್ತಿರಲು ಅಗ್ನಿಯು ತೃಪ್ತನಾಗುತ್ತಾನೆ. ಅಗ್ನಿಯು ತೃಪ್ತನಾಗಲು ಪೃಥಿವೀ ಎನಿಸಿದ ಭೂದೇವಿಯು ತೃಪ್ತಳಾಗುತ್ತಾಳೆ.....* ॥ ೭–೨೧ ॥ ॥ ೨ ॥

ಇಪ್ಪತ್ತೊಂದನೇ ಖಂಡವು ಮುಗಿಯಿತು.

೨೨ನೇ ಖಂಡವು

ಪೀ—ಸಮಾನವಾಯು, ಮನಸ್ಸು, ಪರ್ಜನ್ಯಗಳಿಗೆ ಅಭಿಮಾನಿಯಾಗಿ ಮೂರು ರೂಪಗಳುಳ್ಳ ಉತ್ತರದ್ವಾರಕ್ಕೆ ಅಧಿಪತಿಯಾದ ಇಂದ್ರನು **ಸಮಾನಾಯ ಸ್ವಾಹಾ** ಎಂಬ ಮಂತ್ರ ಹೇಳಿ ಕೊಡತಕ್ಕ ಆಹುತಿಯಿಂದ ತೃಪ್ತನಾಗುತ್ತಾನೆನ್ನುತ್ತಾರೆ—

ಉ. ॥ ಅಥ ಯಾಂ ಚತುರ್ಥೀಂ ಜುಹುಯಾತ್ತಾಂ ಜುಹುಯಾತ್ಸಮಾನಾಯ ಸ್ವಾಹೇತಿ ಸಮಾನಸ್ತೃಪ್ಯತಿ ॥ ೧ ॥

ಅ ॥ **ಸಮಾನಾಯ ಸ್ವಾಹಾ** ಎಂಬ ಮಂತ್ರದಿಂದ ನಾಲ್ಕನೇ ಆಹುತಿಯನ್ನು ತೆಗೆದುಕೊಳ್ಳಬೇಕು. ಆದರಿಂದ ಸಮಾನನು ತೃಪ್ತನಾಗುತ್ತಾನೆ. ॥ ೧ ॥

* ಹಿಂದಿನಂತೆ ಅರ್ಥ ಇಟ್ಟುಕೊಳ್ಳಬೇಕು.

ಉ. ॥ ಸವಾನೇ ತೃಪ್ಯತಿ ಮನಸ್ತೃಪ್ಯತಿ ಮನಸಿ ತೃಪ್ಯತಿ ಪರ್ಜನ್ಯಸ್ತೃಪ್ಯತಿ ಪರ್ಜನ್ಯೇ ತೃಪ್ಯತಿ ವಿದ್ಯುತ್ತೃಪ್ಯತಿ ವಿದ್ಯುತಿ ತೃಪ್ಯಂತ್ಯಾಂ ಯಸ್ಯಾಂ ಚ ವಿದ್ಯುಚ್ಚ ಪರ್ಜನ್ಯಶ್ಚಾಧಿತಿಷ್ಠತಸ್ತತ್ತೃಪ್ಯತಿ ತಸ್ಯಾನುತೃಪ್ತಿಂ ತೃಪ್ಯತಿ ಪ್ರಜಯಾ ಪಶುಭಿರನ್ನಾದ್ಯೇನ ತೇಜಸಾ ಬ್ರಹ್ಮವರ್ಚಸೇನೇತಿ ॥ ಇತಿ ದ್ವಾವಿಂಶಃ ಖಂಡಃ॥ ॥ ೭-೨೨ ॥ ॥ ೨ ॥

ಅ ॥ ಸವಾನನು ತೃಪ್ತನಾಗಲು ಮನಸ್ಸು ತೃಪ್ತನಾಗುತ್ತದೆ ಮನೋಭಿಮಾನಿಯು ತೃಪ್ತನಾಗುತ್ತಿರಲು ಪರ್ಜನ್ಯನು (ಮೇಘಮಂಡಲಾಭಿಮಾನಿಯಾದ ಇಂದ್ರನು) ತೃಪ್ತನಾಗುತ್ತಾನೆ. ಆ ಪರ್ಜನ್ಯನು ತೃಪ್ತನಾಗುತ್ತಿರಲು ವಿದ್ಯುದಭಿಮಾನಿನಿಯಾದ ವಾಯುಪತ್ನಿಯು ತೃಪ್ತಳಾಗುತ್ತಾಳೆ. [illegible] ೨೨

ಇಪ್ಪತ್ತೆರಡನೇ ಖಂಡವು ಮುಗಿಯಿತು.

೨೩ನೇ ಖಂಡವು

ಟೀ—ಉದಾನವಾಯು ವಾಯು, ಆಕಾಶಗಳಿಗೆ ಅಭಿಮಾನಿಯಾದ ಮೂರು ದೇವತೆಗಳಲ್ಲಿ ಊರ್ಧ್ವ (ಮೇಲಿನ) ದ್ವಾರಕ್ಕೆ ಅಧಿಪತಿಯಾದ ಮುಖ್ಯಪ್ರಾಣನು ಉದಾನಾಯ ಸ್ವಾಹಾ ಎಂಬ ಮಂತ್ರದಿಂದ ಕೊಡಬೇಕಾದ ಆಹುತಿಯಿಂದ ತೃಪ್ತನಾಗುತ್ತಾನೆನ್ನುತ್ತಾ—

ಉ. ॥ ಅಥ ಯಾಂ ಪಂಚಮೀಂ ಜುಹುಯಾತ್ತಾಂ ಜುಹುಯಾದುದಾನಾಯ ಸ್ವಾಹೇತ್ಯುದಾನಸ್ತೃಪ್ಯತಿ ॥ ೧ ॥

ಟೀ—ಉದಾನಾಯ ಸ್ವಾಹಾ ಎಂಬ ಮಂತ್ರದಿಂದ ಐದನೇ ಆಹುತಿಯನ್ನು ತೆಗೆದುಕೊಂಡು ಬೇಕು. ಅದರಿಂದ ಉದಾನನು ತೃಪ್ತನಾಗುತ್ತಾನೆ [illegible] ೧

ಉ. ॥ ಉದಾನೇ ತೃಪ್ಯತಿ ತ್ವಕ್ ತೃಪ್ಯತಿ ತ್ವಚಿ ತೃಪ್ಯಂತ್ಯಾಂ ವಾಯುಸ್ತೃಪ್ಯತಿ ವಾಯೌ ತೃಪ್ಯತ್ಯಾಕಾಶಸ್ತೃಪ್ಯತ್ಯಾಕಾಶೇ ತೃಪ್ಯತಿ ಯಸ್ಮಿಂ ಚ ವಾಯುಶ್ಚಾಕಾಶಶ್ಚಾಧಿತಿಷ್ಠತಸ್ತತ್ತೃಪ್ಯತಿ ತಸ್ಯಾನುತೃಪ್ತಿಂ ತೃಪ್ಯತಿ ಪ್ರಜಯಾ ಪಶುಭಿರನ್ನಾದ್ಯೇನ ತೇಜಸಾ ಬ್ರಹ್ಮವರ್ಚಸೇನೇತಿ ॥ ಇತಿ ತ್ರಯೋವಿಂಶಃ ಖಂಡಃ ॥ ೭-೨೩ ॥ ॥ ೨ ॥

ಅ ॥ ಉದಾನನು ತೃಪ್ತನಾಗುತ್ತಿರಲು ತ್ವಗಭಿಮಾನಿಯು ತೃಪ್ತನಾಗುತ್ತಾನೆ. ಅವನು ತೃಪ್ತನಾಗಲು ಪ್ರಸಿದ್ಧ ವಾಯ್ವಭಿಮಾನಿಯು ತೃಪ್ತನಾಗುತ್ತಾನೆ. ಅವನು ತೃಪ್ತನಾಗುತ್ತಿರಲು ಆಕಾಶಾಭಿಮಾನಿಯು ತೃಪ್ತನಾಗುತ್ತಾನೆ. ಅವನು ತೃಪ್ತನಾಗುತ್ತಿರಲು ವಾಯ್ವಾಕಾಶಗಳಿಗೆ ಆಶ್ರಯನಾದ ಪರಬ್ರಹ್ಮನು ತೃಪ್ತನಾಗುತ್ತಾನೆ..... [illegible] ೨೩ ॥ ೩ ॥

ಇಪ್ಪತ್ತಮೂರನೇ ಖಂಡವು ಮುಗಿಯಿತು.

೨೪ನೇ ಖಂಡವು

ಪೀ—ವೈಶ್ವಾನರನ ಸ್ವರೂಪವನ್ನೂ ಹೋಮವನ್ನೂ ಹೇಳಿದರು. ಈಗ ವೈಶ್ವಾನರನ ಮಹಿಮೆ ತಿಳಿದುಕೊಂಡೇ ಹೋಮವನ್ನು ಅವಶ್ಯವಾಗಿ ಮಾಡಬೇಕು. ತಿಳಿಯದೆ ಮಾಡಿದರೆ ಅನರ್ಥವು ಸಂಭವಿಸುವುದು. ತಿಳಿದು ಹೋಮಿಸಿದರೆ ಫಲವಿಶೇಷವದೆ ಎನ್ನುತ್ತಾರೆ—

ಉ. ॥ ಸ ಯ ಇದಮವಿದ್ವಾನಗ್ನಿಹೋತ್ರಂ ಜುಹೋತಿ ಯಥಾಽಂಗಾರಾನಪೋಹ್ಯ ಭಸ್ಮನಿ ಜುಹುಯಾತ್ತಾದೃಕ್ತತ್ ಸ್ಯಾತ್ ॥ ೧ ॥

ಅ ॥ ಉಣ್ಣುವವನು ವೈಶ್ವಾನರನ ಸ್ವರೂಪಾದಿಗಳನ್ನು ತಿಳಿಯದೆ ಪ್ರಾಣಾಗ್ನಿ ಹೋತ್ರವನ್ನು ಮಾಡಿದರೆ ಆತನು ಮಾಡುವ ಪ್ರಾಣಾಗ್ನಿಹೋತ್ರವು ಜ್ವಲಿಸುವ ಅಗ್ನಿ ಬಿಟ್ಟು ಭಸ್ಮದಲ್ಲಿ ಹೋಮಿಸಿದರೆ ಹೇಗೆ ನಿಷ್ಫಲವೋ, ಹಾಗೆಯೇ ಅಜ್ಞಾನಿಯು ಮಾಡಿದ ಪ್ರಾಣಾಗ್ನಿಹೋತ್ರವು ನಿಷ್ಫಲವು. ॥ ೧ ॥

ಪೀ—ಜ್ಞಾನಪೂರ್ವಕವಾಗಿ ಮಾಡಿದರೆ ಫಲ ಹೇಳುತ್ತಾರೆ—

ಉ. ॥ ಅಥ ಯ ಏತದೇವಂವಿದ್ವಾನಗ್ನಿಹೋತ್ರಂ ಜುಹೋತಿ ತಸ್ಯ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷ್ವಾತ್ಮಸು ಹುತಂ ಭವತಿ ॥ ೨ ॥

ಅ ॥ ಉಣ್ಣುವವನು ವೈಶ್ವಾನರನ ಸ್ವರೂಪವನ್ನು ತಿಳಿದು ಪ್ರಾಣಾಗ್ನಿಹೋತ್ರ ಮಾಡಿದರೆ ಸರ್ವಲೋಕಗಳಲ್ಲಿರತಕ್ಕ ಸಮಸ್ತಭೂತಗಳಲ್ಲಿ ಅಂತರ್ಗತಗಳಾದ ಎಲ್ಲಾ ಆತ್ಮರಲ್ಲಿ ಹೋಮಿಸಲ್ಪಟ್ಟದ್ದು ಅವನಿಗೇನೇ ಆಗುತ್ತದೆ. ಅಥವಾ ಆತನಿಂದ ಎಲ್ಲಾ ಆತ್ಮರಲ್ಲಿ ಹೋಮಿಸಲ್ಪಡುತ್ತದೆ. ॥ ೨ ॥

ಪೀ—ಫಲವಿಶೇಷ ಹೇಳುತ್ತಾರೆ—

ಉ. ॥ ತದ್ಯಥೈಷೀಕಾತೂಲಮಗ್ನೌ ಪ್ರೋತಂ ಪ್ರದೂಯೇತೈವꣳ ಹಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ ಯ ಏತದೇವಂವಿದ್ವಾನಗ್ನಿಹೋತ್ರಂ ಜುಹೋತಿ ॥ ೩ ॥

ಅ ॥ ಹೇಗೆ ಹತ್ತಿಯ ರಾಶಿಯನ್ನು ಅಗ್ನಿಗೆ ಹಾಕಿದರೆ ಅದು ಭಸ್ಮೀಭೂತವಾಗುತ್ತದೋ ಹೀಗೆಯೇ ವೈಶ್ವಾನರನನ್ನು ತಿಳಿದು ಪ್ರಾಣಾಗ್ನಿಹೋತ್ರಮಾಡುವವನ ಸಮಸ್ತಪಾಪಗಳೂ ನಾಶಹೊಂದುತ್ತವೆ. (ಅಂದರೆ — ಅಪರೋಕ್ಷಜ್ಞಾನವಾದರೆ ಅನಾರಬ್ಧಗಳಾದ ಸಮಸ್ತಪಾಪಗಳೂ, ನಾಶಹೊಂದುತ್ತವೆ. ಪರೋಕ್ಷಜ್ಞಾನವಾದರೆ, ಯಥಾಯೋಗ್ಯವಾಗಿ ನಾಶಹೊಂದುತ್ತದೆ.) ॥ ೩ ॥

ಉ. ॥ ತಸ್ಮಾದು ಹೈವಂವಿದ್ಯದ್ಯಪಿ ಚಂಡಾಲಾಯೋಚ್ಛಿಷ್ಟಂ ಪ್ರಯಚ್ಛೇದಾತ್ಮನಿ ಹೈವಾಸ್ಯ ತದ್ವೈಶ್ವಾನರೇ ಹುತꣳ ಸ್ಯಾದಿತಿ ॥ ೪ ॥

ಅ ॥ ಹಿಂದೆ ಹೇಳಿದ ಪ್ರಕಾರ ವೈಶ್ವಾನರನ ಜ್ಞಾನವು ಸಮಸ್ತಪಾಪಕ್ಷಯಾದಿಗಳಿಗೆ ಕಾರಣ

ವಾಗಿರುವುದರಿಂದಲೇ ಹೀಗೆ ತಿಳಿದವನು ಸ್ಮರಣಾಮಾತ್ರಿಕೆಯಲ್ಲಿ ಅವರ್ಣನಾದ ಚಂಡಾಲನಿಗೆ ಶಕ್ತ ಉಚ್ಛಿಷ್ಟವನ್ನು ಕೊಟ್ಟರೂ ಅದರಿಂದ ಅವನಿಗೆ ಪಾಪವು ಸಂಭವಿಸುವುದಿಲ್ಲ. ಪರಂತು ಅವನು ಕೊಟ್ಟ ಉಚ್ಛಿಷ್ಟವು ಚಂಡಾಲನಲ್ಲಿ ಅಂತರ್ಯಾಮಿಯಾದ ವೈಶ್ವಾನರವಲ್ಲಿ ಹೋಮಿಸಿದಂತೆಯೇ ಆಗುವುದು. ॥ ೪ ॥

ಟೀ—ವೈಶ್ವಾನರನ ಜ್ಞಾನಪೂರ್ವಕವಾಗಿ ಮಾಡಿದ ಪ್ರಾಣಾಗ್ನಿಹೋತ್ರವು ಸರ್ವಲೋಕಗಳಿಗೆ ನಿಯಾಮಕನಾದ ಸರ್ವಸ್ವಪ್ರಾಣಿಗಳ ಅಂತರ್ಯಾಮಿಗೆ ಕೃಷ್ಣಿಪಡಿಸುವುದು. ಸರ್ವಸ್ವ ಇಷ್ಟವನ್ನು ಕೊಡುವುದು ಎಂಬೀ ಅರ್ಥವನ್ನು ಮಂತ್ರದಿಂದ ಸ್ಪಷ್ಟೀಕರಿಸುತ್ತಾರೆ—

ಉ. ॥ ತದೇಷ ಶ್ಲೋಕಃ ॥ ಯಥೇಹ ಕ್ಷುಧಿತಾ ಬಾಲಾ ಮಾತರಂ ಪರ್ಯುಪಾಸತೇ । ಏವಂ ಸರ್ವಾಣಿ ಭೂತಾನ್ಯಗ್ನಿಹೋತ್ರಮುಪಾಸತ ಇತ್ಯ-ಗ್ನಿಹೋತ್ರಮುಪಾಸತ ಇತಿ ॥ ಇತಿ ಚತ್ವಾರಿಂಶಃ ಖಂಡಃ ॥ ೭-೨೪ ॥ ೫ ॥

ಇತಿ ಶ್ರೀಮಚ್ಛಾಂದೋಗ್ಯೋಪನಿಷದಿ ಸಪ್ತಮೋಽಧ್ಯಾಯಃ ॥ ೭ ॥

ಅ ॥ ಈ ಪ್ರಮೇಯದಲ್ಲಿ ಮುಂದಿನ ಮಂತ್ರವು ಸಮ್ಮತಿಯಾಗುತ್ತದೆ. ಹೇಗೆ ಹಸಿದ ಬಾಲಕರು ತಾಯಿಯನ್ನು ಆಶ್ರಯಿಸುತ್ತಾರೋ, ಹಾಗೆಯೇ ಈ ಲೋಕದಲ್ಲಿ ಜೋಗ್ಯರಾದ ಎಲ್ಲಾ ಜನರೂ ತಂತಮ್ಮ ಇಷ್ಟವನ್ನು ಹೊಂದುವುದಕ್ಕಾಗಿ ಪ್ರಾಣಾಗ್ನಿಹೋತ್ರವನ್ನು ಮಾಡುತ್ತಾರೆ (೭-೪) ॥ ೫ ॥

ಟೀ—ಇದೇ ಖಂಡದಲ್ಲಿನ ವಿಷಯವನ್ನು ಮಹಾಶಾಲ ಮಹಾಶ್ರೋತ್ರಿಯ ಶಬ್ದಗಳ ಅರ್ಥ ಹೇಳುತ್ತಾರೆ—

ಭಾ. ॥ (೧) ಪ್ರತ್ಯಬ್ದಯಜ್ಞ ಕೃತ್ವಮ್ಮಹಾಶಾಲಃ ಪ್ರಕೀರ್ತಿತಃ । ವೇದವೇದಾರ್ಥ ವಿತ್ಸಮ್ಮಹಾಶ್ರೋತ್ರಿಯ ಉಚ್ಯತೇ ॥ (೨) ಕ್ರೀಡಾತ್ಮಕತ್ವಾದ್ದ್ಯ್ವಾಪ್ಯಂ ಚ (ಪೈ೦ವ) ಸುತೇಜಾಶ್ಚಾತಿತೇಜಸಾ । ಸ್ವರ್ಗಾಧಾರಂ ಶಿರೋ ವಿಷ್ಣೋಃ ॥ (೩) ಸರ್ವರೂಪಾತಿದರ್ಶ-ನಾತ್ । ಚಕ್ಷುಸ್ತು ವಿಶ್ವರೂಪಾಖ್ಯಮಾದಾನಾದಾಯುಷಾಮಪಿ । ಆದಿತ್ಯಾಪ್ಯಂ ಚ ಸೂ-ರ್ಯಸ್ಯಾಪ್ಯಾಶ್ರಯಂ ಸರ್ವದಾ ಸ್ಮೃತಂ ॥ (೪) ವಾಯ್ವಾದಿಪ್ರಾಣರಕ್ಷಂ ನ ಯತ್ಪತ್ ಕರ್ತಾ ಹರೇರ್ಯತಃ । ಪ್ರಾಣಸ್ತೇನ ಪೃಥಗ್ಭೂತ್ವಾ ವಾಯುರ್ಜ್ಞಾನಾಯುರೂಪತಃ । ವಾಯೋರಪ್ಯಾಶ್ರಯೋ ನಿತ್ಯಂ ॥ (೫) ಬಹುತ್ವಾದ್ಬಹುಲಃ ಸ್ಮೃತಃ । ಅಕಾರನಾಮಾ ಚಾದೀಶ್ಚೇರ್ಮಧ್ಯದೇಹೋ ರಮೋಪತೇಃ ॥ ೧ ॥

ಅ ॥ (೧ ಶಾಸ್ತ್ರದಲ್ಲಿ ಹೇಳಿರುವಪ್ರಕಾರ ಪ್ರತಿ ಸಂವತ್ಸರದಲ್ಲಿ ಯಜ್ಞವನ್ನಾಚರಿಸುವನು ಮಹಾಶಾಲನೆನಿಸುವನು. ಜೊತ್ತಾಗಿ ವೇದವೇದಾರ್ಥಗಳನ್ನು ತಿಳಿದವನು ಮಹಾಶ್ರೋತ್ರಿಯನೆನಿಸಿಕೊಳ್ಳುತ್ತಾನೆ. (೨)(೧೧ನೇ ಖಂಡದ ೨ನೇ ಮಂತ್ರ ಮೊದಲಾದವುಗಳಲ್ಲಿರುವ ವೈಶ್ವಾನರ ಶಬ್ದದಿಂದ ಅಗ್ನಿಯೇ ಹೇಳಲ್ಪಡುವುದು, ಎಂಬುದ್ದೇಶವನ್ನು ಹೊಗಳಲಾತಿಸುವುದಕ್ಕಾಗಿ ಈ ವಿದ್ಯೆಯು ವಿಷ್ಣುರದೇ ಎಂಬಲ್ಲಿ ಪ್ರಮಾಣ ಹೇಳುತ್ತಾರೆ—) (೧೩ನೇ ಖಂಡದ ೧ನೇ ಮಂತ್ರದ ದಿವಂ ಸುತೇಜಾ ಎಂಬ ಶಬ್ದಗಳ ಅರ್ಥ ಹೇಳುತ್ತಾರೆ—) ಕ್ರೀಡಾಸ್ವರೂಪನಾದುದರಿಂದ ದ್ಯೌ: ಎನಿಸಿದವನು. ಬಹು ತೇಜಸ್ಸು ಇದ್ದುದರಿಂದ ಸುತೇಜಾ ಎನಿಸುತ್ತಾನೆ. ಅಥವಾ ವಿಷ್ಣುವಿನ ತಿರುಪು ಸ್ವರ್ಗಕ್ಕೆ ಆಧಾರವಾದುದರಿಂದ ದ್ಯೌ: ಎನಿಸುವುದು. (೩) (೧೩ನೇ

ಖಂಡದ ತಾತ್ಪರ್ಯ ಹೇಳುತ್ತಾರೆ—) ವಿಷ್ಣುವಿನ ಚಕ್ಷುಸ್ಸು ಸಮಸ್ತವಸ್ತುಗಳನ್ನು ನೋಡುವುದರಿಂದ ವಿಶ್ವರೂಪವೆಂದೂ, ಜನರ ಆಯುಷ್ಯವನ್ನು ತೆಗೆದುಕೊಳ್ಳುವುದರಿಂದ ಮತ್ತು ಸೂರ್ಯನಿಗೆ ಸದಾ ಆಶ್ರಯವಾಗಿರುವುದರಿಂದ ಆದಿತ್ಯವೆನಿಸುವುದು. (೪) (೧೪ನೇ ಖಂಡದ ತಾತ್ಪರ್ಯ ಹೇಳುತ್ತಾರೆ—) ಶ್ರೀಹರಿಯ ಘ್ರಾಣವು ವಾಯು ಮೊದಲಾದ ಪ್ರಾಣಗಳಿಂದ ಮಾಡಲಶಕ್ಯಗಳಾದ ಕಾರ್ಯಗಳನ್ನು ಮಾಡುವುದರಿಂದ ಪೃಥಗ್ಘ್ರ್ಮಾ ಎನಿಸುತ್ತದೆ. ಜ್ಞಾನ ಆಯುರೂಪವಾದುದರಿಂದಲೂ ನಿತ್ಯದಲ್ಲಿಯೂ ವಾಯುವಿಗೆ ಆಶ್ರಯವಾದುದರಿಂದಲೂ ವಾಯುಃ ಎನಿಸುತ್ತದೆ. (೫) (೧೫ನೇ ಖಂಡದ ತಾತ್ಪರ್ಯ ಹೇಳುತ್ತಾರೆ—) ಬಹುರೂಪವುಳ್ಳವನಾದುದರಿಂದ ಅಥವಾ ಸರ್ವತ್ರವ್ಯಾಪ್ತನಾದುದರಿಂದ ಬಹುಲಃ ಎನಿಸುತ್ತಾನೆ. ಶ್ರೀಹರಿಯ ಮಧ್ಯದೇಹವು ಜೆನ್ನಾಗಿ ಪ್ರಕಾಶಿಸುವುದರಿಂದ ಆಕಾಶ ಎನಿಸುವುದು. ॥ ೧ ॥

ಪೀ—೧೬ನೇ ಖಂಡದ ತಾತ್ಪರ್ಯ ಹೇಳುತ್ತಾರೆ—

ಭಾ. ॥ (೧) ವ್ಯಾಪ್ತತ್ವಾದಾಪ ಇತ್ಯುಕ್ತೋ ರಯಿಾ ರತಿಕರತ್ವತಃ । ವಸ್ತಿರಾಕಾಶವಾಯ್ವೋಶ್ಚ ತಾವಾಧಾರೌ ಪ್ರಕೀರ್ತಿತೌ ॥ (೨) ಪೃಥನಾತ್ಪೃಥಿವೀನಾಮಾ ಪ್ರತಿಷ್ಠಾ ಚ ಪ್ರತಿಷ್ಠಿತೇಃ । ಪಾದೌ ಭಗವತೋ ವಿಷ್ಣೋಃ ಪೃಥಿವ್ಯಾಶ್ರಯ ಏವ ಚ ॥ (೩) ಉತ್ತಮಾನಾಂ ಹಿ ಪಾದೇನ ಸರ್ವಂ ರೂಪಂ ಹಿ ಕಥ್ಯತೇ । ವಿಷ್ಣೋಃ ಪದಮಿತಿ ಹ್ಯಸ್ಮಾತ್ಪೃಥಿವ್ಯೆದಿಕೇ ಸ್ಮೃತಾ ॥ (೪) ಘ್ರಾಣಶ್ಚಕ್ಷುಸ್ತಥಾಽಽದಿತ್ಯ ಇತ್ಯೇಕಾ ದೇವತಾ ಸ್ಮೃತಾ । ಪೂರ್ವದ್ವಾರಪತಿರ್ವಿಷ್ಣೋಃ ॥ (೫) ವ್ಯಾನಃ ಶ್ರೋತ್ರಂ ಚ ಚಂದ್ರಮಾಃ । ದಕ್ಷಿಣದ್ವಾರಪಸ್ತ್ವೇಕೋ ॥ (೬) ವಾಗಪಾನೋಽಗ್ನಿರೇವ ಚ । ಪಶ್ಚಿಮದ್ವಾರಪೋಽಪ್ಯೇಕಃ ॥ (೭) ಸಮಾನೋ ಮನ ಏವ ಚ । ಇಂದ್ರ ಇತ್ಯೇಕ ಏವೋಕ್ತ ಉತ್ತರದ್ವಾರರಕ್ಷಕಃ ॥ (೮) ಉದಾನೋ ವಾಯುರಿತ್ಯೇಕ ಊರ್ಧ್ವದ್ವಾರಾಧಿಪಶ್ಚ ಸಃ । ಸ ಏವಾಕಾಶನಾಮಾ ಚ ಲಕ್ಷ್ಮಾತ್ಮವಿಷ್ಣೋ ವಿಶೇಷತಃ

॥ ೨ ॥

ಅ ॥ (೧) ಶ್ರೀಹರಿಯ ಕಟಿಪ್ರದೇಶವು ಅಥವಾ ಹೊಕ್ಕಳಿನ ಕೆಳಗಿನ ಕಿರಿಹೊಟ್ಟೆಯು ಸರ್ವತ್ರ ವ್ಯಾಪಿಸಿಕೊಂಡಿದ್ದ ಪ್ರಯುಕ್ತ ಆಪಃ ಎನಿಸಿರುವುದು. ಭಕ್ತರಿಗೆ ಸಂತೋಷವನ್ನುಂಡುಮಾಡುವುದರಿಂದ ರಯಿಃ ಎನಿಸುವುದು ಶ್ರೀಹರಿಯ ಮಧ್ಯದೇಹ ಕಟಿಪ್ರದೇಶಗಳು ಆಕಾಶ ಜಲಗಳಿಗೆ ಆಶ್ರಯಗಳು. (ಆದ ಕಾರಣ ಮಧ್ಯದೇಹಕ್ಕೆ ಆಕಾಶವೆಂದೂ, ಕಟಿಪ್ರದೇಶಕ್ಕೆ ಆಪ್ ಎಂದೂ ಹೆಸರು.) (೨) (೧೭ನೇ ಖಂಡದ ತಾತ್ಪರ್ಯ ಹೇಳುತ್ತಾರೆ—) ಪೂರ್ಣಗುಣಗಳು ಇದ್ದುದರಿಂದ ವಿಷ್ಣುವಿನ ಪಾದಗಳು ಪೃಥಿವೀ ಎನಿಸುತ್ತವೆ. ಜೆನ್ನಾಗಿ ಇಷ್ಟವನ್ನು ಕೊಡುತ್ತಿರುವುದರಿಂದ ಪಾದವು ಪ್ರತಿಷ್ಠಾ ಎನಿಸುತ್ತದೆ. ಪೃಥಿವಿಗೆ ಮುಖ್ಯವಾಗಿ ಆಶ್ರಯವಾಗಿರುತ್ತವೆ. (೩) (**ತದ್ವಿಷ್ಣೋಃ ಪರಮಂ ಪದಂ, ದಿವೀವ ಚಕ್ಷುರಾತತಂ** ಎಂಬ ವೇದದಲ್ಲಿ ವಿಷ್ಣುವಿನ ಪಾದವು ಸರ್ವತ್ರ ವ್ಯಾಪ್ತವಾಗಿದೆ. ಎಂದು ಹೇಳಿದೆ. ವಿಷ್ಣುವಿನ ಪಾದವು ಪೃಥಿವಿಗೆ ಆಶ್ರಯವಾಗಿರುವುದರಿಂದ ಪೃಥಿವಿಯಲ್ಲಿ ಮಾತ್ರ ಇರುತ್ತದೆಂದು ಹೇಳಿದ್ದು ಹೇಗೆ ಕೂಡುತ್ತದೆಂದರೆ—) ಪಾದಶಬ್ದದಿಂದ ಉತ್ತಮರ ಸರ್ವಸ್ವರೂಪವೂ ಹೇಳಲ್ಪಡುತ್ತದೆ. (ಪಾದಮಾತ್ರವು ಹೇಳಲ್ಪಡುವುದಲ್ಲ.) ಆದಕಾರಣ **ವಿಷ್ಣೋಃ ಪದಂ** ಎಂದು ವೈದಿಕಪ್ರಸಿದ್ಧಿಯು ಇದೆ. (ಏವಂಚ ವಿಷ್ಣುವಿನ ಸ್ವರೂಪವು ಸರ್ವತ್ರ ವ್ಯಾಪಿಸಿಕೊಂಡಿದೆ. ಎಂದು ಆ ವೇದದ ಅರ್ಥವು. ಆದಕಾರಣ ಪಾದವು ಪೃಥಿವಿಯಲ್ಲಿದೆ ಎಂದು ಹೇಳಿದ್ದೂ ಕೂಡುತ್ತವೆ.) (೪) (೧೯ನೇ ಖಂಡದಲ್ಲಿ ಹೇಳಿದ ಪ್ರಾಣಾಹುತಿಯಿಂದ ತೃಪ್ತಿಯನ್ನು ಹೊಂದತಕ್ಕ ಘ್ರಾಣ ಚಕ್ಷುಃ ಆದಿತ್ಯರಿಗೆ ಭೇದವಿಲ್ಲವೆನ್ನುತ್ತಾರೆ—) ಪ್ರಾಣಾಭಿಮಾನಿ ಚಕ್ಷು

ರಭಿವಾಸಿನಿ, ಅದಿತ್ಯರು ಒಂಭೇ ದೇವತೆಯು. ಅವರಿಗೆ ಫೇವಪ್ಪಿ. ಈ ಮೂರು ರೂಪಗಳುಳ್ಳ ಅದಿತ್ಯನು ವೈಶ್ವಾನರನ ಪೂರ್ವದ್ವಾರಕ್ಕೆ ಅಧಿಪತಿಯು. (೫) (ಎರನೇ ಒಂಬದಲ್ಲಿ ಹೇಳಿದ ವ್ಯಾನಾಹುತಿಯಿಂದ ತೃಪ್ತರಾಗುವ ವ್ಯಾನ ಹೆಸ್ರಿನ ಚಾಂದ್ರಿಗೆ ಫೇವಪ್ಪಿವೆನ್ನುತ್ತಿ) ವ್ಯಾನಾಹಿವಾಸಿನಿ ಶ್ರೀಲಕ್ಷ್ಮಾಫಿವಾಸಿನಿ ಚಂದ್ರನಿಗೆ ಫೇವಪ್ಪಿ. ಈ ಮೂರು ರೂಪಗಳುಳ್ಳ ಚಾಂದ್ರನು ದಕ್ಷಿಣದ್ವಾರಕ್ಕೆ ಅಧಿಪತಿಯು. (೬) (ಮೂರೇ ಒಂಬದಲ್ಲಿ ಹೇಳಿದ ಅಪಾನಾಹುತಿಯಿಂದ ತೃಪ್ತರಾಗತಕ್ಕ ಅಪಾನಾಮಿಗಳಿಗೆ ಫೇವಪ್ಪಿವೆನ್ನುತ್ತಾರೆ.) ವಾಕ್. ಅವಳನ್ನು ಅಗ್ನಿ. ಈ ಮೂರು ರೂಪಗಳುಳ್ಳ ಅಗ್ನಿದೇವತೆಯು ಪಶ್ಚಿಮದ್ವಾರಕ್ಕೆ ಅಧಿಪತಿಯು. ೭ ಸವಾನ ವಾಯು, ಮನಸ್ಸು, ಪರ್ಜನ್ಯರಿಗೆ ಅಧಿವಸಿಸಿರುವ ಇಂದ್ರನು ಉತ್ತರದ್ವಾರಕ್ಕೆ ಅಧಿಪತಿಯು. (೮) ಉದಾನವಾಯು ನಾಯು, ಆಕಾಶಗಳಿಗೆ ಅಧಿವಸಿಸಿರುವ ಮುಖ್ಯ ಪ್ರಾಣನು ಊರ್ಧ್ವದ್ವಾರಕ್ಕೆ ಅಧಿಪತಿಯು. ಎತರೇ ಆಕಾರವನ್ನಿಟ್ಟುಕೊಂಡಿರುತ್ತಾನೆ. (ವಾಯುವಿಗೆ ಆಕಾರವೆಂದು ಸಾಮಾನ್ಯವಾದರೆ, ಎನೇ ಒಂಬದ ಎನೇ ಮಂತ್ರದಲ್ಲಿ ವಾಯುಶ್ಚಾಕಾಶಶ್ಚ ಎಂ ಪ್ರತ್ಯೇಕ ವಚನದಿಂದ ಫೇಧ ಹೇಳಿದ್ದು ಕಾರಣ ಕೊಂಗುವಾ ಮಾಬರೆ—) ವಷ್ಟಿನ್ಯಾಸನಲ್ಲಿ ಲಕ್ಷ್ಮೀ ದೇವಿಯು ವಿಶಿಷ್ಟ ಸ್ಥಾನವಿದಾನಗಳಿಂದ ಮುಖ್ಯಪ್ರಾಣನ. ಆಕಾರವನ್ನಿಟ್ಟುಕೊಳ್ಳುತ್ತಾನೆ. (ಇವಂತೆ ಕೇವಲ ವಾಯುವು ವಾಮುಶಬ್ದದಿಂದ ಹೇಳಲ್ಪಡುತ್ತಾನೆ. ಲಕ್ಷ್ಮೀದೇವಿಯ ವಿಶಿಷ್ಟ ಸ್ಥಾನವಿದ್ದರೆ ಆಕಾರವನ್ನಿಟ್ಟುಕೊಳ್ಳುತ್ತಾನೆ.)

ಓಂ ಆಕಾಶಾಯ ಎನೇ ಒಂಬದ ಎನೇ ಮಂತ್ರದಲ್ಲಿ ದ್ಯೌಶ್ಚಾದಿತ್ಯಶ್ಚ ಎನೇ ಒಂಬದ ಎನೇ ಮಂತ್ರದಲ್ಲಿ ದಿಶಶ್ಚ ಚಂದ್ರಮಾಶ್ಚ ಎನೇ ಒಂಬದ ಎನೇ ಮಂತ್ರದಲ್ಲಿ ಪೃಥಿವೀ ಚಾಗ್ನಿಶ್ಚ ಎನೇ ಒಂಬದ ಎನೇ ಮಂತ್ರದಲ್ಲಿ ವಿದ್ಯುಚ್ಚ ಪರ್ಜನ್ಯಶ್ಚ ಎಂಬ ಹೇಳಲ್ಪಟ್ಟಿ ದ್ಯು ದಿಕ್ ಪೃಥಿವೀ ವಿದ್ಯುತ್ ಶಬ್ದಗಳಿಗೆ ಅರ್ಥಕಾರ ವ್ಯಾಖ್ಯಾ

ಭಾ. ॥ (೨) ಪೃಥಿವೀನಾಮಿಕಾ ಶ್ರೀಸ್ತು ದ್ಯೌರ್ದಿಶೋ ವಿದ್ಯುದೇವ ಚ । ವಾಯುಪತ್ನೀ ಸಮುದ್ದಿಷ್ಟಾ ॥ (೩) ಕತ್ತದ್ವಾರಾಧಿಪಾಶ್ಚ ತೇ ॥ (೪) ಅಧಿತಿಷ್ಠಂತಿ ತೇ ಸರ್ವೇ ನಾರಾಯಣಮನಾಮಯಂ । ಯದ್ವಿಷ್ಣುಜ್ಞಾನರೂಪತ್ವಾತ್ ಕಿಮಾನಂದಸ್ವರೂಪತಃ । ಏತೇಷು ತೃಪ್ತೇಷು ಪರಿಸ್ತೃಪ್ತಶ್ಚೇಷಾಂ ಪ್ರಿಯೋ ಹ್ಯಸೌ ॥ (೫) ಸೂರ್ಯಪ್ರಸಾದಾತ್ತು ನರಾಃ ಪೂರ್ವದ್ವಾರೇಣ ಕೇವಲಂ । ಪ್ರಾಪ್ನುವಂತ್ಯಥ ಸೋಮಸ್ಯ ಪ್ರಸಾದಾತ್ಪಿತರಸ್ತಥಾ ॥ ದ್ವಾರೇಣ ದಕ್ಷಿಣೇನೈವ ಗಂಧರ್ವಾಃ ಪಶ್ಚಿಮೇನ ತು । ಅಗ್ನಿಪ್ರಸಾದಾದ್ಯಕ್ಷರಂ ಉತ್ತರೇಣೋದ್ರಸಂಶ್ರಯಾತ್ । ಶಿವಾದ್ಯಾ ವಾಯುಮಾಶ್ರಿತ್ಯ ಯಾಂತ್ಯೂರ್ಧ್ವೇಣ ಹರಿಂ ಸುರಾಃ ॥ (೬) ವೈಶ್ವಾನರಾಖ್ಯವಿಷ್ಣೋಸ್ತು ಸಮ್ಯಗ್ಜ್ಞಾನೇನ ಸರ್ವಶಃ । ವೈಶ್ವಾನರಜ್ಞಾನಯೋಗ್ಯಾಃ ಸಾಕ್ಷಾದೇವ ಸುರಾಃ ಸ್ಮೃತಾಃ । ಕಸ್ಮಾತ್ತೇಷಾಂ ಫಲಂ ಸರ್ವಮಸ್ಯೈಷಾಂ ತು ಸ್ವಯೋಗ್ಯತಃ ॥ ಇತಿ (ಇತ್ಯಾದಿ) ವೈಶ್ವಾನರವಿದ್ಯಾಯಾಂ ॥ ೩ ॥

ಅ ॥ (೧) ದ್ಯುಲೋಕಕ್ಕೆ ಅಧಿವಸಿನಿಯು ಲಕ್ಷ್ಮೀದೇವಿಯು. ದಿಕ್ ಎಂದು ಹೆಸರುಳ್ಳವಳು ಲಕ್ಷ್ಮೀದೇವಿಯು. ಪೃಥಿವೀ ಎಂದು ಹೆಸರುಳ್ಳವಳು ಭೂದೇವಿಯು. ವಿಂಚಿಗೆ ಅಧಿವಸಿನಿಯು ವಾಯು ಪತ್ನಿಯಾದ ಧಾರಣೀದೇವಿಯು. ಅಥವಾ ದ್ಯೌ=ಧಾರಣಿಯು. ದಿಶಃ ಧಾರಣಿಯು. ಪೃಥಿವೀ=ಲಕ್ಷ್ಮೀದೇವಿಯು. ವಿದ್ಯುತ್=ವಾಯು ಪತ್ನಿಯು. (೨) ಪೃಥಿವೀ ಮೊದಲಾದ ಹೆಸರುಳ್ಳ ದೇವತೆಗಳು ಅಯಾಯ ದ್ವಾರಗಳಿಗೆ ಅಧಿಪತಿಗಳು. (ಅದರಲ್ಲಿ ಪೃಥಿವೀ ಎನಿಸಿದ ಲಕ್ಷ್ಮೀದೇವಿಯು ಪಶ್ಚಿಮ

ದ್ವಾರಕ್ಕೂ ವಾಯುಪತ್ನಿಯಾದ ಭಾರತಿಯು ಪೂರ್ವ ದಕ್ಷಿಣ ಉತ್ತರ ದ್ವಾರಗಳಿಗೂ ಅಧಿಪತಿಯರು.) (೩) (ಅದಿತ್ಯಾದಿಗಳು ಪೃಥಿವ್ಯಾದಿಗಳು ದ್ವಾರಪಾಲಕರೆಂದು ಇಲ್ಲಿ ಹೇಳಲಿಲ್ಲವೆಂದರೆ—) ಅವರೆಲ್ಲರೂ ನಿರ್ದೋಷನಾದ ನಾರಾಯಣನನ್ನು ಆಶ್ರಯಿಸಿರುತ್ತಾರೆ. ವಿಷ್ಣುವು ಜ್ಞಾನಸ್ವರೂಪನಾದುದರಿಂದ **ಯತ್** ಎಂದೂ, ಆನಂದಸ್ವರೂಪನಾದುದರಿಂದ ಕಿಂ ಎಂದೂ ಎನಿಸುತ್ತಾನೆ. (**ತತ್ಪೃಷ್ಯತಿ** ಎಂಬ ಐದು ವಾಕ್ಯಗಳ ಅರ್ಥ ಹೇಳುತ್ತಾರೆ—) ಈ ದೇವತೆಗಳಿಗೆ ಶ್ರೀಹರಿಯು ಪ್ರಿಯನಾಗಿರುವುದರಿಂದ ಈ ದೇವತೆಗಳು ತೃಪ್ತರಾಗುತ್ತಿರಲು ಶ್ರೀಹರಿಯು ತೃಪ್ತನಾಗುತ್ತಾನೆ. (೪) (**ತಸ್ಯಾನುತೃಪ್ತಿಂ ತೃಪ್ಯತಿ ಪ್ರಜಯಾ ಪಶುಭಿಃ** ಇದು ಮೊದಲಾದ ಐದು ವಾಕ್ಯಗಳಿಂದ ಉಪಾಸಕನಿಗೆ ಐಹಿಕಫಲ ಮಾತ್ರ ಹೇಳಲ್ಪಡುವುದಲ್ಲ. ಪರಂತು **ಪ್ರತಿಪದ್ಯತೇ ಸ್ವರ್ಗಂ ಲೋಕಂ ಯ ಏತಾನೇವಂ ಪಂಚ ಬ್ರಹ್ಮಪುರುಷಾನ್ವೇದ** ಎಂಬುವುದರಿಂದ ಮೋಕ್ಷದಲ್ಲಿಯೂ ವಿಶೇಷ ಫಲವಿದೆನ್ನುತ್ತಾರೆ—) ಪೂರ್ವ ದ್ವಾರಪಾಲಕರನ್ನು ಪಾಸನೆಮಾಡತಕ್ಕ ಮನುಷ್ಯರು ಸೂರ್ಯನ ಪ್ರಸಾದದಿಂದ ಪೂರ್ವದ್ವಾರದಿಂದಲೂ, ಪಿತೃಗಳು ಚಂದ್ರನ ಪ್ರಸಾದದಿಂದ ದಕ್ಷಿಣದ್ವಾರದಿಂದಲೂ, ಗಂಧರ್ವರು ಅಗ್ನಿಯ ಪ್ರಸಾದದಿಂದ ಪಶ್ಚಿಮದ್ವಾರದಿಂದಲೂ, ಋಷಿಗಳು ಇಂದ್ರನ ಪ್ರಸಾದದಿಂದ ಉತ್ತರದ್ವಾರದಿಂದಲೂ ಕೇಶವನನ್ನು ಹೊಂದುತ್ತಾರೆ. ರುದ್ರಾದಿ ದೇವತೆಗಳು ಮುಖ್ಯಪ್ರಾಣನನ್ನು ಆಶ್ರಯಿಸಿ ಮೇಲಿನ ದ್ವಾರದಿಂದ ಶ್ರೀಹರಿಯನ್ನು ಹೊಂದುತ್ತಾರೆ. (ಹೃದಯದಲ್ಲಿರತಕ್ಕ ಪೂರ್ವದ್ವಾರಪಾಲಕರನ್ನು ಪಾಸನೆ ಮಾಡಿದುದರಿಂದ ಶ್ವೇತದ್ವೀಪಾದಿಲೋಕಗಳಲ್ಲಿ ಪೂರ್ವದ್ವಾರದಿಂದ ಕೇಶವನನ್ನು ಹೊಂದುತ್ತಾರೆ-) (೫) (ಕೇವಲ ಸೂರ್ಯಾದಿಗಳ ಪ್ರಸಾದದಿಂದಲೇ ಶ್ರೀಹರಿಯನ್ನು ಹೊಂದುವುದಲ್ಲವೆನ್ನುತ್ತಾರೆ—) ವೈಶ್ವಾನರನೆಂಬ ವಿಷ್ಣುವಿನ ಯಥಾರ್ಥಜ್ಞಾನದಿಂದ ಮುಖ್ಯವಾಗಿಯೇ ವೈಶ್ವಾನರನ ಉಪಾಸನೆಗೆ ಯೋಗ್ಯರಾದವರೆಲ್ಲರೂ ಮುಖ್ಯವಾಗಿ ದೇವತೆಗಳು ಆಗಿರುವರು. ಆದಕಾರಣ ಅವರೀಗೇನೆ ಸಂಪೂರ್ಣ ಫಲವು. ಇತರರಿಗೆ ಅವರವರ ಯೋಗ್ಯತಾನುಸಾರ ಫಲವೆಂದು ವೈಶ್ವಾನರವಿದ್ಯೆಯಲ್ಲಿ ಹೇಳಿದೆ. ॥ ೩ ॥

ಪೀ—ವೈಶ್ವಾನರವಿದ್ಯೆಯು ಭಗವತ್ಪರವೆಂದು ಹೇಳಿದ ಪ್ರಯುಕ್ತ ವಿಷ್ಣುವೇ ವೈಶ್ವಾನರನು. ದೇವತೆಯಾಗಲೀ ಭೂತಾಗ್ನಿಯಾಗಲೀ ಅಲ್ಲ, ಎಂದು ಹೇಳಿದರು. ಈಗ ಈ ಪ್ರಕರಣದಿಂದಲೂ ಇದಕ್ಕೆ ಸಮವಾದ ಉಕ್ತಿಯು ಬೇರೆ ಕಡೆ ಇದ್ದ ಪ್ರಯುಕ್ತವೂ ಹೀಗೆಯೇ ನಿಶ್ಚಯವಾಗುತ್ತದೆ ಎನ್ನುತ್ತಾರೆ—

ಭಾ.॥ (೧) ಕೋ ನ ಆತ್ಮಾ ಕಿಂ ಬ್ರಹ್ಮ ಸೋಽಯಮಾತ್ಮಾ ಚತುಷ್ಪಾತ್ । ಸ್ಥೂಲಭುಗ್ವೈಶ್ವಾನರಃ ಪ್ರಥಮಃ ಪಾದಃ ॥ (೨) ಓಂ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ಓಂ ॥ ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ । ಇತ್ಯಾದೇಶ್ಚ ವೈಶ್ವಾನರೋ ವಿಷ್ಣುರಿತಿ ಸಿದ್ಧಂ ॥ (೩) ಸ ವಾಯುಃ ಸ ಆಕಾಶಃ ವಾಯುಶ್ಚಾಕಾಶಶ್ಚಾಧಿಷ್ಠಿತ ಇತಿ ವಜ್ರಪಾದ್ವಾಯೋ ರೂಪಮನ್ಯಾಧಿಷ್ಠಿತಮಾಕಾಶಾಖ್ಯಂ ವಾಯೋಃ ಸ್ವರೂಪಮಿತಿ ವಿಜ್ಞಾಯತೇ ॥ (೪) ಆಕಾಶನಾಮಾ ವಿಷ್ಣೋಶ್ಚೇ ವಾಯುಶ್ಚಾಕಾಶಕಃ ಸ್ಮೃತಃ । ಆಕಾಶ ಇತಿ ಲಕ್ಷ್ಮೀಶ್ಚ ತಥಾಽಽಕಾಶೋ ಹರಿಃ ಸ್ವಯಂ ॥ ಇತಿ ಶಬ್ದನಿರ್ಣಯೇ ॥ (೫) ಸುತೇಜೋ ವಿಶ್ವರೂಪಾದಿಭೇದೇನಾಂಗಾನಿ ಮಾಪತೇಃ । ಅಭಿನ್ನಾನ್ಯಪಿ ಕಥ್ಯಂತೇ ಲೋಕದೃಷ್ಟಿವಿಭೇದತಃ ॥ ಇತಿ ಚ ॥ ಇತಿ ಚತ್ವಾರಿಂಶಃ ಖಂಡಃ ॥ ೭–೨೪ ॥ ॥ ೪ ॥

ಅ ॥ (೧) ಆತ್ಮನೆಂದರೆ ಯಾವನು? ಬ್ರಹ್ಮನೆಂದರೆ ಯಾವನು? (ಎಂದು ವಿಚಾರಪೂರ್ವಕವಾಗಿ ವೈಶ್ವಾನರವಿದ್ಯೆಯನ್ನು ಆರಂಭಿಸಿ ಹೇಳಿದುದರಿಂದಲೂ ವಿಷ್ಣುಪ್ರಕರಣವಾದುದರಿಂದಲೂ ವೈಶ್ವಾನರನು

ವಿಷ್ಣುವೆಂದು ಸಿದ್ಧವಾಯಿತು.) ಏಂ ಎನಿಸಿಕೊಂಡ ಲಕ್ಷ್ಮೀದೇವಿಗೆ ಸಿದೃಶನಾದ ಶ್ರೀಹರಿಯ ಸ್ವರೂಪಭೂತಗಳಾದ ಸಾಲ್ಯ ಅಂಶಗಳುಳ್ಳವನು ಶುಭಪೋಗಗಳನ್ನುಳ್ಳವನು. ವೈಶ್ವಾನರನ ಒಂದನೇ ರೂಪನು. (ಮಾಂಡೂಕಿದಲ್ಲಿ ಸ್ಕೂಲಭುಗ್ವೈಶ್ವಾನರಃ ಎಂದು ವಿಷ್ಣುವಿನಲ್ಲಿ ವೈಶ್ವಾನರ ಎಂಬ ಶಬ್ದಪ್ರಯೋಗವಿದ್ದುದರಿಂದ ಇಲ್ಲಿಯೂ ವೈಶ್ವಾನರನೆಂದರೆ ವಿಷ್ಣುವೆಂದು ಸಿದ್ಧವಾಯಿತು ಮತ್ತು **ಸೋಽಯಮಾತ್ಮಾ** ಎಂದು ಉಪಕ್ರಮದಲ್ಲಿ ಆತ್ಮಶಬ್ದವಿದ್ದ ಪ್ರಯುಕ್ತವೂ ಇದು ವಿಷ್ಣುಪ್ರಕರಣವೆಂದು ಸಿದ್ಧಿಸುತ್ತದೆ.) (೨) (1) **ಆತ್ಮಾನಂ ವೈಶ್ವಾನರಂ** ಎಂದು ಹೇಳಿದ ವೈಶ್ವಾನರವು ವಿಷ್ಣುವೇ. ಅಗ್ನಿಯಲ್ಲಿಯೂ ವಿಷ್ಣುವಿನಲ್ಲಿಯೂ ಇರುವ ವೈಶ್ವಾನರಶಬ್ದವಲ್ಲಿ ವಿಷ್ಣುವಿನಲ್ಲಿಯೇ ಪ್ರಸಿದ್ಧವಾದ ಆತ್ಮಶಬ್ದ ವಿಶೇಷಣವಿದೆ. (2) ಮತ್ತು ನಾನು ವೈಶ್ವಾನರನಾಗಿ ಪ್ರಾಣಿಗಳ ದೇಹವನ್ನು ಆಶ್ರಯಿಸಿರುತ್ತೇನೆಂದು (ನೀತೆಯಲ್ಲಿ ಅರ್ಜುನನಿಗೆ ಕೃಷ್ಣನ ಉಕ್ತಿಯಿದ್ದು.) ಇದುಮೊದಲಾದ ಶ್ರುತಿಗಳಂತೆಯೂ ವೈಶ್ವಾನರನೆಂದರೆ ವಿಷ್ಣುವೇ ಎಂದು ಸಿದ್ಧಿಸುತ್ತದೆ. (೩) (ದೇವಸುಖಿ ವಿಶ್ಲೇಷಣೆ) **ನ ಉದಾನಃ ನ ವಾಯುಃ ನ ಆಕಾಶಃ** ಎಂದು ಭೇದವಿಲ್ಲವೆಂದು ಹೇಳಿದುದರಿಂದ ಆಕಾಶವೆಂದರೆ ವಾಯುವೇ. ಇಲ್ಲಿ **ವಾಯಶ್ಚ ಆಕಾಶಶ್ಚ** ಎಂದು ಭೇದ ಹೇಳಿರುವ ವಾಕ್ಯದಿಂದ ಆಕಾಶವೆನ್ನುವ ನಾಮರೂಪದಲ್ಲಿ ಲಕ್ಷ್ಮೀದೇವಿಯ ವಿಶೇಷ ಸನ್ನಿಧಾನವಿದೆ. ಲಕ್ಷ್ಮಿಯ ವಿಶೇಷ ಸನ್ನಿಧಾನವಿರುವ ಮುಖ್ಯಪ್ರಾಣನು ಇನ್ನೊಂದು ರೂಪವು ವಾಯುವೆನಿಸುತ್ತದೆ. (೪ (ಲಕ್ಷ್ಮೀದೇವಿಯ ಸನ್ನಿಧಾನ ವಿಶೇಷವಿದ್ದುದರಿಂದ ವಾಯುವಿಗೆ ಆಕಾಶವೆಂದು ಹೆಸರು ಎಂದು ಹೇಳಿದೆ ಲಕ್ಷ್ಮೀದೇವಿಗೂ ವಾಯುದೇವರಿಗೂ ಅಕಾಶ ಎಂದು ಹೆಸರು ಬರಲಿಕ್ಕೆ ಪ್ರಮಾಣ ಹೇಳುತ್ತಾರೆ.) ವಿಷಾಯಕನಿಗೂ, ವಾಯುವಿಗೂ, ಲಕ್ಷ್ಮೀದೇವಿಗೂ, ಶ್ರೀಹರಿಗೂ ಆಕಾಶವೆಂಬ ಹೆಸರಿದೆ, ಎಂದು ಶಬ್ದನಿರ್ಣಯದಲ್ಲಿದೆ (೫) ಶ್ರೀಹರಿಯ ಅಂಗಗಳಿಗೆ ಭೇದವಿಲ್ಲವಾದರೂ ಉಪಾಸಕರ ದೃಷ್ಟ್ಯನುಸಾರವಾಗಿ ಸುಕೇಶಾ ವಿಶ್ವರೂಪ ಮೊದಲಾದ ಶ್ರುತಿಗಳ ಭೇದವಿಂದಲೇ ಹೇಳಲ್ಪಟ್ಟಿರುತ್ತದೆ. ೪ ॥

ಇಪ್ಪತ್ತನಾಲ್ಕನೇ ಖಂಡವು ಮುಗಿಯಿತು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದ್ಭಾಷ್ಯೋಪನಿಷದ್ಭಾಷ್ಯೇ ಸಪ್ತಮೋಽಧ್ಯಾಯಃ ॥ ೭ ॥

ಇಂತು ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ ಮಾಡಿಲ್ಪಟ್ಟ ಶ್ರೀಮದ್ಭಾಷ್ಯೋಪನಿಷದ್ಭಾಷ್ಯದಲ್ಲಿ ಏಳನೇ ಅಧ್ಯಾಯವು ಮುಗಿಯಿತು. ॥ ೭

ಶ್ರೀಮದಾನಂದತೀರ್ಥಾರ್ಯಹೃದಯಾಮಲಮಂದಿರಂ ।
ಜಾನಕೀಜಾನಿಪಾದಾಬ್ಜಸಾಂದ್ರಂ ವಂದೇ ನಿರಂತರಂ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಎಂಟನೇ ಅಧ್ಯಾಯವು

ತಸ್ಮೈ ನನೋ ಭಗವತೇ ಚಿದಚಿತ್ಪರಮಾಯ ತೇ।
ಪುರುಷೋತ್ತಮಾಯ ದೇವಾಯ ಪೂರ್ಣಾನಂದೈಕರೂಪಿಣೇ॥

೧ನೇ ಖಂಡವು

ಪೀ—ಶ್ರೀಹರಿಯು ಜೀವಜಡಗಳೆಂಬ ಪ್ರಪಂಚದಿಂದ ಪಾರಮಾರ್ಥಿಕವಾಗಿಯೇ ಅತ್ಯಂತ ಭಿನ್ನನು. ಪೂರ್ಣಗುಣಗಳುಳ್ಳವನು, ಸರ್ವೋತ್ತಮನೆಂದು ತಿಳಿದವರಿಗೆ ಮೋಕ್ಷ, ಮೋಕ್ಷೇತರ ಫಲವುಳ್ಳ ಉಪಾಸನೆಗಳನ್ನು ಹಿಂದೆ ಹೇಳಿರುವರು. ಈ ಅಧ್ಯಾಯದಲ್ಲಿ ಜೀವೇಶ್ವರರಿಗೆ ಭೇದವಿಷಯದಲ್ಲಿ ಯಾರಿಗೆ ಸಂದೇಹವಿದೆಯೋ, ಯಾರು ವ್ಯತ್ಯಾಸವಾಗಿ ತಿಳಿದಿರುವನೋ, ಅತನಿಗೆ ಭೇದಜ್ಞಾನವು ಮೋಕ್ಷಕ್ಕೆ ಉಪಯುಕ್ತವು, ಎಂದು ಯುಕ್ತಿಗಳಿಂದ ತಿಳಿಸುತ್ತಾರೆ. ಆದರಲ್ಲಿ ಶ್ವೇತಕೇತುವನ್ನು ನಿಮಿತ್ತವಾಗಿ ಇಟ್ಟುಕೊಂಡು ಎಲ್ಲಾ ಜೀವರಿಗೂ ಶ್ರೀಹರಿಯಿಂದ ಭೇದವದೆ, ಎಂದು ತಿಳಿಸುತ್ತಾ ಅಭೇದಪ್ರಸಕ್ತಿಯಿಲ್ಲದೆ ಭೇದವನ್ನು ಹೇಳಲಾಗದಿರುವುದರಿಂದ ಅಭೇದದ ಪ್ರಸಕ್ತಿ ಮಾಡಿಕೊಂಡು ಭೇದವನ್ನು ಹೇಳುತ್ತಾರೆ—

ಉ. ॥ ಓಂ ॥ ಶ್ವೇತಕೇತುರ್ಹಾರುಣೇಯ ಆಸ ತꣳ ಹ ಪಿತೋವಾಚ ಶ್ವೇತಕೇತೋ ವಸ ಬ್ರಹ್ಮಚರ್ಯಂ ನ ವೈ ಸೋಮ್ಯಾಸ್ಮತ್ಕುಲೀನೋಽನನೂಚ್ಯ ಬ್ರಹ್ಮಬಂಧುರಿವ ಭವತೀತಿ

॥ ೧ ॥

ಆ ॥ ಅರುಣನ ಮೊಮ್ಮಗನಾದ ಅಥವಾ ಅರುಣೆಯ ಮಗನಾದ ಶ್ವೇತಕೇತುವೆನ್ನುವವನು ಇರುತ್ತಿದ್ದನು. ಅವನಿಗೆ ತಂದೆಯಾದ ಉದ್ದಾಲಕರು ಹೇಳಿದರು. ಎಲೋ ಶ್ವೇತಕೇತುವೇ ವೇದಾಧ್ಯಯನಕ್ಕಾಗಿ ಗುರುಕುಲದಲ್ಲಿ ಆವಾಸವಾಡು. (ವೇದಾಧ್ಯಯನಾದಿಗಳನ್ನು ಮಾಡು.) ಎಲೋ ಸುಂದರನೇ ನಮ್ಮ ಕುಲದಲ್ಲಿ ಹುಟ್ಟಿದವನು ಯಾವನಾದರೂ ವೇದಗಳನ್ನು ಅಧ್ಯಯನಮಾಡದೆ *ಬ್ರಾಹ್ಮಣಾಭಾಸನಂತೆ ಆಗಿರುವುದಿಲ್ಲ. ಹೀಗೆ ಹೇಳಿದನು.

॥ ೧ ॥

ಉ. ॥ ಸ ಹ ದ್ವಾದಶವರ್ಷ ಉಪೇತ್ಯ ಚತುರ್ವಿಂಶತಿವರ್ಷಸ್ಸರ್ವಾನ್ ವೇದಾನಧೀತ್ಯ ಮಹಾಮನಾ ಅನೂಚಾನಮಾನೀ ಸ್ತಬ್ಧ ಏಯಾಯ ತꣳ ಹ ಪಿತೋವಾಚ ಶ್ವೇತಕೇತೋ ಯನ್ನು ಸೋಮ್ಯೇದಂ ಮಹಾಮನಾ ಅನೂಚಾನಮಾನೀ ಸ್ತಬ್ಧೋಽಸ್ಯುತ ತಮಾದೇಶಮಪ್ರಾಕ್ಷ್ಯಃ

॥ ೨ ॥

ಆ ॥ ಆಗ ಶ್ವೇತಕೇತುವು ಹನ್ನೆರಡು (೧೨) ವರ್ಷದವನು ಗುರುಗಳ ಮನೆಗೆ ಹೋಗಿ ಇಪ್ಪತ್ತನಾಲ್ಕು (೨೪) ವರ್ಷಪರ್ಯಂತ ಎಲ್ಲಾ ವೇದಗಳನ್ನು ಕಲಿತು, ನಾನು ಷಡಂಗಸಹಿತ ಎಲ್ಲಾ ವೇದ

* ಬ್ರಾಹ್ಮಣರನ್ನು ಬಂಧುಗಳೆನ್ನುತ್ತಾನೆ, ಸ್ವಯಂ ಬ್ರಾಹ್ಮಣನಲ್ಲ, ಅಥವಾ ಬ್ರಾಹ್ಮಣಯಜ್ಞದಲ್ಲಿ ಬ್ರಾಹ್ಮಣನಿಂದ ವ್ಯಧಿಚಾರದಿಂದ ಹುಟ್ಟಿದವನು, ಅಥವಾ ಸಂಸ್ಕಾರವಾಗದಿದ್ದವನು ಬ್ರಹ್ಮಬಂಧುವೆನಿಸುವನು

ಗವನ್ನು ಅಧ್ಯಯನ ಮಾಡಿರುತ್ತೀಯೆ, ಎಂದಹಂಕಾರವುಳ್ಳವನಾಗಿ, ತನ್ನನ್ನು ಅತಿಮಾನುಷನೆಂದು ಯೋಚಿಸುತ್ತಿರುವವನಾಗಿ (ವಿನಯವಿಲ್ಲದವನಾಗಿ) ತಂದೆಯು ಬಳಿಗೆ ಬಂದನು. ಆಗ ತಂದೆಯು ಮಗನು ತನಗೆ ಅನುಕೂಲನಾಗಿಲ್ಲವೆಂದು ಅರಿತು (ತಾನೇ ಸ್ವತಂತ್ರನೆಂದು ದುರಭಿಮಾನವುಳ್ಳ ಮಗನ ಅಹಂಕಾರವನ್ನು ಕಳೆಯುವ ದಕ್ಷಾಗಿ) ಹೇಳಿದನು. ಎಲೋ ಸೋಮ್ಯನೇ ನೀನು ಈಗ ಎಲ್ಲಾ ಶಾಸ್ತ್ರಗಳನ್ನು ಕಲಿತಿರುವೆನೆಂದು ದುರಹಂಕಾರವುಳ್ಳವನೂ ತಾನೇ ಸರ್ವಜ್ಞನೆಂದು ಯೋಚಿಸುತ್ತಿರುವನೂ, ಗರ್ವಪೂರ್ಣನೂ ಆಗಿರುತ್ತೀ. ಸರ್ವವೇದಪ್ರಸಿದ್ಧನಾದ ನಾರಾಯಣನನ್ನು ತಿಳಿದಿರುತ್ತೀಯೋ ಏನು?

ವಿ॥ ಏಳನೇ ಅಧ್ಯಾಯದಿಂದ ೧೨ ವರ್ಷ ಪರ್ಯಂತ ಯಜ್ಞ ಮೊದಲಾದ ಸಮಸ್ತ ಕರ್ಮಗಳನ್ನೂ ದೇವತೆಗಳನ್ನೂ ಹೇಳುವ ಎಲ್ಲಾ ವೇದಗಳನ್ನೂ ನೀನು ಕಲಿತಿದ್ದರೂ ಅನೆಲ್ಲವೂ ವ್ಯರ್ಥವೇ. ಏಕೆಂದರೆ ಸರ್ವಸ್ವಾಮಿಯಾದ ನಾರಾಯಣನನ್ನು ಪ್ರಾಮುಖ್ಯ ನೀನು ತಿಳಿದಿರಲಿಲ್ಲ. ಆತನನ್ನು ತಿಳಿದಿದ್ದರೆ ಸರ್ವವೂ ನಿನಗೆ ಹೀಗೆ ಅಹಂಕಾರವು ಬರುತ್ತಿರಲಿಲ್ಲ. ॥೨॥

ಉ. ॥ ಯೇನಾಶ್ರುತꣳ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಮಿತಿ ಕಥಂ ನು ಭಗವಃ ಸ ಆದೇಶೋ ಭವತೀತಿ ॥ ೩ ॥

ಅ॥ ಯಾವ ಶ್ರೀಹರಿಯನ್ನು ಗುರುಮುಖದಿಂದ ಕೇಳಿ ತಿಳಿದರೆ ಕೇಳಲ್ಪಡದಿರುವ ದೇವತಾಕರ್ಮ ಮೊದಲಾದುದು ಕೇಳಲ್ಪಟ್ಟಂತೆ ಆಗುತ್ತದೋ, ಯಾವ ಶ್ರೀಹರಿಯನ್ನು ವಿನಯ ನಿರಂತರದಿಂದಲೂ ಸುಸ್ತಾನುಮತ್ತು ಅಲೋಚಿಸುವುದೋ) ಮಾಡಿದರೆ ಮನನವಾಗದಲ್ಪಡದಿದ್ದ ದೇವತಾಕರ್ಮಾದಿಗಳು ಮನನ ಮಾಡಲ್ಪಟ್ಟಂತೆ ಆಗುವುದೋ, ಯಾವ ಶ್ರೀಹರಿಯನ್ನು ಧ್ಯಾನಿಸಿದರೆ ಧ್ಯಾನಿಸಲ್ಪಡದಿದ್ದ ದೇವತಾದಿಗಳು ಧ್ಯಾನಿಸಲ್ಪಟ್ಟಂತೆ ಆಗುವುದೋ, ಅಂತಹ ಶ್ರೀಹರಿಯನ್ನು ಕೇಳಿ ತಿಳಿದಿರುತ್ತೀಯೋ ಏನು? (ಅಂದರೆ— ಯಾವ ಶ್ರೀಹರಿಯ ಶ್ರವಣ ಮನನ ಧ್ಯಾನಗಳಿಂದ ಕರ್ಮದೇವತಾದಿ ಜಗತ್ತಿನ ಶ್ರವಣಾದಿಗಳು ಆದಂತೆ ಆಗುತ್ತದೋ, ಅಂತಹ ಶ್ರೀಹರಿಯನ್ನು ಕೇಳಿತಿಳಿದಿರುತ್ತೀಯೋ? ಪ್ರಾಮುಖ್ಯ ನೀನು ಕೇಳಿತಿಳಿಯಲಿಲ್ಲ. ಕೇಳಿತಿಳಿದಿದ್ದರೆ ಇಂತಹ ದುರಹಂಕಾರವು ಬರುತ್ತಿರಲಿಲ್ಲ.) (ಆಗ ಶ್ರೇತಕೇತುವು) ಎಲೋ ಪೂಜ್ಯನೇ ಶ್ರೀಹರಿಯ ಜ್ಞಾನದಿಂದ ದೇವತಾಕರ್ಮಾದಿಗಳ ಜ್ಞಾನವಾಗುತ್ತದೆಂಬ ಉಪದೇಶವು ಹೇಗೆ ಯುಕ್ತವಾಗುತ್ತದೆ? ಅಥವಾ ಒಬ್ಬನ ಜ್ಞಾನದಿಂದ ಇನ್ನೊಬ್ಬನ ಜ್ಞಾನವಾಗುತ್ತದೆಂಬ ಉಪದೇಶವು ಎಂತಹದು? ಎಂದು ಮಗನು ಕೇಳಿದನು. (ಒಂದು ವಸ್ತುವಿನ ಜ್ಞಾನದಿಂದ ಇನ್ನೊಂದು ವಸ್ತುವಿನ ಜ್ಞಾನವು ಎಲ್ಲಿಯೂ ಕೇಳಿರಲಿಲ್ಲವಲ್ಲ.) ೩

ಪೀ—ಆಗ ತಂದೆಯಾದ ಬ್ರಹ್ಮಾಲಕರು ಒಂದು ವಸ್ತುವಿನ ಜ್ಞಾನದಿಂದ ಇನ್ನೊಂದು ವಸ್ತುವಿನ ಜ್ಞಾನವು ಉಂಟಾಗುತ್ತದೆಂಬುದನ್ನು ಅರು ದೃಷ್ಟಾಂತಗಳಿಂದ ಹೇಳುತ್ತಾರೆ—

ಉ. ॥ ಯಥಾ ಸೋಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತꣳ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ ॥ ೪ ॥

ಅ॥ ಎಲೋ ಮಗನೇ ಒಂದು ಮಣ್ಣಿನ ಹೆಂಟೆಯನ್ನು ತಿಳಿದುದರಿಂದ ಮಣ್ಣಿನಿಂದ ಮಾಡಿದು ದೆಲ್ಲವೂ ತಿಳಿಯಲ್ಪಟ್ಟಂತೆ ಆಗುತ್ತದೋ. ಹೀಗೆಯೇ ಶ್ರೀಹರಿಯ ಜ್ಞಾನದಿಂದ ದೇವತಾ. ಕರ್ಮಾದಿಗಳ ಜ್ಞಾನವು ಆಗುತ್ತದೆಂಬ ಉಪದೇಶವೂ ಕೂಡುತ್ತದೆ (ಅನುವಿ—ಒಂದು ಮಣ್ಣಿನ ಹೆಂಟೆಯನ್ನು

ತಿಳಿಯುತ್ತಿರಲು ಮಣ್ಣಿನಿಂದ ಮಾಡಿದ ಪದಾರ್ಥಗಳನ್ನು ಉಪದೇಶವಿಲ್ಲದೇನೇ ತಿಳಿದು, ಆ ತಿಳಿದ ಮಣ್ಣಿನ ಹೆಂಟೆಯ ಸಾದೃಶ್ಯದಿಂದ ಇವುಗಳು ಮಣ್ಣಿನ ಜಾತೀಯಗಳೆಂದು ತಿಳಿಯಲ್ಪಡುತ್ತವೋ, ಹಾಗೆಯೇ ಶ್ರೀಹರಿಯು ಸತ್ಯ, ಜ್ಞಾನ, ಆನಂದರೂಪನು ಇತ್ಯಾದಿಪ್ರಕಾರ ತಿಳಿಯಲ್ಪಡುತ್ತಿರಲು ಸತ್ಯತ್ವ, ಪ್ರಾಮಾಣಿಕತ್ವ, ಮೊದಲಾದ ಗುಣಸಾದೃಶ್ಯದಿಂದ ಪ್ರಪಂಚವೂ ಹಾಗೆಯೇ ಎಂದು ತಿಳಿಯಲ್ಪಡುತ್ತದೆ) (ಶ್ರೀಹರಿಯು ಪ್ರಧಾನನು. ಜಗತ್ತು ಅಪ್ರಧಾನವು. ಪ್ರಧಾನಜ್ಞಾನದಿಂದ ಅಪ್ರಧಾನದ ಜ್ಞಾನವೂ ಬಂದಂತೆ ಆಗುತ್ತದೆ ಎಂಬುದನ್ನು ದೃಷ್ಟಾಂತಕೊಟ್ಟು ಹೇಳುತ್ತಾರೆ—) ವಾಗಿಂದ್ರಿಯದಿಂದ ಸಂಸ್ಕೃತವಲ್ಲದ ಮಣ್ಣು ಮೊದಲಾದ ಭಾಷಾಶಬ್ದಗಳ ಉಚ್ಚಾರಣವು ಹುಟ್ಟಿದ್ದು ವಿಕಾರವುಳ್ಳದ್ದು. ಅನಿತ್ಯವು. ಆದುಕಾರಣ ಅವುಗಳು ಅನಿತ್ಯಗಳು. ಮೃತ್ತಿಕಾ ಮೊದಲಾದ ಸಂಸ್ಕೃತನಾಮವು ವಿಕಾರವುಳ್ಳದ್ದಲ್ಲ. ನಿತ್ಯವಾದುದು.

ವಿ ॥ ಆದುಕಾರಣ ನಿತ್ಯವಾದಪ್ರಯುಕ್ತ ಸಂಸ್ಕೃತನಾಮಧೇಯವು ಪ್ರಧಾನವು. ಸಂಸ್ಕೃತವಲ್ಲದ ಬೇರೆ ನಾಮಗಳು ಪುರುಷರ ಭೇದದಿಂದ ವಿಕಾರಹೊಂದುವುದರಿಂದ ಅನಿತ್ಯಗಳು. ಅಪ್ರಧಾನಗಳು. (2) ಸಂಸ್ಕೃತವಲ್ಲದ ಅಪಭ್ರಂಶಭಾಷಾಶಬ್ದಜ್ಞಾನದಿಂದ ಆಗತಕ್ಕ ಫಲವು ಸಂಸ್ಕೃತಶಬ್ದಜ್ಞಾನದಿಂದ ಹೇಗೆ ಆಗುತ್ತದೋ ಹಾಗೆಯೇ ಕರ್ಮದೇವತಾದಿಜಗಜ್ಜ್ಞಾನದಿಂದ ಆಗತಕ್ಕ ಫಲವೆಲ್ಲವೂ ಪ್ರಧಾನಭೂತನಾದ ಶ್ರೀಹರಿಯ ಜ್ಞಾನದಿಂದ ಆಗುತ್ತದೆ, ಎಂಬ ಅಭಿಪ್ರಾಯದಿಂದ, **ಯೇನಾಶ್ರುತಂ ಶ್ರುತಂ ಭವತಿ** ಎಂದು ಉದ್ದಾಲಕರು ಹೇಳಿರುವರು

॥ ೪ ॥

ಪೀ—ಕೇವಲ ಸದೃಶವಸ್ತುವಿನ ಜ್ಞಾನದಿಂದ ಆದಕ್ಕೆ ಸದೃಶವಾದ ಇನ್ನೊಂದು ವಸ್ತುವಿನ ಜ್ಞಾನವು ಬರುತ್ತದೆಂಬಲ್ಲಿ ದೃಷ್ಟಾಂತ ಹೇಳಿ ಈಗ ಪ್ರಧಾನವಾದ ಸದೃಶವಸ್ತುವಿನ ಜ್ಞಾನದಿಂದ ಅಪ್ರಧಾನವಾದ ಸದೃಶವಸ್ತುವಿನ ಜ್ಞಾನವು ಹುಟ್ಟುತ್ತದೆಂಬಲ್ಲಿ ದೃಷ್ಟಾಂತ ಹೇಳುತ್ತಾರೆ—

ಉ. ॥ ಯಥಾ ಸೋಮ್ಯೈಕೇನ ಲೋಹಮಣಿನಾ ಸರ್ವಂ ಲೋಹಮಯಂ ವಿಜ್ಞಾತಗ್ಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಲೋಹಮಣಿರಿತ್ಯೇವ ಸತ್ಯಂ

॥ ೫ ॥

ಅ ॥ ಎಲೋ ಮಗನೇ ಹೇಗೆ ಲೋಹಗಳಲ್ಲಿ ಪ್ರಧಾನವಾದ ಸುವರ್ಣ (ಚಿನ್ನ) ವನ್ನು ತಿಳಿದರೆ (ಅಂದರೆ—ಸಾಧನ (ಕಾರಣ) ವಾದ ಸುವರ್ಣದ ಜ್ಞಾನದಿಂದ) ಅದರಿಂದ ಹುಟ್ಟಿದ ಲೋಹಮಯವಾದ ಕಟಕ, ಮುಕುಟಾದಿಗಳೆಲ್ಲವೂ ತಿಳಿಯಲ್ಪಡುತ್ತವೆ. ಹೀಗೆಯೇ ಪ್ರಧಾನನಾದ ವಿಷ್ಣುವನ್ನು ತಿಳಿದರೆ ಅಪ್ರಧಾನವಾದ ಕರ್ಮ, ದೇವತಾ ಮೊದಲಾದ ಜಗತ್ತನ್ನು ತಿಳಿಯದಿದ್ದರೂ ತಿಳಿದ ಫಲವು ಬರುತ್ತದೆ. ಅಥವಾ ಜ್ಞಾನಾನಂದಾದಿ ಸಾದೃಶ್ಯದಿಂದ ಜೀವವೂ ತಿಳಿಯಲ್ಪಟ್ಟಂತೆ ಆಗುತ್ತಾನೆ. .....(ಈ ವಿಷಯದಲ್ಲಿ ದೃಷ್ಟಾಂತ ಹೇಳುತ್ತಾರೆ—) ಲೋಹಮಣಿಯೆಂಬುವುದೇ ವೇದದಲ್ಲಿದ್ದ ನಾಮಧೇಯವು ನಿತ್ಯವು. (ಬೇರೆ ಎಲ್ಲವೂ ಲೋಕದ ಹೆಸರು ಅನಿತ್ಯವು)

॥ ೫ ॥

ಪೀ—ಸಾದೃಶ್ಯದಿಂದ ಒಂದರ ಜ್ಞಾನದಿಂದ ಎಲ್ಲವೂ ತಿಳಿಯುತ್ತದೆ ಎಂಬಲ್ಲಿ ಇನ್ನೊಂದು ದೃಷ್ಟಾಂತ ಹೇಳುತ್ತಾರೆ—

ಉ. ॥ ಯಥಾ ಸೋಮ್ಯೈಕೇನ ನಖನಿಕೃಂತನೇನ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಗ್ಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಕಾರ್ಷ್ಣಾಯಸಮಿತ್ಯೇವ ಸತ್ಯಮೇವಗ್ಂ ಸೋಮ್ಯ ಸ ಆದೇಶೋ ಭವತೀತಿ ॥ ೬ ॥

ಅ ॥ ಅತ್ಯಲ್ಪವಾದ ಬಗೆಬಗೆತತ್ತಿಯನ್ನು ತೀರದ ಅವರ ಸಾಮರ್ಥ್ಯದಿಂದ ಶಬ್ದಾದಿಂದ ಮಾತಿ ನೆಲ್ಲವೂ ತೀರಿಯಲ್ಲಿ ಹುತ್ತಿದೆ ಇಂಗೆ ಇವರು. ಸರ್ವೋತ್ಕೃಷ್ಟವಾದ ಶ್ರೀಹರಿಯನ್ನು ಸತ್ಯನು. ಬಿದ್ದೂಪನು ಇತ್ಯಾದಿ ಪ್ರಕಾರ ತೀರಯುತ್ತಿರಲು ಆ ಗುಣಾತ್ಮಮದಿಂದ ಜೀವ ಪರಮೊದಲಾದುದೆಲ್ಲವೂ ತೀರಯಲ್ಪಡು ತ್ತದೆಂದು ಸೂತ್ರಾರ ಸಿದ್ಧಿಸುತ್ತದೆ. ಎಂಬ ಅಭಿಪ್ರಾಯದಿಂದ **ಯೇಷಾಕ್ಯುತಂ** ಇತ್ಯಾದಿಗಳನ್ನು ಹೇಳಿರು ವರು (ಪ್ರಧಾನಶ್ಚಾನದಿಂದ ಅಪ್ರಧಾನವಾದ ವಸ್ತುವಿನ ಜ್ಞಾನಫಲವು ಅಗುತ್ತದೆಂಬುದಕ್ಕೆ ಇನ್ನೊಂದು ನ್ಯಾಯಾಂತರ ಹೇಳುತ್ತಾರೆ—)..... ಶಾಸ್ತ್ರಾರ್ಥಯಂ ಎಂಬ ಸಂಕಲ್ಪವೇ ಸತ್ಯವು. ನಿಶ್ಚಯ. ಬೇರೆ ಭಾಷಾಶಬ್ದಗಳು ಅನಿತ್ಯಗಳು. ಇಂಗೆಯೇ **ಯೇಷಾಕ್ಯುತಂ ಶುತಂ ಭವತಿ** ಎಂಬ ಉಪದೇಶವು.

ವಿ ॥ (೨) ವಾಚಾರಂಭಣಂ ಮೊದಲಾದ ಮೂರು ದೃಷ್ಟಾಂತಗಳು. ಲೋಹಮಣಿ ದೃಷ್ಟಾಂತ ಒಂದು. ಇಂಗೆ ಸಾಲ್ಕು ದೃಷ್ಟಾಂತಗಳು ಒಂದೇ ಅರ್ಥದಲ್ಲಿ ಏತಕ್ಕೆ ಎಂದರೆ— ತತ್ತ್ವವನ್ನು ತೀರಯುವುದು ಸ್ವರೂಪಸಾಮ್ಯವಾಗಿರುವುದರಿಂದ ಅಲೆಂ ದೃಷ್ಟಾಂತಗಳನ್ನು ಹೇಳಿದರು ॥ ೬ ॥

ಪೀ – ಇಗ ಮಗನು ಹೇಳುತ್ತಾನೆ –

ಉ. ॥ ನ ವೈ ನೂನಂ ಭಗವಂತಸ್ತ ಏತದವೇದಿಷುರ್ಯದ್ಧೇತದವೇ-ದಿಷ್ಯನ್ಕಥಂ ಮೇ ನಾವಕ್ಷ್ಯನ್ನಿತಿ ಭಗವಾಸ್ತ್ವೇವಮೇತದ್ಬ್ರವೀತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತಿ ಪ್ರಥಮಃ ಖಂಡಃ ॥ ೮-೧ ॥ ॥ ೭ ॥

ಅ ಸ್ವಾಚಾರ್ಯರಾದ ಅವನ್ನ ಗುರುಗಳು ನಿಶ್ಚಿತವಾಗಿಯೂ ನೀವು ಹೇಳಿದ ವಿಶಿಷ್ಟಜ್ಞಾನರೂಪ ತತ್ತ್ವವನ್ನು ತೀರಯಲೇ ಇಲ್ಲ ಏತೆಂದರೆ - ಅವರು ಈ ಪ್ರಮೇಯವನ್ನು ತೀರದಿದ್ದರೆ ಪ್ರಿಯಶಿಷ್ಯನಾದ ನನಗೆ ಹೇಗೆ ಹೇಳಿ ಇರುತ್ತಿದ್ದರು? ಅದುಕಾರಣ ನೀನೇ ನನಗೆ ವಾಚಾರಂಭಣ ದೃಷ್ಟಾಂತದಿಂದ ಶ್ರೀಹರಿಗೆ ಹೇಳಿದ ಪ್ರಾಧಾನ್ಯ ಮೊದಲಾದುದನ್ನು ವಿಶೇಷಾಕಾರವಾಗಿ ಉಪದೇಶಿಸಿರಿ ಎಂದು ಪ್ರಾರ್ಥಿ ಸಿದನು ಆಗ ತಂದೆಯು ಹಾಗೆಯೇ ಆಗಲಿ ಎಂದು ಹೇಳಿದನು ॥ ೭ ॥

ಪೀ—೧೨ ವರ್ಷ ಪರ್ಯಂತ ಶ್ವೇತಕೇತುವು ಎಲ್ಲಾ ವೇದಗಳನ್ನು ಕಲಿತು ತಂದೆಯ ಬಳಿಗೆ ಬಂದನೆಂದು ಹೇಳಿದ್ದು ಅಯುಕ್ತವು ಏತೆಂದರೆ **ಸರ್ವಾನ್ ವೇದಾನ್ ಶ್ವೇತಕೇತುರಧೀತ್ಯ ದ್ವಾದಶಾಬ್ದಿಕಃ** । ಪಿತುಃ ಸಮೀಪಮೇಯಾಯ ಇವ.ಮೊದಲಾದ ಭಾರತವಾಕ್ಯದಲ್ಲಿ ಪಡಂಗವೇದಗಳನ್ನು ಪೂರ್ಣ ಕಲಿತು ಮರಳಿಬಂದ ಶ್ವೇತಕೇತುವಿಗೆ ಹುಟ್ಟಿದಂದಿನಿಂದಲೇ ೧೨ ವರ್ಷವೆಂದು ತೋರುತ್ತದೆ. ಎಂದರೆ ಅವರ ಅಭಿಪ್ರಾಯವನ್ನು ಹೇಳುತ್ತಾರೆ—

ಭಾ. ॥ ಓಂ ॥ ಅಧೀತ್ಯಬ್ದದ್ವಾದಶಕ್ಯಾದ್ವಾದಶಾಬ್ದ ಇತೀರಿತಃ । ಶ್ವೇತಕೇತು-ರ್ಭಾರತೇ ತು ನೋತ್ಪತ್ತಿದ್ವಾದಶತ್ವತಃ ॥ ಇತಿ ವಾಕ್ಯವಿರ್ಣಯೇ ॥ ೧ ॥

ಅ ॥ ಪಡಂಗವೇದಗಳನ್ನು ಕಲಿತು ಮರಳಿಬಂದ ಶ್ವೇತಕೇತುವಿಗೆ ಅಧ್ಯಯನದ ವರ್ಷಗಳು ಹನ್ನೆರಡು ಅದಪ್ರಯುಕ್ತ (ಅಂದರೆ –೧೨ ಸಂವತ್ಸರ ಗುರುಗಳ ಮನೆಯ ಲ್ಲಿ ಕಲಿತಪ್ರಯುಕ್ತ) ಭಾರತದಲ್ಲಿ ದ್ವಾದಶಾಬ್ದ (೧೨ ವಯಸ್ಸುಳ್ಳವನು) ಎನಿಸುತ್ತಾನೆ ಹುಟ್ಟಿದಂದಿನಿಂದ ೧೨ ಸಂವತ್ಸರವುಳ್ಳವನು ಎಂದು ಭಾರತದಲ್ಲಿ ಹೇಳಿದ್ದಾರೆ. (ಆದುದರಿಂದಲೇ **ದ್ವಾದಶವರ್ಷ ಉಷೇತ್ಯ ಚತುರ್ವಿಂಶತಿವರ್ಷಃ** ಎಂದು ಹೇಳಿದೆ) ॥ ೧ ॥

ಪೀ—ಯಥಾ ಸೋಮ್ಯ ಇತ್ಯಾದಿಗಳಿಗೆ ಮಾಯಾವಾದಿಗಳು ಹೀಗೆ ಅರ್ಥ ಹೇಳುತ್ತಾರೆ—**ಸರ್ವಂ ಖಲ್ವಿದಂ** ಬ್ರಹ್ಮ ಎಂಬುವುದರಿಂದ ಜಗತ್ತೆಲ್ಲವೂ ಪರಬ್ರಹ್ಮಸ್ವರೂಪವು ಎಂದು ಹೇಳಿದೆ. ಅದು ಹೇಗೆಂದರೆ—**ತಜ್ಜಲಾನಿತಿ ಶಾಂತ ಉಪಾಸೀತ** ಪರಬ್ರಹ್ಮನಿಂದ ಹುಟ್ಟಿದ್ದು, ಪರಬ್ರಹ್ಮನಲ್ಲಿ ಲಯ ಹೊಂದತಕ್ಕುದು, ಅವನಿಂದಲೇ ಜೀವ್ಯೆಮಾಡತಕ್ಕುದು, ಎಂದು ಉಪಾಸನೆ ಮಾಡಬೇಕು. ಇಲ್ಲಿ ಸಮಸ್ತ ಪ್ರಪಂಚಕ್ಕೂ ಬ್ರಹ್ಮನು ಉಪಾದಾನಕಾರಣನು. ಅಂದರೆ—ಬ್ರಹ್ಮನೇ ಜಗದ್ರೂಪನಾಗಿ ಪರಿಣಾಮ ಹೊಂದಿದವನು, ಜಗತ್ತೂ ಬ್ರಹ್ಮನಲ್ಲಿ ಆರೋಪಿತವು, ಬ್ರಹ್ಮ ಹೊರತು ಜಗತ್ತು ಇಲ್ಲ, ಎಂದು ಹೇಳಿದೆ. ಮತ್ತು ಒಬ್ಬ ಜ್ಞಾನಿಯು ಊಟಮಾಡಿದರೆ—ಎಲ್ಲಾ ಜಗತ್ತು ಸಂತೋಷಗೊಳ್ಳುತ್ತದೆ, ಎಂದು ಸಮಸ್ತ ಪ್ರಾಣಿಗಳೊಳಗಣ ಆತ್ಮರಿಗೆ ಐಕ್ಯ ಹೇಳಿದೆ, ಅವೆರಡನ್ನು ವಿಸ್ತರಿಸಿ ಹೇಳಲಿಕ್ಕೆ ಈ ಎಂಟನೇ ಅಧ್ಯಾಯವು ಆರಂಭವಾಗಿದೆ. ಆದರಲ್ಲಿ ಶ್ವೇತಕೇತುವಿಗೆ ಉದ್ದಾಲಕರು ಬ್ರಹ್ಮಜ್ಞಾನದಿಂದ ಸರ್ವವಸ್ತುಗಳ ಜ್ಞಾನವೂ ಆಗುತ್ತದೆಂದರು. ಆಗ ಶ್ವೇತಕೇತುವು ಒಬ್ಬನ ಜ್ಞಾನದಿಂದ ಇನ್ನೊಬ್ಬನ ಜ್ಞಾನವು ಎಲ್ಲಿಯೂ ತೋರಿಬಾರದಿರುವುದರಿಂದ ಇದು ಹೇಗೆ ಕೂಡುತ್ತದೆಂದು ಆಕ್ಷೇಪಿಸಿದನು ಆಗ ಉದ್ದಾಲಕರು *ಕಾರ್ಯಕ್ಕೂ ಉಪಾದಾನಕಾರಣಕ್ಕೂ ಭೇದವಿಲ್ಲ, ಎಂಬ ಅಭಿಪ್ರಾಯದಿಂದ ಮೃತ್ಪಿಂಡಾದಿ ದೃಷ್ಟಾಂತಗಳನ್ನು ಶ್ವೇತಕೇತುವಿಗೆ ಹೇಳಿರುವರು. ಒಂದು ಮಣ್ಣಿನ ಹೆಂಟೆಯನ್ನು ತಿಳಿದಾಗ ಬೇರೆ ಎಲ್ಲಾ ಮಣ್ಣಿನ ವಿಕಾರವಾದ ಮಡಿಕೆ ಮೊದಲಾದುದೆಲ್ಲವೂ ತಿಳಿಯಲ್ಪಡುತ್ತದೆ. ಕಾರ್ಯಕ್ಕೂ ಕಾರಣಕ್ಕೂ ಅಭೇದವೆಂದಾದರೆ ಇದು ಕಾರಣವು, ಇದು ಇದರ ವಿಕಾರವು ಎಂಬುದು ಹೇಗೆ? ಎಂದರೆ—ವಾಚಾರಂಭಣಂ=ಮಾತಿನಿಂದ ಹೇಳಲಿಕ್ಕೆ ಮಾತ್ರ ಇದೆ, ವಿಕಾರವಸ್ತು ಹೆಸರಿಗೆ ಮಾತ್ರ. ಪಾರಮಾರ್ಥಿಕವಾಗಿ ವಿಕಾರಹೊಂದಿರತಕ್ಕ ವಸ್ತುವೇ ಇಲ್ಲ ಮೃತ್ತಿಕಾ ಎಂಬುದೇ ಸತ್ಯವಸ್ತು ಇದೆ, ಎಂದು ಅದ್ವೈತಿಗಳು ಹೇಳುತ್ತಾರೆ—ಅದು ಯುಕ್ತವಲ್ಲ. ಏಕೆಂದರೆ—**ಸರ್ವಂ ಖಲ್ವಿದಂ** ಎಂಬುದಕ್ಕೆ ಅದ್ವೈತಿಗಳು ಹೇಳಿದ ಅರ್ಥವಾಗುವುದಿಲ್ಲವೆಂದು ಮೊದಲೇ ಪುಟ ೧೭೭ ರಲ್ಲಿ ಹೇಳಿರುತ್ತದೆ. ಎಲ್ಲಾ ವಸ್ತುಗಳೂ ಪರಬ್ರಹ್ಮನ ಅಧೀನದಲ್ಲಿರತಕ್ಕವು ಎಂದು ಅರ್ಥವಾಗಬೇಕೆಂದು ಮೊದಲೇ ಹೇಳಿರುತ್ತದೆ ಮತ್ತು ಪರಬ್ರಹ್ಮನ ಜ್ಞಾನವು ಬಂದಾಗ ಬ್ರಹ್ಮನು ಹೊರತು ಬೇರೆ ಜಗತ್ತು ಇಲ್ಲವೆಂದಾಗುತ್ತದೆ ಎಂಬ ಅರ್ಥವು ಅಯುಕ್ತವು. ಅಧಿಷ್ಠಾನದ ಯಥಾರ್ಥ ಜ್ಞಾನವು ಬಂದಾಗ ಕೃ ಆರೋಪಿತವಾದ ಜಗತ್ತಿನ ಜ್ಞಾನವು ಎಲ್ಲಿಯೂ ತೋರಿ ಬರಲಿಲ್ಲ. ಅದುಕಾರಣ ಸಾದೃಶ್ಯ, ಪ್ರಾಧಾನ್ಯಗಳಿಂದಲೇ ಒಂದು ಪ್ರಧಾನವಸ್ತುವಿನ ಜ್ಞಾನವು ಬಂದಾಗ ಅಪ್ರಧಾನವಾದ ಸಮಸ್ತ ವಸ್ತುಗಳ ಜ್ಞಾನವು ಬರುತ್ತದೆ. ಅದರಲ್ಲಿ ಸಾದೃಶ್ಯವಿಷಯದಲ್ಲಿ ದೃಷ್ಟಾಂತ ಹೇಳಲಿಕ್ಕೆ **ಯಥಾ ಸೋಮ್ಯ** ಇದುಮೊದಲಾದುದು ಈ ಮೂರು ವಾಕ್ಯಗಳು ಪ್ರಾಧಾನ್ಯವಿಷಯದಲ್ಲಿ ದೃಷ್ಟಾಂತ ಹೇಳುವುದಕ್ಕಾಗಿ **ವಾಚಾರಂಭಣ** ಮೂರು ವಾಕ್ಯಗಳು. ಹಾಗಾದರೆ—ಮೂರು ದೃಷ್ಟಾಂತಗಳನ್ನು ಹೇಳಿದ್ದು ಏಕೆಂದರೆ - ಜ್ಞಾನವು ದೃಢವಾಗುವುದಕ್ಕಾಗಿ. ದಾಷ್ಟಾಂತಿಕದಲ್ಲಿ ಅನೇಕ ಅಭೇದವು ತಿಳಿಯುವುದಕ್ಕಾಗಿ ಹೇಳಿದ್ದೆಂದರೆ—ಕಾರ್ಯಕಾರಣಗಳಿಗೆ ಅಭೇದವೆಂಬುದು ಒಂದರಿಂದಲೇ ತಿಳಿಯುವುದರಿಂದ ಇದು ವ್ಯರ್ಥವೇ. ಮತ್ತು ಕಾರ್ಯಕಾರಣಗಳಿಗೆ ಅಭೇದವೆಂಬಲ್ಲಿ ಪ್ರಮಾಣವಿಲ್ಲ. ಮತ್ತು ಪ್ರಮಾಣವಿರೋಧವೂ ಆದೆ, ಎಂಬ ಅಭಿಪ್ರಾಯದಿಂದ **ಯಥಾ ಸೋಮ್ಯ** ಇದುಮೊದಲಾದ ಮೂರು ದೃಷ್ಟಾಂತ ವಾಕ್ಯಗಳಲ್ಲಿಯೂ ಅಭಿಪ್ರಾಯ ವಿಶೇಷವದೆ ಎಂಬಲ್ಲಿ ಪ್ರಮಾಣ ಹೇಳುತ್ತಾರೆ—

---

* ಮುಣ್ಣಿನಿಂದ ಮಡಿಕೆ ಮಾಡುವಾಗ ಮಡಿಕೆ ಕಾರ್ಯವು, ಮಣ್ಣು ಉಪಾದಾನವು. ಹಾಗೆಯೇ ಬಟ್ಟೆ ಕಾರ್ಯವು. ನೂಲು ಉಪಾದಾನ ಕಾರಣವು ಅಂದರೆ—ತಾನೇ ರೂಪಾಂತರವನ್ನು ಹೊಂದಿ ಕಾರಣವಾದುದು.

† ಹಿತ್ತಿಯನ್ನು ನೋಡಿ ರಜತವೆಂದು ಜ್ಞಾನವು ಬರುವಾಗ ಅಧಿಷ್ಠಾನ-ಹಿತ್ತಿ (ಮುತ್ತಿನ ಚಿಪ್ಪು) ಆರೋಪಿತ ರಜತ (ಬೆಳ್ಳಿ) ಚಿಪ್ಪಿಯನ್ನು ಕಳಚಿ ಬೆಳ್ಳಿಯೆಂದು ತಿಳಿಯುವುದು ಕೃಮ. ಚಿಪ್ಪಿಯನ್ನು ಚಿಪ್ಪಿಯೆಂದೇ ತಿಳಿದಾಗ ಬೆಳ್ಳಿಯೆಂಬ ಜ್ಞಾನವು ಎಂದಿಗೂ ಬರಲಾರದು ಅದರಂತೆ ಅಧಿಷ್ಠಾನವಾದ ಬ್ರಹ್ಮನ ಜ್ಞಾನವು ಬಂದಾಗ ಆರೋಪಿತವಾದ ಜಗತ್ತು ಎಂಬ ಜ್ಞಾನವು ಬರಲಿಕ್ಕಿಲ್ಲ

ಭಾ. ॥ (೧) ಯಥಾ ಮೃತ್ಪಿಂಡವಿಜ್ಞಾನಾತ್ಸರ್ವಮೃಣ್ಮಯಂ ವಿಜ್ಞಾತಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್ ॥ (೨) ಯಥಾ ಸೋಮ್ಯೈಕೇನ ನಖನಿಕೃಂತನೇನ ಲೋಹಮಯಂ ವಿಜ್ಞಾತಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಲೋಹಮಿತ್ಯೇವ ಸತ್ಯಮ್ ॥ (೩) ಯಥಾ ಸೌಮ್ಯೈಕೇನ ಲೋಹಮಣಿನಾ ಸರ್ವಂ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಕೃಷ್ಣಾಯಸಮಿತ್ಯೇವ ಸತ್ಯಮ್ ॥ (೪) ಏವಂ ಸೋಮ್ಯ ಮಹಾನ್ವೃಕ್ಷೋ ದೃಶ್ಯತೇ ಯಥಾ ಕ್ಷುದ್ರಬೀಜಾತ್ತಥಾ ಶೃಣು ಸೋಮ್ಯೇತಿ ಹೋವಾಚ ॥ ಇತ್ಯಾದಿ ಸಾಮಸಂಖ್ಯಾಯುಂ ॥ ೨ ॥

ಅ ॥ (೧) ಒಂದು ಮಣ್ಣಿನ ಹೆಂಚಿನಲ್ಲಿ ತಿಳಿದುದರಿಂದ ಮೃತ್ಪ್ರಪಂಚವೆಲ್ಲವೂ (ಮಣ್ಣಿನ ಜಾತಿಯು) ಮೊದಲಾದ ಸಾದೃಶ್ಯ ವಾಕ್ಯದಿಂದಲೇ ಮಣ್ಣಿನ ವಿಕಾರಗಳಾದ ಎಲ್ಲಾ ವಸ್ತುಗಳೂ ಹೇಗೆ ತಿಳಿಯಲ್ಪಡುತ್ತವೆಯೋ ಹಾಗೆಯೇ ಶ್ರೀಹರಿಯು ಸರ್ವಾತ್ಮನು ಎಂದು ತಿಳಿಯಲ್ಪಡುತ್ತಾನೆ. (ವಿಷ್ಣುವೆ ಇದ್ದಾನೆಂಬುವಲ್ಲಿ ಪ್ರಮಾಣವಿದೆ. ಜಗತ್ತು ಇದೆ ಎಂಬಲ್ಲಿಯೂ ಪ್ರಮಾಣವಿದೆ ಹೀಗೆ) ಪ್ರತ್ಯಾಯಕತ್ವ (ಪ್ರಮಾಣ ಸ್ಥಿತಿ) ಸಾದೃಶ್ಯದಿಂದ ಜಗತ್ತು ತಿಳಿಯಲ್ಪಡುತ್ತದೆ. (ಸದ್ವಸ್ತುವಾದ ಒಂದು ವಸ್ತುವಿನ ಜ್ಞಾನಮಾತ್ರದಿಂದ ಕೇವಲ ಸದ್ವಸ್ತುವಾದ ಇನ್ನೊಂದು ವಸ್ತುವಿನ ಜ್ಞಾನವು ಹುಟ್ಟುತ್ತದೆಂಬಲ್ಲಿ ಒಂದನೇ ದೃಷ್ಟಾಂತವು) (೨) ಸುವರ್ಣವು ಪ್ರಧಾನವಾಮದರಿಂದ ಅದನ್ನು ತಿಳಿದೋಡನೆದರಿಂದ ರೋಷದಿಂದ ಮಾಡಿದ ಕಡಗಗಳೆಲ್ಲವೂ ಹೊಸಪಾತ್ರೆಯಾಗಲೆಂದು ಹೇಗೆ ತಿಳಿಯಲ್ಪಡುತ್ತವೋ ಹಾಗೆಯೇ ವಿಷ್ಣುವಿಗೆ ಪ್ರಾಧಾನ್ಯವಿದ್ದುದರಿಂದ ಪ್ರಧಾನವಾದ ವಿಷ್ಣುವಿನ ಜ್ಞಾನದಿಂದ ಜಗತ್ತು ತಿಳಿಯಲ್ಪಡುತ್ತದೆ. ಅಂದರೆ— ವಿಷ್ಣುವೆ ಜ್ಞಾನಾನಂದಾದಿರೂಪನು ಎಂದು ತಿಳಿದುದರಿಂದ ಚೇತನತ್ವಸಾದೃಶ್ಯದಿಂದ ಜೀವರೂ ಜ್ಞಾನಾನಂದಾದಿರೂಪರೆಂದು ತಿಳಿಯಲ್ಪಡುತ್ತಾರೆ. (ಸರ್ವಂ ಪ್ರಧಾನವಾದ ಸದ್ವಸ್ತುವಿನ ಜ್ಞಾನದಿಂದ ಅಪ್ರಧಾನವಾದ ಸದ್ವಸ್ತುಗಳ ಜ್ಞಾನವಾಗುತ್ತದೆಂಬಲ್ಲಿ ಇದು ದೃಷ್ಟಾಂತವು.) (ಚೇತನತ್ವವೆಂಬ ಹೇತುವಿನಿಂದ ಈಶ್ವರನನ್ನು ದೃಷ್ಟಾಂತೀಕರಿಸಿಕೊಂಡು ಜ್ಞಾನಾನಂದಾದಿಗಳನ್ನು ಹೇಳಲಾಗುವುದಿಲ್ಲ ಏಕೆಂದರೆ— ಅದೇ ಹೇತುವಿನಿಂದ ಅಲ್ಪಾನಂದಾದಿಗಳಿರುವನೆಂದೂ ಅನುಮೇಯಿಸಬಹುದು. ಏಂದರೆ—ಶಾಸ್ತ್ರಾದಿಗಳ ಬಾಧವಿಲ್ಲದಿರುವ ವಿಷಯದಲ್ಲಿಯೇ ಅನುಮಾನವು ಪ್ರವೃತ್ತವಾಗುವುದು.) (೩) (ಇನೇ ದೃಷ್ಟಾಂತದಲ್ಲಿ ಅಭಿಪ್ರಾಯವಿಶೇಷ ಹೇಳುತ್ತಾರೆ—) ಅಕ್ಷಯ್ಯವಾದ ಸದ್ವಸ್ತುವಾದ ವಸ್ತುವು ತಿಳಿಯಲ್ಪಡುತ್ತಿರಲು ಅಂತಹ ಅದಕ್ಕೆ ಸದೃಶವಾದ ಬಹುವಸ್ತುವು ತಿಳಿಯಲ್ಪಡುತ್ತದೆ ಬಗುರುಪತ್ನಿಯನ್ನು ತಿಳಿದುದರಿಂದ ಕಬ್ಬಿಣದಿಂದ ಮಾಡಿದ ಎಲ್ಲಾ ವಸ್ತುವು ಕಬ್ಬಿಣಜಾತಿಯದ್ದೆಂದು ತಿಳಿಯಲ್ಪಡುತ್ತದೆ (ವಿಷ್ಣುವು ಗುಣಪೂರ್ಣ ಸ್ವರೂಪನಾದುದರಿಂದ ಜಗತ್ತು ಅಕ್ಷಯ್ಯವಾದುದರಿಂದಲೂ ಈ ದೃಷ್ಟಾಂತವು ಪ್ರಕೃತಕ್ಕೆ ಬರುವುದಿಲ್ಲ, ಎಂದರೆ —) ಗುಣಪೂರ್ಣನಾದ ವಿಷ್ಣುವಿನ ಜ್ಞಾನದಿಂದ ಅಕ್ಷಯ್ಯವಾದ ಜಗತ್ತು ಹೀಗೆಯೇ ಆಗಿದೆ ಎಂದು ಸುತರಾಂ ಸಿದ್ಧವು (೪) (ವಾಚಾರಂಭಣಂ ಇಮುಮೊದಲಾದ ಮೂರು ವಾಕ್ಯಗಳಿಗೆ ತಾತ್ಪರ್ಯ ಹೇಳುತ್ತಾರೆ—) ಪರಾಧೀನವಾಗದೆ ಸರ್ವಸ್ವತಂತ್ರವಾದ ವಿಷ್ಣುವಿನ ಜ್ಞಾನದಿಂದ ವಿಷ್ಣುವಿನ ಅಧೀನದಲ್ಲಿರುವ ಪರತಂತ್ರವಾದ ಜಗತ್ತಿನ ಜ್ಞಾನವು ಒಂದಂತೆ ಆಗುತ್ತದೆ. ಮೃತ್ತಿಕಾ ಅಯಃ (ಕಬ್ಬಿಣ) ಲೋಹಗಳ ಜ್ಞಾನದಿಂದ ಸಾಂಕೇತಿಕ ಧಾತುಶಬ್ದಗಳ ಜ್ಞಾನವು ಒಂದರೆ ಹೇಗೆ ಆಗುತ್ತದೋ, ಹಾಗೆಯೇ. ಇದುಮೊದಲಾದುದು ಸಾಮಸಂಖ್ಯೆಯಲ್ಲಿದೆ.

ವಿ ॥ ವಾಚಾರಂಭಣ ವಾಕ್ಯವನ್ನು ಮೂರಾವರ್ತಿ ಏಕೆ ಹೇಳಿದ್ದು ಎಂದರೆ— ಮೃತ್ತಿಂಡಾದಿ ಮೂರು ದೃಷ್ಟಾಂತಗಳನ್ನು ಅವಶ್ಯವಾಗಿ ಹೇಳಬೇಕಾದುದರಿಂದ ಅದಕ್ಕಾಗಿ ವಾಚಾರಂಭಣ ವಾಕ್ಯವನ್ನು ಮೂರಾವರ್ತಿ ಹೇಳಿದ್ದು. ॥ ೨ ॥

ಪೀ—ಲೋಹಮಣಿ ಶಬ್ದಕ್ಕೆ ಸುವರ್ಣವೆಂದು ಅರ್ಥ ಹೇಳಿರುತ್ತದೆ. ಅದಕ್ಕೆ ಕೋಶ ಹೇಳುತ್ತಾರೆ—

ಭಾ. ॥ (೧) ಸ್ವರ್ಣಂ ಲೋಹಮಣಿಶ್ಚೈವ ಪುರಟಂ ಚಾಭಿಧೀಯತೇ । ಇತಿ ಶಬ್ದನಿರ್ಣಯೇ ॥ (೨) ವಿಕಾರತ್ವವಿವಕ್ಷಾಯಾಮೇಕಪಿಂಡಮಣಿಶಬ್ದಾ ವ್ಯರ್ಥಾಃ ಸ್ಯುಃ ॥ ೩ ॥

ಅ ॥ (೧) ಸುವರ್ಣವೇ ಲೋಹಮಣಿ ಎಂದೂ, ಪುರಟ ಎಂದೂ, ಹೇಳಲ್ಪಡುತ್ತದೆ, ಎಂದು ಶಬ್ದನಿರ್ಣಯದಲ್ಲಿದೆ. (೨) **ಯಥಾ ಸೋಮ್ಯ** ಇತ್ಯಾದಿಗಳಿಗೆ ಪ್ರಮಾಣ ಹೇಳಿ ನಮ್ಮ ರೀತಿಯಾಗಿ ಅರ್ಥವನ್ನು ವಿವರಿಸಿ ಪರರು ಹೇಳಿದ ಅರ್ಥವು ಅಯುಕ್ತವೆನ್ನುತ್ತಾರೆ—) **ಯಥಾ ಸೋಮ್ಯ** ಇತ್ಯಾದಿ ವಾಕ್ಯಗಳಲ್ಲಿ ಮೃಣ್ಮಯಾದಿಗಳು ಮೃತ್ತಿಕಾದಿಗಳ ವಿಕಾರಗಳೆಂದು ಇಟ್ಟುಕೊಂಡರೆ ಏಕ ಪಿಂಡ ಮಣಿಶಬ್ದಗಳು ವ್ಯರ್ಥಗಳು. (ಅವುಗಳಿಗೆ ಅರ್ಥಗಳಿಲ್ಲ. ವಿರುದ್ಧಗಳಾದ ಅರ್ಥಗಳು ಬರುವವು.)

ವಿ ॥ (1) **ಮೃದಾ ವಿಜ್ಞಾತಯಾ ಮೃಣ್ಮಯಂ ವಿಜ್ಞಾತಂ ಸ್ಯಾತ್** ಮಣ್ಣನ್ನು ತಿಳಿದರೆ ಮಣ್ಣಿನಿಂದ ಮಾಡಿದ್ದು ತಿಳಿಯಲ್ಪಡುತ್ತದೆ **ಲೋಹೇನ ವಿಜ್ಞಾತೇನ ಲೋಹಮಯಂ ವಿಜ್ಞಾತಂ ಸ್ಯಾತ್** ಲೋಹವನ್ನು ತಿಳಿದರೆ ಲೋಹದಿಂದ ಮಾಡಿದ್ದೆಲ್ಲವೂ ತಿಳಿಯಲ್ಪಡುತ್ತದೆ. **ಕೃಷ್ಣಾಯಸೇನ ವಿಜ್ಞಾತೇನ ಕಾರ್ಷ್ಣಾಯಸಂ ವಿಜ್ಞಾತಂ ಸ್ಯಾತ್** ಕಬ್ಬಿಣವನ್ನು ತಿಳಿದರೆ ಕಬ್ಬಿಣದಿಂದ ಮಾಡಿದೆಲ್ಲವೂ ತಿಳಿಯಲ್ಪಡುತ್ತದೆ, ಎಂದಿಷ್ಟೇ ಸಾಕಾಗುವುದು. ಈ ಮೂರು ವಾಕ್ಯಗಳಲ್ಲಿದ್ದ ವಿಕ ಶಬ್ದಗಳಿಗೂ, ಪಿಂಡ, ಮಣಿ ನಖನಿಕೃಂತನ ಶಬ್ದಗಳಿಗೂ ಮೂರು ವಾಕ್ಯಗಳಲ್ಲಿದ್ದ **ಸರ್ವ** ಶಬ್ದಗಳಿಗೂ ಅರ್ಥವಿಲ್ಲವೆಂದಾಗುವುದು. ಮತ್ತು ಎಲ್ಲಾ ಮೃಣ್ಮಯಾದಿಗಳೂ ಒಂದೇ ಮೃತ್ಪಿಂಡದಿಂದ ಮಾಡಿದ್ದಲ್ಲವಾದ ಕಾರಣ ಒಂದು ಮೃತ್ಪಿಂಡದ ವಿಕಾರವಲ್ಲ. ಅದು ಕಾರಣ ಏಕೇನ ಎಂದು ಹೇಳಿದ್ದಕ್ಕೆ ವಿರುದ್ಧವಾದ ಅರ್ಥವು ಬರಬೇಕಾಗುವುದು (2) ಮತ್ತು ಬ್ರಹ್ಮನು ಜಗದಾರೋಪಕ್ಕೆ ಅಧಿಷ್ಠಾನನು (ಬ್ರಹ್ಮನಲ್ಲಿ ಜಗತ್ತು ಆರೋಪಿತವು.) ಎಂಬಲ್ಲಿ ಇದು ದೃಷ್ಟಾಂತವಾಗಲಾರದು. ಏಕೆಂದರೆ ಯಾವುದಾದರೂ ಒಂದು ಮೃಣ್ಮಯವೂ ಒಂದು ಮೃತ್ಪಿಂಡದಲ್ಲಿ ಆರೋಪಿತವಲ್ಲ. ಮತ್ತು ಕಾರಣ ಹೊರತು ಕಾರ್ಯವಿಲ್ಲೆಂದು ಅರ್ಥವು ಇಷ್ಟವಾದರೆ ಮೃಣ್ಮಯವು ಮೃದ್ರೂಪವಾಗಿ ಇದ್ದಂತೆಯೇ ಜಗತ್ತು ಪರಬ್ರಹ್ಮರೂಪವಾಗಿ ಇರಬೇಕಾಗುವುದು. ನಮ್ಮ ಮತದಲ್ಲಿ ಸಾದೃಶ್ಯವೆಂದು ಅರ್ಥವನ್ನು ಇಟ್ಟುಕೊಂಡದರಿಂದ ಏಕಶಬ್ದ ಮತ್ತು ಸರ್ವಶಬ್ದಗಳು ಸಾರ್ಥಕಗಳೇ ಆಗಿವೆ. ಹೇಗೆಂದರೆ—ಒಂದು ಮೃತ್ಪಿಂಡದ ಸಾದೃಶ್ಯದಿಂದ ಮಣ್ಣಿನಿಂದ ಮಾಡಿದ ಎಲ್ಲಾ ವಸ್ತುಗಳೂ ಹಾಗೆಯೇ ಎಂದು ತಿಳಿಯಲ್ಪಡುತ್ತವೆ ಅದಕ್ಕಾಗಿ **ವಿಕ** ಶಬ್ದ, **ಸರ್ವ** ಶಬ್ದಗಳು ಸಾರ್ಥಕಗಳಾಗಿವೆ. ಮತ್ತು **ಪಿಂಡ**ಶಬ್ದ ಕೊಡದಿದ್ದರೆ-ಒಂದು ಮಣ್ಣಿನ ಸಾದೃಶ್ಯವು ಇನ್ನೊಂದು ಮಣ್ಣಿನಿಂದ ಮಾಡಿದ ವಸ್ತುವಿನಲ್ಲಿದೆ ಎಂದು ಹೇಳಲಾಗುವುದಿಲ್ಲ. ಏಕೆಂದರೆ ಸಂಬಂಧಿ ಪ್ರತಿ ಸಂಬಂಧಿಗಳು (ಅನುಯೋಗಿ ಪ್ರತಿಯೋಗಿಗಳು) ಬೇರೆ ಬೇರೆಯಾಗಿರಬೇಕು ಇಲ್ಲಿ ಒಂದೇ ರೀತಿಯಾಗಿ ಇವೆ. ಒಂದು ಮೃತ್ತ್ವವು (ಮಣ್ಣಿನ ಧರ್ಮವು) ಮೃಣ್ಮಯವಾದ ವಸ್ತುಗಳಲ್ಲಿಯೂ ಇದೆ. ಅದುಕಾರಣ ಅನುಯೋಗಿಯಲ್ಲಿದ್ದ ಧರ್ಮವೂ ಪ್ರತಿಯೋಗಿಯಲ್ಲಿದ್ದ ಧರ್ಮವೂ ಒಂದೇ ಆಗುವುದು ಆದಕಾರಣ ಮಣ್ಣಿನ ಜ್ಞಾನದಿಂದ ಮೃಣ್ಮಯಗಳ ಜ್ಞಾನವು ಬಾರದೇ ಹೋಗುವುದು. ಅದಕ್ಕಾಗಿ **ಪಿಂಡ** ಶಬ್ದ ಕೊಟ್ಟರೆ ಮೃತ್ತ್ವವು ಮೃಣ್ಮಯ ವಸ್ತುಗಳಲ್ಲಿದ್ದರೂ, ಪಿಂಡತ್ವವು ಮೃಣ್ಮಯ ವಸ್ತುಗಳಲ್ಲಿಲ್ಲ ಅದಕ್ಕಾಗಿ **ಪಿಂಡ** ಶಬ್ದವು ಅವಶ್ಯಕವೇ. ಮತ್ತು ಪ್ರತಿಯೋಗಿಯಾದ ಸುವರ್ಣಕ್ಕೆ ಪಾಧಾನ್ಯವನ್ನು ತಿಳಿಸುವುದಕ್ಕಾಗಿಯೇ ಲೋಹಮಣಿ ಎಂಬಲ್ಲಿ ಮಣಿಶಬ್ದವನ್ನು ಹೇಳಿದ್ದು. ಉಗುರು ಕಡ್ಡಿಯು ಅತ್ಯಲ್ಪವಾದುದು ಎಂದು ತಿಳಿಸುವುದಕ್ಕಾಗಿಯೇ **ನಖನಿಕೃಂತನ** ಶಬ್ದವನ್ನು ಹೇಳಿದ್ದು.**ಮಣಿರ್ಮುಖಂ ಪ್ರಧಾನಂ ಚ** ಎಂಬ ಪ್ರಮಾಣದಿಂದ ಮಣಿಶಬ್ದಕ್ಕೆ ಪ್ರಾಧಾನ್ಯವೆಂಬ ಅರ್ಥವಿದೆ ಎಂದು ತಿಳಿಯುತ್ತದೆ. ನಖನಿಕೃಂತನಸ್ವರೂಪವು ಅತ್ಯಲ್ಪವಾದುದು. ॥ ೩ ॥

ಪೀ—ಪೀಗೆ ಯಥಾ ಸೋಮ್ಯ ಇತ್ಯಾದಿ ವಾಕ್ಯಗಳಿಗೆ ಪರರು ಹೇಳಿದ ಅರ್ಥವು ಕೂಡುವುದಿಲ್ಲ ವೆಂದು ಹೇಳಿದರು. ಈಗ ವಾಚಾರಂಭಣಂ ಇತ್ಯಾದಿ ಮೂರು ವಾಕ್ಯಗಳಿಗೆ ಪರರು ಹೇಳಿದ ಅರ್ಥವು ಸರ್ವಥಾ ಕೂಡುವುದಿಲ್ಲವೆನ್ನುತ್ತಾರೆ—

ಭಾ. ॥ (೧) ಮೃತ್ತಿಕೇತಿ ಲೋಹಮಣಿರಿತಿ ಕಾರ್ಷ್ಣಾ(ಕೃಷ್ಣಾ)ಯಸಮಿತ್ಯತ್ರೇತಿಶಬ್ದಾ ನಾಮಧೇಯಶಬ್ದಾಶ್ಚ ವ್ಯರ್ಥಾಃ ಸ್ಯುಃ ॥ (೨) ವಿಕಾರಮಿತ್ಯಾತ್ಮವಿವಕ್ಷಾಯಾಂ ಮೃತ್ತಿಕೈವ ಸತ್ಯಂ ಲೋಹ ಏವ ಸತ್ಯಂ ಕಾರ್ಷ್ಣಾ(ಕೃಷ್ಣಾ)ಯಸಮೇವ ಸತ್ಯಮಿತ್ಯೇವ ಸ್ಯಾತ್ । ನ ತು ನಾಮಧೇಯಾದಿರಬ್ದಾ ॥ ೪ ॥

೪ ॥ (೧) ಮೃತ್ತಿಕೇತ್ಯೇವ ಸತ್ಯಂ, ಲೋಹಮಣಿರಿತ್ಯೇವ ಸತ್ಯಂ, ಕಾರ್ಷ್ಣಾಯಸಮಿತ್ಯೇವ ಸತ್ಯಂ ಎಂಬಲ್ಲಿನ ಮೂರು ಇತಿ ಶಬ್ದಗಳೂ, ಈ ಮೂರು ವಾಕ್ಯಗಳಲ್ಲಿನ ಮೂರು ನಾಮಧೇಯ ಶಬ್ದಗಳೂ ವ್ಯರ್ಥಗಳು ಆಗುವುವು. (೨) (ಹೇಗೆಂದರೆ—) (ವಾಚಾರಂಭಣ ವಾಕ್ಯದಲ್ಲಿ) ವಿಕಾರಕ್ಕೆ ವಿಪಾಶ್ರಯವನ್ನು ಇಟ್ಟುಕೊಂಡು (1) ವಾಚಾರಂಭಣಂ ವಿಕಾರೋ ಮೃತ್ತಿಕೈವ ಸತ್ಯಂ, (2) ವಾಚಾರಂಭಣಂ ವಿಕಾರೋ ಲೋಹಮಣಿರೇವ ಸತ್ಯಂ, (3) ವಾಚಾರಂಭಣಂ ವಿಕಾರಃ ಕಾರ್ಷ್ಣಾಯಸಮೇವ ಸತ್ಯಂ, ಹೀಗೆ ಹೇಳಬೇಕಿತ್ತು. ನಾಮಧೇಯ ಶಬ್ದಗಳೂ ಇತಿಶಬ್ದಗಳೂ ವ್ಯರ್ಥಗಳು (ಏಕೆಂದರೆ— ನಾಮಧೇಯಂ ಎಂಬುದಕ್ಕೆ ನಾಮ್ನೈವ ಕೇವಲಂ-ಕೇವಲ ಹೆಸರೇ, ಎಂದು ಅರ್ಥೈಸಿಕೊಳ್ಳಬೇಕಾಗಿ. ಅರ್ಥ ಹೇಳಿರುವುದರಿಂದ ವಾಚಾರಂಭಣಂ ಎಂಬುದರಿಂದ ಪುನರುಕ್ತವಾಗುತ್ತದೆ (ಅಂದರೆ ನಾಮಧೇಯಂ ಎಂಬುದರಿಂದ ಹೇಳಿದಷ್ಟೇ ವಾಚಾರಂಭಣಂ ಎಂಬುದರಿಂದಲೂ ಹೇಳುವುದರಿಂದ ಒಂದರ್ಥವನ್ನು ಎರಡು ಸಲ ಹೇಳಿದಂತೆ ಆಗುವುದು.)

೫ ॥ (1) ಮೃತ್ತಿಕಾಶಬ್ದವು ಶಬ್ದಪರವೆಂದು ಇಟ್ಟುಕೊಳ್ಳದೆ ಅಂದರೆ ಮೃತ್ತಿಕಾ ಎಂಬುದಕ್ಕೆ ಮೃತ್ತಿಕಾ ಶಬ್ದವು ಎಂದಿಟ್ಟುಕೊಳ್ಳದೆ ಅರ್ಥಪರವೆಂದು ಮಣ್ಣು ಎಂದು ಇಟ್ಟುಕೊಂಡರೆ ಇತಿಶಬ್ದವು ಬೇಕಾಗಿಯೇ ಇಲ್ಲ. ಇತಿಶಬ್ದವು ಪ್ರಕರಣದಿಂದ ಬಂದ ಅರ್ಥದ ವ್ಯಾಖ್ಯಾನವನ್ನು ಹೇಳುತ್ತದೆ ಹೇಗೆಂದರೆ— ಶಬ್ದಪ್ರಕರಣದಲ್ಲಿದ್ದ ಇತಿಶಬ್ದವು ಶಬ್ದವೆಂಬ ಅರ್ಥವನ್ನು ಹೇಳದೆ. ಶಬ್ದದ ಅರ್ಥವನ್ನು ಹೇಳುತ್ತದೆ ಅರ್ಥಪ್ರಕರಣದಲ್ಲಿದ್ದ ಇತಿಶಬ್ದವು ಶಬ್ದವನ್ನು ಮಾತ್ರ ಹೇಳುತ್ತದೆ ಈ ರೀತಿಯಿಂದ ಅರ್ಥಶಾಸ್ತ್ರವಾದುದರಿಂದ ಇತಿಶಬ್ದವಿಲ್ಲದೇನೆ ಪ್ರಕರಣದಿಂದಲೇ ಮೃತ್ತಿಕಾಶಬ್ದಕ್ಕೆ ಮಣ್ಣು ಎಂಬ ಅರ್ಥವನ್ನು ಸಿದ್ಧಿಸುವಾಗ ಇತಿಶಬ್ದವು ವ್ಯರ್ಥವೇ ಆಗಬೇಕಾಗುವುದು ನಮ್ಮ (ದ್ವೈತಿಗಳ) ಪಕ್ಷದಲ್ಲಿ ಇದು ಅರ್ಥಶಾಸ್ತ್ರವಾದುದರಿಂದ ಶಬ್ದ ಎಂಬ ಅರ್ಥವನ್ನು ತೆಗೆಯುವುದಕ್ಕಾಗಿ ಇತಿಶಬ್ದವು ಸಾರ್ಥಕವೇ ಆಗುತ್ತದೆ (೨) ಮತ್ತು ವಾಚಾರಂಭಣವಾಕ್ಯದಲ್ಲಿ ವಿಪಾಶ್ರಯವನ್ನು ಹೇಳತಕ್ಕ ಶಬ್ದವಿಲ್ಲದಿರುವುದರಿಂದ ಈ ವಾಕ್ಯವು ವಿಕಾರಕ್ಕೆ ವಿಪಾಶ್ರಯವನ್ನು ತೆಗೆಸುವುದು ಹೇಗೆ? ವಿಪಾಶ್ರಯವನ್ನು ತೆಗೆಸುವುದು ವಾಚಾರಂಭಣ ಶಬ್ದವಿದೆ ಎಂದರೆ— ಕೋಶ ಮೊದಲಾದುದು ಇಲ್ಲದಿರುವುದರಿಂದ ವಾಚಾರಂಭಣ ಶಬ್ದಕ್ಕೆ ವಿಫಲೈಯೆಂಬುದು ಶಬ್ದದಿಂದ ಸಿಗತಕ್ಕ ಅರ್ಥವಲ್ಲ. ಅವಯವಶಕ್ತಿಯಿಂದ ವಿಫಲೈಯೆಂಬ ಅರ್ಥವು ಸಿಗದಿರುವುದರಿಂದ ವಾಚಾರಂಭಣ ಶಬ್ದಕ್ಕೆ ವಿಫಲೈಯೆಂಬುದು ಯೌಗಿಕಾರ್ಥವೂ ಅಲ್ಲ ॥ ೫ ॥

ಪೀ—ಅನ್ನಮಾತ್ರಂ ಭುಕ್ತಂ ಅನ್ನವನ್ನ ಮಾತ್ರ ಉಂಡಿದ್ದು ಎಂದು ಹೇಳಿದರೆ ಪಲ್ಯಕಾಯಿ ಮೊದಲಾದುದು ಯಾವುದೂ ಇರಲಿಲ್ಲ ಎಂದು ಹೇಗೆ ಅರ್ಥವು ಸಿಗುತ್ತದೋ ಹಾಗೆಯೇ ವಾಚಾರಂಭಣ ಮಾತ್ರಂ ಎಂದು ಹೇಳಿದರೆ, ಮಾತಿನಲ್ಲಿ ಹೇಳಲಿಕ್ಕೆ ಮಾತ್ರ ಇದೆ ವಸ್ತುತಃ ಇಲ್ಲವೆಂದು ಸಿಗುತ್ತದೆ ಎಂದರೆ—

ಭಾ. ॥ (೧) ನ ಚ ವಾಚಾರಂಭಣಮಾತ್ರಮಿತಿ ಮಾತ್ರಶಬ್ದೋಽಸ್ತಿ ॥ (೨) ನ ಚಾರಭ್ಯಸ್ಯಾರಂಭಣಮಿತಿ ಯುಜ್ಯತೇ ಶಬ್ದಃ । ಕ್ರಿಯಾ ಹ್ಯಾರಂಭಣಂ ॥ (೩) ಅತೋ ವಾಚಾನಾಮ್ನಾಮಾರಂಭಣಂ ವಿಕಾರೋ ವಿವಿಧಾಕಾರೋ ವಿಕ್ರಿಯಮಾಣಃ ॥ (೪) ಸತ್ಯಂ ನಾಮಧೇಯಂ ಸರ್ವದಾ ವಿದ್ಯಮಾನಂ ನಾಮಧೇಯಂ ಮೃತ್ತಿಕೇತ್ಯಾದಯ ಇತ್ಯರ್ಥಃ ॥ (೫) ಸತ್ತ್ವೇನ ಕಾಲತಸ್ತತಂ ಜ್ಞಾಯತೇ ವಿದ್ವದ್ಭಿರಿತಿ ನಿತ್ಯತ್ವೇನ ಪ್ರಸಿದ್ಧಮೇವ ಸತ್ಯಮಿತ್ಯತ್ರ ನಿವಕ್ಷಿತಂ

॥ ೫ ॥

ಅ ॥ (೧) ವಾಚಾರಂಭಣಮಾತ್ರಂ ಎಂದು ಮಾತ್ರಶಬ್ದವು ಇಲ್ಲ. (ಇಲ್ಲಿ ಮಾತ್ರಶಬ್ದವು ಇರುತ್ತಿದ್ದರೆ ಹೀಗೆ ಆಗುತ್ತಿತ್ತು. ಇಲ್ಲಿ ವಾಚಾರಂಭಣಂ ಎಂದಿಷ್ಟು ಮಾತ್ರ ಇದೆ **ಮಾತ್ರ** ಎಂಬ ಶಬ್ದವು ಇಲ್ಲ. ಅದುಕಾರಣ ಅಶ್ರುತಕಲ್ಪನೆಯು=(ಹೇಳದಿದ್ದುದನ್ನು ಕಲ್ಪಿಸಿಕೊಳ್ಳುವುದು) ದೋಷವೂ ಬರುವುದು. ಮತ್ತು ಅಬ್ರಕ್ಷಃ, (ನೀರು ಮಾತ್ರ ಕುಡಿಯುವವನು,) ವಾಯುಭಕ್ಷಃ (ಗಾಳಿ ಮಾತ್ರ ಸೇವಿಸುತ್ತಿರುವವನು) ಇತ್ಯಾದಿಗಳಂತೆ ಮಾತ್ರ ಶಬ್ದವನ್ನು ಕಲ್ಪಿಸಲಿಕ್ಕೆ ಬೇಕಾದ ಯಾವ ಅಂಶವೂ ಪ್ರಕೃತದಲ್ಲಿ ಇಲ್ಲ. (೨) (ಮತ್ತು ವಾಚಾ ಕೇವಲಮಸ್ತೀತ್ಯಾರಭ್ಯತೇ=ಮಾತಿನಿಂದ ಮಾತ್ರ ಉಂಟೆಂದು ಆರಂಭಿಸಲ್ಪತಕ್ಕುದು, ಎಂದು ಯೋಗ(ಅವಯವವಾರ್ಥ)ವನ್ನು ಇಟ್ಟುಕೊಂಡು ವಾಚಾರಂಭಣಂ=ವಾಗಾಲಂಬನ ಮಾತ್ರವು ಮಾತಿನಲ್ಲಿ ಹೇಳಲಿಕ್ಕೆ ಮಾತ್ರ ಇದೆ, ಎಂದು ಅರ್ಥ ಹೇಳಿದ್ದು ಯುಕ್ತವಲ್ಲ. ಏಕೆಂದರೆ ಆರಂಭಣಂ ಎಂಬ ಶಬ್ದವು ಲ್ಯುಟ್ ಪ್ರತ್ಯಯಾಂತವಾದುದು ಆರಭ್ಯತೇ ಎಂಬ ಕರ್ಮಾರ್ಥದಲ್ಲಿ ಲ್ಯುಟ್‌ಪ್ರತ್ಯಯವನ್ನು ಸೂತ್ರದಲ್ಲಿ ವಿಧಿಸಲೇ ಇಲ್ಲ, ಎನ್ನುತ್ತಾರೆ—) ಆರಂಭಿಸಲ್ಪಡತಕ್ಕುದಕ್ಕೆ ಆರಂಭಣಂ ಎಂಬ ಶಬ್ದವು ಕೂಡಲಾರದಷ್ಟೆ. (ಆರಭ್ಯವಾದುದು (ಆರಂಭಿಸಲ್ಪಡತಕ್ಕುದು) ಆರಂಭಣವಾಗಲಾರದು.) ಪರಂತು ಆರಂಭಣವೆಂದರೆ ಕ್ರಿಯೆಯು. ಅಂದರೆ ಉತ್ಪಾದನ (ಹುಟ್ಟಿಸುವಿಕೆ) ವೆಂಬ ಆರಂಭಣ ಕ್ರಿಯೆಯೇ ಆರಂಭಣಶಬ್ದದಿಂದ ಹೇಳಲ್ಪಡುತ್ತದೆ. (ಲ್ಯುಟ್ ಪ್ರತ್ಯಯವು ಭಾವಾರ್ಥ (ಧಾತ್ವರ್ಥ) ದಲ್ಲಿ ಇರತಕ್ಕುದು ಎಂದು ಪ್ರಸಿದ್ಧವಾಗಿದೆ.) (೩) (ಹೀಗೆ ವಾಚಾರಂಭಣವೆಂಬ ವಾಕ್ಯಕ್ಕೆ ಪರರು ಹೇಳಿದ ಅರ್ಥವು ಅಯುಕ್ತವೆಂದು ಹೇಳಿ ಈಗ ತಾನು ಅದರ ಅರ್ಥ ಹೇಳುತ್ತಾರೆ) ಪರರು ಹೇಳಿದ ಅರ್ಥವು ಕೂಡದಿರುವುದರಿಂದ (ವಾಚಾ=) ವಾಗಿಂದ್ರಿಯದಿಂದ, (ನಾಮ್ನಾಂ=) ಸಂಸ್ಕೃತ ಹೊರತಾದ ಭಾಷಾಶಬ್ದಗಳ, (ಆರಂಭಣಂ=) ಉಚ್ಚಾರಣವು, (ವಿಕಾರಃ=) ಅನೇಕಪ್ರಕಾರದಿಂದ ಉಚ್ಚರಿಸಲ್ಪಡತಕ್ಕುದು. (೪) (**ನಾಮಧೇಯಂ ಮೃತ್ತಿಕೇತ್ಯೇವ ಸತ್ಯಂ** ಎಂಬುದಕ್ಕೆ ಅರ್ಥ ಹೇಳುತ್ತಾರೆ-) ಸತ್ಯಂ=ಯಾವಾಗಲೂ ಇರತಕ್ಕ ನಾಮಧೇಯಗಳು ಮೃತ್ತಿಕಾ ಮೊದಲಾದವುಗಳು. (೫) (**ಏತತ್ಸತ್ಯಂ ಬ್ರಹ್ಮಪುರಂ** ಎಂದು ನಿತ್ಯವೆಂಬ ಅರ್ಥದಲ್ಲಿ ಸತ್ಯಶಬ್ದವನ್ನು ಮುಂದಕ್ಕೆ ಹೇಳುವುದರಿಂದ ರೂಢಿಯಿದೆ, ಎಂದು ಸಿದ್ಧಿಸುತ್ತದೆ. ಯೋಗವೂ (ಅವಯವವಾರ್ಥವೂ) ಇದೆ ಎನ್ನುತ್ತಾರೆ—) (ಸತ್ಯಂ ಎಂಬಲ್ಲಿ ಸತ್=ಸದ್ರೂಪವಾಗಿ, ತ್=ಸರ್ವಕಾಲದಲ್ಲಿ ವ್ಯಾಪಿಸಿಕೊಂಡಿರುವುದಾಗಿ, ಯಂ=ಜ್ಞಾನಿಗಳಿಂದ ತಿಳಿಯಲ್ಪಡುತ್ತದೆ. ಹೀಗೆ ಸತ್ಯಂ ಎಂಬುದರಿಂದ ನಿತ್ಯವೆಂದು ಪ್ರಸಿದ್ಧವಾದುದನ್ನೇ ಇಲ್ಲಿ ಇಟ್ಟುಕೊಳ್ಳಬೇಕು

॥ ೫ ॥

ಪೀ—ಸಂಸ್ಕೃತವಲ್ಲದ ಭಾಷಾಶಬ್ದಗಳ ಆರಂಭಣವು ವಿವಿಧವಾಗಿ ಮಾಡಲ್ಪಡುತ್ತದೆಂದು ಹೇಳಿದ್ದು ಹೇಗೆ? ಎಂದರೆ—

ಭಾ. ॥ (೧) ಸಂಕೇತೇನ ಕ್ರಿಯಮಾಣಾನಿ ಹ್ಯನ್ಯಾನಿ ನಾಮಾನಿ । ಅತೋ ವಿಕಾರರೂಪಾಣಿ ॥ (೨) ವಿಕಾರಶಬ್ದಸ್ಯ ವಿಯತಪುಲ್ಲಿಂಗತ್ವಾದಾರಂಭಣಂ ವಿಕಾರ ಇತಿ ವೇದಾಪ್ರಮಾಣಮಿತಿವದ್ಯುಜ್ಯತೇ ॥ (೩) ನ ಚ ಮೃತ್ತಿಕಾದಿನಾಮವಿಕಾರಃ ಸಾಂಕೇತಿಕಂ ನಾಮ॥

(೪) ಪ್ರಾಧಾನ್ಯಮೇವಾಸ್ಯ ಮೃತ್ತಿಕಾದಿಸಾಮವದ್ದಗವತೋ ವಿವಕ್ಷಿತಂ । ಸೃಷ್ಟ್ಯಿಶ್ಚ ಪ್ರಾಧಾನ್ಯಾರ್ಥಮೇವಾನಾತ್ರೋಚ್ಯತೇ ॥೧,೨,೫,೪,೫,೬,೭,೮॥ ಇತಿ ಪ್ರಥಮಃ ಖಂಡಃ ॥೪–೧೫॥

ಅ ॥(೧) ಸಂಸ್ಕೃತವಾದ ಘಟಾದಿವಿಷಯಗಳು, ಭಿನ್ನವಾದ ಜಾತ್ಯನುಸಾರವಾಗಿ ಮೃತ್ತಿಕೆಯೆಂಬ ಸಂಜ್ಞೆಯಿಂದ (ಈ ವಸ್ತುವಿಗೆ ಈ ಹೆಸರು ಎಂದು ನಿಶ್ಚಯವಾಗಿ ವ್ಯವಹರಿಸಲ್ಪಡಬಹುದು.) ಪಡೆದ ಮೃತ್ತಿಕೆಯ ತಸ್ಯಾವಿಗಳು, ಅದುಕಾರಣ ವಿಕಾರರೂಪಗಳು, ಬಹುವಿಧವಾಗಿ ಮೃತ್ತಿಕೆಯಲ್ಲಿರುತ್ತವೆಗಳು. ಆದುದರಿಂದ ಅನಿತ್ಯಗಳು (೨) (ಅರಂಭಣಂ ಎಂಬುದು ಸಪ್ತಮಿಕರಲಿಂಗವು. ವಿಕಾರಃ ಎಂಬುದು ಪುಲ್ಲಿಂಗವು. ಅದುಕಾರಣ ಅರಂಭಣಂ ವಿಕಾರಃ ಎಂದು ವಿಶೇಷಣ ವಿಶೇಷ್ಯಾನ್ವಯ ಹೇಗೆ ಎಂದರೆ) (ಘಾಸಾರ್ಥದಲ್ಲಿರುವ ಕೃ ಧಾತ್ವರ್ಥ ಪ್ರಕೃಯಾಂತರವಾದ ಅರಂಭಣಂ ಎಂಬ ಶಬ್ದವು ನಿತ್ಯ ನಪುಂಸಕಲಿಂಗವಾಗಿದೆ.) ವಿಕಾರಃ ಎಂಬ ಶಬ್ದವು ಘಞ್ ಪ್ರತ್ಯಯಾಂತವಾದುದು. ಸಮುದಿನ ಪುಲ್ಲಿಂಗವು. ಆದಕಾರಣ ಅರಂಭಣಂ ವಿಕಾರಃ ಎಂದು ವಿಶೇಷಣ ವಿಶೇಷ್ಯಭಾವವು ಸಿದ್ಧವಾಗಿದೆ. ಪ್ರಮಾಣಗಳು ಇತ್ಯಾದಿಗಳಂತೆಯೇ ಕೂಡಿರುತ್ತವೆ (೩) (ಸಂಸ್ಕೃತವಾದ ವಿಕಾರವು ಸಾಂಕೇತಿಕ ನಾಮವು ಎಂದೇ ವಿಶೇಷ್ಯ ಹೇಳಬಾರದು ಏಂದರೆ—) ಸಾಂಕೇತಿಕನಾಮವು ಮೃತ್ತಿಕಾದಿ ಸಾಮಗಳ ವಿಕಾರವು. (ಮಣ್ಣು ಮೊದಲಾದ ಸಾಂಕೇತಿಕ ನಾಮಗಳು ಸಂಸ್ಕೃತದ ಕೃದಂತಗಳು ಅದಲ್ಲವಾಗಿರುತ್ತವೆ. ಅವುಗಳಿಗೆ ಸಂಸ್ಕೃತವು ಉಪಾದಾನಕಾರಣವಲ್ಲ. ಏಕೆಂದರೆ—ಸಂಸ್ಕೃತಪದಗಳಿಗೂ ಸಾಂಕೇತಿಕ ಪದಗಳಿಗೂ ಎರಡಕ್ಕೂ ಏಕಾರ್ಥವು ಉಪಾದಾನಕಾರಣವು ಮತ್ತು ಅವುಗಳೆರಡೂ ಪರಸ್ಪರವಾಗಿ ಬೇರೆಯಾಗಿ ತೋರುತ್ತವೆ.) (೪) (ವಾಚಾರಂಭಣ ದೃಷ್ಟಾಂತದಿಂದ ಪ್ರಶ್ನೆಯು ಜಗತ್ತಿಗೆ ಉಪಾದಾನಕಾರಣವೆಂದು ಇಷ್ಟವಾಗದಿದ್ದರೆ ಬೇರೆ ಯಾವ ಅರ್ಥವು ಇಷ್ಟವಾಗುವುದು ಎಂದರೆ—) ಮೃತ್ತಿಕಾ ಮೊದಲಾದ ಸಾಮಗಳಂತೆಯೇ ಶ್ರೀಹರಿಗೆ ಸರ್ವಾಂತರ್ಯಾಮಿತ್ವ ಪ್ರಧಾನ್ಯವೇ ಇಷ್ಟವಾಗಿದೆ. ಸಾಂಕೇತಿಕ ನಾಮಗಳಂತೆಯೇ ಜಗತ್ತಿಗೆ ಅಪ್ರಧಾನ್ಯವೂ ಇಷ್ಟವಾಗಿದೆ. ಶ್ರೀಹರಿಗೆ ಸರ್ವಾಂತರ್ಯಾಮಿತ್ವವನ್ನು ಹೇಳುವುದಕ್ಕಾಗಿಯೇ ಸೃಷ್ಟಿಯನ್ನು ಇಲ್ಲಿ ಹೇಳಲಾಗಿದೆ.

ವಿ ॥(1) ವಿಕಾರವಾಗಿರುವುದರಿಂದ ಸಾಂಕೇತಿಕ ನಾಮವು ಅನಿತ್ಯವು. ಸಂಸ್ಕೃತನಾಮವು ನಿತ್ಯವು. ಅದುಕಾರಣ ಅನಿತ್ಯವಾದ ಕಾರಣ ಸಾಂಕೇತಿಕ ನಾಮವು ಅಪ್ರಧಾನವು. ನಿತ್ಯವಾದ ಪ್ರಯುಕ್ತ ಸಂಸ್ಕೃತವು ಪ್ರಧಾನವು ಎಂದು ಸಿಗುತ್ತದೆ. ಈ ದೃಷ್ಟಾಂತದಿಂದ ಪ್ರಶ್ನೆಗೆ ಪ್ರಾಧಾನ್ಯವೂ ಜಗತ್ತಿಗೆ ಅಪ್ರಾಧಾನ್ಯವೂ ಸಿಗುತ್ತದೆ. ಏನೆಂದರೆ ಸಂಸ್ಕೃತವು ಪ್ರಧಾನವಾದುದರಿಂದ ಅದರ ಜ್ಞಾನಮಾತ್ರದಿಂದ ಸಾಂಕೇತಿಕನಾಮವು ತಿಳಿಯಲ್ಪಡುತ್ತದೆ. ಅಂದರೆ—ವಿದ್ವಾನ್ ಇತ್ಯಾದಿ ವ್ಯವಹಾರವು ಸಂಸ್ಕೃತ ಪಂಡಿತರಿಗೆ ಸಂಸ್ಕೃತಜ್ಞಾನದಿಂದಲೇ ಸಿದ್ಧಿಸುತ್ತದೆ. ಹಾಗೆಯೇ ಶ್ರೀಹರಿಯು ಪ್ರಧಾನನಾಮದಿಂದ ಶ್ರೀಹರಿಯ ಜ್ಞಾನದಿಂದಲೇ ಅಪ್ರಧಾನವಾದ ದೇವತಾ ಕರ್ಮಾದಿರೂಪವಾದ ಎಲ್ಲಾ ಜಗತ್ತು ತಿಳಿಯಲ್ಪಡುತ್ತದೆ ಅಂದರೆ—ದೇವತಾ ಕರ್ಮಾದಿಗಳ ಜ್ಞಾನದಿಂದುಂಟಾಗತಕ್ಕ ಫಲವು ಶ್ರೀಹರಿಯ ಜ್ಞಾನದಿಂದಲೇ ಆಗುತ್ತದೆ (2)ಇಲ್ಲಿ ಜಗತ್ತು ಪರಬ್ರಹ್ಮನ ವಿಕಾರವೆಂಬುವುದು ಇಷ್ಟವಿಲ್ಲವಾದರೆ ಮುಂದೆ ಸದೇವ ಸೋಮ್ಯೇದಮಗ್ರ ಆಸೀತ್ ಇತ್ಯಾದಿಗಳಲ್ಲಿ ಸೃಷ್ಟಿಯನ್ನು ಹೇಳುವುದು ಅಸಂಗತವಾಗಬೇಕಾಗುವುದು ಆ ವಾಕ್ಯವು ಜಗತ್ತು ಪ್ರಬ್ರಹ್ಮನ ವಿಕಾರವು ಎಂಬುವುದನ್ನು ವಿಸ್ತರಿಸಲಿಕ್ಕೆ ಹೊರಟಿದ್ದು, ಎಂದರೆ ಹಾಗೆ ಹೇಳಕೂಡದು ಏಕೆಂದರೆ – ಶ್ರೀಹರಿಯು ಸರ್ವಾಂತರ್ಯಾಮಿ ಪ್ರಧಾನನು ಎಂದು ಹೇಳುವುದಕ್ಕಾಗಿಯೇ ಸೃಷ್ಟಿಯನ್ನು ಹೇಳಿದ್ದು. ಅಂದರೆ, ಇಲ್ಲಿ ಜಗತ್ತು ಬ್ರಹ್ಮನ ವಿಕಾರವು, ಎಂಬುದನ್ನು ವಿಸ್ತರಿಸಿ ಹೇಳಲಿಕ್ಕೆ ಸೃಷ್ಟಿಯನ್ನು ಹೇಳಿದ್ದಲ್ಲ. ಪರಂತು ಮೃತ್ತಿಕಾದಿ ಸಾಮಗಳಂತೆ ಶ್ರೀಹರಿಗೆ ವ್ಯಾಪ್ತಾನ್ಯವು ಇಷ್ಟವಾಗಿದೆ ಹೇಗೆಂದರೆ ಶ್ರೀಹರಿಯು ಜಗತ್ತಿಗೆ

* ಸೇವಾ ಎಂದು ಕಿಷ್ಕಿಂಧಾ. ೪ ಸರ್ಗಾ ಎಂಬುದು ಕಿಷ್ಕಿಂಧಾಕಾಂ

*ನಿಮಿತ್ತಕಾರಣನು, ಇತ್ಯಾದಿಪ್ರಕಾರ ಶ್ರೀಹರಿಗೆ ಜಗತ್ತಿಗಿಂತ ಪ್ರಾಧಾನ್ಯವನ್ನು ತಿಳಿಸುವುದಕ್ಕಾಗಿಯೇ ಜಗತ್ಸೃಷ್ಟಿಯನ್ನು ಹೇಳಿರುತ್ತಾರೆ. (೨) ಮತ್ತು †ಉಪಾದಾನಕಾರಣ ಸಮುದಾಯವು ಅಥವಾ ಎಲ್ಲಾ ಕಾರಣಗಳೂ ಸತ್ಯಗಳೆಂದು ಯಥಾ ಸೋಮ್ಯೈಕೇನ ಮೃತ್ಪಿಂಡೇನ ಎಂಬ ಮೃತ್ತಿಕಾಶ್ರುತಿಯು ಹೇಳುತ್ತದೆ. ಕಾಷ್ಣಾಯಸ ಶ್ರುತಿಯು ಎಲ್ಲಾ ಕಾರ್ಯವೂ ಸತ್ಯವೆಂದು ತಿಳಿಸುತ್ತದೆ. ಉಪಾದಾನ ಕಾರಣವು ಸತ್ಯವಾಗುವಾಗ ಕಾರ್ಯವೂ ಸತ್ಯವೆಂದೇ ಅವಶ್ಯವಾಗಿ ಹೇಳಬೇಕು. ಉಪಾದಾನ ಉಪಾದೇಯಗಳಿಗೆ ಭೇದವಿಲ್ಲದಿರುವುದರಿಂದ ಅವುಗಳಲ್ಲಿ ಒಂದು ಸತ್ಯವಾದರೆ ಇನ್ನೊಂದೂ ಸತ್ಯವೆಂದು ಅವಶ್ಯವಾಗಿ ಹೇಳಬೇಕು ಕಾರ್ಯಕಾರಣರೂಪವಾದ ಅಂದರೆ—ನಾಮರೂಪಾತ್ಮಕವಾದ ಈ ಜಗತ್ತು ಅನಾದ್ಯನಂತಕಾಲಗಳಲ್ಲಿಯೂ ಏಕಪ್ರಕಾರವಾಗಿಯೇ ಇರತಕ್ಕುದು, ಇತ್ಯಾದಿಪ್ರಕಾರ ಅರ್ಥಗಳನ್ನು ತಿಳಿಯಬೇಕು. ॥ ೮—೧ ॥

॥ ೬ ॥

ಒಂದನೇ ಖಂಡವು ಮುಗಿಯಿತು.

೨ನೇ ಖಂಡವು

ಪೀ—ಸರ್ವರಿಗಿಂತಲೂ ಪ್ರಧಾನನಾದ ಪರಬ್ರಹ್ಮನನ್ನು ತಿಳಿದಾಗ ಅಪ್ರಧಾನವಾದ ಜಗತ್ತನ್ನು ತಿಳಿದಂತೆ ಆಗುತ್ತದೆ, ಎಂದು ಹೇಳಿದರು. ಬ್ರಹ್ಮನಿಗೆ ಪ್ರಾಧಾನ್ಯವೂ ಜಗತ್ತಿಗೆ ಅಪ್ರಾಧಾನ್ಯವೂ ಹೇಗೆ ಎಂದರೆ—ಅದಕ್ಕಾಗಿ ಸೃಷ್ಟಿಯನ್ನು ಹೇಳುತ್ತಾರೆ—

ಉ. ॥ ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ ತದ್ಧೈಕ ಆಹುರಸದೇವೇದಮಗ್ರ ಆಸೀದೇಕಮೇವಾದ್ವಿತೀಯಂ ತಸ್ಮಾದಸತಃ ಸಜ್ಜಾಯತ ಇತಿ

॥ ೧ ॥

ಅ ॥ ಎಲೋ ಶ್ವೇತಕೇತುವೇ ಜಗತ್ತು ಸೃಷ್ಟಿಯಾಗುವುದಕ್ಕಿಂತ ಮೊದಲು ಪ್ರಲಯಕಾಲದಲ್ಲಿ ಸರ್ವೋತ್ತಮನಾದುದರಿಂದ ಸತ್ ಎಂದು ಹೆಸರುಳ್ಳ ನಾರಾಯಣನೆಂಬ ಪರಬ್ರಹ್ಮನು ಮಾತ್ರ ಇರುತ್ತಿದ್ದನು. (ನಾರಾಯಣನ ಅವಯವ ಗುಣ ಕರ್ಮ ಮೊದಲಾದವುಗಳು ಇದ್ದಪ್ರಯುಕ್ತ ಸದೇವ ಎಂದು ಹೇಳಿದ್ದು ಹೇಗೆ ಎಂದರೆ—) ಆ ಪರಬ್ರಹ್ಮನು ತನ್ನ ಗುಣ ಕರ್ಮರೂಪಾದಿಗಳಿಂದ ಭೇದವಿಲ್ಲದವನು. ತನಗೆ ಸಮಾನಿಕನೂ ಅಧಿಕನೂ ಇಲ್ಲದವನು. (ತಾನು ಹೇಳಿದ ಅರ್ಥವು ದೃಢವಾಗುವುದಕ್ಕಾಗಿ ಶೂನ್ಯವಾದಿಗಳ ಪಕ್ಷವನ್ನು ವೇದವು ದೂಷಿಸುತ್ತದೆ.) ಜಗತ್ತಿನ ಸೃಷ್ಟಿವಿಷಯದಲ್ಲಿ ಶೂನ್ಯವಾದಿಗಳು ಪ್ರಲಯಕಾಲದಲ್ಲಿ ಜಗತ್ತು ಶೂನ್ಯಾತ್ಮಕವಾಗಿಯೇ ಇತ್ತು. ಭೇದವಿಲ್ಲದೇನೇ ಇತ್ತು. ಅಂದರೆ ಬೇರೆ ಯಾವುದೂ ಇರಲಿಲ್ಲ. ಶೂನ್ಯಕ್ಕೆ ಸಹಕಾರಿಕಾರಣವಾದ ಎರಡನೇ ವಸ್ತುವೂ ಇಲ್ಲ. ಅಂತಹ ಶೂನ್ಯದಿಂದ ಸತ್ತಾದ ಜಗತ್ತು ಹುಟ್ಟಿತು, ಎಂದು ಹೇಳುತ್ತಾರೆ

॥ ೧ ॥

ಪೀ—ಶೂನ್ಯವಾದಿಗಳ ಪಕ್ಷವು ಅಯುಕ್ತವೆನ್ನುತ್ತಾರೆ—

* ಮಣ್ಣು ಮಡಿಕೆಯಾಗುವಂತೆ ತಾನು ಜಗತ್ತಿನ ರೂಪವನ್ನು ಹೊಂದದೆ ಚೇತನ ಅಚೇತ ಎಲ್ಲಾ ಜಗತ್ತನ್ನು ಸೃಷ್ಟಿಸುವನು.

† ಮಣ್ಣು ಮಡಿಕೆಯಾಗುವುದು, ನೂಲು ಬಟ್ಟೆಯಾಗುವುದು, ಹೀಗೆ ರೂಪಾಂತರವನ್ನು ಹೊಂದಿ ಕಾರಣವಾಗುವುದು,

ಓಂ ॥ ಕುತಶ್ಚು ಖಲು ಸೋಮ್ಯೈವಂ ಸ್ಯಾದಿತಿ ಹೋವಾಚ ಕಥಮು-
ಸತಃ ಸಜ್ಜಾಯೇತೇತಿ ಸ ತ್ವೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿ-
ತೀಯಂ ॥ ೨ ॥

ಅ ॥ ಎಲೊ! ಮಗನೇ! ಪ್ರಳಯಕಾಲದಲ್ಲಿ ಅಸತ್ತು ಇತ್ತು ಎಂಬುದು ಹೇಗೆ ಕೂಡುವುದು? (ಸರ್ವಥಾ ಕೂಡಲಾರದು. ಏಕೆಂದರೆ ಮೇ ವಾಸಾ ವಂಧ್ಯಾಸುತ್ತ ಶಾಯಿಯು ಬಂಜೆಯು, ಎಂಬ ಮಾತಿನಂತೆ ತನ್ನ ಎಂತೇ ಶಸನೆ ವಿರುದ್ಧವಾಗುವುದು. ಮತ್ತು ಆ ವಿಷಯದಲ್ಲಿ ಪ್ರಮಾಣವೂ ಇಲ್ಲ.) (ಹೀಗೆ ತಂದೆಯಾದ ಉದ್ದಾಲಕರು ಮಗನಿಗೆ ಹೇಳಿದರು.) ಮತ್ತು ಅಸತ್ತಿನಿಂದ ಸತ್ತಾಗುವುದು ಹುಟ್ಟುತ್ತದೆ ಎಂಬುವುದು ಹೇಗೆ ಕೂಡುವುದು? (ಸರ್ವಥಾ ಕೂಡಲಾರದು. ಏಕಾಗಿ ಎಲ್ಲಿಯೂ ತೋರಿಬಾರದಿರುವುದರಿಂದ ಅಸತ್ತು ಕಾರಣವಾಗಲಾರದು.) ಎಂದು ತಂದೆಯವರು ಹೇಳಿದರು. (ಹೀಗೆ ಪರಮಾತ್ಮವು ಅಯುಕ್ತವೆಂದು ಹೇಳಿ ಮುಂದೆ ತನ್ನ ಮತವನ್ನೇ ಸ್ಥಿರಪಡಿಸುತ್ತಾರೆ—) ಸೌಮ್ಯನೇ! ಆದ ಪರಬ್ರಹ್ಮವು ಪ್ರಳಯ ಕಾಲದಲ್ಲಿ ಒಬ್ಬನೇ ಅದ್ವಿತೀಯನಾಗಿ ಸರ್ವವೂ ಅಧಿಕನೂ ತಾನಿದ್ದವನಾಗಿ ಇದ್ದನು. ಈ ಶಬ್ದದಿಂದ ಸ್ಪರೂಪ ಸಜಾತೀಯರಾಗಿ ಇದ್ದಿಲ್ಲ ಮತ್ತು ಜಗತ್ಕರ್ತನು ಎಂಬುವುದೂ ಯುಕ್ತವೆಂದು ಸೂಚಿತವಾಯಿತು. ॥ ೨ ॥

ಟೀ— ಪ್ರಳಯಕಾಲದಲ್ಲಿರತಕ್ಕ ಸರ್ವಾಧಾರವಾದ ಪರಬ್ರಹ್ಮನಿಗೆ ಪ್ರಳಯಕಾಲದ ಅಂತ್ಯಭಾಗದಲ್ಲಿ ಅಂದರೆ ಸೃಷ್ಟಿಗೆ ಒಳ್ಳೆ ಪರವಾಗಿ ಸೃಷ್ಟಿಯಾಗಬೇಕೆಂದು ವಿಚಾರವು ಬಂದಾಯಿತು. ಎನ್ನುತ್ತಾರೆ—

ಓಂ ॥ ತದ್ಧೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ತತ್ತೇಜೋಽಸೃಜತ
ತತ್ತೇಜ ಐಕ್ಷತ ಬಹು ಸ್ಯಾಂ ಪ್ರಜಾಯೇಯೇತಿ ತದಪೋಽಸೃಜತ ತಸ್ಮಾ-
ದ್ಯತ್ರ ಕ್ವ ಚ ಶೋಚತಿ ಸ್ವೇದತೇ ವಾ ಪುರುಷಸ್ತೇಜಸ ಏವ ತದ್ಧ್ಯಾಪೋ
ಜಾಯಂತೇ ॥ ೩ ॥

ಅ ॥ ಸತ್ ಎನಿಸಿದ ಪ್ರಸ್ಥನು ನಾನು ಜಗತ್ತಿಗೆ ನಿಯಾಮಕನಾಗಿ ಬಹು ರೂಪಗಳಳ್ಳವನಾಗುವೆನು ಅದಕ್ಕಾಗಿ ನಿಯಮ್ಯಗಳಾದ ಬಹು ವಸ್ತುಗಳನ್ನು ಸೃಷ್ಟಿಸುವೆನು. ಹೀಗೆ ವಿಚಾರ ಮಾಡಿದನು. ಆಗ ಪ್ರಸ್ಥನು ತೇಜಃ (ತೇಜಸ್ಸಾವ್ಯಾಪ್ತವಾದ ತ್ರಿಕರಣವು ಅಧೀನವಾಗಿ ಸರ್ವದಾ ಹುಟ್ಟುವೆ ಇರುವ ಅಥವಾ ವ್ಯಾಪ್ತನಾದ ತ್ರಿಕರಣಯುಂದ ಪ್ರಕಟಿಸಲಾಗುವ, ಅಥವಾ ಜಗತ್ತನ್ನು ಸೃಷ್ಟಿಸುವ. ವಿದ್ಯೆ ಎಂಬ ರೂಪದಿಂದ ಪ್ರಾಮುಖ್ಯವಿಸುವ) ಲಕ್ಷ್ಮೀದೇವಿಯನ್ನು ಅವಳಿಂದ ಅಧಿಷ್ಠಿಸಲ್ಪಟ್ಟವನಾದ ಪಂಚ ಭೂತಗಳಲ್ಲಿ ಸೇರಿದ ತೇಜಸ್ಸನ್ನು ಸೃಷ್ಟಿಮಾಡಿದನು. ತೇಜಸ್ಸಿಗೆ ಅಧಿಷ್ಠಾನವಿರುವಾದ ಲಕ್ಷ್ಮೀ ದೇವಿಯು ಬಹುರೂಪಗಳುಳ್ಳವಳು ಆಗುವೆನೆಂದು ಆಲೋಚಿಸಿ, ಜಲಗಳಿಗೆ ಅಧಿಷ್ಠಾನವಿರುವಾದ ಅಪ್ ಎನಿಸಿದ ಪ್ರಾಣವನ್ನೂ, ಪ್ರಾಣದಿಂದ ಅಧಿಷ್ಠಿಸಲ್ಪಟ್ಟವಾದ ಜಲಗಳನ್ನೂ ಸೃಷ್ಟಿಮಾಡಿದಳು. (ಜಲಗಳು ತೇಜಸ್ಸಿನಿಂದಲೇ ಹುಟ್ಟಿದವುಗಳೆಂಬುದು ಅನುಭವಸಿದ್ಧವೆಷ್ಟೆ ಶ್ರುತಿಯಾದರೂ—) ನೀರು ತೇಜಸ್ಸಿನಿಂದಲೇ ಹುಟ್ಟಿಕಕ್ಕುದಾದ ಪ್ರಯುಕ್ತ ಈಗಲೂ ಯಾವಪ್ರಾಣಿಯಾದರೂ ಬೆರುಚಿನು ಯಾವುದೊಂದು ದೇಶದಲ್ಲಿ ಬಿಗಲೀ ಕಾಲದಲ್ಲಿಯಾಗಲೀ ಮರುಗಿದರೆ ಅತನಿಗೆ ತಾಪವುಂಟಾದರೆ ಅಥವಾ ಬೆವರು ಹುಟ್ಟಿದರೆ ಆಗ ಆ ಜಲಗಳು ತೇಜಸ್ಸಿನಿಂದಲೇ ಹುಟ್ಟಿಕ್ಕವೆಂದು ಪ್ರಸಿದ್ಧವು ॥ ೩ ॥

ಓಂ ॥ ತಾ ಆಪ ಐಕ್ಷಂತ ಬಹ್ವ್ಯಃ ಸ್ಯಾಮ ಪ್ರಜಾಯೇಮಹೀತಿ ತಾ

ಅನ್ನಮಸೃಜಂತ ತಸ್ಮಾದ್ಯತ್ರ ಕ್ವಚ ವರ್ಷತಿ ತದೇವ ಭೂಯಿಷ್ಠಮನ್ನಂ ಭವತ್ಯದ್ಭ್ಯ ಏವ ತದ್ಭ್ಯೋನ್ನಾದ್ಯಂ ಜಾಯತೇ ॥ ಇತಿ ದ್ವಿತೀಯಃ ಖಂಡಃ ॥೮-೨॥೪॥

ಅ ॥ ಆ ಜಲಗಳಿಗೆ ಅಭಿಮಾನಿಯಾದ ಮುಖ್ಯಪ್ರಾಣನು ಬಹುರೂಪಗಳುಳ್ಳವನಾಗುವೆನೆಂದು ಆಲೋಚಿಸಿ ಅನ್ನ ಎನಿಸಿದ ಪೃಥಿವಿಗೆ ಅಭಿಮಾನಿಯಾದ ರುದ್ರನನ್ನೂ, ರುದ್ರನಿಂದ ಅಭಿಮನ್ಯಮಾನವಾದ ಪೃಥಿವೀ ಎಂಬ ಭೂತವನ್ನೂ ಸೃಷ್ಟಿಮಾಡಿದನು. (ಪೃಥಿವಿಯು ಜಲಗಳಿಂದ ಹುಟ್ಟಿದ್ದೆಂಬುವುದು ಅನುಭವಸಿದ್ಧವೆನ್ನು ತ್ತಾರೆ—) ಪೃಥಿವಿಯು ಜಲದಿಂದ ಹುಟ್ಟಿದ ಪ್ರಯುಕ್ತವೇ ಎಲ್ಲಿ ಮಳೆಯು ಸಮೃದ್ಧಿ ಬರುತ್ತದೋ, ಅಲ್ಲಿಯೇ ಬಹಳವಾದ ಅನ್ನ ವು (ಪಾರ್ಥಿವವಸ್ತುಗಳ ಸಮುದಾಯವು) ಸಮೃದ್ಧವಾಗುತ್ತದೆ. ಜಲಗಳಿಂದಲೇ ಅನ್ನ ಮೊದಲಾದ ಪಾರ್ಥಿವವಸ್ತುವು ಹುಟ್ಟುತ್ತದೆ. (ಬೇರೆ ಯಾವುದರಿಂದಲೂ ಹುಟ್ಟುವುದಲ್ಲ. ॥ ೮—೨ ॥ ॥ ೪ ॥

ಪೀ—**ಏಕಮೇವಾದ್ವಿತೀಯಂ** ಎಂಬ ವಾಕ್ಯಕ್ಕೆ ಶಂಕರಾಚಾರ್ಯರು ಹೀಗೆ ಅರ್ಥ ಹೇಳಿರುವರು. ತನ್ನಿಂದ ಸೃಷ್ಟವಸ್ತುಗಳಲ್ಲಿ ಬೇರೆ ಯಾವುದೂ ವಸ್ತುವು ಇಲ್ಲದಿರುವುದರಿಂದ **ಏಕಮೇವ** ಎಂದು ಹೇಳಲ್ಪಡುತ್ತದೆ. ಘಟಾದಿಗಳಿಗೆ ಮಣ್ಣು ಉಪಾದಾನಕಾರಣ. ಘಟಕ್ಕೂ ಮಣ್ಣಿಗೂ ಅಭೇದವು ಆದರೆ ಮಣ್ಣು ಹೊರತು ಮಣ್ಣಿಗೆ ಘಟಾದಿರೂಪವಾಗಿ ಪರಿಣಮಿಸಲಿಕ್ಕೆ ಕುಲಾಲಾದಿಗಳು ನಿಮಿತ್ತಕಾರಣರಾಗಿ ಕಂಡಂತೆ ಇಲ್ಲಿ ಸತ್ ರೂಪನಾದ ಬ್ರಹ್ಮನು ಹೊರತು ಸತ್ತಿಗೆ ಸಹಕಾರಿ ಕಾರಣವಾದುದು ಎರಡನೇದ್ದು ಇಲ್ಲ. ಏವಂಚ, ಅದ್ವಿತೀಯಂ=ಎರಡನೇದ್ದು ಬೇರೆ ವಸ್ತುವು ಇಲ್ಲ. ಹೀಗೆ ಅರ್ಥ ಹೇಳಿರುವರು. ಅದು ಅಯುಕ್ತವು. **ಅದ್ವಿತೀಯ** ಎಂಬ ಪದದಿಂದಲೇ ಕಾರ್ಯ ಕಾರಣ ಮೊದಲಾದ ಎರಡನೇ ವಸ್ತುವನ್ನೇ ನಿಷೇಧಿಸುವಾಗ ಏಕಮೇವ ಎಂಬ ಪದವು ವ್ಯರ್ಥವೇ ಆಗುವುದು. ಇನ್ನೊಬ್ಬನು ಹೀಗೆ ಹೇಳಿರುವನು. **ವೃಕ್ಷಸ್ಯ ಸ್ವಗತೋ ಭೇದಃ ಪತ್ರಪುಷ್ಪಫಲಾದಿಭಿಃ । ವೃಕ್ಷಾಂತರಾತ್ಸಜಾತೀಯೋ ವಿಜಾತೀಯಃ ಶಿಲಾದಿತಃ ॥ ತಥಾ ಸದ್ವಸ್ತುನೋ ಭೇದತ್ರಯಂ ಪ್ರಾಪ್ತಂ ನಿಷಿಧ್ಯತೇ । ಐಕ್ಯಾವಧಾರಣದ್ವೈತಪ್ರತಿಷೇಧೈಸ್ತ್ರಿಭಿಃ ಕ್ರಮಾತ್ ॥** ವೃಕ್ಷದಲ್ಲಿ ಮೂರು (೩) ಭೇದಗಳವೆ. (1) ಪತ್ರ ಪುಷ್ಪ ಫಲ ಮೊದಲಾದವುಗಳಿಂದ ಸ್ವಗತ (ತನ್ನಲ್ಲಿದ್ದ) ಭೇದ. (2) ಈ ವೃಕ್ಷಕ್ಕೆ ಮತ್ತೊಂದು ವೃಕ್ಷದಿಂದ ಸಜಾತೀಯ ಭೇದ. (3) ಕಲ್ಲು ಮೊದಲಾದವುಗಳಿಂದ ವಿಜಾತೀಯ ಭೇದ. ಹೇಗೋ ಹಾಗೆಯೇ ಸದ್ರೂಪನಾದ ಬ್ರಹ್ಮನಿಗೆ ಪ್ರಾಪ್ತಗಳಾದ ಮೂರು ಭೇದಗಳು. (1) ಐಕ್ಯ (2) ಅವಧಾರಣ (3) ದ್ವೈತ ಪ್ರತಿಷೇಧ ಅಂದರೆ **ಏಕಂ ಏವ ಅದ್ವಿತೀಯಂ** ಎಂಬ ಮೂರು ಪದಗಳಿಂದ ನಿಷೇಧಿಸಲ್ಪಡುತ್ತವೆ, ಎಂದು ಕೆಲವರು ಹೇಳುವರು. ಅದೂ ಅಯುಕ್ತವೆಂಬ ಅಭಿಪ್ರಾಯದಿಂದ ಯೋಗ್ಯವಾದ ಅರ್ಥಹೇಳುತ್ತಾರೆ—

ಭಾ. ॥ (೧) ಏಕಮೇವಾದ್ವಿತೀಯಂ ಸ್ವಗತಭೇದವರ್ಜಿತಂ ಸಮಾನವರ್ಜಿತಂ ಚ ॥ (೨) ಏಕಮೇವಾದ್ವಿತೀಯಂ ತತ್ಸಮಾಭ್ಯಧಿಕವರ್ಜನಾತ್ । ಸ್ವಗತಾನಾಂ ಚ ಭೇದಾನಾಮಭಾವಾದ್ಬ್ರಹ್ಮ ಶಾಶ್ವತಂ ॥ ಇತಿ ಪ್ರವೃತ್ತೇ ॥ (೩) ಭೇದಾಭೇದನಿವೃತ್ತ್ಯರ್ಥಮೇವಶಬ್ದೋಽವಧಾರಕಃ । ಸಮಾಧಿಕನಿವೃತ್ತ್ಯರ್ಥಮದ್ವಿತೀಯಪದಂ ತಥಾ ॥ (೪) ಭೇದಾಭೇದೇಽಪ್ಯೇಕತ್ವಜ್ಞೋ ಯತೋಽನಯವಿನಿ ಸ್ಥಿತಃ । ಏಕಮೇವೇತ್ಯತಃ ಪ್ರಾಹ ನಾರಾಯಣಮಿಯಂ ಶ್ರುತಿಃ ॥ ಸಮೇ ದ್ವಿತೀಯಶಬ್ದಃ ಸ್ಯಾದದ್ವಿತೀಯೋಽಸಮತ್ವತಃ । ಸಾಧಿಕಃ ಕುತ ಏವ ಸ್ಯಾದಿತ್ಯಾಹ ಪರಮಾಶ್ರುತಿಃ ॥ ಇತಿ ಸಾಮಸಂಹಿತಾಯಾಂ ॥ ೧ ॥

ಅ॥ (೧) ತ್ರೀಣಿಕರಿಯು ವಿಶಿಷ್ಟ-ತನ್ನ ಅವಯವ ಗುಣ, ಕರ್ಮ ಮಾಡಾದಿಗಳಿಂದ ಭೇದವಿಲ್ಲದ ವನು ಅದ್ವಿತೀಯಂ-ಸದೃಶನಿಲ್ಲದವನು (೨) (ತಾನು ಹೇಳಿದ ಅರ್ಥವನ್ನು ಆಚಾರ್ಯರು ಪ್ರಮಾಣ ಹೇಳಿ ದೃಢೀಕರಿಸುತ್ತಾರೆ-) ತಾನೊಬ್ಬನಾದ ಪರಬ್ರಹ್ಮನು ತನ್ನ ಅವಯವ ಗುಣಾದಿಗಳಿಂದ ಭೇದವಿಲ್ಲದಿರುವುದರಿಂದ ವಿಶಿಷ್ಟನೇ ಎಂದೂ, ತನಗೆ ಸದೃಶನಿಲ್ಲವೂ ತನ್ನಿಂದ ಉತ್ಕೃಷ್ಟನೂ ಇಲ್ಲದಿರುವುದರಿಂದ ಅದ್ವಿತೀಯನೆಂದೂ ಅನಿಸುತ್ತಾನೆ. (೩) (ಈ ಅರ್ಥವನ್ನೇ ಇನ್ನೊಂದು ಪ್ರಮಾಣವೇ ದೃಢೀಕರಿಸುತ್ತಾರೆ-) (ತ್ರೀಶ ಪದಗೆ ತನ್ನ ಅವಯವ ಗುಣಕರ್ಮಾದಿಗಳಿಂದ ಅಭೇದವೆಂದು ತೀರಿಸುವುದಕ್ಕಾಗಿ ವಿಶಂ ಎಂಬ ಶಬ್ದವು) ಭೇದಾಭೇದವನ್ನು ಹೊಗಲಾಡಿಸುವುದಕ್ಕಾಗಿ ಅವಧಾರಣಾರ್ಥಕವಾದ (ನಿಶ್ಚಯಾರ್ಥಕವಾದ) ಏವ ಶಬ್ದವು ಸದೃಶನಿಲ್ಲವೂ ಉತ್ಕೃಷ್ಟನೂ ಇಲ್ಲವೆಂದು ತೋರಿಸುವುದಕ್ಕಾಗಿ ಅದ್ವಿತೀಯಂ ಎಂಬ ಪದವು. (೪) (ಹಾಗಾದರೆ – ವಿಶಂ-ಭೇದವಿಲ್ಲದಿದ್ದು ಎಂದು ವಿಶಮೇವ ಎಂದಿರಲೇ ಭೇದವಿಲ್ಲವೆಂದಾಗುವಾಗ ಇವರೆಂದಲೇ ಭೇದಾಭೇದವು ಇಲ್ಲವೆಂದಾಗುವುದಲ್ಲಾ? ವಿಶಮೇವ ಎಂಬುವಲ್ಲಿನ ಅವಧಾರಣಾರ್ಥಕವಾದ ಏವ ಶಬ್ದವು ವ್ಯರ್ಥವೆಂದರೆ-) ಅವಯವಿದು, ದಳಗಳಾದಿಗಳಲ್ಲಿ ಭೇದಾಭೇದವಿದ್ದರೂ ಅಂದರೆ ಪಟ (ವಸ್ತ್ರ)ಕ್ಕೆ ನೂಲುಗಳಿಂದ ಭೇದ, ನೂಲುಗಳಿಗೆ ನೂರಿನ ಸಮೂಹವುಗಳಿಂದ ಅಭೇದ ಹೀಗೆ ಭೇದಾಭೇದವಿದ್ದರೂ, ವಿಶಂ ಎಂಬ ಶಬ್ದವು ಇದು (ಅದು ಅಭೇದವನ್ನು ಮಾತ್ರ ತೋರುತ್ತದೆ ಭೇದ ನಿರಾಕರಣವಾಗುವುದಿಲ್ಲ. ಅದಕಾರಣ ಅವಯವಿ ಇದಂತೆಯೆ, ಇಲ್ಲಿಯೂ ವಿಶಂ ಎಂಬ ಪದದಿಂದ ನಾರಾಯಣನಿಗೂ ಚಿತ್ತನ ಅವಯವಾದಿಗಳಿಗೂ ಭೇದಾಭೇದವು ಇಂದ ಪ್ರಸಕ್ತವಾಗಿದ್ದು, ಅದನ್ನು ಹೊಗಲಾಡಿಸುವುದಕ್ಕಾಗಿ ಈ ವೇದವು ವಿಶಮೇವ ಎಂದು ಹೇಳಿರುತ್ತದೆ (೫) (ಸದೃಶನಿಕನೂ ಉತ್ಕೃಷ್ಟನೂ ಇಲ್ಲ) ಎಂದು ತೀರಿಸುವುದಕ್ಕಾಗಿ ಅದ್ವಿತೀಯಂ ಎಂಬ ಪದವನ್ನು ಹೇಳಿದ್ದು ಎಂಬುದು ಅಯುಕ್ತವು. ಏಕೆಂದರೆ - ಅದ್ವಿತೀಯಂ ಎಂಬ ಪದವೇ ಸದೃಶನೇ ಇಲ್ಲದವನು ಎಂಬ ಅರ್ಥವನ್ನು ತಾನೇ ಹೇಳುತ್ತದೆ ಎಂದರೆ –) ಸದೃಶನು ಎಂಬ ಅರ್ಥವನ್ನೆ ದ್ವಿತೀಯ ಎಂಬ ಶಬ್ದವಿದೆ. ಸದೃಶನಿಲ್ಲ ಇದ್ದಿರುವುದರಿಂದ ಅದ್ವಿತೀಯನೆನಿಸುತ್ತಾನೆ. ಅಧಿಕನು (ಶ್ರೇಷ್ಠನು ಸಮನು ಕನಿಷ್ಠನೂ ಇರಲಾರನು. ಎಂದು ಪರಮಶ್ರುತಿಯಲ್ಲಿ ಹೇಳಿದೆ. ಎಂದು ಸಾಮಸಂಹಿತೆಯಲ್ಲಿದೆ

ಏ॥ (೧) ಅನ್ಯ ಸೋದ್ಯಿತೀಯೇನ ಧಾನ್ಯಂ ಈ ಸೋವಿಗೆ ಇನ್ನೊಂದು ಎರಡನೇದು. ಇದು ಮೇಕ.. ಎಂದು ಹೇಳಿದಾಗ ಈ ಗೋವಿಗೆ ಸದೃಶವಾದ ಇನ್ನೊಂದು. ಗೋವನ್ನೇ ತೆಗೆದುಕೊಳ್ಳಬೇಕೆಂಬ ಇನ್ನೊಂದು ಗುಮಸ್ತೆಯನ್ನಾಗಲೀ ಕತ್ತೆಯನ್ನಾಗಲೀ ತರುವುದಲ್ಲ ಎಂದು ಮೀಮಾಂಸಕರಲ್ಲಿ ಹೇಳಿದೆ. ಅದಕಾರಣ ದ್ವಿತೀಯ ಎಂಬುದಕ್ಕೆ ಸದೃಶನೆಂದೇ ಅರ್ಥವು (೨) ದ್ವಿತೀಯ ಪದದಿಂದ ಎರಡನೇ ವಸ್ತುವನ್ನು ಮಾತ್ರ ಹೇಳಿದರೆ - ಅದ್ವಿತೀಯ ಪದದಿಂದಲೇ ತಾನು ಹೊರತು ಬೇರೆ ಎಲ್ಲಾ ವಸ್ತುಗಳನ್ನೂ, ನಿಷೇಧಿಸಲಿಕ್ಕೆ ಎರಡುವುದರಿಂದ ಸಜಾತೀಯಗಳನ್ನು ನಿಷೇಧಿಸಕಕ್ಕೆ ಏವ ಶಬ್ದಾದಿಗಳು ವ್ಯರ್ಥವೆ. ಏವ ಶಬ್ದಕ್ಕೆ ವೈಯರ್ಥ್ಯವು ಬರದಾರದೆಂಬುದಕ್ಕಾಗಿ ದ್ವಿತೀಯ ಎಂಬ ಶಬ್ದವು ವಿಜಾತೀಯ ವಸ್ತುವಿನ ಎರಡನೇ ವಸ್ತುವನ್ನು ಸಂಕೋಚ ವಗತಿಕೊಳ್ಳುವುದಾದರೆ ಸಮಾನ ಎರಡನೇ ವಸ್ತುವ ನ್ನೆಂದೂ ಸಂಕೋಚ ವಾಡಬೇಕಾಗುವುದು. (೩) ಹಾಗಾದರೆ ಅದ್ವಿತೀಯಂ ಎಂಬುದಕ್ಕೆ ಸಮಾನಿಕನಿಲ್ಲವೆಂದೇ ಅರ್ಥವಾಗಲಿ ಅಧಿಕನು ಇಲ್ಲವೆಂದು ಅರ್ಥವು ಸಿದ್ಧಿಸದಿರಲಿ. ಎಂದರೆ– ಸದೃಶನೇ ಇಲ್ಲದಿರುವಾಗ ಅಧಿಕನು ಇಲ್ಲವೆಂದು ಸುತರಾಂ ಸಿದ್ಧಿಸುತ್ತದೆ. (೧೧)

ಏ॥ ಹೀಗೆ ಅದ್ವಿತೀಯಂ ಎಂಬುದಕ್ಕೆ ತಾನು ಅರ್ಥ ಹೇಳಿ, ಈಗ ವಿಜಾತೀಯ ವಸ್ತುಗಳಿಂದ ಭೇದವಿಲ್ಲವೆಂದು ಅದ್ವಿತೀಯ ಪದವು ಏಂದು ಪರರು ಹೇಳಿದ್ದು ಅಯುಕ್ತವೆನ್ನುತ್ತಾರೆ—

ಭಾ. ॥ (೧) ನ ಚ ವಿಜಾತೀಯಭೇದವರ್ಜನಂ ನಾಮ ಕುತ್ರಚಿತ್ಪ್ರಸಿದ್ಧಂ ॥ (೨)

ತತ್ಪ್ರಮಾಣಾಭಾವಾಚ್ಚ ॥ (೩) ಏಕ ಏವಾದ್ವಿತೀಯೋ ಭಗವಾಂಸ್ತತ್ಸದೃಶಃ ಪರೋ ನಾಸ್ತೀತಿ ಚ ಶ್ರುತಿಃ । ಏಕೋ ಭಗವಾಂಸ್ತತ್ಸದೃಶಪರೌ ನ ಸ್ತಃ । ಇತಿ ಚ ॥ (೪) ವಿಜಾತೀಯಾಭಾವೇ ಯೇನಾಶ್ರುತಂ ಶ್ರುತಂ ಭವತೀತ್ಯಾದಿವಿಶೇಷಣಂ ಚ ವ್ಯರ್ಥಂ ॥ (೫) ಯಸ್ಯ ಕಸ್ಯಚಿಜ್ಜ್ಞಾನಂ ತಜ್ಜ್ಞಾನಮೇವ ಭವತೀತಿ ॥ (೬) ಅಜ್ಞಾನಮಪಿ ಜ್ಞಾನಮೇವ ಭವತಿ। ಭೇದಾಭಾವಾತ್ ॥ ೨ ॥

ಅ ॥ (೧) ವಿಜಾತೀಯ ವಸ್ತುಗಳಿಂದ ಭೇದವಿಲ್ಲವೆಂಬುವುದು ಎಲ್ಲಿಯೂ ಪ್ರಸಿದ್ಧವಲ್ಲ. (ಅಂದರೆ, ವಿಜಾತೀಯ ವಸ್ತುಗಳಿಂದ ಭೇದವಿಲ್ಲವೆಂಬುದು ಎಲ್ಲಿಯಾದರೂ ಪ್ರಸಿದ್ಧವಾಗಿದ್ದರೆ— ಅದ್ವಿತೀಯಂ ಎಂಬ ಪದಕ್ಕೆ ವಿಜಾತೀಯ ಭೇದವಿಲ್ಲ ಎಂಬ ಅರ್ಥವಾಗುತ್ತಿತ್ತು. ಆ ಅರ್ಥವೇ ಅಪ್ರಸಿದ್ಧವಾಗಿರುವಾಗ ಆ ಅರ್ಥದಿಂದ ಈ ಪದಕ್ಕೆ ಆ ಅರ್ಥವಿದೆ ಎಂಬುದು ಕೂಡಲಾರದು. ಏಕೆಂದರೆ-ವ್ಯುತ್ಪತ್ತಿಯೇ (ಅವಯವಾರ್ಥವನ್ನು ಹೇಳುವುದೇ) ಕೂಡಲಾರದು. ಅದು ಪ್ರಸಿದ್ಧವೇ ಅಲ್ಲ ಏಕೆಂದರೆ-ವಿಜಾತೀಯಗಳಾದ ಶಿಲಾದಿಗಳಿಂದ ವೃಕ್ಷಕ್ಕೆ ಭೇದವಿದ್ದರೂ ಆ ಭೇದವಿಲ್ಲವೆಂಬುದು ಎಲ್ಲಿಯೂ ಇಲ್ಲ. ಭೇದವಿಲ್ಲದಿದ್ದರೆ ವೃಕ್ಷವೇ ಶಿಲೆಯಾಗಬೇಕಾಗುವುದು. ಆಗ ಭೇದದಿಂದ ಕೂಡಿದ ವಿಜಾತೀಯ ಎಂಬುದೇ ಕೂಡದೆ ಹೋಗುವುದು.) (ಹಾಗಾದರೆ-ಶಶವಿಷಾಣಾದಿಗಳು ಅಪ್ರಸಿದ್ಧಗಳಾದರೂ ಶಶವಿಷಾಣಾದಿಪದಗಳಿಗೆ ಮೊಲದ ಕೋಡು ಎಂಬ ಅರ್ಥವಿದ್ದಂತೆಯೇ ವಿಜಾತೀಯ ಭೇದವಿಲ್ಲವೆಂಬುದು ಅಪ್ರಸಿದ್ಧವಾದರೂ ಅದ್ವಿತೀಯಂ ಎಂಬ ಪದಕ್ಕೆ ಆ ಅರ್ಥವು ಏಕೆ ಆಗಲಾರದೆಂದರೆ ಹಾಗೆ ಹೇಳಕೂಡದು. ಹಾಗೆ ಇಟ್ಟುಕೊಂಡರೆ ನಮ್ಮ ಇಷ್ಟವು ಸಿದ್ಧವಾಯಿತು. ಹೇಗೆಂದರೆ-ವಿಜಾತೀಯ ಭೇದವಿಲ್ಲವೆಂಬುವಲ್ಲಿ ಪ್ರಮಾಣವಿಲ್ಲವಾದರೆ-ವಿಜಾತೀಯ ಭೇದವಿದೆ ಎಂಬ ವಿಷಯದಲ್ಲಿ ಪ್ರಮಾಣವಿದೆ ಎಂದಾಗ ಬೇಕಾಯಿತು. (೨) ಇನ್ನೊಂದು ದೂಷಣ ಹೇಳುತ್ತಾರೆ-) **ಅದ್ವಿತೀಯಂ** ಎಂಬ ಶಬ್ದಕ್ಕೆ ವಿಜಾತೀಯವಾದ ಭೇದವಿಲ್ಲ. ಎಂಬ ಅರ್ಥದಲ್ಲಿ ಪ್ರಮಾಣವಿಲ್ಲ. (ಅಂದರೆ ಶಶವಿಷಾಣಾದಿಶಬ್ದಗಳನ್ನು ಕೇಳಿದ ಒಡನೆಯೇ ಮೊಲದ ಕೋಡು ಇತ್ಯಾದಿ ಅರ್ಥಗಳು ತೋರುವುದರಿಂದ ಶಶವಿಷಾಣಾದಿಶಬ್ದಗಳಿಗೆ ಮೊಲದ ಕೋಡು ಇದು ಮೊದಲಾದ ಅರ್ಥಗಳಿವೆ. ಎಂಬಲ್ಲಿ ಪ್ರಮಾಣವಿದ್ದಂತೆ ಇಲ್ಲಿ ಅಂತಹ ಪ್ರಮಾಣವಿಲ್ಲ.) (೩) ವೇದವಿರೋಧವಿದ್ದ ಪ್ರಯುಕ್ತವೂ ಅದ್ವಿತೀಯಶಬ್ದಕ್ಕೆ ಅದ್ವೈತಿಗಳು ಹೇಳಿದ ಅರ್ಥವು ಕೂಡುವುದಿಲ್ಲ. ಪರಂತು ನಾವು ಹೇಳಿದ ಅರ್ಥವೇ ಯುಕ್ತವು. ಎಂಬೀ ಅಭಿಪ್ರಾಯದಿಂದ ಎರಡು (1) ವೇದವಾಕ್ಯಗಳನ್ನು ಹೇಳುತ್ತಾರೆ.) ಶ್ರೀಹರಿಯು ಒಬ್ಬನೇ. ಅವನಿಗೆ ಸದೃಶನಾದವನು ಇನ್ನೊಬ್ಬನಿಲ್ಲ ಎಂದು ವೇದವು (2) ಶ್ರೀಹರಿಯು ಒಬ್ಬನೇ ಅವನಿಗೆ ಸಮಾನಿಕನೂ ಉತ್ತಮನೂ ಇಲ್ಲ. ಎಂದೂ ವೇದಪ್ರಮಾಣವಿದೆ. (೪)(ವಿಜಾತೀಯವೇ ಇಲ್ಲದಿರುವುದರಿಂದ ವಿಜಾತೀಯಭೇದವೂ ಇಲ್ಲ ಎಂದು ಹೇಳುತ್ತೀನೆ ಎನ್ನಕೂಡದು. ಏಕೆಂದರೆ-ವಿಜಾತೀಯವಿಲ್ಲವಾದರೂ ವಿಜಾತೀಯ ಭೇದವನ್ನು ಒಡಂಬಡಬೇಕು. ಭೇದವನ್ನು ಒಡಂಬಡದಿದ್ದರೆ— ಪಾರಮಾರ್ಥಿಕದಲ್ಲಿಯೂ, ಅನಿರ್ವಚನೀಯದಲ್ಲಿಯೂ ಅಸದ್ವೈಲಕ್ಷಣ್ಯವು ಸಿದ್ಧಿಸದೆ ಹೋಗುವುದು.) (ಇನ್ನೊಂದು ದೋಷ ಹೇಳುತ್ತಾರೆ—) ವಿಜಾತೀಯವಿಲ್ಲವಾದರೆ **ಯೇನಾಶ್ರುತಂ ಶ್ರುತಂ ಭವತಿ** ಇಮನೊದಲಾದ ವಿಶೇಷಣವೂ ವ್ಯರ್ಥವಾಗುವುದು (ಅಂದರೆ— ಬ್ರಹ್ಮನಿಂದ ವಿಲಕ್ಷಣವಾದ ಎರಡನೇ ವಸ್ತುವು ಇದ್ದರೆ ಬ್ರಹ್ಮನಿಗೆ ಅಶ್ರುತತ್ವ ಮೊದಲಾದ ವಿಶೇಷಣವು ಕೂಡುವುದು. ಎರಡನೇ ವಸ್ತುವೇ ಇಲ್ಲವಾದರೆ—ಅಶ್ರುತತ್ವ ಮೊದಲಾದ ವಿಶೇಷಣಗಳು ವಿರುದ್ಧವಾದ ಅರ್ಥವುಳ್ಳವುಗಳಾಗುವವು) (೫) (ವಿಜಾತೀಯವಾದುದು ಯಾವುದಾದರೊಂದನ್ನು ಒಡಂಬಟ್ಟು ಭೇದ ಮಾತ್ರವನ್ನೂ ನಿಷೇಧಿಸುತ್ತೀನೆಂದೂ ಹೇಳಕೂಡದು. ಏಕೆಂದರೆ—) (ವಿಜಾತೀಯವನ್ನು ಅಂಗೀಕರಿಸಿ ವಿಜಾತೀಯ ಭೇದಮಾತ್ರವನ್ನು ನಿರಾಕರಿಸುವುದಾದರೆ— ಘಟಾದಿಗಳಿಗೂ ಬ್ರಹ್ಮನಿಗೂ ಭೇದವಿಲ್ಲದಿರುವುದರಿಂದ ಯಾವುದಾದರೂ ಘಟಪಟಾದಿಗಳ ಜ್ಞಾನವೇ ಬ್ರಹ್ಮಜ್ಞಾನವು ಆಗಬೇಕಾಗುವುದು. (ಆದಕಾರಣ

(ಜೀವನ ವಿಜ್ಞಾತೃತ್ವದ ಅವಿದ್ಯಾತ್ಮಂ ವಿದ್ಯಾತ್ಮಂ ಕ್ಯಾಕ್ ಎಂಬುದು ಕಾಣದೆ ಹೋಗುವುದು. ಏಕೆಂದರೆ ಘಟಜ್ಞಾನವು ಜಂಡಿಯದೆ ಎಲ್ಲ ವಸ್ತುಗಳ ಜ್ಞಾನವು ಒದಗುವುದಿಲ್ಲವಷ್ಟೆ ।) (ಮತ್ತೊಂದು ದೋಷ ತೋರುತ್ತಾರೆ -) ವಿಜಾತೀಯ ಭೇದವೇ ಇಲ್ಲವಾದರೆ ಜ್ಞಾನ ಮತ್ತು ಅಜ್ಞಾನಗಳು ಪರಸ್ಪರ ವಿಜಾತೀಯ ಗಳಾದ್ದು ಅವುಗಳಿಗೆ ಭೇದವಿಲ್ಲದಿರುವುದರಿಂದ ಜ್ಞಾನವು ಜ್ಞಾನವೇ ಆಗಬೇಕಾಗುವುದು (ಏನಂತ ಅವಿದ್ಯಾತ್ಮಂ ತೆಗೆಯಬೇಡವಿದ್ದೀರಿ.) ವಿದ್ಯಾತ್ಮಂ ತೆಗೆಯಬೇಕಲ್ಲವೆ? ಕ್ಯಾಕ್ ಎಂಬ ಶಕ್ತಿಯು ಕಾಣದೆ ಹೋಗುವುದು.) ಅಥವಾ ವಿಜಾತೀಯ ಭೇದವಿಲ್ಲದಿರಬಹುದೆ – ಜಗತ್ತಿಗೂ ಬ್ರಹ್ಮಾಜ್ಞಾನಕ್ಕೂ ಅಜ್ಞಾನವು ಭೇದವಿಲ್ಲದಿರುವುದರಿಂದ ಅಜ್ಞಾನವು ಜ್ಞಾನವಾಗಲಿ ಜಗತ್ತಿಗೂ ಬ್ರಹ್ಮನಿಗೂ ಭೇದವಿಲ್ಲದಿರುವುದರಿಂದ ಅಜ್ಞಾನವು ಜ್ಞಾನವಾಗಲಿ ಜಗತ್ತೇ ಬ್ರಹ್ಮವಾಗಲಿ ಆಗಬೇಕಾಗುವುದು ॥ ೨ ॥

ಏ॥ ಯಾವುದಾವುದಿಂದು ವಸ್ತುವಿನ ಜ್ಞಾನವೇ ಬ್ರಹ್ಮಜ್ಞಾನವೆಂದು ಹೇಳಿದ್ದು ಅಯುಕ್ತವು ಸಜಾತೀಯಾದಿಗಳು ಮಿಥ್ಯೆಯು, ಬ್ರಹ್ಮನು ಸತ್ಯನು. ಎಂದು ಅವುಗಳಿಗೆ ಭೇದವಿದೆ ಆದುದರಿಂದಲೇ ಜ್ಞಾನವು ಬ್ರಹ್ಮವೇ ಎಂದು ಹೇಳಿದ್ದು ಅಯುಕ್ತವು. ಎಂದರೆ

ಭಾ. ॥ (೧) ನ ಚ ಮಿಥ್ಯಾ ಸತ್ಯಮಿತಿ ಭೇದಃ। ತಸ್ಯೈವ ವಿಜಾತೀಯತ್ವಪ್ರಾಪ್ತೇಃ॥ (೨) ತದ್ಭೇದಸ್ಯ ಮಿಥ್ಯಾತ್ವೇ ತದಭೇದಸ್ಯ ಸತ್ಯತ್ವಪ್ರಸಂಗಾಚ್ಚ ॥ (೩) ಮಿಥ್ಯಾಸತ್ಯಯೋರೈಕ್ಯೇ ಇದಂ ಮಿಥ್ಯಾ ಇದಂ ಸತ್ಯಮಿತಿ ಭೇದಾಭಾವಾನ್ನಾಜ್ಞಾನೇರಭೇದಾದೇರಪಿ ಸತ್ಯತ್ವಪ್ರಸಂಗಃ ॥ (೪) ಚಕಃ ಪುರುಷಾರ್ಥಂ ಬ್ರಹ್ಮಾತ್ಮನ್ಯಭ್ಯಸೇತ್ಸಕಲ ನ ಯುಜ್ಯತೇ ॥ (೫) ಅತಃ ಸಜಾತೀಯಂ ಸ್ವಗತಭೇದಾಽಧಿಕಾಮ್ಯಂ ವಿಜಾತೀಯಂ ಚಾತ್ರ ನಿಷಿದ್ಧ್ಯತೇ ॥ ೩ ॥

ಅ ॥ (೧) ಮಿಥ್ಯೆಯು ಸತ್ಯವು. ಎಂಬ ಭೇದವಿಲ್ಲ ಏಕೆಂದರೆ ಅದೇ ವಿಜಾತೀಯವಾಗಿ ಪೀಕಾಗುವುದು. (ಏಂದರೆ ಘಟಾದಿಗಳಿಗೂ ಬ್ರಹ್ಮನಿಗೂ ಮಿಥ್ಯಾತ್ವ ಸತ್ಯತ್ವಗಳಿಂದ ಭೇದವನ್ನು ಅಂಗೀಕರಿಸಿದರೆ ಬ್ರಹ್ಮನಿಂದ ಘಟಾದಿ ವಿಲಕ್ಷಣವಾದ ಮಿಥ್ಯೆಯಾದ ಘಟಾದಿಗಳು. ಆದುದರಿಂದ ಅವುಗಳಿಗೆ ವಿಜಾತೀಯತ್ವವನ್ನು ಒಪ್ಪಬೇಕಾಗುವುದರಿಂದ ವಿಜಾತೀಯ ಭೇದವಿಲ್ಲದಿರುವುದು ಅದ್ವಿತೀಯ ಎಂಬ ಶಬ್ದದ ಅರ್ಥವನ್ನ ಎಂಬುದಾಯಿತು.) (೨) (ಮಿಥ್ಯಾ ಸತ್ಯಗಳಿಗೆ ಇದ್ದ ಭೇದವು ಸತ್ಯವಾದರೆ ಏನು ಹೇಳಿದ್ದು ಅಯುಕ್ತವಿತ್ತು ಭೇದವು ಸತ್ಯವು ಇದರಲ್ಲಿ ಭೇದವು ಮಿಥ್ಯೆಯೇ ಏನಂತೆ ಮಿಥ್ಯಾಭೂತವಾದ ವಿಜಾತೀಯ ಭೇದವು ಇದ್ದರೂ ಅದು ಸಿದ್ಧಯಾಮದಿಂದ ಅದ್ವಿತೀಯವಂ ಎಂಬ ನಿರ್ದೇಶವು ಯುಕ್ತವಾಗುತ್ತದೆ. ಎಂದರೆ –) ಮಿಥ್ಯಾ ಸತ್ಯಗಳಿಗಿದ್ದ ಭೇದವು ಮಿಥ್ಯೆಯು (ಸುಳ್ಳು) ಎಂದಾದರೆ ಮಿಥ್ಯಾ ಸತ್ಯಗಳ ಅಭೇದವು ಸತ್ಯವಾಗಿರುವುದು. (ಪರಸ್ಪರ ವಿರುದ್ಧಗಳಾದ ಎರಡರಲ್ಲಿ ಒಂದನ್ನು ನಿಷೇಧಿಸಿದಾಗ ಮತ್ತೊಂದು ಸಿದ್ಧವಾಗುವುದು. ಶಕ್ತಿ (ಮುತ್ತಿನ ಚಿಪ್ಪು) ಯಲ್ಲಿ ಶುಕ್ತಿಭೇದವು ಸುಳ್ಳಾದಾಗ ಶುಕ್ತ್ಯಭೇದವು ಸತ್ಯವೆಂದು ಸಿದ್ಧವಾಗುತ್ತದೆ. ಏನಂತ ಘಟಪಟಾದಿಗಳಿಗೆ ಬ್ರಹ್ಮತ್ವವೂ, ಅಜ್ಞಾನಕ್ಕೆ ಜ್ಞಾನತ್ವವೂ, ಒದಗಬೇಕಾಗುವುದೆಂದು ಹೇಳಿದ್ದು ಯುಕ್ತವಾದೀತ. ।) (ಇದರಿಂದಲೇ ಸಜಾತೀಯ ವಸ್ತುಗಳಿಂದ ಭೇದವಿಲ್ಲದಿರುವುದು ವಿಕಲ್ಪನೆಯ ಎಂಬ ವಸ್ತುವಿದ್ದ ವಿಷ ಎಂಬ ಅವಧಾರಣದ ಅರ್ಥವು, ಎಂದು ಪರರು ಹೇಳಿದ್ದು ಅಯುಕ್ತವೆಂದು ಸಿದ್ಧವಾಯಿತು. ಹೇಗೆಂದರೆ - ಸಜಾತೀಯ ವಸ್ತುಗಳಿಂದ ಭೇದವಿಲ್ಲವೆಂಬುದು ಎಲ್ಲಿಯೂ ಪ್ರಸಿದ್ಧವಾಗಿಲ್ಲ ಒಂದು ವೈಜ್ಞಿಕ್ಕೆ ಮತ್ತೊಂದು ವೈಜ್ಞಿಕದಿಂದ ಭೇದವಿದೆ. ಪರಂತು, ಭೇದವಿಲ್ಲವೆಂಬುವುದು ಎಲ್ಲಿಯೂ ಇಲ್ಲ. ಭೇದವಿಲ್ಲವೆಂದಾಗೀಕರಿಸಿದರೆ–ಎಂದು ವೈಜ್ಞಿಕ್ಕೆ ಇನ್ನೊಂದು ವೈಜ್ಞಿಕದ ಅಭೇದವು ಬರಬೇಕಾಗುವುದು. ಆದುದರಿಂದ ಸಾಜಾತ್ಯವೇ (ಒಂದೇ ಮರದ ಸತ್ಯಶಾತೀಯವು ಎಂಬುದೇ) ಕೂಡದೆ ಹೋಗುವುದು.) (೩) (ಹೀಗೆ ಸಜಾತೀಯ ವಿಜಾತೀಯ ಸ್ವರೂಪಗಳನ್ನು ವಿಚಾರಮಾಡಿ ಈಗ ಅವುಗಳಿಗೆ ಭೇದವನ್ನು ಅಂಗೀಕರಿಸದಿದ್ದರೆ

ಇನ್ನೊಂದು ದೋಷ ಹೇಳುತ್ತಾರೆ-) ಮಿಥ್ಯೆ ಸತ್ಯಗಳು ಒಂದೆಯಾದರೆ ಇದು ಸತ್ಯವು, ಇದು ಮಿಥ್ಯೆಯು, ಎಂಬ ಭೇದವಿಲ್ಲದ್ದರಿಂದ ಜೀವೇಶ ಜೀವ ಪರಮಾತ್ಮ ಭೇದ ಮೊದಲಾದವುಗಳೂ ಸತ್ಯವಾಗಬೇಕಾಗುವುವು. (ಸತ್ಯನೇ ಎಂದು ಒಡಂಬಟ್ಟ ಬ್ರಹ್ಮನಿಗೂ ಮಿಥ್ಯಾತ್ವವು ಬರಬೇಕಾಗುವುದು) (ಅಂದರೆ—ಮಿಥ್ಯೆಯಾದ ಸಜಾತೀಯಕ್ಕೂ ವಿಜಾತೀಯಕ್ಕೂ ಸತ್ಯನಾದ ಬ್ರಹ್ಮನಿಗೂ ಐಕ್ಯವನ್ನಂಗೀಕರಿಸಿದರೆ-ಆಗ ಎಲ್ಲಾ ವಸ್ತುಗಳೂ ಮಿಥ್ಯೆಯೇ ಆಗಬೇಕಾಗುವುವು. ಅಥವಾ ಎಲ್ಲವೂ ಸತ್ಯವೇ ಆಗಬೇಕಾಗುವುವು. ಇದು ಮಿಥ್ಯೆಯು, ಇದು ಸತ್ಯವು, ಎಂಬ ಭೇದ ಜ್ಞಾನವು ಇಲ್ಲವಷ್ಟೆ. ಏನಂಚ ಒಂದೇ ಪ್ರಕಾರವಾದುದರಲ್ಲಿ ಇದು ಸತ್ಯ ಇದು ಮಿಥ್ಯೆಯೆಂಬ ಭೇದವಿಲ್ಲದಿರುವುದರಿಂದ ಬ್ರಹ್ಮನಿಗೂ ಮಿಥ್ಯಾತ್ವವಾಗಲೀ ಜೀವೇಶ ಭೇದಾದಿಗಳಿಗೆ ಸತ್ಯತ್ವವಾಗಲೀ ಬರಬೇಕಾಗುವುದು.) (೪) (ಹಾಗೆ ಇಟ್ಟುಕೊಂಡರೆ ಬ್ರಹ್ಮನೊಬ್ಬನೇ ಪರಮಾರ್ಥ ಸತ್ಯನು, ಬೇರೆ ಎಲ್ಲವೂ ಮಿಥ್ಯೆಯು, ಎಂಬ ಅದ್ವೈತಿಗಳ ಸಿದ್ಧಾಂತವು ಕೂಡದೇ ಹೋಗುವುದೆನ್ನುತ್ತಾರೆ—) ಬ್ರಹ್ಮನಿಗೆ ಮಿಥ್ಯಾತ್ವವನ್ನೂ ಜೀವೇಶ ಭೇದಾದಿಗಳಿಗೆ ಸತ್ಯತ್ವವನ್ನೂ ಅಂಗೀಕರಿಸಿದುದರಿಂದ ಪರಬ್ರಹ್ಮನೊಬ್ಬನೇ ಪಾರಮಾರ್ಥಿಕ ಸತ್ಯನು, ಬೇರೆ ಎಲ್ಲವೂ ಮಿಥ್ಯೆಯಾದುದು. (ಸುಳ್ಳು) ಎಂಬುದು ಕೂಡುವುದಿಲ್ಲ. (೫) ಆದಕಾರಣ ಸಜಾತೀಯವಾದ ಸ್ವಗತ ಭೇದವೂ ವಿಜಾತೀಯವಾದ ಉತ್ತಮವಾದುದೂ ಈ ವಾಕ್ಯದಲ್ಲಿ ನಿಷೇಧಿಸಲ್ಪಡುತ್ತದೆ. ಅಂದರೆ—ವಿಕಮೇವಾದ್ವಿತೀಯಂ ಎಂಬ ವೇದ ವಾಕ್ಯದಲ್ಲಿ ಅದ್ವಿತೀಯಂ ಎಂಬ ಪದದಿಂದ ಸದೃಶವಾದ ಸಜಾತೀಯವೂ, ವಿಕಮೇವ ಎನ್ನುವುದರಿಂದ ಸ್ವಗತ ಭೇದವೂ ಅದ್ವಿತೀಯ ಪದದಿಂದಲೇ ಅಧಿಕ (ಉತ್ತಮ) ವಾದ ವಿಜಾತೀಯವೂ ನಿಷೇಧಿಸಲ್ಪಡುತ್ತದೆ; ಎಂದೇ ಅರ್ಥವನ್ನು ಇಟ್ಟುಕೊಳ್ಳಬೇಕು. (ನಿಕೃಷ್ಟವಾದ ವಿಜಾತೀಯವು ಇದ್ದಪ್ಪಯುಕ್ತ ಅಧಿಕಾಖ್ಯಂ ಎಂದು ಹೇಳಿರುವರು ಅಂದರೆ -ಹೀನವಾದ ವಿಜಾತೀಯವು ಇದೆ. ಉತ್ತಮವಾದ ವಿಜಾತೀಯವು ಇಲ್ಲ)

॥ ೩ ॥

ಏ—ಕೇಳುವವನ ಮನಸ್ಸು ಕಳವಳಪಡಬಾರದೆಂಬ ಅಭಿಪ್ರಾಯದಿಂದ ವಿಕಮೇವಾದ್ವಿತೀಯಂ ಎಂಬುದಕ್ಕೆ ಅರ್ಥಹೇಳಿ ಈಗ ಅಪ್ರತಿಪತ್ತಿ (ಜಿಜ್ಞಾರ್ಥಗಳು ತಿಳಿಯದಿರುವಿಕೆ) ವಿಪ್ರತಿಪತ್ತಿ (ವಿರುದ್ಧಾರ್ಥಗಳನ್ನು ಹೇಳುವ ಎರಡು ವಾಕ್ಯಗಳಿಂದುಂಟಾಗುವ ಸಂಶಯ) ಗಳನ್ನು ಹೋಗಲಾಡಿಸುವುದಕ್ಕಾಗಿ **ಸದೇವ ಸೋಮ್ಯ** ಇದು ಮೊದಲಾದ ಪ್ರಕರಣಕ್ಕೆ ಪ್ರಮಾಣವನ್ನು ಹೇಳಿ ಅರ್ಥಹೇಳುತ್ತಾರೆ—

ಭಾ. ॥ (೧) ಸರ್ವೋತ್ತಮತ್ವಾತ್ಸನ್ನಾಮಾ ಹರಿರ್ನಾರಾಯಣಃ ಪ್ರಭುಃ ॥ (೨) ಸೋಽಸೃಜತ ಥಮಂ ದೇವೀಂ ತೇಜಆಖ್ಯಾಂ ಶ್ರಿಯಂ ಸತೀಂ ॥ (೩) ತತೇ(ತ್ರ) ಸ್ಥಿತೇನ ರೂಪೇಣ ಸಾಽಜೈವ ಪಿ ಯತಃ ಸದಾ । ತೇಜ ಇತ್ಯುಚ್ಯತೇ ತಸ್ಮಾಜ್ಜನೈರ್ವಾ ತತ ಏವ ತು ॥ (೪) ಯದಸ್ಯಾಃ ಸೃಷ್ಟಿಕೃದ್ರೂಪಂ ವಿದ್ಯಾಖ್ಯಂ ಜಾಯತೇ ಹರೇಃ ॥ (೫) ಮನ್ನಾಖ್ಯಃ ಪ್ರಾಣ ಏವಾಸ್ಯಾ ಅಮ್ನಾಮಾ ಜಾಯತೇಽಥ ಚ (ಹರೇಃ) । ಬ್ರಾಹ್ಮಣಾದಿಚತುರ್ವರ್ಣಃ॥ (೬) ತತಶ್ಚಾನ್ನಾಭಿಧೋ ಹರಃ ॥ (೭) ತೇಜಸ್ಸಂಜ್ಞಾ ಚ ಸಾ ದೇವೀ ಪ್ರಾಣೋಽಪ್ಸು ಸ್ಥಿತ ಏವ ಚ । ತತಸ್ತೇಜಸ ಏವಾಽಪೋ ಜಾಯಂತೇ ॥ (೮) ಽನ್ನಸ್ಥಿತೋ ಹರಃ । ಜಾಯತೇऽಽಹೋಽಧ್ಯ ಏವಾನ್ನಂ ಪೃಥಿವೀ ತ್ವನ್ನರೂಪಿಣೀ ॥ ೧,೨,೩,೪ ॥ ಇತಿ ದ್ವಿತೀಯಃ ಖಂಡಃ ॥ ೪–೪ ॥

॥ ೪ ॥

ಅ ॥ (೧) ಸರ್ವಸಮರ್ಥನಾದ ನಾರಾಯಣನು †ಸರ್ವೋತ್ತಮನಾಮದರಿಂದ ಸತ್ ಎನಿಸುತ್ತಾನೆ.

† (1) ಸತ್ ಇತ್ಯಸ್ತಿತಾಮಾತ್ರಂ ಸೂಕ್ಷ್ಮಂ ನಿರ್ವಿಶೇಷಂ ಸರ್ವಗತಮೇಕಂ ನಿರಂಜನಂ ನಿತ್ಯಂ ನಿರವಯವಂ

ದನು. ಮುಖ್ಯಪ್ರಾಣನು ಹುಟ್ಟಿದ ಮೇಲೆ ಬ್ರಾಹ್ಮಣಾದಿ ನಾಲ್ಕು ವರ್ಣಗಳಿಗೆ ಅಭಿಮಾನಿಯಾದ ಕ್ಷತ್ರ ಚತುರ್ಮುಖಬ್ರಹ್ಮನೂ ಲಕ್ಷ್ಮೀದೇವಿಯಿಂದ ಹುಟ್ಟಿದನು. (೬) (**ತಾ ಅನ್ನಮಸೃಜಂತ** ಎಂಬುದಕ್ಕೆ ಅರ್ಥಹೇಳುತ್ತಾರೆ –) ಜಲಗಳಿಗೆ ಅಭಿಮಾನಿಯಾದ ವಾಯುವಿನಿಂದ ಅನ್ನ (ಪೃಥಿವೀ) ಕ್ಕೆ ಅಭಿಮಾನಿಯಾದ ರುದ್ರನು ಹುಟ್ಟಿದನು. (೭) (ಇಲ್ಲಿ ತೇಜಸ್ಸು ಮೊದಲಾದ ಶಬ್ದಗಳು ದೇವತೆಗಳನ್ನು ಹೇಳುವುದಾದರೆ **ತಸ್ಮಾದ್ಯತ್ರ ಕ್ವ ಚ ಶೋಚತಿ ಸ್ವೇದತೇ ವಾ ಪುರುಷಃ ತೇಜಸಃ ಆಪೋ ಜಾಯಂತೇ** ಇತ್ಯಾದಿ ಮಾತು ಅಯುಕ್ತವಾಗಬೇಕಾಗುವುದು. ಒಬ್ಬ ದೇವತೆಯಿಂದ ಇನ್ನೊಬ್ಬ ದೇವತೆಯು ಹುಟ್ಟಿದನೆಂಬುವುದಕ್ಕೆ ಭೂತಗಳಿಗೆ ಕಾರ್ಯಕಾರಣಭಾವ ಹೇಳಿದ್ದು ಪ್ರಮಾಣವಾಗಲಾರದು, ಎಂದರೆ—ಅಭಿಮಾನಿಗಳಾದ ದೇವತೆಗಳನ್ನು ಅಭಿಮಾನ್ಯಮಾನ (ನಿಯಮ್ಯ)ಗಳಾದ ತೇಜಸ್ಸು ಮೊದಲಾದ ಭೂತ (ಜಡ) ಗಳನ್ನು ಸೃಷ್ಟಿಮಾಡಿದನೆಂದು ಇಟ್ಟುಕೊಳ್ಳಬೇಕೆನ್ನುತ್ತಾರೆ-) ಲಕ್ಷ್ಮೀದೇವಿಯು ತೇಜಸ್ಸಿಗೆ ನಿಯಾಮಕಳಾಗಿ ತೇಜಸ್ಸಿನಲ್ಲಿರುವನಳು. ಮುಖ್ಯಪ್ರಾಣನು ಜಲಗಳಿಗೆ ನಿಯಾಮಕನಾಗಿ ಜಲಗಳಲ್ಲಿರುವವನು. ಆದಕಾರಣ ಘರ್ಮಾ (ತಾಪಾ) ದಿ ರೂಪವಾದ ಪ್ರಸಿದ್ಧ ತೇಜಸ್ಸಿನಿಂದಲೇ ಸ್ವೇದಾ (ಬೆವರು) ದಿ ರೂಪಗಳಾದ ಜಲಗಳು ಹುಟ್ಟುತ್ತವೆ. (೮) (**ತಸ್ಮಾದ್ಯತ್ರ ಕ್ವಚ ವರ್ಷತಿ ತದೇವ ಭೂಯಿಷ್ಠಮನ್ನಂ** ಎಂಬುವ ವಾಕ್ಯಾರ್ಥವನ್ನು ಸಂಬಂಧಕೊಟ್ಟು ವಿವರಿಸುತ್ತಾರೆ –) ಅನ್ನಾ (ಪೃಥಿವೀ ಭಿಮಾನಿಯಾದ ರುದ್ರನು ಜಲಾಭಿಮಾನಿಯಾದ ಪ್ರಾಣನಿಂದಲೇ ಹುಟ್ಟುತ್ತಾನೆ ಜಲಗಳಿಂದಲೇ ಅನ್ನವು ಹುಟ್ಟುತ್ತದೆ. (ಹಾಗಾದರೆ ಬೇರೆ ಕಡೆ ವೇದದಲ್ಲಿ **ಅದ್ಭ್ಯಃ ಪೃಥಿವೀ । ಪೃಥಿವ್ಯಾಃ ಓಷಧಯಃ । ಓಷಧಿಭ್ಯೋಽನ್ನಂ** ಎಂದು ಓಷಧಿಗಳಿಂದ ಅನ್ನವು ಹುಟ್ಟಿದ್ದೆಂದು ಹೇಳಿದೆ. ಇಲ್ಲಿ ಜಲಗಳಿಂದ ಅನ್ನಸೃಷ್ಟಿಯೆಂದು ಹೇಳಿದೆ. ವಿರುದ್ಧವಾದ ಪ್ರಯುಕ್ತ ಇದು ಹೇಗೆ ಕೂಡುತ್ತದೆಂದರೆ--) ಇಲ್ಲಿ ಅನ್ನ ಶಬ್ದದಿಂದ ಪ್ರಸಿದ್ಧಾನ್ನವನ್ನು ಹೇಳುವುದಲ್ಲ. ಪೃಥಿವಿಯನ್ನೇ ಇಟ್ಟುಕೊಳ್ಳಬೇಕು. ಪಂಚಭೂತಗಳನ್ನೇ ಹೇಳುತ್ತಾ ಬಂದುದು **ಯತ್ಕೃಷ್ಣಂ ತದನ್ನಸ್ಯ** ಎಂದು ಅನ್ನಕ್ಕೆ ಕೃಷ್ಣರೂಪವು ತೋರುತ್ತದೆ. ಆ ರೂಪವು ಪೃಥಿವಿಯಲ್ಲಿಯೇ ಇರುವುದು. ಮತ್ತು **ಪೃಥಿವೀ ವಾ ಅನ್ನಂ** ಎಂದು ಅನ್ನಶಬ್ದದಿಂದ ಪೃಥಿವಿಯನ್ನು ಇಟ್ಟುಕೊಳ್ಳಬೇಕೆಂದೂ ಹೇಳಿಯಿದೆ. ಆದುಕಾರಣ ಇಲ್ಲಿ ಅನ್ನಶಬ್ದದಿಂದ ಪೃಥಿವಿಯನ್ನೇ ಇಟ್ಟುಕೊಳ್ಳಬೇಕು. ೬–೮ ॥ ೪ ॥

ಎರಡನೇ ಖಂಡವು ಮುಗಿಯಿತು.

೩ನೇ ಖಂಡವು

ತೇ—ತೇಜಸ್ಸು, ಅಪ್ ಅನ್ನಾ ಭಿಮಾನಿ ದೇವತೆಗಳಿಗೂ ಆ ಭೂತ (ಜಡ) ಗಳಿಗೂ ಉತ್ಪತ್ತಿ ಹೇಳಿ ಅವುಗಳಿಗೆ ಸರ್ವ ವಸ್ತುಗಳಿಗಿಂತಲೂ ಪ್ರಾಧಾನ್ಯವನ್ನು ತಿಳಿಸುವುದಕ್ಕಾಗಿ ಅವುಗಳು ಸಮಸ್ತಭೂತಗಳಿಗೂ ಕಾರಣಗಳಾಗಿವೆ, ಎಂಬ ಮಹಿಮೆ ಹೇಳುತ್ತಾರೆ—

ಓಂ ॥ ತೇಷಾಂ ಖಲ್ವೇಷಾಂ ಭೂತಾನಾಂ ತ್ರೀಣ್ಯೇವ ಬೀಜಾನಿ ಭವಂತ್ಯಂಡಜಂ ಜೀವಜಮುದ್ಭಿಜ್ಜಮಿತಿ ॥ ೧ ॥

: ವಾಯುವೇ ಮುಂದೆ ಬ್ರಹ್ಮನಾಗಬೇಕೆಂದು ತೋರಿಸುವುದಕ್ಕಾಗಿ ವಾಯುವಿನ ಸೃಷ್ಟಿಯನ್ನು ಮೊದಲು ಹೇಳಿದ್ದು. ವಾಯುರೇವ ಮುತ್ಯೋ ಬ್ರಹ್ಮಪದಂ ಪ್ರಿಯಮುತ್ಯೋ ವ್ರತೇಶ್ ಎಂದು ಬ್ರಹ್ಮತರ್ಕದಲ್ಲಿದೆ.

ಅ ॥ ಪ್ರಸಿದ್ಧರಾದ ಮುಂದೆ ಹೇಳುವ ಅಂದರೆ ಅಂಡಜ (ಮೊಟ್ಟೆಯಲ್ಲಿ ಹುಟ್ಟುವ) ಪಕ್ಷಿ ಮೊದಲಾದವು. ಜರಾಯು (ಗರ್ಭದ ಮುಸುಕು) ಯಿಂದ ಹುಟ್ಟುತ್ತಿರುವ ಮನುಷ್ಯ ಮೊದಲಾದವರು. ಭೂಮಿಯನ್ನು ಭೇದಿಸಿಕೊಂಡು ಹುಟ್ಟುತ್ತಿರುವ ವೃಕ್ಷ ಮೊದಲಾದವು. ಸ್ವೇದ (ಬೆವರು) ದಿಂದ ಹುಟ್ಟುತ್ತಿರುವ ಹೇನು ತಗಣಿ ಮೊದಲಾದವು. ಇವೆಲ್ಲಾ ಪ್ರಾಣಿಗಳಿಗೆ ಏಂದು ಹೇಳಿದ ಮೂರು ತೇಜೋಒನ್ನಗಳೇ ಕಾರಣಗಳಾಗಿ ...

ಟೀ--ಭೂತಗಳಿಂದೊತಗೂಡಿದ ತೇಜಃ ಅಪ್ ಅನ್ನವೆಂಬ ಮೂರು ದೇವತೆಗಳನ್ನು ಸೃಷ್ಟಿಮಾಡಿದ ಮೇಲಿನ ಪ್ರಕರಣವ್ಯಾಖ್ಯಾನರೂಪಗಳನ್ನು ವೇದವು ಹೇಳುತ್ತದೆ --

ಉ. ॥ ಸೇಯಂ ದೇವತೈಕ್ಷತ ಹಂತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣೀತಿ॥ ೨ ॥

ಅ ॥ ಸದೇವ ಎಂಬಲ್ಲಿ ಹೇಳಲ್ಪಟ್ಟ ತೇಜೋಒನ್ನಗಳನ್ನು ಸೃಷ್ಟಿಮಾಡಿರತಕ್ಕ ವಿಷ್ಣುವೆಂಬ ದೇವತೆಯು, ಆನಾಮ, ಭೂತಗಳಿಂದೊತಗೂಡಿದ ತೇಜೋಒನ್ನ ಎಂಬ ಸ್ವರೂಪಗಳಿಂದ ಹೇಳಲ್ಪಡತಕ್ಕ ಒಕ್ಕೂಟವಾಗಿ, ಮೂರೆಂಬ ದೇವತೆಗಳಲ್ಲಿ ಜೀವನೆಸರಿನಿಂದ ಆನಿಯಮಿಸಲ್ಪಟ್ಟ ಅಂತರ್ಯಾಮಿರೂಪದಿಂದ ಪ್ರವೇಶಿಸಿ ಶಬ್ದ ಅರ್ಥಗಳೆಂಬ ಪ್ರಕಾಶಗಳಿರುವಂತೆ ಸೃಷ್ಟಿಸುವೆನು' ಎಂದು ಆಲೋಚಿಸಿದನು. ॥ ೨ ॥

ಟೀ --ವಿವಾರಾಂತರವನ್ನು ಹೇಳುತ್ತಾರೆ

ಉ ॥ ತಾಸಾಂ ತ್ರಿವೃತಂ ತ್ರಿವೃತಮೇಕೈಕಾಂ ಕರವಾಣೀತಿ ಸೇಯಂ ದೇವತೇಮಾಸ್ತಿಸ್ರೋ ದೇವತಾ ಅನೇನೈವ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರೋತ್ ॥ ೩ ॥

ಅ ॥ ಶಬ್ದ ಅರ್ಥಗಳೆಂಬ ಜಗತ್ತನ್ನು ಸೃಷ್ಟಿಸುವುದಕ್ಕಾಗಿ ಆ ದೇವತೆಗಳಲ್ಲಿ ಒಬ್ಬೊಬ್ಬರನ್ನೂ, ಮತ್ತು ಆ ದೇವತೆಗಳು ಆಭವಾನಿಗಳಾಗ್ಯೂ ತೇಜಸ್ಸು ಮೊದಲಾದವುಗಳಲ್ಲಿ ಒಂದೊಂದನ್ನೂ ಮೂರು ಮೂರರಿಂದ ಕೂಡಿದವನ್ನಾಗಿ (ಪರಸ್ಪರ ಪ್ರವೇಶಮಾಡಿದವನ್ನಾಗಿ) ಮಾಡುವೆನೆಂದೂ, ಮೂರು ದೇವತೆಗಳಿಂದ ಮೂರು ತೇಜಸ್ಸಾಂಶಗಳನ್ನೂ ತೇಜಸ್ಸು ಜಲ ಪೃಥ್ವಿಗಳಿಂದ ಮೂರು ಜಡಾಂಶಗಳನ್ನೂ ತೆಗೆದು ಆ ಆರು ಅಂತಗಳನ್ನು ಮಿಶ್ರೀಕರಿಸಿ, ತೇಜಸ್ಸು ಜಲ ಪೃಥ್ವಿಗಳನ್ನು ಪರಸ್ಪರ ಮಿಶ್ರಗಳಾಗಿರುವ ಮೂರು ವಸ್ತುಗಳನ್ನಾಗಿ ಮಾಡುವೆನೆಂದೂ ಶ್ರೀಹರಿಯು ಆಲೋಚಿಸಿದನು. ಅಮೇಲೆ ಆ ಶ್ರೀಹರಿಯು ಈ ದೇವತೆಗಳಲ್ಲಿ ಆನಿದ್ದುರೂಪದಿಂದ ಪ್ರವೇಶಿಸಿ ಆ ಮೂರು ದೇವತೆಗಳಿಂದ ಇಂದ್ರಾದಿಗಳಿಗೆ ನಾಮರೂಪಗಳನ್ನು ಮಾಡಿದನು. ಆ ದೇವತೆಗಳ ಮುಳ್ಳಲ್ಲಿ ಒಬ್ಬೊಬ್ಬರನ್ನು ಹೊರದುಮೂವರಿಂದ ಕೂಡಿದವರನ್ನಾಗಿಯೂ ಪರಸ್ಪರ ಪ್ರವೇಶಮಾಡಿದವರನ್ನಾಗಿಯೂ ಮಾಡಿದನು. ಹೀಗೆಯೇ ಅಗ್ನಿ ಸೋಮ ಸೂರ್ಯಾದಿಗಳಿಗೂ ನಾಮರೂಪಗಳನ್ನು ಮಾಡಿದನು. ಈ ಪ್ರಕಾರ ಏಯಮ್ಯಗಳಾದಿ ಭೂತಗಳಿಂದೊಡಗೂಡಿದ ದೇವತೆಗಳನ್ನು ಪ್ರವೇಶಮಾಡಿ, ದೇವಾದಿಗಳಿಗೆ ಇಂದ್ರಾಗ್ನ್ಯಾದಿ ನಾಮಗಳನ್ನೂ, ಅಯಾಯ ಶರೀರಾದಿರೂಪ ವಸ್ತುಗಳನ್ನೂ ಸೃಷ್ಟಿಸಿದನು. ಅದರಂತೆಯೇ ದಾನವರಿಗೂ ಮನುಷ್ಯರಿಗೂ ನಾಮರೂಪಗಳನ್ನಿತ್ತನು॥

ಉ. ॥ ತಾಸಾಂ ತ್ರಿವೃತಂ ತ್ರಿವೃತಮೇಕೈಕಾಮಕರೋದ್ಯಥಾ ತು ಖಲು

ಸೋಮ್ಯೇಮಾಸ್ತಿಸ್ರೋ ದೇವತಾಸ್ತ್ರಿವೃತ್ತ್ರಿವೃದೇಕೈಕಾ ಭವತಿ ತನ್ಮೇ ವಿಜಾನೀಹೀತಿ ॥ ಇತಿ ತೃತೀಯಃ ಖಂಡಃ ॥ ೮–೩ ॥ ॥ ೪ ॥

ಅ ॥ ಆ ದೇವತೆಗಳಲ್ಲಿ ಒಬ್ಬೊಬ್ಬರನ್ನು ಮೂವರು ಮೂವರಿಂದ ಕೂಡಿದವರನ್ನಾಗಿ ಶ್ರೀಹರಿಯು ಮಾಡಿದನು. ಹೇಗೆಂದರೆ—ಎಲೋ ಮಗನೇ, ಈ ಮೂರು ದೇವತೆಗಳು ಒಬ್ಬೊಬ್ಬರು ಮೂವರು ಮೂವರಿಂದ ಕೂಡಿದವರು ಹೇಗೆ ಆಗುತ್ತಾರೋ, ಹೇಗೆ ಎಲ್ಲಾ ವಸ್ತುವೂ ಅವರಿಂದಲೇ ಹುಟ್ಟಿದ್ದು ಎಂಬುದು ಆಗುತ್ತದೋ, ಸರ್ವ ಪ್ರಾಣಿಗಳ ನಾಮರೂಪಗಳೂ ಆ ಮೂವರು ದೇವತೆಗಳ ಅಧೀನಗಳು ಎಂಬುದು ಹೇಗೋ, ಅವೆಲ್ಲವನ್ನೂ ನಾನು ನಿನಗೆ ಹೇಳುತ್ತೇನೆ: ನನ್ನಿಂದ ತಿಳಿದುಕೋ (ತಿಳಿದರೆ ನಾನು ಮಹಾ ಪ್ರಾಜ್ಞನು, ಯಾರಿಗೂ ನಮಸ್ಕರಿಸಲಿಕ್ಕಿಲ್ಲ ಎಂಬ ದುರಹಂಕಾರವನ್ನು ಬಿಟ್ಟು ಬಿಡುವಿ.) ಎಂದು ತಂದೆಯಾದ ಉದ್ದಾಲಕರು ಹೇಳಿದರು.

ವಿ ॥ (1) ಇಲ್ಲಿ ದೇವತೆಗಳನ್ನು ಮೂವರು ಮೂವರಿಂದ ಕೂಡಿದವರನ್ನಾಗಿ ಮಾಡಿದ ಮೇಲೆ ನಾಮರೂಪಗಳನ್ನು ಮಾಡಿದನು ಎಂದು ಹೇಳಿದುದರಿಂದ ಪೂರ್ವದಲ್ಲಿ ತ್ರಿವೃತ್ಕರಣ, ಆ ಮೇಲೆ ಶಬ್ದ ಪ್ರಪಂಚ, (ಹೆಸರಿಡುವುದು) ಅರ್ಥಪ್ರಪಂಚ (ವಸ್ತುಸೃಷ್ಟಿ) ಗಳನ್ನು ಮಾಡಿದ್ದು, ಎಂಬ ತಿಳಿಯಬೇಕು. ತ್ರಿವೃತ್ಕರಣ ಪೂರ್ವಕವಾಗಿ ನಾಮರೂಪಗಳನ್ನು ಮಾಡಿದವನು ಶ್ರೀವಿಷ್ಣುವೇ. (2) ಪೂರ್ವದಲ್ಲಿ ಅಭಿಮನ್ಯಮಾನಗಳಾದ ತೇಜಸ್ಸು ಮೊದಲಾದವುಗಳಿಂದೊಡಗೂಡಿದ ಲಕ್ಷ್ಮ್ಯಾದಿಗಳಲ್ಲಿ ಪ್ರವೇಶ ಮಾಡಿ ಅವರವರ ಅಂಶಗಳಿಂದ ಒಬ್ಬೊಬ್ಬರನ್ನು ಮೂವರು ಮೂವರನ್ನು ಸೇರಿಸಿ *ಅವರಿಂದ ಇಂದ್ರ ಮೊದಲಾದ ನಾಮ ರೂಪಗಳನ್ನು ಮಾಡಿದನು. ಅವರಲ್ಲಿಯೂ ತೇಜಸ್ಸು ಮೊದಲಾದ ದೇವತೆಗಳ ಅಂಶಗಳಿಂದ ಪ್ರವೇಶಿಸಿ ಆ ಅಂಶಗಳನ್ನು ಮಿಶ್ರೀಕರಿಸಿ ಆ ದೇವತೆಗಳಿಂದ ಅಗ್ನಿ ಮೊದಲಾದ ನಾಮರೂಪಗಳನ್ನು ಸೃಷ್ಟಿಸಿದನು. ಪುನಃ ಅಗ್ನಿ ಮೊದಲಾದ ಎಲ್ಲಾ ದೇವತೆಗಳಲ್ಲಿಯೂ ತೇಜಸ್ಸು ಅಪ್ ಅನ್ನ ದೇವತೆಗಳನ್ನು ಪ್ರವೇಶಿಸಿದರು. (3) ಹೀಗೆ ಅಗ್ನಿ ಮೊದಲಾದವರೆಲ್ಲರೂ, ಸಾಕ್ಷಾತ್ತಾಗಿ ಅಥವಾ ಪರಂಪರೆಯಾಗಿ ತೇಜೋಬನ್ನ ರೆಂಬಲಕ್ಷ್ಮ್ಯೇ ಪ್ರಾಣರುದ್ರರಿಂದಲೇ ಹುಟ್ಟಿದವರು. (4) ಎಲ್ಲಾ ಪ್ರಾಣಿಗಳ ನಾಮರೂಪಗಳೂ ಕೂಡ ತೇಜಸ್ಸು ಅಪ್ ಅನ್ನಾದಿಗಳಿಗೆ ಅಭಿಮಾನಿಗಳಾದ ಲಕ್ಷ್ಮ್ಯೇ ಪ್ರಾಣ ರುದ್ರಾದಿಗಳಿಂದಲೇ ಹುಟ್ಟಿದ ಪ್ರಯುಕ್ತ ಅವರ ಅಧೀನಗಳೇ ಆಗಿವೆ. ಇವೆರಡೂ ಮಗನ ಮನಸ್ಸಿನಲ್ಲಿ ದೃಢವಾಗುವುದಕ್ಕಾಗಿ **ಯಥಾ ತು ಖಲು ಸೋಮ್ಯ,** ಎಂದು ತಂದೆಯವರು ಹೇಳಿರುತ್ತಾರೆ ॥೮-೩॥ ॥ ೪ ॥

ಪೀ– ಸೇಯಂ ದೇವತಾ..... ...ನಾಮರೂಪೇ ವ್ಯಾಕರೋತ್ ಎಂಬ ವಾಕ್ಯಕ್ಕೆ, ಪ್ರಸಿದ್ಧ ಜೀವ ರೂಪದಿಂದಲೇ ಪ್ರವೇಶಿಸುವುದು, ಎಂಬ ಪ್ರತೀತಿಯನ್ನು ಹೋಗಲಾಡಿಸಿ ಅರ್ಥ ಹೇಳುತ್ತಾರೆ—

ಭಾ. ॥ (೧) ಸೃಷ್ಟೇಷ್ವೇತೇಷು ಭಗವಾನೀಕ್ಷಾಂಚಕ್ರೇ ಸ ಕೇಶವಃ ॥ (೨) ಜೀವಾಖ್ಯೇನೈವ ರೂಪೇಣ ಯೋಽನಿರುದ್ಧ ಇತಿ ಸ್ಮೃತಃ । ಕೇನ ರೂಪೇಣ ಲಕ್ಷ್ಮ್ಯಾದೀನ್ ಪ್ರವಿಶ್ಯೋ ರೂಪನಾಮನೀ । ಕರಿಷ್ಯೇ ॥ (೩) ತ್ರಿವೃತಶ್ಚಿತಾನೇಕೈಕಂ ಕರವಾಣಿ ಚ । ಇತಿ ಮತ್ವಾ ಪ್ರವಿಶ್ಯಾಥ ತೇಭ್ಯ ಇಂದ್ರಾದಿನಾಮಪಿ ॥ ನಾಮರೂಪಾಣಿ ಕೃತವಾಂಸ್ತಾಂಶ್ಚಾನ್ಯೋನ್ಯಪ್ರವೇಶಿನಃ ॥ (೪) ಕೃತ್ವಾಽಗ್ನಿಸೋಮಸೂರ್ಯಾದಿಸೃಷ್ಟೇಷ್ವಾಂಶ್ಚೀನ್ವಿದಧೇ ಪುನಃ ॥ ॥ ೧, ೨, ೩, ೪ ॥ ಇತಿ ತೃತೀಯಃ ಖಂಡಃ ॥ ೮–೩ ॥ ॥ ೧ ॥

* ಎಲ್ಲಾ ಪ್ರಾಣಿಗಳಲ್ಲಿಯೂ ಪೃಥ್ವೀ ಇಲ ತೇಜಸ್ಸುಗಳ ಭಾಗಗಳಿವೆ. ಪ್ರಪೂರ್ಣವಾಗಿ ಆ ಲಕ್ಷ್ಮ್ಯಾದಿ ದೇವತೆಗಳೂ ಇರುವಾರೆ

೩ ॥ (೧) ತ್ರೀಕರಿಯು ಈ ಮೂರು ದೇವತೆಗಳನ್ನು ಸೃಷ್ಟಿಮಾಡಿದ ನೀಲಿ ಅಲೂಮಿನಿಯಂ. (೨) ಆ ಮೇಲೆ ಜೀವ ಎಂಬ ರೂಪದಿಂದ ಯಾವನು ಅನಿರುದ್ಧನಿದ್ದಾನೋ ಅಂತಹ ಅನಿರುದ್ಧನೆಂಬ ಅಂತರ್ಯಾಮಿ ರೂಪದಿಂದ ಲಕ್ಷ್ಮಿದಿಗಳಲ್ಲಿ ಪ್ರವೇಶಿಸಿ ರೂಪ (ವಸ್ತುಗಳು) ನಾಮ (ಫಲಿಸುವ ಹೆಸರಾದ ಹೆಸರು) ಗಳನ್ನು ಮಾಡುವೆನು. (೩) ಇವರಲ್ಲಿ ಒಬ್ಬೊಬ್ಬರನ್ನು ಮೂವರು ಮೂವರಿಂದ ಕೂಡಿದವರನ್ನಾಗಿಯೂ ಮಾಡುವೆನು. ಹೀಗೆ ತೀರಿದ ಆ ದೇವತೆಗಳಲ್ಲಿ ತಾನು ಪ್ರವೇಶವಾಗಿ ಆ ಮೇಲೆ ಆ ದೇವತೆಗಳಿಂದ ಇಂದ್ರಾದಿ ದೇವತೆಗಳಿಗೆ ನಾಮರೂಪಗಳನ್ನು ಕೊಟ್ಟನು. ಲಕ್ಷ್ಮೀ ಮೊದಲಾದ ದೇವತೆಗಳನ್ನು ಪರಸ್ಪರವಾಗಿ ಪ್ರವೇಶ ಮಾಡಿದವರನ್ನಾಗಿ ಮಾಡಿದನು. ೪) ಆ ದೇವತೆಗಳನ್ನು ಪರಸ್ಪರವಾಗಿ ಪ್ರವೇಶಿಸಿ ಅನ್ನ ಸೋಮ, ಸೂರ್ಯ ಮೊದಲಾದ ದೇವತೆಗಳನ್ನು ಮೂರು ಲಕ್ಷ್ಮಿದೇವತೆಗಳನ್ನು ಪ್ರವೇಶಮಾಡಿಸಿದನು. ೫–೬

ಮೂರನೇ ಖಂಡವು ಮುಗಿಯಿತು.

ಖನೇ ಖಂಡವು

೫—ಸೃಷ್ಟಿಯ ಮೂಲಕಾರಣವನ್ನು ತಿಳಿಯುವುದಕ್ಕಾಗಿ ತಾನು ಪ್ರತಿಜ್ಞೆಮಾಡಿದ್ದನ್ನು ಹೇಳುತ್ತಾರೆ.

ಉ. ॥ ಯದಗ್ನೇ ರೋಹಿತಂ ರೂಪಂ ತೇಜಸಸ್ತದ್ರೂಪಂ ಯಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನಸ್ಯಾಪಾಗಾದಗ್ನೇರಗ್ನಿತ್ವಂ ವಾಚಾರಂಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಂ ॥ ೧ ॥

೩ ॥ ಅಗ್ನಿಗೆ ಯಾವುದು ಕೆಂಪಾದ (ತೇಜಸ್ಸು) ರೂಪವಿದೆಯೋ, ಅದು ತೇಜಸ್ಸಿನ ರೂಪವು. ತೇಜಸ್ಸಿನ ರೂಪದಿಂದ ಹುಟ್ಟಿದ್ದು. ತೇಜಸ್ಸು ಎನಿಸಿದ ಲಕ್ಷ್ಮೀದೇವಿಯ ರೂಪದಿಂದ ಹುಟ್ಟಿದ್ದು. ಆ ಲಕ್ಷ್ಮೀದೇವಿಯು ಅಧೀನವಾದುದು, ಎಂದು ತಿಳಿಯಬೇಕು. ಅಗ್ನಿಗೆ ಯಾವುದು ಶುಕ್ಲ (ಬಿಳಿಯ) ರೂಪವೋ, ಅದು ಜಲದ ರೂಪವು. ಜಲದ ರೂಪದಿಂದ ಹುಟ್ಟಿದ್ದು. ಜಲಕ್ಕೆ ಅಧಿಷ್ಠಾನವಾಗಿರುವ ಪ್ರಾಣನ ಅಧೀನವಾದುದು, ಎಂದು ತಿಳಿಯಬೇಕು. ಅಗ್ನಿಗೆ ಯಾವುದು ಕೃಷ್ಣ (ಕಪ್ಪು) ರೂಪವೋ, ಅದು ಪೃಥಿವಿಯ ರೂಪವು. ಪೃಥಿವೀದೇವತೆಯಾದ ವಿರಜನ ರೂಪದಿಂದ ಹುಟ್ಟಿದ್ದು. ವಿರಜನ ಅಧೀನವಾದುದು, ಎಂದು ತಿಳಿಯಬೇಕು. (ರೂಪವು ಮಹತ್ತಾಗಿ ಇನ್ನೊಬ್ಬರ ಅಧೀನವಾಗಿರುವುದರಿಂದ ಅವಮ್ಯವೆಂದಲ್ಲಿ ಪರಂತು ನಾಮವು ಕೂಡ ಅವಮ್ಯವೇ ಎನ್ನುತ್ತಾರೆ—) ಹೀಗೆ ಅಗ್ನಿಯು ತೇಜೋ-ಒನ್ನರ ಅಧೀನವಾಗಿರುವುದರಿಂದ ಅಗ್ನಿಗೆ ಅಗ್ನಿ ಯೆಂಬ ನಾಮದ ಪ್ರವೃತ್ತಿಗೆ ಕಾರಣವಾದ ಅತ್ಯುತ್ಕೃಷ್ಟವೆ (ಸರ್ವಶ್ರೇಷ್ಠವಾದ) ಅಗ್ನಿಯ ಸಕಾಶದಿಂದ ಹೋಗಿದೆ (ಅಂದರೆ ಅಗ್ನಿಗೆ ಮುಖ್ಯವಾಗಿ ಇಲ್ಲ. ಅಗ್ನಿಗೆ ಅಗ್ನಿ ಯೆಂಬ ಹೆಸರೂ ಮುಖ್ಯವಾಗಿ ಇಲ್ಲ. ಲಕ್ಷ್ಮೀದಿಗಳಿಗೇನೇ ಮುಖ್ಯವಾಗಿ ಇರುತ್ತದೆ. ಹೇಗೆ ಲೋಕದಲ್ಲಿ ಪ್ರಸಿದ್ಧವಾದ ಸ್ತ್ರೀ ಪುರುಷರಲ್ಲಿ ಲಕ್ಷ್ಮೀ, ನಾರಾಯಣ ಮೊದಲಾದ ಹೆಸರು ಸಾಂಕೇತಿಕವೋ, ಅಮುಖ್ಯವೋ. ಯಾಗೆಯೇ ಇದ್ದಿಯೂ) ಅಗ್ನಿಗೆ ಅಗ್ನಿ ಯೆಂಬ ಹೆಸರು ವಾಗಿಂದ್ರಿಯದಿಂದ ಹುಟ್ಟಿದ್ದು. (ಲಕ್ಷ್ಮೀದಿಗಳಿಂದ ಕೆಳಿದು ಅಗ್ನ್ಯಾದಿಗಳಲ್ಲಿ ವ್ಯವಹಾರಮಾತ್ರವೆ. ಸಂಕೇತವಮಾತ್ರವೆ. ಅನಾದಿಯಿಂದ ಅಗ್ನ್ಯಾದಿಗಳಲ್ಲಿ ಇರತಕ್ಕದ್ದು. ಲಕ್ಷ್ಮೀದಿಗಳಿಗೇನೇ ಮುಖ್ಯವು. ಅಗ್ನ್ಯಾದಿಗಳಲ್ಲಿ ವಿಕಾರ ಅಮುಖ್ಯವು. (ವೈ ಮುಖ್ಯವಾಗಿ ಇರುತ್ತದೆಂದರೆ –) ತೇಜಸ್ಸು ಅದ್ದ ಅನ್ನವೆಂಬ ಶಬ್ದಗಳಿಂದ ಹೇಳಲ್ಪಡುವ ಲಕ್ಷ್ಮೀ ಪ್ರಾಣ ವಿವರೆಂಬ ಮೂರು ದೇವತೆಗಳೇ ಅಗ್ನಿ ಯೆಂಬ ಶಬ್ದದಿಂದ ಮುಖ್ಯವಾಗಿ ಹೇಳಲ್ಪಡುವರು. ೧

ಉ. ॥ ಯದಾದಿತ್ಯಸ್ಯ ರೋಹಿತೀ ರೂಪಂ ತೇಜಸಸ್ತದ್ರೂಪಂ ಯ-
ಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನಸ್ಯಾಪಾಗಾದಾದಿತ್ಯಾದಾದಿತ್ಯತ್ವಂ ವಾ-
ಚಾರಂಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಂ॥೨॥

ಅ ॥ ಸೂರ್ಯನದ್ದು .....ಆದಿತ್ಯತ್ವಂ=ಆಯುಷ್ಯವನ್ನು ತೆಗೆದುಕೊಳ್ಳುವಿಕೆ..... ॥ ೨ ॥

ಉ. ॥ ಯಚ್ಚಂದ್ರಮಸೋ ರೋಹಿತೀ ರೂಪಂ ತೇಜಸಸ್ತದ್ರೂಪಂ
ಯಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನಸ್ಯಾಪಾಗಾಚ್ಚಂದ್ರಾಚ್ಚಂದ್ರತ್ವಂ
ವಾಚಾರಂಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಂ
॥ ೩ ॥

ಅ ॥ ಚಂದ್ರನಿಗೆ... ಚಂದ್ರತ್ವಂ=ಜನರನ್ನು ಸಂತೋಷಗೊಳಿಸುವಿಕೆ, ತೃಪ್ತಿಗೊಳಿಸುವಿಕೆ....॥ ೩ ॥

ಉ. ॥ ಯದ್ವಿದ್ಯುತೋ ರೋಹಿತೀ ರೂಪಂ ತೇಜಸಸ್ತದ್ರೂಪಂ ಯ-
ಚ್ಛುಕ್ಲಂ ತದಪಾಂ ಯತ್ಕೃಷ್ಣಂ ತದನ್ನಸ್ಯಾಪಾಗಾದ್ವಿದ್ಯುತೋ ವಿದ್ಯುತ್ತ್ವಂ
ವಾಚಾರಂಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಂ
॥ ೪ ॥

ಅ ॥ .....ಮಿಂಚಿಗೆ ವಿದ್ಯುತ್ತ್ವಂ=ವಿಶೇಷವಾಗಿ ಪ್ರಕಾಶಗೊಳಿಸುವಿಕೆ... ..... (ಹೀಗೆಯೇ ಮಿತ್ರಾದಿ ದೇವತೆಗಳಿಗೆ ಯಾವುದು ರೋಹಿತ ಮೊದಲಾದ ರೂಪಗಳಿವೆಯೋ, ಅವೆಲ್ಲವೂ ಲಕ್ಷ್ಮ್ಯಾದಿಗಳ ಅಧೀನವೆಂದೇ ಇಟ್ಟುಕೊಳ್ಳಬೇಕು.) ॥ ೪ ॥

ಪೀ—ಒಬ್ಬನ ಜ್ಞಾನದಿಂದ ಸರ್ವಸ್ತು ವಿಜ್ಞಾನಾದಿಗಳು ಆಗುತ್ತವೆಂಬುದು ಉಪದೇಶಪರಂಪರೆಯಿಂದ ಬಂದಿದ್ದನ್ನು ತ್ಯಾರೆ— ಅಥವಾ ಹೇಳಿದುದನ್ನು ವಿದ್ವಾಂಸರ ಸಮ್ಮತಿ ಹೇಳಿ ಅದನ್ನು ದೃಢೀಕರಿಸುತ್ತಾರೆ—

ಉ. ॥ ಏತದ್ಧ ಸ್ಮ ವೈ ತದ್ವಿದ್ವಾಂಸ ಆಹುಃ ಪೂರ್ವೇ ಮಹಾಶಾಲಾ
ಮಹಾಶ್ರೋತ್ರಿಯಾ ನ ನೋಽದ್ಯ ಕಶ್ಚನಾಶ್ರುತಮುಮತಮವಿಜ್ಞಾತಮುದಾ-
ಹರಿಷ್ಯತೀತಿ ಹ್ಯೇಭ್ಯೋ ವಿದಾಂಚಕ್ರುಃ ॥ ೫ ॥

ಅ ॥ ಸಾದೃಶ್ಯಸ್ಯಾಧಾನ್ಯಗಳಂದ ಪರಬ್ರಹ್ಮನ ಜ್ಞಾನವನ್ನು ಸಂಪಾದಿಸಿ ಅದರಿಂದ ಕರ್ಮದೇವತಾ ಮೊದಲಾದ ಎಲ್ಲಾ ಜಗತ್ತೂ ತಿಳಿದಂತೆ ಆಗುತ್ತದೆ, ತ್ರೀಹರಿಯು ಸಮಸ್ತಜಗತ್ತನ್ನು ಸೃಷ್ಟಿಮಾಡಿದುದರಿಂದ ಪ್ರಧಾನನು. ತೇಜೋಬನ್ನ ದೇವತೆಗಳು ತ್ರಿವೃತ್ಕರಣದಿಂದ ಕರ್ಮಗಳಾಗಿರುತ್ತಾರೆ, ಇದುಮೊದಲಾದ ಪ್ರಮೇಯವನ್ನು ತಿಳಿದಿರುವ, ಪ್ರತಿಸಂವತ್ಸರದಲ್ಲಿ ಯಜ್ಞಮಾಡುತ್ತಿರುವ, ಜೆನ್ನಾಗಿ ವೇದ ವೇದಾರ್ಥಗಳನ್ನು ತಿಳಿದಿರುವ ವಿದ್ವಾಂಸರು ಮೊದಲಿನವರು, ನನಗೆ ಈಗ ನಮ್ಮ ಗುರುಗಳು ಉಪದೇಶಮಾ

* ೨, ೩, ೪, ಈ ಮೂರು ಮಂತ್ರಗಳಲ್ಲಿಯೂ ಹಿಂದಿನಂತೆಯೇ ಅರ್ಥ ಇಟ್ಟುಕೊಳ್ಳಬೇಕು

ತಿದ ಮೇಲೆ ಪ್ರತ್ಯಕ್ಷನಿಂದ ಮೇಲಿರುವುದು. ಯಾವುದೊಂದೂ ತೀಳಲ್ಪಡದಿದ್ದುದು. ವಿಚಾರಿಸಲ್ಪಡದಿದ್ದುದು. ತಿಳಿಯಲ್ಪಡದಿದ್ದುದು ಇದೆ ಎಂದು ಯಾರಾದ್ಯಾರೂ ಈಗಿನವರು ಹೇಳುವುದಿಲ್ಲ (ಏಕೆಂದರೆ— ಪರಬ್ರಹ್ಮನ ಶಾಸ್ತ್ರಶ್ರವಣ ಮನನ ವಿಜ್ಞಾನಗಳಿಂದ ಸಮಸ್ತವಸ್ತುಗಳ ಪ್ರಮಾಣವನ್ನು ವಿಜ್ಞಾನಗಳ ಫಲವು ಸಿಗುತ್ತದೆ, ಎಂದು ಹೇಳುತ್ತಾರೆ) ಈ ಪ್ರಮೇಯವನ್ನು ತಿಳಿದಿರುವ ಮುಂಚಿನವರಿಂದ ದೇವ ವಿದ್ವಾಂಸರು ಒಬ್ಬನ ಜ್ಞಾನದಿಂದ ಸಮಸ್ತ ವಸ್ತುಗಳ ವಿಜ್ಞಾನಾದಿಗಳ ಪ್ರಕಾರವನ್ನು ತಿಳಿದಿರುವರು. ॥ ೫ ॥

ಟೀ —ಇವರು ತಿಳಿದ ಪ್ರಕಾರವನ್ನು ಲೋಕವು ಮೇಲೆ ಹೇಳುತ್ತದೆ

ಉ. ॥ ಯದು ರೋಹಿತಮಿವಾಭೂದಿತಿ ತೇಜಸಸ್ತದ್ರೂಪಮಿತಿ ತದ್ವಿದಾಂಚಕ್ರುರ್ಯದು ಶುಕ್ಲಮಿವಾಭೂದಿತ್ಯಪಾಂ ರೂಪಮಿತಿ ತದ್ವಿದಾಂಚಕ್ರುರ್ಯದು ಕೃಷ್ಣಮಿವಾಭೂದಿತ್ಯನ್ನಸ್ಯ ರೂಪಮಿತಿ ತದ್ವಿದಾಂಚಕ್ರುಃ ॥ ೬ ॥

ಅ ॥ ಯಾವುದು ಕೆಂಪು ರೂಪದಂತೆ ಆಗುವುದೋ ಅದು ತೇಜಸ್ಸಿನ ರೂಪದಿಂದ ಹುಟ್ಟಿದ್ದು ಲಕ್ಷ್ಯ ಅಧೀನವಾದುದು, ಎಂದು ಜ್ಞಾನಿಗಳು ತಿಳಿದಿರುವರು. ಬಿಳಿಯಂತೆ ಯಾವುದು ಆಯಿತೋ ಅದು ನೀರಿನ ರೂಪದಿಂದ ಹುಟ್ಟಿದ್ದು ಜ್ಞಾನದ ಅಧೀನವಾದುದು, ಎಂದು ತಿಳಿದಿರುವರು ಕಪ್ಪು ಬಣ್ಣದಂತೆ ಯಾವುದು ಆಯಿತೋ ಅದು ಪೃಥಿವಿಯ ರೂಪದಿಂದ ಹುಟ್ಟಿದ್ದು ಅದು ಮೃತ್ಯುವಿನ ಅಧೀನವಾದುದು, ಎಂದು ತಿಳಿದಿರುವರು ॥ ೬ ॥

ಉ. ॥ ಯದದೋಽಗ್ನೇಸ್ತಮಿವಾಭೂದಿತ್ಯೇತಾವದೇವ ದೇವತಾನಾಂ ಸನೂಸ ಇತಿ ತದ್ವಿದಾಂಚಕ್ರುರ್ಯಥಾ ತು ಖಲು ಸೋಮ್ಯೇಮಾಸ್ತಿಸ್ರೋ ದೇವತಾಃ ಪುರುಷಂ ಪ್ರಾಪ್ಯ ತ್ರಿವೃತ್ತ್ರಿವೃದೇಕೈಕಾ ಭವತಿ ತನ್ಮೇ ವಿಜಾನೀಹೀತಿ ॥ ಇತಿ ಚತುರ್ಥಃ ಖಂಡಃ ॥ ೮ ೪ ॥ ॥ ೭ ॥

ಅ ॥ ಯಾವರೂಪವು ತೇಜೋರೂಪವಾಗಿ ಅಥವಾ ಕೆಂಪಾಗುವ ರೂಪವಾಗಿ ಹೊಸ್ತಾಗಿ ತಿಳಿಯಲ್ಪಡದೆ ಇದ್ದ ಜಾಗೆ ಇದ್ದ, ಸ್ಥಳ ಕೆಂಪು ಮೊದಲಾದ ರೂಪದಿಂದ ತಿಳಿಯಲ್ಪಡುವುದೋ, ಅದು ಕೂಡ ಈ ತೇಜೋಒನ್ನರೆನಿಸಿದ ದೇವತೆಗಳ ಸಮುದಾಯದ (ಆದರೆ ಅದೂ ಕೂಡ ಈ ಮೂರು ದೇವತೆಗಳ ರೂಪಗಳಿಂದ ಹುಟ್ಟಿದ್ದು,) ಎಂದು ಜ್ಞಾನಿಗಳು ತಿಳಿಯುತ್ತಾರೆ. ಹೀಗೆ ಅವಿದ್ವತದಲ್ಲಿ ತೇಜೋಒನ್ನರೆನಿಸಿದ ದೇವತೆಗಳಿಗೆ ತ್ರಿವೃತ್ಕರಣಪ್ರಕಾರವನ್ನು ಹೇಳಿ ಈಗ ಅಧ್ಯಾತ್ಮದಲ್ಲಿಯೂ ಅದನ್ನು ಹೇಳಲಿಕ್ಕಾಗಿ ಪ್ರಸ್ತಾವಿಸುತ್ತಾರೆ — ಎಲೋ ಮಗನೇ ತೇಜೋಒನ್ನರಿಗಿಂತ ಅಧಿಕವಾಗಿಗಳಾದ ಲಕ್ಷ್ಯ ಜ್ಞಾನ ಎಂಬ ಮೂರು ದೇವತೆಗಳು ಜೀವದ ಕರೀರವನ್ನು ಹೊಂದಿ ಯಾವ ಪ್ರಕಾರ ಒಬ್ಬೊಬ್ಬರು ಮೂವರುಮೂವರಿಂದ ಕೂಡಿದವರು ಆಗುತ್ತಾರೋ, ಅದನ್ನು ನಾನು ನಿನಗೆ ಹೇಳುತ್ತೇನೆ. ಇನ್ನೆಂದು ನೀನು ಅದನ್ನು ತಿಳಿದುಕೋ, ಎಂದು ತಂದೆಯಾದ ಉದ್ದಾಲಕರು ಹೇಳಿದರು ॥ ೮-೪ ॥ ॥ ೭ ॥

ಟೀ—ಯದಗ್ನೇ ರೋಹಿತಂ ರೂಪಂ ಇತ್ಯಾದಿಗಳಿಗೆ ಅರ್ಥ ಹೇಳುತ್ತಾರೆ -

ಭಾ. ॥ (೧) ಅಕೋ ಯಲ್ಲೋಹಿತಂ ರೂಪಂ ತ್ರಿಯಸ್ತದ್ರೂಪಸಂಭವಂ । ಯಚ್ಛುಕ್ಲಂ ವಾಯುಜಂ ವಿದ್ಯಾತ್ತಚ್ಚಂ ಚೈವ ತ್ರಿವೃದ್ಭವಂ ॥ (೨) ತಸ್ಮಾದಗ್ನೇರ್ಯದ-

ತ್ಯತ್ವಮಗ್ನಿನಾಮಪ್ರವರ್ತಕಂ । ಲಕ್ಷ್ಮ್ಯಾದಿದೇವತಾನಾಂ ತನ್ನೈರ್ಣಾಗ್ನೇರಗ್ನಿತಾ ತತಃ ।
ಮುಖ್ಯಾ ॥ (೪) ವಿವಮಾದದಾನತ್ವಮಾದಿತ್ಯಸ್ಯ ತದುದ್ಭವಂ । ಅತ ಆದಿತ್ಯನಾಮೈಷಾಂ
ನೈವಾದಿತ್ಯಸ್ಯ ಮುಖ್ಯತಃ ॥ (೫) ಯಚ್ಚಂದ್ರಾಹ್ಲಾದಕತ್ವಂ ಚ ತತ್ತೇಷಾಂ ಚಂದ್ರತಾ
ತಥಾ ॥ (೬) ವಿದ್ಯುದ್ವಿದ್ಯೋತನಂ ತೇಜೋ ತಸ್ಯೇ ಸರ್ವನಾಮಿನಃ ॥ (೬) ತಥೈವ
ಸರ್ವರೂಪಂ ಚ ತದ್ರೂಪಪ್ರತಿಬಿಂಬಿತಂ । ಸರ್ವರೂಪಾಶ್ಚ ತೇ ತಸ್ಮಾಲ್ಲೋಹಿತಾದಿ—
ಕ್ರಮೇಣ ತು ॥ ೧ ॥

ಅ ॥ (೧) ಅಗ್ನ್ಯಾದಿಗಳಲ್ಲಿ ಲಕ್ಷ್ಮ್ಯಾದಿಗಳು ಪ್ರವೇಶಮಾಡಿದುದರಿಂದ ಅಗ್ನಿ ಸೋಮ ಸೂರ್ಯಾದಿ ಗಳಲ್ಲಿ ಯಾವುದು ಕೆಂಪುರೂಪವಿದೆಯೋ ಅದು ಲಕ್ಷ್ಮೀದೇವಿಯ ರೂಪದಿಂದ ಹುಟ್ಟಿದ್ದು. ಬಿಳಿರೂಪವು ವಾಯುವಿನ ರೂಪದಿಂದ ಹುಟ್ಟಿದ್ದು ಕಪ್ಪುರೂಪವು ಶಿವನ ರೂಪದಿಂದ ಹುಟ್ಟಿದ್ದು. (೨) (ಅಪಾಗಾದ ಗ್ನೇರಗ್ನಿತ್ವಂ ಎಂಬುದಕ್ಕೆ ಸಂಗತಿ ಹೇಳಿ ಅರ್ಥ ಹೇಳುತ್ತಾರೆ—) ಅಗ್ನಿಗೆ ಲಕ್ಷ್ಮೀ ವಾಯು ಶಿವರ ರೂಪ ಗಳಿಂದ ಹುಟ್ಟಿದ ರೂಪವಿರುವುದರಿಂದ ಅವನು ಅವರ ಅಧೀನನಾದ ಕಾರಣ ಆ ಅಗ್ನಿಗೆ ಅಗ್ನಿ ಯೆಂಬ ಹೆಸರು ಬರಲಿಕ್ಕೆ ಕಾರಣವಾಗುದು ಯಾವುದು ಸರ್ವಭಕ್ಷಣವಿದೆಯೋ ಅದು ಲಕ್ಷ್ಮ್ಯಾದಿ ದೇವತೆಗಳಿಗೇನೇ ಮುಖ್ಯವು. (ಅದುಕಾರಣ ಆ ದೇವತೆಗಳಿಗೇನೇ ಅಗ್ನಿ ಯೆಂಬ ಹೆಸರು ಮುಖ್ಯವು.) ಆದಕಾರಣ ಅಗ್ನಿ ಯೆಂಬ ನಾಮದ ಪ್ರವೃತ್ತಿಗೆ ಕಾರಣವಾದ ಅತ್ತೃತ್ವನ ಅಗ್ನ್ಯಾದಿದೇವತೆಗಳಲ್ಲಿ ಪ್ರವೇಶಿಸಿದ ಲಕ್ಷ್ಮ್ಯಾದಿ ಗಳಲ್ಲಿಯೇ ಮುಖ್ಯವಾಗಿರುವುದರಿಂದ ಅಗ್ನಿಗೆ ಅಗ್ನಿತ್ವ (ಅತ್ತೃತ್ವ-ಸರ್ವಭಕ್ಷಣ) ವು ಮುಖ್ಯವಾದುದು ಅಲ್ಲವೇ ಅಲ್ಲ (ಅದುಕಾರಣ ಅಗ್ನಿ ಯೆಂಬ ಹೆಸರು ಅಗ್ನಿಯಲ್ಲಿ ಮುಖ್ಯವಲ್ಲ.) (೩) (ಅಪಾಗಾದಾದಿತ್ಯಾದಾದಿತ್ಯತ್ವಂ ಇತ್ಯಾದಿಗಳಿಗೂ ಹೀಗೆಯೇ ಅರ್ಥ ಹೇಳಬೇಕೆನ್ನುತ್ತಾರೆ—) ಅಗ್ನಿತ್ವವಂತೆಯೇ ಆದಿ ತ್ಯನಿಗೆ ಆದಿತ್ಯ ಎಂಬ ನಾಮದ ಪ್ರವೃತ್ತಿಗೆ ಕಾರಣವಾದ ಆಯುಷ್ಯವನ್ನು ತೆಗೆದುಕೊಳ್ಳುವಿಕೆ ಎಂಬುದೂ ಲಕ್ಷ್ಮ್ಯಾದಿ ದೇವತೆಗಳಿಗೇನೇ ಮುಖ್ಯವು ಆದಿತ್ಯನಿಗೆ ಮುಖ್ಯವಲ್ಲ. (ಏಕೆಂದರೆ) ಆದಿತ್ಯನ ರೂಪವೂ ಲಕ್ಷ್ಮ್ಯಾದಿ ದೇವತೆಗಳ ರೂಪಗಳಿಂದಲೇ ಹುಟ್ಟಿದ್ದು ಅದುಕಾರಣ ಆದಿತ್ಯನೆಂಬ ಹೆಸರು ಲಕ್ಷ್ಮ್ಯಾದಿ ದೇವತೆಗಳಿಗೇನೇ ಮುಖ್ಯವಾಗಿ ಇರುತ್ತದೆ ಆದಿತ್ಯನಿಗೆ ಮುಖ್ಯವಾಗಿ ಇಲ್ಲ. ೪) ಆಯುಷ್ಯವನ್ನು ತೆಗೆದುಕೊಳ್ಳುವಿಕೆ ಎಂಬುವಂತೆ ಚಂದ್ರನಿಗೆ ಸಂತೋಷಗೊಳಿಸುವಿಕೆಯು ಚಂದ್ರ ಎಂಬ ಶಬ್ದವು ಪ್ರವೃತ್ತಿ ಯಾಗಲಿಕ್ಕೆ ಕಾರಣವು. ಅದು ಲಕ್ಷ್ಮ್ಯಾದಿಗಳಿಗೇನೇ ಮುಖ್ಯವು (ಚಂದ್ರನಿಗೆ ಮುಖ್ಯವಲ್ಲ ಚಂದ್ರನ ರೂಪವು ಲಕ್ಷ್ಮ್ಯಾದಿಗಳ ರೂಪದಿಂದ ಹುಟ್ಟಿದಪ್ರಯುಕ್ತ ಚಂದ್ರನು ಲಕ್ಷ್ಮ್ಯಾದಿಗಳ ಅಧೀನನೇ. ಅದು ಕಾರಣ ಅವರಿಗೇನೇ ಚಂದ್ರ ಎಂಬ ನಾಮವು ಮುಖ್ಯವು ಚಂದ್ರನಿಗೆ ಮುಖ್ಯವಲ್ಲ.) (೫) (ಅಪಾಗಾದ್ವಿದ್ಯುತೋ ವಿದ್ಯುತ್ತ್ವಂ ಎಂಬುದರ ತಾತ್ಪರ್ಯ ಹೇಳುತ್ತಾರೆ)ಮಿಂಚಿಗೆ ಪ್ರಕಾಶಗೊಳಿಸುವಿಕೆಯೂ ಲಕ್ಷ್ಮ್ಯಾದಿಗಳಿಗೇನೇ ಮುಖ್ಯವು ಮಿಂಚಿಗೆ ಅಲ್ಲ. ಅದುಕಾರಣ ವಿದ್ಯುತ್ ಎಂಬ ಹೆಸರು ಲಕ್ಷ್ಮ್ಯಾದಿ ಗಳಿಗೇನೇ. ಮಿಂಚಿಗೆ ಮುಖ್ಯವಾಗಿ ಅಲ್ಲ. (ಇದರಿಂದ **ವಾಚಾರಂಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಂ** ಎಂಬ ನಾಲ್ಕು ವಾಕ್ಯಗಳಿಗೂ ತಾತ್ಪರ್ಯವನ್ನು ಹೇಳಿದರು.) (ಹಿಂದೆ ಹೇಳಿದ ಪ್ರಕಾರ ಲಕ್ಷ್ಮ್ಯಾದಿಗಳು ಅಗ್ನಿ ಮೊದಲಾದ ನಾಲ್ಕು ನಾಮಗಳಿಗೆ ಮುಖ್ಯ ವಾಚ್ಯರೆಂದು ಅರ್ಥ ಸಿಕ್ಕಿತು. ಅದರಿಂದ ಅವರಿಗೆ ವಿಶೇಷವೇನು? ಎಂದರೆ) ಆಯಾಯ ದೇವತೆಗಳನ್ನು ಹೇಳುವ ಶಬ್ದ ಗಳು ಪ್ರವೃತ್ತಿಯಾಗಲಿಕ್ಕೆ ಕಾರಣವು ಲಕ್ಷ್ಮ್ಯಾದಿಗಳಲ್ಲಿಯೇ ಮುಖ್ಯವಾಗಿರುವುದರಿಂದ ಆ ಲಕ್ಷ್ಮ್ಯಾದಿ ಗಳೇ ಸಮಸ್ತ ದೇವತೆಗಳ ನಾಮಗಳಿಂದ ಮುಖ್ಯವಾಗಿ ಹೇಳಲ್ಪಡುತ್ತಾರೆ. (೬) (ಆಯಾಯ ದೇವತೆ ಗಳನ್ನು ಹೇಳುವ ಶಬ್ದಗಳ ಪ್ರವೃತ್ತಿನಿಮಿತ್ತವು ಲಕ್ಷ್ಮ್ಯಾದಿಗಳಲ್ಲಿಯೇ ಮುಖ್ಯವೆಂಬುದು ಹೇಗೆ? ಎಂದರೆ) ಹೇಗೆ ಅಗ್ನ್ಯಾದಿಗಳ ರೂಪವು ಲಕ್ಷ್ಮ್ಯಾದಿಗಳ ರೂಪಗಳಿಂದ ಹುಟ್ಟಿದ್ದೋ, ಹಾಗೆಯೇ ಸಮಸ್ತ ದೇವತೆ

ಗಳ ಕೆಲವು ಮೊದಲಾದವು ರೂಪವು ಲಕ್ಷ್ಮೀದೇವಿಗಳ ರೂಪದಿಂದ ಹುಟ್ಟಿದ್ದು (ಅಮರಕೋಶ ಅಮೃತವು ಸುಧೆಗಳ ಪ್ರವೃತ್ತಿನಿಮಿತ್ತವು ಆ ಲಕ್ಷ್ಮೀದೇವತೆಗಳಿಗೆ ಎಂದು ಸುಮ್ಮನಿರು. ಅಮೃತವು ದೇವತೆಗಳಿಗೆ ಅವಮಿಮ್ಮಾ.) ಅನ್ನ ಮೊದಲಾದ ಸಮಸ್ತ ದೇವತೆಗಳ ರೂಪವು ಲಕ್ಷ್ಮೀದೇವಿಗಳ ರೂಪಗಳಿಂದ ಹುಟ್ಟಿದ ಕಾರಣದಿಂದಲೇ ಅನ್ನ ಮೊದಲಾದ ಸಮಸ್ತದೇವತೆಗಳು ಲೋಪಿಸಾದಿ ರೂಪಗಳ ಕ್ರಮದಿಂದ ಎಲ್ಲಾ ರೂಪಗಳುಳ್ಳವರು ಆಗಿರುತ್ತಾರೆ ॥ ೧೧ ॥

ಪೀ -ಈ ನಾಚಾರಂಭಣಾಂ ವಿಕಾರೋ ನಾಮಧೇಯಂ ಎಂಬುವದಕ್ಕೆ ಶ್ರುತ್ಯಾದಿ ಅರ್ಥ ಹೇಳುತ್ತಾರೆ

ಭಾ ॥ (೧) ಅತೋಽನ್ನನಾಮಧೇಯಂ ಕುನಾಚಾರಂಭಣಮೇತತು । ನಾಂತೇಽಂತೇವ ವಿಕಾರಃ ಸ್ಯಾತ್ಶ್ರುತಯೋನಾಮೇವ ನಿತ್ಯತಾ ॥ (೨) ಯಥಾ ಲಕ್ಷ್ಮೀವಿಕಾಸಾಂ ಚ ನಾಮಸಂಕೇತತೋಽನ್ನಗಂ । ನಾಚಾರಂಭಣಮೇತೋಽಸ್ತ್ಯವಿಕಾರೋ ನೈವ ಮುಮ್ಮುಕಃ । (೩) ಮುಮ್ಮಂ ನಾಮ ತ್ರಿರೂಪಾಣೀತ್ಯಾದ್ಯಂ ವೇದೋಽವಿತಃ ಪರಂ । ಅತಸ್ತದೇವ ಸಮ್ಯೋಕ್ತಂ ಮುಮ್ಮಂ ಸತ್ಯಮಿತೀರ್ಯತೇ ॥ (೪) ಇಂದ್ರಾವಿನಾಮರೂಪಾಣಿ ಯಚ್ಚೈನ ತ್ರಿಷು ಮುಮ್ಮಿತಃ । ತದಪೀನತ್ಯತಸ್ತೇಷಾಮೇತಾನಾಮುಚ್ಚಬಲತ್ವತಃ ॥ ವಿವಸಾನಾನಿ ರೂಪಾಣಿ ತಥಾ ನಾಮೋಽಸ್ತು ಮುಮ್ಮಿತಃ । ತದೀಯಾನಿ ತಥಾ ಲಕ್ಷ್ಮೀಸ್ವರೂಪಾಣಿ ಹರೇಸ್ತಥಾ ॥ ರ್ಣಾತ್ವೈ ಏನ ಸರ್ವೇಽಂ। ಸರ್ವರೂಪಾಃ ಸ ಏನ ಚ । ಸರ್ವನಾಮಾ ಸ ಏವೈಕಃ ಸರ್ವರಕ್ತಿಸ್ವರೂಪೇನ ಚ ॥ ೭ ॥

ತ ॥ (೧) ಅನ್ನ ಮೊದಲಾದ ಸಮಸ್ತವಸ್ತುಗಳ ಅನ್ನ ಮೊದಲಾದ ದೇವತೆಗಳನ್ನ ಕೊಟ್ಟವಳಾದ ಲಕ್ಷ್ಮೀದೇವಿಯ ಶ್ರೀವಿಷ್ಣುವಾಗಿದ್ದಾಳೆ. (ಅನ್ನಾದಿಗಳಲ್ಲಿ) ಮೊದಲು ಅಮೃತವೇ ಬೀಳಲಿ ಸಮಸ್ತರಿಗೂ ಕಾರಣವೆಂದು ಶ್ರುತಿಯಿಂದ ಸಿದ್ಧವಾಗಿರುವದರಿಂದ ಬೆಲೆಯ ದೃಷ್ಟಿಯಿಂದಾಗಿ ಅಮೃತವು ಮೇಲು. (ಅಂದರೆ - ಅನ್ನ ಮೊದಲಾದ ಶಬ್ದಗಳ ಶ್ರುತಿಗೆ ಕಾರಣವಾಗಿ ಅನ್ನಾದಿ ಸರ್ವಪದಾರ್ಥಗಳಿಗೆ ಲಕ್ಷ್ಮೀದೇವಿಗಳಲ್ಲಿ ಮುಖ್ಯವಾಗಿರುವದರಿಂದ ಅನ್ನಾದಿ ನಾಮಗಳು ಮುಖ್ಯವಾಗಿ ಲಕ್ಷ್ಮೀದೇವಿಗಳ ಹೆಸರು ಅವುಗಳಿಂದ ಅನ್ನಾದಿ ದೇವತೆಗಳಲ್ಲಿ ಸಂಕೇತವು (ಈ ರೀತಿಯಿಂದ ಅಂತರವನ್ನು ತಿಳಿಯಬೇಕು. ಎಂದು ಸಂಬಂಧವಾಕ್ಯವು) (ತ್ರಿಣಿ ರೂಪಾಣೀತ್ಯೇವ ಸತ್ಯಂ ಎಂಬುವ ಮಾತ್ರಿನ ಶಾಸ್ತ್ರಾರ್ಥ ಹೇಳುತ್ತಾರೆ-) ಲಕ್ಷ್ಮೀ ಎಲ್ಲಾ ಪದಾರ್ಥಗಳು ಅನ್ನ ಮೊದಲಾದ ಶಬ್ದಗಳಿಂದ ಹೇಳಲ್ಪಡುವಾಗ ಹೇಳಲ್ಪಡುವಾಗ ಅನ್ನಾದಿ ಸಮಸ್ತ ಪದಾರ್ಥಗಳಲ್ಲಿ ಲಕ್ಷ್ಮೀದೇವಿಯು ಅಂತರ್ಯಾಮಿಯಾಗಿರುವ ಕಾರಣ ಅನ್ನಾದಿ ಶಬ್ದಗಳಿಂದ ಲಕ್ಷ್ಮೀದೇವಿಯೇ ಹೇಳಲ್ಪಡುವಳು ಅನ್ನಾದಿ ಶಬ್ದಗಳು ಲಕ್ಷ್ಮೀದೇವಿಯ ಹೆಸರುಗಳಾಗಿವೆ ಎಂದು ಹೇಳಿದಾಗ ಅನ್ನಾದಿ ಶಬ್ದಗಳು ಲಕ್ಷ್ಮೀದೇವಿಯ ಹೆಸರು ಆಗುವದರಿಂದ ಅನ್ನಾದಿ ಪದಾರ್ಥಗಳಲ್ಲಿ ಅಂತರ್ಯಾಮಿಯಾಗಿ ಲಕ್ಷ್ಮೀದೇವಿಯ ಹೆಸರು ಆಗುವದರಿಂದ ಅನ್ನಾದಿ ದೇವತೆಗಳಲ್ಲಿ ಸಂಕೇತವು (ಈ ರೀತಿಯಿಂದ ಅಂತರವನ್ನು ತಿಳಿಯಬೇಕು. ಎಂದು ಸಂಬಂಧವಾಕ್ಯವು) (ತ್ರಿಣಿ ರೂಪಾಣೀತ್ಯೇವ ಸತ್ಯಂ ಎಂಬುವ ಮಾತ್ರಿನ ಶಾಸ್ತ್ರಾರ್ಥ ಹೇಳುತ್ತಾರೆ-) ಲಕ್ಷ್ಮೀ ಎಲ್ಲಾ ಪದಾರ್ಥಗಳು ಅನ್ನ ಮೊದಲಾದ ಶಬ್ದಗಳಿಂದ ಹೇಳಲ್ಪಡುವಾಗ ಹೇಳಲ್ಪಡುವಾಗ ಅನ್ನಾದಿ ಸಮಸ್ತ ಪದಾರ್ಥಗಳಲ್ಲಿ ಲಕ್ಷ್ಮೀದೇವಿಯು ಅಂತರ್ಯಾಮಿಯಾಗಿರುವ ಕಾರಣ ಅನ್ನಾದಿ ಶಬ್ದಗಳಿಂದ ಲಕ್ಷ್ಮೀದೇವಿಯೇ ಹೇಳಲ್ಪಡುವಳು ಅನ್ನಾದಿ ಶಬ್ದಗಳು ಲಕ್ಷ್ಮೀದೇವಿಯ ಹೆಸರುಗಳಾಗಿವೆ ಎಂದು ಸಂಬಂಧವಾಕ್ಯವು ಹೇಳಿದಾಗ ಅನ್ನಾದಿ ಶಬ್ದಗಳು ಲಕ್ಷ್ಮೀದೇವಿಯ ಹೆಸರು ಆಗುವದರಿಂದ ಅನ್ನಾದಿ ದೇವತೆಗಳಲ್ಲಿ ಸಂಕೇತ

ವಿಲ್ಲದೆ ಆ ಲಕ್ಷ್ಮೀ ಪ್ರಾಣ ರುದ್ರರಿಗೇನೇ ತ್ರೀಣಿರೂಪಾಣಿ ಎಂಬ ಹೆಸರು. ಬೇರೆ ದೇವತೆಗಳಿಗೆ ಆ ಹೆಸರು ಇಲ್ಲ.) ಅದಕಾರಣ ಅಗ್ನ್ಯಾದಿನಾಮಗಳೂ ಲಕ್ಷ್ಮ್ಯಾದಿಗಳಲ್ಲಿಯೇ ಮುಖ್ಯಗಳಾದರೂ ಆ ನಾಮಗಳು ಅಗ್ನ್ಯಾದಿ ದೇವತೆಗಳಲ್ಲಿ ಅಮುಖ್ಯವಾಗಿ ಇರುತ್ತವೆ. ತ್ರೀಣಿ ರೂಪಾಣಿ ಎಂಬುವುದು ಅಮುಖ್ಯವಾಗಿಯೂ ಬೇರೆಯವರಲ್ಲಿ ಇಲ್ಲ. ಅದುಕಾರಣ **ತ್ರೀಣಿ ರೂಪಾಣಿ** ಎಂಬುವುದೇ **ಸತ್ಯಂ** ಎನ್ನಿಸುತ್ತದೆ. ಸತ್ಯವೆಂದರೆ ಮುಖ್ಯವೆನಿಸುತ್ತದೆ. (೪) (ಇಂದ್ರಾದಿಗಳು ಅಗ್ನ್ಯಾದಿಗಳು ಹೀಗೆ ಎಲ್ಲಾ ದೇವತೆಗಳ ನಾಮರೂಪಗಳು ಲಕ್ಷ್ಮ್ಯಾದಿಗಳಲ್ಲಿಯೇ ಮುಖ್ಯಗಳೆಂದು ಹೇಳಿದೆ. ಹಾಗೆ ಹೇಳಿದರೆ ಆ ಮೂವರಿಗೆ ಸಾಮ್ಯವು ಬರಬೇಕಾಗುವುದು ಎಂದರೆ—) ಇಂದ್ರಾದಿ ದೇವತೆಗಳು ಲಕ್ಷ್ಮ್ಯಾದಿಗಳ ಅಧೀನದಲ್ಲಿರುವವರು. ಲಕ್ಷ್ಮೀ, ಪ್ರಾಣ, ರುದ್ರರು ಸರ್ವೋತ್ಕೃಷ್ಟವಾದ ಜ್ಞಾನಾದಿ ಬಲವುಳ್ಳವರು. ಅದುಕಾರಣ ಇಂದ್ರಾದಿದೇವತೆಗಳ ನಾಮರೂಪಗಳು ಲಕ್ಷ್ಮ್ಯಾದಿಗಳಲ್ಲಿಯೇ ಹೇಗೆ ಮುಖ್ಯವಾಗಿ ಇರುವವುಗಳೋ, ಹಾಗೆಯೇ ರುದ್ರನ ನಾಮಗಳೂ, ರೂಪಗಳೂ ವಾಯುವಿಗೇನೇ ಮುಖ್ಯವಾಗಿ ಇರುತ್ತವೆ. ಹಾಗೆಯೇ ಮುಖ್ಯಪ್ರಾಣನ ನಾಮಗಳೂ ರೂಪಗಳೂ ಲಕ್ಷ್ಮೀದೇವಿಗೆ ಮುಖ್ಯಗಳು. ಹಾಗೆಯೇ ಲಕ್ಷ್ಮೀದೇವಿಯ ನಾಮಗಳೂ, ರೂಪಗಳೂ ಶ್ರೀಹರಿಗೇನೇ ಮುಖ್ಯಗಳು. **ನಾಮಾನಿ ಸರ್ವಾಣಿ ಯಮಾವಿಶಂತಿ** ಇತ್ಯಾದಿ ವೇದಗಳಿಂದ ಎಲ್ಲಾ ನಾಮರೂಪಗಳೂ ಶ್ರೀಹರಿಯಲ್ಲಿಯೇ ಮುಖ್ಯಗಳಾಗಿರುವುದರಿಂದ ಶ್ರೀಹರಿಯೇ ಸಮಸ್ತರೂಪಗಳುಳ್ಳವನು. ಎಲ್ಲಾ ಹೆಸರುಗಳುಳ್ಳವನು, ಅವನೊಬ್ಬನೇ ಸರ್ವರಿಗೂ ನಿಯಾಮಕನು. ಸರ್ವಶಕ್ತನು ॥ ೩ ॥

ಪೀ—ಶ್ರೀಹರಿಗೇನೇ ಸಮಸ್ತರೂಪಗಳು, ಸಮಸ್ತನಾಮಗಳು ಎಂಬುವುದು ಅಯುಕ್ತವು. ಬೇರೆಯವರಿಗೂ ರೂಪಾದಿಗಳಿವೆ, ಎಂದರೆ—

ಭಾ. ॥ (೧) **ಅನ್ಯೇಷಾಂ ಯಚ್ಚ ರೂಪಾದ್ಯಂ ತತ್ತಸ್ಮಾತ್ಪ್ರತಿಬಿಂಬಿತಂ ॥ (೨) ಏಕ ಏವಾದ್ವಿತೀಯೋಽಸಾವತಃ ಸರ್ವೋತ್ತಮತ್ವತಃ । ಮುಖ್ಯತ್ವಾದೇವ ಸನ್ನಾಮಾ ಸತ್ಪ್ರತಿಜ್ಞಾನರೂಪತಃ । ಸತ್ಯಮಿತ್ಯುಚ್ಯತೇ ವಿಷ್ಣುಸ್ಸತ್ಯಂ ನಾಸಿ ಕಥಂಚನ ॥ (೩) ಅತೋಽನೂಚಾನಮಾನೀ ತ್ವಂ ಸ್ತಬ್ಧೋಽಸಿ ಕುತ ಏವ ತು । ತ್ವತ್ತೋಽಧಿಕಾ ಅಪೀಂದ್ರಾದ್ಯಾಸ್ತದುಚ್ಚಾಶ್ಚ ಶ್ರಿಯಾದಯಃ । ಸರ್ವೋಽಜ್ಞೋ ಭಗವಾನ್ವಿಷ್ಣುರ್ನ ಸ್ತಂಭೋಽಸ್ಯಾಪಿ ಹಿ ಕ್ವಚಿತ್ ॥ (೪) ಅತೋ ನ ವಿದ್ವಾನ್ಮಾನೀ ಸ್ಯಾ ಮಹಾನಸ್ಮೀತಿ ವಾ ಮನಃ । ನ ತೇ ಸ್ಯಾತ್ಸ್ಮೈವ ಚ ಸ್ತಂಭೋ ಜ್ಞಾತ್ವಾ ವಿಷ್ಣೋಃ ಬಲಂ ಪರಂ ॥ ನ ಹಿ ವಿಷ್ಣೋರ್ಬಲಂ ಜ್ಞಾತ್ವಾ ಸ್ತಂಭಹೇತುಃ ಕಥಂಚನ ॥ ಇತ್ಯಾದಿ ಸಾಮಸಂಹಿತಾಯಾಂ ॥ ೧, ೨, ೩, ೪, ೫, ೬, ೭ ॥ ಇತಿ ಚತುರ್ಥಃ ಖಂಡಃ ॥ ಲ—೪ ॥**

॥ ೪ ॥

ಆ ॥ (೧) ಬೇರೆಯವರ ರೂಪಾದಿಗಳೆಲ್ಲವೂ ಶ್ರೀಹರಿಯ ರೂಪಾದಿಗಳಿಂದಲೇ ಹುಟ್ಟಿದ್ದು. (೨) (ತಾನು ಸಾಕ್ಷಾತ್ ದೇವನೋ ಕೇಶವನ ಅಂಶನೋ, ಎಂದು ತಿಳಿದಿರತಕ್ಕ ದುರಹಂಕಾರವುಳ್ಳ ಶ್ವೇತಕೇತುವಿನ ಅಹಂಕಾರ ಕಳೆಯುವುದಕ್ಕಾಗಿ **ಸದೇವ ಸೋಮ್ಯ** ಇತ್ಯಾದಿ ಉಪದೇಶವು. ಇದರಿಂದ ಅಹಂಕಾರನಿವೃತ್ತಿಯು ಹೇಗೆ ಉಂಟಾಯಿತು, ಎಂದರೆ—) ಶ್ರೀಹರಿಯೊಬ್ಬನೇ ಸರ್ವೋತ್ತಮನಾದುದರಿಂದ ಅದ್ವಿತೀಯನೆನಿಸುತ್ತಾನೆ. ಮುಖ್ಯನಾದುದರಿಂದಲೇ **ಸತ್** ಎನಿಸುತ್ತಾನೆ. ದೋಷಲೇಶರಹಿತನೂ ಸರ್ವತ್ರವ್ಯಾಪ್ತನೂ ಜ್ಞಾನಸ್ವರೂಪನೂ ಆದುದರಿಂದ **ಸತ್ಯಂ** ಎನಿಸುತ್ತಾನೆ. ಆಂತಹ ವಿಷ್ಣುವು ನೀನು ಸರ್ವಥಾ ಅಗಲಾರೆ. (೩) ಅದುಕಾರಣ ನೀನು ಷಡಂಗವೇದಗಳನ್ನು ಕಲಿತವನೆಂದು ಅಭಿಮಾನವುಳ್ಳವನೂ ಅವಿನೀತನೂ ಏಕೆ ಆಗಿರುತ್ತಿ? ನಿನಗಿಂತ ಇಂದ್ರಾದಿ ದೇವತೆಗಳು ಉತ್ತಮರಾಗಿರುತ್ತಾರೆ. ಅವರಿ

ಸೀತಲಾ ಲಕ್ಷ್ಮ್ಯಾದಿಗಳು ಭುಕ್ತವು. ವಿಷ್ಣುವ ಸರ್ವಾಂತರಲಿ ಭುಕ್ತವೋಕ್ತವು. ವಿಷ್ಣುವಿಗೆ ಸದ್ಭಕ್ತನು ಎಲ್ಲಿಯೂ ತಾ ॥ (೫) ಅದುಕಾರಣ ಹಾಗು ವಿದ್ವಾಂಸನೆಂಬ ಅಭಿಮಾನವನ್ನು ಬಿಟ್ಟುಬಿಡು. ಸರ್ವರಿಂತ ಶ್ರೇಷ್ಠನಾಗಿರುತ್ತೇನೆಂಬ ಮನಸ್ಸು ನಿನಗೆ ಬಂದುಬಾಗಬಾರದು. ವಿಷ್ಣುವಿನ ಸರ್ವೋತ್ಕೃಷ್ಟವಾದ ವಸ್ತುಶಕ್ತಿ ಬಲವನ್ನು ತೀರ್ಥ. ವಿನಯವನ್ನು ಹೊಂದು. ಅವಿನೀತರಾಗಬೇಡ. ವಿಷ್ಣುವಿನ ಬಲವನ್ನು ತಿಳಿದು ಹೇಗೂ ಅವಿನಯ ಬಂದುಬಾಗಬಾರದು. ಏಂದು ಸಾಮಸಂಹಿತೆಯಲ್ಲಿ ಹೇಳಿದೆ ॥ ೪ - ೪ ॥ ೫ ॥

ಸಾಲ್ಯಶೇ ಖಂಡವು ಮುಗಿಯಿತು.

ಖಿಲೇ ಖಂಡವು

ಈ - ತನ್ನೇ ವಿಜಾನೀಹಿ ಎಂದು ಶ್ರುತಿಶ್ಚವಾತಿಗಳನ್ನು ತೆಗೆದುಕೊಳ್ಳುತ್ತಾರೆ—

ಉ. ॥ ಅನ್ನಮಶಿತಂ ತ್ರೇಧಾ ವಿಧೀಯತೇ ತಸ್ಯ ಯತ್ ಸ್ಥವಿಷ್ಠೋ ಧಾತುಸ್ತತ್ಪುರೀಷಂ ಭವತಿ ಯೋ ಮಧ್ಯಮಸ್ತನ್ಮಾಂಸಂ ಯೋಽಣಿಷ್ಠಸ್ತನ್ಮನಃ ॥ ೧ ॥

ಅ ॥ ತಿನ್ನಲಿಕ್ಕೆ ಬೇಕಾಗುವಾದ ಮಾಡಿದ ವಸ್ತುವು ಪ್ರಾಣಿಗಳಿಂದ ತಿನ್ನಲ್ಪಟ್ಟುದಾಗಿ ಮೂರು ಭಾಗವಾಗುತ್ತದೆ. ಅದರಲ್ಲಿ ತಿಂದ ವಸ್ತುವಿನ ಅತಿ ಸ್ಥೂಲವಾದ ಭಾಗವು ಅವೇದ್ಯ (ಮಲ) ವಾಗುತ್ತದೆ. ತಿಂದ ವಸ್ತುವಿನ ಮಧ್ಯಮ ಭಾಗ (ಸಾಮಾನ್ಯಾಕಾರ) ವು ಮಾಂಸವಾಗುತ್ತದೆ. ಅತಿಸೂಕ್ಷ್ಮ ಸಾರಭಾಗವು ಹಿತ ಎಂಬ ನಾಡಿಗಳಲ್ಲಿ ಪ್ರವೇಶಿಸಿ ಮನಸ್ಸಾಗಿರಲು ಇದುವರೆಗೆ ವಾಡಿ ಮನಸ್ಸು ಆಗುತ್ತದೆ

ವಿ ॥ (1) ತಿನ್ನಪದಿಂದ ಪೃಥ್ವಿಯಲ್ಲಿ ಪ್ರಸ್ತುತವಾಗಿದ್ದರೂ ಅದು ತಿನ್ನಲಿಕ್ಕೆ ಅಯೋಗ್ಯವಾಗಿರುವುದರಿಂದ ಪೃಥ್ವಿಯಲ್ಲಿ ಹುಟ್ಟಿದ ತಿನ್ನಲು ಬೇಕಾಗುವಾದ ವಸ್ತುವನ್ನು ತಮ್ಮಲಿಕ್ಕೆ ಬೇಕು. (2) ಇಲ್ಲಿ ಅನ್ನ ಅಪ್ ಮೊದಲಾದ ಶಬ್ದಗಳಿಂದ ಪೃಥ್ವಿ ಅಪ್ ತೇಜಸ್ಸುಗಳಿಗೆ ಅಭಿಮಾನಿಗಳಾದ ದೇವತೆಗಳ ಅಂಶಗಳಿಂದೊಡಗೂಡಿದ ತಿನ್ನುವ ಜಡವಸ್ತುಗಳನ್ನು ತಮ್ಮಲಿಕ್ಕೆ ಬೇಕು. (3) ಮತ್ತು ಪ್ರಜಿಷ್ಠಾನ್ನ ದಲ್ಲಿ ಅಭಿಮಾನಿಗಳಾಗಿರತಕ್ಕ ತಿಮಾದಿಗಳನ್ನು ತಮ್ಮಲಿಕ್ಕೆ ಬೇಕು. ಅಂತಹ ಅಭಿಮಾನ್ಯಂಶಗಳನ್ನು ತಿನ್ನುವುದೆಂದರೆ-ಅವರನ್ನು ಉದಜೀವಿಸಿಕೊಂಡಿರುವುದು. ಅವರನ್ನಾಶ್ರಯಿಸುತ್ತಿರುವುದು. (4) ಜೀತಸಾಜೀತನಗಳಿಂದ ಕೂಡಿದ ಅನ್ನಾದಿಗಳನ್ನು ತಿಂದರೆ ತಮ್ಮತಮ್ಮ ಅಂಶಗಳಿಂದ ಮೂರು ಪಾಲಾಗಿ ಮಾಂಸಾದಿಗಳು ಆಗುತ್ತವೆ ಅಂದರೆ—ಜೀತಸಾಂಶಕ್ಕೆ ಮಾಂಸಾದಿ ಜಾವವೆಂದರೆ ಮಾಂಸಾದಿಗಳಲ್ಲಿ ವಿಶೇಷ ಸನ್ನಿಧಾನವಿರುವುದು (5) ಪ್ರಜಿತಕ್ಕಿಂತ ಇಂಡ ಅನ್ನಾದಿಗಳ ಮಧ್ಯದ ಅತ್ಯಣು ಭಾಗಗಳಿಂದ ಮಾಂಸ ಮನಸ್ಸು ಮೊದಲಾದವುಗಳಿಗೆ ಅಭಿವೃದ್ಧಿಯು. (೬) ತಾಯಿಯು ಇಂಡ ಅನ್ನಾದಿಗಳು ಗರ್ಭದಲ್ಲಿ ಕೆಲವು ವಸ್ತುಗಳಾಗಿ ಪರಿಣಾಮಗಳಾಗುತ್ತವೆ. ಕೆಲವು ವಸ್ತುಗಳಿಗೆ ಪುಷ್ಟಿಯನ್ನು ಮಾಡುತ್ತವೆ. ॥ ೧ ॥

ಉ. ॥ ಆಪಃ ಪೀತಾಸ್ತ್ರೇಧಾ ವಿಧೀಯಂತೇ ತಾಸಾಂ ಯತ್ ಸ್ಥವಿಷ್ಠೋ ಧಾತುಸ್ತನ್ಮೂತ್ರಂ ಭವತಿ ಯೋ ಮಧ್ಯಮಸ್ತಲ್ಲೋಹಿತಂ ಯೋಽಣಿಷ್ಠಃ ಸ ಪ್ರಾಣಃ ॥ ೨ ॥

ಅ ॥ ಜಲಗಳಿಗೆ ಅಭಿಮಾನಿಗಳಾದ ದೇವತೆಗಳ ಅಂಶಗಳಿಂದೊಡಗೂಡಿದ ಜಲಗಳನ್ನು ಕುಡಿದರೆ

ಅವು ಜೀವನಾಂಶ ಜಡಾಂಶಗಳಿಂದ ಮೂರು ಪಾಲಾಗುತ್ತವೆ. ಅವುಗಳಲ್ಲಿ ಅತಿ ಸ್ಥೂಲಭಾಗವು ಮೂತ್ರವಾಗಿಯೂ, ಮಧ್ಯಮ ಭಾಗವು ರಕ್ತವಾಗಿಯೂ ಆಗುತ್ತದೆ ಅತ್ಯಣು ಸಾರಭಾಗವು ಪ್ರಾಣವಾಗುತ್ತದೆ.

ವಿ ॥ (1) ಅಮೇಧ್ಯ ಮೂತ್ರಗಳಿಗೆ ಅಪವಿತ್ರವಾದ ದೇವತೆಗಳ ಅಂಶಗಳು ಅಭಿಮಾನಿಗಳೆಂದು ಕೆಲವರು ಹೇಳುತ್ತಾರೆ ಇನ್ನಿತರರು, ಅನ್ನಾಭಿಮಾನಿಗಳಾದ ದೇವತೆಗಳ ಅಂಶಗಳೇ ಅಭಿಮಾನಿಗಳಾಗಿ ಇರುತ್ತಾರೆ. ಅವರು ನಿರ್ದಿಷ್ಟರಾಗಿರುವುದರಿಂದ ಇವನಿಗೆ ದೋಷವಿಲ್ಲವೆನ್ನುತ್ತಾರೆ. ॥ ೨ ॥

ಉ. ॥ ತೇಜೋಽಶಿತಂ ತ್ರೇಧಾ ವಿಧೀಯತೇ ತಸ್ಯ ಯತ್ ಸ್ಥವಿಷ್ಠೋ ಧಾತುಸ್ತದಸ್ಥಿ ಭವತಿ ಯೋ ಮಧ್ಯಮಃ ಸ ಮಜ್ಜಾ ಯೋಽಣಿಷ್ಠಃ ಸಾ ವಾಕ್ ॥ ೩ ॥

ಅ ॥ ತುಪ್ಪ ಮೊದಲಾದ ತೈಜಸ ಸಾರವಸ್ತುಗಳನ್ನು ತಿಂದರೆ ಅದರಲ್ಲಿ ಅತಿ ಸ್ಥೂಲ ಭಾಗವು ಎಲುಬು ಆಗುತ್ತದೆ. ಮಧ್ಯಮ ಭಾಗವು ಮಜ್ಜಾ (ಎಲುಬುಗಳೊಳಗಣ ಸ್ನೇಹ) ಆಗುತ್ತದೆ. ಅತ್ಯಣು ಭಾಗವು ವಾಗಿಂದ್ರಿಯವಾಗುತ್ತದೆ. (ಘೃತಾದಿಗಳ ಭಕ್ಷಣದಿಂದ ಮಾತಾಡುವ ಶಕ್ತಿಯು ಹೆಚ್ಚುತ್ತದೆಂಬುವುದು ಲೋಕಪ್ರಸಿದ್ಧ.) ॥ ೩ ॥

ಟೀ - ಈ ದೇವತೆಗಳಿಗೆ ಪುರೀಷ (ಅಮೇಧ್ಯ) ಮಾಂಸಾದಿಗಳಲ್ಲಿ ಎಲ್ಲಾ ಒಂದೇ ರೀತಿಯಾಗಿ ಅಭಿಮಾನವಲ್ಲ. ಪರಂತು ಮನಃಪ್ರಾಣಾದಿಗಳಲ್ಲಿ ಮುಖ್ಯವಾಗಿ ಅಭಿಮಾನವೆನ್ನುತ್ತಾರೆ—

ಉ. ॥ ಅನ್ನಮಯಂ ಹಿ ಸೋಮ್ಯ ಮನ ಆಪೋಮಯಃ ಪ್ರಾಣಸ್ತೇಜೋಮಯೀ ವಾಗಿತಿ ಭೂಯ ಏವ ಮಾ ಭಗವಾನ್ವಿಜ್ಞಾಪಯತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತಿ ಪಂಚಮಃ ಖಂಡಃ ॥ ಲ-೫ ॥ ॥ ೪ ॥

ಅ ॥ ಎಲೋ ಮಗನೇ, ಮನಸ್ಸು ಪ್ರಧಾನವಾಗಿ ಅನ್ನ ಎನಿಸಿಕೊಂಡ ರುದ್ರಾದಿಗಳೇ ಅಭಿಮಾನಿಗಳಾಗಿ ಉಳ್ಳದ್ದು. ಪ್ರಮಾಣಪ್ರಸಿದ್ಧವು. ಪ್ರಾಣವು ಪ್ರಧಾನವಾಗಿ ಆಪ್ ಎಂದು ಹೆಸರುಳ್ಳ ವಾಯ್ವಾದಿಗಳೇ ಅಭಿಮಾನಿಗಳಾಗಿ ಉಳ್ಳದ್ದು. ವಾಗಿಂದ್ರಿಯವು ಪ್ರಧಾನವಾಗಿ ತೇಜಃ ಎನಿಸಿದ ಲಕ್ಷ್ಮ್ಯಾದಿಗಳೇ ಅಭಿಮಾನಿಗಳಾಗಿ ಉಳ್ಳದ್ದು, ಹೀಗೆ ತಂದೆಯಿಂದ ಉಪದೇಶಿಸಿಕೊಂಡ ಶ್ವೇತಕೇತುವು ತಂದೆಯೊಡನೆ ಅನ್ನಮಯಂ ಹಿ ಇತ್ಯಾದ್ಯುಕ್ತವಾದ ತತ್ತ್ವವನ್ನೇ ಸ್ಪಷ್ಟವಾಗಿ ನನಗೆ ತಾವು ಮರಳಿ ದೃಷ್ಟಾಂತವನ್ನು ಜೇ ವಿಶೇಷವಾಗಿ ವಿವರಿಸಿ ತಿಳಿಸಬೇಕು, ಎಂದು ವಿಜ್ಞಾಪಿಸಿಕೊಂಡನು. ಆಗ ತಂದೆಯವರು ಹಾಗೆಯೇ ಆಗಲಿ ಎಂದರು. ॥ ೮—೫ ॥ ॥ ೫ ॥

ಟೀ—ಈ ಪ್ರಕರಣವು ದೇವತೆಗಳನ್ನು ತಿಳಿಸುತ್ತದೆ ಎಂದು ಅರ್ಥಹೇಳಿದ್ದು ಯುಕ್ತವಲ್ಲ. ಏಕೆಂದರೆ—ಯೋ ಮಧ್ಯಮಸ್ತನ್ಮಾಂಸಂ ಎಂದು ಮಾಂಸಾದಿ ಶಬ್ದಗಳು ಶ್ರುತಗಳಾಗಿವೆ. ಅವುಗಳು ಪ್ರಸಿದ್ಧ ಮಾಂಸಾದಿಗಳನ್ನೇ ಹೇಳತಕ್ಕವುಗಳು ಎಂದರೆ—

ಭಾ. ॥ (೧) ॥ ದೇವತಾ ಏವ ಮಾಂಸಾದಿಶಬ್ದವಾಚ್ಯಾಃ । ತತ್ರ ಪ್ರವೇಶಾತ್ ॥ (೨) ಅಶ್ಯಮಾನಾಶ್ಚೋಪಜೀವ್ಯತ್ವಾತ್ । (೩) ನ ಚ ದುಃಖಿಂ ತಾಸಾಂ । ಐಶ್ವರ್ಯಾತ್ ॥ (೪) ತಿಸ್ರೋ ದೇವತಾಃ ಪುರುಷಂ ಪ್ರಾಪ್ಯ ತ್ರಿವೃತ್ತ್ರಿವೃದಿತಿ ಪ್ರಸ್ತುತತ್ವಾತ್ । (೫) ಜೀವ

ಇತಿ ಭಗವತೋಽನಿರುದ್ಧಸ್ಯಾಸ್ಯಾಂ ॥ ಇತಿ ಚ ಪ್ರತಿಃ ॥ (೬) ಪ್ರಾಣಸ್ಯ ಪ್ರಾಣಶ್ಚಕ್ಷುಷಶ್ಚಕ್ಷುರ್ಜೀವಸ್ಯ ಜೀವ ಇತಿ ಪ್ರಧಾನಸ್ಯ ಪ್ರಧಾನಮಿತಿ ಭಗವಾನಬ್ರವೀತ್ ॥ ಇತಿ ಚ ॥ (೭) ಪ್ರಾಣಾಧಾರೋ ಹರಿರ್ಜಾನಕ್ಕೋ ಜೀವರೂಪ್ಯತೋ ಹರೇಃ । ಸಂಸಾರಿಣೋ ಜೀವತಾ ತು ಜಡನಾಡ್ಯಾನಶಕ್ತಿತಾ ॥ ಇತಿ ಚ ॥ ॥ ೧೯ ॥

ಅ ॥ (೧೯) ಕೆಲವು ಅಜ್ಞ-ಅನ್ನವೆನಿಸಿದ ಲಕ್ಷ್ಮೀ ಪ್ರಾಣ ರುದ್ರರೇ ಮೊದಲಾದ ಶಬ್ದಗಳಿಂದ ಮುಖ್ಯವಾಗಿ ಹೇಳಲ್ಪಟ್ಟಿರುತ್ತಾರೆ (ಅದು ಹೇಗೆಂದರೆ:- ಮೊದಮೊದಲಿಗಳಲ್ಲಿ ದೇವತೆಗಳು ನಿಯಾಮಕರಾಗಿ ಪ್ರವೇಶಿಸಿಕೊಂಡಿರುತ್ತಾರೆ (ನಿಯಮ್ಯಗಳನ್ನು ಹೇಳತಕ್ಕ ಶಬ್ದಗಳು ನಿಯಾಮಕರಲ್ಲಿ ಮುಖ್ಯವಾಗಿ ಇರುತ್ತವೆ.) (೨) (ಅವರೂ ಅನ್ನಾದಿ ಶಬ್ದಗಳಿಂದ ಹೇಳಲ್ಪಡುವರು. ದೇವತೆಗಳನ್ನು. ಏತಿಂದರೆ-ಅನ್ನವು ತೃಪ್ತಿಪ್ರದವಾಗಿರುವ. ಜಲವೂ ತೃಪ್ತಿಪ್ರದವಾಗಿರುವ. ಅದು ದೇವತೆಯೂಗಿರಿತ್ತಿವಸ್ಸು ಎಂದರೆ:-) ದೇವತೆಗಳೇ ಯಜಮಾನ್ಯರಾಗಿರುವುದರಿಂದ (ಯಜಮಾನರಾಗಿರುವುದರಿಂದ. ಅನ್ನವೆನಿಸಿಕೊಳ್ಳುತ್ತಾರೆ (ಹೀಗೆ ಅರ್ಥವಾಗುವಹಿಗಿದ್ದರೆ-ತೇಜೋಽಬಿಲಂ ಎಂದು ಪ್ರಸಿದ್ಧ ತೇಜಸ್ಸು ಅನ್ನವಾಗಿ ತೃಪ್ತಿಪ್ರದವಾಗಿರುವುದು ಎಂದು ಅರ್ಥ ಹೇಳಿದ ಅಯುಕ್ತವಾಗಬೇಕಾಗುವುದು. ಆದಕಾರಣ ಅದಿ ತೇಜಸ್ಸಿನಿಂದ ದೇವತೆಯನ್ನು ಇಟ್ಟು ಕೊಂಡ ಬೇಕಾಗಿರುವುದರಿಂದ ಅದರಂತೆಯೇ ಇದ್ದರೂ ದೇವತೆಗಳನ್ನೇ ಇಟ್ಟುಕೊಂಡ ಬೇಕು. (೩) (ತೃಪ್ತಿಪ್ರದವಸ್ತು ವಸ್ತುಗಳಿಂದಾಗಿ ದೇವತೆಗಳನ್ನು ಸಹಕಾರಿಗಳಾಗಿ ದೇವತೆಗಳಿಗೆ ಮಾಡುವ ಬದಲಿಕೊಳ್ಳಬೇಕಾಗಿರುವುದು. ಮನೆಯು ಸುಖವಾಗಿ ಆಗಬೇಕಾದರೆ ಹಸುವನ್ನೂ ಕಟ್ಟಿಕೊಳ್ಳಬೇಕಾಗಿರುವಂತೆ. ಎಂದರೆ ಅನ್ನವನ್ನು ತಿನ್ನುವಾಗ ಅನ್ನದೊಳಗಣ ದೇವತೆಗಳಿಗೆ ದಾಸವು ಬರುವುದಿಲ್ಲ (ಹೇಗೆಂದರೆ ಕಟ್ಟಿಕೊಳ್ಳುವ ಮನೆಯೊಳಗಿದ್ದವನಿಗೂ ಅಗ್ನಿಸ್ತಂಭನ ಮಾಡತಕ್ಕ ಶಕ್ತಿಯಿದ್ದರೆ ಹೇಗೆ ಅತನು ಕಟ್ಟಿಕೊಳ್ಳುವುದಿಲ್ಲವೋ ಹಾಗೆಯೇ ಆ ದೇವತೆಗಳಿಗೆ ಅಧಿಷ್ಠಿತಳಿಗಳಿಗೆ ಸಾಮರ್ಥ್ಯವಿದ್ದುದರಿಂದ ದಾಸವಿರುವುದಿಲ್ಲ (೪) (ಅನ್ನಾದಿಗಳು ದೇವತೆಗಳೆಂದು ಏಕೆ ಇಟ್ಟುಕೊಂಡ ಬೇಕು. ಪ್ರತಿಪ್ರ ಅನ್ನಾದಿಗಳನ್ನೇ ಏಕೆ ಇಟ್ಟುಕೊಂಡ ಬಾರದೆಂದರೆ-ಅನೇ ಖಂಡದ ಏನೇ ಮಂತ್ರವಿದ್ದರೆ) ತಿಸ್ರೋ ದೇವತಾ: ಪುರುಷಂ ಪ್ರಾವಿಶನ್ ತಿರ್ಯಙ್ ತಿರ್ಯಙ್ ಎಂದು ದೇವತೆಗಳೇ ಪ್ರವೇಶಿಸಿರುತ್ತಾರೆ (ಪ್ರತಿಪ್ರವಾಗಿ ಅರ್ಥ ಇಟ್ಟುಕೊಂಡರೆ ಅದು ಅಯುಕ್ತವಾಗಿಬೇಕಾಗುವುದು.) (೫) (ಮತ್ತು ಈ ಪ್ರಕರಣದಲ್ಲಿ ಅನ್ನ ಮೊದಲಾದ ಶಬ್ದಗಳಿಂದ ಪ್ರಸಿದ್ಧವಾದ ಅನ್ನಾದಿಗಳನ್ನು ಮಾತ್ರ ಒಡಂಬಟ್ಟರೆ ಇದಾ: ತಿಸ್ರೋ ದೇವತಾ: ಅನೇನ ಜೀವೇನ ಎಂಬ ವಾಕ್ಯವು ಅಯುಕ್ತವಾಗಿರಿತ್ತಾಗುವುದೆಂಬ ಅಭಿಪ್ರಾಯದಿಂದ ಜೀವಶಬ್ದವು ಭಗವಚ್ಛಬ್ದವನ್ನು ಹೇಳುತ್ತದೆಯೆಂದಲ್ಲಿ ವೇದಪ್ರಮಾಣವನ್ನು ಹೇಳುತ್ತಾರೆ-) ಜೀವ ಎಂಬ ಶಬ್ದವೆ ಮುಖ್ಯವಾದರೂ ಅನಿರುದ್ಧರೂಪಿ ಶ್ರೀಹರಿಗೆ ಹೆಸರು ಎಂದು ವೇದವೂ ಇದೆ. (೬) (ಅನಿರುದ್ಧನಿಗೆ ಜೀವನಿಂದ ಅಭೇದವಿದ್ದರೂಯುಕ್ತ ಜೀವ ಎಂಬ ಹೆಸರು ಅಲ್ಲ. ಪರಂತು ಜೀವರಿಗೆ ಜೀವತ್ವ (ಪ್ರಾಣಧಾರಣ)ವನ್ನು ಕೊಡುವುದರಿಂದ ಜೀವ ಎಂಬ ಹೆಸರು ಎಂಬ ಅಭಿಪ್ರಾಯದಿಂದ ವೇದ ಹೇಳುತ್ತಾರೆ-) ವಾಸುದೇವಾದಿಗಳಲ್ಲಿ ಪೂರಗಳಲ್ಲಿ ಶ್ರೀಹರಿಯು ಮುಖ್ಯಪ್ರಾಣನಿಗೆ ಚೈತನ್ಯವನ್ನು ಜೀವತ್ವವನ್ನು ಕೊಡುವ ಶಕ್ತಿಯನ್ನು. ಜೀವನಿಗೆ ಜೀವತ್ವ (ಪ್ರಾಣಧಾರಣೆ)ವನ್ನು ಪ್ರಧಾನಕ್ಕೆ ಪ್ರಾಧಾನ್ಯ ಶಕ್ತಿಯನ್ನು ಕೊಡುವವನು ಎಂದು ವೇದವು. (೭) (ಜೀವ ಎಂಬ ಶಬ್ದ ಪ್ರವೃತ್ತಿಗೆ ಕಾರಣವಾದ ಪ್ರಾಣಧಾರಕತ್ವವು ಶ್ರೀಹರಿಗೇನೇ ಕೂಡುವುದರಿಂದ ಶ್ರೀಹರಿಯೇ ಜೀವನೆನಿಸುತ್ತಾನೆ. ಎಂಬುದಲ್ಲಿ ಕೃತಿಪ್ರಮಾಣ ಹೇಳುತ್ತಾರೆ-) ಪ್ರಾಣನಿಗೆ ಆಶ್ರಯನಾದವನು ಶ್ರೀಹರಿಯೇ. (ಶಕ್ತಿಯು ಇದ್ದಿದ್ದರೂ ಮರಣವು ಕಾಣುತ್ತಿರುವುದರಿಂದ) ಮತ್ತೊಬ್ಬನಲ್ಲ. ಅದುಕಾರಣ ಶ್ರೀಹರಿಯಲ್ಲಿಯೇ ಜೀವ ಎಂಬ ಶಬ್ದವು. (ಪ್ರಾಣವದೆ-ಸಂಸಾರಿಗಳಲ್ಲಿ ಜೀವ ಎಂಬ ಶಬ್ದವಿರುವುದು ಹೇಗೆ ಎಂದರೆ-) ಹುಟ್ಟುವುದರಿಂದ ಜೀವ. ಲೋಕಾಂತರಕ್ಕೆ ಹೋಗುವುದರಿಂದ ಮ. ಹೀಗೆ ಸಂಸಾರಿಯು

ಪೀ—ಜೀವಶಬ್ದಕ್ಕೆ ಶ್ರೀಹರಿಯಲ್ಲ ಶಕ್ತಿಯಿದ್ದರೂ ಶ್ರೀಹರಿಯನ್ನು ಏಕೆ ಇಟ್ಟುಕೊಳ್ಳಬೇಕು. ಸಂಸಾರಿಯಾದ ಜೀವನನ್ನೇ ಏಕೆ ಇಟ್ಟುಕೊಳ್ಳಬಾರದು, ಎಂದರೆ--

ಭಾ. ॥ (೧) ಜೀವಶಬ್ದೇನ (ಬ್ಧಸ್ಯ) ಸಂಸಾರಿವಿವಕ್ಷಾಯಾಂ (ಪ್ರಯತ್ನೇ) ತತ್ತೇಜ ಐಕ್ಷತೇತ್ಯಾದಿನಾ ತೇಷಾಮೇವ ಜೀವನತ್ವಾವಗತೇರ್ನಾಮರೂಪವ್ಯಾಕರಣೇ ಜೀವಾಂತರ-ಪ್ರವೇಶೋ ನಾಪೇಕ್ಷಿತಃ ॥ (೨) ಪ್ರಸುಪ್ತಲೋಕತಂತ್ರಾಣಾಂ ನಿಶಾಮ್ಯ ಗತಿಮೀಶ್ವರಃ । ತ್ರಯೋವಿಂಶತಿತತ್ತ್ವಾನಾಂ ಗಣಂ ಯುಗಪದಾವಿಶತ್ ॥ ಇತಿ ॥ (೩) ಯಾವದ್ಬಲಿಂ ತೇಽಜ ಹರಾಮ ಕಾಲೇ ಯಥಾ ವಯಂ ಚಾನ್ನಮದಾಮ ಯತ್ರ । ಯಥೋಭಯೇಷಾಂ ತ ಇಮೇ ಹ ಲೋಕಾ ಬಲಿಂ ಹರಂತೋಽನ್ನಮದಂತ್ಯಮೂಢಾಃ ॥ ತ್ವಂ ನಃ ಸ ಚಕ್ಷುಃ ಪರಿದೇಹಿ ಶಕ್ರಾ ದೇವಕ್ರಿಯಾರ್ಥೇ ಯದನುಗ್ರಹೇಣ । ಇತಿ ತತ್ತ್ವಾನಾಂ ಪ್ರಾರ್ಥನಾನಂತರಂ ಭಗವತ ಏವ ಶೇಷು ಪ್ರವೇಶೋಕ್ತೇರ್ಭಾಗವತೇ । ಯತಶ್ಚ ಸ ಏವ (ಷ) ಜೀವೇನಾತ್ಮನಾನುಪ್ರಭೂತಃ ಪೇಪೀಯಮಾನೋ ಮೋದಮಾನಸ್ತಿಷ್ಠತೀತಿ ಭಗವತ್ಯೇವ ಜೀವಶಬ್ದಃ ಪ್ರಯುಜ್ಯತೇ ॥ (೪) ನ ಹ್ಯಚೇತನಸ್ಯ ಮೋದಮಾನತ್ವಮಸ್ತಿ । ಅತೋಽಂತರ್ಯಾಮಿರೂಪ ಏವ ಜೀವಶಬ್ದಃ ॥ ೨ ॥

ಅ ॥ (೧) ಜೀವ ಎಂಬ ಪದದಿಂದ ಸಂಸಾರಿಯನ್ನು ಇಟ್ಟುಕೊಂಡರೆ-ತತ್ತೇಜ ಐಕ್ಷತ, ತಾ ಆಪ ಐಕ್ಷಂತ ಇತ್ಯಾದಿ ವಾಕ್ಯಗಳಿಂದ ಇವನಾಸ್ತಿಸ್ಯಃ ಎಂದು ಹೇಳಲ್ಪಟ್ಟವರು ಜೀತನರೆಂದು ತಿಳಿದು ಬರುವುದರಿಂದ ನಾಮರೂಪಗಳನ್ನು ಮಾಡಲಿಕ್ಕೆ ಜೀವಾಂತರನಲ್ಲಿ ಪ್ರವೇಶವು ಅವಶ್ಯಕವಲ್ಲ. (ಅಂದರೆ—ಇವನಾಸ್ತಿಸ್ಯಃ ಎಂದು ಹೇಳಲ್ಪಟ್ಟ ತೇಜಸ್ಸು ಅಪ್, ಅನ್ನ ಗಳು ಅಜೀತನಗಳೆಂದಾದರೆ ಆಗ ಜೀತನಗಳಂ ದೊಡಗೂಡದೆ ಇದ್ದ ತೇಜಸ್ಸು ಮೊದಲಾದವುಗಳು ಕಾರ್ಯಮಾಡಲಿಕ್ಕೆ ಅಶಕ್ತಗಳಾಗಿರುವುದರಿಂದ ನಾಮ ರೂಪಗಳನ್ನು ಸೃಷ್ಟಿಸಲಿಕ್ಕೆ ಸಂಸಾರಿಜೀವರಲ್ಲಿ ಪ್ರವೇಶವು ಅವಶ್ಯಕವಾಗುತ್ತಿತ್ತು. ಹಾಗೆ ಇಲ್ಲ. ಐಕ್ಷತ= ನೋಡುತ್ತಾನೆಂದು ಹೇಳಿದುದರಿಂದಲೂ, ಇವಾಸ್ತಿಸ್ಯೋ ದೇವತಾಃ ಎಂಬೀ ವೇದದಿಂದಲೂ, ಜೀತನರೆಂದೇ ತಿಳಿಯುತ್ತದೆ. ಜೀತನರಲ್ಲಿ ಜೀತನಾಂತರಕ್ಕೆ ಪ್ರವೇಶವು ಅನಾವಶ್ಯಕವು. ಅದುಕಾರಣ ಇಲ್ಲಿ ಜೀವ ಶಬ್ದವು ಸಂಸಾರಿಗಳನ್ನು ಹೇಳುವುದಿಲ್ಲ.) (೨) (ಹೀಗಾದರೆ—ಶ್ರೀಹರಿಯು ಪ್ರವೇಶಿಸಿದನು, ಎಂಬುವುದೂ ವ್ಯರ್ಥವಾಗುವುದೆಂದರೆ—ಹಾಗೆ ಹೇಳಕೂಡದು. ಏಕೆಂದರೆ – ಜೀತನಗಳಿಗೂ ಸ್ವತಃ ಪ್ರವೃತ್ತಿಮಾಡಲಿಕ್ಕೆ ಶಕ್ತಿಯಿಲ್ಲದಿರುವುದರಿಂದ ಈಶ್ವರ ಪ್ರವೇಶವು ಅವಶ್ಯಕವೇ ಎಂಬ ಅಭಿಪ್ರಾಯದಿಂದ ಪ್ರಮಾಣ ಹೇಳುತ್ತಾರೆ) ಲೋಕಗಳನ್ನು ಸೃಷ್ಟಿಸತಕ್ಕ ಶಕ್ತಿಯ ಅವಿರ್ಭಾವಿಲ್ಲದಿರುವ ದೇವತೆಗಳ ಸ್ಥಿತಿಯನ್ನು ಶ್ರೀಹರಿಯು ನೋಡಿ ಇಪ್ಪತ್ತಮೂರು ತತ್ತ್ವಗಳ ಸಮೂಹವನ್ನು ಪ್ರವೇಶಿಸಿದನು. (ಅಂದರೆ—**ಶಬ್ದಾದ್ಯಾಃ ನಭ ಆದ್ಯಾಶ್ಚ ಮನೋಯುಕ್ತೇಂದ್ರಿಯಾಣಿ ಚ । ಅಹಂಕಾರೋ ಮಹಾಂಶ್ಚೈವ ತ್ರಯೋವಿಂಶತಿಕೋ ಗಣಃ ॥** ಶಬ್ದ, ಸ್ಪರ್ಶ, ರೂಪ, ರಸ, ಗಂಧ, ಆಕಾಶ, ಪೃಥಿವೀ, ಜಲ, ತೇಜಸ್ಸು, ವಾಯು, ಮನಸ್ಸು, ಚಕ್ಷುಃ, ಶ್ರೋತ್ರಃ, ಘ್ರಾಣ, ರಸನಾ, ತ್ವಕ್, ವಾಕ್, ಹಸ್ತ, ಪಾದ, ಗುದ, ಗುಹ್ಯೇಂದ್ರಿಯ, ಅಹಂಕಾರತತ್ತ್ವ, ಮಹತ್ತತ್ತ್ವ, ಹೀಗೆ ಭಾಗವತದಲ್ಲಿ ಸ್ವತಃ ಪ್ರವೃತ್ತಿಮಾಡಲಿಕ್ಕೆ ಅಸಮರ್ಥಗಳಾದ ತತ್ವ ಗಳಲ್ಲಿ ಶ್ರೀಹರಿಗೆ ಪ್ರವೇಶಗಳನ್ನು ಹೇಳಿದುದರಿಂದ ಈಶ್ವರನು ಪ್ರವೇಶಿಸುತ್ತಾನೆಂಬುವುದು ವ್ಯರ್ಥವಲ್ಲ.) (೩) (ಇಪ್ಪತ್ತಮೂರು ತತ್ತ್ವಗಳೂ ಅಜೀತನಗಳೆಂದು ಏಕೆ ಆಗಲಾರದು. ಅವುಗಳಿಗೆ ಸ್ವತಃ ಪ್ರವೃತ್ತಿ ಮಾಡಲಿಕ್ಕೆ ಶಕ್ತಿಇಲ್ಲದಿರುವುದರಿಂದ ಶ್ರೀಹರಿಯು ಪ್ರವೇಶಿಸುತ್ತಾನೆಂದು ಹೇಳಿದರೆ ಶ್ರೀಹರಿಯು ಪ್ರವೇ ಶಿಸುತ್ತಾನೆಂಬುದು ಸಾರ್ಥಕವಾಗುತ್ತದೆ ಎಂದರೆ-) ಪೂರ್ವಬಲಿ ಇತ್ಯಾದಿಗಳಲ್ಲಿ ತತ್ತ್ವಗಳು ಪ್ರಾರ್ಥಿಸಿದ

ಮೇಲೆ ಶ್ರೀಹರಿಯು ಅವುಗಳಲ್ಲಿ ಪ್ರವೇಶಿಸುತ್ತಾನೆಯೆಂದು ಹೇಳಲ್ಪಟ್ಟಿದೆ (ಅಚೇತನವಸ್ತುಗಳು ವ್ಯಾಪ್ತಿಗೆ ಬರುವವು) (1) ಶ್ರೀಹರಿಯೇ ಜಗತ್ತಿನ ಎಲ್ಲಾ ಸಂಸಾರಿಜೀವರಲ್ಲಿ ಹೇಗೆ ನಿಯಮಿಸುವನು ಎಂಬುದನ್ನು ತಿಳಿಸುವುದಕ್ಕಾಗಿ ಜಗತ್ತಿನಲ್ಲಿ ಜೀವಿಗಳು ಅನೇಕರಿದ್ದಾರೆ. ಅವರಲ್ಲಿ ಕೆಲವರು ಸಾಧನಸಂಪತ್ತಿಯಿಂದ ಕೂಡಿದವರಾಗ

ರಿತಿ ನಾಮ ಮುಖ್ಯತೋ ನಾಸ್ತಿ । ಅಗ್ನಿನಾಮಾನಿ ತ್ರೀಣಿ ರೂಪಾಣೀತಿ ನಾಮಧೇಯಂ ಸತ್ಯಂ ಇತ್ಯಾದಿ ॥ ಇತಿ ಪಂಚಮಃ ಖಂಡಃ ॥ ೮—೫ ॥ ॥ ೫ ॥

ಅ ॥ (೧) ಶ್ರೀಹರಿಯು ಸುಷುಮ್ಣಾಖಗಳನ್ನು ಜ್ಞಾನ ಜೀವನ ಅಂತರ್ಗತನಾಗಿ ಜೀವಿಸಿಸಿದವನು. ಹೊರಗೆ ಇದ್ದು ವ್ಯಾಪಾರಗಳನ್ನು ನಡಿಸುವವನು ಸತ್ ಎನಿಸುತ್ತಾನೆ. ಎಂದು ತತ್ವವಿವೇಕ ಎಂಬ ಗ್ರಂಥದಲ್ಲಿದೆ. (೨) (**ವಾಚಾರಂಭಣಂ ವಿಕಾರೋ ನಾಮಧೇಯಂ** ಎಂಬುದಕ್ಕೆ **ಅತೋಽನ್ಯನಾಮಧೇಯಂ ತು ವಾಚಾರಂಭಣಹೇತುತಃ । ಸಾಂಕೇತ್ಯೇನ ವಿಕಾರಃ ಸ್ಯಾತ್** ಎಂದು **ಅನ್ಯ** ಎಂದು ಇಲ್ಲದಿದ್ದ ಪದವನ್ನು ಇಟ್ಟುಕೊಂಡು **ಅನ್ಯನಾಮಧೇಯಂ** ಎಂದು ಅರ್ಥ ಹೇಳಿದ್ದು ಯುಕ್ತವಲ್ಲ. ಏಂದರೆ **ವಿಕಾರೋ ನಾಮಧೇಯಂ** ಎಂದಿಷ್ಟಕ್ಕೆ ಅರ್ಥ ಹೇಳುತ್ತಾರೆ—) ಅಗ್ನಿಗೆ ಅಗ್ನಿಯೆಂಬ ಹೆಸರೂ ಮುಖ್ಯವಾಗಿ ಇಲ್ಲ. (ಹೀಗೆಯೇ ಎಲ್ಲಾ ದೇವತೆಗಳಿಗೂ ಆಯಾಯ ಹೆಸರು ಮುಖ್ಯವಾಗಿ ಇಲ್ಲ.) (ಆದ ಕಾರಣ **ನಾಮಧೇಯಂ** ಎಂಬುವುದಕ್ಕೆ ನಾಮವೆಂದು ಅರ್ಥವು. **ಅನ್ಯನಾಮಧೇಯಂ** ಎಂದು ಹೇಳುವುದಿಲ್ಲ. **ವಿಕಾರಃ** ಎಂಬುದಕ್ಕೆ ಮುಖ್ಯವಾಗಿ ಇಲ್ಲ ಎಂದು ಅರ್ಥವು. ಆದುಕಾರಣ ಹೇಳದಿದ್ದುದನ್ನು ಕಲ್ಪಿಸಿಕೊಳ್ಳುವುದಿಲ್ಲ.) (೩) (ಆದರೂ **ತ್ರೀಣಿ ರೂಪಾಣೀತ್ಯೇವ ಸತ್ಯಂ** ಎಂಬುವ ವಾಕ್ಯಕ್ಕೆ ಮೂವರಿಗೇನೇ ನಿತ್ಯತ್ವವೆಂದು ತಾತ್ಪರ್ಯ ಹೇಳಿದ್ದು ಯುಕ್ತವಲ್ಲ. ವೇದದಲ್ಲಿ **ತ್ರೀಣಿ ರೂಪಾಣಿ** ಎಂಬ ನಾಮಧೇಯನೇ ಲಕ್ಷಾಲಕ್ಷಿಗಳಲ್ಲಿ ಮುಖ್ಯವೆಂದು ಹೇಳಿದುದರಿಂದ ಅಗ್ನಿ ಎಂಬ ಶಬ್ದವು ಲಕ್ಷಾಲಕ್ಷಿದಿಗಳಲ್ಲಿ ಮುಖ್ಯವಾಗಲಾರದು. ಎಂದರೆ—) ಅಗ್ನಿಯೆಂದು ಹೆಸರುಳ್ಳ **ತ್ರೀಣಿ ರೂಪಾಣಿ** ಎಂಬ ನಾಮಧೇಯವು ಲಕ್ಷಕ್ಕೇ ಮೊದಲಾದ ಮೂವರಿಗೇನೇ ಮುಖ್ಯವು. (ಅಗ್ನಿಯೆಂಬ ನಾಮಮಾತ್ರ ಮುಖ್ಯವೆಂದು ಅಲ್ಲ ಎಲ್ಲಾ ನಾಮಧೇಯವೂ ಮುಖ್ಯವೇ. ಏವಂಚ ಅಗ್ನಿ ಆದಿತ್ಯ ಮೊದಲಾದ ಎಲ್ಲಾ ನಾಮಗಳೂ ೩ ಲಕ್ಷಾಲಕ್ಷಿದಿಗಳಿಗೇನೇ ಮುಖ್ಯಗಳಾಗಿರುವುದರಿಂದ ಅವರೇ ೩ ಶಬ್ದಗಳಿಂದ ಮುಖ್ಯವಾಗಿ ಹೇಳಲ್ಪಡುವರು. ॥ ೮—೫ ॥ ॥ ೫ ॥

ಇದನೇ ಖಂಡವು ಮುಗಿಯಿತು.

೬ನೇ ಖಂಡನ್ನು

ಪೀ—ಹಿಂದೆ ಹೇಳಿದ ಅರ್ಥವನ್ನು ದೃಷ್ಟಾಂತಕೊಟ್ಟು ವಿವರಿಸುತ್ತಾರೆ—

ಉ. ॥ ದಧ್ನಃ ಸೋಮ್ಯ ಮಥ್ಯಮಾನಸ್ಯ ಯೋಽಣಿಮಾ ಸ ಊರ್ಧ್ವಃ ಸಮುದೀಷತಿ ತತ್ಸರ್ಪಿರ್ಭವತಿ ॥ ೧ ॥

ಅ ॥ ಎಲೋ ಮಗನೇ, ಹೇಗೆ ಮೊಸರನ್ನು ಕಡೆಯುವಾಗ ಹೊಸ ಬೆಣ್ಣೆಯೆಂಬ ಸೂಕ್ಷ್ಮಭಾಗವು ಎಲ್ಲಾ ವಸ್ತುಗಳಿಗಿಂತಲೂ ಶ್ರೇಷ್ಠವಾಗಿ ಮೇಲಕ್ಕೆ ಬರುತ್ತದೆ- ಅದು ತುಪ್ಪವಾಗುತ್ತದೆ. ॥ ೧ ॥

ಉ. ॥ ಏವ ಮೇವ ಖಲು ಸೋಮ್ಯಾನ್ನಸ್ಯಾಶ್ಯಮಾನಸ್ಯ ಯೋಽಣಿಮಾ ಸಊರ್ಧ್ವಃ ಸಮುದೀಷತಿ ತನ್ಮನೋ ಭವತಿ ॥ ೨ ॥

ಅ ॥ ಹೀಗೆಯೇ ತಿನ್ನಲ್ಪಡತಕ್ಕ ಅನ್ನದ ಸಾರಾಂಶವು ಮೇಲಕ್ಕೆ ಬರುತ್ತದೆ. ಅದು ಮನಸ್ಸಿನಲ್ಲಿ ಪ್ರವೇಶಮಾಡಿ ಮನಸ್ಸು ಮೊದಲಾದುದು ವೃದ್ಧಿಹೊಂದಲಿಕ್ಕೆ ಕಾರಣವಾಗುತ್ತದೆ. ॥ ೨ ॥

ಉ. ॥ ಅಪಾಶ್ ಸೋಮ್ಯ ಪೀಯಮಾನಾನಾಂ ಯೋಽಣಿಮಾ ಸ ಊರ್ಧ್ವಃ ಸಮುದೀಷತಿ ಸ ಪ್ರಾಣೋ ಭವತಿ ॥ ೩ ॥

ಅ ॥ ನೀರನ್ನು ಕುಡಿಯುವಾಗ ಅದರ ಸೂಕ್ಷ್ಮಾಂಶವು ಮೇಲೆ ಬಂದು ಪ್ರಾಣವು ಆಗುತ್ತದೆ ॥ ೩ ॥

ಉ. ॥ ತೇಜಸಃ ಸೋಮ್ಯೋಶ್ಯಮಾನಸ್ಯ ಯೋಽಣಿಮಾ ಸ ಊರ್ಧ್ವಃ ಸಮುದೀಷತಿ ಸಾ ವಾಗ್ಭವತಿ ॥ ೪ ॥

ಅ ॥ ತೈಜಸನಾದ ತಿನ್ನಲ್ಪಡುವುದನ್ನು ತಿನ್ನುವಾಗ ಅದರ ಸೂಕ್ಷ್ಮಾಂಶವು ಮೇಲಕ್ಕೆ ಬಂದು ವಾಕ್ ಆಗುತ್ತದೆ ॥ ೪ ॥

ಉ. ॥ ಅನ್ನಮಯಂ ಸೋಮ್ಯ ಮನ ಆಪೋಮಯಃ ಪ್ರಾಣಸ್ತೇಜೋಮಯೀ ವಾಗಿತಿ ಭೂಯ ಏವ ಮಾ ಭಗವಾನ್ವಿಜ್ಞಾಪಯತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತಿ ಪಷ್ಠಃ ಖಂಡಃ ॥ ೬ ॥ ॥ ೭ ॥

ಅ ॥ ಮನಸ್ಸಿಗೆ ರುದ್ರನು ಅಭಿಮಾನಿಯು. ಪ್ರಾಣಕ್ಕೆ ವಾಯುವು ಅಭಿಮಾನಿಯು. ವಾಗಿಂದ್ರಿಯಕ್ಕೆ ಲಕ್ಷ್ಮಿಯು ಅಭಿಮಾನಿಯು. ಹೀಗೆ ತಂದೆಯವರು ಉಪದೇಶಿಸಿದಾಗ ಶ್ವೇತಕೇತುವು ತನಗೆ ತಿನ್ನಲು ಇದರ ಅರ್ಥವು ಏನೆಂದು ವಿವರಿಸಿ ಹೇಳಿರಿ. ಎಂದು ಪ್ರಾರ್ಥಿಸಿದನು. ಆಗ ತಂದೆಯು ಹಾಗೆಯೇ ಆಗಲಿ ಎಂದನು. ॥ ೬ ॥

ಆರನೇ ಖಂಡವು ಮುಗಿಯಿತು.

ಏನೇ ಖಂಡವು

ಉ. ॥ ಷೋಡಶಕಲಃ ಸೋಮ್ಯ ಪುರುಷಃ ಪಂಚದಶಾಹಾನಿ ಮಾಶೀಃ ಕಾಮಮನುಪಃ ಪಿಬಾಪೋಮಯಃ ಪ್ರಾಣೋ ನ ಪಿಬತೋ ವಿಚ್ಛೇತ್ಸ್ಯತ ಇತಿ ॥ ೧ ॥

ಅ ॥ ಎಲೋ ಮಗನೇ ಜೀವನು ಹದಿನಾರುಕಲೆಗಳುಳ್ಳವನು. (ಅವುಗಳ ಮುಖ್ಯದಲ್ಲಿ ಮನಸ್ಸು ಒಂದು ಕಲೆಯು, ಅದರಲ್ಲಿ ಮನಸ್ಸು ಅನ್ನಮಯವಾಗಬೇಕೆಂದು ಪ್ರತ್ಯಕ್ಷವಾಗಿ ನೋಡಲಿಕ್ಕೆ ತಿಳಿಸಿದರೆ-) ಹದಿನೈದು ದಿವಸಗಳಲ್ಲಿ ಅನ್ನವನ್ನು ಬಿಟ್ಟಾದೇಶ ಇಚ್ಛಾನುಸಾರವಾಗಿ ನೀರನ್ನು ಕುಡಿ. ಪ್ರಾಣವು ಜಲಮಯವು. ಅದಕ್ಕೆ ವಾಯುವು ಅಭಿಮಾನಿಯು. ನೀರು ಕುಡಿಯದಿದ್ದರೆ ಪ್ರಾಣವು ಹೋಗುವುದು.

ವಿ ॥ (1) ಪ್ರಾಣ ಶ್ರದ್ಧೆ, ಆಕಾಶ, ವಾಯು, ಜ್ಯೋತಿಸ್ಸು, ಜಲ ಪೃಥಿವೀ, ಇಂದ್ರಿಯ, ಮನಸ್ಸು ಅನ್ನ, ವೀರ್ಯ, ತಪಸ್ಸು, ಮಂತ್ರ, ಕರ್ಮ, ಲೋಕ ನಾಮ ಹೀಗೆ ೧೬ಕಲೆಗಳು. ಇವುಗಳಿಗೆ ಪ್ರಾಣ, ಸರಸ್ವತೀ, ವಿನಾಯಕ, ಪ್ರಾಣನ ಮಗನಾದ ವಾಯುವು, ಅಗ್ನಿ, ಬ್ರಹ್ಮ, ವಸು, ಇಂದ್ರ, ರುದ್ರ, ಚಂದ್ರ ವರುಣ, ವಸ್ವಿ, ಸ್ಕಂದ, ಪುಷ್ಕರ, ಪರ್ಜನ್ಯ ಜಗತ್ ಎಂದು ೧೬ ದೇವತೆಗಳು ಅಭಿಮಾನಿಗಳು. ॥ ೧ ॥

ಉ. ॥ ಸ ಹ ಪಂಚದಶಾಹಾನಿ ನಾ(ಶೀದಥ)ಶಾಥ ಹೈನಮುಪಸಸಾದ ಕಿಂಬ್ರುವೀಮಿ ಭೋ ಇತ್ಯೃಚಃ ಸೋಮ್ಯ ಯಜೂಗ್ಷಿ ಸಾಮಾನೀತಿ ಸ ಹೋವಾಚ ನ ಮೈ ಮಾ ಪ್ರತಿಭಾಂತಿ ಭೋ ಇತಿ ॥ ೨ ॥

ಅ ॥ ಆಗ ಮಗನು (ಮನಸ್ಸು ಅನ್ನಮಯ ಎಂಬುವುದನ್ನು ತನ್ನ ಅನುಭವಕ್ಕೆ ತರುವುದಕ್ಕಾಗಿ) ೧೫ ದಿವಸಗಳಲ್ಲಿ ಅನ್ನವನ್ನು ಉಣ್ಣಲಿಲ್ಲ. ನೀರು ಕುಡಿದನು. ೧೬ನೇ ದಿನದಲ್ಲಿ ತಂದೆಯ ಬಳಿಗೆ ಬಂದು ಹೇಳಿದನು. ಎಲೋ ತಂದೆಯೇ ಕಲಿತ ಗ್ರಂಥಗಳ ಮಧ್ಯದಲ್ಲಿ ಯಾವುದನ್ನು ಹೇಳಲಿ ಎಂದನು. ಆಗ ತಂದೆಯು ಋಗ್ವೇದವನ್ನೂ ಯಜುರ್ವೇದವನ್ನೂ ಸಾಮವೇದವನ್ನೂ ಹೇಳು ಎಂದನು. ಆಗ ಮಗನು ಎಲೋ ಪೂಜ್ಯರಾದ ತಂದೆಯವರೇ ಋಗ್ವೇದ ಮೊದಲಾದವುಗಳು ನನ್ನ ಮನಸ್ಸಿನಲ್ಲಿ ಯಾವುದೂ ತೋರುವುದೇ ಇಲ್ಲವೆಂದು ಹೇಳಿದನು. ॥ ೩ ॥

ಉ. ॥ ತಗ್ಂ ಹೋವಾಚ ಯಥಾ ಸೋಮ್ಯ ಮಹತೋಽಭ್ಯಾಹಿತಸ್ಯೈಕೋಽಂಗಾರಃ ಖದ್ಯೋತಮಾತ್ರಃ ಪರಿಶಿಷ್ಟಃ ಸ್ಯಾತ್ತೇನ ತತೋಽಪಿ ನ ಬಹು ದಹೇದೇವಗ್ಂ ಸೋಮ್ಯ ತೇ ಷೋಡಶಾನಾಂ ಕಲಾನಾಮೇಕಾ ಕಲ್ಯಾತಿಶಿಷ್ಟಾ ಸ್ಯಾತ್ತಯೈತರ್ಹಿ ವೇದಾನ್ನಾನುಭವಸ್ಯಶಾನ ॥ ೪ ॥

ಅ ॥ ಆಗ ತಂದೆಯು ಹೇಳಿದನು. (ಕಾರಣ ಹೇಳುತ್ತೇನೆ. ಕೇಳು) ಎಲೋ ಮಗನೇ ದೊಡ್ಡದಾದ ಅಭಿವೃದ್ಧವಾದ ಬೆಂಕಿಯ ರಾಶಿಯಲ್ಲಿ ಒಂದೊಂದೇ ಕೆಂಡಗಳು ಹೋಗಿ ಒಂದು ಕೆಂಡವು ಮಿಣುಕು ಹುಳದಷ್ಟು ಮಿಣುಗುತ್ತಿದ್ದರೆ (ಅದರಿಂದ ಅಷ್ಟು ಚಿಕ್ಕ ವಸ್ತುವನ್ನೇ ಸುಡಬಹುದು. ಹುಲ್ಲು ಮೊದಲಾದ ಸಹಕಾರಿಗಳಿಲ್ಲದಿರುವುದರಿಂದ) ಅದಕ್ಕಿಂತ ಹೆಚ್ಚಿನ ವಸ್ತುಗಳನ್ನು ಸುಡಲಾರದು. ಹೀಗೆಯೇ ನಿನ್ನ ೧೬ ಕಲೆಗಳ ಮಧ್ಯದಲ್ಲಿ ಪ್ರಾಣವೆಂಬ ಒಂದು ಕಲೆಯು ಮಾತ್ರ ಉಳಿದಿರುವುದು. (ಬೇರೆ ಕಲೆಗಳು ಬಳಲಿ ಬೆಂಡಾಗಿವೆ. ಆದುಕಾರಣ ಮಿಣುಕು ಹುಳದಷ್ಟು ಚಿಕ್ಕದಾದ ಕೆಂಡಕ್ಕೆ ಸಮವಾದ) ಕಲೆಯಿಂದ ಈಗ (ಹೆಂದಾಡಿಕೊಂಡು ಮಾತ್ರ ಇರುತ್ತಿ. ಅನ್ನವೆಂಬ ಸಹಕಾರಿಯಿಲ್ಲದಿರುವುದರಿಂದ) ಮನಸ್ಸಿನಿಂದ ವೇದಗಳನ್ನು ತಿಳಿಯುವುದಿಲ್ಲ. (ಅನ್ನವಿಲ್ಲವಾದರೆ ಮನಸ್ಸಿನ ವ್ಯಾಪಾರವು ಇರಲಾರದು.) ಆದುಕಾರಣ ಈಗ ಉಣ್ಣು. (ಉಂಡರೆ ಮನೋವ್ಯಾಪಾರವು ಸರಿಯಾಗಿ ನಡೆಯುವುದು) ಇದರಿಂದ ಮನಸ್ಸು ಅನ್ನದಿಂದ ಬೆಳೆಯುತ್ತದೆ ಎಂದು ಸ್ಪಷ್ಟವಾಗುತ್ತದೆ. ॥ ೪ ॥

ಉ. ॥ ಅಥ ಮೇ ವಿಜ್ಞಾಸ್ಯಸೀತಿ ಸ ಹಾ(ಶೀದಥ)ಶಾಥ ಹೈನಮುಪಸಸಾದ ತಗ್ಂ ಹ ಯತ್ಕಿಂ ಚ (ಚಿತ್ತ) ಪಪ್ರಚ್ಛ ಸರ್ವಗ್ಂ ಹ ಪ್ರತಿಪೇದೇ ತಗ್ಂ ಹೋವಾಚ ॥ ೪ ॥

ಅ ॥ ಉಂಡ ಮೇಲೆ ನಾನು ಕೇಳಿದ್ದೆಲ್ಲವನ್ನೂ ತಿಳಿಯುವಿ, ಎಂದು ತಂದೆಯು ಹೇಳಿದನು ಆ ಮೇಲೆ ಮಗನು ಉಂಡು ತಂದೆಯ ಬಳಿಗೆ ಬಂದನು. ಆ ಮಗನೊಡನೆ ತಂದೆಯು ಯಾವುದನ್ನು ಕೇಳಿದನೋ ಅವೆಲ್ಲ ಋಗ್ವೇದಾದಿಗಳನ್ನು ಮಗನು ಮನಸ್ಸಿನಿಂದ ತಿಳಿದನು. ಮುಖದಿಂದ ಹೇಳಿದನು. ಆ ಮಗನಿಗೆ ತಂದೆಯು ಹೇಳಿದನು. ॥ ೪ ॥

ಉ. ॥ ಯಥಾ ಸೋಮ್ಯ ಮಹತೋಽಭ್ಯಾಹಿತಸ್ಯೈಕಮಂಗಾರಂ ಖದ್ಯೋತಮಾತ್ರಂ ಪರಿಶಿಷ್ಯಂ ತಂ ತೃಣೈರುಪಸಮಾಧಾಯ ಪ್ರಜ್ವಲಯೇತ್ತೇನ ತತೋಽಪಿ ಬಹು ದಹೇತ್ ॥ ೫ ॥

ಅ ॥ ಎಲೋ ಮಗನೇ ಹೆಚ್ಚು ಅಭಿವೃದ್ಧಿ ಹೊಂದಿದ ದೊಡ್ಡಿಯ ಒಂದು ಕಿಡಿಯು ಮಿಣುಕುಹುಳದಷ್ಟು ಬೆಳಕುತ್ತದೆ. ಅದನ್ನು ಹುಲ್ಲುಗಳಿಂದ ವೃದ್ಧಿಗೊಳಿಸುತ್ತಾನೆ ಅದರಿಂದ (ಪಶುಕಾರಯು ಅಭಿವೃದ್ಧಿಗೊಳಿಸಿರುವುದರಿಂದ ಹೆಚ್ಚು ವಸ್ತುಗಳನ್ನು ಸುಡುವ ಶಕ್ತಿಯುಳ್ಳದ್ದಾಗುತ್ತದೆ ॥ ೫ ॥

ಉ. ॥ ಏವಮೇ ಸೋಮ್ಯ ತೇ ಷೋಡಶಾನಾಂ ಕಲಾನಾಮೇಕಾ ಕಲಾತಿಶಿಷ್ಯಾಭೂತ್ಸಾನ್ನೇನೋಪಸಮಾಹಿತಾ ಪ್ರಾಜ್ವಾಲೀತ್ತಯೈತರ್ಹಿ ವೇದಾನನುಭವಸ್ಯನ್ನಮಯೀ ಹಿ ಸೋಮ್ಯ ಮನ ಆಪೋಮಯಃ ಪ್ರಾಣಸ್ತೇಜೋಮಯೀ ವಾಗಿತಿ ತದ್ಧಾಸ್ಯ ವಿಜಜ್ಞಾವಿತಿ ವಿಜಜ್ಞಾವಿತಿ ॥ ೬ ॥

ಅ ॥ ಎಲೋ ಮಗನೇ ನಿನ್ನ ೧೬ ಕಲೆಗಳ ಮಧ್ಯದಲ್ಲಿ ಒಂದು ಕಲೆಯು ಬೆಳೆದಿದೆ. ಅದು ಅನ್ನದಿಂದ ಅಭಿವೃದ್ಧವಾಗಿ ಜ್ವಲಿಸುವುದು. ಅನ್ನದಿಂದ ವೃದ್ಧಿಹೊಂದಿದ ೧೬ನೇ ಕಲೆಯಿಂದ ಈಗ ವೇದಗಳನ್ನು ಮನಸ್ಸಿನಿಂದ ತಿಳಿಯುತ್ತಿ. ಮುಂದಿಂದ ಹೇಳುತ್ತಿ. ಎಲೋ ಮಗನೇ ಮನಸ್ಸು ಅನ್ನಮಯವೆಂಬುದು ಹೇಗೆ ಸಿದ್ಧವಾಯಿತೋ ಹಾಗೆಯೇ ಪ್ರಾಣವು ಜಲಮಯವು, ವಾಗಿಂದ್ರಿಯವು ತೇಜೋಮಯವು ಹೀಗೆ ಮನಸ್ಸು ಮೊದಲಾದುದು ಅನ್ನಾದಿಗಳ ಅಂಶಗಳಿಂದ ವೃದ್ಧಿಹೊಂದುತ್ತವೆ ಅನ್ನ ದೇವತಾದಿಗಳ ಅಧೀನವಾದುದು ಎಂದು ಶ್ವೇತಕೇತುವು ತಿಳಿದನು

ವಿ ॥ (1) ಬೇಗೆ ತಂದೆಯಿಂದ ಉಪದೇಶಿಸಿಕೊಂಡ ಶ್ವೇತಕೇತುವು ಸಂಪೂರ್ಣ ಅಭಿವೃದ್ಧಿಯನ್ನು ಕಳದುಕೊಂಡವನಾಗಿ ತಂದೆಯ ಉಪದೇಶಪ್ರಕಾರ ಶ್ವೇತಬಿಳಿ ಸರ್ವಾರಿಂಭಲೂ ಪ್ರಧಾನನು ಎಂದು ಸರಿಯಾಗಿ ತಿಳಿದುಕೊಂಡನು. (2) ಈ ವಿಷಯದಲ್ಲಿ ಹೇಳಿದ ಎಲ್ಲಾ ಪ್ರಮೇಯವೂ ಪ್ರಾವಣಾನೆಕವೆ (ಪ್ರವಣಾಶಿದ್ಧ ವು.) ಎಂದು ತಿಳಿಸುವುದಕ್ಕಾಗಿ ಎರಡು ಸಲ ಹೇಳಿದ್ದು. ॥ ೬ ॥

ಉ. ॥ ತದೇಷ ಶ್ಲೋಕಃ ॥ ಪಂಚೇಂದ್ರಿಯಸ್ಯ ಪುರುಷಸ್ಯ ಯದೇವ ಸ್ಯಾದನಾವೃತಂ । ತದಸ್ಯ ಪ್ರಜ್ಞಾ ಸ್ರವತಿ ದೃತೇಃ ಪಾದಾದಿವೋದಕಂ ದೃತೇಃ ಸಾದಾದಿವೋದಕಂ (ಇತಿ ಕ್ವಚಿತ್ಪಾಠ ಇತಿ ವೇದೇಷೀಯೇ) ॥ ಇತಿ ಸಪ್ತಮಃ ಖಂಡಃ ॥ ೮–೭ ॥ ॥ ೭ ॥

ಅ ॥ ಮನಸ್ಸು ಅನ್ನದಿಂದ ಅಭಿವೃದ್ಧಿಯನ್ನು ಹೊಂದುತ್ತದೆ ಎಂಬುವ ವಿಷಯದಲ್ಲಿ ಈ ಶ್ಲೋಕವು ಸಮ್ಮತಿಯಾಗುತ್ತದೆ. ಕಣ್ಣು ಮೊದಲಾದ ಐದು ಇಂದ್ರಿಯಗಳಿಂದಲೂ ಪುರುಷರ ಮನಸ್ಸು ಯಾವಾಗ ಅನ್ನದಿಂದ ವೃದ್ಧಿ ಹೊಂದುವುದಿಲ್ಲವೋ ಆಗ ಅವನ ಪ್ರಜ್ಞೆಯು (ಜ್ಞಾನವಿಶೇಷವು) ಚರ್ಮದ ಚೀಲದ ತೂತಿನಿಂದ ನೀರು ಸುರಿದುಹೋದಂತೆ ಸುರಿದುಹೋಗುತ್ತದೆ ॥ ೮ ॥ ॥ ೭ ॥

ಏಳನೇ ಖಂಡವು ಮುಗಿಯಿತು

ಅನೇ ಖಂಡವು

ಪೀ—ತಾನು ಮಹಾಜ್ಞಾನಿಯಾಗಿರುವುದರಿಂದ ಈಶ್ವರನೇ ಆಗಿದ್ದೇನೆಂದು ತಿಳಿದಿರುವ ಶ್ವೇತಕೇತುವಿಗೆ, ಈಶ್ವರನೇ ಸರ್ವರಿಗಿಂತಲೂ ಪ್ರಧಾನನು, ಶ್ವೇತಕೇತುವು ಅಪ್ರಧಾನನು, ಎಂದೂ ತಿಳಿಸಿ, ಶ್ವೇತಕೇತುವಿಗೆ ಸುಷುಪ್ತ್ಯಾದಿಗಳಲ್ಲಿ ಅಭೇದವೆಂಬ ಶಂಕೆಯನ್ನು ಸುಷುಪ್ತಿಯಲ್ಲಿಯೂ, ಈಶ್ವರನ ಅಧೀನನಾಗಿಯೇ ಇರುತ್ತಾನೆಂದು ಪರಿಹರಿಸುತ್ತಾ ಭೇದವನ್ನೇ ತಂದೆಯವರು ಮಗನಿಗೆ ಉಪದೇಶಿಸಿದರು, ಎಂದು ವೇದವು ಹೇಳುತ್ತದೆ—

ಉ. ॥ ಉದ್ದಾಲಕೋ ಹಾರುಣಿಃ ಶ್ವೇತಕೇತುಂ ಪುತ್ರಮುವಾಚ ಸ್ವಪ್ನಾಂತಂ ಮೇ ಸೋಮ್ಯ ವಿಜಾನೀಹೀತಿ ಯತ್ರೈತತ್ಪುರುಷಃ ಸ್ವಪಿತಿ ನಾಮ ಸತಾ ಸೋಮ್ಯ ತದಾ ಸಂಪನ್ನೋ ಭವತಿ ಸ್ವಮಪೀತೋ ಭವತಿ ತಸ್ಮಾದೇನꣳ ಸ್ವಪಿತೀತ್ಯಾಚಕ್ಷತೇ ಸ್ವꣳ ಹ್ಯಪೀತೋ ಭವತಿ ॥ ೧ ॥

ಅ ॥ ಅರುಣನ ಮಗನಾದ ಉದ್ದಾಲಕನು ಮಗನಾದ ಶ್ವೇತಕೇತುವಿಗೆ ಎಲೋ ಮಗನೇ, ಸುಷುಪ್ತಿಯ (ಗಾಢನಿದ್ದೆ) ಸ್ವರೂಪವನ್ನು ನನ್ನಿಂದ ತಿಳಿ, ಎಂದು ಮಗನಿಗೆ ಹೇಳಿದನು. (ಸುಷುಪ್ತಿಯಲ್ಲಿ ವಿಶೇಷವು ಯಾವುದು? ಏಕೆ ತಿಳಿಯಬೇಕೆಂದರೆ—) ಯಾವ ಕಾಲದಲ್ಲಿ ಈ ಜೀವನು ಮಲಗುತ್ತಾನೋ, ಆಗ ಪರಮಾತ್ಮನೊಡನೆ ಇರುತ್ತಾನೆ. (ಸ್ವಪ್ನದಲ್ಲಿ ಸ್ವಪಿತಿ ಎಂಬ ಶಬ್ದಪ್ರಯೋಗವೇ ಪ್ರಮಾಣವೆನ್ನುತ್ತಾರೆ—) ಗಾಢನಿದ್ರೆ ಕಾಲದಲ್ಲಿ ಹೃದಯ ಕಮಲದಲ್ಲಿರತಕ್ಕ ಸರ್ವ ಸ್ವತಂತ್ರನಾದ ಶ್ರೀಹರಿಯನ್ನು ಹೊಂದುತ್ತಾನೆ (ಬೇರೆಯವರಿಗೆ ತಿಳಿಯದಂತೆ ಪ್ರವೇಶಿಸುತ್ತಾನೆ) ಆದುದರಿಂದಲೇ ಗಾಢನಿದ್ದೆಯಲ್ಲಿರತಕ್ಕವನನ್ನು ವಿದ್ವಾಂಸರು ಸ್ವಪಿತಿ ಎಂದು ಹೇಳುತ್ತಾರೆ. (ಸ್ವಪಿತಿ ಎಂಬ ಶಬ್ದಪ್ರಯೋಗದಿಂದಲೇ ಗಾಢನಿದ್ದೆಯಲ್ಲಿದ್ದವನಿಗೆ ಸ್ವ ಎನಿಸಿದ ಶ್ರೀಹರಿಯ ಪ್ರಾಪ್ತಿಯಾಗುತ್ತದೆಂದು ತಿಳಿಯುತ್ತದೆ) (ಇದು ಮುಕ್ತಪರವೂ ಆಗುತ್ತದೆ.) ಹೇಗೆಂದರೆ—ಸ್ವಪ್ನ ಶಬ್ದದಿಂದ ಜೀವನ್ಮುಕ್ತಿರೂಪವಾದ ಸಂಧ್ಯಾವಸ್ಥೆಯನ್ನು ಇಟ್ಟುಕೊಳ್ಳಬೇಕು. ಮೋಕ್ಷವನ್ನು ನನಗೆ ತಿಳಿಸು ಯಾವಾಗ ಅಮುಕ್ತ ಜೀವನು ಮುಕ್ತನಾಗುತ್ತಾನೋ, ಆಗ ಶ್ರೀಹರಿಯ ಅತೀಸಾಮಿಪ್ಯವನ್ನು ಹೊಂದುತ್ತಾನೆ. ಮೋಕ್ಷದಲ್ಲಿ ಸ್ವತಂತ್ರನಾದ ಶ್ರೀಹರಿಯನ್ನು ಸಂಸಾರಿಗಳಿಗೆ ತಿಳಿಯದ ಹಾಗೆ ಪ್ರವೇಶಿಸುತ್ತಾನೆ. ಅಂದರೆ—ಅತೀಸಾಮಿಪ್ಯವನ್ನು ಹೊಂದುತ್ತಾನೆ.

ವಿ ॥ ಜಾಗ್ರದವಸ್ಥೆ ಸ್ವಪ್ನಾವಸ್ಥೆಗಳಲ್ಲಿ ಬಳಲಿದ ಜೀವನನ್ನು ಸುಷುಪ್ತಿಯಲ್ಲಿ ಬಳಲುವಿಕೆಯನ್ನು ಕಳೆಯುವುದಕ್ಕಾಗಿ ಶ್ರೀಹರಿಯು ತನ್ನೊಡನೆ ಸೇರಿಸಿಕೊಳ್ಳುತ್ತಾನೆ ಆಗಲೂ ಕೇವಲ ಈಶ್ವರನ ಅಧೀನನಾಗಿಯೇ ಇರುತ್ತಾನೆ. ಸ್ವತಂತ್ರನಾಗಿ ಇರುವುದೇ ಇಲ್ಲ. ॥ ೧ ॥

ಪೀ—ಹೀಗೆ ಜಾಗ್ರದವಸ್ಥೆ, ಸ್ವಪ್ನಾವಸ್ಥೆಗಳಲ್ಲಿ ಸಂಸಾರದಲ್ಲಿ ಆಗಲೀ ಬಳಲಿದ ಜೀವನಿಗೆ ಶ್ರಮವನ್ನು ಕಳೆಯುವುದಕ್ಕಾಗಿ ಜೀವನು ಸುಷುಪ್ತಿಯಲ್ಲಿ ಅಥವಾ ಮೋಕ್ಷದಲ್ಲಿ ಶ್ರೀಹರಿಯನ್ನು ಆಶ್ರಯಿಸಿರುತ್ತಾನೆ. ವಿಶೇಷವಾಗಿ ಈಶ್ವರಾಧೀನನಾಗಿರುತ್ತಾನೆಂಬುದನ್ನು ದೃಷ್ಟಾಂತಕೊಟ್ಟು ಹೇಳುತ್ತಾರೆ—

ಉ. ॥ ಸ ಯಥಾ ಶಕುನಿಃ ಸೂತ್ರೇಣ ಪ್ರಬದ್ಧೋ ದಿಶಂದಿಶಂ ಪತಿತ್ವಾನ್ಯತ್ರಾಯತನಮಲಬ್ಧ್ವಾ ಬಂಧನಮೇವೋಪಾಶ್ರಯತ ಏವಮೇವ ಖಲು

ಸೋಮ್ಯೈತನ್ಮನೋ ವಿಶಂವಿಶಂ ಪತಿತ್ವಾನ್ಯತ್ರಾಯತನಮಲಬ್ಧ್ವಾ ಪ್ರಾಣ-ಮೇವೋಪಶ್ರಯತೇ ಪ್ರಾಣಬಂಧನಂ ಹಿ ಸೋಮ್ಯ ಮನ ಇತಿ ॥ ೨ ॥

ಅ ॥ ಕ್ರಮಪ್ರಾಪ್ತ ದೃಷ್ಟಾಂತವನ್ನು ಹೇಗೆಂದರೆ— ಹಕ್ಕಿಯು ಬೇಡನ ಒಲೆಗೆ ಬಿಲುಕಿ ಅವನಿಂದ ಕಟ್ಟಲ್ಪಟ್ಟು (ಬಂಧನದಿಂದ ಬಿಡುಗಡೆ ಹೊಂದುವುದಕ್ಕಾಗಿ) ಪ್ರತಿದಿಕ್ಕಿನಲ್ಲಿಯೂ ಪಾರಾಗಲಂಬಂಧನದಿಂದ ಬಿಡುಗಡೆ ಹೊಂದದೆ ಬಂಧನ (ತನ್ನ ಪಾದದಲ್ಲಿ ಸಂಬಂಧವಾದ ಹಗ್ಗವನ್ನು ಕಟ್ಟುವ ಗೂಟ) ವನ್ನೇ ಬಳಲು ವಿಕೆಯನ್ನು ಹೋಗಲಾಡಿಸುವುದಕ್ಕಾಗಿ ಆಶ್ರಯಿಸುತ್ತದೋ, ಹಾಗೆಯೇ ಎಲೋ ಮಗನೇ, ತಿಳಿದು ಕೊಳ್ಳುವುದರಿಂದ ಮನಸ್ಸು ಎನಿಸಿದ ಜೀವನು ಸ್ವಪ್ನಾವಸ್ಥೆ ಜಾಗ್ರದವಸ್ಥೆಗಳಲ್ಲಿ ಅಫಲಾ ಸಂಸಾರದಲ್ಲಿ ಪ್ರತಿದಿಕ್ಕುಗಳಲ್ಲಿ ತಿರುಗಾಡಿ ಪ್ರಾಣನು ಹೊರತು ಬೇರೆ ಆಶ್ರಯವನ್ನು ಹೊಂದದೆ ಚಿಕ್ಕಾಗಿ ವ್ಯಾಪಾರ ಗಳನ್ನು ನಡಿಸುವುದರಿಂದ ಪ್ರಾಣನಿಂದಿಸಿದ ಶ್ರೇಷ್ಠರಿಯನ್ನೇ ಹೊಂದುತ್ತಾನೆ ಏಕೆಂದರೆ ಜೀವನು ಪ್ರಾಣ ನಿಂದಿಸಿದ ಶ್ರೇಷ್ಠರಿಯಿಂದ ಕಟ್ಟಲ್ಪಟ್ಟವನಾಗಿ (ಅಂದರೆ ಶ್ರೇಷ್ಠರಿಯ ಅಧೀನನಾಗಿ) ಇರುತ್ತಾನೆ ॥ ೨ ॥

ಏ— ಹೀಗೆ ಸುಷುಪ್ತಿಯಲ್ಲಿಯೂ ಮೋಕ್ಷದಲ್ಲಿಯೂ ಜೀವನು ಶ್ರೇಷ್ಠರಿಯ ಅಧೀನವಲ್ಲಿರುವನ ನೆಂದು ಹೇಳಿ ಈಗ ಜಾಗ್ರದವಸ್ಥೆಯಲ್ಲಿಯೂ ಜೀವನು ಈಶ್ವರನ ಅಧೀನದಲ್ಲಿರುತ್ತಾನೆಂದು ತಿಳಿಸುತ್ತಾರೆ—

ಉ. ॥ ಅಶನಾಯಾಪಿಪಾಸೇ ಸೋಮ್ಯ ವಿಜಾನೀಹೀತಿ ಯತ್ರೈತತ್ಪು-ರುಷೋಽಶಿಶಿಷತಿ ನಾಮಾಪ ಏವ ತದಶಿತಂ ನಯಂತೇ ಕದ್ಧಾ ಗೋನಾ-ಯೋಽಶ್ವನಾಯಃ ಪುರುಷನಾಯ ಇತ್ಯೇವಂ ತದಪ ಆಚಕ್ಷತೇ* ತನಾಯೇತಿ ತತ್ರೈತಚ್ಛುಂಗಮುತ್ಪತಿತಂ ಸೋಮ್ಯ ವಿಜಾನೀಹಿ ನೇದಮನೂಲಂ ಭವಿ-ಷ್ಯತೀತಿ ॥ ೩ ॥

ಅ ॥ ಎಲೋ ಮಗನೇ ಭೋಜನಮಾಡಬೇಕೆಂಬ ಇಚ್ಛೆಯೂ ಕುಡಿಯಬೇಕೆಂಬ ಇಚ್ಛೆಯೂ ಇವೆರಡೂ (ಜೀವರ ಅಧೀನಗಳಲ್ಲ. ಅದುಕಾರಣ ಜೀವರ ಅಧೀನವಲ್ಲದಿರತಕ್ಕವುಗಳು ಎಂಬುವುದನ್ನು ಹೇಳುತ್ತೇನೆ ಅದನ್ನು) ತಿಳಿ. (ಯಾರ ಅಧೀನಗಳು, ಅದನ್ನು ತಿಳಿಸು ಎಂದು ಮಗನು ಪ್ರಾರ್ಥಿಸಿದಾಗ ತಂದೆಯು ಹೇಳುತ್ತಾನೆ.) ಯಾವಾಗ ಈ ಸಂಸಾರವು ಅನ್ನವನ್ನು ಬಾಹ್ಯಾಲು ಇಚ್ಛಿಸುತ್ತಾನೋ, ಆಗ ಜಲಾಭಿಮಾನಿಯಾದ ಪ್ರಾಣನೇ ಅನ್ನದ ಇಚ್ಛೆಯನ್ನು ಹುಟ್ಟಿಸಿ ಆ ಮೇಲೆ ನೀರ ಅನ್ನವನ್ನು ತೇಜ (ಜಾಠರಾಗ್ನಿ) ಸ್ಪರ್ಶೋಗದಿಂದ ರಸ, ವೀರ್ಯಾದಿ ರೂಪದಿಂದ ಪರಿಣಮಿಸುತ್ತಾನೆ. (ಇದನ್ನು ದೃಷ್ಟಾಂತಕೊಟ್ಟು ವಿವರಿಸುತ್ತಾರೆ) ಹೇಗೆಂದರೆ ಗೋವಲಯ ಗೋವುಗಳನ್ನು ರಕ್ಷಿಸುವುದರಿಂದ ಗೋನಾಯಃ ಎನ್ನಿಸುತ್ತಾನೆ. ಕುದುರೆಯ ಕಾಪ್ಯರನು ಕುದುರೆಗಳನ್ನು ಕಾಪಾಡುವುದರಿಂದ ಅಶ್ವನಾಯಃ ಎನಿಸುತ್ತಾನೆ. ರಾಜನು ಅಧವಾ ಸೇನಾಪತಿಯು ಪ್ರಜೆಗಳನ್ನು ಕಾಪಾಡುವುದರಿಂದ ಪುರುಷನಾಯಃ ಎನಿಸುತ್ತಾನೆ ಹೇಗೋ, ಹಾಗೆಯೇ ಭೋಜನ ಮಾಡಲಿಕ್ಕೆ ಪ್ರೇರಕನಾಗುವುದರಿಂದ ಜಲಾಭಿಮಾನಿಯಾದ ಪ್ರಾಣದೇವತೆಯನ್ನು ಅಶನಾಯಾ ಎಂದು ವಿದ್ವಾಂಸರು ಹೇಳುತ್ತಾರೆ. (ಇದರಿಂದ ಜೀವನು ಜಲಾಭಿ ಮಾನಿಯಾದ ಪ್ರಾಣನ ಅಧೀನನೆಂದು ಸಿದ್ಧಿಸಿದರೂ ಭಗವದಧೀನನೆಂದು ಹೇಗೆ ಸಿದ್ಧಿಸುವುದೆಂದರೆ—) ಎಲೋ ಮಗನೇ ಪಕ್ವವಾದ ಗೋಧೀಬೀಜದಿಂದ ಅಂಕುರ ಹುಟ್ಟುವಂತೆಯೂ ಉಂಡ ಅನ್ನವು ನೀರಿನಿಂದ ರಸಾದಿ ರೂಪವಾಗಿ ಜೀರ್ಣವಾಗಲು ಅದು ರೇತಸ್ಸಿನ ರೂಪವಾಗಿ ಅದರ ದ್ವಾರಾ ಈ ಪ್ರತ್ಯಕ್ಷಸಿದ್ಧವಾದ

* ಅನ್ನಂ ರಸಾದಿರೂಪೇಣ ಪ್ರಾಣಾ ಪರಿಣಮಯ್ಯ ಎಂಬ ಶ್ರುತಾವಪಿ.

ಶಿಶುಶರೀರವನ್ನು ಹುಟ್ಟಿಸುತ್ತದೆ, ಎಂದು ತಿಳಿ. ಈ ಹುಟ್ಟುವ ಶರೀರವೆಂಬ ಕಾರ್ಯವು ಕರ್ತನು ಇಲ್ಲದಿರುವುದಾಗುವುದಿಲ್ಲವೆಂದೂ ತಿಳಿ, ಆ ಸರ್ವಕರ್ತನು ಈಶ್ವರನೆಂದೇ ತಿಳಿಯಬೇಕು.

ವಿ ॥ (1) (ಜಲಾಭಿಮಾನಿಯಾದ ಪ್ರಾಣನು ತೇಜಸ್ಸಿಗೆ ಅಭಿಮಾನಿನಿಯಾದ ಲಕ್ಷ್ಮೀದ್ವಾರಾ ಶ್ರೀಹರಿಯ ಅಧೀನನು, ಎಂದು ಸಿದ್ಧವೇ ಆಯಿತು.) (2) **ಸದೇವ ಸೋಮ್ಯ** ಇತ್ಯಾದಿಗಳಿಂದ ಶ್ರೀಹರಿಯು ಸರ್ವಜಗತ್ಕರ್ತನಾದುದರಿಂದ ಪ್ರಧಾನನು. ನೀನು ಅವನಿಂದ ಸೃಷ್ಟಿಸಲ್ಪಟ್ಟವನಾದುದರಿಂದ ಅಪ್ರಧಾನನು. ಆದುಕಾರಣ ನೀನು ಆ ಶ್ರೀಹರಿಯಿಂದ ಭಿನ್ನನು, ಅವನ ಅಧೀನನು, ಎಂದು ಹೇಳಿದ ಅರ್ಥದಲ್ಲಿ ಮುಖ್ಯತಾತ್ಪರ್ಯ ಇಟ್ಟುಕೊಳ್ಳಬೇಕೆಂದು ತಿಳಿಸುವುದಕ್ಕಾಗಿ **ತತ್ಪ್ರೈತಚ್ಛುಂಗಂ** ಇತ್ಯಾದಿಗಳನ್ನು ಹೇಳಿರುವರು. (3) ಭಗವಂತನು ಜಗತ್ಕರ್ತನು ಎಂಬ ವಿಷಯದಲ್ಲಿಯೂ ಸರ್ವರಿಗಿಂತ ಪ್ರಧಾನನು ಎಂಬುವ ವಿಷಯದಲ್ಲಿಯೂ ಅಂಕುರ (ಮೊಳಕೆ) ವೆಂಬ ಕಾರ್ಯವು ಜ್ಞಾಪಕವಾಗುತ್ತದೆ. (4) ಜಗತ್ತೆಂಬ ವ್ಯಕ್ತದ ಅಂಕುರಕ್ಕೆ ಕಾರಣವಿಲ್ಲವೆಂದಲ್ಲ. ಕಾರಣ ಇದ್ದೇ ಇದೆ. ಆ ಕಾರಣನು ಶ್ರೀಹರಿಯು ॥ ೩ ॥

ಪೀ · ಹೀಗೆ ಶರೀರವು ಕಾರ್ಯವಾಗಿರುವುದರಿಂದ ಒಬ್ಬ ಕರ್ತನಿರಲೇಬೇಕೆಂದು ತಿಳಿದು ಬೇರೆ ಯಾವುದೂ ಕೂಡದಿರುವುದರಿಂದ ಅನ್ನವೇ ಕಾರಣವಾಗಬೇಕೆನ್ನುತ್ತಾರೆ—

ಉ. ॥ ತಸ್ಯ ಕ್ವ ಮೂಲಂ ಸ್ಯಾದನ್ಯತ್ರಾನ್ನಾದೇವಮೇವ ಖಲು ಸೋಮ್ಯಾನ್ನೇನ ಶುಂಗೇನಾಪೋ ಮೂಲಮನ್ವಿಚ್ಛಾದ್ಭಿಃ ಸೋಮ್ಯ ಶುಂಗೇನ ತೇಜೋಮೂಲಮನ್ವಿಚ್ಛ ತೇಜಸಾ ಸೋಮ್ಯ ಶುಂಗೇನ ಸನ್ಮೂಲಮನ್ವಿಚ್ಛ ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ ॥

॥ ೪ ॥

ಅ ॥ ಈ ಕಾರಣದಿಂದ ಶರೀರಕ್ಕೆ ಪೃಥಿವ್ಯಭಿಮಾನಿಯಾವ ರುದ್ರನಿಗಿಂತ ಬೇರೆ ಯಾವುದು ಮೂಲಕಾರಣವಾಗುವುದು? (ಯಾವುದೂ ಆಗಲಾರದು ಆದುಕಾರಣ ಅನ್ನ ಎನಿಸಿದ ಶಿವನೇ ಮೂಲಕಾರಣನು.) (ಅನ್ನವೂ ಕಾರ್ಯವಾಗಿರುವುದರಿಂದ ಅಂಕುರದಂತೆ ಅದಕ್ಕೂ ಕಾರಣವು ಅವಶ್ಯಕವೆಂದರೆ ಅಪ್ (ಜಲವು)ಕಾರಣವು ಎನ್ನುತ್ತಾರೆ-) ಶರೀರಕ್ಕೆ ಕಾರಣವು ಹೇಗೆ ಅವಶ್ಯಕವೋ ಹೀಗೆಯೇ ಅನ್ನವು ಕಾರ್ಯವಾಗಿರುವುದರಿಂದ ಅಂಕುರ ದೃಷ್ಟಾಂತದಿಂದ ಕರ್ತನಾವಶ್ಯಕನೆಂದು ತಿಳಿದು ಅದಕ್ಕೆ ಜಲವು (ಜಲಾಭಿಮಾನಿಯಾದ ಪ್ರಾಣನು) ಕಾರಣನೆಂದು ತಿಳಿ ಎಂದರು. ಹೀಗೆಯೇ ಜಲವೂ ಕಾರ್ಯವಾಗಿರುವುದರಿಂದ ಅಂಕುರ ದೃಷ್ಟಾಂತದಿಂದ ಕರ್ತನು ಇದ್ದಾನೆಂದು ತಿಳಿದು ಅದಕ್ಕೆ ತೇಜಸ್ಸು (ಅಂದರೆ ಪ್ರಾಣನಿಗೆ ತೇಜೋಭಿಮಾನಿನಿಯಾದ ಲಕ್ಷ್ಮೀದೇವಿಯು)ಕಾರಣಳೆಂದು ತಿಳಿ ಎಂದರು. ಹೀಗೆಯೇ ತೇಜಸ್ಸೂ ಕಾರ್ಯವಾಗಿರುವುದರಿಂದ ಅಂಕುರ ದೃಷ್ಟಾಂತದಿಂದ ಕರ್ತನಿದ್ದಾನೆಂದು ತಿಳಿದು ಅವಳಿಗೆ ಪರಬ್ರಹ್ಮನು ಮೂಲಕಾರಣನೆಂದು ತಿಳಿ ಎಂದರು. (ಹಾಗಾದರೆ ಸತ್ ಎನಿಸಿದ ಬ್ರಹ್ಮನು ಲಕ್ಷ್ಮೀದೇವಿಗೆ ಮಾತ್ರ ಕಾರಣನೆಂದಾಯಿತು. ಸರ್ವರಿಗೆ ಕಾರಣನೆಂದಾಗಲಿಲ್ಲ ಎಂದರೆ—) ಎಲೋ ಮಗನೇ ಈ ಎಲ್ಲಾ ಪ್ರಜೆಗಳಿಗೆ ಸತ್ ಎನಿಸಿದ ಪರಬ್ರಹ್ಮನೇ ಕರ್ತನು (ಮೂಲಕಾರಣನು.) ಪರಬ್ರಹ್ಮನೇ ಆಶ್ರಯನು. (ಜೀವರು ಸಂಸಾರದಲ್ಲಿ ಮಾತ್ರ ಶ್ರೀಹರಿಯ ಅಧೀನದಲ್ಲಿ ಇರುವವರೆಂದಲ್ಲ, ಮತ್ತೆ ಮೋಕ್ಷದಲ್ಲಿಯೂ ಕೂಡ ಶ್ರೀಹರಿಯ ಅಧೀನರಾಗಿಯೇ ಇರುತ್ತಾರೆನ್ನುತ್ತಾರೆ -) ಮುಕ್ತರೂ ಕೂಡ ಪರಬ್ರಹ್ಮನೇ ಸ್ಥಾಪಕನಾಗಿ ಉಳ್ಳವರು. ಅಂದರೆ ಪರಬ್ರಹ್ಮನಿಂದಲೇ ನಿಯಮ್ಯ (ಪರಬ್ರಹ್ಮನ ಅಧೀನ)ರಾಗಿರುತ್ತಾರೆ. ॥ ೪ ॥

ಪೀ – ಹೀಗೆ ಅವನೆಷ್ಟೆಯು ಸ್ವರೂಪವನ್ನು ಅಲೋಚಿಸಿ ಜೀವರು ಶ್ರೀಹರಿಯು ಅಧೀನವೆಂದು ಹೇಳಿ ಈಗ ಪ್ರಾಣೇಷ್ಟೆಯು ಸ್ವರೂಪವನ್ನು ಅಲೋಚಿಸಿದರೂ ಜೀವರು ಭಗವದಧೀನರೆಂದು ಸಿದ್ಧಿಸುತ್ತದೆಂದು ಹೇಳುತ್ತಾರೆ –

ಉ. ॥ ಅಥ ಯತ್ರೈತತ್ಪುರುಷಃ ಪಿಪಾಸತಿ ನಾಮ ತೇಜ ಏವ ತತ್ಪೀತಂ ನಯತೇ ತದ್ಯಥಾ ಗೋನಾಯೋಽಶ್ವನಾಯಃ ಪುರುಷನಾಯ ಇತ್ಯೇವಂ ತತ್ತೇಜ ಆಚಷ್ಟ ಉದನ್ಯೇತಿ ತತ್ಪ್ರೈತದೇವ ಶುಂಗಮುಚ್ಯತಿತಸ್ಮೇ ಸೋಮ್ಯ ವಿಜಾನೀಹಿ ನೇದಮುಮೂಲಂ ಭವಿಷ್ಯತೀತಿ ॥ ೫ ॥

ಅ ॥ ಯಾವಾಗ ಸಂಜಾಯಿಸಿ ಒ ನವಮಾತಲಿಚ್ಛಿ ಕುಡ್ಯಾನೋ ಆಗ ತೇಜಸ್ಸಿಗೆ ಅಭಿಮಾನಿನಿಯಾದ ಲಕ್ಷ್ಮೀದೇವಿಯೇ ಪ್ರಾಣೇಷ್ಟೆಯನ್ನು ಸ್ವರೂಪ ಕೂಡಿದ ಪಿತ್ತ ಮೊದಲಾದುದನ್ನು ರಸವೀರ್ಯಾದಿ ರೂಪವಾಗಿ ಹೊಂದಿಸುತ್ತಾಳೆ.....ಹೀಗೆಯೇ ಆ ತೇಜಸ್ಸನ್ನು (ತೇಜಸ್ಸಿಗೆ ಅಭಿಮಾನಿನಿಯಾದ ಲಕ್ಷ್ಮೀದೇವಿಯನ್ನು) ಪ್ರಾಣನಿಗೆ ಪ್ರೇರಕಳಾದುದರಿಂದ ಉದಸ್ಯಾ ಎಂದು ವಿದ್ವಾಂಸರು ಹೇಳುತ್ತಾರೆ. ... (೫)

ಪೀ – ಹಿಂದೆ ಹೇಳಲ್ಪಟ್ಟ ತೇಜಸ್ಸು ಅಪ್, ಅನ್ನಗಳಿಗೆ ಅಭಿಮಾನಿಗಳಾದ ಲಕ್ಷ್ಮೀ ಪ್ರಾಣ ಪುರ್ಯಾಷ ವೀರವನ್ನು ಹೊಂದಿ ಪಿತ್ತದ ರಕ್ತ ಮೊದಲಾದ ಧಾತುಗಳನ್ನು ಹೇಗೆ ಮಾಡುತ್ತಾರೆಂದರೆ ಹಿಂದೆ ಹೇಳದುದನ್ನೇ ಇಲ್ಲಿ ಕೊಂಚ ಹೇಳುತ್ತಾರೆ –

ಉ ॥ ತಸ್ಯ ಕ್ವ ಮೂಲಂ ಸ್ಯಾದನ್ಯತ್ರಾದ್ಭ್ಯೋಽದ್ಭ್ಯಃ ಸೋಮ್ಯ ಶುಂಗೇನ ತೇಜೋಮೂಲಮನ್ವಿಚ್ಛ ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪತಿಷ್ಠಾ ಯಥಾ ಖಲು ಸೋಮ್ಯೇಮಾಸ್ತಿಸ್ರೋ ದೇವತಾಃ ಪುರುಷಂ ಪ್ರಾಪ್ಯ ತ್ರಿವೃತ್ತ್ರಿವೃದೇಕೈಕಾ ಭವತಿ ತದುಕ್ತಂ ಪುರಸ್ತಾದೇವ ಭವತ್ಯಸ್ಯ ಸೋಮ್ಯ ಪುರುಷಸ್ಯ ಪ್ರಯತೋ ವಾಙ್ಮನಸಿ ಸಂಪದ್ಯತೇ ಮನಃ ಪ್ರಾಣೇ ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಮಿ ॥ ೬ ॥

ಅ ॥ ....* ... ಜಲಾತ್ಮಕವಾಗಿಯಾದ ಪ್ರಾಣನಿಗೆ ತೇಜಸ್ಸಿಗೆ ಅಭಿಮಾನಿನಿಯಾದ ಲಕ್ಷ್ಮೀದೇವಿಯು ಮೂಲವೆಂದು ತಿಳಿ ಅವಳಿಗೆ ಪರಬ್ರಹ್ಮನು ಕಾರಣನು. ... ...ಎಲೋ ಮಗನೇ ತೇಜಸ್ಸು, ಅಪ್, ಅನ್ನಗಳಿಗೆ ಅಭಿಮಾನಿಗಳಾದ ಲಕ್ಷ್ಮೀ ಪ್ರಾಣ ಪಿತರು ಪರಿವಾರವೆಂಬ ಜೀವವನ್ನು ಹೊಂದಿ ಹೇಗೆ ಒಬ್ಬೊಬ್ಬರು ಮೂವರುಮೂವರಿಂದ ಕೂಡಿ ತ್ರಾಪೋ, ಆ ಪ್ರಯೋಜನವನ್ನು ಮೊದಲೇ ಅನ್ನಮಯಿತಂ ಶ್ರೀಧಾ ವಿಧೀಯತೇ ಇತ್ಯಾದಿಗಳಿಂದ ಹೇಳಿರುತ್ತದೆ. ಅದನ್ನೇ ಇಲ್ಲಿಯೂ ಇಟ್ಟುಕೊಳ್ಳಬೇಕು. (ಏನೆಂದರೆ ಶ್ರೀಹರಿಯು ಲಕ್ಷ್ಮ್ಯಾದಿಗಳಿಗೂ ನಿಯಾಮಕನಾಗಿರುವುದರಿಂದ ಅವಶ್ಯವಾಗಿ ಅತನನ್ನು ಮೋಕ್ಷವನ್ನು ಬಯಸುವವನು ತಿಳಿದು ಧ್ಯಾನಿಸಲೇಬೇಕು.) (ಮೋಕ್ಷದಲ್ಲಿ ದೇವತೆಗಳು ಶ್ರೀಹರಿಯ ಅತಿ ಸಾಮೀಪ್ಯವನ್ನು ಹೊಂದುತ್ತಾರೆ ಅದುಕಾರಣ ಜೀವರು ಶ್ರೀಹರಿಯು ಅಧೀನವೆಂದು ಸಿದ್ಧವಾಯಿತೆಂಬ ಅಭಿಪ್ರಾಯದಿಂದ ದೇವತೆಗಳ ದೇಹವು ಲಯವಾಗುವ ಪ್ರಕಾರವನ್ನು ಹೇಳುತ್ತಾರೆ –) (ಅಥವಾ ಮರಣ ಮುಹೂರ್ತಗಳು

* ಹಿಂದಿನಂತೆಯೇ ಅರ್ಥ ಇಟ್ಟುಕೊಳ್ಳಬೇಕು.

ಎರಡೂ ಈಶ್ವರನ ಅಧೀನಗಳಾಗಿರುವುದರಿಂದ ನೀನು ಈಶ್ವರನಿಂದ ಅಭಿನ್ನ ನಲ್ಲ ಭಿನ್ನನೇ ಎನ್ನುತ್ತಾರೆ.) ಚತುರ್ಮುಖನು ಮುಕ್ತನಾಗುವಾಗ (ಅಂದರೆ ಚತುರ್ಮುಖನಿಗೆ ಮುಕ್ತಿಕಾಲವು ಬಂದಾಗ) ಎಲ್ಲಾ ದೇವತೆಗಳೂ ವಾಗಿಂದ್ರಿಯಕ್ಕೆ ಅಭಿಮಾನಿನಿಯಾದ ಪಾರ್ವತಿಯಲ್ಲಿಯೂ, ಅವಳು ಮನಸ್ಸಿಗೆ ಅಭಿಮಾನಿಯಾದ ರುದ್ರನಲ್ಲಿಯೂ, ರುದ್ರನು ಮುಖ್ಯಪ್ರಾಣನಲ್ಲಿಯೂ ಸೇರುತ್ತಾರೆ (ಅಂದರೆ ವಿಶೇಷವಾಗಿ ಅವರ ಅಧೀನರಾಗಿರುತ್ತಾರೆ.) ಆತನು ಲಕ್ಷ್ಮೀದೇವಿಯಲ್ಲಿಯೂ ಸೇರುತ್ತಾನೆ. (ಚತುರ್ಮುಖನಿಗೆ ಶ್ರೀಹರಿಯನ್ನು ಹೊಂದಲಿಕ್ಕೆ ಲಕ್ಷ್ಮೀದೇವಿಯು ದ್ವಾರ ಮಾತ್ರ ಅಂದರೆ ಅವಳ ಮೂಲಕ ಚತುರ್ಮುಖನು ಶ್ರೀಹರಿಯನ್ನು ಹೊಂದುವನು) ಲಕ್ಷ್ಮೀದೇವಿಯು ಶ್ರೀಹರಿಯಲ್ಲಿ ಸೇರುವಳು. (ಅಂದರೆ **ಹರೇರತ್ಯಂತಸಾಮೀಪ್ಯಂ ಲಯೋ ಲಕ್ಷ್ಮ್ಯಾಃ ಪ್ರಕೀರ್ತಿತಃ** ಎಂಬ ಸ್ಮೃತಿಯಿಂದ ಲಕ್ಷ್ಮಿಗೆ ಲಯವೆಂದರೆ ಶ್ರೀಹರಿಯ ಅತಿಸವಿಾಪದಲ್ಲಿ ಇರುವುದೇ, ಬೇರೆಯಲ್ಲ.) (ಅಥವಾ ಜೀವರೆಲ್ಲರೂ ಸಾಯುವಾಗಲೂ ಶ್ರೀಹರಿಯ ಅಧೀನದಲ್ಲಿಯೇ ಇರುತ್ತಾರೆಂದು ತಿಳಿಯಬೇಕೆಂಬ ಅಭಿಪ್ರಾಯದಿಂದ ತತ್ತ್ವಾಭಿಮಾನಿಗಳಾದ ದೇವತೆಗಳು ಜೀವರ ಶರೀರದಲ್ಲಿ ವ್ಯಾಪಾರಮಾಡುತ್ತಿದ್ದರೆ ಜೀವರಿಗೆ ಮರಣವೇ ಕೂಡಲಾರದು ಅದುಕಾರಣ ಆಯಾಯ ದೇವತೆಗಳ ವ್ಯಾಪಾರವು ಶರೀರದಲ್ಲಿ ಅವಸಾನವಾಗುವ ಪ್ರಕಾರ ಹೇಳುತ್ತಾರೆ-) ಸಾಯಲು ಸನ್ನದ್ಧನಾದ ಮನುಷ್ಯನ ವಾಗಿಂದ್ರಿಯವು ಮನಸ್ಸಿನಲ್ಲಿಯೂ, ವಾಗಭಿಮಾನಿನಿಯಾದ ಪಾರ್ವತಿಯು ಮನಸ್ಸಿಗೆ ಅಭಿಮಾನಿಯಾದ ರುದ್ರನಲ್ಲಿಯೂ ಸೇರುತ್ತಾಳೆ. (ಅಂದರೆ ವಾಗಿಂದ್ರಿಯದ ವ್ಯಾಪಾರವು ಇಲ್ಲದೆ ಹೋಗುತ್ತದೆ.) ಹೀಗೆಯೇ ರುದ್ರನು ಪ್ರಾಣನಲ್ಲಿಯೂ, ಪ್ರಾಣನು ಲಕ್ಷ್ಮೀದೇವಿಯಲ್ಲಿಯೂ, ಲಕ್ಷ್ಮೀದೇವಿಯು ಶ್ರೀಹರಿಯಲ್ಲಿಯೂ ಸೇರುತ್ತಾರೆ. (ಹೀಗೆ ಮನುಷ್ಯರು ಸಾಯುವಾಗ ವಾಗ್ದೇವಿಯಾದ ಪಾರ್ವತಿಯನ್ನು ಹೊಂದಿ ಪರಂಪರೆಯಿಂದ ಈಶ್ವರನನ್ನು ಹೊಂದುತ್ತಾರೆ.) ॥ ೬ ॥

ಪೀ—ಹೀಗೆ ಸರ್ವಪ್ರಕಾರದಿಂದಲೂ ಜೀವನು ಶ್ರೀಹರಿಯು ಅಧೀನನಾಗಿರುವುದರಿಂದ ಜೀವನು ಈಶ್ವರನಿಂದ ಅಭಿನ್ನ ನು ಎಂದು ಶಂಕಾಮಾಡಕೂಡದು, ಎಂದು ಹೇಳಿದರು. ಈಗ ಶ್ರೀಹರಿಯು ಸರ್ವರಿಗೆ ನಿಯಾಮಕನಾಗಿರುವುದರಿಂದಲೂ ಶ್ವೇತಕೇತುವಿಗೆ ನೀನು ಈಶ್ವರನಲ್ಲವೆನ್ನು ತ್ತಾರೆ—

ಉ. ॥ ಸ ಯ ಏಷೋಽಣಿಮೈತದಾತ್ಮ್ಯಮಿದꣳ ಸರ್ವಂ ತತ್ಸತ್ಯಂ ಸ ಆತ್ಮಾತತ್ತ್ವಮಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ವಿಜ್ಞಾಪಯತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತ್ಯಷ್ಟಮಃ ಖಂಡಃ ॥ಲ-ಲ॥ ॥ ೭ ॥

ಅ ॥ ಪರದೇವತೆಯಾದ ಶ್ರೀವಿಷ್ಣುವು ಸರ್ವರಿಗಿಂತ ಶ್ರೇಷ್ಠನಾದುದರಿಂದ **ಸಃ** ಎಂದೂ, ನಿಯಾಮಕನಾದುದರಿಂದ ಅಥವಾ ಜ್ಞಾನಸ್ವರೂಪನಾದುದರಿಂದ **ಯಃ** ಎಂದೂ, ಸರ್ವರಿಗೆ ಪ್ರಿಯನಾದುದರಿಂದ ಅಥವಾ ಸತ್ಯಸಂಕಲ್ಪನಾದುದರಿಂದ **ವಿಷಃ** ಎಂದೂ, ಸೂಕ್ಷ್ಮಜ್ಞಾನಕ್ಕೆ ವಿಷಯನಾದುದರಿಂದ ಅಣಿಮಾ ಎಂದೂ, ಅನ್ನಿಸುತ್ತಾನೆ. ಈ ಜಗತ್ತೆಲ್ಲವೂ ಶ್ರೀಹರಿಯೇ ಸ್ವಾಮಿಯಾಗಿ ಉಳ್ಳದ್ದು. ಅಥವಾ ಶ್ರೀಹರಿಯ ಅಧೀನದಲ್ಲಿಯೇ ಇರುವುದು. ಆ ಶ್ರೀಹರಿಯು ಸರ್ವತ್ರವ್ಯಾಪ್ತನಾದುದರಿಂದ **ತತ್** ಎಂದೂ, ಉತ್ಕೃಷ್ಟನೆಂದ ಸ್ವರೂಪನಾದುದರಿಂದ ಅಥವಾ ಸಾಧುಸ್ವರೂಪನಾದುದರಿಂದ ಸತ್ಯನೆಂದೂ, ದುರ್ಜನರನ್ನು ನಾಶಗೊಳಿಸುವುದರಿಂದ **ಸಃ** ಎಂದೂ ಪೂರ್ಣಗುಣಗಳುಳ್ಳವನಾದುದರಿಂದ **ಆತ್ಮಾ** ಎಂದೂ ಎನಿಸುತ್ತಾನೆ. ಅದಕಾರಣ ಎಲೋ ಶ್ವೇತಕೇತುವೇ ನಿನ್ನಲ್ಲಿ ಶ್ರೀಹರಿಯಲ್ಲಿರುವ ಗುಣಗಳು ಯಾವುದೂ ಇಲ್ಲದಿರುವುದರಿಂದ (ನೀನು ಯಥಾರ್ಥವಾಗಿಯೂ ಆ ಶ್ರೀಹರಿಯಿಂದ ಭಿನ್ನ ನು ಆಗಿರುತ್ತಿ. ಹೀಗೆ ತಂದೆಯು ಹೇಳಿದಾಗ ಮಗನು ಎಲೋ ತಂದೆಯೇ **ಸ ಯಃ** ಇತ್ಯಾದಿಗಳಿಂದ ಶ್ರೀಹರಿಯು ನಿಯಾಮಕನಾಗಿ ಜೀವರಲ್ಲಿ ಇದ್ದಾನೆಂದೂ, **ಸತಾ ಸೋಮ್ಯ** ಇತ್ಯಾದಿಗಳಿಂದ ಸುಷುಪ್ತಿಯಲ್ಲಿ ಹೊಂದಲ್ಪಡುವವನೆಂದೂ ಹೇಳಿರು

ವಿ, ಪಾಣಾದರೆ ಶ್ರೀಹರಿಯು; ಏಕೆ ಕಾಗುವುದಿಲ್ಲ) ಅದನ್ನು ಹೇಳಿ, ಎಂದನು. ಆಗ ತಂದೆಯು ನೀನು ಕೇಳಿದ ಪ್ರಮೇಯಕ್ಕೆ ಉತ್ತರ ಹೇಳುತ್ತೇನೆಂದು ಹೇಳಿದನು (೬—೮) ೪೬

ಪೀ—ಪೂರ್ವದಲ್ಲಿ ಜೀವೇಶ್ವರರಿಗೆ ಅತ್ಯಂತ ಭೇದವನ್ನು ತಿಳಿಸುವುದಕ್ಕಾಗಿ ಶ್ರೀಹರಿಯೊಬ್ಬನೇ ಲಕ್ಷ್ಮೀ(ಪ್ರಾಣ ರುದ್ರ ಮೊದಲಾದವರಿಗೆಲ್ಲಾ ನಿಯಾಮಕಾರಣನು; ಜೀವನು ಸರ್ವರಿಗೆ ಕಾರಣನೆಂಬುವುದು ಸರ್ವಥಾ ಕೂಡಲಾರದು. ಇಂತಹ ಮಹಾಮಹಿಮೆಯನ್ನು ಹೇಳಿರುವರು. ಇದನ್ನು ವೇದದಿಂದ ವಾಕ್ಯ ತಿಳಿಯಬೇಕ್ಕಾದೆ ಇದು ಪ್ರತ್ಯಕ್ಷಾನುಮಿಕಕ್ಕೆ ಬರಲಾರದು. ಅದುಕಾರಣ ಜಾಗ್ರದವಸ್ಥೆಯಲ್ಲಿ ಜೀವರಿಗೆ ನಾವು ಸ್ವತಂತ್ರರೆಂಬ ಅಭಿಮಾನವಿರುತ್ತದೆ. ಸ್ವಾಪ್ನಾವಸ್ಥೆಯಲ್ಲಿ ಆ ಅಭಿಮಾನವಿರುವುದಿಲ್ಲ. ಅದು ಕಾರಣ ಆ ಸುಷುಪ್ತಿಯಲ್ಲಿ ಜೀವನು ಶ್ರೀಹರಿಯನ್ನು ಆಶ್ರಯಿಸಿರುತ್ತಾನೆಂಬುದನ್ನು ಅನುಭವಕ್ಕೆ ತರುವುದಕ್ಕಾಗಿ ಈ ಎಂಬವು ಹೊರಬಂದು—

ಭಾ. ॥ (೧) ಸ್ವಪ್ನಸ್ಥಾನಂತಃ ಸುಷುಪ್ತ್ಯಃ ॥ (೨) ಸ್ಥಾತೇಚಾತ್ಮಶಬ್ದೇ ಇತಿ ಪ್ರೋಕ್ತೋ ನಿಷ್ಣು, ಸರ್ವೇಶ್ವರೇಶ್ವರಃ । ತಂ ಪ್ರಾಪ್ನೋತಿ ಮನೋನಾಮಾ ಸಂಸಾರೀ ಸ್ಯಪಿತೀಶ್ವತಃ ॥ ಇತಿ ಚ ॥ (೩) ಮನನಾನ್ಮನೋನಾಮಾ ಸಂಸಾರೀ ॥ (೪) ಶುಂಗನಿಷ್ಕಂಕರಂ ಪ್ರೋಕ್ತಂ ತನ್ಮೂಲಂ ಭಗವಾನ್ಹರಿಃ । ಜಗತೋ ಮೂಲಮಪ್ಯೇಷ ನಿಮಿತ್ತಂ ನ ವಿಕಾರವಾನ್ ॥ (೫) ಬೀಜಜೀವೋ ಯಥಾ ಮೂಲಮಂಕುರಸ್ಯವಿಕಾರತಃ । ಯಥಾ ಪಿತಾ ಪುತ್ರತನ್ಮಾಸ್ತದ್ವೀಹೋ ಽ ವಿಕಾರವಾನ್ । ಏವಂ ಹರಿರ್ಮೂಲಮಪಿ ನ ವಿಕಾರ(ರೀ)ಕಥಂಚನ ॥ ಇತಿ ಚ ॥ ೧ ॥

ಅ ॥ (೧) (ಇದ್ದಿ ಸ್ವಪ್ನಾಂತ ಉಚ್ಚಾವಚಮಿಾಯಮಾನಃ ಇತ್ಯಾದಿಗಳಲ್ಲಿನ್ನಂತ ಸ್ವಪ್ನಾಂತ ಶಬ್ದದಿಂದ ಸ್ವಪ್ನಾವಸ್ಥೆಯನ್ನು ತಿಳಿಸಿಕೊಂಡಿದೆ ಸತಾ ಸೋಮ್ಯ ತದಾ ಸಂಪನ್ನೋ ಭವತಿ ಎಂಬ ಮೇಲಿನ ವಾಕ್ಯವು ಕೂಡದೇ ಹೋಗುವುದು. ಏಕೆಂದರೆ—ಸ್ವಪ್ನಾವಸ್ಥೆಯಲ್ಲಿ ಪರಮಾತ್ಮ ಪ್ರವೇಶವಿಲ್ಲ. ಎಂದರೆ—ಸ್ವಪ್ನಾಂತ ಶಬ್ದಕ್ಕೆ ಅರ್ಥಹೇಳುತ್ತಾರೆ—) ಸ್ವಪ್ನದ ಅವಸಾನವು ಸುಷುಪ್ತಿಯು (ಗಾಢನಿದ್ರೆ) (ಸ್ವಪ್ನವಾದ ಮೇಲೆ ಸುಷುಪ್ತಿ ಆ ಮೇಲೆ ಜಾಗ್ರದವಸ್ಥೆ. ಹೀಗೆ ಮೂರು ಅವಸ್ಥೆಗಳು ಈ ಕ್ರಮವನ್ನು ತಿಳಿಸಿಕೊಂಡು ಹೀಗೆ ಹೇಳಿದ್ದು) (೨) (ಸ್ಥಮುಹೀತೋ ಭವತಿ ಎಂಬುವಲ್ಲಿ ಜೀವನು ಸ್ವರೂಪಭೂತನಾದ ಪರಬ್ರಹ್ಮನನ್ನು ಹೊಂದುತ್ತಾನೆಂದು ಬ್ರಹ್ಮನಲ್ಲಿ ಸ್ವ ಎಂಬ ಶಬ್ದ ಪ್ರಯೋಗ ಇದ್ದುದರಿಂದ ವಿಷ್ಣು ಎಂಬ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಸ್ವ ಎಂಬ ಶಬ್ದದ ಅರ್ಥ ಹೇಳುತ್ತಾರೆ) ಸರ್ವರಿಗೆ ನಿಯಾಮಕರಾದ ರುದ್ರಾದಿಗಳಿಗೆ ನಿಯಾಮ್ಯರಾದ ಶ್ರೀವಿಷ್ಣುವ ಸರ್ವಸ್ವತಂತ್ರತಾಪದವಿಂದ ಸ್ವ ಎನಿಸುತ್ತಾನೆ ಮತ್ತು ಎನಿಸಿದ ಸಂಸಾರಿಯು ಸ್ವಾಧೀನವಿಸಿದ ಆ ಶ್ರೀಹರಿಯನ್ನು ಹೊಂದುತ್ತಾನೆ. ಅದು ಕಾರಣ ಜೀವನನ್ನು ಸ್ವಪಿತಿ ಎಂದು ಜ್ಞಾನಿಗಳು ಹೇಳುತ್ತಾರೆ. (೩) (ಮನನ ಎನಿಸಿದವನು ಸಂಸಾರಿಯು. ಪ್ರಾಣ ಎನಿಸಿದವನು ಶ್ರೀಹರಿಯು ಎಂದು ಹೇಳಿದ್ದು ಅಯುಕ್ತವು ಆ ಪದಗಳಿಗೆ ಆ ಅರ್ಥಗಳಲ್ಲಿ ರೂಢಿ (ಪ್ರಸಿದ್ಧಿ) ಇಲ್ಲ, ಎಂದರೆ ಯೋಗ (ಅವಯವಾರ್ಥ) ವನ್ನು ಕೋರಿಸುತ್ತಾರೆ—) ತಿಳಿದು ಕೊಳ್ಳುವದರಿಂದ ಮನನ ಎನಿಸಿದವನು ಸಂಸಾರಿಯು (ಜೀವೈಕ್ಯವನ್ನು ಮಾಡಿಸುವುದರಿಂದ ಶ್ರೀಹರಿಯು ಪ್ರಾಣನೆನಿಸಿದವನು.) (ಯೋಗ ವೃತ್ತಿಯು *ಲಕ್ಷಣಾ (ಅಯುಕ್ತ)ವೃತ್ತಿಯಿಂದ ಪ್ರಧಾನನೆಂದು ಹೇಳಿದ ಕಾರಣ ಮನನ ಪ್ರಾಣ ಶಬ್ದಗಳಿಂದ ಮನನ ಪ್ರಾಣರಲ್ಲಿ ಪ್ರವೇಶವಾಡಿದ ಜೀವ ಪರಮಾತ್ಮರನ್ನು ಲಕ್ಷಣಾ

* ಗಂಗಾಯಾಂ ಘೋಷಃ। ಗಂಗೆಯು ತೀರದಲ್ಲಿ ಗೊಲ್ಲರ ಕೇರಿ ಎಂಬುದು ಲಕ್ಷಣಾ ವೃತ್ತಿಯಿಂದ ಸಿದ್ಧವಾದ ಅರ್ಥವು. ಕಳ್ಳ ಸಂಬಂಧವು ಲಕ್ಷಣಾ ಎನಿಸುತ್ತದೆ ಕಳ್ಳಾರ್ಥವು ಪ್ರವಾಹವು ತೀರವು ಲಾಭವು ಶಬ್ದದಿಂದ ಸಿಗಬಹುದಾದ ಅರ್ಥವು.

ವೃತ್ತಿಯಿಂದ ಇಟ್ಟುಕೊಳ್ಳಬೇಕೆಂಬುದು ಅಯುಕ್ತವೆಂದು ಸಿದ್ಧವಾಯಿತು.) (೪) (**ತತ್ಪ್ರೈತಚ್ಛುಂಗ ಮುತ್ಪತಿತಂ** ಎಂಬುವಲ್ಲಿದ್ದ ಶುಂಗಶಬ್ದಾರ್ಥವನ್ನು ಹೇಳುತ್ತಾರೆ—) ಶುಂಗವು ಎಂದರೆ ಅಂಕುರವೆನಿಸುತ್ತದೆ. ಅದಕ್ಕೆ ಮೂಲಕಾರಣನು ಶ್ರೀ ಭಗವಂತನು. (ಅಂಕುರವು ಘಟದಂತೆ ಕಾರ್ಯವಾಗಿರುವುದರಿಂದ ಮೂಲಕಾರಣವು ಅವಶ್ಯಕವೇ) ಶ್ರೀಹರಿಯು ಶರೀರ ಅನ್ನ ಆಪ್ ತೇಜಸ್ಸುಗಳಿಗೆ ಅನ್ನಾದಿಗಳ ಮೂಲಕ ನಿಮಿತ್ತ ಕಾರಣನೂ (ಅಂಕುರಕ್ಕೂ ಜಗತ್ತಿಗೂ ಶ್ರೀಹರಿಯು ಉಪಾದಾನಕಾರಣನು (ಪರಿಣಾಮಕಾರಣನು) ಎಂದು ಪರರು ಹೇಳುವುದು ಅಯುಕ್ತವೆನ್ನುತ್ತಾರೆ—) ಅಂಕುರಕ್ಕೂ ಜಗತ್ತಿಗೂ ಶ್ರೀಹರಿಯು ಕಾರಣನಾದರೂ ನಿಮಿತ್ತಕಾರಣನು. ಆಗಿರುತ್ತಾನೆ ವಿಕಾರವುಳ್ಳವನಲ್ಲ, (ಅಂದರೆ ಶ್ರೀಹರಿಯು ಜಗದ್ರೂಪವಾಗಿ ಪರಿಣಾಮವನ್ನು ಹೊಂದುವವನಲ್ಲ.) (೫) (ಹಾಗಾದರೆ ಅಂಕುರಾದಿಗಳಿಗೆ ಉಪಾದಾನ ಕಾರಣವಾದ ಬೀಜಾದಿಗಳಲ್ಲಿಯೇ **ಮೂಲ** ಎಂಬ ಶಬ್ದಪ್ರಯೋಗವು ಕಂಡದೆ. ನಿಮಿತ್ತ ಕಾರಣದಲ್ಲಿ **ಬೀಜ** ಎಂಬ ಶಬ್ದಪ್ರಯೋಗವು ಕಾಣುವುದಿಲ್ಲ, ಎಂದರೆ ಎರಡು ದೃಷ್ಟಾಂತಗಳಿಂದ ನಿಮಿತ್ತ ಕಾರಣನಲ್ಲಿಯೂ ಬೀಜ ಶಬ್ದ ಪ್ರಯೋಗವಿದೆ ಎನ್ನುತ್ತಾರೆ—) (1) ಬೀಜದಲ್ಲಿದ್ದ ಜೀವನು ಹೇಗೆ ಅಂಕುರಕ್ಕೆ ನಿರ್ವಿಕಾರನಾಗಿ (ತಾನು ಪರಿಣಾಮಿಯಾಗದೆ) ನಿಮಿತ್ತಕಾರಣನೋ, (2) ಪಿತೃ ಜೀವನು ಮಗನ ಶರೀರಕ್ಕೆ ವಿಕಾರವಿಲ್ಲದೇನೇ ಹೇಗೆ ಕಾರಣನೋ, ಹೀಗೆಯೇ ಶ್ರೀಹರಿಯು ನಿಮಿತ್ತ ಕಾರಣನು. (ಹಾಗಾದರೆ ಅವುಗಳಿಗೆ ವಿಕಾರ ಕಾರಣವು (ಉಪಾದಾನ ಕಾರಣವು) ಯಾವುದೆಂದರೆ—) ಬೀಜದಲ್ಲಿರತಕ್ಕ ಜೀವನ ದೇಹವಾದ ಬೀಜವು ಅಂಕುರಕ್ಕೆ ಉಪಾದಾನ ಕಾರಣವು. ತಂದೆಯ ಶರೀರವು ಅಂದರೆ-ರೇತೋರೂಪವಾದ ಪಿತೃಶರೀರದ ಧಾತುವು ಮಗನ ಶರೀರಕ್ಕೆ ಉಪಾದಾನ ಕಾರಣವು. ಶ್ರೀಹರಿಯು ಜಗತ್ತಿಗೆ ನಿಮಿತ್ತ ಕಾರಣನಲ್ಲದೆ ಹೇಗೂ ವಿಕಾರಕಾರಣನು ಆಗಲಾರನು.

ವಿ ॥ **ಸನ್ಮೂಲಾಃ ಸೋಮ್ಯ** ಎಂಬುದಕ್ಕೆ ಮಡಿಕೆಗೆ ಮಣ್ಣು ಉಪಾದಾನ ಕಾರಣವು. (ಅಂದರೆ ಮಣ್ಣೇ ಮಡಿಕೆಯಾಗುವುದು.) ಹಗ್ಗದಲ್ಲಿ ಹಾವು ಎಂಬುದು ಅವಿದ್ಯೆಯಿಂದ ಆರೋಪಿತವು) ಅದರಂತೆಯೇ ಸತ್ ಎನಿಸಿದ ಪರಬ್ರಹ್ಮನೇ ಸ್ಥಾವರ ಜಂಗಮ ಸಮಸ್ತಪ್ರಾಣಿಗಳಿಗೆ ಉಪಾದಾನ ಕಾರಣನು. ಅಂದರೆ—ಬ್ರಹ್ಮನೇ ಜಗದ್ರೂಪವಾಗಿ ಪರಿಣಾಮ ಹೊಂದುತ್ತಾನೆ, ಎಂದು ಅದ್ವೈತಿಗಳು ಅರ್ಥಹೇಳಿರುವರು. ಅದು ಹಿಂದೆ ಹೇಳಿದ ಪ್ರಮಾಣಗಳಿಂದ ಅಯುಕ್ತವೆಂದು ಸಿದ್ಧವಾಯಿತು. ಮತ್ತು **ಮೂಲ** ಎಂಬ ಶಬ್ದಕ್ಕೆ ಉಪಾದಾನ ಕಾರಣವೆಂಬುವುದೇ ಅರ್ಥವೆಂದಲ್ಲ. ಪರಂತು ಕಾರಣವೆಂದಿಷ್ಟು ಮಾತ್ರ ಅರ್ಥವು. ಆಗ ನೇದಾದಿ ಪ್ರಮಾಣಗಳನ್ನು ಅನುಸರಿಸಿ ಬೀಜಜೀವನು ಅಂಕುರಕ್ಕೆ ಹೇಗೆ ನಿಮಿತ್ತಕಾರಣನೋ ಹಾಗೆಯೇ ಶ್ರೀಹರಿಯು ನಿಮಿತ್ತಕಾರಣನೆಂದೇ ತಿಳಿಯಬೇಕು. (2) ಮತ್ತು **ಘಟಸ್ಯ ಮೃದಿವ ಮಡಿಕೆಗೆ ಮಣ್ಣಿನಂತೆ** ಎಂಬುವುದೂ ಅಯುಕ್ತವು. ಏಕೆಂದರೆ ಅದ್ವೈತಿಗಳ ಮತದಲ್ಲಿ ಶುದ್ಧ ಬ್ರಹ್ಮನು ಉಪಾದಾನಕಾರಣನಲ್ಲ. (3) ಮಾಯಾವಿಶಿಷ್ಟನಾದ ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣನು ಎಂಬುವಲ್ಲಿ **ಘಟಸ್ಯ ಮೃದಿವ** ಎಂಬುವುದು ಇನೇ ದೃಷ್ಟಾಂತವು. ಶುದ್ಧ ಬ್ರಹ್ಮನು ಜಗತ್ತಿಗೆ ಉಪಾದಾನ ಕಾರಣನು ಎಂಬುವಲ್ಲಿ **ಭುಜಂಗಸ್ಯ ರಜ್ಜುರಿವ** ಎಂಬುವುದು ತೀನೇ ದೃಷ್ಟಾಂತವು, ಎಂದು ಹೇಳಕೂಡದು. (1) ಮಾಯೆಯೇ ಜಗತ್ತಿಗೆ ಉಪಾದಾನ ಕಾರಣವೆಂದು ಕೂಡುವಾಗ ಬ್ರಹ್ಮನಿಗೂ ಉಪಾದಾನಕಾರಣತ್ವವಿದೆ ಎಂಬುವಲ್ಲಿ ಪ್ರಮಾಣವಿಲ್ಲ, ಆ ವಿಷಯದಲ್ಲಿ ನೇದಾದಿಪ್ರಮಾಣಗಳಲ್ಲವೆಂದು ಬೇರೆ ಕಡೆ ಹೇಳಿದೆ. (2) ಭುಜಂಗಸ್ಯ ರಜ್ಜುರಿವ ಎಂಬುವುದೂ ಅಯುಕ್ತವು. ಹಗ್ಗವನ್ನು ನೋಡಿ ಹಾವು ಎಂದು ಜ್ಞಾನ ಬರುವಾಗ ಹಗ್ಗದಲ್ಲಿ ಹಾವಿಗೆ ಆರೋಪವು. ಹಗ್ಗವು ಅಧಿಷ್ಠಾನವು. ಹೀಗೆ ರಜ್ಜುವಿನಲ್ಲಿ ಸರ್ಪಾರೋಪಕ್ಕೆ ರಜ್ಜುವು ಅಧಿಷ್ಠಾನವು, ಎಂದು ವ್ಯವಹಾರವು ಇದ್ದರೂ ಅದು ಉಪಾದಾನಕಾರಣವೆಂದು ವ್ಯವಹಾರವಿಲ್ಲ.

॥ ೧ ॥

ತೀ—ತಸ್ಯ ಕ್ವ ಮೂಲಂ ಸ್ಯಾದನ್ಯತ್ರಾನ್ನಾತ್ ಇತ್ಯಾದಿಗಳಲ್ಲಿ ಶರೀರಕ್ಕೆ ಅನ್ನವು, ಅದಕ್ಕೆ ನೀರು,

ಅದಕ್ಕೆ ತೇಜಸ್ಸು ಮೂಲವು ಎಂದು ಹೇಳುತ್ತದೆ. ಮಂತ್ರಲಿಂಗದಲ್ಲಿ ಪ್ರಾಣಾದಿಗಳಾಗಿ ಹೇಳಬೇಕು. ಏನೇನು ತೇಜಸಾ ಸೋಮ್ಯ ಶುಂಗೇನ ಸನ್ಮೂಲಮನ್ವಿಚ್ಛ ಎಂಬಲ್ಲಿಯೂ ಸತ್ ಎಂಬಿದನು ಜಗತ್ತಿಗೆ ಉಪಾದಾನಕಾರಣವೆಂದು ಹೇಳಬೇಕು. ಎಂದು ಕರು ಹೇಳುವುದೂ ಅಯುಕ್ತವು. ಅನ್ನಮೊದಲಾದ ಶಬ್ದಗಳಿಂದ ದೇವತೆಗಳನ್ನೇ ಹೇಳಿಕೊಳ್ಳಬೇಕಾಗಿರುವುದರಿಂದ ಅವರು ಶರೀರಾದಿಗಳಿಗೆ ಉಪಾದಾನಕಾರಣರು ಆಗಲಾರರು. ಸತ್ಯಂ – ಯಥಾ ಖಲು ಸೋಮ್ಯೇಮಾಸ್ತಿಸ್ರೋ ದೇವತಾಃ ಎಂದು ದೇವತಾತ್ರಿತ್ವ ಜೋಗವಿದೆ. ಎಂದು ಇದಕ್ಕಿಂದು ಹೇಳುವನ್ನು ಹೇಳುತ್ತಾರೆ—

ಭಾ. ॥ (೧) ಪ್ರಾಥಮ್ಯಾಚ್ಚ ತೇಜಆದ್ಯಾ ಲಕ್ಷ್ಮ್ಯಾದಯ ಇತಿ ಸಿದ್ಧಂ ॥ (೨) ತೇಜೋಽಭಿಮಾನಿನೀ ಲಕ್ಷ್ಮೀಃ ಪ್ರಾಣಸ್ಯಾಭಿಮಾನನಾತ್ । ಅನ್ನಾಭಿಮಾನೀ ರುದ್ರಶ್ಚ ತಿಸ್ರಸ್ತಾ ದೇವತಾಃ ಪುರಾ ॥ ಇತಿ ಚ ಬ್ರಾಹ್ಮಾಂದೇ ॥ (೩) ಯತ್ಕೈತತ್ಪುರುಷಃ ಸ್ಯಪಿತಿನಾಮ ಸತಾ ಸೋಮ್ಯ ತದಾ ಸಂಪನ್ನೋ ಭವತೀತಿ ಸಂಪಾರಿಷೋ ಬ್ರಹ್ಮಪ್ಯಾಪ್ತಿಮುಕ್ತ್ಯಾ ಸ ಯಥಾ ಶಕುನಿಃ ಸೂತ್ರೇಣ ಪ್ರಬದ್ಧ ಇತಿ ತಸ್ಯೋಪಪಾದನಾನ್ನನೋಪಾಮಾ ಪುರುಷಃ । ಪ್ರಾಣನಾಮಾ ಭಗವಾನ್ ॥ (೪) ಸನ್ಮೂಲಾಃ ಸೋಮ್ಯೇಮಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾ ಇತ್ಯುಪಸಂಹಾರಾತ್ ॥ (೫) ಪ್ರಜಾಶಬ್ದಿತ್ಯ ಚೇತನೇಷ್ವೇವ ಪ್ರಸಿದ್ಧಃ । ಪ್ರಜಾನಾಂ ಸುಖದುಃಖೇನ ರಾಜಾನಃಪ್ರೋಕ್ತಿರುಭಾರುಭಂ ॥ ಇತ್ಯಾದೇರ್ಬ ॥೨॥

ಅ ॥ (೧) ಶ್ರವಣಾದಿ ಪ್ರಕರಣದಲ್ಲಿ ಶುಶ್ರೂಷಕ ಪ್ರಯುಕ್ತವು ಎಂದೆ ಹೇಳಿದ ವೇದಾದಿ ಪ್ರಮಾಣಗಳಿಂದಲೂ ತೇಜಸ್ಸು ಮೊದಲಾದ ಮೂರಕ್ಕಿಂತ ಹೆಚ್ಚಲ್ಲದವರು ಲಕ್ಷ್ಮೀ ಪ್ರಾಣ ರುದ್ರರೆಂದು ಸಿದ್ಧವಾಯಿತು. (೨) ಇದಕ್ಕೆ ಲಕ್ಷ್ಮೀದೇವಿಗೆ ಸೃಷ್ಟಿಯೆಂದೆಂ– ತಿಸೃಣಾಮೃವಿಶೇಷಂ ಶಕ್ತಾಕ್ಷಾದ್ಭಗವದಿಚ್ಛಯಾ । ಪ್ರಾಧ್ಯೈವ ಸೃಷ್ಟೇಃಕೃದಿತಾ ಎಂಬ ಪ್ರಮಾಣದಿಂದ ಸಾಕ್ಷಾತ್ ಶ್ರೀಕಾರಿಯು ಇಚ್ಛೆಯನ್ನನುಸರಿಸಿ, ತಾನು ಜಗತ್ತನ್ನು ಸೃಷ್ಟಿಸುತ್ತಿರಲು ಎಂಬ ಶಬ್ದವಿಶೇಷವನ್ನು ಕೊಂಡುಹೋದೆ. ಬೇರೆಯಲ್ಲಿ (೩) ಅದಿಸೃಷ್ಟಿಯಲ್ಲಿ ಶ್ರೀಭಗವಂತನು ಶ್ರವಣಾದಿ ತೇಜಸ್ಸು ಮೊದಲಾದವನ್ನು ಪ್ರಥಮದಲ್ಲಿ ಸೃಷ್ಟಿಸಿದನು ಎಂಬ ಹೇಳುತ್ತದೆ ಅದಿಯಲ್ಲಿ ಶ್ರೀಕಾರಿಯು ಮಾತ್ರವಲ್ಲದಾವುದನ್ನೂ ಸೃಷ್ಟಿಸಿದನೋ ಅದು ಬಾತ್ಮನುವೆಂದು ಶ್ರವಣಾಣಿನ್ಸಿ. ಅಮುಕಾರಣ ತೇಜಃ ಅದ್ ಅನ್ನಗಳು ಶ್ರವಣಾದಿ ಸಮ್ಮೂತ್ಪತ್ತಿಗಳಿಗೆ ಕಾರಣವೆಂದು ಹೇಳಬೇಕು. ಸಮ್ಮೂತ್ಪತ್ತಿಯಾದ ಶ್ರೀಕಾರಿಯಿಂದ ಅತಿಕ್ರಿಗಳಾದ ವಸ್ತುಗಳಲ್ಲಿ ಲಕ್ಷ್ಮೀ ಪ್ರಾಣ ರುದ್ರರನ್ನು ಬಿಟ್ಟು ಬೇರೆ ಯಾವುದೂ ಸಮ್ಮೂತ್ಪತ್ತಿಯಾದುದು ಇಲ್ಲ. ಆದುಕಾರಣ ತೇಜಸ್ಸು ಮೊದಲಾದ ಮೂರಕ್ಕಿಂತ ಲಕ್ಷ್ಮೀ ಪ್ರಾಣ ರುದ್ರರನ್ನೇ ಇಟ್ಟುಕೊಳ್ಳಬೇಕು. (೪) ತೇಜಸ್ಸು ಮೊದಲಾದ ಮೂರಕ್ಕಿಂತ ಹೆಚ್ಚಿಡಕಕ್ಕೆ ಲಕ್ಷ್ಮ್ಯಾದಿಗಳೇ ಪ್ರಥಮತಃ ಇಟ್ಟಿದವರು. ಎಂಬುವಲ್ಲಿ ಸ್ಪಷ್ಟವನ್ನು ಹೇಳುತ್ತಾರೆ– ಲಕ್ಷ್ಮಿಗೆ ಅಭಿಮಾನಿಯಾದವಳು ಲಕ್ಷ್ಮೀದೇವಿಯು, ಜಲಕ್ಕೆ ಅಭಿಮಾನಿಯಾದವನು ಪ್ರಾಣನು. ಅನ್ನಕ್ಕೆ (ಪೃಥ್ವಿಗೆ) ಅಭಿಮಾನಿಯಾದವರು ರುದ್ರರು. ಈ ಮೂರು ದೇವತೆಗಳು ಸರ್ವರಿಂತಲೂ ಮೊದಲು ಸೃಷ್ಟಿಸಲ್ಪಟ್ಟವರು. ಎಂದು ಬ್ರಹ್ಮಾಂಡಪುರಾಣದಲ್ಲಿದೆ. (೫) (ಪ್ರಾಣಬಂಧನಂ ಹಿ ಸೋಮ್ಯ ಮನಃ ಎಂಬಲ್ಲಿ ಮನಃ ಎನಿಸಿದವನು ಸಂಸಾರಿಯು. ಪ್ರಾಣ ಎನಿಸಿದವನು ಶ್ರೀಭಗವಂತನು, ಎಂದು ಹೇಳಿದೆ ಇದರೆ ಮನಸಾತ್ಮನ ಉದ್ಧಿಸ್ಯ ಪ್ರಾಣಃ ಪ್ರಜಯಸಾದೇಹ ಎಂಬ ಪ್ರಮಾಣಾಗಳಿಂದ ಅಲ್ಲಿ ಮಾಗೆ ಅರ್ಥ ಹೇಳುವುದು ಯುಕ್ತವಾಗುವುದಾದರೂ ಯತ್ಕೈತತ್ಪುರುಷಃ ಎಂಬಲ್ಲಿ ಮಾಗೆ ಅರ್ಥ ಹೇಳಲಿಕ್ಕೆ ಜ್ಞಾಪಕವಾದ ಪದವು ಇಲ್ಲದಿರುವುದರಿಂದ ಹೀಗೆ ಅರ್ಥ ಹೇಳುವುದು ಯುಕ್ತವಲ್ಲವೆಂದೆ – ಯತ್ಕೈತತ್ಪುರುಷಃ ಸ್ವಪಿತಿ ನಾಮ ಸತಾ ಸೋಮ್ಯ ತದಾ ಸಂಪನ್ನೋ ಭವತಿ ಎಂಬುವುದರಿಂದ ಸಂಸಾರಿಯು ಪರಬ್ರಹ್ಮ

ನನ್ನು ಹೊಂದಿದನು ಎಂದು ಹೇಳಿ ಸ ಯಥಾ ಶಕುನಿಃ ಸೂತ್ರೇಣ ಪ್ರಬದ್ಧಃ ಎಂಬುವುದರಿಂದ ಹಿಂದೆ ಹೇಳಿದುದನ್ನೇ ವಿವರಿಸಿ ಸಮರ್ಥಿಸಿದುದರಿಂದ ಮನಃ ಎನಿಸಿದವನು ಜೀವನು ಪ್ರಾಣನೆನಿಸಿದವನು ಶ್ರೀಹರಿಯು. (ಒಂದು ವಿಷಯದಲ್ಲಿ ದೃಷ್ಟಾಂತ ಹೇಳಿ ದಾರ್ಷ್ಟಾಂತಿಕದಲ್ಲಿ ಬೇರೆ ಒಂದು ಹೇಳುವುದು ಎಂಬುವುದು ಕೂಡಲಾರದಷ್ಟೆ) (೪) (ಉಪಕ್ರಮದಲ್ಲಿ (ಬುಡದಲ್ಲಿ ಹೇಳಿದುದನ್ನು ನೋಡುವಾಗ ಮನಃ ಎಂದರೆ ಜೀವನೆಂದಾಗಬೇಕೆಂದು ಹೇಳಿ ಉಪಸಂಹಾರ (ಅಂತ್ಯ) ದಲ್ಲಿ ಹೇಳಿದ ಪ್ರಕಾರವೂ ಹಾಗೆಯೇ ಇಟ್ಟುಕೊಳ್ಳಬೇಕೆನ್ನುತ್ತಾರೆ) ಸಮ್ಮೋಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಎಂದು ಅಂತಿಮ ವಾಕ್ಯದಲ್ಲಿ (ಪ್ರಜಾ ಶಬ್ದದಿಂದ ಹೇಳಲ್ಪಟ್ಟ ಜೀವರು ಸತ್ ಎನಿಸಿದ ಶ್ರೀಹರಿಯನ್ನು ಆಶ್ರಯಿಸಿರುತ್ತಾರೆಂದು ಹೇಳಿದುದರಿಂದ ಇಲ್ಲಿಯೂ ಮನಃ ಪ್ರಾಣಶಬ್ದಗಳಿಂದ ಜೀವ ಪರಮಾತ್ಮರನ್ನೇ ಇಟ್ಟುಕೊಳ್ಳಬೇಕು) (೫) (ಉಪಸಂಹಾರ ವಾಕ್ಯದಲ್ಲಿದ್ದ ಸತ್ ಶಬ್ದವನ್ನು ಇಟ್ಟುಕೊಂಡು ಪ್ರಾಣ ಶಬ್ದವು ಭಗವತ್ಪರವೆಂದು ಹೇಳುವುದಾದರೂ ಪ್ರಜಾ ಶಬ್ದವನ್ನು ಇಟ್ಟುಕೊಂಡು ಮನಃಶಬ್ದವು ಜೀವಪರವೆಂದು ಹೇಳಲಾಗುವುದಿಲ್ಲ ಪ್ರಜಾಶಬ್ದದಿಂದ ಸ್ಥಾವರಜಂಗಮರೂಪಗಳಾದ ಅಚೇತನಗಳನ್ನೆಲ್ಲಾ ಇಟ್ಟುಕೊಳ್ಳುತ್ತೇವೆ. ಎಂದರೆ ಹಾಗೆ ಹೇಳಕೂಡದು. ಏಕೆಂದರೆ—) ಪ್ರಜಾಶಬ್ದವು ಚೇತನಗಳಲ್ಲಿಯೇ ಪ್ರಸಿದ್ಧವಾಗಿದೆ. (ಆ ವಿಷಯದಲ್ಲಿ ಪ್ರಮಾಣ ಹೇಳುತ್ತಾರೆ) ಪ್ರಜೆಗಳ ಸುಖದುಃಖಗಳಿಂದ ರಾಜನು ಶುಭ ಅಶುಭಗಳನ್ನು ಹೊಂದುತ್ತಾನೆ. (ಅಚೇತನಕ್ಕೆ ಸುಖದುಃಖಗಳು ಇರುವುದಿಲ್ಲವಷ್ಟೆ) ಇತ್ಯಾದಿ ಪ್ರಮಾಣಗಳಿಂದ ಪ್ರಜಾ ಶಬ್ದದಿಂದ ಚೇತನರನ್ನೇ ಇಟ್ಟುಕೊಳ್ಳಬೇಕು ॥ ೨ ॥

ಪೀ—೬ನೇ ಮಂತ್ರದಲ್ಲಿ ಯಥಾ ಖಲು ಸೋಮ್ಯ ಎಂದಾರಂಭಿಸಿ—ತದುಕ್ತಂ ಪುರಸ್ತಾತ್ ಎಂಬ ಪರ್ಯಂತ ವಾಕ್ಯವು ಏತಕ್ಕೆ? ಹಿಂದಿನ ವಾಕ್ಯದಿಂದಲೇ ತಿಳಿದುಕೊಳ್ಳಬಹುದು ಎಂದರೆ ಪ್ರಮಾಣವನ್ನು ಹೇಳಿ ಅದರ ಅಭಿಪ್ರಾಯ ಹೇಳುತ್ತಾರೆ—

ಭಾ. ॥ (೧) ಶರೀರಧಾತುಕೃತ್ತ್ವೇನ ಲಕ್ಷ್ಮ್ಯಾದ್ಯಾಶ್ಚ ಮುಮುಕ್ಷುಣಾ । ಧ್ಯೇಯಾಸ್ತದೀಶಿಕೃತ್ತ್ವೇನ ಭಗವಾನ್ಪುರುಷೋತ್ತಮಃ ॥ ಇತಿ ವಚನಾದನುಸಂಧಾನಕರ್ತವ್ಯತಾಜ್ಞಾಪನಾರ್ಥಂ ತದುಕ್ತಂ ಪುರಸ್ತಾದಿತ್ಯುಕ್ತಂ ॥ (೨) ಮುಕ್ತಾವುಮಾ ತು ವಾಗಾಖ್ಯಾ ರುದ್ರಂ ಯಾತಿ ಮನೋಽಭಿಧಂ । ವಾಯುಂ ಯಾತಿ ಶಿವಶ್ಚಾಪಿ ವಾಯುಸ್ತೇಜೋಽಭಿಧಾಂ ಶ್ರಿಯಂ ॥ ವಾಯುಮಾದಾಯ ಸಾ ದೇವೀ ಯಾತಿ ವಿಷ್ಣುಂ ಪರಾತ್ಪರಂ । ದ್ವಾರಮಾತ್ರಾ ತು ಸಾ ದೇವೀ ವಾಯುಪ್ರಾಪ್ಯೋ ಜನಾರ್ದನಃ ॥ ಮೃತಿಕಾಲೇ ಚ ಮುಕ್ತೌ ಚ ಪುರುಷಾವಾಚಮಾಪ್ನುಯುಃ । ಇತಿ ಸತ್ಪತ್ತ್ವೇ ॥ ೩ ॥

ಆ ॥ (೧) ಶರೀರದಲ್ಲಿ ರಕ್ತ ಧಾತು ಮೊದಲಾದವುಗಳನ್ನು ನಾಡುವವರಾದುದರಿಂದ ಲಕ್ಷ್ಮೀ ಪ್ರಾಣ ಶಿವರೆಂಬ ದೇವತೆಗಳನ್ನು ಮೋಕ್ಷವನ್ನು ಬಯಸುವವನು ಧ್ಯಾನಿಸಬೇಕು. ಅವರಿಗೂ ನಿಯಾಮಕನು (ಪ್ರೇರಕನು) ಎಂದು ಶ್ರೀಹರಿಯನ್ನು ಅವಶ್ಯವಾಗಿ ಮೋಕ್ಷೇಚ್ಛುವು ಧ್ಯಾನಿಸಬೇಕು, ಎಂಬ ಪ್ರಮಾಣದಿಂದ ಲಕ್ಷ್ಮ್ಯಾದಿಗಳನ್ನೂ ಶ್ರೀಹರಿಯನ್ನೂ ಸರ್ವದಾ ಅನುಸಂಧಾನ ಮಾಡಿಕೊಳ್ಳಬೇಕೆಂದು ತಿಳಿಸುವುದಕ್ಕಾಗಿ ತದುಕ್ತಂ ಪುರಸ್ತಾತ್ ಮೊದಲೇ ಆ ಪ್ರಮೇಯವು ಹೇಳಲ್ಪಟ್ಟಿದೆ ಎಂದು ಹೇಳಿದ್ದು, ಎಂದು ತಿಳಿಯುತ್ತದೆ. (೨) (೬ನೇ ಮಂತ್ರದಲ್ಲಿ ಅಸ್ಯ ಸೋಮ್ಯ ಪುರುಷಸ್ಯ ಪ್ರಯತೋ ವಾಙ್ಮನಸಿ ಎಂಬುವಲ್ಲಿ ವಾಗಾದಿ ಶಬ್ದಗಳು ಜಡಗಳಾದ ವಾಗಾದಿ ಇಂದ್ರಿಯಗಳನ್ನು ಹೇಳುತ್ತವೆ, ಎಂದು ಪರರು ಹೇಳುವುದು ಅಯುಕ್ತವು ಏಕೆಂದರೆ ಪರಸ್ಯಾಂ ದೇವತಾಯಾಂ ಎಂದು ಸತ್ ಶಬ್ದದಿಂದ ಹೇಳಲ್ಪಡಲಕ್ಕುದು ಪರದೇವತೆಯೆಂದು ಹೇಳಿದುದರಿಂದ ವಾಗಾದಿಗಳು ದೇವತೆಗಳೆಂದೇ ತಿಳಿಯುತ್ತವೆ ಈ ವೇದ

ಮೋಕ್ಷಹೊಂದಲಿಕ್ಕೆ ಅವಶ್ಯವಾದ ಮಾರ್ಗ ತಿಳಿದವರು ಮತ್ತು ಅನುಭವವನ್ನು ಹೇಳಲಿಕ್ಕೆ ಹೊರಟಿದ್ದು ಸಾಕಷ್ಟಿದೆ. ಹಾಗೆಯೇ ಶ್ರುತಿಕಾರರು "ವಾಜ್ಞಸಿ ದರ್ಶನಾಶ್ಚಾಸ್ತ್ರಾಸ್ತ್ರ" ಇತ್ಯಾದಿಗಳಲ್ಲಿ ವಾಗಾದ್ಯುಪನಿಷತ್ತಿನ ದೇವತೆಗಳಿಗೆ ಮೋಕ್ಷಕಾಲದಲ್ಲಿ ಅನ್ನೋನ್ನ ದೇಹಲಯವು ಆಗುತ್ತದೆಂದು ನಿರ್ಣಯಿಸಿದರು. ಮತ್ತು ಪುರುಷಂ ಮೋನ್ಮೋಪಸಾಮಿಸಂ ಎಂಬ ಮೇರಿನ ಖಂಡದಿಂದಲೂ ಇದು ಮುಕ್ತಾತ್ಮರೆಂದೇ ತಿಳಿಯುತ್ತಿದೆ. ಎಂಬ ಅಧಿಕಾರಿಯಿಂದ ನೋಕ್ಷ, ಮರಣ ಎರಡನ್ನೂ ಹೇಳುತ್ತಿದೆಂಬಲ್ಲಿ ವ್ಯವಸಾಯವನ್ನು ಹೇಳ ಅರ್ಥಾಪತ್ತಿಯಿಂದ (ಮೋಕ್ಷದಲ್ಲಿಯೂ ಮುಕ್ತಿಯಲ್ಲಿಯೂ ವಾಕ್ ಎಂದು ಶಬ್ದವು ವಾಗಿಂದ್ರಿಯಕ್ಕೆ ಅಧಿವಸನಿಸಿರುವಾದ ವಾಗಾತಿಮಾದರೂ ಮನಸ್ಸು ಎನ್ನಿಸಿದ ಮನಸ್ಸಿಗೆ ಶಬ್ದವನ್ನು ಸೂಚಿಸಿರುವಾದ ಮಧ್ಯನನ್ನು ಕೊಂದುತ್ತಾಳೆ (ಅಂದರೆ ಮಧ್ಯನಲ್ಲಿ ದೇಹಲಯವನ್ನು ಕೊಂದುತ್ತಾಳೆ. ಅಂದರೆ ವ್ಯವಹಾರಬ್ರಹ್ಮವಲ್ಲ. ಆಗುತ್ತಾಳೆ) ಮಧ್ಯಮ ವಾಯುವೇವರನ್ನು ಕೊಂದುತ್ತಾಳೆ ನಾಯುವೇವರು ಶ್ರೇಷ್ಠ ಎನಿಸಿದ ತೇಜಸ್ಸಿಗೆ ಅಧಿವಸನಿಸಿರುವ ಲಕ್ಷ್ಮೀದೇವಿಯನ್ನು ಕೊಂದುತ್ತಾಳೆ. ಆ ಲಕ್ಷ್ಮೀದೇವಿಯು ವಾಯುವೇವರನ್ನು ಕರೆದುಕೊಂಡು ಸರ್ವೋತ್ಕೃಷ್ಟವಾದ ವಿಷ್ಣುವನ್ನು ಕೊಂದುತ್ತಾಳೆ ಆ ದೇವಿಯು ಚತುರ್ಮೂರ್ತಿಗಳಿಗೆ ಬ್ಯಾಪ್ತವಾಗುತ್ತಳು. ಅಂದರೆ-ಚತುರ್ಮೂರ್ತಿಗಳ ಆ ದೇವಿಯನ್ನು ಹೊಂದುವುದು. ಮತ್ತ (ಅಷ್ಟ ಲಯವನ್ನು) ಚತುರ್ಮೂರ್ತಿಗಳಿಂದ ಹೊಂದಲ್ಪಡುವವನ ಶ್ರೀಕರವು. ಮರಣಕಾಲದಲ್ಲಿಯೂ ಮೋಕ್ಷಕಾಲದಲ್ಲಿಯೂ ಆಯುವವರೂ ಮೋಕ್ಷವನ್ನು ಹೊಂದುವವರೂ ಕಾಣದ ವಾಗಾಪಸನಿಸಿದಾದ ಪಾರತಿಯನ್ನು ಹೊಂದುತ್ತಾರೆ. ಎಂದು ಸತ್ಯಸ್ಥನೆಂಬ ಗ್ರಂಥ ನಡೆದ

ವಿ॥(1) ಮೋಕ್ಷದೇಹಕ್ಕೆ ಅವಶ್ಯವಾದ ಪಂಚಭೂತಗಳಿಂದ ಮಾಡಲ್ಪಟ್ಟ ಸೂಕ್ಷ್ಮಶರೀರವೂ, ಬುದ್ಧಿಯಿಂದ ಗುಣತ್ರಯರೂ, ವಾಯುವಿನಿಂದ ಚತುರ್ಮೂರ್ತಿಗಳವರನ್ನು ಬಯಸಿಕೊಳ್ಳಬೇಕು (2) ಪ್ರಾಣಕ್ಕೆಜಸಿ ಎಂಬುವುದರಿಂದ ಚತುರ್ಮೂರ್ತಿಗಳಿಗೆ ಲಕ್ಷ್ಮೀದೇವಿಯಲ್ಲಿ ದೇಹಲಯವನ್ನು ಹೇಳಲಾಯಿತು. ಹಾಗೆ ಹೇಳದರೆ ಚತುರ್ಮೂರ್ತಿಗಳಿಗೆ ಮರಣ ಸಂಸಾರವು ಬರಬೇಕಾಗುವುದು. ಎಂದರೆ-ಪ್ರಾಣಕ್ಕೆಜಸಿ ಎಂಬುವುದಕ್ಕೆ ಶಾಸ್ತ್ರಕಾರರು ಹೇಳುತ್ತಾರೆ—ಚತುರ್ಮೂರ್ತಿಗಳಿಗೆ ಲಕ್ಷ್ಮಿಯಲ್ಲಿ ಲಯವೆಂದರೆ-ಲಕ್ಷ್ಮಿಯ ಸಮಾನವನ್ನು ಹೊಂದುವುದು ಮತ್ತ ಅವಳಲ್ಲಿ ದೇಹಲಯವು ಚತುರ್ಮೂರ್ತಿಗಳಿಗೆ ಸಾಕ್ಷಾತ್ತಾಗಿ ಪರಮಾತ್ಮನಲ್ಲಿಯೇ ಲಯವು ಚತುರ್ಮೂರ್ತಿಗಳೇ ಧೂರ್ವದಲ್ಲಿ ಮುಖ್ಯಪ್ರಾಣನಾದಾಗ ಲಕ್ಷ್ಮಿಯಲ್ಲಿಯೇ ಮುಖ್ಯಪ್ರಾಣನಿಗೆ ಲಯವು. ಎಂಬ ವಿಶೇಷಾರ್ಥವನ್ನು ತೋರಿಸುವದಕ್ಕಾಗಿ ದ್ವಾರಮಾತ್ರಾ ಕು ಎಂಬುವಲ್ಲಿದ್ದ ಕು ಶಬ್ದವು. (3) ಹೀಗಾದರೆ ಶಾಸ್ತ್ರಕಾರಿಗಳಿಂದ ಹೇಳಿದಾದ ತೆಳಗಿನವರಿಗೆ ದೇಹಲಯವೇ ಇಲ್ಲದಿರುವದರಿಂದ ಮೋಕ್ಷವೇ ಇಲ್ಲವೆಂದಾಗುವದು ಮತ್ತು ಮರಣಾಲದಲ್ಲಿ ಕಾಯುವವರು. ಶ್ರೀಹರಿಯನ್ನು ಹೊಂದದಿರುವದರಿಂದ ಹ್ಯಾಶ್ಚೈಣಾತ್ಮಶಾಸ್ತ್ರಾರೂಢಾಃ ಇತ್ಯಾದಿಗಳಿಂದ ವಿರುದ್ಧವು ಆಗುವವು ಎಂದರೆ ಇತರಶಾಸ್ತ್ರಾದಿಗಳಿಂದ ತೆಳಗಿನವರು ಮರಣಕಾಲದಲ್ಲಿ ಕಾಯುವವರು. ಅವರಿಗೆ ಅವಳಲ್ಲಿ ದೇಹಲಯವು. ಅಂದರೆ ತೆಳತೆಳಗಿನ ದೇವತೆಗಳ. ದೇಹಲಯಗಳಲ್ಲಿನ ದೇವತೆಗಳ ಅಧೀನರಲ್ಲಿರುತ್ತಾರೆಂದು ಧ್ಯಾನಿಸುವುದು. ॥೩॥

೫೯—ಸ ಯ ಏಷೋಽಕ್ಷಿಣ್ಯಪುರುಷ ಏತದೃಗಿದಂ ಸಮಂ ಏತದಮೃತಮಿದಂ ಬ್ರಹ್ಮೇತಿ ಅಸ್ಯ ಸರ್ವಸ್ಯ ಹ್ಯೇವಾಗಂ ಭವತಿ ಯಸ್ಯ ಏತಸ್ಯಾಂ ಪಥಿ ಸಂಚರತ್ಯೇತಸ್ಯ ಪ್ರಾಣಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ ಆಕಾಶಾದ್ವಾಯುರ್ವಾಯೋರಗ್ನಿರಗ್ನೇರಾಪೋಽದ್ಭ್ಯಃ ಪೃಥಿವೀ ಪೃಥಿವ್ಯಾ ಓಷಧಯ ಓಷಧೀಭ್ಯೋ ಅನ್ನಮನ್ನಾದ್ರೇತೋ ರೇತಸಃ ಪುರುಷಃ ಸೋಽನ್ನರಸಮಯಃ ಪುರುಷಃ ತಸ್ಯೇದಮೇವ ಶಿರಃ ಅಯಂ ದಕ್ಷಿಣಃ ಪಕ್ಷಃ ಅಯಮುತ್ತರಃ ಪಕ್ಷಃ ಅಯಮಾತ್ಮೇದಂ ಪುಚ್ಛಂ ಪ್ರತಿಷ್ಠಾ ತದಪ್ಯೇಷ ಶ್ಲೋಕೋ ಭವತಿ ॥೪॥

ಸಂ—ಸ ಯ ಇತಿ ಸಂಬಂಧಃ ಅಕ್ಷಿಣಿ ಭವಃ ಅಕ್ಷಿಣ್ಯಃ ಅಕ್ಷಿಗಳ. ಹೀಗೆ ಅರ್ಥ ಹೇಳಿದರು ಸಃ ಎನಿಸಿದ ಅಮುಃ (ಪರಬ್ರಹ್ಮನಿಷ್ಠ ಧರ್ಮವು ಜಗತ್ತಿಗೆ ಮುಂಬರಿ. ಸಃ ಎನಿಸಿದ ಅಕ್ಷನಿಂದ ಈ ಎಲ್ಲಾ ಜಗತ್ತು ಅಕ್ಷನಲ್ಲಿದ್ದಾಗ ಜಗತ್ತಿನಲ್ಲಿ ಪೀರ ಅಕ್ಷನು (ಸಂಸಾರಿಯು) ಇಲ್ಲ. ಯಾವ ಅಕ್ಷನಿಂದ ಈ ಎಲ್ಲಾ ಜಗತ್ತು ಅಕ್ಷನಲ್ಲಿದ್ದು ಆಗಿದೆಯೋ ಅಂತಹ ಸಃ ಎನಿಸಿದ ಕಾರಣವೇ ಕಾರಣವಾಗಿರುವ ಸತ್ಯವು ಅದುಕಾರಣ ಸದ್ರೂಪವಾದ ಅಕ್ಷನು ಜಗತ್ತಿಗೆ ಪ್ರಕಟ ಸ್ವರೂಪವು.

(ಅಂತರ್ಗತನು) ಆ ಸದ್ರೂಪತತ್ಪ್ರವು ಯಥಾರ್ಥವು. ಅದುಕಾರಣ ಎಲೋ ಶ್ವೇತಕೇತುವೇ ಅಂತಹ ಸತ್ ಎನಿಸಿದವನು ನೀನು ಆಗಿರುತ್ತಿ. ಅವನಿಗೂ ನಿನಗೂ ಭೇದವಿಲ್ಲ ಎಂದು ಅರ್ಥ ಹೇಳಿರುವರು. ಅದು ಸರ್ವಥಾ ಯುಕ್ತವಲ್ಲ. **ಸ ಯ ವಿಷಃ** ಎಂಬುವುದು ಹಿಂದೆ ಹೇಳಿದುದನ್ನು ಅನುವಾದಮಾಡಿದ್ದೆಂದಾದರೆ **ಸಃ** ಎಂಬ ತಚ್ಛಬ್ದವೆ ವ್ಯರ್ಥವು ಮತ್ತು ಅಣುವೇ (ಬ್ರಹ್ಮನೇ) ಜಗತ್ತಿಗೆ ಮೂಲಕಾರಣವಾಗಿರುವುದರಿಂದ ಅಣುಭಾವವು (ಅಣುವಿನ ಧರ್ಮವು) ಜಗತ್ತಿಗೆ ಮೂಲಕಾರಣವೆಂಬುದು ಯುಕ್ತವಲ್ಲ. ಅಲ್ಲದೆ ಇದ್ದ ಪದಗಳಿಂದಲೇ ಅರ್ಥವು ಸರಿಯಾಗಿ ಸಿಗುವಾಗ **ಜಗತೋ ಮೂಲಂ** ಎಂದು ಅಧ್ಯಾಹಾರವು (ಇಲ್ಲದಿರುವ ಪದವನ್ನು ಸೇರಿಸಿಕೊಂಡು ಅರ್ಥಹೇಳುವುದು) ಯುಕ್ತವಲ್ಲ. ಎಂಬ ಅಭಿಪ್ರಾಯದಿಂದ **ಸ ಯ** ಇದುಮೊದಲಾದ ವಾಕ್ಯಕ್ಕೆ ಪ್ರಮಾಣವನ್ನು ಹೇಳಿ ಅರ್ಥ ಹೇಳುತ್ತಾರೆ—

ಭಾ. ॥ ಯೋಽಸೌ ನಿಯಮನಾದ್ವಿಷ್ಣುಃ ಸಾರತ್ವಾತ್ಸೆ ಇತಿ ಸ್ಮೃತಃ । ಅಣಿಮಾ ಸೂಕ್ಷ್ಮತೋ ಗಮ್ಯ ಏತದಾತ್ಮ್ಯಂ ಚ ತದ್ವಶಂ ॥ ೪ ॥

ಅ ॥ (ನಾಮಾನಿ ಸರ್ವಾಣಿ ಯಮಾವಿಶಂತಿ ಎಂಬ ವೇದ ಪ್ರಮಾಣದಿಂದ **ಸ ಯಃ** ಇತ್ಯಾದಿ ವಾಕ್ಯವು ಶ್ರೀಹರಿಯ ನಾಮಧೇಯವೇ ಎಂಬ ಅಭಿಪ್ರಾಯದಿಂದ **ಸ ಯ** ಇತ್ಯಾದಿ ಪದಗಳ ಅರ್ಥಗಳನ್ನು ವಿವರಿಸಿ ಹೇಳುವರು.) ಶ್ರೀವಿಷ್ಣುವು ಪ್ರತಿಕಾರ್ಯಗಳನ್ನು ಮಾಡಲಿಕ್ಕೆ ಪ್ರೇರಿಸುವುದರಿಂದ **ಯಃ** ಎಂದೂ, ಸರ್ವರಿಗಿಂತಲೂ ಶ್ರೇಷ್ಠನಾಗಿರುವುದರಿಂದ **ಸಃ** ಎಂದೂ, ಎಲ್ಲಾ ಭಕ್ತರಿಗೂ ಇಷ್ಟವನ್ನು ಕೊಡುವವನಾದುದರಿಂದ **ವಿಷಃ** ಎಂದೂ, **ಸೂಕ್ಷ್ಮಜ್ಞಾನಕ್ಕೆ** ವಿಷಯನಾದುರಿಂದ **ಅಣಿಮಾ** ಎಂದೂ ಅನ್ನಿಸುತ್ತಾನೆ. (ಮತ್ತು ಸರ್ವರ ಸವಿೂಪದಲ್ಲಿದ್ದ ಪ್ರಯುಕ್ತ, **ವಿಷಃ**, ಸಾರಭಾಗವನ್ನು ತೆಗೆದುಕೊಳ್ಳುವುದರಿಂದ **ಆತ್ಮಾ** ಇತ್ಯಾದಿಗಳಿಂದ **ವಿಷ ಜಾಸೌ ಆತ್ಮಾ ಚ ಏತದಾತ್ಮಾ ಏತದಾತ್ಮ್ಯೆವ ಏತದಾತ್ಮ್ಯಂ** ಅಂದರೆ—ಸರ್ವರ ಸವಿೂಪದಲ್ಲಿದ್ದು ಸಾರಭಾಗವನ್ನೇ ಹೊಂದುತ್ತಿರುವುದರಿಂದ, **ಏತದಾತ್ಮ್ಯ**ನೆಂದೂ, ಜ್ಞಾನಿಗಳಿಗೆ ಪ್ರತ್ಯಕ್ಷನಾಗುವುದದರಿಂದ **ಇದಂ** ಎಂದೂ ಸರ್ವಗುಣಪೂರ್ಣನಾದುದರಿಂದ **ಸರ್ವಂ** ಎಂದೂ, ಎನಿಸುತ್ತಾನೆ. ಹೀಗೆ ಪ್ರತಿಪದಗಳೂ ಭಗವತ್ಪರಗಳೆಂದು ಹೇಳಲು ಶಕ್ಯಗಳೇ ಆಗಿವೆ. ಆದರೂ ಸಂಪೂರ್ಣ ವಾಕ್ಯಕ್ಕೆ ಅನ್ವಯವೆಂಬ ಪಕ್ಷ ಇಟ್ಟುಕೊಂಡು ಅರ್ಥಹೇಳುತ್ತಾರೆ—) ಈ ಎಲ್ಲಾ ಜಗತ್ತು ಶ್ರೀಹರಿಯ ಅಧೀನದಲ್ಲಿ ಇರುವುದು. ಆವನ ಪ್ರೇರಣೆಯಂತೆ ಪ್ರವೃತ್ತಿ ಮಾಡುತ್ತಿರುವುದು.

ವಿ ॥ (1) **ಏಷಃ ಆತ್ಮಾ ಯಸ್ಯ ಸಃ** ಸದ್ರೂಪನಾವ ಶ್ರೀಹರಿಯು ಸ್ವಾಮಿಯಾಗಿ ಉಳ್ಳದ್ದು. ಈ ಎಲ್ಲಾ ಜಗತ್ತಿಗೆ ಸತ್ ಎನಿಸಿದ ಶ್ರೀಹರಿಯು ಸ್ವಾಮಿಯು. ಅಂದರೆ ಆ ಶ್ರೀಹರಿಯ ಅಧೀನದಲ್ಲಿ ಜಗತ್ತು ಇದೆ. (2) ಅಥವಾ **ಏಷ ಜಾಸಾವಾತ್ಮಾ ಚ ಏತದಾತ್ಮಾ ಏತದಾತ್ಮನಃ ಇದಂ ಏತದಾತ್ಮ್ಯಂ**=ಸರ್ವಸ್ವಾಮಿಯಾದ ಶ್ರೀಹರಿಯಿಂದ ನಿಯಮ್ಯವಾದುದು, ಜಗತ್ತು. **ಏವಂಚ ಏತದಾತ್ಮ್ಯಮಿದಂ ಸರ್ವಂ** ಎಂಬ ವಾಕ್ಯವು ಜೀವೇಶ್ವರರಿಗೆ ಐಕ್ಯ ಹೇಳಲಿಕ್ಕೆ ಸರ್ವಥಾ ಹೊರಟಿದ್ದಲ್ಲ. ॥ ೪ ॥

ಪೀ—ತತ್ಸತ್ಯಂ ಎಂಬುವುದಕ್ಕೆ **ತದೇವ ಸತ್ಯಂ** ಎಂದು ಪರರು ಅರ್ಥ ಹೇಳಿರುವರು. ಇದು ಅಯುಕ್ತವು. ಏಕೆಂದರೆ ಇಲ್ಲದಿರುವ ವಿವರ್ತವನ್ನು ಕಲ್ಪಿಸಿರುವರು. ಮತ್ತು ಎಲ್ಲವೂ ಪಾರಮಾರ್ಥಿಕ ಸತ್ಯವೆಂದೇ ವ್ಯವಸ್ಥೆಮಾಡಲ್ಪಟ್ಟಿದೆ, ಎಂಬ ಅಭಿಪ್ರಾಯದಿಂದ **ತತ್ಸತ್ಯಂ** ಎಂಬುದಕ್ಕೆ ಅರ್ಥ ಹೇಳುತ್ತಾರೆ—

ಭಾ. ॥ (೧) ಪರಾನಂದತ್ವತಃ ಸತ್ಯ ಆತ್ಮಾ ಪೂರ್ಣಗುಣತ್ವತಃ ॥ (೨) ಸತ್ಯತೋ ನಾಸಿ ತತ್ಸ್ವಂ ಹಿ ಮಾಭೂತ್ತೇ ಸ್ವಜ್ಞತಾ ತತಃ ॥ (೩) ಅಸುರಾಃ ಸ್ವಜ್ಞತಾಂ ಯಾತಾ ಬ್ರ-

ಹ್ಯಾಹುಸಿತಃ ಮೂರ್ಧಿನಃ । ಜಿಘ್ರಂ ಜಗದಿಚ್ಛಾಮಃ ಸಿದ್ಧೀಃ ಯಾಂ ಬುಬುಧಾಸಿರೇ । ಅಸಿಸ್ಮಿರಂ ಜಗಚ್ಚಾ(ಚ್ಚಾ)ಮರಪ್ರತಿಷ್ಠಂ ತಥೈವ ಚ ॥ ೫ ॥

೫ ॥ (೧) ಕಶ್ ಎನ್ನುವ ಪದಸ್ಥಾನದ ಬ್ರಹ್ಮಶಬ್ದದ ಅರ್ಥವನ್ನು ಮೊದಲಾಗಿಯೂ ಕಶ್ಯಪೋಽಸಿ (ಪ್ರಜಾಪತಿಯಾಗಿರುವುದರಿಂದ ಕಶ್ ಎಂದು) ಎನ್ನುವಲ್ಲಿಯೆ (ಮತ್ತೆ ಕಶ್ಯಪ ಕಶ್ಯಪ ಯೂಥಾಶ್ಚ ಪ್ರಶ್ನಕ್ ಸ್ವರೂಪವು ಬದಲಾಗಿದೆ. ಎಂದು ಅದನ್ನೇ ಹೇಳಿದೆ- ಕಶ್ಯಪ್ಯಂ ಎಂಬುದರಿಂದ ಹೇಳಿದನ್ನೇ ಇದರಿಂದಲೂ ಹೇಳಿದ ಕಾರಣ ಪುನರುಕ್ತಿಯು. (ಎರಡು ಸಲ ಪುನರುಕ್ತಿಯೆಂಬ ಆಗುವುದು) ಕಶ್ಯಪ್ಯಂ ಎಂದು ತಿಳಿಸಿಕೊಟ್ಟನು. ಸ್ವ ಆತ್ಮಾರ್ಥವನ್ನೇ ಅತ್ಮಾಜೀವನ ಎಂದು ಜೀವಶಬ್ದಕ್ಕೆ ಬದ್ಧ ಜೀವ ಎಂದು ಅರ್ಥವನ್ನು ಬಿಡಿಸಿಹೇಳಿದ ಬಳಿಕ ಪ್ರಾಣಂ ಎಂದು ಹೇಳಿದ್ದರಿಂದ ಅಶ್ಯ

ರ್ವೇದೇಷು ಜೈಕಶಾಂ ॥ (೪) ಯಾಂತಿ ಚೈವ ತಮೋ ಘೋರಂ ಪರಮಾತ್ಮವಿನಿಂದಕಾಃ ॥ (೫) ಅಲಂಬ್ಯ ತನ್ಮತಂ ನ ತ್ವಮೇಕತ್ವಂ ವಿದ್ಧಿ ವಿಷ್ಣುನಾ ॥ (೬) ಏಕತ್ವಾ(ತಾ)ಭಾವತೋ ನೈವ ಭವೇಥಾಶ್ಚ ಮಹಾಮನಾಃ ॥ (೭) ತನ್ನಿಷ್ಠಾ ಹಿ ಪ್ರಜಾ ಯಸ್ಮಾತ್ತತ್ಕೃತಿಷ್ಠಾಶ್ಚ ಮೋಕ್ಷಗಾಃ । ತನ್ಮೂಲಾಶ್ಚ ಯತಸ್ತಾಸಾಂ ಸದ್ಭಾವಃ(ತದ್ಭೂತಃ)ಕುತ ಏವ ತು ॥ ೧,೨,೩, ೪,೫,೬,೭॥ ಇತ್ಯಷ್ಟಮಃ ಖಂಡಃ ॥ ೮–೮ ॥ ॥ ೬ ॥

ಅ ॥ (೧) ವಿಮತಾನಿ ಶರೀರಾಣಿ ಜೈತ್ರೈಕ್ಯೈವ ಭೋಗಾಯತನಾನಿ ಎಲ್ಲಾ ಶರೀರಗಳೂ ಜೈತ್ರನಿಗೇನೇ ಭೋಗಿಸಲಿಕ್ಕೆ ಉಪಯುಕ್ತಗಳು. ಇದುಮೊದಲಾದ ಕುತರ್ಕದಲ್ಲಿಯೇ ಆಸಕ್ತಿಯಿರುವವರು, ಎಲ್ಲಾ ವೇದಗಳೂ ಜೀತನನು ಒಬ್ಬನೇ ಎನ್ನುತ್ತವೆಂದು ಹೇಳುತ್ತಾರೆ. (೨) (ಯಃ ಸರ್ವಜ್ಞಃ ಇತ್ಯಾದಿ ವೇದಗಳಿಂದ ಸಿದ್ಧಗಳಾದ ಸಾರ್ವಜ್ಞಾದಿಗುಣಗಳುಳ್ಳ ಶ್ರೀಹರಿಯಿಂದ ಐಕ್ಯ ಹೇಳುವುದು ಹೇಗೆಂದರೆ—) ಶ್ರೀಹರಿಯು ಗುಣವಂತನೆಂಬುವುದನ್ನು ಸಹಿಸಲಾರರು. ಪರಬ್ರಹ್ಮನು ನಿರ್ಗುಣನೆನ್ನುತ್ತಾರೆ. (೩) (ತತ್ತ್ವಮಸಿ ಇತ್ಯಾದಿ ವೇದಗಳಲ್ಲಿಯೇ ಐಕ್ಯ ಹೇಳಿರುವುದರಿಂದ ಇದು ಅಸುರರ ಪಕ್ಷವೆನ್ನುವುದು ಹೇಗೆಂದರೆ—) ತತ್ತ್ವಮಸಿ ಇತ್ಯಾದಿ ಶಾಸ್ತ್ರಗಳ ಸತ್ಯಾರ್ಥವನ್ನು ತಿಳಿಯದೆ ಎಲ್ಲಾ ವೇದಗಳಲ್ಲಿ ಜೀವಬ್ರಹ್ಮೈಕ್ಯವೇ ಹೇಳಲ್ಪಡುತ್ತದೆಂದು ಹೇಳುತ್ತಾರೆ. (೪) ಶ್ರೀಹರಿಯನ್ನು ನಿಂದಿಸುವವರು ದ್ವೇಷಿಸುವವರು ಭಯಂಕರವಾದ ಅಂಧಂತಮಸ್ಸನ್ನು ಹೊಂದುತ್ತಾರೆ. (೫) ಎಲೋ ಶ್ವೇತಕೇತುವೇ ನೀನು ಆ ಅಸುರರ ಮತವನ್ನು ಆಶ್ರಯಿಸಿಕೊಂಡು ಶ್ರೀವಿಷ್ಣುವಿನಿಂದ ಐಕ್ಯವನ್ನು ತಿಳಿಯಬೇಡ. ಸ್ವಬ್ಧನು (ಅವಿನೀತನು) ಆಗಬೇಡ. (೬) (ಹೀಗೆ ಅವಿನೀತನಾಗಬೇಡವೆಂದು ಹೇಳಿ ನಾನೇ ಸರ್ವೋತ್ಕೃಷ್ಟನು ಎಂದು ಮನಸ್ಸು ಉಳ್ಳವನು ಆಗಬೇಡ ಎನ್ನುತ್ತಾರೆ—) ಜೀವಬ್ರಹ್ಮೈಕ್ಯವು ಕೂಡ ದಿರುವುದರಿಂದ ನಾನೇ ಸರ್ವೋತ್ಕೃಷ್ಟನು ಎಂದು ಮನಸ್ಸುಳ್ಳವನು ಆಗಬೇಡ. (೭) (ಐಕ್ಯವು ಕೂಡುವುದಿಲ್ಲ ಎಂಬುವಲ್ಲಿ ಸನ್ಮೂಲಾಃ ಎಂಬುವಲ್ಲಿಯೇ ಹೇಳಿದ ಯುಕ್ತಿಯನ್ನು ಹೇಳುತ್ತಾರೆ—) ಪ್ರಜೆಗಳೆಲ್ಲರೂ ಪರಬ್ರಹ್ಮನೇ ಕರ್ತನಾಗಿ ಉಳ್ಳವರು, ಬ್ರಹ್ಮನಲ್ಲಿಯೇ ಆಸಕ್ತಿಯಿರುವವರು. ಅಂದರೆ—ಆಶ್ರಯಿಸಿಕೊಂಡಿರುವವರು. ಮೋಕ್ಷದಲ್ಲಿರುವವರೂ ಪರಬ್ರಹ್ಮನ ಅಧೀನರಾಗಿರುತ್ತಾರೆ. ಆದುಕಾರಣ ಎಲ್ಲಾ ಪ್ರಜೆಗಳಿಗೆ ಪರಬ್ರಹ್ಮಭಾವವು (ಐಕ್ಯವು.) ಹೇಗೆ ಸಿಗುವುದು? ॥ ೮–೮ ॥ ॥ ೬ ॥

ಎಂಟನೇ ಖಂಡವು ಮುಗಿಯಿತು.

೯ನೇ ಖಂಡವು

ಉಃ ॥ ಯಥಾ ಸೋಮ್ಯ ಮಧು ಮಧುಕೃತೋ ನಿಸ್ತಿಷ್ಠಂತಿ ನಾನಾತ್ಯಯಾನಾಂ ವೃಕ್ಷಾಣಾಂ ರಸಾನಾಂ ಸಮವಹಾರಮೇಕತಾಂ ಗಮಯಂತಿ॥೧॥

ಅ ॥ ಎಲೋ ಶ್ವೇತಕೇತುನೇ ಹೇಗೆ ಭ್ರಮರ(ತುಂಬಿ)ಗಳು ಪರಸ್ಪರ ವಿಲಕ್ಷಣಗಳಾದ ವೃಕ್ಷಗಳ ಪುಷ್ಪರಸಗಳನ್ನು ಮಿಶ್ರೀಕರಿಸಿ ಜೇನುತುಪ್ಪವನ್ನು ನಿರ್ಮಿಸುತ್ತವೋ, ಹಾಗೆಯೇ. ॥ ೧ ॥

ಊ ॥ ತೇ ಯಥಾ ತತ್ರ ನ ವಿವೇಕಂ ಲಭಂತೇಽಮುಷ್ಯಾಹಂ ವೃಕ್ಷಸ್ಯ ರಸೋಽಸ್ಮ್ಯಮುಷ್ಯಾಹಂ ವೃಕ್ಷಸ್ಯ ರಸೋಽಸ್ಮೀತ್ಯೇವಮೇವ ಖಲು ಸೋಮ್ಯೇ-

ಮಾಃ ಸರ್ವಾಃ ಪ್ರಜಾಃ ಸತಿ ಸಂಪದ್ಯ ನ ವಿದುಃ ಸತಿ ಸಂಪದ್ಯಾಮಹ ಇತಿ

॥ ೨ ॥

ಅ॥ ಹೇಗೆ ಅನೇಕ ವಿಧಗಳಾದ ವೃಕ್ಷಗಳ ಪುಷ್ಪರಸಗಳು ವಿಭಿನ್ನಗಳಾದರೂ ನಾನು ಈ ಮಧುರ ರಸವು, ನಾನು ಈ ಮಧುರ ರಸವು, ನಾನು ಈ ಮಧುರ ರಸವು, ಎಂದು ಅದರಲ್ಲಿ ಇರತಕ್ಕ ಸದಸ್ಸರ ಭೇದವನ್ನು ತಿಳಿಯುವುದಿಲ್ಲವೋ ಹೀಗೆಯೇ ಈ ಎಲ್ಲಾ ಜೀವರೂ ಶ್ರೀಹರಿಯು ಶಕ್ತಿಗಳಿಂದಲೇ ತಮ್ಮತಮ್ಮ ಶರೀರದಲ್ಲಿರತಕ್ಕ ಸತ್ ಎನಿಸಿದ ಶ್ರೀಹರಿಯಲ್ಲಿ ಅವಸೊದನೆ ಸೇರಿ ಆ ಶ್ರೀಹರಿಯೊಡನೆ ನಾವು ಮುಂದೆ ಸೇರುವೆವು. ಏಂದೆ ಸೇರಿದ್ದೆವು ಈಗ ಸೇರುತ್ತೇವೆಂದು ತಿಳಿಯುವುದಿಲ್ಲ ॥ ೨ ॥

ಪೀ—ಮತಿಗೆ ತಿಳಿಯದಿರುವುದರಿಂದಲೂ ಅವರೂ ಶೀಘ್ರವಾಗಿ ಎಂದು ಹೇಳುತ್ತಾರೆ—

ಉ. ॥ ತ ಇಹ ವ್ಯಾಘ್ರೋ ವಾ ಸಿಂಹೋ ವಾ ವೃಕೋ ವಾ ವರಾಹೋ ವಾ ಕೀಟೋ ವಾ ಪತಂಗೋ ವಾ ದಂಶೋ ವಾ ಮಶಕೋ ವಾ ಯದ್ಯದ್ಭವಂತಿ ತತ್ತದಾ ಭವಂತಿ ॥ ೩ ॥

ಅ॥ ಜೀವರು ಶ್ರೀಹರಿಯನ್ನು ತಿರಸ್ಕರಿಸಿರುವುದರಿಂದ ಈ ಲೋಕದಲ್ಲಿ ಪ್ರಸಿದ್ಧರಾಗಿರುವ ಹುಲಿ, ಸಿಂಹ, ತೋಳ, ಹಂದಿ, ಕೀಟ, ಪತಂಗ, ನುಸಿ ಮತ್ತು ಸೊಳ್ಳೆಯಾದರೂ ಆಗಲಿ ಅವುಗಳಾಗಿ ಮುಟ್ಟುತ್ತಾರೆ. ॥ ೩ ॥

ಪೀ—ಸ್ವತಃ ಧನ್ಯರಾದ ನಿಮಗೆ ನಮಸ್ಕರಿಸುತ್ತೇನೆ. ಮೇಲಿನ ಯುಕ್ತಿಯನ್ನು ತ್ಯಜಿಸಿ

ಉ. ॥ ಸ ಯ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ವಿಜ್ಞಾಪಯತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತಿ ನವಮಃ ಖಂಡಃ ॥೮-೯॥೪॥

ಅ॥ ಖಂಡಸಂತೆಯೇ ಅದಾ ಏಷ್ಟು ಕೊಳ್ಳಿ ಪೀಳಿ

ವಿ॥ (1) ಈ ಪ್ರಮೇಯದಲ್ಲಿ ಮುಖ್ಯ ತಾತ್ಪರ್ಯವಿವೆಯೆಂದು ತಿಳಿಸುವುದಕ್ಕಾಗಿ ಸಯಃ ಇತ್ಯಾದಿಗಳನ್ನು ಅನೇಕ ಸಲ ಹೇಳಿದ್ದು. (2) ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯಃ ಎಂದು. ಹೇಳಿದ ಶ್ರವಣಾದಿಗಳನ್ನು ಅಗ್ನಿಹೋತ್ರಾದಿಗಳಂತೆ ಒಂದಾವರ್ತಿ ಮಾಡಿದುದರಿಂದ ಫಲವು ಸಿಗಲಾರದು. ಆವೃತ್ತಿ ಮಾಡಬೇಕೆಂದು ತಿಳಿಸುವುದಕ್ಕಾಗಿ ಅನೇಕಾವರ್ತಿ ಉಪದೇಶ ಮಾಡಿರುವರು. (3) ಹೀಗೆ ತಂದೆಯು ಉಪದೇಶಿಸಿದಾಗ ಶ್ವೇತಕೇತುವು ಅಚೇತನವಾದ ನಾನಾ ವೃಕ್ಷಪಸಗಳಿಗೆ ಭೇದಜ್ಞಾನ ವಿಲ್ಲದೆ ಹೋಗಲಿ, ಚೇತನಗಳಿಗೆ ಭೇದಜ್ಞಾನವು ಇರಬಹುದಲ್ಲ. ಅವುಗಳು ತಿಳಿಯದಿರುವುದು ಹೇಗೆ ಎಂಬ ಅಧಿಕ್ಷೇಪದಿಂದ ಮರಳಿ ಉಪದೇಶಿಸಿರಿ ಎಂದು ಬೇಡಿದನು. ಹಾಗೆಯೇ ಆಗಲಿ ಉಪದೇಶಿಸುತ್ತೇನೆ ಎಂದು ತಂದೆಯವರು ಹೇಳಿದರು. ॥ ೪ ॥

ಪೀ—ಮರಳಿ ಮಗನು ಪ್ರಶ್ನಿಸಲಿಕ್ಕೆ ಕಾರಣವೇನೆಂದರೆ ಅದರ ಅಭಿಪ್ರಾಯವನ್ನು ಭಾಷ್ಯಕಾರರು ಪ್ರಮಾಣವನ್ನು ಮಾಡುವಿಸಿ ಹೇಳುತ್ತಾರೆ—

ಭಾ. ॥ (೧) ಯದಿ ಸ್ಯತೋಽನ್ಯಃ ಪರನೋ ದೇಹೋಽಸ್ಮಿನ್ಸಂವ್ಯವಸ್ಥಿತಃ । ನ ದೃಶ್ಯತೇ ಕುತ ಇತಿ ಭೂಯಃ ಪಪ್ರಚ್ಛ ಪುತ್ರಕಃ ॥ (೨) ಅಜ್ಞೈರದೃಶ್ಯಮಾನೋಽಪಿ ನ ಭೇದೋ ನಾಸ್ತಿ ಪುತ್ರಕ ॥ (೩) ಯಥಾ ಪುಷ್ಪರಸಾ ಯುಕ್ತಾ ಅಜಾನಂತೋಽಪಿ ಭೇದಿನಃ । ಅಜಾನಂತೋಽಪಿ ಪುರುಷಾಸ್ತಥಾ ವಿಷ್ಣೋರ್ಹಿ ಭೇದಿನಃ ॥ (೪) ಇತಿ ಪಿತ್ರೋಪದಿಷ್ಟಃ ಸನ್ ಪುತ್ರಃ ಪಪ್ರಚ್ಛ ತಂ ಪುನಃ । ಚೇತನಾನಾಮವಿಜ್ಞಾನಂ ಕಥಮಿತ್ಯೇವ ಚಿಂತಯನ್ । ತಂ ಪ್ರತ್ಯಾಹ ॥ ೧, ೨, ೩, ೪ ॥ ಇತಿ ನವಮಃ ಖಂಡಃ ॥ ೯–೯ ॥ ॥ ೧ ॥

ಅ ॥ (೧) ತನ್ನಿಂದ ಇನ್ನೊಬ್ಬನು ಸರ್ವೋತ್ತಮನು ಈ ಶರೀರದಲ್ಲಿದ್ದರೆ ತನ್ನಿಂದ ಬೇರೆಯಾಗಿ ಏಕೆ ಕಾಣುವುದಿಲ್ಲ. (**ನ ಮತ್ತಃ ಅನ್ಯಃ ಅಸ್ಮಿನ್ ದೇಹೇ ಅಸ್ತಿ ಮಯಾ ಭೇದೇನ ಅನುಪಲಭ್ಯಮಾನತ್ವಾತ್ ಯೋಽಯಮಾತ್ಮನೋ ಭೇದೇನ ನ ಪಶ್ಯತಿ ಸ ತತೋ ನ ಭಿದ್ಯತೇ** ನನ್ನಿಂದ ಬೇರೆಯಾದವನನ್ನು ನಾನು ಕಾಣದಿರುವುದರಿಂದ ನಾನು ಹೊರತು ಇನ್ನೊಬ್ಬನು ಈ ಶರೀರದಲ್ಲಿ ಇಲ್ಲ. ಯಾರು ಯಾರನ್ನು ತನ್ನಿಂದ ಬೇರೆಯಾಗಿ ಕಾಣುವುದಿಲ್ಲವೋ ಅವನು ಅವನಿಗಿಂತ ಬೇರೆಯಿಲ್ಲವೆಂದು ಯುಕ್ತಿಯು ಸೂಚಿತವಾಯಿತು.) (೨) (೧) (ಇಲ್ಲಿ ಜ್ಞಾನಿಗಳು ಕಾಣುವುದಿಲ್ಲವೆನ್ನುತ್ತೀರೋ (೨) ಅಜ್ಞಾನಿಗಳು ಕಾಣುವುದಿಲ್ಲವೆನ್ನುತ್ತೀರೋ ಜ್ಞಾನಿಗಳು ಬೇದವಿದೆ ಎಂದೇ ಕಾಣುವುದರಿಂದ ೧ನೇದ್ದು ಅಯುಕ್ತವು. (೩) (ಅಜ್ಞಾನಿಗಳು ಕಾಣುವುದಿಲ್ಲವೆನ್ನುತ್ತೇವೆ ಎಂದರೆ—) ಎಲೋ ಮಗನೇ ಅಜ್ಞಾನಿಗಳಿಂದ ಕಾಣಲ್ಪಡದಿದ್ದರೂ ಭೇದವು ಇಲ್ಲವೆಂದಲ್ಲ. (ಹೇಗೆಂದರೆ—) ಪುಷ್ಪರಸಗಳು ಒಟ್ಟು ಮಿಶ್ರಗಳಾಗಿ ನಾನು ಇದರ ರಸ, ನಾನು ಇದರ ರಸ, ಎಂದು ತಿಳಿಯದಿದ್ದರೂ ಹೇಗೆ ಅವುಗಳಿಗೆ ಭೇದವಿದೆಯೋ, ಹಾಗೆಯೇ ಪುರುಷರು ವಿಷ್ಣುವಿನಿಂದ ತಮಗೆ ಭೇದ ತಿಳಿಯದಿದ್ದರೂ ಭೇದವುಳ್ಳವರೇ ಆಗಿರುತ್ತಾರೆ. (೪) ಹೀಗೆ ತಂದೆಯಿಂದ ಉಪದೇಶಿಸಿಕೊಂಡ ಮಗನು (ಅಜ್ಞೇತನಗಳಾದ ನಾನಾವೃಕ್ಷ ರಸಗಳಿಗೆ ಭೇದಜ್ಞಾನವಿಲ್ಲವಾದರೂ) ಚೇತನಗಳಿಗೆ ಜ್ಞಾನವಿಲ್ಲದಿರುವುದು ಹೇಗೆ ಎಂದು ಆಲೋಚಿಸುತ್ತಾ ಮರಳಿ ತಂದೆಯೊಡನೆ ಕೇಳಿದನು. ಅದಕ್ಕೆ ತಂದೆಯು ಉತ್ತರಕೊಟ್ಟನು ॥ ೯–೯ ॥ ॥ ೧ ॥

ಒಂಭತ್ತನೇ ಖಂಡವು ಮುಗಿಯಿತು.

೧೦ನೇ ಖಂಡವು

ಪೀ— ಅಜೇತನಗಳಾದ ವೃಕ್ಷರಸಗಳಿಗೆ ಜ್ಞಾನವಿಲ್ಲದೆ ಹೋಗಲಿ. ನಾನು ಯಾವ ಚೇತನನು ಶ್ರೀಹರಿಯಿಂದ ತನಗೆ ಭೇದವನ್ನು ತಿಳಿಯುವುದಿಲ್ಲವೋ ಆತನು ಶ್ರೀಹರಿಯಿಂದ ಭಿನ್ನನಲ್ಲ ಎಂದು ಹೇಳುತ್ತೇನೆ, ಎಂಬ ಅಭಿಪ್ರಾಯದಿಂದ ಶ್ವೇತಕೇತುವು ಮರಳಿ ಕೇಳೋಣ ತಂದೆಯು ಉತ್ತರಿಸುತ್ತಾನೆ.

ಉ. ॥ ಇಮಾಃ ಸೋಮ್ಯ ನದ್ಯಃ ಪುರಸ್ತಾತ್ಪ್ರಾಚ್ಯಃ ಸ್ಯಂದಂತೇ ಪಶ್ಚಾತ್ಪ್ರತೀಚ್ಯಸ್ತಾಃ ಸೆಮುದ್ರಾತ್ಸಮುದ್ರಮೇವಾಪಿಯಂತಿ ಸ ಸಮುದ್ರ ಏವ ಭವತಿ ತಾ ಯಥಾ ತತ್ರ ನ ವಿದುರಿಯೆಮಹಮಸ್ಮೀಯಮಹಮಸ್ಮೀತಿ ॥ ೧ ॥

ಅ ॥ ಎಲೋ ಮಗನೇ ಈ ಪ್ರಸಿದ್ಧಗಳಾದ ಗಂಗಾ ಯಮುನಾ ಮೊದಲಾದ ನದ್ಯಭಿಮಾನಿ ದೇವತೆಗಳು ಪೂರ್ವ ದಿಕ್ಕಿಗೆ ಹರಿದುಹೋಗುವುದರಿಂದ ಪ್ರಾಚೀ ಎಂದು ಹೆಸರುಳ್ಳವುಗಳಾಗಿ ಪೂರ್ವಾಭಿಮುಖ

ವಾಗಿ ಹರಿದುಹೋಗುತ್ತವೆ. (ಅಂದರೆ ತನ್ನ ಮಾದರಿಯ ಇತರ ನದಿಗಳಿಗಿಂತ ಹರಿಯುವಂತೆ ಮಾಡುವುದರಿಂದ ನದಿಗಳು ಹರಿಯುತ್ತವೆ) ಇ ಗೆಯೇ ಒಂದು ಮೊದಲಾದ ನದಿಗಳು ಪಶ್ಚಿಮ ದಿಕ್ಕಿಗೆ ಹರಿದುಹೋಗುವುದರಿಂದ ಪ್ರತೀಚೀ ಎಂದು ಹೆಸರುಳ್ಳವುಗಳಾಗಿ ಪಶ್ಚಿಮದಿಕ್ಕಿಗೆ ಅಭಿಮುಖವಾಗಿ ಹರಿದುಹೋಗುತ್ತವೆ ಹೀಗೆ ಅತ್ಯಂತ ವಿಲಕ್ಷಣಗಳಾದ ನದಿಗಳು (ಮೇಘಾವಿಗಳ ದ್ವಾರದಿಂದ) ಸಮುದ್ರದಿಂದ (ಮೇಲಕ್ಕೆ ಹೋಗಿ ಮಳೆಯಾಗಿ ಬಂದ ನೀರಾಗಿರುವುದರಿಂದ) ಸಮುದ್ರಕ್ಕೇನೇ ಸೇರುತ್ತವೆ (ಅಂದರೆ ತಿರುಗಿ ಬಾರದಂತೆ ಸಮುದ್ರದಲ್ಲಿ ಪ್ರವೇಶಿಸುತ್ತವೆ.) ಇ ಸಮುದ್ರವು ಸಮುದ್ರವೇ ಆಗುತ್ತದೆ (ಅಲ್ಲಿ ನದಿಗಳಾಗುವುದಿಲ್ಲ.) ಇ ನದಿಗಳೆಲ್ಲಾ ದೇವತೆಗಳು ಹೇಗೆ ಆ ಸಮುದ್ರದಲ್ಲಿ ಗಂಗೆಯು ಶಾಶ್ವತಳಾಗಿರುತ್ತೇನೆ-ಇದು ಯಮುನಾ ನದಿಯು. ಇದು ಸಮುದ್ರವು. ಹೀಗೆಯೇ ಇತರ ನದಿಗಳನ್ನು ತಿಳಿಯುವುದಿಲ್ಲ. (ಅಂದರೆ ಎಲ್ಲಾ ನದ್ಯಭಿಮಾನಿ ದೇವತೆಗಳು ತನ್ನ ತನ್ನ ನೀರನ್ನು ತಿಳಿಯುವುದೇ ಇಲ್ಲ) ॥ ೧೧ ॥

ಉ. ॥ ಏವಮೇವ ಖಲು ಸೋಮ್ಯೇದಮ್ ಸರ್ವಾಃ ಪ್ರಜಾಃ ಸತ ಆಗಮ್ಯ ನ ವಿದುಃ ಸತ ಆಗಚ್ಛಾಮಹ ಇತಿ ತ ಇಹ ವ್ಯಾಘ್ರೋ ವಾ ಸಿಂಹೋ ವಾ ವೃಕೋ ವಾ ವರಾಹೋ ವಾ ಕೀಟೋ ವಾ ಪತಂಗೋ ವಾ ದಂಶೋ ವಾ ಮಶಕೋ ವಾ ಯದ್ಯದ್ಭವಂತಿ ತತ್ತದಾ ಭವಂತಿ ॥ ೨ ॥

ಅ ॥ ಹೀಗೆಯೇ ಎಲ್ಲಾ ಪ್ರಜೆಗಳೂ ಶ್ರೇಷ್ಠರಿಂದ ಹುಟ್ಟಿದರೂ ಶ್ರೇಷ್ಠರಿಂದ ಹುಟ್ಟಿದ್ದೇವೆಂದು ತಿಳಿಯುವುದಿಲ್ಲ. ಶ್ರೇಷ್ಠರಿಂದ ಅಧೀನವಸ್ತುವೇ ಇವರೂ ಶ್ರೇಷ್ಠರಿಂದ ಆಶ್ರಯಿಸಿರುತ್ತೇವೆಂದು ತಿಳಿಯುವುದಿಲ್ಲ. ಆ ಜೀವರು ಹುಲಿ ..... ಇದರಿಂದ ಅಚೇತನಗಳಿಗೆ ಹೇಗೆ ಜ್ಞಾನವಿಲ್ಲವೋ ಹಾಗೆಯೇ ಚೇತನರಿಗೂ ಜ್ಞಾನವಿಲ್ಲವೆಂದು ಉಕ್ತವಾಯಿತು. ॥ ೩

ಪೀ – ತನ್ನಿಂದ ಭಿನ್ನವಾದವನು ಇನ್ನೊಬ್ಬ ಪರಮಾತ್ಮನು ಇದ್ದಾನೆಯು ಸಿದ್ಧವೇ ಆಗಿದೆ ಎನ್ನುತ್ತಿದೆ –

ಉ. ॥ ಸ ಯ ಏಷೋಽಣಿಮೈತದಾತ್ಮ್ಯಮಿದಗ್ಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ಭೂಯ ಏವ ನೂ ಭಗವಾನ್ವಿಜ್ಞಾಪಯತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತಿ ದಶಮಃ ಖಂಡಃ ॥ ೧೦ ॥೬॥

ಅ ॥ ಸ ಯಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥ ಹೀಗೆ ತಂದೆಯು ಬಂದಿರುವ ಶ್ವೇತಕೇತುವು ಈಶ್ವರನು ಸ್ವತಃ ತನ್ನಿಂದ ಭಿನ್ನನೇ ಆಗಲಿ. ಅವರೂ ಜೀವನು ಈಶ್ವರನ ಅಧೀನವಸ್ತುವಾನೆಂದು ಹೇಗೆ ಸಿದ್ಧಿಸುತ್ತದೆ. ಎಂಬ ಅಭಿಪ್ರಾಯದಿಂದ ಪುನಃ ತನಗೆ ಗುರುವೇ ಬೋಧಿಸಬೇಕೆಂದು. ಕೇಳಿದಾಗ ಹಾಗೆಯೇ ಆಗಲಿ ಅಂದರೆ ಉತ್ತರ ಹೇಳುವೆನು ಎಂದು ತಂದೆಯು ಹೇಳಿದನು ॥ ೧೦–೧೧ ॥ ೬ ॥

ಪೀ – ಪ್ರಶ್ನೆಗೆ ಉತ್ತರವಾಗಿ ಇವೂ ಸೋಮ್ಯ ಪದ್ಯ ಎಂಬ ಖಂಡದ ತಾತ್ಪರ್ಯ ಹೇಳುತ್ತಿದೆ –

ಭಾ. ॥ (೧) ಯಥಾ ನದ್ಯಶ್ಶೈತಸಾಶ್ಚ ಸಮುದ್ರಗಾಃ । ಸ್ವವಾರಿ ನೈವ ಜಾನಂತಿ ಪ್ರಜಾಸ್ವದೃಶ್ಯಜಾಲಯೇ ॥ (೨) ಸ್ವತೋಽನ್ಯೋಽಸ್ಯ ನದಃ ಪೇಯ ಇತಿ ಜ್ಞಾಯೇತ

ಮೇ ಕಥಂ । ಇತಿ ಪೃಷ್ಟಃ ಪುನಃ ಪ್ರಾಹ ವೃಕ್ಷದೃಷ್ಟಾಂತತಃ ಪಿತಾ ॥ ೧, ೨, ೩ ॥
ಇತಿ ದಶಮಃ ಖಂಡಃ ॥ ೮—೧೦ ॥ **॥ ೧ ॥**

ಅ ॥ ನದ್ಯಭಿಮಾನಿ ದೇವತೆಗಳು ಜೀವನವಾದರೂ ಸಮುದ್ರಕ್ಕೆ ಸೇರಿದ ಮೇಲೆ (ನಾನು ಗಂಗೆಯು ನಾನು ಯಮುನೆಯು ಎಂಬ ಪರಿಜ್ಞಾನವಿಲ್ಲದಿರುವುದರಿಂದ ತಮ್ಮ ತಮ್ಮ ನೀರನ್ನು ಹೇಗೆ *ತಿಳಿಯುವುದೇ ಇಲ್ಲವೋ, ಹಾಗೆಯೇ ಎಲ್ಲಾ ಪ್ರಜೆಗಳಿಗೂ ಆಶ್ರಯನಾದ ಪರಮೇಶ್ವರನ ಅಧೀನದಲ್ಲಿ ಇದ್ದರೂ ಆತನನ್ನು ಆಶ್ರಯಿಸಿರುತ್ತೇನೆಂದು ತಿಳಿಯುವುದಿಲ್ಲ (೨) (**ಭೂಯ ಏವ** ಎಂದು ಮರಳಿ ಮಾಡಿದ ಪ್ರಶ್ನೆಯ ಅಭಿಪ್ರಾಯ ಹೇಳುತ್ತಾರೆ—) ಸ್ವಾಭಾವಿಕವಾಗಿ ತನ್ನಿಂದ ಭಿನ್ನನಾದವನು ಪರಮಾತ್ಮನು ದೇಹದಲ್ಲಿದ್ದಾನೆಂಬುವುದು ಸಹ್ಯವೇ. ಆದರೂ ಜೀವನು ಆ ಶ್ರೀಹರಿಯ ಅಧೀನದಲ್ಲಿದ್ದಾನೆಂಬುವುದು ನನಗೆ ಹೇಗೆ ತಿಳಿಯುವುದು ಎಂದು ಪ್ರಶ್ನಿಸಿಕೊಂಡ ತಂದೆಯಾದ ಉದ್ದಾಲಕರು ವೃಕ್ಷದೃಷ್ಟಾಂತದಿಂದ ಮಗನಿಗೆ ವಿವರಿಸಿ ಹೇಳುವರು. ॥ ೮—೧೦ ॥ ॥ ೧ ॥

ಹತ್ತನೇ ಖಂಡವು ಮುಗಿಯಿತು.

೧೧ನೇ ಖಂಡವು

ಪೀ ಈಶ್ವರನು ಜೀವನಿಂದ ಭಿನ್ನನಾಗಲಿ, ಆದರೂ ಜೀವನು ಈಶ್ವರನ ಅಧೀನದಲ್ಲಿದ್ದಾನೆಂದು ಹೇಗೆ ನಾನು ತಿಳಿದುಕೊಳ್ಳುವುದು? ಎಂಬ ಅಭಿಪ್ರಾಯದಿಂದ ಮರಳಿ ಕೇಳಿದ್ದಕ್ಕೆ ತಂದೆಯು ಉತ್ತರ ಹೇಳುತ್ತಾರೆ—

ಊ. ॥ ಅಸ್ಯ ಸೋಮ್ಯ ಮಹತೋ ವೃಕ್ಷಸ್ಯ ಯೋ ಮೂಲೇಽಭ್ಯಾಹನ್ಯಾಜ್ಜೀವನ್ಸ್ರವೇದ್ಯೋ ಮಧ್ಯೇಽಭ್ಯಾಹನ್ಯಾಜ್ಜೀವನ್ಸ್ರವೇದ್ಯೋಽಗ್ರೇಽಭ್ಯಾಹನ್ಯಾಜ್ಜೀವನ್ಸ್ರವೇತ್ಸ ಏಷ ಜೀವೇನಾತ್ಮನಾನುಪ್ರಭೂತಃ ಪೇಪೀಯಮಾನೋ ಮೋದಮಾನಸ್ತಿಷ್ಠತಿ **॥ ೧ ॥**

ಅ ॥ ಎಲೋ ಮಗನೇ ಇದಿರು ಇರುವ ಅನೇಕ ಶಾಖೋಪಶಾಖಾದಿಗಳಿಂದೊಡಗೂಡಿದ ವೃಕ್ಷಕ್ಕೆ ಯಾವನಾದರೂ ಬುಡದಲ್ಲಿ (ಕೊಡಲಿ ಮೊದಲಾದವುಗಳಿಂದ) ಹೊಡೆದರೂ ಆಗ ಜೀವನಿನಿಸಿದ ಅನಿರುದ್ಧ ರೂಪಿ ಶ್ರೀಹರಿಯಿಂದ ಕೂಡಿದ್ದರೆ ರಸವನ್ನೇ ಕಾರುತ್ತದೆ. (ಒಣಗುವುದಿಲ್ಲ.) ವೃಕ್ಷದ ಮಧ್ಯಕ್ಕೆ ಹೊಡೆದರೂ ರಸವನ್ನೇ ಕಾರುವುದು ತುದಿಯಲ್ಲಿ ಹೊಡೆದರೂ ರಸವನ್ನೇ ಕಾರುತ್ತದೆ. ಆ ಈ ವೃಕ್ಷಜೀವನು ಅನಿರುದ್ಧರೂಪಿ ಶ್ರೀಹರಿಯಿಂದ ದೇಹವನ್ನು ಹೊಂದಿದವನಾಗಿ ಮತ್ತೂ ಮತ್ತೂ ಜೀವ್ಯನಾಗಿ (ನೀರನ್ನೂ ಭೂಮಿಯಲ್ಲಿದ್ದ ರಸಗಳನ್ನೂ ಬುಡದಿಂದ ಮೇಲಕ್ಕೆ) ಸೆಳೆದುಕೊಂಡು ಸಂತೋಷವನ್ನು ಹೊಂದುತ್ತಾ ಇರುತ್ತಾನೆ ॥ ೧ ॥

ಪೀ—ಹೀಗೆ ವೃಕ್ಷಜೀವನು ತಾನು ಸರ್ವದಾ ದೇಹವನ್ನು ಬಿಡದೆ ಸುಖಿಯಾಗಿಯೇ ಇರಬೇಕೆಂದು ಬಯಸಿದರೂ ಕೆಲವು ವೇಳೆಯೇ ಈಶ್ವರನ ಅನುಗ್ರಹವಿದ್ದರೆ ಮಾತ್ರ ಮರ ಕಡಿಯಲಿಕ್ಕೆ ಬೇಕಾದ

* ನದಿಯ ಜಲವೆಲ್ಲವೂ ಸಮುದ್ರದ ನೀರಿನೊಂದಿಗೆ ಸೇರಿ ವಿಶ್ವವಾಗಿರುವುದರಿಂದ ಹಾಲು ನೀರುಗಳನ್ನು ಬೆರಸಿಟ್ಟಂತೆಯೇ ತಮ್ಮ ನೀರಿನ ಭೇದಜ್ಞಾನವು ಇಲ್ಲವೆಂಬುದು ಯುಕ್ತವೇ.

ಕಾರಣಗಳಿದ್ದರೂ ಬದುಕಿರುತ್ತಾನೆ, ಎಂದರು. ಈಗ ಕಡಾಚಿತ್ ಸ್ಪರ್ಧಿಗಳು ಇದ್ದಾಗ ಹೀಗೆ ಹೇಳಿದರೆ— ಕೊಡಲಿ ಮೊದಲಾದ ಬಾಹ್ಯ ಕಾರಣಗಳ ಬಲದಿಂದಾದರೂ ತನ್ನಷ್ಟಕ್ಕೇ ಒಣಗಿ ಸಾಯುತ್ತಾನೆ ಎನ್ನುತ್ತಾರೆ—

ಶು. ॥ ಅಸ್ಯ ಯದ್ಯೇಕಾಂ ಶಾಖಾಂ ಜೀವೋ ಜಹಾತ್ಯಥ ಸಾ ಶುಷ್ಯತಿ ದ್ವಿತೀಯಾಂ ಜಹಾತ್ಯಥ ಸಾ ಶುಷ್ಯತಿ ತೃತೀಯಾಂ ಜಹಾತ್ಯಥ ಸಾ ಶುಷ್ಯತಿ ಸರ್ವಂ ಜಹಾತಿ ಸರ್ವಃ ಶುಷ್ಯತ್ಯೇವಮೇವ ಖಲು ಸೋಮ್ಯ ವಿದ್ಧೀತಿ ಹೋವಾಚ ॥ ೨ ॥

ಅ ॥ ಯಾವಾಗ ವೃಕ್ಷವನ್ನು (ವೈರಾಗ್ಯಸ್ಪರ್ಶದಿಂದ) ಎಂದು ಗೆಲ್ಲನ್ನು ಅವಯವವನ್ನು ಶ್ರೀಹರಿಯು ಬಿಡುತ್ತಾನೆಯೋ, ಆಗ ಆ ಗೆಲ್ಲು ಒಣಗುತ್ತದೆ ಹೀಗೆಯೇ ಎರಡನೇ ಕೊಂಬೆಯನ್ನು ಬಿಟ್ಟಾಗ ಅದೂ ಒಣಗುತ್ತದೆ ಮೂರನೇ ಕೊಂಬೆಯನ್ನು ಬಿಟ್ಟಾಗ ಅದೂ ಒಣಗುತ್ತದೆ ಹೀಗೆ ಎಲ್ಲಾ ಭಾಗವನ್ನೂ ಬಿಟ್ಟಾಗ ಸಂಪೂರ್ಣ ಮರವೇ ಒಣಗುತ್ತದೆ ಹೇಗೋ ಹೀಗೆಯೇ ಮರೆಯೂ ನಮಗೇ ಮನುಷ್ಯರಿಂದ ನೈಮಿತ್ತಿಕ ಜೀವನ. ಈಶ್ವರನ ಅನುಸಂಧಾನವೆಂಬ ಶಾಖಾಭಂಗ ತೀವ್ರ ಎಂದು ತಾತ್ಪರ್ಯ. ಕೇಳಿದನ

ವಿ ॥ ರವನ್ನು ಬಿಟ್ಟುಬಿಡುವುದು ಮರಣ ಎಂದಾಗುವುದು ಇತ್ಯಾದಿಗಳಿಂದ ವೃಕ್ಷದಲ್ಲಿ ಜೀವವಿದೆ ಎಂದು ಸಿದ್ಧವಾಗುವ ಕಾರಣ ಸ್ಪಷ್ಟವಾಗಿ ಜೀವವೃಕ್ಷಗಳಿಗಾದರಿಂದ ಅತೀಂದ್ರಿಯವಿಗೆಂದು ಹೇಳುವ ಬೌದ್ಧಾದಿಗಳ ಮತಗಳು ಅಯುಕ್ತವೆಂದು ಸಿದ್ಧವಾಯಿತು. ॥ ೨

ಜೀ— ಸನನೇವ ಖಲು ಸೋಮ್ಯ ಎಂದು ಹೇಳಿದುದನ್ನು ವಿವರಿಸಿ ಹೇಳುತ್ತಾರೆ—

ಶು. ॥ ಜೀವಾಪೇತಂ ವಾವ ಕಿಲೇದಂ ಮ್ರಿಯತೇ ನ ಜೀವೋ ಮ್ರಿಯತ ಇತಿ ಸ ಯ ಏಷೋಽಣೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ವಿಜ್ಞಾಪಯತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತ್ಯೇಕಾದಶಃ ಖಂಡಃ ॥ ೬—೧೧ ॥ ॥ ೩ ॥

ಅ ॥ ಶ್ರೀಹರಿಯಿಂದ ಬಿಡಲ್ಪಟ್ಟ ದೇಹವನ್ನ ಜೀವನೇ ಅವಯವಿ ಎಂಬುದು ಸಾಯುತ್ತದೆ (ಮೃತ್ಯೋರಾತ್ಮಕ್ತದೇಹಸ್ತು ಮೃತ ಇತ್ಯುಚ್ಯತೇ ಬುಧೈಃ ಎಂದು ಸ್ಮೃತಿಯು.) (ಜೀವನೆಯೇ ಶ್ರೀಹರಿಗೂ ಮರಣವಿದ್ದರೆ ಅವನಿಗೆ ವಿಶೇಷವೇನೆಂದರೆ) ಶ್ರೀಹರಿಯು ಯಾವಾಗಲೂ ಸಾಯುವುದೇ ಇಲ್ಲ (ಹೀಗೆ ಜೀವ ಪರಮಾತ್ಮರು ಅತ್ಯಂತ ವಿಲಕ್ಷಣರಾಗಿರುತ್ತಾರೆ—.....ಹೀಗೆ ಉದ್ದೇಶ ವನಿಸಿದ ಮೇಲೆ ಮಗನು ಹೀಗೆ ಜೀವನಿಗೆ ಸ್ಥಿತ್ಯಾದಿಗಳನ್ನು ಮಾಡತಕ್ಕ ಪರಮಾತ್ಮನು (ಈ ಶರೀರದಲ್ಲಿಯೇ ಜೀವನೊಳಗೆ ಇದ್ದರೆ ಜೀವನಿಗೆ ಏಕೆ ಕಾಣುವುದಿಲ್ಲ? ಆತ ಸೂಕ್ಷ್ಮವಾದುದರಿಂದ ಕಾಣುವುದಿಲ್ಲ ಎಂದರೆ— ಹಾಗೆ ಹೇಳಕೂಡದು. ಏಕೆಂದರೆ— ಸೂಕ್ಷ್ಮವಾದ ಘಗವದ್ರೂಪವನ್ನು ಕಾಣತಕ್ಕ ಜೀವನಿಗೆ ಸೂಕ್ಷ್ಮದರ್ಶನ ಶಕ್ತಿಯಿದೆ, ಎಂಬ ಅಭಿಪ್ರಾಯದಿಂದ) ಮರಳಿ ಮಗನು ಕೇಳಲ್ಪಟ್ಟೆ ತಂದೆಯು ಉತ್ತರ ಕೊಟ್ಟನು

ವಿ ॥ (1) ಈ ಪ್ರಕರಣದಲ್ಲಿ ಜೀವರಿಂದ ಪರಮಾತ್ಮನನ್ನೇ ಇಷ್ಟುಕೊಳ್ಳಲಾಗಿದೆ ಜೀವ ಇತಿ ಭಗವತೋಽನಿರುದ್ಧಸ್ಯಾಖ್ಯಾ ಎಂದು ವೇದವ ವಿಷ್ಣುರೇವ ಇತಿ ಶ್ರೋತ್ರಃ ಸತಶಂ ಪ್ರಾಣ

ಧಾರಣಾತ್ ಎಂದು ಸ್ಮೃತಿಯೂ ಇದೆ. ಸಂಸಾರಿಯು ಮುಖ್ಯವಾಗಿ ಪ್ರಾಣವನ್ನು ಧರಿಸಿಕೊಂಡು ಇದ್ದಾನೆಂಬುವುದು ಕೂಡುವುದಿಲ್ಲವಷ್ಟೆ. (2) ವೃಕ್ಷಜೀವನಿಗೆ ದೇಹಸಮೇತ ಸ-ಪ್ರಿಯಾಗಿಯೇ ಇರಬೇಕೆಂಬುದು ಇಚ್ಛೆಯಿದ್ದರೂ ಈಶ್ವರನ ಅನುಗ್ರಹವಿದ್ದರೆ ಮಾತ್ರ ಕಡಿಯಲಿಕ್ಕೆ ಬೇಕಾದ ಕಾರಣಗಳು ಇದ್ದರೂ ಅವುಗಳಿಂದ ಕೆಡಕುಬಾರದೆ ಸರಿಯಾಗಿ ಇರುತ್ತಾನೆ. ಈಶ್ವರನ ಅನುಗ್ರಹವಿಲ್ಲವಾದರೆ ಕೊಡಲಿ ಮೊದಲಾದ ಬಾಹ್ಯಕಾರಣಗಳು ಇಲ್ಲದಿದ್ದರೂ ತನ್ನಷ್ಟಕ್ಕೇನೇ ಬೀಳುವಿಕೆ ಒಣಗುವಿಕೆ ಮೊದಲಾದ ಅನಿಷ್ಟಗಳನ್ನು ಹೊಂದುತ್ತಾನೆ. ಹೀಗೆಯೇ ಮನುಷ್ಯರ ಶರೀರದಲ್ಲಿಯೂ ಇಟ್ಟುಕೊಳ್ಳಬೇಕು. ಜೀವನು ಈಶ್ವರನ ಅಧೀನದಲ್ಲಿರುವವನೆಂದು ತಿಳಿಯಲೇಬೇಕು. ॥ ೯—೧೧ ॥ ॥ ೩ ॥

ಪೀ—ವೃಕ್ಷದೃಷ್ಟಾಂತವನ್ನು ಹೇಳಿದುದರಿಂದ ಶ್ವೇತಕೇತುವಿನ ಪ್ರಶ್ನೆಗೆ ಉತ್ತರವು ಯಾವುದಾಯಿತೆಂದರೆ—ಅದರ ಅಭಿಪ್ರಾಯ ಹೇಳುತ್ತಾರೆ—

ಭಾ. ॥ ಅಭಿಮಾನಿನೋಽಸ್ವತಂತ್ರತ್ವಾದ್ಭೇದೇನ ಜ್ಞಾಯತೇ ತರೌ । ಹರಿಃ ಕಿಮು ಮನುಷ್ಯೇಷು ಶೋಷೋ ಹ್ಯಸ್ಯಾಸ್ವತಂತ್ರತಃ ॥ ೧, ೨, ೩ ॥ ಇತ್ಯೇಕಾದಶಃ ಖಂಡಃ ॥ ॥ ೯—೧೧ ॥ ॥ ೧ ॥

ಅ ॥ ವೃಕ್ಷಜೀವನು ಸ್ವತಂತ್ರನಾಗದಿರುವುದರಿಂದ ಅಲ್ಲಿದ್ದ ಶ್ರೀಹರಿಯು ವೃಕ್ಷಜೀವನಿಂದ ಬೇರೆಯೆಂದೂ ವೃಕ್ಷಜೀವನಿಗೆ ನಿಯಾಮಕನೆಂದೂ ತಿಳಿಯಲ್ಪಡುತ್ತಾನೆ. ಹೀಗೆ ಇರಲು ಮನುಷ್ಯರಲ್ಲಿರತಕ್ಕ ಶ್ರೀಹರಿಯು ಭಿನ್ನನೆಂದೂ ನಿಯಾಮಕನೆಂದೂ ಸುತರಾಂ ಸಿದ್ಧವಾಗುತ್ತದೆ. **(ವೃಕ್ಷಜೀವಃ ಕೇನ ಚಿನ್ನಿಯಮ್ಯಃ ಅಸ್ವತಂತ್ರತ್ವಾತ್ ರಥಾದಿವತ್**=ವೃಕ್ಷಜೀವನೂ ರಥಾದಿಗಳಂತೆಯೇ ಸ್ವತಂತ್ರನಾಗದಿರುವುದರಿಂದ ಇನ್ನೊಬ್ಬ ನಿಯಾಮಕನು ಇದ್ದೇ ಇದ್ದಾನೆ. ಎಂದುಕ್ತವಾಯಿತು.) (ಮನುಷ್ಯರು ಭೃಷ್ಟ ಸಂಕಲ್ಪರಾದುದರಿಂದ ಅಸ್ವತಂತ್ರರೆಂಬುದು ಪ್ರತ್ಯಕ್ಷಸಿದ್ಧ ವೃಕ್ಷಜೀವನಿಗೆ ಸ್ವಾತಂತ್ರ್ಯವಿಲ್ಲವೆಂದು ಯುಕ್ತಿಯಿಂದ ತಿಳಿಯಬೇಕೆನ್ನುತ್ತಾರೆ—) ವೃಕ್ಷಜೀವನಿಗೆ (ತೊಡಕು ಇಲ್ಲದೆ ದೇಹ ಬಿಡದೆ ನಾನು ಇರಬೇಕು, ಎಂದು ಇಚ್ಛೆಯಿದ್ದರೂ) ಸ್ವಾತಂತ್ರ್ಯವಿಲ್ಲದಿರುವುದರಿಂದಲೇ ಒಣಗುವಿಕೆ ತುಂಡಾಗುವಿಕೆ ಮೊದಲಾದ ಅನಿಷ್ಟ ಉಂಟಾಗುತ್ತದೆ. (ಸ್ವಾತಂತ್ರ್ಯವಿರುತ್ತಿದ್ದರೆ ಒಣಗುವಿಕೆ ಮೊದಲಾದ ಅನಿಷ್ಟಗಳು ಬರುತ್ತಿರಲಿಲ್ಲ.) ॥ ೯—೧೧ ॥ ॥ ೧ ॥

ಹನ್ನೊಂದನೇ ಖಂಡವು ಮುಗಿಯಿತು.

೧೨ನೇ ಖಂಡವು

ಪೀ—ಜೀವನಿಗೆ ಸ್ಥಿತ್ಯಾದಿಗಳನ್ನು ಕೊಡತಕ್ಕ ಶ್ರೀಹರಿಯೇ ಶರೀರದಲ್ಲಿದ್ದರೂ ಜೀವನಿಗೆ ಏಕೆ ಕಾಣುವುದಿಲ್ಲ. ಶ್ರೀಹರಿಯು ಸೂಕ್ಷ್ಮನಾದುದರಿಂದ ಕಾಣುವುದಿಲ್ಲ ಎಂದು ಹೇಳಕೂಡದು. ಕೂಡಲಿನ ತುದಿಯ ನೂರ (೧೦೦)ನೇ (೧) ಒಂದಂಶದಷ್ಟು ಸೂಕ್ಷ್ಮನಾದ ಜೀವನು ಅತಿಸೂಕ್ಷ್ಮವನ್ನು ನೋಡಲು ಶಕ್ತನಾಗಿದ್ದಾನೆ. ಎಂಬ ಅಭಿಪ್ರಾಯದಿಂದ ಮರಳೆ ಹೇಳು ಎಂದು ಪ್ರಶ್ನಿಸಿಕೊಂಡ ತಂದೆಯು ಹೇಳಿದನು.

ಉ. ॥ ನ್ಯಗ್ರೋಧಫಲಮತ ಆಹರೇತೀದಂ ಭಗವ ಇತಿ ಭಿಂಧೀತಿ ಭಿನ್ನಂ ಭಗವ ಇತಿ ಕಿಮತ್ರ ಪಶ್ಯಸೀತ್ಯಣ್ವ್ಯ ಇವೇಮಾ ಧಾನಾ ಭಗವ

ಇತ್ಯಾಸಾಮಂಗ್ಯೈಕಾಂ ಭಿಂಧೀತಿ ಭಿನ್ನಾ ಭಗವ ಇತಿ ಕಿಮತ್ರ ಪಶ್ಯಸೀತಿ ನ ಕಿಂಚನ ಭಗವ ಇತಿ ॥ ॥ ೧ ॥

ಅ ॥ ಎಲೋ ಮಗನೇ ಗೋಳೀಮರದಿಂದ ಹಣ್ಣನ್ನು ತಾ ಎಂದು ತಂದೆಯು ಹೇಳಿದನು. ಆಗ ಮಗನು ಪೂಜ್ಯರೇ ಗೋಳೀಹಣ್ಣನ್ನು ತಂದೆನೆಂದನು. ತಂದೆಯು ಅದನ್ನು ಒಡೆಯುವವನಾಗು ಎಂದನು. ಮಗನು ಹಣ್ಣನ್ನು ಒಡೆದು ಒಡೆದೆನು ಎಂದನು. ಒಡೆದ ಹಣ್ಣಿನಲ್ಲಿ ಏನನ್ನು ನೋಡುತ್ತಿ ಎಂದು ತಂದೆಯು ಕೇಳಿದನು. ಆಗ ಮಗನು ಸೂಕ್ಷ್ಮಗಳಂತೆಯೇ ಇರತಕ್ಕ ಈ ಬೀಜಗಳನ್ನು ನೋಡುತ್ತೇನೆ ಎಂದನು. ಎಲೋ ಮಗನೇ ಈ ಬೀಜಗಳ ಮಧ್ಯದಲ್ಲಿ ಒಂದು ಬೀಜವನ್ನು ಒಡೆದು ಹಾಕು ಎಂದು ತಂದೆಯು ಹೇಳಿದನು ಆಗ ಮಗನು ಆ ಬೀಜವನ್ನು ಒಡೆದು ತಂದೆಯೇ ಒಡೆದನು ಎಂದನು. ಒಡೆದ ಬೀಜದಲ್ಲಿ ಏನನ್ನು ನೋಡುತ್ತಿ, ಎಂದು ತಂದೆಯು ಕೇಳಿದನು. ಆಗಪೂಜ್ಯರೇ ಅದರಲ್ಲಿ ಏನನ್ನೂ ನೋಡುವುದಿಲ್ಲ, ಎಂದು ಮಗನು ಹೇಳಿದನು. ॥ ೧ ॥

ಉ. ॥ ತಂ ಹೋವಾಚ ಯಂ ವೈ ಸೋಮ್ಯೈತಮಣಿಮಾನಂ ನ ನಿಭಾಲಯಸ ಏತಸ್ಯ ವೈ ಸೋಮ್ಯೈಷೋಽಣಿಮ್ನ ಏವಂ ಮಹಾನ್ನ್ಯಗ್ರೋಧ-ಸ್ತಿಷ್ಠತಿ ಶ್ರದ್ಧತ್ಸ್ವ ಸೋಮ್ಯೇತಿ ॥ ॥ ೨ ॥

ಅ ॥ ಆಗ ಮಗನಿಗೆ ತಂದೆಯು ಹೇಳಿದನು ಈ ಅತಿಸೂಕ್ಷ್ಮನಾದ ಬೀಜಜೀವನನ್ನು ನೋಡುವುದಿಲ್ಲ. ಅತಿಸೂಕ್ಷ್ಮನಾದ ಶ್ರೀಹರಿಯ ಸಾಮರ್ಥ್ಯದಿಂದಲೇ ಈ ಗೋಳೀಮರವು ಅತಿ ದೊಡ್ಡದಾಗಿ ಬೆಳೆದಿದೆ ಎಂದು ನಂಬು, ಎಂದು ತಂದೆಯು ಹೇಳಿದನು.

ವಿ ॥ ಇಲ್ಲಿ ವೃಕ್ಷವು ಪ್ರಪಂಚಸ್ಥಾನ. ಗೋಳೀಫಲವು ಶರೀರಸ್ಥಾನವು. ಬೀಜವು ಜೀವಸ್ಥಾನ. ಸೂಕ್ಷ್ಮವಾದ ಗೋಳೀಮರದ ಬೀಜವು ತೋರಿದರೂ ಅದರಲ್ಲಿರುವ ಭಗವತ್ಸನ್ನಿಧಾನದಿಂದಲೇ ಗೋಳೀಮರವು ಇರುವುದು. ಬೀಜದೊಳಗಣ ಬೀಜಜೀವನು ಬೀಜದೊಳಗಣ ಪರಮಾತ್ಮನು ಪರಮಸೂಕ್ಷ್ಮನಾದುದರಿಂದ ಕಾಣುವುದಿಲ್ಲ. ಹಾಗೆಯೇ ಜೀವನಿಂದಲೂ ಅತಿಸೂಕ್ಷ್ಮನಾದುದರಿಂದ ಅದರೊಳಗಣ ಶ್ರೀಹರಿಯು ಜೀವನಿಗೆ ಕಾಣುವುದಿಲ್ಲ. ಅದುಕಾರಣ ನಿಯಾಮಕನು ಇನ್ನೊಬ್ಬನಿದ್ದಾನೆಂದೂ ಸ್ಥಿರವಾಯಿತು. ॥ ೨ ॥

ಉ. ॥ ಸ ಯ ಏಷೋಽಣಿಮೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ವಿಜ್ಞಾಪ-ಯತ್ವಿತಿ ತಥಾ ಸೋಮ್ಯೇತಿ ಹೋವಾಚ॥ಇತಿ ದ್ವಾದಶಃ ಖಂಡಃ ॥೪-೧೨॥೩॥

ಅ ॥ ಸ ಯಃ ಇತ್ಯಾದಿಗಳಿಗೆ ಹಿಂದಿನಂತೆ ಅರ್ಥ ಇಟ್ಟುಕೊಳ್ಳಬೇಕು.

ವಿ ॥ ಗೋಳೀಮರವೆಂಬ ಕಾರ್ಯವನ್ನು ನೋಡುವಾಗ ಈಶ್ವರನ ಸಾಮರ್ಥ್ಯವು ಪ್ರತ್ಯಕ್ಷದಂತೆ ಕಾಣುತ್ತದೆ. ಹೀಗೆ ಅವನ ಸಾಮರ್ಥ್ಯವು ಕಾಣುತ್ತಿದ್ದರೂ ಅವನು ಕಾಣುವುದಿಲ್ಲವೆಂಬುದನ್ನು ಹೇಗೆ ನಾನು ತಿಳಿಯುವುದು, ಎಂಬ ಅಭಿಪ್ರಾಯದಿಂದ ತಾವೇ ನನಗೆ ತಿಳಿಸಬೇಕೆಂದು ಪ್ರಾರ್ಥಿಸಿದಾಗ ತಂದೆಯವರು ಹಾಗೆಯೇ ಆಗಲಿ ಎಂದರು. ೪-೧೨ ॥ ॥ ೩ ॥

ಪೀ—ಅತ್ಯಂತ ಸ್ಥೂಲವಾದ ಪೃಥಿವ್ಯಾದಿ ಜಗತ್ತು ಅತ್ಯಂತ ಸೂಕ್ಷ್ಮನಾದ ಸತ್ ಎನಿಸಿದ ಬ್ರಹ್ಮನಿಂದ ಹುಟ್ಟುತ್ತದೆ, ಎಂಬುದು ಹೇಗೆ ಕೂಡುತ್ತದೆ? ಎಂಬುವುದನ್ನು ದೃಷ್ಟಾಂತ ಕೊಟ್ಟು ಮರಳಿ ನನಗೆ ತಿಳಿಸಬೇಕು, ಎಂದು ಮಗನು ಕೇಳಿದಾಗ ಸೂಕ್ಷ್ಮಗಳಾದ ಬೀಜಗಳ ಸಾಮರ್ಥ್ಯದಿಂದ ಅದರ ಪರಿಣಾಮವಾದ ದೊಡ್ಡ ಗೋಳೀಮರವಿದೆ. ಹೀಗೆಯೇ ಪರಮಸೂಕ್ಷ್ಮನಾದ ಬ್ರಹ್ಮನ ಸಾಮರ್ಥ್ಯದಿಂದ ಬ್ರಹ್ಮನ ಪರಿಣಾಮವೇ ಆದುದು ಪ್ರಪಂಚವು, ಎಂದು ತಂದೆಯು ಉತ್ತರ ಕೊಟ್ಟನು, ಎಂದು ಪರರು ಪ್ರಶ್ನೋತ್ತರಗಳಿಗೆ ಅಭಿಪ್ರಾಯವನ್ನು ಹೇಳಿರುವರು, ಇದು ಆಯುಕ್ತವೆಂಬ ಅಭಿಪ್ರಾಯದಿಂದ ಪ್ರಶ್ನೆಯ ಅಭಿಪ್ರಾಯವನ್ನು ಭಾಷ್ಯಕಾರರು ಹೇಳುತ್ತಾರೆ—

ಭಾ. ॥ (೧) ಜ್ಞಾಯತೇ ನ ಕಥಂ ಸ್ವಸ್ಮಿನ್ ಸೂಕ್ಷ್ಮೋ ಜ್ಞಾತೇ ಪರೋ ಹರಿಃ । ತತ್ರಸ್ಥ ಇತಿ ಪೃಷ್ಟಃ ಸಂಸ್ತಮಾಹೋದ್ದಾಲಕಃ ಸುತಂ ॥ (೨) ವಟಬೀಜೇ ಯಥಾ ಸೂಕ್ಷ್ಮೋ ಮಹಾನ್ನ್ಯಗ್ರೋಧಭಾವಯುಕ್ । ನ ದೃಶ್ಯತೇಽಭಿಮಾನೀ ಸ ಏವಂ ಜೀವಗತೋ ಹರಿಃ ॥ ೧, ೨, ೩ ॥ ಇತಿ ದ್ವಾದಶಃ ಖಂಡಃ ॥ ೪—೧೨ ॥ ॥ ೧ ॥

ಅ ॥ (೧) ಸೂಕ್ಷ್ಮಜೀವನಾದ ತಾನು ತಿಳಿಯಲ್ಪಡುತ್ತಿರಲು ಅಲ್ಲಿರತಕ್ಕ ಸರ್ವೋತ್ತಮನಾದ ಶ್ರೀಹರಿಯು ಏತಕ್ಕೆ ತಿಳಿಯಲ್ಪಡುವುದಿಲ್ಲ, ಹೀಗೆ ಉದ್ದಾಲಕರು ಪ್ರಶ್ನಿಸಿಕೊಂಡವರಾಗಿ ಮಗನಿಗೆ ಉತ್ತರ ಹೇಳಿದರು. (ಹೀಗೆ ಜೀವನಿಗೆ ಸ್ಥಿತಿ (ಇರುವಿಕೆ) ಮೊದಲಾದುದನ್ನು ಕೊಡತಕ್ಕ ಶ್ರೀಹರಿಯು ಈ ಶರೀರದಲ್ಲಿರತಕ್ಕ ಜೀವನಲ್ಲಿರುವುದಾದರೆ ಜೀವನಿಗೆ ಏಕೆ ಕಾಣುವುದಿಲ್ಲ, ಸೂಕ್ಷ್ಮನಾದುದರಿಂದ ಕಾಣುವುದಿಲ್ಲ ವೆಂದರೆ - ಸೂಕ್ಷ್ಮವಾದ ತನ್ನ ರೂಪವನ್ನು ಕಾಣುವ ಜೀವನಿಗೆ ಸೂಕ್ಷ್ಮವಾದ ಬ್ರಹ್ಮರೂಪವನ್ನು ನೋಡತಕ್ಕ ಶಕ್ತಿಯಿರಬಹುದಷ್ಟೆ) (೨)(ಈ ಪ್ರಶ್ನೆಗೆ ಉತ್ತರವಾಗಿ **ಯಂ ವೈ ಸೋಮ್ಯೈತ ಮಣಿಮಾನಂ ನ ನಿಭಾಲಯಸೇ** ಎಂಬ ವಾಕ್ಯದ ತಾತ್ಪರ್ಯ ಹೇಳುತ್ತಾರೆ—) ಸೂಕ್ಷ್ಮವಾದ ಗೋಳೀಮರದ ಬೀಜವು ಕಾಣಲ್ಪಡುತ್ತಿರಲು ದೊಡ್ಡದಾದ ಗೋಳೀಮರದಲ್ಲಿ ತನ್ನ ದೆಂದು ಅಭಿಮಾನವನ್ನು ಹೊಂದಿರತಕ್ಕ ಬೀಜಾಭಿಮಾನಿಯು (ಅವನೇ ವೃಕ್ಷಕ್ಕೂ ಅಭಿಮಾನಿಯು) (ಅತಿಸೂಕ್ಷ್ಮವಾದುದರಿಂದ) ಹೇಗೆ ಕಾಣಲ್ಪಡುವುದಿಲ್ಲವೋ, ಹೀಗೆಯೇ ಸೂಕ್ಷ್ಮನಾದ ಜೀವನು ತೋರಿದರೂ ಪರಮಸೂಕ್ಷ್ಮನಾದ ಕಾರಣ ಜೀವನೊಳಗಣ ಹರಿಯು ಕಾಣಲ್ಪಡುವುದಿಲ್ಲ. ॥ ೪—೧೨ ॥ ॥ ೧ ॥

ಹನ್ನೆರಡನೇ ಖಂಡವು ಮುಗಿಯಿತು.

೧೩ನೇ ಖಂಡವು

ಪೀ—ಗೋಳೀಮರ ಮೊದಲಾದ ಕಾರ್ಯದಿಂದ ಈಶ್ವರನ ಸಾಮರ್ಥ್ಯವು ಕಾಣುತ್ತಿದ್ದರೂ ಅವನು ಕಾಣುವುದಿಲ್ಲವೆಂಬುದನ್ನು ನಾನು ಹೇಗೆ ತಿಳಿದೇನು ಎಂಬ ಅಭಿಪ್ರಾಯದಿಂದ ಮರಳಿ ಪ್ರಾರ್ಥಿಸಿದುದಕ್ಕೆ ತಂದೆಯು ಹೇಳಿದನು—

ಉ. ॥ ಲವಣಮೇತದುದಕೇಽವಧಾಯಾಥ ಮಾ ಪ್ರಾತರುಪಸೀದಥಾ ಇತಿ ತದ್ಧ ತಥಾ ಚಕಾರ ತಂ ಹೋವಾಚ ಯದ್ದೋಷಾ ಲವಣಮುದಕೇಽ-

ವಧಾ ಅಂಗ ತದಾಹರೇತಿ ತದ್ಧಾವನ್ಮೃಶ್ಯ ನ ವಿವೇದ ಯಥಾ ವಿಲೀನ-ಮೇವ ॥ ೧ ॥

ಅ ॥ ಎಲೋ ಮಗನೇ ಉಪ್ಪಿನ ಹೆಂಟೆಯನ್ನು ಮಡಿಕೆ ಮೊದಲಾದವುಗಳಲ್ಲಿರತಕ್ಕ ನೀರಿನಲ್ಲಿ ರಾತ್ರಿಯಲ್ಲಿ ಹಾಕಿ ನನ್ನೆಡೆಗೆ ಬೆಳಿಗ್ಗೆ ಬಾ ಎಂದು ತಂದೆಯು ಹೇಳಿದ ಪ್ರಕಾರ ಮಗನು ಮಾಡಿದನು. ಬೆಳಿಗ್ಗೆ ತನ್ನ ಬಳಿಗೆ ಬಂದ ಮಗನಿಗೆ ತಂದೆಯು ಹೇಳಿದನು. ರಾತ್ರಿಯಲ್ಲಿ ಯಾವ ಉಪ್ಪಿನ ಹೆಂಟೆಯನ್ನು ನೀರಿನಲ್ಲಿ ಇಟ್ಟಿದ್ದಿಯೋ ಅದನ್ನು ತಾ ಎಂದನು. ಆ ಮಡಿಕೆಯನ್ನು ತಂದು ಅದರ ಮಧ್ಯದಲ್ಲಿ ಕೈಯನ್ನು ಹರಡಿಸಿ ಮಗನು ಉಪ್ಪಿನ ಹೆಂಟೆಯನ್ನು ತಿಳಿಯಲಿಲ್ಲ. ಪೂರ್ಣ ಕಳೆದು ಹೋದ ವಸ್ತುವನ್ನು ಹೇಗೆ ತಿಳಿಯುವುದಿಲ್ಲವೋ ಹಾಗೆಯೇ ತಿಳಿಯಲಿಲ್ಲ. ॥ ೧ ॥

ಉ. ॥ ಅಂಗಾಸ್ಯಾಂತಾದಾಚಾಮೇತಿ ಕಥಮಿತಿ ಲವಣಮಿತಿ ಮಧ್ಯಾ-ದಾಚಾಮೇತಿ ಕಥಮಿತಿ ಲವಣಮಿತ್ಯಂತ್ಯಾದಾಚಾಮೇತಿ ಕಥಮಿತಿ ಲವಣ-ಮಿತ್ಯಭಿಪ್ರಾಸ್ಯೈತದಥ ಮೋಪಸೀದಥಾ ಇತಿ ತದ್ಧ ತಥಾ ಚಕಾರ ತಚ್ಛಶ್ವ-ತ್ಸಂವರ್ತತೇ ತಂ ಹೋವಾಚಾತ್ರ ವಾವ ಕಿಲ ಸತ್ಸೋಮ್ಯ ನ ನಿಭಾಲಯ-ಸೇಽತ್ರೈನ ಕಿಲೇತಿ ॥ ೨ ॥

ಅ ॥ ಮಗನೇ ಪೂರ್ವದಿಕ್ಕಿನಲ್ಲಿರ್ದ ಏಕದೇಶದಲ್ಲಿರ್ದ ಈ ನೀರನ್ನು ತೆಗೆದು ಆಚಮನ ಮಾಡು. ಎಂದು ತಂದೆಯು ಹೇಳಿದನು ಆಚಮನಮಾಡಿದ ಮಗನೊಡನೆ ಹೇಗೆ ಇದೆ ಎಂದು ತಂದೆಯು ಕೇಳಿದನು. ಉಪ್ಪಾಗಿ ಇದೆ ಎಂದು ಮಗನು ಹೇಳಿದನು. ಹೀಗೆಯೇ ಮಧ್ಯಭಾಗದಲ್ಲಿರತಕ್ಕ ಮತ್ತು ಪಡುಭಾಗದಲ್ಲಿರತಕ್ಕ ನೀರನ್ನು ತೆಗೆದು ಆಚಮನಮಾಡು ಎಂದನು....ಅದೂ ಉಪ್ಪಾಗಿಯೇ ಇದೆ ಎಂದನು. ಈ ನೀರನ್ನು ಜೆಲ್ಲಿ ನನ್ನ ಬಳಿಗೆ ಬಾ ಎಂದು ತಂದೆಯು ಹೇಳಿದನು. ಮಗನು ಹಾಗೆಯೇ ಮಾಡಿದನು. (ಆ ಉಪ್ಪು ಎಲ್ಲಿಗೆ ಹೋಯಿತೆಂದರೆ ವೇದಪುರುಷನು ಹೇಳುತ್ತಾನೆ.) ಆ ಉಪ್ಪಿನ ಹೆಂಟೆಯು ಸಂಪೂರ್ಣ ನಾಗಿ ನೀರಿನಲ್ಲಿಯೇ ಕರಗಿಹೋಗುತ್ತದೆ (ಬೇರೆ ಕಡೆ ಹೋಗುವುದಿಲ್ಲ.) ಮಗನಿಗೆ ತಂದೆಯು ಹೇಳಿದನು. ಮಗನೇ ಉಪ್ಪಿನ ಗುಣವನ್ನು ಕಂಡರೂ ನೀರಿನಲ್ಲಿಯೇ ಸೇರಿರತಕ್ಕ ಸೂಕ್ಷ್ಮ ಉಪ್ಪಿನ ಭಾಗವನ್ನೂ ನೋಡುವುದಿಲ್ಲ. ಎಂದು ಹೇಳಿದನು.

ವಿ ॥ ಉಪ್ಪಿನ ಗುಣವಾದ ಲವಣರಸವು. ತೋರಿಬಂದರೂ ಹೇಗೆ ಉಪ್ಪು ಕಾಣುವುದಿಲ್ಲವೋ. ಹಾಗೆಯೇ ಶ್ರೀಹರಿಯ ಸಾಮರ್ಥ್ಯವು ಕಾಣುತ್ತಿದ್ದರೂ ಶ್ರೀಹರಿಯು ಕಾಣುವುದಿಲ್ಲ. ॥ ೨ ॥

ಪೀ—ಹೀಗೆ ಮಗನ ಸಂಶಯವನ್ನು ಪರಿಹರಿಸಿ ನಿಯಾಮಕನು ಮತ್ತೊಬ್ಬನಿದ್ದಾನೆಂದು ಹೇಳಿದ್ದು ಯುಕ್ತವೆನ್ನುತ್ತಾರೆ—

ಉ. ॥ ಸ ಯ ಏಷೋಽಣಿಮೈತದಾತ್ಮ್ಯಮಿದಗ್ಂ ಸರ್ವಂ ತತ್ಸತ್ಯಗ್ಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ವಿಜ್ಞಾ-ಪಯತ್ವಿತ ತಥಾ ಸೋಮ್ಯೇತಿ ಹೋವಾಚ ॥ ಇತಿ ತ್ರಯೋದಶಃ ಖಂಡಃ ॥ ॥ ೪-೧೩ ॥ ॥ ೩ ॥

ಅ ॥ .....ಹೀಗೆ ತಂದೆಯಿಂದ ಉಪದೇಶಿಸಿಕೊಂಡ ಮಗನು, ಇಂತಹ ಶ್ರೀಹರಿಯು ಅಜ್ಞಾನಿಯಾದ ನನಗೆ ಯಾವ ಉಪಾಯದಿಂದ ತೋರುವನು? ಆತನನ್ನು ಹೊಂದುವುದು ಹೇಗೆ? ಎಂದು ತಿಳಿಯಲಿಚ್ಛೆಯಿಂದ ಮರಳಿ ಅದಕ್ಕೆ ಉಪಾಯ ಹೇಳಬೇಕೆಂದು ಪ್ರಾರ್ಥಿಸಿದುದಕ್ಕೆ ಉತ್ತರಕೊಡುವೆನೆಂದು ತಂದೆಯು ಹೇಳಿದನು. ॥ ೮—೧೩ ॥ ॥ ೩ ॥

ಪೀ—ಸದ್ರೂಪನಾದ ಬ್ರಹ್ಮನೇ ಜಗತ್ತಿಗೆ ಮೂಲನೆಂದಾದರೆ—ಆತನು ಕಾಣದಿರಲು ಕಾರಣವೇನು? ಎಂಬುವುದನ್ನು ದೃಷ್ಟಾಂತಕೊಟ್ಟು ವಿವರಿಸಿರಿ ಎಂದು ಪ್ರಶ್ನೆಯ ಅಭಿಪ್ರಾಯವೆಂದು ಪರರು ಹೇಳಿದ್ದು ಆಯುಕ್ತವು. ಏಕೆಂದರೆ—ಪರರ ಮತದಲ್ಲಿ ಸನ್ ಘಟಃ ಇತ್ಯಾದಿಗಳಲ್ಲಿಯೂ ಅಧಿಷ್ಠಾನವಾದ ಸದ್ರೂಪವಾದ ಅರ್ಥವು ತೋರುವುದರಿಂದ ಅವರು ಹೀಗೆ ಪ್ರಶ್ನೆ ಮಾಡುವುದೇ ಅಯುಕ್ತವು. ಮತ್ತು ಸದ್ರೂಪವಾದ ವಸ್ತುವು ಪರಮಸೂಕ್ಷ್ಮವಾದುದರಿಂದ ಕಾಣುವುದಿಲ್ಲವೆಂದು ಪೂರ್ವಖಂಡದಲ್ಲಿಯೇ ಹೇಳಿದೆ, ಎಂಬ ಅಭಿಪ್ರಾಯದಿಂದ ಆಚಾರ್ಯರು ಮರಳಿ ಪ್ರಶ್ನೆ ಮಾಡಿದುದರ ಅಭಿಪ್ರಾಯ ಹೇಳುತ್ತಾರೆ—

ಭಾ. ॥ (೧) ಕಥಂ ದೃಶ್ಯೇತ ತಚ್ಛಕ್ತಿಃ ಪೃಥಕ್ತಸ್ಯ ಹ್ಯದರ್ಶನೇ । ಇತಿ ಭಾವಯುತಂ ಪ್ರಾಹ ಪುತ್ರಮುದ್ದಾಲಕಃ ಪುನಃ ॥ (೨) ಯಥಾಽಪ್ಸು ಲವಣಂ ವ್ಯಾಪ್ತಂ ರಸದೃಷ್ಟ್ಯಾ ನ ದೃಶ್ಯತೇ । ಏವಂ ಚೇತನಗೋ ವಿಷ್ಣುಸ್ತದ್ದಿನ್ನೋಽಪಿ ನ ದೃಶ್ಯತೇ ೧,೨,೩, ॥ ಇತಿ ತ್ರಯೋದಶಃ ಖಂಡಃ ॥ ೮—೧೩ ॥ ॥ ೧ ॥

ಅ ॥ (೧) (ಶ್ರೀಹರಿಯು ಜೀವರಿಂದ ಬೇರೆಯಾಗಿ ಹಿಂದೆ ಹೇಳಿದ ಪ್ರಕಾರ ಕಾಣದಿದ್ದರೆ—) ಆತನ ಶಕ್ತಿಯು ಹೇಗೆ ತೋರುವುದು? (ಅಂದರೆ—ಗೋಳೀಮರವೊದಲಾದ ನಾನಾ ವಿಧಗಳಾದ ಕಾರ್ಯಗಳಿಂದ ಈಶ್ವರನಿಗೆ ಅಘಟಿತಘಟಕ ಸಾಮರ್ಥ್ಯವಿದೆ ಎಂದು ಪ್ರತ್ಯಕ್ಷದಂತಿದೆ? ಹೀಗೆ ಆತನ ಸಾಮರ್ಥ್ಯವು ಪ್ರತ್ಯಕ್ಷವಾಗಿದ್ದರೂ ಅವನು ಕಾಣುವುದಿಲ್ಲ ಎಂಬುದು ಹೇಗೆ ಕೂಡುತ್ತದೆ?) ಎಂಬ ಅಭಿಪ್ರಾಯವಿರುವ ಮಗನಿಗೆ ಮರಳಿ ಉದ್ದಾಲಕರು ಹೇಳಿದರು. (೨) (ಮಗನ ಪ್ರಶ್ನೆಗೆ ಉತ್ತರವಾಗಿ ಲವಣರಸದೃಷ್ಟಾಂತವನ್ನು ಹೇಳಿದ ಕಾರಣ ಅದರ ಅಭಿಪ್ರಾಯ ಹೇಳುತ್ತಾರೆ—) ಹೇಗೆ ಲವಣರಸವು ಪ್ರತ್ಯಕ್ಷವಾಗುವುದಾದರೂ ನೀರಿನಲ್ಲಿ ಸೇರಿರುವ ಲವಣವು ನೀರಿನಿಂದ ಬೇರೆಯಾಗಿ ಕಾಣುವುದಿಲ್ಲವೋ ಹೀಗೆಯೇ ಈಶ್ವರನ ಅಚಿಂತ್ಯಸಾಮರ್ಥ್ಯವು ತೋರಿದರೂ ಜೀವರೊಳಗೆ ಜೀವರಿಂದ ಭಿನ್ನನಾದ ವಿಷ್ಣುವು ಕಾಣುವುದಿಲ್ಲ. ॥ ೮—೧೩ ॥ ॥ ೮ ॥

ಹದಿಮೂರನೇ ಖಂಡವು ಮುಗಿಯಿತು.

೧೪ನೇ ಖಂಡವು

ಪೀ—ಗುರುಗಳ ಉಪದೇಶವು ಪರಬ್ರಹ್ಮನನ್ನು ಪ್ರತ್ಯಕ್ಷೀಕರಿಸಿಕೊಳ್ಳಲಿಕ್ಕೂ ಹೊಂದಲಿಕ್ಕೂ ಕಾರಣವು ಎಂಬುವುದನ್ನು ದೃಷ್ಟಾಂತ ಕೊಟ್ಟು ತಂದೆಯು ಹೇಳುತ್ತಾರೆ—

ಉ. ॥ ಯಥಾ ಸೋಮ್ಯ ಪುರುಷಂ ಗಂಧಾರೇಭ್ಯೋಽಭಿನದ್ಧಾಕ್ಷಮಾನೀಯ ತಂ ತತೋಽತಿಜನೇ ವಿಸೃಜೇತ್ಸ ಯಥಾ ತತ್ರ ಪ್ರಾಙ್ಪ್ರತ್ಯಙ್ವಾದಙ್ಪ್ರತ್ವಾ-

ಧರಾಜ್ಞಾ ಪ್ರಾಧ್ಯಾಯಿತಾಭಿನದ್ಧಾಕ್ಷ ಆನೀತೋಽಭಿನದ್ಧಾಕ್ಷೋ ವಿಸೃಷ್ಟಃ॥
॥ ೧ ॥

ಆ ॥ ಎಲೋ ಮಗನೇ ಹೇಗೆ ಒಬ್ಬ ಧನಿಕನನ್ನು ಗಾಂಧಾರ ಎಂಬ ದೇಶದಿಂದ ಕಣ್ಣುಗಳನ್ನು ಕಟ್ಟಿ ತಂದು ಆ ಮೇಲೆ ನಿರ್ಜನವಾದ ಘೋರಾರಣ್ಯದಲ್ಲಿ ದ್ರವ್ಯಾಪಹಾರಿಯಾದ ಕಳ್ಳನು ಬಿಡುವಾಗ ಆ ಧನಿಕನು ಹೇಗೆ ಆ ಅರಣ್ಯದಲ್ಲಿ ಕಣ್ಣುಕಟ್ಟಿ ಕಾಡಿನಲ್ಲಿ ಬಿಡಲ್ಪಟ್ಟಿರುತ್ತೇನೆ, ಎಂದು ಪೂರ್ವಾಭಿಮುಖವಾಗಿ, ಉತ್ತರಾಭಿಮುಖವಾಗಿ, ಕೆಳಮುಖವಾಗಿ ಅಥವಾ ಎಲ್ಲಾ ದಿಕ್ಕುಗಳಿಗೆ ಅಭಿಮುಖವಾಗಿ, ಗಟ್ಟಿಯಾಗಿ ಕೂಗುವನೋ. ॥ ೧ ॥

ಉ. ॥ ತಸ್ಯ ಯಥಾಽಭಿನಹನಂ ಪ್ರಮುಚ್ಯೇ ಪ್ರಬ್ರೂಯಾದೇತಾಂ ದಿಶಂ ಗಂಧಾರಾ ಏತಾಂ ದಿಶಂ ವ್ರಜೇತಿ ಸ ಗ್ರಾಮಾದ್ಗ್ರಾಮಂ ಪೃಚ್ಛನ್ಪಂಡಿತೋ ಮೇಧಾವೀ ಗಂಧಾರಾನೇವೋಪಸಂಪದ್ಯೇತೈವಮೇವೇಹಾಚಾರ್ಯವಾನ್ಪುರುಷೋ ವೇದ ತಸ್ಯ ತಾವದೇವ ಚಿರಂ ಯಾವನ್ನ ವಿಮೋಕ್ಷ್ಯೇಽಥ ಸಂಪತ್ಸ್ಯತ ಇತಿ ॥ ೨ ॥

ಆ ॥ ಆಗ ಒಬ್ಬ ದಯಾಳುವು ಕೂಗತಕ್ಕ ಆ ಧನಿಕನ ಕೂಗನ್ನು ಕೇಳಿ ಕಣ್ಣುಕಟ್ಟಿದ್ದನ್ನು ಬಿಡಿಸಿ ಈ ದಿಕ್ಕಿನಲ್ಲಿ ಗಂಧಾರದೇಶವಿದೆ, ಈ ದಿಕ್ಕಿಗೆ ಹೋಗು, ಎಂದು ಹೇಳಿದಾಗ ಆ ಧನಿಕನು ಆಲ್ಲಿಂದ ಆಲ್ಲಲ್ಲಿ ಕೇಳಿಕೊಂಡು ಪ್ರಾಜ್ಞನಾದವನು ಸ್ಮೃತಿಯುಳ್ಳವನು ಗಂಧಾರದೇಶವನ್ನೇ ಹೊಂದುವನೋ, ಹೀಗೆಯೇ ಅನಾದಿಯಾದ ಅಜ್ಞಾನಾದಿಗಳಿಂದ ಮರೆಯಾದ ತನ್ನ ಜ್ಞಾನವುಳ್ಳ ಜೀವನು ಗುರುಗಳ ಉಪದೇಶದಿಂದ ಪರಬ್ರಹ್ಮನನ್ನು ತಿಳಿದು ಹೊಂದುತ್ತಾನೆ. (ಅಂದರೆ—ಸಂಸಾರದಲ್ಲಿ ಬಿದ್ದುಕೊಂಡಿರುವವನು ಶ್ರೀಹರಿಯ ಅನುಗ್ರಹದಿಂದ ಶ್ರೀಹರಿಯನ್ನು ತಿಳಿಯಬೇಕೆಂದು ಇಚ್ಛಿಸಿ ಗುರುಗಳ ಉಪದೇಶವನ್ನು ಹೊಂದಿ ಕ್ರಮವಾಗಿ ಶ್ರವಣಾದಿ ಸಾಧನಗಳನ್ನು ಹೊಂದಿ ತನ್ನ ಉತ್ಪತ್ತಿಗೆ ಕಾರಣನಾದ ಶ್ರೀಹರಿಯನ್ನು ಪ್ರತ್ಯಕ್ಷೀಕರಿಸಿಕೊಂಡು ಆತನನ್ನು ಹೊಂದುತ್ತಾನೆ.) (ಕಣ್ಣು ಕಟ್ಟಿ ಬಿಡಲ್ಪಟ್ಟವನು ಹೇಗೆ ಮತ್ತೊಬ್ಬನ ಉಪದೇಶದಿಂದ ತನ್ನ ಮನೆಯನ್ನು ನೋಡಿ ಹೋಗುತ್ತಾನೋ ಹಾಗೆಯೇ ಜೀವನು ಗುರುಗಳ ಉಪದೇಶದಿಂದ ತನ್ನಿಂದ ಭಿನ್ನನಾದ ಶ್ರೀಹರಿಯನ್ನು ಪ್ರತ್ಯಕ್ಷೀಕರಿಸಿಕೊಂಡು ಹೊಂದುತ್ತಾನೆಂಬುದು ಅಯುಕ್ತವು. ಭಗವಂತನನ್ನು, ಪ್ರತ್ಯಕ್ಷೀಕರಿಸಿಕೊಂಡ ಕೂಡಲೇ ಆತನ ಪ್ರಾಪ್ತಿಯು ಆಗುವುದಿಲ್ಲವಷ್ಟೆ, ಎಂದರೆ—) ಅಪರೋಕ್ಷಜ್ಞಾನಿಯನ್ನು ಪ್ರಾರಬ್ಧಕರ್ಮವು ಎಷ್ಟರಪರ್ಯಂತ ಬಿಡುವುದಿಲ್ಲವೋ ಅಷ್ಟರ ವರೆಗೆ ಆತನಿಗೆ ಬ್ರಹ್ಮಪ್ರಾಪ್ತಿಯಾಗಲಿಕ್ಕೆ ವಿಲಂಬವು, ಪ್ರಾರಬ್ಧಗಳಾದ ಪುಣ್ಯಪಾಪಗಳನ್ನು ಭೋಗಿಸಿ ನಾಶಗೊಳಿಸಿದ ಮೇಲೆ ಜ್ಞಾನಿಯು ನಿಯಮವಾಗಿ ಪರಬ್ರಹ್ಮನನ್ನು ಹೊಂದುತ್ತಾನೆ. ಹೀಗೆ ಉಪದೇಶಿಸಿದರು. ॥ ೨ ॥

ಪೀ—ಜ್ಞಾನಿಗೆ ಭಗವದ್ದರ್ಶನಾದಿಗಳು ಆಗಿ ಆತನನ್ನು ಹೊಂದಲಿಕ್ಕೆ ಕಾರಣ ಹೇಳಿ ಈಗ ಸರ್ವರಿಗೆ ನಿಯಾಮಕನಾದ ಶ್ರೀಹರಿಯಿಂದ ಜೀವನು ಭಿನ್ನನೆಂಬುವುದು ದೃಢವಾಯಿತೆನ್ನುತ್ತಾರೆ—

ಉ. ॥ ಸ ಯ ಏಷೋಽಣೈತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ಭೂಯ ಏವ ಮಾ ಭಗವಾನ್ವಿಜ್ಞಾಪ-

ಯತ್ಕಿತಿ ತಥಾ ಸೋಮ್ಯೇತಿ ಹೋವಾಚ ॥ ಇತಿ ಚತುರ್ದಶಃ ಖಂಡಃ ॥
॥ ೮—೧೪ ॥ ॥ ೩ ॥

ಅ ॥ .....ತಂದೆಯ ಉಪದೇಶ ಪ್ರಕಾರ ಶ್ವೇತಕೇತುವು ವೃಕ್ಷಶರೀರದಲ್ಲಿದ್ದ ಜೀವನು ಶ್ರೀ ಹರಿಯ ಅಧೀನದಲ್ಲಿಯೇ ಇರುತ್ತಾನೆಂದು ತಿಳಿದುಕೊಂಡನು. ಈಗ ಮನುಷ್ಯಶರೀರದಲ್ಲಿಯೂ ಇರುವ ಜೀವನು ಶ್ರೀಹರಿಯ ಅಧೀನನಾಗಿಯೂ ಅಸ್ವತಂತ್ರನಾಗಿಯೂ ಇದ್ದಾನೆ ಎಂಬುವುದನ್ನು ತಿಳಿಸು, ಎಂಬ ಅಭಿಪ್ರಾಯದಿಂದ ಮರಳಿ ನನಗೆ ಉಪದೇಶಿಸಬೇಕೆಂದು ಪ್ರಾರ್ಥಿಸಿಕೊಳ್ಳಲ್ಪಟ್ಟ ತಂದೆಯು ಉಪದೇಶಿಸಿದನು. ॥ ೮—೧೪ ॥ ॥ ೩ ॥

ಪೀ—ಜಗತ್ತಿಗೆ ಮೂಲಕಾರಣನಾದ ಸದ್ರೂಪಬ್ರಹ್ಮನ ಪ್ರಾಪ್ತಿಯಾಗಲಿಕ್ಕೆ ಉಪಾಯವು ಯಾವುದು ಎಂಬುವುದನ್ನು ತಿಳಿಸದೇಕೆಂದು ಪ್ರಶ್ನೆಯ ಅಭಿಪ್ರಾಯವೆಂದು ಪರರು ಹೇಳುವುದು ಅಯುಕ್ತವು ಸನ್ ಘಟಃ ಸನ್‌ಪಟಃ ಇತ್ಯಾದಿಗಳಲ್ಲಿ ಸತ್ ಎನಿಸಿದ ಬ್ರಹ್ಮನಲ್ಲಿ ಘಟಾದಿಗಳಿಗೆ ಆರೋಪವು. ಆರೋಪಕ್ಕೆ ಅಧಿಷ್ಠಾನನು ಸತ್ ಎನಿಸಿದ ಬ್ರಹ್ಮನು. ಆತನು ಎಲ್ಲಾ ಜ್ಞಾನಗಳಿಂದಲೂ ತಿಳಿಯಲ್ಪಡುತ್ತಾನೆಂದು ಅವರು ಒಡಂಬಟ್ಟಿರುವುದರಿಂದ ಅವರಿಗೆ ಅದಕ್ಕಾಗಿ ಗುರುಗಳ ಉಪದೇಶವೇ ಬೇಕಾಗಿಲ್ಲ, ಇತ್ಯಾದಿ ದೋಷಗಳಿರುವುದರಿಂದ ಅವರು ಹೇಳುವುದು ಅಯುಕ್ತವೆಂಬ ಅಭಿಪ್ರಾಯದಿಂದ ಆಚಾರ್ಯರು ಪ್ರಶ್ನೆಯ ಅಭಿಪ್ರಾಯ ಹೇಳುತ್ತಾರೆ.

ಭಾ. ॥ (೧) ಕಥಂ ಸ ಜ್ಞಾಯತೇ ವಿಷ್ಣುರ್ಭಿನ್ನ ಇತ್ಯತ್ರ ಚಾಬ್ರವೀತ್ ॥ (೨) ಯಥೈವಾನ್ಯೋಪದೇಶೇನ ಬದ್ಧಾಕ್ಷಃ ಸ್ವಗೃಹಂ ವ್ರಜೇತ್ । ತಥಾಽಚಾರ್ಯೋಪದೇಶೇನ ಭಿನ್ನಮೀಶಂ ವ್ರಜೇತ್ಪುಮಾನ್ ॥ ೧ ೨ ೩ ಇತಿ ಚತುರ್ದಶಃ ಖಂಡಃ ॥ ೮—೧೪ ॥ ೧ ॥

ಅ ॥ (೧) ಜೀವನಲ್ಲಿ ಅಂತರ್ಗತನಾದ ಜೀವನಿಂದ ಭಿನ್ನನಾದ ವಿಷ್ಣುವು ಅಜ್ಞಾನಿಗೆ ತೋರುವ ಉಪಾಯವು ಯಾವುದು? ಅಜ್ಞಾನಿಯು ಆತನನ್ನು ಹೇಗೆ ಹೊಂದುವನು? ಎಂಬ ಪ್ರಶ್ನೆಗೆ ತಂದೆಯು ಉತ್ತರಿಸಿದನು. (೨) (ಈ ಖಂಡದ ತಾತ್ಪರ್ಯ ಹೇಳುತ್ತಾರೆ.) ಮೊದಲು ಕಣ್ಣು ಕಟ್ಟಲ್ಪಟ್ಟವನು ಅನೇಲೆ ಕಣ್ಣುಕಟ್ಟಿದ್ದನ್ನು ಬಿಡಿಸಿಕೊಂಡವನಾಗಿ ಇನ್ನೊಬ್ಬ ದಯಾಳುವಿನ ಉಪದೇಶಪ್ರಕಾರ ತನ್ನ ಮನೆಗೆ ಹೇಗೆ ಹೋಗುವನೋ, ಹಾಗೆಯೇ ಆಚಾರ್ಯರ ಉಪದೇಶದಿಂದ ಜ್ಞಾನಿಯಾದವನು ತನ್ನಿಂದ ಭಿನ್ನನಾದ ಶ್ರೀಹರಿಯನ್ನು ಹೊಂದುತ್ತಾನೆ. ॥ ೮—೧೪ ॥ ॥ ೧ ॥

ಹದಿನಾಲ್ಕನೇ ಖಂಡವು ಮುಗಿಯಿತು.

೧೫ನೇ ಖಂಡವು

ಪೀ ಅವನು ಕೇಳಿದ್ದನ್ನು ಯುಕ್ತಿಗಳಿಂದ ತಿಳಿಸುತ್ತಾರೆ--

ಉ. ॥ ಪುರುಷಂ ಸೋಮ್ಯೋಪತಾಪಿನಂ ಜ್ಞಾತಯಃ ಪರ್ಯುಪಾಸತೇ ಜಾನಾಸಿ ಮಾಂ ಜಾನಾಸಿ ಮಾಮಿತಿ ತಸ್ಯ ಯಾವನ್ನ ವಾಙ್ಮನಸಿ ಸಂಪದ್ಯತೇ

ಮನಃ ಪ್ರಾಣೇ ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಂ ತಾವಜ್ಜಾನಾತಿ ॥ ॥ ೧ ॥

ಅ ॥ ಎಲೋ ಮಗನೆ, ಬಾಂಧವರು, ನನ್ನನ್ನು ತಿಳಿಯುತ್ತಿಯೋ, ನನ್ನನ್ನು ತಿಳಿಯುತ್ತಿಯೋ, ಎನ್ನುತ್ತಾ ಸಾಯಲು ಸನ್ನದ್ಧನಾದ ರೋಗಿಯ ಸುತ್ತಮುತ್ತಲೂ ಕುಳಿತಿರುತ್ತಾರೆ. (ಹೀಗೆ ಬಾಂಧವರು ಹೇಳೋಣ ಅತನು ಯಾವಾಗ ತಿಳಿಯುತ್ತಾನೆ, ಯಾವಾಗ ತಿಳಿಯುವುದಿಲ್ಲವೆಂದರೆ) ಸಾಯಲು ಸನ್ನದ್ಧನಾದ ಮನುಷ್ಯನ ವಾಗಿಂದ್ರಿಯಕ್ಕೆ ಅಭಿಮಾನಿನಿಯಾದ ಪಾರ್ವತಿಯು ಮನಸ್ಸಿಗೆ ಅಭಿಮಾನಿಯಾದ ರುದ್ರನಲ್ಲಿ ತನ್ನ ವ್ಯಾಪಾರಬಿಟ್ಟು ಎಷ್ಟರ ವರೆಗೆ ಸೇರುವುದಿಲ್ಲವೋ, ರುದ್ರನು ಪ್ರಾಣನಲ್ಲಿಯೂ, ಪ್ರಾಣನು ಲಕ್ಷ್ಮೀದೇವಿಯಲ್ಲಿಯೂ, ಲಕ್ಷ್ಮೀದೇವಿಯು ಶ್ರೀಹರಿಯಲ್ಲಿಯೂ ಸೇರುವುದಿಲ್ಲವೋ (ಅಂದರೆ ತಮ್ಮ ತಮ್ಮ ವ್ಯಾಪಾರಗಳನ್ನು ನಡಿಸುತ್ತಲೇ ಇರ ತ್ತಾರೋ.) ಅಷ್ಟರ ಪರ್ಯಂತ ಜೀವನು ತಿಳಿಯುತ್ತಾನೆ. ॥ ೧ ॥

ಉ. ॥ ಅಥ ಯದಾಸ್ಯ ವಾಙ್ಮನಸಿ ಸಂಪದ್ಯತೇ ಮನಃ ಪ್ರಾಣೇ ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಮಥ ಜಾನಾತಿ ॥ ೨ ॥

ಅ ॥ ಯಾವಾಗ ಆ ರೋಗಿಯ ವಾಗಿಂದ್ರಿಯಾಭಿಮಾನಿನಿಯಾದ ಪಾರ್ವತಿಯು ಮನಸ್ಸಿಗೆ ಅಭಿಮಾನಿಯಾದ ರುದ್ರನಲ್ಲಿಯೂ, ರುದ್ರನು ಪ್ರಾಣನಲ್ಲಿಯೂ, ಪ್ರಾಣನು ಲಕ್ಷ್ಮಿಯಲ್ಲಿಯೂ, ಲಕ್ಷ್ಮಿಯು ಶ್ರೀಹರಿಯಲ್ಲಿಯೂ ಸೇರಿ ತಮ್ಮತಮ್ಮ ವ್ಯಾಪಾರಗಳನ್ನು ಬಿಡುತ್ತಾರೋ ಆಗ ಏನನ್ನೂ ತಿಳಿಯುವುದಿಲ್ಲ.

ವಿ ॥ ಹೀಗೆ ಮನುಷ್ಯ ಶರೀರದಲ್ಲಿಯೇ ಜೀವರಿಗೆ ಮರಣಕಾಲದಲ್ಲಿ ಬಾಂಧವಾದಿಗಳ ಸ್ವರೂಪ ತಿಳಿಯಲಿಕ್ಕೆ ಸ್ವಾತಂತ್ರ್ಯವಿಲ್ಲವೆಂದು ಪ್ರತ್ಯಕ್ಷವಾಯಿತು. ॥ ೨ ॥

ಪೀ—ಹೀಗೆ ಜೀವರು ಮನುಷ್ಯರ ಶರೀರದಲ್ಲಿಯೂ ಈಶ್ವರನ ಅಧೀನರೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಿ, ನಿಯಮ್ಯರಾದ ಜೀವರಿಂದ ಶ್ರೀಹರಿಗೆ ಭೇದವಿದೆ ಎಂಬುವುದು ಸುದೃಢವಾಯಿತೆನ್ನುತ್ತಾರೆ—

ಉ. ॥ ಸ ಯ ಏಷೋಽಣಿಮೈತದಾತ್ಮ್ಯಮಿದꣳ ಸರ್ವಂ ತತ್ಸತ್ಯꣳ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ ಇತಿ ಮಾ ಭಗವಾನ್ವಿಜ್ಞಾಪಯತ್ವಿತಿ ತಥಾ ಸೋಮ್ಯೇತಿ ಹೋವಾಚ ॥ ಇತಿ ಪಂಚದಶಃ ಖಂಡಃ ॥ ಲ—೧೫ ॥ ॥ ೩ ॥

ಅ ॥ .....ಹಿಂದೆ ಹೇಳಿದ ಪ್ರಕಾರ ಸರ್ವರಿಗೂ ಪ್ರೇರಕನಾದ ಶ್ರೀಹರಿಯನ್ನು ಯಾವನು ತನ್ನಿಂದ ಭಿನ್ನನೆಂದೂ ಯಾವನು **ಸೋಽಹಮಸ್ಮಿ** ಬ್ರಹ್ಮನೇ ನಾನುಎಂದೂ ತಿಳಿಯುತ್ತಾನೋ, ಅವರಿಗೆ ಎಂತಹ ಫಲವು ಲಭಿಸುವುದು ಎಂದು ತಿಳಿಯಲಿಚ್ಛೆಯಿಂದ ಮರಳಿ ಹೇಳಬೇಕೆಂದು ಶ್ವೇತಕೇತುವು ಪ್ರಾರ್ಥಿಸಿದಾಗ ತಂದೆಯು ಉತ್ತರವನ್ನು ಇತ್ತನು. ॥ ಲ—೧೫ ॥ ॥ ೩ ॥

ಪೀ—ಜ್ಞಾನಿಯಾದವನು ಯಾವ ಕ್ರಮದಿಂದ ಬ್ರಹ್ಮನನ್ನು ಹೊಂದುತ್ತಾನೆಂದು ವಿಚಾರ ಬರುವಾಗ ಆ ಕ್ರಮವನ್ನು ತೋರಿಸುವುದಕ್ಕಾಗಿ **ಪುರುಷಂ ಸೋಮ್ಯೋಪತಾಪಿನಂ** ಇತ್ಯಾದಿ ಮಂತ್ರವು, ಎಂದು ಪರರು ಅರ್ಥಮಾಡಿದ್ದು ಅಯುಕ್ತವು. **ಪುರುಷಸ್ಯ ಪ್ರಯತೋ ವಾಙ್ಮನಸಿ ಸಂಪದ್ಯತೇ** ಎಂದು ಮೊದಲೇ ಹೇಳಿಯಾಗಿದೆ, ಆಲ್ಲದೆ ಮೊದಲಿನಂತೆಯೇ ಇಲ್ಲಿಯೂ ತಸ್ಯ **ವಾಙ್ಮನಸಿ ಸಂಪದ್ಯತೇ....ತೇಜಃ ಪರಸ್ಯಾಂ ದೇವತಾಯಾಂ** ಇಷ್ಟೇಸಾಕಾಗುವಾಗ ತಸ್ಯ ಯಾವತ್ ನ **ವಾಙ್ಮನಸಿ**

ಸಂಪದ್ಯತೇ ಇತ್ಯಾದಿ ವಾಕ್ಯಗಳಿಂದ ಜ್ಞಾನವಿಷಯದಲ್ಲಿ ಜೀವನಿಗೆ ಪರಾಧೀನತ್ವವನ್ನು ಹೇಳಿದ್ದು ವ್ಯರ್ಥವಾಗುವುದು. ಮತ್ತು **ಯದಾ ಪ್ರಾಣಾನ್ ದದಾತೀಶಸ್ತದಾ ಜೀವನಕೋಽಖಿಲಂ । ಜಾನಾತಿ ಗ್ರಸ್ತಕರಣಸ್ತೇನ ವೇತ್ತಿ ನ ಕಿಂಚನ ॥** ಎಂಬ ಸ್ಮೃತಿವಿರೋಧವೂ ಬರುತ್ತದೆ, ಎಂಬ ಅಭಿಪ್ರಾಯದಿಂದ ಪ್ರಶ್ನೆಯ ಅಭಿಪ್ರಾಯವನ್ನು ಆಚಾರ್ಯರು ಹೇಳುತ್ತಾರೆ–

ಭಾ. ॥ ಯಥಾ ಪುಂಸೋಽಸ್ವತಂತ್ರತ್ವಂ ತಜ್ಜ್ಞಾಪಯತು ಮಾ ಭವಾನ್ । ಇತ್ಯುಕ್ತ ಆಹ ಜ್ಞಾನೇ ಹಿ ದೃಷ್ಟ್ವೈವಾಸ್ಯಾಸ್ವತಂತ್ರತಾ ॥ ೧, ೨, ೩ ॥ ಇತಿ ಪಂಚದಶಃ ಖಂಡಃ ॥ ೮–೧೫ ॥ ॥ ೧೫ ॥

ಅ ॥ ಹೇಗೆ ವೃಕ್ಷಶರೀರದಲ್ಲಿರತಕ್ಕ ಜೀವನು ಶ್ರೀಹರಿಯ ಅಧೀನದಲ್ಲಿರುವವನೆಂದು ತಿಳಿಯಿತೋ, ಹಾಗೆಯೇ ಮನುಷ್ಯಶರೀರದಲ್ಲಿರತಕ್ಕ ಜೀವರಿಗೆ ಅಸ್ವಾತಂತ್ರ್ಯವನ್ನು (ಜೀವರು ಪರಾಧೀನರು ಎಂಬುವುದನ್ನು) ನನಗೆ ತಿಳಿಸಿರಿ, ಎಂದು ಪ್ರಾರ್ಥಿಸಿಕೊಂಡ ತಂದೆಯು, ವಾಗಾದಿ ಇಂದ್ರಿಯಗಳ ವ್ಯಾಪಾರವಿದ್ದರೇನೇ ಜ್ಞಾನವು ಉಂಟಾಗುತ್ತದೆ, ಅವುಗಳ ವ್ಯಾಪಾರವು ಇಲ್ಲವಾದರೆ ಜ್ಞಾನವು ಉಂಟಾಗಲಾರದು, ಅದು ಕಾರಣ ಜ್ಞಾನವಿಷಯದಲ್ಲಿ ಸ್ವಾತಂತ್ರ್ಯವಿಲ್ಲವೆಂಬುದ, ಕಂಡದೆ. ॥ ೮–೧೫ ॥ ॥ ೧ ॥

ಹದಿನೈದನೇ ಖಂಡವು ಮುಗಿಯಿತು.

೧೬ನೇ ಖಂಡವು

ಪೀ—ಭೇದಜ್ಞಾನಿಗೂ ಅಭೇದಜ್ಞಾನಿಗೂ ಆಗತಕ್ಕ ಫಲವನ್ನು ದೃಷ್ಟಾಂತಕೊಟ್ಟು ಹೇಳುತ್ತಾರೆ–

ಉ. ॥ ಪುರುಷಂ ಸೋಮ್ಯೋತ ಹಸ್ತೇಗೃಹೀತಮಾನಯಂತ್ಯಪಹಾರ್ಷೀತ್ಸ್ತ್ಯೇಯಮಕಾರ್ಷೀತ್ಪರಶುಮಸ್ಮೈ ತಪತೇತಿ ಸ ಯದಿ ತಸ್ಯ ಕರ್ತಾ ಭವತಿ ತತ ಏವಾನೃತಮಾತ್ಮಾನಂ ಕುರುತೇ ಸೋಽನೃತಾಭಿಸಂಧೋಽನೃತೇನಾತ್ಮಾನಮಂತರ್ಧಾಯ ಪರಶುಂ ತಪ್ತಂ ಪ್ರತಿಗೃಹ್ಣಾತಿ ಸ ದಹ್ಯತೇಽಥ ಹನ್ಯತೇ ॥ ೧ ॥

ಅ ॥ ಎಲೋ ಮಗನೇ ರಾಜನ ದ್ರವ್ಯವನ್ನು ಕದಿಯುತ್ತಿರಲು ಸಂದೇಹಕ್ಕೆ ಒಳಪಟ್ಟ ಮನುಷ್ಯನನ್ನು ರಾಜಭಟರು ಬೇಡಿಹಾಕಿ ಇವನು ಅಪರಾಧ (ನೋಡುತ್ತಿರುವಂತೆ ಕದಿಯುವುದು) ವನ್ನು ಮಾಡಿರುವನು. ಇವನು ತಿಳಿಯದ ಹಾಗೆ ಕದ್ದವನು ಎಂದು ಹೇಳುತ್ತಾ ತರುತ್ತಾರೆ. ಆ ಮೇಲೆ ಕಳ್ಳನು ತಾನು ಕದಿಯಲಿಲ್ಲ, ಎಂದು ಹೇಳಿದಾಗ ರಾಜನು ಆತನನ್ನು ಪರೀಕ್ಷಿಸುವುದಕ್ಕಾಗಿ ಕಾಯಿಸಿದ ಕೊಡಲಿಯನ್ನು ಇವನ ಕೈಯಲ್ಲಿ ಕೊಡಿರಿ, ಎಂದು ಭಟರಿಗೆ ಹೇಳುತ್ತಾನೆ. ಆಗ ಆ ಪುರುಷನು ತಾನು ಕದ್ದು ಕೊಂಡವನಾಗಿದ್ದು ಕದಿಯಲಿಲ್ಲವೆಂದು ಹೇಳಿದರೆ ಅದರಿಂದಲೇ ತನ್ನನ್ನು ಸುಳ್ಳಾಡುವವನನ್ನಾಗಿ ಮಾಡಿಕೊಳ್ಳುತ್ತಾನೆ. ಸುಳ್ಳುಮಾತಿನಲ್ಲಿಯೇ ವಿಶ್ವಾಸವಿರುವ ಆ ಕಳ್ಳನು ತಾನು ಹೇಳಿದ್ದು ಸುಳ್ಳು ಎಂದು ಪ್ರಕಟವಾಗದೆ ಕಾಯಿಸಿದ ಕೊಡಲಿಯನ್ನು ಕೈಯಲ್ಲಿ ಹಿಡಿದರೆ ಅದರಿಂದ ಅವನ ಕೈ ಸುಟ್ಟು ಹೋಗುತ್ತದೆ. ಆ ಮೇಲೆ ರಾಜನ ಭಟರು ಕಳ್ಳನಿಗೆ ಹೊಡೆಯುತ್ತಾರೆ. (ಅಪರಾಧವು ಹೆಚ್ಚಾದರೆ ತಮಿಸ್ರನಲ್ಲಿ ಬೀಳುವನು.) ॥ ೧ ॥

ಉ. ॥ ಅಥ ಸ ಯೆದಿ ತಸ್ಯಾಕರ್ತಾ ಭವತಿ ತತ ಏವ ಸತ್ಯಮೂತ್ಮಾನಂ ಕುರ. ತೇ ಸ ಸತ್ಯಾಭಿಸಂಧಃ ಸತ್ಯೇನಾತ್ಮಾನಮಂತರ್ಧಾಯ ಪರಶುಂ ತಪ್ತಂ ಪ್ರತಿಗೃಹ್ಣಾತಿ ಸ ನ ದಹ್ಯತೇಽಥ ಮುಚ್ಯತೇ ॥ ೨ ॥

ಅ ॥ ಅಥವಾ ಕಾಯಿಸಿದ ಕೊಡಲಿಯನ್ನು ಕೈಯಲ್ಲಿ ಹಿಡಿದುಕೊಂಡು ಕದಿಯದಿದ್ದವನು ಕದಿಯಲಿಲ್ಲವೆಂದು ಹೇಳಿದರೆ ಅದರಿಂದಲೇ ತನ್ನನ್ನು ಸತ್ಯನುಡಿಯುವವನನ್ನಾಗಿ ಮಾಡಿಕೊಳ್ಳುತ್ತಾನೆ. ತಾನು ಹೇಳಿದ್ದು ಸತ್ಯವೆಂದು ಪ್ರಕಟಿಸಿ ಕಾಯಿಸಿದ ಕೊಡಲಿಯನ್ನು ಕೈಯಲ್ಲಿ ಹಿಡಿದರೆ ಅದರಿಂದ ಕೈ ಸುಡುವುದಿಲ್ಲ. ಮತ್ತು ಸತ್ಯಹೇಳಿದರೆ ರಾಜಭಟರು ಆತನನ್ನು ಬಿಟ್ಟುಬಿಡುತ್ತಾರೆ. (ಇಷ್ಟು ಮಾತ್ರವಲ್ಲ, ಪರಂತು ಸುಳ್ಳು ಹೇಳುವವರನ್ನು ಶಿಕ್ಷಿಸಿ ಸತ್ಯ ನುಡಿಯುವವನನ್ನು ರಾಜನು ಯೋಗ್ಯನನ್ನಾಗಿ ಸ್ವೀಕರಿಸುತ್ತಾನೆ.) (ಹೇಗೋ ಹಾಗೆಯೇ ಜೀವಬ್ರಹ್ಮರಿಗೆ ಭೇದವದೆ. ಎಂದು ತಿಳಿಯುವವನು ಕೆಡಕು ಹೊಂದದೆ ಮೋಕ್ಷವನ್ನು ಹೊಂದುತ್ತಾನೆ.) ॥ ೨ ॥

ಉ. ॥ ಸ ಯಥಾ ತತ್ರ ನಾದಾಹ್ಯೇತೈತದಾತ್ಮ್ಯಮಿದꣳ ಸರ್ವಂ ತತ್ಸತ್ಯꣳ ಸ ಆತ್ಮಾತತ್ತ್ವಮಸಿ ಶ್ವೇತಕೇತೋ ಇತಿ ತದ್ಭೂಯ ವಿಜಜ್ಞಾವಿತಿ ವಿಜ್ಞಾವಿತಿ ॥ ೮—೧೬ ॥ ॥ ೩ ॥

ಅ ॥ ಕದಿಯದೆ ಇದ್ದವನು ದೃಢವಾಗಿ ತಪ್ತವಾದ ಕೊಡಲಿಯನ್ನು ಕೈಯಲ್ಲಿ ಹಿಡಿದರೂ ಸ್ವಲ್ಪವೂ ಹೇಗೆ ಕೈಸುಟ್ಟುಹೋಗುವುದಿಲ್ಲವೋ, ಹೀಗೆಯೇ ಜೀವನು ಸರ್ವಥಾ ನಾನು ವಿಷ್ಣುವಲ್ಲ, ಎಂದು ದೃಢವಾಗಿ ಶಪಥಪೂರ್ವಕವಾಗಿ ಹೇಳಿದರೆ ಆತನು ದುಃಖಿಯಾಗುವುದಿಲ್ಲ. ಆತನನ್ನು ವಿಷ್ಣುವು ಭಕ್ತನೆಂದು ಸ್ವೀಕರಿಸುತ್ತಾನೆ. ಆ ಜ್ಞಾನಿಯು ಮುಕ್ತನಾಗುತ್ತಾನೆ. ಅಭೇದಜ್ಞಾನಿಯು ಅಂಧಂತಮನಸ್ಸಿನಲ್ಲಿ ಬೀಳುತ್ತಾನೆ ....ಹೀಗೆ ತಂದೆಯು ಉಪದೇಶಿಸಿದ ಮೇಲೆ ಶ್ವೇತಕೇತುವು ಸಂಪೂರ್ಣ ಅಭೇದ ಜ್ಞಾನವನ್ನು ಕಳೆದುಕೊಂಡವನಾಗಿ ತಂದೆಯು ಉಪದೇಶಿಸಿದಂತೆ ಶ್ರೀಹರಿಯೇ ಸರ್ವೋತ್ತಮನು ಸರ್ವ ಸ್ವತಂತ್ರನು ಇತ್ಯಾದಿ ಪ್ರಕಾರ ಏನೂ ಸಂಶಯ ಇಲ್ಲದೆ ತಿಳಿದುಕೊಂಡನು. ॥ ೮—೧೬ ॥ ॥ ೩ ॥

ಹೀ ವಾಗಾದಿಗಳಿಗೆ ಲಯವಾಗುವ ಕ್ರಮದಿಂದ ಸಾಯುವವನಿಗೂ ಮೋಕ್ಷಹೊಂದುವವನಿಗೂ ಸದ್ರೂಪನಾವ ಪರಬ್ರಹ್ಮನ ಪ್ರಾಪ್ತಿಯು ಸಮಾನವೆಂದಾದರೆ ವಿದ್ವಾಂಸನು ಸದ್ರೂಪ ಬ್ರಹ್ಮನನ್ನು ಹೊಂದಿ ಏಂಪೆ ಬಾರದಿರುವುದಕ್ಕೂ ಅಜ್ಞಾನಿಯು ತಿರುಗಿ ಬರುವುದಕ್ಕೂ ಕಾರಣವೇನು? ಎಂಬ ಪ್ರಶ್ನೆಗೆ ಜೀವ ಬ್ರಹ್ಮೈಕ್ಯವನ್ನು ಅಜ್ಞಾನಿಯು ತಿಳಿಯಲಿಲ್ಲ, ಜ್ಞಾನಿಯು ತಿಳಿದಿರುತ್ತಾನೆ. ಇವು ಕಾರಣಗಳೆಂದು ತೋರಿಸಲಿಕ್ಕೆ **ಪುರುಷಂ ಸೋಮ್ಯ** ಇದುಮೊದಲಾದ ವಾಕ್ಯಗಳೆಂದು ಪರರು ಹೇಳುವುದು ಅಯುಕ್ತವೆಂಬ ಅಭಿಪ್ರಾಯದಿಂದ ಪ್ರಶ್ನಾಭಿಪ್ರಾಯವನ್ನು ಹೇಳುತ್ತಾರೆ—

ಭಾ. ॥ (೧) ಅಭೇದಜ್ಞಾನಿನಾಂ ದೋಷಃ ಕೀದೃಶಃ ಸ್ಯಾದಿತೀರಿತೇ । ಪ್ರಾಹ ಯಸ್ಮಾತ್ಪರಸ್ವಾನಾಂ ಹರ್ತಾ ರಾಜ್ಞಾ ನಿಹನ್ಯತೇ ॥ ಕಿಮು ರಾಜ್ಞೋಽಪಹರ್ತೈವಂ ಬ್ರಹ್ಮಸ್ತೇನೋ ಹಿ (ನಿ)ಹನ್ಯತೇ(೨)ಸರ್ವೇಷಾಂ ಶಾಸ್ತ್ರ ಯದ್ಬ್ರಹ್ಮ ತತ್ಸ್ವರೂಪತಯಾ ಸ್ಮರನ್ । ಬ್ರಹ್ಮಸ್ತೇನೋ ಹಿ (ನಿ)ಹನ್ಯೇತ ತಮಸ್ಯಂಧೇ ಸದೈವ ಹಿ ॥ (೩) ದೋಷಾ ಹ್ಯಜ್ಞಾನಪೂರ್ವಾಸ್ತು ಬದ್ಧಾ ಪುರುಷಮಾಶಿತಾಃ । ವಿಷ್ಣೋರ್ಹರ್ತೇತಿ ಬಾಧಂತೇ ಚಾಭಿ-

ಮಾನಕೃತಾಸ್ಪದಂ ॥ (೪) ಕತೋ ವಿಚಾರಯಂತ್ಯೇನಂ ದೇವತಾ ಹರಿಣಾ ಸಹ । ನಾಹಂ ವಿಷ್ಣುರ್ನ ಸ್ವತಂತ್ರೋ ನ ಚ ಪೂರ್ಣಗುಣೋಽಸ್ಮ್ಯಹಂ । ಮಮ ಸ್ವಾಮೀ ಹರಿರ್ನಿತ್ಯಂ ಸ್ವತಂತ್ರಃ ಪೂರ್ಣಷಡ್ಗುಣಃ ॥ (೫) ಏವಂ ದಾರ್ಢ್ಯಂ ಶಪಥವದ್ಯದಾ ಕುರ್ಯಾದಯಂ ಸದಾ । ಜಾನನ್ನೇವ ನ ತಾಪೀ ಸ್ಯಾದಂತರಾನಂದಭೋಗತಃ ॥ ೧ ॥

ಅ ॥ (೧) ಅಭೇದ ಜ್ಞಾನಿಗಳಿಗೆ ಎಂತಹ ಅನರ್ಥವಿದೆ (ಭೇದಜ್ಞಾನಿಗಳಿಗೆ ಎಂತಹ ಪುರುಷಾರ್ಥ ವಿದೆ?) ಎಂಬ ಪ್ರಶ್ನೆಗೆ (ಉತ್ತರವಾಗಿ **ಪುರುಷಂ ಸೋಮ್ಯ** ಎಂಬ ಖಂಡದ ತಾತ್ಪರ್ಯ ಹೇಳುತ್ತಾರೆ.) ಇನ್ನೊಬ್ಬರ ದ್ರವ್ಯಗಳನ್ನು ಯಾರು ಕದಿಯುತ್ತಾರೋ, ಅವರನ್ನು ರಾಜನು ಶಿಕ್ಷಿಸುತ್ತಾನೆ. ಹೀಗೆ ಇರಲು ರಾಜನ ದ್ರವ್ಯವನ್ನೇ ಅಪಹರಿಸಿದವನನ್ನು ಶಿಕ್ಷಿಸುವವನೆಂಬುವುದು ಸುತರಾಂ ಸಿದ್ಧವು. ಹೀಗೆ ಪರಬ್ರಹ್ಮನೇ ತನ್ನಿಂದ ಬೇರೆಯಿಲ್ಲ, ನಿರ್ಗುಣ, ನಿರಾಕಾರ, ಇತ್ಯಾದಿ ಪ್ರಕಾರ ಅಪಲಾಪ ಮಾಡಿದವನನ್ನು ಶ್ರೀಹರಿಯು ಅಂಧಂತಮಸ್ಸಿನಲ್ಲಿ ಕೆಡಹುತ್ತಾನೆ. (೨) (ಅಭೇದಜ್ಞಾನಿಯು ಬ್ರಹ್ಮಸ್ತೇನನು ಆಗುವುದು ಹೇಗೆ? ಎಲ್ಲಿ ಅವನು ಶಿಕ್ಷಿಸಲ್ಪಡುವುದೆಂದರೆ) ಪರಬ್ರಹ್ಮನು ಸರ್ವರಿಗೂ ಶಿಕ್ಷಕನು ಬ್ರಹ್ಮಸ್ವರೂಪನೇ ನಾನು ಎಂದು ಸ್ಮರಿಸುವವನು (ತನ್ನ ಸ್ವರೂಪ ಬಿಟ್ಟು ಬೇರೆ ಬ್ರಹ್ಮನಿಲ್ಲವೆಂದು ಸ್ಮರಿಸುವುದರಿಂದ) ಬ್ರಹ್ಮಸ್ತೇನನೆನಿಸುತ್ತಾನೆ. ಅತನು ಅಂಧಂತಮಸ್ಸಿನಲ್ಲಿ ಕೆಡಹಲ್ಪಡುವನು. (೩) (ರಾಜಪದವಿಗೆ ಅಯೋಗ್ಯನಾಗಿದ್ದು ನಾನೇ ರಾಜನು ಎಂದು ದೃಢವಾಗಿ ಅಭಿಮಾನವಿರುವವನನ್ನು ರಾಜಭಟರು ದಂಡಿಸುತ್ತಾರೆ. (ಬ್ರಹ್ಮಸ್ತೇನನನ್ನು ಯಾರು ಶಿಕ್ಷಿಸುತ್ತಾರೆ ಎಂದರೆ) ಮಿಥ್ಯಾಜ್ಞಾನವೇ ಮೊದಲಾದ ದೋಷಗಳಿಗೆ ಅಭಿಮಾನಿಗಳಾದ ವಾಯುದೇವರ ಭೃತ್ಯರಾದ ದೇವತೆಗಳು ಬ್ರಹ್ಮನೇ ನಾನು ಎಂಬ ಅಭಿಮಾನದಲ್ಲಿ ಆಸಕ್ತಿಯುಳ್ಳವನೆಂದು ಅಪಭ್ರಷ್ಟರಿಂದ ಮಾಡಲ್ಪಟ್ಟ ವಸ್ತುತಃ ಬ್ರಹ್ಮಸ್ತೇನನಾಗದಿರುವ ಪುರುಷನನ್ನು ಕಟ್ಟಿ ಈತನು ವಿಷ್ಣುವಿಗೆ ದ್ವೇಷಿಯು ವಿಷ್ಣುವನ್ನು ಅಪಹರಿಸಿದವನೆಂದು ಪೀಡಿಸುತ್ತಾರೆ. (೪) (ಈ ಪ್ರಕಾರ **ಸದಹ್ಯತೇಽಥ ಹನ್ಯತೇ** ಎಂಬ ಪರ್ಯಂತ ವಾಕ್ಯದಿಂದ ರಾಜದ್ರವ್ಯಾಪಹಾರಕನಿಗೂ ಬ್ರಹ್ಮಸ್ತೇನನಿಗೂ ಹೇಳಿದ ಸಾಮ್ಯವನ್ನು ದಾರ್ಷ್ಟಾಂತಿಕದಲ್ಲಿ (ಬ್ರಹ್ಮಸ್ತೇನನಲ್ಲಿ) **ತೋರಿಸಿ ಸ ಯದಿ ತಸ್ಯಾಕರ್ತಾ ಭವತಿ** ಎಂದಾರಂಭಿಸಿ **ಸ ಯಥಾ ತತ್ರ ನ ದಾಹ್ಯೇತ** ಎಂಬ ಪರ್ಯಂತ ವಾಕ್ಯದಿಂದ ಹೇಳಿದ ಸಾಮ್ಯವನ್ನು ದಾರ್ಷ್ಟಾಂತಿಕದಲ್ಲಿ ತೋರಿಸುತ್ತಾರೆ) ವಾಯುವಿನ ಕಿಂಕರರು ಅಪವಾದಕ್ಕೆಗುರಿಯಾದ ಭೇದಜ್ಞಾನಿಯನ್ನು ಕರೆದುಕೊಂಡು ಬಂದಮೇಲೆ ಇವನು ಬ್ರಹ್ಮಸ್ತೇನನೆಂದು ಅಪಭ್ರಷ್ಟದೇವತೆಗಳು **ಸೂಚಿಸಿದ** ಪ್ರಕಾರ ಶ್ರೀಹರಿಯು ಮತ್ತು ದೇವತೆಗಳು ಈ ಭೇದಜ್ಞಾನಿಯನ್ನು (ಕಾಯಿಸಿದ ಕಬ್ಬಿಣವನ್ನು ಕೈಯಲ್ಲಿ ಕೊಡುವುದು ಇತ್ಯಾದಿಗಳಿಂದ) ವಿಚಾರ ಮಾಡುತ್ತಾರೆ. ಆಗ ಆ ಭೇದಜ್ಞಾನಿಯು ಸರ್ವಥಾ ನಾನು ವಿಷ್ಣುವಲ್ಲ, ಸ್ವತಂತ್ರನಲ್ಲ, ಪೂರ್ಣ ಗುಣಗಳುಳ್ಳವನೂ ಅಲ್ಲ, ನಿತ್ಯದಲ್ಲಿಯೂ ಶ್ರೀಹರಿಯು ನನಗೆ ಸ್ವಾಮಿಯು, ನಿಯಾಮಕನು, ಸರ್ವ ಸ್ವತಂತ್ರನು ಷಡ್ಗುಣಗಳುಳ್ಳವನು. (೫) ಹೀಗೆ ದೃಢವಾಗಿ ಶಪಥಪೂರ್ವಕವಾಗಿ ಹೇಳುತ್ತಾ ಸದಾ ತಿಳಿದುಕೊಂಡೇ ಯಾವಾಗಲೂ ಇರುವವನಾದುದರಿಂದ ಕಾಯಿಸಿದ ಕಬ್ಬಿಣವನ್ನು ಕೈಯಲ್ಲಿ ಹಿಡಿದರೂ ಈತನನ್ನು ಅದು ಸುಡುವುದಿಲ್ಲ, ಆದರಿಂದ ದುಃಖವುಳ್ಳವನಾಗುವುದಿಲ್ಲ. ಆತನನ್ನು ಸತ್ಯವಂತನೆಂದು ನಿರ್ಣಯಿಸಿ ಅವನಿಗೆ ನಿತ್ಯಾನಂದವನ್ನು ಶ್ರೀಹರಿಯು ಕೊಡುತ್ತಾನೆ. ॥ ೧ ॥

ಪೀ—ಭೇದಜ್ಞಾನಿಯನ್ನು ಸುಡುವುದಿಲ್ಲವೆಂದು ಮಾತ್ರವಲ್ಲ, ಪರಂತು ರಾಜನು ಸತ್ಯನುಡಿಯುವವರನ್ನು ಶಿಕ್ಷಕರಿಂದ ಬಿಡಿಸಿ, ಸುಳ್ಳು ಹೇಳುವವರನ್ನು ಶಿಕ್ಷಿಸಿ, ಸತ್ಯವಂತನನ್ನು ತನ್ನವನನ್ನಾಗಿ ಮಾಡಿಕೊಳ್ಳುವಂತೆಯೇ ವಿಷ್ಣುವೂ ಮಾಡುತ್ತಾನೆ. ಎನ್ನುತ್ತಾರೆ—

ಭಾ. ॥ (೧) ತದಾ ತೇಭ್ಯೋ ಮೋಚಯಿತ್ವಾ ಹತ್ವಾ ಮಿಥ್ಯಾಭಿಶಂಸಿನಃ । ಸ್ವಕೀ-

ಯಂ ಕುರುತೇ ವಿಷ್ಣುರನ್ಯಥಾ ತ್ವೈಸ್ಸಹ ಪ್ರಭುಃ ॥ ತಮಸ್ಯಂಧೇ ಪಾತಯತಿ ಮಹಾಕಾರಾ-ಗೃಹೋಪಮೇ । ಮಹಾಂಧೇ ವಾ ಪಾತಯತಿ ಹಸ್ತಚ್ಛೇದಾದಿಸಮ್ಮಿತೇ । ತತೋಽಧರೇ ವಾ ತದ್ಯೋಗ್ಯಂ ದೃಢಾಭೇದಂ ವಧೋಪಮೇ ॥ (೨) ತಸ್ಮಾದಾಚಾರ್ಯತೋ ಜ್ಞಾತ್ವಾ ವಿಷ್ಣೋರ್ಭೇದೇನ ಪೂರ್ಣತಾಂ । ಉಪಾಸೀತ ತತೋ ಮುಕ್ತಿಂ ಯಾತಿ ನಾಸ್ತ್ಯತ್ರ ಸಂಶಯ ಇತ್ಯಾದಿ ಸಾಮಸಂಹಿತಾಯಾಂ॥ ಇತಿ ಷೋಡಶಃ ಖಂಡಃ॥೧೬,೨,೩,॥೮–೧೬॥ ೨ ॥

ಆ ॥ (೧) ಶ್ರೀವಿಷ್ಣುವು ಆಗ ಅಜ್ಞಾನ ಮೊದಲಾದ ದೋಷಗಳಿಂದ ಭೇದಜ್ಞಾನಿಯನ್ನು ಬಿಡಿಸಿ, ಸುಳ್ಳು ಹೇಳಿದ ಅಪಭ್ರಷ್ಟ ದೇವತೆಗಳನ್ನು ಶಿಕ್ಷಿಸಿ, ಭೇದಜ್ಞಾನಿಯನ್ನು ತನ್ನ ವನನ್ನಾಗಿ ಮಾಡಿಕೊಳ್ಳುತ್ತಾನೆ. ಅವಶ್ಯವಾಗಿ ಒಗೆಯೇ ತಿಳಿಯಬೇಕು. ಹೀಗೆ ತಿಳಿಯದೆ ಅಭೇದಜ್ಞಾನವುಳ್ಳವನಾದರೆ ಅಂತಹವರನ್ನು ಮೊದಲು ಅಭೇದಜ್ಞಾನವನ್ನು ಹೊಂದಿರುವವರೊಂದಿಗೆ ವಾಯುವಿನ ಭೃತ್ಯರಾದ ದೇವತೆಗಳಿಂದ ಶ್ರೀಹರಿಯು ಅಂಧಂತಮನಸ್ಸಿನಲ್ಲಿ ಕೆಡಹುತ್ತಾನೆ ಅಂದರೆ—**ಮಹಾತಮಸ್ತ್ರಿಧಾ ಪ್ರೋಕ್ತಮೂರ್ಧ್ವಂ ಮಧ್ಯಂ ತಥಾಽಧರಂ** ಎಂಬ ಪ್ರಮಾಣಾನುಸಾರ ಅಭೇದಜ್ಞಾನದ ತಾರತಮ್ಯವನ್ನ ನುಸರಿಸಿ ದೊಡ್ಡ ಜೈಲಿಗೆ ಸದೃಶವಾದ **ಊರ್ಧ್ವ**ವೆಂಬ ಮಹಾ ತಮಸ್ಸಿನಲ್ಲಿಯೂ, ಕೈ ಕಡಿಯುವುದು ಮೊದಲಾದ ಹೆಚ್ಚು ಶಿಕ್ಷೆಯುಳ್ಳ **ಮಧ್ಯ** ವೆಂಬ ಅಂಧಂತಮನಸ್ಸಿನಲ್ಲಿಯೂ, ಮರಣ ಶಿಕ್ಷೆಗೆ ಸಮವಾದ **ಅಧರ**ವೆಂಬ ಅಂಧಂತಮನಸ್ಸಿನಲ್ಲಿಯೂ ಕೆಡಹುತ್ತಾನೆ. (೨) ಆದಕಾರಣ ಗುರುಗಳಿಂದ ಉಪದೇಶ ಪಡೆದು, ಜೀವೇಶ್ವರರಿಗೆ ಭೇದವಿದೆ ಎಂದೂ, ವಿಷ್ಣುವಿಗೆ ಪೂರ್ಣ ಗುಣಗಳಿವೆ ಎಂದೂ ಉಪಾಸನೆ ಮಾಡಬೇಕು, ಇದು ಮೊದಲಾದ ಪ್ರಮೇಯಗಳನ್ನು ಸಾಮಸಂಹಿತೆಯಲ್ಲಿ ಹೇಳಿರುತ್ತಾರೆ. ॥ ೮—೧೬ ॥ ॥ ೨ ॥

ಹದಿನಾರನೇ ಖಂಡವು ಮುಗಿಯಿತು.

೧೭ನೇ ಖಂಡವು

ಉ. ॥ ತದೇಷಃ ಶ್ಲೋಕಃ ॥ ಸರ್ವೇಷಾಂ ಖಲು ಭೂತಾನಾಮಾತ್ಮಾ ಸತ್ಯೇ ಪ್ರತಿಷ್ಠಿತಃ । ತೇನಾತ್ಮಾನಮಂತರ್ಧಾಯ ನ ಕಿಂಚಿತ್ಪಾಪಮೃಚ್ಛ(ದ್ಧ)ತಿ ॥ ೧ ॥

ಆ ॥ (ತದೇಷಃ ಶ್ಲೋಕಃ ಇತ್ಯಾದಿ ಮಂತ್ರವು ವೇದೀತಿಯ ಟಪ್ಪಣಿಯಲ್ಲಿ ಹೇಳಿರುತ್ತಾರೆ—) ಸತ್ಯನುಡಿಯಿಂದ ಕೆಡಕು ಆಗುವುದಿಲ್ಲ. ಮೋಕ್ಷವೇ ಆಗುತ್ತದೆ. ಎಂಬಲ್ಲಿ ಮುಂದಿನ ಶ್ಲೋಕವು ಸಮ್ಮತಿಯಾಗುತ್ತದೆ. ಎಲ್ಲಾ ಪ್ರಾಣಿಗಳಿಗೂ ಸ್ವಾಮಿಯಾದ ಶ್ರೀಹರಿಯು ಸತ್ಯನುಡಿಯಲ್ಲಿಯೇ ಇರುವವನು. ಭೇದಜ್ಞಾನಿಯೂ ತನ್ನನ್ನು ಸತ್ಯನುಡಿಯಲ್ಲಿಯೇ ಆಸಕ್ತನನ್ನಾಗಿ ಮಾಡಿಕೊಂಡ ಕಾರಣ, ಯಾವ ಪಾಪವನ್ನೂ ಹೊಂದುವುದಿಲ್ಲ. ॥ ೧ ॥

ಹೀ—ಸತ್ಯನುಡಿಯು ಮಾತ್ರ ಪಾಪವಿಲ್ಲದಿರಲಿಕ್ಕೆ ಕಾರಣವೆಂದಲ್ಲ. ಪರಂತು ಶ್ರೀಹರಿಯಲ್ಲಿ ಪ್ರೀತಿಯೂ ಆವಶ್ಯಕವೆನ್ನುತ್ತಾರೆ—

ಉ. ॥ ಆತ್ಮಸತ್ಯಾತ್ಮಸಾಕ್ಷೀ ಸತಾಂ ಧರ್ಮಃ ಪ್ರತಾಪವಾನ್ । ನ ಸ ಪಾಪಾನಿ ಕುರುತೇ ಯಸ್ಯಾತ್ಮಾ ಭವತಿ ಪ್ರಿಯೋ ॥ ಇತಿ ॥ ೨ ॥

ಅ ॥ ಶ್ರೀಹರಿಯೇ ಸತ್ಯನುಡಿಗೆ ನಿಯಾಮಕನು. ಶ್ರೀಹರಿಯು ಸರ್ವವನ್ನೂ ಚೆನ್ನಾಗಿ ನೋಡುವವನು. ಸಜ್ಜನರನ್ನು ಪೋಷಿಸುವವನು. ಪ್ರತಾಪಶಾಲಿಯು. ಕೀರ್ತಿಯುಳ್ಳವನು. ಯಾವನಿಗೆ ಶ್ರೀಹರಿಯು ಪ್ರಿಯನಾಗುತ್ತಾನೋ, ಅವನು ಪಾಪಗಳನ್ನು ಮಾಡುವುದಿಲ್ಲ. (ಶ್ರೀಹರಿಯಲ್ಲಿ ಭೇದಜ್ಞಾನಿಗೇನೇ ಪ್ರೀತಿಯು.) ॥ ೨ ॥

ಪೀ—ಹೀಗೆ ಭೇದಜ್ಞಾನಿಗೆ ಫಲಕೇಳಿ ಪರಬ್ರಹ್ಮನನ್ನು ಅಪಲಾಪ ಮಾಡತಕ್ಕ ಅಭೇದಜ್ಞಾನಿಗೆ ಫಲಹೇಳುತ್ತಾರೆ -

ಉ. ॥ ಜಾಯತ್ಯೇಕೋ ಮ್ರಿಯತ್ಯೇಕೋಽಶ್ನಾತ್ಯೇಕಃ ಶುಭಾಶುಭಂ ॥ ತದ್ಧಾಸ್ಯ ವಿಜಜ್ಞಾವಿತಿ ವಿಜಜ್ಞಾವಿತಿ ತದೇಷ ಶ್ಲೋಕಃ ॥ ೩ ॥

ಅ ॥ ಏಕಜ್ಞಾನಿಯು ಹುಟ್ಟುತ್ತಾನೆ, ಸಾಯುತ್ತಾನೆ, ಶುಭಾಶುಭಗಳನ್ನುಣ್ಣುತ್ತಾನೆ. ಪಾಪವು ಅಧಿಕವಾಗುವಾಗ ಅಶುಭವಾದ ಅನರ್ಥವನ್ನೇ ಹೊಂದುತ್ತಾನೆ. ॥ ೩ ॥

**ಉ. ॥ ಸರ್ವಭೂತಾತ್ಮಭೂತೇಭ್ಯಃ ಸಮ್ಯಕ್ ಭೂತಾನಿ ಪಶ್ಯತೋ ।
ದೇವಾ ಅಪಿ ಮಾರ್ಗೇ ಮುಹ್ಯಂತಿ ಪದಜ್ಞಾನಾತ್ಪದೈಷಿಣಃ ॥ ಪದಜ್ಞಾನಾತ್ಪದೈಷಿಣಃ ॥ ಇತಿ ಶ್ರೀಮಚ್ಛಾಂದೋಗ್ಯೋಪನಿಷದಿ ಅಷ್ಟಮೋಽಧ್ಯಾಯಃ॥ ॥ ೮—೧೭ ॥ ॥ ೪ ॥**

ಅ ॥ ಸಮಸ್ತ ಪ್ರಾಣಿಗಳಿಗೆ ನಿಯಾಮಕರಾದ ದೇವತೆಗಳ ಪ್ರಸಾದದಿಂದ ಸಮಸ್ತಪ್ರಾಣಿಗಳಲ್ಲಿ ಅಂತರ್ಗತಗಳಾದ ಭಗವದ್ರೂಪಗಳನ್ನು ಪೂರ್ಣಗಳನ್ನಾಗಿ ಪ್ರತ್ಯಕ್ಷೀಕರಿಸತಕ್ಕ ಶ್ರೀಹರಿಯ ಸ್ವರೂಪಜ್ಞಾನದಿಂದ ತಮ್ಮ ತಮ್ಮ ಪದಪ್ರಾಪ್ತಿಯನ್ನು ಇಚ್ಛಿಸುವ ದೇವತೆಗಳೂ ಕೂಡ ಜ್ಞಾನಿಗಳ ಮಾರ್ಗದಲ್ಲಿ ಮೋಹವನ್ನು ಹೊಂದುತ್ತಾರೆ. (ದೇವತೆಗಳೂ ಕೂಡ ಜ್ಞಾನಿಗಳ ಮಾರ್ಗವನ್ನು ಇಚ್ಛಿಸುತ್ತಿರುತ್ತಾರೆ.) ಅಧ್ಯಾಯದಲ್ಲಿದ್ದ ಎಲ್ಲಾ ಅರ್ಥಗಳೂ ಪ್ರಮಾಣಸಿದ್ಧವೆಂದು ತಿಳಿಸುವುದಕ್ಕಾಗಿ ಎರಡು ಸಲ ಹೇಳಿದ್ದು. ॥ ೪ ॥

ಪೀ—ಅನೇ ಖಂಡದ ೧ನೇ ಮಂತ್ರದಲ್ಲಿದ್ದ **ಸ್ವಮಪೀತೋ ಭವತಿ** ಎನ್ನುವುದಕ್ಕೆ ವಿಷ್ಣುವನ್ನು ಹೊಂದುತ್ತಾನೆ, ಎಂಬ ಅರ್ಥವು ಯುಕ್ತವಲ್ಲ, ಏಕೆಂದರೆ ಸ್ವ ಎಂಬ ಶಬ್ದವು ತಾನು ಎಂಬ ಅರ್ಥದಲ್ಲಿಯೇ ಪ್ರಸಿದ್ಧವು. ಸ್ವ ಎಂಬ ಶಬ್ದಕ್ಕೆ ವಿಷ್ಣುವೆಂಬ ಅರ್ಥವು ಯೌಗಿಕ (ಅಮುಖ್ಯ) ಅರ್ಥವು. ಯೋಗಾರ್ಥಕ್ಕಿಂತ ರೂಢ್ಯರ್ಥವು (ಪ್ರಸಿದ್ಧಾರ್ಥವು) ಪ್ರಬಲವು, ಎಂದು ಪರರು ಶಂಕಿಸಿದರೆ ಸ್ವ ಶಬ್ದಕ್ಕೆ ವಿಷ್ಣುವಿನಲ್ಲಿಯೇ ಪ್ರಸಿದ್ಧಿ (ರೂಢಿ) ಯಿರುವುದೆನ್ನುತ್ತಾರೆ –

ಭಾ. ॥ (೧) ಸ್ವಯಂಭೂರಿತಿ ವಿಷ್ಣುಜತ್ವಾದ್ವಿರಿಂಚ ಉಚ್ಯತೇ । ನ ಹಿ ವಿರಿಂಚಾದೇವ ವಿರಿಂಚೋ ಜಾತಃ । ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮಿತ್ಯಾದಿಶ್ರುತೇಃ ॥ (೨) ಆತ್ಮಾ ಭಗವಾನ್ । ತತೋ ಭೂತತ್ವಾದಾತ್ಮಭೂಃ । ದತ್ತಂ ದುರ್ವಾಸಸಂ ಸೋಮವಾತ್ಕೇಶಬ್ರಹ್ಮಸಂಭವಾನಿತಿ ವಚನಾತ್ ॥ (೩) ಅ ಇತಿ ವಿಷ್ಣುಸ್ತಜ್ಜಾತತ್ವಾದಜಃ । ಅ ಇತಿ ಬ್ರಹ್ಮೇತ್ಯಾದಿಶ್ರುತೇಃ । ವಾಸುದೇವಾತ್ಪರೋ ನೈವ ಬ್ರಹ್ಮಶಬ್ದೋದಿತೋ ಭವೇ-

ದಿತ್ಯಾದೇಶ್ಚ । ಅತಃ ಸ್ವಶಬ್ದೋ ವಿಷ್ಣೋವೇವ ಪ್ರಸಿದ್ಧಃ । ತತಃ ಸ್ವಮಪೀತೋ ಭವತೀತಿ ಯುಜ್ಯತೇ ॥ ॥ ೧ ॥

ಅ ॥ (೧) **ಸ್ವಯಂಭೂಃ** ಎಂಬ ಶಬ್ದದಿಂದ ಸ್ವಯಂ=ಸ್ವತಂತ್ರನಾದ ಶ್ರೀವಿಷ್ಣುವಿನಿಂದ ಹುಟ್ಟಿದ ಕಾರಣ ಚತುರ್ಮುಖ ಬ್ರಹ್ಮನು ಹೇಳಲ್ಪಡುತ್ತಾನೆ. (**ಸ್ವಯಮೇವ ಭವತೀತಿ ಸ್ವಯಂಭೂಃ** ತನ್ನಷ್ಟಕ್ಕೇನೇ ಆಗುತ್ತಾನೆಂಮ ಅರ್ಥವು ಏಕೆ ಆಗಲಾರದು. ಆದರಿಂದ **ಸ್ವಯಂ** ಎಂಬ ಶಬ್ದವು ವಿಷ್ಣುವನ್ನು ಹೇಳುತ್ತದೆಂದು ಸಿದ್ಧಿಸುವುದಿಲ್ಲ ಎಂದರೆ—) ಚತುರ್ಮುಖನು ಚತುರ್ಮುಖನಿಂದಲೇ ಹುಟ್ಟಿದವನೆಲ್ಲವಷ್ಟೆ. (ಆದರೂ ನೀವು ಹೇಳುವ ಅರ್ಥವೇ ಆಗಬೇಕೆಂಬುವಲ್ಲಿ ಪ್ರಮಾಣವೇನೆಂದರೆ—ಬ್ರಹ್ಮನು ವಿಷ್ಣುವಿನಿಂದ ಹುಟ್ಟಿದವನೆಂಬುವಲ್ಲಿ ಪ್ರಮಾಣ ಹೇಳುತ್ತಾರೆ—) ಶ್ರೀಹರಿಯು ಸರ್ವರನ್ನು ಸೃಷ್ಟಿಸುವುದಕ್ಕಿಂತ ಮೊದಲು ಚತುರ್ಮುಖನನ್ನು ಸೃಷ್ಟಿಸುತ್ತಾನೆಂದು ವೇದವು. (೨) (ಮತ್ತು **ಆತ್ಮಭೂಃ** ಶಬ್ದವು ಚತುರ್ಮುಖ ಬ್ರಹ್ಮನನ್ನು ಹೇಳುತ್ತದೆ. ಅದು ಚತುರ್ಮುಖನು ವಿಷ್ಣುವಿನಿಂದ ಹುಟ್ಟಿದವನು ಎನ್ನುತ್ತದೆ. ತನ್ನಿಂದಲೇ ತಾನು ಹುಟ್ಟಿದವನೆಂದು ಹೇಳುವುದಿಲ್ಲ. ಜೀವರಿಂದ ಹುಟ್ಟಿದವನೆಂದೂ ಹೇಳುವುದಿಲ್ಲ. ಹಾಗೆ ಹೇಳಿದರೆ ವೇದಗಳಿಂದ ವಿರೋಧವು ಬರುವುದು. ಆದುಕಾರಣ ಸ್ವಯಂಭೂ ಶಬ್ದಕ್ಕೂ ನಾವು ಹೇಳಿದ ಅರ್ಥವೇ ಆಗಬೇಕೆನ್ನುತ್ತಾರೆ -) ಆತ್ಮನೆಂದರೆ ಭಗವಂತನು. ಅವನಿಂದ ಹುಟ್ಟಿದವನಾದುದರಿಂದ **ಆತ್ಮಭೂಃ** ಎಂಬ ಶಬ್ದದಿಂದ ಚತುರ್ಮುಖನನ್ನು ಇಟ್ಟುಕೊಳ್ಳಬೇಕು. (ಆತ್ಮನೆಂದರೆ ಭಗವಂತನೆಂದು ಏಕೆ ಇಟ್ಟುಕೊಳ್ಳಬೇಕೆಂದರೆ—) ಆತ್ಮ (ಪರಮಾತ್ಮ) ನಿಂದ ಹುಟ್ಟಿದವನು ದತ್ತಾತ್ರೇಯ, ರುದ್ರನಿಂದ ಹುಟ್ಟಿದವರು ಮರ್ವಾಸರು, ಚತುರ್ಮುಖನಿಂದ ಹುಟ್ಟಿದವನು ಸೋಮನು. ಎಂಬ ಭಾಗವತ ಪ್ರಮಾಣದಿಂದ ಆತ್ಮನೆಂದರೆ ವಿಷ್ಣುವೆಂದು ಪ್ರಸಿದ್ಧವಾಗಿದೆ. (೩) (ಮತ್ತು ಅಜ ಶಬ್ದಕ್ಕೆ ಬ್ರಹ್ಮನೆಂಬ ಅರ್ಥವು ಪ್ರಸಿದ್ಧವು. ಆ ಶಬ್ದಕ್ಕೂ ವಿಷ್ಣುವಿನಿಂದ ಹುಟ್ಟಿದವನೆಂದು ಅರ್ಥವು. **ಯೋ ಬ್ರಹ್ಮಾಣಂ ವಿದಧಾತಿ** ಎಂಬ ವೇದದಿಂದ ವಿರೋಧವು ಬರುವುದರಿಂದ **ನ ಜಾಯತೇ ಇತಿ ಅಜಃ** ಹುಟ್ಟದಿರುವ ಪ್ರಯುಕ್ತ ಅಜನೆನ್ನಿಸುತ್ತಾನೆ. ಎಂದರ್ಥವಲ್ಲ. ಆ **ಅಜ** ಎಂಬ ಶಬ್ದವನ್ನು ನೋಡುವಾಗಲೂ **ಸ್ವಯಂಭೂ** ಶಬ್ದಕ್ಕೆ ಹಿಂದೆ ಹೇಳಿದ ಅರ್ಥವೇ ಆಗಬೇಕೆನ್ನುತ್ತಾರೆ—) **ಅ** ಎಂದರೆ ಶ್ರೀವಿಷ್ಣುವು, ಅವನಿಂದ ಹುಟ್ಟಿದ ಕಾರಣ ಚತುರ್ಮುಖನು **ಅಜಃ** ಎನ್ನಿಸುತ್ತಾನೆ. (**ಅ** ಶಬ್ದವು ವಿಷ್ಣುವನ್ನು ಹೇಳುತ್ತದೆ ಎಂಬಲ್ಲಿ ಪ್ರಮಾಣ ಕೇಳುತ್ತಾರೆ—) **ಅಃ** ಎಂಬ ಶಬ್ದದಿಂದ ಪರಬ್ರಹ್ಮನು ಹೇಳಲ್ಪಡುತ್ತಾನೆ, ಇದು ಮೊದಲಾದುದು ವೇದವು. (**ಪರಬ್ರಹ್ಮನು ಅ** ಎಂಬುವುದರಿಂದ ಹೇಳಲ್ಪಡುತ್ತಾನೆ' ವಿಷ್ಣುವಲ್ಲ ಎಂದರೆ—ಬ್ರಹ್ಮ ಶಬ್ದವು ವಿಷ್ಣುವನ್ನೇ ಹೇಳುತ್ತದೆ. ವಿಷ್ಣುವೇ **ಅ** ಎಂಬುವುದರಿಂದ ಹೇಳಲ್ಪಡುತ್ತಾನೆ, ಎಂಬುವಲ್ಲಿ ಸ್ಮೃತಿಪ್ರಮಾಣ ಹೇಳುತ್ತಾರೆ—) ಮುಖ್ಯವಾಗಿ ಬ್ರಹ್ಮ ಶಬ್ದದಿಂದ ಹೇಳಲ್ಪಡತಕ್ಕವನು ವಾಸುದೇವನೇ. ಅವನಿಗಿಂತ ಮತ್ತೊಬ್ಬನು ಮುಖ್ಯವಾಗಿ ಹೇಳಲ್ಪಡುವುದೇ ಇಲ್ಲ ಆದುಕಾರಣ **ಸ್ವ** ಎಂಬ ಶಬ್ದವು ವಿಷ್ಣುವಿನಲ್ಲಿಯೇ ಪ್ರಸಿದ್ಧವು. ಆದುಕಾರಣ **ಸ್ವಮಪೀತೋ ಭವತಿ** ಎಂಬುದಕ್ಕೆ ವಿಷ್ಣುವನ್ನು ಹೊಂದುತ್ತಾನೆ, ಎಂದು ಅರ್ಥಹೇಳಿದ್ದು ಕೂಡುತ್ತದೆ. ॥ ೧ ॥

ಪೀ—ಸ್ವ ಎಂಬ ಶಬ್ದಕ್ಕೆ ವಿಷ್ಣುವೆಂದು ಅರ್ಥ ಇಟ್ಟುಕೊಳ್ಳುವುದಾದರೂ **ಅಪೀತ** ಎಂಬ ಶಬ್ದದಿಂದ ಐಕ್ಯವನ್ನು ಇಟ್ಟುಕೊಳ್ಳಬೇಕು. ಏಕೆಂದರೆ **ಏಕೀಭವತಿ** ಎಂಬುದಕ್ಕೂ **ಅಪೀತೋ ಭವತಿ** ಎಂಬುದಕ್ಕೂ ಒಂದೇ ಅರ್ಥವು ಆದುಕಾರಣ **ಅಪೀತೋ ಭವತಿ** ಎಂಬುದಕ್ಕೆ **ಅಪ್ಯೇತಿ** ಹೊಂದುತ್ತಾನೆಂಬ ವೈಕೃತಿಗಳ ಅರ್ಥವು ಕೂಡುವುದಿಲ್ಲ. ಹೊಂದುತ್ತಾನೆಂದು ಅರ್ಥ ಹೇಳಬೇಕಿದ್ದರೆ—**ಇತೋ ಭವತಿ** ಎಂದೇ ವೇದದಲ್ಲಿ ಹೇಳಬೇಕಿತ್ತು. **ಅಪೀತಃ** ಎಂಬುವಲ್ಲಿದ್ದ **ಅಪಿ** ಎಂಬುವುದು ವ್ಯರ್ಥವು ಎಂದು ಹೇಳಕೂಡದು. ಏಕೆಂದರೆ—ಪರರ ಮತದಲ್ಲಿ **ಸ್ವ** ಎಂಬ ಶಬ್ದಕ್ಕೇನೇ ಏಕ್ಯವೆಂದು ಅರ್ಥವಿರು

ವುದರಿಂದ **ಅಪೀತಃ** ಎಂಬುವುದೇ ವ್ಯರ್ಥವಾಗಬೇಕಾಗುವುದು ಮತ್ತು ಪರರ ಮತದಲ್ಲಿ **ಅಪೀತ** ಎಂಬ ಅಖಂಡ ಶಬ್ದಕ್ಕೆ ಐಕ್ಯವೆಂದು ಅರ್ಥವು ಎಂದು ಹೇಳಲಾಗುವುದಿಲ್ಲ. ಏಕೆಂದರೆ–ಅಪೀತ ಎಂಬುವುದೂ, **ಭವತಿ** ಎಂಬುವುದೂ, ಅಕರ್ಮಕವಾದುದರಿಂದ, **ಸ್ವಂ** ಎಂಬ ದ್ವಿತೀಯಾ ವಿಭಕ್ತಿಯು ಕೂಡುವುದಿಲ್ಲ. ಬ್ರಹ್ಮನನ್ನು ಐಕ್ಯವು ಆಗುತ್ತದೆ ಎಂದಾಗುವುದಿಲ್ಲವಷ್ಟೆ. ಆಲ್ಲದೆ **ಸ್ವಂ** ಎಂದು ಇದ್ದುದನ್ನು **ಸ್ವೇನ**=ಬ್ರಹ್ಮನಿಂದ **ಅಪೀತಃ**=ಐಕ್ಯವು ಆಗುತ್ತದೆ, ಎಂದು ತೃತೀಯಾ ವಿಭಕ್ತಿಯನ್ನು ಕಲ್ಪಿಸಿಕೊಳ್ಳಬೇಕಾಗುವುದು. ಮತ್ತು **ಅಪೀತ** ಎಂಬುದಕ್ಕೆ ಐಕ್ಯವೆಂಬ ಅರ್ಥವು ಯೋಗ (ಅವಯವ ಶಕ್ತಿ) ವೃತ್ತಿಯಿಂದ ಸಿಗುವುದಿಲ್ಲವೆನ್ನುತ್ತಾರೆ—

ಭಾ. ॥ (೧) ಅಪ್ಯಯೋ ನಾಮಾವಿಜ್ಞೇಯತ್ವೇನ ಪ್ರವೇಶಃ । ಅವಿಜ್ಞಾತಂ ಪ್ರವಿಷ್ಟಂ ಯದಪೀತಮಿತಿ ಕೀರ್ತ್ಯತೇ । ಯಥಾ ನದ್ಯಃ ಸಮುದ್ರೇ ತು ಯಥಾ ವಿಷ್ಣುಂ ಲಯೇ ಪ್ರಜಾ ಇತಿ ಶಬ್ದನಿರ್ಣಯೇ ॥ (೨) ನ ಚ ಜೀವಸ್ಯ ತದ್ಭಾವೋಽಸ್ತಿ । ಉತ್ಥಿತಸ್ಯ ಸುಪ್ತಿ-ಸಂಸಾರಯೋಃ ಪರಾಮರ್ಶದರ್ಶನಾತ್ ॥ (೩) ಅಹಂ ವಿಶ್ವಂ ಭುವನಮಭ್ಯಭವಾಂ । ಆಜನ್ಮಮರಣಂ ಸ್ಮೃತ್ವಾ ಮುಕ್ತಾ ಹರ್ಷಮವಾಪ್ನುಯುಃ ಇತಿ ॥ (೪) ತದ್ಭಾವಸ್ಯಾಪ-ರಾಮರ್ಶಾಚ್ಚ । ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತೋ ನ ಬಾಹ್ಯಂ ಕಿಂಚನ ವೇದ ನಾಂತರ ಮಿತ್ಯಾದಿಶ್ರುತೇಶ್ಚ । ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನೇತಿ ಚ ಭಗವದ್ವಚನಂ ॥ ೨ ॥

ಅ ॥ (೧) ಬೇರೆಯವರಿಗೆ ತಿಳಿಯದ ಹಾಗೆ ಪ್ರಾಪ್ತಿಯು ಅಪ್ಯಯವೆನಿಸುತ್ತದೆ. (ಅಪೀತಿ ಎಂಬುವುದಕ್ಕೂ ಅಪ್ಯಯವೆಂಬುದಕ್ಕೂ ಒಂದೇ ಅರ್ಥವು **ತದನ್ಯೇಷಾಮದರ್ಶನಂ । ಅಪ್ಯಯೋಽಯಂ ಸಮುದ್ದಿಷ್ಟೋ ನ ಸ್ವರೂಪೈಕತಾ ಕ್ವಚಿತ್** ಬೇರೆಯವರಿಗೆ ತೋರದಿರುವುದೇ ಅಪ್ಯಯವೆನಿಸುತ್ತದೆ. ಜೀವಸ್ವರೂಪಕ್ಕೆ ಐಕ್ಯವೆಂದಲ್ಲ, ಎಂಬ ವೇದ ಪ್ರಮಾಣವನ್ನು ತಿಳಿಸುವುದಕ್ಕಾಗಿ ಅಪೀತ ಎಂದು ಹೇಳಿದೆ ಅಪ್ಯಯವೆಂದು ಹೇಳಿರುವರು.) (ಈ ವಿಷಯದಲ್ಲಿ ಸ್ಮೃತಿಪ್ರಮಾಣವನ್ನು ಹೇಳುತ್ತಾರೆ.) ಬೇರೆಯವರಿಗೆ ತಿಳಿಯದ ಹಾಗೆ ಹೊಂದಿರುವುದು(ಪ್ರವೇಶಿಸಿದ್ದು) ಯಾವುದಿದೆಯೇ ಅದು **ಅಪೀತ** ಎನಿಸುತ್ತದೆ. ಗಂಗಾದಿ ನದಿಗಳು ಸಮುದ್ರದಲ್ಲಿ ಸೇರುತ್ತವೆ, ಎಂಬಲ್ಲಿ ಸಮುದ್ರಮಪೀತಾಃ ಎಂದು ಹೇಳಲ್ಪಡುತ್ತವೆ. ಪ್ರಜೆಗಳು ಪ್ರಲಯಕಾಲದಲ್ಲಿ ವಿಷ್ಣುವನ್ನು ಪ್ರವೇಶಿಸುತ್ತಾರೆ. ಎಂಬಲ್ಲಿ **ಪ್ರಜಾಃ ಅಪೀತಾಃ** ಎಂದು ಹೇಳಲ್ಪಡುತ್ತಾರೆ. ಹಾಗೆಯೇ **ಸ್ವಮಪೀತೋ ಭವತಿ** ಎಂಬ ಉಕ್ತಿಯು, ಎಂದು ಶಬ್ದ ನಿರ್ಣಯದಲ್ಲಿದೆ. (೨) (ಈ ಶಬ್ದದೋಷವಿರಲಿ, ಜೀವನೇ ಬ್ರಹ್ಮನಾಗುತ್ತಾನೆಂಬುದು ಯುಕ್ತವಾಗಿದ್ದರೆ **ಸ್ವ-ಮಪೀತೋ ಭವತಿ** ಎಂಬುವುದಕ್ಕೆ ಬ್ರಹ್ಮನಿಂದ ಐಕ್ಯಹೊಂದುತ್ತಾನೆ, ಎಂಬ ಅರ್ಥವು ಆಗುತ್ತಿತ್ತು. ಜೀವನು ಬ್ರಹ್ಮನಾಗುವುದೇ ಇಲ್ಲ, ಎನ್ನುತ್ತಾರೆ—) ಜೀವನಿಗೆ ಬ್ರಹ್ಮತ್ವವು ಬರುವುದೇ ಇಲ್ಲ. (ಏಕೆಂದರೆ—**ಸ್ವಮಪೀತೋ ಭವತಿ** ಎಂಬ ವಾಕ್ಯವು ಸುಪ್ತನನ್ನು ಮುಕ್ತನನ್ನು ಇಬ್ಬರನ್ನೂ ಹೇಳುತ್ತದೆ. ಮತ್ತು **ಸುಪ್ತಿ**ಪ್ರಕರಣವು ಮುಕ್ತಿಯನ್ನು ಹೇಳುತ್ತದೆಂಬುದನ್ನು **ಸ್ವಾಪ್ಯಯಸಂಪತ್ಯೋರನ್ಯ ತರಾಪೇಕ್ಷಂ** ಎಂಬ ಸೂತ್ರದಲ್ಲಿ ಸೂತ್ರಕಾರರು ನಿರ್ಣಯಿಸಿರುವರು. ಅಲ್ಲದೆ **ಸ್ವರ್ಗಃ ಸುಷುಪ್ತಿರಿತ್ಯಾಪ್ಯಾ ಮುಕ್ತೇರಪಿ ಯತಃ ಸಮಾ** ಎಂಬ ಪ್ರಮಾಣದಿಂದ ಸುಷುಪ್ತಿ ಶಬ್ದವು ಮುಕ್ತಿಪರವೂ ಆಗುತ್ತದೆಂದು ಹೇಳಿದೆ. ಅಲ್ಲದೆ **ಸ್ವಂ ಕುಲಾಯಂ ಯಥಾಽಪೀತಃ ಪಕ್ಷೀ ಸ್ಯಾದೇವಮಾತ್ಮರಂ । ಅಸ್ಮೇತಿ ಜೀವಃ ಪ್ರಸ್ವಾಪೇ ಮುಕ್ತೌ ಜಾನ್ಯೋಽಪಿ ಸನ್ ಸದಾ ॥** ಎಂಬ ಸ್ಮೃತಿಯೂ ಮುಕ್ತಿಪರವಾಗುತ್ತದೆ ಎಂಬುವುದನ್ನು ತಿಳಿಸುತ್ತದೆ. ಆದುಕಾರಣ **ಸ್ವಮಪೀತೋ ಭವತಿ** ಎಂದು ಹೇಳಲ್ಪಡತಕ್ಕ ಜೀವನಿಗೆ ಬ್ರಹ್ಮಭಾವವು (1) ಸುಪ್ತನಿಗೋ, (2) ಮುಕ್ತನಿಗೋ, ಎರಡೂ ಕೂಡುವುದಿಲ್ಲವೆನ್ನುತ್ತಾರೆ—) (ಗಾಢ

ನಿದ್ದೆಯಲ್ಲಿದ್ದ ಜೀವನಿಗಾಗಲೀ, ಮುಕ್ತನಾದವನಿಗಾಗಲೀ ಬ್ರಹ್ಮೈಕ್ಯವು ಬರುವುದಿಲ್ಲ. (ಏಕೆಂದರೆ--) ಗಾಢನಿದ್ದೆಯಿಂದ ಎಚ್ಚೆತ್ತವನಿಗೆ ಸುಷುಪ್ತಿಕಾಲದಲ್ಲಿ ಅನುಭೂತವಾದ ವಸ್ತುಗಳ ಜ್ಞಾನವಿದೆ ಸಂಸಾರದಿಂದ ಮೋಕ್ಷವನ್ನು ಹೊಂದಿದವನಿಗೆ ಸಂಸಾರದ ಜ್ಞಾನವಿದೆ (ಬ್ರಹ್ಮನಿಗೆ ಜೀವರಂತೆ ನಾನು ಸುಖವಾಗಿ ಮಲಗಿದ್ದೆನು ಸಂಸಾರದಲ್ಲಿರುವಾಗ ದುಃಖಿಯಾಗಿದ್ದೆನು, ಇತ್ಯಾದಿ ಪ್ರಕಾರ ಸುಷುಪ್ತಿ ಸಂಸಾರಗಳ ಜ್ಞಾನವೇ ಇಲ್ಲ ಬ್ರಹ್ಮನು ಸರ್ವದಾ ಸರ್ವಜ್ಞನೇ ಆದುದರಿಂದ ಅಜ್ಞಾನವೇ ಇಲ್ಲ. ಹೀಗೆ ಜೀವನಿಗೂ, ಬ್ರಹ್ಮನಿಗೂ ವಿರುದ್ಧ ಧರ್ಮಗಳೇ ಇರುವುದರಿಂದ ಇವರಿಗೆ ಐಕ್ಯವು ಕೂಡಲಾರದು. (೩) (ಹಾಗಾದರೆ **ಸುಖಮಹಮಸ್ವಾಪ್ಸಂ** ಎಂದು ಸರ್ವರಿಗೂ ಅನುಭವವಿದ್ದುದರಿಂದ ಸುಷುಪ್ತಿಯಿಂದ ಎಚ್ಚೆತ್ತವನಿಗೆ ಸುಷುಪ್ತಿ (ಗಾಢನಿದ್ದೆ) ಯ ಜ್ಞಾನವಿರಲಿ. ಸಂಸಾರದಿಂದ ತೆರಳಿದ ಮುಕ್ತನಿಗೆ ಸಂಸಾರ ಪರಾಮರ್ಶವು ಹೇಗೆ ಇರುವುದು? ಎಂದರೆ –) ನಾನು ಸಂಪೂರ್ಣ ಜಗತ್ತನ್ನು ಮೀರಿ ಅದಕ್ಕೆ ಅಧಿಪತಿಯಾಗಿರುವೆನು, (ಎಂದು ಮುಕ್ತನಾದ **ಚತುರ್ಮುಖನ** ವಾಕ್ಯವು) ಜನ್ಮಾರಭ್ಯ ಮರಣ ಪರ್ಯಂತ ಅನುಭವಿಸಿದ ದುಃಖವನ್ನು ಸ್ಮರಿಸಿ ಈಗ ಇಂತಹ ದುಃಖದಿಂದ ಬಿಡುಗಡೆ ಹೊಂದಿರುತ್ತೇನೆಂದು ಮೋಕ್ಷದಲ್ಲಿದ್ದವರು ಸಂತೋಷವನ್ನು ಹೊಂದಿರುವರು. (೪) (ಜೀವರಿಗೆ ಸುಷುಪ್ತಿಯಲ್ಲಿ ಬ್ರಹ್ಮೈಕ್ಯವು ಬರುವುದಾದರೆ ಎಚ್ಚೆತ್ತ ಮೇಲೆ ಬ್ರಹ್ಮೈಕ್ಯದ ಅನುಭವವು ಬರಬೇಕಾಗುವುದು. ಸುಷುಪ್ತಿಯಿಂದ ಎಚ್ಚೆತ್ತವನಿಗೆ ಸುಖಾದಿಗಳ ಜ್ಞಾನವು ಬರುವಂತೆಯೇ ಬ್ರಹ್ಮನೇ ನಾನು ಎಂಬ ಜ್ಞಾನವೂ ಬರಬೇಕಾಗುವುದು. ಅದು ಬರುವುದಿಲ್ಲವಷ್ಟೆ ಯಾವನಿಗೂ ಎಚ್ಚೆತ್ತವನಿಗೆ ನಾನು ಬ್ರಹ್ಮನಾಗಿದ್ದೇನೆ, ಎಂದು ಜ್ಞಾನವು ಬರುವುದಿಲ್ಲ. ಆದುಕಾರಣ ಸುಷುಪ್ತಿಯಲ್ಲಿ ಜೀವನಿಗೆ ಬ್ರಹ್ಮೈಕ್ಯವು ಬರುವುದಿಲ್ಲವೆನ್ನುತ್ತಾರೆ.) ಸುಷುಪ್ತಿಯಿಂದ ಎಚ್ಚರಗೊಂಡ ಜೀವರಿಗೆ ಯಾರಿಗೂ ನಾನು ಬ್ರಹ್ಮನಾಗಿದ್ದೇನೆಂದು ಜ್ಞಾನವು ಇರುವುದೇ ಇಲ್ಲ (ಮತ್ತು ಸುಷುಪ್ತಿಯಲ್ಲಿ ಅಥವಾ ಮುಕ್ತಿಯಲ್ಲಿ ಜೀವರಿಗೆ ಬ್ರಹ್ಮಭಾವವಿಲ್ಲ. ಏಕೆಂದರೆ – ಆ ಕಾಲಗಳಲ್ಲಿ ಪ್ರಾಜ್ಞರೂಪಿಯಾದ ಶ್ರೀಹರಿಯಿಂದ ಜೀವನು ಆಲಿಂಗಿಸಿಕೊಳ್ಳಲ್ಪಡುತ್ತಾನೆ, ಎಂದು ಹೇಳುವ ವೇದವಿದೆ. ಜೀವಬ್ರಹ್ಮರಿಗೆ ಐಕ್ಯವೆಂದಾದರೆ ಆ ಆಲಿಂಗನವು ಕೂಡಲಾರದು ಎನ್ನುತ್ತಾರೆ—) ಪ್ರಾಜ್ಞರೂಪಿ ಶ್ರೀಹರಿಯಿಂದ ಆಲಿಂಗಿಸಿಕೊಳ್ಳಲ್ಪಟ್ಟವನಾಗಿ ಬಾಹ್ಯವಸ್ತುಗಳನ್ನೂ ಆಂತರ ವಸ್ತುಗಳನ್ನೂ ಯಾವುದನ್ನೂ ತಿಳಿಯುವುದಿಲ್ಲ, ಇತ್ಯಾದಿ ವೇದವಿದೆ. ಸಂಪರಿಷ್ವಕ್ತಃ ಎಂಬುದಕ್ಕೆ ಐಕ್ಯ ಹೊಂದಿರುವನೆಂದು ಏಕೆ ಅರ್ಥವಾಗಲಾರದು, ಎಂದರೆ—ಈ ವೇದದ ಅರ್ಥವನ್ನು ನಿರ್ಣಯಿಸತಕ್ಕ ಸೂತ್ರವನ್ನು ಹೇಳುತ್ತಾರೆ--) **ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ ಪ್ರಾಜ್ಞೇನಾತ್ಮನಾ ಅಶ್ಲಾರೂಢಃ** ಎಂದು ಸುಷುಪ್ತಿ ಉತ್ಕ್ರಾಂತಿ ಪ್ರಕರಣಗಳಲ್ಲಿ ಜೀವರಿಗೆ ಈಶ್ವರನಿಂದ ಭೇದವಿದೆ, ಎಂದು ಸೂತ್ರಕಾರರು ನಿರ್ಣಯಿಸಿರುವರು. ॥ ೬ ॥

ಪೀ—(1) ಶ್ರುತಿಸೂತ್ರಗಳು ಸುಷುಪ್ತಿಯನ್ನೂ ಮೋಕ್ಷವನ್ನೂ ಎರಡನ್ನೂ ಹೇಳುತ್ತವೆ. ಸುಷುಪ್ತಿ ಪ್ರಕರಣವು ಮೋಕ್ಷವನ್ನು ಹೇಳುತ್ತವೆಂದು ಸೂತ್ರಕಾರರೇ ನಿರ್ಣಯಿಸಿರುವರು. (2) ಮತ್ತು **ಸ್ವೇನ ರೂಪೇಣಾಭಿನಿಷ್ಪದ್ಯತೇ** ಎಂಬ ವಾಕ್ಯವು ಜೀವರಿಗೆ ಬ್ರಹ್ಮತ್ವವನ್ನು ಹೇಳಲಿಕ್ಕೆ ಹೊರಟದ್ದಲ್ಲ. ಏಕೆಂದರೆ—ಒಂಭತ್ತು ಪ್ರಕರಣಗಳಲ್ಲಿಯೂ ಜೀವಬ್ರಹ್ಮರಿಗೆ ಭೇದವನ್ನೇ ಸ್ಪಷ್ಟವಾಗಿ ಹೇಳಿರುವರು. ಹೇಗೆಂದರೆ ಅದರಲ್ಲಿ ೧ನೇ ಪ್ರಕರಣದಲ್ಲಿ **ಸನ್ಮೂಲಾಃ** ಎಂಬುವುದರಿಂದ ಪ್ರಜೆಗಳಿಗೆ ಶ್ರೀಹರಿಯು ಮೂಲಕಾರಣನೆಂದು ಹೇಳಿರುವರು. ೨ನೇ ಪ್ರಕರಣದಲ್ಲಿ **ಸಂಪತ್ಸ್ಯಮಹೇ ತ ಇಹ ವ್ಯಾಹ್ರೋ ವಾ** ಎಂದೂ, ೩ನೇ ಪ್ರಕರಣದಲ್ಲಿ **ಆಗಚ್ಛಾಮಹೇ ತ ಇಹ ವ್ಯಾಹ್ರೋ ವಾ** ಎಂದೂ, ಭಿನ್ನವಾದ ವಸ್ತುವನ್ನು ಬೇರೆಯೆಂದು ತಿಳಿಯದಿರುವುದರಿಂದ ಹುಲಿ ಮೊದಲಾದ ಮೃಗಾದಿಗಳಾಗಿ ಹುಟ್ಟುತ್ತಾರೆಂದು ಹೇಳಿದೆ. **ಸ ವಿಷ್ವಙ್** ಎಂಬ ೪ನೇ ಪ್ರಕರಣದಲ್ಲಿ ಜೀವರು ಶ್ರೀಹರಿಯ ಅಧೀನದಲ್ಲಿರುತ್ತಾರೆಂದು ಹೇಳಿದೆ **ಅಣ್ವ್ಯ ಇವೇಮಾಃ** ಎಂಬ ೫ನೇ ಪ್ರಕರಣದಲ್ಲಿ ಜೀವರು ತಿಳಿಯಲರ್ಹರಾದರೂ ಶ್ರೀಹರಿಯು ಪರಮ ಸೂಕ್ಷ್ಮ

ನಾದುದರಿಂದ ತಿಳಿಯಲಸಾಧ್ಯನೆಂದು ಹೇಳಿದೆ. ಲವಣಮೇತತ್ ಎಂಬ ೬ನೇ ಪ್ರಕರಣದಲ್ಲಿ ಶ್ರೀ ಹರಿಯ ಸಾಮರ್ಥ್ಯವೆ ತೋರಿದರೂ ಶ್ರೀಹರಿಯು ತಿಳಿಯಲಶಕ್ಯನೆಂದು ಹೇಳಿದೆ. ಏತಾಂ ದಿಶಂ ಗಂಧಾರಾಃ ಎಂಬ ೭ನೇ ಪ್ರಕರಣದಲ್ಲಿ ಆಚಾರ್ಯರ ಕುಶದೇಶವಿಶ್ಲಿಪೆ ಶ್ರೀಪರಿಯು ತಿಳಿಯಲಶಕ್ಯನು, ಆತನಿಂದ ಭೇದವೂ ತಿಳಿಯಲಶಕ್ಯನೆಂದು ಹೇಳಿದೆ. ಕೇಜಃ ಎಂಬ ೮ನೇ ಪ್ರಕರಣದಲ್ಲಿ ಜೀವನು ಶ್ರೀ ಹರಿಯ ಅಧೀನನಾಗಿಯೇ ತಿಳಿಯಲ್ಪಡುತ್ತಾನೆಂದು ಹೇಳಿದೆ. ಅಪಹಾರ್ಷೀತ್ ಎಂಬ ೯ನೇ ಪ್ರಕರಣದಲ್ಲಿ ಅಭೇದಜ್ಞಾನದಿಂದ ಅಂಧಂತಮಸ್ಸು, ಭೇದಜ್ಞಾನದಿಂದ ಮೋಕ್ಷವೆಂದೂ ಫಲ ಹೇಳಿ ದೆ ಇವುಗಳು ಜೀವಬ್ರಹ್ಮರಿಗೆ ಅಭೇದವಾದಲ್ಲಿ ಸರ್ವಥಾ ಕೂಡಲಾರವು, ಎಂಬ ಅಭಿಪ್ರಾಯದಿಂದ ಹೇಳುತ್ತಾರೆ—

ಭಾ. ॥ (೧) ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸಪ್ರತಿಷ್ಠಾಃ । (೨) ಸತಿ ಸಂಪದ್ಯ ನ ವಿದುಃ ಸತಿ ಸಂಪದ್ಯಾಮಹ ಇತಿ । (೩) ಸತ ಆಗಮ್ಯ ನ ವಿದುಃ ಸತ ಆಗಚ್ಛಾಮಹ ಇತಿ । (೪) ಸ ಏಷ ಜೀವೇನಾತ್ಮನಾನುಪ್ರ-ಭೂತಃ । ಪೇಪೀಯಮಾನೋ ಮೋದಮಾನಸ್ತಿಷ್ಠತಿ ॥ (೫) ಅಣ್ಯಾ ಇವೇಮಾ ಧಾನಾ ಭಗವ ಇತ್ಯಾಸಾಮಂಗೈಕಾಂ ಭಿಂಧೀತಿ ಭಿನ್ನಾ ಭಗವ ಇತಿ ಕಿಮತ್ರ ಪಶ್ಯಸೀತಿ ನ ಕಿಂಚನ ಭಗವ ಇತಿ ಯಂ ವೈ ಸೋಮ್ಯೈತಮಣಿಮಾನಂ ನ ನಿಭಾಲಯಸ ಏತಸ್ಯ ವೈ ಸೋ-ಮ್ಯೈಷೋಣಿಮ್ನ ಏವಂ ಮಹಾನ್ನ್ಯಗ್ರೋಧಸ್ತಿಷ್ಠತಿ । (೬) ಲವಣಮೇತದುದಕೇಽವ-ಧಾಯಾಥ ಮಾ ಪ್ರಾತರುಪಸೀದಥಾ ಇತಿ ಸ ಹ ತಥಾ ಚಕಾರ ತಂ ಹೋವಾಚ ಯದ್ದೋಷಾ ಲವಣಮೇತದುದಕೇಽವಧಾ ಅಂಗ ತದಾಹರೇತಿ ತದ್ಧಾವಮೃಶ್ಯ ನ ವಿವೇದ ಯಥಾ ವಿಲೀನಮೇವಾಂಗಾಸ್ಯಾಂತಾದಾಚಾಮೇತಿ ಕಥಮಿತಿ ಲವಣಮಿತಿ । ಮಧ್ಯಾದಾಚಾ ಮೇತಿ ಕಥಮಿತಿ ಲವಣಮಿತ್ಯಂತ್ಯಾದಾಚಾಮೇತಿ ಕಥಮಿತಿ ಲವಣಮಿತಿ । ಅತ್ರ ವಾವ ಕಿಲ ಸತ್ಸೋಮ್ಯ ನ ನಿಭಾಲಯಸೇಽತ್ರೈವ ಕಿಲೇತಿ । (೭) ಏತಾಂ ದಿಶಂ ಗಂಧಾರಾ ಏತಾಂ ದಿಶಂ ವ್ರಜೇತಿ । (೮) ಕೇಜಃ ಪರಸ್ಯಾಂ ದೇವತಾಯಾಂ ತಾವನ್ನ ಜಾನಾತಿ । (೯) ಅಪಹಾರ್ಷೀತ್ಸ್ತ್ಯೇಯಮಕಾರ್ಷೀದಿತ್ಯಾದಿ । ನವಕೃತ್ವೋ ಭಿನ್ನಸ್ಯ ವಸ್ತುನೋ ಭೇದಾಪರಿಜ್ಞಾನಾದನರ್ಥಂ ಸೂಕ್ಷ್ಮತ್ವಾದ್ಭೇದಸ್ಯ ದುರ್ಜ್ಞೇಯತ್ವಂ ಚ ಸದೃಷ್ಟಾಂತಂ ॥ ೩ ॥

ತಾತ್ಪರ್ಯೇಣಾಹ

ಅ ॥ (೧) ೮ನೇ ಖಂಡದ ೪ನೇ ಮಂತ್ರದಲ್ಲಿ, ಎಲೋ ಶ್ವೇತಕೇತುವೇ ಎಲ್ಲಾ ಪ್ರಜೆಗಳಿಗೆ ಪರ ಬ್ರಹ್ಮನು ಕಾರಣನು. ಪ್ರಜೆಗಳು ಪರಬ್ರಹ್ಮನನ್ನು ಆಶ್ರಯಿಸಿರುತ್ತಾರೆ ಮುಕ್ತಿಯಲ್ಲಿಯೂ ಆವನನ್ನೇ ಆಶ್ರಯಿ ಸಿರುತ್ತಾರೆಂದು ಹೇಳಿದೆ. (೨)೯ನೇ ಖಂಡದ ೨ನೇ ಮಂತ್ರದಲ್ಲಿ ಶ್ರೀಪರಿಯನ್ನು ಹೊಂದಿರುತ್ತೇವೆ, ಹೊಂದು ವೆವು ಹೊಂದುತ್ತೇವೆಂದು ತಿಳಿಯುವುದಿಲ್ಲವೆಂದು ಹೇಳಿದೆ. (೩) ೧೦ನೇ ಖಂಡದ ೨ನೇ ಮಂತ್ರದಲ್ಲಿ ಶ್ರೀಹರಿಯಿಂದ ಹುಟ್ಟಿದರೂ ಶ್ರೀಹರಿಯಿಂದ ಹುಟ್ಟಿರುತ್ತೇವೆಂದು ತಿಳಿಯಲಿಲ್ಲವೆಂದಿರುವರು. (೪) ೧೧ನೇ ಖಂಡದ ೧ನೇ ಮಂತ್ರದಲ್ಲಿ ವೈಕ್ಷಜೀವನು ಅನಿರುದ್ಧನಿಂದ ದೇಹವನ್ನು ಹೊಂದಿ ನೀರನ್ನು ಬುಡದಿಂದ ಮೇಲಕ್ಕೆ ಎಳೆದುಕೊಂಡು ಸಂತೋಷದಿಂದ ಇರುತ್ತಾನೆಂದು ಹೇಳಿದೆ (೫) ೧೨ ಖಂಡದ ೧ನೇ ಮಂತ್ರದಲ್ಲಿ ಪೂಜ್ಯರೇ ಸೂಕ್ಷ್ಮಗಳಾದ ಬೀಜಗಳನ್ನು ನೋಡುತ್ತೇನೆಂದು ಮಗನು ಹೇಳಿದಾಗ ಈ ಬೀಜಗಳ ಮಧ್ಯದಲ್ಲಿ ಒಂದು ಬೀಜವನ್ನು ಒಡೆಯುವವನಾಗು, ಎಂದನು. ಮಗನು ಒಡೆದೆನೆಂದನು. ಆ ಒಡೆದ ಬೀಜದಲ್ಲಿ ಏನೇನನ್ನು

ನೋಡುತ್ತಿ. ಎಂದು ತಂದೆಯು ಕೇಳಿದಾಗ ಏನನ್ನೂ ನೋಡುವುದಿಲ್ಲವೆಂದನು ಆಗ ತಂದೆಯು ಹೀಗೆ ಹೇಳಿದ ಮಗನಿಗೆ ಸೂಕ್ಷ್ಮನಾದ ಶ್ರೀಹರಿಯ ಸಾಮರ್ಥ್ಯದಿಂದ ಪರಮಸೂಕ್ಷ್ಮನಾದ ಶ್ರೀಹರಿಯನ್ನು ನೋಡುವುದಿಲ್ಲವೆಂದನು. ಹೀಗೆಯೇ ದೊಡ್ಡ ಗೋಳಿಮರವು ಇದೆ. (೬) ೧೫ನೇ ಖಂಡದಲ್ಲಿ ಈ ಉಪ್ಪಿನ ಹೆಂಟೆಯನ್ನು ರಾತ್ರಿಯಲ್ಲಿ ನೀರಿನಲ್ಲಿಟ್ಟು ಬೆಳಿಗ್ಗೆ ನನ್ನ ಬಳಿಗೆ ಬಾ, ಎಂದು ತಂದೆಯು ಹೇಳಿದಾಗ ಮಗನು ಹಾಗೆಯೇ ಮಾಡಿ ಮುಂಜಾನೆ ತಂದೆಯ ಬಳಿಗೆ ಬರಲು ಆಗ ಮಗನಿಗೆ ರಾತ್ರಿಯಲ್ಲಿ ನೀರಿನಲ್ಲಿ ಹಾಕಿಟ್ಟಿದ್ದ ಉಪ್ಪಿನ ಹೆಂಟೆಯನ್ನು ತರಬೇಕೆಂದನು. ನೀರಿನಲ್ಲಿ ಕೈಯನ್ನು ಹರಡಿಸಿ ನಷ್ಟವಾದ ವಸ್ತುವಿನಂತೆ ತಿಳಿಯಲಿಲ್ಲ, ಎಂದನು. ಪೂರ್ವಭಾಗದಲ್ಲಿದ್ದ ನೀರನ್ನೂ, ಮಧ್ಯಭಾಗದಲ್ಲಿದ್ದ ನೀರನ್ನೂ, ಪಶ್ಚಿಮಭಾಗದಲ್ಲಿದ್ದ ನೀರನ್ನೂ ಆಚಮನ ಮಾಡು ಎಂದನು. ಅದು ಹೇಗೆ ಇದೆ ಎಂದು ಕೇಳಿದಾಗ ಎಲ್ಲವೂ ಉಪ್ಪಾಗಿಯೇ ಇದೆ, ಎಂದನು ಮಗನೇ ನೀರಿನಲ್ಲಿಯೇ ಕರಗಿಹೋದ ಸೂಕ್ಷ್ಮವಾದ ಉಪ್ಪನ್ನು ನೋಡುವುದಿಲ್ಲವಷ್ಟೇ. (ಲವಣರಸವು ಕಂಡರೂ ಉಪ್ಪು ಹೇಗೆ ಕಾಣುವುದಿಲ್ಲವೋ, ಹಾಗೆಯೇ ಶ್ರೀಹರಿಯ ಸಾಮರ್ಥ್ಯವು ಕಂಡರೂ ಶ್ರೀಹರಿಯು ಕಾಣುವುದಿಲ್ಲ, ಎಂದಿದೆ.) (೭) ೧೪ನೇ ಖಂಡದ ೨ನೇ ಮಂತ್ರದಲ್ಲಿ ಈ ದಿಕ್ಕಿನಲ್ಲಿ ಗಂಧಾರದೇಶವಿದೆ. ಈ ದಿಕ್ಕಿಗೆ ಹೋಗು ಎಂದು ಹೇಳಿದೆ, (೮) ೧೫ನೇ ಖಂಡದ ೧ನೇ ಮಂತ್ರದಲ್ಲಿ ಲಕ್ಷ್ಮೀದೇವಿಯು ಶ್ರೀಪರಮಾತ್ಮನಲ್ಲಿ ಸೇರಿ ತನ್ನ ವ್ಯಾಪಾರವನ್ನು ಬಿಟ್ಟಾಗ ಜೀವನು ಏನನ್ನೂ ತಿಳಿಯುವುದಿಲ್ಲವೆಂದು ಎಂದಿದೆ, (೯) ೧೬ನೇ ಖಂಡದ ೧ನೇ ಮಂತ್ರದಲ್ಲಿ ಈ ಕಳ್ಳನು ನೋಡುತ್ತಿರುವಂತೆ ಕದ್ದಿರುವನು, ಇವನು ತಿಳಿಯದ ಹಾಗೆ ಕದ್ದವನು ಎಂದಿದೆ. (೧೦) ಇದು ಮೊದಲಾದವಾಕ್ಯವು ಸ್ವತಃ ಭಿನ್ನವಾದ ವಸ್ತುವಿನಭೇದವನ್ನು ತಿಳಿಯದಿರುವುದರಿಂದ ಅನರ್ಥವನ್ನೂ, ಸೂಕ್ಷ್ಮವಾದುದರಿಂದ ಭೇದವನ್ನು ತಿಳಿಯಲು ಸಾಧ್ಯವಿಲ್ಲವೆಂದೂ. ಪರಬ್ರಹ್ಮನೇ ಕಾರಣನು. ಇದುಮೊದಲಾದುದನ್ನು ಒಂಭತ್ತಾವರ್ತಿ ದೃಷ್ಟಾಂತಕೊಟ್ಟು ತಾತ್ಪರ್ಯಪೂರ್ವಕವಾಗಿ ಹೇಳಿದೆ, ೩॥

ಪೀ ಈ ಒಂಭತ್ತು ಪ್ರಕರಣಗಳಲ್ಲಿಯೂ ಜೀವಬ್ರಹ್ಮರಿಗೆ ಐಕ್ಯವನ್ನೇ ಹೇಳಿರುತ್ತಾರೆ. ಏಕೆಂದರೆ ತತ್ತ್ವಮಸಿ ಎಂದು ಒಂಭತ್ತು ಸಲ ಹೇಳಿದೆ. ಅದುಕಾರಣ ಅವನ್ನನುಸರಿಸಿ ಸ್ವಮಪೀತಃ ಎಂಬ ಉಪಕ್ರಮವಾಕ್ಯವೂ ಜೀವಬ್ರಹ್ಮೈಕ್ಯವನ್ನೇ ಹೇಳುತ್ತದೆಂದನ್ನಬೇಕು, ಎಂದರೆ ಹಾಗೆ ಹೇಳಕೂಡದು, ಸ ಆತ್ಮಾತತ್ತ್ವಮಸಿ ಎಂಬುವಲ್ಲಿ ಎರಡು ಪ್ರಕಾರ ಪದಚ್ಛೇದ ಮಾಡಲಿಕ್ಕೆ ಬರುವುದಾದರೂ ಭೇದವನ್ನು ಹೇಳತಕ್ಕ ಸಂದೇಹವಿಲ್ಲದ ದೃಷ್ಟಾಂತವಾಕ್ಯಗಳ ಸಾಮರ್ಥ್ಯದಿಂದ ಅತತ್ ತ್ವಂ ಎಂದು ಪದವಿಂಗಡಿಸಿಕೊಂಡು ಭೇದವನ್ನೇ ಹೇಳುತ್ತದೆಂದು ನಿರ್ಣಯವಾಗುತ್ತದೆ, ಒಂದೇ ದೃಷ್ಟಾಂತದಿಂದ ಭೇದವನ್ನೇ ಹೇಳುತ್ತದೆಂದು ನಿರ್ಣಯಿಸಲಿಕ್ಕೆ ಬರುತ್ತದೆ, ಹೀಗೆ ಇರಲು ಒಂಭತ್ತು ಪ್ರಕರಣಗಳಲ್ಲಿಯೂ ಭೇದವಿಷಯದಲ್ಲಿಯೇ ದೃಷ್ಟಾಂತಗಳನ್ನು ಹೇಳಿದುದರಿಂದ ಭೇದವನ್ನೇ ಹೇಳತಕ್ಕವುಗಳೆಂದು ಸುತರಾಂ ಸಿದ್ಧಿಸುತ್ತದೆ. ಅಭೇದವೆಂಬ ವಿಷಯದಲ್ಲಿ ಯಾವುದೊಂದು ದೃಷ್ಟಾಂತವನ್ನು ಹೇಳಲಿಲ್ಲ. ಅದುಕಾರಣ ತತ್ ತ್ವಂ ಅಸಿ ಎಂದು ಪದವನ್ನು ವಿಂಗಡಿಸಿ ಅಭೇದವನ್ನೂ ಹೇಳುತ್ತದೆಂದು ಕೂಡ ಲಾರದೆನ್ನುತ್ತಾರೆ—

ಭಾ. ॥ (೧) ನಚಾಭೇದೇ ಕಶ್ಚಿದ್ದೃಷ್ಟಾಂತ ಉಕ್ತಃ । ನ ಹಿ ಶಕುನಿಸೂತ್ರ್ಯಯೋರ್ನಾನಾವೃಕ್ಷರಸಾನಾಂ ನದೀಸಮುದ್ರಯೋರ್ವೃಕ್ಷಪರ ಮಾ(ಪರಾ)ತ್ಮನೋರ್ಧಾನಾಪರಮಾ(ಪರಾ)ತ್ಮನೋರ್ಲವಣೋದಕಯೋಃ ಪುರುಷಗಂಧಾರಯೋರ್ನಿಯತಜ್ಞಾನಾನಿಯತಜ್ಞಾನಯೋಶ್ಚೋರಾಪಹ್ರಿಯಮಾಣಯೋಶ್ಚಾಭೇದೋಽಸ್ತಿ । (೨) ಮಹಾತಾತ್ಪರ್ಯವಿರೋಧಶ್ಚಾಭೇದೇ । ವಿಷ್ಣೋಃ ಪರಮೋಕ್ತರ್ಷೇ ಹಿ ಸರ್ವಪ್ರಮಾಣಾನಾಂ ಮಹಾತಾತ್ಪರ್ಯಂ ಭಗವತಾಽಭಿಹಿತಂ । (೩) ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ

ಚ । ಕ್ಷರಸ್ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ । (೪) ಉತ್ತಮಃ ಪುರುಷ-ಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈ-ಶ್ವರಃ । ಯಸ್ಮಾತ್ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ । ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ । (೫) ಯೋ ಮಾಮೇವಮಸಮ್ಮೂಢೋ ಜಾನಾತಿ ಪುರುಷೋತ್ತಮಮ್ । ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ । ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾಽನಘ । ಏತದ್ಬುಧ್ವಾ ಬುದ್ಧಿಮಾನ್ ಸ್ಯಾ-ತ್ಕೃತಕೃತ್ಯಶ್ಚ ಭಾರತ ಇತಿ ॥ ॥ ೪ ॥

ಅ ॥ (೧) ಅಭೇದವಿಷಯದಲ್ಲಿ ಯಾವುದೊಂದು ದೃಷ್ಟಾಂತವನ್ನೂ ಹೇಳಲಿಲ್ಲ. ಹೇಗೆಂದರೆ-ಹಗ್ಗ ಹಕ್ಕಿಗಳಿಗೆ ನಾನಾವೃಕ್ಷ, ರಸಗಳಿಗೆ. ಗಂಗಾದಿನದಿ ಸಮುದ್ರಗಳಿಗೆ ವೃಕ್ಷಪರಮಾತ್ಮರಿಗೆ, ಬೀಜ ಪರ ಮಾತ್ಮರಿಗೆ, ಉಳ್ಳ ನೀರುಗಳಿಗೆ, ಧನಿಕ ಗಂಧಾರದೇಶಗಳಿಗೆ. ಪರಾಧೀನ ಜ್ಞಾನವುಳ್ಳಜೀವ ಸ್ವತಂತ್ರ ಜ್ಞಾನವುಳ್ಳಈಶ್ವರ, ಇವರಿಗೆ ಕಳ್ಳಕದ್ದವಸ್ತು ಇವುಗಳಿಗೆ ಅಭೇದವು ಇಲ್ಲವಷ್ಟೆ. (ಈ ಒಂಭತ್ತು ದೃಷ್ಟಾಂತ ಗಳಲ್ಲಿಯೂ ಅಭೇದವನ್ನು ಹೇಳಲೇ ಇಲ್ಲ.) (೨) (ಸ್ವಮಪೀತಃ ಎಂಬುವಲ್ಲಿ ಜೀವೇಶಾಭೇದವನ್ನು ಹೇಳುವವರೆಂದು ಇಟ್ಟುಕೊಂಡರೆ ಇನ್ನೊಂದು ದೋಷ ಹೇಳುತ್ತಾರೆ.—) ಐಕ್ಯವೆಂದು ಹೇಳಿದರೆ ಮಹಾ ತಾತ್ಪರ್ಯಕ್ಕೆ ವಿರೋಧವು ಬರುತ್ತದೆ. (ಹೇಗೆಂದರೆ) ಶ್ರೀವಿಷ್ಣುವು ಸರ್ವೋತ್ಕೃಷ್ಟನು ಎಂಬುವಲ್ಲಿಯೇ ಪ್ರತ್ಯಕ್ಷ ಮೊದಲಾದ ಎಲ್ಲಾ ಪ್ರಮಾಣಗಳಿಗೂ ಮುಖ್ಯ ತಾತ್ಪರ್ಯವೆಂದು ಶ್ರೀವೇದವ್ಯಾಸರಿಂದಲೂ ಶ್ರೀ ಕೃಷ್ಣನಿಂದಲೂ ಹೇಳಲ್ಪಟ್ಟದೆ (ಐಕ್ಯವೆಂದಾಪರೆ ಸರ್ವೋತ್ಕೃಷ್ಟನೆಂಬುವುದು ಆಗಲಾರದು.) (೩) (ಎಲ್ಲಿ ಹೇಳಿದೆ ಎಂದರೆ ಆ ಗೀತಾವಾಕ್ಯಗಳನ್ನು ಹೇಳುತ್ತಾರೆ.) ನಿಯಮ್ಯ ವರ್ಗದಲ್ಲಿ ಕ್ಷರ ಅಕ್ಷರ ಎಂದು ಇಬ್ಬರು ಪುರುಷರು. ಚತುರ್ಮುಖನೇ ಮೊದಲಾದ ಎಲ್ಲಾ ಪ್ರಾಣಿಗಳು ಶರೀರನಾಶವುಳ್ಳವರಾದುದರಿಂದ ಕ್ಷರ ರೆನ್ನಿಸುತ್ತಾರೆ. ನಿರ್ವಿಕಾರಳಾದ ಲಕ್ಷ್ಮೀದೇವಿಯು ನಾಶವಿಲ್ಲದ ಶರೀರವಿರುವವಳಾಗಿದುದರಿಂದ ಅಕ್ಷರ ಳೆನಿಸುತ್ತಾಳೆ. (ಗೀ. ಅ. ೧೫ ಶ್ಲೋ. ೧೬) (೪) ಇವರಿಬ್ಬರಿಂದಲೂ ಭಿನ್ನನಾದ ಉತ್ತಮನಾದ ಪುರುಷನು ಪರಮಾತ್ಮನೆನಿಸುತ್ತಾನೆ. ನಾಶವಿಲ್ಲದ ಶ್ರೀಹರಿಯು **ಭೂಃ ಭುವಃ ಸ್ವಃ** ಎಂಬ ಮೂರು ಲೋಕಗಳನ್ನು ಪ್ರವೇಶಿಸಿ ಧರಿಸುತ್ತಿರುತ್ತಾನೆ. ನಾನು ಕ್ಷರ ಅಕ್ಷರರನ್ನು ವಿಶಾರದವನಾದುದರಿಂದ ಉತ್ತಮನು. ಆದ ಕಾರಣ ಪೌರುಷೇಯ ಗ್ರಂಥಗಳಲ್ಲಿಯೂ ಅಪೌರುಷೇಯ ಗ್ರಂಥಗಳಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನು. (ಅ. ೧೫ ಶ್ಲೋ. ೧೭ ೧೮) (೫) ನಾನು ಸರ್ವೋತ್ತಮನೆಂಬುದು ಸುಳ್ಳು ಎಂಬ ಅಜ್ಞಾನ ವಿಲ್ಲದವನಾಗಿ ನನ್ನನ್ನು ಪುರುಷೋತ್ತಮನನ್ನಾಗಿ ತಿಳಿಯುವವನು ಸರ್ವಶಾಸ್ತ್ರಾರ್ಥಗಳನ್ನು ತಿಳಿದವ ನಾಗಿ ಸರ್ವಪ್ರಕಾರದಿಂದಲೂ ನನ್ನನ್ನು ಹೊಂದುತ್ತಾನೆ. (ಇದನ್ನು ಯೋಗ್ಯರಿಗೇನೇ ಹೇಳಬೇಕು. ಅಯೋಗ್ಯರಿಗೆ ಹೇಳಬಾರದು-ಏಕೆಂದರೆ, ನಿರ್ದೋಷಿಯಾದ ಅರ್ಜುನನೇ ಸರ್ವಾಂತರ್ಯಾಮಿತ್ವಾದಿಗಳು ಉಪದೇಶಕ್ಕೆ ಯೋಗ್ಯಗಳು. ಅತಿರೋಷ್ಯಗಳು. ಅವನ್ನು ನಿನಗೆ ಹೇಳಿದೆನು. ಇದನ್ನು ತಿಳಿದು ಉಪದೇಶ್ಯ ಜ್ಞಾನಿಯಾಗುವನು, ಮುಕ್ತನೂ ಆಗುವನು, ಎಂದು ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ ಅರ್ಜುನನಿಗೆ ಉಪದೇಶಿಸಿರುವನು.)(ಗೀ. ಅ ೧೫ ಶ್ಲೋ. ೧೯-೨೦) ಇಲ್ಲಿ ಶ್ರೀಕೃಷ್ಣನು ಕ್ಷರ ಅಕ್ಷರರಿಂದುತ್ತಮನೆಂಬುವಲ್ಲಿ ಪೌರುಷೇಯ ಅಪೌರುಷೇಯಾಗಮಗಳಿಗೆ ಮಹಾತಾತ್ಪರ್ಯವಿದೆ, ಎಂದು ಇಲ್ಲಿ ಮೋಕ್ಷಮೊದಲಾದ ಫಲಹೇಳಿರುವುದರಿಂದ ತಿಳಿಯುತ್ತದೆ. ॥ ೪ ॥

ಪೀ—ಯಾರ ಜ್ಞಾನದಿಂದ ಮೋಕ್ಷವಾಗುತ್ತದೋ ಅವನಲ್ಲಿಯೇ ಸಮಸ್ತ ಆಗಮಗಳಿಗೆ ಮಹಾ ತಾತ್ಪರ್ಯವನ್ನು ಹೇಳಬೇಕು. ಮೋಕ್ಷವು ಸರ್ವಲೋಕಗಳಿಗೂ ಮುಖ್ಯಸ್ವಾಮಿಯಾದ ಶ್ರೀಕೃಷ್ಣನ

ಜ್ಞಾನದಿಂದಲೇ ಆಗುತ್ತದೆ. ಆದುಕಾರಣ ಶ್ರೀಹರಿಯಲ್ಲಿಯೇ ಎಲ್ಲಾ ಆಗಮಗಳಿಗೂ ಮುಖ್ಯತಾತ್ಪರ್ಯ ವೆಂಬ ಅಭಿಪ್ರಾಯದಿಂದ ಹೇಳುತ್ತಾರೆ –

ಭಾ. ॥ (೧) **ಭೋಕ್ತಾರಂ ಯಜ್ಞತಪಸಾಂ ಸರ್ವಲೋಕಮಹೇಶ್ವರಂ । ಸುಹೃದಂ ಸರ್ವಭೂತಾನಾಂ ಜ್ಞಾತ್ವಾ ಮಾಂ ಶಾಂತಿಮೃಚ್ಛತಿ ।** (೨) **ಜ್ಞಾನಂ ತೇಽಹಂ ಸವಿಜ್ಞಾನ-ಮಿದಂ ವಕ್ಷ್ಯಾಮ್ಯಶೇಷತಃ । ಯಜ್ಜ್ಞಾತ್ವಾ ನೇಹ ಭೂಯೋಽನ್ಯತ್ ಜ್ಞಾತವ್ಯಮವಶಿಷ್ಯತೇ ।** (೩) **ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ । ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ।** (೪) **ರಾಜವಿದ್ಯಾ ರಾಜಗುಹ್ಯಂ ಪವಿತ್ರಮಿದಮುತ್ತಮಂ । ಪ್ರತ್ಯಕ್ಷಾವಗಮಂ ಧರ್ಮ್ಯಂ ಸುಸುಖಂ ಕರ್ತುಮವ್ಯಯಂ ।** (೫) **ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರಂತಪ । ಅಪ್ರಾಪ್ಯ ಮಾಂ ನಿವರ್ತಂತೇ ಮೃತ್ಯುಸಂಸಾರವರ್ತ್ಮನಿ ।** (೬) **ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ । ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ।** (೭) **ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಂ । ಭೂತಭೃನ್ನ ಚ ಭೂತಸ್ಥೋ ಮಮಾತ್ಮಾ ಭೂತಭಾವನಃ ।** (೮) **ಯಥಾಕಾಶಸ್ಥಿತೋ ನಿತ್ಯಂ ವಾಯುಃ ಸರ್ವತ್ರಗೋ ಮಹಾನ್ । ತಥಾ ಸರ್ವಾಣಿ ಭೂತಾನಿ ಮತ್ಸ್ಥಾನೀತ್ಯುಪಧಾರಯ ।** (೯) **ಸರ್ವಭೂತಾನಿ ಕೌಂತೇಯ ಪ್ರಕೃತಿಂ ಯಾಂತಿ ಮಾಮಿಕಾಂ । ಕಲ್ಪಕ್ಷಯೇ ಪುನಸ್ತಾನಿ ಕಲ್ಪಾದೌ ವಿಸೃಜಾಮ್ಯಹಂ ।** (೧೦) **ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ । ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ।** (೧೧) **ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ । ಉದಾಸೀನವದಾಸೀನಮಸಕ್ತಂ ತೇಷು ಕರ್ಮಸು ।** (೧೨) **ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ । ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ ।** (೧೩) **ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ । ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ ।** (೧೪) **ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ । ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ।** (೧೫) **ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ । ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಂ ।** (೧೬) **ಯೋ ಮಾಮಜಮನಾದಿಂ ಚ ವೇತ್ತಿ ಲೋಕಮಹೇಶ್ವರಂ । ಅಸಮ್ಮೂಢಃ ಸ ಮರ್ತ್ಯೇಷು ಸರ್ವಪಾಪೈಃ ಪ್ರಮುಚ್ಯತೇ ॥** ॥ ೫ ॥

ಅ ॥ (೧) ಜ್ಯೋತಿಷ್ಟೋಮಾದಿಯಾಗ, ಕೃಚ್ಛ್ರಚಾಂದ್ರಾಯಣಾದಿ ತಪಸ್ಸು ಇವುಗಳ ಸಾರ ಭೋಕ್ತನು, ವ.ತ್ತು ಅವುಗಳನ್ನು ಕಾಪಾಡುವವನು (ಅವುಗಳನ್ನು ಮಾಡಿದವರಿಗೆ ಫಲವನ್ನು ಕೊಡುವವನು.) ಸಮಸ್ತ ಲೋಕಗಳಿಗೆ ನಿಯಾಮಕರಾದ ಬ್ರಹ್ಮಾದಿಗಳಿಗೆ ನಿಯಾಮಕನು, ಸಮಸ್ತ ಪ್ರಾಣಿಗಳಿಗೆ ಉಪಕಾರ ಮಾಡುವವನು, ಮೋಕ್ಷಕ್ಕೆ ಕಾರಣನು ಇಂತಹ ನನ್ನನ್ನು ಧ್ಯಾನಿಸಿ ಅಧಿಕಾರಿಯು ಪ್ರತ್ಯಕ್ಷೀಕರಿಸಿ ಮೋಕ್ಷ ಹೊಂದುತ್ತಾನೆ (ಗೀ. ಅ. ೫ ಶ್ಲೋ. ೨೯) (೨) (ಮತ್ತು **ಜ್ಞಾನಂ ತೇಽಹಂ** ಎಂದು ಮೊದಲು ಹೇಳಿ **ಯಜ್ಜ್ಞಾತ್ವಾ ನೇಹ** ಯಾವನನ್ನು ತಿಳಿದರೆ ವೇದಾದಿಗಳಲ್ಲಿ ತಿಳಿಯುವ ಅಂಶವು ಬೇರೆ ಉಳಿಯುವುದಿಲ್ಲ, ಎಂದು ಹೊಗಳಿ **ಮತ್ತಃ ಪರತರಂ ನಾನ್ಯತ್** ನನ್ನಿಂದ ಶ್ರೇಷ್ಠವಾದುದು ಇನ್ನೊಂದು ಇಲ್ಲ, ಎಂದೂ, **ಮಯಿ ಸರ್ವಂ** ಎಲ್ಲಾ ಜಗತ್ತು ನನ್ನ ಅಧೀನದಲ್ಲಿದೆ, ಎಂದು ಹೇಳಿದುದರಿಂದ ಶ್ರೀಹರಿಯೇ ಸರ್ವೋತ್ತಮನೆಂದು ಹೇಳಿದುದರಿಂದಲೂ ಆದರಲ್ಲಿಯೇ ಎಲ್ಲಾ ಆಗಮಗಳಿಗೂ ಮಹಾತಾತ್ಪರ್ಯವೆಂಬ ಅಭಿಪ್ರಾಯದಿಂದ ಹೇಳುತ್ತಾರೆ—) ಎಲೋ ಅರ್ಜುನನೇ, ನನ್ನ ಸಾಮಾನ್ಯ ಮಹಿಮೆಯನ್ನೂ **ವಿಶೇಷ ಮಹಿಮೆಯನ್ನೂ** ಸಂಪೂರ್ಣ (ಅರ್ಜುನನಿಗೆ ಯೋಗ್ಯವಾದುದೆಲ್ಲವನ್ನೂ) ಹೇಳುವೆನು. ಯಾವ ಮಹಿಮೆಯನ್ನು ತಿಳಿದರೆ ಬೇರೆ ತಿಳಿಯುವ ಅಂಶವು ಉಳಿಯುವುದಿಲ್ಲ. (ಅ. ೭ ಶ್ಲೋ ೨) (೩) **ನಾನೇ ಸರ್ವೋತ್ಕೃಷ್ಟನು** ನನ್ನಿಂದ ಬೇರೆ ಯಾವುದೊಂದೂ ಸರ್ವೋತ್ಕೃಷ್ಟವಾದುದು ಇಲ್ಲ. ಸೂತ್ರ (ಹಗ್ಗ) ದಲ್ಲಿ ಮಣಿಗಳ ಸಮೂಹಗಳು ಪೋಣಿಸಲ್ಪಟ್ಟಂತೆಯೇ ಸಂಪೂರ್ಣ ಜಗತ್ತು ನನ್ನಲ್ಲಿ ಆಶ್ರಿತವಾಗಿದೆ. (ಅ- ೭ ಶ್ಲೋ. ೭) (೪) (ಶ್ರೀಹರಿಯು ಸರ್ವೋತ್ತಮನೆಂಬು

ವಲ್ಲಿಯೇ ಎಲ್ಲಾ ಆಗಮಗಳಿಗೂ ಮಹಾತಾತ್ಪರ್ಯವೆಂಬುವಲ್ಲಿ ಇನ್ನೊಂದು ಪ್ರಮಾಣ ಹೇಳುತ್ತಾರೆ—(ಈ ಮುಂದಿನ ಪ್ರಮೇಯವು ವಿದ್ಯೆಗಳಲ್ಲಿ ಪ್ರಧಾನ ವಿದ್ಯೆಯು. ಗೋಪ್ಯಗಳಲ್ಲಿ ಮುಖ್ಯ ಗೋಪ್ಯವು, ಪಾವಿತ್ರ್ಯಕ್ಕೆ ಕಾರಣವು, ಅತ್ಯುತ್ತಮವಾದುದು, ಸರ್ವೇಂದ್ರಿಯಗಳಿಗೆ ಪ್ರೇರಕನಾದ ಶ್ರೀಹರಿಯ ಅಪರೋಕ್ಷಜ್ಞಾನಕ್ಕೆ ಸಾಧನವಾದುದು ಇಂತಹುದು. ಸರ್ವ ಜಗತ್ತನ್ನು ಧರಿಸತಕ್ಕ ಶ್ರೀಹರಿಯ ಪರೋಕ್ಷ ಜ್ಞಾನವು ಸುಲಭದಿಂದ ತಿಳಿಯಲಿಕ್ಕೆ ಸಾಧ್ಯವು. (ಅ. ೯ ಶ್ಲೋ. ೨) (೫) (ಇಂತಹ ಪರೋಕ್ಷಜ್ಞಾನವು ಸುಲಭಸಾಧ್ಯವಾದರೆ ಯಾವನೂ ಸಂಸಾರಿಯಾಗಲಾರನು, ಎಂದರೆ—ಅಥವಾ ಈ ವಿದ್ಯೆಯಲ್ಲಿ ಅಸಕ್ತಿಯಿಲ್ಲದವರನ್ನು ನಿಂದಿಸಿಯದೆ ಎನ್ನುತ್ತಾರೆ—) ಎಲೋ ಅರ್ಜುನನೇ, ಭಗವದ್ವಿಷಯಕವಾದ ಈ ಜ್ಞಾನದಲ್ಲಿ ಶ್ರದ್ಧೆಯಿಲ್ಲದ ಪುರುಷರು ನನ್ನನ್ನು ಹೊಂದದೆ ಜನನ ಮರಣಾದಿ ರೂಪವಾದ ಸಂಸಾರದಲ್ಲಿ ತಿರುಗಾಡಿಕೊಂಡು ಇರುತ್ತಾರೆ. (ತೇಲಿಕೊಂಡು ಇರುತ್ತಾರೆ.) (ಶ್ಲೋ ೩) (೬) ಸರ್ವರಿಗೆ ಪ್ರಕಟವಾಗದಿರುವ ಶರೀರವುಳ್ಳ ನಾನು ಸಂಪೂರ್ಣ ಜಗತ್ತನ್ನು ವ್ಯಾಪಿಸಿಕೊಂಡಿದ್ದೇನೆ. ಎಲ್ಲಾ ಪ್ರಾಣಿಗಳೂ ನನ್ನ ಅಧೀನದಲ್ಲಿರುವವುಗಳು ನಾನು ಅವುಗಳ ಅಧೀನದಲ್ಲಿಲ್ಲ. (ಅ. ೯ ಶ್ಲೋ. ೪) (೭) ಸಮಸ್ತ ಪ್ರಾಣಿಗಳು ನನ್ನ ಅಧೀನದಲ್ಲಿದ್ದರೂ ಪೃಥಿವಿಯಲ್ಲಿ ವಸ್ತುಗಳು ಇದ್ದಂತೆ ನನ್ನಲ್ಲಿ ಇರುವವುಗಳು ಅಲ್ಲ. ನನ್ನ ಪ್ರಭಾವ (ಸಾಮರ್ಥ್ಯ) ವನ್ನು ನೋಡು. (ಶ್ಲೋ. ೫) (೮) (ಹಾಗಾದರೆ ಕೆಲವರು ಹೇಗೆ ನಿನ್ನನ್ನು ತಿರಸ್ಕರಿಸುವರು ಎಂದರೆ—) ತಾಮಸರು ಸರ್ವದಾ ಇರತಕ್ಕ ಸರ್ವತ್ರ ವ್ಯಾಪ್ತವಾದ ಅನಂತ ಗುಣಗಳಿರುವ ಉತ್ತಮವಾದ ನನ್ನ ತತ್ತ್ವವನ್ನು ತಿಳಿಯದೆ ಮೂಢರಿಗೆ ಮನುಷ್ಯರಂತೆ ತೋರುವ ನನ್ನನ್ನು ಅವಮಾನಿಸುತ್ತಾರೆ. (ಶ್ಲೋ. ೧೧) (೯) ವ್ಯರ್ಥವಾದ ಆಶೆಯುಳ್ಳವರು (ಭಗವದ್ವೇಷಿಗಳು ಅಮುಷ್ಮಿಕವಾದುದನ್ನು ಯಾವುದನ್ನೂ ಹೊಂದುವುದಿಲ್ಲ) ವ್ಯರ್ಥವಾದ ಯಾಗಾದಿ ಕರ್ಮಗಳುಳ್ಳವರು, ವ್ಯರ್ಥವಾದ ತತ್ವಜ್ಞಾನವುಳ್ಳವರು (ಅಂದರೆ–ಬ್ರಹ್ಮ ರುದ್ರಾದಿಗಳಲ್ಲಿ ಭಕ್ತ್ಯಾದಿಗಳನ್ನು ಮಾಡಿ ಅಮುಷ್ಮಿಕವಾದ ಯಾವುದೊಂದೂ ಪುರುಷಾರ್ಥವನ್ನು ಹೊಂದುವುದಿಲ್ಲ.) ವಿರುದ್ಧ ಮನಸ್ಸುಳ್ಳವರು ಇಂತಹವರು ಬುದ್ಧಿಯನ್ನು ಕೆಡಿಸುವ ರಾಕ್ಷಸರ ಮತ್ತು ಅಸುರರ ಸ್ವಭಾವವನ್ನು ಹೊಂದಿರುವುದರಿಂದ ನನ್ನನ್ನು ಅವಮಾನಿಸುತ್ತಾರೆ.)(ಶ್ಲೋ.೧೨) (೧೦) ಎಲೋ ಅರ್ಜುನನೇ, ಮಹಾನುಭಾವರಾದವರು ಮುಕ್ತಿಯೋಗ್ಯರಾದ ಉತ್ತಮ ಜೀವರ ಸಂಬಂಧಿಯಾದ ಸ್ವಭಾವವನ್ನಾಶ್ರಯಿಸಿ ಸರ್ವರಿಗೂ ಕಾರಣನೂ ನಾಶವಿಲ್ಲದವನೂ ಆದ ನನ್ನನ್ನು ತಿಳಿದು ಬೇರೆ ಕಡೆ ಮನಸ್ಸನ್ನು ಇಡದೆ ಸೇವಿಸುತ್ತಾರೆ. (ಶ್ಲೋ. ೧೩) (೧೧) ಹೀಗೆ ಶ್ರೀಹರಿಯು ಸರ್ವೋತ್ಕೃಷ್ಟನು ಎಂಬ ಜ್ಞಾನವೇ ಮೋಕ್ಷಕ್ಕೆ ಸಾಧನವೆಂದು ಹೇಳಿದುದರಿಂದ ಎಲ್ಲಾ ಆಗಮಗಳಿಗೂ ಆದರಲ್ಲಿಯೇ ತಾತ್ಪರ್ಯವೆಂದು ತಿಳಿಯಬೇಕೆನ್ನುತ್ತಾರೆ—) ಯಾವನು ನನ್ನನ್ನು ಉತ್ಪತ್ತಿಯಿಲ್ಲದವನೆಂದೂ ಸರ್ವರಿಗೆ ಜೇಷ್ಠಕನೆಂದೂ ಸರ್ವರಿಗೆ ಕಾರಣನೆಂದೂ, ಅಥವಾ ಮುಖ್ಯಪ್ರಾಣನಿಗೆ ಕಾರಣನೆಂದೂ ಸರ್ವರಿಗೂ ನಿಯಾಮಕನೆಂದೂ ತಿಳಿಯುತ್ತಾನೋ ಅತನು ಭ್ರಾಂತಿಯಿಲ್ಲದವನಾಗಿ ಎಲ್ಲಾ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ. ॥ ೫ ॥

ಪೀ—ಜ್ಞಾನಾನಾಮುತ್ತಮಂ ಜ್ಞಾನಂ ಪ್ರವಕ್ಷ್ಯಾಮಿ ಎಂದು ಪ್ರತಿಜ್ಞೆ ಮಾಡಿಕೊಂಡು **ಯಜ್ಜ್ಞಾತ್ವಾ** ಎಂದು ವೇದಾರ್ಥವನ್ನು ವಿಚಾರಮಾಡುವವರಿಗೆ ಈತನ ಜ್ಞಾನದಿಂದಲೇ ಮೋಕ್ಷವಾಗುತ್ತದೆಂದು ಪ್ರಶಂಸೆಮಾಡಿ **ಮಮ ಯೋನಿಃ ಲಕ್ಷ್ಮೀದೇವಿಗೆ ಗಂಡನು** ಎಂದು ಸರ್ವೋತ್ಕರ್ಷವನ್ನು ಹೇಳಿದುದರಿಂದ ಆ ಶ್ರೀಹರಿಯಲ್ಲಿಯೇ ಎಲ್ಲಾ ಆಗಮಗಳಿಗೂ ಮುಖ್ಯ ತಾತ್ಪರ್ಯವೆಂದು ತಿಳಿಯುತ್ತದೆ ಎನ್ನುತ್ತಾರೆ-

ಭಾ. ॥ (೧) **ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಂ । ಯಜ್ಜ್ಞಾತ್ವಾ ಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ । (೨) ಮಮ ಯೋನಿ-**

ರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ । ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ೬ ॥

ಅ ॥ (೧) ಯಾವುದನ್ನು ತಿಳಿದು ಧ್ಯಾನಾದಿಗಳನ್ನು ಮಾಡುವವರೆಲ್ಲರೂ ಸಂಸಾರದಿಂದ ಬಿಡುಗಡೆ ಹೊಂದಿ ಮೋಕ್ಷವನ್ನು ಹೊಂದುತ್ತಾರೋ, ಅಂತಹ ತಿಳಿಯಲರ್ಹಗಳಾದ ವಸ್ತುಗಳ ಮಧ್ಯದಲ್ಲಿ ಉತ್ತಮವಾದ ತಿಳಿಯಬೇಕಾದುದನ್ನು ಮರಳಿ ಹೇಳುವೆನು (ಗೀ. ಅ. ೧೪ ಶ್ಲೋ. ೧) (೨) ಶ್ರೀಮೃಳಾದ ಲಕ್ಷ್ಮೀ ದೇವಿಯು ನನ್ನ ಪತ್ನಿಯು. ಆವಳಲ್ಲಿ ಗರ್ಭಧಾರಣೆ ಮಾಡುತ್ತೇನೆ. (ಅಂದರೆ ತನ್ನ ಹೊಟ್ಟೆಯೊಳಗೆ ಇದ್ದ ಇಪ್ಪತ್ತನಾಲ್ಕು ತತ್ವಗಳ ಅಂಶಗಳಿಂದ ಕೂಡಿದ ಜೀವರನ್ನು ರೇತೋರೂಪದಿಂದ ಹೊರಪಡಿಸಿ ಲಕ್ಷ್ಮೀದೇವಿಯ ಹೊಟ್ಟೆಯಲ್ಲಿಡುತ್ತೇನೆ.) ಅದರಿಂದ ಸಮಸ್ತ ಪ್ರಾಣಿಗಳಿಗೆ ದೇಹಸಂಯೋಗರೂಪವಾದ ಉತ್ಪತ್ತಿಯಾಗುತ್ತದೆ. (ಶ್ಲೋ. ೩) ॥ ೬ ॥

ಪೀ—ಹೀಗೆ ಗೀತಾವಚನಗಳಿಂದ ಶ್ರೀಹರಿಯು ಸರ್ವೋತ್ಕೃಷ್ಟನು ಎಂಬುವಲ್ಲಿಯೇ ಎಲ್ಲಾ ಆಗಮಗಳಿಗೂ ಮಹಾತಾತ್ಪರ್ಯವೆಂದು ತಿಳಿಯುತ್ತದೆಂದರು. ಆ ವಿಷಯದಲ್ಲಿಯೇ ಸ್ಪಷ್ಟವಾದ ಬೇರೆ ಪ್ರಮಾಣವನ್ನು ಹೇಳುತ್ತಾರೆ—

ಭಾ. ॥ (೧) ಯೇ ಮಾಂ ಜ್ಞಾತ್ವಾ ಗುಣೈಃ ಪೂರ್ಣಂ ನ ಚಲಂತಿ ತತಃ ಕ್ವಚಿತ್ । ತೈರೇವಾಪ್ಯೋ ನ ಚೈವಾನ್ಯೈರಹಂ ಸರ್ವೇಶ್ವರೇಶ್ವರಃ । (೨) ಯೇ ತು ಮದ್ಗುಣಸಂಪೂರ್ತೌ ಜ್ಞಾನಸ್ಥೈಹಸ್ಥಿರಾತ್ಮಕಾಃ । ತೇಷಾಂ ಹಸ್ತಗತೋ ಮೋಕ್ಷೋ ಮಾಸೇವ ಸ್ಮರತಾಂ ಸದಾ । (೩) ಯೇ ಮನ್ಯಂತೇ ಗುಣಾಪೂರ್ತಿಂ ತಮಸ್ತೇಷಾಂ ಪರಾಯಣಂ । ನ ಚ ತೇಭ್ಯೋ ಪ್ರಿಯೋ ಮಹ್ಯಂ ಯಶ್ಚ ಸ್ಯಾದ್ಗುಣಪೂರ್ತಿವಿತ್ । ಸ ಮಾಮಾಪ್ನೋತಿ ನಿಯತಂ ನ ಚ ತಸ್ಮಾತ್ಪ್ರಿಯೋ ಮಮ । (೪) ಪ್ರಮಾಣಾನ್ಯಖಿಲಾನ್ಯೇವ ತರ್ಕಾಶ್ಚೈತತ್ಪರಾಃ ಸದಾ । ಏತದ್ವಿರುದ್ಧಂ ಯನ್ಮಾನಂ ತರ್ಕಶ್ಚಾಭಾಸ ಏವ ತು ಇತ್ಯಾದೌ ॥ ೬ ॥

ಅ ॥ (೧) ಯಾರು ನನ್ನನ್ನು ಸರ್ವಗುಣಪರಿಪೂರ್ಣನನ್ನಾಗಿ ತಿಳಿದು ಯಾವಾಗಲೂ ಅದರಲ್ಲಿಯೇ ಆಸಕ್ತರಾಗಿರುತ್ತಾರೋ, ಅಂತಹವರಿಂದಲೇ ಸರ್ವರಿಗೆ ನಿಯಾಮಕರಾದ ಬ್ರಹ್ಮಾದಿಗಳಿಗೂ ಸ್ವಾಮಿಯಾದ ನಾನು ಹೊಂದಲ್ಪಡುವೆನು ಬೇರೆಯವರಿಂದ ಹೊಂದಲ್ಪಡಲಾರೆನು. (೨) (ಸ್ಥಿರವಾದ ಜ್ಞಾನವು ಮಾತ್ರ ಮೋಕ್ಷಕ್ಕೆ ಕಾರಣವಲ್ಲ. ಪರಂತು ಸ್ಥಿರವಾದ ಭಕ್ತಿಯೂ ಮೋಕ್ಷಕ್ಕೆ ಕಾರಣವು ಎನ್ನುತ್ತಾರೆ–) ಯಾರು ನನಗೆ ಗುಣಗಳು ಪೂರ್ಣಗಳಾಗಿವೆ ಎಂಬುವಲ್ಲಿ ಸ್ಥಿರವಾದ ನಿರಂತರ ಜ್ಞಾನ. ಭಕ್ತಿಯುಳ್ಳವರೋ, ಅಂತಹ ಸದಾ ನನ್ನನ್ನೇ ಸ್ಮರಿಸುತ್ತಿರುವವರಿಗೆ ಮೋಕ್ಷವು ಸುಲಭಸಾಧ್ಯವು. (ವಿಪರೀತ ಜ್ಞಾನಿಗಳಿಗೆ ಅನರ್ಥ ಹೇಳುತ್ತಾರೆ.) ಯಾರು ಗುಣಗಳು ಅಪೂರ್ಣಗಳೆಂದು ತಿಳಿಯುತ್ತಾರೋ, ಅವರಿಗೆ ಅಂಧಂತಮಸ್ಸು ದೊರಕುವುದು: ಅವರಿಗಿಂತ ನನಗೆ ಅಪ್ರಿಯರಾದವರು ಯಾರೂ ಇಲ್ಲ· ಶ್ರೀಹರಿಗೆ ಗುಣಗಳು ಪೂರ್ಣಗಳಿವೆ, ಎಂದು ತಿಳಿದವರು ನಿಯಮವಾಗಿ ನನ್ನನ್ನು ಹೊಂದುತ್ತಾರೆ. ಅದುಕಾರಣ ಪೂರ್ಣಗುಣಗಳಿವೆ ಎಂದು ತಿಳಿದವರಕ್ಕಿಂತ ಇನ್ನೊಬ್ಬನು ನನಗೆ ಪ್ರಿಯನಾದವನು ಇಲ್ಲ (೪) ಹಿಂದೆ ಹೇಳಿದ ಪ್ರಕಾರ ಶ್ರೀಹರಿಯು ಸರ್ವಗುಣಗಳಿಂದ ಪರಿಪೂರ್ಣನು ಎಂಬ ಜ್ಞಾನವೇ ಶ್ರೀಹರಿಗೆ ಪ್ರೀತಿಯನ್ನು ಹುಟ್ಟಿಸಿ ಮೋಕ್ಷಕ್ಕೆ ಕಾರಣವು. ಅದುಕಾರಣ ಮೋಕ್ಷವೆಂಬ ಪ್ರಯೋಜನವನ್ನು ಹುಟ್ಟಿಸುವ ಪ್ರತ್ಯಕ್ಷ ಅನುಮಾನ ಆಗಮ ಪ್ರಮಾಣಗಳೂ ದೂಷಣಾನುಮಾನಗಳೂ ಎಲ್ಲವೂ ಸದಾ ಗುಣಪರಿಪೂರ್ಣನೆಂಬ ಜ್ಞಾನವನ್ನು ಹುಟ್ಟಿಸುವುದಕ್ಕಾಗಿಯೇ ಪ್ರವೃತ್ತಗಳಾಗಿವೆ. (ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋಃ

ಇದುಮೊದಲಾದ ವೇದಪ್ರಮಾಣವು ಈ ವಿಷಯದಲ್ಲಿದೆ) ಇದಕ್ಕೆ ವಿರುದ್ಧವಾದ ಪ್ರಮಾಣಗಳೆಲ್ಲವೂ ತರ್ಕವೂ ದುಷ್ಟವೆಂದು ಸಿದ್ಧವಾಯಿತು. ಎಂದು ಇದುಮೊದಲಾದ ಸ್ಥಳದಲ್ಲಿ ಹೇಳಲ್ಪಟ್ಟಿದೆ. ॥ ೬ ॥

ಪೀ—ಶ್ರೀಹರಿಯು ಸರ್ವೋತ್ತಮನು ಎಂಬ ಜ್ಞಾನದಿಂದಲೇ ಮೋಕ್ಷವೆಂದು ಹೇಳುವ ವೇದವೂ ವಿಷ್ಣುಸರ್ವೋತ್ತಮತ್ವದಲ್ಲಿಯೇ ಎಲ್ಲಾ ಆಗಮಗಳಿಗೂ ಮುಖ್ಯತಾತ್ಪರ್ಯವೆಂದು ತಿಳಿಸುತ್ತದೆ, ಎನ್ನುತ್ತಾರೆ--

ಭಾ. ॥ (೧) ತಂ ಭೂತಿರಿತಿ ದೇವಾ ಉಪಾಸಾಂಚಕ್ರೀರೇ ತೇ ಬಭೂವುಸ್ತಸ್ಮಾದ್ಭಾಹ್ಯೇತರ್ಹಿ ಸುಪ್ತೋ ಭೂರ್ಭೂರಿತ್ಯೇವ ಪ್ರುಶ್ವಸಿತ್ಯಭೂತಿರಿತ್ಯಸುರಾಸ್ತೇ ಹ ಪರಾಬಭೂವುಃ । (೨) ಭೂಮ್ನೈವ ದೇವಃ ಪರನೋ ಹ್ಯುಪಾಸ್ಯೋ ನೈವಾಭೂಮಾ ಫಲಮೇಷಾಂ ವಿಧತ್ತೇ । ತಸ್ಮಾದ್ಭೂಮಾ ಗುಣಕೋ ವೈ ವಿಶಿಷ್ಟೋ ಯಥಾ ಕ್ರತುಃ ಕರ್ಮಮಧ್ಯೇ ವಿಶಿಷ್ಟಃ । (೩) ಅಸುನ್ವಂತಂ ಸಮಂ ಜಹಿ ದೂಣಾಶಂ ಯೋ ನ ತೇ ಮಯಃ । ಅಸ್ಮಭ್ಯಮಸ್ಯ ವೇದನಂ ದದ್ಧಿ ಸೂರಿಶ್ಚಿದೋಹತೇ । (೪) ಸತ್ಯಃ ಸೋ ಅಸ್ಯ ಮಹಿಮಾ ಗೃಣೇಶವೋ ಯಜ್ಞೇಷು ವಿಪ್ರರಾಜ್ಯೇ । (೫) ಏತಾವಾನಸ್ಯ ಮಹಿಮಾ ಅತೋ ಜ್ಯಾಯಾಂಶ್ಚ ಪೂರುಷಃ । (೬) ತಮೇವಂ ವಿದ್ವಾನಮೃತ ಇಹ ಭವತಿ । ನಾನ್ಯಃ ಪಂಥಾ ಅಯನಾಯ ವಿದ್ಯತೇ । (೭) ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿರ್ಜ್ಞಾನಮಾವೃತಿಃ । ಬಂಧನೋಕ್ಷೌ ಚ ಕಥ್ಯಂತೇ ಯಸ್ಯೋತ್ಕರ್ಷಪ್ರಸಿದ್ಧಯೇ । (೮) ಯಸ್ಯೋತ್ಕರ್ಷಪ್ರಸಿದ್ಧ್ಯರ್ಥಂ ಸರ್ವೇ ವೇದಾಶ್ಚ ಯುಕ್ತಯಃ । ಜ್ಞಾತ್ವೈವ ಚ ಯದುತ್ಕರ್ಷಂ ಮುಚ್ಯಂತೇ ಸ ಹರಿಃ ಪರಃ । ಅದ್ಯಾತಮಸ್ಯ ಮಹಿಮಾನಮಾಯವೋಽನುಷ್ಟುವಂತಿ ಪೂರ್ವಥಾ । ಇತ್ಯಾದಿ ಶ್ರುತಿಶ್ಚ ವಿಷ್ಣೋರುತ್ಕರ್ಷೇ ಮಹಾತಾತ್ಪರ್ಯಂ ಕಥಯತಿ ॥ ॥ ೮ ॥

ಅ ॥ (೧) ದೇವತೆಗಳು ಶ್ರೀಹರಿಯು ಸರ್ವಗುಣಪರಿಪೂರ್ಣನು, ಜ್ಞಾನ ಐಶ್ವರ್ಯಾದಿ ಸ್ವರೂಪನು, ಐಶ್ವರ್ಯಾದಿಗಳನ್ನು ಕೊಡುವವನೆಂದು ಉಪಾಸನೆಮಾಡುವುದರಿಂದ ಸುಖಜ್ಞಾನಮೊದಲಾದ ಐಶ್ವರ್ಯ ಪರಿಪೂರ್ಣರಾದರು ಅದುಕಾರಣ ಈಗಲೂ ನಿದ್ರಿತರಲ್ಲಿ ನಿಯಾಮಕರಾದ ಸರ್ವಜೀವೋತ್ತಮರಾದ ವಾಯುವೇರು ಭುರ್ ಭುರು ಎಂದು ಶ್ವಾಸರೂಪದಿಂದ ಶ್ರೀಹರಿಯನ್ನೇ ಸ್ತೋತ್ರಮಾಡುತ್ತಿರುತ್ತಾರೆ ರಾಕ್ಷಸಾದಿಗಳು ನಮಗೆ ದುಃಖಮೊದಲಾದ ಅನರ್ಥಗಳನ್ನು ಕೊಡುವವನು, ಐಶ್ವರ್ಯ ಮೊದಲಾದ ಯಾವ ಗುಣಗಳೂ ಇಲ್ಲದವನು, ಎಂದು ಉಪಾಸನೆ ಮಾಡುತ್ತಾರೆ. ಅದುಕಾರಣ ಅವರು ಪರಾಜಯವನ್ನು ಹೊಂದಿದರು. (ಜ್ಞಾನಾದಿ ಗುಣಶೂನ್ಯರಾಗಿ ಅಂಧಂತಮಸ್ಸಿನಲ್ಲಿ ಬಿದ್ದರು) (೨) ಕರ್ಮಗಳ ಮಧ್ಯದಲ್ಲಿ ಕ್ರತು (ಯಾಗವಿಶೇಷ) ವು ಹೇಗೆ ಶ್ರೇಷ್ಠವೋ ಹಾಗೆಯೇ ಭೂಮ ಗುಣವು ಗುಣಗಳಸಮೂಹಕ್ಕಿಂತ ಶ್ರೇಷ್ಠವು. ಅದುಕಾರಣ ಶ್ರೀಹರಿಯು ಭೂಮ ಗುಣವುಳ್ಳವನೆಂದು ಉಪಾಸನೆ ಮಾಡಿದರೇನೇ ಮೋಕ್ಷಾದಿ ಪುರುಷಾರ್ಥಗಳನ್ನು ಕೊಡುತ್ತಾನೆ. ಅಭೂಮನೆಂದು ಉಪಾಸನೆ ಮಾಡಿದರೆ ಫಲವನ್ನು ಕೊಡುವುದಿಲ್ಲ. ಆದಕಾರಣ ಸರ್ವೋತ್ತಮನಾದ ಶ್ರೀಹರಿಯು ಭೂಮ ಗುಣವುಳ್ಳವನೆಂದೇ ಸರ್ವರೂ ಉಪಾಸನೆಮಾಡಬೇಕು.) (೩) ನಿನ್ನವ್ನು ದೂಷಿಸುವ, ಯಾಗ ಮೊದಲಾದ ತಂತಮಗೆ ವಿಹಿತಗಳಾದ ಕರ್ಮಗಳನ್ನು ಮಾಡದಿರುವ ಇಂತಹ ಹೆಚ್ಚು ದುಃಖವನ್ನು ಹೊಂದಲು ಯೋಗ್ಯರಾದವರನ್ನು ಅವರವರ ಯೋಗ್ಯತಾನುಸಾರ ಅಂಧಂತಮಸ್ಸಿನಲ್ಲಿ ಕೆಡಹು ನಿನ್ನ ಭೃತ್ಯರಾದ ಶಕ್ತ್ಯನುಸಾರ ಕರ್ಮಗಳನ್ನು ಮಾಡುವ ನಮಗೆ ಜ್ಞಾನೋಪದೇಶ ಮಾಡು ಏಕೆಂದರೆ ಜ್ಞಾನಿಯಾದವನೇ ಸಂಸಾರವನ್ನು

ದಾಟ ಮೋಕ್ಷವನ್ನು ಹೊಂದುತ್ತಾನೆ. (೪) ಶ್ರೀಹರಿಯ ಹಿಂದೆ ಹೇಳಿದ ಮಹಿಮೆಯು ಯಥಾರ್ಥವು. ಮೋಕ್ಷ ಸುಖಕ್ಕಾಗಿ ವಿಪ್ರರೇ ಪ್ರಧಾನರಾಗಿ ಉಳ್ಳ ಯಾಗಗಳಲ್ಲಿ ಆ ಶ್ರೀಹರಿಯನ್ನು ಸ್ತೋತ್ರಮಾಡುತ್ತೇನೆ. (೫) ಶ್ರೀಹರಿಗೆ ಹಿಂದೆ ಹೇಳಿದ ಮಹಿಮೆಯು ಮಾತ್ರವಲ್ಲ. ಪರಂತು ಆ ಶ್ರೀಹರಿಯು ಹಿಂದೆ ಹೇಳಿದ ಮಹಿಮೆಯಿಂದಲೂ ಹೆಚ್ಚು ಮಹಿಮೆಯುಳ್ಳವನು. (೬) ಆ ಶ್ರೀಹರಿಯನ್ನು ಹೀಗೆ ತಿಳಿದವನು ಮುಕ್ತನಾಗುತ್ತಾನೆ. ಮೋಕ್ಷಕ್ಕೆ ಜ್ಞಾನ ಹೊರತು ಬೇರೆ ಮಾರ್ಗವಿಲ್ಲ. (ಹೀಗೆ ಜ್ಞಾನವು ಮೋಕ್ಷಕ್ಕೆ ಸಾಧನವೆಂದು ಕೃತವಾಯಿತು) (೭) (ವೇದಗಳಲ್ಲಿ ಅಲ್ಲಲ್ಲಿ ಸೃಷ್ಟಿಮೊದಲಾದುದನ್ನು ಹೇಳಿದುದರಿಂದ ಎಲ್ಲಾ ಆಗಮಗಳಿಗೂ ವಿಷ್ಣುವು ಸರ್ವೋತ್ತಮನೆಂಬುವಲ್ಲಯೇ ತಾತ್ಪರ್ಯವೆಂಬುದು ಹೇಗೆ ಕೂಡುತ್ತದೆ. ಎಂದರೆ) ಸೃಷ್ಟಿ ರಕ್ಷಣೆ ಸಂಹಾರ ಪ್ರೇರಣೆ ಜ್ಞಾನ ಅಜ್ಞಾನ ಬಂಧ ಮೋಕ್ಷ ಇವುಗಳು ಶ್ರೀಹರಿಯು ಸರ್ವೋತ್ಕೃಷ್ಟನು ಎಂಬ ಪ್ರಸಿದ್ಧಿಯನ್ನು ತಿಳಿಸುವುದಕ್ಕಾಗಿ ವೇದಮೊದಲಾದವುಗಳಲ್ಲಿ ಹೇಳಲ್ಪಡುತ್ತವೆ. (೮) ಶ್ರೀಹರಿಯು ಸರ್ವೋತ್ಕೃಷ್ಟನು ಎಂದು ಪ್ರಸಿದ್ಧಿಯನ್ನು ತಿಳಿಸುವುದಕ್ಕಾಗಿ ಸಮಸ್ತವೇದಗಳೂ ಯುಕ್ತಿಗಳೂ ಪ್ರವೃತ್ತಗಳಾಗಿವೆ ಜ್ಞಾನಿಗಳು ಯಾವ ಶ್ರೀಹರಿಯು ಸರ್ವೋತ್ಕೃಷ್ಟನೆಂದು ತಿಳಿದೇ ಮುಕ್ತರಾಗುತ್ತಾರೋ, ಅಂತಹ ಶ್ರೀಹರಿಯು ಸರ್ವೋತ್ತಮನು, ಜ್ಞಾನವನ್ನು ಹುಟ್ಟಿಸುವ ವೇದಗಳಿಗೆ ಅಭಿಮಾನಿಗಳಾದ ದೇವತೆಗಳು ಪರಮೈಶ್ವರ್ಯಸಂಪನ್ನನಾದ ಶ್ರೀಹರಿಯ ಮಹಿಮೆಯನ್ನು ಮೊದಲಿನಂತೆಯೇ ಈಗಲೂ ತಮ್ಮ ಯೋಗ್ಯತಾನುಸಾರ ಸ್ತೋತ್ರಮಾಡುತ್ತಿರುತ್ತಾರೆ. ಇದುಮೊದಲಾದ ವೇದಗಳು ವಿಷ್ಣುವು ಸರ್ವೋತ್ತಮನೆಂಬುವಲ್ಲಿಯೇ ಮಹಾತಾತ್ಪರ್ಯವನ್ನು ಹೇಳುತ್ತವೆ ॥ ೮ ॥

ಪೀ—ವಿಷ್ಣುವು ಸರ್ವೋತ್ತಮನೆಂಬಲ್ಲಿಯೇ ಎಲ್ಲಾ ಆಗಮಗಳಿಗೂ ತಾತ್ಪರ್ಯವೆಂದಾದರೆ—ಧರ್ಮಾದಿಗಳೇ ಸಿದ್ಧಿಸದೆ ಹೋಗುವುವು ಎಂದರೆ—

ಭಾ. ॥ (೧) ಮಹಾತಪ್ಪರತಾ ವಿಷ್ಣೋರುತ್ಕರ್ಷೇಽವಾಂತರಾ ಕತಃ । ಅನ್ಯತ್ರ ಸರ್ವವಾಕ್ಯಾನಾಂ ಯುಕ್ತೀನಾಂ ಚ ವಿತೇಷತ ಇತಿ ಬ್ರಹ್ಮಾಂಡೇ ।(೨) ಓಂ ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ ತಥಾ ಚ ದರ್ಶಯತಿ ಓಂ । ಬ್ರಹ್ಮದೃಷ್ಟಿರುತ್ಕರ್ಷಾದಿತ್ಯಾದಿ ನಿರ್ಣಯಾತ್ಮಕಂ ಭಗವದ್ವಚನಂ । (೩) ನ ಚ ಶಾರೀರಪರಾಭೇದೇ ತಾತ್ಪರ್ಯಮಿತ್ಯತ್ರ ಕಿಂಚಿನ್ಮಾನಂ । ಅತತ್ತ್ವಮಸೀತಿ ಭೇದಸ್ಯ ನವಕೃತ್ವೋಽಭ್ಯಾಸಾಚ್ಚ । (೪) ಓಂ ಭೇದವ್ಯಪದೇಶಾತ್ ಓಂ । ಓಂ ಭೇದವ್ಯಪದೇಶಾಚ್ಚಾನ್ಯಃ ಓಂ । ಓಂ ಅನುಪಪತ್ತೇಸ್ತು ನ ಶಾರೀರಃ ಓಂ । ಓಂ ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ ಓಂ । ಓಂ ಪೃಥಗುಪದೇಶಾದಿತ್ಯಾದಿನಾ ಸರ್ವತ್ರ ಭೇದಸ್ಯೈವ ಭಗವತಾ ನಿರ್ದೇತತ್ವಾಚ್ಚ ॥ ॥ ೯ ॥

ಅ ॥ (೧) ಸಮಸ್ತವಾಕ್ಯಗಳಿಗೂ ಯುಕ್ತಿಗಳಿಗೂ ವಿಶೇಷವಾಗಿ ವಿಷ್ಣುವು ಸರ್ವೋತ್ಕೃಷ್ಟನು ಎಂಬುವಲ್ಲಿ ವಿಶೇಷವಾಗಿ ಮುಖ್ಯ ತಾತ್ಪರ್ಯವು. ಕರ್ಮಾದಿಗಳಲ್ಲಿ ಮುಖ್ಯತಾತ್ಪರ್ಯವಿಲ್ಲ ಅಮುಖ್ಯವಾಗಿ ಕರ್ಮಾದಿಗಳನ್ನು ಹೇಳುತ್ತವೆ ಹೀಗೆ ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ (೨) (ಈ ವಿಷಯದಲ್ಲಿಯೇ ಸೂತ್ರಪ್ರಮಾಣವಿದೆ, ಎನ್ನುತ್ತಾರೆ—) ದೀಕ್ಷಾಪ್ರಾಯಣೀಯ ಉದಯನೀಯ ಪ್ರಾತಃಸವನ ಮಾಧ್ಯಂದಿನಸವನ ತೃತೀಯಸವನ ಅವಭೃಥಾತ್ಮಕಗಳಾದ ಯಾಗಗಳ ಅಂಗಗಳ ಸಮೂಹದಂತೆ ಅನಂತ ಮೊದಲಾದ ಎಲ್ಲಾ ಗುಣಗಳಲ್ಲಿ ಭೂಮ (ಪರಿಪೂರ್ಣತೆ) ಗುಣವು ಮುಖ್ಯವಾಗಿ ವೇದಗಳಲ್ಲಿ ಹೇಳಲ್ಪಟ್ಟಿದೆ (ಎಲ್ಲಾ ಗುಣಗಳಿಗಿಂತ ಪ್ರಧಾನವು.) ಅದಕಾರಣ ಭೂಮ್ನೈವ ದೇವಃ ಎಂಬ ವೇದವು ಭೂಮಗುಣೋಪಾಸನವು ಸರ್ವರಿಗೂ ಅವಶ್ಯಕವೆಂದು ತೋರಿಸುತ್ತದೆ. (ಬ್ರ. ಅ ೩ ಪಾ. ೩ ಸೂ. ೫೯.) ಶ್ರೀಹರಿಯು ಸರ್ವೋತ್ಕೃಷ್ಟನಾದುದರಿಂದ ಸರ್ವಗುಣಪರಿಪೂರ್ಣನೆಂಬ ಉಪಾಸನೆಯನ್ನು ಅವಶ್ಯವಾಗಿ

ಮಾಡಬೇಕು, ಇದು ಮೊದಲಾದ ನಿರ್ಣಯವನ್ನು ಮಾಡುವ ಬ್ರಹ್ಮಸೂತ್ರವು. (ಏವಂಚ ವಿಷ್ಣುವು ಸರ್ವಗುಣಪರಿಪೂರ್ಣನೆಂಬ ಉಪಾಸನೆಯಿಂದಲೇ ಮೋಕ್ಷವಾಗುತ್ತದೆಂದು ಎರಡು ಸೂತ್ರಗಳಲ್ಲಿಯೂ ಹೇಳಿದುದರಿಂದ ಎಲ್ಲಾ ವೇದಗಳಿಗೂ ಅದರಲ್ಲಿಯೇ ಮುಖ್ಯ ತಾತ್ಪರ್ಯವೆಂದು ತಿಳಿಯುತ್ತದೆ.) (೩) **(1) ತತ್ತ್ವಮಸಿ (2) ಪುರುಷ ಏವೇದಂ ಸರ್ವಂ (3) ವಿಕನೇವಾದ್ವಿತೀಯಂ (4) ಅಹಂ ಬ್ರಹ್ಮಾಸ್ಮಿ (5) ಯೋಽಸೌ ಸೋಹಂ** ಇತ್ಯಾದಿ ವೇದಗಳಲ್ಲಿ ಅಭೇದವನ್ನೇ ಹೇಳಿದುದರಿಂದಲೂ ಅಭ್ಯಾಸ (ಅನೇಕ ಸಲ ಹೇಳುವುದು.) ಮೊದಲಾದವುಗಳಿಂದ ಅಭೇದದಲ್ಲಿಯೇ ತಾತ್ಪರ್ಯವೆಂದು ತಿಳಿದುಬರುವುದರಿಂದಲೂ ಎಲ್ಲಾ ಆಗಮಗಳಿಗೆ ಜೀವೇಶ್ವರರ ಅಭೇದದಲ್ಲಿಯೇ ಮುಖ್ಯ ತಾತ್ಪರ್ಯವು. ಆ ವೇದಗಳನ್ನು ಅನುಸರಿಸಿ ಬೇರೆ ಎಲ್ಲಾ ವೇದಗಳಿಗೂ ಜೀವೇಶ್ವರರ ಐಕ್ಯದಲ್ಲಿಯೇ ತಾತ್ಪರ್ಯವೆಂದು ಹೇಳಬೇಕು, ಎಂದು ಐಕ್ಯವಾದಿಗಳು ಹೇಳುತ್ತಾರೆ. ಅವನ್ನು ನಿರಾಕರಿಸುತ್ತಾರೆ—) ಜೀವೇಶ್ವರರಿಗೆ ಅಭೇದದಲ್ಲಿ ಎಲ್ಲಾ ವೇದಗಳಿಗೆ ತಾತ್ಪರ್ಯವೆಂಬಲ್ಲಿ ಯಾವುದೊಂದು ಪ್ರಮಾಣವೂ ಇಲ್ಲ (ಪ್ರಮಾಣ ವಿಲ್ಲವೆಂದು ಮಾತ್ರವಲ್ಲ, ಪ್ರಮಾಣವಿರೋಧವೂ ಆದೇ ಎನ್ನುತ್ತಾರೆ—) **ಅತತ್ ತ್ವಮಸಿ** ಎಂದು ಒಂಭತ್ತಾವರ್ತಿ ಭೇದವನ್ನೇ ಹೇಳಿರುವರು. (೪) (**ತತ್ ತ್ವಮಸಿ** ಎಂದು ಪದವನ್ನು ವಿಂಗಡಿಸಿಕೊಂಡು ಐಕ್ಯವನ್ನೇ ಹೇಳಿದ್ದೆಂದು ಸರ್ವಥಾ ಹೇಳಕೂಡದು. ಏಕೆಂದರೆ—ಆ ವಿಷಯದಲ್ಲಿ ಯಾವುದೊಂದು ವೃಷ್ಟ್ಯಾಂತವೂ ಇಲ್ಲವೆಂಬುದು ಮಾತ್ರವಲ್ಲ ಸೂತ್ರವಿರೋಧವೂ ಆದೆ ಎನ್ನುತ್ತಾವೆ—) **(1) ಜುಷ್ಟಂ ಯದಾ ಪಶ್ಯತಿ** ಎಂಬ ವೇದದಲ್ಲಿ ಜೀವನು ಸರ್ವರಿಂದ ಸೇವಿಸಲ್ಪಡುವ ಶ್ರೀಹರಿಯನ್ನು ನೋಡುತ್ತಾನೆ, ಎಂದು ಹೇಳಿದ ಕಾರಣ ಜೀವನಿಗೆ ಈಶ್ವರನಿಂದ ಭೇದವೆಂಬುದು ಸ್ಪಷ್ಟವಾಯಿತು. (ಬ್ರ. ಸೂ ಅ. ೧ ಪಾ.೩ ಸೂ. ೫) (2) **ಇಂದ್ರಸ್ಯಾತ್ಮಾ ನಿಹಿತಃ ಪಂಜಹೋತಾ** ಇದು ಮೊದಲಾದ ವೇದಗಳಲ್ಲಿ ವಿಷ್ಣುವು ಇಂದ್ರಾದಿ ದೇವತೆಗಳೊಳಗಿದ್ದು ಪ್ರೇರಿಸುತ್ತಿರುತ್ತಾನೆಂದು ಇಂದ್ರಾದಿಗಳಿಂದ ವಿಷ್ಣುವಿಗೆ ಭೇದವನ್ನು ಹೇಳಿದ ಕಾರಣ **ಅಂತಃ ಪ್ರವಿಷ್ಟಂ** ಎಂಬ ವೇದದಲ್ಲಿ ಹೃದಯದೊಳಗೆ ಇರುವವನೆಂದು ಹೇಳಲ್ಪಟ್ಟವನು ವಿಷ್ಣುವೆಂದು ಮಾತ್ರವಲ್ಲ. ಇಂದ್ರಾದಿಗಳಿಂದ ಭಿನ್ನನೂ ಆಗಿದ್ದಾನೆ. (ಬ್ರ. ಅ. ೧ ಪಾ. ೧ ಸೂ. ೨೧) (3) ಒಬ್ಬ ಜೀವನು ಸರ್ವರ ಶರೀರದಲ್ಲಿ ಇದ್ದಾನೆಂಬುದು ಅಯುಕ್ತವಾದ ಕಾರಣ ಪೃಥಿವ್ಯಾದಿಗಳಲ್ಲಿದ್ದಾನೆಂದು ಹೇಳಲ್ಪಡತಕ್ಕವನು ಸೂರ್ಯನಾಗಲೀ ಜೀವನಾಗಲೀ ಆಗುವುದಿಲ್ಲ. ಪರ ಬ್ರಹ್ಮನೇ ಆಗಬೇಕು. (ಅ. ೧ ಪಾ. ೨ ಸೂ. ೩) (4) **ಯ ಆತ್ಮನಿ ತಿಷ್ಠನ್, ಯೋ ವಿಜ್ಞಾನೇ ತಿಷ್ಠನ್** ಎಂದ. ಕಾಣ್ವಮಾಧ್ಯಂದಿನಾಯನರಿಬ್ಬರೂ ಅಂತರ್ಯಾಮಿಗಿಂತ ಈ ಜೀವನು ಬೇರೆಯೆಂದು ಹೇಳುತ್ತಾರೆ. ಅದುಕಾರಣ ಅಂತರ್ಯಾಮಿಯು ಶರೀರಾಭಿಮಾನಿಯಾದ ಜೀವನಾಗುವುದಿಲ್ಲ. (ಬ್ರ. ಅ. ೧ ಪಾ. ೨ ಸೂ ೨೦) (5) **ಭಿದ್ಯೋಽಚಿಂತ್ಯಃ ಪರೋ ಜೀವಸಂಘಾತ್** ಎಂಬ ಕೌಷೀತಕ ವೇದದಲ್ಲಿ ಅಪೂರ್ಣರಾದ ಜೀವರಿಂದ **ಪೂರ್ಣನಾದ** ಶ್ರೀಹರಿಯು ಬೇರೆಯೆಂದು ಹೇಳಿದುದರಿಂದ ಜೀವನು ಭಿನ್ನನೇ ಆಗಿರುತ್ತಾನೆ (ಬ್ರ ಸೂ. ಅ. ೨ ಪಾ, ೩ ಸೂ, ೨೮) ಇದುಮೊದಲಾದ ಬ್ರಹ್ಮಸೂತ್ರಗಳಿಂದ ಎಲ್ಲೆಡೆಗಳಲ್ಲಿಯೂ ಭೇದವೆಂದೇ ವೇದವ್ಯಾಸರು ನಿರ್ಣಯಿಸಿರುವರು.

ವಿ ॥ ಎಲ್ಲಾ ವೇದಗಳ ಅರ್ಥಗಳನ್ನು ನಿರ್ಣಯಮಾಡುವುದಕ್ಕಾಗಿ ವೇದವ್ಯಾಸರು ಬ್ರಹ್ಮಸೂತ್ರಗಳನ್ನು ನಿರ್ಮಿಸಿರುವರು, ಯಾವುದೊಂದು ಸೂತ್ರದಲ್ಲಿಯೂ ಜೀವಬ್ರಹ್ಮರಿಗೆ ಐಕ್ಯವನ್ನು ಹೇಳಲೇ ಇಲ್ಲ, ಪ್ರತಿಸೂತ್ರಗಳಲ್ಲಿಯೂ ಜೀವಬ್ರಹ್ಮರಿಗೆ ಭೇದವನ್ನೇ ನಿರ್ಣಯಿಸಿರುವರು, ॥ ೯ ॥

ಪೀ—ಪುರುಷ ಏವೇದಂ ಸರ್ವಂ ಎಂಬ ವೇದವು ಜೀವ ಈಶ್ವರರ ಐಕ್ಯವಿಷಯದಲ್ಲಿ ಪ್ರಮಾಣವೆಂಬುದು ಅಯುಕ್ತವು ಏಕೆಂದರೆ ಆ ವೇದದ ಅರ್ಥವು ಐಕ್ಯವೆಂದು ಅಲ್ಲವೆಂದು ವೇದದಲ್ಲಿಯೇ ಹೇಳಿಯಿದೆ ಎಂಬ ಅಭಿಪ್ರಾಯದಿಂದ ವೇದವನ್ನು ಹೇಳುತ್ತಾರೆ—

ಭಾ. ॥ (೧) ಪುರುಷ ಏವೇದಂ ಸರ್ವಮಿತಿ ಚ ಪುರುಷೇಣೈವೇದಂ ಸರ್ವಂ ವ್ಯಾಪ್ತಂ ಯದ್ಭೂತಂ ಯಚ್ಚ ಭ(ಭಾ)ವ್ಯಂ । (೨) ನ ಚ ಭಗವಾನ್ ಗೋತ್ವೇನ ಮನುಷ್ಯತ್ವೇನ ವಾ ಭವತಿ । (೩) ಆತ್ಯಕಾದಾಕರೀಷಾತ್ಸರ್ವಂ ಭಗವಾನಿತಿ ಮಿಥ್ಯಾದೃಷ್ಟಿರೇಷಾ । (೪) ದಧಿಸಕ್ತವೋ ಘೃತೌದನಮಿತ್ಯಾದೌ(ದಿಷು) ವ್ಯಾಪ್ತ(ಪ್ತಿ)ಶಬ್ದಾ ಭಾವೇಽಪಿ ವ್ಯಾ(ಪ್ತಿ)ಪ್ತ-ಶಬ್ದ್ಯೇವಗಮ್ಯತೇ । (೫) ದಧಿಸಿಕ್ತಾಃ ಸಕ್ತವೋ ಘೃತಸಿಕ್ತಮೋದನಮಿತಿ ಚ ಶ್ರುತಿಃ ।(೬) ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮಿತಿ ಪುರುಷೇಣ ಹೀದಂ ಸರ್ವಂ ನೇನೀಯತ ಇತಿ ಚ । (೭) ಅತಃ ಸರ್ವಪ್ರಮಾಣಾನಾಂ ಭಗವದುತ್ಕರ್ಷ ಏವೈ ಮಹಾ-ತಾತ್ಪರ್ಯಾಚ್ಛಾರೀರಾಭೇದಂ ವದತಾಂ ಮಹಾತಾತ್ಪರ್ಯವಿರೋಧಃ ॥ ॥ ೧೦ ॥

ಅ ॥ (೧) **ಪುರುಷ ಏವೇದಂ ಸರ್ವಂ** ಎಂಬ ವಾಕ್ಯಕ್ಕೆ ಭೂತಕಾಲದಲ್ಲಿದ್ದ ವಸ್ತುವು ಭವಿಷ್ಯತ್ಕಾಲದಲ್ಲಿರುವ ವಸ್ತುವು, ವರ್ತಮಾನಕಾಲದಲ್ಲಿದ್ದ ವಸ್ತುವು ಎಲ್ಲಾ ವಸ್ತುಗಳೂ ಶ್ರೀಹರಿಯಿಂದ ವ್ಯಾಪ್ತ ಗಳಾಗಿವೆ, ಎಂದರ್ಥವು. (೨) (ಎಲ್ಲಾ ವಸ್ತುಗಳಿಗೂ ಅಭೇದವು ಎಂಬ ಅರ್ಥವೇ ಏಕೆ ಆಗಲಾರದೆಂದರೆ) ಶ್ರೀಹರಿಯು ಗೋವಾಗಲೀ ಮನುಷ್ಯನಾಗಲೀ ಆಗುವುದಿಲ್ಲ. (ಎಲ್ಲಾ ಗೋವುಗಳೂ ಮನುಷ್ಯರೂ ಪರ ಮಾತ್ಮನು ಎಂದುಹೇಳಲಾಗುವುದಿಲ್ಲ.)(೩) (**ಪುರುಷ ಏವೇದಂ ಸರ್ವಂ** ಎಂಬ ವೇದದಲ್ಲಿ ಸರ್ವಾಭೇದವು ತೋರುವುದರಿಂದ ಐಕ್ಯವಿಲ್ಲವೆಂಬುದು ಹೇಗೆ ಕೂಡುತ್ತದೆ ಎಂದರೆ) ತೃಣ (ಹುಲ್ಲು) ವನ್ನಾ ರಂಭಿಸಿ ಒಣ ಗಿದ ಸಗಣಿ ಪರ್ಯಂತ ಎಲ್ಲಾ ವಸ್ತುವೂ ಶ್ರೀಹರಿಯು, ಎಂಬುದು ಮಿಥ್ಯಾಜ್ಞಾನವು. (೪) ಪುರುಷಃ ಎಂಬುದನ್ನು **ಪುರುಷೇಣ** ಎಂದು ವ್ಯತ್ಯಾಸವಾಗಿ ಮಾಡಿಕೊಂಡರೂ **ವ್ಯಾಪ್ತ**ವೆಂಬ ಶಬ್ದವಿಲ್ಲದಿರುವುದ ರಿಂದ **ಪುರುಷ ಏವೇದಂ ಸರ್ವಂ** ಎಂಬುದಕ್ಕೆ ಶ್ರೀಹರಿಯಿಂದ ಎಲ್ಲಾ ವಸ್ತುವೂ ವ್ಯಾಪ್ತವಾಗಿದೆ ಎಂಬ ಅರ್ಥವು, ಕೂಡುವುದಿಲ್ಲ ಎಂದರೆ) **ದಧಿಸಕ್ತವಃ ಘೃತೌಧನಂ** ಇದುಮೊದಲಾದ **ವಾಕ್ಯ**ಗಳಲ್ಲಿ ಸಿಕ್ತ ಎಂಬ ಶಬ್ದವಿಲ್ಲವಾದರೂ ದಧಿಯಿಂದ ಮಿಶ್ರವಾದ ಹಿಟ್ಟು ದಧಿಸಕ್ತುಗಳು ತುಪ್ಪದಿಂದ ಮಿಶ್ರವಾದ ಅನ್ನವು ಘೃತೌದನವು ಹೀಗೆ ಸಿಕ್ತ ಶಬ್ದವು ಹೇಗೆ ಲಭಿಸುತ್ತದೋ, ಹೀಗೆಯೇ **ಪುರುಷ ಏವೇದಂ** ಎಂಬುವಲ್ಲಿಯೂ **ವ್ಯಾಪ್ತ**ವೆಂಬ ಶಬ್ದವಿಲ್ಲವಾದರೂ **ವ್ಯಾಪ್ತ** ಎಂಬ ಶಬ್ದದ ಅರ್ಥವು ಸಿಗುತ್ತದೆ. (೫) (ವ್ಯಾಪ್ತವೆಂಬ ಶಬ್ದವಿಲ್ಲದಿದ್ದರೂ ಆ ಅರ್ಥಸಿಗುತ್ತವೆಂಬುದನ್ನು ತಿಳಿಸತಕ್ಕ ವೇದವನ್ನು ಹೇಳುತ್ತಾರೆ.) ದಧಿಸಕ್ತು=ಮೊಸರಿನಿಂದ ಕಲಿಸಿದ ಹಿಟ್ಟು, ಘೃತಮಿಶ್ರವಾದುದು ಅನ್ನವು ಎಂದು ವೇದದ ಅರ್ಥವು. (೬) **ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ** ಎಂಬ ವಾಕ್ಯಕ್ಕೆ ಶ್ರೀಹರಿಯಿಂದ ಸರ್ವ ಜಗತ್ತು ಮತ್ತೂಮತ್ತೂ ಪ್ರೇರಿಸಲ್ಪಡುತ್ತದೆ. ಅಥವಾ ವಿಶೇಷವಾಗಿ ವ್ಯಾಪಿಸಲ್ಪಡುತ್ತದೆ, ಎಂದರ್ಥವು. (೭) (ಐಕ್ಯ ಹೇಳಿದರೆ ಮಹಾತಾತ್ಪರ್ಯವಿರೋಧವು ಬರುತ್ತದೆ ಎಂಬುದನ್ನು ಹೇಳಿ ಮುಗಿಸುತ್ತಾರೆ.) ಅದು ಕಾರಣ ಎಲ್ಲಾ ಪ್ರಮಾಣಗಳಿಗೆ ಶ್ರೀಹರಿಯು ಸರ್ವೋತ್ಕೃಷ್ಟನು ಎಂಬುವಲ್ಲಿಯೇ ಮುಖ್ಯತಾತ್ಪರ್ಯ ವಿದ್ದುದರಿಂದಲೂ (ಐಕ್ಯದಲ್ಲಿ ತಾತ್ಪರ್ಯವು ಎಂಬಲ್ಲಿ ಪ್ರಮಾಣವಿಲ್ಲದಿರುವುದರಿಂದಲೂ ಶ್ರೀಹರಿಯು ಸರ್ವೋತ್ತಮನೆಂಬುವಲ್ಲಿಯೇ ಎಲ್ಲಾ ಪ್ರಮಾಣಗಳಿರುವುದರಿಂದಲೂ) ಜೀವೇಶ್ವರರಿಗೆ ಐಕ್ಯವನ್ನು ಹೇಳು ವವರಿಗೆ ಮಹಾತಾತ್ಪರ್ಯವಿರೋಧವು ಬರುತ್ತದೆ. ॥ ೧೦ ॥

ಪೀ—ಜೀವನಿಗೂ ಪರಮಾತ್ಮನಿಗೂ ಐಕ್ಯಹೇಳುವುದು ಶ್ರೀಹರಿಯು ಸರ್ವೋತ್ಕೃಷ್ಟನು ಎನ್ನುವು ದಕ್ಕೆ ವಿರೋಧಿಯಾಗುತ್ತದೆ ಎಂಬುದನ್ನು ಪ್ರಮಾಣವನ್ನು ತಾಹರಿಸಿ ಹೇಳುತ್ತಾರೆ—

ಭಾ. ॥ (೧) ಅಜ್ಞಾನದುಃಖಸಂಬಂಧಾದ್ಯಾವಜ್ಜ್ಞಾನಂ ಶರೀರಿಣಃ । ಸರ್ವದಾ-ಜ್ಞಾನಕಂ ವಿಷ್ಣುಮಹಮಸ್ಮೀತಿ ಯೇ ವಿದುಃ । ಅಜ್ಞಾನದುಃಖಮಂತಾರಸ್ತತಸ್ತೇ

ನೀಚತಾಂ ವಿದುಃ । (೨) ವಿಷ್ಣೋರುತ್ಕರ್ಷಹರ್ತ್ಯಣಾಂ ನೈವ ತೇಷಾಂ ಸುಖಂ ಕ್ವಚಿತ್ । (೩) ಯೋಽನ್ಯಥಾ ಸಂತಮೀಶೇಶಂ ಸ್ವರೂಪಂ ಪ್ರತಿಪದ್ಯತೇ । ಕಿಂ ತೇನ ನ ಕೃತಂ ಪಾಪಂ ಚೋರೇಣೇಶಾಪಹಾರಿಣಾ । (೪)ಐಕಾತ್ಮ್ಯಂ ನಾಮ ಯದಿದಂ ಕೇಚಿದ್ಭ್ರಾಯು-ರಸ್ಯೈಪುಣಾಃ । ಶಾಸ್ತ್ರತತ್ತ್ವಮವಿಜ್ಞಾಯ ತಥಾ ವಾದಬಲಾ ಜನಾಃ । (೫) ಕಾಮ-ಕ್ರೋಧಾಭಿಭೂತತ್ವಾದಹಂಕಾರವಶಂ ಗತಾಃ । ಬ್ರಹ್ಮಸ್ತೇನಾ ನಿರಾನಂದಾ(ಲಂಬಾ) ಅಪಕ್ವಮನಸೋಽಶಿವಾಃ । (೬) ಯಾಥಾತಥ್ಯಮವಿಜ್ಞಾಯ ಶಾಸ್ತ್ರಾಣಾಂ ಶಾಸ್ತ್ರದಸ್ಯವಃ। (೭) ವೈಗುಣ್ಯಮೇವ ಪಶ್ಯಂತಿ ನ ಗುಣಾನಿ ನಿಯುಂಜತೇ । ತೇಷಾಂ ತಮಃಶರೀರಾಣಾಂ ತಮ ಏವ ಪರಾಯಣಂ । (೮) ಯತಃ ಸ್ವರೂಪತಶ್ಚಾನ್ಯೋ ಜಾತಿತಃ ಶ್ರುತಿತೋಽರ್ಥತಃ । ಕಥಮಸ್ಮಿ ಸ ಇತ್ಯೇನ ಸಂಬಂಧಃ ಸ್ಯಾದಸಂಹಿತ ಇತಿ ॥ ॥ ೧೧ ॥

ಆ ॥ (೧) ಸರ್ವದಾ ಜ್ಞಾನಸುಖಸ್ವರೂಪನಾದ ವಿಷ್ಣುವೇ ನಾನಾಗುತ್ತೇನೆಂದು ತಿಳಿಯುವವರು ಶ್ರೀವಿಷ್ಣುವಿಗೆ ಅಜ್ಞಾನದುಃಖಗಳು ಇವೆ ಎಂದು ತಿಳಿಯುತ್ತಾರೆ. (ಏಕೆಂದರೆ) ಐಕ್ಯಜ್ಞಾನಿಗೆ ಜ್ಞಾನವಿರುವ ಪರ್ಯಂತ ಅಜ್ಞಾನ ದುಃಖಸಂಬಂಧವು ಇದೆ. ಅದುಕಾರಣ ವಿಷ್ಣುವನ್ನು ನಿಕೃಷ್ಟನೆನ್ನುತ್ತಾರೆ. (ನೀಚತ್ವವು ಉತ್ಕೃಷ್ಟಕ್ಕೆ ವಿರೋಧಿಯು ಎಂಬುದು ಪ್ರಸಿದ್ಧ.) (೨) (ಆ ಜ್ಞಾನವು ಮಿಥ್ಯಾಜ್ಞಾನವು ಎಂದು ಪ್ರಕಟಿಸುವುದಕ್ಕಾಗಿ ಅದರಿಂದುಂಟಾಗತಕ್ಕ ಅನರ್ಥ ಹೇಳುತ್ತಾರೆ—) ವಿಷ್ಣುವು ಸರ್ವೋತ್ಕೃಷ್ಟನು ಅಲ್ಲ ಎಂದು ಹೇಳುವ ಅನ್ಯಥಾಜ್ಞಾನಿಗಳಿಗೆ ಎಲ್ಲಿಯೂ ಸುಖವು ಸರ್ವಥಾ ಬರಲಾರದು. (೩) (ದುಃಖ ಮೊದಲಾದ ಅನರ್ಥಗಳು ಪಾಪದ ಫಲವೆಂದು ಇದ್ದಕಾರಣ ವಿಷ್ಣೂತ್ಕರ್ಷವನ್ನು ಅಪಹರಿಸಿದವರ ಫಲ ವೆಂಬುದು ಹೇಗೆ? ಎಂದರೆ :) ಸರ್ವರಿಗೂ ಸ್ವಾಮಿಯಾದ ಶ್ರೀಹರಿಯು ಸರ್ವಸ್ವಾಮಿಯಲ್ಲ, ನಿರ್ಗುಣನು ನಿರಾಕಾರನು ಎಂದು ಯಾವನು ತಿಳಿಯುತ್ತಾನೋ, ಆ ಸ್ವಾಮಿಯನ್ನೇ ಅಪಹರಿಸಿದ ಜೋರನು ಯಾವ ಪಾಪವನ್ನು ಮಾಡಲಿಲ್ಲ, ಎಲ್ಲಾ ಪಾಪವನ್ನೂ ಮಾಡಿರುತ್ತಾನೆ ಜೀವೈಶ್ವರೈಕ್ಯಪಕ್ಷದಲ್ಲಿ ಜೀವನೇ ಉಳಿಯುತ್ತಾನೆಂದು ಧ್ಯಾನಿಸಿದರೆ ಸ್ಪಷ್ಟವಾಗಿ ಶ್ರೀಹರಿಯನ್ನು ಅಪಹರಿಸಿದಂತೆ ಆಯಿತು. ಈಶ್ವರನು ಉಳಿದು ಜೀವಭಾವಕ್ಕೆ ಲಯವೆಂದು ಹೇಳಿದರೂ ಈಶ್ವರನು ನಿರ್ಧರ್ಮಕನೆಂದು ಹೇಳಿದುದರಿಂದ ಅವನಲ್ಲಿರುವ ಈಶ್ವರತ್ವರೂಪಧರ್ಮವನ್ನು ಅಪಲಾಪಮಾಡಿದುದರಿಂದ ಶ್ರೀಹರಿಯನ್ನು ಅಪಹರಿಸಿದಂತೆಯೇ ಆಯಿತು. (೪) (ಐಕ್ಯಜ್ಞಾನಿಯು ಬ್ರಹ್ಮಸ್ತೇನನು ಪರಬ್ರಹ್ಮನನ್ನು ಕದಿಯುವವನು ಎಂಬುವಲ್ಲಿ ಇನ್ನೊಂದು ಪ್ರಮಾಣ ಹೇಳುತ್ತಾರೆ—) ಎಲ್ಲಾ ಜೀವರಿಗೆ ಬ್ರಹ್ಮನಿಂದ ಐಕ್ಯವು ಎಂಬುದನ್ನು ಅಜ್ಞಾನಿಗಳು ಹೇಳುತ್ತಾರೆ. (ಹಾಗೆ ಹೇಳಲು ಕಾರಣವೇನೆಂದರೆ) ಅಹಂ ಬ್ರಹ್ಮಾಸ್ಮಿ ಇದುವಾದಲಾದ ಶಾಸ್ತ್ರಗಳ ತಾತ್ಪರ್ಯವನ್ನು ತಿಳಿಯದೆ ಆಪಾತತಃ ತೋರುವ ಅರ್ಥದಲ್ಲಿಯೇ ಭ್ರಮೆಗೊಂಡವರಾಗಿ ಹಾಗೆ ಹೇಳುತ್ತಾರೆ. (೫) (ಬೇರೆಯವರಿಗೆ ಇಲ್ಲವೆ ಅವರಿಗೆ ಮಾತ್ರ ಹಾಗೆ ಅಜ್ಞಾನಾದಿಗಳು ಬರಲು ಕಾರಣವೇನೆಂದರೆ) ಮಿಥ್ಯಾಜ್ಞಾನಕ್ಕೆ ಕಾರಣಗಳಾದ ಕಾಮಕ್ರೋಧಾದಿಗಳಿಂದೊಡಗೂಡಿದವರಾದುದರಿಂದ ಅಹಂಕಾರಕ್ಕೆ ಒಳಪಟ್ಟವರು. ಜೀವಬ್ರಹ್ಮೈಕ್ಯವನ್ನು ತಿಳಿದವರು, ಆನಂದಲೇಶವಿಲ್ಲದವರು, ಕೆಟ್ಟ ಮನಸ್ಸುಳ್ಳವರು, ಅಮಂಗಲಸ್ವರೂಪರು (ಅದುಕಾರಣ ಅವರಿಗೆ ಅಜ್ಞಾನಾದಿಗಳೇ ಇರುವವು.) (೬) (ದ್ವಾ ಸುಪರ್ಣಾ ಇದುಮೊದಲಾದ ವೇದಗಳು ಐಕ್ಯಕ್ಕೆ ವಿರೋಧಿಗಳಾಗಿ ಭೇದವನ್ನು ಹೇಳುತ್ತಿರಲು ಐಕ್ಯವನ್ನು ಹೇಗೆ ಹೇಳುವರು? ಎಂದರೆ) ಜೀವಬ್ರಹ್ಮರಿಗೆ ಭೇದವನ್ನು ಹೇಳುವ ದ್ವಾ ಸುಪರ್ಣಾ ಇದುಮೊದಲಾದ ವೇದಗಳ ತಾತ್ಪರ್ಯವನ್ನು ತಿಳಿಯದೆ ಅವುಗಳು ಅತತ್ತ್ವಾವೇದಕಗಳು (ಅಯಥಾರ್ಥವನ್ನು ಹೇಳುತ್ತವೆ,) ಎಂದು ತಿಳಿಯುವವರಾದುದರಿಂದ ಐಕ್ಯವನ್ನೇ ಹೇಳುತ್ತಾರೆ. (೭) (ಆದರೂ ಈಶ್ವರನು ಸರ್ವಜ್ಞನು ಜೀವನು ಅಲ್ಪಜ್ಞನು, ಇದುಮೊದಲಾದ ವಿರುದ್ಧ ಧರ್ಮಗಳು ಇದ್ದುದರಿಂದ ಅವರಿಗೆ ಐಕ್ಯ ಹೇಳುವುದು

ಹೇಗೆಂದರೆ—) ಯಥಾರ್ಥವಾಗಿ ಜೀವಬ್ರಹ್ಮರು ನಿರ್ಗುಣರೇ, ಎಂದು ತಿಳಿಯುವವರಾದುದರಿಂದ ಶ್ರೀಹರಿಗೆ ಸಾರ್ವಜ್ಞಾದಿ ಗುಣಗಳಿವೆ ಎಂದು ಹೇಳುವುದಿಲ್ಲ. ಇಂತಹ ತಮೋಗುಣವೇ ಪ್ರಚುರವಾಗಿ ಉಳ್ಳ ಮಿಥ್ಯಾಜ್ಞಾನಿಗಳು ನರಕವಿಶೇಷವನ್ನೇ ಹೊಂದುತ್ತಾರೆ. (೮) (ಹಾಗಾದರೆ **ಅಹಂ ಬ್ರಹ್ಮಾಸ್ಮಿ** ಇತ್ಯಾದಿ ವೇದಗಳಲ್ಲಿ ಸ್ಪಷ್ಟವಾಗಿ ಐಕ್ಯವು ತೋರುತ್ತದೆ. ಅದನ್ನನುಸರಿಸಿ ಭೇದವನ್ನು ಹೇಳುವ ಶಾಸ್ತ್ರಗಳೆಲ್ಲವೂ ಅಯಥಾರ್ಥವನ್ನು ಹೇಳುತ್ತವೆಂದು ಕಲ್ಪಿಸುವುದೇ ಯುಕ್ತವು, ಎಂದರೆ) ಜೀವನು ಅಣುಪರಿಮಾಣವುಳ್ಳವನು, ಈಶ್ವರನು ವ್ಯಾಪ್ತನು, ಹೀಗೆ ಜೀವೇಶ್ವರರಿಗೆ ಪರಿಮಾಣ ಭೇದವಿದೆ, ಜೀವನಿಗೆ ಜೀವತ್ವಜಾತಿ, ಬ್ರಹ್ಮನಲ್ಲಿ ಬ್ರಹ್ಮತ್ವಜಾತಿ, ಹೀಗೆ **ಜಾತಿಭೇದವಿದೆ** **ದ್ವಾ ಸುಪರ್ಣಾ** ಇದುಮೊದಲಾದ ವೇದಗಳು ಭೇದವನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಜೀವನಿಗೆ ಪ್ರಯೋಜನವಿದೆ. ಈಶ್ವರನಿಗೆ ಪ್ರಯೋಜನವಿಲ್ಲ. ಇದುಮೊದಲಾದ ಕಾರಣಗಳಿಂದ ಶ್ರೀಹರಿಯು ಜೀವರಿಂದ ಭಿನ್ನನೆಂದೇ ಸಿದ್ಧಿಸುತ್ತದೆ. ಅದುಕಾರಣ ಬ್ರಹ್ಮನೇ ನಾನಾಗಿರುತ್ತೇನೆಂದು ಅಯೋಗ್ಯವಾದ ಸಂಬಂಧವು (ಐಕ್ಯವು) ಹೇಗೆ ಕೂಡುವುದು? ಸರ್ವಥಾ ಐಕ್ಯವು ಕೂಡಲಾರದು.

ವಿ ॥ ಅಹಂ ಬ್ರಹ್ಮಾಸ್ಮಿ ಇದುಮೊದಲಾದ ವೇದವಾಕ್ಯಗಳು ಐಕ್ಯಾರ್ಥವನ್ನೇ ಹೇಳುತ್ತವೆಂದು ನಿಶ್ಚಯವಾಗಿದ್ದರೆ ಭೇದ ಹೇಳುವ ವಾಕ್ಯಗಳು ಅಯಥಾರ್ಥವನ್ನು ತಿಳಿಸುತ್ತವೆಂದು ಕಲ್ಪಿಸಬಹುದಿತ್ತು. ಯುಕ್ತಿ ಆಗಮಗಳ ವಿರೋಧವಿದ್ದುದರಿಂದ ಹಾಗೆ ಕಲ್ಪಿಸುವುದೇ ಅಯುಕ್ತವು ॥ ೧೧ ॥

ಪೀ—ಹಾಗಾದರೆ ಜೀವಬ್ರಹ್ಮೈಕ್ಯ ವಿಷಯದಲ್ಲಿ (1) **ತತ್ತ್ವಮಸಿ** (2) **ಪುರುಷ ಏವೇದಂ** ಎಂಬುವುದು ಪ್ರಮಾಣವಾಗದಿದ್ದರೂ (3) **ಏಕಮೇವಾದ್ವಿತೀಯಂ** (4) **ಅಹಂ ಬ್ರಹ್ಮಾಸ್ಮಿ** (5) **ಯೋಽಸೌ ಸೋಽಹಂ** ಇದುಮೊದಲಾದ ವೇದಗಳೇ ಪ್ರಮಾಣಗಳು. ಅಲ್ಲಿ ಐಕ್ಯವು ಸ್ಪಷ್ಟವಾಗಿ ಹೇಳಿದೆ. ಮತ್ತು *ಉಪಕ್ರಮಾದಿಗಳ ಬಲದಿಂದ ಐಕ್ಯದಲ್ಲಿಯೇ ತಾತ್ಪರ್ಯವೆಂದು ತಿಳಿಯುತ್ತದೆ, ಎಂದರೆ ಹಾಗೆ ಹೇಳಕೂಡದು. ಏಕಮೇವ ಎಂಬ ವಾಕ್ಯಕ್ಕೆ ಶ್ರೀಹರಿಯು ಸರ್ವೋತ್ಕೃಷ್ಟನೆಂದೇ ಅರ್ಥವೆಂದು ಹಿಂದೆಯೇ (ಪು. ೨೮೮ ರಲ್ಲಿ) ಹೇಳಿರುತ್ತೇವೆ ಮತ್ತು ಮೋಕ್ಷಧರ್ಮವಚನದಲ್ಲಿಯೂ ಹಾಗೆಯೇ ಅರ್ಥವನ್ನು ಹೇಳಿಯದೆ ಎನ್ನುತ್ತಾರೆ—

ಭಾ. ॥ (೧) ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ಕು । ಕೋ ಹ್ಯತ್ರ ಪುರುಷಶ್ರೇಷ್ಠ ಸ್ತ್ರಂ ಭವಾನ್ವಕ್ತುಮರ್ಹತಿ । (೨) ವೈಶಂಪಾಯನ ಉವಾಚ । ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ । ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿ-ರುಚ್ಯತೇ । ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಮಿತಿ ಮೋಕ್ಷಧರ್ಮ-ವಚನಾಚ್ಚ ॥ ॥ ೧೨ ॥

ಅ ॥ (೧) ಎಲೋ ವೈಶಂಪಾಯನಾಚಾರ್ಯರೇ **ದ್ವಾ ಸುಪರ್ಣಾ** ಇದುಮೊದಲಾದ ಭೇದವಾಕ್ಯಗಳನ್ನನುಸರಿಸಿ ಬಹುಪುರುಷರು ಎನ್ನುತ್ತೀರೋ, ಅಥವಾ **ಏಕಮೇವ** ಎಂಬ ವೇದದಲ್ಲಿ ಒಬ್ಬನು ಎಂದು ಹೇಳಿದುದರಿಂದ ಪುರುಷನು ಒಬ್ಬನೇ ಎನ್ನುತ್ತೀರೋ, ಹೆಚ್ಚು ಮಂದಿ ಪುರುಷರು ಇರುತ್ತಾರೆಂಬ ಪಕ್ಷದಲ್ಲಿಯೂ ಎಲ್ಲರೂ ಸಮರು ಎಂಬ ಪಕ್ಷವು ಕೂಡದಿರುವುದರಿಂದ ಶ್ರೇಷ್ಠನೊಬ್ಬನೆನ್ನಬೇಕು. ಅವನು ಯಾರು? ಅತನನ್ನು ಹೇಳಬೇಕು (೨) (ಹೀಗೆ ಕೇಳಿದಲ್ಲಿ ವೈಶಂಪಾಯನಾಚಾರ್ಯರು ಪುರುಷನೊಬ್ಬನೇ

* ಪ್ರಕರಣದ ಆದಿಭಾಗವು ಉಪಕ್ರಮವು, ಅಂತಿಮ ಭಾಗವು ಉಪಸಂಹಾರವು, ಅನೇಕ ಸಲ ಹೇಳುವುದು ಅಭ್ಯಾಸವು ಇತ್ಯಾದಿಗಳೇ ತಾತ್ಪರ್ಯವನ್ನು ನಿರ್ಣಯಿಸುವ ಅಂಶಗಳು

ಎಂಬ ಪಕ್ಷವನ್ನು ದೂಷಿಸುತ್ತಾರೆ.) ವೈಶಂಪಾಯನಾಚಾರ್ಯರು ಹೇಳುತ್ತಾರೆ. ಎಲೋ ಜನಮೇಜಯನೇ ಪುರುಷನೊಬ್ಬನೇ ಎಂಬುದನ್ನು ಜ್ಞಾನಿಗಳು ಒಪ್ಪುವುದಿಲ್ಲ. (ಪುರುಷರು ಬಹುಮಂದಿಯೇ ಇರುತ್ತಾರೆ) ವಿಕಮೇವ ಎಂಬ ವೇದಕ್ಕೆ ಸರ್ವೋತ್ತಮನು ಒಬ್ಬನೇ ಎಂದು ಅರ್ಥವು ಎನ್ನುತ್ತಾ ಪುರುಷಶ್ರೇಷ್ಠನು ಯಾರು? ಎಂಬ ಎರಡನೇ ಪ್ರಶ್ನೆಗೆ ಉತ್ತರ ಹೇಳುತ್ತಾರೆ.) ಅನೇಕ ಪುರುಷರಿಗೆ ಹೇಗೆ ಒಬ್ಬನು ಕಾರಣನೋ, ಹಾಗೆಯೇ ಅಂತಹ ಗುಣಪೂರ್ಣನೂ ಸರ್ವತ್ರ ವ್ಯಾಪ್ತನೂ ಆದ ಪುರುಷನು ಒಬ್ಬನೇ ಎಂದು ಹೇಳುತ್ತೇನೆ, ಎಂಬ ಮೋಕ್ಷಧರ್ಮವಚನದಿಂದಲೂ ಎಲ್ಲಾ ಪ್ರಮಾಣಗಳಿಗೂ ಶ್ರೀಹರಿಯು ಸರ್ವೋತ್ತಮನೆಂಬುವಲ್ಲಿಯೇ ಮುಖ್ಯತಾತ್ಪರ್ಯವೆಂದು ತಿಳಿಯುತ್ತದೆ. ॥ ೧೨ ॥

ಪೀ—ಈಗ ಅಹಂ ಬ್ರಹ್ಮಾಸ್ಮಿ ಯೋಽಸೌ ಸೋಽಹಂ ಎಂಬ ವಾಕ್ಯಗಳು ಪರರಿಗೆ ಪ್ರತಿಕೂಲವೇ ಆಗಿವೆ ಎಂಬ ಅಭಿಪ್ರಾಯದಿಂದ ಅವುಗಳ ಅರ್ಥ ಹೇಳತಕ್ಕ ಪ್ರಮಾಣ ಹೇಳುತ್ತಾರೆ—

ಭಾ. ॥ (೧) ಹಂನಾಮ ಹನ್ಯಮಾನತ್ವಾಜ್ಜೀವಸ್ಯ ಸಮುದಾಹೃತಂ । ಜೀವಾದನ್ಯೋ ಯತೋ ವಿಷ್ಣುರಹಂನಾಮಾ ತತಃ ಸ್ಮೃತಃ । (೨) ಸ್ಮೀತಿ ಜೀವಃ ಸಮದ್ದಿಷ್ಟಃ ಸ್ಮೀತ್ಯಲ್ಪಂ ಸುಮಿತಶ್ಚತಃ । ಪೂರ್ಣತ್ವಾದಸ್ಮಿನಾಮಾಽಸೌ ಪೂರ್ಣಪೂರ್ಣತ್ವಹೇತುತಃ । ಬ್ರಹ್ಮಾಸ್ಮೀತ್ಯುಚ್ಯತೇ ವಿಷ್ಣುರ್ಬೃಹತ್ಪೂರ್ಣೋ ಯತಃ ಸದಾ । (೩) ಅಸೌ ಸೂರ್ಯಗತೋ ವಿಷ್ಣುರ್ದೂರಸ್ಥತ್ವಾತ್ತ್ವಕೀರ್ತಿತಃ । ಅಹಂನಾಮಾ ಜೀವಗತೋ ನಿತ್ಯಾಹೇಯತ್ವಹೇತುತಃ । ಇತಿ ಬ್ರಹ್ಮಾಂಡೇ ॥ ॥ ೧೩ ॥

ಅ ॥ (೧) ಜೀವನು ಸಂಹರಿಸಲ್ಪಡುವುದರಿಂದ (ಜೀವರ ದೇಹಕ್ಕೆ ನಾಶವಿದ್ದುದರಿಂದ) ಜೀವರಿಗೆ **ಹಂ** ಎಂದು ಹೆಸರು. ವಿಷ್ಣುವು ಜೀವರಿಂದ ಭಿನ್ನನಾದುದರಿಂದ **ಅಹಂ** ಎನಿಸುತ್ತಾನೆ. (೨) (ಹೀಗೆ **ಹಂ ನ ಭವತೀತಿ ಅಹಂ** ಎಂದು ಅಹಂ ಎಂಬ ಶಬ್ದಕ್ಕೆ ಅರ್ಥ ಹೇಳಿ ಈಗ **ಅಸ್ಮಿ** ಎಂಬ ಶಬ್ದಕ್ಕೆ ಅರ್ಥ ಹೇಳುತ್ತಾರೆ.) ಸ್ಮಿ ಎಂಬ ಶಬ್ದದಿಂದ ಜೀವನು ಹೇಳಿಸಿಕೊಳ್ಳಲ್ಪಡುತ್ತಾನೆ. ಹೇಗೆಂದರೆ—ಪರಿಮಿತಿಯುದ್ದುದರಿಂದ ಸ್ಮಿ ಎಂದರೆ ಅಲ್ಪವು ಜೀವನೂ ಅಲ್ಪನೇ ಆಗಿರುತ್ತಾನೆ. ಶ್ರೀಹರಿಯು ಗುಣಪೂರ್ಣನಾದುದರಿಂದ **ಅಸ್ಮಿ** ಎನಿಸುತ್ತಾನೆ. (ಹಾಗಾದರೆ ಬ್ರಹ್ಮ ಶಬ್ದವು ವ್ಯರ್ಥವೆಂದರೆ) ಪೂರ್ಣಪೂರ್ಣನು ಅಂದರೆ ಪೂರ್ಣಗಳಾದ ವಸ್ತುಗಳಿಗೂ ಪೂರ್ಣತ್ವವನ್ನು ಕೊಡುವವನಾದುದರಿಂದ ಬ್ರಹ್ಮಾಸ್ಮಿ ಎನಿಸುತ್ತಾನೆ. ಸದಾ ವಿಷ್ಣುವು ಪೂರ್ಣನೇ ಆಗಿರುತ್ತಾನೆ. (ಏವಂಚ **ಅಹಂ ಬ್ರಹ್ಮಾಸ್ಮಿ** ಎಂಬುದಕ್ಕೆ ಜೀವರಿಂದ ಭಿನ್ನನಾದುದರಿಂದ **ಅಹಂ** ಎನಿಸಿದ ಶ್ರೀವಿಷ್ಣುವು ಪೂರ್ಣಗಳಿಗೂ ಪೂರ್ಣತೆಯನ್ನು ಕೊಡುವವನೆಂದರ್ಥವು.) (೩) (**ಯೋಽಸೌ ಸೋಽಹಂ** ಎಂಬ ವಾಕ್ಯದಲ್ಲಿದ್ದ **ಅಸೌ ಅಹಂ** ಎಂಬ ಶಬ್ದಗಳಿಗೆ ಅರ್ಥ ಹೇಳುತ್ತಾರೆ.) ಸೂರ್ಯನಲ್ಲಿ ಅಂತರ್ಯಾಮಿಯಾದ ಶ್ರೀವಿಷ್ಣುವು ದೂರದಲ್ಲಿದ್ದ ಪ್ರಯುಕ್ತ **ಅಸೌ** ಎಂದು ಎನಿಸುತ್ತಾನೆ. ನಿತ್ಯದಲ್ಲಿಯೂ ಎಲ್ಲರಿಂದಲೂ ಬಿಡಲ್ಪಡದಿರುವವನಾದುದರಿಂದ ಜೀವನೊಳಗಣ ವಿಷ್ಣುವು **ಅಹಂ** ಎನಿಸುತ್ತಾನೆ. (ಏವಂಚ ಸೂರ್ಯನೊಳಗಣ ವಿಷ್ಣುವೇ ಜೀವನೊಳಗೂನು. ಹೀಗೆ ಸೂರ್ಯಾಂತರ್ಯಾಮಿಗೂ ಜೀವಾಂತರ್ಯಾಮಿಗೂ ಐಕ್ಯವೆಂದು ಈ ವಾಕ್ಯವಲ್ಲಿ ಹೇಳುತ್ತದೆ.) ಹೀಗೆ ಬ್ರಹ್ಮಾಂಡಪುರಾಣವಾಕ್ಯದಿಂದಲೂ ಎಲ್ಲಾ ಪ್ರಮಾಣಗಳಿಗೂ ಶ್ರೀಹರಿಯು ಸರ್ವೋತ್ಕೃಷ್ಟನೆಂಬುವಲ್ಲಿಯೇ ಮುಖ್ಯ ತಾತ್ಪರ್ಯವೆಂದು ತಿಳಿಯುತ್ತದೆ. ॥ ೧೩ ॥

ಪೀ—(1) ಭೇದವನ್ನು ಹೇಳುವ ವಾಕ್ಯಗಳು ಹೆಚ್ಚು ಇವೆ. ಅವುಗಳಿಗೆ ಬೇರೆ ಅರ್ಥವನ್ನು ಹೇಳುವುದು ಸರ್ವಥಾ ಶಕ್ಯವಲ್ಲ, ಆದುಕಾರಣ ಅವುಗಳಿಂದ ವಿರೋಧವು ಬರುವುದರಿಂದ ತತ್ತ್ವಮಸಿ

ಇತ್ಯಾದಿ ವಾಕ್ಯಗಳಿಗೆ ಐಕ್ಯವೆಂಬ ಅರ್ಥವನ್ನು ಸರ್ವಥಾ ಹೇಳುವುದು ಯುಕ್ತವಲ್ಲ. (2) ಐಕ್ಯವನ್ನು ಹೇಳುವಂತೆ ತೋರುವ ವಾಕ್ಯಗಳು ಬಹುಕಡಿಮೆ. ಅವುಗಳಿಗೆ ಬೇರೆ ಅರ್ಥ ಮಾಡಲಿಕ್ಕೆ ಶಕ್ಯವೂ ಆಗಿದೆ. (3) ಭೇದವಾಕ್ಯಗಳು ವ್ಯಾವಹಾರಿಕ ಭೇದವನ್ನು ಹೇಳುತ್ತವೆಂದು ಹೇಳಕೂಡದು. ಏಕೆಂದರೆ ಮೋಕ್ಷದಲ್ಲಿಯೂ ಜೀವಬ್ರಹ್ಮರಿಗೆ ಭೇದವದೆ ಎಂದು ಹೇಳುವ ಅನೇಕ ವೇದಗಳಿವೆ, ಎಂಬ ಅಭಿಪ್ರಾಯದಿಂದ ಮೋಕ್ಷದಲ್ಲಿಯೂ ಭೇದವನ್ನು ಹೇಳುವ ಸ್ಪಷ್ಟಗಳಾದ ಬಹುವೇದವಾಕ್ಯಗಳನ್ನು ಹೇಳುತ್ತಾರೆ—

ಭಾ. ॥ (೧) ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಉತ್ತಮಃ ಪುರುಷಃ ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ । (೨) ಸ ಏಕಧಾ ಭವತಿ ತ್ರಿಧಾ ಭವತಿ ಪಂಚಧಾ ಸಪ್ತಧಾ । (೩) ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ । ಸೋಽಶ್ನುತೇ ಸರ್ವಾನ್ಕಾಮಾನ್ಸಹ ಬ್ರಹ್ಮಣಾ ವಿಪಶ್ಚಿತಾ । (೪) ಏತಮಾನಂದಮಯಮಾತ್ಮಾನಮುಪಸಂಕ್ರಮ್ಯ । ಇಮಾಂಲ್ಲೋಕಾನ್ಕಾಮಾನ್ನೀ ಕಾಮರೂಪ್ಯನುಸಂಚರನ್ । ಏತತ್ಸಾಮ ಗಾಯನ್ನಾಸ್ತೇ । (೫) ಸ ಯ ಆತ್ಮಾನಮೇವ ಲೋಕಮುಪಾಸ್ತೇ ನ ಹಾಸ್ಯ ಕರ್ಮ ಕ್ಷೀಯತೇಽಸ್ಮಾದ್ಧ್ಯೇವಾತ್ಮನೋ ಯದ್ಯತ್ಕಾಮಯತೇ ತತ್ತತ್ಸೃಜತೇ । (೬) ಕೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ । (೭) ತದಾ ವಿದ್ವಾನ್ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ । (೮) ಯಥೋದಕಂ ಶುದ್ಧೇ ಶುದ್ಧಮಾಸಿಕ್ತಂ ತಾದೃಗೇವ ಭವತಿ । (೯) ನಾನಾತ್ವೇನಾಭಿಸಂಬದ್ಧಾ ಸ್ತದಾ ತತ್ಕಾಲಭಾವಿನಾ । ಪ್ರಕೃತಾ ಕರಣಾತೀತಾಃ ಸ್ವಾತ್ಮನ್ಯೇವ ವ್ಯವಸ್ಥಿತಾಃ । ಸಂಯೋಗಃ ಪ್ರಕೃತೇರ್ನೈಷಾಂ ಮುಕ್ತಾನಾಂ ತತ್ತ್ವದರ್ಶನಾತ್ । ಪುರುಷಾನ್ಬಹುತ್ವೇನ ಪ್ರತೀತಾ ನ ಪ್ರವರ್ತಕೇ । ಪ್ರವರ್ತತಿ ಪುನಃ ಸರ್ಗೇ ತೇಷಾಂ ಸಾ ನ ಪ್ರವರ್ತಕೇ । (೧೦) ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ । ಸರ್ಗೇಽಪಿ ನೋಪಜಾಯಂತೇ ಪ್ರಲಯೇ ನ ವ್ಯಥಂತಿ ಚ । (೧೧) ನ ಯತ್ರ ಮಾಯಾ ಕಿಮುತಾಪರೇ ಹರೇರನುವ್ರತಾ ಯತ್ರ ಸುರಾಸುರಾರ್ಚಿತಾ ಇತ್ಯಾದಿಶ್ರುತಿಸ್ಮೃತಿಷು ಸತಾತ್ಪರ್ಯಂ ಮುಕ್ತಾನಾಂ ವಿಷ್ಣೋರ್ಭೇದಸ್ಯೈವೋಕ್ತೇಃ ॥ ೧೪ ॥

ಅ ॥ (೧) ಜ್ಯೋತೀರೂಪನಾದ ಪರಬ್ರಹ್ಮನ ಸಮೀಪವನ್ನು ಉತ್ತಮ ಪುರುಷನು ಸ್ವರೂಪಾನಂದಾವಿರ್ಭಾವದಿಂದ ಹೊಂದುತ್ತಾನೆ. (ಇಲ್ಲಿ ಸಮೀಪಕ್ಕೆ ಹೋಗುತ್ತಾನೆಂದು ಹೇಳಿದ ಕಾರಣ ಭೇದವದೆ, ಎಂದು ತಿಳಿಯುತ್ತದೆ. **ಸ್ವೇನ ರೂಪೇಣಾಭಿನಿಷ್ಪದ್ಯತೇ** ಸ್ವರೂಪಾನಂದಾವಿರ್ಭಾವವಾಗುತ್ತದೆಂದು ಹೇಳಿದಪ್ರಯುಕ್ತ ಈ ವಾಕ್ಯವು ಮೋಕ್ಷವನ್ನೇ ತಿಳಿಸುತ್ತದೆ.) (೨) ಮುಕ್ತನು ಮೋಕ್ಷದಲ್ಲಿ ನಗುತ್ತಾ ತಿನ್ನುತ್ತಾ ಆಟವಾಡುತ್ತಾ ಸ್ತ್ರೀಯರೊಡನೆ ವಿಹರಿಸುತ್ತಾ ವಾಹನಗಳಿಂದ ಸಂಚರಿಸುತ್ತಿರುತ್ತಾನೆ. (೩) ಮುಕ್ತರು ಸ್ವೇಚ್ಛೆಯಿಂದ ಒಂದು ರೂಪವುಳ್ಳವರು, ಮೂರು, ಐದು, ಏಳು, ರೂಪಗಳುಳ್ಳವರೂ ಆಗುತ್ತಾರೆ. ಯಾರು ಹೃದಯ ಗುಹೆಯೆಂಬ ಉತ್ತಮವಾದ ಆಕಾಶದಲ್ಲಿರುವ ಶ್ರೀಹರಿಯನ್ನು ತಿಳಿಯುತ್ತಾರೋ, ಅವರು ಸರ್ವಜ್ಞನಾದ ಪರಬ್ರಹ್ಮನಿಂದ ಅಥವಾ ಚತುರ್ಮುಖ ಬ್ರಹ್ಮನಿಂದ ಕೂಡಿ ತಮಗೆ ತಮಗೆ ಯೋಗ್ಯಗಳಾದ ಎಲ್ಲಾ ಭೋಗಗಳನ್ನುಣ್ಣುತ್ತಾರೆ. (ತೈ. ಆ. ೨ ಮಂ. ೨ ಪು. ೧೨೩) (ಇಲ್ಲಿ **ಬ್ರಹ್ಮಣಾ ಸಹ** ಎಂಬುದರಿಂದ ಭೇದವನ್ನು ಹೇಳಿದಂತೆ ಆಯಿತು.)ಮುಕ್ತಪರವೂ ಆಗಿದೆ. (೪) ಈ ಆನಂದಸ್ವರೂಪನಾದ ನಾರಾಯಣರೂಪಿ ಶ್ರೀಪರಮಾತ್ಮನ ಸಮೀಪಕ್ಕೆ ಹೋಗಿ ಇಚ್ಛಿಸಿದ ಎಲ್ಲಾ

ಭೋಗಗಳನ್ನು ಹೊಂದಿ ಸ್ವೇಚ್ಛಾನುಸಾರ ರೂಪವುಳ್ಳವರಾಗಿ ಭೂರಾದಿ ಲೋಕಗಳಲ್ಲಿ ಸಂಚರಿಸಿಕೊಂಡು **ಹಾಽ ವುಹಾಽ ವು** ಎಂಬ ಸಾಮವನ್ನು ಗಾನಮಾಡುತ್ತಾ ಇರುತ್ತಾರೆ. (**ಉಪಸಂಕ್ರಮ್ಯ** ಎಂದು **ಸಮಿಾಪಪ್ರಾಪ್ತಿ** ಹೇಳಿದುದರಿಂದ ಭೇದವನ್ನು ಹೇಳಿದಂತೆಯೇ ಆಯಿತು. **ಅಸ್ಮಾಲ್ಲೋಕಾತ್ಪ್ರೇತ್ಯ** ಎಂದು ಬುಡದಲ್ಲಿದ್ದ ಪ್ರಯುಕ್ತ ಮುಕ್ತಪರವೆಂದು ತಿಳಿಯುತ್ತದೆ.) (ತೈ. ಆ. ೩, ಮ ೧೪, ಪು. ೧೭೫)

(೫) ಯಾರು ಪರಮಾತ್ಮನನ್ನು ಸರ್ವರಿಗೆ ಆಶ್ರಯನನ್ನಾಗಿ ಉಪಾಸನೆಮಾಡುತ್ತಾರೋ, ಮೋಕ್ಷದಲ್ಲಿ ಆನಂದಾಭಿವೃದ್ಧಿಕರವಾದ ಈ ಜ್ಞಾನಿಗಳ ಕರ್ಮವು ಕ್ಷೀಣವಾಗುವುದಿಲ್ಲ. ಆ ಮುಕ್ತರು ಯಾವುದು ಯಾವುದನ್ನು ಇಚ್ಛಿಸುತ್ತಾರೋ, ಆದನ್ನು ಶ್ರೀಹರಿಯ ಪ್ರಸಾದದಿಂದ ಉಂಟುಮಾಡಿಕೊಳ್ಳುತ್ತಾರೆ. (ಇಲ್ಲಿ ಶ್ರೀಹರಿಯ ಪ್ರಸಾದದಿಂದ ಭೋಗವನ್ನು ಹೇಳಿದುದರಿಂದ ಭೇದವು ಉಕ್ತವಾಯಿತು. ಇದು ಮುಕ್ತಪರವೆಂದು ತಿಳಿಸುವುದಕ್ಕಾಗಿ **ಸ ಯಃ** ಇದು ಮೊದಲಾದುದು ಮೊದಲಿನ ವಾಕ್ಯವು. ಅಮುಕ್ತರ ಕರ್ಮಕ್ಕೆ ನಾಶವಿದೆ. (೬)ಯಾವ ಮೋಕ್ಷದಲ್ಲಿ ಪೂರ್ವಕಲ್ಪದಲ್ಲಿ ಮುಕ್ತರಾದ ಸಾಧ್ಯಾದಿ ದೇವತೆಗಳು ಇರುತ್ತಾರೋ, ಅಂತಹ ಪೂರ್ಣಸುಖರೂಪವಾದ ಮೋಕ್ಷವನ್ನು ಮಹಾನುಭಾವರಾದ ದೇವತೆಗಳು ತಮ್ಮತಮ್ಮ ಅಧಿಕಾರವು ಅವಸಾನವಾಗುವಾಗ ಹೊಂದುತ್ತಾರೆ. (೭)ಆಗ ಅಪರೋಕ್ಷ ಜ್ಞಾನಿಗಳು ಮೋಕ್ಷಕ್ಕೆ ಪ್ರತಿಬಂಧಕವಾದ ಪುಣ್ಯವನ್ನು ಪಾಪವೆಲ್ಲವನ್ನು ಬಿಟ್ಟು ದೋಷರಹಿತರಾಗಿ ಶ್ರೀಹರಿಯ ಪೂರ್ಣಾನಂದತ್ವಾದಿ ರೂಪವಾದ ಬ್ರಹ್ಮ ಸಾಮ್ಯವನ್ನು ಹೊಂದುತ್ತಾರೆ. (ಆ. ಖಂ. ೫ ಮಂ. ೩) (೮) ಎಲೋ ನಚಿಕೇತರೇ ಸ್ವಚ್ಛವಾದ ನೀರನ್ನು ಸ್ವಚ್ಛವಾದ ನೀರಿನಲ್ಲಿ ಸೇರಿಸಿದರೆ–ಅದಕ್ಕೆ ಸದೃಶವಾದುದೇ ಆಗುತ್ತದೆ. ಹೊರತು ಅದೇ ಆಗುವುದಿಲ್ಲ. ಅದೇ ಆಗಿದ್ದರೆ ನೀರಿನಲ್ಲಿ ವೃದ್ಧಿಯು ಕಾಣಬಾರದಿತ್ತು. ಹೀಗೆಯೇ ಸರ್ವರಿಗೆ ಅಧಿಪತಿಯಾದ ಜತುರ್ಮುಖನೂ ಕೂಡ ಮುಕ್ತನಾಗಿ ಶ್ರೀಹರಿಯನ್ನು ಹೊಂದಿ ಶ್ರೀಹರಿಗೆ ಸದೃಶನೇ ಆಗುತ್ತಾನೆ. ಅವನೇ ಆಗುವುದಿಲ್ಲ. ಇತರ ಜೀವರು ಆಗುವುದಿಲ್ಲವೆಂಬುವುದು ಸುತರಾಂ ಸಿದ್ಧಿಸುತ್ತದೆ. (ಕಾಠಕ. ಅ ೨ ವ.೧ ಮ.೧೫) (೯) ಮೋಕ್ಷದಲ್ಲಿರುವ ಪುರುಷರು ಮೋಕ್ಷಕಾಲದಲ್ಲಿಯೂ ಭೇದವುಳ್ಳವರಾಗಿರುತ್ತಾರೆ. ಮುಕ್ತರಿಗೆ ಪ್ರಕೃತಿಪುರುಷ ವಿವೇಕಜ್ಞಾನವಿದ್ದುದರಿಂದ ಪ್ರಕೃತಿ ಸಂಬಧವೇ ಇಲ್ಲ. ಆದುಕಾರಣ ಪ್ರಾಕೃತ ಇಂದ್ರಿಯಗಳಿಲ್ಲದವರು ತಮ್ಮ ತಮ್ಮ ಸ್ವರೂಪಭೂತಗಳಾದ ಇಂದ್ರಿಯಾದಿಗಳಿಂದ ಕೂಡಿದವರು, ಸ್ವರೂಪಾನಂದವನ್ನೇ ಉಣ್ಣುತ್ತಿರುತ್ತಾರೆ. ಪ್ರಕೃತಿಯು ಪ್ರಕೃತ ಮುಕ್ತರಿಂದ ಇತರರಾದ ಸಂಸಾರಿಗಳು ಹೆಚ್ಚು ಮಂದಿ ಇದ್ದ ಪ್ರಯುಕ್ತ ಆ ಸಂಸಾರಿಗಳಲ್ಲಿಯೇ ತನ್ನ ವ್ಯಾಪಾರಗಳನ್ನು ನಡಿಸಿಕೊಂಡಿರುತ್ತದೆ. ಮುಕ್ತರು ಪ್ರಕೃತಿ ತತ್ತ್ವವನ್ನು ತಿಳಿದಿರುವುದರಿಂದ ಪ್ರಕೃತಿಯು ಸಂಸಾರದಿಂದ ಮುಕ್ತರಾದವರನ್ನು ಮರಳಿ ಜನನ ಮರಣಾದಿಗಳು ಇರುವ ಸಂಸಾರದಲ್ಲಿ ಬಂಧಿಸಲಿಕ್ಕೆ ಪ್ರವೃತ್ತಿಮಾಡುವುದಿಲ್ಲ. (ಪ್ರಲಯಕಾಲದಲ್ಲಿ ಮುಕ್ತರಿಗೆ ಪ್ರಕೃತಿಸಂಬಂಧ ವಿಲ್ಲವಾದರೂ ಸೃಷ್ಟಿಕಾಲದಲ್ಲಿ ಪ್ರಕೃತಿಸಂಬಂಧವು ಇರಬಹುದೆಂದರೆ–) ಸೃಷ್ಟಿಕಾಲವು ಪ್ರವೃತ್ತವಾಗುವ ಕಾಲದಲ್ಲಿಯೂ ಮುಕ್ತರಿಗೆ ಪ್ರಕೃತಿಯು ಪ್ರವೃತ್ತವಾಗುವುದಿಲ್ಲ. (ಅಂದರೆ ಸೃಷ್ಟಿಕಾಲದಲ್ಲಿಯೇ ಮುಕ್ತರನ್ನು ತಿರುಗಿ ಸಂಸಾರಕ್ಕೆ ಪ್ರಕೃತಿಯು ಕಳುಹಿಸುವುದಿಲ್ಲ.) (ಇದರಿಂದ ಮುಕ್ತರಿಗೆ ಪ್ರಕೃತಿಸಂಬಂಧವೇ ಇಲ್ಲವೆಂದುಕ್ತವಾಯಿತು) (೧೦) ಮುಂದೆ ಹೇಳುವ ಜ್ಞಾನವನ್ನು ಸಂಪಾದಿಸಿನನ್ನ ಸಾರೂಪ್ಯವನ್ನೇ ಹೊಂದಿರುತ್ತಾರೆ. ಸೃಷ್ಟಿಕಾಲದಲ್ಲಿ ಮರಳಿ ಹುಟ್ಟುವುದಿಲ್ಲ. ಪ್ರಲಯ ಕಾಲದಲ್ಲಿ ಮರಣಾದಿರೂಪವಾದ ದುಃಖವನ್ನು ಹೊಂದುವುದಿಲ್ಲ. (ಹೀಗೆ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿರುವನು.) (**ಸಾಧರ್ಮ್ಯಂ** ಎಂಬುದರಿಂದ ಭೇದವು ಉಕ್ತವಾಯಿತು.) (ಗೀ. ಅ. ೧೪ ಶ್ಲೋ. ೨) (೧೧) ಯಾವ ವೈಕುಂಠ ಲೋಕದಲ್ಲಿ ಪ್ರಕೃತಿಯು ಅಥವಾ ಪ್ರಕೃತಿ ಸಂಬಂಧವೇ ಇಲ್ಲ. ರಾಗಾದಿ ದೋಷಗಳಿಲ್ಲವೆಂಬುದು ಸುತರಾಂ ಸಿದ್ಧವು. ದೇವತೆಗಳೂ ತತ್ತ್ವಾಭಿಮಾನಿದೇವತೆಗಳೂ ಅಥವಾ ಅಸುರಕುಲದಲ್ಲಿ ಹುಟ್ಟಿದ ಪ್ರಹ್ಲಾದಾದಿಗಳೂ ಇವರಿಂದ ಪೂಜಿತರಾದ ಮುಕ್ತರು ಶ್ರೀಹರಿಯನ್ನು ಅನುಸರಿಸಿಯೇ ಆವನ ಪ್ರೇರಣಾನುಸಾರವಾಗಿ ಇರುತ್ತಾರೆ. ಇದು ಮೊದಲಾದ ವೇದ ಸ್ಮೃತಿಗಳಲ್ಲಿ ತಾತ್ಪರ್ಯಪೂರ್ವಕವಾಗಿ ಮುಕ್ತರಿಗೆ ವಿಷ್ಣುವಿನಿಂದ ಭೇದವನ್ನೇ

ಹೇಳಿರುತ್ತಾರೆ (ಅದುಕಾರಣ ಆ ವೇದಾದಿಗಳ ವಿರೋಧವು ಇರುವುದರಿಂದ ತತ್ತ್ವಮಸಿ ಇತ್ಯಾದಿ ವಾಕ್ಯಗಳು ಜೀವಬ್ರಹ್ಮರಿಗೆ ಐಕ್ಯವನ್ನು ಹೇಳುತ್ತವೆಂದು ಹೇಳಕೂಡದು. ಭೇದವನ್ನು ಹೇಳುತ್ತವೆಂದೇ ಹೇಳಬೇಕು.) ॥ ೧೪ ॥

ಪೀ—ಹೀಗೆ ಬೇರೆಕಡೆ ಇರುವ ವಾಕ್ಯಗಳ ವಿರೋಧವಿದ್ದುದರಿಂದ ತತ್ತ್ವಮಸಿ ಇತ್ಯಾದಿ ವಾಕ್ಯಗಳು ಐಕ್ಯಬೋಧಕವಾಗುವುದಿಲ್ಲವೆಂದರು ಈಗ ಈ ಪ್ರಕರಣದಲ್ಲಿರುವ ವಾಕ್ಯವಿರೋಧವಿದ್ದುದರಿಂದಲೂ ಜೀವಬ್ರಹ್ಮರಿಗೆ ಐಕ್ಯವೆಂದು ಅರ್ಥ ಹೇಳಕೂಡದೆನ್ನುತ್ತಾರೆ -

ಭಾ. ॥ (೧) **ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ ಸತಿ ಸಂಪದ್ಯ ನ ವಿದುಃ ಸತ ಆಗಮ್ಯ ನ ವಿದುರಿತ್ಯಾದೌ ಭೇದ ಏವ ಹ್ಯತ್ರ ಸತಾತ್ಪರ್ಯಂ ಪ್ರತಿಪಾದಿತಃ ।** (೨) **ತಾ ನದ್ಯಃ ಸಮುದ್ರಾದಾಗತ್ಯ ಸಮುದ್ರಂ ಪ್ರವಿಶಂತಿ ಸ ಸಮುದ್ರ ಏವ ಭವತಿ ನ ನದೀಭಾವಂ ಪ್ರಾಪ್ನೋತಿ ಸ ಏವ ಚ ಸಮುದ್ರೋ ಭವತಿ ಸಮುದ್ರ ಏವ ಸಮುದ್ರೋ ಭವತಿ ನ ನದ್ಯ ಇತಿ ಭೇದಸ್ಯೈವಾವಧಾರಣಂ ಕ್ರಿಯತೇ ।** (೩) **ನ ಚ ಸ್ವಕೀಯಸ್ಯ ಬ್ರಹ್ಮಭಾವಸ್ಯಾಜ್ಞೋಽಪಹರ್ತಾ ಭವತಿ। ಕಿಂ ತ್ವವಿದ್ಯಮಾನಬ್ರಹ್ಮಭಾವಾಭಿಮಂತ್ಯೈವಾಪಹರ್ತಾ ಭವತಿ । ನ ಹಿ ಸ್ವಕೀಯವಿತ್ತಪರಿತ್ಯಾಗ್ಯಪಹರ್ತಾ ಭವತಿ। ಕಿಂತು ಪರಸ್ವಹರ್ತ್ಯೇವ।** (೪) **ತಸ್ಮಾದವಿದ್ಯಮಾನಬ್ರಹ್ಮಭಾವಾಭಿಮಂತ್ಯೈವಾಪಹಾರ್ಷೀತ್ ಸ್ತೇಯಮಕಾರ್ಷೀದಿತಿ ದೃಷ್ಟಾಂತಪೂರ್ವಕಮುಚ್ಯತೇ ॥॥ ೧೫ ॥**

ಅ ॥ ೧೮) *ಸನ್ಮೂಲಾಃ, ಸತಿ ಸಂಪದ್ಯ ಇತ್ಯಾದಿ ವೇದಗಳಲ್ಲಿ ಭೇದವೇ ತಾತ್ಪರ್ಯಪೂರ್ವಕವಾಗಿ ಹೇಳಲ್ಪಟ್ಟಿದೆ. (ಅಂದರೆ ೧) ಸನ್ಮೂಲಾಃ ಎಂಬುದು ಭೇದವನ್ನೇ ಹೇಳುತ್ತದೆಂದು ಹಿಂದೆ ಹೇಳಿದ ಪ್ರಮಾಣಗಳಿಂದ ತಿಳಿದುಬರುತ್ತದೆ. (೨) ಸತಿ ಸಂಪದ್ಯ ಇತ್ಯಾದಿಗಳಲ್ಲಿ ಸ್ಪಷ್ಟವಾಗಿಯೇ ಭೇದವು ತೋರುವುದು. ಹೇಗೆಂದರೆ ಮನೆಯೊಳಗೆ ಹೊಕ್ಕುವವನಿಗೂ ಮನೆಯಿಂದ ಹೊರಗೆ ಬರುವವನಿಗೂ ಐಕ್ಯವು ಕೂಡಲಾರದಷ್ಟೆ. (೩) ಪರಸ್ಪರ ಭಿನ್ನಗಳಾದ ನಾನಾ ವೃಕ್ಷರಸಗಳು, ನದೀ ಸಮುದ್ರಗಳು, ಇವುಗಳನ್ನು ದೃಷ್ಟಾಂತವಾಗಿ ಹೇಳಿದಕಾರಣ ಭೇದದಲ್ಲಿಯೇ ತಾತ್ಪರ್ಯವೆಂದು ತಿಳಿದುಬರುವುದರಿಂದ ಭೇದವೇ ಇಲ್ಲಿ ಹೇಳಿದೆ. ಆದಪ್ರಯುಕ್ತ ಭೇದಕ್ಕೆ ವಿರುದ್ಧವಾದ ಐಕ್ಯವನ್ನು ತತ್ತ್ವಮಸಿ ಇತ್ಯಾದಿಗಳಲ್ಲಿ ಸರ್ವಥಾ ಹೇಳಲಾಗುವುದಿಲ್ಲ.) (೪) (**ನಾನಾವೃಕ್ಷರಸಾನಾಮೇಕತಾಂ** ಎಂದು ಐಕ್ಯವೇ ಹೇಳಲ್ಪಡುತ್ತದೆಂದು ಹೇಳಕೂಡದು. **ಏಕತಾಂ** ಎಂಬುವುದಕ್ಕೆ ಮಿಶ್ರಣವೆಂಬ ಅರ್ಥಹೇಳಬೇಕು. ಏಕೆಂದರೆ—ನಾನಾ ವೃಕ್ಷರಸಗಳು ಪರಸ್ಪರಭೇದ ಬಿಟ್ಟು, ಮೊದಲೇ ಇದ್ದ ಜೇನುವಿನಿಂದ ಐಕ್ಯವನ್ನು ಹೊಂದುವುದಿಲ್ಲ. ಪರಂತು ನೂಲುಗಳು ಮೊದಲು ಇಲ್ಲದ ಬಟ್ಟೆಯನ್ನು ಹೇಗೆ ಮಾಡುತ್ತವೋ, ಹಾಗೆಯೇ ಪರಸ್ಪರ ಭಿನ್ನಗಳೇ ಆದ ಪುಷ್ಪರಸಗಳು ಮೊದಲು ಇಲ್ಲದ ಜೇನುವನ್ನು ಹುಟ್ಟಿಸುತ್ತವೆ. ಆದರೂ ನದೀ ಸಮುದ್ರ ದೃಷ್ಟಾಂತದಲ್ಲಿ ನದಿಗಳಿಗೆ ಸಮುದ್ರದಿಂದ ಐಕ್ಯವು ಹೇಳಲ್ಪಡುತ್ತದೆನ್ನಬೇಕು ಎಂದರೆ—ಅಲ್ಲಿಯೂ ಹಾಗೆ ಹೇಳಲಾಗುವುದಿಲ್ಲ. ಏಕೆಂದರೆ ಐಕ್ಯವು ಆಗುತ್ತಿದ್ದರೆ ನೃದ್ಧಿಯು ಕಾಣದೆಹೋಗುತ್ತಿತ್ತು, ನೃದ್ಧಿಯು ಕಾಣುತ್ತಿದೆ, ಎಂಬ ಅಭಿಪ್ರಾಯದಿಂದ **ತಾಃ ಸಮುದ್ರಾತ್** ಇತ್ಯಾದಿಗಳಿಗೆ ಅರ್ಥಹೇಳುತ್ತಾರೆ—) ನದಿಗಳು ಸಮುದ್ರದಿಂದ (ನಿಯಮಿತ ಜಲರಾಶಿಯಿಂದ) ಬಂದು ಸಮುದ್ರಕ್ಕೆ ಪ್ರವೇಶಿಸುತ್ತವೆ. ಸಮುದ್ರವು ಸಮುದ್ರವೇ ಆಗುತ್ತದೆ. ನದೀಭಾವವನ್ನು ಹೊಂದುವುದಿಲ್ಲ. (**ಸಮುದ್ರ ಏವ ಭವತಿ** ಎಂಬ ವಾಕ್ಯಕ್ಕೆ

* ಇವುಗಳ ಅರ್ಥವು ಕನ್ನಡದಲ್ಲಿ ಹೇಳಲ್ಪಟ್ಟಿದೆ.

ಸಮುದ್ರವು ನದಿಯಾಗುವುದಿಲ್ಲವೆಂದು ಅರ್ಥಹೇಳಿ ಈಗ ನದಿಗಳು ಸಮುದ್ರವಾಗುವುದಿಲ್ಲವೆಂದೂ ಅರ್ಥ ಹೇಳುತ್ತಾರೆ.) ಸಮುದ್ರವೇ ಸಮುದ್ರವಾಗುತ್ತದೆ. ನದಿಗಳು ಸಮುದ್ರಭಾವವನ್ನು ಹೊಂದುವುದಿಲ್ಲ. ಹೀಗೆ ಅವುಗಳಿಗೆ ಭೇದವೇ ಹೇಳಲ್ಪಡುತ್ತದೆ (ಏವಂಜ ಆ ದೃಷ್ಟಾಂತದಿಂದ **ಸ ತ ಆಗಮ್ಯ** ಇತ್ಯಾದಿ ದಾರ್ಷ್ಟಾಂತಿಕ ವಾಕ್ಯದಲ್ಲಿಯೂ ಭೇದವೇ ಹೇಳಲ್ಪಡುತ್ತದೆ.) (೩) (ಸತ್ಯವಾದ ಬ್ರಹ್ಮಾತ್ಮೈಕ್ಯವನ್ನು ಬಿಟ್ಟ ಭೇದಜ್ಞಾನಿಯೇ **ಅಪಹಾರ್ಷೀತ್** ಇದಿರಿಗೆ ಕದ್ದನು. **ಸ್ತೇಯಮಕಾರ್ಷೀತ್** ಹಿಂದಿನಿಂದ ಕದ್ದನು ಎಂದು ದೃಷ್ಟಾಂತಪೂರ್ವಕವಾಗಿ ಹೇಳಲ್ಪಡುತ್ತಾನೆ, ಹೀಗೆ ಭೇದಜ್ಞಾನಿಗೇನೇ ಆ ದೃಷ್ಟಾಂತದಿಂದ ಅನರ್ಥಫಲವು ಹೇಳಲ್ಪಡುತ್ತದೆ. ಎಂದು ಪರರು ಹೇಳುವುದು ಅಯುಕ್ತವೆನ್ನುತ್ತಾರೆ.) (ಪರರ ಮತದಲ್ಲಿ ಜೀವನಿಗೆ ಬ್ರಹ್ಮತ್ವವು ಉಂಟೆಂದು ಸಾಧಿಸಲ್ಪಟ್ಟಿದೆ. ಜೀವನಿಗೆ ಬ್ರಹ್ಮತ್ವವು ಇಲ್ಲವಾದರೆ ಬ್ರಹ್ಮಾತ್ಮೈಕ್ಯ ಜ್ಞಾನವು ಇಲ್ಲದಿರುವುದರಿಂದ ಅನರ್ಥವು ಹೇಳಿದ್ದೂ ಕೂಡದೆ ಹೋಗುವುದು. ಏವಂಜ) ವಾಸ್ತವಿಕವಾಗಿ ಉಂಟೆಂದು ತಿಳಿದುದರಿಂದ ಸ್ವಕೀಯವಾದ ಬ್ರಹ್ಮತ್ವವನ್ನು ತಿಳಿಯದ ಭೇದವಾದಿಯು ಅಪಹಾರಿಗೆ ದೃಷ್ಟಾಂತನಾಗುವುದಿಲ್ಲ. ಪರಂತು ತನ್ನಲ್ಲಿ ಇಲ್ಲದಿರುವ ಬ್ರಹ್ಮನಲ್ಲಿಯೇ ಇರುವ ಬ್ರಹ್ಮತ್ವವನ್ನು ತನ್ನಲ್ಲಿಯೇ ಇರುವುದೆಂದು ತಿಳಿದವನೇ, (ಐಕ್ಯಜ್ಞಾನಿಯು) ಅಪಹಾರಿಗೆ ದೃಷ್ಟಾಂತನಾಗುತ್ತಾನೆ. (ತನ್ನದ್ದೇ ಆದ ಬ್ರಹ್ಮತ್ವವನ್ನು ಬಿಟ್ಟವನು ಅಪಹರಿಸಿದವನಿಗೆ ದೃಷ್ಟಾಂತನು ಏಕೆ ಆಗುವುದಿಲ್ಲ ಎಂದರೆ—) ಲೋಕದಲ್ಲಿ ತನ್ನ ದ್ರವ್ಯವನ್ನು ಪರಿತ್ಯಾಗಮಾಡಿದವನು ಅಪಹಾರಮಾಡಿದವನೆನಿಸಿಕೊಳ್ಳುವುದಿಲ್ಲ. (ಮೂಢನಾಗಲೀ ವಿರಕ್ತನಾಗಲೀ ತನ್ನ ದ್ರವ್ಯವನ್ನು ಬಿಡುತ್ತಾನೆ. ಏವಂಜ ಭೇದಜ್ಞಾನಿಯು ಅಪಹಾರಿಗೆ ದೃಷ್ಟಾಂತನಾಗುವುದಿಲ್ಲ.) ಪರಂತು ಇನ್ನೊಬ್ಬರ ದ್ರವ್ಯವನ್ನು ಅಪಹರಿಸುವವನೇ ಅಪಹರ್ತಾ ಎನಿಸುತ್ತಾನೆ. (೪) ಅದುಕಾರಣ ಲೋಕಾನುಸಾರವಾಗಿ ವಸ್ತುತಃ ತನ್ನಲ್ಲಿಲ್ಲದಿರುವ ಬ್ರಹ್ಮತ್ವವನ್ನು ತನಗೆ ಇದೆ, ಎಂದು ತಿಳಿದವನೇ **ಅಪಹಾರ್ಷೀತ್** ಇದಿರುಕದ್ದನು, **ಸ್ತೇಯಮಕಾರ್ಷೀತ್** ಹಿಂದಿನಿಂದ ಕದ್ದನು, ಎಂದು ದೃಷ್ಟಾಂತಪೂರ್ವಕವಾಗಿ ಹೇಳಲ್ಪಡುತ್ತಾನೆ. (ಆದಕಾರಣ ಜೀವಬ್ರಹ್ಮೈಕ್ಯವನ್ನು ತಿಳಿದವನಿಗೇನೇ ಆ ದೃಷ್ಟಾಂತದಿಂದ ಅನರ್ಥಫಲವು ಹೇಳಲ್ಪಡುತ್ತದೆ. ಅದರ ವಿರೋಧದಿಂದ ತತ್ತ್ವಮಸ್ಯಾದಿ ವಾಕ್ಯಗಳಿಗೆ ಐಕ್ಯವು ಅರ್ಥವಲ್ಲ) ॥ ೧೫ ॥

ಪೀ—ಹೀಗೆ ಹೇಳುವುದು ಅಯುಕ್ತವು. ಏಕೆಂದರೆ—ಲೋಕದಲ್ಲಿ ಈ ದ್ರವ್ಯವು ಬೇರೆಯವರದ್ದೇ. ನನ್ನದು ಅಲ್ಲವೇಅಲ್ಲ. ಎಂದು ತಿಳಿದವನು ವಂಚನೆಯಿಂದ ಆ ದ್ರವ್ಯವು ತನ್ನದ್ದೆಂದು ಮಾಡುವವನು ಕಳ್ಳನು. ನೋಡುತ್ತಿರುವಾಗಲೇ ಕದಿಯುವುದು ಅಪಹಾರವು. ಐಕ್ಯಜ್ಞಾನಿಗೆ ಪರಕೀಯವಾದ ಬ್ರಹ್ಮತ್ವವನ್ನು ವಂಚನೆಯಿಂದ ಅಥವಾ ಬಲಾತ್ಕಾರದಿಂದ ತನ್ನದ್ದೆಂದು ಮಾಡಲು ಶಕ್ಯವಲ್ಲ. ಆದುಕಾರಣ ಐಕ್ಯಜ್ಞಾನಿಯು ಸ್ತೇನನೂ ಅಪಹರ್ತನೂ ಹೇಗೆ ಆಗುವನು? ಎಂದರೆ—

ಭಾ. ॥ (೧) ಅದುಃಖಿತ್ವಪೂರ್ಣಜ್ಞಾನಾನಂದಸ್ವಾತಂತ್ರ್ಯಾದಿಬ್ರಹ್ಮಸ್ವಭಾವಾನನುಭವಂ ಸ್ವಾತ್ಮನೋಽಪಿ ವಿಜ್ಞಾತ್ರೈವ ತದ್ಭಾವಾಭಿಮತೇಃ ಸ್ತೈನ್ಯಂ । ಪರಕೀಯಾಭಿಮತೇರಪಹಾರಃ । (೨) ಪರಸ್ವಭಾವಾಭಿಮತೇರಪಹರ್ತಾ ಸ್ವವಂಚನಾತ್ । ಸ್ತೇನಶ್ಚಾಭೇದವೇತ್ತಾ ತು ಬ್ರಹ್ಮಹಾ ಹನ್ಯತೇ ಸದೇತಿ ತತ್ತ್ವವಿವೇಕೇ । (೩) ನ ಚ ದಾರ್ಷ್ಟಾಂತಿಕೋ ದೃಷ್ಟಾಂತೋಽಯಂ । ಸ ಯದಿ ತಸ್ಯ ಕರ್ತಾ ಭವತಿ ಸ ಯದಿ ತಸ್ಯ ಕರ್ತಾ ನ ಭವತೀತಿ ಹತಿಮುಕ್ತ್ಯೋರಪಹಾರಾನಪಹಾರ್ಯಕಹೇತುಕತ್ವಶ್ರುತೇಃ । ಅನ್ಯಥಾ ಯದಿ ದೃಢೋ ಭವತಿ ಯದ್ಯದೃಢೋ ಭವತೀತ್ಯುಚ್ಯೇತ । (೪) ನ ಚ ಸತ್ಯಾಸತ್ಯಮಾತ್ರಂ । ತದಾ ಸತ್ಯಾನೃತವಾದ್ಗೃಹ್ಣಾಂತೇನ ಪೂರ್ವೇರಪಹಾರದೃಷ್ಟಾಂತೋ ನ ಸ್ಯಾತ್ । (೫) ತಸ್ಮಾದಭೇದ—

ಜ್ಞಾನೇನ ಮಹಾಂತಂ ವಿನಾಶಂ ಪ್ರದರ್ಶ್ಯ ಭೇದಜ್ಞಾನಾನ್ಮುಕ್ತಿಪರಮೇವೈತ-ದ್ವಾಕ್ಯಂ ॥ ॥ ೧೬ ॥

ಅ ॥ (೧) ದುಃಖಲೇಶವಿಲ್ಲದಿರುವಿಕೆ, ಪರಿಪೂರ್ಣಜ್ಞಾನ, ಆನಂದ ಸರ್ವಸ್ವಾತಂತ್ರ್ಯ ಮೊದಲಾದ ಪರಬ್ರಹ್ಮನ ಧರ್ಮಗಳನ್ನು ತಿಳಿದುಕೊಂಡು (ಅಂದರೆ ಬ್ರಹ್ಮತ್ವವು ಪರಬ್ರಹ್ಮನದ್ದೇ, ತನ್ನ ದಲ್ಲ ಎಂದು ತಿಳಿದುಕೊಂಡಿದ್ದರೂ) ವಂಚನೆಯಿಂದ ಬ್ರಹ್ಮನ ಧರ್ಮವು ತನ್ನದೇ ಎಂದು ತಿಳಿದಿರುವುದರಿಂದ ಕಳ್ಳನು (ಅಂದರೆ ತಾನು ದುಃಖಿ ಅಜ್ಞಾನಿ ಅಸ್ವತಂತ್ರ ಅಪೂರ್ಣ ಇದುಮೊದಲಾದ ತನ್ನ ಅನುಭವಗಳನ್ನೂ ವಂಚನೆ ಮಾಡಿದುದರಿಂದ ಐಕ್ಯಜ್ಞಾನಿಯು ಕಳ್ಳನು.) ಪರಬ್ರಹ್ಮನದ್ದಾದ ಬ್ರಹ್ಮತ್ವವನ್ನು ಪರಬ್ರಹ್ಮನು ನೋಡುತ್ತಿದ್ದ ಹಾಗೆ ತನ್ನದ್ದೆಂದು ಹೇಳುತ್ತಾ ಇದಿರು ಅಪಹರಿಸಿದ ಕಾರಣ ಅಪಹರ್ತಾ ಎನಿಸುತ್ತಾನೆ. (೨) (ಬೇರೆಯವರ ದ್ರವ್ಯವನ್ನು ತನ್ನದ್ದನ್ನಾಗಿ ತಿಳಿಯುವವನು ಕಳ್ಳನು. ಅಥವಾ ಅಪಹಾರಿಯಾಗುವನು. ಐಕ್ಯಜ್ಞಾನಿಯು ಹಾಗಲ್ಲ, ಅದುಕಾರಣ ಸ್ತೇನನಾಗಲೀ ಅಪಹಾರಿಯಾಗಲೀ ಆಗಲಾರನು. ಎಂದರೆ ಹಾಗೆ ಹೇಳಕೂಡದು ಐಕ್ಯಜ್ಞಾನಿಯು ಸ್ತೇನಾಪಹಾರಿಗಳಿಗೆ ಸದೃಶನೆಂದು ಹೇಳುತ್ತೇವೆ. ದೃಷ್ಟಾಂತ ದಾರ್ಷ್ಟಾಂತಿಕಗಳಲ್ಲಿ ಸರ್ವಸಾಮ್ಯವು ಇರಲಾರದು. ಪ್ರಕೃತ ಜೀವಬ್ರಹ್ಮರಿಗೆ ಅಭೇದವೆಂದುತಿಳಿದವನು ಬ್ರಹ್ಮಧರ್ಮಗಳಾದ ಸರ್ವಜ್ಞತ್ವಾದಿಗಳನ್ನು ಅಪಲಾಪ ಮಾಡಿದ ಕಾರಣಅಪಹರ್ತನು. ತನ್ನಲ್ಲಿದ್ದ ದುಃಖನೊದಲಾದ ಅನುಭವಗಳನ್ನು ವಂಚನೆಮಾಡಿದ ಕಾರಣ ಸ್ತೇನ(ಕಳ್ಳ)ನು. ಅದುಕಾರಣ ಸ್ತೇನನೂ ಅಪಹಾರಿಯೂ ಆದ ಐಕ್ಯಜ್ಞಾನಿಗೆ ಅನರ್ಥಗಳು ಹೆಚ್ಚು ಇವೆ, ಎಂಬಲ್ಲಿ ಪ್ರಮಾಣ ಹೇಳುತ್ತಾರೆ.) ಜೀವಬ್ರಹ್ಮರಿಗೆ ಅಭೇದವೆಂದು ತಿಳಿದವನು ಪರಬ್ರಹ್ಮನ ಧರ್ಮವು ತನಗೆ, ಪರಬ್ರಹ್ಮನೇ ತಾನು, ಎಂದು ತಿಳಿದ ಕಾರಣ ಅಪಹರ್ತನೆಂದೂ, ತನಗಿದ್ದ ದುಃಖಾದ್ಯನುಭವಗಳನ್ನು ವಂಚನೆಮಾಡಿದ ಕಾರಣ (ಅಂದರೆ ತಾನು ಬ್ರಹ್ಮನಾದುದರಿಂದ ತನಗೆ ದುಃಖಾದಿಗಳು ಇಲ್ಲವೆಂದು ತಿಳಿದಕಾರಣ) ಸ್ತೇನನೆಂದೂ ಅನ್ನಿಸುತ್ತಾನೆ. ಅಂತಹವನನ್ನು ಶ್ರೀಹರಿಯು ಸದಾ ಅಂಧಂತಮಸ್ಸಿನಲ್ಲಿ ಕೆಡಹುತ್ತಾನೆ, ಎಂದು ತತ್ವವಿವೇಕದಲ್ಲಿದೆ. (೩) (ಸ್ತೇನ ಅಪಹಾರಿಗಳ ದೃಷ್ಟಾಂತದಿಂದ ಐಕ್ಯಜ್ಞಾನಿಗೆ ಅನರ್ಥವು ಹೇಳುತ್ತದೆಂಬುವುದು ಅಯುಕ್ತವು. ಏಕೆಂದರೆ—ದೃಷ್ಟಾಂತವಾಕ್ಯದಲ್ಲಿ **ಅಥ ಹನ್ಯತೇ ಅಥ ಮುಚ್ಯತೇ** ಎಂದು ಹೇಳಿದ್ದಕ್ಕೆ ಅಪಹಾರಮಾಡಿದವನನ್ನು ಜೈಲಿನಲ್ಲಿ ಹಾಕುವುದು, ಮಾಡದಿರುವವನನ್ನು ಬಿಡುವುದು, ಎಂದರ್ಥವಲ್ಲ ಪರಂತು ಕದ್ದವನು, ಕದಿಯದವನು, ಇವರ ಮಧ್ಯದಲ್ಲಿ ಶಪಥಪೂರ್ವಕ ವಿಚಾರಮಾಡುವಾಗ ಯಾವನು ಸರ್ವಥಾ ತಾನು ಕದಿಯಲಿಲ್ಲವೆಂದು ಸುದೃಢನಾಗಿ ಹೇಳುತ್ತಾನೋ, ಆತನನ್ನು ಬಿಡುತ್ತಾರೆ. ಯಾವನು ಧೈರ್ಯವಿಲ್ಲದವನಾಗಿ ಹೇಳುತ್ತಾನೋ, ಆತನನ್ನು ಜೈಲಿಗೆ ಹಾಕುತ್ತಾರೆ. ಅದು ಕಾರಣ ಬಿಡಲಿಕ್ಕೆ ದಾರ್ಷ್ಟ್ಯವೂ ಜೈಲಿನಲ್ಲಿ ಹಾಕಲಿಕ್ಕೆ ದಾರ್ಷ್ಟ್ಯವಿಲ್ಲದಿರುವುದೂ ಕಾರಣ ಎಂದರ್ಥವು. ಏವಂಚ ಆ ದೃಷ್ಟಾಂತದಿಂದ ಐಕ್ಯಜ್ಞಾನಿಯನ್ನು ವಿಚಾರಮಾಡುವಾಗ ತಾನು ಬ್ರಹ್ಮನೇ ಎಂಬುವಲ್ಲಿ ಅತಿಧೈರ್ಯವುಳ್ಳವನಾದರೆ ಮುಕ್ತನಾಗುತ್ತಾನೆ (ಬ್ರಹ್ಮೈಕ್ಯವನ್ನು ಹೊಂದುತ್ತಾನೆ) ಧೈರ್ಯವಿಲ್ಲದೆ ಸಂದೇಹವುಳ್ಳವನಾದರೆ ಮುಕ್ತನಾಗುವುದಿಲ್ಲ, ಸಂಸಾರಾದಿಗಳಲ್ಲಿರುತ್ತಾನೆಂದು ಅರ್ಥವನ್ನು ಇಟ್ಟುಕೊಳ್ಳಬೇಕು, ಎಂದು ಕೆಲವರು ಹೇಳುವರು. ಅದು ಅಯುಕ್ತವೆನ್ನುತ್ತಾರೆ.) ದಾರ್ಷ್ಟ್ಯಮಾತ್ರವು ಬಿಡುಗಡೆಹೊಂದಲಿಕ್ಕೆ ಕಾರಣವು ಎಂಬಲ್ಲಿಯೂ (ದಾರ್ಷ್ಟ್ಯಮಾತ್ರ ಇಲ್ಲದಿರುವುದು ಸಂಸಾರದಲ್ಲಿ ಇರಲಿಕ್ಕೆ ಕಾರಣವು ಎಂಬಲ್ಲಿಯೂ) ಇದು ದೃಷ್ಟಾಂತವಾಗಲಾರದು. (ಏಕೆಂದರೆ **ಸ ಯ ತಸ್ಯ ಕರ್ತಾ ಭವತಿ** ಎಂಬ ವೇದದಲ್ಲಿ ಜೈಲಿನಲ್ಲಿ ಹಾಕಲಿಕ್ಕೆ ಅಪಹಾರವೇ ಕಾರಣವು. ಜೈಲಿನಿಂದ ಬಿಡಲಿಕ್ಕೆ ಕದಿಯದಿರುವುದೇ ಕಾರಣವು, ಎಂದು ಹೇಳಿಯದೆ. (ಪರರು ಹೇಳಿದ ಅರ್ಥವಲ್ಲಿ ಬಾಧಕ ಹೇಳುತ್ತಾರೆ.) ಬಿಡಲಿಕ್ಕೆ ದಾರ್ಷ್ಟ್ಯಮಾತ್ರವೂ ಬಿಡದಿರಲಿಕ್ಕೆ ದಾರ್ಷ್ಟ್ಯವಿಲ್ಲದಿರುವುದು ಮಾತ್ರವೂ ಕಾರಣನೆಂದು ಹೇಳಿದರೆ **ಸ ಯದಿ ದೃಢೋ ಭವತಿ ಅಥ ಮುಚ್ಯತೇ ಸ ಯದ್ಯದೃಢೋ ಭವತಿ ಅಥ ಹನ್ಯತೇ** ಎಂದೇ ಹೇಳಬೇಕಿತ್ತು, (ಅದು ಕಾರಣ ಅವರ

ಅರ್ಥವು ಯುಕ್ತವಲ್ಲ.) (೪) (ಈ ವಿಷಯದಲ್ಲಿ ಅದ್ವೈತಭಾಷ್ಯಕಾರರು ಹೀಗೆ ಹೇಳುತ್ತಾರೆ. ಹೇಗಂದರೆ ಇಲ್ಲಿ ದೃಷ್ಟಾಂತ ವಾಕ್ಯದಲ್ಲಿ ಸತ್ಯವಾದಿಯು ಅಸತ್ಯವಾದಿಯು ಎಂದಿಷ್ಟು ಮಾತ್ರ ವಿವಕ್ಷಿತವಾಗಿದೆ. ಕಾಯು ಸಿದ ಕಬ್ಬಿಣವನ್ನು ಕೈಯಲ್ಲಿ ಕೊಟ್ಟಾಗ ಕದ್ದವನು ಕದಿಯದವನು ಇವರಲ್ಲಿ ಸುಳ್ಳು ಆಡಿದವನ ಕೈಸುಡುತ್ತದೆ. ಸತ್ಯನುಡಿದವನ ಕೈಸುಡುವುದಿಲ್ಲ. ಹೀಗೆಯೇ ಬ್ರಹ್ಮಾತ್ಮೈಕ್ಯವು ಸತ್ಯವೆಂದು ತಿಳಿದ ವಿದ್ವಾಂಸನು ಸದ್ರೂಪ ಬ್ರಹ್ಮನನ್ನು ಹೊಂದಿ ತಿರುಗಿ ಬರುವುದಿಲ್ಲ. ಸುಳ್ಳುಹೇಳಿದ ಅಜ್ಞನು ಸಂಸಾರಕ್ಕೆ ತೆರಳಿ ಬರುತ್ತಾನೆನ್ನುವರು. ಇದು ಅಯುಕ್ತವೆನ್ನುತ್ತಾರೆ.) ಸತ್ಯನುಡಿಯುವಿಕೆ, ಸುಳ್ಳುನುಡಿಯುವಿಕೆ, ಎಂದಿಷ್ಟು ಮಾತ್ರ ಇಷ್ಟವೆಂದಲ್ಲ. (ಏಕೆಂದರೆ) (ಪರರು ಹೇಳಿದಂತೆಯೇ ಸತ್ಯನುಡಿ. ಸುಳ್ಳುನುಡಿ ಮಾತ್ರ ಹೇಳಲಿಷ್ಟವೆಂದಾಗಿದ್ದರೆ) ಆಗ **ಸಃ ಸತ್ಯಾಭಿಸಂಧ.....ಮುಚ್ಯತೇ** ಎಂದೂ **ಸಃ ಅನೃತಾಭಿಸಂಧಃ.... ಹನ್ಯತೇ** ಎಂಬೀ ಸತ್ಯನುಡಿ, ಸುಳ್ಳುನುಡಿ ದೃಷ್ಟಾಂತವೇ ಸಾಕಾಗುತ್ತಿತ್ತು. **ಸ ಯದಿ ತಸ್ಯ ಕರ್ತಾ ಭವತಿ** ಇತ್ಯಾದ್ಯಪಹಾರದೃಷ್ಟಾಂತವು ಕೂಡದೆ ಹೋಗುವುದು (೫) (ಪರರು ಹೇಳುವ ಅರ್ಥವು ಕೂಡದಿರುವುದರಿಂದ (**ಅಥ ಹನ್ಯತೇ** ಎಂಬಪರ್ಯಂತ ಸ್ತೇನ ಆಪಹಾರಿದೃಷ್ಟಾಂತದಿಂದ) ಜೀವೇಶ್ವರರ ಐಕ್ಯ ಜ್ಞಾನದಿಂದ ಮಹಾ ಅನರ್ಥವನ್ನು ತೋರಿಸಿ **ಅಥ ಮುಚ್ಯತೇ** ಎಂಬ ಪರ್ಯಂತ (ಅನಪಹರ್ತೃಗೆ ದೃಷ್ಟಾಂತವಾದ) ಭೇದ ಜ್ಞಾನದಿಂದಲೇ ಪುರುಷಂ **ಸೋಮ್ಯ** ಇತ್ಯಾದಿ ಮಹಾವಾಕ್ಯವು ಮೋಕ್ಷವಾಗುತ್ತದೆಂದೇ ಬೋಧಿಸುತ್ತದೆ.

ವಿ ॥ ತತ್ತ್ವಮಸಿ ಇತ್ಯಾದಿ ವಾಕ್ಯಗಳಿಗೆ ಈ ಪ್ರಕರಣವು ವಿರೋಧವು ಬರುವುದರಿಂದ ಜೀವೇಶ್ವರರಿಗೆ ಐಕ್ಯವಿದೆ ಎಂಬುವಲ್ಲಿ ತಾತ್ಪರ್ಯವಿಲ್ಲ, ಆದಕಾರಣ ಜೀವೇಶ್ವರರಿಗೆ ಐಕ್ಯದಲ್ಲಿ ತಾತ್ಪರ್ಯವಿದೆ ಎಂಬುವಲ್ಲಿ ಯಾವ ಪ್ರಮಾಣವೂ ಇಲ್ಲ, ಆದು ಕಾರಣ ಶ್ರೀವಿಷ್ಣುವು ಸರ್ವೋತ್ಕೃಷ್ಟನು ಎಂಬುವಲ್ಲಿಯೇ ಎಲ್ಲಾ ಪ್ರಮಾಣಗಳಿಗೂ ಮುಖ್ಯ ತಾತ್ಪರ್ಯವು. ಆದುದರಿಂದ ಐಕ್ಯವೆಂಬ ಇಟ್ಟುಕೊಂಡರೆ ಮಹಾ ತಾತ್ಪರ್ಯವಿರೋಧವು ಬರುತ್ತದೆ, ಎಂದು ಸಿದ್ಧವಾಯಿತು ॥ ೧೬ ॥

ಪೀ—ಎಲ್ಲಾ ಆಗಮಗಳಿಗೆ ವಿಷ್ಣುವು ಸರ್ವೋತ್ಕೃಷ್ಟನು ಎಂಬುವಲ್ಲಿ ಮಹಾತಾತ್ಪರ್ಯವಿರಲಿ, ಆದರೂ ಅಭೇದವನ್ನು ಅಂಗೀಕರಿಸಿದರೆ ಆದರಿಂದ ವಿರೋಧಬರುವುದು ಹೇಗೆ? ಭೇದಾಭೇದವನ್ನು ಒಡಂಬಟ್ಟ ಪ್ರಯುಕ್ತ ಯಾವಅನುಪಪತ್ತಿಯೂ ಇಲ್ಲ, ಎಂದು ಭೇದಾಭೇದವಾದಿಗಳು ಹೇಳುತ್ತಾರೆ. ಆದೂ ಅಯುಕ್ತವೆನ್ನುತ್ತಾರೆ—

ಭಾ. ॥ (೧) ಭಿನ್ನಸ್ಯೈವೋತ್ಕರ್ಷೋ ಭವತಿ (ಇತಿ) । ಅಭಿನ್ನಸ್ಯ ಕುತ ಉತ್ಕರ್ಷಃ ಸ್ಯಾತ್ । ಅಜ್ಞಾನದುಃಖಿಯುಕ್ತತ್ವಾಚ್ಚ । (೨) ನ ಹಿ ತತ್ಪಕ್ಷೇ ಪರಮಾರ್ಥದುಃಖಿನೋ ಭ್ರಾಂತ್ಯಾದುಃಖಿನಶ್ಚ ತತ್ಕಾಲೇ ಕಶ್ಚಿದ್ವಿಶೇಷಃ । (೩) ಅಸ್ಯಾತಂತ್ರ್ಯಂ ಚ ಭ್ರಾಂತಸ್ಯ ವಿಶ್ವಿತಮೇವ । ನ ಹಿ ಭ್ರಮಃ ಸ್ವೇಚ್ಛಯಾ ಯುಜ್ಯತೇ । (೪) ಸ್ವಾತ್ಮಾನಂ ಪರಮಂ ವಿಷ್ಣುಂ ವಿದಿತ್ವೈವ (ತ್ವಾಪಿ) ಸ ರಾಘವಃ । ದೈತ್ಯಾನಾಂ ಮೋಹನಾರ್ಥಾಯ ದರ್ಶಯಾಮಾಸ ಮೂಢತಾಮಿತಿ (ಚ) ಪಾದ್ಮೇ ॥ ॥ ೧೬ ॥

ಅ ॥ (೧) ಭೇದವಿದ್ದರೇನೇ ಒಬ್ಬರಿಂದ ಇನ್ನೊಬ್ಬರಿಗೆ ಉತ್ತಮತ್ವವು ಕಂಡದೆ ಯಾರಿಂದಲೂ ಭೇದವೇ ಇಲ್ಲವಾದರೆ ಯಾರಿಗೆ ಯಾರಿಂದ ಉತ್ತಮತ್ವವನ್ನು ಹೇಳುವುದು. (ಭೇದಾಭೇದದಲ್ಲಿ ಭೇದವು ಸೇರಿದ್ದರೂ ಅಭೇದವೂ ಇದ್ದ ಪ್ರಯುಕ್ತ ಉತ್ತಮತ್ವವು ಸಿದ್ಧವಾಗಲಾರದು.) (ಬ್ರಹ್ಮನು ಜೀವನಿಂದ ಅಭಿನ್ನನೆಂದಾದರೆ–ಬ್ರಹ್ಮನಿಗೆ ಉತ್ತಮತ್ವವು ಕೂಡಲಾರದು, ಎಂಬಲ್ಲಿ ಇನ್ನೊಂದು ಯುಕ್ತಿ ಹೇಳುತ್ತಾರೆ.)

ಅಜ್ಞಾನ ದುಃಖಮೊದಲಾದವು ಇರುವ ಜೀವನಿಂದ ಬ್ರಹ್ಮನಿಗೆ ಅಭೇದವೆಂದು ಹೇಳಿದರೆ. ಬ್ರಹ್ಮನಿಗೂ ಅಜ್ಞಾನ ದುಃಖಮೊದಲಾದುದು ಬರಬೇಕಾಗುವುದರಿಂದ ಉತ್ತಮತ್ವವು ಕೂಡಲಾರದು. ಪರಂತು ನಿಕೃಷ್ಟತ್ವವೇ ಬಂದೀತು. (೨) (1) (ಬ್ರಹ್ಮನಿಗೆ ಜೀವನಿಂದ ಅಭೇದವಿದ್ದರೂ ಬ್ರಹ್ಮನು ಸರ್ವೋತ್ಕೃಷ್ಟನು ಎಂಬುದಕ್ಕೆ ಹಾನಿಯಿಲ್ಲ. ಬ್ರಹ್ಮನಿಗೆ ಭ್ರಮೆಯಿಂದಲೇ ದುಃಖ ಅಜ್ಞಾನಾದಿಗಳು ಇವೆ. ಜೀವರಿಗೆ ಪಾರಮಾರ್ಥಿಕವಾಗಿಯೇ ದುಃಖಾದಿಗಳವೆ. ಭ್ರಮೆಯಿಂದ ದುಃಖಾದಿಗಳು ಇರುವವನು ಪಾರಮಾರ್ಥಿಕವಾಗಿ ಸರ್ವೋತ್ತಮನಾಗಲಿಕ್ಕೆ ಯಾವ ಬಾಧೆಯೂ ಇಲ್ಲ. ಸರ್ವೋತ್ತಮತ್ವಕ್ಕೆ ಹಾನಿಯಿದ್ದರೆ ರಾಮಕೃಷ್ಣಾದಿಗಳಲ್ಲಿಯೂ ಉತ್ತಮತ್ವವು ಇಲ್ಲವೆಂದಾಗಬೇಕಾಗುವುದು, ಎಂದು ಹೇಳಕೂಡದು. ಪಾರಮಾರ್ಥಿಕವಾಗಿ ದುಃಖವುಳ್ಳ ಜೀವರಿಂದ ಅಭೇದವಿದ್ದರೆ ಬ್ರಹ್ಮನಿಗೂ ಪಾರಮಾರ್ಥಿಕವಾಗಿ ದುಃಖಾದಿಗಳು ಇರಲೇಬೇಕಾಗುವುವು. (2) ಮತ್ತು ಭ್ರಮೆಯಿಂದ ದುಃಖಾದಿಗಳಿರುವ ಬ್ರಹ್ಮನಿಗೂ ವಾಸ್ತವಿಕವಾಗಿ ದುಃಖವುಳ್ಳ ಜೀವರಂತೆ ಉತ್ತಮತ್ವವಿಲ್ಲವೆಂದೇ ಆಗುವುದು. * ಭ್ರಮೆಗೊಂಡವನಿಗೆ ಬಾಧಜ್ಞಾನವು ಬಂದ ಮೇಲೆ ಆದಲ್ಲವೆಂದು ತಿಳಿದರೂ ಭ್ರಮೆಕಾಲದಲ್ಲಿ ದುಃಖಾನುಭವವು ಭ್ರಮೆಯಿದ್ದವನಿಗೂ ಭ್ರಮೆಯಿಲ್ಲದನಿಗೂ ಸಮವೇ ಆಗಿದೆ. (ವಾಸ್ತವಿಕವಾಗಿ ಮಗನು ಸತ್ತುಹೋದರೆ ಪಾರಮಾರ್ಥಿಕವಾಗಿ ದುಃಖವುಳ್ಳವನಿಗೂ, ಮಗನು ಸತ್ತು ಹೋಗದೆ ಸತ್ತುಹೋದನು ಎಂಬ ಭ್ರಮೆಯಿಂದ ದುಃಖವುಳ್ಳವನಿಗೂ, ಆ ಕಾಲದಲ್ಲಿ ಯಾವ ವಿಶೇಷವೂ ಇಲ್ಲ, ಎನ್ನುತ್ತಾರೆ.) ಆದ್ವೈತಿಗಳ ಪಕ್ಷದಲ್ಲಿ ಸ್ವಾಭಾವಿಕವಾಗಿ ದುಃಖವುಳ್ಳವನಿಗೂ, ಭ್ರಮೆಯಿಂದ ದುಃಖಗೊಂಡವನಿಗೂ, ಆಕಾಲದಲ್ಲಿ ಯಾವುದೊಂದು ವಿಶೇಷವೂ ಇಲ್ಲ. (೩) (ಮತ್ತು ಬ್ರಹ್ಮನಿಗೆ ಭ್ರಮೆಯಿಂದ ದುಃಖವನ್ನು ಒಡಂಬಟ್ಟರೆ ಆಗ ಬ್ರಹ್ಮನು ಭ್ರಾಂತನಾದುದರಿಂದ ಅವನಿಗೆ ಸ್ವಾತಂತ್ರ್ಯವು ಇಲ್ಲವೆಂದಾಗುವುದು, ಎಂಬ ಅಭಿಪ್ರಾಯದಿಂದ ಹೇಳುತ್ತಾರೆ.) ಭ್ರಮೆಗೊಂಡವನಿಗೆ ಸ್ವೇಚ್ಛಾನುಸಾರಿತ್ವವು ಇಲ್ಲವೆಂಬುದು ನಿಶ್ಚಿತವೇ ಆಗಿದೆ. (ಭ್ರಾಂತನಿಗೂ ಸ್ವೇಚ್ಛಾನುಸಾರಿತ್ವವು ಏಕೆ ಆಗಲಾರದೆಂದರೆ) ತನ್ನ ಇಚ್ಛಾನುಸಾರ ಭ್ರಮೆಯು ಕೂಡಲಾರದು. (೪) (ತನ್ನ ಸ್ವರೂಪ ಪರಿಜ್ಞಾನವಿಲ್ಲದಿರುವುದರಿಂದ ಭ್ರಮೆಯಿಂದ ದುಃಖಗೊಂಡ ರಾಮನಿಗೆ ಹೇಗೆ ಸರ್ವೋತ್ತಮತ್ವಕ್ಕೆ ಹಾನಿಯಿಲ್ಲವೊ, ಹಾಗೆಯೇ ಬ್ರಹ್ಮನಿಗೂ ಏಕೆ ಆಗಲಾರದು, ಎಂದರೆ ದೃಷ್ಟಾಂತವೇ ಕೂಡುವುದಿಲ್ಲವೆನ್ನುತ್ತಾರೆ.) ಆ ರಾಮನು ತಾನು ಸರ್ವೋತ್ತಮನಾದ ವಿಷ್ಣುವು ಎಂದು ತಿಳಿದುಕೊಂಡೇ ದೈತ್ಯರಿಗೆ ಅಜ್ಞಾನಾದಿಗಳು ಹುಟ್ಟುವುದಕ್ಕಾಗಿ ಮಾಯೆಯನ್ನು (ದುಃಖಾದಿಗಳನ್ನು) ತೋರಿಸಿದನು, ಎಂದು ಪಾದ್ಮಪುರಾಣದಲ್ಲಿದೆ. ॥ ೧೭ ॥

ಪೀ—ಜೀವಬ್ರಹ್ಮರಿಗೆ ಭೇದಾಭೇದವನ್ನಂಗೀಕರಿಸಿದರೆ ಸೂತ್ರವಿರೋಧವಮೆ, ಎನ್ನುತ್ತಾರೆ—

ಭಾ. ॥ (೧) ಓಂ ಜಗದ್ವ್ಯಾಪಾರವರ್ಜಂ ಓಂ । ಓಂ ಪ್ರಕರಣಾತ್ ಓಂ । ಇತ್ಯೈ-(ತ್ಯಾದಿನೈ)ಶ್ವರ್ಯಮರ್ಯಾದಯಾ ಮುಕ್ತಾನಾಂ ಬ್ರಹ್ಮಣಶ್ಚ ಭೇದಸ್ಯೈವ ನಿರ್ದೇಶತ್ವಾಚ್ಚ ಭಗವತಾ । (೨) ಬ್ರಹ್ಮಸೂತ್ರಾನುಸಾರೇಣ ವೇದಾದ್ಯಂ ಸರ್ವಮೇವ ಚ । ಯೋಜ್ಯಂ ನ ಬ್ರಹ್ಮಸೂತ್ರಾಣಿ ದೃಶ್ಯಮಾನಾರ್ಥತೋಽನ್ಯಥೇತಿ ಚ ಬ್ರಹ್ಮವೈವರ್ತೇ । (೩) ಚೋರದೃಷ್ಟಾಂತತೋ ಯಸ್ಯ ಹ್ಯಭೇದಜ್ಞಾನತಸ್ತಮಃ । ಭೇದೇನೋತ್ಕರ್ಷವೇತ್ತ್ವಸ್ತು ಮುಕ್ತಿರೇವ ಹ್ಯಚೋರವದಿತಿ ಚ ॥ ॥ ೧೮ ॥

ಅ ॥ (೧) **ಸರ್ವಾನ್ ಕಾಮಾನಾಪ್ತ್ವಾಮೃತಃ ಸಮಭವತ್** ಎಂಬ ಪ್ರಮಾಣದಿಂದ ಮುಕ್ತರು ಸೃಷ್ಟಿ ಮೊದಲಾದ ಜಗದ್ವ್ಯಾಪಾರಗಳನ್ನು ಬಿಟ್ಟು ಎಲ್ಲಾ ಇಷ್ಟಗಳನ್ನು ಹೊಂದುತ್ತಾರೆ. (ಬ್ರ. ಸೂ.

*ಹಗ್ಗವನ್ನು ನೋಡಿ ಹಾವು ಎಂದು ತಿಳಿಯುವುದು ಭ್ರಮೆಯು ಹಾವು ಅಲ್ಲ ಹಗ್ಗ ಎಂಬುವುದು ಬಾಧಜ್ಞಾನವು ಹಾವು ಅಲ್ಲ ಎಂಬುದು ಅನುಸಂಧಾನವು

ಅ. ೪, ಪಾ. ೪, ಸೂ. ೧೭) ಶರೀರಭೇದಾದೂರ್ಧ್ವಮುತ್ಕ್ರಮ್ಯ ಎಂದು ಜೀವಪ್ರಕರಣವಾಗಿರುವುದರಿಂದಲೂ ಜೀವರಿಗೆ ಜಗತ್ಸೃಷ್ಟ್ಯಾದಿಗಳನ್ನು ಮಾಡತಕ್ಕ ಸಾಮರ್ಥ್ಯವಿಲ್ಲದಿರುವುದರಿಂದಲೂ ಸರ್ವಾನ್ ಕಾಮಾನ್ ಎಂಬ ವೇದದಲ್ಲಿ ಸಂಕೋಚ ಮಾಡಿಕೊಳ್ಳುವುದು ಯುಕ್ತವು. (ಸೂ. ೧೮) ಹೀಗೆ ಪರಬ್ರಹ್ಮನ ಐಶ್ವರ್ಯವು ನಿರವಧಿಕವು. ಜೀವರ ಐಶ್ವರ್ಯವು ಅವಧಿಯುಳ್ಳದ್ದು ಎಂಬ ಐಶ್ವರ್ಯ ಮರ್ಯಾದೆಯನ್ನು ನೋಡುವಾಗ ಮುಕ್ತಜೀವರಿಗೂ ಬ್ರಹ್ಮನಿಗೂ ಭೇದವದೆ ಎಂದೇ ಸೂತ್ರಕಾರರು ನಿರ್ಣಯಿಸಿರುವರು. (೨) (ಹಾಗಾದರೆ ಬ್ರಹ್ಮ ವೇದ ಬ್ರಹ್ಮೈವ ಭವತಿ ಇದುಮೊದಲಾದ ವೇದಗಳಲ್ಲಿ ಮುಕ್ತನಿಗೆ ಬ್ರಹ್ಮನಿಂದ ಅಭೇದ ಹೇಳಿದಕಾರಣ ಅಮುಖ್ಯವಾದ ಮೋಕ್ಷವನ್ನು ಈ ಸೂತ್ರ ಹೇಳುತ್ತದೆಂದು ಏಕೆ ಆಗಲಾರದು, ಎಂದರೆ—) ಬ್ರಹ್ಮಸೂತ್ರಗಳನ್ನು ಅನುಸರಿಸಿಯೇ ವೇದ ಮೊದಲಾದುವುಗಳೆಲ್ಲದಕ್ಕೂ ಅರ್ಥವನ್ನು ಮಾಡಬೇಕು. ಸ್ಪಷ್ಟವಾಗಿ ತೋರುವ ಅರ್ಥ ವಿನಹ ಬೇರೆ ಅರ್ಥಗಳನ್ನು ಬ್ರಹ್ಮಸೂತ್ರಗಳಿಗೆ ಮಾಡಕೂಡದು, ಎಂದು ಬ್ರಹ್ಮವೈವರ್ತದಲ್ಲಿ ಹೇಳಿದೆ. (೩) (ಈ ವೇದದ ಅರ್ಥವನ್ನು ನಿಶ್ಚಯಿಸತಕ್ಕ ಪ್ರಮಾಣ ಹೇಳುತ್ತಾರೆ -) ಇದೇ ವೇದದಲ್ಲಿ ಜೋರದೃಷ್ಟ್ಯಾಂತದಿಂದ ಐಕ್ಯಜ್ಞಾನಿಗೆ ತಮಸ್ಸು ಮೊದಲಾದ ಅನರ್ಥಗಳು ಹೇಳಲ್ಪಟ್ಟಿವೆ. ಜೀವೇಶ್ವರರಿಗೆ ಭೇದವದೆ, ಎಂಬ ಜ್ಞಾನನಿಂದಲೇ ಶ್ರೀಹರಿಯು ಸರ್ವೋತ್ತಮನೆಂದು ತಿಳಿದವನಿಗೆ ಕದಿಯದವನಂತೆ ಮೋಕ್ಷವೂ ಹೇಳಲ್ಪಟ್ಟಿದೆ, ಎಂದೂ ಹೇಳಿದೆ. ॥ ೧೮ ॥

ಪೀ—ಬ್ರಹ್ಮಸೂತ್ರಗಳನ್ನ ನುಸರಿಸಿ ವೇದಾದಿಗಳಿಗೆ ಅರ್ಥಮಾಡಬೇಕೆಂದು ಹೇಳಿತು. ಭೇದಪ್ರತಿಪಾದಕ ಸೂತ್ರಗಳನ್ನ ನುಸರಿಸಿ ತತ್ತ್ವಮಸಿ ಇದುಮೊದಲಾದ ಅಭೇದವಾಕ್ಯಗಳಿಗೆ ಹೇಗೆ ಅರ್ಥಹೇಳುವದು ಎಂದರೆ—

ಭಾ. ॥ (೧) ಸಾರತ್ವಾತ್ಸ ಇತಿ ಪ್ರೋಕ್ತೋ ಜ್ಞಾನತ್ವಾದ್ಯ ಇತೀರಿತಃ । ಸರ್ವಶ್ರೇಷ್ಠ ಇತಿ ಹ್ಯೇಷ ಮಾನಾನಾಮಣಕೋಣಿಮಾ । (೨) ತತ್ತಂತ್ರತ್ವಾದ್ಯೈತದಾತ್ಮ್ಯಂ ಸ ಸತ್ಯಃ ಸಾಧುರೂಪತಃ । ತತ್ತತೇಃ ಪೂರ್ಣತಶ್ಚಾತ್ಮಾ ಸಾದನಾತ್ಸ ಇತೀರಿತಃ । (೩) ಅತತ್ತ್ವಮಸಿ ಪುತ್ರೇತಿ ಯ ಉಕ್ತೋ ಗೌತಮೇನ ತು । ನವಕೃತ್ವಃ ಸದೃಷ್ಟ್ಯಾಂತಂ ಸರ್ವಭೇದೇನ ಕೇಶವಃ । (೪) ತಸ್ಮೈ ನಮೋ ಭಗವತೇ ಚಿದಚಿತ್ಪರಮಾಯ ತೇ । ಪುರುಷೋತ್ತಮಾಯ ದೇವಾಯ ಪೂರ್ಣಾನಂದೈಕರೂಪಿಣೇ । ಇತಿ ಸಾಮಸಂಹಿತಾಯಾಂ । (೫) ಅತಃ ಸರ್ವಚಿದಚಿದ್ವಿಲಕ್ಷಣಃ ಸರ್ವೋತ್ತಮಃ ಸರ್ವಗುಣಪರಿಪೂರ್ಣೋ ಭಗವಾನ್ ಪುರುಷೋತ್ತಮ ಇತಿ ಸಿದ್ಧಂ ॥ ॥ ೧೯ ॥

ಅ ॥ (೧) ಶ್ರೀಹರಿಯು ಸರ್ವೋತ್ತಮನಾದುದರಿಂದ ಸಃ ಎಂದೂ ಜ್ಞಾನಸ್ವರೂಪನಾದುದರಿಂದ ಯಃ ಎಂದೂ, ಸರ್ವಪ್ರೇರಕನಾದುದರಿಂದ ಏಷಃ ಎಂದೂ, ಜ್ಞಾನಗಳಿಗೆ ಅಥವಾ ವೇದಾದಿ ಪ್ರಮಾಣಗಳಿಗೆ ಅಧಿಷ್ಠಾನವಾಗಿರುವುದರಿಂದ ದೇವತೆಗಳಿಗೆ ಪ್ರೇರಕನಾದುದರಿಂದ ಅಣಿಮಾ ಎಂದೂ ಅನಿಸುತ್ತಾನೆ (೨) ಜಗತ್ತು ಶ್ರೀಹರಿಯ ಅಧೀನವಲ್ಲಿದ್ದುದರಿಂದ ಜಗತ್ತಿಗೆ ಶ್ರೀಹರಿಯು ಸ್ವಾಮಿಯು. ಸಾಧುಸ್ವರೂಪನಾದುದರಿಂದ ಸತ್ಯನೆನಿಸುತ್ತಾನೆ. ವ್ಯಾಪ್ತನಾದುದರಿಂದ ತತ್ ಎಂದೂ ಸರ್ವಗುಣಪರಿಪೂರ್ಣನಾದುದರಿಂದ ಆತ್ಮನೆಂದೂ ಮುಪ್ಪರನ್ನು ನಾಶಗೊಳಿಸುವುದರಿಂದ ಸಃ ಎಂದೂ ಎನಿಸುತ್ತಾನೆ. (೩) ಹೀಗೆ ಉದ್ದಾಲಕರು ಮಗನಾದ ಶ್ವೇತಕೇತುವಿಗೆ ಶ್ರೀಹರಿಯು ಸರ್ವರಿಂದಲೂ ಭಿನ್ನನು, ಎಂಬ ಅಭಿಪ್ರಾಯದಿಂದ ಎಲೋ ಮಗನೇ ನೀನು ಆ ಶ್ರೀಹರಿಯಿಂದ ಭಿನ್ನನಾಗಿರುತ್ತಿ ಎಂದು ಒಂಭತ್ತಾವರ್ತಿ ದೃಷ್ಟಾಂತಕೊಟ್ಟು ಹೇಳಿರುವರು. (೪) ವೇದಾದಿಗಳಲ್ಲಿ ಪ್ರಸಿದ್ಧನೂ, ಷಡ್ಗುಣಪರಿಪೂರ್ಣನೂ, ಜ್ಞೇತನಾಜ್ಞೇತನಗಳಿಂದುತ್ತಮನೂ,

ಪೂರ್ಣಾನಂದಸ್ವರೂಪಿಯೂ, ಸಮಸ್ತ ವೇದಾದಿಗಳಲ್ಲಿ ಸ್ತುತ್ಯನೂ ಆದ ಪುರುಷೋತ್ತಮನಾದ ಶ್ರೀಹರಿಗೆ ನಮಸ್ಕಾರವು, ಎಂದು ಸಾಮಸಂಹಿತೆಯಲ್ಲಿ ಹೇಳಿದೆ. (೫) ಹಿಂದೆ ಹೇಳಿದ ಪ್ರಮಾಣಗಳ ಸಮೂಹಗಳಿಂದ ಶ್ರೀಹರಿಯು ಎಲ್ಲಾ ಜೀವನಾಜೀವನಗಳಿಂದ ಭಿನ್ನನು, ಸರ್ವೋತ್ತಮನು, ಸಮಸ್ತ ಗುಣಗಳಿಂದ ಪರಿಪೂರ್ಣನು, ಕ್ಷರಾಕ್ಷರಪುರುಷರಿಂದುತ್ತಮನೆಂದು ಸಿದ್ಧವಾಯಿತು.

ವಿ ॥ (1) ಯದ್ಯಪಿ **ಸ ಯ ಏಷೋಽಣಿಮಾ** ಇತ್ಯಾದಿಗಳಿಗೆ ಮೊದಲೇ (ಪು. ೩೬೪ ರಲ್ಲು) ಅರ್ಥ ಹೇಳಿದೆ. ಈ ಖಂಡದಲ್ಲಿ **ಸ ಯ ಏಷಃ** ಇತ್ಯಾದಿ ವಾಕ್ಯಗಳು ಇಲ್ಲ. ಆದರೂ ಇತರಖಂಡಗಳಂತೆ ಇಲ್ಲಿಯೂ ಅದನ್ನು ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಸೂಚಿಸುವುದಕ್ಕಾಗಿಯೂ ಮೊದಲು ಅರ್ಥಹೇಳದಿದ್ದ ಪದಗಳಿಗೆ ಅರ್ಥ ಹೇಳುವುದಕ್ಕಾಗಿಯೂ, ಸರ್ವಥಾ ಇದು ಐಕ್ಯವನ್ನು ತಿಳಿಸುವುದಿಲ್ಲ, ಎಂಬುದನ್ನು ದೃಢಪಡಿಸುವುದಕ್ಕಾಗಿಯೂ ಸಾಮಸಂಹಿತೆಯಲ್ಲಿಯೇ ಇರತಕ್ಕ ಅಂತಿಮ ವಾಕ್ಯವನ್ನು ಹೇಳಿರುತ್ತಾರೆ. (2) ಅಧ್ಯಾಯದಲ್ಲಿ ಹೇಳಿದ ಎಲ್ಲಾ ಗುಣಗಳಿಂದೊಡಗೂಡಿದ ಶ್ರೀಹರಿಯ ನಮಸ್ಕಾರರೂಪವಾದ ಮಂಗಲವನ್ನು ಅಧ್ಯಾಯದ ಅಂತ್ಯದಲ್ಲಿಯೂ ಭಾಷ್ಯಕಾರರು ಮಾಡಿರುತ್ತಾರೆ. (3) **ನವಕೃತ್ವಃ** ಎಂದು ಹೇಳಿದುದರಿಂದ ಒಂಭತ್ತು ಪ್ರಕರಣಗಳಲ್ಲಿರತಕ್ಕ ವಾಕ್ಯಕ್ಕೂ ಇದೇ ಅರ್ಥವೆಂದು ದೃಢಪಡಿಸಿದರು. ॥ ೮–೧೭ ॥ ॥ ೧೯ ॥

ಹದಿನೇಳನೇ ಖಂಡವು ಮುಗಿಯಿತು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಚ್ಛಾಂದೋಗ್ಯ ಉಪನಿಷದ್ಭಾಷ್ಯೇ ಅಷ್ಟಮೋಽಧ್ಯಾಯಃ ॥ ಲ ॥

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಮತ್ ಛಾಂದೋಗ್ಯ ಉಪನಿಷದ್ಭಾಷ್ಯದಲ್ಲಿ ಎಂಟನೇ ಅಧ್ಯಾಯವು ಮುಗಿಯಿತು. ॥ ಲ ॥

ಇಂದೀವರದಲಶ್ಯಾಮಮಿಂದಿರಾನಂದವರ್ಧನಂ ।
ವಂದೇ ನಂದಸುತಂ ಸಾಂದ್ರಾನಂದಸುಂದರವಿಗ್ರಹಂ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಒಂಭತ್ತನೇ ಅಧ್ಯಾಯವು

ನಾಮಾದಿಪ್ರಾಣಪರ್ಯಂತದೇವಶ್ರೇಷ್ಠಾಯ ವಿಷ್ಣವೇ ।
ಸತ್ಯಾದ್ಯಾತ್ಮಾಂತರೂಪಾಯ ನಮೋ ಭಗವತೇ ಸದಾ ॥

೧ನೇ ಖಂಡವು

ಪೀ—ಪೂರ್ವಾಧ್ಯಾಯದಲ್ಲಿ ತಾನು ಹೆಚ್ಚು ಜ್ಞಾನವುಳ್ಳವನೆಂಬ ಅಹಂಕಾರದಿಂದ ತಾನು ಈಶ್ವರನೆಂದು ತಿಳಿದಿರುವ ಶ್ವೇತಕೇತುವಿಗೆ ಜೀವೇಶ್ವರರ ಭೇದವಿಷಯದಲ್ಲಿ ಬಹುದೃಷ್ಟಾಂತಗಳನ್ನು ಹೇಳಿ ಜೀವೇಶ್ವರರಿಗೆ ಭೇದವಿದೆ, ಎಂದು ತಿಳಿದುಕೊಂಡೇ ಶ್ರೀಹರಿಯನ್ನು ಉಪಾಸನೆಮಾಡಬೇಕೆಂದು ಹೇಳಿದೆ. ಈ ಅಧ್ಯಾಯದಲ್ಲಿ ದೇವತೆಗಳಲ್ಲಿ ತಾರತಮ್ಯವನ್ನು ತಿಳಿದುಕೊಂಡು ದೇವತೆಗಳಲ್ಲಿ ಅಂತರ್ಗತನಾದ ಶ್ರೀಹರಿಯನ್ನು ಉಪಾಸನೆ ಮಾಡಿದರೆ ಶ್ರೀಹರಿಯು ಮೋಕ್ಷಮೊದಲಾದ ಸರ್ವಪುರುಷಾರ್ಥಗಳನ್ನೂ ಕೊಡುತ್ತಾನೆ. ಅದುಕಾರಣ ದೇವತೆಗಳ ತಾರತಮ್ಯವನ್ನು ಹೇಳುತ್ತಾರೆ—

ಊಃ ॥ ಓಂ ॥ ಅಧೀಹಿ ಭಗವ ಇತಿ ಹೋಪಸಸಾದ ಸನತ್ಕುಮಾರಂ ನಾರದಸ್ತ್ಂ ಹೋವಾಚ ಯದ್ವೇತ್ಥ ತೇನ ಮೋಪಸೀದ ತತಸ್ತ ಊರ್ಧ್ವಂ ವಕ್ಷ್ಯಾಮೀತಿ ॥ ॥ ೧ ॥

ಅ ॥ ದೇವರ್ಷಿಗಳಾದ ನಾರದರು ಪೂಜ್ಯರೇ ನನಗೆ ಪರಬ್ರಹ್ಮನ ತತ್ತ್ವವನ್ನು ಪದೇಶಿಸಿರಿ, ಎನ್ನುತ್ತಾ ತನಗಿಂತ ಹೆಚ್ಚು ಬ್ರಹ್ಮಜ್ಞಾನಿಗಳಾದ ಸನತ್ಕುಮಾರರ ಬಳಿಗೆ ಬಂದು ಸೇವಿಸಿದರು. ಆಗ ಸನತ್ಕುಮಾರರು ತಿಳಿಯದ ಅಂಶವನ್ನೇ ಉಪದೇಶಮಾಡಬೇಕಾಗಿರುವುದರಿಂದ ತಿಳಿದಿದ್ದ ಭಾಗವನ್ನು ಹೇಳಿ ನನ್ನ ಉಪಸತ್ತಿಮಾಡು ತಿಳಿದ ಅಂಶಕ್ಕಿಂತ ಮೇಲಿನದ್ದಾದ ತಿಳಿಯದ ಅಂಶವನ್ನು ನಾನು ನಿನಗೆ ಹೇಳುವೆನು, ಎಂದು ನಾರದರಿಗೆ ಹೇಳಿದರು. ॥ ೧ ॥

ಊ. ॥ ಸ ಹೋವಾಚ ಋಗ್ವೇದಂ ಭಗವೋಽಧ್ಯೇಮಿ ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯ್ಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯ್ಂ ಸರ್ಪದೇವಜನವಿದ್ಯಾಮೇತದ್ಭಗವೋಽಧ್ಯೇಮಿ ॥ ॥ ೨ ॥

ಅ ॥ ಆಗ ನಾರದರು ಹೇಳಿದರು. ಎಲೋ ಪೂಜ್ಯರೇ ನಾನು ಋಗ್ವೇದ, ಯಜುರ್ವೇದ, ಸಾಮವೇದ, ನಾಲ್ಕನೇದಾದ ಅಥರ್ವವೇದ, ಋಗಾದಿ ವೇದಗಳಲ್ಲಿ ಐದನೇದ್ದಾದ ವೇದಗಳಿಗೆ ಅನುಕೂಲಗ

ಳಾದ ಇತಿಹಾಸ, ಪುರಾಣರೂಪ ವೇದ, ಇವುಗಳನ್ನು ಅಧ್ಯಯನ ಮಾಡಿರುತ್ತೇನೆ. ಮತ್ತು ಪಿತೃಗಳಿಗೆ ಲಕ್ಷಣಹೇಳತಕ್ಕ ಗ್ರಂಥ, ಗಣಿತಶಾಸ್ತ್ರ, ದೇವತೆಗಳ ಲಕ್ಷಣಹೇಳತಕ್ಕ ಶಾಸ್ತ್ರ, ಇಂತಹ ಸ್ಥಳದಲ್ಲಿ ನಿಧಿಯಿದೆ, ಎಂದು ಅದರ ಚಿಹ್ನೆ ತೋರಿಸತಕ್ಕ ಶಾಸ್ತ್ರ, ಮೂಲವೇದ, ವೇದಗಳ ಸಾರವನ್ನು ಸಂಗ್ರಹಿಸಿರತಕ್ಕ ಪಂಚರಾತ್ರಾಗಮ, ದೇವತೆಗಳಿಂದ ತಿಳಿಯಲ್ಪಡತಕ್ಕ ವಿದ್ಯೆ, ಆರಣ್ಯಕ, (ಅರಣ್ಯದಲ್ಲಿ ಕಲಿಯತಕ್ಕ ವೇದಭಾಗ) ಭೂತಗಳ ಚಿಹ್ನೆ ತೋರಿಸತಕ್ಕ ಶಾಸ್ತ್ರ, ನೀತಿಶಾಸ್ತ್ರ, ಜ್ಯೋತಿಃಶಾಸ್ತ್ರ, ಸರ್ಪಗಳ ಲಕ್ಷಣವನ್ನು ಹೇಳತಕ್ಕ ಶಾಸ್ತ್ರ, ದೇವತೆಗಳ ಪರಿವಾರಗಳನ್ನು ಹೇಳತಕ್ಕ ಶಾಸ್ತ್ರ, ಈ ಎಲ್ಲಾ ವಿದ್ಯೆಗಳ ಸಮೂಹಗಳನ್ನು ಕಲಿತಿರುತ್ತೇನೆ. ॥ ೨ ॥

ಪೀ—ಇನ್ನು ತಿಳಿಯಬೇಕಾದ ಅಂಶವು ಯಾವುದೆಂದರೆ—

ಉ. ॥ ಸೋಽಹಂ ಭಗವೋ ಮಂತ್ರವಿದೇವಾಸ್ಮಿ ನಾತ್ಮವಿಚ್ಛ್ರುತಂ ಹ್ಯೇವ ಮೇ ಭಗವದ್ದೃಶೇಭ್ಯಸ್ತರತಿ ಶೋಕಮಾತ್ಮವಿದಿತಿ ಸೋಽಹಂ ಭಗವಃ ಶೋಚಾಮಿ ತನ್ಮಾ ಭಗವಾಂಶ್ಶೋಕಸ್ಯ ಪಾರಂ ತಾರಯತ್ವಿತಿ ತꣳ ಹೋವಾಚ ಯದ್ವೈ ಕಿಂ ಚೈತದಧ್ಯಗೀಷ್ಠಾ ನಾಮೈವೈತತ್ ॥ ॥ ೩ ॥

ಆ ॥ ಎಲೋ ಪೂಜ್ಯರೇ ನಾನು ಎಲ್ಲಾ ವಿದ್ಯೆಗಳನ್ನು ಕಲಿತವನಾದರೂ ಶ್ರೀಹರಿಯ ನಾಮವನ್ನು ಮಾತ್ರ ತಿಳಿದಿರುತ್ತೇನೆ. (ಅಂದರೆ ನಿರ್ಣಯಿಸಲಿಕ್ಕೆ ಯೋಗ್ಯಗಳಾದ ಶ್ರೀಹರಿಯ ಗುಣಗಳನ್ನು ಹೇಳತಕ್ಕ ಶಬ್ದಗಳ ಸಮೂಹವನ್ನು ಮಾತ್ರ ತಿಳಿದವನಾಗಿರುತ್ತೇನೆ) ನಿರ್ಣಯವನ್ನು ಮಾಡತಕ್ಕ ಉಪಕ್ರಮಾದಿ ನ್ಯಾಯಗಳಿಂದ ಋಗ್ವೇದಾದಿಗಳಲ್ಲಿದ್ದ ಶಬ್ದಸಮೂಹಗಳ ಅರ್ಥವನ್ನು ನಿರ್ಣಯಮಾಡಿ ಅತ್ಮನೆನಿಸಿದ ಶ್ರೀಹರಿಯನ್ನು ತಿಳಿಯಲಿಲ್ಲ. (ಶ್ರೀಹರಿಯನ್ನು ಪ್ರತಿಪಾದಿಸತಕ್ಕ ವೇದಗಳ ಜ್ಞಾನವೇ ಸಾಕು. ವೇದಗಳಲ್ಲಿ ಪ್ರತಿಪಾದ್ಯನಾದ ಶ್ರೀಹರಿಯ ಜ್ಞಾನವು ಏತಕ್ಕೆ? ಎಂದರೆ) ಪೂಜ್ಯರೇ ತಮ್ಮಂತಹ ಮಹಾನುಭಾವರ ಆಚಾರ್ಯರಿಂದ ಶ್ರೀಹರಿಯನ್ನು ತಿಳಿದವನೇ ದುಃಖವನ್ನು ದಾಟುತ್ತಾನೆ, ಎಂದು ನಾನು ಕೇಳಿರುತ್ತೇನೆ. ಆದುಕಾರಣ ನಾನು ದುಃಖಪಡುತ್ತೇನೆ. ಅಂತಹ ನನಗೆ ಪೂಜ್ಯರಾದ ತಾವು ಶೋಕಸಾಗರದ ಅಂತವನ್ನು ದಾಟಿಸಬೇಕೆಂದು ನಾರದರು ಹೇಳಿದರು. ಆಗ ಸನತ್ಕುಮಾರರು ಎಲೋ ನಾರದರೇ ನೀವು ಯಾವ ಋಗಾದಿಗಳನ್ನೂ ಕಲಿತಿರುತ್ತೀರೋ ಈ ಎಲ್ಲಾ ಗ್ರಂಥಗಳ ಸಮೂಹವು ಶ್ರೀಹರಿಯ ಗುಣಸಮೂಹಗಳನ್ನು ಹೇಳುವ ನಾಮಧೇಯವೇ. ಪ್ರಸಿದ್ಧವು. ॥ ೪ ॥

ಪೀ—ಏಕದೇಶವು ನಾಮವಾದುದರಿಂದ ಸರ್ವವೂ ನಾಮಧೇಯವೆಂದು ಹೇಳಿದ್ದು ಅಮುಖ್ಯವು, ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಹೇಳಿದ್ದನ್ನು ವಿವರಿಸುತ್ತಾರೆ—

ಉ. ॥ ನಾಮ ವಾ ಋಗ್ವೇದೋ ಯಜುರ್ವೇದಃ ಸಾಮವೇದಃ ಆಥರ್ವಣಶ್ಚತುರ್ಥ ಇತಿಹಾಸಪುರಾಣಃ ಪಂಚಮೋ ವೇದಾನಾಂ ವೇದಃ ಪಿತ್ರ್ಯೋ ರಾಶಿರ್ದೈವೋ ನಿಧಿರ್ವಾಕೋವಾಕ್ಯಮೇಕಾಯನಂ ದೇವವಿದ್ಯಾ ಬ್ರಹ್ಮವಿದ್ಯಾ ಭೂತವಿದ್ಯಾ ಕ್ಷತ್ರವಿದ್ಯಾ ನಕ್ಷತ್ರವಿದ್ಯಾ ಸರ್ಪದೇವಜನವಿದ್ಯಾ ನಾಮೈವೈತನ್ನಾಮೋಪಾಸ್ಸ್ವೇತಿ ॥ ॥ ೫ ॥

ಅ ॥ ಋಗ್ವೇದ ಮೊದಲಾದುದು ಎಲ್ಲವೂ * ಶ್ರೀಹರಿಯ ನಾಮಧೇಯವೇ. (ಎಲ್ಲವೂ ಶ್ರೀಹರಿಯ ನಾಮಧೇಯವೇ ಎಂಬುದನ್ನು ದೃಢಪಡಿಸುವುದಕ್ಕಾಗಿ ಅಂತ್ಯದಲ್ಲಿಯೂ ಮರಳಿ ಹೇಳಿರುತ್ತಾರೆ.) ಎಲ್ಲವೂ ಶ್ರೀಹರಿಯ ನಾಮಧೇಯವೇ. ಅಥವಾ ತಿಳಿಯಲ್ಪಡದಿರುವಳಲ್ಲ ಪಕ್ಷಾತು ಉಷಃಕಾಲಕ್ಕೆ ಅಭಿಮಾನಿಯಾಗಿರುವ ಪ್ರಯುಕ್ತ ಉಷಃಕಾಲದಲ್ಲಿ ತಿಳಿಯಲ್ಪಡುವುದರಿಂದ ನಾಮ ಎಂದು ಹೆಸರುಳ್ಳ ಉಷೋದೇವಿಯು ಗ್ರಂಥಸಮೂಹಕ್ಕೆ ಅಭಿಮಾನಿಯಾಗಿ ಇದ್ದಾಳೆ. (ಏನು ಮಾಡಬೇಕೆಂದರೆ) ಉಷೋದೇವಿಯಲ್ಲಿ ಬ್ರಹ್ಮನಿದ್ದಾನೆಂದು ಉಪಾಸನೆಮಾಡು. (ಅಂದರೆ ಸಮಸ್ತ ವಿದ್ಯಾರೂಪವಾದ ನಾಮಕ್ಕೆ ಅವಾಂತರಾಭಿಮಾನಿನಿಯಾದ ಉಷಃ ಎಂದು ಹೆಸರುಳ್ಳ ಅಶ್ವಿನೀದೇವತೆಗಳ ಪತ್ನಿಯಲ್ಲಿ ಪರಬ್ರಹ್ಮನು ಸನ್ನಿಹಿತನಾಗಿದ್ದಾನೆಂದು ಉಪಾಸನೆ ಮಾಡಬೇಕು.) ಎಂದು ನಾರದರಿಗೆ ಹೇಳಿದರು. ॥ ೪ ॥

ಪೀ - ಹೀಗೆ ಪರಬ್ರಹ್ಮನನ್ನು ಉಪಾಸನೆ ಮಾಡಿದವನಿಗೆ ಫಲ ಹೇಳುತ್ತಾರೆ—

ಉ. ॥ ಸ ಯೋ ನಾಮ ಬ್ರಹ್ಮೇತ್ಯುಪಾಸ್ತೇ ಯಾವನ್ನಾಮ್ನೋ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋ ನಾಮ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ನಾಮ್ನೋ ಭೂಯ ಇತಿ ನಾಮ್ನೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ಪ್ರಥಮಃ ಖಂಡಃ ॥೧-೯॥ ೫ ॥

ಅ ॥ ಪ್ರಸಿದ್ಧನಾದ ಯಾವ ಅಧಿಕಾರಿಯು ನಾಮಕ್ಕೆ ಅಭಿಮಾನಿನಿಯಾದ ಉಷೋದೇವಿಯಲ್ಲಿ ಪರಬ್ರಹ್ಮನಿದ್ದಾನೆಂದು ಉಪಾಸನೆ ಮಾಡುತ್ತಾನೋ, (ಅವನು ಉಷೋದೇವಿಯು ಅಭಿಮಾನಿಯಾಗಿ ಉಳ್ಳ ಲೋಕಗಳನ್ನು ಹೊಂದುತ್ತಾನೆ.) ಮತ್ತು ಎಷ್ಟು ದೇಶದಲ್ಲಿ ಉಷೋದೇವಿಯು ವ್ಯಾಪಿಸಿಕೊಂಡಿರುತ್ತಾಳೋ, ಅಷ್ಟು ದೇಶದಲ್ಲಿ ಉಪಾಸಕನು ತನ್ನ ಯೋಗ್ಯತಾನುಸಾರ ಸ್ವೇಚ್ಛಾನುಸಾರವಾಗಿ ಸಂಚರಿಸುತ್ತಿರುತ್ತಾನೆ. ನಾಮಕ್ಕೆ ಅಭಿಮಾನಿನಿಯಾದ ಉಷೋದೇವಿಗಿಂತ ಶ್ರೇಷ್ಠವಾದ ವಸ್ತುವು ಇದೆಯೋ, ಎಂಬ ನಾರದರ ಪ್ರಶ್ನೆಗೆ ಸನತ್ಕುಮಾರರು ಉಷೋದೇವಿಗಿಂತ ಶ್ರೇಷ್ಠವಾದ ವಸ್ತುವು ಇದ್ದೇ ಇದೆ, ಎಂದರು. ಆಗ ನಾರದರು ಶ್ರೇಷ್ಠವಾದ ವಸ್ತುವನ್ನು ನನಗೆ ಹೇಳಬೇಕೆಂದು ಹೇಳಿದರು. (ಇಲ್ಲಿ ನಾಮಕ್ಕಿಂತ ಮೊದಲು ಕರ್ಮಕ್ಕೆ ಅಭಿಮಾನಿಯಾದ ಪುಷ್ಕರನನ್ನೂ, ಭೂಮಿಗೆ ಅಭಿಮಾನಿಯಾದ ಶನೈಶ್ಚರನನ್ನೂ ಇಟ್ಟುಕೊಳ್ಳಬೇಕು) ॥ ೫ ॥

ಪೀ—**ಯದ್ವೇತ್ಥ ತೇನ ಮೋಪಸೀದ** ಎಂಬುವಲ್ಲಿ **ಮಾ** ಎನ್ನುವುದು ನಿಷೇಧಾರ್ಥಕವೆಂದು ತೋರುತ್ತದೆ. ಅಸ್ಮತ್ ಶಬ್ದದ ರೂಪವೆಂದು ಇಟ್ಟುಕೊಂಡರೂ, ನಾರದರು ಬರುವಾಗ ತನ್ನ ಜ್ಞಾನ ಬಿಟ್ಟು ಬರಲು ಕೂಡದಿರುವುದರಿಂದ ತನ್ನ ಜ್ಞಾನಸಮೇತ ನಾರದರು ಬಂದಿರುತ್ತಾರೆಂಬ ಅಭಿಪ್ರಾಯದಿಂದ **ತೇನ ಮಾಮುಪಸೀದ** ಎಂದು ಹೇಳಿದ್ದು ಎಂದರೆ—ಆ ವಾಕ್ಯದ ಅರ್ಥ ಹೇಳುತ್ತಾರೆ—

ಭಾ. ॥ ಓಂ ॥ (೧) ಯದ್ವೇತ್ಥ ತೇನ ತದುಕ್ತ್ವಾ ಮಾಮುಪಸೀದ । (೨) ಪಿತೃಲಕ್ಷಣಂ ತು ಪಿತೃಂ ಸ್ಯಾದ್ರಾಶಿಃ ಸ್ಯಾತ್ಪೂಗ ಲಕ್ಷಣಂ । ದೇವತಾಲಕ್ಷಣಂ ದೈವಂ ನಿಧಿಶ್ಚ ನಿಧಿಲಕ್ಷಣಂ । ವಾಕೋವಾಕ್ಯಂ ಮೂಲವೇದೋ ವೇದಸಾರೋಪಸಂಹೃತಿಃ । ಏಕಾಯನಮಿತಿ ಪ್ರೋಕ್ತಂ ದೇವವಿದ್ಯಾತ್ವ(ತ್ಯ)ಮಾನುಷೀ । ದೇವಜ್ಞೇಯೈವ ಯಾ ವಿದ್ಯಾ ಬ್ರಹ್ಮವಿದ್ಯಾ ತಥಾಽರಣಂ । (೩) ಭೂತವಿದ್ಯಾ ಭೂತಚಿಹ್ನಂ ಕ್ಷತ್ರವಿದ್ಯಾ ತು ನೀತಿಕಾ ।

* ಹಿಂದಿನಂತೆ ಎಲ್ಲಾ ಪದಗಳಿಗೂ ಅರ್ಥ ಇಟ್ಟುಕೊಳ್ಳಬೇಕು

ನಾಕ್ಷತ್ರೀ ಜ್ಯೋತಿಷಾಖ್ಯಾ ಚ ಸರ್ಪಲಕ್ಷಣಮೇವ ಚ । ಸರ್ಪವಿದ್ಯೇತಿ ಸಂಪ್ರೋಕ್ತಾ ಯಾ ದೇವಪರಿಚಾ(ವಾ)ರಗಾ । ಸಾ ದೇವಜನವಿದ್ಯಾ ಸ್ಯಾದೇತಾ ವೇದ ಸ ನಾರದ ಇತಿ ಸಾಮಸಂಹಿತಾಯಾಂ ॥ ॥ ೧ ॥

ಅ ॥ (೧) ನೀವು ಯಾವ ಋಗಾದಿಗಳನ್ನು ತಿಳಿದಿರುತ್ತೀರೋ, ಅಂತಹ ತಿಳಿದ ಅಂಶವನ್ನು ಹೇಳ ನನ್ನ ಬಳಿಗೆ ಬನ್ನಿರಿ (ತಿಳಿಯದ ಅಂಶವನ್ನು ಹೇಳುವೆನು) (೨) (ನಾರದರು ಹೇಳಿದ ವಿದ್ಯೆಗಳ ಮಧ್ಯದಲ್ಲಿ ಋಗ್ವೇದವನ್ನು ಆರಂಭಿಸಿ ಪುರಾಣಪರ್ಯಂತ ವಿದ್ಯೆಗಳು ಪ್ರಸಿದ್ಧಗಳಾಗಿವೆ. **ಪಿತ್ರ್ಯಂ ರಾಶಿಂ ಇತ್ಯಾದಿ** ಗಳ ಅರ್ಥಗಳು ಅಪ್ರಸಿದ್ಧಗಳಾಗಿವೆ. ಅದು ಕಾರಣ ಅವುಗಳ ಅರ್ಥವನ್ನು ಪ್ರಮಾಣಕೊಟ್ಟು ಹೇಳುತ್ತಾರೆ.) ಪಿತೃಗಳ ಲಕ್ಷಣಗಳನ್ನು ಹೇಳುವ ಶ್ರಾದ್ಧಕಲಾಪವು ಪಿತ್ರ್ಯವೆನಿಸುತ್ತದೆ. ಸಂಖ್ಯಾಸಮೂಹದ ಲಕ್ಷಣವನ್ನು ಹೇಳುವ ಗಣಿತಶಾಸ್ತ್ರವು **ರಾಶಿ** ಎನಿಸುತ್ತದೆ. ದೇವತೆಗಳ ತಾರತಮ್ಯಕ್ರಮದಿಂದ ಮೂವತ್ತೆರಡು ಲಕ್ಷಣಾದಿಗಳನ್ನು ಹೇಳತಕ್ಕ ಶಾಸ್ತ್ರವು **ದೈವ**ವೆನಿಸುತ್ತದೆ. (ಉತ್ಪಾತಜ್ಞಾನವು **ದೈವ**ವೆನಿಸುತ್ತದೆ ಎಂದು ಪರರು ಹೇಳುವುದರಲ್ಲಿ ಪ್ರಮಾಣವಿಲ್ಲ. ಪ್ರಮಾಣ ವಿರೋಧವೂ ಆದೆ) ಇಂತಹ ಸ್ಥಳದಲ್ಲಿ ನಿಧಿಯದೆ, ಇತ್ಯಾದಿಗಳನ್ನು ಹೇಳುವ ಶಾಸ್ತ್ರವು ನಿಧಿಯೆನಿಸುತ್ತದೆ. ಮೂಲವೇದವು ವಾಕೋವಾಕ್ಯವೆನಿಸುತ್ತದೆ. (ಮೂಲವೇದವನ್ನು ಮೊದಲೇ ಋಕ್‌ನಿಗದಾದಿರೂಪವಾಗಿ ವಿಭಾಗಮಾಡಿದ್ದಾರೆ. ಅದು ಕಾರಣ ಋಗಾದಿ ಶಬ್ದಗಳಿಂದ ಅವಾಂತರವೇದಗಳನ್ನು ಇಟ್ಟುಕೊಳ್ಳಬೇಕು.) ಮೂಲವೇದದ ಸಾರಭೂತವಾದ ಅವಾಂತರವೇದದ ಉದ್ಧಾರವಾದ ಇಪ್ಪತ್ತನಾಲ್ಕು, ನೂರು, ಇತ್ಯಾದಿ ಶಾಖಾರೂಪವಾದುದು ಏಕಾಯನವೆನಿಸುತ್ತದೆ. (ವಾಕೋವಾಕ್ಯಂ=ತರ್ಕಶಾಸ್ತ್ರವು ಏಕಾಯನಂ=ನೀತಿಶಾಸ್ತ್ರವು, ಎಂದು ಪರರು ಹೇಳುವುದರಲ್ಲಿ ಪ್ರಮಾಣವಿಲ್ಲ.) (**ದೇವವಿದ್ಯಾ** ಎಂದರೆ–**ದೈವಂ** ಎಂಬ ಶಬ್ದದಿಂದ ಹೇಳಲ್ಪಟ್ಟ ಉತ್ಪಾತಜ್ಞಾನವೆಂದು ಪರರು ಹೇಳುವರು. ಅದು ಅಯುಕ್ತವು. ಒಂದು ಸಲ ಹೇಳಿದುದನ್ನೇ ಎರಡು ಸಲ ಹೇಳಿದಂತೆ ಆಗುವುದು: ಎಂಬ ಅಭಿಪ್ರಾಯದಿಂದ ಹೇಳುತ್ತಾರೆ.) ದೇವತೆಗಳಿಂದಲೇ ತಿಳಿಯಲ್ಪಡತಕ್ಕ ವಿದ್ಯೆಯು **ದೇವವಿದ್ಯೆಯು**, ಮನುಷ್ಯರಿಂದ ತಿಳಿಯಲ್ಪಡತಕ್ಕುದಲ್ಲ. ಅರಣ್ಯದಲ್ಲಿ ಕಲಿಯತಕ್ಕ ಉಪನಿಷತ್ತು ಬ್ರಹ್ಮವಿದ್ಯಾ ಎನಿಸುತ್ತದೆ (ಋಗ್ಯಜುಸ್ಸಾಮ ವಿದ್ಯೆಯು ಬ್ರಹ್ಮವಿದ್ಯೆಯು. ಶಿಕ್ಷಾ ಕಲ್ಪ ಚ್ಛಂದೋವಿಚಿತಿಗಳು ಬ್ರಹ್ಮವಿದ್ಯೆ ಎಂದು ಪರರು ಹೇಳುವುದು ಪ್ರಮಾಣವಿರುದ್ಧವು.) (೩) ದೇವತೆಗಳಿಂದ ಇತರಗಳಾದ ಭೂತಗಳ ಚಿಹ್ನೆಯನ್ನು ಹೇಳುವ ಸಾಮುದ್ರವು **ಭೂತವಿದ್ಯಾ** ಎನಿಸುತ್ತದೆ. ನೀತಿಶಾಸ್ತ್ರವು **ಕ್ಷತ್ರವಿದ್ಯೆಯು**. (ಧನುರ್ವೇದವು ಕ್ಷತ್ರವಿದ್ಯೆಯೆಂದು ಪರರು ಹೇಳುವುದು ಪ್ರಮಾಣವಿರುದ್ಧವು.) ಜ್ಯೋತಿಃಶಾಸ್ತ್ರವು **ನಕ್ಷತ್ರವಿದ್ಯೆ** ಎನಿಸುತ್ತದೆ ಸರ್ಪಗಳ ಲಕ್ಷಣವನ್ನು ಹೇಳುವ ಗಾರುಡವು **ಸರ್ಪವಿದ್ಯಾ** ಎನಿಸುತ್ತದೆ. ದೇವತೆಗಳ ಭೃತ್ಯರಾದ ಗಂಧರ್ವರನ್ನು ಹೇಳುವ ಗಾಂಧರ್ವಶಾಸ್ತ್ರವು **ದೇವ ಜನವಿದ್ಯೆ** ಎನಿಸುತ್ತದೆ. ನಾರದರು ಈ ವಿದ್ಯೆಗಳನ್ನೆಲ್ಲಾ ತಿಳಿದಿರುವರು, ಎಂದು ಸಾಮಸಂಹಿತೆಯಲ್ಲಿದೆ. ॥ ೧ ॥

ಪೀ—ನಾರದರು ಸಮಸ್ತವಿದ್ಯೆಗಳನ್ನೂ ತಿಳಿದವರಾದುದರಿಂದ ಆತ್ಮವಿದ್ಯೆಯನ್ನೂ ತಿಳಿದಿರುತ್ತಾರೆ. ಆದುದರಿಂದ ಸನತ್ಕುಮಾರರ ಬಳಿಗೆ ಹೋಗಿ ವಿಶೇಷಉಪದೇಶಮಾಡಬೇಕೆಂದು ಏಕೆ ಪ್ರಾರ್ಥಿಸಿದರೆಂದರೆ–

ಭಾ. ॥ (೧) ವಿದ್ಯಾನಾಂ ನಿರ್ಣಯೋಜ್ಞಾನಾದವಿದ್ಯಾನುಚ್ಯತೇ ಪುಮಾನ್ । ಸರ್ವವಿದ್ಯಾವಿದಸ್ಯದ್ಧಾ ತಸ್ಮಾನ್ನಿರ್ಣಯವಿತ್ತಯೇ । ಕುಮಾರಮೈಚ್ಛದ್ದೇವರ್ಷಿರ್ನಾರದೋ ಬ್ರಹ್ಮವಿತ್ತಮಮಿತಿ ಚ । (೨) ವಿಷ್ಣೋರ್ನಾಮ ಯತೋ ವಿದ್ಯಾಃ ಸರ್ವನಾಮೇತ್ಯತಃ ಸ್ಮೃತಃ । ನಾಮಾಭಿಮಾನಿನೀ ಚೋಷಾಸ್ತ(ತ)ಸ್ಯಾಂ ಬ್ರಹ್ಮ ಪರಂ ಸ್ಮರೇತ್ । (೩)

ಯದೇಷಾ ನ ಶಮೇಯಾ ಸ್ಯಾನ್ಮೀಯತೇ ಹ್ಯುಷಸಿ ಧ್ರುವಂ । ರಾತ್ರಿಮಾನಮಜಾನದ್ಧಿ-ಸ್ತತೋ ನಾಮೇತ್ಯುಷಾಃ ಸ್ಮೃತಾ ॥ ಇತಿ ಪ್ರಥಮಃ ಖಂಡಃ ॥ ೯—೧ ॥ ॥ ೨ ॥

ಅ ॥ (೧) ಲೋಕದಲ್ಲಿ ಪುರುಷರು ಸಮಸ್ತವಿದ್ಯೆಗಳನ್ನು ತಿಳಿದವರಾದರೂ ಜೆನ್ನಾಗಿ ವಿದ್ಯೆಗಳ ನಿರ್ಣಯ ಜ್ಞಾನವಿಲ್ಲದಿರುವುದರಿಂದ ಅವಿದ್ವಾನ್ (ತಿಳಿದವರಲ್ಲ) ಎಂದು ಹೇಳಲ್ಪಡುತ್ತಾರೆ. ಅದುಕಾರಣ ದೇವರ್ಷಿಗಳಾದ ನಾರದರು ಸಮಸ್ತವಿದ್ಯೆಗಳನ್ನು ತಿಳಿದವರಾದರೂ ಜೆನ್ನಾಗಿ ನಿರ್ಣಯಜ್ಞಾನ ಹೊಂದುವುದಕ್ಕಾಗಿ ಬ್ರಹ್ಮಜ್ಞಾನಿಗಳಲ್ಲಿ ಶ್ರೀಷ್ಠರಾದ ಸನತ್ಕುಮಾರರ ಬಳಿಗೆ ಬಂದರು. (ದೇವರ್ಷಿಗಳಾದ ನಾರದರು ತಾನು ಶ್ರೇಷ್ಠರಾದರೂ ಪ್ರಾಕೃತಪುರುಷರಂತೆ ಸನತ್ಕುಮಾರರನ್ನು ಹೊಂದಿದರೆಂದು ಪರರು ಹೇಳುವುದು ಅಯುಕ್ತವೆಂದು ಸಿದ್ಧವಾಯಿತು. ಹೇಗೆಂದರೆ ಪ್ರಮಾಣವಿರುದ್ಧವಾಗಿದೆ. ಮತ್ತೂ ಸನತ್ಕುಮಾರರು ಸ್ಕಂದನ ಅವತಾರರಾದುದರಿಂದ ನಾರದರಿಗಿಂತ ಸ್ವತಏವ ಉತ್ತಮರೇ ಆಗಿರುತ್ತಾರೆ.) (೨) (ಸನತ್ಕುಮಾರರು **ನಾಮೈವೈತತ್** ಎಂದು ಎಲ್ಲಾ ವಿದ್ಯೆಗಳೂ ನಾಮವೆಂದು ಹೇಳಿರುವರು. ಅದು ಯಾರಿಗೆ ನಾಮವೆಂದರೆ) ಎಲ್ಲಾವಿದ್ಯೆಗಳೂ ವಿಷ್ಣುವಿಗೆ ನಾಮಗಳಾಗಿರುವುದರಿಂದ **ಸರ್ವನಾಮಾ** ಎನಿಸುತ್ತಾನೆ ನಾಮಗಳಿಗೆ ಅಭಿಮಾನಿನಿಯಾದ ಉಷೋದೇವಿಯಲ್ಲಿ ನಿಯಾಮಕನಾಗಿ ಪರಬ್ರಹ್ಮನಿದ್ದಾನೆಂದು ಸ್ಮರಿಸಬೇಕು. (೩) (ಅಶ್ವಿನೀದೇವತೆಗಳ ಪತ್ನಿಯಾದ ಉಷಾದೇವಿಯು ಸಮಸ್ತವಿದ್ಯೆಗಳಿಗೆ ಅಭಿಮಾನಿನಿಯೆಂದಾದರೆ ಭಾರಕ್ಯಾದಿಗಳಂತೆಯೇ ಅಮೇಯಳು ಆಗಬೇಕು. ಅದುಕಾರಣ ನಾಮ ಎಂದು ಹೆಸರು ಹೇಗೆ? ಎಂದರೆ) ರಾತ್ರಿಯ ಮಾನವನ್ನು ತಿಳಿಯದಿರುವವರಿಂದ ಉಷೋದೇವಿಯು (ಉಷಃಕಾಲಕ್ಕೆ ಅಭಿಮಾನಿನಿಯಾಗಿರುವುದರಿಂದ) ಉಷಃಕಾಲದಲ್ಲಿ ಜೆನ್ನಾಗಿ ತಿಳಿಯಲ್ಪಡುತ್ತಾಳೆ. ಅದುಕಾರಣ ಉಷೋದೇವಿಯು (ಭಾರತ್ಯಾದಿಗಳಂತೆ) ಅಮೇಯಳು (ತಿಳಿಯಲ್ಪಡದಿರುವವಳು) ಅಲ್ಲ. ಆದಕಾರಣ (ಅಮಾ-ತಿಳಿಯಲ್ಪಡದಿರುವವಳು, ನ-ಅಲ್ಲ, ಎಂಬ ವ್ಯುತ್ಪತ್ತಿಯಿಂದ) **ನಾಮ** ಎನಿಸುತ್ತಾಳೆ. ॥ ೯—೧ ॥ ॥ ೨ ॥

ಒಂದನೇ ಖಂಡವು ಮುಗಿಯಿತು.

೨ನೇ ಖಂಡವು

ಪೀ—ನಾರದರಿಗೆ ಸನತ್ಕುಮಾರರು ಉಪದೇಶಿಸುತ್ತಾರೆ—

ಉ. ॥ ವಾಗ್ವಾವ ನಾಮ್ನೋ ಭೂಯಸೀ ವಾಗ್ವಾ ಋಗ್ವೇದಂ ವಿಜ್ಞಾಪಯತಿ ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಾಗ್ಂ ಸರ್ಪದೇವಜನವಿದ್ಯಾಂ ದಿವಂ ಚ ಪೃಥಿವೀಂ ಚ ವಾಯುಂ ಚಾಕಾಶಂ ಚಾಪಶ್ಚ ತೇಜಶ್ಚ ದೇವಾಗ್ಂಶ್ಚ ಮನುಷ್ಯಾಗ್ಂಶ್ಚ ಪಶೂಗ್ಂಶ್ಚ ವಯಾಗ್ಂಸಿ ಚ ತೃಣವನಸ್ಪತೀನ್ ಶ್ವಾಪದಾನ್ಯಾಕೀಟಪತಂಗಪಿಪೀಲಿಕಂ ಧರ್ಮಂ ಚಾಧರ್ಮಂ ಚ ಸತ್ಯಂ ಚಾನೃತಂ ಚ ಸಾಧು ಚಾಸಾಧು ಚ ಹೃದಯಜ್ಞಂ ಚಾಹೃದಯಜ್ಞಂ ಚ ಯದ್ವೈ ವಾಙ್ನಾಭವಿಷ್ಯನ್ನ ಧರ್ಮೋ

ನಾಧರ್ವೋ ವೈಜ್ಞಾಪಯಿಷ್ಯನ್ನೃತಂ ನಾನೃತಂ ನ ಸಾಧು ನಾಸಾಧು ನ ಹೃದಯಜ್ಞೋ ನಾಹೃದಯಜ್ಞೋ ವಾಗೇವೈತತ್ಸರ್ವಂ ವಿಜ್ಞಾಪಯತಿ ವಾಚಮುಪಾಸ್ವೇತಿ ॥ ॥ ೧ ॥

ಅ ॥ ನಾಮಕ್ಕೆ ಅಭಿಮಾನಿನಿಯಾದ ಅಶ್ವಿನೀದೇವತೆಗಳ ಪತ್ನಿಯಾದ ಉಷಾದೇವಿಗಿಂತ *ವಾಗಿಂದ್ರಿಯಕ್ಕೆ ಅಭಿಮಾನಿನಿಯಾದ ಸ್ವಾಹಾದೇವಿಯೇ ಧರ್ಮಜ್ಞಾನಮೊದಲಾದ ಸಮಸ್ತಗುಣಗಳಿಂದ ಶ್ರೇಷ್ಠಳು. ಅಗ್ನಿಯ ಪತ್ನಿಯಾದ ಸ್ವಾಹಾದೇವಿಯು ಹೋಮಕ್ಕೆ ಉಪಯುಕ್ತವಾದ ದ್ರವ್ಯವನ್ನು ಹೊಂದುವುದರಿಂದ **ವಸು** ಎಂದು ಹೆಸರುಳ್ಳ ಅಗ್ನಿಯನ್ನು ಪೂಜಿಸುವ ಕಾರಣ **ವಾಕ್** ಎಂದು ಹೆಸರುಳ್ಳವಳು. (ಅವಳು ಶ್ರೇಷ್ಠಳು ಹೇಗೆಂದರೆ—ವಾಗಿಂದ್ರಿಯಕ್ಕೆ ಅಭಿಮಾನಿನಿಯಾದ ಸ್ವಾಹಾದೇವಿಯ ಮಹಿಮೆ ಹೇಳುತ್ತಾರೆ.) ಸ್ವಾಹಾದೇವಿಯೇ ಇದು ಋಗ್ವೇದವು ಇತ್ಯಾದಿ ರೂಪದಿಂದ ಋಗ್ವೇದ ಯಜುರ್ವೇದ ಮೊದಲಾದವುಗಳನ್ನು ತಿಳಿಸುತ್ತಾಳೆ. (ಅಂದರೆ ವಾಗಿಂದ್ರಿಯಕ್ಕೆ ದೇವತೆಯಾದ ಸ್ವಾಹಾದೇವಿಯ ಅನುಗ್ರಹದಿಂದಲೇ ಗುರುಗಳು ಹೇಳಿದಂತೆಯೇ ತಾನೂ ಹೇಳಿ ಋಗ್ವೇದಾದಿಗಳನ್ನು ಜೀವನು ತಿಳಿಯುತ್ತಾನೆ.) (ಸ್ವಾಹಾದೇವಿಯು ನಾಮ (ಶಬ್ದ) ಪ್ರಪಂಚವನ್ನು ಮಾತ್ರ ತಿಳಿಸುವುದಲ್ಲ. ಪರಂತು ಅರ್ಥಪ್ರಪಂಚವನ್ನು ಅವಳು ತಿಳಿಸುತ್ತಾಳೆಂದು ಹೇಳುತ್ತಾರೆ) ಸ್ವರ್ಗ, ಪೃಥಿವೀ, ವಾಯು, ಆಕಾಶ, ಜಲ, ತೇಜಸ್ಸು ದೇವತೆಗಳು, ಮನುಷ್ಯರು, ಪಶುಗಳು, ಹಕ್ಕಿಗಳು, ಹುಲ್ಲು, ಮರ, ಅರಣ್ಯದ ಜಂತುವಿಶೇಷಗಳು, ಕೀಟ ಹಾತೆ ಇರುವೆ ಪರ್ಯಂತ ಎಲ್ಲಾ ವಸ್ತು, ಧರ್ಮ, ಅಧರ್ಮ, ಸತ್ಯನುಡಿ, ಸುಳ್ಳು, ಒಳ್ಳೆದು, ಕೆಟ್ಟೆದ್ದು, ಶ್ರೀಹರಿಯ ತತ್ತ್ವವನ್ನು ತಿಳಿದವನು, ಶ್ರೀಹರಿಯ ತತ್ತ್ವವನ್ನು ತಿಳಿಯದವನು, ಅಥವಾ ಪರಬ್ರಹ್ಮ ಹೊರತಾದ ವಸ್ತುಗಳನ್ನ ತಿಳಿದವನು ಇವುಗಳೆಲ್ಲವನ್ನು ಸ್ವಾಹಾದೇವಿಯೇ ತಿಳಿಸುತ್ತಾಳೆ. (ಧರ್ಮ ಅಧರ್ಮಗಳು ಅಥವಾ ಸತ್ಯ ಅನೃತ ಮೊದಲಾದವುಗಳು ಋಗ್ವೇದಾದಿಗಳನ್ನು ತಿಳಿಸುತ್ತವೆಂದು ಕೂಡುವುದರಿಂದ ವಾಕ್ ತಿಳಿಸುತ್ತದೆಂದು ಏಕೆ ಹೇಳಿದ್ದೆಂದರೆ) ವಾಗಿಂದ್ರಿಯವು ಇಲ್ಲವಾದರೆ ಧರ್ಮ, ಅಧರ್ಮ ಸತ್ಯ, ಸುಳ್ಳು, ಒಳ್ಳೇದು, ಕೆಟ್ಟೆದ್ದು ಋಗ್ವೇದಾದಿಗಳು ಶ್ರೀಹರಿಯ ತತ್ತ್ವವನ್ನು ತಿಳಿದವ, ತಿಳಿಯದವ, ಇವು ಯಾವುದನ್ನೂ ಜೀವನು ತಿಳಿಯಲಾರನು. (ಅಂದರೆ ವಾಗಿಂದ್ರಿಯವು ಇಲ್ಲವಾದರೆ ವೇದಾಧ್ಯಯನಾದಿಗಳನ್ನು ಮಾಡಲಿಕ್ಕೆ ಸಾಮ್ಯವಿಲ್ಲದಿರುವುದರಿಂದ ವೇದಾದಿಗಳಿಂದ ಹುಟ್ಟುತಕ್ಕ ಧರ್ಮಾದಿಗಳ ಜ್ಞಾನವೇ ಸರ್ವಥಾ ಹುಟ್ಟಲಾರದು.) ಅದುಕಾರಣ ಎಲ್ಲವನ್ನು ವಾಗಿಂದ್ರಿಯವೇ ಶಬ್ದೋಚ್ಚಾರಣದಿಂದ ಜೀವರಿಗೆ ತಿಳಿಸುತ್ತವೆ. ವಾಗಿಂದ್ರಿಯಕ್ಕೆ ಅಭಿಮಾನಿನಿಯಾದ ಸ್ವಾಹಾದೇವಿಯಲ್ಲಿ ನಿಯಾಮಕನಾಗಿ ಪರಬ್ರಹ್ಮನಿದ್ದಾನೆಂದು ಉಪಾಸನೆಮಾಡು ॥ ॥ ೧ ॥

ಉ. ॥ ಸ ಯೋ ವಾಚಂ ಬ್ರಹ್ಮೇತ್ಯುಪಾಸ್ತೇ ಯಾವದ್ವಾಚೋ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋ ವಾಚಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ವಾಚೋ ಭೂಯ ಇತಿ ವಾಚೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ದ್ವಿತೀಯಃ ಖಂಡಃ ॥ ೯–೨ ॥ ॥ ೨ ॥

ಅ ॥ ಯಾವ ಅಧಿಕಾರಿಯು ವಾಗಿಂದ್ರಿಯದಲ್ಲಿ ಪರಬ್ರಹ್ಮನನ್ನು ಉಪಾಸನೆಮಾಡುತ್ತಾನೋ, ಆ ಉಪಾಸಕನು ವಾಗಿಂದ್ರಿಯಾಭಿಮಾನಿನಿಯಾದ ಸ್ವಾಹಾದೇವಿಯು ಎಷ್ಟು ದೇಶದಲ್ಲಿ ವ್ಯಾಪಿಸಿಕೊಂಡಿ

---

* ಜಿಹ್ವಾಮೂಲ ಮೊದಲಾದ ಎಂಟು ಸ್ಥಾನಗಳಲ್ಲಿದ್ದ ವರ್ಣಗಳನ್ನೂ ಪ್ರಳಟಿಸುವುದು ವಾಗಿಂದ್ರಿಯವು. ಋಗ್ವೇದ—ಸರ್ವದೇವಪ್ರಜನವಿದ್ಯಾಂ ಎಂಬ ಪರ್ಯಂತ ಹಿಂದಿನಂತೆ ಅರ್ಥ.

೪ನೇ ಖಂಡವು

ಓಂ. ॥ ಸಂಕಲ್ಪೋ ವಾವ ಮನಸೋ ಭೂಯಾನ್ಯದಾ ವೈ ಸಂಕಲ್ಪಯತೇಽಥ ಮನಸ್ಯತ್ಯಥ ವಾಚಮಿರಯತಿ ತಾಮು ನಾಮ್ನೀರಯತಿ ನಾಮ್ನಿ ಮಂತ್ರಾ ಏಕಂ ಭವಂತಿ ಮಂತ್ರೇಷು ಕರ್ಮಾಣಿ ॥ ॥ ೧ ॥

ಅ ॥ ಹಗಲು ಸಂಕಲ್ಪಕ್ಕೆ ಕಾರಣನಾದ, ಸಂಕಲ್ಪಕ್ಕೆ ಅಭಿಮಾನಿಯಾದ ಸಂಕಲ್ಪನೆನಿಸಿದ ಮಿತ್ರದೇವನು ಮನಃ ಎನಿಸಿದ ಪರ್ಜನ್ಯನಿಂದಲೂ ಪರ್ಜನ್ಯನ ಸಮಾನಿಕರಿಂದಲೂ ಶ್ರೇಷ್ಠನು. ಯಾವಾಗ ಪುರುಷನು ಸಂಕಲ್ಪನೆನಿಸಿದ ಮಿತ್ರದೇವನಿಂದ ಪ್ರೇರಿಸಲ್ಪಟ್ಟವನಾಗಿ ಮನನಾದಿಗಳನ್ನು ಮಾಡುತ್ತೇನೆಂದು ಸಂಕಲ್ಪಮಾಡುತ್ತಾನೋ, ಆಗ ಜೀವನು ಮನನಾದಿಗಳಲ್ಲಿ ಮನಸ್ಸನ್ನು ಪ್ರೇರಿಸುತ್ತಾನೆ. ಮನಸ್ಸಿನ ವ್ಯಾಪಾರವಾದಮೇಲೆ ವಾಗಿಂದ್ರಿಯವನ್ನು ಪ್ರೇರಿಸುತ್ತಾನೆ. (ಅಂದರೆ ವಾಗಿಂದ್ರಿಯ ವ್ಯಾಪಾರವಾಗುತ್ತದೆ.) ವಾಗಿಂದ್ರಿಯವನ್ನು ಶ್ರೀಹರಿಯ ನಾಮವಾದ ಋಗ್ವೇದಮೊದಲಾದ ಶಬ್ದರಾಶಿಗಳ ವಿಷಯದಲ್ಲಿ ಪ್ರೇರಿಸುತ್ತಾನೆ. (ಅಂದರೆ ಶ್ರೀಹರಿಯ ನಾಮವಾದ ಋಗಾದಿ ಶಬ್ದರಾಶಿಯನ್ನು ಉಚ್ಚರಿಸುತ್ತಾನೆ.) ಋಗಾದಿ ಸಮಸ್ತ ಶಬ್ದರಾಶಿಯಲ್ಲಿ ಮಂತ್ರಗಳು ಸೇರುತ್ತವೆ. (ಸಾಮಾನ್ಯದಲ್ಲಿ ವಿಶೇಷವು ಸೇರುತ್ತದೆ. ಅಂದರೆ ಒಂದೇ ಅರ್ಥವುಳ್ಳವುಗಳಾಗುತ್ತವೆ) ಮಂತ್ರಗಳಲ್ಲಿ ಕರ್ಮಗಳು ಸೇರುತ್ತವೆ. (ಅಂದರೆ ಮಂತ್ರಪ್ರಕಾಶಿತಗಳಾದ ಕರ್ಮಗಳು ಮಾಡಲ್ಪಡುತ್ತವೆ. ಅಮಂತ್ರಕವಾದುದು ಸತ್ಕರ್ಮವಿಲ್ಲ)

ವಿ ॥ (1) ಶೈವತಮೊದಲಾದ ಹನ್ನೊಂದು ಮನುಗಳ **ಜ್ಯೈವನ ಉಜಿಥ್ಯೈ ವೈನ್ಯೈ ಶರಬಿಂದು ಹೈಹಯ ಪ್ರಿಯವ್ರತ** ಗಯ ಅನುಕ್ತ ಶತಸ್ಥದೇವಾದಿಗಳೂ ಪರ್ಜನ್ಯಮೊದಲಾದ ಆರು ಮಂದಿಯಿಂದ ಉತ್ತಮರು. ಅವರಿಗಿಂತ **ಅಶ್ವಿನೀದೇವತೆಗಳೂ ಗಣಪತಿ ಕುಬೇರ ವಿಷ್ವಕ್ಸೇನ** ಇವರು ಶ್ರೇಷ್ಠರು. ಇವರಿಗಿಂತ ಸಂಕಲ್ಪನೆನಿಸಿದ **ಮಿತ್ರದೇವನು** ಶ್ರೇಷ್ಠನು. (2) ಸಂಕಲ್ಪ ಶಬ್ದದಿಂದ ನಿರ್ಋತಿ, ಬೃಹಸ್ಪತಿಯ ಹೆಂಡತಿಯಾದ **ತಾರಾದೇವಿ**, ಪ್ರಾವಹೀ ಹೀಗೆ ಮಿತ್ರನಿಗೆ ಸಮಾನಿಕರಾದ ಮೂರು ದೇವತೆಗಳನ್ನು ಇಟ್ಟುಕೊಳ್ಳಬೇಕು. ॥ ೧ ॥

ಓಂ. ॥ ತಾನಿ ಹ ವಾ ಏತಾನಿ ಸಂಕಲ್ಪೈಕಾಯನಾನಿ ಸಂಕಲ್ಪಾತ್ಮಕಾನಿ ಸಂಕಲ್ಪೇ ಪ್ರತಿಷ್ಠಿತಾನಿ ಸೈಮಕ್ಲೃಪತಾಂ ದ್ಯಾವಾಪೃಥಿವೀ ಸಮಕಲ್ಪೇತಾಂ ವಾಯುಶ್ಚಾಕಾಶಶ್ಚ ಸಮಕಲ್ಪಂತಾಮಾಪಶ್ಚ ತೇಜಶ್ಚ ತೇಷಾಂ ಸಂಕ್ಲೃಪ್ತ್ಯೈ ವರ್ಷಞ್ಚ ಸಂಕಲ್ಪತೇ ವರ್ಷಸ್ಯ ಸಂಕ್ಲೃಪ್ತ್ಯಾ ಅನ್ನಞ್ಚ ಸಂಕಲ್ಪತೇಽನ್ನಸ್ಯ ಸಂಕ್ಲೃಪ್ತ್ಯೈ ಪ್ರಾಣಾಃ ಸಂಕಲ್ಪಂತೇ ಪ್ರಾಣಾನಾಞ್ಚ ಸಂಕ್ಲೃಪ್ತ್ಯೈ ಮಂತ್ರಾಃ ಸಂಕಲ್ಪಂತೇ ಮಂತ್ರಾಣಾಂ ಸಂಕ್ಲೃಪ್ತ್ಯೈ ಕರ್ಮಾಣಿ ಸಂಕಲ್ಪಂತೇ ಕರ್ಮಣಾಞ್ಚ ಸಂಕ್ಲೃಪ್ತ್ಯೈ ಲೋಕಾಃ ಸಂಕಲ್ಪಂತೇ ಲೋಕಾನಾಂ ಸಂಕ್ಲೃಪ್ತ್ಯೈ ಸರ್ವಂ ಸಂಕಲ್ಪತೇ ಸ ಏಷ ಸಂಕಲ್ಪಃ ಸಂಕಲ್ಪಮುಪಾಸ್ಸ್ವೇತಿ ॥ ॥ ೨ ॥

ಅ ॥ ಆ ಈ ಮನಸ್ಸು ವಾಕ್ ನಾಮ ಮಂತ್ರ ಕರ್ಮಗಳೂ, ಅವುಗಳಿಗೆ ಅಭಿಮಾನಿಗಳಾದ ಪರ್ಜನ್ಯಾದಿಗಳೂ ಸಂಕಲ್ಪನೆನಿಸಿದ ಮಿತ್ರನ ಅಧೀನಗೆಳು. ಸಂಸಾರದಲ್ಲಿಯೂ ಮುಖ್ಯವಾಗಿ ಸಂಕಲ್ಪನನ್ನೇ

ಆಶ್ರಯಿಸಿಕೊಂಡಿರುವವುಗಳು.) ಸಂಕಲ್ಪಸ್ವರೂಪಗಳು. ಮುಕ್ತಿಯಲ್ಲಿಯೂ ಸಂಕಲ್ಪನೆನಿಸಿದ ಮಿತ್ರನಲ್ಲಿ ಆಶ್ರಿತಗಳು (ಅಂದರೆ ಮೋಕ್ಷದಲ್ಲಿಯೂ ಮಿತ್ರದೇವನ ಅಧೀನಗಳು.) (ಇಷ್ಟುಮಾತ್ರವಲ್ಲ. ಸಂಕಲ್ಪನಿಂದಲೇ ಸ್ವರ್ಗಭೂಮ್ಯಾದಿಗಳು ಹುಟ್ಟುವುದೆನ್ನುತ್ತಾರೆ) ಸ್ವರ್ಗಭೂಮಿಗಳು ಸಂಕಲ್ಪನಿಂದಲೇ ಹುಟ್ಟಿದವು. ವಾಯು ಆಕಾಶ ಜಲ ತೇಜಸ್ಸು ಇವುಗಳು ಸಂಕಲ್ಪನಿಂದಲೇ ಹುಟ್ಟಿದವು. ಆ ದ್ಯಾವಾಪೃಥಿವ್ಯಾದಿಗಳ ಸ್ಥಿತಿಗಾಗಿ ವೃಷ್ಟಿಯು ಹುಟ್ಟುತ್ತದೆ. ಅಥವಾ ಮಿತ್ರದೇವನು ವೃಷ್ಟಿಯನ್ನು ಮಾಡುತ್ತಾನೆ. ವೃಷ್ಟಿಯಿಂದ ಅನ್ನವು ಹುಟ್ಟುತ್ತದೆ. ಅನ್ನದಿಂದ ಪ್ರಾಣಿಗಳು ವೃದ್ಧಿಯನ್ನು ಹೊಂದುತ್ತವೆ. ಪ್ರಾಣಿಗಳ ಸ್ಥಿತಿಗಾಗಿ ಮಂತ್ರಗಳು ಹುಟ್ಟುತ್ತವೆ. ಮಂತ್ರಗಳಿಂದ ಅಗ್ನಿಹೋತ್ರಮೊದಲಾದ ಕರ್ಮಗಳು ಹುಟ್ಟುತ್ತವೆ. (ಅಂದರೆ ಮಂತ್ರಪ್ರಕಾಶಿತಗಳಾದ ಕರ್ಮಗಳು ಫಲ ಹುಟ್ಟಿಸಲಿಕ್ಕೆ ಸಮರ್ಥಗಳಾಗುತ್ತವೆ.) ಕರ್ಮಗಳ ಸಾಫಲ್ಯಕ್ಕಾಗಿ ಲೋಕಗಳು, ಅವುಗಳಿಗಾಗಿ ಅಜೇತನವೆಲ್ಲವೂ ಇರುವುದು. (ಈ ಪ್ರಕಾರ ಸಂಕಲ್ಪನೆನಿಸಿದ ಮಿತ್ರದೇವನು ದ್ಯಾವಾಪೃಥಿವ್ಯಾದಿಗಳನ್ನು ಸೃಷ್ಟಿಮಾಡಿ ಅವುಗಳ ಸಾಫಲ್ಯಕ್ಕಾಗಿ ವೃಷ್ಟ್ಯಾದಿಗಳನ್ನು ಪರಂಪರೆಯಾಗಿ ಸೃಷ್ಟಿಸಿರುವನು) ಅಂತಹ ಮಿತ್ರದೇವನಲ್ಲಿಯೂ, ಅವನಿಗೆ ಸಮಾನಿಕರಾದ ದೇವತೆಗಳಲ್ಲಿಯೂ ಪರಬ್ರಹ್ಮನನ್ನು ಉಪಾಸನೆಮಾಡು, ಎಂದರು.

ವಿ ॥ (೧) ದ್ಯಾವಾಪೃಥಿವ್ಯಾದಿಶಬ್ದಗಳಿಂದ ಜಡಗಳನ್ನೂ ಜೀವನಗಳನ್ನೂ ಇಟ್ಟುಕೊಳ್ಳಬೇಕು. (೨) ಸಂಕಲ್ಪಾಖ್ಯಮಿತ್ರನಿಂದ ಜಡಗಳ ಉತ್ಪತ್ತಿಯು, ಜೀವನಗಳಿಗೆ ವಾಯ್ವಾದಿಗಳಿಂದ ಸ್ಥಿತಿಯು, ಹೀಗೆ ಇಟ್ಟುಕೊಳ್ಳಬೇಕು.

ಉ. ॥ ಸ ಯಃ ಸಂಕಲ್ಪಂ ಬ್ರಹ್ಮೇತ್ಯುಪಾಸ್ತೇ ಕ್ಲೃಪ್ತಾನ್ವೈ ಸ ಲೋಕಾನ್ ಧ್ರುವಾನ್ ಧ್ರುವಃ ಪ್ರತಿಷ್ಠಿತಾನ್ಪ್ರತಿಷ್ಠಿತೋಽವ್ಯಥಮಾನಾನವ್ಯಥಮಾನೋಽಭಿಸಿಧ್ಯತಿ ಯಾವತ್ಸಂಕಲ್ಪಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯಃ ಸಂಕಲ್ಪಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವಃ ಸಂಕಲ್ಪಾದ್ಭೂಯ ಇತಿ ಸಂಕಲ್ಪಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ಚತುರ್ಥಃ ಖಂಡಃ ॥ ೯—೪ ॥ ॥ ೩ ॥

ಅ ॥ ಯಾವನು ಸಂಕಲ್ಪಾಭಿಮಾನಿಯಾದ ಮಿತ್ರದೇವನಲ್ಲಿ ಪರಬ್ರಹ್ಮನನ್ನು ಉಪಾಸನೆಮಾಡುತ್ತಾನೋ, ಆತನು ಮಿತ್ರದೇವನಿಂದ ಅಧಿಷ್ಠಿತಗಳೂ, ನಿತ್ಯಗಳೂ, ಯಾವಾಗಲೂ ಒಂದೇರೀತಿಯಿರುವ ದುಃಖವಿಲ್ಲದಿರುವವುಗಳೂ ಆದ ಲೋಕಗಳನ್ನು ತಾನೂ ನಿತ್ಯನೂ ಒಂದೇರೀತಿಯಿರುವವನೂ, ದುಃಖರಹಿತನೂ ಆಗಿ ಹೊಂದುತ್ತಾನೆ. ಮಿತ್ರನು ಎಷ್ಟು ದೇಶದಲ್ಲಿ ಇರುತ್ತಾನೋ, ಅಷ್ಟು ದೇಶದಲ್ಲಿ ಸ್ವೇಚ್ಛಾನುಸಾರವಾಗಿ ಇರುತ್ತಾನೆ. ಆ ಸಂಕಲ್ಪಾಭಿಮಾನಿಯಾದ ಮಿತ್ರನಿಂದಲೂ, ಆತನಿಗೆ ಸಮಾನಿಕರಾದ ದೇವತೆಗಳಿಂದಲೂ ಶ್ರೇಷ್ಠನು ಇದ್ದಾನೋ ಏನು? ಎಂದು ನಾರದರ ಪ್ರಶ್ನೆಗೆ ಶ್ರೇಷ್ಠನಿದ್ದಾನೆಂದು ಸನತ್ಕುಮಾರರು ಉತ್ತರಿಸಿದರು. ಅದನ್ನು ಉಪದೇಶಮಾಡಬೇಕೆಂದು ನಾರದರು ಬೇಡಿಕೊಂಡರು. ॥ ೯—೪ ॥ ॥ ೩ ॥

ನಾಲ್ಕನೇ ಖಂಡವುಮುಗಿಯಿತು.

ಜನೇ ಖಂಡವು

ಓ. ॥ ಚಿತ್ತಂ ವಾವ ಸಂಕಲ್ಪಾದ್ಭೂಯೋ ಯ ದಾಮೈ ಚೇತಯತೇಽಥ ಸಂಕಲ್ಪಯತೇಽಥ ಮನಸ್ಯತ್ಯಥ ವಾಚಮೀರಯತಿ ತಾಮು ನಾಮ್ನೀರಯತಿ ನಾಮ್ನಿ ಮಂತ್ರಾ ಏಕಂ ಭವಂತಿ ಮಂತ್ರೇಷು ಕರ್ಮಾಣಿ ॥ ॥ ೧ ॥

ಅ ॥ ಅಸ್ಥಿರವಾದ ಸ್ಮರಣರೂಪವಾದ ಚಿತ್ತಕ್ಕೆ ಅಭಿಮಾನಿಯಾದ, ಹೋಮಕುಂಡದಲ್ಲಿ ಸಂಬದ್ಧವಾಗಿರುವುದರಿಂದ ಚಿತ್ತನೆನಿಸಿದ, ಅಗ್ನಿ ಯೂ, ಅಗ್ನಿಗೆ ಸಮಾನನಾದ, ಭೃಗು, ದಕ್ಷಪ್ರಜಾಪತಿಯ ಪತ್ನಿ ಯಾದ ಪ್ರಸೂತಿ, ಹೀಗೆ ಈ ಮೂರು ದೇವತೆಗಳೂ, ಸಂಕಲ್ಪನೆನಿಸಿದ ಮಿತ್ರನಿಂದಲೂ ಮಿತ್ರನಿಗೆ ಸಮಾನಿಕವಾದ ನಿರ್ಋತಿ ತಾರಾ ಪ್ರಾವಹೀ ಎಂಬ ದೇವತೆಗಳಿಂದಲೂ ಶ್ರೇಷ್ಠನು. (ಮತ್ತು ಈ ಮಿತ್ರನೊದಲಾದ ನಾಲ್ಕು ದೇವತೆಗಳಿಂದಲೂ ಉತ್ತಮರಾದ ಮರೀಚಿ ಅತ್ರಿ ಅಂಗಿರಃ ಪುಲಸ್ತ್ಯ ಪುಲಹ ಕ್ರತು ವಸಿಷ್ಠ ವಿಶ್ವಾಮಿತ್ರ ವೈವಸ್ವತಮನು ಇವರಿಂದಲೂ ಉತ್ತಮನು.) ಮನುಷ್ಯನು ಚಿತ್ತಾಭಿಮಾನಿಯಾದ ಅಗ್ನಿ ಯಿಂದ ಪ್ರೇರಿತನಾಗಿ ಕರ್ತವ್ಯ ಅಕರ್ತವ್ಯಗಳನ್ನು ತಿಳಿಯುತ್ತಾನೆ. ಆಮೇಲೆ ಈ ಕರ್ಮ ಮಾಡುತ್ತೇನೆ, ಇತ್ಯಾದಿ ರೂಪದಿಂದ ಸಂಕಲ್ಪಮಾಡುತ್ತಾನೆ. ಆಮೇಲೆ ಕರ್ಮದಲ್ಲಿ ಮನಸ್ಸನ್ನು ಪ್ರೇರಿಸುತ್ತಾನೆ.....* ॥ ೧ ॥

ಓ. ॥ ತಾನಿ ಹ ವಾ ಏತಾನಿ ಚಿತ್ತೈಕಾಯನಾನಿ ಚಿತ್ತಾತ್ಮಕಾನಿ ಚಿತ್ತೇ ಪ್ರತಿಷ್ಠಿತಾನಿ ತಸ್ಮಾದ್ಯದ್ಯಪಿ ಬಹುವಿದಚಿತ್ತೋ ಭವತಿ ನಾಯಮಸ್ತೀತ್ಯೇವೈನಮಾಹುರ್ಯದಯಂ ವೇದ ಯದ್ವಾ ಅಯಂ ವಿದ್ವಾನ್ನೇತ್ಥಮಚಿತ್ತಃ ಸ್ಯಾದಿತ್ಯಥ ಯದ್ಯಲ್ಪವಿಚ್ಚಿತ್ತವಾನ್ಭವತಿ ತಸ್ಮಾದೇತತ್ ಶುಶ್ರೂಷಂತೇ ಚಿತ್ತಂ ಹ್ಯೇವೈಷಾಮೇಕಾಯನಂ ಚಿತ್ತಮಾತ್ಮಾ ಚಿತ್ತಂ ಪ್ರತಿಷ್ಠಾ ಚಿತ್ತಮುಪಾಸ್ಯೇತಿ ॥ ॥ ೨ ॥

ಅ ॥ ಜೀವನ ಅಜೀವನರೂಪಗಳಾದ ಸಂಕಲ್ಪಾದಿಗಳು ಅಗ್ನಿ ಭೃಗು ಪ್ರಸೂತಿ ಎಂಬ ಮೂರು ದೇವತೆಗಳ ಅಧೀನರು. (ಸಂಕಲ್ಪಾದಿಗಳು ಚಿತ್ತದ ಅಧೀನಗಳಾಗಿರುವುದರಿಂದ) ಚಿತ್ತನೇ ಪ್ರಧಾನವಾಗಿ ಉಳ್ಳವುಗಳು. ಚಿತ್ತದಿಂದ ಹುಟ್ಟುತಕ್ಕವುಗಳು. ಚಿತ್ತದಲ್ಲಿ ಆಶ್ರಿತಗಳಾಗಿವೆ ಚಿತ್ತವು ಉತ್ತಮವಾಗಿರುವುದರಿಂದಲೇ ಬಹುಶಾಸ್ತ್ರಾದಿಗಳನ್ನು ತಿಳಿದವನಾದರೂ ಸ್ಮರಣಸಾಮರ್ಥ್ಯವಿಲ್ಲದವನಾದರೆ ಅತನನ್ನು ನಿಪುಣರಾದ ಲೌಕಿಕರು ಇಲ್ಲವೆನ್ನುತ್ತಾರೆ. (ಅತನು ಇದ್ದರೂ ಇಲ್ಲದೆ ಇದ್ದಹಾಗೆ ಎನ್ನುತ್ತಾರೆ. ಇವನು ವಿದ್ವಾಂಸನು ಅಲ್ಲವೆಂದೇ ಹೇಳುತ್ತಾರೆ.) (ಅದನ್ನೇ ವಿವರಿಸುತ್ತಾರೆ) ಇವರು ಶಾಸ್ತ್ರಾದಿಗಳನ್ನು ಸಾಮಾನ್ಯವಾಗಿ ತಿಳಿದಿದ್ದರೆ ಅಥವಾ ವಿಶೇಷವಾಗಿ ತಿಳಿದಿದ್ದರೆ ಸ್ಮರಣವಿಲ್ಲದವರು ಆಗುತ್ತಿರಲಿಲ್ಲ. (ಆದ ಕಾರಣ ಇವರು ಶಾಸ್ತ್ರಶ್ರವಣಮಾಡಿದ್ದರೂ ಮಾಡದಿದ್ದ ಹಾಗೆಯೇ ಎನ್ನುತ್ತಾರೆ. ಆದಪ್ರಯುಕ್ತ ಅಜ್ಞಾನಿಗಳೇ ಸರಿ) ಸ್ವಲ್ಪ ತಿಳಿದವರೇ ಆದರೂ ಸ್ಮರಣೆಯಿರುವವರಾದರೆ. ಅವರಿಂದ ತಮತಮಗೆ ಅಭಿಮತವಾದ ಪ್ರಮೇಯವನ್ನು ಕೇಳಲಿಚ್ಛಿಸುತ್ತಾರೆ. ಅಥವಾ ಪ್ರಮೇಯವನ್ನು ತಿಳಿಯುವುದಕ್ಕಾಗಿ ಸೇವಕರು ಸೇವಿಸುತ್ತಾರೆ. (ಸಂಕಲ್ಪ ಮನಸ್ಸು ಮೊದಲಾದುದಕ್ಕೆ) ಚಿತ್ತಾಭಿಮಾನಿಗಳಾದ ಅಗ್ನಿ ಭೃಗು ಪ್ರಸೂತಿಗಳು ಮೂವರು ಮುಖ್ಯಾಶ್ರಯರು, ಚಿತ್ತದ ಅಧೀನಗಳಾದ ಸಂಕಲ್ಪಾದಿಗಳುಳ್ಳವರಾದುದರಿಂದ ಜೀವನರು

* ಹಿಂದಿನಂತೆ ಅರ್ಥ ಇಟ್ಟುಕೊಳ್ಳಬೇಕು

ಚಿತ್ತ ಎನಿಸುತ್ತಾರೆ. ಚಿತ್ತವು ಮುಕ್ತಿಯಲ್ಲಿಯೂ ಆಶ್ರಯವಾಗಿದೆ. ಚಿತ್ತಕ್ಕೆ ಅಭಿಮಾನಿಗಳಾದ ಅಗ್ನಿ ಮೊದಲಾದ ಮೂರು ದೇವತೆಗಳಲ್ಲಿ ಪರಬ್ರಹ್ಮನನ್ನು ಉಪಾಸನೆಮಾಡು. ॥ ೬ ॥

ಉ. ॥ ಸ ಯಶ್ಚಿತ್ತಂ ಬ್ರಹ್ಮೇತ್ಯುಪಾಸ್ತೇ ಚಿತ್ತಾನ್ವೈ ಸ ಲೋಕಾನ್ ಧ್ರುವಾನ್ ಧ್ರುವಃ ಪ್ರತಿಷ್ಠಿತಾನ್ಪ್ರತಿಷ್ಠಿತೋಽನ್ಯಥಮಾನಾನನ್ಯಥಮಾನೋಽಭಿಸಿದ್ಧ್ಯತಿ ಯಾವಚ್ಚಿತ್ತಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯಶ್ಚಿತ್ತಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವಶ್ಚಿತ್ತಾದ್ಧ್ಯಾಯ ಇತಿ ಚಿತ್ತಾದ್ಧ್ಯಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ಪಂಚಮಃ ಖಂಡಃ ॥ ॥ ೯—೫ ॥ ॥ ೩ ॥

ಅ ॥ ಯಾವನು ಅಗ್ನ್ಯಾದಿಗಳಲ್ಲಿ ಪರಬ್ರಹ್ಮನನ್ನು ಉಪಾಸನೆ ಮಾಡುತ್ತಾನೋ, ಆತನು ಚಿತ್ತಾಭಿಮಾನಿಗಳಿಗೆ ಕ್ಲೃಪ್ತಗಳಾದ.....ಅಗ್ನ್ಯಾದಿಗಳಿಂದ ಅಧಿಷ್ಠಿತಗಳಾದ ಲೋಕಗಳನ್ನು ತಾನೂ ಅಂತಹವನಾಗಿ ಹೊಂದುತ್ತಾನೆ.....ಅಗ್ನಿ ಭೃಗು ಪ್ರಸೂತಿಗಳಿಂದ ಶ್ರೇಷ್ಠನು ಇದ್ದಾನೋ ಏನು? ಎಂಬ ಪ್ರಶ್ನೆಗೆ ಸನತ್ಕುಮಾರರು ಇದ್ದಾನೆಂದು ಉತ್ತರಿಸಿದರು. ಆದನ್ನು ಹೇಳಬೇಕೆಂದು ಪ್ರಾರ್ಥಿಸಿದರು. ॥೯–೫ ॥ ೩ ॥

ಐದನೇ ಖಂಡವು ಮುಗಿಯಿತು.

೬ನೇ ಖಂಡವು

ಉ. ॥ ಧ್ಯಾನಂ ವಾವ ಚಿತ್ತಾದ್ಭೂಯೋ ಧ್ಯಾಯತೀವ ಪೃಥಿವೀ ಧ್ಯಾಯತೀವ ದ್ಯೌರ್ಧ್ಯಾಯತೀವಾಂತರಿಕ್ಷಂ ಧ್ಯಾಯಂತೀವಾಪೋ ಧ್ಯಾಯಂತೀವ ಪರ್ವತಾ ಧ್ಯಾಯಂತೀವ ದೇವಮನುಷ್ಯಾಸ್ತಸ್ಮಾದ್ಯ ಇಹ ಮನುಷ್ಯಾಣಾಂ ಮಹತ್ತಾಂ ಪ್ರಾಪ್ನುವಂತಿ ಧ್ಯಾನಾಪಾದಾಸ್ತೇಶಾ ಇವೈವ ತೇ ಭವಂತ್ಯಥ ಯೇಽಲ್ಪಾಃ ಕಲಹಿನಃ ಪಿಶುನಾ ಉಪವಾದಿನಸ್ತೇಽಥ ಯೇ ಪ್ರಭವೋ ಧ್ಯಾನಾಪಾದಾಸ್ತೇಶಾ ಇವೈವ ತೇ ಭವಂತಿ ಧ್ಯಾನಮುಪಾಸ್ವೇತಿ ॥ ॥ ೧ ॥

ಅ ॥ ಧ್ಯಾನಕ್ಕೆ ಅಭಿಮಾನಿಯಾದ, ಸತ್ಯ ಸುಳ್ಳುಗಳನ್ನು ವಿವೇಚನವನ್ನಾಡುವುದಕ್ಕಾಗಿ ಬ್ರಹ್ಮನು ಅಜ್ಞೆಕೊಟ್ಟಕಾರಣ ಧ್ಯಾನನೆನಿಸಿದ ವರುಣನು, ಚಿತ್ತ ಎನಿಸಿದ ಅಗ್ನಿ ಭೃಗು ಪ್ರಸೂತಿ ಎಂಬೀ ಮೂರು ದೇವತೆಗಳಿಗಿಂತಲೂ (ಈ ಮೂವರಿಂದ ಶ್ರೇಷ್ಠರಾದ ನಾರದರಿಗಿಂತಲೂ) ಶ್ರೇಷ್ಠನು. (ಧ್ಯಾನಾಭಿಮಾನಿಯಾದ ವರುಣನ ಮಹಿಮೆ ಹೇಳುತ್ತಾರೆ) ಪೃಥಿವೀ, ಸ್ವರ್ಗ, ಅಂತರಿಕ್ಷ, ಜಲ, ಪರ್ವತ, ಇವುಗಳಿಗೆ ಅಭಿಮಾನಿಗಳಾದ ದೇವತೆಗಳು ಅಥವಾ ಪೃಥಿವೀ ಮೊದಲಾದ ಎಲ್ಲಾ ಜೀವನರೂ. ಅಸ್ವತಂತ್ರರಾದರೂ ಭಗವದ್ಧ್ಯಾನದಲ್ಲಿ ಆಸಕ್ತರೇ ಆಗಿರುತ್ತಾರೆ. (ಬಹುಭಾಷಿಗಳಲ್ಲ.) ಮನುಷ್ಯರಾಗಿ ಹುಟ್ಟಿದ ದೇವತೆಗಳು ಧ್ಯಾನ ಮಾಡುತ್ತಿರುತ್ತಾರೆ. (ಬಹುಭಾಷಿಗಳಲ್ಲ.) ಧ್ಯಾನವು ಶ್ರೇಷ್ಠವಾಗಿರುವುದರಿಂದಲೇ ಈ ಲೋಕದಲ್ಲಿ ಯಾವ ಜನರು ಮನುಷ್ಯರ ಮಧ್ಯದಲ್ಲಿ ಜ್ಞಾನ, ಬಲ, ಐಶ್ವರ್ಯಾದಿಗಳಿಂದ ಮಹತ್ತ್ವವನ್ನು

ಹೊಂದುತ್ತಾರೋ, ಆ ಜನರು ಧ್ಯಾನದಿಂದ ಸಿಗತಕ್ಕ ಫಲವ ಏಕದೇಶವುಳ್ಳವರಂತೆಯೇ. (ಪೂರ್ಣ ಧ್ಯಾನವುಳ್ಳವರಂತೆ ಅಲ್ಲ. ಅದುಕಾರಣ ಧ್ಯಾನನೇ ಶ್ರೇಷ್ಠವು. ಈಗ ಜನರಲ್ಲಿ ಕಾಣತಕ್ಕ ಮಹತ್ತ್ವವು ಪೂರ್ವದಲ್ಲಿ ಮಾಡಿದ ಧ್ಯಾನದಿಂದುಂಟಾದ ಫಲದ ಏಕದೇಶವು. ಸಾಧನ ಮಾಡಿಸಲಿಕ್ಕೂ, ಫಲಕೊಡಲಿಕ್ಕೂ, ಶ್ರೀಹರಿಯೇ ಸ್ವತಂತ್ರನು.) ಮತ್ತು ಯಾವ ಕ್ಷುದ್ರರು ಜ್ಞಾನ ಬಲ ಐಶ್ವರ್ಯಾದಿಗಳಿಂದ ವಿರಹಿತರಾಗಿರುತ್ತಾರೋ, ಅವರು ಜಗಳದಲ್ಲಿಯೇ ಆಸಕ್ತರು. ಇನ್ನೊಬ್ಬರ ದೋಷಗಳನ್ನು ಪ್ರಕಟಿಸುವವರು. ಅಥವಾ ಪರರ ದ್ರವ್ಯ ಮೊದಲಾದ ವಿಷಯದಲ್ಲಿ ರಾಜಾದಿಗಳಲ್ಲಿ ಚಾಡಿ ಹೇಳುವವರಾಗುತ್ತಾರೆ. ಪರರ ದೋಷಗಳನ್ನು ಅನುವಾದ ಮಾಡುವವರೂ ಆಗುತ್ತಾರೆ. (ಧ್ಯಾನ ಲೇಶವನ್ನೂ ಮಾಡಲಾರರು.) ಯಾರು ಜ್ಞಾನ ಮೊದಲಾದ ಐಶ್ವರ್ಯವುಳ್ಳವರಾಗುತ್ತೇವೆಂದು ಇಚ್ಛಿಸುತ್ತಾರೋ, ಅವರು ಧ್ಯಾನವನ್ನು ಮಾಡಿಯವರಿಂದುಂಟಾಗತಕ್ಕ ಫಲದ ಏಕದೇಶವನ್ನು ಹೊಂದುತ್ತಾರೆ. (ಹೀಗೆ ಧ್ಯಾನದ ಮಹಾತ್ಮ್ಯೆ ಹೇಳಿ ಕರ್ತವ್ಯ ಹೇಳುತ್ತಾರೆ—) ಧ್ಯಾನಾಭಿಮಾನಿಯಾದ ವರುಣನಲ್ಲಿ ಪರಬ್ರಹ್ಮನಿದ್ದಾನೆಂದು ಉಪಾಸನೆಮಾಡು, ಎಂದರು. ॥ ೧ ॥

ಉ. ॥ ಸ ಯೋ ಧ್ಯಾನಂ ಬ್ರಹ್ಮೇತ್ಯುಪಾಸ್ತೇ ಯಾವದ್ಧ್ಯಾನಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋ ಧ್ಯಾನಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ಧ್ಯಾನಾದ್ಭೂಯ ಇತಿ ಧ್ಯಾನಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ಷಷ್ಠಃ ಖಂಡಃ ॥ ೯—೬ ॥ ॥ ೨ ॥

ಅ ॥ ಯಾವನು ವರುಣನಲ್ಲಿ ಬ್ರಹ್ಮನನ್ನು ಉಪಾಸನೆ ಮಾಡುತ್ತಾನೋ, ಆತನು ವರುಣನು ವ್ಯಾಪಿಸಿಕೊಂಡಿದ್ದ ಲೋಕಗಳನ್ನು ಹೊಂದುತ್ತಾನೆ. ಅಲ್ಲಿ ಎಲ್ಲಾ ಸ್ವೇಚ್ಛಾನುಸಾರ ಸಂಚರಿಸುತ್ತಿರುತ್ತಾನೆ. ವರುಣನಿಂದ ಶ್ರೇಷ್ಠನಿದ್ದಾನೋ, ಎಂಬ ನಾರದರ ಪ್ರಶ್ನೆಗೆ ಇದ್ದಾನೆ, ಎಂದು ಸನತ್ಕುಮಾರರು ಉತ್ತರಿಸಿದರು..... ॥ ೯—೬ ॥ ॥ ೨ ॥

ಆರನೇ ಖಂಡವು ಮುಗಿಯಿತು.

೭ನೇ ಖಂಡವು

ಉ. ॥ ವಿಜ್ಞಾನಂ ವಾವ ಧ್ಯಾನಾದ್ಭೂಯೋ ವಿಜ್ಞಾನೇನ ವಾ ಋಗ್ವೇದಂ ವಿಜಾನಾತಿ ಯಜುರ್ವೇದಂ ಸಾಮವೇದಮಾಥರ್ವಣಂ ಚತುರ್ಥಮಿತಿಹಾಸಪುರಾಣಂ ಪಂಚಮಂ ವೇದಾನಾಂ ವೇದಂ ಪಿತ್ರ್ಯಂ ರಾಶಿಂ ದೈವಂ ನಿಧಿಂ ವಾಕೋವಾಕ್ಯಮೇಕಾಯನಂ ದೇವವಿದ್ಯಾಂ ಬ್ರಹ್ಮವಿದ್ಯಾಂ ಭೂತವಿದ್ಯಾಂ ಕ್ಷತ್ರವಿದ್ಯಾಂ ನಕ್ಷತ್ರವಿದ್ಯಂ ಸರ್ಪದೇವಜನವಿದ್ಯಾಂ ದಿವಂ ಚ ಪೃಥಿವೀಂ ಚ ವಾಯುಂ ಚಾಕಾಶಂ ಚಾಪಶ್ಚ ತೇಜಶ್ಚ ದೇವಾಂಶ್ಚ ಮನುಷ್ಯಾಂಶ್ಚ ಪಶೂಂಶ್ಚ ವಯಾಂಸಿ ಚ ತೃಣವನಸ್ಪತೀಂಶ್ವಾಪದಾನ್ಯಾ-ಕೀಟಪತಂಗಪಿಪೀಲಿಕಂ ಧರ್ಮಂ ಚಾಧರ್ಮಂ ಚ ಸತ್ಯಂ ಚಾನೃತಂ ಚ

ಸಾಧು ಚಾಸಾಧು ಚ ಹೃದಯೆಜ್ಞಂ ಚಾಹೃದಯಜ್ಞಂ ಚಾನ್ನಂ ಚ ರಸಂ ಚೇಮಂ ಚ ಲೋಕಮಮುಂ ಚ ವಿಜ್ಞಾನೇನೈವ ವಿಜಾನಾತಿ ವಿಜ್ಞಾನಮುಪಾಸ್ವೇತಿ ॥ ॥ ೧ ॥

ಆ ॥ ಧ್ಯಾನಕ್ಕೆ ಅಭಿವಾನಿಯಾದ ವರುಣನಿಗಿಂತ, ವಿಜ್ಞಾನಕ್ಕೆ (ಶಾಸ್ತ್ರಾರ್ಥವಿಷಯಕ ಜ್ಞಾನಕ್ಕೆ) ಅಭಿಮಾನಿಯಾದ ಸತ್ಯನುಡಿಯನ್ನು ಶೋಧಿಸುವ ಕಾರಣ ವಿಜ್ಞಾನನೆನಿಸಿದ ಚಂದ್ರನು, (ಚಂದ್ರನಿಗೆ ಸಮಾನಿಕರಾದ ಸೂರ್ಯ, ಯಮ, ಇವರು ಸ್ವಾಯಂಭುವಮನುವಿನ ಹೆಂಡತಿಯಾದ ಶತರೂಪಾ ಇವರು) ಶ್ರೇಷ್ಠರು (ವರುಣನ ಮಹಿಮೆ ಹೇಳುತ್ತಾರೆ—) ವಿಜ್ಞಾನಾಭಿಮಾನಿಯಾದ ದೇವತೆಯ ಅನುಗ್ರಹದಿಂದಲೇ ಋಗ್ವೇದಾದಿಗಳನ್ನು ತಿಳಿಯುತ್ತಾನೆ. *.....ಶ್ರೀಹರಿಯ ಜ್ಞಾನವುಳ್ಳವನನ್ನೂ, ಶ್ರೀಹರಿಯಿಂದ ಇತರ ವಸ್ತುಗಳ ತಿಳುವಳಿಕೆವುಳ್ಳವನನ್ನೂ, ...ವಿಜ್ಞಾನ ಎನಿಸಿಕೊಂಡ ಚಂದ್ರ, ಸೂರ್ಯ, ಯಮ, ಶತರೂಪಾ ಈ ನಾಲ್ವರಲ್ಲಿ ಪರಬ್ರಹ್ಮನನ್ನು ಪಾಸನೆ ಮಾಡು. ॥ ೧ ॥

ಉ. ॥ ಸ ಯೋ ವಿಜ್ಞಾನಂ ಬ್ರಹ್ಮೇತ್ಯುಪಾಸ್ತೇ ವಿಜ್ಞಾನವತೋ ವೈ ಸ ಲೋಕಾನ್ ಜ್ಞಾನವತೋಽಭಿಸಿದ್ಧ್ಯತಿ ಯಾವದ್ವಿಜ್ಞಾನಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋ ವಿಜ್ಞಾನಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ವಿಜ್ಞಾನಾದ್ಭೂಯ ಇತಿ ವಿಜ್ಞಾನಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ಸಪ್ತಮಃ ಖಂಡಃ ॥ ೯—೭ ॥ ॥ ೨ ॥

ಆ ॥ .....ಹೀಗೆ ತಿಳಿದು ಉಪಾಸನೆ ಮಾಡುವವನು ಚಂದ್ರಾದಿಗಳು ನಿಯಾಮಕರಾಗಿರುವ ಸಾಮಾನ್ಯಜ್ಞಾನ ವಿಶೇಷಜ್ಞಾನವುಳ್ಳ ಲೋಕಗಳನ್ನು ಹೊಂದುತ್ತಾನೆ.....ವಿಜ್ಞಾನ ಎನಿಸಿದ ಚಂದ್ರ ಸೂರ್ಯ ಯಮ ಶತರೂಪಾ ಎಂಬೀ ನಾಲ್ಕು ದೇವತೆಗಳಿಗಿಂತ ಶ್ರೇಷ್ಠನಿದ್ದಾನೋ ಏನು? ಎಂಬ ಪ್ರಶ್ನೆಗೆ ಇದ್ದಾನೆಂದು ಉತ್ತರಿಸಿದರು..... ॥ ೯—೭ ॥ ॥ ೨ ॥

ಏಳನೇ ಖಂಡವು ಮುಗಿಯಿತು.

ಎಂಟನೇ ಖಂಡವು

ಉ. ॥ ಬಲಂ ವಾವ ವಿಜ್ಞಾನಾದ್ಭೂಯೋಽಪೀಹ ಶತಂ ವಿಜ್ಞಾನವತಾಮೇಕೋ ಬಲವಾನಾಕಂಪಯತೇ ಸ ಯದಾ ಬಲೀ ಭವತ್ಯಥೋತ್ಥಾತಾ ಭವತ್ಯುತ್ತಿಷ್ಠನ್ನು ಪರಿಚರಿತಾ ಭವತಿ ಪರಿಚರನ್ನುಪಸತ್ತಾ ಭವತ್ಯುಪಸೀದನ್ ದ್ರಷ್ಟಾ ಭವತಿ ಶ್ರೋತಾ ಭವತಿ ಮಂತಾ ಭವತಿ ಬೋದ್ಧಾ ಭವತಿ ಕರ್ತಾ ಭವತಿ ವಿಜ್ಞಾತಾ ಭವತಿ ಬಲೇನ ವೈ ಪೃಥಿವೀ ತಿಷ್ಠತಿ ಬಲೇನಾಂತರಿಕ್ಷಂ ಬ-

* ಹಿಂದಿನಂತೆ ಅರ್ಥ

ಲೇನ ದ್ಯಾರ್ಬಲೇನಾಪೋ ಬಲೇನ ಪರ್ವತಾ ಬಲೇನ ದೇವಮನುಷ್ಯಾ ಬಲೇನ ಪಶವಶ್ಚ ವಯಾಂಸಿ ಚ ತೃಣವನಸ್ಪತಯಃ ಶ್ವಾಪದಾನ್ಯಾಕೀಟಪತಂಗಪಿಪೀಲಿಕಂ ಬಲೇನ ವೈ ಲೋಕಸ್ತಿಷ್ಠತಿ ಬಲಮುಪಾಸ್ಸೇತಿ ॥ ॥ ೧ ॥

ಅ ॥ (1) ಯುಕ್ತಿಗಳಿಂದ ನಿರ್ಣಯವು ಆಂತರ ಬಲವು. (2) ದೇಹದಾಢ್ಯಾರ್ಯಾದಿ ರೂಪವಾದುದು ಬಾಹ್ಯಬಲವು, ಹೀಗೆ ಬಲವು ಎರಡು ವಿಧವು. ಆ ಎರಡು ಬಲಗಳಿಗೂ ಅಭಿಮಾನಿಯಾದ ಬಲ ಎನಿಸಿದ ಭೂತವಾಯುವಿಗೆ ಅಭಿಮಾನಿಯಾದ ಪ್ರವಹವಾಯುವು ವಿಜ್ಞಾನ ಎನಿಸಿದ ಚಂದ್ರ, ಸೂರ್ಯ, ಯಮ, ಶತರೂಪಾ ಈ ನಾಲ್ವರಿಗಿಂತ ಉತ್ತಮನು (ಅದನ್ನು ವಿವರಿಸುತ್ತಾರೆ—) ಈ ಲೋಕದಲ್ಲಿ ವಿಜ್ಞಾನವುಳ್ಳ ನೂರು ಮಂದಿಯನ್ನು ಯುಕ್ತಿಗಳಿಂದುಂಟಾದ ನಿರ್ಣಯರೂಪವಾದ ಆಂತರ ಬಲವುಳ್ಳವನೊಬ್ಬನೇ (ಮದೋನ್ಮತ್ತವಾದ ಆನೆಯು ನೂರು ಮಂದಿ ಮನುಷ್ಯರ ಗುಂಪನ್ನು ನಡುಗಿಸುವಂತೆಯೇ) ನಡುಗಿಸುತ್ತಾನೆ (ಬಲವು ಸರ್ವವ್ಯಾಪಾರಕ್ಕೂ ಕಾರಣವಾಗಿದೆ, ಎನ್ನುತ್ತಾರೆ—) ಆತನೂ ಯುಕ್ತಿಗಳನ್ನು ತಿಳಿದುಕೊಳ್ಳುವಿಕೆ ಎಂಬ ಆಂತರ ಬಲವುಳ್ಳವನಾದರೆ ಆಗ ಸಂಸಾರದಿಂದ ಬಿಡುಗಡೆ ಹೊಂದುತ್ತಾನೆ. ದೇಹದಾಢ್ಯಾರ್ಯಾದಿರೂಪವಾದ ಬಾಹ್ಯಬಲವುಳ್ಳವನಾದರೆ ಕರ್ಮಾದಿಗಳನ್ನು ಮಾಡಲಿಕ್ಕೆ (ಸನ್ನದ್ಧನಾಗುತ್ತಾನೆ.) ಎದ್ದವನೇ ಗುರು ಮೊದಲಾದವರನ್ನು ಸೇವಿಸುತ್ತಾನೆ ಸೇವಿಸುವವನು ಆವರ ಸವಿಾಪದಲ್ಲಿದ್ದು ಅತ್ಯಂತ ಪ್ರಯತ್ನಾಗುತ್ತಾನೆ. ಸವಿಾಪಕ್ಕೆ ಹೋದವನು ಏಕಾಗ್ರಚಿತ್ತನಾಗಿ ಗುರುಗಳನ್ನು ನೋಡುತ್ತಾನೆ. ಆ ಮೇಲೆ ಗುರು ಮೊದಲಾದವರಿಂದ ತತ್ತ್ವವನ್ನು ಕೇಳುತ್ತಾನೆ. ಮನನ ಮಾಡುತ್ತಾನೆ. (ಗುರುಗಳು ಹೇಳಿದ್ದು ಹೀಗೆ ಯುಕ್ತವಾಗುತ್ತದೆ, ಎಂದು ಯುಕ್ತಿಗಳಿಂದ ತಿಳಿಯುತ್ತಾನೆ.) ಇದು ಹೀಗೆಯೇ ಎಂದು ತಿಳಿಯುತ್ತಾನೆ ಗುರುಗಳು ಹೇಳಿದಂತೆಯೇ ಬ್ರಾಹ್ಮಣಾದಿವರ್ಣ, ಬ್ರಹ್ಮಚರ್ಯಾದ್ಯಾಶ್ರಮ ಇವುಗಳಿಗೆ ಯೋಗ್ಯವಾದ ಧರ್ಮಾದಿಗಳನ್ನು ಮಾಡುತ್ತಾನೆ. ಆದರಿಂದ ವಿಶೇಷವಾಗಿ ತಿಳಿಯುವವನಾಗುತ್ತಾನೆ. ಆದರಿಂದ ಸಿಗತಕ್ಕ ಫಲವನ್ನು ಅನುಭವಿಸುತ್ತಾನೆ. (ಬಲಾಭಿಮಾನಿಯಾದ ಪ್ರವಹನ ಇನ್ನೊಂದು ಮಹಿಮೆ ಹೇಳುತ್ತಾರೆ—) ಬಲ ಎನಿಸಿದ ಭೂತವಾಯುವಿಗೆ ಅಭಿಮಾನಿಯಾದ ಪ್ರವಹವಾಯುವಿನಿಂದ ಪೃಥಿವೀ ಮೊದಲಾದ ಲೋಕಗಳೂ ಲೋಕಾಭಿಮಾನಿಗಳೂ ಇರುತ್ತಾರೆ. ಮನುಷ್ಯರಾಗಿ ಹುಟ್ಟಿದ ದೇವತೆಗಳೂ, ಪಶುಗಳೂ, ಹಕ್ಕಿಗಳೂ, ಹುಲ್ಲು, ದೊಡ್ಡ ಮರಗಳೂ, ದುಷ್ಟಮೃಗ, ಕೀಟ, ಹಾತೆ, ಇರುವೆ ಪರ್ಯಂತ ಎಲ್ಲಾ ಪ್ರಾಣಿಗಳೂ ಪ್ರವಹನ ಅನುಗ್ರಹದಿಂದಲೇ ಇರುತ್ತವೆ. ಬಲಾಭಿಮಾನಿಯಾದ ಪ್ರವಹವಾಯುವಿನಲ್ಲಿ ಪರಬ್ರಹ್ಮನನ್ನು ಉಪಾಸನೆಮಾಡು. ॥ ೧ ॥

ಉ. ॥ ಸ ಯೋ ಬಲಂ ಬ್ರಹ್ಮೇತ್ಯುಪಾಸ್ತೇ ಯಾವದ್ಬಲಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋ ಬಲಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋ ಬಲಾದ್ಭೂಯ ಇತಿ ಬಲಾದ್ಧ್ಯೇವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ಅಷ್ಟಮಃ ಖಂಡಃ ॥ ೯—೮ ॥ ॥ ೨ ॥

ಅ ॥ ಪ್ರವಹವಾಯುವಿನಲ್ಲಿ ಬ್ರಹ್ಮನನ್ನು ಉಪಾಸನೆ ಮಾಡಿದವನು.....ಪ್ರವಹನ ಲೋಕಗಳನ್ನು ಹೊಂದುತ್ತಾನೆ.....ಪ್ರವಹ ವಾಯುವಿಗಿಂತ ಉತ್ತಮನು ಇದ್ದಾನೋ, ಎಂಬ ಪ್ರಶ್ನೆಗೆ ಇದ್ದಾನೆಂದು ಉತ್ತರಿಸಿದರೆ..... ॥ ೯—೮ ॥ ॥ ೨ ॥

ಎಂಟನೇ ಖಂಡವು ಮುಗಿಯಿತು.

೯ನೇ ಖಂಡವು

ಉ. ॥ ಅನ್ನಂ ವಾವ ಬಲಾದ್ಭೂಯಸ್ತಸ್ಮಾದ್ಯದ್ಯಪಿ ದಶರಾತ್ರೀರ್ನಾ-
ಶ್ನೀಯಾದ್ಯದು ಹ ಜೀವೇದಥವಾಽದ್ರಷ್ಟಾಽಶ್ರೋತಾಽಮಂತಾಽಬೋದ್ಧಾಽಕ-
ರ್ತಾಽವಿಜ್ಞಾತಾ ಭವತ್ಯಥಾನ್ನಸ್ಯಾಽಽ ದ್ರಷ್ಟಾ ಭವತಿ ಶ್ರೋತಾ ಭವತಿ ಮಂ-
ತಾ ಭವತಿ ಬೋದ್ಧಾ ಭವತಿ ಕರ್ತಾ ಭವತಿ ವಿಜ್ಞಾತಾ ಭವತ್ಯನ್ನಮುಪಾ-
ಸ್ವೇತಿ ॥ ॥ ೧ ॥

ಆ ॥ ಜ್ಞಾನದಿಂದ ಹುಟ್ಟತಕ್ಕ ಆನಂದರೂಪವಾದ ಆಂತರವಾದ ಅನ್ನ, ಬಾಹ್ಯವಾದ ಪ್ರಸಿದ್ಧ ಅನ್ನ, ಹೀಗೆ ಎರಡು ವಿಧಗಳಾದ ಅನ್ನಗಳಿಗೆ ಅಭಿಮಾನಿಯಾದ ಅನ್ನ ಎನಿಸಿದ ಅನಿರುದ್ಧನೂ (ಅನಿರುದ್ಧನಿಗೆ ಸಮಾನಿಕರಾದ ಸ್ವಾಯಂಭುವಮನು, ಬೃಹಸ್ಪತಿ, ದಕ್ಷ, ಶಚೀ, ರತಿ, ಈ ಆರುಮಂದಿಯೂ) ಎರಡು ವಿಧ ಬಲಗಳಿಗೆ ಅಭಿಮಾನಿಯಾದ ಪ್ರವಹವಾಯುವಿಗಿಂತ ಶ್ರೇಷ್ಠರು. (ಅದರಲ್ಲಿ ಯುಕ್ತಿಗಳನ್ನು ತಿಳಿದು ಕೊಳ್ಳುವಿಕೆ, ಎಂಬ ಆಂತರಬಲಾಭಿಮಾನಿರೂಪಕ್ಕಿಂತ ಆಂತರ ಅನ್ನಾಭಿಮಾನಿ ಅನಿರುದ್ಧರೂಪವು ಶ್ರೇಷ್ಠವು. ದೇಹದಾಢ್ಯಾದಿರೂಪವಾದ ಬಾಹ್ಯಬಲಾಭಿಮಾನಿ ರೂಪಕ್ಕಿಂತ ಬಾಹ್ಯ ಅನ್ನಾಭಿಮಾನಿ ರೂಪವು ಶ್ರೇಷ್ಠವು.) (ಅನ್ನದ ಮಹಿಮೆ ಹೇಳುತ್ತಾರೆ.) ಅನ್ನಾಭಿಮಾನಿಯು ಶ್ರೇಷ್ಠನಾದ ಕಾರಣ ಹತ್ತು ದಿನ ಉಣ್ಣದೆ ಇದ್ದರೆ ಬದುಕುವುದೇ ಕಷ್ಟ. ಬದುಕಿದರೂ ನೋಡಲಾರನು, ಕೇಳಲಾರನು, ಮನನಮಾಡಲಾರನು, ತಿಳಿಯಲಾರನು ಯಾವುದನ್ನೂ ಮಾಡಲಾರನು. ಅನುಷ್ಠಾನದ ಫಲವನ್ನು ಅನುಭವಿಸಲಾರನು. (ಅಂದರೆ ಅನ್ನವನ್ನುಣ್ಣದಿದ್ದರೆ ಶಾಸ್ತ್ರಶ್ರವಣಾದಿಗಳು ಯಾವುದೂ ಆಗಲಾರವು.) ಅನ್ನವನ್ನುಂಡರೆ ದರ್ಶನಾದಿಗಳು (ನೋಡುವಿಕೆ ಕೇಳುವುದು) ಇತ್ಯಾದಿಗಳು ಆಗುತ್ತವೆ. (ಅನ್ನವನ್ನು ಪಯೋಗಿಸಿಕೊಂಡರೆ ದರ್ಶನಾದಿಗಳಲ್ಲಿ ಸಾಮರ್ಥ್ಯವುಂಟಾಗುತ್ತದೆ) ಅದುಕಾರಣ ಅನ್ನಾಭಿಮಾನಿ ಅನಿರುದ್ಧನಲ್ಲಿಯೂ ಅವನಿಗೆ ಸಮಾನಿಕರಾದ ಸ್ವಾಯಂಭುವ ಮೊದಲಾದ ಐವರಲ್ಲಿಯೂ ಪರಬ್ರಹ್ಮನನ್ನು ಉಪಾಸನೆಮಾಡು. ॥ ೧ ॥

ಉ. ॥ ಸ ಯೋಽನ್ನಂ ಬ್ರಹ್ಮೇತ್ಯುಪಾಸ್ತೇಽನ್ನವತೋ ವೈ ಸ ಲೋಕಾನ್
ಪಾನವತೋಽಭಿಸಿಧ್ಯತಿ ಯಾವದನ್ನಸ್ಯ ಗತಂ ತತ್ರಾಸ್ಯ ಯಥಾ ಕಾಮಚಾ-
ರೋ ಭವತಿ ಯೋಽನ್ನಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋಽನ್ನಾದ್ಭೂಯ
ಇತ್ಯನ್ನಾದ್ಯಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ
ನವಮಃ ಖಂಡಃ ॥ ೯—೯ ॥ ॥ ೨ ॥

ಆ ॥ ....ಹೀಗೆ ಉಪಾಸನೆಮಾಡಿದವನು ಅನ್ನಾಭಿಮಾನಿಗಳು ನಿಯಾಮಕರಾಗಿರುವ ಲೋಕಗಳನ್ನೂ ಅಥವಾ ಇಚ್ಛಾನುಸಾರ ಅನ್ನಪಾನಮೊದಲಾದ ಸರ್ವಭೋಗಗಳುಳ್ಳ ಲೋಕಗಳನ್ನು ಹೊಂದಿ ತಿರುಗಾಡುತ್ತಿರುತ್ತಾರೆ. .....ಅನ್ನಾಭಿಮಾನಿಗಳಾದ ಅನಿರುದ್ಧಮೊದಲಾದ ಆರು ದೇವತೆಗಳಿಗಿಂತ ಶ್ರೇಷ್ಠನು ಇದ್ದಾನೋ, ಎಂಬ ಪ್ರಶ್ನೆಗೆ ಇದ್ದಾನೆಂದು ಉತ್ತರಿಸಿದರು.....॥ ೯—೯ ॥ ॥ ೨ ॥

ಒಂಭತ್ತನೇ ಖಂಡವು ಮುಗಿಯಿತು.

೧೦ನೇ ಖಂಡವು

ಊ. ॥ ಆಪೋ ವಾವಾನ್ನಾದ್ಭೂಯಸ್ಯಸ್ತಸ್ಮಾದ್ಯದಾ ಸುವೃಷ್ಟಿರ್ನ ಭವತಿ ವ್ಯಾಧೀಯಂ ತೇ ಪ್ರಾಣಾ ಅನ್ನಂ ಕನೀಯೋ ಭವಿಷ್ಯತೀತ್ಯಥ ಯದಾ ಸುವೃಷ್ಟಿರ್ಭವತ್ಯಾನಂದಿನಃ ಪ್ರಾಣಾ ಭವಂತ್ಯನ್ನಂ ಬಹು ಭವಿಷ್ಯತೀತ್ಯಾಪ ಏವೇಮಾ ಮೂರ್ತಾ ಯೇಽಯಂ ಪೃಥಿವೀ ಯದಂತರಿಕ್ಷಂ ಯದ್ದ್ಯೌರ್ಯತ್ಪರ್ವತಾ ಯದ್ದೇವಮನುಷ್ಯಾ ಯತ್ಪಶವಶ್ಚ ವಯಾಂಸಿ ಚ ತೃಣವನಸ್ಪತಯಃ ಶ್ವಾಪದಾನ್ಯಾಕೀಟಪತಂಗಪಿಪೀಲಿಕಮಾಪ ಏವೇಮಾ ಮೂರ್ತಾ ಆಪ ಉಪಾಸ್ಸ್ವೇತಿ ॥ ॥ ೧ ॥

ಅ ॥ ಜ್ಞಾನದಿಂದ ಹುಟ್ಟುವ ಆನಂದದಿಂದ ವಿಷಯಗಳಲ್ಲಿ ಅಲಂಬುದ್ಧಿಯು ಹುಟ್ಟುತ್ತದೆ, ಅಂತಹ ತೃಪ್ತಿರೂಪವಾದ ಅಂತರಜಲ, ದ್ರವರೂಪವಾದ ಬಾಹ್ಯವಾದಜಲ, ಹೀಗೆ ಎರಡು ವಿಧ ಜಲ. ಈ ಎರಡಕ್ಕೆ ಅಭಿಮಾನಿಯಾದ ದೇಹವನ್ನೂ ವ್ಯಾಪಿಸಿಕೊಂಡಿರುವುದರಿಂದ ಆಪ್ ಎನಿಸಿಕೊಂಡ ತೈಜಸ ಅಥವಾ ಆಹಂಕಾರಿಕ ಪ್ರಾಣನು ಅನ್ನ ಎನಿಸಿದ ಅನಿರುದ್ಧ ಮೊದಲಾದ ಆರು ಮಂದಿ ದೇವತೆಗಳಿಂದ ಶ್ರೇಷ್ಠನು. (ಇಲ್ಲಿಯೂ ಜ್ಞಾನದಿಂದ ಹುಟ್ಟತಕ್ಕ ಸಂತೋಷರೂಪವಾದ ಅಂತರ ಅನ್ನಕ್ಕಿಂತ ಅಂತರಗಳಾದ ವಿಷಯಾಲಂಬುದ್ಧಿ ಎಂಬ ತೃಪ್ತಿರೂಪವಾದ ಜಲವೆ ಶ್ರೇಷ್ಠವೆ. ಬಾಹ್ಯವಾದ ಅನ್ನಕ್ಕಿಂತ ಬಾಹ್ಯಗಳಾದ ದ್ರವರೂಪಗಳಾದ ಜಲಗಳು ಶ್ರೇಷ್ಠಗಳು, ಎಂದು ಇಟ್ಟುಕೊಳ್ಳಬೇಕು.) (ಜಲಾಭಿಮಾನಿಯಾದ ಪ್ರಾಣನಾಯುವಿನ ಮಹಿಮೆ ಹೇಳುತ್ತಾರೆ.) ನೀರು ಅನ್ನಕ್ಕೆ ಕಾರಣವಾಗಿರುವುದರಿಂದಲೇ ಅಥವಾ ನೀರು ಅನ್ನಕ್ಕಿಂತಲೂ ಶ್ರೇಷ್ಠವಾಗಿರುವುದರಿಂದಲೇ ಯಾವಾಗ ಸುವೃಷ್ಟಿಯು (ಸಸ್ಯಗಳಿಗೆ ಹಿತಕರವಾದ ಒಳ್ಳೆ ಮಳೆಯು) ಆಗುವುದಿಲ್ಲವೋ, ಆಗ ಪ್ರಾಣಿಗಳು ಈ ಸಂವತ್ಸರದಲ್ಲಿ ನಮಗೆ ಅತಿಸ್ವಲ್ಪ ಅನ್ನವು ಆಗುವುದೆಂದು ದುಃಖಪಡುತ್ತಾರೆ. (ಜೆನ್ನಾಗಿ ಮನಸ್ಸಿನಲ್ಲಿ ವ್ಯಥೆಯುಳ್ಳವರಾಗುತ್ತಾರೆ) ಸುವೃಷ್ಟಿಯಾದರೆ ಅನ್ನಸಮೃದ್ಧಿಯಾಗುತ್ತದೆಂದು ಸಂತೋಷವುಳ್ಳವರಾಗುತ್ತಾರೆ. ಮೂರ್ತಪದಾರ್ಥಗಳೆಲ್ಲವೂ ಜಲಾಭಿಮಾನಿಯಾದ ಆಹಂಕಾರಿಕ ಪ್ರಾಣನ ಅಧೀನದಲ್ಲಿದ್ದ ಪ್ರಯುಕ್ತ ಆಪಃ ಎನಿಸುತ್ತವೆ. (ಯಾವುವು ಎಂದರೆ) ಈ ಪೃಥಿವೀ, ಅಂತರಿಕ್ಷ, ಸ್ವರ್ಗ, ಪರ್ವತ, ಮೊದಲಾದ ಎಲ್ಲಾ ಮೂರ್ತ ವಸ್ತುಗಳೂ (ಅಂದರೆ ಪೃಥಿವೀ ಆರಭ್ಯ ಇರುವೆ ಪರ್ಯಂತ ಎಲ್ಲವೂ ಆಪ್(ಜಲ)ದಿಂದಲೇ ಹುಟ್ಟಿರುವುದರಿಂದಲೂ ಅಧೀನದಲ್ಲಿರುವುದರಿಂದಲೂ ಆಪಃ ಎನಿಸುತ್ತವೆ. ಆಪ್ ಎನಿಸಿದ ತೈಜಸಪ್ರಾಣನಲ್ಲಿ ಬ್ರಹ್ಮನನ್ನು ಉಪಾಸನೆಮಾಡು.

॥ ೧ ॥

ಊ. ॥ ಸ ಯೋಽಪೋ ಬ್ರಹ್ಮೇತ್ಯುಪಾಸ್ತ ಆಪ್ನೋತಿ ಸರ್ವಾನ್ಕಾಮಾನ್ತೃಪ್ತಿಮಾನ್ಪ್ರವತಿ ಯಾವದಪಾಂ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋಽಪೋ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವೋಽದ್ಧ್ಯೋ ಭೂಯ ಇತ್ಯಸ್ತ್ಯೇವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ದಶಮಃ ಖಂಡಃ ॥ ೯—೧೦ ॥ ॥ ೨ ॥

ಅ ॥ ....ಹೀಗೆ ಉಪ ಸನೆಮಾಡಿದವನು ಇಚ್ಛಿಸಲ್ಪಡುವ ಎಲ್ಲಾ ವಿಷಯಗಳನ್ನೂ ಹೊಂದುತ್ತಾನೆ. ತೃಪ್ತಿಯುಳ್ಳವನೂ ಆಗುತ್ತಾನೆ. ಆಹಂಕಾರಿಕಪ್ರಾಣನು ನಿಯಾಮಕನಾಗಿರುವ ಲೋಕಗಳಲ್ಲಿ ಸಂಚರಿ

ಸುತ್ತಿರುತ್ತಾನೆ.....ಅಹಂಕಾರಿಕ ಪ್ರಾಣನಿಂದ ಶ್ರೇಷ್ಠನಿದ್ದಾನೋ, ಎಂಬ ಪ್ರಶ್ನೆಗೆ ಇದ್ದಾನೆಂದು ಉತ್ತರ ಕೊಟ್ಟರು.....॥ ೯—೧೦ ॥ ॥ ೨ ॥

ಹತ್ತನೇ ಖಂಡವು ಮುಗಿಯಿತು.

೧೧ನೇ ಖಂಡವು

ಉ. ॥ ತೇಜೋ ವಾವಾಬ್ಭ್ಯೋ ಭೂಯಸ್ತದ್ವಾ ಏತದ್ವಾಯುಮಾಗೃಹ್ಯಾಕಾಶಮಭಿತಪತಿ ತದಾಹುರ್ನಿಶೋಚತಿ ನಿತಪತಿ ವರ್ಷಿಷ್ಯತಿ ವಾ ಇತಿ ತೇಜ ಏವ ತತ್ಪೂರ್ವಂ ದರ್ಶಯಿತ್ವಾಥಾಽಽಪಃ ಸೃಜತೇ ತದೇತದೂರ್ಧ್ವಾಭಿಶ್ಚ ತಿರಶ್ಚೀಭಿಶ್ಚ ವಿದ್ಯುದ್ಭಿರಾಹ್ರಾದಾಶ್ಚರತಿ ತಸ್ಮಾದಾಹುರ್ವಿದ್ಯೋತತೇ ಸ್ತನಯತಿ ವರ್ಷಿಷ್ಯತಿ ವಾ ಇತಿ ತೇಜ ಏವ ತತ್ಪೂರ್ವಂ ದರ್ಶಯಿತ್ವಾಥಾಽಽಪಃ ಸೃಜತೇ ತೇಜ ಉಪಾಸ್ವೇತಿ ॥ ೧ ॥

ಆ ॥ ಪ್ರಾತಿಭ ಎಂಬ ಆಂತರ ತೇಜಸ್ಸು, ಬಾಹ್ಯತೇಜಸ್ಸು, ಹೀಗೆ ತೇಜಸ್ಸು ಎರಡು ವಿಧವು. ಅದಕ್ಕೆ ಅಭಿಮಾನಿಯಾದ ಇತರರನ್ನು ತಿರಸ್ಕರಿಸುವ ಶಕ್ತಿಸ್ವರೂಪನಾದುದರಿಂದ **ತೇಜಃ** ಎನಿಸಿಕೊಂಡ ಪುರಂದರನೆಂಬ ಇಂದ್ರನೂ (ಅವನಿಗೆ ಸಮನಾದ ಕಾಮನೂ ಕೂಡ) ಜಲಾಭಿಮಾನಿಯಾದ ಅಹಂಕಾರಿಕ ಪ್ರಾಣನಿಗಿಂತ ಶ್ರೇಷ್ಠನು (ಅಲ್ಲಿ ಆಂತರವಾದ ತೃಪ್ತಿರೂಪವಾದ ಅಪ್ (ನೀರು) ಗಿಂತ ಜ್ಞಾನ ಆನಂದಗಳಿಂದುಂಟಾಗತಕ್ಕ ತೃಪ್ತಿರೂಪವಾದ ವಿಷಯಾಲಂಬುದ್ಧಿರೂಪವಾದ ಆಂತರವಾದ ಪ್ರಾತಿಭ ಎಂಬ ತೇಜಸ್ಸು ಶ್ರೇಷ್ಠವು. ಬಾಹ್ಯಪ್ರವರೂಪವಾದ ಜಲಕ್ಕಿಂತ ಬಾಹ್ಯಜಡರೂಪವಾದ ತೇಜಸ್ಸು ಶ್ರೇಷ್ಠವು. ನೀರಿಗೆ ತೇಜಸ್ಸು ಕಾರಣವು.) (ತೇಜಃ ಎನಿಸಿದ ಪುರಂದರನ ಮಹಿಮೆ ಹೇಳುತ್ತಾರೆ.) ಅದುಕಾರಣ ತೇಜಃ ಎನಿಸಿದ ಪುರಂದರನು ವಾಯುವನ್ನು ಜಲಿಸದಂತೆ ಮಾಡಿ ಆಕಾಶದಲ್ಲಿ ವ್ಯಾಪಿಸಿಕೊಂಡು ತಾಪವನ್ನು ಹುಟ್ಟಿಸುತ್ತಾನೆ. ಆಗ ಲೌಕಿಕ ಜನರು (ಆದಿತ್ಯನು) ಅತ್ಯಂತವಾಗಿ ಪ್ರಾಣಿಗಳನ್ನು ದುಃಖಪಡಿಸುತ್ತಾನೆ. ಚೆನ್ನಾಗಿ ಸುಡುತ್ತಾನೆ. ಅಥವಾ ಬಾಹ್ಯತಾಪ ಆಂತರತಾಪಗಳನ್ನೂ ಹುಟ್ಟಿಸುತ್ತಾನೆ ಆದಕಾರಣ ಮಳೆಸುರಿಸುವನು. ಅದುಕಾರಣ ಜಲಸೃಷ್ಟಿಗಿಂತ ಮೊದಲು ತೇಜಸ್ಸನ್ನೇತೋರಿಸಿ ಜಲವನ್ನೂ ಸೃಷ್ಟಿಸುತ್ತಾನೆ. ಅಥವಾ ಪುರಂದರನೇ ವಾಯುಸ್ತಂಭಾದಿಗಳನ್ನು ಮೊದಲು ತೋರಿಸಿ (ಅಂದರೆ ಗಾಳಿಬಾರದಂತೆ ಮಾಡಿ)ನೀರನ್ನು ಸೃಷ್ಟಿಸುತ್ತಾನೆ. ಆದುದರಿಂದಲೇ ಈ ಕಾಲದಲ್ಲಿ ಮೇಲಿನಲ್ಲಿಯೂ ಅಡ್ಡದಲ್ಲಿಯೂ ಮಿಂಚುಗಳೂ ಮೇಘಧ್ವನಿಗಳೂ ಉಂಟಾಗುತ್ತವೆ. ಅಥವಾ ಪುರಂದರನಿಂದ ಸಿಡಿಲು ಮಿಂಚುಗಳು ಆಗುತ್ತವೆ. ಅದನ್ನು ನೋಡಿ ಜನರು ಮಿಂಚುಬರುತ್ತದೆ. ಸಿಡಿಲು ಬರುತ್ತದೆ. ಮಳೆ ಬರುವುದು, ಎಂದು ಹೇಳುವರು. ಪ್ರಸಿದ್ಧ. ಪುರಂದರನೇ ಮಿಂಚುಮೊದಲಾದುದನ್ನು ಮೊದಲು ತೋರಿಸಿ ಆ ಮೇಲೆ ನೀರನ್ನು ಸೃಷ್ಟಿಸುತ್ತಾನೆ. ತೇಜಃ ಎನಿಸಿದ ಪುರಂದರನಲ್ಲಿಯೂ ಕಾಮನಲ್ಲಿಯೂ ಪರಬ್ರಹ್ಮನನ್ನು ಉಪಾಸನೆಮಾಡು. ॥೧॥

ಉ. ॥ ಸ ಯಸ್ತೇಜೋ ಬ್ರಹ್ಮೇತ್ಯುಪಾಸ್ತೇ ತೇಜಸ್ವೀ ವೈ ಸ ತೇಜಸ್ವತೋ ಲೋಕಾನ್ ಭಾಸ್ವತೋಽಪಹತತಮಸ್ಕಾನಭಿಸಿದ್ಧ್ಯತಿ ಯಾವತ್ತೇಜಸೋ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯಸ್ತೇಜೋ ಬ್ರಹ್ಮೇತ್ಯು-

ಪಾಸ್ತೇಽಸ್ತಿ ಭಗವಸ್ತೇಜಸೋ ಭೂಯ ಇತಿ ತೇಜಸೋ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರುವೀತ್ವಿತಿ ॥ ಇತ್ಯೇಕಾದಶಃ ಖಂಡಃ ॥೯-೧೧॥ ೨ ॥

ಅ ॥ ಹಾಗೆ ಉಪಾಸನೆಮಾಡಿದವನು ತೇಜಸ್ವಿಯಾಗುತ್ತಾನೆ. ಆತನು ತೇಜಸ್ಸುಳ್ಳ, (ಸುಡುವ ಶಕ್ತಿಯುಳ್ಳ) ಪ್ರಕಾಶಮಾನಗಳಾದ (ಪ್ರಕಾಶಗೊಳಿಸುವ ಶಕ್ತಿಯುಳ್ಳ) ಅಜ್ಞಾನಾಂಧಕಾರಗಳಿಲ್ಲದ ಲೋಕಗಳಿಗೆ ಹೋಗುತ್ತಾನೆ.....ತೇಜಃ ಎನಿಸಿದ ಪುರಂದರ ಕಾಮ ಇವರಿಗಿಂತ ಶ್ರೇಷ್ಠನು ಇದ್ದಾನೋ ಎನು ಎಂಬ ಪ್ರಶ್ನೆಗೆ ಇದ್ದಾನೆಂದು ಉತ್ತರಿಸಿದರು. ॥....೧೧ ॥ ॥ ೨ ॥

ಹನ್ನೊಂದನೇ ಖಂಡವು ಮುಗಿಯಿತು.

೧೨ನೇ ಖಂಡವು

ಉ. ॥ ಆಕಾಶೋ ವಾವ ತೇಜಸೋ ಭೂಯಾನಾಕಾಶೋ ವೈ ಸೂರ್ಯಾಚಂದ್ರಮಸಾವುಭೌ ವಿದ್ಯುನ್ನಕ್ಷತ್ರಾಣ್ಯಗ್ನಿರಾಕಾಶೇನಾಹ್ವಯತ್ಯಾಕಾಶೇನ ಶೃಣೋತ್ಯಾಕಾಶೇನ ಪ್ರತಿಶೃಣೋತ್ಯಾಕಾಶೇ ರಮತ ಆಕಾಶೇ ನ ರಮತ ಆಕಾಶೇ ಜಾಯತ ಆಕಾಶಮಭಿಜಾಯತ ಆಕಾಶಮುಪಾಸ್ಸೇತಿ ॥ ೧ ॥

ಅ ॥ ಸ್ಥಿರ ಪ್ರತಿಭಾರೂಪವಾದ ಆಂತರಭಿದ್ಯಾತ್ಮಕವಾದುದು ಆಕಾಶ, ಬಾಹ್ಯ ಆಕಾಶ, ಹೀಗೆ ಆಕಾಶವು ಎರಡು ವಿಧವು. ಇವುಗಳಿಗೆ ಅಭಿಮಾನಿನಿಯಾದ ಪ್ರಕಾಶಿಸಿಕೊಂಡಿರುವುದರಿಂದ ಆಕಾಶ ಎನಿಸಿದ ಪಾರ್ವತಿಯೂ ಅವಳಿಗೆ ಸಮರಾದ ಸೌಪರ್ಣೀವಾರುಣಿಯರೂ ಈ ಮೂವರು ತೇಜಃ ಎನಿಸಿದ ಇಂದ್ರ ಕಾಮರಿಗಿಂತ ಶ್ರೇಷ್ಠರು. (ಅದರಲ್ಲಿ ಆಂತರ ಚಂಚಲ ಪ್ರಾತಿಭ ಎಂಬ ತೇಜಸ್ಸಿಗಿಂತ ಆಂತರ ಸ್ಥಿರ ಪ್ರಾತಿಭ ಎಂಬ ಆಕಾಶವು ಶ್ರೇಷ್ಠವು. ಬಾಹ್ಯತೇಜಸ್ಸಿಗಿಂತ ಬಾಹ್ಯಾಕಾಶವು ಶ್ರೇಷ್ಠವು.) (ಆಕಾಶ ಎನಿಸಿದ ದೇವಿಯರ ಮಹಿಮೆ ಹೇಳುತ್ತಾರೆ.) ಆಕಾಶ ಎನಿಸಿದ ಪಾರ್ವತ್ಯಾದಿಗಳ ಅಧೀನರಾಗಿಯೇ ಸೂರ್ಯಚಂದ್ರರೂ ಮಿಂಚುನಕ್ಷತ್ರಗಳೂ ಅಗ್ನಿಯೂ ಇರುತ್ತಾರೆ. (ಎಲ್ಲಾ ವ್ಯವಹಾರವೂ ಆಕಾಶದ ಅಧೀನವಾಗಿದೆ ಎನ್ನುತ್ತಾರೆ.) ಈ ಪಾರ್ವತ್ಯಾದಿಗಳ ಪ್ರೇರಣೆಯಿಂದಲೇ ಪುರುಷರು ದೇವತಾದಿಗಳನ್ನು ಕರೆಯುತ್ತಾರೆ. ಹಾಗೆ ಕರೆಯಲ್ಪಟ್ಟವರು ಕೇಳುತ್ತಾರೆ. ಕೇಳಿದವನಿಗೆ ಹೇಳುವವನು ಹೇಳುತ್ತಿರುವಾಗ ಇನ್ನೊಬ್ಬನು ಅದನ್ನು ಕೇಳುತ್ತಾನೆ. ಪಾರ್ವತ್ಯಾದಿಗಳ ಪ್ರೇರಣೆಯಿಂದಲೇ ವಿಹಾರಮಾಡುತ್ತಾರೆ. ವ್ಯಥೆಪಡುತ್ತಾರೆ. ಪಾರ್ವತ್ಯಾದಿಗಳ ಪ್ರೇರಣೆಯಿಂದಲೇ ಪುತ್ರಪೌತ್ರಾದಿಗಳು ಹುಟ್ಟುತ್ತಾರೆ. ಅಂಕುರಾದಿಗಳು ಹುಟ್ಟುತ್ತವೆ. ಆಕಾಶರೆನಿಸಿದ ಪಾರ್ವತ್ಯಾದಿಗಳಲ್ಲಿ ಪರಬ್ರಹ್ಮನನ್ನು ಉಪಾಸನೆಮಾಡು. ॥೧॥

ಉ. ॥ ಸ ಯ ಆಕಾಶಂ ಬ್ರಹ್ಮೇತ್ಯುಪಾಸ್ತ ಆಕಾಶವತೋ ವೈ ಸ ಲೋಕಾನ್ಪ್ರಕಾಶವತೋಽಸಂಬಾಧಾನುರುಗಾಯವತೋಽಭಿಸಿದ್ಧ್ಯತಿ ಯಾವದಾಕಾಶಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯ ಆಕಾಶಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವ ಆಕಾಶಾದ್ಭೂಯ ಇತ್ಯಾಕಾಶಾದ್ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರುವೀತ್ವಿತಿ ॥ ಇತಿ ದ್ವಾದಶಃ ಖಂಡಃ॥೯-೧೨॥

ಅ ॥ ಹೀಗೆ ಉಪಾಸನೆ ಮಾಡಿದವರು ಪಾರ್ವತ್ಯಾದಿಗಳು ಅಭಿಮಾನಿಗಳಾಗಿ ಉಳ್ಳ, ಅವಕಾಶವುಳ್ಳ ವಿಸ್ತಾರಗಳಾದ, ಪ್ರಕಾಶವುಳ್ಳ ಪರಸ್ಪರ ಪೀಡೆಯಿಲ್ಲದಿರುವ ಅಂದರೆ ನೃಶೆಯಿಲ್ಲದಿರುವ ಶ್ರೀಹರಿಯು ಇರುವ ಲೋಕಗಳನ್ನು ಹೊಂದುತ್ತಾರೆ.....ಈ ಆಕಾಶ ಎನಿಸಿದ ಮೂರು ದೇವಿಯರಿಗಿಂತ ಶ್ರೇಷ್ಠನು ಇದ್ದಾನೋ, ಎಂಬ ಪ್ರಶ್ನೆಗೆ ಇದ್ದಾನೆಂದು ಉತ್ತರಿಸಿದರು..... ॥ ೯—೧೨ ॥ ॥ ೨ ॥

ಹನ್ನೆರಡನೇ ಖಂಡವು ಮುಗಿಯಿತು.

೧೩ನೇ ಖಂಡವು

ಉ೦ ॥ ಸ್ಮರೋ ವಾ ಆಕಾಶಾದ್ಭೂಯಾꣳಸ್ತಸ್ಮಾದ್ವಯಮಪಿ ಬಹವ ಆಸೀ-ರನ್ನೆ ಸ್ಮರಂತೋ ನೈವ ತೇ ಕಂಚನ ಶೃಣುಯುರ್ನ ಮನ್ವೀರನ್ನ ವಿಜಾನೀರನ್ ಯದಾ ವಾವ ತೇ ಸ್ಮರೇಯುರಥ ಶೃಣುಯುರಥ ಮನ್ವೀರನ್ನಥ ವಿಜಾನೀರನ್ ಸ್ಮರೇಣ ವೈ ಪುತ್ರಾನ್ವಿಜಾನಾತಿ ಸ್ಮರೇಣ ಪಶೂꣳ ಸ್ಮರಮುಪಾಸ್ಯೇತಿ ॥ ೧ ॥

ಅ ॥ ಎಡೆಬಿಡದೆ ಪದಾರ್ಥಗಳ ಸ್ಮೃತಿರೂಪವಾದ ಸ್ಮರಣೆಗೆ ಅಭಿಮಾನಿಯಾದ ಏಕಪ್ರಕಾರ ಕ್ರೀಡಿಸಿಕೊಂಡಿರುವುದರಿಂದ ಸ್ಮರನೆನಿಸಿದ ಶಿವನು ಗರುಡ ಶೇಷ ಈ ಮೂವರು ಪಾರ್ವತ್ಯಾದಿಗಳಿಗಿಂತ ಶ್ರೇಷ್ಠರು. (ಮತ್ತು ಪಾರ್ವತ್ಯಾದಿಗಳಿಂದ ಶ್ರೇಷ್ಠರಾದ ಜಾಂಬವತೀ ಮೊದಲಾದ ಆರು ದೇವಿಯರಿಗಿಂತಲೂ ಶ್ರೇಷ್ಠರು) (ರುದ್ರಾದಿಗಳ ಮಹಿಮೆಹೇಳುತ್ತಾರೆ.) ಪಾರ್ವತ್ಯಾದಿಗಳಿಗಿಂತ ರುದ್ರಾದಿಗಳು ಶ್ರೇಷ್ಠರಾದುದರಿಂದಲೇ ಲೋಕದಲ್ಲಿ ಬಹುಪುರುಷರು ಒಂದುಕಡೆ ಕುಳಿತವರು ಮೊದಲು ಅನುಭವಿಸಿದುದನ್ನು ಸ್ಮರಿಸದಿದ್ದರೆ ಶ್ರವಣ ಮನನ ವಿಜ್ಞಾನ ವಿರಹಿತರೇ ಆಗುತ್ತಾರೆ. (ಅಂದರೆ ಯಾವ ಶಬ್ದವನ್ನೂ ಕೇಳುವುದಿಲ್ಲ. ಸ್ಮರಣೆಯೇ ಇಲ್ಲದಿರುವುದರಿಂದ ಮನನಮಾಡಲಾರರು ಹಾಗೆಯೇ ತಿಳಿಯಲಾರರು.) ಅವರು ಒಂದುಕಡೆ ಸೇರಿ ಮೊದಲು ತಿಳಿದುದನ್ನು ಸ್ಮರಿಸಿದರೆ ಶ್ರವಣಾದಿ ವ್ಯಾಪಾರಗಳುಳ್ಳವರು ಆಗುತ್ತಾರೆ. ಆ ರುದ್ರಾದಿಗಳ ಅನುಗ್ರಹದಿಂದಲೇ ಇವರು ನನ್ನ ಮಕ್ಕಳು ಎಂದು ತಿಳಿಯುತ್ತಾರೆ. ಇವುಗಳು ನನ್ನ ಪಶುಗಳೆಂದು ಪಶುಗಳನ್ನು ತಿಳಿಯುತ್ತಾರೆ. ಸ್ಮರನೆನಿಸಿದ ರುದ್ರ ಗರುಡ ಶೇಷರಲ್ಲಿ ಪರಬ್ರಹ್ಮನನ್ನು ಉಪಾಸನೆಮಾಡು. ॥ ೧ ॥

ಉ೦. ॥ ಸ ಯಃ ಸ್ಮರಂ ಬ್ರಹ್ಮೇತ್ಯುಪಾಸ್ತೇ ಯಾವತ್ ಸ್ಮರಸ್ಯ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯೋ ಸ್ಮರಂ ಬ್ರಹ್ಮೇತ್ಯುಪಾಸ್ತೇ೭ಸ್ತಿ ಭಗವಃ ಸ್ಮರಾದ್ಭೂಯ ಇತಿ ಸ್ಮರಾದ್ವಾವ ಭೂಯೋ೭ಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ತ್ರಯೋದಶಃ ಖಂಡಃ ॥ ೯-೧೩ ॥ ॥ ೨ ॥

ಅ ॥ ಹೀಗೆ ಉಪಾಸನೆಮಾಡುವವನು ರುದ್ರಾದಿಗಳು ನಿಯಾಮಕರಾಗಿರುವ ಲೋಕಗಳಲ್ಲಿ ಸ್ವೇಚ್ಛಾನುಸಾರ ಸಂಚರಿಸುತ್ತಿರುತ್ತಾನೆ.....ಸ್ಮರನೆನಿಸಿದ ರುದ್ರಾದಿಗಳಿಗಿಂತ ಶ್ರೇಷ್ಠನು ಇದ್ದಾನೋ ಎಂಬ ಪ್ರಶ್ನೆಗೆ ಇದ್ದಾನೆಂದು ಉತ್ತರಿಸಿದರು ॥ ೯—೧೩ ॥ ॥ ೨ ॥

ಹದಿಮೂರನೇ ಖಂಡವು ಮುಗಿಯಿತು.

೧೪ನೇ ಖಂಡವು

ಉ. ॥ ಆಶಾ ವಾವ ಸ್ಮರಾದ್ಭೂಯಸ್ಯಾಶೇದ್ಧೋ ವೈ ಸ್ಮರೋ ಮಂತ್ರಾ-ನಧೀತೇ ಕರ್ಮಾಣಿ ಕುರುತೇ ಪುತ್ರಾಂಶ್ಚ ಪಶೂಂಶ್ಚೇಚ್ಛತ ಇಮಂ ಚ ಲೋಕಮಮುಂ ಚೇಚ್ಛತ ಆಶಾಮುಪಾಸ್ಸೇತಿ ॥ ೧ ॥

ಅ ॥ ಪೂರ್ಣಸುಖರೂಪಳಾದುದರಿಂದ ಆಶಾ ಎಂದು ಹೆಸರುಳ್ಳ, ಆಶೆಗೆ (ಹೊಂದದ ವಸ್ತುವನ್ನು ಹೊಂದಬೇಕೆಂಬ ಇಚ್ಛೆಗೆ) ಅಭಿಮಾನಿನಿಯಾದ ಭಾರತಿಯೂ ಸರಸ್ವತಿಯೂ ಇವರಿಬ್ಬರೂ ರುದ್ರಾದಿಗಳಿಗಿಂತ ಎಲ್ಲಾ ಗುಣಗಳಿಂದಲೂ ಶ್ರೇಷ್ಠರು, (ಇವರು ಪ್ರಾಣಿಗಳಿಗೆ ಈಶ್ವರನ ಪ್ರತ್ಯಕ್ಷ ಜ್ಞಾನವನ್ನು ಹುಟ್ಟಿಸುವವರು.) (ಅವರ ಮಹಿಮೆ ಹೇಳುತ್ತಾರೆ.) ಮಂತ್ರಗಳನ್ನು ಅಧ್ಯಯನಮಾಡುತ್ತೇನೆಂಬ ಆಶೆಯಿಂದ ಅಭಿವೃದ್ಧವಾದ ರುದ್ರಾದಿಗಳು ಮಂತ್ರಗಳನ್ನೂ ಅಧ್ಯಯನಮಾಡುತ್ತಾರೆ. ಕರ್ಮಮಾಡುತ್ತಾರೆ. ಪುತ್ರಾದಿಗಳನ್ನು ಇಚ್ಛಿಸುತ್ತಾರೆ. ಅಥವಾ ಜೀವನು ಆಶೆಯಿಂದ ಸಮೃದ್ಧನಾಗಿ ಸ್ಮೃತಿಯುಳ್ಳವನಾಗುತ್ತಾನೆ. ಆಮೇಲೆ ಋಗಾದಿಮಂತ್ರಗಳನ್ನೂ ಕಲಿಯುತ್ತಾನೆ. ಆಮೇಲೆ (ಋಗಾದಿಗಳ ಅರ್ಥವನ್ನೂ ವಿಧಿಗಳನ್ನೂ ಬ್ರಾಹ್ಮಣರಿಂದ ಕೇಳಿ ಕರ್ಮಮಾಡುವೆನೆಂಬ ಆಶೆಯಿಂದ ಅಭಿವೃದ್ಧನಾಗಿ ಸ್ಮರಣೆಯುಳ್ಳವನಾಗಿ (ಫಲಸಿಗಬೇಕೆಂಬ ಆಶೆಯಿಂದ) ಕರ್ಮಮಾಡುತ್ತಾನೆ ಕರ್ಮದ ಫಲಭೂತಗಳಾದ ಮಕ್ಕಳೂ ಪಶುಗಳೂ ಇವುಗಳನ್ನು ಇಚ್ಛಿಸುವೆನೆಂಬ ಆಶೆಯಿಂದ ಸಮೃದ್ಧನಾಗಿ ಸ್ಮರಣೆಯುಳ್ಳವನಾಗಿ ಇಚ್ಛಿಸುತ್ತಾನೆ. ಆಶೆಯಿಂದ ಕೂಡಿದವನಾಗಿಯೇ ಈ ಲೋಕವನ್ನೂ ಪರಲೋಕವನ್ನೂ ಹೊಂದುವೆನೆಂಬ ಇಚ್ಛೆಯಿಂದ (ಅದಕ್ಕೆ ಬೇಕಾದ ಸಾಧನಗಳನ್ನು ಮಾಡಿ) ಇಚ್ಛಿಸುತ್ತಾನೆ. ಆಶಾ ಎನಿಸಿದ ಭಾರತೀ ಸರಸ್ವತಿಯರಲ್ಲಿ ಪರಬ್ರಹ್ಮನನ್ನು ಉಪಾಸನೆ ಮಾಡು. ॥ ೧ ॥

ಉ: ॥ ಸ ಯ ಆಶಾಂ ಬ್ರಹ್ಮೇತ್ಯುಪಾಸ್ತೇ ಆಶಯಾಸ್ಯ ಸರ್ವೇ ಕಾಮಾಃ ಸಮೃದ್ಧ್ಯಂತ್ಯನೋಘಾ ಹಾಸ್ಯಾಽಽಶಿಷೋ ಭವಂತಿ ಯಾವದಾಶಾಯಾ ಗತಂ ತತ್ರಾಸ್ಯ ಯಥಾ ಕಾಮಚಾರೋ ಭವತಿ ಯ ಆಶಾಂ ಬ್ರಹ್ಮೇತ್ಯುಪಾಸ್ತೇಽಸ್ತಿ ಭಗವ ಆಶಾಯಾ ಭೂಯ ಇತ್ಯಾಶಾಯಾ ವಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ॥ ಇತಿ ಚತುರ್ದಶಃ ಖಂಡಃ ॥ ॥ ೯-೧೪ ॥ ॥ ೨ ॥

ಅ ॥ ಹೀಗೆ ಯಾರು ಉಪಾಸನೆಮಾಡುತ್ತಾರೋ, ಆ ಉಪಾಸಕರಿಗೆ ಆಶಾಕ್ಕೆ ಅಭಿಮಾನಿಯಾದ ಭಾರತೀಸರಸ್ವತಿಯರ ಅನುಗ್ರಹದಿಂದ ಇಚ್ಛಿಸಲ್ಪಡತಕ್ಕ ಎಲ್ಲಾ ವಸ್ತುಗಳೂ ಸಮೃದ್ಧಿಯನ್ನು ಹೊಂದುತ್ತವೆ. ಇವನ ಪ್ರಾರ್ಥನೆಗಳೆಲ್ಲವೂ ಸಫಲಗಳು ಆಗುತ್ತವೆ. ಅಂದರೆ ಇವನು ಪ್ರಾರ್ಥಿಸಿದುದೆಲ್ಲವೂ ಅವಶ್ಯವಾಗಿ ಆಗಿಯೇ ಆಗುತ್ತದೆ.) ಈ ಭಾರತೀ ಸರಸ್ವತಿಯರು ಅಧಿಪತಿಗಳಾಗಿ ಉಳ್ಳ ಲೋಕಗಳಲ್ಲಿ ಸಂಚರಿಸುತ್ತಿರುತ್ತಾರೆ. ಭಾರತೀ ಸರಸ್ವತಿಯರಿಗಿಂತ ಉತ್ತಮನು ಇದ್ದಾನೋ ಎಂದು ನಾರದರು ಕೇಳಿದರು ಅದಕ್ಕೆ ಸನತ್ಕುಮಾರರು ಇದ್ದಾನೆಂದು ಉತ್ತರಿಸಿದರು. ॥ ೯-೧೪ ॥ ॥ ೨ ॥

ಹದಿನಾಲ್ಕನೇ ಖಂಡವು ಮುಗಿಯಿತು.

ಪೀ—ಸಂಕಲ್ಪೋ ವಾವ ಮನಸೋ ಭೂಯಾನ್ ಎಂಬ ೪ನೇ ಖಂಡದ ತಾತ್ಪರ್ಯ ಹೇಳುತ್ತಾರೆ—

ಭಾ. ॥ (೧) ತಥಾ ತಸ್ಮಾದ್ವರೋ ಮಿತ್ರೋ ಮುಕ್ತೌ ಸಂಕಲ್ಪದೇವತಾ । ಅಹ್ನಿ ಸಂಕಲ್ಪಯೇದ್ಯಸ್ಮಾತ್ ಸ್ವಪ್ಸ್ಯಂತಿ ನಿಶಿ ಯತ್ತತಃ ॥ (೨) ತಥಾ ಮಿತ್ರಾದ್ವರಸ್ತ್ವಗ್ನಿರ್ಮುಕ್ತೌ ಚಿತ್ತಸ್ಯ ದೇವತಾ । ಚಿತಕ್ತಾಚ್ಚಿತ್ತನಾಮಾ ಚ ॥ (೩) ತಸ್ಮಾದ್ವರುಣ ಏವ ಚ। ಧ್ಯಾನಸ್ಯ ದೇವತಾ ಚಾಸೌ ತನ್ನಾಮಾ ಚ ನಿಧಾನತಃ । ಸತ್ಯಾನೃತವಿವೇಕಾರ್ಥಂ ॥ (೪) ತಥಾ ತಸ್ಮಾನ್ನಿಶಾಕರಃ । ವಿಜ್ಞಾನದೇವತಾ ಚಾಸೌ ತನ್ನಾಮಾ ಚ ವಿವೇಚನಾತ್ । ಸತ್ಯಸ್ಯ (೫) ತಸ್ಮಾಚ್ಚ ತಥಾ ವಾಯುರ್ಭೂತಾತ್ಮಕೋ ವರಃ । ಬಲಾತ್ಮಕಸ್ತಥಾ ॥ ೧ ॥

ಆ ॥ (೧) ಹಾಗೆಯೇ ಮಿತ್ರನೆಂಬ ದೇವತೆಯು ಮನಃ ಎನ್ನಿಸಿದ ಪರ್ಜನ್ಯನಿಗಿಂತಲೂ ಪರ್ಜನ್ಯನ ಸಮಾನರಿಗಿಂತಲೂ ಶ್ರೇಷ್ಠನು. ಆತನು ಮೋಕ್ಷದಲ್ಲಿ ಸಂಕಲ್ಪಕ್ಕೆ ದೇವತೆಯು. ಹಗಲು ಪ್ರಜೆಗಳಿಗೆ ಮನನಾದಿಗಳನ್ನೂ ಮಾಡುತ್ತೇನೆಂದು ಸಂಕಲ್ಪವನ್ನೂ ಹುಟ್ಟಿಸುವುದರಿಂದ ಸಂಕಲ್ಪನೆನಿಸುತ್ತಾನೆ ರಾತ್ರಿ ಕಾಲದಲ್ಲಿ ಪ್ರಜೆಗಳು ನಿದ್ರಿಸುತ್ತಾರೆ. (ಅದುಕಾರಣ ರಾತ್ರಿಯಲ್ಲಿ ಸಂಕಲ್ಪವಿಲ್ಲದಿರುವುದರಿಂದಲೇ ಹಗಲಿನಲ್ಲಿ ಸಂಕಲ್ಪವನ್ನು ಂಟುಮಾಡುವನು. **ಅಹ್ನಿ** ಎಂಬುದರಿಂದ ಸ್ವಾಪಕಾಲದಿಂದ ಬೇರೆ ಕಾಲವನ್ನೂ ಇಟ್ಟುಕೊಳ್ಳಬೇಕು.) (೨) (**ಚಿತ್ತಂವಾವಸಂಕಲ್ಪಾದ್ಭೂಯಃ** ಎಂಬ ೫ನೇ ಖಂಡಕ್ಕೆ ಅರ್ಥಹೇಳುತ್ತಾರೆ.) ಹಾಗೆಯೇ ಸಂಕಲ್ಪಾಭಿಮಾನಿ ಮಿತ್ರ, ಮತ್ತು ನಿರ್ಋತ್ಯಾದಿಗಳು ಇವರಿಗಿಂತ ಚಿತ್ತಾಭಿಮಾನಿಯಾದ ಅಗ್ನಿಯೂ ಮತ್ತು ಭೃಗು ಪ್ರಸೂತಿಗಳೂ ಶ್ರೇಷ್ಠರು. ಅಗ್ನಿಯು ಮೋಕ್ಷದಲ್ಲಿ ಚಿತ್ತಕ್ಕೆ ದೇವತೆಯು. ಯಾಗಕುಂಡದಲ್ಲಿ ಪೂಜಿಸಲ್ಪಡುವುದರಿಂದ ಜಿತ್ತನೆನಿಸುವನು. (೩) (**ಧ್ಯಾನಂ ವಾವ ಚಿತ್ತಾದ್ಭೂಯಃ** ಎಂಬ ೬ನೇ ಖಂಡದ ಅರ್ಥಹೇಳುತ್ತಾರೆ.) ಆ ಅಗ್ನಿ ಭೃಗು ಪ್ರಸೂತಿಗಳಿಗಿಂತ ಧ್ಯಾನಕ್ಕೆ ಅಭಿಮಾನಿಯಾದ ವರುಣನು ಶ್ರೇಷ್ಠನು. ವರುಣನು ಧ್ಯಾನಕ್ಕೆ ದೇವತೆಯು. ಸತ್ಯ ಸುಳ್ಳು ಇವುಗಳನ್ನು ಪ್ರತ್ಯೇಕಿಸಲಿಕ್ಕೆ ಬ್ರಹ್ಮನಿಂದ ಸ್ಥಾಪಿಸಲ್ಪಟ್ಟಕಾರಣ ಧ್ಯಾನನೆನಿಸುತ್ತಾನೆ. (೪) (**ವಿಜ್ಞಾನಂ ವಾವ ಧ್ಯಾನಾದ್ಭೂಯಃ** ಎಂಬ ೭ನೇ ಖಂಡದ ಅರ್ಥಹೇಳುತ್ತಾರೆ.) ಧ್ಯಾನಾಭಿಮಾನಿಯಾದ ವರುಣನಿಗಿಂತ ವಿಜ್ಞಾನಾಭಿಮಾನಿಯಾದ ಚಂದ್ರನು (ಮತ್ತು ಸೂರ್ಯ, ಯಮ, ಶತರೂಪ ಇವರು) ಶ್ರೇಷ್ಠರು ಚಂದ್ರನು ವಿಜ್ಞಾನಕ್ಕೆ ದೇವತೆಯು. ಸತ್ಯವನ್ನು ಶೋಧಿಸುವ ಕಾರಣ ವಿಜ್ಞಾನನೆನಿಸುತ್ತಾನೆ (೫ (**ಬಲಂ ವಾವ ವಿಜ್ಞಾನಾದ್ಭೂಯಃ** ಎಂಬ ೮ನೇ ಖಂಡದ ತಾತ್ಪರ್ಯಹೇಳುತ್ತಾರೆ) ಆ ವಿಜ್ಞಾನನೆನಿಸಿದ ಚಂದ್ರ ಮೊದಲಾದ ನಾಲ್ವರಿಗಿಂತ ಬಲಸ್ವರೂಪನಾದ ಬಲದೇವತೆಯಾದ ಭೂತವಾಯುವಿಗೆ ಅಭಿಮಾನಿಯಾದ ಪ್ರವಹನು ಶ್ರೇಷ್ಠನು. ॥ ೧ ॥

ಪೀ—ಅನ್ನಂ ವಾವ ಬಲಾದ್ಭೂಯಃ ಎಂಬ ೮ನೇ ಖಂಡದ ಅರ್ಥಹೇಳುತ್ತಾರೆ—

ಭಾ. ॥ (೧) ತಸ್ಮಾದನ್ನದೇವೋಽನಿರುದ್ಧಕಃ । ಅನ್ನನಾಮಾನುನಾದಿತ್ವಾತ್ ॥ (೨) ತೈಜಸಾಹಂಭವಸ್ತತಃ । ತಥಾ ವರಿಷ್ಠಃ ಪ್ರಾಣಾಖ್ಯೋ ವಾಯುಃ ಸೋಽಪಾಂ ಚ ದೇವತಾ । ಅಮ್ನಾಮಾ ದೇಹಸಂವ್ಯಾಪ್ತೇಃ ॥ (೩) ತಥಾ ತಸ್ಮಾತ್ಪರಂದರಃ । ತೇಜೋಽಭಿಮಾನೀ ತನ್ನಾಮಾ ತೇಜೋ ಹ್ಯೋಜ ಇತೀ(ಉದೀ)ರ್ಯತೇ ॥ ತಥಾ ತಸ್ಮಾದುಮಾ ಚೈವ ಸಾ ಚಾಕಾಶಾಭಿಮಾನಿನೀ । ಆಕಾಶನಾಮ್ನೀ ದೀಪ್ತತ್ವಾತ್ ॥ (೪) ತಸ್ಯಾಶ್ಚೈವ

ಸದಾಶಿವಃ । ಸ್ಥಿರಸ್ಮೃತ್ಯಭಿಮಾನೀ ಸ ಸಮಮೇವ ರತೇಃ ಸ್ಮರಃ ॥ (೫) ಮುಖ್ಯವಾಯು-ಪ್ರಿಯಾ ತಸ್ಮಾತ್ಪರಮೈವ ಸರಸ್ವತೀ । ಬಂಧಮುಕ್ತ್ಯೋಃ ಸರ್ವಗುಣೈಃ ಸರ್ವದಾಽಽಶಾ-ಸ್ವರೂಪಿಣೀ । ಶಮಿತ್ಯಾನಂದ ಉದ್ದಿಷ್ಟ ಆಶಾ ಪೂರ್ಣಸುಖಿತ್ವತಃ ॥ ೬) ತಸ್ಯಾಃ ಶ್ರೇಷ್ಠೋ ಮುಖ್ಯವಾಯುಃ ಪ್ರಕೃಷ್ಟಾನಾಂ ಚ ನಾಯಕಃ । ಪ್ರಾಣನಾಮಾ ಣ ಇತ್ಯೇವ ಹ್ಯಾನಂ-ದಸ್ಯಮುದೀರಿತಃ ॥ ಆಣಾ ಸರಸ್ವತೀ ಪ್ರೋಕ್ತಾ ತತ್ಪ್ರಕೃಷ್ಟಸುಖಿತ್ವತಃ । ಪ್ರಾಣ ಇತ್ಯು-ಚ್ಯತೇ ವಾಯುಃ ॥ ೨ ॥

ಆ ॥ (೧) ಅನ್ನಕ್ಕೆ ಅಭಿಮಾನಿಯಾದ ಅನಿರುದ್ಧನು ಬಲಕ್ಕೆ ಅಭಿಮಾನಿಯಾದ ಪ್ರವಹನಿಗಿಂತ ಶ್ರೇಷ್ಠನು, ಅನಿರುದ್ಧನು ಯುದ್ಧಾದಿಗಳಲ್ಲಿ ಶತ್ರುಗಳಿಗೆ ಭಯವನ್ನು ಹುಟ್ಟಿಸುವ ಶಬ್ದಮಾಡುವುದರಿಂದ **ಅನ್ನನೆನಿಸುತ್ತಾನೆ.** (೨) (**ಆಪೋ ವಾವ ಅನ್ನಾದ್ಭ್ಯೋಃ** ಎಂಬ ೧೦ನೇ ಖಂಡದ ತಾತ್ಪರ್ಯಹೇಳು ತ್ತಾರೆ.) ಆ ಅನಿರುದ್ಧನಿಗಿಂತ ತೈಜಸಾಹಂಕಾರದಿಂದ ಹುಟ್ಟಿದ ಆಹಂಕಾರಿಕ ಪ್ರಾಣವಾಯುವು ಶ್ರೇಷ್ಠನು. ಜಲಗಳಿಗೆ ಅಭಿಮಾನಿಯು. ಶರೀರದಲ್ಲಿ ವ್ಯಾಪಿಸಿಕೊಂಡಿದ್ದ ಪ್ರಯುಕ್ತ **ಅಪ್** ಎನಿಸುತ್ತಾನೆ. (೩) (**ತೇಜೋ ವಾವ ಆದ್ಭ್ಯೋ ಭೂಯಃ** ಎಂಬ ೧೧ನೇ ಖಂಡದ ಅರ್ಥಹೇಳುತ್ತಾರೆ.) ತೇಜಃ ಎನಿಸಿದ ಪುರಂದರ ಕಾಮರು ಜಲಾಭಿಮಾನಿಯಾದ ಪ್ರಾಣನಿಗಿಂತ ಶ್ರೇಷ್ಠರು. ತೇಜಸ್ಸಿಗೆ ಅಭಿಮಾನಿಯರು. ತೇಜಸ್ವರೂಪರು. (ಪ್ರಕಾಶರೂಪವಾದ ತೇಜಸ್ಸು ಸೂರ್ಯಾದಿಗಳ ಧರ್ಮವಾಗಿದೆ ಎಂದರೆ) ಇಲ್ಲಿ ತೇಜಸ್ಸು ಎಂಬುದರಿಂದ ಓಜಸ್ಸು (ಅಂದರೆ ಇತರರನ್ನು ಸೋಲಿಸುವ ಶಕ್ತಿಯು) ಹೇಳಲ್ಪಡು ತ್ತದೆ. (೪) (**ಆಕಾಶೋ ವಾವ ತೇಜಸೋ ಭೂಯಾನ್** ಎಂಬ ೧೩ನೇ ಖಂಡದ ತಾತ್ಪರ್ಯ ಹೇಳು ತ್ತಾರೆ.) ಇಂದ್ರ ಕಾಮರಿಗಿಂತ **ಉಮಾ ಸೌಪರ್ಣೀ ವಾರುಣಿಯರು** ಶ್ರೇಷ್ಠರು. ಆಕಾಶಕ್ಕೆ ಅಭಿ ಮಾನಿಯರು. ಜೀನ್ನಾಗಿ ಪ್ರಕಾಶಿಸಿಕೊಂಡಿರುವುದರಿಂದ ಆಕಾಶ ಎನಿಸಿದವರು.) (೪) (**ಸ್ಮರೋ ವಾ ಆಕಾಶಾದ್ಭೂಯಾನ್** ಎಂಬ ೧೩ನೇ ಖಂಡದ ಅರ್ಥಹೇಳುತ್ತಾರೆ) ಆಕಾಶಾಭಿಮಾನಿಯರಾದ ಪಾರ್ವ ತ್ಯಾದಿಗಳಿಗಿಂತಸದಾಶಿವನು (ಮತ್ತು ಗರುಡ ಶೇಷರು)ಶ್ರೇಷ್ಠರು. ಸ್ಥಿರವಾದ ಸ್ಮರಣೆಗೆ ಅಭಿಮಾನಿಯರು. ತಮ್ಮ ವ್ಯಾಪಾರ ಗಳಲ್ಲಿಯೂ ಶ್ರೀಹರಿಯ ಜ್ಞಾನಾದಿಗಳಲ್ಲಿಯೂ ಒಂದೇ ಪ್ರಕಾರವಿರುವುದರಿಂದ ಸ್ಮರರೆನಿ ಸುವರು. (೫) (**ಆಶಾ ವಾವ ಸ್ಮರಾದ್ಭೂಯಸೀ** ಎಂಬ ೧೪ನೇ ಖಂಡದ ಅರ್ಥಹೇಳುತ್ತಾರೆ.) ಆ ಸದಾ ಶಿವನಿಗಿಂತ ಬ್ರಹ್ಮದೇವರ ಪತ್ನಿಯಾದ ಸರಸ್ವತಿಯು ಎಲ್ಲಾ ಗುಣಗಳಿಂದಲೂ ಸಂಸಾರದಲ್ಲಿಯೂ ಮೋಕ್ಷ ದಲ್ಲಿಯೂ ಶ್ರೇಷ್ಠಳು) ಆಶಾಸ್ವರೂಪವುಳ್ಳವಳು ಆಶೆಗೆ ದೇವತೆಯು. ಶಂ ಎಂದರೆ ಆನಂದವು. ಪೂರ್ಣಸು ಖವಿರುವುದರಿಂದ ಸರಸ್ವತಿಯು **ಆಶಾ** ಎನಿಸುತ್ತಾಳೆ. (೬) (**ಪ್ರಾಣೋ ವಾ ಆಶಾಯಾ ಭೂಯಾನ್** ಎಂಬ ೧೫ನೇ ಖಂಡದ ತಾತ್ಪರ್ಯಹೇಳುತ್ತಾರೆ.) ಆ ಧಾರತೀ ಸರಸ್ವತಿಯರಿಗಿಂತ ಮುಖ್ಯವಾಯು ಬ್ರಹ್ಮರು ಶ್ರೇಷ್ಠರು. (**ಪ್ರಾಣಶಬ್ದಾರ್ಥ ಹೇಳುತ್ತಾರೆ**) ಮುಖ್ಯವಾಯುವು ಉತ್ಕೃಷ್ಟರಾದ ನಾಮವನ್ನಾ ರಂಭಿಸಿ ಸರಸ್ವತಿ ಪರ್ಯಂತರಾದವರಿಗೆ ಪ್ರೇರಕನಾದುದರಿಂದ ಪ್ರಾಣನೆನಿಸುತ್ತಾನೆ. ಅಥವಾ **ಣ** ಎಂಬುವು ದರಿಂದ:ಆನಂದವು ಹೇಳಲ್ಪಡುತ್ತದೆ. ಆದಕಾರಣ ಪೂರ್ಣಾನಂದವಿರುವುದರಿಂದ **ಆಣಾ** ಎಂದರೆ **ಸರಸ್ವ ಯು.** ಆವಳಿಗಿಂತಲೂ ಉತ್ಕೃಷ್ಟಸುಖಸ್ವರೂಪನಾದ ವಾಯುವು **ಪ್ರಾಣ** ನೆನಿಸುತ್ತಾನೆ. (ಏವಂಚ ಆಣಾಯಾಃ ಪ್ರಕೃಷ್ಟಃ ಪ್ರಾಣಃ ಸರಸ್ವತಿಗಿಂತ ಹೆಚ್ಚುಸುಖರೂಪನು) ॥ ೨ ॥

ಪೀ - ನಾಮಾಭಿಮಾನಿಯಾದ ಉಷೋದೇವಿಯನ್ನಾರಂಭಿಸಿ ಪ್ರಾಣಪರ್ಯಂತರಾದವರಲ್ಲಿ (೧ನೇ ಖಂಡ ಆರಂಭಿಸಿ ೧೫ನೇ ಖಂಡ ಪರ್ಯಂತ) ಮೇಲುಮೇಲಿನವರಲ್ಲಿ ಗುಣಾದಿಗಳಿಂದ ಆಧಿಕ್ಯವು ಹೇಳಲ್ಪ ಟ್ಟದೆ. ಆದರಲ್ಲಿ ವಿಶೇಷ ಹೇಳುತ್ತಾರೆ—

ಭಾ. ॥ (೧) ಸರ್ವೇ ತ್ವೇತೇ ದಶೋತ್ತರಾಃ । ಪರ್ಜನ್ಯಮಿತ್ರಶಿಖಿನೋ ಭೂತವಾಯುಸ್ತಥೈವ ಚ । ದ್ವಿಗುಣಾ ಏವ ॥ (೨) ಅನಿರುದ್ಧೋನಿಲಾತ್ಪಂಚಗುಣಾಧಿಕಃ । ಪಾದೋನೋ ವರುಣಾದಗ್ನಿರಧ್ಯರ್ಧೋನಃ ಸ ಸೋಮತಃ । ಶಿವಾದಾಶಾ ತಥೈವಾಸ್ಯಾ ಮುಖ್ಯವಾಯುಃ ಶತೋತ್ತರೌ ॥ ೩ ॥

ಅ ॥ (೧) ಇವರೆಲ್ಲರೂ ಯಥಾಯೋಗ್ಯವಾಗಿ ಹೆಚ್ಚು ಹೆಚ್ಚು ಗುಣಗಳುಳ್ಳವರು (ಅದನ್ನು ವಿವರಿಸುತ್ತಾರೆ.) ಸ್ವಾಹಾದೇವಿಗಿಂತ ಪರ್ಜನ್ಯನು, ಪರ್ಜನ್ಯನಿಗಿಂತ ಮಿತ್ರನು, ಮಿತ್ರನಿಗಿಂತ ಅಗ್ನಿಯೂ ಹಾಗೆ ಚಂದ್ರನಿಗಿಂತ ಭೂತವಾಯುವೂ (ಎರಡುಗುಣ ಹೆಚ್ಚುವುಳ್ಳವನು. ಹೀಗೆ ಇವರೆಲ್ಲರೂ ಎರಡೆರಡು ಗುಣಗಳು ಹೆಚ್ಚು ಉಳ್ಳವರು. (೨) ಭೂತವಾಯುವಿಗೆ ಅಭಿಮಾನಿಯಾದ ಪ್ರವಹನಿಗಿಂತ ಅನಿರುದ್ಧನು ಐದು ಗುಣಗಳು ಹೆಚ್ಚು ಇರುವವನು. ಚಂದ್ರನಿಗಿಂತ ವರುಣನು ಎಂಟನೇ ಒಂದಂಶ ಗುಣ ಕಡಿಮೆಯವನು. ವರುಣನಿಂದ ಅಗ್ನಿಯು ನಾಲ್ಕನೇ ಒಂದಂಶ ಗುಣ ಕಡಿಮೆಯವನು. ಶಿವನಿಗಿಂತ ಭಾರತೀ ಮುಖ್ಯ ಪ್ರಾಣರು ನೂರು ಗುಣ ಹೆಚ್ಚು ಇದ್ದವರು. ಭಾರತಿಗಿಂತ ಮುಖ್ಯಪ್ರಾಣನು ನೂರುಗುಣಗಳು ಹೆಚ್ಚು ಇರುವನು.

ನಿ ॥ (1) ಹೀಗೆ ದಶೋತ್ತರಾಃ ಎಂಬ ಸಾಮಾನ್ಯ ವಚನಕ್ಕೆ ಇತರ ಪ್ರಮಾಣಾನುಸಾರವಾಗಿ ಯಥಾಯೋಗ್ಯವಾಗಿ ಅರ್ಥ ಇಟ್ಟುಕೊಳ್ಳಬೇಕು. (2) ಕರ್ಮಕ್ಕೆ ಅಭಿಮಾನಿಯಾದ ಪುಷ್ಕರನು ಎಲ್ಲಾ ದೇವತೆಗಳಿಂದಲೂ ನಿಕೃಷ್ಟನು. ಅವನಿಗಿಂತ ಉಷೋದೇವಿಗೆ ೧೦ ಗುಣ ಹೆಚ್ಚು. ಅವಳಿಗಿಂತ ಸ್ವಾಹಾದೇವಿಗೆ ೧೦ ಗುಣ. ಅವಳಿಗಿಂತ ಪರ್ಜನ್ಯನಿಗೆ ೨ ಗುಣ ಹೆಚ್ಚು. ಪರ್ಜನ್ಯನಿಗಿಂತ ಮಿತ್ರನಿಗೂ, ಮಿತ್ರನಿಗಿಂತ ಅಗ್ನಿಗೂ ಎರಡೆರಡು ಗುಣಗಳು ಹೆಚ್ಚು ಇವೆ. ಅಗ್ನಿಗಿಂತ ವರುಣನಿಗೆ ನಾಲ್ಕನೇ ಒಂದಂಶ ಗುಣ ಹೆಚ್ಚು. ವರುಣನಿಗಿಂತ ಸೋಮನಿಗೆ ಎಂಟನೇ ಒಂದಂಶ ಗುಣ ಅಧಿಕವಾಗಿದೆ. ಚಂದ್ರನಿಗಿಂತ ಪ್ರವಹನಿಗೆ ೨ ಗುಣ ಹೆಚ್ಚು. ಭೂತವಾಯುವಿಗೆ ಅಭಿಮಾನಿಯಾದ ಪ್ರವಹನಿಗಿಂತ ಅನಿರುದ್ಧನಿಗೆ ೫ ಗುಣಗಳು ಹೆಚ್ಚು ಅನಿರುದ್ಧನಿಗಿಂತ ಅಹಂಕಾರಿಕ ವ್ಯಾಣನಿಗೆ ೧೦ ಗುಣ ಹೆಚ್ಚು ಆ ತೈಜಸಪ್ರಾಣನಿಗಿಂತ ಪುರಂದರನಿಗೆ ೧೦ ಗುಣ ಹೆಚ್ಚು. ಪುರಂದರನಿಗಿಂತ ಪಾರ್ವತಿಗೆ ೧೦ ಗುಣ ಹೆಚ್ಚು. ಅವಳಿಗಿಂತ ರುದ್ರನಿಗೆ ೧೦ ಗುಣ ಹೆಚ್ಚು. ಶಿವನಿಗಿಂತ ಭಾರತಿಗೆ ೧೦೦ ಗುಣ. ಅವಳಿಗಿಂತ ಮುಖ್ಯಪ್ರಾಣನಿಗೆ ೧೦೦ ಗುಣಗಳು ಹೆಚ್ಚು ಇರುತ್ತವೆ. ॥ ೩ ॥

ಪೀ—ಹೇಳಿದ ಗುಣಗಳ ಸಂಖ್ಯೆಗಿಂತ ಕೆಲವು ಕಡೆ ವ್ಯತ್ಯಾಸವಾಗಿ ಸಂಖ್ಯೆಹೇಳಿರುವುದರಿಂದ ಈ ನಿಯಮವು ಹೇಗೆ? ಎಂದರೆ—

ಭಾ. ॥ (೧) ಸಂಖ್ಯಾನ್ಯಥಾತ್ವಂ ಯತ್ರ ಸ್ಯಾತ್ತತ್ರಾವೇಶವಿಶೇಷತಃ ॥ (೨) ಅವರಾಣಾಂ ಗುಣಸ್ಯಾಪಿ ಪರಮಿಯತ್ತತಸ್ತಥಾ ॥ (೩) ಪ್ರಾಣಾತ್ತು ಭಗವಾನ್ವಿಷ್ಣುರನಂತಗುಣತೋಽಧಿಕಃ । ನಿತ್ಯಮುಕ್ತೋ ನಿತ್ಯಶಕ್ತಿರ್ನಿತ್ಯೋದ್ರಿಕ್ತಗುಣಃ ಪ್ರಭುಃ ॥ ಇತಿ ತತ್ತ್ವವಿವೇಕೇ ॥ (೪) ಸೈಷಾಽನಂದಸ್ಯ ಮೀಮಾಂಸಾ ಭವತಿ । ಇತ್ಯಾದೇಶ್ಚ ॥ ೪ ॥

ಅ ॥ (೧) ಇಲ್ಲಿ ಹೇಳಿದ ಸಂಖ್ಯೆಗಳಿಗೆ ವ್ಯತ್ಯಾಸವಾಗಿ ಎಲ್ಲಿ ಹೇಳುತ್ತಾರೋ, ಅಲ್ಲಿ ಉತ್ತಮರ ಆವೇಶವಿಶೇಷವು ಇದ್ದ ಪ್ರಯುಕ್ತ ಹೆಚ್ಚುಗುಣಗಳು ಹೇಳಿದ್ದೆಂದು ತಿಳಿಯಬೇಕು. (೨) (ಆವೇಶವಿಶೇಷವಿದ್ದ ಪ್ರಯುಕ್ತ ಸಂಖ್ಯೆಯನ್ನು ವ್ಯತ್ಯಾಸವಾಗಿ ಹೇಳಿದ್ದೆಂದಾದರೂ ಇಷ್ಟಿಷ್ಟವ್ಯಗುಣಗಳು ಎಂದು

ಹೇಳಿದ ನಿಯಮಕ್ಕೆ ಭಂಗವು ಬಂತು ಎಂದರೆ) ಅಧಮರಾದವರದ್ದು ಸ್ವಾಭಾವಿಕವಾದುದು ಯಾವುದು ಗುಣವಿದೆಯೋ ಅದೂ ಕೂಡ ಉತ್ತಮರ ಅಧೀನವೆಂದು ಹೇಳುವಾಗ ಆವೇಶ ಪ್ರಯುಕ್ತವಾದ ಗುಣವು ಉತ್ತಮರ ಅಧೀನವೆಂಬುದು ಸುತರಾಂ ಸಿದ್ಧವು. (ಸ್ವಾಭಾವಿಕವಾದ ತಂತಮ್ಮ ಗುಣವನ್ನು ಇಟ್ಟುಕೊಂಡು ಹೇಳಿದ ಕಾರಣ ಹಿಂದೆ ಹೇಳಿದ ನಿಯಮಕ್ಕೆ ಭಂಗವಿಲ್ಲ.) (ಅಥವಾ ಅಧಮರಿಗೆ ಕ್ಲೃಪ್ತಗಳಾದ ಗುಣಗಳಿಗಿಂತ ಹೆಚ್ಚು ಸಂಖ್ಯೆ ಹೇಳಿದ್ದು ಆವೇಶವಿಶೇಷವಿದ್ದ ಪ್ರಯುಕ್ತ ಎಂದು ಹೇಳಿದರು. ಈಗ ಉತ್ತಮರಿಗೆ ಕ್ಲೃಪ್ತಗಳಾದ ಗುಣಗಳಿಗಿಂತ ಹೆಚ್ಚು ಸಂಖ್ಯೆ ಹೇಳಲಿಕ್ಕೆ ಕಾರಣ ಕೇಳುತ್ತಾರೆ.) ಅಧಮರ ಗುಣಗಳೂ ಉತ್ತಮರ ಅಧೀನಗಳೆಂದು ಇಟ್ಟುಕೊಂಡು ಉತ್ತಮರಿಗೆ ಕ್ಲೃಪ್ತಗಳಾದ ಗುಣಗಳಿಗಿಂತ ಹೆಚ್ಚು ಗುಣಗಳಿವೆ ಎಂದು ಹೇಳಿದ್ದು. (೩) (ಪ್ರಾಣನಿಗಿಂತ ಶ್ರೇಷ್ಠನಿದ್ದಾನೋ ಎಂಬ ಪ್ರಶ್ನೆಗೆ **ಸತ್ಯಂ ವಾವ ಪ್ರಾಣಾದ್ಭೂಯಃ** ಸತ್ಯನು ಶ್ರೇಷ್ಠನಿದ್ದಾನೆಂಬ ಅಧ್ಯಾಹೃತವಾಕ್ಯದಲ್ಲಿಯೂ ನಾಮಾದಿ ಪ್ರಾಣಪರ್ಯಂತ ರಾದವರಲ್ಲಿ ಪರಿಮಿತಿಯಿದ್ದಂತೆಯೇ ಇಲ್ಲಿಯೂ ಗುಣಗಳಿಗೆ ಪರಿಮಿತಿಯಿದೆ. ಎಂಬ ಶಂಕೆಯನ್ನು ಪರಿಹರಿಸುತ್ತಾರೆ.) ಆ ಪ್ರಾಣನಿಗಿಂತಲೂ ವಿಷ್ಣುವು ಅನಂತಗುಣಗಳು ಹೆಚ್ಚು ಇರುವವನು, ನಿತ್ಯಮುಕ್ತನು, ನಿತ್ಯಶಕ್ತಿಯುಳ್ಳವನು, ನಿತ್ಯದಲ್ಲಿಯೂ ಪೂರ್ಣಗುಣಗಳುಳ್ಳವನು, ಸರ್ವರಿಗೆ ಸ್ವಾಮಿಯು, ಎಂದು ತತ್ತ್ವವಿವೇಕದಲ್ಲಿ ಹೇಳಿದೆ. (೪) (ನಾಮಾದಿ ಪ್ರಕರಣವು ಮುಕ್ತಿಯಲ್ಲಿಯೂ ತಾರತಮ್ಯವನ್ನು ಹೇಳುತ್ತ ದೆಂದು ಪ್ರಮಾಣವನ್ನು ದಾಹರಿಸಿ ಹೇಳಿದರು. ಆ ವಿಷಯದಲ್ಲಿ ತೈತ್ತಿರೀಯ ವೇದವನ್ನೂ ಹೇಳುತ್ತಾರೆ) ಮೋಕ್ಷವನ್ನು ಹೊಂದಿದವರ ಆನಂದ ವಿಚಾರವು ಮಾಡಲ್ಪಡುತ್ತದೆ. ಇದು ಮೊದಲಾದ ಪ್ರಮಾಣಗಳಿಂದ ಮೋಕ್ಷದಲ್ಲಿಯೂ ತಾರತಮ್ಯವಿದೆ ಎಂದು ಸಿದ್ಧವಾಯಿತು. ॥ ೪ ॥

ಟೀ—ತೈತ್ತಿರೀಯ ಉಪನಿಷತ್ತಿನಲ್ಲಿಯೂ ನಾಮಾದಿಗಳಲ್ಲಿ ತಾರತಮ್ಯ ಕ್ರಮವನ್ನು ಹೇಳದಿರುವುದರಿಂದ ನಾಮಾದಿಗಳಿಗೇನೇ ಮೋಕ್ಷದಲ್ಲಿ ತಾರತಮ್ಯವನ್ನು ಹೇಳತಕ್ಕ ಇನ್ನೊಂದು ವೇದವನ್ನು ಹೇಳುತ್ತಾರೆ—

ಭಾ. ॥ (೧) ಅಥಾತಃ ಸಂಭೂತಿಃ ಪರಮಾದ್ವಿದ್ಯಾ ವಿದ್ಯಾಯಾಃ ಪ್ರಾಣಃ ಪ್ರಾಣಾಚ್ಛ್ರದ್ಧಾ ಶ್ರದ್ಧಾಯಾಃ ಶಿವಶ್ಶಿವಾದ್ಬುದ್ಧಿರ್ಬುದ್ಧೇರಿಂದ್ರ ಇಂದ್ರಾತ್ತೈಜಸಃ ಪ್ರಾಣಸ್ತೈಜಸಾದನಿರುದ್ಧೋಽನಿರುದ್ಧಾತ್ ಸ್ಪರ್ಶವಾತಃ ಸ್ಪರ್ಶವಾತಾತ್ಸೋಮಸ್ಸೋಮಾದ್ವರುಣೋ ವರುಣಾದಗ್ನಿರಗ್ನೇರ್ಮಿತ್ರೋ ಮಿತ್ರಾತ್ಪರ್ಜನ್ಯಃ ಪರ್ಜನ್ಯಾತ್ ಸ್ವಾಹಾ ಸ್ವಾಹಾಯಾ ಉಷಾ ಜಾಯತೇ ತೇಷಾಂ ಪರಃ ಪರೋ ಜ್ಯಾಯಾನ್ಗುಣೈರುತ್ತರ ಉತ್ತರಃ ಪ್ರತ್ಯವರಃ ಪರಸ್ಮಾತ್ಪರಸ್ಮಾದುತ್ತರ ಉತ್ತರೋ ಮುಚ್ಯತೇ ಸ್ವಂ ಸ್ವಂ ಭಾವಮಾಪದ್ಯತೇ ॥ (೨) ನೈಷಾಂ ಪಾರಾವರ್ಯಮುಚ್ಛಿದ್ಯತೇ ಕದಾಚನ ನೈಷಾಂ ಪಾರಾವರ್ಯಮುಚ್ಛಿದ್ಯತೇ ಕುತಶ್ಚನ ಪಾರಾವರ್ಯೇಣ ಬ್ರಹ್ಮೋಪಯಂತಿ ಪಾರಾವರ್ಯೇಣೈವ ಮುಕ್ತಾಃ ಸಂಚರಂತಿ । ಇತ್ಯಾದಿಶ್ರುತೇಶ್ಚ ॥ (೩) ನಾಮಾದಿಮಾರುತಾಂತೇಷು ದೇವೇಷ್ವೇಭ್ಯಶ್ಚ ಭೇದತಃ । ಉಪಾಸಿತೋ ಹರಿರ್ಮುಕ್ತಿಂ ದದ್ಯಾನ್ನಾಸ್ತ್ಯತ್ರ ಸಂಶಯಃ ॥ ಇತಿ ಸತ್ತತ್ತ್ವೇ ॥ ೫ ॥

ಅ ॥ (೧) ಇನ್ನು ಮುಂದೆ ಉತ್ಪತ್ತಿಯು ಹೇಳಲ್ಪಡುತ್ತದೆ. ಸರ್ವೋತ್ತಮನಾದ ಶ್ರೀಹರಿಯಿಂದ ಲಕ್ಷ್ಮೀದೇವಿಯು (ರೂಪಾಂತರದಿಂದ) ಪ್ರಕಟಳಾದಳು ಲಕ್ಷ್ಮೀದೇವಿಯಿಂದ ಮುಖ್ಯಪ್ರಾಣನೂ, ಆತನಿಂದ ಭಾರತಿಯೂ, ಅವಳಿಂದ ಶಿವನು, ಶಿವನಿಂದ ಪಾರ್ವತಿಯೂ, ಪಾರ್ವತಿಯಿಂದ ಇಂದ್ರನು, ಇಂದ್ರನಿಂದ ಅಹಂಕಾರಿಕ ಪ್ರಾಣನೂ, ಆತನಿಂದ ಅನಿರುದ್ಧನೂ ಅನಿರುದ್ಧನಿಂದ ಸ್ಪರ್ಶಕ್ಕೆ ಅಭಿಮಾನಿಯಾದ ಪ್ರವಹವಾಯುವೂ, ಪ್ರವಹ ವಾಯುವಿನಿಂದ ಚಂದ್ರನೂ, ಚಂದ್ರನಿಂದ ವರುಣನೂ ವರುಣನಿಂದ ಅಗ್ನಿಯೂ, ಅಗ್ನಿಯಿಂದ ಮಿತ್ರನೂ, ಮಿತ್ರನಿಂದ ಪರ್ಜನ್ಯನೂ ಪರ್ಜನ್ಯನಿಂದ ಸ್ವಾಹಾದೇವಿಯೂ,

ಸ್ವಾಹಾದೇವಿಯಿಂದ ಉಷಾದೇವಿಯೂ ಹುಟ್ಟುತ್ತಾಳೆ. ಹೇಳಿದವರ ಮಧ್ಯದಲ್ಲಿ ಮೊದಲುನೊದಲು ಹೇಳಲ್ಪಟ್ಟವರು ಗುಣಗಳಿಂದ ಶ್ರೇಷ್ಠರು. ಹೆಚ್ಚೆಚ್ಚು ಗುಣವುಳ್ಳವರು ಮೇಲೆಮೇಲೆ ಹೇಳಿದವರು ಅಧಮರು, ಮೊದಲುಮೊದಲಿನವರಿಂದ ಮೇಲುಮೇಲಿನವರು ಮುಕ್ತರಾಗುತ್ತಾರೆ. (ಅಂದರೆ **ಮುಕ್ತಿರ್ಹಿತ್ವಾನ್ಯಥಾರೂಪಂ ಸ್ವರೂಪೇಣ ವ್ಯವಸ್ಥಿತಿಃ** ಎಂಬ ಪ್ರಮಾಣಾನುಸಾರ.) ತಮ್ಮತಮ್ಮ ರೂಪವನ್ನು ಹೊಂದುತ್ತಾರೆ. (೨)(ಈ ತಾರತಮ್ಯವು ಮೋಕ್ಷದಲ್ಲಿಯೂ ಇದೆ ಎನ್ನುತ್ತಾರೆ) ಈ ದೇವತೆಗಳಲ್ಲಿ ನೀಚೋಚ್ಚಭಾವವು ಯಾವಾಗಲೂ ನಾಶವಾಗುವುದೇ ಇಲ್ಲ. ಈ ತಾರತಮ್ಯವು ಯಾವುದರಿಂದಲೂ ನಾಶವಾಗುವುದಿಲ್ಲ. ತಾರತಮ್ಯದಿಂದಲೇ ಪರಬ್ರಹ್ಮನನ್ನು ಹೊಂದುತ್ತಾರೆ. ತಾರತಮ್ಯದಿಂದಲೇ ಮುಕ್ತರಾಗಿ ತಿರುಗಾಡುತ್ತಾರೆ. ಇದು ಮೊದಲಾದ ವೇದಗಳು ಇವೆ (೩)**ನಾಮಬ್ರಹ್ಮೇತ್ಯುಪಾಸ್ವ** ಎಂದಾರಂಭಿಸಿ **ಪ್ರಾಣೋ ಬ್ರಹ್ಮೇತ್ಯುಪಾಸ್ವ** ಎಂಬಪರ್ಯಂತ ಬಹುಸ್ಥಳಗಳಲ್ಲಿ ಒಂದೇ ರೀತಿಯಾದ ವಿಧಕ್ತಿಯು ತೋರುವುದರಿಂದ ನಾಮಕ್ಕೂ ಬ್ರಹ್ಮನಿಗೂ ಅಭೇದವೆಂದೇ ಉಪಾಸನೆಮಾಡಬೇಕು, ಎಂಬ ಪ್ರತೀತಿಯನ್ನು ಹೋಗಲಾಡಿಸುತ್ತಾ ಆ ವಾಕ್ಯಗಳಿಗೆ ಅರ್ಥ ಹೇಳುತ್ತಾರೆ—) ನಾಮವನ್ನಾ ರಂಭಿಸಿ ಮುಖ್ಯಪ್ರಾಣಪರ್ಯಂತ ದೇವತೆಗಳಲ್ಲಿ ಶ್ರೀಹರಿಯು ಅಂತರ್ಗತನ., ಮತ್ತು ಈ ದೇವತೆಗಳಿಂದ ಭಿನ್ನನಾಗಿದ್ದಾನೆಂದೂ ಉಪಾಸನೆಮಾಡಿದರೆ ಮೋಕ್ಷವನ್ನು ಕೊಡುವನು. ಈ ವಿಷಯದಲ್ಲಿ ಸಂದೇಹವಿಲ್ಲ, ಎಂದು ಸತ್ತತ್ವದಲ್ಲಿದೆ. ॥ ೫ ॥

ಪೀ—ನಾಮಾರಭ್ಯ ಪ್ರಾಣಪರ್ಯಂತರಾದವರಲ್ಲಿ ಪರಬ್ರಹ್ಮನನ್ನು ಉಪಾಸನೆಮಾಡಬೇಕೆಂದು ಹೇಳಿದ್ದು ಯುಕ್ತವಲ್ಲ, ನಾಮಾದಿಗಳಲ್ಲಿ ನೀಚೋಚ್ಚಭಾವವಿದ್ದುದರಿಂದ ಅವರೊಳಗಣ ಬ್ರಹ್ಮನಿಗೂ ನೀಚೋಚ್ಚಭಾವವು ಬರಬೇಕಾಗುವುದೆಂಬ ಆಶಂಕೆಯನ್ನು ಸ್ಮೃತಿಪ್ರಮಾಣ ಹೇಳಿ ಪರಿಹರಿಸುತ್ತಾರೆ—

ಭಾ. ॥ (೧) ಉಷಾದಿಮಾರುತಾಂತೇಷು ಸಮಃ ಸಮಗುಣೋಽಪಿ ಸನ್ । ಧ್ಯಾತಃ ಪ್ರೀತಿಂ ಹರಿರ್ಯಾಯಾದಧಿಕಾಮುತ್ತರೋತ್ತರೇ॥ (೨) ಉತ್ತಮೇಷೂತ್ತಮಾ ಪ್ರೀತಿಸ್ತಸ್ಯ ತತ್ರ ಸ್ಮೃತಸ್ತತಃ। ಧ್ಯಾತುರಪ್ಯುತ್ತಮಾಂ ಪ್ರೀತಿಂ ಯಾಯಾನ್ನಾತ್ರಸ್ತ್ರ ಸಂಶಯಃ ॥ (೩) ತಾರತಮ್ಯಪರಿಜ್ಞಾನಾತ್ತೇಷು ಧ್ಯಾತೋ ವಿಮುಕ್ತಿದಃ । ಪ್ರೀತಿಂ ನ ಚಾನ್ಯಥಾ ಯಾಯಾದಿತಿ ಶಾಸ್ತ್ರಸ್ಯ ನಿರ್ಣಯಃ॥ ಇತಿ ತತ್ತ್ವವಿನೇಕೇ ॥ ೬ ॥

ಅ ॥ (೧) ಉಷಾದೇವಿಯನ್ನಾ ರಂಭಿಸಿ ಮುಖ್ಯವಾಯು ಪರ್ಯಂತ ದೇವತೆಗಳಲ್ಲಿ ಶ್ರೀಹರಿಯು ಸ್ವರೂಪದಿಂದ ವ್ಯತ್ಯಾಸವಿಲ್ಲದೆ ಸಮಗುಣಗಳುಳ್ಳವನಾಗಿ ನಿರ್ದೋಷಿಯಾಗಿದ್ದಾನೆಂದು. ಆತನನ್ನು ಜೀವರು ಧ್ಯಾನಿಸಿದರೆ ಪರಮಾತ್ಮನು ಪ್ರೀತಿಯನ್ನು ಹೊಂದುತ್ತಾನೆ. ಉತ್ತಮೋತ್ತಮರಲ್ಲಿ ಧ್ಯಾನಿಸಿದರೆ ಆತನಿಗೆ ಹೆಚ್ಚು ಪ್ರೀತಿಯಾಗುತ್ತದೆ. (೨) (ಅಮ ಹೇಗೆಂದರೆ) ಶ್ರೀಹರಿಗೆ ಉತ್ತಮರಾದ ದೇವಾದಿಗಳಲ್ಲಿ ಉತ್ಕೃಷ್ಟವಾದ ಪ್ರೀತಿಯಿರುವುದರಿಂದ ಉತ್ತಮರಲ್ಲಿ ವಿಷ್ಣುವನ್ನು ಸ್ಮರಿಸಿದರೆ ಧ್ಯಾನಿಸಿದವನಿಗೆ ಉತ್ತಮವಾದ ಪ್ರೀತಿಯನ್ನು ಶ್ರೀಹರಿಯು ಮಾಡುವನು. ಸಂದೇಹವಿಲ್ಲ (೩) (ಉತ್ತಮೋತ್ತಮರಲ್ಲಿ ಶ್ರೀಹರಿಯ ಉಪಾಸನೆ ಮಾತ್ರ ಫಲಹೇತುವೆಂದಲ್ಲ. ಪರಂತು ತಾರತಮ್ಯಜ್ಞಾನವೂ ಆವಶ್ಯಕವೆನ್ನುತ್ತಾರೆ.) ಆ ದೇವತೆಗಳಲ್ಲಿ ತಾರತಮ್ಯಜ್ಞಾನವನ್ನು ಬಿಡದೆ ಶ್ರೀಹರಿಯನ್ನು ಧ್ಯಾನಿಸಿದರೆ ಧ್ಯಾನದಿಂದ ಪ್ರೀತನಾದ ಶ್ರೀಹರಿಯು ಮೋಕ್ಷವನ್ನು ಕೊಡುತ್ತಾನೆ. ತಾರತಮ್ಯ ಪರಿಜ್ಞಾನವಿಲ್ಲದೆ ಧ್ಯಾನಿಸಿದರೆ ಪ್ರೀತಿಯನ್ನು ಹೊಂದಲಾರನು. ಎಂದು ಸರ್ವಶಾಸ್ತ್ರಾರ್ಥಗಳ ನಿರ್ಣಯವು, ಎಂದು ತತ್ತ್ವವಿವೇಕದಲ್ಲಿದೆ. ॥ ೬ ॥

ಪೀ—**ನಾಮ ಬ್ರಹ್ಮೇತ್ಯುಪಾಸೀತ** ಇತ್ಯಾದಿಗಳಲ್ಲಿ ನಾಮದಲ್ಲಿ ಬ್ರಹ್ಮನನ್ನು ಪಾಸನೆಮಾಡಬೇಕೆಂದು ನಾಮಾದಿ ಶಬ್ದಗಳಿಗೆ ಸಪ್ತಮ್ಯರ್ಥಹೇಳಿದ್ದಾರೆ. ಅದನ್ನೇ ಸ್ಪಷ್ಟಪ್ರಮಾಣದಿಂದ ದೃಢೀಕರಿಸುತ್ತಾ ಬೇರೆ ಅರ್ಥವನ್ನು ಹೇಳುತ್ತಾರೆ—

ಭಾ. ॥ (೧) ನಾಮಾದಿಪ್ರಾಣಪರ್ಯಂತಾಸ್ಸಪ್ತಮ್ಯರ್ಥಾಃ ಪ್ರಕೀರ್ತಿತಾಃ । ತೃತೀ-ಯಾಪಂಚಮೀಷಷ್ಠೀಚತುರ್ಥ್ಯರ್ಥಾರ್ಚ್ಚ ಸರ್ವಶಃ । ಶಬ್ದಾಸ್ತೇ ಬ್ರಹ್ಮಶಬ್ದೇನ ಸಂಬಧ್ಯೇ-ಯುರ್ಯದಾ ತದಾ ॥ (೨) ಬ್ರಾಹ್ಮಣೋಽಸ್ಯ ಮುಖಂ ಯದ್ವದಾತ್ಮಾ ವೈ ಪುತ್ರಕೋ ಯಥಾ । ಯಥಾ ಚ ಯೂಪ ಆದಿತ್ಯ ಏವಮೇಷ ಪ್ರಕೀರ್ತಿತಃ ॥ (೩) ಸಪ್ತಸು ಪ್ರಥಮಾ ಯಸ್ಮಾದ್ಭೂಯೋಭೂಯಸ್ತ್ವತಸ್ತಥಾ । ಷಟ್ಸು ದ್ವಿತೀಯಾ ಯಸ್ಮಾಚ್ಚ ಕಾರಣತ್ವಾತ್ಪರಸ್ಯ ಚ ॥ (೪) ನ ಹ್ಯನ್ಯದನ್ಯದಿತ್ಯೇವ ಧ್ಯಾತಂ ಸ್ಯಾತ್ಪುರುಷಾರ್ಥದಂ । ಅನರ್ಥಶ್ಚ ಭವೇತ್ತ-ಸ್ಮಾದ್ಭೃತ್ಯೇ ರಾಜೇತಿ ಭೋಗವತ್ ॥ (೫) ರಾಜಪೂಜಾಂ ಯಥಾ (ದಾ) ಭೃತ್ಯೇ ಕು-ರ್ಯಾದ್ರಾಜಾ ಹಿನಸ್ತಿ ಹಿ । ತದ್ವಶತ್ವಾತ್ತಥಾ ಭೃತ್ಯ ಏವಂ ನಾಮಾದಿಕಂ ಚ ಯಃ ॥ ಉಪಾಸ್ತೇ ಬ್ರಹ್ಮರೂಪೇಣ ತಂ ಬ್ರಹ್ಮಾಭೇತರಾಣಿ ಚ । ಪಾತಯಂತಿ ತಮಸ್ಯಂಧೇ ತಸ್ಮಾ ನ್ನೇಕ್ಷೇತ ತಾಂಸ್ತಥಾ ॥ ಇತಿ ಸಾಮಸಂಹಿತಾಯಾಂ ॥ ೭ ॥

ಅ ॥ (೧) **ನಾಮ** ಎಂಬ ಶಬ್ದವನ್ನಾರಂಭಿಸಿ **ಪ್ರಾಣ** ಪರ್ಯಂತ ಎಲ್ಲಾ ಶಬ್ದಗಳೂ ಸಪ್ತಮೀ ವಿಭಕ್ತಿಯ ಅರ್ಥವುಳ್ಳವುಗಳೆಂದು ಹೇಳಲ್ಪಟ್ಟಿದೆ. ಹಾಗೆಯೇ ತೃತೀಯಾ, ಪಂಚಮೀ, ಷಷ್ಠೀ ಚತುರ್ಥೀ ವಿಭಕ್ತಿಯ ಅರ್ಥವುಳ್ಳವುಗಳು (ಅಂದರೆ ತೃತೀಯಾ ವಿಭಕ್ತಿಯ ಅರ್ಥ ಇಟ್ಟುಕೊಂಡರೆ ನಾಮದಿಂದ ಪರ ಬ್ರಹ್ಮನನ್ನು ಪಾಸನೆಮಾಡು ಎಂದೂ, ಪಂಚಮ್ಯರ್ಥ ಎಂದು ಇಟ್ಟುಕೊಂಡರೆ ನಾಮದೆಶೆಯಿಂದ ಅಭಿವ್ಯಕ್ತನು ಪರಬ್ರಹ್ಮನು ಎಂದೂ ಷಷ್ಠ್ಯರ್ಥವೆಂದು ಇಟ್ಟುಕೊಂಡರೆ—ನಾಮಕ್ಕೆ ಪ್ರೀತಿವಿಷಯನು ಬ್ರಹ್ಮನೆಂದೂ, ಚತುರ್ಥ್ಯರ್ಥ ಎಂದು ಇಟ್ಟುಕೊಂಡರೆ ನಾಮಕ್ಕೆ ಫಲವನ್ನು ಕೊಡುವವನು ಬ್ರಹ್ಮನೆಂದೂ ಇಟ್ಟುಕೊಳ್ಳಬೇಕು.) **ನಾಮ** ಮೊದಲುಗೊಂಡು **ಪ್ರಾಣ** ಪರ್ಯಂತ ಶಬ್ದಗಳು ಎಲ್ಲಿ ಬ್ರಹ್ಮಶಬ್ದದಿಂದೊಡಗೂಡಿ ಇರುತ್ತವೋ, ಅಲ್ಲಿಯೇ ಸಪ್ತಮ್ಯಾದಿ ವಿಭಕ್ತಿಗಳ ಅರ್ಥ ಇಟ್ಟುಕೊಳ್ಳಬೇಕು (**ಯದ್ವೈ ಕಿಂಚಿದಧ್ಯಗೀಷ್ಮ ನಾಮೈವೈತತ್** ಇತ್ಯಾದಿಗಳಲ್ಲಿ ಇದ್ದ **ನಾಮ** ಶಬ್ದಕ್ಕೆ ಸಪ್ತಮ್ಯಾದ್ಯರ್ಥವಲ್ಲ.) (೨) (ಪ್ರಯೋಗವಿಲ್ಲದಿರುವುದರಿಂದಲೂ ನಿಯಾಮಕವಿಲ್ಲದಿರುವುದರಿಂದಲೂ ಪ್ರಥಮಾವಿಭಕ್ತಿಗೆ ಸಪ್ತಮ್ಯಾದಿ ವಿಭಕ್ತಿಗಳ ಅರ್ಥವಿದೆ, ಎಂಬುದು ಯುಕ್ತವಲ್ಲವೆಂದರೆ (1) **ಬ್ರಾಹ್ಮಣೋಽಸ್ಯ ಮುಖಂ** ಎಂಬಲ್ಲಿ **ಮುಖಂ** ಎಂಬ ಪ್ರಥಮಾವಿಭಕ್ತಿಗೆ ಶ್ರೀಹರಿಯ ಮುಖದೆಶೆಯಿಂದ ಎಂದು ಪಂಚಮ್ಯರ್ಥವಿದೆ (೩) **ಆತ್ಮಾ ವೈ ಪುತ್ರನಾಮಾಸಿ** ಎಂಬಲ್ಲಿ **ಆತ್ಮಾ** ಎಂಬ ಪ್ರಥಮಾ ವಿಭಕ್ತಿಗೆ ತನ್ನ ಮಗನು ಎಂದು ಷಷ್ಠ್ಯರ್ಥವಿದೆ. (3) **ಆದಿತ್ಯೋ ಯೂಪಃ** ಎಂಬಲ್ಲಿದ್ದ ಯೂಪಃ ಎಂಬ ಪ್ರಥಮಾವಿಭಕ್ತಿಗೆ ಯೂಪ (ಯಜ್ಞಸ್ತಂಭ) ದಲ್ಲಿ ಆದಿತ್ಯನಂತೆ ಪ್ರಕಾಶವೆಂದು ಸಪ್ತಮ್ಯರ್ಥವೆಂದು ಹೇಳಿದೆ ಆದರಂತೆಯೇ ಇಲ್ಲಿಯೂ ನಾಮಾದಿಶಬ್ದಗಳಿಗೆ ಪಂಚಮ್ಯಾದಿ ವಿಭಕ್ತಿಗಳ ಅರ್ಥವಿದೆ (೩) (ನಿಯಾಮಕ ಸೂತ್ರವನ್ನು ಹೇಳುತ್ತಾರೆ) ಏಳು ವಿಭಕ್ತಿಗಳಲ್ಲಿಯೂ ಪ್ರಥಮಾ ವಿಭಕ್ತಿಯಿದೆ (**ನಾಮು ಬ್ರಹ್ಮೇತ್ಯುಪಾಸೀತ** ಎಂದು ನಾಮಾದಿಗಳಿಗೆ ಉಪಾಸತೆಃ ತೋರುವ ಬ್ರಹ್ಮೈಕ್ಯವೇ ಅರ್ಥವೆಂದು ಏಕೆ ಅಗಲಾರದೆಂದರೆ–**ವಾಗ್ವಾವ ನಾಮ್ನೋ ಭೂಯಸೀ** ಇತ್ಯಾದಿಗಳಿಂದ ವಾಗಾದಿಗಳಿಗೆ ನಾಮಾದಿಗಳಿಗಿಂತ ಮೇಲೆಮೇಲಿನವುಗಳಿಗೆ ಶ್ರೇಷ್ಠತ್ವವನ್ನು ಹೇಳಿದೆ. (ಪರಬ್ರಹ್ಮವು ನಾಮಾದಿರೂಪನೆಂದು ಹೇಳಿದರೆ–ಪರಬ್ರಹ್ಮನಿಗೇನೇ ಉತ್ತಮತ್ವವೂ ಅಧಮತ್ವವೂ ಬರಬೇಕಾಗುವುದು. ಅದುಕಾರಣ ನಾಮಾದಿಗಳಿಗೆ ಬ್ರಹ್ಮನಿಂದ ಏಕ್ಯ ಹೇಳಕೂಡದು.) (**ಮನೋ ಹಿ ಬ್ರಹ್ಮ** ಇತ್ಯಾದಿ ವಾಕ್ಯಗಳಿಗೆ ಹೀಗೆಅರ್ಥವಿರಲಿ. **ಸಯೋ ನಾಮ ಜ್ರಹ್ಮೇತ್ಯುಪಾಸ್ತೇ ವಾಜಂ ಬ್ರಹ್ಮೇತ್ಯುಪಾಸ್ತೇ** ಇದುಮೊದಲಾದ ವಾಕ್ಯಗಳಿಗೆ ಅರ್ಥ ಹೇಗೆ ಮಾಡುವುದು. ಪ್ರಥಮಾ ವಿಭಕ್ತಿಗೆ ಸಪ್ತಮೀ ವಿಭಕ್ತ್ಯಾದಿಗಳ ಅರ್ಥಮಾಡಬೇಕೆಂಬಲ್ಲಿ ಶ್ರಮಾಣವಿದ್ದಂತೆ **ನಾಮು ವಾಜಂ** ಎಂಬ ದ್ವಿತೀಯಾ ವಿಭಕ್ತಿಗೆ ಸಪ್ತಮೀ

ವಿಭಕ್ತ್ಯಾದಿಗಳ ಅರ್ಥಮಾಡಬೇಕೆಂಬಲ್ಲಿ ಪ್ರಮಾಣವಿಲ್ಲವೆಂದರೆ—) ದ್ವಿತೀಯಾ ವಿಭಕ್ತಿಯು ಆರು ವಿಭಕ್ತಿಗಳ ಅರ್ಥದಲ್ಲಿಯೂ ಇದೆ, ಎಂದು ಸೂತ್ರವು. (ಮತ್ತು **ನಾಮರೂಪೇ ವ್ಯಾಕರೋತ್** ಎಂಬ ಪ್ರಮಾಣದಿಂದ) ಶ್ರೀಹರಿಯು ನಾಮಾದಿಗಳ ಉತ್ಪತ್ತಿಗೆ ಕಾರಣನೂ ಆಗಿದ್ದಾನೆ. (ಆದಕಾರಣ ಬ್ರಹ್ಮನು ನಾಮಾದ್ಯಾತ್ಮಕನೆಂದು ಆಂಗೀಕರಿಸಕೂಡದು.) (೪) (ಪರಬ್ರಹ್ಮನು ನಾಮಾದಿರೂಪನೆಂದು ನಾವು ಹೇಳುವುದಿಲ್ಲ, ಪರಂತು ನಾಮಾದಿರೂಪನೆಂದು ಧ್ಯಾನಿಸಬೇಕೆಂದು ಹೇಳುತ್ತೇವೆ. ಇಲ್ಲದಿರುವ ವಸ್ತುವನ್ನು ಧ್ಯಾನಿಸಬಹುದೆಂದರೆ) ಅಧಮನನ್ನು ಉತ್ತಮನೆಂದು ಧ್ಯಾನಿಸಿದರೆ—ಪುರುಷಾರ್ಥವು ಸಿಗಲಾರದು. ಅಧಮನನ್ನು ಉತ್ತಮನೆಂದು ಧ್ಯಾನಿಸಿದುದರಿಂದ ಪುರುಷಾರ್ಥವು ಆಗದಿರುವುದು ಮಾತ್ರವಲ್ಲ, ಪರಂತು ರಾಜನ ಭೃತ್ಯನನ್ನು ರಾಜನೆಂದು ಧ್ಯಾನಿಸಿದರೆ ಅನರ್ಥವಿದ್ದಂತೆ ಇಲ್ಲಿಯೂ ಅನರ್ಥವುಂಟಾಗುವುದು. (೫) (ನಾಮಾದಿಗಳು ಬ್ರಹ್ಮ ಎಂದು ಧ್ಯಾನಿಸಬೇಕೆಂದು ನಾವು ಹೇಳುವುದಿಲ್ಲ, ಪರಂತು ಬ್ರಹ್ಮನಲ್ಲಿ ಪೂಜಿಸಿದಂತೆ ನಾಮಾದಿಗಳಲ್ಲಿ ಪೂಜೆಮಾಡಬೇಕು, ಎನ್ನುತ್ತೇವೆ, ಎಂದರೆ ಹಾಗೆ ಹೇಳಿದರೂ ಅನರ್ಥವಿದೆ, ಎಂದು ದೃಷ್ಟಾಂತಕೊಟ್ಟು ಹೇಳುತ್ತಾರೆ) ಯಾರು ರಾಜನಿಗೆ ಮಾಡತಕ್ಕ ಪೂಜೆಯನ್ನು ಭೃತ್ಯನಿಗೆ ಮಾಡುತ್ತಾನೋ, ಆತನನ್ನು ರಾಜನು ಹಿಂಸಿಸುತ್ತಾನೆ. ಹಾಗೆಯೇ ಭೃತ್ಯನೂ ರಾಜನ ಅಧೀನದಲ್ಲಿದ್ದುದರಿಂದ ರಾಜನೆಂದು ತನಗೆ ಪೂಜೆಮಾಡಿದವರನ್ನು ಕೊಲ್ಲುತ್ತಾನೆ. (ಇಲ್ಲವಾದರೆ ರಾಜನನ್ನು ಲಂಘಿಸಿದುದರಿಂದ ತಾನು ಅಪರಾಧಿಯಾದಾನು.) ಹಾಗೆಯೇ ಯಾರು ನಾಮಾದಿಗಳನ್ನು ಬ್ರಹ್ಮನೆಂದು ಪೂಜಿಸುತ್ತಾನೋ, ಆತನನ್ನು ಬ್ರಹ್ಮನೂ ನಾಮಾದಿಗಳೂ ಅಂಧಂತಮಸ್ಸಿನಲ್ಲಿ ಕೆಡಹುವರು. ಆದುಕಾರಣ ನಾಮಾದಿಗಳನ್ನು ಬ್ರಹ್ಮನೆಂದು ಪೂಜಿಸಬಾರದು, ಎಂದು ಸಾಮಸಂಹಿತೆಯಲ್ಲಿ ಹೇಳಿದೆ. ॥ ೭ ॥

ಪೀ—ನಾಮವನ್ನಾರಂಭಿಸಿ ಪ್ರಾಣಪರ್ಯಂತವಾದುದು ಅದ್ವೈತಿಗಳ ಮತದಲ್ಲಿ ಅಜೇತನ (ಜಡ) ಎಂದಿದೆ. ಜಡವನ್ನು ಬ್ರಹ್ಮನೆಂದು ಉಪಾಸನೆ ಮಾಡಿದರೆ ಫಲವು ಸಿಗಲಾರದೆನ್ನುತ್ತಾರೆ—

ಭಾ. ॥ (೧) ಅಚೇತನಮಯೋಗ್ಯಂ ಚ ತಥೈವಾತಾತ್ವಿಕಂ ಕ್ವಚಿತ್ । ನೋಪಾಸೀತ ಪರೋಽನರ್ಥಃ ಸ್ಯಾತ್ತಥೋಪಾಸನಾಕೃತಃ ॥ (೨) ದರ್ಭಚರ್ಮೋದಯಶ್ಚಾತೋ ದೇವತಾ ಹ್ಯಭಿಮಾನಿನಃ । ನ ಹ್ಯಚೇತನಕಂ ಕಿಂಚಿತ್ಫಲದಂ ಸ್ಯಾತ್ಕದಾಚನ ॥ (೩) ಔಷಧಾದಿಷು ಚೈತಸ್ಯಾದ್ದೇವಾ ಏವ ವರಪ್ರದಾಃ । ಔಷಧಾದಿಸ್ಥಿತಾ ದೇವಾಸ್ತೇಽಜ್ಞೇ ದೃಷ್ಟಫಲಪ್ರದಾಃ । ಜ್ಞಾನಿನ್ಯದೃಷ್ಟದಾಶ್ಚ ಸ್ಯುರ್ನಾದೈವಂ ಕಿಂಚಿದಿಷ್ಯತೇ ॥ (೪) ಯಥಾಜ್ಞಸ್ಯಾಪಿ(ಸ್ಯೈವ) ರಾಜ್ಞಸ್ತು ಭೋಜನಂ ಕ್ಲೃಪ್ತಮಿಷ್ಯತೇ । ನ ತ್ವವಿಜ್ಞಾಯ ರಾಜಾನಂ ಗ್ರಾಮಪ್ರಾಪ್ತಿಸ್ತತೋ ಭವೇತ್ ॥ (೫) ಏವಂ ದೇವಾ ದೃಷ್ಟಫಲಂ ದದ್ಯುರಜ್ಞಸ್ಯ ಚಾಲ್ಪತಃ । ಕಿಂಚಿಜ್ಜ್ಞಾನಕೃತಾದೃಷ್ಟಾತ್ತಚ್ಚ ನೈವಾನ್ಯಥಾ ಭವೇತ್ । ಅದೃಷ್ಟಾಖ್ಯಂ ಫಲಂ ಯತ್ತು ತಜ್ಜ್ಞಸ್ಯೈವ ನ ಚಾನ್ಯಗಂ ॥ (೬) ತಸ್ಮಾದಚೇತನೋಪಾಸಾಂ ನ ಕುರ್ಯಾತ್ ಕ್ವಾಪಿ ಕಶ್ಚನ । ನ ಚಾಸತ್ಯಾಂ ನ ಚಾಯೋಗ್ಯಾಂ ಯದೀಚ್ಛೇದುತ್ತಮಂ ಫಲಂ । ಯದಿ ನೇಚ್ಛೇತ್ತಮೋ ಗಂತುಂ ಯದಿ ಚೇಚ್ಛೇದ್ದ ರೇಃ ಪ್ರಿಯಂ ॥ (೭) ಅಥ ಕರ್ತವ್ಯಕಾರೀ ಚ ಮುಮುಕ್ಷುರಥವಾ ಭವೇತ್ । ಸೋಽಪೀಚ್ಛೇತ ಹರೇಃ ಪ್ರೀತಿಂ ನಾತ್ರ ಕಾರ್ಯಾ ವಿಚಾರಣಾ ॥ ಇತ್ಯುಪಾಸನಾಲಕ್ಷಣೇ ॥ ೯ ॥

ಅ ॥ (೧) ಅಚೇತನವನ್ನು ಧ್ಯಾನಿಸಬಾರದು. **ಸೋಽರೋದೀತ್** ಇತ್ಯಾದಿ ವೇದಗಳಲ್ಲಿ ತೋರುವ ಮರುಗುವಿಕೆ ಮೊದಲಾದುದುನ್ನು ಬ್ರಹ್ಮನು ಮಾಡಿದನೆಂದು ಧ್ಯಾನಿಸಬಾರದು. ಎಲ್ಲಿಯೂ ಯಥಾರ್ಥ

ವಾಗದಿರುವುದನ್ನು ಧ್ಯಾನಿಸಬಾರದು. ಹಾಗೆ ಧ್ಯಾನಿಸಿದವನಿಗೆ ಮಹಾನರ್ಥವಾಗುವುದು. (೨) (ಯಾಗದಲ್ಲಿ ಅಜೇತನಗಳಾದ ದರ್ಭೆ ಚರ್ಮಮೊದಲಾದವುಗಳು ಫಲಪ್ರದಗಳೆಂದು ತೋರುತ್ತವೆ. ಆದುಕಾರಣ ಅಜೇತನೋಪಾಸನೆಯಿಂದ ಅನರ್ಥಫಲವೆಂಬುದು ಹೇಗೆ? ಎಂದರೆ) ಅಜೇತನೋಪಾಸನೆಯಿಂದ ಅನರ್ಥಫಲವು ಆಗುವುದರಿಂದಲೇ, ದರ್ಭ ಚರ್ಮಮೊದಲಾದ ಶಬ್ದಗಳಿಂದ ಅವುಗಳಿಗೆ ಅಭಿಮಾನಿಗಳಾದ ದೇವತೆಗಳನ್ನು ಇಟ್ಟುಕೊಳ್ಳಬೇಕು. (ಸಾಮಾನ್ಯವಾಗಿ ಅಜೇತನವು ಫಲವನ್ನು ಕೊಡದಿರುವುದಾದರೂ ಯಾಗಾದಿಗಳಿಗೆ ಉಪಯುಕ್ತವಾದ ಅಜೇತನವು ಫಲವನ್ನು ಕೊಡುತ್ತದೆಂದು ಏಕೆ ಆಗಲಾರದೆಂದರೆ) ಯಾವುದೊಂದು ಅಜೇತನವೂ ಯಾವಾಗಲೂ ಫಲವನ್ನು ಕೊಡಲಾರದು. (೩) (ಅಜೇತನಗಳಾದ ರಸಾಯನ, ಔಷಧಾದಿಗಳನ್ನು ಸೇವಿಸಿದುದರಿಂದಲೇ ಪುಷ್ಟಿ, ಆರೋಗ್ಯಮೊದಲಾದ ಫಲಗಳು ಕಂಡದ್ರಿಂದ ಅಜೇತನವು ಫಲವನ್ನು ಕೊಡುವುದಿಲ್ಲವೆಂಬುದು ಹೇಗೆ ಕೂಡುತ್ತದೆ, ಎಂದರೆ ಅಜೇತನವು ಫಲವನ್ನು ಕೊಡದಿರುವುದರಿಂದಲೇ ಔಷಧಾದಿಗಳಲ್ಲಿದ್ದ ದೇವತೆಗಳೇ ಫಲಕೊಡುತ್ತಾರೆ—) (ಹಾಗಾದರೆ ಔಷಧಾದಿಗಳಿಗೆ ಅಭಿಮಾನಿಗಳಾದ ದೇವತೆಗಳ ಪರಿಜ್ಞಾನವಿಲ್ಲದವನು ಔಷಧವನ್ನು ತೆಗೆದುಕೊಂಡರೆ ಆತನಿಗೆ ಫಲ(ರೋಗಪರಿಹಾರ)ವು ಆಗದೆಹೋಗಬೇಕಾದೀತು. ಎಂದರೆ ದೇವತೆಗಳ ಸ್ವಭಾವವನ್ನು ಹೇಳುತ್ತಾರೆ.) ಔಷಧಾದಿಗಳಿಗೆ ಅಭಿಮಾನಿಗಳಾದ ದೇವತೆಗಳು ಅಜ್ಞನಿಗೆ ದೃಷ್ಟಫಲವನ್ನು ಮಾತ್ರ ಕೊಡುತ್ತಾರೆ. (ರೋಗಪರಿಹಾರಮಾಡುತ್ತಾರೆ.) ದೇವತಾ ಪರಿಜ್ಞಾನವಿದ್ದವನಿಗೆ ರೋಗಪರಿಹಾರವನ್ನೂ ಅದೃಷ್ಟಫಲವನ್ನೂ ದೇವತೆಗಳು ಕೊಡುತ್ತಾರೆ. ಅಭಿಮಾನಿದೇವತೆಯಿಲ್ಲದಿದ್ದುದು ಯಾವುದೊಂದು ವಸ್ತುವೂ ಇಲ್ಲ. (೪) (ಈ ಅರ್ಥವನ್ನು ದೃಷ್ಟಾಂತಕೊಟ್ಟು ಹೇಳುತ್ತಾರೆ.) ರಾಜನನ್ನು ತಿಳಿಯದವನಿಗೂ ಕ್ಲೃಪ್ತವಾದ (ರಾಜನು ಕೊಡಿಸುವ) ಭೋಜನವು ಸಿಗುತ್ತದೆ. ರಾಜನನ್ನು ತಿಳಿಯದೆ ರಾಜನಿಂದ ವಿಶೇಷವಾದ ಗ್ರಾಮಲಾಭವು ಆಗಲಾರದು. (೫) ಹೀಗೆಯೇ ದೇವತೆಗಳೂ ಭೋಜನದಂತೆಯೇ ದೃಷ್ಟಫಲವು (ಐಹಿಕರೋಗಪರಿಹಾರವು) ಅಲ್ಪವಾಗಿರುವುದರಿಂದ ಅಜ್ಞನಿಗೆ ರೋಗನಿವೃತ್ತಿರೂಪ ದೃಷ್ಟಫಲವನ್ನು ಕೊಡುವರು. (ಹಾಗಾದರೆ ಔಷಧಾದಿಗಳಲ್ಲಿದ್ದ ದೇವತೆಗಳು ಅಜ್ಞನಿಗೂ ರೋಗಪರಿಹಾರಮಾಡುವುದಾದರೆ ಔಷಧ ಸ್ವೀಕಾರ ಮಾಡಿದರೂ ಕೆಲವರಿಗೆ ರೋಗಪರಿಹಾರವು ಏತಕ್ಕೆ ಆಗುವುದಿಲ್ಲ, ಎಂದರೆ) ದೃಷ್ಟಫಲವೂ ಕೂಡ ಸ್ವಲ್ಪ ತಿಳಿದು ಮಾಡಿದುರಿಂದುಂಟಾದ ಅದೃಷ್ಟ ಸಹಾಯದಿಂದಲೇ ಆಗುವುದು. ಅದೃಷ್ಟವು ಇಲ್ಲವಾದರೆ ಸರ್ವಥಾ ಆಗಲಾರದು (ಏವಂಚ ಆತನಿಗೆ ಅದೃಷ್ಟವಿಲ್ಲದಿರುವುದರಿಂದಲೇ ರೋಗಪರಿಹಾರವಾಗಲಿಲ್ಲ) ದೇವತೆಯನ್ನು ತಿಳಿದವನಿಗೇನೇ ಅದೃಷ್ಟಫಲವು ಉಂಟಾಗುತ್ತದೆ. ಬೇರೆಯವರಿಗೆ ಅದೃಷ್ಟವು ಉಂಟಾಗಲಾರದು (೬) ಆದುಕಾರಣ ಉತ್ತಮಫಲವನ್ನು ಹೊಂದಲಿಚ್ಛಿಸುವವನು ತಮಸ್ಸಿಗೆ ಹೋಗಲಿಕ್ಕೆ ಇಚ್ಛಿಸದೆ ಇದ್ದವನು ಶ್ರೀಹರಿಗೆ ಪ್ರಿಯವಾಗಬೇಕೆಂದು ಇಚ್ಛಿಸುವವನು ಯಾವನೊಬ್ಬನೂ ಎಲ್ಲಿಯೂ ಅಜೇತನೋಪಾಸನೆಯನ್ನೂ ಅಸತ್ಯವಾದ ಉಪಾಸನೆಯನ್ನೂ ಅಯೋಗ್ಯವಾದ ಉಪಾಸನೆಯನ್ನೂ ಸರ್ವಥಾ ಮಾಡಬಾರದು. (೭) (ಶ್ರೀಹರಿಗೆ ಪ್ರೀತಿಯಾಗಬೇಕೆಂದು ಇಚ್ಛಿಸದೆ ಇದ್ದರೆ ಬಾಧಕಹೇಳುತ್ತಾರೆ.) ಕರ್ತವ್ಯಕರ್ಮವನ್ನು ಮಾಡುವವನಾಗಲೀ ಮೋಕ್ಷವನ್ನು ಹೊಂದಲಿಚ್ಛಿಸುವವನಾಗಲೀ ಶ್ರೀಹರಿಯ ಪ್ರೀತಿಯನ್ನು ಇಚ್ಛಿಸಬೇಕು. ಈ ವಿಷಯದಲ್ಲಿ ಸಂಶಯಮಾಡಕೂಡದು, ಎಂದು ಉಪಾಸನಾಲಕ್ಷಣದಲ್ಲಿದೆ ॥ ೮ ॥

ಈ ದರ್ಭ ಚರ್ಮಮೊದಲಾದ ಶಬ್ದಗಳಿಂದ ಅಭಿಮಾನಿ ದೇವತೆಗಳನ್ನು ಇಟ್ಟುಕೊಳ್ಳಬೇಕೆಂಬಲ್ಲಿ ಸೂತ್ರವನ್ನು ಹೇಳುತ್ತಾರೆ—

ಭಾ. ॥ (೧) ಓಂ ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಂ ಓಂ ॥ (೨) ಓಂ ಪಯೋಽಂಬುವಚ್ಚೇತ್ತತ್ರಾಪೀತಿ ಭಗವದ್ವಚನಂ ॥ (೩) ದೇವೇಷು ಚರ್ಮಾದಿನಾಮಾನಿ

ಸಂವಾದಾದೇರಿತಿ ಚ ದೇವತಾಮಿಮಾಮಾಂಸಾಯಾಂ ॥ (೪) ಅಚೇತನಾಸತ್ಯಾಯೋಗ್ಯಾನ್ಯ-ನುಪಾಸ್ಯಾನ್ಯಫಲತ್ವವಿಪರ್ಯಯಾಭ್ಯಾಮಿತಿ ಸಂಕರ್ಷಣಸೂತ್ರಂ ॥ (೫) ಓಷಧಯ-ಸ್ಸಂವದಂತೇ ಸೋಮೇನ ಸಹ ರಾಜ್ಞಾ । ಪ್ರವೋ ಗ್ರಾವಾಣಃ ಸವಿತಾ ದೇವಃ ಸುವತು ಧರ್ಮಣಾ ॥ ೯ ॥

ಅ ॥ (೧) **ಮೃದಬ್ರವೀತ್** ಮಣ್ಣು ಮಾತನಾಡಿತು, **ಆಪೋಽಬ್ರುವನ್** ಜಲಗಳು ಮಾತಾಡಿದವು ಇದುಮೊದಲಾದ ವೇದಗಳಲ್ಲಿ ಮೃದಾದಿಗಳಿಗೆ ಅಭಿಮಾನಿಗಳಾದ ದೇವತೆಗಳೇ ಹೇಳಲ್ಪಡುತ್ತಾರೆ. ಅವರಿಗೆ ಬೇರೆ ಚೇತನರಿಗಿಂತ ಅಂತರ್ಧಾನಶಕ್ತಿಮೊದಲಾದ ವಿಶೇಷ ಸಾಮರ್ಥ್ಯವಿದೆ. ಮತ್ತು ತಾವು ಅಭಿಮಾನಿಗಳಾಗಿ ಉಳ್ಳವಸ್ತುಗಳಲ್ಲಿ ಅವರು ವ್ಯಾಪಿಸಿಕೊಂಡಿದ್ದಾರೆ. (ಬ್ರ. ಸೂ. ಅ.೧ ಪಾ ೪. ಸೂ ೬) (೨) (ಅಚೇತನವು ಯಾವ ಫಲವನ್ನೂ ಕೊಡಲಾರದೆಂದು ಹೇಳಿದ್ದು ಕೂಡುವುದಿಲ್ಲ. ಏಕೆಂದರೆ ಅಚೇತನವಾದ ಹಾಲು ಸ್ವತಃ ಮಸುರು ಆಗುತ್ತದೆ. ಸ್ವತಃ ನೀರು ಹರಿಯುತ್ತದೆ ಕೂಲವು (ನದಿಯ ದಡವು ತನ್ನಷ್ಟಕ್ಕೇನೇ ಬೀಳುತ್ತದೆ. ಹಾಗೆಯೇ ಅಚೇತನವಾದ ದರ್ಭೆಮೊದಲಾದುದು ಫಲವನ್ನು ಕೊಡಲಿಕ್ಕೆ ಪ್ರವೃತ್ತಿಮಾಡುತ್ತದೆ. ಎಂದು ಏಕೆ ಆಗಲಾರದೆಂದರೆ-) ಹಾಲು, ನೀರು ಮೊದಲಾದ ದೃಷ್ಟಾಂತಗಳಿಂದ ಅಚೇತನವೂ ಫಲವನ್ನು ಕೊಡುತ್ತದೆಂದು ಕಲ್ಪಿಸಕೂಡದು. ಹಾಲಿಗೆ ಹೆಪ್ಪು ಹಾಕದೆ ಮಸುರು ಆಗುವುದಿಲ್ಲ. ಶ್ರೀಹರಿಯ ಪ್ರೇರಣೆಯಿಂದಲೇ ಹಾಲು ಮಸುರು ಆಗುವುದು, ಹೀಗೆ ಹಾಲು ನೀರು ಇತ್ಯಾದಿಗಳಲ್ಲಿ ಶ್ರೀಹರಿಯೇ ನಿಮಿತ್ತಕಾರಣನು ಎಂದು ಹೇಳತಕ್ಕ, **ವಿತೇನ ಹ ವಾವ ಪಯೋ ಮಂಡಂ ಭವತಿ ವಿತಸ್ಯ ವಾ ಅಕ್ಷರಸ್ಯ ಪ್ರಶಾಸನೇ** ಗಾರ್ಗಿ ಇವುಮೊದಲಾದವೇದಗಳಿವೆ. (ಬ್ರ.ಸೂ.ಅ.೨.ಪಾ.೨.ಸೂ ೩) (೩) (ದರ್ಭೆಮೊದಲಾದ ಶಬ್ದಗಳಿಂದ ಅಭಿಮಾನಿದೇವತೆಗಳನ್ನು ಇಟ್ಟುಕೊಳ್ಳಬೇಕೆಂಬಲ್ಲಿ ಸಾಮಾನ್ಯ ಸೂತ್ರವನ್ನು ಹೇಳಿದರ . ಈಗ ಅದನ್ನೇ ಹೇಳತಕ್ಕ ವಿಶೇಷಸೂತ್ರವನ್ನೂ ಹೇಳುತ್ತಾರೆ.) ‡ **ದೇವೇಷು ಚರ್ಮಾದಿನಾಮಾನಿ ಸಂವಾದಾದೇಃ** ಎಂದು ದೇವತಾಮಿಮಾಮಾಂಸಾ ಸೂತ್ರವು. (೪) (ಅಚೇತನವನ್ನೂ ಅಯೋಗ್ಯವನ್ನೂ ಉಪಾಸನೆ ಮಾಡಬಾರದೆಂಬಲ್ಲಿಯೂ ಸೂತ್ರಹೇಳುತ್ತಾರೆ.) ಫಲವಿಲ್ಲದಿರುವುದರಿಂದಲೂ ವಿಪರೀತಫಲವು ಸಿಗುವುದರಿಂದಲೂ ಅಚೇತನವನ್ನೂ ಅಸತ್ಯವನ್ನೂ ಅಯೋಗ್ಯವನ್ನೂ ಉಪಾಸನೆ ಮಾಡಬಾರದು. (೫) (**ದೇವೇಷು** ಎಂಬ ಸೂತ್ರದ ವಿಷಯವಾಕ್ಯವನ್ನು ಹೇಳುತ್ತಾರೆ) ಸೋಮಲತೆಗೆ ಅಭಿಮಾನಿಯಾದ ಚಂದ್ರನೊಡನೆ ಸಸ್ಯಗಳಿಗೆ ಅಭಿಮಾನಿಗಳಾದ ದೇವತೆಗಳು ಮಾತನಾಡುತ್ತಾರೆ. ಎಲೋ ಕಲ್ಲುಗಳಿಗೆ ಅಭಿಮಾನಿಗಳಾದ ದೇವತೆಗಳೇ ನಿಮ್ಮನ್ನು ಸೂರ್ಯಾಂತರ್ಗತ ನಾರಾಯಣನು ಧರ್ಮ (ಪುಣ್ಯ)ದಿಂದ ಉಂಟುಮಾಡಲಿ. (ಹೀಗೆಯೇ ಚರ್ಮಾದಿಗಳು ಫಲಕೊಡುತ್ತವೆಂದು ಹೇಳತಕ್ಕ ವೇದಗಳನ್ನು ಇಟ್ಟುಕೊಳ್ಳಬೇಕು.)

ನಿ ॥ ಔಷಧಿ, ಚರ್ಮ, ದರ್ಭೆ, ಗ್ರಾವ, ಮೊದಲಾದ ನಾಮಗಳು ಅವುಗಳಿಗೆ ಅಭಿಮಾನಿಗಳಾದ ದೇವತೆಗಳಲ್ಲಿಯೇ ಇರುತ್ತವೆ. ಅಚೇತನಗಳಲ್ಲಿ ಅಲ್ಲ. ಏಕೆಂದರೆ ಓಷಧಿಗಳು ಮಾತಾಡಿಕೊಂಡವು ಎಂದು ವೇದವಿದೆ. ಚರ್ಮದರ್ಭೆಗಳು ಫಲಕೊಡುತ್ತವೆಂದು ಇದೆ ಕಲ್ಲುಗಳು ಸೂರ್ಯನ ಮಕ್ಕಳೆಂದು ವೇದವಿದೆ. ಇವೆಲ್ಲವೂ ದೇವತೆಗಳೆಂದು ಇಟ್ಟುಕೊಂಡರೇನೇ ಕೂಡುತ್ತದೆ. ಜಡಗಳಿಗೆ ಮಾತಾಡುವಿಕೆ ಮೊದಲಾದ ಶಕ್ತಿಯಿಲ್ಲದಿರುವುದರಿಂದ ಅಚೇತನಗಳೆಂದು ಇಟ್ಟುಕೊಂಡರೆ ಮಾತಾಡಿದವುಇತ್ಯಾದಿಗಳು ಕೂಡಲಾರವು. ॥ ೯ ॥

ಪೀ—ಜಡಪದಾರ್ಥಗಳಿಗೆ ಭಾಷಣಾದಿಗಳು ಕೂಡುವುದಿಲ್ಲವೆಂದಿಷ್ಟು ಮಾತ್ರವಲ್ಲ. ಪರಂತು ಚೇತನ ಅಚೇತನ ಎಲ್ಲಾ ವಸ್ತುಗಳ ಪ್ರವೃತ್ತಿಗಳಿಗೂ ಶ್ರೀಹರಿಯು ನಿಮಿತ್ತಕಾರಣನು ಎಂದು ವೇದದಲ್ಲಿ ಹೇಳಿದೆ ಅದುಕಾರಣ ಯಾವುದೊಂದೂ ಸ್ವತಂತ್ರವಾದುದು ಇಲ್ಲವೆನ್ನುತ್ತಾರೆ—

‡ ಅರ್ಥವು ಇಲ್ಲಿಯೇ ಮುಂದೆ ಹೇಳಲ್ಪಡುತ್ತದೆ.

ಭಾ. ॥ (೧) ನ ಋತೇ ತ್ವಕ್ಕ್ರತಯೇ ಕಿಂಚನಾರೇ ಮಹಾಮರ್ಕಂ ಮಘವನ್ ಚಿತ್ರಮರ್ಚ ॥ (೨) ನ ದೇವಾನಾಮತಿವ್ರತಂ ಶತಾತ್ಮಾ ಚ ನ ಜೀವತಿ ॥ (೩) ಅನೇಹಸೋ ವ ಊತಯಃ ಸು ಊತಯೋ ವ ಊತಯಃ ॥ (೪) ದ್ಯಾವಾಪೃಥಿವೀ ಜನಯನ್ನಭಿವ್ರತಾಪ ಓಷಧೀರ್ವನಿನಾನಿ ಯಜ್ಞಿಯಾ । ಅಂತರಿಕ್ಷಂ ಸ್ವಾ ೧ ರಾಪಪ್ರುರೂತಯೇ ವಶಂ ದೇವಾಸಸ್ತನ್ವೇ ೩ ಇನಿಮಾಮೃಜುಃ ॥ ೧೦ ॥

ಅ ॥ (೧) ಇಂದ್ರಿಯಗಳಿಗೆ ಸ್ವಾಮಿಯಾದ ಯಜಸ್ಸುಳ್ಳ ಎಲೋ ಶ್ರೀಹರಿಯೇ ನೀನು ಹೊರತು ಯಾವುದೂ ಮಾಡಲ್ಪಡುವುದಿಲ್ಲ. ದೂರದಲ್ಲಿ ಆಗಲೀ ಸವಿಾಪದಲ್ಲಿ ಆಗಲೀ ಯಾರಿಗೂ ಅಲ್ಲಾಡಲಿಕ್ಕೂ ಶಕ್ತಿಯಿಲ್ಲ. ಎಲೋ ಶ್ರೀಹರಿಯೇ, ನಿನ್ನನ್ನು ಪೂಜಿಸುವವರ ಇಂದ್ರಿಯಗಳಲ್ಲಿ ನೀನು ಇದ್ದು ಪೂಜ್ಯನಾದ ಪೂರ್ಣವಾದ ಆನಂದವುಳ್ಳ ಆತ್ಯಾಶ್ಚರ್ಯಕರನಾದ ನಿನ್ನನ್ನು ನೀನೇ ಪೂಜಿಸು. (೨) (ಅಭಿಮಾನಿಗಳಾದ ದೇವತೆಗಳೆಂದು ಇಟ್ಟುಕೊಂಡು ಭಾಷಣಾದಿಗಳನ್ನು ಕೂಡಿಸಿದರೂ ದೇವತೆಗಳು ಫಲವನ್ನು ಕೊಡುತ್ತಾರೆಂಬುದು ಕೂಡಲಾರದು, ಏಕೆಂದರೆ ದೇವತೆಗಳಿಗೆ ಯಜಮಾನನಿಗೆ ಫಲಕೊಡಬೇಕೆಂದು ಇಚ್ಛೆಯಿದ್ದರೂ ಇನ್ನೊಬ್ಬನು ವಿಘ್ನಮಾಡಬಹುದು, ಎಂದರೆ—ಮನುಷ್ಯರಿಗೆ ಸಾಮರ್ಥ್ಯವಿಲ್ಲದಿರುವುದರಿಂದ ಮನುಷ್ಯರು ವಿಘ್ನ ಮಾಡಲಾರರೆಂಬಲ್ಲಿ ವೇದಪ್ರಮಾಣ ಹೇಳುತ್ತಾರೆ) ದೇವತೆಗಳ ಸಂಕಲ್ಪವನ್ನು ನಿವಾರಿಕೊಂಡು ನೂರು ವರ್ಷ ಆಯುಷ್ಯವುಳ್ಳ ಜೀವನೂ ಜೀವಿಸಲಾರನು (ಅಲ್ಪ ಆಯುಷ್ಯವುಳ್ಳವನು ಜೀವಿಸಲಾರನೆಂದು ಸುತರಾಂ ಸಿದ್ಧವು.) (೩) (ದೇವತೆಗಳು ವಿಘ್ನ ಮಾಡುತ್ತಾರೆಂದರೆ—ಅದೂ ಕೂಡದು, ಏಕೆಂದರೆ –ಬೇರೆ ದೇವತೆಗಳು ವಿಘ್ನ ಮಾಡುತ್ತಿರುವಾಗ ಇತರ ದೇವತೆಗಳಿಗೆ ಯಜಮಾನನಿಗೆ ಫಲವನ್ನು ಕೊಡಬೇಕೆಂಬ ಇಚ್ಛೆಯೇ ಹುಟ್ಟಲಾರದು, ದೇವತೆಗಳ ಇಚ್ಛೆಯು ಸರ್ವಥಾ ವ್ಯರ್ಥವಾಗಲಾರದೆಂಬಲ್ಲಿ ವೇದಪ್ರಮಾಣ ಹೇಳುತ್ತಾರೆ) ಎಲೋ ದೇವತೆಗಳೇ ನಿಮ್ಮ ಇಚ್ಛೆಗಳು ಪಾಪ ಇಲ್ಲದವುಗಳು. (ಸಫಲಗಳು) ನಿಮ್ಮ ಇಚ್ಛೆಗಳು (ಭಕ್ತರನ್ನು) ಜೀನ್ನಾಗಿ ರಕ್ಷಿಸತಕ್ಕವುಗಳು. (೪) (ಜಲಾಭಿಮಾನಿದೇವತೆಗಳಿಗೆ ಫಲವನ್ನು ಕೊಡುವ ಸಾಮರ್ಥ್ಯವಿದೆ, ಎಂಬಲ್ಲಿ ವೇದ ಹೇಳುತ್ತಾರೆ.) ಆಪ್ ಎಂದು ಹೆಸರುಳ್ಳ ದೇವತೆಗಳು ಸ್ವರ್ಗಭೂಮಿಗಳ ವ್ರತಗಳಾದ ಯಾಗಮೊದಲಾದ ಕರ್ಮಗಳನ್ನು ವನದಲ್ಲಿರುವ ಯಾಗಕ್ಕೆ ಯೋಗ್ಯಗಳಾದ ಸಸ್ಯಗಳನ್ನು ಹುಟ್ಟಿಸಿದರು. ಅಂತರಿಕ್ಷಲೋಕ, ಸ್ವರ್ಗಲೋಕ, ಇವುಗಳನ್ನು ರಕ್ಷಿಸುವುದಕ್ಕಾಗಿ ತುಂಬಿಸಿದರು. ಅದರಲ್ಲಿ ಇಚ್ಛಾನುಸಾರ ಯೋಗ್ಯಶರೀರಗಳನ್ನು ಶುದ್ಧಗಳನ್ನಾಗಿ ಮಾಡಿದರು. ॥ ೧೦ ॥

ಟೀ—ನರ್ತೇ ತ್ವಕ್ಕ್ರತಯೇ ಎಂಬ ವೇದದ ಬಲದಿಂದ ಶ್ರೀ ಹರಿಯು ಹೊರತು ಅಜೇತನದ ಪ್ರವೃತ್ತಿಯಾಗುವುದಿಲ್ಲವೆಂದಾದರೂ ಜಡಗಳಿಗೆ ಅಭಿಮಾನಿಗಳಾದ ದೇವತೆಗಳಿಲ್ಲದೆ ಪ್ರವೃತ್ತಿಯಾಗುವುದಿಲ್ಲವೆಂದು ಏಕೆ ಹೇಳಬೇಕು? ಎಂದರೆ—

ಭಾ. ॥ (೧) ಅಚೇತನಂ ಚೇತನೇಭ್ಯೋ ದೈವತೇಭ್ಯಶ್ಚ ಚೇತನಾಃ । ದೇವಾಃ ಪ್ರಾಣಾಚ್ಚ ಸ ಪ್ರಾಣೋ ವಿಷ್ಣೋರೇವ ಸದೈವ ತು । ಸ್ವಭಾವಂ ಚ ಪ್ರವೃತ್ತಿಂ ಚ ವಿಕಾರಂ ಚ ಸಮಾಪ್ನುಯುಃ ॥ (೨) ಕಶ್ಚಿದ್ಭಾವ ಯತೇ ತೇಷಾಂ ನೈತತ್ಸ್ಯಾ(ತ್ಕೈಃ ಸ್ಯಾ)ಚ್ಚ ಕದಾಚನ । ಅಚೇತನಪ್ರವೃತ್ತೌ ತು ನ (ತನ್ನ) ದೃಷ್ಟಾಂತೋಽಸ್ತಿ ಕಶ್ಚನ । ಚೇತನಾನಾಂ ಪ್ರವೃತ್ತೇಶ್ಚ ದೃಷ್ಟತ್ವಾದೇವ ಸರ್ವಶಃ ॥ (೩) ಅದೃಷ್ಟಂ ದೃಷ್ಟವಜ್ಜ್ಞೇಯಂ ಯಥಾದೃಷ್ಟಪ್ರಣೇತೃಕಂ । ವಿಸರ್ಪತ್ತಂಡುಲಂ ದೃಷ್ಟ್ವಾ ಕಲ್ಪಾಃ ತತ್ರ ಪಿಪೀಲಿಕಾ ॥ ನ ತದ್ದೃಷ್ಟ್ವೈವ

ದೃಷ್ಟಾನಾಮಪಿಪೀಲಿಕಸರ್ಪಣಂ । ಏವಂ ದೃಷ್ಟಾನುಸಾರೇಣ ಚಿದಧೀನಮಜೇತನಂ ॥
(೪) ದುರ್ಘಟಾ ಶಕ್ತಿರಪಿ ಹಿ (ತು) ಪಿಶಾಚಾನಾಂ ಹಿ ದೃಶ್ಯತೇ । ದೇವಾನಾಂ ಕಿಮು ಕಿಮ್ವೇವ ಪರಮಸ್ಯ ಹರೇಃ ಪ್ರಭೋಃ ॥ ಇತ್ಯಾದಿ ಬ್ರಹ್ಮತರ್ಕೇ (ರ್ಕಾದೇಶ್ಚ) ॥ ೧೧ ॥

ಅ ॥ (೧) ಅಜೇತನವು ಜೇತನರಿಂದಲೂ, ಜೇತನರು ದೇವತೆಗಳಿಂದಲೂ, ದೇವತೆಗಳು ಮುಖ್ಯ ಪ್ರಾಣನಿಂದಲೂ, ಮುಖ್ಯಪ್ರಾಣನು ವಿಷ್ಣುವಿನಿಂದಲೂ ಹೀಗೆ ಎಲ್ಲರೂ ಸರ್ವದಾ ತಂತಮ್ಮ ಸ್ವಭಾವವನ್ನೂ ಪ್ರವೃತ್ತಿಯನ್ನೂ ವಿಕಾರವನ್ನೂ ಹೊಂದುವರು. (೨) (ಅಜೇತನಾದಿಗಳು ಜೇತನಾದಿಗಳಿಂದಲೇ ಸ್ವಭಾವಾದಿಗಳನ್ನು ಹೊಂದುತ್ತಾವೆ, ಎಂಬುದನ್ನು ದೃಢಪಡಿಸುತ್ತಾರೆ) ಜೇತನಾದಿಗಳನ್ನು ಹೊರತು ಅಜೇತನಾದಿಗಳಿಗೆ ಯಾವಾಗಲೂ ಯಾವುದೊಂದು ಸ್ಥಿತಿಯೂ ಆಗಲಾರದು. ಜೇತನವಿಲ್ಲದೆ ಅಜೇತನಕ್ಕೆ ಸ್ವತಃ ಯಾವ ಪ್ರವೃತ್ತಿಯೂ ಆಗಲಾರದು. (ಆ ವಿಷಯದಲ್ಲಿ ಪ್ರತ್ಯಕ್ಷವಿಲ್ಲ.) ಯಾವ ದೃಷ್ಟಾಂತವೂ ಇಲ್ಲದಿರುವುದರಿಂದ ಸ್ವತಃ ಅಜೇತನಕ್ಕೆ ಪ್ರವೃತ್ತಿಯಿದೆ, ಎಂದು ಊಹಿಸಲು ಶಕ್ಯವಲ್ಲ. (ಅದುಕಾರಣ ಅನುಮಾನವೂ ಇಲ್ಲ.) (ಅಜೇತನಕ್ಕೆ ಸ್ವತ ವಿವ ಪ್ರವೃತ್ತಿಯಾಗುತ್ತದೆ ಎಂಬಲ್ಲಿ ಪ್ರಮಾಣವೇ ಇಲ್ಲದಿರುವುದರಿಂದ ಅಯುಕ್ತವೆಂದು ಹೇಳಿ ಈಗ ಜೇತನರಿಂದಲೇ ಪ್ರವೃತ್ತಿಯಾಗುತ್ತದೆ ಎಂಬಲ್ಲಿ ಪ್ರಮಾಣವನ್ನು ಹೇಳುತ್ತಾರೆ.) ಎಲ್ಲಾ ಅಜೇತನಗಳಲ್ಲಿಯೂ * ಜೇತನರ ಪ್ರವೃತ್ತಿಯೇ ಕಂಡದೆ. (೩) (ಅಜೇತನವು ತನ್ನಷ್ಟಕ್ಕೇನೇ ಪ್ರವೃತ್ತಿಮಾಡುತ್ತದೆಂಬಲ್ಲಿ ದೃಷ್ಟಾಂತವಿಲ್ಲವೆಂಬುದು ಕೂಡುವುದಿಲ್ಲ, ಕೂಲಪತನ (ನದಿಯ ದಡ ತನ್ನಷ್ಟಕ್ಕೇನೇ ಬೀಳುವುದು) ಮೊದಲಾದವುಗಳಿಗೆ ಕರ್ತನು ಕಾಣದಿರುವುದರಿಂದ ಅವುಗಳೇ ದೃಷ್ಟಾಂತವಾಗಬಹುದು ಎಂದರೆ) ಯಾವ ಅನುಮಾನದಲ್ಲಿ ಕರ್ತನು ಕಾಣುತ್ತಾನೋ ಆದರಂತೆಯೇ ಕರ್ತನು ಕಾಣದಿರುವ ಅನುಮಾನದಲ್ಲಿಯೂ ಕರ್ತನಿದ್ದಾನೆಂದು ಊಹಿಸಿಕೊಳ್ಳಬೇಕು. (ಅಂದರೆ—ದೃಷ್ಟಕರ್ತೃಕ ಅನುಮಾನದಂತೆಯೇ, **ವಿಪ್ರತಿಪನ್ನಂ ಕೂಲಪತನಂ ಸಕರ್ತೃಕಂ ಪತನತ್ವಾತ್ ದೇವದತ್ತಕೃತ ಪತನವತ್**—ದೇವದತ್ತನು ತಾನಾಗಿಮಾಡಿಕೊಂಡ ಪತನ (ಬೀಳುವಿಕೆ) ದಲ್ಲಿ ಪತನತ್ವವಿದ್ದುದರಿಂದ ಪತನಕ್ಕೆ ದೇವದತ್ತನು ಕರ್ತನೆಂದು ಸಿದ್ಧನಾಗಿದ್ದಂತೆಯೇ ಕೂಲಪತನದಲ್ಲಿಯೂ ಪತನತ್ವವಿದ್ದುದರಿಂದ ಒಬ್ಬ ಕರ್ತನಿದ್ದಾನೆನ್ನಬೇಕು. ಇದುಮೊದಲಾದ ಅದೃಷ್ಟಕರ್ತೃಕವಾದ (ಕರ್ತನು ಕಾಣದಿರುವ) ಅನುಮಾನದಲ್ಲಿಯೂ ಕರ್ತನನ್ನು ಊಹಿಸಿಕೊಳ್ಳಬೇಕು. (ಕೂಲಪತನಾದಿಗಳಿಗೆ ಕರ್ತನು ಕಾಣದಿರುವುದರಿಂದ ಕೂಲಪತನಾ (ನದಿಯದಡ ತನ್ನಷ್ಟಕ್ಕೇನೇ ಬೀಳುವುದು.) ದಿಗಳು ಅಜೇತನದ ಅಧೀನಗಳೇ, ಎಂದು ಏಕೆ ಆಗಲಾರವು? ಹಾಗೆಯೇ ಘಟಪಟಾದಿಗಳಿಗೆ ಕರ್ತನು ಕಾಣುತ್ತಿರುವುದಾದರೂ ಆ ಘಟಪಟಾದಿಗಳೂ ಅಜೇತನದ ಅಧೀನಗಳೆಂದು ಕೂಡಬಹುದು, ಎಂದರೆ) ಅಕ್ಕಿಯನ್ನು ಹೊರುತ್ತಿರುವ ಇರುವೆಯನ್ನು ಕಾಣದೆ ಅಕ್ಕಿಯು ಮಾತ್ರ ಹೋಗುತ್ತಿರುವುದನ್ನು ನೋಡಿ ಅಲ್ಲಿ ಇರುವೆಯು ಅಕ್ಕಿಯನ್ನು ಹೊರುತ್ತದೆಂದು ¶ ಊಹಿಸುತ್ತೇವೆ. ಹಾಗೆಂತ ಇರುವೆಯು ಅಕ್ಕಿಯನ್ನು ಹೊರುತ್ತಿರುವುದನ್ನು ನೋಡಿದಾಗೆ ಅಕ್ಕಿಯೇ ಹೋಗುತ್ತಿದೆ. ಇರುವೆಯು ಅಕ್ಕಿಯನ್ನು ಹೊರುವುದಿಲ್ಲ.

---

* ವಿಪ್ರತಿಪನ್ನಂ ಕಾರ್ಯಂ ಜೇತನೇಚ್ಛಾಧೀನಂ ಕಾರ್ಯತ್ವಾತ್ ಪಟಾದಿವತ್=ಬಟ್ಟೆಯು ಕಾರ್ಯವಾಗಿರುವುದರಿಂದ ನೇಕಾರನ ಇಚ್ಛೆಯನ್ನನುಸರಿಸಿರುವುದು ಹಾಗೆಯೇ ಎಲ್ಲಾ ಕಾರ್ಯಗಳೂ ಜೇತನರ ಇಚ್ಛೆಯ ಅಧೀನಗಳು, ಎಂಬ ಯುಕ್ತಿಯಿಂದ ಅಜೇತನಗಳೆಲ್ಲಾ ಜೇತನರಿಂದಲೇ ಪ್ರವೃತ್ತಿಯು ಅಹಂ ಕರೋಮಿ ಎಂದು ಜೇತನರಿಗೆ ಪ್ರವೃತ್ತಿಯು ಕಾಣುವುದರಿಂದ ಬಟ್ಟೆ ಮೊದಲಾದವುಗಳನ್ನು ಸೃಷ್ಟಿಸುವಾಗಲೂ ಜೇತನರಿಗೆ ವ್ಯಾಪಾರವಿಲ್ಲವೆಂದು ಹೇಳಕೂಡದು.

¶ವಿಪ್ರತಿಪನ್ನಂ ತಂಡುಲಂ ಪಿಪೀಲಿಕಾಧೀನವಿಸರ್ಪಣವತ್ ಅನುಪಲಭ್ಯಮಾನಪ್ರಯೋಕ್ತೃಕಂತರತ್ವೇಸತಿ ವಿಸರ್ಪತ್ತಂಡುಲತ್ವಾತ್ ಸಂಪ್ರತಿಪನ್ನವತ್=ಈ ಅಕ್ಕಿಯು ಇರುವೆಯ ಅಧೀನವಾಗಿ ಹೋಗುತ್ತಿದೆ. ಅಕ್ಕಿಯನ್ನು ಒಯ್ಯುವವನು ಇನ್ನೊಬ್ಬನು ಕಾಣುವುದಿಲ್ಲ ಅಕ್ಕಿಯು ಹೋಗುತ್ತಿದೆ, ಆದಕಾರಣ ಇರುವೆಯು ಒಯ್ಯುವುದು ಎಂದು ಊಹಿಸಬೇಕು

ಎಂತ ಊಹಿಸುವುದು ಬಾಧಿತವಾಗುತ್ತದೆ. ಹೀಗೆ † ಕರ್ತನು ಕಾಣುತ್ತಿರುವ ಜೀತನವನ್ನ ನುಸರಿಸಿ ಕರ್ತನು ಕಾಣದಿದ್ದ ಅಜೀತನವೂ ಜೀತನದ ಅಧೀನವು ಎಂದೆನ್ನಬೇಕು. (ಕರ್ತನು ಕಾಣದ ಅನುಮಾನದಂತೆ ಕರ್ತನು ಕಾಣುವ ಅನುಮಾನವೆಂದನ್ನಕೂಡದು.) (೪) (ಆದರೂ ಜೀತನರು ದೇವತೆಗಳಿಂದ ಪ್ರವೃತ್ಯಾದಿಗಳನ್ನು ಮಾಡುತ್ತಾರೆಂದು ಹೇಳಿದ್ದು ಯುಕ್ತವಲ್ಲ. ಸರ್ವಥಾ ಕಾಣದಿರುವ ದೇವತೆ ಈಶ್ವರಾದಿಗಳನ್ನು ಕಲ್ಪಿಸಿದರೆ ಕಲ್ಪನಾ ಗೌರವವು ಬರುವುದರಿಂದ ಜೀತನರಿಗೇನೇ ಸ್ವತಃ ಪ್ರವೃತ್ತಿಯೆಂದು ಕಲ್ಪಿಸಿದರೆ ಲಾಘವವಿದೆ ಎಂದರೆ) ಲೋಕದಲ್ಲಿ ಪಿಶಾಚಗಳಿಗೂ ದುರ್ಘಟವಾದ ಶಕ್ತಿಯು ಕಂಡದೆ. ಹೀಗೆ ಇರಲು ದೇವತೆಗಳಿಗೂ ಸರ್ವೋತ್ತಮನಾದ ಶ್ರೀಹರಿಗೂ ದುರ್ಘಟವಾದ ಶಕ್ತಿಯು ಇದೆ, ಎಂಬುದು ಸುತರಾಂ ಸಿದ್ಧವು, ಇತ್ಯಾದಿ ಪ್ರಮೇಯವು ಬ್ರಹ್ಮತರ್ಕದಲ್ಲಿದೆ.

ವಿ ॥ (1)ದೇವತೆಗಳಿಗೂ ಶ್ರೀಹರಿಗೂ ಕರ್ತೃತ್ವನ್ನು ಇಟ್ಟುಕೊಂಡರೆ ಕಲ್ಪನಾಗೌರವವಿಲ್ಲ, ಏಕೆಂದರೆ ವೇದಮೊದಲಾದವುಗಳಲ್ಲಿ ಹಾಗೆ ಸಾಧಿಸಿಯದೆ. ದೇವಾದಿಗಳು ಕಾಣುವುದೇ ಇಲ್ಲ, ಅದುಕಾರಣ ವಿರೋಧ ವೆಂದೆನ್ನಕೂಡದು. ದೇವಾದಿಗಳಿಗೆ ದುರ್ಘಟವಾದ ಶಕ್ತಿಯು ಇದ್ದಕಾರಣ ಅವರು ಕಾಣುವುದಿಲ್ಲ. (2) ಅವರಿಗೆ ಅಂತಹ ಶಕ್ತಿಯು ಇರುವುದು ಹೇಗೆಂದರೆ—ಲೋಕದಲ್ಲಿ ನಿಯಾಮಕರಾಗದಿರುವ ಪಿಶಾಚಾದಿಗಳಿಗೂ ಅಂತಹ ಶಕ್ತಿಯಿರುವಾಗ ಸರ್ವನಿಯಾಮಕರಾದ ದೇವಾದಿಗಳಿಗೆ ಶಕ್ತಿಯಿದೆ ಎಂಬುದು ಸುತರಾಂ ಸಿದ್ಧಿಸುತ್ತದೆ. ॥ ೧೩ ॥

ಪೀ—ಹೀಗೆ **ನಾಮ ಬ್ರಹ್ಮೇತ್ಯುಪಾಸ್ವ** ಇತ್ಯಾದಿಗಳಲ್ಲಿ ನಾಮಾದಿ ಶಬ್ದಗಳು ದೇವತೆಗಳನ್ನೇ ಬೋಧಿಸುತ್ತವೆ. ಅಜೀತನಗಳನ್ನು ಬೋಧಿಸುವುದಿಲ್ಲ, ಎಂದು ಸಂಕ್ಷೇಪದಿಂದಲೂ ವಿಸ್ತಾರವಾಗಿಯೂ ಅರ್ಥಹೇಳಿ ಈಗ ೭ನೇ ಖಂಡದ ೧೯ನೇ ಮಂತ್ರದಲ್ಲಿದ್ದ **ಹೃದಯಜ್ಞ** ಎಂಬ ಶಬ್ದಕ್ಕೆ ಅರ್ಥಹೇಳುತ್ತಾರೆ–

ಭಾ. ॥ (೧) ಹೃದಯಜ್ಞೋ ಭಗವತ್ತತ್ತ್ವಜ್ಞಃ । ಹೃದ್ಯಯನಾದ್ಧೃದಯಂ । ಉದರಂ ಬ್ರಹ್ಮೇತಿ ಶಾರ್ಕರಾಕ್ಷ್ಯಾ ಉಪಾಸತೇ ಹೃದಯಂ ಬ್ರಹ್ಮೇತ್ಯಾರುಣಯಃ॥ ಇತಿ ಶ್ರುತಿಃ ॥ (೨) ಕೋಲಂ ಫೂಗಫಲಂ ಪ್ರೋಕ್ತಂ ಕಲಂ ತಾಂಬೂಲಪತ್ರಕಂ । ಇತ್ಯಭಿಧಾನಂ ॥ (೩)ಭೂತಾನಾಂ ಭೌತಿಕಾನಾಂ ಚ ಮಂತ್ರಾಹುತಿಗಣಸ್ಯ ಚ । ಅಚೇತನಗಣಸ್ಯಾಸ್ಯ ಕಲ್ಪಕೋ ಮಿತ್ರನಾಮಕಃ ॥ (೪) ಪ್ರಾಣಾ ಭೂತಾನಿ ಮಂತ್ರಾದ್ಯಾಶ್ಚಿದಚಿತ್ತ್ವವಿಭೇದಿನಃ । ಅಚಿತಾಂ ಕಲ್ಪಕೋ ಮಿತ್ರಶ್ಚಿತಾಂ ವಾಯ್ವಾದಯಃ ಸ್ಮೃತಾಃ ॥ ಇತಿ ವಸ್ತುತತ್ತ್ವೇ ॥ ೧೨ ॥

ಅ ॥ (೧) ಹೃದಯಜ್ಞಃ=ಶ್ರೀಹರಿಯ ತತ್ತ್ವವನ್ನು ತಿಳಿದವನು. ಹೃದಯದಲ್ಲಿಯೂ ಪ್ರವೃತ್ತಿ ಮಾಡುವುದರಿಂದ ಹೃದಯಂ=ಶ್ರೀಹರಿಯು. (ಆದರೂ ಮುಖ್ಯವಾದ ರೂಢಿಬಿಟ್ಟು ಅಮುಖ್ಯವಾದ ಯೋಗವನ್ನು ಅಂಗೀಕರಿಸುವುದು ಯುಕ್ತವಲ್ಲ, ಎಂದರೆ—ಹೃದಯ ಶಬ್ದಕ್ಕೆ ಪರಬ್ರಹ್ಮನಲ್ಲಿಯೇ ವಿದ್ವದ್ರೂಢಿ (ಪ್ರಸಿದ್ಧಿ) ಯಿದ್ದುದರಿಂದ ಪರಬ್ರಹ್ಮನಲ್ಲಿಯೇ ಮುಖ್ಯವು, ಎಂಬಲ್ಲಿ ವೇದಪ್ರಮಾಣಹೇಳುತ್ತಾರೆ.) ಸೂಕ್ಷ್ಮಜ್ಞಾನಿಗಳಾದ ಮುನಿಗಳು ಮೇಲೆ ಹೋಗುವುದರಿಂದೂ ಜೆನ್ನಾಗಿ ಭಕ್ತರಿಂದ ಸ್ತುತಿಸಲ್ಪ

† (1) ಕರ್ತನು ಕಾಣದಿದ್ದ ಕೂಲಪತನವು ಅಜೀತನದ ಅಧೀನವೆಂದು ಹೇಳುವಹಾದರೆ ಆಕ್ಕಿಯನ್ನು ಹೊರುತ್ತಿರುವ ಇರುವೆಯು ಕಾಣದಿದ್ದು ಆಕ್ಕಿಯು ಕರಿಯುತ್ತಿರುವುದೂ ಅಜೀತನದ ಅಧೀನವಾಗದೇಕಾಗುವುದು. ಎರಡೂ ಒಂದೇ ವಿಧವಾಗಿದೆ, ವಿಶೇಷವಿಲ್ಲ (2) ಹಾಗೆಂತ ಹಾಗೆ ಹೇಳಲಾಗುವುದಿಲ್ಲ ದೂರದಲ್ಲಿ ಇರುವೆಯು ತೋರದಿದ್ದರೂ ಸಮೀಪದಲ್ಲಿ ಇರುವೆಯು ಆಕ್ಕಿಯನ್ನು ಕೆಗೆದುಕೊಂಡು ಹೋಗುವುದು ನಮಗೆ ತೋರುವುದು. (3) ಕರ್ತನು ಕಾಣದಿದ್ದ ಕೂಲಪತನದಂತೆ ಕರ್ತನು ಕಾಣುತ್ತಿದ್ದರೂ ಜೀತನದ ಅಧೀನವಲ್ಲವೆಂದು ಹೇಳುವಹಾದರೆ ಆಕ್ಕಿಯನ್ನು ಇರುವೆಯು ಹೊತ್ತುಕೊಂಡು ಹೋಗುತ್ತಿದ್ದರೂ ಆಕ್ಕಿಯು ಇರುವೆಯ ಅಧೀನವಾಗದೆ ಹೋಗದೇಕಾಗುವುದು

ಡುವುದರಿಂದಲೂ **ಉದರ**ನೆನಿಸಿಕೊಂಡ ಉದರದಲ್ಲಿರುವವನು ವಾಸುದೇವನೆನಿಸಿದ ಪರಬ್ರಹ್ಮನೆಂದು ಧ್ಯಾನಿಸುತ್ತಾರೆ. ಅರುಣಿ ಎಂದು ಹೆಸರುಳ್ಳ ಮುನಿಗಳು ಹೃದಯದಲ್ಲಿರತಕ್ಕ ಹೃದಯನೆನಿಸಿದವನನ್ನು ಪರಬ್ರಹ್ಮನೆಂದು ಧ್ಯಾನಿಸುತ್ತಾರೆಂದು ವೇದವು. (ಏತ. ಆರ. ೨. ಅ. ೧. ಖ. ೪.) (೨) (೩ನೇ ಖಂಡದ ೧ನೇ ಮಂತ್ರದಲ್ಲಿದ್ದ **ಕೋಲೇ** ಎಂಬ ಶಬ್ದದ ಅರ್ಥಹೇಳುತ್ತಾರೆ) ಕೋಲವೆಂದರೆ ಅಡಿಕೆಕಾಯಿಯು. ಕಲವೆಂದರೆ ತಾಂಬೂಲ ಪತ್ರವು, ಎಂದು ಕೋಶವು. (೩) (೪ನೇ ಖಂಡದಲ್ಲಿ ಸಂಕಲ್ಪನೆನಿಸಿದ ಮಿತ್ರನು ಸರ್ವವನ್ನು ಸೃಷ್ಟಿಮಾಡುವವನೆಂದು ಹೇಳಿದೆ. ಆದರಲ್ಲಿ ಪ್ರಮಾಣಕೊಟ್ಟು ಹೇಳುತ್ತಾರೆ) ದ್ಯು ಪೃಥಿವೀ ವಾಯು ಆಕಾಶ ಜಲ ತೇಜಸ್ಸುಗಳಿಗೆ, ಅಂದರೆ ಅಜೀತನಗಳ ಸಮುದಾಯಕ್ಕೂ, ವೃಷ್ಟಿ ಅನ್ನ ಪ್ರಾಣ ಗಳಿಗೂ, ಮಂತ್ರಗಳಿಗೂ, ಕರ್ಮಗಳಿಗೂ ಲೋಕ, ಸರ್ವವಸ್ತುಗಳಿಗೂ, ಎಲ್ಲದಕ್ಕೂ, ಮಿತ್ರನೆನಿಸಿ ದವನು ಸೃಷ್ಟಿಮಾಡುವವನು. (೪) (ಈ ದ್ಯಾವಾಪೃಥಿವ್ಯಾದಿಗಳಲ್ಲಿ ಜೀತನ ಅಜೀತನಗಳೆಂದು ವಿಭಾಗ ವಿದ್ದರೆ ಹೀಗೆ ಅರ್ಥ ಹೇಳಬಹುದಿತ್ತು. ಅದೇನೇ ಹೇಗೆ ಸಿದ್ಧಿಸುತ್ತದೆ.? ಅಜೀತನಗಳನ್ನು ಮಿತ್ರನು ಸೃಷ್ಟಿಸುವುದಾದರೆ ದ್ಯಾವಾಪೃಥಿವ್ಯಾದಿ ಜೀತನಗಳನ್ನು ಸೃಷ್ಟಿಸುವವನು ಯಾರು ಎಂದರೆ.) ಪ್ರಾಣ ಗಳೂ, ದ್ಯು ಆರಭ್ಯ ತೇಜಃ ಪರ್ಯಂತವಾದವುಗಳು ಮಂತ್ರಮೊದಲಾದವುಗಳು ಇವುಗಳಲ್ಲಿ ಜೀತನ ಅಜೀತನ ಎಂದು ಭೇದವಿದೆ. ಅದರಲ್ಲಿ ಮಿತ್ರನು ಜಡಗಳನ್ನು ಸೃಷ್ಟಿಸುವವನು. ವಾಯು ಮೊದ ಲಾದವರು ಜೀತನಗಳನ್ನು ಸೃಷ್ಟಿಸುವವರು, ಎಂದು ವಸ್ತುತತ್ವವೆಂಬ ಗ್ರಂಥದಲ್ಲಿದೆ. ॥ ೧೩ ॥

ಪೀ—**ಸರ್ವಂ ಸಂಕಲ್ಪ್ಯತೇ** ಎಂದು ಉಪಸಂಹಾರದಲ್ಲಿ **ಸರ್ವ** ಎಂಬ ಶಬ್ದವಿದ್ದುದರಿಂದ **ಅಚಿ ತಾಂ ಕಲ್ಪಕಃ** ಎಂದು ಜಡಗಳನ್ನು ಸೃಷ್ಟಿಸಿದನೆಂದು ಅರ್ಥಹೇಳಿದ್ದು ಹೇಗೆ? ಎಂದರೆ ವಿಶೇಷ ವಚನ ವನ್ನನುಸರಿಸಿ ಸಾಮಾನ್ಯವಾದ **ಸರ್ವ** ಎಂಬ ಶಬ್ದವನ್ನು ಸಂಕೋಚಮಾಡಿಕೊಳ್ಳಬೇಕೆನ್ನುತ್ತಾ

ಭಾ. ॥ (೧) ಸರ್ವಮಜೀತನಂ ಸಂಕಲ್ಪ್ಯತೇ ॥ (೨) ಅಸ್ಥಿರಸ್ಮರಣಂ ಚಿತ್ತಂ ಸ್ಥಿರ-ಸಂಸ್ಮರಣಂ ಸ್ಮರಃ । ಇತಿ ಶಬ್ದನಿರ್ಣಯೇ ॥ (೩) ವೇದನಂ ಜ್ಞಾನಮಾತ್ರಂ ಸ್ಯಾದ್ವಿದ್ವತ್ವಂ ತು ವಿಶೇಷತಃ । ಇತಿ ಚ ॥ (೪) ಮೋಕ್ಷೇ ಯಸ್ಮಿನ್ವಸೇಶಃ ಸ್ಯಾತ್ಸಾ ಪ್ರತಿಷ್ಠಾ ಹಿ ಮುಖ್ಯಿತಃ । ಉಪಚಾರತಸ್ತ್ವವಸ್ಥಾನಮಿತಿ ಶಬ್ದವಿದೋ ವಿದುಃ ॥ ಇತಿ ಚ ॥ (೫) ದೇವಾ ಮನುಷ್ಯಕಾಂ ಪ್ರಾಪ್ತಾ ವಿಜ್ಞೇಯಾ ದೇವಮಾನುಷಾಃ । ಧ್ಯಾನಂ ಕುರ್ವಂತ ಇವ ಕೇ ನೈವ ಸ್ಯುರ್ಬಹುಭಾಷಿಣಃ ॥ ಬ್ರೂಯೇಽರರ್ಥವತೀಂ ವಾಚಂ ನಾನಾರ್ಥಾಂ ಪ್ರಾಯಶೋ ಹಿ ತೇ । ಇತಿ ಪಾದ್ಮೇ ॥ (೬) ಬಲಂ ಜ್ಞಾನಬಲಂ ಚೈವ ಬಾಹ್ಯಂ ಚೇತಿ ದ್ವಿಧಾ ಮತಂ । ಯುಕ್ತಿಜ್ಞಾನಾತ್ (ಯುಕ್ತಿಜ್ಞತಾ) ಜ್ಞಾನಬಲಂ ತಜ್ಜ್ಞಾನಾದಧಿಕಂ ಮತಂ (ಸಾ ಜ್ಞಾನಾದಧಿಕಾ ಮತಾ) ॥ ಇತಿ ತತ್ತ್ವಸಾರೇ ॥ ॥ ೧೩ ॥

ಅ ॥ (೧) ಸರ್ವ ಶಬ್ದಕ್ಕೆ ಜೀತನ ಅಜೀತನ ಸರ್ವಜಗತ್ತು ಎಂದು ಅರ್ಥಮಾಡಬೇಕೆಂದಿದ್ದರೂ **ಅಜಿತಾಂ ಕಲ್ಪಕಃ** ಎಂಬ ವಿಶೇಷ ವಚನವನ್ನು ಆದರಿಸಿ ಅಜೀತನ ಸರ್ವವೆಂದು ಸಂಕೋಚಮಾಡಿ ಕೊಳ್ಳಬೇಕು. ಅಜೀತನನೆಲ್ಲವೂ ಸೃಷ್ಟಿಸಲ್ಪಡುತ್ತದೆ. (೨) (೫ನೇ ಖಂಡದ ೧ನೇ ಮಂತ್ರದಲ್ಲಿದ್ದ **ಚಿತ್ತ**, ೧೩ನೇ ಖಂಡದ ೧ನೇ ಮಂತ್ರದಲ್ಲಿದ್ದ **ಸ್ಮರ** ಶಬ್ದಗಳ ಅರ್ಥಹೇಳುತ್ತಾರೆ.) ಅಸ್ಥಿರವಾದ ಸ್ಮರಣೆಯು **ಚಿತ್ತ**ವೆನಿಸುತ್ತದೆ. ಸ್ಥಿರವಾದ ಸ್ಮರಣವು **ಸ್ಮರ** ಎನಿಸುತ್ತದೆ, ಎಂದು ಶಬ್ದನಿರ್ಣಯದಲ್ಲಿದೆ. (೩) (೫ನೇ ಖಂಡದ ೨ನೇ ಮತ್ರದಲ್ಲಿದ್ದ **ಯದಯಂ ವೇದ ಯದ್ಯಾ ಅಯಂ ವಿದ್ವಾನ್** ಎಂಬಲ್ಲಿದ್ದ **ವೇದ ವಿದ್ವಾನ್** ಎಂಬ ಶಬ್ದಗಳ ಅರ್ಥಹೇಳುತ್ತಾರೆ.) ಸಾಮಾನ್ಯ ಜ್ಞಾನವು ವೇದನವೆನಿಸುತ್ತದೆ. ವಿಶೇಷ ಜ್ಞಾನವು ವಿದ್ವತ್ವವೆನಿಸುತ್ತದೆ. (ವೇದ=ಸಾಮಾನ್ಯವಾಗಿ ತಿಳಿದವನು ವಿದ್ವಾನ್=ವಿಶೇಷತಿಳಿದವನು)

(೪) (೫ನೇ ಖಂಡದ ೨ನೇ ಮತ್ರದಲ್ಲಿದ್ದ **ಚಿತ್ತಂ ಹ್ಯೇಕಾಯನಂ ಚಿತ್ತಂ ಪ್ರತಿಷ್ಠಾ** ಎಂಬಲ್ಲಿದ್ದ ಏಕಾಯನ ಪ್ರತಿಷ್ಠಾಶಬ್ದಗಳಿಗೆ ಅರ್ಥಹೇಳುತ್ತಾರೆ.) **ಮೋಕ್ಷದಲ್ಲಿ** ಮುಖ್ಯವಾಗಿ ಆಶ್ರಯವಾಗಿರುವುದು **ಪ್ರತಿಷ್ಠಾ** ಎನ್ನಿಸುತ್ತದೆ. ಅಮುಖ್ಯವಾಗಿ ಆಶ್ರಯವಾಗಿರುವುದು **ಏಕಾಯನ** ಎನಿಸುತ್ತದೆ, ಎಂದು ಶಬ್ದಾರ್ಥವನ್ನು ತಿಳಿದವರು ಹೇಳುತ್ತಾರೆ. (೫) (೬ನೇ ಖಂಡದ ೧ನೇ ಮಂತ್ರದಲ್ಲಿದ್ದ **ಧ್ಯಾಯಂತೀವ ದೇವಮನುಷ್ಯಾಃ** ಎಂಬುದರ ಅರ್ಥವನ್ನು ಪ್ರಮಾಣಕೊಟ್ಟು ಹೇಳುತ್ತಾರೆ.) ಮನುಷ್ಯರಾಗಿ ಅವತರಿಸಿದ ದೇವತೆಗಳು ದೇವಮನುಷ್ಯರೆನಿಸುತ್ತಾರೆ. ಅವರು ಧ್ಯಾನಮಾಡುತ್ತಿರುತ್ತಾರೆ ಬಹುಭಾಷಿಗಳಲ್ಲ. ಅಂದರೆ ದೇವಮನುಷ್ಯರು ಪ್ರಾಯಶಃ ಸಾರ್ಥಕವಾದ ನಾನಾರ್ಥಗಳುಳ್ಳ ಮಾತನ್ನೇ ಆಡುವರು, ಎಂದು ಸಾಧ್ಯವುರಾಣದಲ್ಲಿದೆ. (೬) (ಅಜ್ಞಾನಿಗಳಿಗೂ ಶರೀರ ಬಲವು ಕಂಡದ್ರಿಂದ (೪ನೇ ಖಂಡದಲ್ಲಿ ವಿಜ್ಞಾನದಿಂದ ಬಲವು ಶ್ರೇಷ್ಠವೆಂದು ಹೇಳಿದ್ದು ಹೇಗೆ ಕೂಡುತ್ತದೆ., ಎಂದರೆ—) **ಜ್ಞಾನಬಲ ಬಾಹ್ಯಬಲ** ಎಂದು ಬಲವು ಎರಡುವಿಧವು. ಯುಕ್ತಿಗಳಿಂದುಂಟಾದ ನಿರ್ಣಯವು ಜ್ಞಾನಬಲವು. ಅದು ಕೇವಲ ಜ್ಞಾನದಿಂದ ಶ್ರೇಷ್ಠವು. (ಅಂದರೆ ಬಾಹ್ಯಬಲವು ಜ್ಞಾನದಿಂದ ಶ್ರೇಷ್ಠವಾಗದಿದ್ದರೂ ಯುಕ್ತಿಯಿಂದುಂಟಾಗುವ ನಿರ್ಣಯರೂಪವಾದ ಜ್ಞಾನಬಲವು ಕೇವಲಜ್ಞಾನದಿಂದ ಶ್ರೇಷ್ಠವಾಗಿರುವುದರಿಂದ ವಿಜ್ಞಾನಕ್ಕಿಂತ ಬಲವು ಶ್ರೇಷ್ಠವೆಂದು ಹೇಳಿದ್ದು) ಎಂದು ತತ್ವಸಾರದಲ್ಲಿದೆ. ॥ ೧೩ ॥

ಪೀ—ಹೀಗಾದರೆ ೯ನೇ ಖಂಡದಲ್ಲಿ ಬಲಕ್ಕಿಂತ ಅನ್ನವು ಶ್ರೇಷ್ಠವೆಂದು ಹೇಳಿದ್ದು ಯುಕ್ತವಲ್ಲ, ಬಾಹ್ಯಬಲಕ್ಕೇನೇ ಅನ್ನವು ಕಾರಣವಾಗಿರುವುದರಿಂದ ಬಾಹ್ಯಬಲಕ್ಕಿಂತ ಅನ್ನವು ಶ್ರೇಷ್ಠವಾದರೂ ಜ್ಞಾನಬಲಕ್ಕೆ ಕಾರಣವಾಗದಿರುವುದರಿಂದ ಜ್ಞಾನಬಲಕ್ಕಿಂತ ಅನ್ನವು ಶ್ರೇಷ್ಠವಾಗಲಾರದು, ಎಂದರೆ—

ಭಾ. ॥ (೧) ಅನ್ನಂ ಜ್ಞಾನರಸಾನ್ನಂ ಚ ಬಾಹ್ಯಮನ್ನಮಿತಿ ದ್ವಿಧಾ । ಜ್ಞಾನಾನ್ನಂ ಜ್ಞಾನಬಲತಃ ಶ್ರೇಷ್ಠಂ ಜ್ಞಾನರತಿರ್ಹಿ ತತ್ । ಯದ್ಬಾಹ್ಯಂ ತು ಬಲಂ ತಸ್ಮಾದ್ಬಾಹ್ಯಮನ್ನಂ ವಿಶಿಷ್ಯತೇ ॥ (೨) ಆಪಶ್ಚ ದ್ವಿವಿಧಾಃ ಪ್ರೋಕ್ತಾಸ್ತೃಪ್ತಿರ್ಯಾ ಜ್ಞಾನತೋ ರತೇಃ । ತಾ ಜ್ಞೇಯಾ ಆಂತರಾ ಆಪೋ ಬಾಹ್ಯಾಸ್ತು ದ್ರವರೂಪಕಾಃ । ಆಂತರಾನ್ನಾದಾಂತರಾಪೋ ಬಾಹ್ಯಾದ್ಬಾಹ್ಯಾಸ್ತಥಾ ವರಾಃ ॥ (೩) ಏವಂ ತೇಜಃ ಪ್ರಾತಿಭಾಖ್ಯಂ ಬಾಹ್ಯಂ ಚೇತಿ ದ್ವಿಧಾ ಮತಂ । ಪ್ರಾತಿಭಂ ಜ್ಞಾನತೃಪ್ತೇಶ್ಚ ಪರಂ ॥ (೪) ಆಕಾಶ ಏವ ಚ । ಸ್ಥಿರಾ ತು ಪ್ರತಿಭಾಂತಸ್ಥಾ ಛಿದ್ರಮೇವ ಹಿ ಬಾಹ್ಯಗಃ (ಗಂ) । ಸ್ಥಿರಾ ಹಿ ಪ್ರತಿಭಾ ಶ್ರೇಷ್ಠಾ ಚಂಚಲಾ ಯಾ ॥ (೫) ಸ್ಮರಾಭಿಧಾ । ಏಕಧೈವ ಸ್ಮೃತಿಃ ಶ್ರೇಷ್ಠಾ ॥ (೬) ಆಶಾಃಪರೋಕ್ಷದೃಗಾತ್ಮಕಂ । ಶ್ರೇಷ್ಠಂ ಸುಖಂ ॥ (೭) ತತೋ ಮೋಕ್ಷೇ ಪ್ರಾಣಾಖ್ಯಂ ಪರಮಂ ಸುಖಂ ॥ ೧೪ ॥

ಅ ॥ (೧) (1) ಜ್ಞಾನದಿಂದುಂಟಾಗುವ ಆನಂದರೂಪವಾದ ಆಂತರ ಅನ್ನವು (2) ಬಾಹ್ಯವಾದ ಅನ್ನವು, ಹೀಗೆ ಅನ್ನವು ಎರಡು ವಿಧವು. ಆದರಲ್ಲಿ ಜ್ಞಾನಾನ್ನವು ಜ್ಞಾನಬಲಕ್ಕಿಂತ ಶ್ರೇಷ್ಠವು. ಹೇಗೆಂದರೆ ಜ್ಞಾನಾನ್ನವು ಜ್ಞಾನದಿಂದುಂಟಾಗುವ ಆನಂದರೂಪವು. ಬಾಹ್ಯಬಲಕ್ಕಿಂತ ಬಾಹ್ಯವಾದ ಅನ್ನವು ಉತ್ತಮವಾಗಿದೆ. (೨) (ಹಾಗಾದರೆ ೧೦ನೇ ಖಂಡದಲ್ಲಿ ಅನ್ನಕ್ಕಿಂತ ಜಲವು ಶ್ರೇಷ್ಠವೆಂದು ಹೇಳಿದ್ದು ಹೇಗೆ? ಜಲವು ಎರಡು ವಿಧವಾದ ಅನ್ನಕ್ಕಿಂತ ಶ್ರೇಷ್ಠವಲ್ಲ ಎಂದರೆ) ಜ್ಞಾನದಿಂದುಂಟಾಗುವ ಆನಂದದಿಂದ ಪ್ರಕಟವಾಗುವ ತೃಪ್ತಿಯು ಆಂತರ ಆಪ್‌ಗಳೆನಿಸುತ್ತವೆ, ದ್ರವರೂಪವಾದವುಗಳು (ಸ್ವಾಭಾವಿಕವಾಗಿ ದ್ರವತ್ವವುಳ್ಳವುಗಳು) ಬಾಹ್ಯಜಲಗಳು. ಎನಿಸುತ್ತವೆ, ಹೀಗೆ ಆಪ್‌ಗಳು ಆಂತರ ಬಾಹ್ಯಗಳೆಂದು ಎರಡು ವಿಧಗಳು. ಆದರಲ್ಲಿ ಜ್ಞಾನದಿಂದುಂಟಾಗುವ ರತಿರೂಪವಾದ ಆಂತರವಾದ ಅನ್ನಕ್ಕಿಂತ ಆಂತರಗಳಾದ

ತೃಪ್ತಿರೂಪಗಳಾದ ಜಲಗಳು ಶ್ರೇಷ್ಠಗಳು. ಬಾಹ್ಯವಾದ ಅನ್ನಕ್ಕಿಂತ ಬಾಹ್ಯಗಳಾದ ದ್ರವರೂಪಗಳಾದ ಜಲಗಳು ಶ್ರೇಷ್ಠಗಳು. (೩) (ಹೀಗಾದರೆ ೧೧ನೇ ಖಂಡದಲ್ಲಿ ಜಲಗಳಿಗಿಂತ ತೇಜಸ್ಸು ಶ್ರೇಷ್ಠವೆಂದು ಹೇಳಿದ್ದು ಹೇಗೆ ಕೂಡುತ್ತದೆ, ಎಂದರೆ—) ಹೀಗೆಯೇ ಪ್ರಾತಿಭ ಬಾಹ್ಯ ಎಂದು ತೇಜಸ್ಸು ಎರಡು ವಿಧವು. ಅದರಲ್ಲಿ ಆಂತರವಾದ ಆಪ್‌ಗಿಂತ ಜ್ಞಾನಾನಂದದಿಂದುಂಟಾಗುವ ವಿಷಯಾಲಂಬುದ್ಧಿರೂಪವಾದ ಆಂತರವಾದ ಪ್ರಾತಿಭ ಎಂಬ ತೇಜಸ್ಸು ಶ್ರೇಷ್ಠವು. (ಬಾಹ್ಯದ್ರವರೂಪವಾದ ಅಪ್ (೨೮) ಗಿಂತ ಬಾಹ್ಯವಾದ ಜಡರೂಪವಾದ ತೇಜಸ್ಸು ಶ್ರೇಷ್ಠವು.) (೪) (೧೨ನೇ ಖಂಡದಲ್ಲಿ ತೇಜಸ್ಸಿಗಿಂತ ಆಕಾಶಕ್ಕೆ ಶ್ರೇಷ್ಠತ್ವ ಹೇಳಿದ್ದು ಹೇಗೆಂದರೆ—) ಆಂತಸ್ಥಾಕಾಶ ಬಾಹ್ಯಾಕಾಶ ಎಂದು ಆಕಾಶವು ಎರಡು ವಿಧವು. (1) ಸ್ಥಿರವಾದ *ಪ್ರತಿಭಾರೂಪವಾದುದು ಆಂತರಾಕಾಶವು (೭) ಛಿದ್ರಾತ್ಮಕವಾದುದು ಬಾಹ್ಯಾಕಾಶವು. ಅದರಲ್ಲಿ ಜಂಜಲವಾದ ಪ್ರತಿಭೆಯಿಂದ ಸ್ಥಿರವಾದ ಪ್ರತಿಭೆಯು ಶ್ರೇಷ್ಠವು. (ಹೀಗೆಯೇ ಬಾಹ್ಯವಾದ ತೇಜಸ್ಸಿಗಿಂತ ಬಾಹ್ಯಾಕಾಶವು ಶ್ರೇಷ್ಠವು) (೫) (೧೩ನೇ ಖಂಡದಲ್ಲಿರುವ **ಸ್ಮರೋ ವಾ ಆಕಾಶಾದ್ಭೂಯಾನ್** ಎಂಬ ವಾಕ್ಯಕ್ಕೆ ಅರ್ಥಹೇಳುತ್ತಾರೆ.) ಅಚಂಜಲವಾದ (ಸ್ಥಿರವಾದ) ಪ್ರತಿಭೆಗಿಂತ ಸ್ಮರ ಎಂದು ಹೆಸರುಳ್ಳ ಒಂದೇ ಪ್ರಕಾರವಾದ ಧ್ಯಾನರೂಪವಾದ ಸ್ಮೃತಿಯು ಶ್ರೇಷ್ಠವು. (೬) (೧೪ನೇ ಖಂಡದಲ್ಲಿರುವ **ಆಶಾ ವಾವ ಸ್ಮರಾದ್ಭೂಯಸೀ** ಎಂಬ ವಾಕ್ಯದ ಅರ್ಥಹೇಳುತ್ತಾರೆ) ಹಿಂದೆ ಹೇಳಿದ ಧ್ಯಾನಕ್ಕಿಂತ ಆಶಾ ಎಂಬ ಅಪರೋಕ್ಷಜ್ಞಾನರೂಪವಾದ ಸುಖವು ಶ್ರೇಷ್ಠವು. (೭) (೧೫ನೇ ಖಂಡದಲ್ಲಿರುವ **ಪ್ರಾಣೋ ವಾ ಆಶಾಯಾ ಭೂಯಾನ್** ಎಂಬ ವಾಕ್ಯದ ಅರ್ಥಹೇಳುತ್ತಾರೆ.) ಅಪರೋಕ್ಷಜ್ಞಾನರೂಪವಾದ ಸುಖಕ್ಕಿಂತ ಮೋಕ್ಷದಲ್ಲಿ ಹೊಂದಲ್ಪಡುವ ಪ್ರಾಣ ಎಂಬ ಪರಮ ಸುಖವು ಶ್ರೇಷ್ಠವು (ಸ್ಮೃತಿ ಆಶಾ ಪ್ರಾಣ ಇವರು ಅಂತಃಪದಾರ್ಥರಾದುದರಿಂದ ಇವರಲ್ಲಿ ಎರಡು ವಿಧವಿಲ್ಲದಿರುವುದರಿಂದ ಎರಡು ವಿಧವೆಂದು ಹೇಳಲಿಲ್ಲ.) ॥ ೧೪ ॥

ಪೀ ಹೀಗೆ ಅನ್ನಮೊದಲಾದ ಶಬ್ದಗಳಿಂದ ಆಂತರ ಬಾಹ್ಯ ಎಂದು ಎರಡು ವಿಧವಾದ ಜಡವನ್ನೇ ಹೇಳಿರುತ್ತಾರೆ. ದೇವತೆಯನ್ನು ಹೇಳಲಿಲ್ಲ. ಅದುಕಾರಣ ಪೂರ್ವೋತ್ತರವಿರೋಧವು ಎಂದರೆ—

ಭಾ. ॥ (೧) ಉತ್ತರೋತ್ತರಮೇತದ್ಧಿ ವಾಯ್ವಂತಾಭಿಮತಂ ಸದಾ । ಬಾಹ್ಯಾದ್ಭ್ಯೋ ಬಾಹ್ಯಮನ್ನಂ ಚ ಜಾಯತೇ ॥ (೨) ಅನ್ಯತ್ತದನ್ಯಥಾ । ವ್ಯಕ್ತಿರಂತರ್ಗತಾನಾಂ ತು ವಿಪರೀತಕ್ರಮಾದ್ಭವೇತ್ ॥ (೩) ತಥಾಽಪಿ ಮೋಕ್ಷಗಂ ಯಸ್ಮಾತ್ ಸ್ವಭಾವೋ ನಿತ್ಯ ಏವ ತು । ಅತಸ್ತಸ್ಮಾದಾಪರೋಕ್ಷ್ಯಂ ಕಾದಾಚಿತ್ಕಂ ಹಿ ಜಾಯತೇ ॥ (೪) ದೃಷ್ಟ್ಯಧೀನಾ ಸ್ಮೃತಿಶ್ಚೇಯಂ ಪ್ರತಿಭಾ ಸ್ಮೃತಿಸಂಭವಾ । ಸ್ಥೈರ್ಯಮಾಲಂಬ್ಯ ತು ಚಲಮನ್ಯಥಾ ನೈವ ತಿಷ್ಠತಿ ॥ (೫) ಪ್ರತಿಭಾತಶ್ಚ ತೃಪ್ತಿಃ ಸ್ಯಾದತೃಪ್ತಸ್ಯ ತು ಕಾ ರತಿಃ । ತ(ಅ)ತ ಏವಂ ಕ್ರಮಾದೇವ ವರಿಷ್ಠಃ ಪ್ರಾಣಜೋ ಗುಣಃ ॥ ಇತಿ ಚ ॥ ೯–೪....೧೪ ॥ ॥ ೧೫ ॥

ಅ ॥ (೧) ವಾಯುಪರ್ಯಂತವಾಗಿರುವವರು ಸದಾ ಮೇಲುಮೇಲಿನವರು ಶ್ರೇಷ್ಠರು (ಅನ್ನ ವನ್ನು ಆರಂಭಿಸಿ ಪ್ರಾಣಪರ್ಯಂತ ಬಾಹ್ಯವಾದ ಬಲ ಅನ್ನ ಆಪ್ ತೇಜಸ್ಸುಗಳಿಗಿಂತ ಬಾಹ್ಯವಾದ ಅನ್ನ ಆಪ್ ತೇಜಸ್ಸು ಆಕಾಶಗಳು ಶ್ರೇಷ್ಠಗಳು, ಎಂಬಲ್ಲಿ ಯುಕ್ತಿಹೇಳುತ್ತಾರೆ.) ಬಾಹ್ಯವಾದ ಜಲದಿಂದ ಬಾಹ್ಯವಾದ ಅನ್ನವು ಹುಟ್ಟುತ್ತದೆ. (ಬಾಹ್ಯವಾದ ಅನ್ನ ದೆಶೆಯಿಂದ ಬಾಹ್ಯವಾದ ಬಲವು ಹುಟ್ಟುತ್ತದೆ, ಇತ್ಯಾದಿ ಪ್ರಕಾರ ಇಟ್ಟುಕೊಳ್ಳಬೇಕು) (ಕಾರ್ಯಕಾರಣಗಳಲ್ಲಿ ಕಾರಣವು ಶ್ರೇಷ್ಠವು.) (೩) ಆಂತರ ಅನ್ನಾದಿಗಳು

* ಪ್ರಜ್ಞಾಂ ನವನವೋನ್ಮೇಷಶಾಲಿನೀಂ ಪ್ರತಿಭಾಂ ವಿದುಃ। ಹೊಸಹೊಸವಾಗಿ ಜ್ಞಾನವಿಶೇಷವುಂಟಾಗುವುದು ಪ್ರತಿಭೆಯು.

ಇದಕ್ಕೆ ವ್ಯತ್ಯಾಸವಾಗಿ ಅಂದರೆ ಅಂತರಗಳಾದ ಅನ್ನಾದಿಗಳಿಗೆ ವಿಪರೀತಕ್ರಮದಿಂದ ಅಭಿವ್ಯಕ್ತಿಯಾಗುವುದು. (ಅಂದರೆ ಜ್ಞಾನಬಲದಿಂದ ಜ್ಞಾನರತಿಯು. ರತಿಯಿಂದ ತೃಪ್ತಿಯು. ತೃಪ್ತಿಯಿಂದ ಚಲಪ್ರತಿಭೆಯು. ಚಲಪ್ರತಿಭೆಯಿಂದ ಸ್ಥಿರಪ್ರತಿಭೆಯು. ಇತ್ಯಾದಿ ಬಾಹ್ಯಬಲ ಅನ್ನಾದಿ ಕಾರ್ಯಕಾರಣಭಾವ ಕ್ರಮಕ್ಕಿಂತ ವಿಪರೀತಕ್ರಮವಾಗಿ ಕಾರ್ಯಕಾರಣಭಾವವು ಆಗುವುದು) (೩) (ಹೀಗಾದರೆ—ಕಾರಣಗಳೇ ಉತ್ತಮಗಳೆಂದು ಇಷ್ಟವಾಗಿರುವ ಪ್ರಯುಕ್ತ ರತಿಯನ್ನಾರಂಭಿಸಿ ಮೋಕ್ಷಪರ್ಯಂತವಾದವುಗಳು ಹಿಂದೆ ಹೇಳಿದ ಪ್ರಕಾರ ಕಾರ್ಯಗಳಾಗಿರುವುದರಿಂದ ಅವುಗಳು ಉತ್ತಮಗಳಾಗದೆ ಹೋಗುವವು. ಎಂದರೆ—) ಯದ್ಯಪಿ ಹಿಂದೆ ಹೇಳಿದ ಪ್ರಕಾರ ಮೋಕ್ಷವು ರತ್ಯಾದಿಗಳಿಂದ ಅಭಿವ್ಯಂಗ್ಯವಾಗುತ್ತದೆ. ಆದರೂ ಪ್ರಾಣ ನಿಂದುಂಟಾಗುವ ಪರಮ ಸುಖರೂಪವಾದ ಗುಣವು ಎಲ್ಲಾದಕ್ಕಿಂತಲೂ ಶ್ರೇಷ್ಠವು. (ಅದು ಹೇಗೆಂದರೆ-) ಮೋಕ್ಷದಲ್ಲಿರತಕ್ಕ ಸುಖವು ಜೀವಸ್ವಭಾವವು. ಅದುಕಾರಣ ನಿತ್ಯವೇ. ನಿತ್ಯವಾದಕಾರಣ ಮೋಕ್ಷದಲ್ಲಿರತಕ್ಕ ಆನಂದ ಯೋಗ್ಯತೆಯು ಇರುವಾಗ ಅಪರೋಕ್ಷ (ಪ್ರತ್ಯಕ್ಷ) ಜ್ಞಾನವು (ಅಂತಃಕರಣ ವಿಕಾರವಾಗಿರುವುದರಿಂದ) ಕದಾಚಿತ್ ಹುಟ್ಟುತ್ತದೆ. (ಮೋಕ್ಷವನ್ನು ಹೊಂದುವ ಯೋಗ್ಯತೆಯನ್ನನುಸರಿಸಿ ಅಪರೋಕ್ಷ ಜ್ಞಾನವು ಹುಟ್ಟುತ್ತದೆ.) (೪) ಹಿಂದೆ ಹೇಳಿದ ಧ್ಯಾನವು ಪ್ರತಕ್ಷ ಯೋಗ್ಯತೆಯನ್ನನುಸರಿಸಿರುವುದು. ಸ್ಥಿರವಾದ ಪ್ರತಿಭೆಯು ಸ್ವಾಭಾವಿಕಯೋಗ್ಯತೆಯಿಂದ ಹುಟ್ಟುವುದು. ಪ್ರತಿಭೆಯ ಸ್ಥಿರತ್ವವನ್ನು ನಿಮಿತ್ತವಾಗಿಟ್ಟುಕೊಂಡು—ಚಲಪ್ರತಿಭೆಯು. (ಸ್ಥಿರಪ್ರತಿಭಾ ಯೋಗ್ಯವಾದುದಕ್ಕೇನೇ ಚಲಪ್ರತಿಭೆಯು,) ಸ್ಥಿರಪ್ರತಿಭಾಯೋಗ್ಯತೆಯು ಇಲ್ಲವಾದರೆ ಚಲಪ್ರತಿಭೆಯೇ ಇರಲಾರದು. (೫) ಚಲಪ್ರತಿಭಾಯೋಗ್ಯತೆಯಿಂದಲೇ ತೃಪ್ತಿಯಾಗುವುದು. ತೃಪ್ತಿಯಲ್ಲಿ ಯೋಗ್ಯತೆಯಿಲ್ಲದವನಿಗೆ ಜ್ಞಾನದಿಂದ ಆನಂದವೇ ಉಂಟಾಗಲಾರದು. ಹಿಂದೆ ಹೇಳಿದ ಪ್ರಕಾರ ಮೋಕ್ಷಕ್ಕಾಗಿ ಅಪರೋಕ್ಷ ಜ್ಞಾನಾದಿಗಳು ಬೇಕಾಗಿರುವುದರಿಂದ ರತಿಯಿಂದ ತೃಪ್ತಿಯು ಶ್ರೇಷ್ಠವು, ಇತ್ಯಾದಿ ಕ್ರಮದಿಂದಲೇ ಪ್ರಾಣನಿಂದ ಉಂಟಾಗುವ ಪರಮ ಸುಖರೂಪವಾದ ಗುಣವು ಶ್ರೇಷ್ಠವು. ॥ ೯—೪....೧೪ ॥ ॥ ೧೫ ॥

॥ ೪—೧೪ ॥ ನಾಲ್ಕು—ಆರಂಭಿಸಿ ಹದಿನಾಲ್ಕು ಖಂಡವು ಮುಗಿಯಿತು

೧೫ನೇ ಖಂಡವು

ಉ. ॥ ಪ್ರಾಣೋ ವಾ ಆಶಾಯಾ ಭೂಯಾನ್ಯಥಾ ವಾ ಅರಾ ನಾಭೌ ಸಮರ್ಪಿತಾ ಏವಮಸ್ಮಿನ್ ಪ್ರಾಣೇ ಸರ್ವಂ ಸಮರ್ಪಿತಂ ಪ್ರಾಣಃ ಪ್ರಾಣೇನ ಯಾತಿ ಪ್ರಾಣಃ ಪ್ರಾಣಂ ದದಾತಿ ಪ್ರಾಣಾಯ ದದಾತಿ ಪ್ರಾಣೋ ಹ ಪಿತಾ ಪ್ರಾಣೋ ಮಾತಾ ಪ್ರಾಣೋ ಭ್ರಾತಾ ಪ್ರಾಣಃ ಸ್ವಸಾ ಪ್ರಾಣ ಆಚಾರ್ಯಃ ಪ್ರಾಣೋ ಬ್ರಾಹ್ಮಣಃ ॥ ೧ ॥

ಅ ॥ ಪ್ರಕೃಷ್ಟಸುಖರೂಪವಾಡ, ಸ್ವರೂಪಾನಂದ ರೂಪಮುಕ್ತಿಗೆ ಅಭಿಮಾನಿಯಾದ, ಸರ್ವರಿಗೆ ಜೇಷ್ಠಕನಾದುದರಿಂದ ಪ್ರಾಣನೆನಿಸಿಕೊಂಡ ಮುಖ್ಯಪ್ರಾಣನೂ ಚತುರ್ಮುಖ ಬ್ರಹ್ಮನೂಕೂಡ ಭಾರತೀ ಸರಸ್ವತಿಯರಿಗಿಂತ ಶ್ರೇಷ್ಠನು. (ಉಪಾಸಕರ ವರ್ಗದಲ್ಲಿ ಸರ್ವೋತ್ತಮನಾದ ಮುಖ್ಯಪ್ರಾಣನ ಮಹಿಮೆ ಹೇಳುತ್ತಾರೆ) ಹೇಗೆ ರಥಚಕ್ರದ ಕೀಲುಗಳು ರಥದ ನಾಭಿ (ಒಳಗಡೆ ಇರುವ ಅಡ್ಡಕೀಲುಗಳಿಗೆ ಇಧಾರವಾದ ಹೊಕ್ಕಳಿನಂತೆ ಇದ್ದುದು) ಯಲ್ಲಿ ಇಡಲ್ಪಟ್ಟಿವೆಯೋ ಹಾಗೆಯೇ ಮುಖ್ಯಪ್ರಾಣನಲ್ಲಿ ಸರ್ವ

ಜಗತ್ತು ಆಶ್ರಿತವಾಗಿದೆ. (ಇದರಿಂದ ಮುಖ್ಯಪ್ರಾಣನೇ ಸರ್ವೋತ್ತಮನು ಸರ್ವಾಧಾರನೆಂದು ತಿಳಿಯು ಕೂಡದೆನ್ನುತ್ತಾರೆ.) ಧಾರಣೆಗಿಂತ ಉತ್ತಮನಾದ ಮುಖ್ಯಪ್ರಾಣನೂ ಪರಬ್ರಹ್ಮನ ಅಧೀನನಾಗಿಯೇ ಪ್ರವೃತ್ತಿಮಾಡುತ್ತಾನೆ. ಮುಖ್ಯಪ್ರಾಣನು ಪರಮಾತ್ಮನನ್ನು ಶಿಷ್ಯರಿಗೆ ಉಪದೇಶಿಸುತ್ತಾನೆ. ಆದುಕಾರಣ ಪರಮಾತ್ಮನು ಮುಖ್ಯಪ್ರಾಣನಿಗೆ ಅಭೀಷ್ಟವನ್ನು ಕೊಡುತ್ತಾನೆ. ಭಕ್ತರಿಗೆ ಮುಖ್ಯಪ್ರಾಣನು ಮೋಕ್ಷದಲ್ಲಿ ಶ್ರೀಹರಿಯನ್ನು ಹೊಂದಿಸಿಕೊಡುತ್ತಾನೆ. (ತಂದೆತಾಯಿ ಮೊದಲಾದವರೆಲ್ಲರ ಜೀವನಕ್ಕೆ ಕಾರಣನಾದು ದರಿಂದ ಮುಖ್ಯಪ್ರಾಣನು ಸರ್ವತ್ರ ಸನ್ನಿಹಿತನಾಗಿರುತ್ತಾನೆಂಬ ಮಹಿಮೆಹೇಳುತ್ತಾರೆ.) ಮುಖ್ಯಪ್ರಾಣನು ತಂದೆಯ ಜೀವನಕ್ಕೆ ಕಾರಣನಾಗಿ ತಂದೆಯಲ್ಲಿದ್ದುದರಿಂದ ಪಿತಾ ಎನಿಸುತ್ತಾನೆ ತಾಯಿಯ ಜೀವನಕ್ಕೆ ಕಾರಣನಾಗಿ ತಾಯಿಯಲ್ಲಿದ್ದುದರಿಂದ ಮಾತಾ ಎನಿಸುಸುತ್ತಾನೆ. ಹೀಗೆಯೇ ಸಹೋದರರ ಜೀವನಕ್ಕೂ ಸಹೋದರಿಯರ ಜೀವನಕ್ಕೂ, ಆಚಾರ್ಯರ ಜೀವನಕ್ಕೂ ಬ್ರಾಹ್ಮಣರ ಜೀವನಕ್ಕೂ ಕಾರಣನಾಗಿ ಅಲ್ಲಲ್ಲಿ ಇದ್ದ ಪ್ರಯುಕ್ತ ಆಯಾಯ ಹೆಸರುಳ್ಳವನು ಆಗುತ್ತಾನೆ. ॥ ೧ ॥

ಪೀ—ಹಿಂದೆ ಹೇಳಿದ್ದನ್ನೇ ದೃಢೀಕರಿಸುತ್ತಾರೆ—

ಉ. ॥ ಸ ಯದಿ ಪಿತರಂ ವಾ ಮಾತರಂ ವಾ ಭ್ರಾತರಂ ವಾ ಸ್ವಸಾರಂ ವಾऽऽಚಾರ್ಯಂ ವಾ ಬ್ರಾಹ್ಮಣಂ ವಾ ಕಿಂಚಿದ್ಭೃಶಮಿವ ಪ್ರತ್ಯಾಹ ಧಿಕ್ ತ್ವಾಸ್ತ್ವಿತ್ಯೇವೈನಮೂಹುಃ ಪಿತೃಹಾ ವೈ ತ್ವಮಸಿ ಮಾತೃಹಾ ವೈ ತ್ವಮಸಿ ಭ್ರಾತೃಹಾ ವೈ ತ್ವಮಸಿ ಸ್ವಸೃಹಾ ವೈ ತ್ವಮಸ್ಯಾಚಾರ್ಯಹಾ ವೈ ತ್ವಮಸಿ ಬ್ರಾಹ್ಮಣಹಾ ವೈ ತ್ವಮಸೀತಿ ॥ ೨ ॥

ಅ ॥ ಯಾವನಾದರೂ ತಂದೆ ತಾಯಿ ಸಹೋದರ ಸಹೋದರಿ ಆಚಾರ್ಯ, ಬ್ರಾಹ್ಮಣ ಇವರನ್ನು ನಿಷ್ಕಾರಣವಾಗಿ ತ್ವಂಕಾರಾದಿಗಳಿಂದ ಅವಮಾನಿಸಿದರೆ–ನಿರಾಕರಿಸಿದರೆ—ಆಗ ಅಂತಹವನನ್ನು ನೀನು ಪಿತ್ರಾದಿಗಳನ್ನು ತಿರಸ್ಕರಿಸಿದವನಾಗಿರುತ್ತಿ ನಿನಗೆ ಧಿಕ್ಕಾರವಿರಲಿ. ನಿನಗೆ ಅಮಂಗಲವಾಗಲಿ, ಎಂದು ಜನರು ಹೇಳುತ್ತಾರೆ. ॥ ೨ ॥

ಉ. ॥ ಅಥ ಯದ್ಯಪ್ಯೇನಾನುತ್ಕ್ರಾಂತಪ್ರಾಣಾಂಛೂಲೇನ ಸಮಾಸಂ ವ್ಯತಿಷಂ ದಹೇನ್ನೈವೈನಂ ಬ್ರೂಯುಃ ಪಿತೃಹಾऽಸೀತಿ ನ ಮಾತೃಹಾऽಸೀತಿ ನ ಭ್ರಾತೃಹಾऽಸೀತಿ ನ ಸ್ವಸೃಹಾऽಸೀತಿ ನಾಚಾರ್ಯಹಾऽಸೀತಿ ನ ಬ್ರಾಹ್ಮಣಹಾऽಸೀತಿ ॥ ೩ ॥

ಅ ॥ ಯದ್ಯಪಿ ಪ್ರಾಣಹೋದ ಪಿತ್ರಾದಿಗಳ ದೇಹಗಳನ್ನು ಸುಟ್ಟರೆ (ಅಂದರೆ ಮ ಖ್ಯಪ್ರಾಣನು ಬಿಟ್ಟ ಶರೀರವುಳ್ಳವರನ್ನೇ) ಸಂಕೋಚದಿಂದ(ಒಂದೊಂದು ಅವಯವದಿಂದ) ಸುಟ್ಟರೂ, ಸಂಪೂರ್ಣ ಸುಟ್ಟರೂ, ಒಬ್ಬನು ಶೂಲಕ್ಕೆ ಹಾಕಿದರೂ, ಸುಡತಕ್ಕವನನ್ನು ತಂದೆ ತಾಯಿ ಮೊದಲಾದವರನ್ನು ಕೊಂದವನೆಂದು ಹೇಳುವುದಿಲ್ಲ ॥ ೩ ॥

ಉ. ॥ ಪ್ರಾಣೋ ಹ್ಯೇವೈತಾನಿ ಸರ್ವಾಣಿ ಭವತಿ ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನತಿವಾದೀ ಭವತಿ ತಂ ಚೇದ್ಬ್ರೂಯು

ರತಿವಾದ್ಯಸೀತ್ಯತಿವಾದ್ಯಸ್ಮೀತ್ಯೇವ ಬ್ರೂಯಾನ್ನಾಪಹ್ನುವೀತ ॥ ಇತಿ ಪಂಚದಶಃ ಖಂಡಃ ॥ ೯-೧೫ ॥ ॥ ೪ ॥

ಅ ॥ ತಂದೆ ತಾಯಿ ಮೊದಲಾದವರೆಲ್ಲರೂ ಮುಖ್ಯಪ್ರಾಣನ ಅಧೀನರಾಗಿ ಜೀವಿಸಿಕೊಂಡಿರುವವರು. ಅಥವಾ ಮುಖ್ಯಪ್ರಾಣನೇ ಪಿತ್ರಾದಿಗಳಲ್ಲಿ ನಿಯಾಮಕನಾಗಿದ್ದಾನೆ. ಪ್ರಸಿದ್ಧನಾದ ಅಧಿಕಾರಿಯು ಹಿಂದೆ ಹೇಳಿದ ಪ್ರಕಾರ ಮುಖ್ಯಪಾಣನ ಮಹಿಮೆಯನ್ನು ಕೇಳಿ ಮನನಮಾಡಿ ತಿಳಿದುಕೊಂಡವನಾಗಿ ಎಲ್ಲಾ ವಸ್ತುಗಳಿಗಿಂತಲೂ ಉತ್ತಮವಾದ ಪ್ರಾಣಾಖ್ಯವಸ್ತುವನ್ನು ಹೇಳುವವನಾಗುತ್ತಾನೆ. ಆತನೊಡನೆ ನೀನು ಅತಿವಾದಿಯು ಆಗಿರುತ್ತಿ (ಅಂದರೆ ಪಾಣಾಖ್ಯವಸ್ತುವನ್ನು ಉತ್ಕೃಷ್ಟವನ್ನಾಗಿ ಹೇಳಿರುತ್ತಿ.) ಎಂದು ಬೇರೆಯವರು ಹೇಳಿದರೆ–ಆಗ ಆತನು ನಾನು ಮುಖ್ಯಪ್ರಾಣನಿಗೆ ಉತ್ತಮತ್ವವನ್ನು ಹೇಳುವವನೆಂಬ ಅಭಿಪ್ರಾಯದಿಂದ ಅತಿವಾದಿಯಾಗಿರುತ್ತೇನೆ ಎಂದು ಹೇಳಬೇಕು. (ಪ್ರಾಣನು ಉತ್ತಮನೆಂದು ಹೇಳಿದವನಿಗೆ ಭಯವಿಲ್ಲದಿರುವುದರಿಂದ ತಾನು ಅತಿವಾದಿಯು (ಪ್ರಾಣನಿಗೆ ಉತ್ತಮತ್ವವನ್ನು ಹೇಳುವವನು) ಅಲ್ಲವೆಂದು) ಅಪಲಾಪ ಮಾಡಬಾರದು. ॥ ೯—೧೫ ॥ ॥ ೪ ॥

ಪೀ—೧೫ನೇ ಮಂತ್ರದಲ್ಲಿ **ಪ್ರಾಣಃ ಪ್ರಾಣೇನ ಯಾತಿ** ಎಂಬುದಕ್ಕೆ ಮುಖ್ಯಪ್ರಾಣನು ತನ್ನ ಶಕ್ತಿಯಿಂದಲೇ ಹೋಗುತ್ತಾನೆ, ಎಂದು ಸಾಮಾನ್ಯವಾಗಿ ತೋರುವ ಅರ್ಥವನ್ನು ಹೋಗಲಾಡಿಸುವುದಕ್ಕಾಗಿ ಅರ್ಥಹೇಳುತ್ತಾರೆ—

ಭಾ. ॥ (೧) ಯೋಽಸೌ ಪ್ರಾಣಃ ಸ ಪ್ರಾಣೇನ ಪರಬ್ರಹ್ಮಣಾ ಯಾತಿ। ಸ ಏಷ(ವ-)ಭಗವಾನ್ಪ್ರಾಣಂ ಪ್ರತ್ಯಭೀಷ್ಟಂ ದದಾತಿ । ಪ್ರಾಣಸ್ಯ ಪ್ರಾಣಮಿತಿ ಶ್ರುತೇಃ ॥ (೨) ಪ್ರಾಣೋ ವಾಯುಃ ಪರಮಾತ್ಮಾನಂ ಚ ಜ್ಞಾನೇನ ದರ್ಶಯನ್ದದಾತಿ । ಸರ್ವಸ್ಮಾದತೀತಮುತ್ತಮಂ ವದತೀತ್ಯತಿವಾದೀ ॥ ೧, ೨, ೩, ೪ ॥ ಇತಿ ಪಂಚದಶಃ ಖಂಡಃ ॥ ೯—೧೫ ॥ ॥ ೧ ॥

ಅ ॥ (೧) ಭಾರತಿಗಿಂತ ಉತ್ತಮನಾದ ಮುಖ್ಯಪ್ರಾಣನು ಪರಬ್ರಹ್ಮನ ಪ್ರೇರಣೆಯಿಂದಲೇ ಪ್ರವೃತ್ತಿ ಮಾಡುತ್ತಾನೆ. ಶ್ರೀಪರಮಾತ್ಮನು ಮುಖ್ಯಪ್ರಾಣನಿಗೆ ಅಭೀಷ್ಟವನ್ನು ಕೊಡುತ್ತಾನೆ. ಮುಖ್ಯಪ್ರಾಣನಿಗೆ ಜೀವನವನ್ನೂ ಅಭೀಷ್ಟವನ್ನೂ ಕೊಡುವವನೆಂದು ವೇದವು. (೨) (ವೇದದ ಅರ್ಥವು.) (**ಪ್ರಾಣಾಯ ದದಾತಿ** ಎಂಬುದಕ್ಕೆ ಅರ್ಥಹೇಳುತ್ತಾರೆ.) ಮುಖ್ಯಪ್ರಾಣನು ಪರಮಾತ್ಮನನ್ನು ಜ್ಞಾನದಿಂದ ತೋರಿಸುತ್ತಾ ಶಿಷ್ಯರಿಗೆ ಉಪದೇಶಿಸುತ್ತಾನೆ. (೪ನೇ ಮಂತ್ರದಲ್ಲಿದ್ದ **ಅತಿವಾದೀ** ಎಂಬ ಶಬ್ದಕ್ಕೆ **ವಾಙಾಲನು** ಎಂಬ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಶಬ್ದಾರ್ಥಹೇಳುತ್ತಾರೆ–) ನಾಮ ಮೊದಲಾದ ಎಲ್ಲಾ ವಸ್ತುಗಳಿಗಿಂತ ಉತ್ತಮನಾದ ಪ್ರಾಣನನ್ನೇ ಹೇಳುವುದರಿಂದ **ಅತಿವಾದೀ** ಎನಿಸುತ್ತಾನೆ. ॥ ೯—೧೫ ॥ ॥ ೧ ॥

ಹದಿನೈದನೇ ಖಂಡವು ಮುಗಿಯಿತು.

೧೬ನೇ ಖಂಡವು

ಪೀ—ಉಪಾಸಕರ ವರ್ಗದಲ್ಲಿ ಸರ್ವರನ್ನು ಅತಿಕ್ರಮಿಸಿಕೊಂಡು ಸರ್ವೋತ್ತಮನಾದವನು ಮುಖ್ಯಪ್ರಾಣನು ಉಪಾಸ್ಯನು ಸರ್ವರಿಗಿಂತ ಶ್ರೀಷ್ಯನು ಇನ್ನೊಬ್ಬನಿದ್ದಾನೆನ್ನುತ್ತಾರೆ—

ಉ ॥ ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ ಸೋಽಹಂ ಭಗವಃ ಸತ್ಯೇನಾತಿವದಾನೀತಿ ಸತ್ಯಂ ತ್ವೇವ ವಿಜಿಜ್ಞಾಸಿತವ್ಯಮಿತಿ ಸತ್ಯಂ ಭಗವ್ಯೋ ವಿಜಿಜ್ಞಾಸ ಇತಿ ॥ ಇತಿ ಷೋಡಶಃ ಖಂಡಃ ॥ ೯-೧೬ ॥ ॥ ೧ ॥

ಅ ॥ (ಪೂಜ್ಯರೇ *ಮುಖ್ಯಪ್ರಾಣನಿಗಿಂತ ಇನ್ನೊಬ್ಬನು ಶ್ರೇಷ್ಠನು ಇದ್ದಾನೋ, ಎಂಬ ನಾರದರ ಪ್ರಶ್ನೆಗೆ ಸನತ್ಕುಮಾರರು ಇದ್ದಾನೆಂದು ಉತ್ತರಿಸಿದಾಗ ಆತನನ್ನು ನನಗೆ ಉಪದೇಶಿಸಬೇಕೆಂದು ನಾರದರು ಕೇಳಿದರು. ಆಗ ಸನತ್ಕುಮಾರರು ಸತ್ಯನು ಪ್ರಾಣನಿಗಿಂತ ಶ್ರೇಷ್ಠನು ಎಂದು ಉತ್ತರಿಸಿದರು) (ಸತ್ಯನನ್ನು ತಿಳಿದವರಿಗೆ ಫಲಹೇಳುತ್ತಾರೆ.) ಯಾವ ಅಧಿಕಾರಿಯು ನಿರ್ದೋಷನೂ ನಿಯಾಮಕನೂ ಆದುದರಿಂದ ಸತ್ಯನೆನಿಸಿದ ಪರಬ್ರಹ್ಮನನ್ನೇ ಸರ್ವೋತ್ತಮನನ್ನಾಗಿ ಹೇಳುತ್ತಾನೋ, ಈ ಅಧಿಕಾರಿಯೇ ಮುಖ್ಯಪ್ರಾಣನು ಉತ್ತಮನು ಎಂದು ಹೇಳುವವನಿಗಿಂತಲೂ ವಿಶೇಷವಾಗಿ ಅತ್ಯುತ್ಕೃಷ್ಟವಾದ ವಸ್ತುವನ್ನು ಹೇಳುತ್ತಾನೆ. ಎಲೋ ನಾರದರೇ ನಾನು ಸತ್ಯನೆನಿಸಿದ ಪರಬ್ರಹ್ಮನೇ ಸರ್ವೋತ್ಕೃಷ್ಟನು ಎಂದು ಹೇಳುತ್ತೇನೆ. ಸತ್ಯನೆನಿಸಿದ ಪರಬ್ರಹ್ಮನನ್ನೇ ವಿಶೇಷವಾಗಿ ತಿಳಿಯಬೇಕು, ಎಂದು ಸನತ್ಕುಮಾರರು ಹೇಳಿದರು. ಆಗ ನಾರದರು ಸತ್ಯನೆನಿಸಿದ ಪರಬ್ರಹ್ಮನನ್ನು (ಆತನ ಗುಣಗಳನ್ನು) ನಾನು ತಿಳಿಯಲಿಚ್ಛಿಸುತ್ತೇನೆ, ಎಂದು ಹೇಳಿದರು. ॥ ೯—೧೬ ॥ ॥ ೧ ॥

ಪೀ—ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ ಎಂಬಲ್ಲಿ ಪ್ರಾಣಾತಿವಾದಿಯೇ ಸತ್ಯಾತಿವಾದಿಯು. ಏವಂಚ ಪ್ರಾಣನೇ ಸತ್ಯನು ಎಂಬ ಆಶಂಕೆಯನ್ನು ಹೋಗಲಾಡಿಸುವುದಕ್ಕಾಗಿ ಬೇರೆಬೇರೆ ಪ್ರಕರಣವೆಂದು ತೋರಿಸತಕ್ಕ **ತು** ಶಬ್ದವಿದೆ ಎನ್ನುತಾರೆ—

ಭಾ. ॥ (೧) ಏಷ ತು ವಾ ಅತಿವದತೀತಿ ತುಶಬ್ದೋಽರ್ಥಾಂತರವಾಚೀ ॥ (೨) ಅಸ್ತಿ ಭಗವಃ ಪ್ರಾಣಾದ್ಭೂಯ ಇತಿ ಪ್ರಶ್ನೋ ವ್ಯತಿ(ಽಧ್ಯಾ)ಹಾರ್ಯಃ ॥ (೩) ಯತ್ರಾನವಸರೋಽನ್ಯತ್ರ ಪದಂ ತತ್ರ ಪ್ರತಿಷ್ಠಿತಂ । ಯತ್ರ ಪ್ರಮಾಣಂ ವಾಕ್ಯಂ ವಾ ಪ್ರ(ಚಾಪ್ಯ)ತಿಹಾರ್ಯಂ ನ ಸಂಶಯಃ ॥ (೪) ಓಂ ವ್ಯತಿಹಾರೋ ವಿಶಿಂಷಂತಿ ಹೀತರವದಿತಿ ಚ ಭಗವದ್ವಚನಂ ॥ (೫) ಅತಿವಾದೀ ಪ್ರಾಣವಾದೀ ವಿಷ್ಣುವಾದೀ ವಿಶೇಷತಃ । ಸ ಸತ್ಯೋ ಭಗವಾನ್ವಿಷ್ಣುರ್ಯನ್ನಿರ್ದೋಷೋ ನಿಯಾಮಕಃ ॥ ಇತಿ ಷೋಡಶಃ ಖಂಡಃ ॥ ೯-೧೬ ॥ ॥ ೧ ॥

ಅ ॥ (೧) **ಏಷ ತು ವಾ ಅತಿವದತಿ** ಎಂಬಲ್ಲಿದ್ದ **ತು** ಪದವು ಬೇರೆಪ್ರಕರಣವೆಂದೂ ಅಧ್ಯಾಹಾರ ಮಾಡಿಕೊಳ್ಳಬೇಕೆಂದೂ) ತಿಳಿಸುತ್ತದೆ. (ಅಂದರೆ ಪ್ರಾಣವಾದಿಗೆ ಅತಿವಾದಿತ್ವವನ್ನು ಹೇಳಿ ಸತ್ಯವಾದಿಗೂ ಅತಿವಾದಿತ್ವವನ್ನು ಹೇಳಿದೆ. ಆದರಲ್ಲಿ ಪ್ರಾಣನು ಉತ್ತಮನೆಂದು ಹೇಳುವವನಿಗಿಂತ ಸತ್ಯನು ಉತ್ತಮನೆಂದು ಹೇಳುವವನು ಉತ್ಕೃಷ್ಟನೆಂದು **ತು** ಶಬ್ದದಿಂದ ತಿಳಿಯುತ್ತದೆ. (೨) (ಪ್ರಾಣನಿಗಿಂತ ಉತ್ತಮನಾದ ಸತ್ಯನು ಬೇರೆ ಎಂದಾಗಿದ್ದರೆ **ನಾಮ** ಮೊದಲಾದ ಪ್ರಕರಣಗಳಲ್ಲಿದ್ದಂತೆ ಇಲ್ಲಿಯೂ '**ಅಸ್ತಿ ಭಗವಃ ಪ್ರಾಣಾದ್ಭೂಯಃ ಇತಿ ಪ್ರಾಣಾದ್ಭಾವ ಭೂಯೋಽಸ್ತೀತಿ ತನ್ಮೇ ಭಗವಾನ್ ಬ್ರವೀತ್ವಿತಿ ಸತ್ಯಂ ವಾವ ಪ್ರಾಣಾದ್ಭೂಯಃ** ಎಂದು ಪ್ರಶ್ನೋತ್ತರಗಳು ಇರಬೇಕಾಗುವವು. ಎಂದರೆ) ಇಲ್ಲಿಯೂ ಕೂಡ **ಅಸ್ತಿ ಭಗವಃ ಪ್ರಾಣಾದ್ಭೂಯಃ** ಪೂಜ್ಯರೇ ಪ್ರಾಣನಿಗಿಂತ ಶ್ರೇಷ್ಠನು ಇದ್ದಾನೋ ಎಂಬಪ್ರಶ್ನೆಯನ್ನೂ **ಪ್ರಾಣಾದ್ಭಾವ ಭೂಯೋಽಸ್ತಿ** ಎಂಬ ಪ್ರತ್ಯುತ್ತರವನ್ನೂ ಇಟ್ಟುಕೊಳ್ಳಬೇಕು. (೩) (ಪ್ರಶ್ನ ಪ್ರತ್ಯುತ್ತರ

*ನಾಮಾದಿಪ್ರಕರಣಗಳಲ್ಲಿದ್ದಂತೆ ಇಲ್ಲಿ ಪ್ರಶ್ನೋತ್ತರಗಳು ಇಲ್ಲವಾದರೂ **ತು** ಶಬ್ದದಿಂದ ಪ್ರಶ್ನ ಪ್ರತ್ಯುತ್ತರಗಳನ್ನು ಇಟ್ಟುಕೊಳ್ಳಬೇಕೆಂದು ಸೂಚಿತವಾಯಿತು.

ಗಳನ್ನು ಅಧ್ಯಾಹಾರ (ಇಲ್ಲದಿರುವ ಪದವನ್ನು ಸೇರಿಸಿಕೊಳ್ಳುವುದು) ಮಾಡಿಕೊಳ್ಳುವುದಾದರೆ ಅಸ್ತಿ **ಭಗವಃ ಪ್ರಾಣಾದ್ಭೂಯಃ** ಎಂಬ ಪ್ರಶ್ನೆಗೆ **ನಾಸ್ತಿ ಪ್ರಾಣಾದ್ಭೂಯಃ** ಎಂಬ ಪ್ರತ್ಯುತ್ತರವನ್ನು ಅಧ್ಯಾಹಾರ ಮಾಡಿಕೊಳ್ಳುವುದೆಂದು ಏಕೆ ಆಗಲಾರದು. ಹೀಗೆಯೇ ಅಧ್ಯಾಹಾರ ಮಾಡಿಕೊಳ್ಳ ಬೇಕೆಂಬಲ್ಲಿ ನಿಯಾಮಕವಿಲ್ಲವಷ್ಟೆ ಎಂದರೆ) ಯಾವ ವಾಕ್ಯದಲ್ಲಿ ಯಾವ ಪದವಿಲ್ಲದೆ ಯೋಗ್ಯವಾದ ಅರ್ಥವೇ ಕೂಡುವುದಿಲ್ಲವೋ, ಅಂತಹ ವಾಕ್ಯದಲ್ಲಿ ಅದೇಪದವನ್ನು ಅಧ್ಯಾಹಾರಮಾಡಬೇಕು. ಯಾವ ಮಹಾವಾಕ್ಯದಲ್ಲಿ ಯಾವ ಪ್ರಮಾಣವು ಅಥವಾ ಯಾವ ವಾಕ್ಯವು ಇಲ್ಲದೆ ಯೋಗ್ಯಾರ್ಥವು ಕೂಡುವುದಿ ಲ್ಲವೋ, ಅಂತಹ ಮಹಾವಾಕ್ಯದಲ್ಲಿ ಅಂತಹ ಪ್ರಮಾಣವನ್ನು ಅಥವಾ ಅಂತಹ ವಾಕ್ಯವನ್ನು ಸೇರಿಸಿ ಕೊಳ್ಳಬೇಕು. ಸಂದೇಹ ಮಾಡಕೂಡದು, ಎಂಬ ಪ್ರಮಾಣದಿಂದ (ಇಲ್ಲಿ ನಾವು ಹೇಳಿದ ಪ್ರಕಾರವೇ ಪ್ರಶ್ನಾ ದಿಗಳನ್ನು ಇಟ್ಟುಕೊಳ್ಳಬೇಕು.) (೪) (ಈ ಪ್ರಕರಣದಲ್ಲಿ ಪ್ರಶ್ನಪ್ರತ್ಯುತ್ತರಗಳನ್ನು ಇಟ್ಟುಕೊಳ್ಳ ಬೇಕೆಂಬಲ್ಲಿ ಸೂತ್ರ ಹೇಳುತ್ತಾರೆ.) ಮುಖ್ಯಪ್ರಾಣನಿಗಿಂತ ಸತ್ಯನೆನಿಸಿದ ವಿಷ್ಣುವು ಉತ್ತಮನು. ಪ್ರಾಣ ಸತ್ಯರ ಮಧ್ಯದಲ್ಲಿ ಉಪನಿಷತ್ತಿನಲ್ಲಿ ಪ್ರಶ್ನಪ್ರತ್ಯುತ್ತರಗಳನ್ನು ಹೇಳದಿದ್ದರೂ ನಾಮಾದಿಗಳಲ್ಲಿ ಹೇಳಿ ದಂತೆಯೇ ಇಲ್ಲಿಯೂ ಇಟ್ಟುಕೊಳ್ಳಬೇಕು (ಬ್ರ. ಸೂ. ಅ. ೩. ಪಾ. ೩. ಸೂ. ೩೮) (೫) (ಹಿಂದೆ ಹೇಳಿದ ಅರ್ಥದಲ್ಲಿ ಪ್ರಮಾಣ ಹೇಳಿ ದೃಢೀಕರಿಸುತ್ತಾ ಸತ್ಯಾದಿ ಶಬ್ದಗಳಿಗೆ ಅರ್ಥಹೇಳುತ್ತಾರೆ.) ಪ್ರಾಣವಾ ದಿಯು ಇತರ ವಸ್ತುಗಳಿಂದ ಉತ್ತಮವಾದ ಪ್ರಾಣಾಖ್ಯವಸ್ತುವನ್ನು ಹೇಳಿದವನು. ವಿಷ್ಣುವು ಉತ್ತಮ ನೆಂದು ಹೇಳುವವನು ಪ್ರಾಣವಾದಿಗಿಂತಲೂ ವಿಶೇಷವಾಗಿ ಅತಿವಾದಿಯು, ಶ್ರೇಷ್ಠನು. ಸರ್ವೋತ್ತಮ ನಾದ ಶ್ರೀವಿಷ್ಣುವು ನಿರ್ದೋಷನೂ ನಿಯಾಮಕನೂ ಆದುದರಿಂದ ಸತ್ಯನೆನಿಸುತ್ತಾನೆ. ॥ ೯–೧೬ ॥ ॥ ೧ ॥

ಹದಿನಾರನೇ ಖಂಡವು ಮುಗಿಯಿತು.

೧೭ನೇ ಖಂಡವು

ಪೀ - ಶ್ರೀಹರಿಯು ತನ್ನಲ್ಲಿಯೂ ಪರರಲ್ಲಿಯೂ ಇರುವ ಎಲ್ಲಾ ವಿಶೇಷಗಳನ್ನು ತಿಳಿದುಕೊಳ್ಳು ವುದರಿಂದ ಶ್ರೀಹರಿಯು ಸತ್ಯನೆನಿಸುತ್ತಾನೆಂಬ ಅಭಿಪ್ರಾಯದಿಂದ ಲೋಕದಲ್ಲಿ ವಿಜ್ಞಾನ ಸತ್ಯನುಡಿಗಳಿಗೆ ಕಾರ್ಯಕಾರಣಭಾವವಿದೆ ಎಂದು ಸನತ್ಕುಮಾರರು ನಾರದರಿಗೆ ಹೇಳುತ್ತಾರೆ—

ಉ. ॥ ಯದಾ ವೈ ವಿಜಾನಾತ್ಯಥ ಸತ್ಯಂ ವದತಿ ನಾವಿಜಾನನ್ ಸತ್ಯಂ ವದತಿ ವಿಜಾನನ್ನೇವ ಸತ್ಯಂ ವದತಿ ವಿಜ್ಞಾನಂ ತ್ವೇವ ವಿಜಿಜ್ಞಾಸಿತವ್ಯಮಿತಿ ವಿಜ್ಞಾನಂ ಭಗವೋ ವಿಜಿಜ್ಞಾಸ ಇತಿ ॥ಇತಿ ಸಪ್ತದಶಃ ಖಂಡಃ ॥ ೯-೧೭॥೧॥

ಅ ॥ ಲೋಕದಲ್ಲಿ ಯಾವಾಗ ಜನರು ತಿಳಿಯುತ್ತಾರೋ, ಆಗ ಸತ್ಯವನ್ನು ಹೇಳುತ್ತಾರೆ ತಿಳಿಯ ದವನು ಸತ್ಯವನ್ನು ಹೇಳುವುದಿಲ್ಲ. ತಿಳಿದವನೇ ಸತ್ಯವನ್ನು ಹೇಳುತ್ತಾನೆ. ಆದಕಾರಣ ಸತ್ಯವನ್ನು ತಿಳಿಯಲಿಚ್ಛಿಸುವವನು ಅದರೊಂದಿಗೆ ಇರುವ ವಿಜ್ಞಾನ (ವಿಶೇಷಜ್ಞಾನ)ವನ್ನೇ ವಿಶೇಷವಾಗಿ ತಿಳಿಯ ಬೇಕು, ಎಂದು ಹೇಳಿದಾಗ ನಾರದರು ನಾನು ವಿಜ್ಞಾನವನ್ನು ತಿಳಿಯಲಿಚ್ಛಿಸುತ್ತೇನೆಂದರು ಅಥವಾ ಸತ್ಯನೆನಿಸಿದ ಶ್ರೀಹರಿಯು ಯುಕ್ತಿಪೂರ್ವಕವಾಗಿ ವಿಜ್ಞಾನಗುಣಸ್ವರೂಪನೆಂದು ತಿಳಿಯಬೇಕು, ಎಂದರು. ಆಗ ನಾರದರು ಶ್ರೀಹರಿಯು ವಿಜ್ಞಾನ ಸ್ವರೂಪನೆಂಬುದಕ್ಕೆ ಕಾರಣವಾದ ಗುಣವನ್ನು ತಿಳಿಯಲಿಚ್ಛಿಸುತ್ತೇನೆಂದರು ॥ ೯–೧೭ ॥ ॥ ೧ ॥

ಹದಿನೇಳನೇ ಖಂಡವು ಮುಗಿಯಿತು.

೧೮ನೇ ಖಂಡವು

ಪೀ—ಸತ್ಯನೆನಿಸಿದ ಶ್ರೀಹರಿಯು ಸಮಸ್ತವನ್ನು ತಿಳಿಯುವುದರಿಂದಲೇ **ವಿಜ್ಞಾತಾ** ಎನಿಸುತ್ತಾನೆ, ಎಂಬ ಅಭಿಪ್ರಾಯದಿಂದ ಮನನ ವಿಜ್ಞಾನಗಳಿಗೆ ಕಾರ್ಯಕಾರಣಭಾವವನ್ನು ಹೇಳುತ್ತಾರೆ—

ಉ. ॥ ಯದಾ ವೈ ಮನುತೇಽಥ ವಿಜಾನಾತಿ ನಾಮತ್ವಾ ವಿಜಾನಾತಿ ಮತ್ವೈವ ವಿಜಾನಾತಿ ಮತಿಸ್ತ್ವೇವ ವಿಜಿಜ್ಞಾಸಿತವ್ಯೇತಿ ಮತಿಂ ಭಗವೋ ವಿಜಿಜ್ಞಾಸ ಇತಿ ॥ ಇತ್ಯಷ್ಟಾದಶಃ ಖಂಡಃ ॥ ೯-೧೮ ॥ ॥ ೧ ॥

ಅ ॥ ಯಾವಾಗ ಸಾಮಾನ್ಯವಾಗಿ ತಿಳಿಯುತ್ತಾನೋ, ಆಗ ವಿಶೇಷ ಜ್ಞಾನವುಳ್ಳವನಾಗುತ್ತಾನೆ. ಸಾಮಾನ್ಯತಃ ತಿಳಿಯದೆ ಯಾವ ವಸ್ತುವನ್ನೂ ವಿಶೇಷವಾಗಿ ತಿಳಿಯುವುದಿಲ್ಲ. ಸಾಮಾನ್ಯತಃ ತಿಳಿದೇ ವಿಶೇಷವಾಗಿ ತಿಳಿಯುತ್ತಾನೆ. ಸತ್ಯನೆನಿಸಿದ ಶ್ರೀಹರಿಗೆ ಮನನ ಗುಣವದೆ. ಎಂದೇ ಯುಕ್ತಿಪೂರ್ವಕವಾಗಿ ತಿಳಿಯಬೇಕು. ಮನನ ಗುಣ ಇರಲಿಕ್ಕೆ ಕಾರಣವನ್ನು ತಿಳಿಯಲಿಚ್ಛಿಸುತ್ತೇನೆಂದು ನಾರದರು ಹೇಳಿದರು. ॥ ೯—೧೮ ॥ ॥ ೧ ॥

ಪೀ—ವಿಜ್ಞಾನ ಮತಿ ಶಬ್ದಗಳ ಅರ್ಥಹೇಳುತ್ತಾರೆ—

ಭಾ. ॥ ವಿಶಿಷ್ಟಜ್ಞಾನರೂಪಶ್ಚ ಸಾಮಾನ್ಯಜ್ಞಾನರೂಪಕಃ ॥ ಇತಿ ಸಪ್ತದಶಾಷ್ಟಾದಶೌ ಖಂಡೌ ॥ ೯–೧೭, ೧೮ ॥ ॥ ೧ ॥

ಅ ॥ ವಿಶಿಷ್ಟಜ್ಞಾನಸ್ವರೂಪವಾದುದು ವಿಜ್ಞಾನವೆಂದೂ, ಸಾಮಾನ್ಯ ಜ್ಞಾನರೂಪವಾದುದು **ಮತಿ** ಎಂದೂ ಅನಿಸುತ್ತದೆ. ॥ ೯—೧೭,೧೮ ॥ ॥ ೧ ॥

ಹದಿನೆಂಟನೇ ಖಂಡವು ಮುಗಿಯಿತು

೧೯ನೇ ಖಂಡವು

ಪೀ—ಸತ್ಯನೆನಿಸಿದ ಶ್ರೀಹರಿಯು ಅಸ್ತಿಕನಾದುದರಿಂದ ಮತಿರೂಪನೆಂಬ ಅಭಿಪ್ರಾಯದಿಂದ **ಶ್ರದ್ಧಾತಿ ಮನುತೇ** ಇವುಗಳಿಗೆ ಕಾರ್ಯಕಾರಣಭಾವ ಹೇಳುತ್ತಾರೆ—

ಉ. ॥ ಯದಾ ವೈ ಶ್ರದ್ದಧಾತ್ಯಥ ಮನುತೇ ನಾಶ್ರದ್ದಧನ್ಮನುತೇ ಶ್ರದ್ದಧದೇವ ಮನುತೇ ಶ್ರದ್ಧಾ ತ್ವೇವ ವಿಜಿಜ್ಞಾಸಿತವ್ಯೇತಿ ಶ್ರದ್ಧಾಂ ಭಗವೋ ವಿಜಿಜ್ಞಾಸ ಇತಿ ॥ ಇತ್ಯೇಕೋನವಿಂಶಃ ಖಂಡಃ ॥ ೯-೧೯ ॥ ॥ ೧ ॥

ಅ ॥ ಯಾವಾಗ ಭಕ್ತನು ಅಸ್ತಿಕನಾಗುತ್ತಾನೋ, ಆಗ ತಿಳಿಯುತ್ತಾನೆ. ಅಸ್ತಿಕನಾಗದವನು ತಿಳಿಯಲಾರ. ಅಸ್ತಿಕನಾದವನೇ ತಿಳಿಯುತ್ತಾನೆ. ಯುಕ್ತಿಪೂರ್ವಕವಾಗಿ ಅಸ್ತಿಕತನವನ್ನೇ ತಿಳಿಯಬೇಕು. ಪೂಜ್ಯರೇ ಶ್ರದ್ಧೆಗೆ ಕಾರಣವಾದ ಗುಣವನ್ನು ತಿಳಿಯಲಿಚ್ಛಿಸುತ್ತೇನೆಂದು ನಾರದರು ಹೇಳಿದರು. ॥ ೯—೧೯ ॥ ॥ ೧ ॥

ಹತ್ತೊಂಭತ್ತನೇ ಖಂಡವು ಮುಗಿಯಿತು.

೨೦ನೇ ಖಂಡವು

ಪೀ—ಅತಿಸ್ಥೈರ್ಯವಿದ್ದುದರಿಂದ ಆಸ್ತಿಕನೆಂಬ ಅಭಿಪ್ರಾಯದಿಂದ ಅವುಗಳಿಗೆ ಕಾರ್ಯಕಾರಣ ಭಾವವನ್ನು ಹೇಳುತ್ತಾರೆ—

ಉ. ॥ ಯದಾ ವೈ ನಿಸ್ತಿಷ್ಠತ್ಯಥ ಶ್ರದ್ದಧಾತಿ ನಾನಿಸ್ತಿಷ್ಠಂಶ್ಛ್ರದ್ದಧಾತಿ ನಿಸ್ತಿಷ್ಠನ್ನೇವ ಶ್ರದ್ದಧಾತಿ ನಿಷ್ಠಾತ್ವೇವ ವಿಜಿಜ್ಞಾಸಿತವ್ಯೇತಿ ನಿಷ್ಠಾಂ ಭಗವೋ ವಿಜಿಜ್ಞಾಸ ಇತಿ ॥ ಇತಿ ವಿಂಶಃ ಖಂಡಃ ॥ ೯-೨೦ ॥ ॥ ೧ ॥

ಅ ॥ ಯಾವಾಗ ಜೆನ್ನಾಗಿ ಸ್ಥಿರನಾಗುತ್ತಾನೋ, ಆಗ ಭಕ್ತನು ಆಸ್ತಿಕನಾಗುತ್ತಾನೆ. ಜೆನ್ನಾಗಿ ಸ್ಥಿರನಾಗದಿದ್ದವನು ಆಸ್ತಿಕನಾಗಲಾರನು. ಜೆನ್ನಾಗಿ ಸ್ಥಿರನಾದವನೇ ಆಸ್ತಿಕನಾಗುತ್ತಾನೆ. ಅತಿಸ್ಥಿರತನವನ್ನೇ ತಿಳಿಯಲಿಚ್ಛಿಸತಕ್ಕುದು. ಪೂಜ್ಯರೇ ಅತಿಸ್ಥೈರ್ಯಕ್ಕೆ ಕಾರಣವಾದ ಗುಣವನ್ನು ತಿಳಿಯಲಿಚ್ಛಿಸುತ್ತೇನೆ, ಎಂದು ನಾರದರು ಹೇಳಿದರು. ॥ ೯—೨೦ ॥ ॥ ೧ ॥

ಭಾ. ॥ ನಿತ್ಯಶ್ರದ್ಧಾಸ್ವರೂಪಶ್ಚ ತಥೈವ ಸ್ಥೈರ್ಯರೂಪಕಃ ॥ ಇತ್ಯೇಕೋನವಿಂಶ-ವಿಂಶೌ ಖಂಡೌ ॥ ೯-೧೯, ೨೦ ॥ ॥ ೧ ॥

ಅ ॥ ಶ್ರೀಹರಿಯು ನಿತ್ಯದಲ್ಲಿಯೂ ಆಸ್ತಿಕಸ್ವರೂಪನು. ಹಾಗೆಯೇ ಜೆನ್ನಾಗಿ ಸ್ಥಿರಸ್ವರೂಪನು. ॥ ೯—೨೧ ॥ ॥ ೧ ॥

ಇಪ್ಪತ್ತನೇ ಖಂಡವು ಮುಗಿಯಿತು.

೨೧ನೇ ಖಂಡವು

ಪೀ—ಸರ್ವಕರ್ತನಾದುದರಿಂದಲೇ ಸ್ಥೈರ್ಯವುಳ್ಳವನು ಎಂಬ ಅಭಿಪ್ರಾಯದಿಂದ ಅವುಗಳಿಗೆ ಕಾರ್ಯಕಾರಣಭಾವ ಹೇಳುತ್ತಾರೆ—

ಉ. ॥ ಯದಾ ವೈ ಕರೋತ್ಯಥ ನಿಸ್ತಿಷ್ಠತಿ ನಾಕೃತ್ವಾ ನಿಸ್ತಿಷ್ಠತಿ ಕೃತ್ವೈವ ನಿಸ್ತಿಷ್ಠತಿ ಕೃತಿಸ್ತ್ವೇವ ವಿಜಿಜ್ಞಾಸಿತವ್ಯೇತಿ ಕೃತಿಂ ಭಗವೋ ವಿಜಿಜ್ಞಾಸ ಇತಿ ಇತ್ಯೇಕವಿಂಶಃ ಖಂಡಃ ॥ ೯-೨೧ ॥ ॥ ೧ ॥

ಅ ॥ ಯಾವಾಗ ಸರ್ವವನ್ನು ಸೃಷ್ಟಿಸುತ್ತಾನೋ, ಆಗ ಅತಿಸ್ಥಿರನಾಗಿರುತ್ತಾನೆ ಸರ್ವಕರ್ತನಾಗದೆ ಸುಸ್ಥಿರನಾಗಲಾರನು. ಸರ್ವಕರ್ತನಾಗಿಯೇ ಸುಸ್ಥಿರನಾಗಿರುತ್ತಾನೆ. ಶ್ರೀಹರಿಗೆ ಸರ್ವಕರ್ತೃತ್ವವನ್ನೇ ವಿಶೇಷವಾಗಿ ತಿಳಿಯಬೇಕು, ಎಂದರು. ಆಗ ನಾರದರು ಪೂಜ್ಯರೇ ಸರ್ವಕರ್ತೃತ್ವಕ್ಕೆ ಕಾರಣವಾದ ಗುಣವನ್ನು ತಿಳಿಯಲಿಚ್ಛಿಸುತ್ತೇನೆಂದರು. ॥ ೯—೨೧ ॥ ॥ ೧ ॥

ಇಪ್ಪತ್ತೊಂದನೇ ಖಂಡವು ಮುಗಿಯಿತು.

೨೨ನೇ ಖಂಡವು

ಪೀ—ಪೂರ್ಣ ಸುಖಾಧಿಕ್ಯವಿದ್ದುದರಿಂದಲೇ ಸರ್ವಕರ್ತೃತ್ವವು ಎಂಬ ಅಭಿಪ್ರಾಯದಿಂದ ಅವುಗಳಿಗೆ ಕಾರ್ಯಕಾರಣಭಾವವನ್ನು ಹೇಳುತ್ತಾರೆ—

ಉ. ॥ ಯದಾ ವೈ ಸುಖಂ ಲಭತೇಽಥ ಕರೋತಿ ನಾಸುಖಂ ಲಬ್ಧ್ವಾ ಕರೋತಿ ಸುಖಮೇವ ಲಬ್ಧ್ವಾ ಕರೋತಿ ಸುಖಂ ತ್ವೇವ ವಿಜಿಜ್ಞಾಸಿತವ್ಯಮಿತಿ ಸುಖಂ ಭಗವೋ ವಿಜಿಜ್ಞಾಸ ಇತಿ ॥ ಇತಿ ದ್ವಾವಿಂಶಃ ಖಂಡಃ ॥೯-೨೨॥೧॥

ಅ ॥ ಸುಖವನ್ನು ಹೊಂದಿದಾಗ ಸರ್ವಕರ್ತನಾಗುತ್ತಾನೆ. ಸುಖವನ್ನು ಹೊಂದದೆ ಸೃಷ್ಟ್ಯಾದಿಗಳನ್ನು ಮಾಡಲಾರನು. ಸುಖವನ್ನು ಹೊಂದಿಯೇ ಸೃಷ್ಟಿಮಾಡುತ್ತಾನೆ. ಸುಖವನ್ನೇ ತಿಳಿಯಬೇಕು. ಪೂಜ್ಯರೇ ಪೂರ್ಣಸುಖಕ್ಕೆ ಕಾರಣವನ್ನು ತಿಳಿಯಲಿಚ್ಛಿಸುತ್ತೇನೆಂದರು. ॥ ೯—೨೨ ॥ ॥ ೧ ॥

ಇಪ್ಪತ್ತೆರಡನೇ ಖಂಡವು ಮುಗಿಯಿತು.

೨೩ನೇ ಖಂಡವು

ಪೀ—ಪೂರ್ಣಗುಣಗಳು ಇದ್ದುದರಿಂದಲೇ ಪರಿಪೂರ್ಣಸುಖವೆಂಬ ಅಭಿಪ್ರಾಯದಿಂದ ಅವುಗಳು ಒಟ್ಟಿಗೆ ಇರುವವುಗಳು ಎನ್ನುತ್ತಾರೆ—

ಉ. ॥ ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ ಭೂಮೈವ ಸುಖಂ ಭೂಮಾ ತ್ವೇವ ವಿಜಿಜ್ಞಾಸಿತವ್ಯ ಇತಿ ಭೂಮಾನಂ ಭಗವೋ ವಿಜಿಜ್ಞಾಸ ಇತಿ ॥ ಇತಿ ತ್ರಯೋವಿಂಶಃ ಖಂಡಃ ॥ ೯-೨೩ ॥ ॥ ೧ ॥

ಅ ॥ ಯಾವನು ಪೂರ್ಣಗುಣಗಳುಳ್ಳವನೋ ಅವನೇ ಪೂರ್ಣಸುಖಸ್ವರೂಪನು. ಪೂರ್ಣಗುಣಗಳು ಇಲ್ಲದವನಿಗೆ ಪೂರ್ಣಸುಖವಿಲ್ಲ. ಪೂರ್ಣಗುಣಗಳುಳ್ಳವನೇ ಪೂರ್ಣಸುಖವುಳ್ಳವನು. ಪೂರ್ಣಗುಣವನ್ನೇ ತಿಳಿಯಬೇಕು. ಪೂಜ್ಯರೇ ಪೂರ್ಣಗುಣವನ್ನು ತಿಳಿಯಲಿಚ್ಛಿಸುತ್ತೇನೆ. ಎಂದು ನಾರದರು ಹೇಳಿದರು.

ವಿ ॥ ಸ್ಥಿರತ್ವ ಶ್ರದ್ಧಾ ಮತಿ ವಿಜ್ಞಾನಮೊದಲಾದ ಗುಣಗಳು ಸರ್ವಕರ್ತನಾದ ಶ್ರೀಪರಮಾತ್ಮನಲ್ಲಿ ಪೂರ್ಣಗಳಾಗಿರುತ್ತವೆಂದು ಉಪಾಸನಮಾಡಿದರೆ—ಉಪಾಸಕನು ಯಥಾಯೋಗ್ಯವಾಗಿ **ಯಂ ಯಂ ಯಥೋಪಾಸತೇ ತತ್ತಥೈವ ಭವತಿ** ಎಂಬ ಪ್ರಮಾಣಾನುಸಾರವಾಗಿ ತಾನು ಸುಸ್ಥಿರನೂ, ಆಸ್ತಿಕನೂ, ಮತಿವಂತನೂ, ವಿಜ್ಞಾನಿಯೂ ಇಮುಮೊದಲಾದ ಗುಣಗಳುಳ್ಳವನೂ ಆಗುವನು.॥೯-೨೩॥ ॥ ೧ ॥

ಭಾ. ॥ ಸ ಏವ ಸರ್ವಕರ್ತಾ ಚ ಸುಪೂರ್ಣಾನಂದರೂಪಕಃ । ಸ ಚ ಸರ್ವಗುಣೈಃ ಪೂರ್ಣೋ ಭೂಮೇತ್ಯುಚ್ಚಾರ್ಯತೇ ತತಃ ॥ ೯—೨೧, ೨೨, ೨೩ ॥ ॥ ೧ ॥

ಅ ॥ ಆ ಶ್ರೀಹರಿಯೇ ಸರ್ವಸೃಷ್ಟಿಕರ್ತನು. ಪರಿಪೂರ್ಣ ಆನಂದಸ್ವರೂಪನು. ಆತನು ಸರ್ವಗುಣಗಳಿಂದ ಪರಿಪೂರ್ಣನಾದುದರಿಂದ **ಭೂಮಾ** ಎನಿಸುತ್ತಾನೆ. ॥ ೨೧—೨೩ ॥ ॥೨೩॥

ಇಪ್ಪತ್ತಮೂರನೇ ಖಂಡವು ಮುಗಿಯಿತು.

೨೪ನೇ ಖಂಡವು

ಪೀ—ಭೂಮನ ಮಹಿಮೆ ಹೇಳುತ್ತಾರೆ—

ಉ. ॥ ಯತ್ರ ನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸ ಭೂಮಾಽಥ ಯತ್ರಾನ್ಯತ್ಪಶ್ಯತ್ಯನ್ಯಚ್ಛೃಣೋತ್ಯನ್ಯದ್ವಿಜಾನಾತಿ ತದಲ್ಪಂ ಯೋ ವೈ ಭೂಮಾ ತದಮೃತಮಥ ಯದಲ್ಪಂ ತನ್ಮರ್ತ್ಯಂ ಸ ಭಗವಃ ಕಸ್ಮಿನ್ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ ಯದಿ ವಾ ನ ಮಹಿಮ್ನೀತಿ ॥ ೧ ॥

ಅ ॥ ಯಾವ ವಸ್ತುವನ್ನು ತಿಳಿದಾಗ ಬೇರೆ ವಸ್ತುವನ್ನು ಸ್ವತಂತ್ರವೆಂದು ನೋಡುವುದಿಲ್ಲವೋ, ಕೇಳುವುದಿಲ್ಲವೋ, ತಿಳಿಯುವುದಿಲ್ಲವೋ, ಅಂದರೆ ಅಧಿಕಾರಿಯು ಶ್ರೀಹರಿಯ ಅಧೀನವಾಗದಿರುವುದು ಯಾವುದೂ ಇಲ್ಲ. ಎಲ್ಲವೂ ಶ್ರೀಹರಿಯ ಅಧೀನನೇ ಎಂದೇ ತಿಳಿಯುತ್ತಾನೋ. ಆ ಶ್ರೀಹರಿಯೇ ಭೂಮನೆನಿಸುವನು. ಯಾವ ಲಕ್ಷ್ಮ್ಯಾದಿಜಗತ್ತನ್ನು ನೋಡಿದಾಗ ಕೇಳಿದಾಗ ತಿಳಿದಾಗ ಶ್ರೀಹರಿಯಿಂದ ಬೇರೆಯಾದ ಆ ಲಕ್ಷ್ಮ್ಯಾದಿಜಗತ್ತನ್ನು ಅಸ್ವತಂತ್ರವೆಂದು ನೋಡುತ್ತಾನೋ, ಕೇಳುತ್ತಾನೋ, ತಿಳಿಯುತ್ತಾನೋ, ಅಂತಹ ಲಕ್ಷ್ಮ್ಯಾದಿ ಜಗತ್ತು ಅಲ್ಪವು.(ಶ್ರೀಹರಿಗಿಂತ ಅಲ್ಪ ಗುಣಗಳುಳ್ಳದ್ದು) (ಭೂಮನ ಇನ್ನೊಂದು ಮಹಿಮೆ ಹೇಳುತ್ತಾರೆ.) ಭೂಮನು ನಿತ್ಯಮುಕ್ತನು. (ಲಕ್ಷ್ಮೀದೇವಿಯು ಶ್ರೀಹರಿಗಿಂತ ಕಡಿಮೆ ಗುಣವುಳ್ಳವಳಾದರೂ ಶ್ರೀಹರಿಗೆ ಅತಿ ಪ್ರಿಯಳಾದ ಕಾರಣ ನಿತ್ಯಮುಕ್ತಳೇ.) ಮೋಕ್ಷವನ್ನು ಹೊಂದಿದವರೂ ಕೂಡ ಮುಕ್ತರಾಗುವುದಕ್ಕಿಂತ ಮೊದಲು ಮರಣಶೀಲರೇ. (ನಾರದರು ತಿಳಿದವರಾದರೂ ಇನ್ನಷ್ಟು ವಿಶೇಷಾರ್ಥವನ್ನು ತಾನು ತಿಳಿದುಕೊಳ್ಳುವುದಕ್ಕಾಗಿಯೂ ಲೋಕದಲ್ಲಿ ಪ್ರಸಿದ್ಧಿಪಡಿಸುವುದಕ್ಕಾಗಿಯೂ ಭೂಮನಿಗೆ ಆಶ್ರಯನು ಯಾರೆಂದು ಪ್ರಶ್ನಿಸುತ್ತಾರೆ.) ಆ ಭೂಮನು ಯಾರಲ್ಲಿ ಆಶ್ರಿತನು? (ಎಂದು ನಾರದರು ಕೇಳಿದರು.) ತನ್ನ ಮಹಿಮೆಯಲ್ಲಿ ಆಶ್ರಿತನು, ಅಥವಾ ತನ್ನ ಮಹಿಮೆಯಲ್ಲಿಯೂ ಆಶ್ರಿತನಲ್ಲ, ಎನಿಸುತ್ತಾನೆಂದು ಸನತ್ಕುಮಾರರು ಉತ್ತರಿಸಿದರು. ॥ ೧ ॥

ಪೀ—ಶ್ರೀಹರಿಯು ಮಹಿಮೆಯಲ್ಲಿ ಆಶ್ರಿತನೆಂದು ಹೇಳಿ ಮಹಿಮೆಯಲ್ಲಿ ಆಶ್ರಿತನಲ್ಲವೆಂದು ಹೇಳಿದುದು ಪರಸ್ಪರ ವಿರುದ್ಧವೆಂದರೆ ಆ ವಿರೋಧವನ್ನು ಪರಿಹರಿಸುತ್ತಾರೆ—

ಉ. ॥ ಗೋ ಅಶ್ವಮಿಹ ಮಹಿಮೇತ್ಯಾಚಕ್ಷತೇ ಹಸ್ತಿಹಿರಣ್ಯಂ ದಾಸಭಾರ್ಯಂ ಕ್ಷೇತ್ರಾಣ್ಯಾಯತನಾನೀತಿ ನಾಹಮೇವಂ ಬ್ರವೀಮೀತಿ ಹೋವಾಚಾನ್ಯೋ ಹ್ಯನ್ಯಸ್ಮಿನ್ ಪ್ರತಿಷ್ಠಿತ ಇತಿ ॥ ಇತಿ ಚತುರ್ವಿಂಶಃ ಖಂಡಃ ॥ ॥ ೯—೨೪ ॥ ॥ ೨ ॥

ಅ ॥ ಗೋವು ಕುದುರೆಗಳೂ, ಆನೆ, ಸುವರ್ಣಗಳೂ, ಸೇವಕ ಪತ್ನಿಯರೂ, ಭೂಮಿ ಮನೆಗಳೂ, ಇವುಗಳೆಲ್ಲವೂ, ಜೈತ್ರಾದಿಗಳ ಮಹಿಮೆಯೆಂದು ವಿದ್ವಾಂಸರು ಹೇಳುತ್ತಾರೆ. (ಆಂದರೆ ಇವುಗಳು ಸಮೃದ್ಧಗಳಾಗಿದ್ದರೇನೇ ಜೈತ್ರಾದಿಗಳಿಗೆ ಮಹಿಮೆಯು ಲಭಿಸುವುದು.) ಜೈತ್ರಮೊದಲಾದವರಂತೆಯೇ ಭೂಮನು ಸಾವಧಿಕ ಅಲ್ಪಪರಾಧೀನವಾದ ಮಹಿಮೆಗೆ ಆಶ್ರಯನೆಂದು ನಾನು ಹೇಳುವುದಿಲ್ಲ, ಎಂದು ನಾರದರಿಗೆ ಸನತ್ಕುಮಾರರು ಹೇಳಿದರು. ಅಂದರೆ—ಆಜ್ಞನು ಗೋವು ಅಶ್ವನೊದಲಾದ ಬೇರೆ ವಸ್ತುಗಳಿಂದುಂಟಾದ ಮಹಿಮೆಯಲ್ಲಿ ಆಶ್ರಿತನು ಎನ್ನುವಂತೆ ನಾನು ಹೇಳುವುದಿಲ್ಲ. (ಪರಂತು ನಿರವಧಿಕವಾದ ತನ್ನ ಸ್ವರೂ

ಪವೇ ಆದ ಮಹಿಮೆಯಲ್ಲಿಯೇ ಭೂಮನು ಆಶ್ರಿತನು, ಜೈತ್ರಾದಿಗಳಿಂದ ವಿಲಕ್ಷಣನು ಎಂದೇ ಹೇಳುತ್ತೇನೆ, ಎಂದು ಸನತ್ಕುಮಾರರು ಹೇಳಿದರು.) ॥ ೨—೨೪ ॥ ॥ ೭ ॥

ಪೀ—ಭೂಮತತ್ವವನ್ನು ತಿಳಿದರೆ ಅದರಿಂದ ಬೇರೆ ಯಾವ ವಸ್ತುವೂ ಇಲ್ಲದಿರುವುದರಿಂದ ಬೇರೆ ನೋಡತಕ್ಕುದನ್ನು ನೋಡುವುದಿಲ್ಲ, ಎಂಬ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ **ಯತ್ರ ನಾನ್ಯತ್ಪಶ್ಯತಿ ಸ ಭೂಮಾ** ಎಂಬ ವಾಕ್ಯದ ಅರ್ಥಹೇಳುತ್ತಾರೆ—

ಭಾ. ॥ (೧) ಯದಧೀನಂ ವಿನಾ ನಾನ್ಯತ್ಕಿಂಚಿದಸ್ತಿ ಕುತಶ್ಚನ । ಸ ಭೂಮೋಕ್ತೋ-ಽತಿಪೂರ್ಣತ್ವಾದನ್ಯದಲ್ಪಮುದೀರ್ಯತೇ ॥ (೨) ಸ ಸರ್ವಗುಣಸಂಪೂರ್ಣಃ ಸರ್ವದೇ-ಶೇಷು ಸರ್ವದಾ । ಸ್ವತಂತ್ರಸ್ಸರ್ವವಸ್ತೂನಿ ತದಧೀನಾನಿ ಸರ್ವಶಃ ॥ (೩) ಪೂರ್ಣತ್ವಾತ್ ಸುಖರೂಪೋಽಸೌ ಸರ್ವಕರ್ತಾ ಸುಖಿತ್ವತಃ । ಕರ್ತೃತ್ವಾತ್ಸುಸ್ಥಿರಶ್ಚಾಸೌ ಸ್ಥಿರತ್ವಾದಾಸ್ತಿಕ-ಸ್ತಥಾ ॥ (೪) ಆಸ್ತಿಕತ್ವಾಚ್ಚ ಮಂತವ್ಯಸೌ ವಿಜ್ಞಾತಾ ಚ ತತೋ ಹರಿಃ । ಜ್ಞಾತೃತ್ವಾಚ್ಚ ಸ (ವಿ) ನಿರ್ದೋಷಃ ಸರ್ವಸ್ಯಾಪಿ ನಿಯಾಮಕಃ । ಭೂಮಾ ನಾರಾಯಣಾಖ್ಯಃ ಸ್ಯಾತ್ ॥ ೮,೨ ॥ ಇತಿ ಚತುರ್ವಿಂಶಃ ಖಂಡಃ ॥ ೯—೨೪ ॥ ॥ ೮ ॥

ಅ ॥ (೧) ಪರಿಪೂರ್ಣನಾವ ಶ್ರೀಹರಿಯ ಅಧೀನವಾಗದಿದ್ದುದು ಶ್ರೀಹರಿಯಿಂದ ಬೇರೆ ಯಾವ ದೊಂದು ವಸ್ತುವೂ ಸರ್ವಥಾ ಇಲ್ಲವೇ ಇಲ್ಲ. ಆ ಶ್ರೀಹರಿಯು ಸರ್ವಗುಣಸಂಪೂರ್ಣನಾದುದರಿಂದ **ಭೂಮಾ** ಎನಿಸುತ್ತಾನೆ. ಬೇರೆ ಅಸ್ವತಂತ್ರವಾದ ಲಕ್ಷ್ಮ್ಯಾದಿ ಜಗತ್ತು ಅಲ್ಪವು. ಪೂರ್ಣ ಗುಣಗಳು ಉಳ್ಳದ್ದಲ್ಲ. (೨) ಆ ಶ್ರೀಹರಿಯು ಸರ್ವಗುಣಪರಿಪೂರ್ಣನು. ಸರ್ವ ದೇಶಗಳಲ್ಲಿಯೂ, ಸರ್ವ ಕಾಲ ಗಳಲ್ಲಿಯೂ ವ್ಯಾಪಿಸಿಕೊಂಡಿರುವವನು. ಸರ್ವ ಸ್ವತಂತ್ರನು. ಎಲ್ಲಾ ವಸ್ತುಗಳೂ ಸರ್ವದಾ ಶ್ರೀಹರಿಯ ಅಧೀನದಲ್ಲಿರುವವುಗಳು. (೩) ಶ್ರೀಹರಿಯು ಸರ್ವಗುಣ ಪರಿಪೂರ್ಣನಾದುದರಿಂದ ಸುಖರೂಪನು. ಸುಖ ಸ್ವರೂಪನಾದುದರಿಂದ ಸರ್ವಜಗತ್ತಿನ ಸೃಷ್ಟಿಕರ್ತನು. ಸರ್ವಕರ್ತನಾದುದರಿಂದ ಸುಸ್ಥಿರನು. ಸುಸ್ಥಿರ ನಾದುದರಿಂದ ಆಸ್ತಿಕನು. (೪) ಆಸ್ತಿಕನಾದುದರಿಂದ ಸಾಮಾನ್ಯತಃ ತಿಳಿಯುವವನು. ಸಾಮಾನ್ಯತಃ ತಿಳಿಯುವುದರಿಂದ ವಿಶೇಷವಾಗಿ ತಿಳಿಯುವವನು. ವಿಶೇಷವಾಗಿ ತಿಳಿಯುವವನಾದುದರಿಂದ ಶ್ರೀಹರಿಯು ನಿರ್ದೋಷನೂ, ಸರ್ವರಿಗೆ ನಿಯಾಮಕನೂ, ಆಗಿರುತ್ತಾನೆ. ಇಂತಹ ಗುಣಗಳಿಂದ ಕೂಡಿದ ಭೂಮ ಎನಿಸಿದವನು ಶ್ರೀನಾರಾಯಣನು. ॥ ೯—೨೪ ॥ ॥ ೮ ॥

ಇಪ್ಪತ್ತನಾಲ್ಕನೇ ಖಂಡವು ಮುಗಿಯಿತು.

ಇಪ್ಪತ್ತೈದನೇ ಖಂಡವು

ಪೀ—ಭೂಮನು ಸರ್ವತ್ರ ವ್ಯಾಪಿಸಿಕೊಂಡಿದ್ದಾನೆ, ಮತ್ತು ಸರ್ವಗುಣಪೂರ್ಣನು ಎಂಬ ಲಕ್ಷಣ ಹೇಳುತ್ತಾರೆ—

ಉ. ॥ ಸ ಏವಾಧಸ್ತಾತ್ಸ ಉಪರಿಷ್ಟಾತ್ಸ ಪಶ್ಚಾತ್ಸ ಪುರಸ್ತಾತ್ಸ ದಕ್ಷಿಣತಸ್ಸ ಉ ತ್ತರತಸ್ಸ ಏವೇದꣳ ಸರ್ವಮಿತ್ಯಥಾತೋಽಹಂಕಾರಾದೇಶ ಏವಾಹಮೇವಾಧ-

ಸ್ತಾದಹಮುಪರಿಷ್ಟಾದಹಂ ಪಶ್ಚಾದಹಂ ಪುರಸ್ತಾದಹಂ ದಕ್ಷಿಣತೋಽಹ-ಮುತ್ತರತೋಽಹವೇವೇದꣳ ಸರ್ವಮಿತಿ ॥ ೧ ॥

ಅ ॥ ಆ ಭೂಮನೇ ಸರ್ವವಸ್ತುಗಳ ಕೆಳಗೂ ಮೇಲೆಯೂ ಹಿಂದುಗಡೆಯೂ ಮುಂದುಗಡೆಯೂ ಬಲಭಾಗ ಎಡಭಾಗಗಳಲ್ಲಿಯೂ ಇದ್ದಾನೆ. ಸಮಸ್ತ ವಸ್ತುಗಳಿಗೆ ಸ್ಥಿತ್ಯಾದಿಗಳನ್ನು ಕೊಡುವುದಕ್ಕಾಗಿ ಸರ್ವತ್ರ ವ್ಯಾಪಿಸಿಕೊಂಡಿದ್ದಾನೆ. ಅವನೇ ಸರ್ವಸ್ವತಂತ್ರನು. ಎಲ್ಲವೂ ಅವನ ಅಧೀನದಲ್ಲಿದ್ದುದು. ಅಥವಾ ಸರ್ವರ ಸಮೀಪದಲ್ಲಿದ್ದ ಪ್ರಯುಕ್ತ **ಇದಂ** ಎಂದೂ, ಗುಣಪೂರ್ಣನಾದುದರಿಂದ **ಸರ್ವಃ** ಎಂದೂ ಅನಿಸುತ್ತಾನೆ. (ಭೂಮನೆನಿಸಿದ ಶ್ರೀನಾರಾಯಣನ ರೂಪಾಂತರವನ್ನು ಹೇಳಲಿಕ್ಕೆ ಆರಂಭಿಸುತ್ತಾರೆ—) ಭೂಮನನ್ನು ಹೇಳಿದ ಮೇಲೆ ಭೂಮನ ಅನುಗ್ರಹದಿಂದ ಅಹಂ ಎಂದು ಹೇಳಲ್ಪಡುವುದರಿಂದ ಅಹಂಕಾರನೆನಿಸಿದ ಜೀವನಲ್ಲಿರತಕ್ಕ ಅನಿರುದ್ಧನೆನಿಸಿದ ಶ್ರೀಹರಿಯ ಉಪದೇಶವು ಮಾಡಲ್ಪಡುತ್ತದೆ. (ಭೂಮನೇ ಅಹಂಕಾರನು. ಭೂಮನಿಗೆ ಹೇಳಿದ ಲಕ್ಷಣವೇ ಅಹಂಕಾರನ ಲಕ್ಷಣವು. ಅವರಿಗೆ ಭೇದವಿಲ್ಲವೆನ್ನುತ್ತಾರೆ.) ಅಹಂ ಎಂದು ಹೇಳಲ್ಪಡುವ ಜೀವನಲ್ಲಿದ್ದ ಅನಿರುದ್ಧನೇ ಕೆಳಗೂ.....ಆ ಅನಿರುದ್ಧನೇ ಸರ್ವಜಗತ್ತನ್ನು ವ್ಯಾಪಿಸಿಕೊಂಡು ಇದ್ದಾನೆ. ॥ ೧ ॥

ಪೀ—ಭೂಮನೆನಿಸಿದ ಶ್ರೀನಾರಾಯಣನ ವಾಸುದೇವ ಎಂಬ ರೂಪವನ್ನು ಹೇಳುತ್ತಾರೆ—

ಉ. ॥ ಅಥಾತ ಆತ್ಮಾದೇಶ ಏವಾತ್ಮೈವಾಧಸ್ತಾದಾತ್ಮೋಪರಿಷ್ಟಾದಾತ್ಮ ಪಶ್ಚಾದಾತ್ಮಾ ಪುರಸ್ತಾದಾತ್ಮಾ ದಕ್ಷಿಣತ ಆತ್ಮೋತ್ತರತ ಆತ್ಮೈವೇದꣳ ಸರ್ವಮಿತಿ ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನಾತ್ಮ ರತಿರಾತ್ಮಕ್ರೀಡ ಆತ್ಮಮಿಥುನ ಆತ್ಮಾನಂದಃ ಸ ಸ್ವರಾಡ್ಭವತಿ ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತ್ಯಥ ಯೇಽನ್ಯಥಾತೋ ವಿದುರನ್ಯರಾಜಾನಸ್ತೇಕ್ಷಯ್ಯಲೋಕಾ ಭವಂತಿ ತೇಷಾꣳ ಸರ್ವೇಷು ಲೋಕೇಷ್ವಕಾಮಚಾರೋ ಭವತಿ ॥ ಇತಿ ಪಂಚವಿಂಶಃ ಖಂಡಃ ॥ ೯-೨೫ ॥ ॥ ೨ ॥

ಅ ॥ ಯೋಗ್ಯಾಧಿಕಾರಿಗಳಿಗೆ ಫಲವು ದೊರಕುವುದರಿಂದ ಶ್ರೀಹರಿಯ ಅನುಗ್ರಹದಿಂದ ವ್ಯಾಪ್ತನಾದ ಶ್ರೀಹರಿಯ ಉಪದೇಶವು ಹೇಳಲ್ಪಡುತ್ತದೆ. (ಇಲ್ಲಿ ಭೂಮಾ=ನಾರಾಯಣನು. ಅಹಂಕಾರಃ=ಜೀವರೊಳಗಣನಾದ ಅನಿರುದ್ಧನು. ಆತ್ಮಾ=ವ್ಯಾಪ್ತನಾದ ವಾಸುದೇವನು. ಹೀಗೆ ತಿಳಿಯಬೇಕು.) ವಾಸುದೇವನೇ ಕೆಳಗೂ *.....ವಾಸುದೇವನೇ ಈ ಸರ್ವ ಜಗತ್ತನ್ನು ವ್ಯಾಪಿಸಿಕೊಂಡಿದ್ದಾನೆ. (ವಾಸುದೇವನನ್ನು ಪ್ರತ್ಯಕ್ಷೀಕರಿಸಿದ ಜ್ಞಾನಿಗೂ. ವಿಪರೀತ ಜ್ಞಾನಿಗೂ ಫಲಹೇಳುತ್ತಾರೆ—) ಪ್ರಸಿದ್ಧನಾದ ಮುಖ್ಯಾಧಿಕಾರಿಯಾದ ಚತುರ್ಮುಖನು ಶ್ರವಣ ಮನನ ನಿದಿಧ್ಯಾಸನಗಳನ್ನು ಮಾಡುತ್ತಾ ಮುಕ್ತನಾಗಿ ಶ್ರೀಹರಿಯಲ್ಲಿ ಆಸಕ್ತಿಯುಳ್ಳವನಾಗಿ ಶ್ರೀಹರಿಯಿಂದ ಕ್ರೀಡಿಸುವವನಾಗುತ್ತಾನೆ. ತಾನು ಸ್ತ್ರೀರೂಪನಾಗಿ ಶ್ರೀಹರಿಯಿಂದ ಮಿಥುನೀಭಾವವನ್ನು ಹೊಂದುತ್ತಾನೆ. ಶ್ರೀಹರಿಯಿಂದಲೇ ಸಂತೋಷವನ್ನು ಹೊಂದುತ್ತಾನೆ. ಆ ಚತುರ್ಮುಖನು ಶ್ರೀಪರಮಾತ್ಮನೇ ಪ್ರತ್ಯಕ್ಷವಾಗಿ ನಿಯಾಮಕನಾಗಿ ಉಳ್ಳವನು. ಆ ಮುಕ್ತನಿಗೆ ಎಲ್ಲಾ ಲೋಕಗಳಲ್ಲಿಯೂ ಸ್ವೇಚ್ಛಾನುಸಾರ ಸಂಚಾರವಾಗುತ್ತದೆ. (ಈ ಫಲವು

* ಹಿಂದಿನಂತೆ ಅರ್ಥವು

ಚತುರ್ಮುಖನಿಗೇನೇ ಮುಖ್ಯವು. ಇತರರಿಗೆ ಯಥಾಯೋಗ್ಯವಾಗಿ.) (ಹೀಗೆ ಭಗವಜ್ಜ್ಞಾನಿಗೆ ಫಲಹೇಳಿ ವಿಪರೀತಜ್ಞಾನಿಗೆ ಹೇಳಿದ ಫಲವು ಆಗುವುದಿಲ್ಲವೆನ್ನುತ್ತಾರೆ.) ಹಿಂದೆ ಹೇಳಿದ ರೀತಿಗಿಂತ ವ್ಯತ್ಯಾಸವಾಗಿ ತಿಳಿದವರು ತಮಗಿಂತ ಅಧಮರಾದವರು ನಿಯಾಮಕರಾಗಿ ಉಳ್ಳವರಾಗುತ್ತಾರೆ. ನಶ್ವರ ಲೋಕವುಳ್ಳವರಾಗುತ್ತಾರೆ. ಅವರಿಗೆ ಎಲ್ಲಾ ಲೋಕಗಳಲ್ಲಿ ಸಂಚಾರ ಶಕ್ತಿಯೂ ಇರುವುದಿಲ್ಲ. (ತಮಃಪ್ರಾಪ್ತಿಯೂ ಆಗುತ್ತದೆ.) ॥ ೯—೨೫ ॥ ॥ ೨ ॥

ಪೀ—ಅಥಾತೋಽಹಂಕಾರಾದೇಶಃ ಪ್ರಸಿದ್ಧವಾದ ಅಹಂಕಾರವೇ ಚೇತನಾಚೇತನ ಮಿಶ್ರವಾದುದು ಹೇಳಲ್ಪಡುತ್ತದೆಂದು ಪರರು ಹೇಳುವುದು ಅಯುಕ್ತವೆನ್ನುತ್ತಾರೆ—

ಭಾ. ॥ (೧) ಸ ಏವಾಹಂಕೃತಿಃ ಸ್ಮೃತಃ । ಅಕಾರ್ಯೋಽಹಮಿತಿ ಹ್ಯೇಷ ತತೋಽಹಂಕಾರ ಉಚ್ಯತೇ । ಜೀವಸ್ಥಸ್ತ್ವನಿರುದ್ಧೋ ಯಃ ಸೋಽಹಂಕಾರ ಇತೀರಿತಃ ॥ (೨) ಸೋಽಪ್ಯಣುತ್ವೇಽಪಿ ಸಂವ್ಯಾಪೀ ಪರಮೈಶ್ವರ್ಯಯೋಗತಃ ॥ (೩) ಯಥಾ ಬಾಲತನೌ ವಿಷ್ಣೌ ಮಾರ್ಕಂಡೇಯೇನ ಧೀಮತಾ । ಪ್ರವಿಶ್ಯ ನಾಂತೋಽಧಿಗತ ಏವಂ ವ್ಯಾಪ್ತೋ ಹರಿಃ ಪರಃ । ಅಣುರೂಪೋಽಪಿ ॥ (೪) ಭಗವಾನ್ವಾಸುದೇವಃ ಪರೋ ವಿಭುಃ । ಆತ್ಮೇತ್ಯುಕ್ತಃ ಸ ಚ ವ್ಯಾಪೀ ನ ಚ ಭೇದೋ ಹರೌ ಕ್ವಚಿತ್ ॥ ಇತಿ ಪರಮಸಾರೇ ॥ (೫) ಭೂಮಪ್ರಸಾದಂ ವಿನಾ ನಾಲ್ಪೇ ಸುಖಮಸ್ತಿ ॥ (೬) ಮರ್ತ್ಯಂ ಚ ಪೂರ್ವಂ । ಅಲ್ಪಾಪಿ ಹ್ಯಮೃತಾ ದೇವೀ ಶ್ರೀಃ ಪೂರ್ಣಾಽತಿಪ್ರಿಯತ್ವತಃ ॥ ಇತಿ ಚ ॥ (೭) ಆತ್ಮರತಿರ್ಭಗವದ್ರತಿಃ । ಸ್ವೋ ಭಗವಾನ್। ಸೋಽಸ್ಯ ಪ್ರತ್ಯಕ್ಷತ ಆಜ್ಞಾಪಯಿತಾ ಭವತೀತಿ ಸ್ವರಾಟ್ ॥ ೧,೨ ॥ ಇತಿ ಪಂಚವಿಂಶಃ ಖಂಡಃ ॥ ೯—೨೫ ॥ ॥ ೧ ॥

ಅ ॥ (೧) ಭೂಮನೇ ಅಹಂಕಾರನೆನಿಸುತ್ತಾನೆ. ಅಹಂ ಎಂದು ಕರೆಯಲ್ಪಡುವುದರಿಂದ ಜೀವಸೊಳಗಣ ಅನಿರುದ್ಧನು ಅಹಂಕಾರನೆನಿಸುತ್ತಾನೆ. (೨) (ಜೀವನು ಅಣುವಾಗಿರುವುದರಿಂದ ಅಣುರೂಪನಾದ ಜೀವನಲ್ಲಿ ಶ್ರೀಹರಿಯೂ ಅಣುರೂಪನಾಗಿರ-ುವುದಂದ ಅಹಮೇವಾಧಸ್ತಾತ್ ಇತ್ಯಾದಿಗಳಿಂದ ಶ್ರೀಹರಿಯು ವ್ಯಾಪ್ತನೆಂದು ಹೇಳಿದ್ದು ಹೇಗೆ ಕೂಡುತ್ತದೆ.? ಎಂದರೆ) ಶ್ರೀಹರಿಯು ಅಣುವಾಗಿದ್ದರೂ ಆತನಿಗೆ ಪರಮೈಶ್ವರ್ಯವಿದ್ದುದರಿಂದ ಸರ್ವತ್ರವ್ಯಾಪ್ತನೂ ಆಗಿದ್ದಾನೆ. (೩) (ಶ್ರೀಹರಿಗೆ ಪರಮೈಶ್ವರ್ಯವಿದ್ದರೂ ಅಣುತ್ವ ಮಹತ್ವಗಳು ಎರಡೂ ಇವೆ, ಎಂಬಲ್ಲಿ ಪ್ರಮಾಣವೇನೆಂದರೆ ಮಾರ್ಕಂಡೇಯರ ಪ್ರತ್ಯಕ್ಷವು ಪ್ರಮಾಣವೆನ್ನುತ್ತಾರೆ) ಹೇಗೆ ಬಾಲರೂಪಿಯಾದ ಶ್ರೀವಿಷ್ಣುವಿನ ಮುಖದಲ್ಲಿ ಜ್ಞಾನಿಗಳಾದ ಮಾರ್ಕಂಡೇಯರು ಪ್ರವೇಶಮಾಡಿ ಹೊಟ್ಟೆಯೊಳಗಿದ್ದ ಪ್ರಪಂಚದ ಅವಧಿಯನ್ನೇ ಕಾಣಲಿಲ್ಲ. ಹೀಗೆಯೇ ಸರ್ವೋತ್ತಮನಾದ ಶ್ರೀಹರಿಯು ಅಣುರೂಪನಾದರೂ ಸರ್ವತ್ರ ವ್ಯಾಪ್ತನಾಗಿದ್ದಾನೆ. (೪) (ಅಥಾತ ಆತ್ಮಾದೇಶಃ ಎಂಬುವುದರಿದ ಜೀವೋಪದೇಶವೆಂಬುದು ಅಯುಕ್ತವೆನ್ನುತ್ತಾರೆ.) ಸರ್ವೋತ್ತಮನಾದ ವ್ಯಾಪ್ತನಾದ ವಾಸುದೇವನು ಆತ್ಮಾ ಎನಿಸುತ್ತಾನೆ. ಆ ಶ್ರೀಹರಿಯು ಸರ್ವತ್ರ ವ್ಯಾಪಿಸಿಕೊಂಡಿದ್ದಾನೆ. ಶ್ರೀಹರಿಯ ಯಾವ ರೂಪಗಳಲ್ಲಿಯೂ ಸ್ವಲ್ಪವೂ ಭೇಧವಿಲ್ಲ, ಎಂದು ಪರಮ-ಸಾರವೆಂಬ ಗ್ರಂಥದಲ್ಲಿದೆ. (೫) (ಯೋ ವೈ ಭೂಮಾ ತತ್ಸುಖಂ ಎಂಬಲ್ಲಿ ಭೂಮನಿಗೆ ಸುಖಸ್ವರೂಪವು ಲಕ್ಷಣವೆಂದು ಹೇಳಿದೆ. ಮುಕ್ತರೂ ಸುಖಸ್ವರೂಪರಂದುದರಿಂದ ನಾಲ್ಪೇ ಸುಖಮಸ್ತಿ ಎಂದು ಹೇಳಿದ್ದು ಅಯುಕ್ತವೆಂದರೆ ಆವಾಕ್ಯದ ಅರ್ಥಹೇಳುತ್ತಾರೆ.) ಭೂಮನ ಅನುಗ್ರಹದಿಂದಲೇ ಮುಕ್ತರು ಸುಖವನ್ನನುಭವಿಸುತ್ತಾರೆ. (ಏನಂಚ ಇತರಾಧೀನವಾಗದಿದ್ದು ಸುಖಸ್ವರೂಪತ್ವವು ಭೂಮನ ಲಕ್ಷಣವು. ಆ ಲಕ್ಷಣವು

ಬೇರೆಯವರಲ್ಲಿ ಇಲ್ಲ.) (೬)(ಯೋ ವೈ ಭೂಮಾ ತದಮೃತಂ ಎಂದು ಭೂಮನಿಗೆ ಅಮೃತತ್ವವು ಲಕ್ಷಣವೆಂದು ಹೇಳಿ ಯದಲ್ಪಂ ತನ್ಮರ್ತ್ಯಂ ಎಂದು ಬೇರೆಯವರಲ್ಲಿ ಆ ಲಕ್ಷಣವು ಇಲ್ಲವೆಂದು ಹೇಳಿದೆ. ಇದು ಅಯುಕ್ತವು. ಮುಕ್ತರಿಗೂ ಅಮೃತತ್ವ ಲಕ್ಷಣವು ಇದೆ ಎಂದರೆ) ಮುಕ್ತರ ಸಮುದಾಯವು ಮೋಕ್ಷಹೊಂದಿದಾಗ ಅಮೃತವಾಗಿದ್ದರೂ (ಮರಣಶೂನ್ಯವಾಗಿದ್ದರೂ) ಮೊದಲು ಮರಣಸ್ವಭಾವವುಳ್ಳದ್ದು. (ಏವಂಚ ನಿತ್ಯಾಮೃತತ್ವ (ನಿತ್ಯಮುಕ್ತತ್ವ)ವು ಭೂಮನಿಗೆ ಲಕ್ಷಣವು) (ಹಾಗಾದರೆ ಲಕ್ಷ್ಮೀದೇವಿಯಲ್ಲಿ ನಿತ್ಯಮುಕ್ತತ್ವ ಲಕ್ಷಣವಿದೆ ಎಂದರೆ) ನಿತ್ಯಮುಕ್ತಳಾದ ಲಕ್ಷ್ಮೀದೇವಿಯು ಶ್ರೀಹರಿಗಿಂತ ಅಲ್ಪಗುಣಗುಳುಳ್ಳವಳಾದಾಗ್ಯೂ ಶ್ರೀಹರಿಗೆ ಅತಿಪ್ರಿಯಳಾದುದರಿಂದ ಪೂರ್ಣಳಾಗಿರುತ್ತಾಳೆ. (ಏವಂಚ ಲಕ್ಷ್ಮೀದೇವಿಯೂ ಭೂಮಕೋಟಿಯಲ್ಲಿ ಸೇರಿದವಳಾದುದರಿಂದ ದೋಷವಿಲ್ಲ.) (೭) ಚತುರ್ಮುಖನು ಶ್ರೀಹರಿಯಿಂದಲೇ ಸಂತೋಷವುಳ್ಳವನು- (ಸ್ವರಾಟ್=ಸ್ವತಂತ್ರನೆಂಬ ಅರ್ಥವನ್ನು ಹೋಗಲಾಡಿಸುವುದಕ್ಕಾಗಿ ಆ ಶಬ್ದಾರ್ಥ ಹೇಳುತ್ತಾರೆ) ಸರ್ವಸ್ವತಂತ್ರನಾದುದರಿಂದ ಶ್ರೀಹರಿಯು ಸ್ವಃ ಎನಿಸುತ್ತಾನೆ. ಪರಮಾತ್ಮನು ಚತುರ್ಮುಖನಿಗೆ ಪ್ರತ್ಯಕ್ಷವಾಗಿ ಆಜ್ಞಾಪಿಸುವವನಾಗುತ್ತಾನೆ- ಆದಕಾರಣ ಚತುರ್ಮುಖನು ಸ್ವರಾಟ್ ಎನಿಸುತ್ತಾನೆ. ॥ ೯—೨೫ ॥ ॥ ೧ ॥

ಇಪ್ಪತ್ತೈದನೇ ಖಂಡವು ಮುಗಿಯಿತು.

೨೬ನೇ ಖಂಡವು

ಪೀ—ಆತ್ಮಜ್ಞಾನಿಯ ಅಥವಾ ಮುಕ್ತನ ಇನ್ನೊಂದು ಮಹಿಮೆ ಹೇಳುತ್ತಾರೆ—

ಉ. ॥ ತಸ್ಯ ಹ ವಾ ಏತಸ್ಯೈವಂ ಪಶ್ಯತ ಏವಂ ಮನ್ವಾನಸ್ಯೈವಂ ವಿಜಾನತ ಆತ್ಮತಃ ಪ್ರಾಣ ಆತ್ಮತ ಆಶಾ ಆತ್ಮತಃ ಸ್ಮರ ಆತ್ಮತ ಆಕಾಶ ಆತ್ಮತಸ್ತೇಜ ಆತ್ಮತ ಆಪ ಆತ್ಮತ ಆವಿರ್ಭಾವತಿರೋಭಾವಾವಾತ್ಮತೋಽನ್ನಮಾತ್ಮತೋ ಬಲಮಾತ್ಮತೋ ವಿಜ್ಞಾನಮಾತ್ಮತೋ ಧ್ಯಾನಮಾತ್ಮತಶ್ಚಿತ್ತಮಾತ್ಮತಸ್ಸಂಕಲ್ಪ ಆತ್ಮತೋ ಮನ ಆತ್ಮತೋ ವಾಗಾತ್ಮತೋನಾಮ್ನ್ಯಾತ್ಮತೋ ಮಂತ್ರಾ ಆತ್ಮತಃ ಕರ್ಮಾಣ್ಯಾತ್ಮತ ಏವೇದಂ ಸರ್ವಮಿತಿ ॥೧॥

ಅ ॥ ಹಿಂದೆ ಹೇಳಿದ ಪ್ರಕಾರ ಶ್ರೀಹರಿಯ ಸಾಕ್ಷಾತ್ಕಾರಾದಿಗಳನ್ನು ಹೊಂದಿದ ಚತುರ್ಮುಖಾದಿಗಳಿಗೆ ಆತ್ಮನೆನಿಸಿದ ಶ್ರೀಹರಿಯಿಂದ ಪ್ರಾಣಮೊದಲಾದವರು ಹುಟ್ಟುತ್ತಾರೆ, ರಕ್ಷಿಸಲ್ಪಡುತ್ತಾರೆ, ಲಯ ಹೊಂದುತ್ತಾರೆ. ಪ್ರೇರಿಸಲ್ಪಡುತ್ತಾರೆಂದೂ ಪ್ರತ್ಯಕ್ಷವಾಗುತ್ತದೆ. ಆತ್ಮಪರೋಕ್ಷಜ್ಞಾನಿಯಾದವನು ಮುಕ್ತನಾಗಿ ಪ್ರಾಣ, ಆಶಾ, ಸ್ಮರ, ಆಕಾಶ, ತೇಜಸ್ಸು, ಅಪ್, ಅನ್ನ, ಬಲ, ವಿಜ್ಞಾನ, ಧ್ಯಾನ, ಚಿತ್ತ, ಸಂಕಲ್ಪ, ಮನಸ್ಸು, ವಾಕ್, ನಾಮ, ಮಂತ್ರ, ಕರ್ಮ, ಎಂಬ ಶಬ್ದಗಳಿಂದ ಹೇಳಲ್ಪಡತಕ್ಕ ಮುಖ್ಯ ಪ್ರಾಣಮೊದಲಾದ ಹಿಂದೆ ಹೇಳಿದ ದೇವತೆಗಳಿಗೆ ಉತ್ಪತ್ತಿ ಮೊದಲಾದುದು ಶ್ರೀಹರಿಯಿಂದ ಆಗುತ್ತದೆಂದು ತಿಳಿಯುತ್ತಾನೆ. (ಇಷ್ಟು ಮಾತ್ರವಲ್ಲ. ಪರಂತು) ಶ್ರೀಹರಿಯಿಂದಲೇ ಎಲ್ಲಾ ಜಗತ್ತು ಉತ್ಪತ್ಯಾದಿಗಳನ್ನು ಹೊಂದುತ್ತದೆ. ಶ್ರೀಹರಿಯಿಂದ ನಿಖಿಲ ಜಗತ್ತಿಗೆ ಉತ್ಪತ್ತಿ ನಾಶಗಳು ಆಗುತ್ತವೆ, ಎಂದೂ ಚತುರ್ಮುಖಾದಿಗಳಿಗೆ ಪ್ರತ್ಯಕ್ಷವಾಗುತ್ತದೆ ॥ ೧ ॥

ಪೀ—ಮುಕ್ತನಿಗೆ ಮರಣಾದಿಗಳಿಲ್ಲವೆಂಬುದನ್ನು ವಿವರಿಸುತ್ತಾರೆ—

ಉ. ॥ ತದೇಷ ಶ್ಲೋಕಃ ॥ ನ ಪಶ್ಯೋ ಮೃತ್ಯುಂ ಪಶ್ಯತಿ ನ ರೋಗಂ ನೋತ ದುಃಖತಾಂ ಸರ್ವಂ ಹ ಪಶ್ಯಃ ಪಶ್ಯತಿ ಸರ್ವಮಾಪ್ನೋತಿ ಸರ್ವಶ ಇತಿ । ಸ ಏಕಧಾ ಭವತಿ ತ್ರಿಧಾ ಭವತಿ ಪಂಚಧಾ ಸಪ್ತಧಾ ನವಧಾ ಚೈವ ಪುನಶ್ಚೈಕಾದಶ ಸ್ಮೃತಃ । ಶತಂ ಚ ದಶ ಚೈಕಶ್ಚ ಸಹಸ್ರಾಣಿ ಚ ವಿಂಶತಿಃ । ಆಹಾರಶುದ್ಧೌ ಸತ್ವಶುದ್ಧಿಃ ಸತ್ವಶುದ್ಧೌ ಧ್ರುವಾ ಸ್ಮೃತಿಃ । ಸ್ಮೃತಿಲಂಭೇ ಸರ್ವಗ್ರಂಥೀನಾಂ ವಿಪ್ರಮೋಕ್ಷಸ್ತಸ್ಮೈ ಮೃದಿತಕಷಾಯಾಯ ತಮಸಃ ಪಾರಂ ದರ್ಶಯತಿ ದೇವರ್ಷಯೇ ನಾರದಾಯ ಭಗವಾನ್ ಸನತ್ಕುಮಾರಸ್ತಂ ಸ್ಕಂದ ಇತಾ ಚಕ್ಷತೇ ತಂ ಸ್ಕಂದ ಇತ್ಯಾಚಕ್ಷತೇ ॥ ಇತಿ ಷಡ್ವಿಂಶಃ ಖಂಡಃ ॥ ॥ ೯-೨೬ ॥ ॥ ೨ ॥

ಇತಿ ಶ್ರೀಮಚ್ಛಾಂದೋಗ್ಯೋಪನಿಷದಿ ನವಮೋಽಧ್ಯಾಯಃ ॥ ೯ ॥

ಅ ॥ ಆತ್ಮಜ್ಞಾನಿಯ ಮಹಿಮೆಯ ವಿಷಯದಲ್ಲಿ (ಅಂದರೆ ಮುಕ್ತನು ಶ್ರೀಹರಿಯು ಮಾಡತಕ್ಕ ಜಗತ್ಸೃಷ್ಟ್ಯಾದಿಗಳನ್ನು ನೋಡುತ್ತಾನೆ, ಇತ್ಯಾದಿ ವಿಷಯದಲ್ಲಿ) ಮುಂದೆ ಹೇಳುವ ಮಂತ್ರವು ಸಮ್ಮತಿಯಾಗುತ್ತದೆ. ನೋಡತಕ್ಕ ಮುಕ್ತಜೀವನು ಮರಣ ರೋಗ ದುಃಖಗಳನ್ನು ನೋಡುವುದಿಲ್ಲ. ಮುಕ್ತನಾದ ಜೀವನು ಸರ್ವಗುಣಪೂರ್ಣನಾದ ಶ್ರೀಹರಿಯನ್ನು ನೋಡುತ್ತಾನೆ. ಅಥವಾ ಶ್ರೀಹರಿಯು ಮಾಡುವ ಜಗತ್ಸೃಷ್ಟ್ಯಾದಿಗಳನ್ನು ನೋಡುತ್ತಾನೆ. ಮತ್ತು ಶ್ರೀಹರಿಯಿಂದ ಪ್ರಾಣಾದಿಗಳಿಗೆ ಉತ್ಪತ್ತಿಯಾಗುತ್ತದೆ, ಇತ್ಯಾದಿಗಳನ್ನು ನೋಡುತ್ತಾನೆ. ಗುಣಪೂರ್ಣನಾದ ಶ್ರೀಹರಿಯನ್ನು ಹೊಂದುತ್ತಾನೆ. ಎಲ್ಲಾ ಅಭೀಷ್ಟಗಳನ್ನು ಹೊಂದುತ್ತಾನೆ. (ಮುಕ್ತನು ತನ್ನ ಇಚ್ಛೆಯಿಂದ ಅನೇಕ ರೂಪಗಳನ್ನು ಹೊಂದುತ್ತಾನೆಂಬ ಮಹಿಮೆ ಹೇಳುತ್ತಾರೆ.) ಆ ಶ್ರೀಹರಿಯ ಅಪರೋಕ್ಷಜ್ಞಾನಿಯು, ಒಂದು ರೂಪವುಳ್ಳವನೂ ಮೂರು ಐದು ಏಳು ಒಂಭತ್ತು ರೂಪಗಳುಳ್ಳವನೂ ಆಗುತ್ತಾನೆ. ಅವನೇ ಹನ್ನೊಂದು ರೂಪಗಳುಳ್ಳವನಾಗುತ್ತಾನೆ. ಅಥವಾ ಆ ಜ್ಞಾನಿಯು ನೂರು, ಹತ್ತು ಒಂದು ರೂಪಗಳುಳ್ಳವನೂ ಸಹಸ್ರರೂಪಗಳುಳ್ಳವನೂ ಇಪ್ಪತ್ತೈದುರೂಪಗಳುಳ್ಳವನೂ ಆಗುತ್ತಾನೆ. (ಅಂದರೆ ಶ್ರೀಹರಿಯ ಜ್ಞಾನ ಸಾಮರ್ಥ್ಯದಿಂದ ಆತ್ಮಾಪರೋಕ್ಷಜ್ಞಾನಿಗಳು ಅಂಶಗಳಿಂದ ನಾನಾರೂಪಗಳನ್ನು ಧರಿಸಿಕೊಳ್ಳುತ್ತಾರೆ. (ಅವಿದ್ಯೆಯನ್ನು ಹೋಗಲಾಡಿಸುವುದಕ್ಕೆ ಕಾರಣವಾದ ಶ್ರೀಹರಿಯ ಪ್ರತ್ಯಕ್ಷ ಸ್ಥೈರ್ಯದಿಂದ ಇರಲಿಕ್ಕೆ ಕಾರಣ ಹೇಳುತ್ತಾರೆ.) ಗುರುಗಳಿಂದ ವಿದ್ಯಾಶ್ರವಣರೂಪವಾದ ಆಹಾರವು ಶುದ್ಧವಾದರೆ ಜ್ಞಾನವು (ಮನನವು) ಶುದ್ಧವಾಗುತ್ತದೆ. ಮನನವು ಶುದ್ಧವಾದರೆ ಸ್ಥಿರವಾದ ಸ್ಮೃತಿಯು (ಧ್ಯಾನವು) ಶುದ್ಧವಾಗುತ್ತದೆ. ಸ್ಥಿರವಾದ ಸ್ಮೃತಿಯು ಲಭಿಸಿದರೆ (ಶ್ರೀಹರಿಯು ಪ್ರತ್ಯಕ್ಷನಾಗುತ್ತಾನೆ) ಆದರಿಂದ ಅವಿದ್ಯಾ ಕಾಮಕರ್ಮಮೊದಲಾದ ಎಲ್ಲಾ ಅನಿಷ್ಟಗಳಿಗೆ ಶೀಘ್ರದಲ್ಲಿ ಬಿಡುಗಡೆಯಾಗುತ್ತದೆ. (ವೇದಪುರುಷನು ತಾನು ಹೇಳುತ್ತಾನೆ) ಅವಿದ್ಯಾ ಕಾಮಕರ್ಮಾದಿಗಳನ್ನೆಲ್ಲಾ ಬಿಟ್ಟಿರುವ (ದುಃಖವಿಲ್ಲದಿರುವ) ಭಗವಜ್ಜ್ಞಾನಿಗಳಾದ ನಾರದರಿಗೆ ಅಜ್ಞಾನಲೇಶವಿಲ್ಲದಿರುವ ಭಗವತ್ಸ್ವರೂಪವನ್ನು ಸನತ್ಕುಮಾರರು ತೋರಿಸಿದರು. ತೋರಿಸಿರುವ ಆ ಸನತ್ಕುಮಾರರನ್ನು ಜ್ಞಾನಿಗಳು ಸ್ಕಂದ ಎಂದು ಹೇಳುತ್ತಾರೆ. ಸನತ್ಕುಮಾರರು ಸ್ಕಂದನ ಅವತಾರರಾದುದರಿಂದ ಅಂತಹ ಸಾಮರ್ಥ್ಯವು ಬಂದಿರುತ್ತದೆ. ॥ ೯—೨೬ ॥ ॥ ೨ ॥

ಪೀ- ಆತ್ಮತಃ ಪ್ರಾಣಃ ಇತ್ಯಾದಿಗಳಿಂದ ಮುಕ್ತಾತ್ಮರಿಂದ ಪ್ರಾಣಾದಿಗಳ ಸೃಷ್ಟಿಯು ಹೇಳಲ್ಪಡುತ್ತದೆಂದು ಪರರು ಹೇಳುವುದು ಅಯುಕ್ತವೆಂಬ ಅಭಿಪ್ರಾಯದಿಂದ ತಾನು ಅರ್ಥ ಹೇಳುತ್ತಾರೆ—

ಭಾ. ॥ (೧) ಆತ್ಮತಃ ಪ್ರಾಣ ಆತ್ಮತ ಆಶೇತ್ಯಾದಿ ಮುಕ್ತಃ ಸನ್ ಪ್ರಾಣಾದೀನಾಂ ಸೃಷ್ಟ್ಯಾದಿಕಂ ಪಶ್ಯತೀತ್ಯರ್ಥಃ ॥ (೨) ಸರ್ವಂ ಹಿ (ಹ) ಪಶ್ಯಃ ಪಶ್ಯತೀತಿ ವಾಕ್ಯಶೇಷಾತ್ ಪಶ್ಯ ಇತಿ ದ್ರಷ್ಟಾ । ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಮಿತಿ ಶ್ರುತೇಃ ॥ (೩) ಭೂಮೋಪಾಸನಯೋಗ್ಯಸ್ತು ಸಾಕ್ಷಾದ್ಬ್ರಹ್ಮೈವ ಮುಖ್ಯತಃ । ಸ ತದ್ವಿದ್ಯಾಬಲೇನೈವ ವಿಷ್ಣುನಾ ರತಿಮಾಪ್ನುಯಾತ್ ॥ ತೇನೈವ ಕ್ರೀಡತೇ ನಿತ್ಯಂ ಸ್ತ್ರೀರೂಪೋ ಮಿಥುನೀಭವೇತ್ । ತದಾನಂದಃ ಸ ಏವಾಸ್ಯ ರಾಜಾ ಭವತಿ ನಾಪರಃ । ಪಶ್ಯೇಚ್ಚ ಪ್ರಾಣಸೃಷ್ಟ್ಯಾದ್ಯಂ ॥ (೪) ಯೇ ತದನ್ಯ ಉಪಾಸಕಾಃ । ತೇ ಯಥಾಯೋಗ್ಯಮಾಪ್ನುವಂತಿ ಫಲಂ ಮುಕ್ತ್ಯೌ ನ ಸಂಶಯಃ ॥ ಇತಿ ಪರಮತತ್ತ್ವೇ ॥ ೧ ॥

ಅ ॥ (೧) **ಆತ್ಮತಃ ಪ್ರಾಣಃ ಆತ್ಮತಃ ಆಶಾ** ಇದುಮೊದಲಾದ ವಾಕ್ಯಗಳಿಗೆ ಮುಕ್ತನಾದವನು ಮುಖ್ಯಪ್ರಾಣಮೊದಲಾದವರ ಸೃಷ್ಟಿ ಸ್ಥಿತಿಮೊದಲಾದುದನ್ನು ನೋಡುತ್ತಾನೆಂದು ಅರ್ಥವು. (ಅಂದರೆ ಮುಕ್ತನು ನೋಡುತ್ತಿರುವಾಗ ಶ್ರೀಹರಿಯಿಂದ ಮುಖ್ಯಪ್ರಾಣಾದಿಗಳು ಹುಟ್ಟುತ್ತಾರೆ. ಇರುತ್ತಾರೆ, ಎಂದು ಹೇಳುವಾಗ ಮುಕ್ತನಾಗಿ ಅವರ ಉತ್ಪತ್ಯಾದಿಗಳನ್ನು ನೋಡುತ್ತಾನೆಂದು ಸಿಗುತ್ತದೆ.) (೨) (ಹೀಗೆ ಅರ್ಥಹೇಳಲಿಕ್ಕೆ ನಿಯಾಮಕ ಹೇಳುತ್ತಾರೆ.) (ನೋಡತಕ್ಕ ಮುಕ್ತನು ಶ್ರೀಹರಿಯು ಮಾಡುವ ಪ್ರಾಣಸೃಷ್ಟಿಮೊದಲಾದುದೆಲ್ಲವನ್ನು ನೋಡುತ್ತಾನೆ **ಸರ್ವಂ ಹ ಪಶ್ಯಃ ಪಶ್ಯತಿ** ಎಂಬ ಶಿಷ್ಟವಾಕ್ಯದಿಂದ ತಿಳಿಯುತ್ತದೆ. ಪಶ್ಯಃ ಎಂದರೆ ನೋಡುವ ಜೀವನು. (ಈ ವಿಷಯದಲ್ಲಿ ವೇದವಾಕ್ಯವನ್ನು ಪ್ರಮಾಣವಾಗಿ ಹೇಳುತ್ತಾರೆ.) ಜೀವನು ಬಂಗಾರಿನ ವರ್ಣವುಳ್ಳ ಶ್ರೀಹರಿಯನ್ನು ಯಾವಾಗ ನೋಡುತ್ತಾನೋ ಎಂಬ ವೇದದಿಂದ (೩) (ಭೂಮೋಪಾಸನೆಗೆ ಯಾರುಯಾರು ಯೋಗ್ಯರೋ ಅವರಿಗೆಲ್ಲರಿಗೂ **ಆತ್ಮರತಿಃ** ಇತ್ಯಾದಿಗಳಲ್ಲಿ ಹೇಳಿದ ಫಲವು ಸಿಗುತ್ತದೆಂಬ ಪ್ರತೀತಿಯನ್ನು ಹೋಗಲಾಡಿಸುವುದಕ್ಕಾಗಿ ಫಲ ಪ್ರಕರಣದ ಅರ್ಥವನ್ನು ಪ್ರಮಾಣಕೊಟ್ಟು ಹೇಳುತ್ತಾರೆ.) ಭೂಮೋಪಾಸನೆಗೆ ಯೋಗ್ಯನು ಮುಖ್ಯವಾಗಿ ಸಾಕ್ಷಾತ್ ಚತುರ್ಮುಖ ಬ್ರಹ್ಮನೇ. ಆ ಚತುರ್ಮುಖನು ಆ ಭೂಮವಿದ್ಯೆಯ ಸಾಮರ್ಥ್ಯದಿಂದಲೇ ಶ್ರೀವಿಷ್ಣುವಿನಿಂದ ತೃಪ್ತಿಯನ್ನು ಹೊಂದುತ್ತಾನೆ. ಆ ಶ್ರೀಹರಿಯಿಂದಲೇ ನಿತ್ಯದಲ್ಲಿಯೂ ಕ್ರೀಡಿಸುತ್ತಾನೆ. ಚತುರ್ಮುಖನು ಸ್ತ್ರೀರೂಪನಾಗಿ ಶ್ರೀಹರಿಯಿಂದಲೇ ಮಿಥುನೀಭಾವವನ್ನು ಹೊಂದುತ್ತಾನೆ ಶ್ರೀಹರಿಯಿಂದಲೇ ಆನಂದವುಳ್ಳವನಾಗುತ್ತಾನೆ. ಚತುರ್ಮುಖನಿಗೆ ಆ ಶ್ರೀಹರಿಯೇ ನಿಯಾಮಕನು. ಇನ್ನೊಬ್ಬ ನಿಯಾಮಕನು ಇರುವುದಿಲ್ಲ. ಚತುರ್ಮುಖನೇ ಮುಖ್ಯವಾಗಿ ಶ್ರೀಹರಿಯಿಂದ ಮುಖ್ಯಪ್ರಾಣಾದಿಗಳಿಗೆ ಸೃಷ್ಟಿಸ್ಥಿತ್ಯಾದಿಗಳು ಆಗುತ್ತವೆಂದು ನೋಡುತ್ತಾನೆ. (೪) (**ಆತ್ಮತಃ ಪ್ರಾಣ** ಇತ್ಯಾದಿಗಳ ಅರ್ಥಹೇಳುತ್ತಾರೆ.) ಚತುರ್ಮುಖನಿಗಿಂತ ದೇರೆ ಉಪಾಸಕರು ಯಥಾಯೋಗ್ಯವಾಗಿ ಮೋಕ್ಷದಲ್ಲಿ ಫಲವನ್ನು ಹೊಂದುತ್ತಾರೆ. ಸಂದೇಹವಿಲ್ಲ, ಎಂದು ಪರಮತತ್ವದಲ್ಲಿದೆ. ॥ ೧ ॥

ಈ—ಆಥಾತೋಽಹಂಕಾರಾದೇಶಃ ಎಂಬ ಪ್ರಕರಣವು ಜೀವರೊಳಗಣ ಅನಿರುದ್ಧನನ್ನು ಹೇಳುತ್ತದೆಂದು ನಾವು ಹೇಳಿದ ಅರ್ಥವು ದೃಢವಾಗುವುದಕ್ಕಾಗಿ ಅವಿದ್ಯಾಕಾರ್ಯವಾದ ಅಹಂಕಾರಗ್ರಂಥಿಯು ಹೇಳಲ್ಪಡುತ್ತದೆಂದು ಕೆಲವರು ಹೇಳುವುದು ಅಯುಕ್ತವೆನ್ನುತ್ತಾರೆ—**

ಭಾ. ॥ (೧) ನ ಚ ಭೂಮಾನಂ ಭಗವೋ ವಿಜಿಜ್ಞಾಸ ಇತಿ ಪೃಷ್ಟಸ್ಯನ್ ಭೂಮ್ನೋ ಲಕ್ಷಣಂ ಸ ಏವಾಧಸ್ತಾತ್ಸ ಉಪರಿಷ್ಟಾದಿತ್ಯಾದಿನಾ ಪೂರ್ಣತ್ವಂ ಭಗವತೋಽನ್ಯಸ್ಯಾಹಂಕಾರಸ್ಯೋಪದಿತಶೇತಿ ಯುಜ್ಯತೇ ॥ (೨) ನ ಚಾಹಂಕಾರಸ್ಯ ಪೂರ್ಣತ್ವಮಸ್ತಿ ॥ (೩) ನ ಚ

ಮುಖ್ಯೇ ಪೂರ್ಣತ್ವೇ ಯುಜ್ಯಮಾನೇ ಉಪಚರಿತಂ ಯುಜ್ಯತೇ ॥ (೪) ನ ಚಾಪಂಕಾರಸ್ಯ ಕಾಚಿತ್ಪ್ರಸ್ತುತಿಃ । ಅಥಶಬ್ದಸ್ತು ರೂಪಾಂತರಾಪೇಕ್ಷಯಾ ಯುಜ್ಯತೇ । ಆತಶ್ಶಬ್ದಸ್ತತ್ಪ್ರಸಾದಾದಿತಿ ॥ (೫) ಆತ್ಮರತಿಃ ಸ್ವರಾಡಿತ್ಯಾದಿ । ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮಿತ್ಯಾ ಬ್ರಹ್ಮಣ ಉತ್ಪತ್ತಿಪ್ರಸಿದ್ಧೇಃ ಸ್ವಯಂಭೂರಾತ್ಮಭೂರಿತ್ಯಾದಿಷ್ವಾತ್ಮಶಬ್ದಃ ಸ್ವಯಂಶಬ್ದಶ್ಚ ಯಥಾ ವಿಷ್ಣುವಾಚೀ ತದ್ವದೇವಾತ್ರಾಪ್ಯಾತ್ಮಶಬ್ದೋ ವಿಷ್ಣುವಾಚ್ಯೇವ ॥ ೨ ॥

ಆ ॥ (೧) ಪೂಜ್ಯರೇ ಭೂಮನನ್ನು ತಿಳಿಯಲಿಚ್ಛಿಸುತ್ತೇನೆಂದು ಸನತ್ಕುಮಾರರು ಪ್ರಶ್ನಿಸಿಕೊಂಡವರಾಗಿ ಸ ಏವಾಧಸ್ತಾತ್ ಸ ಉಪರಿಷ್ಟಾತ್ ಇತ್ಯಾದಿಗಳಿಂದ ಭೂಮನಿಗೆ ಹೇಳಿದ ಪೂರ್ಣತ್ವರೂಪ ಲಕ್ಷಣವನ್ನು ಶ್ರೀಹರಿಯಿಂದ ಇತರವಾದ ಅಹಂಕಾರಕ್ಕೆ ಉಪದೇಶಿಸುತ್ತಾರೆಂಬುದು ಕೂಡುವುದಿಲ್ಲ. (ಅಂದರೆ—ಅಹಂಕಾರವು ಶ್ರೀಹರಿಯಲ್ಲ, ಶ್ರೀಹರಿಯಿಂದ ಬೇರೆ ಎಂದಾದರೆ—ಸ ಏವಾಧಸ್ತಾತ್ ಇತ್ಯಾದಿಗಳಿಂದ ಭೂಮನಿಗೆ ಹೇಳಿದ ಪೂರ್ಣತ್ವವೆಂಬ ಲಕ್ಷಣವನ್ನೇ ಅಹಮೇವಾಧಸ್ತಾತ್ ಇತ್ಯಾದಿಗಳಿಂದ ಅಹಂಕಾರಕ್ಕೆ ಹೇಳಿದ್ದು ಕೂಡದೆ ಹೋಗುವುದು. ಸ ಏವಾಧಸ್ತಾತ್ ಇತ್ಯಾದಿಗಳು ಭೂಮಾನಂ ಭಗವೋ ವಿಜಿಜ್ಞಾಸೇ ಎಂಬ ಪ್ರಶ್ನೆಗೆ ಉತ್ತರವಾದುದರಿಂದ ಮತ್ತೊಬ್ಬನಿಗೆ ಲಕ್ಷಣವೆಂದು ಹೇಳಕೂಡದು.) (೨) (ಅಹಂಕಾರವು ಶ್ರೀಹರಿಯಿಂದ ಬೇರೆಯೆಂದಾದರೆ ಪೂರ್ಣತ್ವವೆಂಬ ಲಕ್ಷಣವೇ ಸರ್ವಥಾ ಕೂಡುವುದಿಲ್ಲವೆನ್ನುತ್ತಾರೆ.) ಅಹಂಕಾರಕ್ಕೆ ಪೂರ್ಣತ್ವವು (ಸರ್ವಗತತ್ವವು) ಸರ್ವಥಾ ಇಲ್ಲ. (೩) (ಮುಖ್ಯವಾಗಿ ಅಹಂಕಾರವು ಪೂರ್ಣವು ಎನ್ನುವುದಿಲ್ಲ. ಅಮುಖ್ಯವಾಗಿ ದೇಹದಲ್ಲಿ ಪೂರ್ಣವು ಎಂದು ಅಮುಖ್ಯ ಪ್ರಯೋಗವು ಎಂದರೆ) ಅಹಂಕಾರವು ಶ್ರೀಭಗವದ್ರೂಪವು ಎಂದಂಗೀಕರಿಸಿದರೆ ಮುಖ್ಯವಾದ ಪೂರ್ಣತ್ವವು ಕೂಡುತ್ತಿರಲು ಅದನ್ನು ಬಿಟ್ಟು ಅಮುಖ್ಯವಾದ ಪೂರ್ಣತ್ವವನ್ನು ಒಡಂಬಡುವುದು ಯುಕ್ತವಲ್ಲ. (ಮುಖ್ಯಾರ್ಥಕ್ಕೆ ಬಾಧಕವಿದ್ದರೇನೇ ಅಮುಖ್ಯಾರ್ಥವನ್ನು ಇಟ್ಟುಕೊಳ್ಳಬೇಕು.) (೪) (ಅಥಾತಃ ಎಂಬುದು ಅಹಂಕಾರವಿಷಯಕವಾದರೆ ಇನ್ನೊಂದು ದೋಷ ಹೇಳುತ್ತಾರೆ.) (ಭೂಮನೆಂಬ ಶ್ರೀಭಗವಂತನನ್ನು ಹೇಳುತ್ತಿರುವಾಗ ಆ ಶ್ರೀಹರಿಯದ್ದೇ ರೂಪಾಂತರವೆಂದು ತಿಳಿಸುವುದಕ್ಕಾಗಿ ಅಥಾತಃ ಎಂಬ ಉಪದೇಶವು ಎಂದು ಹೇಳಿದ ಕಾರಣ ನಾವು ಹೇಳುವ ಅರ್ಥವು ಸಂಗತವಾಗುತ್ತದೆ.) ಅಹಂಕಾರವನ್ನೇ ಹೇಳಿದ್ದೆಂದು ಹೇಳಿದರೆ ಸಂಗತಿಯೇ ಇಲ್ಲ. (ಆದಕಾರಣ ಅಹಂಕಾರತತ್ತ್ವವನ್ನೂ ಹೇಳುವುದೆಂಬುದು ಸರ್ವಥಾ ಕೂಡಲಾರದು.) (ಬೇರೆ ಪ್ರಕರಣ ಎಂದು ತಿಳಿಸತಕ್ಕುದು ಅಥ ಶಬ್ದವಿದೆ ಎಂದರೆ) ಭೂಮ ಪ್ರಕರಣದಲ್ಲಿ ನಾರಾಯಣನೆಂಬ ಭಗವದ್ರೂಪವನ್ನು ಹೇಳಿ ಆ ನಾರಾಯಣನದ್ದೇ ಅನಿರುದ್ಧರೂಪವನ್ನು ಹೇಳುವುದಕ್ಕಾಗಿ ಅಥ ಶಬ್ದವನ್ನು ಹೇಳಿದ್ದು. (ಹಾಗಾದರೆ ಅತಃ ಶಬ್ದವು ವ್ಯರ್ಥವೆಂದರೆ) (ಅಃ ಇತಿ ಬ್ರಹ್ಮ ಎಂಬ ವೇದಪ್ರಮಾಣದಿಂದ ಆ ಶಬ್ದವು ಶ್ರೀಹರಿಯನ್ನು ಹೇಳುತ್ತದೆ. ಆದುಕಾರಣ) ಅತಃ ಎಂಬ ಶಬ್ದಕ್ಕೆ ಶ್ರೀಹರಿಯ ಪ್ರಸಾದದಿಂದ ಎಂದರ್ಥವು. (೫) ಜೀವನು ಆತ್ಮರತಿಃ= ಶ್ರೀಹರಿಯಲ್ಲಿ ಆಸಕ್ತಿಯುಳ್ಳವನು. ಸ್ವರಾಟ್=ಶ್ರೀಹರಿಯೇ ನಿಯಾಮಕನಾಗಿ ಉಳ್ಳವನು, ಇತ್ಯಾದಿಗಳಿಂದ ಆತ್ಮ ಸ್ವ ಶಬ್ದಗಳು ಶ್ರೀಹರಿಯನ್ನು ಹೇಳುತ್ತವೆಂದು ಹೇಳಿದುದನ್ನು ದೃಢೀಕರಿಸುತ್ತಾರೆ.) ಶ್ರೀಹರಿಯು ಚತುರ್ಮುಖನನ್ನು ಮೊದಲು ಸೃಷ್ಟಿಸಿರುತ್ತಾನೆ, ಎಂಬ ವೇದದಲ್ಲಿ ಚತುರ್ಮುಖನಿಗೆ ಶ್ರೀಹರಿಯಿಂದ ಉತ್ಪತ್ತಿಯೆಂದು ಪ್ರಸಿದ್ಧವಾಗಿರುವುದರಿಂದ ಸ್ವಯಂಭೂಃ ಆತ್ಮಭೂಃ ಇತ್ಯಾದಿ ಚತುರ್ಮುಖನನ್ನು ಹೇಳುವ ಪ್ರಯೋಗಗಳಲ್ಲಿ ಆತ್ಮಶಬ್ದವೂ ಸ್ವಯಂಶಬ್ದವೂ ಹೇಗೆ ವಿಷ್ಣುವನ್ನು ಹೇಳುತ್ತದೋ, ಹಾಗೆಯೇ ಆತ್ಮರತಿಃ ಸ್ವರಾಟ್ ಇತ್ಯಾದಿಗಳಲ್ಲಿಯೂ ಆತ್ಮಶಬ್ದವೂ ಸ್ವಶಬ್ದವೂ ವಿಷ್ಣುವನ್ನೇ ಹೇಳುತ್ತದೆ. (ಆತ್ಮ, ಸ್ವ, ಸ್ವಯಂ ಈ ಶಬ್ದಗಳಿಗೆ ತಾನು ಎಂದು ಅರ್ಥಮಾಡಕೂಡದು. ಏಕೆಂದರೆ—ತನ್ನಿಂದ ತಾನು ಹುಟ್ಟುವುದು ಎಂಬುದು ಕೂಡಲಾರದಷ್ಟೆ. ಆದುಕಾರಣ ಆತ್ಮಾ ಸ್ವಯಂ ಎಂದರೆ

ಶ್ರೀಹರಿಯು. ಶ್ರೀಹರಿಯಿಂದ ಹುಟ್ಟಿರುವ ಚತುರ್ಮುಖನು ಆತ್ಮಭೂಃ ಸ್ವಯಂಭೂಃ ಎನಿಸುತ್ತಾನೆ. ಚತುರ್ಮುಖನು ವಿಷ್ಣುವಿನಿಂದ ಹುಟ್ಟಿದವನೆಂಬುದು ಯೋ ಬ್ರಹ್ಮಾಣಂ ವಿದಧಾತಿ ಇತ್ಯಾದಿ ವೇದಗಳಲ್ಲಿ ಹೇಳಿಯದೆ.) ॥ ೨ ॥

ಹೀ—೩೬ನೇ ಖಂಡದಲ್ಲಿ ಅಪರೋಕ್ಷಜ್ಞಾನಿಯು ಮುಕ್ತನಾಗಿ ಮುಖ್ಯಪ್ರಾಣಾದಿಗಳಿಗೆ ಶ್ರೀಹರಿಯಿಂದ ಸೃಷ್ಟ್ಯಾದಿಗಳು ಆಗುತ್ತವೆಂಬುದನ್ನು ನೋಡುತ್ತಾನೆಂದು ಅರ್ಥಹೇಳಿದ್ದು ಕೂಡುವುದಿಲ್ಲ. ಏಕೆಂದರೆ—ಮುಕ್ತಾತ್ಮನಿಂದ ಪ್ರಾಣಮೊದಲಾದವರು ಹುಟ್ಟುತ್ತಾರೆ, ಎಂದು ಪರರು ಹೇಳುವ ಅರ್ಥವನ್ನೇ ಒಡಂಬಟ್ಟರೆ ಬಾಧಕವಿಲ್ಲ ಎಂದರೆ—

ಭಾ. ॥ (೧) (1) ನ ಚ ಮುಕ್ತೇಭ್ಯಃ ಪ್ರಾಣಾದಿಕಮುತ್ಪದ್ಯತೇ । ಓಂ (2) ಜಗದ್ವ್ಯಾಪಾರವರ್ಜಮಿತಿ ವರ್ಣೇ(ನಿರ್ಣೇ)ತಕ್ತ್ವಾದ್ಭಗವತಾ । (3) ಆತ್ಮತ ಏವ (ಷ) ಪ್ರಾಣೋ ಜಾಯತ ಇತ್ಯವಧಾರಣಾನ್ನ ಭಗವತೋಽನ್ಯಸ್ಮಾತ್ಪ್ರಾಣೋ ಜಾಯತೇ ॥ (೨) ಆತ್ಮೇತಿ ಮುಖ್ಯತೋ ವಿಷ್ಣು ಸ್ತದನ್ಯೇ ತೂಪಚಾರತಃ । ತಥೈವ ಸ್ವ ಇತಿ ಪ್ರೋಕ್ತಸ್ತಸ್ಮಾದ್ಬ್ರಹ್ಮಾಣಃತ್ಮಭೂಃ ಸ್ವಭೂ ಇತಿ ಸ್ಕಾಂದೇ ॥ (೩) ಇದಂ ನಾಮಾಽತಿಸಾಮಿಪ್ಯಾತ್ಸರ್ವಂ (ರ್ವಃ)ಪೂರ್ಣಗುಣತ್ವತಃ । ಭೂಮಾಽಹಮಾತ್ಮೇತಿ ಹರಿಸ್ತ್ರಿವಿಧೋಽಪಿ ಹಿ ಸರ್ವದಾ ॥ ಇತಿ ವಿಶ್ವನಿರ್ಣಯೇ ॥(೪) ಸ್ತ್ರೀಗುಣಾಃ ಪುಂಗುಣಾಶ್ಚೈವ ನಪುಂಸಕಗುಣಾ ಅಪಿ । ಯದಧೀನಾ ವ್ಯವಸ್ಥಯಃ ಸ್ಯಾಲ್ಲಿಂಗಾನಾಂ ತತ್ರ ಸರ್ವಶಃ । ಕಃ ಕಿಂ ಕಂ ತತ್ಸರ್ವಮಾತ್ಮಾದೀತಿರ್ದೇವಾದಯಸ್ತತಃ ॥ ಇತಿ ಲಿಂಗನಿರ್ಣಯೇ ॥ (೫) ಗುರೋರ್ವಿದ್ಯಾಹೃತಿರ್ಯಾ ತು ಸ ಆಹಾರ ಇತಿ ಸ್ಮೃತಃ । ತಚ್ಛುದ್ಧೌ ಜ್ಞಾನಶುದ್ಧಿಃ ಸ್ಯಾಜ್ಜ್ಞಾನಶುದ್ಧೌ ಸ್ಥಿರಾ ಸ್ಮೃತಿಃ । ಸ್ಮೃತಿಸ್ಥೈರ್ಯೇ ತ್ವಾಪರೋಕ್ಷ್ಯಂ ಹರೇರ್ಮೋಕ್ಷಸ್ತತೋ ಭವೇತ್ ॥ ಇತಿ ಸಾಧನನಿರ್ಣಯೇ ॥ ೧, ೨ ॥ ಇತಿ ಷಡ್ವಿಂಶಃ ಖಂಡಃ ॥ ೯–೩೭ ॥ ॥ ೩ ॥

ಅ ॥ (೧) (1) ಮುಕ್ತಾತ್ಮರಿಂದ ಪ್ರಾಣಮೊದಲಾದವರು ಸರ್ವಥಾ ಹುಟ್ಟುವುದಿಲ್ಲ (2) ಜಗತ್ತಿನ ಸೃಷ್ಟಿಮೊದಲಾದ ವ್ಯಾಪಾರಗಳನ್ನು ಬಿಟ್ಟು ಮುಕ್ತರು ಎಲ್ಲಾ ಅಭೀಷ್ಟಗಳನ್ನು ಹೊಂದುತ್ತಾರೆಂದು (ಬ್ರ. ಅ. ೪. ಪಾ. ೪. ಸೂ.೧೭.) ವೇದವ್ಯಾಸರು ಹೇಳಿರುವರು. (3) ಆತ್ಮತ ಏವ ಪ್ರಾಣೋ ಜಾಯತೇ (ಷಟ್‌ಪ್ರ.೩ಮ.೩.) ಎಂಬ ಅವಧಾರಣದಿಂದ ಶ್ರೀಹರಿಯಿಂದಲೇ ಮುಖ್ಯಪ್ರಾಣನು ಹುಟ್ಟುತ್ತಾನೆ, ಶ್ರೀಹರಿಯಿಂದಹೊರತು ದೇರೆಯವರಿಂದ ಹುಟ್ಟುವುದಿಲ್ಲ. (ಅದಕಾರಣ ಆತ್ಮತಃ ಪ್ರಾಣಃ ಎಂಬಲ್ಲಿ ಪ್ರಾಣಾದಿಗಳು ಮುಕ್ತಾತ್ಮರಿಂದ ಹುಟ್ಟುತ್ತಾರೆಂಬ ಅರ್ಥವು ಸರ್ವಥಾ ಕೂಡಲಾರದು.) (೨) (ಆತ್ಮಭೂಃ ಸ್ವಯಂಭೂಃ ವಿಷ್ಣುವಿನಿಂದ ಹುಟ್ಟಿದವನೆಂಬ ಅರ್ಥವನ್ನು ಪ್ರಮಾಣ ಕೊಟ್ಟು ದೃಢೀಕರಿಸುತ್ತಾರೆ.) ಮುಖ್ಯವಾಗಿ ಆತ್ಮನೆಂದರೆ ಶ್ರೀವಿಷ್ಣುವು. ದೇರೆಯವರು ಅಮುಖ್ಯವಾಗಿ ಆತ್ಮರೆನಿಸುತ್ತಾರೆ, ಹಾಗೆಯೇ ಸ್ವ ಎಂಬ ಶಬ್ದವೂ ಮುಖ್ಯವಾಗಿ ವಿಷ್ಣುವನ್ನೇ ಹೇಳುತ್ತದೆ. ಆದಕಾರಣ ವಿಷ್ಣುವಿನಿಂದ ಹುಟ್ಟಿದ ಕಾರಣ ಚತುರ್ಮುಖ ಬ್ರಹ್ಮನು ಆತ್ಮಭೂಃ ಸ್ವಭೂಃ ಎಂದು ಎನಿಸಿಕೊಳ್ಳುತ್ತಾನೆ, ಎಂದು ಸ್ಕಾಂದಪುರಾಣದಲ್ಲಿದೆ. (೩) (೨೫ನೇ ಖಂಡದ ೧೫ನೇ ಮಂತ್ರದಲ್ಲಿದ್ದ ಸ ಏವೇದಂ ಸರ್ವಂ, ಅಹಮೇವೇದಂ ಸರ್ವಂ, ೨೫ನೇ ಮಂತ್ರದಲ್ಲಿದ್ದ ಆತ್ಮೈವೇದಂ ಸರ್ವಂ, ಇವುಗಳಿಂದ ಭೂಮಾ ಅಹಂಕಾರ ಆತ್ಮರಿಗೆ ಸರ್ವವಸ್ತುಸ್ವರೂಪತ್ವವು ಹೇಳಲ್ಪಡುತ್ತದೆಂಬ ಪ್ರಸಿದ್ಧಿಯನ್ನು ಹೋಗಲಾಡಿಸುವುದಕ್ಕಾಗಿ ಪ್ರಮಾಣಕೊಟ್ಟು ಮರಳಿ ಅರ್ಥಹೇಳುತ್ತಾರೆ.) ಭೂಮಾ ಅಹಂ ಆತ್ಮಾ ಎಂದು ಮೂರು ರೂಪಗಳುಳ್ಳ ಶ್ರೀಹರಿಯೂ ಯಾವಾ

ಗಲೂ ಸರ್ವರ ಅತಿಸವಿಾಪದಲ್ಲಿದ್ದುದರಿಂದ ಇದಂ ಎಂದೂ, ಪೂರ್ಣ ಗುಣಗಳುಳ್ಳವನಾದುದರಿಂ ಸರ್ವಂ ಎಂದೂ ಎನಿಸುತ್ತಾನೆ, ಎಂದು ವಿಶ್ವನಿರ್ಣಯವೆಂಬ ಗ್ರಂಥದಲ್ಲಿದೆ. (೪) (ಇದಂ ಸರ್ವಂ ಎಂಬುದಕ್ಕೆ ಸಾಮಾನ್ಯ ಪೂರ್ಣ ಎಂದರ್ಥವಿರುವುದಾದರೆ. ಸ ವಿನಾಯಂ ಸರ್ವಃ ಆ ಶ್ರೀಹರಿಯೆ ಗುಣಪೂರ್ಣನು ಇದುಮೊದಲಾದ ಸ್ಥಳಗಳಲ್ಲಿದ್ದಂತೆಯೇ ಪುಲ್ಲಿಂಗಪ್ರಯೋಗವು ಇರಬೇಕಿತ್ತು. ಎಂದರೆ, ಸ್ತ್ರೀಯರ ಗುಣಗಳೂ, ಪುರುಷರ ಗುಣಗಳೂ, ನಪುಂಸಕರ ಗುಣಗಳೂ, ಎಲ್ಲಾ ಗುಣಗಳೂ ಶ್ರೀಹರಿಯ ಅಧೀನಗಳಾಗಿಯೇ ಇರುತ್ತವೆ. ಅಂತಹ ಶ್ರೀಹರಿಯಲ್ಲಿ ಎಲ್ಲಾ ಲಿಂಗಗಳಿಗೆ ವ್ಯತ್ಯಾಸವು ಬರುವುದು (ಅದನ್ನು ವಿವರಿಸುತ್ತಾರೆ.) ಕಃ ಕಿಂ ಕಂ ತರ್ ಸರ್ವಂ ಅತ್ಕಾ ಅದಿತಿಃ ದೇವಶಬ್ದ ಮೊದಲಾದ ಶಬ್ದಗಳೆಲ್ಲವೂ ಶ್ರೀಹರಿಯಲ್ಲಿರುತ್ತವೆಂದು ಲಿಂಗನಿರ್ಣಯದಲ್ಲಿದೆ. (೫) (೨೬ನೇ ಖಂಡದಲ್ಲಿ ಆಹಾರಶುದ್ಧೌ ಸತ್ವಶುದ್ಧಿಃ ಇತ್ಯಾದಿಗಳಲ್ಲಿ ರಸ, ಸ್ನೇಹವಿರುವ ಆಹಾರಶುದ್ಧಿಯಿಂದ ಅಂತಃಕರಣಶುದ್ಧಿಯಾಗುವ ದಾದರೂ ಸ್ಮೃತಿಸ್ಥೈರ್ಯರೂಪವಾದ ಧ್ಯಾನವು ಸಿದ್ಧವಾಗಲಾರದು. ಅದುಕಾರಣ ಧ್ಯಾನವು ಆಹಾರ ಶುದ್ಧಿಯಿಂದಲೇ ಸಿದ್ಧಿಸುತ್ತದೆಂದು ಹೇಳಿದ್ದು ಹೇಗೆ ಕೂಡುತ್ತದೆಂದರೆ—ಆಹಾರ ಶಬ್ದದ ಅರ್ಥವನ್ನು ಹೇಳಿಕೊಂಡು ಪ್ರಮಾಣಕೊಟ್ಟು ಆ ವಾಕ್ಯದ ಅರ್ಥಹೇಳುತ್ತಾರೆ.) ಗುರುಗಳಿಂದ ವಿದ್ಯೆಯನ್ನು ಪದೇಶಿಕೊಳ್ಳುವುದು ಅಂದರೆ ಶಾಸ್ತ್ರಶ್ರವಣವು ಆಹಾರ ಎನಿಸುತ್ತದೆ. ಅದು ಶುದ್ಧವಾದರೆ ಮನಃಶುದ್ಧಿಯಾಗುತ್ತದೆ. ಜ್ಞಾನಶುದ್ಧಿಯಾದರೆ ಧ್ಯಾನವು ಶುದ್ಧವಾಗುತ್ತದೆ. ಧ್ಯಾನವು ಶುದ್ಧವಾದರೆ—ಶ್ರೀಹರಿಯ ಪ್ರತ್ಯಕ್ಷವಾಗುತ್ತದೆ. ಅದರಿಂದ ಮೋಕ್ಷವಾಗುತ್ತದೆ, ಎಂದು ಸಾಧನನಿರ್ಣಯದಲ್ಲಿದೆ. ॥೯—೨೯॥ ॥೬॥

ಇಪ್ಪತ್ತಾರನೇ ಖಂಡವು ಮುಗಿಯಿತು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಚ್ಛಾಂದೋಗ್ಯ ಉಪನಿಷದ್ಭಾಷ್ಯೇ ನವಮೋಽಧ್ಯಾಯಃ ॥ ೯ ॥

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ಮಾಡಲ್ಪಟ್ಟ ಶ್ರೀಮತ್ ಛಾಂದೋಗ್ಯ ಉಪನಿಷದ್ಭಾಷ್ಯದಲ್ಲಿ ಒಂಭತ್ತನೇ ಅಧ್ಯಾಯವು ಮುಗಿಯಿತು. ॥ ೯ ॥

ನಮೋ ನಿರಸ್ತದೋಷಾಯ ಸಮಸ್ತಗುಣರಾಶಯೇ ।
ವಿಮಲಾನಂದದೇಹಾಯ ಕಮಲಾಪತಯೇ ಸದಾ ॥
ಮತ್ಪ್ರೇರಕೇಣ ಹರಿಣಾಯಾ ಪೂಜಾ ಸ್ವಸ್ಯ ಕಾರಿತಾ ।
ವಾಗ್ಯಜ್ಞರೂಪಾ ಲಕ್ಷ್ಮೀಕಸ್ತಯಾ ಪ್ರೀಣಾತು ಕೇಶವಃ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹತ್ತನೇ ಅಧ್ಯಾಯವು

ಹೃತ್ಪುಂಡರೀಕಗಾಕಾಶಗತಮಾಕಾಶನಾಮಕಂ ।
ನಾನಾರೂಪಂ ಜಾಗೃದಾದಿಪ್ರವರ್ತಕಮಹಂ ಭಜೇ ॥

●

೧ನೇ ಖಂಡವು

ಪೀ—ಪೂರ್ವಾಧ್ಯಾಯದಲ್ಲಿ ಭೂಮಾದಿರೂಪಗಳುಳ್ಳ ಶ್ರೀವಿಷ್ಣುವನ್ನು ಸರ್ವಗತತ್ವ ಮೊದಲಾದ ಎಲ್ಲಾ ಗುಣಗಳಿಂದ ಉಪಾಸನೆ ಮಾಡಬೇಕೆಂದು ಹೇಳಿಯಿದೆ. ಆ ಭೂಮಾದಿ ರೂಪಗಳುಳ್ಳ ಶ್ರೀವಿಷ್ಣುವನ್ನು ಎಲ್ಲಾ ಮುಮುಕ್ಷುಗಳಿಗೆ ಉಪಾಸನೆಮಾಡಲಿಕ್ಕೆ ಸಾಧ್ಯವಲ್ಲ, ಆದುಕಾರಣ ಎಲ್ಲಾ ಮೋಕ್ಷಾಪೇಕ್ಷಿಗಳಿಗೆ ಸಾಮಾನ್ಯವಾಗಿ ಉಪಾಸ್ಯವಾದ ರೂಪವನ್ನು ಈ ಅಧ್ಯಾಯದಲ್ಲಿ ಹೇಳುತ್ತಾರೆ—

ಉ. ॥ ಓಂ ॥ ಅಥ ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋನ್ನಂತರ್ಯಾಕಾಶಸ್ತಸ್ಮಿನ್ಯದಂತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಮಿತಿ ॥ ೧ ॥

ಅ ॥ ವಿದ್ಯಾಂತರನ್ನು ಹೇಳುತ್ತಾರೆ. ಪೂರ್ಣಗುಣಗಳು ಇರುವುದರಿಂದ ಬ್ರಹ್ಮನೆನಿಸಿದವನು. ಪೂರ್ಣಕಾಮಗಳು ಇರುವುದರಿಂದ ಪುರುಷನೆನಿಸಿದವನು, ಇಂತಹ ಬ್ರಹ್ಮನೆಂಬ ಪೂರ್ಣವಸ್ತುವಿಗೆ ಆಧಾರವಾದ ಪರಬ್ರಹ್ಮನಿಗೆ ಶರೀರಸ್ಥಾನವಾದ ಜೀವಶರೀರದಲ್ಲಿ ಅಲ್ಪವಾದ ಕಮಲರೂಪವಾದ ಮನೆಯು ಇದೆ. ಹೃದಯಪುಂಡರೀಕರೂಪವಾದ ಮಂದಿರದೊಳಗೆ ಭೂತಾಕಾಶವಿದೆ. ಆ ಪುಂಡರೀಕದೊಳಗಣ ದಹರಾಕಾಶದೊಳಗಿರುವ ವಸ್ತುವನ್ನು ಹುಡುಕಬೇಕು. ಆ ವಸ್ತುವನ್ನೇ ಶ್ರವಣ ಮನನ ಧ್ಯಾನಗಳಿಂದ ತಿಳಿದುಕೊಳ್ಳಬೇಕು. (ಬೇರೆಯಾದುದನ್ನು ಅಲ್ಲ,) ಎಂದು ಗುರುಗಳು ಹೇಳಬೇಕು. ॥ ೧ ॥

ಉ. ॥ ತಂ ಚೇದ್ಬ್ರೂಯುರ್ಯದಿದಮಸ್ಮಿನ್ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ದಹರೋಽಸ್ಮಿನ್ನಂತರ್ಯಾಕಾಶಃ ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ ಯದ್ವಾವ ವಿಜಿಜ್ಞಾಸಿತವ್ಯಮಿತಿ ॥ ೨ ॥

ಅ ॥ ಆ ಗುರುಗಳೊಡನೆ ಶಿಷ್ಯರು, ಹುಡುಕಬೇಕು, ತಿಳಿಯಬೇಕು, ಎಂದು ಹೇಳಿರುವಿರಿ. ಅಂತಹ ಶರೀರದೊಳಗಿರುವ ಹೃತ್ಪದ್ಮದಲ್ಲಿರುವ ಆಕಾಶದಲ್ಲಿ ಏನಿದೆ? ಹೆಸರೇನು? ಯಾವ ಮಹಿಮೆಯುಳ್ಳದ್ದು? ಎಂದು ಪ್ರಶ್ನಿಸಿದರು. ॥ ೨ ॥

ಉ. ॥ ಸ ಬ್ರೂಯಾದ್ಯಾವಾನ್ವಾ ಅಯಮಾಕಾಶಸ್ತಾವಾನೇಷೋಂತರ್ಹೃದಯ ಆಕಾಶ ಉಭೇ ಅಸ್ಮಿನ್ ದ್ಯಾವಾಪೃಥಿವೀ ಅಂತರೇವ ಸಮಾ-

ಹಿತೇ ಉಭಾವಗ್ನಿಶ್ಚ ವಾಯುಶ್ಚ ಸೂರ್ಯಾಚಂದ್ರಮಸಾವುಭೌ ವಿದ್ಯುನ್ನಕ್ಷತ್ರಾಣಿ ಯಚ್ಚಾಸ್ಯೇಹಾಸ್ತಿ ಯಚ್ಚ ನಾಸ್ತಿ ಸರ್ವಂ ತದಸ್ಮಿನ್ಸಮೂಹಿತಮಿತಿ॥೩॥

ಅ ॥ ಆಗ ಆಚಾರ್ಯರಲ್ಲಿ ಶಿಷ್ಯರು ಪ್ರಶ್ನಿಸುತ್ತಾರೆ—ದೇಹದ ಹೃತ್ಪುಂಡರೀಕದೊಳಗಣ ಆಕಾಶದಲ್ಲಿರತಕ್ಕ ಶ್ರೀಹರಿಯಲ್ಲಿ ಸ್ವರ್ಗಭೂವ್ಯಾದಿಗಳೆಲ್ಲವೂ ಆಶ್ರಿತವಾಗಿವೆ, ಸಮಸ್ತ ಪ್ರಾಣಿಗಳೂ ಆಶ್ರಿತರಾಗಿ ಇರುತ್ತಾರೆ. ಸ್ವರ್ಗ ಭೂಮ್ಯಾದ್ಯಧಿಪತಿಗಳೂ ಇವರೆಲ್ಲರೂ ಹೃದಯಪದ್ಮದಲ್ಲಿರತಕ್ಕ ಆಕಾಶದೊಳಗಣ ಶ್ರೀಹರಿಯಲ್ಲಿ ಆಶ್ರಿತರಾಗಿರುತ್ತಾರೆ, ಎಂದು ಗುರುಗಳು ಹೇಳಿದರು. ॥ ೩ ॥

ಪೀ—ಸರ್ವಾಧಾರತ್ವಮಹಿಮೆಯನ್ನಾ ಕ್ಷೇಪಿಸುತ್ತಾರೆ—

ಉ. ॥ ತಂ ಚೇದ್ಬ್ರೂಯುರಸ್ಮಿನ್ನಿದಂ ಬ್ರಹ್ಮಪುರೇ ಸರ್ವಂ ಸಮೂಹಿತಂ ಸರ್ವಾಣಿ ಚ ಭೂತಾನಿ ಸರ್ವೇ ಚ ಕಾಮಾ ಯದೈನ(ತ)ಜ್ಜರಾವಾಪ್ನೋತಿ ಪ್ರಧ್ವಂಸತೇ ವಾ ಕಿಂ ತತೋಽತಿಶಿಷ್ಯತ ಇತಿ ॥ ೪ ॥

ಅ ॥ ಆಗ ಆಚಾರ್ಯರಲ್ಲಿ ಶಿಷ್ಯರು ಪ್ರಶ್ನಿಸುತ್ತಾರೆ—ದೇಹದ ಹೃತ್ಪುಂಡರೀಕದೊಳಗಣ ಆಕಾಶದಲ್ಲಿರತಕ್ಕ ಶ್ರೀಹರಿಯಲ್ಲಿ ಸ್ವರ್ಗ ಭೂಮ್ಯಾದಿಗಳೆಲ್ಲವೂ ಆಶ್ರಿತವಾಗಿದೆ, ಸಮಸ್ತ ಪ್ರಾಣಿಗಳೂ ಆಶ್ರಿತರಾಗಿ ಇರುತ್ತಾರೆ, ಸಮಸ್ತ ಕಾಮಗಳೂ ಆಶ್ರಿತಗಳಾಗಿವೆ ಎಂದಾದರೆ –ಈ ಪರಬ್ರಹ್ಮನ ಶರೀರದಲ್ಲಿ ಮುದಿತನ ಸೇರುತ್ತದೆ, ಶರೀರವು ನಾಶಹೊಂದುತ್ತದೆ, ದೇಹನಾಶವಾದ ಮೇಲೆ ಯಾವುದು ಉಳಿಯುತ್ತದೆ? (ಯಾವುದೂ ಉಳಿಯುವುದಿಲ್ಲ, ಶರೀರವೂ ನಾಶವಾಗುತ್ತದೆ.) ಎಂದು ಆಕ್ಷೇಪಿಸುತ್ತಾರೆ. ॥ ೪ ॥

ಉ ॥ ಸ ಬ್ರೂಯಾನ್ನಾಸ್ಯ ಜರಯೈತಜ್ಜೀರ್ಯತಿ ನ ವಧೇನಾಸ್ಯ ಹನ್ಯತ ಏತತ್ಸತ್ಯಂ ಬ್ರಹ್ಮಪುರಮಸ್ಮಿನ್ಕಾಮಾಃ ಸಮಾಹಿತಾ ಏಷ ಆತ್ಮಾಽಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋಽವಿಜಿಘತ್ಸೋಽಪಿಪಾಸಃ ಸತ್ಯಕಾಮಸ್ಸತ್ಯಸಂಕಲ್ಪೋ ಯಥಾ ಹ್ಯೇವೇಹ ಪ್ರಜಾ ಅನ್ವಾವಿಶಂತಿ ಯಥಾನುಶಾಸನಂ ಯಂ ಯಮಂತಮಭಿಕಾಮಾ ಭವಂತಿ ಯಂ ಜನಪದಂ ಯಂ ಕ್ಷೇತ್ರಭಾಗಂ ತಂ ತಮೇವೋಪಜೀವಂತಿ ॥ ೫ ॥

ಅ ॥ ಆಗ ಗುರುಗಳು ಹೇಳುತ್ತಾರೆ—ಬ್ರಹ್ಮನಿಗೆ ಸ್ಥಾನವಾದ ಈ ಜೀವಶರೀರಕ್ಕೆ ಮುದಿತನವು ಬಂದರೂ ಬ್ರಹ್ಮನು ಮುದಿಯಾಗುವುದಿಲ್ಲ. ಶರೀರದ ನಾಶದಿಂದ ಬ್ರಹ್ಮನು ಕೊಲ್ಲಲ್ಪಡುವುದಿಲ್ಲ. ಈ ಪರಬ್ರಹ್ಮನು ಪೂರ್ಣನು, ನಿತ್ಯನು, ಅಜಿಂಕ್ಯ ಶಕ್ತಿಯುಳ್ಳವನು. ಬ್ರಹ್ಮನಲ್ಲಿ ಎಲ್ಲಾ ಕಾಮಗಳೂ ಪೂರ್ಣಗಳಾಗಿವೆ. (ಅಂದರೆ ಪೂರ್ಣಕಾಮನು.) ಈ ಹೃತ್ಪದ್ಮದೊಳಗಣ ಆಕಾಶದಲ್ಲಿರತಕ್ಕ ಪರಮಾತ್ಮನು ನಿತ್ಯದಲ್ಲಿಯೂ ಸ್ವತಪವ ಪಾಪಲೇಶವಿಲ್ಲದವನು ಮುದಿತನವಿಲ್ಲದವನು, ಮರಣವಿಲ್ಲದವನು, ದುಃಖಲೇಶವಿಲ್ಲದವನು, ಹಸಿವೆ ತೃಷೆ ಮೊದಲಾದ ಪೀಡೆಗಳಿಲ್ಲದವನು, ಇಚ್ಛೆಸಿದುದೆಲ್ಲವನ್ನೂ ಹೊಂದುವವನು, ಸಫಲವಾದ ಸಂಕಲ್ಪವುಳ್ಳವನು. (ಶ್ರೀಹರಿಗೆ ಮುಕ್ತಾಶ್ರಯತ್ವ ಮೊದಲಾದ ಇನ್ನೊಂದು ಮಹಿಮೆಯನ್ನು ಹೇಳುತ್ತಾರೆ—) ತಾರತಮ್ಯದಿಂದಲೇ ಶ್ರೀಹರಿಯನ್ನು (ಸಾಯುಜ್ಯಮೋಕ್ಷವನ್ನು) ಹೊಂದುವ ಮುಕ್ತರು ಶ್ರೀಹರಿಯ ಆಜ್ಞೆಯನ್ನು ನುಸರಿಸಿ ಮೋಕ್ಷದಲ್ಲಿ ಶ್ರೀಹರಿಯಲ್ಲಿ ಪ್ರವೇಶವನಾಡುತ್ತಾರೆ. (ಪ್ರವೇಶ

ಮಾತ್ರವಲ್ಲ, ಪರಂತು) ಯಾವ ಯಾವ ದೇಶವನ್ನು ಯಾವಯಾವ ರಾಷ್ಟ್ರವನ್ನು ಯಾವಯಾವ ಕ್ಷೇತ್ರ ಪ್ರದೇಶವನ್ನು ಮುಕ್ತರು ಹೊಂದಲಿಚ್ಛಿಸುತ್ತಾರೋ, ಅದನ್ನೆಲ್ಲ (ಅಭೀಷ್ಟಗಳಾದ ಎಲ್ಲಾ ಭೋಗಗಳನ್ನೂ) ಶ್ರೀಹರಿಯ ಪ್ರಸಾದದಿಂದ ಶ್ರೀಹರಿಯ ಆಜ್ಞಾನುಸಾರವಾಗಿಯೇ ಹೊಂದುತ್ತಾರೆ. (ಸ್ವತಂತ್ರವಾಗಿ ಅಲ್ಲ.) (ಮುಕ್ತರಿಗೆ ಸತ್ಯಕಾಮತ್ವವಿದ್ದರೂ ಅದು ಪರಾಧೀನವಾದುದು. ಶ್ರೀಹರಿಗೆ ಮಾತ್ರ ಪರಾಧೀನವಲ್ಲದ ಸತ್ಯಕಾಮತ್ವವು) ॥ ೫ ॥

ಪೀ—ದಹರಾಕಾಶದಲ್ಲಿದ್ದ ಶ್ರೀಹರಿಯು ನಾಶವಿಲ್ಲದ ಫಲಕ್ಕೆ ಕಾರಣವಾದ ಜ್ಞಾನಕ್ಕೆ ವಿಷಯನೆಂಬ ಮಹಿಮೆ ಹೇಳುತ್ತಾರೆ—)

ಉ. ॥ ತದ್ಯಥೇಹ ಕರ್ಮಜಿ(ಚಿ)ತೋ ಲೋಕಃ ಕ್ಷೀಯತ ಏವಮೇವಾ-ಮುತ್ರ ಪುಣ್ಯಜಿ(ಚಿ)ತೋ ಲೋಕಃ ಕ್ಷೀಯತೇ ತದ್ಯ ಇಹಾತ್ಮಾನಮನನುವಿದ್ಯ ವ್ರಜಂತ್ಯೇತಾꣳಶ್ಚ ಸತ್ಯಾನ್ಕಾಮಾꣳಸ್ತೇಷಾꣳ ಸರ್ವೇಷು ಲೋಕೇಷ್ವಕಾಮ-ಚಾರೋ ಭವತ್ಯಥ ಯ ಇಹಾತ್ಮಾನಮನುವಿದ್ಯ ವ್ರಜಂತ್ಯೇತಾꣳಶ್ಚ ಸತ್ಯಾನ್ ಕಾಮಾꣳಸ್ತೇಷಾꣳ ಸರ್ವೇಷು ಲೋಕೇಷು ಕಾಮಚಾರೋ ಭವತಿ ॥ ಇತಿ ಪ್ರಥಮಃ ಖಂಡಃ ॥ ೧೦-೧ ॥ ॥ ೬ ॥

ಅ ॥ ದೃಷ್ಟಾಂತ ಕೊಟ್ಟು ವಿವರಿಸುತ್ತಾರೆ. ಈ ಲೋಕದಲ್ಲಿ ಕರ್ಮಗಳಿಂದ ಸಂಪಾದಿಸಿದ ದೇಹ, ಮನೆ, ಉದ್ಯಾನ ಮೊದಲಾದುದು ನಾಶಹೊಂದುತ್ತದೆ. ಹೀಗೆಯೇ ಭಗವದಜ್ಞಾನಿಗೆ ಯಾಗ ಮೊದಲಾದ ಪುಣ್ಯದಿಂದ ಸಂಪಾದಿಸಿದ ಸ್ವರ್ಗ ಮೊದಲಾದ ಲೋಕವು ಮುಂದೆ ನಾಶವಾಗುತ್ತದೆ. (ಭಗವಜ್ಜ್ಞಾನಿಗೆ ಫಲ ಹೇಳುವುದಕ್ಕಾಗಿ ಅಜ್ಞಾನಿಗಳಿಗೆ ವಿಪರೀತಫಲವನ್ನು ದೃಷ್ಟಾಂತ ಕೊಟ್ಟು ಹೇಳುತ್ತಾರೆ—) ಅದು ಕಾರಣ ಅಧಿಕಾರಿ ಅನಧಿಕಾರಿಗಳ ಸಮೂಹದಲ್ಲಿ ಶ್ರೀಹರಿಯನ್ನೂ ಸತ್ಯಕಾಮತ್ವ ಮೊದಲಾದ ಶ್ರೀಹರಿಯ ಧರ್ಮಗಳನ್ನೂ ತಿಳಿಯದೆ ಯಾರು ಇರುತ್ತಾರೋ, ಅವರಿಗೆ ಕರ್ಮಾರ್ಜಿತವಾದ ದೇಹವು ನಾಶ ಹೊಂದುವಂತೆ ಪುಣ್ಯಸಂಪಾದಿತವಾದ ಸ್ವರ್ಗ ಮೊದಲಾದ ಲೋಕವೂ ನಾಶವಾಗುತ್ತದೆ. (ಅವರಿಗೆ ಇಷ್ಟಹಾನಿ ಮಾತ್ರವಲ್ಲ, ಇಷ್ಟವು ಸಿಗುವುದೂ ಇಲ್ಲವೆನ್ನುತ್ತಾರೆ.) ಅವರಿಗೆ ಸರ್ವಲೋಕಗಳಲ್ಲಿ ಸ್ವೇಚ್ಛಾನುಸಾರ ಸಂಚಾರವೂ ಆಗುವುದಿಲ್ಲ. (ಭಗವಜ್ಜ್ಞಾನಿಗಳಿಗೆ ಫಲ ಹೇಳುತ್ತಾರೆ—) ಯಾರು ಶ್ರೀಹರಿಯನ್ನೂ, ಶ್ರೀಹರಿಯ ಸರ್ವಕಾಮತ್ವ ಮೊದಲಾದ ಮಹಿಮೆಗಳನ್ನೂ ತಿಳಿದುಕೊಂಡಿರುತ್ತಾರೋ, ಅವರಿಗೆ ಪುಣ್ಯಪ್ರಾಪ್ಯಗಳಾದ ನಾಶವಾಗದ ಮೋಕ್ಷಾದಿ ಫಲಗಳೇ ಆಗುತ್ತವೆ. ಮತ್ತು ಎಲ್ಲಾ ಲೋಕಗಳಲ್ಲಿಯೂ ಅವರು ಸ್ವೇಚ್ಛಾನುಸಾರ ಸಂಚರಿಸುತ್ತಾರೆ. ॥೧೦-೧॥ ॥ ೬ ॥

ಪೀ—(1) ಹಿಂದಿನ ಅಧ್ಯಾಯಗಳಲ್ಲಿ ಜಾಹ್ಯಗಳಾದ ಬ್ರಹ್ಮವಿದ್ಯೆಗಳನ್ನು ಹೇಳಿರುವರು. ಈ ಅಧ್ಯಾಯದಲ್ಲಿ ಎಲ್ಲಾ ಮುಮುಕ್ಷುಗಳಿಗೂ ಅವಶ್ಯಕವಾದ ಅಂತರವಾದ ಹೃತ್ಪುಂಡರೀಕ ವಿದ್ಯೆಯನ್ನು ಹೇಳುತ್ತಾರೆ. (2) ಬಾಹ್ಯೋಪಾಸನೆಯಿಂದ ಮೋಕ್ಷವನ್ನು ಹೊಂದುವವರೂ ಹೃದಯದೊಳಗಣ ಶ್ರೀಹರಿಯ ಉಪಾಸನೆಯನ್ನು ಸ್ವಲ್ಪ ಮಾಡಲೇಬೇಕು. (3) ೧ನೇ ಮಂತ್ರದಲ್ಲಿದ್ದ ಬ್ರಹ್ಮಪುರಶಬ್ದಾರ್ಥವನ್ನು ಹೇಳುತ್ತಾರೆ—

ಭಾ. ॥ ಓಂ ॥ (೧)ಯದಿದಮಸ್ಮಿನ್ ಬ್ರಹ್ಮಪುರ ಇತಿ ಬ್ರಹ್ಮಪುರಶಬ್ದೇನ (1)ಬ್ರಹ್ಮಾಖ್ಯಂ ಪುರಂ ಪೂರ್ಣತ್ವಾತ್ಪರಮಿತಿ ಪರಂ ಬ್ರಹ್ಮ (2)ಬ್ರಹ್ಮಣಃ ಪುರಮಿತಿ ಶರೀರಂ ಭೋಕ್ತೃಯಂ ವಿವಕ್ಷಿತಂ ॥ (೨) ಪ್ರಾಪ್ತೋಽವಧ್ಯಂ ಬ್ರಹ್ಮಪುರಂ ರಾಜೇವ ನಿವಸಾಮ್ಯಹಂ ।

ಅಸ್ಮಿಂಶ್ಚೇದ್ಯದಿದಂ ಬ್ರಹ್ಮಪುರೇ ಸರ್ವಂ ಸಮಾಹಿತಂ ॥ ಯದ್ಯೆನಂ(ತತ್)ಜರಾಂವಾಪ್ನೋತಿ ಪ್ರಧ್ವಂಸತೇ ವಾ ಕಿಂ ತತೋಽತಿಶಿಷ್ಯತ ಇತಿ ಸ ಬ್ರೂಯಾನ್ನಾಸ್ಯ ಜರಯೈತಜ್ಜೀರ್ಯತಿ ನ ವಧೇನಾಸ್ಯ ಹನ್ಯತ ಏತತ್ಸತ್ಯಂ ಬ್ರಹ್ಮಪುರಮಸ್ಮಿನ್ನಾಕಾಮಾಃ ಸಮಾಹಿತಾ ಏಷ ಆತ್ಮಾಪಹತಪಾಪ್ಮಾ ವಿಜರೋ ವಿಮೃತ್ಯುರಿತಿ ವಾಕ್ಯಶೇಷಾದ್ಭಗವದ್ವಚನಾಚ್ಚ ಬ್ರಹ್ಮಪುರಶಬ್ದೇನ ಪರಂ ಬ್ರಹ್ಮೋಚ್ಯತ ಇತ್ಯವಸೀಯತೇ ॥ (೩) ಯತ್ಪುಂಡರೀಕಂ ಪುರಮಧ್ಯಸಂಸ್ಥಂ ಯದಿದಂ ಶರೀರಂ ತದೇತದಾದ್ಯಂ ದೇವಸದನಮಿತ್ಯಾದೇಃ ಶರೀರಂ ಚ ॥ (೪) ಯದ್ವೈತದ್ ಬ್ರಹ್ಮೇತೀದಂ ವಾವ ತದ್ಯೋಽಯಂ ಬಹಿರ್ಧಾ ಪುರುಷಾದಾಕಾಶಃ । ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತೀತ್ಯಾದಿನಾ ಪರಬ್ರಹ್ಮಣ್ಯೇವ ಚ ಹೃದಯಂ ಸ್ಥಿತಂ ॥ ೧ ॥

ಅ ॥ (೧) ಯದಿದಮಸ್ಮಿನ್ ಬ್ರಹ್ಮಪುರೇ ಎಂಬಲ್ಲಿದ್ದ ಬ್ರಹ್ಮಪುರಶಬ್ದದಿಂದ (1) ಪೂರ್ಣಗುಣಗಳಿರುವುದರಿಂದ ಬೃಹ್ಮ, ಪೂರ್ಣಕಾಮನಾದುದರಿಂದ ಪುರಂ. ಹೀಗೆ ಸರ್ವಗುಣ ಪೂರ್ಣನಾದ ಪರಬ್ರಹ್ಮನನ್ನೂ,(2)ಬ್ರಹ್ಮನಿಗೆ ಆಧಾರದಂತಿರುವ ಈ ಜೀವಶರೀರವನ್ನೂ ಹೀಗೆ ಎರಡನ್ನೂ ಇಟ್ಟುಕೊಳ್ಳಬೇಕು.(೨) (ಈ ಎರಡನ್ನು ಇಟ್ಟುಕೊಳ್ಳಬೇಕೆಂಬುದಕ್ಕೆ ಜ್ಞಾಪಕವೇನೆಂದರೆ ಅವರಲ್ಲಿ ಈಗ ಪರಬ್ರಹ್ಮನನ್ನು ಇಟ್ಟುಕೊಳ್ಳಬೇಕೆಂಬುದಕ್ಕೆ ಜ್ಞಾಪಕಗಳಾದ *ಸಮಾಖ್ಯಾ †ಉಪಸಂಹಾರಗಳನ್ನೇ ಹೇಳುತ್ತಾರೆ.) (1) ಯಾರಿಂದಲೂ ಸರ್ವಥಾ ಸಂಹರಿಸಿಕೊಳ್ಳಲ್ಪಡದಿರುವ ಪರಬ್ರಹ್ಮನನ್ನು ಹೊಂದಿದವನಾಗಿ ಆತನ ಸಮೀಪದಲ್ಲಿ ನಾನು ರಾಜನಂತೆ ಆವಾಸವನ್ನುಮಾಡುತ್ತೇನೆಂದು (ಭಗವದ್ವಚನವು.) (2) ಶ್ರೀಹರಿಯಲ್ಲಿ ಎಲ್ಲಾ ವಸ್ತುವೂ ಆಶ್ರಿತವಾಗಿದೆ. (3) ‡ ಯದ್ವೈತಜ್ಜರಾಂವಾಪ್ನೋತಿ ಇತ್ಯಾದಿ ಶಿಷ್ಟವಾಕ್ಯದಿಂದಲೂ ಪ್ರಾಪ್ತೋಽವಧ್ಯಂ ಎಂಬ ಸಮಾಖ್ಯಾರೂಪ ಭಗವದ್ವಚನದಿಂದಲೂ ಬ್ರಹ್ಮಪುರಶಬ್ದದಿಂದಲೂ ಪರಬ್ರಹ್ಮನು ಹೇಳಲ್ಪಡುತ್ತಾನೆಂದು ನಿಶ್ಚಯವಾಗುತ್ತದೆ (ಆಂದರೆ—(1) ನಿವಸಾಮ್ಯಹಂ ಎಂಬೀ ಸಮಾಖ್ಯಾರೂಪವಾದ ಭಗವದ್ವಚನದಲ್ಲಿಯೂ ಬ್ರಹ್ಮಪುರವು ಅವಧ್ಯವಾಗಿದೆ, ಎಂದು ಹೇಳಿದ ಕಾರಣ ಬ್ರಹ್ಮಪುರಶಬ್ದವು ಪರಬ್ರಹ್ಮನನ್ನೇ ಹೇಳುತ್ತದೆ, ಎಂದು ತಿಳಿಯುತ್ತದೆ. (2) ಯದ್ವೈತಜ್ಜರಾಂವಾಪ್ನೋತಿ ಎಂಬ ವಾಕ್ಯಶೇಷದಲ್ಲಿ ಹೇಳಿದ ಸರ್ವಾಶ್ರಯತ್ವ ಮೊದಲಾದವುಗಳು ಬೇರೆ ಕಡೆ ಕೂಡ ದಿರುವುದರಿಂದಲೂ ಬ್ರಹ್ಮಪುರಶಬ್ದದಿಂದ ಪರಬ್ರಹ್ಮನೇ ಹೇಳಲ್ಪಡುತ್ತಾನೆಂದು ನಿಶ್ಚಯವಾಗುತ್ತದೆ.) (೩) (ಬ್ರಹ್ಮಪುರಶಬ್ದದಿಂದ ಜೀವಶರೀರವನ್ನೂ ಇಟ್ಟುಕೊಳ್ಳಬೇಕು ಎಂಬುವಲ್ಲಿ ಎರಡು ಸಮಾಖ್ಯೆಗಳನ್ನು ಹೇಳುತ್ತಾರೆ–(1) ಯತ್ಪುಂಡರೀಕಂ ಪುರಮಧ್ಯಸಂಸ್ಥಂ (ಕಮಲವು ಶರೀರದ ಮಧ್ಯದಲ್ಲಿದೆ.) ಎಂಬ ತೈತ್ತಿರೀಯವಾಕ್ಯದಲ್ಲಿ ಪುಂಡರೀಕಕ್ಕೆ (ಬಿಳಿದಾವರೆಗೆ) ಆಶ್ರಯವಾದ ಪುರವು ದೇಹವು. ಆ ಸಮಾಖ್ಯೆಯಿಂದ ಬ್ರಹ್ಮಪುರೇ ದಹರಂ ಪುಂಡರೀಕಂ ಎಂಬಲ್ಲಿಯೂ ಪುಂಡರೀಕಕ್ಕೆ ಆಶ್ರಯವಾದ ಬ್ರಹ್ಮಪುರವು ಶರೀರವೇ ಎಂದು ನಿಶ್ಚಿತವಾಗುತ್ತದೆ. (2) ಯದಿದಂ ಶರೀರಂ ಎಂಬ ವೇದದಲ್ಲಿಯೂ ಆದ್ಯವಾದ ಈ ಶರೀರವು ಶ್ರೀಹರಿಗೆ ಮಂದಿರವು, ಎಂದು ಹೇಳಿದುದರಿಂದ ಶರೀರವು ಪರಬ್ರಹ್ಮನಿಗೆ ಮಂದಿರದಂತಿರುವುದೆಂದು ಪ್ರಸಿದ್ಧವಾಯಿತು. (ಈ ಸಮಾಖ್ಯೆಯಿಂದ ಇಲ್ಲಿಯೂ ಬ್ರಹ್ಮಪುರಶಬ್ದದಿಂದ ಶರೀರವೆ ಹೇಳಲ್ಪಡುತ್ತದೆಂದು ನಿರ್ಣಯವಾಗುತ್ತದೆ) (೪) (ಬ್ರಹ್ಮಪುರಶಬ್ದದಿಂದ ಶ್ರೀಹರಿಯನ್ನು ಇಟ್ಟುಕೊಳ್ಳುವುದಾದರೆ ಬ್ರಹ್ಮಪುರೇ ದಹರಂ ಪುಂಡರೀಕಂ ವೇಶ್ಮ ಎಂದು ಶ್ರೀಹರಿಯು ಕಮಲಕ್ಕೆ ಆಶ್ರಯನೆಂದು ಹೇಳಿದ್ದು ಕೂಡಲಾರದು. ಕಮಲವು ಶರೀರದ ಧರ್ಮವು. ಕಮಲದೊಳಗಣ ಪರಬ್ರಹ್ಮನು ಪುಂಡರೀಕಕ್ಕೆ ಆಶ್ರಯ

---

* ಬೇರೆಕಡೆ ಆದಕ್ಕೆ ಸಮಾನವಾದ ವಚನವು ಸಮಾಖ್ಯಾ ಎನಿಸಿಕೊಳ್ಳುತ್ತದೆ

†ಪ್ರಕರಣದ ಅಂತಿಮ ಭಾಗವು ಉಪಸಂಹಾರವೆನಿಸುತ್ತದೆ

‡ಇದರ ಅರ್ಥವು ೪ನೇ ಪುಟದಲ್ಲಿ ಹೇಳಿದೆ.

ನೆಂಬುದು ಕೂಡಲಾರದು ಎಂದರೆ) (1) ಜೀವನಿಂದ ಹೊರಗೆ ದೇಹದಲ್ಲಿ ವ್ಯಾಪಿಸಿಕೊಂಡಿರುವ, ಜೆನ್ನಾಗಿ ಪ್ರಕಾಶಿಸಿಕೊಂಡಿರುವುದರಿಂದ ಆಕಾಶನೆನಿಸಿದ ಪರಬ್ರಹ್ಮನು ಸರ್ವತ್ರ ವ್ಯಾಪ್ತನು. (ಹೀಗೆ ಪರಬ್ರಹ್ಮನು ಶರೀರದಲ್ಲಿ ವ್ಯಾಪಿಸಿಕೊಂಡಿರುವವನೆಂದು ಹೇಳಿದೆ. ಏವಂಚ ಶರೀರವನ್ನು ವ್ಯಾಪಿಸಿಕೊಂಡಿರುವ ಭಗವದ್ರೂಪವಿಶೇಷವು ಹೃದಯಕಮಲವನ್ನು ಆಶ್ರಯಿಸುತ್ತಿದೆ, ಎಂಬುದು ಕೂಡುತ್ತದೆ.) (2) ಯಾವನು ಸಮಸ್ತ ಪ್ರಾಣಿಗಳನ್ನು ತನ್ನಲ್ಲಿಯೇ ನೋಡುತ್ತಾನೋ, ಇತ್ಯಾದಿ ವೇದಗಳಿಂದ ಪರಬ್ರಹ್ಮನು ಸರ್ವಾಶ್ರಯನೆಂದು ಹೇಳಿದ ಕಾರಣ ಸರ್ವ ವಸ್ತುಗಳಲ್ಲಿ ಸೇರಿದ ಹೃದಯಕಮಲವೂ ಕೂಡ ಪರಬ್ರಹ್ಮನಲ್ಲಿ ಆಶ್ರಿತವಾಗಿದೆ, ಎಂದು ಸಿದ್ಧವೇ ಆಯಿತು. ॥ ೧ ॥

ಪೀ—ದಹರೋಽಸ್ಮಿನ್ನಂತರಾ ಆಕಾಶಃ ಎಂಬ ಗುರುಶಿಷ್ಯಸಂವಾದರೂಪಗಳಾದ ೧ನೇ,೨ನೇ ಮಂತ್ರಗಳಲ್ಲಿದ್ದ ಆಕಾಶಶಬ್ದದಿಂದ ಪರಬ್ರಹ್ಮನನ್ನು ಇಟ್ಟುಕೊಳ್ಳಬೇಕೆಂದು ಪರರು ಹೇಳಿದ್ದು ಅಯುಕ್ತವು. **ತಸ್ಮಿನ್ ಯದಂತಃ** (ಅದರೊಳಗೆ ಏನಿದೆ?) **ಕಂ ತದತ್ರ ವಿದ್ಯತೇ** (ಆ ಆಕಾಶದಲ್ಲಿ ಏನಿದೆ?) ಎಂಬ ಉತ್ತರವಾಕ್ಯದಿಂದ ವಿರೋಧವು ಬರುವುದು. ಬ್ರಹ್ಮನಲ್ಲಿರುವ ಇನ್ನೊಂದು ವಸ್ತುವನ್ನು ಹುಡುಕಬೇಕು, ಎಂಬುವುದು ಕೂಡಲಾರದು. ಆದಕಾರಣ ಆ ವಾಕ್ಯಗಳ ಅರ್ಥ ಹೇಳುತ್ತಾರೆ—

ಭಾ. ॥ (೧) ದಹರೋಽಸ್ಮಿನ್ನಂತರಾ ಆಕಾಶಸ್ತಸ್ಮಿನ್ಯದಂತಸ್ತದನ್ವೇಷ್ಟವ್ಯಂ । ದಹರೋಽಸ್ಮಿನ್ನಂತರ ಆಕಾಶಃ ಕಿಂ ತದತ್ರ ವಿದ್ಯತ ಇತ್ಯಾ(ತ್ಯತ್ರಾ)ಕಾಶಶಬ್ದೇನ ಭೂತಾಕಾಶೋ ವಿವಕ್ಷಿತಃ ॥ (೨) ಕಿಂ ತದತ್ರ ವಿದ್ಯತ ಇತ್ಯಸ್ಯಾಯಂ ಪರಿಹಾರಃ । ಅಸ್ಮಿನ್ಭೂತಾಕಾಶೇ ಪರಬ್ರಹ್ಮಾಖ್ಯ ಆಕಾಶೋ ವಿದ್ಯತೇ । ಆ ಸಮಂತಾತ್ಕಾಶನಾದಾಕಾಶಃ । ಆ ಸಮಂತಾತ್ಸ್ವಮಶ್ನಾತೀತಿ ವಾ ಅಸ್ಮಿನ್ನಾಮಾಃ ಸಮಾಹಿತಾ ಇತಿ ವಾಕ್ಯಶೇಷಾತ್ । ಆ ಸಮಂತಾತ್ಸ್ವಮಾನಶ್ನಾತೀತಿ ವಾ । ಸ ಚ ಯಾವಾನ್ಬಹಿಃ ಪರಮಾತ್ಮಾ ವ್ಯಾಪ್ತೋಽಸ್ತಿ ತಾವಾನೇವ ವಿದ್ಯತೇ ಗುಣತಃ । ಪೂರ್ಣಗುಣತ್ವಾತ್ ॥ (೩) ಅಲ್ಪಪರಿಮಾಣಸ್ಯಾಪಿ ಮಹತ್ಪರಿಮಾಣತ್ವಂ ಚ ಯುಜ್ಯತೇ । ಅಚಿಂತ್ಯಶಕ್ತಿತ್ವಾತ್ ॥ (೪) ಯಸ್ಮಿನ್ವಿರುದ್ಧಗತಯೋಽಪ್ಯನಿಶಂ ಪತಂತಿ ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯೇತಿ ವಚನಾತ್ ॥ (೫) ಆನುಪೂರ್ವ್ಯೇತಿ ಶ್ರುತಿಪ್ರಮಾಣಾದಿತ್ಯರ್ಥಃ । ಆನುಪೂರ್ವೀ ಶ್ರುತಿರ್ವೇದ ಆಮ್ನಾಯಶ್ಚೇತಿ ಕಥ್ಯತ ಇತ್ಯಭಿಧಾನಾತ್ । ಅನ್ಯಥಾನಿಶಮಿತ್ಯುಕ್ತಿವಿರೋಧಾತ್ ॥ ೨ ॥

ಆ ॥ (೧) ದಹರೋಽಸ್ಮಿನ್ನಂತರಾ ಆಕಾಶಃ ಇತ್ಯಾದಿ ೧ನೇ,೨ನೇ ಮಂತ್ರಗಳಲ್ಲಿದ್ದ ಆಕಾಶಶಬ್ದದಿಂದ ಭೂತಾಕಾಶವನ್ನು ಇಟ್ಟುಕೊಳ್ಳಬೇಕು. (೨) (ಆಕಾಶಶಬ್ದದಿಂದ ಭೂತಾಕಾಶವನ್ನು ಇಟ್ಟುಕೊಂಡರೂ, ಭೂತಾಕಾಶದಲ್ಲಿ ಏನಿದೆ? ಎಂಬ ಪ್ರಶ್ನೆಗೆ ಬ್ರಹ್ಮ ವಿದ್ಯತೇ (ಬ್ರಹ್ಮನಿದ್ದಾನೆ) ಎಂದುತ್ತರ ಹೇಳಬೇಕಿತ್ತು. ಅದು ಬಿಟ್ಟು **ಯಾವಾನ್ವಾ ಆಯಮಾಕಾಶಃ** ಎಂದು ಏಕೆ ಹೇಳಿದ್ದು? ಎಂದರೆ—**(ಕಂ ತದತ್ರ ವಿದ್ಯತೇ** ಎಂಬ ಪ್ರಶ್ನೆಗೆ ಇದು ಪರಿಹಾರ ವಾಕ್ಯವು. ಈ ಭೂತಾಕಾಶದಲ್ಲಿ ಪರಬ್ರಹ್ಮನೆಂಬ ಆಕಾಶನಿದ್ದಾನೆ. ಶ್ರೀ ಪರಬ್ರಹ್ಮನು ಜೆನ್ನಾಗಿ ಪ್ರಕಾಶಿಸುವುದರಿಂದಲೂ, ಜೆನ್ನಾಗಿ ಪೂರ್ಣಸುಖವನ್ನನುಭವಿಸುವುದರಿಂದಲೂ **ಅಸ್ಮಿನ್ನಾವಾಃ ಸಮಾಹಿತಾಃ** ಎಂಬ ವಾಕ್ಯಶೇಷದಿಂದ ಜೆನ್ನಾಗಿ ಶುಭಭೋಗ್ಯಗಳನ್ನು ಇಟ್ಟುಕೊಂಡಿರುವುದರಿಂದಲೂ ಆಕಾಶನೆನಿಸುತ್ತಾನೆ. ಹೊರಗಿರುವ ಆಕಾಶನೆನಿಸಿದ ಶ್ರೀ ಹರಿಯು ಎಷ್ಟು ದೇಶಕಾಲಗುಣಗಳಿಂದ ವ್ಯಾಪಿಸಿಕೊಂಡಿದ್ದಾನೋ, ಅಷ್ಟು ದೇಶಕಾಲಗಳಲ್ಲಿ ಪೂರ್ಣ ಗುಣಗಳುಳ್ಳವನಾದುದರಿಂದ ವ್ಯಾಪಿಸಿಕೊಂಡಿದ್ದಾನೆ. ಎರಡು ಭಗವದ್ರೂಪಗಳಿಗೂ ಪೂರ್ಣಗುಣಗಳಿವೆ. (೩) (ವಿರುದ್ಧ

ಪರಿಮಾಣವುಳ್ಳ ಭಗವದ್ರೂಪಗಳಿಗೂ ಗುಣಗಳು ಸಮಾನಗಳಾಗಿರುವುದರಿಂದ ಐಕ್ಯವೆಂದು ಹೇಳಿದ್ದು. ವಸ್ತುತಃ) ಅಲ್ಪಪರಿಮಾಣವುಳ್ಳ ಭಗವದ್ರೂಪಕ್ಕೂ ಅಘಟ್ಯಘಟಕ ಅಚಿಂತ್ಯಶಕ್ತಿಯಿದ್ದ ಪ್ರಯುಕ್ತ ದೊಡ್ಡ ಪರಿಮಾಣವೂ ಕೂಡುತ್ತದೆ. (೪) (ಯಾವುದು ಪ್ರಮಾಣಪ್ರಸಿದ್ಧವಾಗಿ ಲೋಕದೃಷ್ಟಿಯಿಂದ ವಿರುದ್ಧವಾಗಿಯದೋ, ಅಲ್ಲಿಯೇ ಅಚಿಂತ್ಯಶಕ್ತಿಯೆಂದು ಹೇಳಬೇಕು. ಈಶ್ವರನಿಗೆ ಏಕಕಾಲದಲ್ಲಿ ಅಣುತ್ವ ಮಹತ್ವಗಳಿವೆ. ಎಂಬಲ್ಲಿ ಪ್ರಮಾಣವಿಲ್ಲ. ಅದುಕಾರಣ ಅಚಿಂತ್ಯಶಕ್ತಿಯಿಂದ ಎಂದನ್ನ ಕೂಡದು, ಎಂದರೆ–) ಶ್ರೀಹರಿಯಲ್ಲಿ ವಿದ್ಯೆಮೊದಲಾದ ಬಹುವಿಧ ಶಕ್ತಿಗಳು ಸದಾ ಇರುತ್ತವೆ ಇಷ್ಟು ಮಾತ್ರವಲ್ಲ, ಮತ್ತೆ ಲೋಕದಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ಇರುವ ಅಣುತ್ವಮಹತ್ವಾದಿಗಳೂ ಶ್ರೀಹರಿಯಲ್ಲಿ ತಂತಮ್ಮ ವಿರೋಧವನ್ನು ಬಿಟ್ಟು, ಸದಾ ಇರುತ್ತವೆ. (ಅಂತಹ ಶ್ರೀಹರಿಯನ್ನು ಹೊಂದುವೆನು.) ಎಂಬ ಅನುಪೂರ್ವೀ ವಚನದಿಂದ. (೫) ಅಂದರೆ ವೇದಪ್ರಮಾಣದಿಂದ, ಅನುಪೂರ್ವೀ ಶ್ರುತಿಃ ವೇದಃ ಆಮ್ನಾಯಃ ಎಂಬುವುದು ಪರ್ಯಾಯಪದಗಳು, ಎಂಬ ಕೋಶದಿಂದ (ಆನುಪೂರ್ವ್ಯಾ ಎಂಬುದಕ್ಕೆ ವೇದಪ್ರಮಾಣದಿಂದ, ಎಂದರ್ಥ ಮಾಡಬೇಕು.) ಅನುಪೂರ್ವೀಶಬ್ದಕ್ಕೆ ಕಾಲಾನುಕ್ರಮದಿಂದ ಎಂದರ್ಥವನ್ನು ಇಟ್ಟುಕೊಂಡರೆ ಅನಿಶಂ ಪತಂತಿ ಸದಾ ಇರುತ್ತವೆ. ಎಂಬುದು ವಿರುದ್ಧವಾಗುವುದು (ಅದುಕಾರಣ ವೇದಪ್ರಮಾಣ ಎಂದೇ ಇಟ್ಟುಕೊಳ್ಳಬೇಕು.) ॥ ೩ ॥

ಪೀ– ಶ್ರೀ ಹರಿಯಲ್ಲಿ ಏಕಕಾಲದಲ್ಲಿಯೇ ಅಣುತ್ವ ಮಹತ್ವ ಮೊದಲಾದ ಧರ್ಮಗಳಿವೆ. ಎಂದು ಹೇಳುವ ಸ್ಪಷ್ಟವಾದ ವೇದಪ್ರಮಾಣವನ್ನು ಹೇಳುತ್ತಾರೆ–

ಭಾ. ॥ (೧) ಏಷ ಮ ಆತ್ಮಾಂತರ್ಹೃದಯೇಣೀಯಾನ್ ವ್ರೀಹೇರ್ವಾ ಏಷ ಮ ಆತ್ಮಾಂತರ್ಹೃದಯೇ ಜ್ಯಾಯಾನ್ ಪೃಥಿವ್ಯಾ ಇತಿ ಹೃದಯಸ್ಥಸ್ಯೈವಾಣುತ್ವಮಹತ್ತ್ವೋಕ್ತೇಶ್ಚ ॥ (೨) ಗುಣಾಃ ಶ್ರುತಾಃ ಸುವಿರುದ್ಧಾಶ್ಚ ದೇವೇ ಸಂತ್ಯಶ್ರುತಾ ಅಪಿ ನೈವಾತ್ರ ಶಂಕಾ। ಚಿಂತ್ಯಾ ಅಚಿಂತ್ಯಾಶ್ಚ ತಥೈವ ದೋಷಾಃ ಶ್ರುತಾಶ್ಚ ನಾಜ್ಞೈರ್ಹಿ ತಥಾ ಪ್ರತೀತಾಃ ॥ ಇತಿ ಚ ಶ್ರುತಿಃ ॥ (೩) ಸುವಿರುದ್ಧಾ ಅಶ್ರುತಾಶ್ಚ ಗುಣಾಃ ಸಂತ್ಯೇವ ಸರ್ವಶಃ। ದೋಷಾಃ ಕೇಽಪಿ ನ ಸಂತ್ಯೇವ ಶ್ರುತಾ ಅಪಿ ತು ಸರ್ವಶಃ ॥ ಇತಿ ಗಾರುಡೇ ॥ (೪) ಕಿಂ ಕದತ್ರ ವಿದ್ಯತ ಇತಿ ಪೃಷ್ಟತ್ವಾದ್ಬ್ರಹ್ಮಣ ಆಕಾಶೋ ಹೃದಯಶಬ್ದೇನೋಚ್ಯತೇ । ಹೃದ್ಯಯನಾತ್ ॥ (೫) ತಸ್ಮಿನ್ ಹೃದಯಾಖ್ಯೆ ಆಕಾಶೇ ಬ್ರಹ್ಮಾಖ್ಯ ಆಕಾಶೋ ವಿದ್ಯತ ಇತ್ಯರ್ಥಃ। ಅನ್ಯಥಾ ಕಥಂ ಭೂತಾಕಾಶಸ್ಯ ದಹರಸ್ಯ ಬಹಿರಾಕಾಶಸಮತ್ವಂ।ದಹರೋಽಸ್ಮಿನ್ನಂತರಾಕಾಶ ಇತಿ ಚ ಪೂರ್ವೋಕ್ತಾಕಾಶಸ್ಯ ದಹರತ್ವಮುಕ್ತಂ । ಉತ್ತರಸ್ಯತು ಯಾವಾನ್ವಾ ಅಯಮಾಕಾಶ ಇತ್ಯನಂತಪರಿಮಾಣತ್ವಂ । ಅತೋ ಬ್ರಹ್ಮಾಕಾಶ ಏವೋತ್ತರಃ ॥ ೪ ॥

ಅ ॥ (೧) ಶ್ರೀಹರಿಯು ನನ್ನ ಹೃದಯದೊಳಗೆ ಬತ್ತಕ್ಕಿಂತಲೂ ಅಣುವಾಗಿರುತ್ತಾನೆ. ಪೃಥಿವಿಗಿಂತಲೂ ದೊಡ್ಡವನಾಗಿರುತ್ತಾನೆ ಹೀಗೆ ಅಣುತ್ವಮಹತ್ವಗಳನ್ನು ಹೇಳಿದೆ. (೨) (ವೇದಪ್ರಮಾಣಬಲದಿಂದ ಏಕಕಾಲದಲ್ಲಿ ಅಣುತ್ವ-ಮಹತ್ವ ಮೊದಲಾದ ವಿರುದ್ಧ ಧರ್ಮಗಳೂ ಶ್ರೀಹರಿಯಲ್ಲಿರುತ್ತವೆಂದಂಗೀಕರಿಸುವುದಾದರೆ ಜನಿತೋಽತ ವಿಷ್ಣೋಃ ಇತ್ಯಾದಿ ವೇದಗಳಲ್ಲಿ ವಿಷ್ಣುವಿಗೆ ಉತ್ಪತ್ತ್ಯಾದಿಗಳೂ ತೋರುವುದರಿಂದ ದೋಷಗಳನ್ನು ಒಡಂಬಡಬೇಕಾಗುವುದು, ಎಂದರೆ—) ಶ್ರೀ ಹರಿಯಲ್ಲಿ ಲೋಕದೃಷ್ಟಿಯಿಂದ ವಿರುದ್ಧಗಳಾದರೂ ಗುಣಗಳು ಶ್ರುತಿಪ್ರಸಿದ್ಧಗಳಾಗಿವೆ. ವೇದಗಳಲ್ಲಿ ಹೇಳಲ್ಪಡದಿದ್ದ ಗುಣಗಳೂ ಇವೆ. ಲಕ್ಷ್ಮ್ಯಾದಿಗಳಿಂದ ಧ್ಯಾನಿಸಲ್ಪಡತಕ್ಕ ಗುಣಗಳೂ, ಧ್ಯಾನಿಸಲ್ಪಡದಿದ್ದ ಗುಣಗಳೂ ಇವೆ. ಶ್ರೀಹರಿಗೆ

ದೋಷಗಳು ವೇದಗಳಲ್ಲಿ ಹೇಳಲ್ಪಟ್ಟವೆ, ಎಂದು ತೋರಿದರೂ ಅವುಗಳು ವಸ್ತುತಃ ಇಲ್ಲವೇ ಇಲ್ಲ. ಏಕೆಂದರೆ—ವೇದಗಳ ತಾತ್ಪರ್ಯಜ್ಞಾನವಿಲ್ಲದವರಿಗೆ ಮಾತ್ರ ಹಾಗೆ ಅರ್ಥವು ತೋರುತ್ತದೆ, ಎಂದು ವೇದವಿದೆ. ಈ ವಿಷಯದಲ್ಲಿ ಸಂಶಯ ಮಾಡಕೂಡದು (ಅಂದರೆ ಲೋಕದೃಷ್ಟಿಯಿಂದ ವಿರುದ್ಧಗಳಾದ ಧರ್ಮಗಳೂ ಶ್ರೀಹರಿಯಲ್ಲಿ ಅವಿರುದ್ಧಗಳಾಗಿ ಇರುತ್ತವೆ, ಎಂದು ಸಿದ್ಧವಾಯಿತು.) (ಇ) ಲೋಕದೃಷ್ಟಿಯಿಂದ ವಿರುದ್ಧಗಳೂ, ವೇದಗಳಲ್ಲಿ ಹೇಳಲ್ಪಡದಿದ್ದವುಗಳೂ ಆದ ಗುಣಗಳು ಶ್ರೀಹರಿಯಲ್ಲಿ ಇರುತ್ತವೆ. ಎಲ್ಲಿಯಾದರೂ ದೋಷಗಳು ಶ್ರುತಗಳಾಗಿದ್ದರೂ ಶ್ರೀಹರಿಯಲ್ಲಿ ಯಾವ ದೋಷಗಳೂ ಇಲ್ಲವೇ ಇಲ್ಲ, ಎಂದು ಗಾರ್ಡದಲ್ಲಿ ಇದೆ. (೪) (ಇನೇ ಮಂತ್ರದಲ್ಲಿದ್ದ **ಅಂತರ್ಹೃದಯೇ** ಎಂಬುದಕ್ಕೆ ಭೂತಾಕಾಶದಲ್ಲಿ ಎಂಬ ಅರ್ಥವು ಕೂಡಲಾರದು. ಆ ಅರ್ಥವನ್ನು ತಿಳಿಸತಕ್ಕ ಪದವು ಇಲ್ಲ, ಎಂದರೆ—) **ಕಂ ತದತ್ರ ವಿದ್ಯತೇ** ಎಂದು ಪ್ರಶ್ನೆ ಮಾಡಿದುದರಿಂದ ಹೃದಯದಲ್ಲಿರತಕ್ಕ ಆಕಾಶವು **ಹೃದಯ** ಎಂಬ ಶಬ್ದದಿಂದ ಹೇಳಲ್ಪಡುತ್ತದೆ. ಆಕಾಶವು ಹೃದಯದಲ್ಲಿ ಆಶ್ರಯಿಸಿಕೊಂಡಿರುವುದರಿಂದ ಹೃದಯವೆಂದರೆ ಆಕಾಶವು. (ಅಂದರೆ—ಇಲ್ಲಿ ಭೂತಾಕಾಶವನ್ನು ತಿಳಿಸುವ ಪದವಿಲ್ಲವೆಂದಲ್ಲ. ಹೃದಯವೆಂಬ ಪದವಿದೆ ಹೃದಯಪದದಿಂದ ಅಂತಃಕರಣವನ್ನೇ ಏಕೆ ಇಟ್ಟುಕೊಳ್ಳಬಾರದೆಂದರೆ—**ಕಂ ತದತ್ರ ವಿದ್ಯತೇ** ಎಂದು ಹೃದಯಾಕಾಶದಲ್ಲಿದ್ದ ಪರಬ್ರಹ್ಮನ ಲಕ್ಷಣವನ್ನು ಕೇಳಿದ್ದಕ್ಕೆ ಯಾವಾನ್ವಾ ಇತ್ಯಾದಿಗಳಿಂದ ಹೃದಯಾಕಾಶದಲ್ಲಿದ್ದ ಶ್ರೀಹರಿಗೇನೇ ಲಕ್ಷಣ ಹೇಳಬೇಕು. ಅಂತಃಕರಣರೂಪ ಹೃದಯದಲ್ಲಿರುವವನಿಗೆ ಲಕ್ಷಣ ಹೇಳುವುದು ಯುಕ್ತವಲ್ಲ. ಅದುಕಾರಣ ಹೃದಯವೆಂಬ ಪದಕ್ಕೆ ಹೃದಯದಲ್ಲಿದ್ದ ಆಕಾಶವೆಂದೇ ಅರ್ಥವು) (ಜ) (1) (ಆದನ್ನೇ ವಿವರಿಸುತ್ತಾರೆ—) ಅಂತಹ ಹೃದಯವೆಂಬ ಆಕಾಶದಲ್ಲಿ ಬ್ರಹ್ಮನೆಂಬ ಆಕಾಶನಿದ್ದಾನೆ. (2) (ಹೃದಯವೆಂಬ ಆಕಾಶದೊಳಗೆ ಪರಬ್ರಹ್ಮನೆಂಬ ಆಕಾಶನು ಇದ್ದಾನೆಂದು ಏಕೆ ಒಡಂಬಡಬೇಕು? **ಅಂತರ್ಹೃದಯ ಆಕಾಶಃ** ಎಂಬಲ್ಲಿ ಆಕಾಶಪದವು ಭೂತಾಕಾಶದಲ್ಲಿಯೇ ಪ್ರಸಿದ್ಧವಾಗಿರುವುದರಿಂದ ಭೂತಾಕಾಶವನ್ನೇ ಹೇಳುತ್ತದೆಂದು ಏಕೆ ಆಗಲಾರದು? ಎಂದರೆ-) ರೂಢಿಯ ಸಾಮರ್ಥ್ಯದಿಂದ **ಅಂತರ್ಹೃದಯ ಆಕಾಶಃ** ಎಂಬಲ್ಲಿನ್ನ ಆಕಾಶಶಬ್ದಕ್ಕೆ ಭೂತಾಕಾಶವೇ ಅರ್ಥವೆಂದು ಆಗಿದ್ದರೆ—**ಯಾವಾನ್ವಾ ಅಯಮಾಕಾಶಃ ತಾವಾನೇಷಃ** ಎಂದು ಹೃದಯದಲ್ಲಿದ್ದ ಆಕಾಶಕ್ಕೆ ಬಾಹ್ಯಾಕಾಶದಿಂದ ಪರಿಮಾಣಸಾಮ್ಯ ಹೇಳಿದ್ದು ಕೂಡದೆ ಹೋಗುವುದು. (ಹೃದಯದಲ್ಲಿದ್ದ ಆಕಾಶವು ಅಲ್ಪವು ಬಾಹ್ಯಾಕಾಶವು ವ್ಯಾಪ್ತವು. ಅದುಕಾರಣ ಎರಡು ಕಡೆ ಇದ್ದ ಆಕಾಶಶಬ್ದದಿಂದ ಪರಬ್ರಹ್ಮನನ್ನೇ ಇಟ್ಟುಕೊಳ್ಳಬೇಕು. ಶ್ರೀಹರಿಗೆ ಏಕಕಾಲದಲ್ಲಿ ಅಣುತ್ವಮಹತ್ವಗಳು ಕೂಡುತ್ತವೆಂದು ಹೇಳಿರುತ್ತೇವೆ) (ಟ) (ಹಾಗಾದರೆ-**ದಹರೋಽಸ್ಮಿನ್ನಂತರಾ ಆಕಾಶಃ** ಎಂಬಲ್ಲಿ ಆಕಾಶ ಶಬ್ದದಿಂದ ಭೂತಾಕಾಶವನ್ನು ಇಟ್ಟುಕೊಳ್ಳಬೇಕು, ಎಂದು ಹೇಳಿದ ಕಾರಣ **ಯಾವಾನ್ವಾ ಅಯಮಾಕಾಶಃ** ಎಂಬಲ್ಲಿಯೂ ಆಕಾಶಶಬ್ದದಿಂದ ಭೂತಾಕಾಶವನ್ನೇ ಇಟ್ಟುಕೊಳ್ಳಬೇಕು, ಒಂದೇ ಪ್ರಕರಣದಲ್ಲಿರುವ ಆಕಾಶಶಬ್ದಕ್ಕೆ ಬಾಧಕವಿಲ್ಲದೆ ಎರಡು ಅರ್ಥಗಳನ್ನು ಕಲ್ಪಿಸುವುದು ಕೂಡಲಾರದು, ಎಂದರೆ **ದಹರೋಽಸ್ಮಿನ್ನಂತರಾ ಆಕಾಶಃ** ಎಂದು ಹಿಂದೆ ಹೇಳಿದ ಆಕಾಶವು ಅಲ್ಪವು ಎಂದು ಹೇಳಿದೆ. (ಅದುಕಾರಣ ಮೊದಲಿನ ಆಕಾಶಶಬ್ದದಿಂದ ಭೂತಾಕಾಶವನ್ನೇ ಇಟ್ಟುಕೊಳ್ಳಬೇಕು.) ಮೇಲೆ ಹೇಳಿದ ಆಕಾಶಕ್ಕೆ **ಯಾವಾನ್ವಾ ಅಯಮಾಕಾಶಃ** ಎಂದು ಅನಂತಪರಿಮಾಣಗಳನ್ನು ಹೇಳಿದೆ. (ಅದುಕಾರಣ ಮೇಲೆ ಹೇಳಿದ ಆಕಾಶ ಶಬ್ದದಿಂದ ಪರಬ್ರಹ್ಮನೆಂಬ ಆಕಾಶವನ್ನೇ ಇಟ್ಟುಕೊಳ್ಳಬೇಕು.) ॥ ೩ ॥

ಪೀ—ಹಾಗಾದರೆ ಹಿಂದೆ ಹೇಳಿದ ಆಕಾಶಶಬ್ದದಿಂದ ಪರಬ್ರಹ್ಮನೆಂಬ ಆಕಾಶವನ್ನು ಏಕೆ ಇಟ್ಟುಕೊಳ್ಳಬಾರದು **ಅಶೋರಣೀಯಾನ್** ಎಂಬ ವೇದದಿಂದ ಪರಬ್ರಹ್ಮನಲ್ಲಿ ಅಲ್ಪತ್ವವು ಕೂಡಬಹುದು. ಒಂದೇ ಪ್ರಕರಣದಲ್ಲಿರುವ ಆಕಾಶಶಬ್ದಕ್ಕೆ ಎರಡು ಅರ್ಥಗಳನ್ನು ಇಟ್ಟುಕೊಳ್ಳುವುದು ಯುಕ್ತವಲ್ಲ ಎಂದರೆ—

ಭಾ. ॥ (೧) ಪೂರ್ವೋಕ್ತಸ್ಯಾಭೂತಾಕಾಶತ್ವೇ ತಸ್ಮಿನ್ಯದಂತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಂ ತತ್ರಾಪಿ ದಹರಂ ಗಗನಂ ವಿಶೋಕಸ್ತಸ್ಮಿನ್ಯದಂತಸ್ತದುಪಾಸಿತವ್ಯಂ ॥ (೨) ಸಹಸ್ರಶೀರ್ಷಾ ದೇವಮಿತ್ಯಾದಿ ಕಥಂ ಯುಜ್ಯತೇ(ಜ್ಯೇತ) ॥ (೩) ನ ಹಿ ಭಗವದಂತಸ್ಥಿ ತಮೇವಾನ್ಯಸ್ಥಿಂಚಿದ್ವಿಜಿಜ್ಞಾಸಿತವ್ಯಂ । ತದ್ವಾವೇತ್ಯವಧಾರಣಾಚ್ಚ ॥ (೪) ಉತ್ತರಸ್ಯಾಪರಬ್ರಹ್ಮತ್ವೇ ಚ ಸರ್ವಾಧಾರತ್ವಂ ನಾಸ್ಯ ಜರಯೈಕಜ್ಜೀರ್ಯತಿ ನ ವಧೇನಾಸ್ಯ ಹನ್ಯತ ಏತತ್ಸತ್ಯಂ ಬ್ರಹ್ಮಪುರಮಸ್ಮಿನ್ಕಾಮಾಃ ಸಮಾಹಿತಾ ಏಷ ಆತ್ಮಾಽಪಹತಪಾಪ್ಮೇತ್ಯಾದಿ ನ ಯುಜ್ಯತೇ ॥ (೫) ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ ಯದ್ವಾವ ವಿಜಿಜ್ಞಾಸಿತವ್ಯಮಿತ್ಯಸ್ಯ ಯ ಏಷೋಽಂತರ್ಹೃದಯ ಆಕಾಶ ಇತ್ಯೇವ ಪರಿಹಾರಃ । ನ ಕೂಭೇ ಅಸ್ಮಿನ್ ದ್ಯಾವಾಪೃಥಿವೀತ್ಯಾದಿ । ತತ್ತು ವಿಜಿಜ್ಞಾಸಿತವ್ಯತ್ವೇ ಹೇತುತ್ವೇನ ಸಾಮರ್ಥ್ಯಕಥನಮೇವ । ನ ಹಿ ದ್ಯಾವಾಪೃಥಿವ್ಯಾದೇರೇವ ವಿಜಿಜ್ಞಾಸ್ಯತ್ವಂ । ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥೇತಿ ಹಿ ಶ್ರುತಿಃ । ಉಭೇ ಅಸ್ಮಿನ್ ದ್ಯಾವಾಪೃಥಿವೀತ್ಯಾದ್ಯುಭಯಬ್ದೋ ಮುಕ್ತಾಮುಕ್ತರಾಶಿವ್ಯಪೇಕ್ಷಯಾ ॥ ೪ ॥

ಅ ॥ (೧) ದಹರೋಽಸ್ಮಿನ್ನಂತರಾಕಾಶಃ ಎಂದು ಮೊದಲು ಹೇಳಿದ ಆಕಾಶಶಬ್ದಕ್ಕೆ ಭೂತಾಕಾಶ ಎಂದು ಅರ್ಥವನ್ನು ಒಡಂಬಡದೆ ಪರಬ್ರಹ್ಮನೆಂಬ ಅರ್ಥವನ್ನು ಒಡಂಬಟ್ಟರೆ ಅದರೊಳಗೆ ಇರುವುದನ್ನು ಹುಡುಕಬೇಕು, ಅದನ್ನೇ ತಿಳಿಯಬೇಕು, (ಎಂಬ ವಾಕ್ಯವು) (ದಹರಂ ವಿಪಾಪಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಂ ತತ್ರಾಪಿ ಎಂದು ಆ ಹೃದಯಪುಂಡರೀಕದಲ್ಲಿಯೂ ಅಲ್ಪವಾದ ಭೂತಾಕಾಶವಿದೆ. ಅದರೊಳಗಣ ಶೋಕವಿಲ್ಲದಿರುವ ಪರಬ್ರಹ್ಮನನ್ನು ಧ್ಯಾನಿಸಬೇಕು, ಎಂಬೀ ಸಮಾಖ್ಯಾವಾಕ್ಯವು ಕೂಡಲಾರದು. (ಸಮಾಖ್ಯಾ ವಾಕ್ಯದಲ್ಲಿ ವಿಶೋಕಃ ಶೋಕಲೇಶವಿಲ್ಲದವನು ಎಂದು ಇದ್ದ ಕಾರಣ ತಸ್ಮಿನ್ ಯದಂತಃ ಎಂಬಲ್ಲಿ ಆಕಾಶದೊಳಗಣನು ಪರಬ್ರಹ್ಮನೆಂದು ಸಿದ್ಧವಾಗುತ್ತದೆ.) (೨) (ಪರಬ್ರಹ್ಮನೇ ಎಂಬುದಕ್ಕೆ ಸ್ವಪ್ನಜ್ಞಾಪಕ ಹೇಳುತ್ತಾರೆ) ಸಹಸ್ರಶಿರಸ್ಸುಗಳುಳ್ಳವನು ಸಹಸ್ರಕಣ್ಣುಗಳುಳ್ಳವನು ಇಂತಹ ಶ್ರೀಹರಿಯನ್ನು (ಧ್ಯಾನಿಸುವೆವು.) ಇತ್ಯಾದಿಗಳೂ ಪರಬ್ರಹ್ಮನೆಂದು ಇಟ್ಟುಕೊಳ್ಳಹಿದ್ದರೆ ಕೂಡಲಾರವು. (೩) ತಸ್ಮಿನ್ಯದಂತಃ ಎಂಬ ವಾಕ್ಯ ಶೇಷವು ಕೂಡುವುದಿಲ್ಲ. ಎಂದು ಹೇಳಿದುದನ್ನು ದೃಢೀಕರಿಸುತ್ತಾರೆ.) ದಹರೋಽಸ್ಮಿನ್ನಂತರಾ ಆಕಾಶಃ ಎಂಬಲ್ಲಿ ಆಕಾಶಶಬ್ದದಿಂದ ಪರಬ್ರಹ್ಮನನ್ನು ಇಟ್ಟುಕೊಂಡರೆ ತಸ್ಮಿನ್ಯದಂತಃ ಎಂಬಲ್ಲಿ ಶ್ರೀಹರಿಯೊಳಗೆ ಇರುವ ಇನ್ನೊಂದು ವಸ್ತುವನ್ನು ಧ್ಯಾನಿಸಬೇಕಾಗುವುದು. (ತಮೇವೈಕಂ ಜಾನಥ ಶ್ರೀಹರಿಯನ್ನೇ ತಿಳಿಯಿರಿ ಇತ್ಯಾದಿ ವೇದವಿರೋಧವು ಬರುವುದರಿಂದ) ಇನ್ನೊಬ್ಬರನ್ನು ಧ್ಯಾನಿಸಬೇಕೆಂಬುದು ಕೂಡಲಾರದು. ಮತ್ತು (ಶ್ರೀಹರಿಯಿಂದ ಬೇರೆಯಾದ ವಸ್ತುವನ್ನು ಧ್ಯಾನಿಸಬೇಕೆಂದಾದರೆ) ತದ್ವಾವ ವಿಜಿಜ್ಞಾಸಿತವ್ಯಂ ಎಂಬಲ್ಲಿ ತದ್ವಾವ ಬ್ರಹ್ಮನನ್ನೇ ಧ್ಯಾನಿಸಬೇಕೆಂದು, ಹೇಳಿದ್ದು ಕೂಡದೆ ಹೋಗುವುದು. (೪) (ಹೀಗೆ ಮೊದಲಿನ ಆಕಾಶಶಬ್ದಕ್ಕೆ ಭೂತಾಕಾಶವೆಂದು ಅರ್ಥವಾಗಬೇಕೆಂದು ಹೇಳಿ ಮೇಲಿನ ಆಕಾಶಶಬ್ದಕ್ಕೆ ಪರಬ್ರಹ್ಮನೆಂದು ಅರ್ಥ ಇಟ್ಟುಕೊಳ್ಳಬಿದ್ದರೆ ಬಾಧಕ ಹೇಳುತ್ತಾರೆ.) ಮೇಲಿನ ಆಕಾಶಶಬ್ದಕ್ಕೆ ಪರಬ್ರಹ್ಮನೆಂದು ಅರ್ಥ ಇಟ್ಟುಕೊಳ್ಳಬಿದ್ದರೆ ಸರ್ವಾಧಾರತ್ವ ಹೇಳಿದ್ದು ಇವನಿಗೆ ಮುದಿತನ ಇಲ್ಲ, ನಾಶವಿಲ್ಲ, ಪೂರ್ಣಗುಣಗಳಿವೆ, ಪೂರ್ಣಕಾಮಗಳಿವೆ, ಎಲ್ಲಾ ಇಷ್ಟಭೋಗಗಳೂ ಇವೆ. ಪಾಪಲೇಶವಿಲ್ಲದವನು, ಇಮಮೊದಲಾದುದು ಹೇಳಿದ್ದು ಯುಕ್ತವಾಗುವುದಿಲ್ಲ. (೫) (ಸರ್ವಾಧಾರತ್ವಮೊದಲಾದ ಲಿಂಗಬಲದಿಂದ ಮೇಲಿನ ಆಕಾಶಶಬ್ದದಿಂದ ಪರಬ್ರಹ್ಮನೆಂದು ಇಟ್ಟುಕೊಳ್ಳುವುದಾದರೆ ಮೊದಲಿನ ಆಕಾಶಶಬ್ದಕ್ಕೂ ಪರಬ್ರಹ್ಮನೆಂದೇ ಅರ್ಥ ಇಟ್ಟು

ದೋಷಗಳು ವೇದಗಳಲ್ಲಿ ಹೇಳಲ್ಪಟ್ಟವೆ, ಎಂದು ತೋರಿದರೂ ಅವುಗಳು ವಸ್ತುತಃ ಇಲ್ಲವೇ ಇಲ್ಲ. ಏಕೆಂದರೆ—ವೇದಗಳ ತಾತ್ಪರ್ಯಜ್ಞಾನವಿಲ್ಲದವರಿಗೆ ಮಾತ್ರ ಹಾಗೆ ಅರ್ಥವು ತೋರುತ್ತದೆ, ಎಂದು ವೇದವಿದೆ. ಈ ವಿಷಯದಲ್ಲಿ ಸಂಶಯ ಮಾಡಕೂಡದು (ಅಂದರೆ ಲೋಕದೃಷ್ಟಿಯಿಂದ ವಿರುದ್ಧಗಳಾದ ಧರ್ಮಗಳೂ ಶ್ರೀಹರಿಯಲ್ಲಿ ಅವಿರುದ್ಧಗಳಾಗಿ ಇರುತ್ತವೆ, ಎಂದು ಸಿದ್ಧವಾಯಿತು.) (೩) ಲೋಕದೃಷ್ಟಿಯಿಂದ ವಿರುದ್ಧಗಳೂ, ವೇದಗಳಲ್ಲಿ ಹೇಳಲ್ಪಡದಿದ್ದವುಗಳೂ ಆದ ಗುಣಗಳು ಶ್ರೀಹರಿಯಲ್ಲಿ ಇರುತ್ತವೆ. ಎಲ್ಲಿಯಾದರೂ ದೋಷಗಳು ಶ್ರುತಗಳಾಗಿದ್ದರೂ ಶ್ರೀಹರಿಯಲ್ಲಿ ಯಾವ ದೋಷಗಳೂ ಇಲ್ಲವೇ ಇಲ್ಲ, ಎಂದು ಗಾರ್ಡದಲ್ಲಿ ಇದೆ. (೪) (೩ನೇ ಮಂತ್ರದಲ್ಲಿದ್ದ **ಅಂತರ್ಹೃದಯೇ** ಎಂಬುದಕ್ಕೆ ಭೂತಾಕಾಶದಲ್ಲಿ ಎಂಬ ಅರ್ಥವು ಕೂಡಲಾರದು. ಆ ಅರ್ಥವನ್ನು ತಿಳಿಸತಕ್ಕ ಪದವು ಇಲ್ಲ, ಎಂದರೆ—) **ಕಂ ತದತ್ರ ವಿದ್ಯತೇ** ಎಂದು ಪ್ರಶ್ನೆ ಮಾಡಿದುದರಿಂದ ಹೃದಯದಲ್ಲಿರತಕ್ಕ ಆಕಾಶವು **ಹೃದಯ** ಎಂಬ ಶಬ್ದದಿಂದ ಹೇಳಲ್ಪಡುತ್ತದೆ. ಆಕಾಶವು ಹೃದಯದಲ್ಲಿ ಆಶ್ರಯಿಸಿಕೊಂಡಿರುವುದರಿಂದ ಹೃದಯವೆಂದರೆ ಆಕಾಶವು. (ಅಂದರೆ—ಇಲ್ಲಿ ಭೂತಾಕಾಶವನ್ನು ತಿಳಿಸುವ ಪದವಿಲ್ಲವೆಂದಲ್ಲ. ಹೃದಯವೆಂಬ ಪದವಿದೆ ಹೃದಯಪದದಿಂದ ಅಂತಃಕರಣವನ್ನೇ ಏಕೆ ಇಟ್ಟುಕೊಳ್ಳಬಾರದೆಂದರೆ—**ಕಂ ತದತ್ರ ವಿದ್ಯತೇ** ಎಂದು ಹೃದಯಾಕಾಶದಲ್ಲಿದ್ದ ಪರಬ್ರಹ್ಮನ ಲಕ್ಷಣವನ್ನು ಕೇಳಿದ್ದಕ್ಕೆ ಯಾವಾನ್ವಾ ಇತ್ಯಾದಿಗಳಿಂದ ಹೃದಯಾಕಾಶದಲ್ಲಿದ್ದ ಶ್ರೀಹರಿಗೇನೇ ಲಕ್ಷಣ ಹೇಳಬೇಕು. ಅಂತಃಕರಣರೂಪ ಹೃದಯದಲ್ಲಿರುವವನಿಗೆ ಲಕ್ಷಣ ಹೇಳುವುದು ಯುಕ್ತವಲ್ಲ. ಆದುಕಾರಣ ಹೃದಯವೆಂಬ ಪದಕ್ಕೆ ಹೃದಯದಲ್ಲಿದ್ದ ಆಕಾಶವೆಂದೇ ಅರ್ಥವು) (೫) (1) (ಆದನ್ನೇ ವಿವರಿಸುತ್ತಾರೆ—) ಅಂತಹ ಹೃದಯವೆಂಬ ಆಕಾಶದಲ್ಲಿ ಬ್ರಹ್ಮನೆಂಬ ಆಕಾಶನಿದ್ದಾನೆ. (2) (ಹೃದಯವೆಂಬ ಆಕಾಶದೊಳಗೆ ಪರಬ್ರಹ್ಮನೆಂಬ ಆಕಾಶನು ಇದ್ದಾನೆಂದು ಏಕೆ ಒಡಂಬಡಬೇಕು? **ಅಂತರ್ಹೃದಯ ಆಕಾಶಃ** ಎಂಬಲ್ಲಿ ಆಕಾಶಪದವು ಭೂತಾಕಾಶದಲ್ಲಿಯೇ ಪ್ರಸಿದ್ಧವಾಗಿರುವುದರಿಂದ ಭೂತಾಕಾಶವನ್ನೇ ಹೇಳುತ್ತದೆಂದು ಏಕೆ ಆಗಲಾರದು? ಎಂದರೆ-) ರೂಢಿಯ ಸಾಮರ್ಥ್ಯದಿಂದ **ಅಂತರ್ಹೃದಯ ಆಕಾಶಃ** ಎಂಬಲ್ಲಿವ್ವ ಆಕಾಶಶಬ್ದಕ್ಕೆ ಭೂತಾಕಾಶವೇ ಅರ್ಥವೆಂದು ಆಗಿದ್ದರೆ—**ಯಾವಾನ್ವಾ ಅಯಮಾಕಾಶಃ ತಾವಾನೇಷಃ** ಎಂದು ಹೃದಯದಲ್ಲಿದ್ದ ಆಕಾಶಕ್ಕೆ ಬಾಹ್ಯಾಕಾಶದಿಂದ ಪರಿಮಾಣಸಾಮ್ಯ ಹೇಳಿದ್ದು ಕೂಡದೆ ಹೋಗುವುದು. (ಹೃದಯದಲ್ಲಿದ್ದ ಆಕಾಶವು ಅಲ್ಪವು ಬಾಹ್ಯಾಕಾಶವು ವ್ಯಾಪ್ತವು. ಆದುಕಾರಣ ಎರಡು ಕಡೆ ಇದ್ದ ಆಕಾಶಶಬ್ದದಿಂದ ಪರಬ್ರಹ್ಮನನ್ನೇ ಇಟ್ಟುಕೊಳ್ಳಬೇಕು. ಶ್ರೀಹರಿಗೆ ಏಕಕಾಲದಲ್ಲಿ ಅಣುತ್ವಮಹತ್ವಗಳು ಕೂಡುತ್ತವೆಂದು ಹೇಳಿರುತ್ತೇವೆ) (೬) (ಹಾಗಾದರೆ—**ದಹರೋಽಸ್ಮಿನ್ನಂತರಾ ಆಕಾಶಃ** ಎಂಬಲ್ಲಿ ಆಕಾಶ ಶಬ್ದದಿಂದ ಭೂತಾಕಾಶವನ್ನು ಇಟ್ಟುಕೊಳ್ಳಬೇಕು, ಎಂದು ಹೇಳಿದ ಕಾರಣ **ಯಾವಾನ್ವಾ ಅಯಮಾಕಾಶಃ** ಎಂಬಲ್ಲಿಯೂ ಆಕಾಶಶಬ್ದದಿಂದ ಭೂತಾಕಾಶವನ್ನೇ ಇಟ್ಟುಕೊಳ್ಳಬೇಕು, ಒಂದೇ ಪ್ರಕರಣದಲ್ಲಿರುವ ಆಕಾಶಶಬ್ದಕ್ಕೆ ಬಾಧಕವಿಲ್ಲದೆ ಎರಡು ಅರ್ಥಗಳನ್ನು ಕಲ್ಪಿಸುವುದು ಕೂಡಲಾರದು, ಎಂದರೆ **ದಹರೋಽಸ್ಮಿನ್ನಂತರಾ ಆಕಾಶಃ** ಎಂದು ಹಿಂದೆ ಹೇಳಿದ ಆಕಾಶವು ಅಲ್ಪವು ಎಂದು ಹೇಳಿದೆ. (ಆದಕಾರಣ ಮೊದಲಿನ ಆಕಾಶಶಬ್ದದಿಂದ ಭೂತಾಕಾಶವನ್ನೇ ಇಟ್ಟುಕೊಳ್ಳಬೇಕು.) ಮೇಲೆ ಹೇಳಿದ ಆಕಾಶಕ್ಕೆ **ಯಾವಾನ್ವಾ ಅಯಮಾಕಾಶಃ** ಎಂದು ಅನಂತಪರಿಮಾಣಗಳನ್ನು ಹೇಳಿದೆ. (ಆದುಕಾರಣ ಮೇಲೆ ಹೇಳಿದ ಆಕಾಶ ಶಬ್ದದಿಂದ ಪರಬ್ರಹ್ಮನೆಂಬ ಆಕಾಶವನ್ನೇ ಇಟ್ಟುಕೊಳ್ಳಬೇಕು.) ॥೩॥

ಪೀ—ಹಾಗಾದರೆ ಹಿಂದೆ ಹೇಳಿದ ಆಕಾಶಶಬ್ದದಿಂದ ಪರಬ್ರಹ್ಮನೆಂಬ ಆಕಾಶವನ್ನು ಏಕೆ ಇಟ್ಟುಕೊಳ್ಳಬಾರದು **ಅಣೋರಣೀಯಾನ್** ಎಂಬ ವೇದದಿಂದ ಪರಬ್ರಹ್ಮನಲ್ಲಿ ಅಲ್ಪತ್ವವು ಕೂಡಬಹುದು. ಒಂದೇ ಪ್ರಕರಣದಲ್ಲಿರುವ ಆಕಾಶಶಬ್ದಕ್ಕೆ ಎರಡು ಅರ್ಥಗಳನ್ನು ಇಟ್ಟುಕೊಳ್ಳುವುದು ಯುಕ್ತವಲ್ಲ ಎಂದರೆ—

ಭಾ. ॥ (೧) ಪೂರ್ವೋಕ್ತಸ್ಯಾಭೂತಾಕಾಶತ್ವೇ ತಸ್ಮಿನ್ಯದಂತಸ್ತದನ್ವೇಷ್ಟವ್ಯಂ ತದ್ವಾವ ವಿಜಿಜ್ಞಾಸಿತವ್ಯಂ ತತ್ರಾಪಿ ದಹರಂ ಗಗನಂ ವಿಶೋಕಸ್ತಸ್ಮಿನ್ಯದಂತಸ್ತದುಪಾಸಿತವ್ಯಂ ॥ (೨) ಸಹಸ್ರಶೀರ್ಷಾ ದೇವಮಿತ್ಯಾದಿ ಕಥಂ ಯುಜ್ಯತೇ(ಜ್ಯೇತ) ॥ (೩) ನ ಹಿ ಭಗವದಂತಸ್ಥಿತಮೇವಾನ್ಯತ್ಕಿಂಚಿದ್ವಿಜಿಜ್ಞಾಸಿತವ್ಯಂ । ತದ್ವಾವೇತ್ಯವಧಾರಣಾಚ್ಚ ॥ (೪) ಉತ್ತರಸ್ಯಾಪರಬ್ರಹ್ಮತ್ವೇ ಚ ಸರ್ವಾಧಾರತ್ವಂ ನಾಸ್ಯ ಜರಯೈತಜ್ಜೀರ್ಯತಿ ನ ವಧೇನಾಸ್ಯ ಹನ್ಯತ ಏತತ್ಸತ್ಯಂ ಬ್ರಹ್ಮಪುರಮಸ್ಮಿನ್ಕಾಮಾಃ ಸಮಾಹಿತಾ ಏಷ ಆತ್ಮಾಽಪಹತಪಾಪ್ಮೇತ್ಯಾದಿ ನ ಯುಜ್ಯತೇ ॥ (೫) ಕಿಂ ತದತ್ರ ವಿದ್ಯತೇ ಯದನ್ವೇಷ್ಟವ್ಯಂ ಯದ್ವಾವ ವಿಜಿಜ್ಞಾಸಿತವ್ಯಮಿತ್ಯಸ್ಯ ಯ ಏಷೋಽಂತರ್ಹೃದಯ ಆಕಾಶ ಇತ್ಯೇವ ಪರಿಹಾರಃ । ನ ಕೂಭೇ ಅಸ್ಮಿನ್ ದ್ಯಾವಾಪೃಥಿವೀತ್ಯಾದಿ । ತತ್ತು ವಿಜಿಜ್ಞಾಸಿತವ್ಯತ್ವೇ ಹೇತುತ್ವೇನ ಸಾಮರ್ಥ್ಯಕಥನಮೇವ । ನ ಹಿ ದ್ಯಾವಾಪೃಥಿವ್ಯಾದೇರೇವ ವಿಜಿಜ್ಞಾಸ್ಯತ್ವಂ । ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥೇತಿ ಹಿ ಶ್ರುತಿಃ । ಉಭೇ ಅಸ್ಮಿನ್ ದ್ಯಾವಾಪೃಥಿವೀತ್ಯಾದ್ಯುಭಶಬ್ದೋ ಮುಕ್ತಾಮುಕ್ತರಾಶಿವ್ಯಪೇಕ್ಷಯಾ ॥ ೪ ॥

ಆ ॥ (೧) ದಹರೋಽಸ್ಮಿನ್ನಂತರಾಕಾಶಃ ಎಂದು ಮೊದಲು ಹೇಳಿದ ಆಕಾಶಶಬ್ದಕ್ಕೆ ಭೂತಾಕಾಶ ಎಂದು ಅರ್ಥವನ್ನು ಒಡಂಬಡದೆ ಪರಬ್ರಹ್ಮನೆಂಬ ಅರ್ಥವನ್ನು ಒಡಂಬಟ್ಟರೆ ಅದರೊಳಗೆ ಇರುವುದನ್ನು ಹುಡುಕಬೇಕು, ಅದನ್ನೇ ತಿಳಿಯಬೇಕು, (ಎಂಬ ವಾಕ್ಯವು) (ದಹರಂ ವಿಪಾಪಂ ಪರವೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯಸಂಸ್ಥಂ ತತ್ರಾಪಿ ಎಂದು ಆ ಹೃದಯಪುಂಡರೀಕದಲ್ಲಿಯೂ ಅಲ್ಪವಾದ ಭೂತಾಕಾಶವಿದೆ. ಅದರೊಳಗಣ ಶೋಕವಿಲ್ಲದಿರುವ ಪರಬ್ರಹ್ಮನನ್ನು ಧ್ಯಾನಿಸಬೇಕು, ಎಂಬೀ ಸಮಾಖ್ಯಾವಾಕ್ಯವೆ ಕೂಡಲಾರದು. (ಸರ್ವಾಖ್ಯಾ ವಾಕ್ಯದಲ್ಲಿ ವಿಶೋಕಃ ಶೋಕಲೇಶವಿಲ್ಲದವನು ಎಂದು ಇದ್ದಕಾರಣ ತಸ್ಮಿನ್ ಯದಂತಃ ಎಂಬಲ್ಲಿ ಆಕಾಶದೊಳಗಣನು ಪರಬ್ರಹ್ಮನೆಂದು ಸಿದ್ಧವಾಗುತ್ತದೆ.) (೨) (ಪರಬ್ರಹ್ಮನೇ ಎಂಬುದಕ್ಕೆ ಸ್ಪಷ್ಟಜ್ಞಾಪಕ ಹೇಳುತ್ತಾರೆ) ಸಹಸ್ರಶಿರಸ್ಸುಗಳುಳ್ಳವನು ಸಹಸ್ರಕಣ್ಣುಗಳುಳ್ಳವನು ಇಂತಹ ಶ್ರೀಹರಿಯನ್ನು (ಧ್ಯಾನಿಸುವೆವು.) ಇತ್ಯಾದಿಗಳೂ ಪರಬ್ರಹ್ಮನೆಂದು ಇಟ್ಟುಕೊಳ್ಳದಿದ್ದರೆ ಕೂಡಲಾರವು. (೩) ತಸ್ಮಿನ್ಯದಂತಃ ಎಂಬ ವಾಕ್ಯ ಶೇಷವು ಕೂಡುವುದಿಲ್ಲ, ಎಂದು ಹೇಳಿದನ್ನು ದೃಢೀಕರಿಸುತ್ತಾರೆ.) ದಹರೋಽಸ್ಮಿನ್ನಂತರಾ ಆಕಾಶಃ ಎಂಬಲ್ಲಿ ಆಕಾಶಶಬ್ದದಿಂದ ಪರಬ್ರಹ್ಮನನ್ನು ಇಟ್ಟುಕೊಂಡರೆ ತಸ್ಮಿನ್ಯದಂತಃ ಎಂಬಲ್ಲಿ ಶ್ರೀಹರಿಯೊಳಗೆ ಇರುವ ಇನ್ನೊಂದು ವಸ್ತುವನ್ನು ಧ್ಯಾನಿಸಬೇಕಾಗುವುದು. (ತಮೇವೈಕಂ ಜಾನಥ ಶ್ರೀಹರಿಯನ್ನೇ ತಿಳಿಯಿರಿ ಇತ್ಯಾದಿ ವೇದವಿರೋಧವು ಬರುವುದರಿಂದ) ಇನ್ನೊಬ್ಬರನ್ನು ಧ್ಯಾನಿಸಬೇಕೆಂಬುದು ಕೂಡಲಾರದು. ಮತ್ತು (ಶ್ರೀಹರಿಯಿಂದ ಬೇರೆಯಾದ ವಸ್ತುವನ್ನು ಧ್ಯಾನಿಸಬೇಕೆಂದಾದರೆ) ತದ್ವಾವ ವಿಜಿಜ್ಞಾಸಿತವ್ಯಂ ಎಂಬಲ್ಲಿ ತದ್ವಾವ ಬ್ರಹ್ಮನನ್ನೇ ಧ್ಯಾನಿಸಬೇಕೆಂದು, ಹೇಳಿದ್ದು ಕೂಡದೆ ಹೋಗುವುದು. (೪) (ಹೀಗೆ ಮೊದಲಿನ ಆಕಾಶಶಬ್ದಕ್ಕೆ ಭೂತಾಕಾಶವೆಂದು ಅರ್ಥವಾಗಬೇಕೆಂದು ಹೇಳಿ ಮೇಲಿನ ಆಕಾಶಶಬ್ದಕ್ಕೆ ಪರಬ್ರಹ್ಮನೆಂದು ಅರ್ಥ ಇಟ್ಟುಕೊಳ್ಳದಿದ್ದರೆ ಬಾಧಕ ಹೇಳುತ್ತಾರೆ.) ಮೇಲಿನ ಆಕಾಶಶಬ್ದಕ್ಕೆ ಪರಬ್ರಹ್ಮನೆಂದು ಅರ್ಥ ಇಟ್ಟುಕೊಳ್ಳದಿದ್ದರೆ ಸರ್ವಾಧಾರತ್ವ ಹೇಳಿದ್ದು ಇವನಿಗೆ ಮುದಿತನ ಇಲ್ಲ, ನಾಶವಿಲ್ಲ, ಪೂರ್ಣಗುಣಗಳಿವೆ, ಪೂರ್ಣಕಾಮಗಳಿವೆ, ಎಲ್ಲಾ ಇಷ್ಟಭೋಗಗಳೂ ಇವೆ. ಪಾಪಲೇಶವಿಲ್ಲದವನು, ಇದುಮೊದಲಾದುದು ಹೇಳಿದ್ದು ಯುಕ್ತವಾಗುವುದಿಲ್ಲ. (೫) (ಸರ್ವಾಧಾರತ್ವಮೊದಲಾದ ಲಿಂಗಬಲದಿಂದ ಮೇಲಿನ ಆಕಾಶಶಬ್ದದಿಂದ ಪರಬ್ರಹ್ಮನೆಂದು ಇಟ್ಟುಕೊಳ್ಳುವುದಾದರೆ ಮೊದಲಿನ ಆಕಾಶಶಬ್ದಕ್ಕೂ ಪರಬ್ರಹ್ಮನೆಂದೇ ಅರ್ಥ ಇಟ್ಟು

ಉ. ॥ ಸ ಯದಿ ಪಿತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಪಿತರಃ ಸಮುತ್ತಿಷ್ಠಂತಿ ತೇನ ಪಿತೃಲೋಕೇನ ಸಂಪನ್ನೋ ಮಹೀಯತೇ ॥೧॥

ಅ ॥ ಬ್ರಹ್ಮಜ್ಞಾನಿಯಾದ ಮುಕ್ತನು ಪಿತೃಗಳಿಗೆ ವಿಷ್ಣುಲೋಕವಾಗಬೇಕು. ಆಮೇಲೆ ಪಿತೃಗಳ ಲೋಕವೇ ತನಗೆ ಆಗಬೇಕು, ಎಂದು ಪಿತೃಗಳ ಲೋಕವನ್ನು ಇಚ್ಛಿಸಿದರೆ ಅಥವಾ ಪಿತೃಗಳನ್ನು ನೋಡ ಬೇಕೆಂದು ಇಚ್ಛಿಸಿದರೆ ಆ ಮುಕ್ತನ ಇಚ್ಛಾಮಾತ್ರದಿಂದಲೇ ಮುಕ್ತನ ಪಿತೃಗಳು ಸಂಸಾರದಿಂದ ಬಿಡುಗಡೆ ಹೊಂದಿದವರಾಗಿ ಇದಿರು ನಿಲ್ಲುತ್ತಾರೆ. ಹೀಗೆ ಪಿತೃಗಳನ್ನು ನೋಡುವುದರಿಂದ (ಅಂದರೆ ತನ್ನ ಲೋಕಕ್ಕೆ ಬಂದಿರುವ ಪಿತೃಗಳಿಂದೊಡಗೂಡಿದವನಾಗಿ) ತನಗಿಂತ ಅಧಮರಾದ ಮುಕ್ತರಿಂದ ಪೂಜಿಸಿಕೊಳ್ಳಲ್ಪಡುತ್ತಾನೆ. ॥ ೧ ॥

ಉ. ॥ ಅಥ ಯದಿ ಮಾತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಮಾತರಃ ಸಮುತ್ತಿಷ್ಠಂತಿ ತೇನ ಮಾತೃಲೋಕೇನ ಸಂಪನ್ನೋ ಮಹೀಯತೇ ॥ ೨ ॥

ಅ ॥ *.....ತಾಯಂದಿಯರನ್ನು ನೋಡಲಿಚ್ಛಿಸಿದರೆ..... ॥ ೨ ॥

ಉ. ॥ ಅಥ ಯದಿ ಭ್ರಾತೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಭ್ರಾತರಃ ಸಮುತ್ತಿಷ್ಠಂತಿ ತೇನ ಭ್ರಾತೃಲೋಕೇನ ಸಂಪನ್ನೋ ಮಹೀಯತೇ ॥ ೩ ॥

ಅ ॥ .....ಸಹೋದರರನ್ನು ನೋಡಲಿಚ್ಛಿಸಿದರೆ..... ॥ ೩ ॥

ಉ. ॥ ಅಥ ಯದಿ ಸ್ವಸೃಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಸ್ವಸಾರಃ ಸಮುತ್ತಿಷ್ಠಂತಿ ತೇನ ಸ್ವಸೃಲೋಕೇನ ಸಂಪನ್ನೋ ಮಹೀಯತೇ ॥ ೪ ॥

ಅ ॥ .....ಸಹೋದರಿಯರನ್ನು ನೋಡಲಿಚ್ಛಿಸಿದರೆ..... ॥ ೪ ॥

ಉ. ॥ ಅಥ ಯದಿ ಸಖಿಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಸಖಾಯಃ ಸಮುತ್ತಿಷ್ಠಂತಿ ತೇನ ಸಖಿಲೋಕೇನ ಸಂಪನ್ನೋ ಮಹೀಯತೇ ॥ ೫ ॥

ಅ ॥ .....ಸಖಿಯರನ್ನು ನೋಡಲಿಚ್ಛಿಸಿದರೆ..... ॥ ೫ ॥

ಉ. ॥ ಅಥ ಯದಿ ಗಂಧಮಾಲ್ಯಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಗಂಧಮಾಲ್ಯೇ ಸಮುತ್ತಿಷ್ಠತಸ್ತೇನ ಗಂಧಮಾಲ್ಯಲೋಕೇನ ಸಂಪನ್ನೋ ಮಹೀಯತೇ ॥ ೬ ॥

* ಮುಂಡೆಯೂ ಹೀಗೆಯೇ ಹಿಂದಿನಂತೆಯೇ ಆರ್ಥ ಇಟ್ಟುಕೊಳ್ಳಬೇಕು.

ಅ ॥ ಸುಗಂಧ ಪುಷ್ಪಮಾಲಿಕೆಗಳನ್ನು ಭೋಗಿಸಬೇಕೆಂದು ಇಚ್ಛಿಸಿದರೆ.....ಗಂಧಮಾಲಿಕೆಗಳ ಭೋಗದಿಂದ..... ॥ ೬ ॥

ಉ. ॥ ಅಥ ಯದ್ಯನ್ನಪಾನಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯಾನ್ನಪಾನೇ ಸಮುತ್ತಿಷ್ಠತಸ್ತೇನಾನ್ನಪಾನಲೋಕೇನ ಸಂಪನ್ನೋ ಮಹೀಯತೇ ॥ ೭ ॥

ಅ ॥ ಅನ್ನ ಪಾನಗಳನ್ನು ಭೋಗಿಸಲಿಚ್ಛಿಸಿದರೆ.....ಅನ್ನ ಪಾನಗಳ ಭೋಗದಿಂದ.....॥ ೭ ॥

ಉ. ॥ ಅಥ ಯದಿ ಗೀತವಾದಿತ್ರಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಗೀತವಾದಿತ್ರೇ ಸಮುತ್ತಿಷ್ಠತಸ್ತೇನ ಗೀತವಾದಿತ್ರಲೋಕೇನ ಸಂಪನ್ನೋ ಮಹೀಯತೇ ॥ ೮ ॥

ಅ ॥ .....ಗಾನ ವಾದ್ಯಗಳನ್ನು ಕೇಳಲಿಚ್ಛಿಸಿದರೆ.....ಗಾನ ವಾದ್ಯಗಳನ್ನು ಕೇಳೋಣದರಿಂದ..... ॥ ೮ ॥

ಉ. ॥ ಅಥ ಯದಿ ಸ್ತ್ರೀಲೋಕಕಾಮೋ ಭವತಿ ಸಂಕಲ್ಪಾದೇವಾಸ್ಯ ಸ್ತ್ರಿಯಃ ಸಮುತ್ತಿಷ್ಠಂತಿ ತೇನ ಸ್ತ್ರೀಲೋಕೇನ ಸಂಪನ್ನೋ ಮಹೀಯತೇ ॥ ೯ ॥

ಅ ॥ ಸ್ತ್ರೀಯರನ್ನು ನೋಡಲಿಚ್ಛಿಸಿದರೆ.....ಸ್ತ್ರೀಯರನ್ನು ನೋಡುವುದರಿಂದ..... ॥ ೯ ॥

ಉ. ॥ ಯಂ ಯಮಂತಮಭಿಕಾಮೋ ಭವತಿ ಯಂ ಕಾಮಂ ಕಾಮಯತೇ ಸೋಽಸ್ಯ ಸಂಕಲ್ಪಾದೇವಾಸ್ಯ ಸಮುತ್ತಿಷ್ಠತಿ ತೇನ ಸಂಪನ್ನೋ ಮಹೀಯತೇ ॥ ಇತಿ ದ್ವಿತೀಯಃ ಖಂಡಃ ॥ ೧೦–೨ ॥ ॥ ೧೦ ॥

ಅ ॥ ಯಾವಯಾವ ದೇಶವನ್ನು.....ಯಾವಯಾವ ಕಾಮ್ಯವನ್ನು.....

ವಿ–(1) ಇಲ್ಲಿ ಮುಕ್ತನ ಕೊನೆಯ ಜನ್ಮದಲ್ಲಿದ್ದ ಪಿತ್ರಾದಿಗಳನ್ನು ಇಟ್ಟುಕೊಳ್ಳಬೇಕು. ಅವರು ಮೋಕ್ಷಯೋಗ್ಯರೇ ಆಗಿರಬೇಕು. ಮೋಕ್ಷಕ್ಕೆ ಅಯೋಗ್ಯರಾಗಿದ್ದರೆ ಮುಕ್ತರಿಗೆ ಅವರನ್ನು ನೋಡಲಿಕ್ಕೆ ಇಚ್ಛೆಯೇ ಬರಲಾರದು. (2) ಗಂಧ ಮಾಲಿಕೆ ಮೊದಲಾದವು ಆ ಕಾಲದಲ್ಲಿದ್ದವುಗಳೇ ಮುಕ್ತರ ಇಚ್ಛೆಯಿಂದ ಸಿಗುತ್ತವೆ. ಇಲ್ಲಿ ಲೋಕಶಬ್ದದಿಂದ ನೋಡುವಿಕೆ, ಭೋಗ ಎಂಬ ಎರಡು ಅರ್ಥಗಳನ್ನು ಇಟ್ಟುಕೊಳ್ಳಬೇಕು. ॥ ೧೦–೨ ॥ ॥ ೧೦ ॥

ಪೀ—ಮುಕ್ತರ ಕಾಮವು ಸತ್ಯವೆಂದು ಹೇಳಿಯಿದೆ. ಇದರಿಂದ ಪಿತ್ರಾದಿಗಳನ್ನು ನೋಡಲಿಚ್ಛಿಸಿದರೆ—ಅದೆಲ್ಲವೂ ಸತ್ಯವೇ ಆಗುತ್ತದೆಂದು ಉಕ್ತವಾಯಿತು. ಅದನ್ನೇ ದೃಷ್ಟಾಂತ ಕೊಟ್ಟು ದೃಢೀಕರಿಸುತ್ತಾರೆ—

ಭಾ. ॥ ಯಥಾ ಬಿಂಬಾನುಸಾರೇಣ ಪ್ರತಿಬಿಂಬಪ್ರಕಾಶನಂ ॥ ೧, ೨, ೩, ೪, ೫, ೬, ೭, ೮, ೯, ೧೦ ॥ ಇತಿ ದ್ವಿತೀಯಃ ಖಂಡಃ ॥ ೧೦–೨ ॥ ॥ ೧೦ ॥

ಅ ॥ ಬಿಂಬಧರ್ಮವನ್ನೆ ನುಸರಿಸಿ ಪ್ರತಿಬಿಂಬವು ಪ್ರಕಾಶಿಸುವಂತೆ ಶ್ರೀಹರಿಯ ಇಚ್ಛೆಯನ್ನ ನುಸರಿಸಿಯೇ ಮುಕ್ತರ ಎಲ್ಲಾ ಇಚ್ಛೆಗಳೂ ಸತ್ಯಗಳೇ ಆಗುತ್ತವೆ. ॥ ೧೦–೨ ॥ ॥ ೧೦ ॥

ಎರಡನೇ ಖಂಡವು ಮುಗಿಯಿತು.

೩ನೇ ಖಂಡವು

ಪೀ—ಮುಕ್ತರಿಗೆ ಹೇಳಿದ ಸತ್ಯಕಾಮತ್ವವು ಸಂಸಾರದಲ್ಲಿರುವಾಗಲೂ ಇರತಕ್ಕುದೇ ಮೋಕ್ಷದಲ್ಲಿ ಪ್ರಕಟವಾಗುತ್ತದೆ. ಹಾಗಾದರೆ ಸಂಸಾರದಲ್ಲಿರುವಾಗ ತೋರದಿರಲಿಕ್ಕೆ ಪ್ರತಿಬಂಧಕವು ಯಾವುದೆಂದರೆ—

ಉ. ॥ ತ ಇಮೇ ಸತ್ಯಾಃ ಕಾಮಾ ಅನೃತಾಪಿಧಾನಾಸ್ತೇಷಾಂ ಸತ್ಯಾನಾಂ ಸತಾಮನೃತಮಪಿಧಾನಂ ಯೋ ಯೋ ಹ್ಯಸ್ಯೇತಃ ಪ್ರೈತಿ ನ ತಮಿಹ ದರ್ಶನಾಯ ಲಭತೇ ॥ ೧ ॥

ಅ ॥ ಮುಕ್ತಿಯೋಗ್ಯರಿಗೆ ಮೋಕ್ಷದಲ್ಲಿ ಪ್ರಕಟಗಳಾಗುವ ಕಾಮಗಳು ಸತ್ಯಗಳೇ ಆದರೂ, ಮೋಕ್ಷವಾಗುವುದಕ್ಕಿಂತ ಮೊದಲು ಅನೃತ (ಅನಾದ್ಯಜ್ಞಾನ)ದಿಂದ ಮರೆಮಾಡಲ್ಪಟ್ಟಿವೆ. (ಆದಕಾರಣ ಸಂಸಾರದಲ್ಲಿ ವ್ಯಕ್ತಗಳಾಗುವುದಿಲ್ಲ.) (ಆದನ್ನು ವಿವರಿಸುತ್ತಾರೆ—) ಮೊದಲು ಇದ್ದ ಸತ್ಯಕಾಮಗಳೇ (ಅನೃತಾಪಿಧಾನಾಃ=) ಅನಾದಿಯಾದ ಅಜ್ಞಾನದಿಂದ ಮುಚ್ಚಲ್ಪಟ್ಟಿವೆ. ಅಮುಕ್ತರ ಸತ್ಯಕಾಮತ್ವಾದಿಗಳಿಗೆ ಅನಾದ್ಯಜ್ಞಾನವು ಮರೆಯಾಗಿರುವುದರಿಂದ ಮೋಕ್ಷವನ್ನು ಹೊಂದದಿರುವ ಮೋಕ್ಷ ಹೊಂದಲಿಕ್ಕೆ ಯೋಗ್ಯರಾದ ಜೀವರ ತಂದೆ-ತಾಯಿ ಮೊದಲಾದವರು ಈ ಲೋಕದಿಂದ ಮೃತರಾಗಿ ಪರಲೋಕಕ್ಕೆ ಹೋದಾಗ ಮೃತರಾದ ಪಿತ್ರಾದಿಗಳನ್ನು ಆಯುಕ್ತರು ನೋಡಲಿಚ್ಛಿಸಿದರೂ ನೋಡಲಿಕ್ಕೆ ಈಲೋಕದಲ್ಲಿ ಸಮರ್ಥರಾಗುವುದಿಲ್ಲ. (ಅಂದರೆ ಸಂಸಾರಿ ಜೀವರ ಸತ್ಯಕಾಮತ್ವಾದಿಗಳಿಗೆ ಅಜ್ಞಾನವು ಮರೆಯಾಗಿರುವುದರಿಂದ ಆ ಸಂಸಾರಿಗಳು ಸ್ವರ್ಗಸ್ಥರಾದ ಪಿತ್ರಾದಿಗಳನ್ನು ನೋಡಲಿಕ್ಕೆ ಸಮರ್ಥರಾಗುವುದಿಲ್ಲ.) ॥ ೧ ॥

ಪೀ—ಅನಾದಿಯಾದ ಅಜ್ಞಾನವು ನಿವೃತ್ತವಾದರೆ ಸರ್ವಾಭೀಷ್ಟವೂ ಸಿಗುತ್ತದೆ ಎನ್ನುತ್ತಾರೆ—

ಉ. ॥ ಅಥ ಯೇ ಚಾಸ್ಯೇಹ ಜೀವಾ ಯೇ ಚ ಪ್ರೇತಾ ಯಚ್ಚಾನ್ಯದಿಚ್ಛನ್ನ ಲಭತೇ ಸರ್ವಂ ತದತ್ರ ಗತ್ವಾ ವಿಂದತೇಽತ್ರ ಹ್ಯಸ್ಯೈತೇ ಸತ್ಯಾಃ ಕಾಮಾ(ಅನೃತಾಪಿಧಾನಾ)ಸ್ತದ್ಯಥಾಽಪಿ ಹಿರಣ್ಯನಿಧಿಂ ನಿಹಿತಮಕ್ಷೇತ್ರಜ್ಞಾ ಉಪರ್ಯುಪರಿ ಸಂಚರಂತೋ ನ ವಿಂದೇಯುರೇವಮೇವೇಮಾಃ ಸರ್ವಾಃ ಪ್ರಜಾ ಅಹರಹರ್ಗಚ್ಛಂತ್ಯ ಏತಂ ಬ್ರಹ್ಮಲೋಕಂ ನ ವಿಂದಂತ್ಯನೃತೇನ ಹಿ ಪ್ರತ್ಯೂಢಾಃ ॥ ॥ ೨ ॥

ಅ ॥ ಮೋಕ್ಷವನ್ನು ಹೊಂದಲು ಯೋಗ್ಯರಾದ ಮೋಕ್ಷವನ್ನು ಹೊಂದದಿರುವ ಜೀವರ ಪಿತ್ರಾದಿಗಳು ಜೀವಿಸಿಕೊಂಡಿದ್ದರೂ, ಮರಣ ಹೊಂದಿದರೂ ಅವರನ್ನು ನೋಡಬೇಕೆಂದು ಇಚ್ಛಿಸಿದರೂ ಅಮುಕ್ತರು ಅವರ ದರ್ಶನಾದಿಗಳನ್ನು ಹೊಂದುವುದಿಲ್ಲ. ಬೇರೆ ಗಂಧಮಾಲ್ಯಾದಿಗಳನ್ನು ಇಚ್ಛಿಸಿದರೆ ಲೋಕದಲ್ಲಿ ಸಂಸಾರದಶೆಯಲ್ಲಿ ಹೊಂದುವುದಿಲ್ಲ. ಅವೆಲ್ಲವನ್ನು ಅಜ್ಞಾನ ನಿವೃತ್ತಿಯಾಗಿ ಮುಕ್ತನಾಗಿ ವೈಕುಂಠವೊದಲಾದ ವಿಷ್ಣುಲೋಕಕ್ಕೆ ಹೋದಮೇಲೆ ಹೊಂದುತ್ತಾನೆ (ಹೇಗೆಂದರೆ) ಮುಕ್ತನಿಗೆ ಮೋಕ್ಷದಲ್ಲಿ ಸತ್ಯ

ಕಾಮುಗೆಳು ಸ್ವರೂಪಭೂತವಾದವುಗಳು (ಪ್ರಕಟಗಳಾಗುತ್ತವೆ.) ಅಮುಕ್ತಿದಶೆಯಲ್ಲಿ ಸಂಸಾರದಲ್ಲಿರುವಾಗ ಸ್ವರೂಪಭೂತಗಳಾದ ಕಾಮುಗಳು ಅನಾದ್ಯಜ್ಞಾನದಿಂದ ಮರೆಮಾಡಲ್ಪಟ್ಟಿವೆ. (ಹೃತ್ಪುಂಡರೀಕಾಕಾಶದಲ್ಲಿ ಪರಬ್ರಹ್ಮನು ಇದ್ದರೆ ಪ್ರತಿನಿತ್ಯ ಅಲ್ಲಿಗೆ ಹೋಗತಕ್ಕ ನಮುಗೆ ಆತನು ಏಕೆ ಕಾಣುವುದಿಲ್ಲ? ಕಾಣದಿರುವುದರಿಂದ ಹೃತ್ಪದ್ಮಾಕಾಶದಲ್ಲಿ ಪರಬ್ರಹ್ಮನು ಇಲ್ಲ ಎಂಬ ಆಶಂಕೆಯನ್ನು ದೃಷ್ಟಾಂತ ಕೊಟ್ಟು ಪರಿಹರಿಸುತ್ತಾರೆ—) ಹಿರಣ್ಯನಿಧಿಯು (ದ್ರವ್ಯರಾಶಿಯು) ಹುಗಿಸುಲ್ಪಟ್ಟರೂ ಹುಗಿದಿಟ್ಟ ಸ್ಥಳವನ್ನರಿಯದವರು ಅದರ ಮೇಲೆಮೇಲೆ ಸಂಚರಿಸುತ್ತಿದ್ದರೂ ಆ ದ್ರವ್ಯರಾಶಿಯನ್ನು ನೋಡುವುದಿಲ್ಲ, ತಿಳಿಯುವುದಿಲ್ಲ. ಹೀಗೆಯೇ ಸಂಸಾರದಲ್ಲಿರುವ ಎಲ್ಲಾ ಪ್ರಜೆಗಳೂ ಪ್ರತಿನಿತ್ಯವೂ ಸರ್ವಾಶ್ರಯನಾದ ಪರಬ್ರಹ್ಮನನ್ನು ಸುಷುಪ್ತಿಕಾಲದಲ್ಲಿ ಹೊಂದಿದರೂ ಅನಾದಿಯಾದ ಅಜ್ಞಾನದಿಂದ ಮುಚ್ಚಲ್ಪಟ್ಟಿರುವುದರಿಂದ (ಕೂಡಿರುವುದರಿಂದ) ತಿಳಿಯುವುದಿಲ್ಲ. ॥ ೨ ॥

ಪೀ—ಹೀಗೆ ಹೃದಯಾಕಾಶದಲ್ಲಿದ್ದ ಶ್ರೀಹರಿಯು ತೋರದಿರಲಿಕ್ಕೆ ಅಜ್ಞಾನವು ಕಾರಣವಾಗಿರುವುದರಿಂದ ಅದರ ಸಾಮರ್ಥ್ಯದಿಂದ ಹೃದಯಾಕಾಶದಲ್ಲಿ ಪರಬ್ರಹ್ಮನು ಇಲ್ಲವೆಂದು ಕಲ್ಪಿಸಕೂಡದೆನ್ನುತ್ತಾರೆ—

ಉ. ॥ ಸ ವಾ ಏಷ ಆತ್ಮಾ ಹೃದಿ ತಸ್ಯೈತದೇವ ನಿರುಕ್ತꣳ ಹೃದ್ಯಮಿತಿ ತಸ್ಮಾದ್ಧೃದಯಮಹರಹರ್ವಾ ಏವಂವಿತ್ ಸ್ವರ್ಗಂ ಲೋಕಮೇತಿ ॥ ॥ ೩ ॥

ಅ ॥ ಆ ಈ ಪರಮಾತ್ಮನು ಹೃದಯಾಕಾಶದಲ್ಲಿರತಕ್ಕವನು ತೋರುವುದಿಲ್ಲ. (ಹೃತ್ಪುಂಡರೀಕಾಕಾಶದಲ್ಲಿದ್ದವನಿಗೆ ಆಕಾಶ ಎಂಬ ಒಂದು ನಾಮವು ಹೇಳಿಯದೆ. ಆತನಿಗೇನೇ ಇನ್ನೊಂದು ಹೆಸರನ್ನು ಹೇಳುತ್ತಾರೆ—) ಹೃತ್ಪುಂಡರೀಕಾಕಾಶದೊಳಗಣ ಶ್ರೀಹರಿಗೆ ಹೃದಯವಲ್ಲಿರುವುದರಿಂದ ಹೃದಯ ಎಂಬ ನಾಮಧೇಯವು, ಎಂಬುದೇ ಅವಯವಾರ್ಥವನ್ನು ಹೇಳುವುದು. ಅದುಕಾರಣ ಹೃದಯಂ ಎಂಬ ನಾಮಧೇಯವು. (ಹೃದಯನೆನಿಸಿದ ಶ್ರೀಹರಿಯನ್ನು ತಿಳಿದವನಿಗೆ ಫಲ ಹೇಳುತ್ತಾರೆ—) ನಿತ್ಯದಲ್ಲಿಯೂ ಹಿಂದೆ ಹೇಳಿದ ಪ್ರಕಾರ ಹೃದಯನೆನಿಸಿದ ವಿಷ್ಣುವನ್ನು ತಿಳಿದವನು ವೈಕುಂಠಕ್ಕೆ ಹೋಗುತ್ತಾನೆ. ॥ ೩ ॥

ಪೀ—ಜ್ಞಾನಸಾಮರ್ಥ್ಯದಿಂದಲೇ ಮುಕ್ತನಾಗುವುದಿಲ್ಲ. ಪರಂತು ಭಗವತ್ಪ್ರಸಾದದಿಂದಲೇ ಮುಕ್ತನಾಗುತ್ತಾನೆನ್ನುತ್ತಾರೆ—

ಉ. ॥ ಅಥ ಯ ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತ ಏಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ಬ್ರಹ್ಮೇತಿ ತಸ್ಯ ಹ ವಾ ಏತಸ್ಯ ಬ್ರಹ್ಮಣೋ ನಾಮ ಸತ್ಯಮಿತಿ ॥ ೪ ॥

ಆ ॥ ಶ್ರೀಹರಿಯ ಪ್ರಸಾದವುಳ್ಳ ಜ್ಞಾನಿಯು ಅಂತಿಮ ಶರೀರದಿಂದ ಹೊರಟು ಜ್ಯೋತೀರೂಪನಾದ ಪರಬ್ರಹ್ಮನನ್ನು ಹೊಂದಿದವನಿಗೆ ಜ್ಞಾನಾನಂದ ಮೊದಲಾದ ಆಪ್ರಾಕೃತ ಶುದ್ಧ ಸ್ವರೂಪವು ಬರುತ್ತದೆ. (ಅಂದರೆ ತನ್ನ ಸ್ವರೂಪವು ಪ್ರಕಟವಾಗುತ್ತದೆ.) ಪರಂಜ್ಯೋತಿಃಶಬ್ದದಿಂದ ಹೇಳಲ್ಪಟ್ಟವನು ಪರಮಾತ್ಮನು. (ಶರೀರದಲ್ಲಿರುವ ಜೀವನಲ್ಲ.) ಎಂದು ಮಂತ್ರವನ್ನು ಕಂಡಿರುವ ರಮಾದೇವಿಯು ಹೇಳಿದಳು.

ಪರಂಜ್ಯೋತಿಃಶಬ್ದದಿಂದ ಹೇಳಲ್ಪಟ್ಟವನು ನಿತ್ಯಮುಕ್ತನು, ಯಾವಾಗಲೂ ಭಯವಿಲ್ಲದವನು, ಗುಣ ಪೂರ್ಣನು, ಎಂದೂ ಹೇಳಿದಳು. ಅಂತಹ ಬ್ರಹ್ಮನಿಗೆ ಸತ್ಯಂ ಎಂಬ ನಾಮವಾಗುತ್ತದೆ. ॥ ೪ ॥

ಪೀ—ಸತ್ಯಂ ಎಂಬ ನಾಮಧೇಯದ ಅರ್ಥಹೇಳುವುದಕ್ಕಾಗಿ ಅದರ ಅಕ್ಷರಗಳನ್ನು ಹೇಳುತ್ತಾರೆ—

ಉ. ॥ ತಾನಿ ಹ ವಾ ಏತಾನಿ ತ್ರೀಣ್ಯಕ್ಷರಾಣಿ ಸತ್-ಇತಿ-ಯಮಿತಿ ತದ್ಯತ್ಸ-ತ್ತದಮೃತಮಥ ಯೆತ್ತಿ ತನ್ಮರ್ತ್ಯಮಥ ಯದ್ಯಂತೇನೋಭೇ ಯಚ್ಛತಿ ಯದ-ನೇನೋಭೇ ಯಚ್ಛತಿ ತಸ್ಮಾದ್ಯಮಹರಹರ್ವಾ ಏವಂವಿತ್ ಸ್ವರ್ಗಲೋಕ-ಮೇತಿ॥ ಇತಿ ತೃತೀಯಃ ಖಂಡಃ॥ ೧೧–೩ ॥ ॥ ೫ ॥

ಅ ॥ ಸತ್ಯಂ ಎಂಬಲ್ಲಿ ಸತ್ ತಿ ಯಂ ಎಂದು ಮೂರು ಅಕ್ಷರಗಳು. ಮೂರು ಅಕ್ಷರಗಳಲ್ಲಿ ಸತ್ ಎಂಬ ಅಕ್ಷರವು ಮುಕ್ತರ ಸಮೂಹವನ್ನೂ, ತಿ ಎಂಬ ಅಕ್ಷರವು ಸಂಸಾರಿ ಜೀವರನ್ನೂ ಹೇಳುತ್ತದೆ. ಯಂ ಎಂಬ ಅಕ್ಷರದಿಂದ ಮುಕ್ತ ಅಮುಕ್ತ ಇವರ ಸಮೂಹಗಳನ್ನು ಪ್ರೇರಿಸುವವನು ಎಂಬ ಅರ್ಥವು ಸಿಗುತ್ತದೆ. ಮುಕ್ತಾಮುಕ್ತರನ್ನು ಪ್ರೇರಿಸುವುದರಿಂದ ಶ್ರೀಹರಿಗೆ ಯಂ ಯತ್ ಎಂದು ಹೆಸರು. (ಹೀಗೆ ತಿಳಿದವನಿಗೆ ಫಲಹೇಳುತ್ತಾರೆ—) ಸತ್ಯನೆಂದರೆ ಮುಕ್ತಾಮುಕ್ತರಿಗೆ ನಿಯಾಮಕನೆಂದು ಸದಾ ತಿಳಿದವನು ವೈಕುಂಠಕ್ಕೆ ಹೋಗುತ್ತಾನೆ. ॥ ೧೧—೩ ॥ ॥ ೫ ॥

ಪೀ—ಮುಕ್ತರಿಗೆ ಮೋಕ್ಷದಲ್ಲಿ ಸತ್ಯಕಾಮತ್ವವಿದ್ದರೆ ಮುಕ್ತರ ಧರ್ಮಗಳು ಅವರ ಸ್ವಭಾವವು ಆಗಿರುವುದರಿಂದ ಸಂಸಾರದಲ್ಲಿ ಇರುವಾಗಲೂ ಸತ್ಯಕಾಮತ್ವವು ಬರಬೇಕಾಗುವುದು ಎಂದರೆ—

ಭಾ. ॥ (೧) ತಸ್ಮಾದ್ಯೇ ಮುಕ್ತಿಯೋಗ್ಯಾಃ ಸ್ಯುಸ್ತೇಷಾಂ ಕಾಮಾಃ ಪುರಾಽಪಿ ತು । ಸಕ್ಯಾಃ ಸಂತಸ್ತದಜ್ಞಾನಾನ್ನ ದೃಶ್ಯಂತೇ ತಥಾಽಖಿಲಾಃ ॥ (೨) ಅಜ್ಞಾನಮನೃತಂ ಪ್ರೋಕ್ತಮೃಗತಾವಿತಿ ಧಾತುತಃ ॥ (೩) ತಸ್ಮಾದ್ದ್ರಷ್ಟುಂ ಯದಿಷ್ಟಂ ಸ್ಯಾತ್ತದ್ದೃಷ್ಟಿನಿಯಮೋ ನ (ತ್ತದ್ದುಷ್ಟಂ ನಿಯಮೇನ) ತು । ಅಮುಕ್ತಸ್ಯ ॥ (೪) ಹರೇರ್ಲೋಕಂ ಮುಕ್ತೋ ಗತ್ವಾ ಹಿ ಪಶ್ಯತಿ ॥ (೫) ಅಜ್ಞತ್ವಾದೇವ ಸುಪ್ತೌ ತು ನಿತ್ಯಂ ಯಾಂತೋಽಪಿ ಮಾಧವಂ । ನೈವ ಪಶ್ಯಂತ್ಯಸೌ ವಿಷ್ಣುರ್ಹೃದಯಂ ನಾಮ ಹೃದ್ಗತೇಃ ॥ ೧ ॥

ಅ ॥ (೧) ಯಾವ ಜೀವರು ಮೋಕ್ಷ ಹೊಂದಲಿಕ್ಕೆ ಯೋಗ್ಯರೋ ಅವರ ಕಾಮಗಳು ಸಂಸಾರದಲ್ಲಿಯೂ ಸತ್ಯಗಳೇ ಆದರೂ ಶ್ರೀಹರಿಯ ಜ್ಞಾನವನ್ನು ಹೊಂದದಿರುವುದರಿಂದ ಮೋಕ್ಷದಲ್ಲಿ ಎಲ್ಲಾ ಕಾಮಗಳನ್ನು ಹೊಂದುವಂತೆ ಸಂಸಾರದಲ್ಲಿ ಎಲ್ಲಾ ಕಾಮಗಳನ್ನು ಹೊಂದುವುದಿಲ್ಲ. (೨) ಋ ಎಂಬ ಧಾತುವು ಗತಿ=ಜ್ಞಾನ ಎಂಬ ಅರ್ಥದಲ್ಲಿದೆ ಋತಂ=ಜ್ಞಾನವು ಜ್ಞಾನಕ್ಕೆ ವಿರುದ್ಧವಾದ ಅಜ್ಞಾನವು ಅನೃತ ಎನಿಸುತ್ತದೆ. (೩) (ಯೋ ಯೋ ಹ್ಯಸ್ಯೇತಃ ಪ್ರೈತಿ ಎಂಬುದಕ್ಕೆ ಅರ್ಥಹೇಳುತ್ತಾರೆ—) ಮುಕ್ತಿಯೋಗ್ಯರಾದವರ ಸತ್ಯಕಾಮತ್ವವು ಸಂಸಾರದಲ್ಲಿರುವಾಗ ಅಜ್ಞಾನದಿಂದ ಮರೆಮಾಡಲ್ಪಟ್ಟಿರುವುದರಿಂದ ಅಮುಕ್ತರಿಗೆ ಯಾವುದನ್ನಾದರೂ ನೋಡಲಿಕ್ಕೆ ಇಚ್ಛೆಯುಂದರೆ ನಿಯಮದಿಂದ ಅವುಗಳ ದರ್ಶನವು ಆಗುವುದಿಲ್ಲ. (೪) (ತನೇ ಮಂತ್ರದಲ್ಲಿದ್ದ ಸರ್ವಂ ತದಪ್ಯ ಎಂಬುದಕ್ಕೆ ಅರ್ಥಹೇಳುತ್ತಾರೆ—) (ಅಪರೋಕ್ಷಜ್ಞಾನಿಯು) ಮುಕ್ತನಾಗಿ ವೈಕುಂಠಲೋಕಕ್ಕೆ ಹೋಗಿ ನೋಡಲಿಕ್ಕೆ ಯಾವುದು ಇಷ್ಟವಾಗುತ್ತದೋ ತನ್ನ ಇಷ್ಟದಂತೆ ಅವೆಲ್ಲವನ್ನು ನೋಡುತ್ತಾನೆ. (೫) ತನೇ ಮಂತ್ರದಲ್ಲಿದ್ದ ಇಮಾಃ ಸರ್ವಾಃ

....ಪ್ರತ್ಯುತ್ಥಾಃ ಎಂಬ ವಾಕ್ಯದ ತಾತ್ಪರ್ಯ ಹೇಳುತ್ತಾರೆ–) ಅನಾದಿಯಾದ ಅಜ್ಞಾನದಿಂದ ಕೂಡಿರುವುದರಿಂದಲೇ ಸುಷುಪ್ತಿಕಾಲದಲ್ಲಿ ಪ್ರತಿನಿತ್ಯವೂ ಶ್ರೀಹರಿಯನ್ನು ಹೊಂದುತ್ತಿರುವವರಾದರೂ ಆ ಶ್ರೀಹರಿಯನ್ನು ನೋಡುವುದಿಲ್ಲ. ಸರ್ವರ ಹೃದಯದಲ್ಲಿದ್ದುದರಿಂದ ವಿಷ್ಣುವು ಹೃದಯನೆನಿಸುತ್ತಾನೆ. ॥ ೧ ॥

ಪೀ–೫ನೇ ಮಂತ್ರದಲ್ಲಿದ್ದ ಅಹರಹರ್ವಾ ಏವಂ ಎಂಬ ವಾಕ್ಯದ ಅರ್ಥ ಹೇಳುತ್ತಾರೆ–

ಭಾ. ॥ (೧) ಏವಂ ಹೃದಯನಾಮಾನಂ ವಿಷ್ಣುಂ ಜಾನನ್ನಿ ನಿತ್ಯಶಃ । ವಿಷ್ಣುಲೋಕಗತೇಃ ಪುಣ್ಯಮಾಪ್ನೋತಿ ವಿಷ್ಣುಂ ವ್ರಜೇತ್ತಥಾ ॥ (೨) ಯಸ್ಯ ಸಮ್ಯಕ್ಪ್ರಸಾದೋಽಸ್ತಿ ವಿಷ್ಣೋರೇವ ಸ ಉಚ್ಯತೇ । ಸಂಪ್ರಸಾದಃ ಸ ಉತ್ಥಾಯ ಶರೀರಾತ್ಪಾಪ್ಯ ಕೇಶವಂ ॥ ಯಥಾ ಸ್ವರೂಪಸ್ತು ಭವೇತ್ ॥ (೩) ಯಂ ಪ್ರಾಪ್ಯಾಸೌ ಸ್ವರೂಪತಾಂ । ಆಪ್ನೋತಿ ಸ ಪರೋ ಹ್ಯಾತ್ಮಾ ಭಗವಾನಿಂದಿರಾಪತಿಃ । ಇತ್ಯಾಹ ಸಾ ರಮಾದೇವೀ ಪಶ್ಯಂತೀ ಪರಮಂ ಪದಂ ॥ (೪) ಸದಿತ್ಯಮೃತಧರ್ಮಾಣೋ ಮುಕ್ತಾಃ ಶ್ರೀರಪಿ ಚೇರಿತಾಃ । ತೀತ್ಯುಕ್ತಾ ಮರ್ತ್ಯಧರ್ಮಾಣಸ್ತೇಷಾಂ ನಿಯಮನಾದ್ಧರಿಃ । ಸತ್ಯಮಿತ್ಯುಚ್ಯತೇ ಸದ್ಭಿಃ ॥ ೧,೨,೩,೪,೫ ॥ ಇತಿ ತೃತೀಯಃ ಖಂಡಃ ॥ ೧೦–೩ ॥ ॥ ೨ ॥

ಅ ॥ (೧ ಹೀಗೆ ಹೃದಯನೆಂದು ಹೆಸರುಳ್ಳ ವಿಷ್ಣುವನ್ನು ನಿತ್ಯದಲ್ಲಿಯೂ ತಿಳಿದವನು ಸ್ವರೂಪಭೂತರಮಣ ಜ್ಞಾನಸ್ವರೂಪನಾದುದರಿಂದ ಸ್ವರ್ಗ ಎನಿಸಿದ ವಿಷ್ಣುವಿನ ಲೋಕಕ್ಕೆ ಹೋಗಿ ಅಲ್ಲಿದ್ದು ತಮ್ಮ ತಮ್ಮ ಸ್ವರೂಪದ ಆವಿರ್ಭಾವಕ್ಕೆ ಅನುಗುಣವಾದ ಪುಣ್ಯ ಸಂಪಾದನೆಮಾಡಿ ಚತುರ್ಮುಖಬ್ರಹ್ಮನೊಡನೇ ಶ್ರೀವಿಷ್ಣುವನ್ನು ಹೊಂದುವನು. (೨) (ಯ ಏಷ ಸಂಪ್ರಸಾದಃ ಎಂಬ ೪ನೇ ಮಂತ್ರದ ಅರ್ಥಹೇಳುತ್ತಾರೆ–) ಯಾವ ಜ್ಞಾನಿಗೆ ವಿಷ್ಣುವಿನ ಜೀನ್ನಾಗಿ ಪ್ರಸಾದವಾಗುತ್ತದೋ. ಅಂತಹ ಭಗವದನುಗ್ರಹವುಳ್ಳ ಜ್ಞಾನಿಯು ಈ ಶರೀರದಿಂದ ಹೊರಟು ಶ್ರೀಹರಿಯನ್ನು ಹೊಂದಿ ಜ್ಞಾನ ಆನಂದ ಮೊದಲಾದ ಶುದ್ಧ ಸ್ವರೂಪವುಳ್ಳವನಾಗುತ್ತಾನೆ (೩) (ವಿಷ ಆತ್ಮಾ ಎಂಬ ವಾಕ್ಯದ ಅರ್ಥಹೇಳುತ್ತಾರೆ—) ಯಾವ ಶ್ರೀಪರಬ್ರಹ್ಮವನ್ನು ಹೊಂದಿ ಜೀವರು ಶುದ್ಧಸ್ವರೂಪವನ್ನು ಹೊಂದುತ್ತಾರೋ. ಅಂತಹ ಆತ್ಮನು ಲಕ್ಷ್ಮೀಪತಿಯಾದ ಶ್ರೀಹರಿಯು, ಎಂದು ಭಗವತ್ಸ್ವರೂಪವನ್ನು ನೋಡುತ್ತಿರುವ ಲಕ್ಷ್ಮೀದೇವಿಯು ಹೇಳಿದಳು (೪) (೪ನೇ ಮಂತ್ರದಲ್ಲಿದ್ದ ತಸ್ಯ ಹ ವಾ ಏತಸ್ಯ ಎಂಬುದಕ್ಕೆ ಅರ್ಥಹೇಳುತ್ತಾರೆ.) ಸತ್ಯಂ ಎಂಬಲ್ಲಿದ್ದ ಸತ್ ಎಂಬುದರಿಂದ ನಾಶವಾಗದ ಜ್ಞಾನಾದಿಧರ್ಮಗಳುಳ್ಳ ಮುಕ್ತರೂ ಲಕ್ಷ್ಮೀದೇವಿಯೂ ಹೇಳಲ್ಪಡುತ್ತಾರೆ ತಿ ಎಂಬುದರಿಂದ ನಾಶವಾಗುವ ಧರ್ಮಗಳುಳ್ಳ ಸಂಸಾರಿ ಜೀವರು ಹೇಳಲ್ಪಡುತ್ತಾರೆ. ಅವರೆಲ್ಲರನ್ನು ಶ್ರೀಹರಿಯು ಪ್ರೇರಿಸುವುದರಿಂದ ಸತ್ಯನೆಂದು ಸಜ್ಜನರಿಂದ ಹೇಳಲ್ಪಡುತ್ತಾನೆ. ॥೧೦–೩॥೨॥

ಮೂರನೇ ಖಂಡವು ಮುಗಿಯಿತು.

೪ನೇ ಖಂಡವು

ಪೀ–ಹೃತ್ಪದ್ಮದಲ್ಲಿರತಕ್ಕ ಶ್ರೀಹರಿಯನ್ನು ಧ್ಯಾನಿಸುವುದಕ್ಕಾಗಿ ಇನ್ನೊಂದು ಮಹಿಮೆ ಹೇಳುತ್ತಾರೆ–

ಉ. ॥ ಅಥ ಯ ಆತ್ಮಾ ಸ ಸೇತುರ್ವಿಧೃತಿರೇಷಾಂ ಲೋಕಾನಾಮಸಂಭೇದಾಯ ನೈತꣳ ಸೇತುಮಹೋರಾತ್ರೇ ತರತೋ ನ ಜರಾ ನ ಮೃತ್ಯುರ್ನ ಶೋಕೋ ನ ಸುಕೃತಂ ನ ದುಷ್ಕೃತ ॥ ೧ ॥

ಅ ॥ ಹೃತ್ಪದ್ಮದೊಳಗಣ ಶ್ರೀಹರಿಯು ಈ ಲೋಕಗಳೆಲ್ಲವೂ ಒಟ್ಟು ಸೇರಿ ಒಂದಾಗಬಾರದೆಂಬುದ ಕ್ಕಾಗಿಯೂ, ಒಡೆದು ಹೋಗಬಾರದೆಂಬುದಕ್ಕಾಗಿಯೂ ಆಶ್ರಯನಾಗಿರುತ್ತಾನೆ. ಪ್ರಮಾಣ ಪ್ರಸಿದ್ಧಗಳಾದ ಎಲ್ಲಾ ಲೋಕಗಳನ್ನು ವಿಶೇಷವಾಗಿ ಧರಿಸಲು ಸಮರ್ಥನು. (ಅಂದರೆ ಶ್ರೀಹರಿಯು ಲೋಕಗಳಿಗೆ ಆಶ್ರಯನಾಗದಿದ್ದರೆ ಲೋಕಗಳೆಲ್ಲವೂ ಆಧಾರವಿಲ್ಲದೆ ಒಂದು ಕಡೆ ಒಟ್ಟು ಸೇರಬೇಕಾದೀತು. ಅಥವಾ ಒಡೆದು ಹೋಗುವವು) ಈ ಸರ್ವಾಶ್ರಯನಾದ ಶ್ರೀಹರಿಯನ್ನು ಅಹೋರಾತ್ರಾಭಿಮಾನಿಗಳು ಮಾರಿ ಹೋಗುವುದಿಲ್ಲ. (ಅವುಗಳನ್ನೇ ಮಾರಿ ಇರುತ್ತಾನೆ. ಅಹೋರಾತ್ರಗಳು ಮಾಡುವ ವಿಕಾರಗಳು ಶ್ರೀಹರಿಗೆ ಉಂಟಾಗುವುದಿಲ್ಲ.) (ಅದನ್ನೇ ವಿವರಿಸುತ್ತಾರೆ) ಮುದಿತನವೂ, ಮರಣವೂ, ಶೋಕವೂ, ಸುಕೃತದುಷ್ಕೃತಗಳೂ ಶ್ರೀಹರಿಯನ್ನು ಹೊಂದುವುದಿಲ್ಲ. ॥ ೧ ॥

ಉ. ॥ ಸರ್ವೇ ಪಾಪ್ಮಾನೋಽತೋ ವನಿರ್ತಂತೇಽಪಹತಪಾಪ್ಮಾ ಹ್ಯೇಷ ಬ್ರಹ್ಮಲೋಕಃ ತಸ್ಮಾದ್ವಾ ಏತಂ ಸೇತುಂ ತೀರ್ತ್ವಾಽಂಧಃ ಸನ್ನಂಧೋ ಭವತಿ ವಿದ್ಧಃ ಸನ್ನವಿದ್ಧೋ ಭವತ್ಯುಪತಾಪೀ ಸನ್ನನುಪತಾಪೀ ಭವತಿ ತಸ್ಮಾದ್ವಾ ಏತಂ ಸೇತುಂ ತೀರ್ತ್ವಾಽಪಿ ನಕ್ತಮುಹರೇವಾಭಿನಿಷ್ಪದ್ಯತೇಽಸಕೃದ್ವಿಭಾತೋ ಹ್ಯೇವೈಷ ಬ್ರಹ್ಮಲೋಕಃ ॥ ೨ ॥

ಅ ॥ ಎಲ್ಲಾ ಪಾಪಗಳೂ ಪರಮಾತ್ಮನಿಂದ ನಿತ್ಯದಲ್ಲಿಯೂ ನಿವೃತ್ತಗಳೇ ಆಗಿವೆ. (ಅಂದರೆ ಸರ್ವ ಪಾಪರಹಿತನು.) ಬ್ರಹ್ಮರೂಪ ಸರ್ವಾಶ್ರಯನಾದ ಶ್ರೀ ಹರಿಯು ಪಾಪಲೇಶರಹಿತನೆಂದು ಪ್ರಸಿದ್ಧನು. (ಮುಕ್ತನು ಹೀಗೆ ಅಲ್ಲ ಎನ್ನುತ್ತಾರೆ—) ಶ್ರೀಹರಿಯು ಪಾಪಲೇಶರಹಿತನಾದುದರಿಂದಲೇ ಆತನ ಅನುಗ್ರಹದಿಂದಲೇ ಸರ್ವಾಶ್ರಯನಾದ ಶ್ರೀಹರಿಯನ್ನು ಹೊಂದಲಿಕ್ಕೆ ಸಂಸಾರವನ್ನು ದಾಟಿ ಮೊದಲು ಅಜ್ಞಾನದಿಂದೊಡಗೂಡಿದವನಾಗಿದ್ದು ಆಮೇಲೆ ಅಜ್ಞಾನವಿಲ್ಲದವನಾಗುತ್ತಾನೆ. ಮೊದಲು ಸಂಸಾರದಲ್ಲಿ ಬೇರೆಯವರ ಕೆಟ್ಟ ಮಾತುಗಳೆಂಬ ಬಾಣಗಳಿಂದ ಹೊಡೆಯಲ್ಪಟ್ಟವನು ಅಂದರೆ ಕೆಟ್ಟ ಮಾತುಗಳಿಂದ ಸಂತಾಪಗೊಂಡವನು ಮುಕ್ತನಾದಾಗ ಕೆಟ್ಟಮಾತುಗಳಿಂದ ಸಂತಾಪ ಇಲ್ಲದವನಾಗುತ್ತಾನೆ. ಮೊದಲು ರೋಗವುಳ್ಳವನು ಮೇಲೆ ರೋಗವಿಲ್ಲದವನಾಗುತ್ತಾನೆ (ಹೀಗೆಯೇ ಸಮಸ್ತಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ-)ಹೀಗೆಮುಕ್ತನು ಪಾಪರಹಿತನಾಗಿ ಭಗವತ್ಪ್ರಸಾದದಿಂದಲೇ ಶ್ರೀಹರಿಯನ್ನು ಹೊಂದುವುದಕ್ಕಾಗಿ ಸಂಸಾರವನ್ನು ದಾಟುತ್ತಾನೆ. ಅಂತಹವನಿಗೆ ರಾತ್ರಿಯೂಕೂಡ ಹಗಲೇ ಆಗುತ್ತದೆ. (ಹೇಗೆಂದರೆ-) ವಿಷ್ಣುಲೋಕವು ಅಥವಾ ಶ್ರೀಹರಿಯು ಯಾವಾಗಲೂ ಪ್ರಕಾಶಿಸಿಕೊಂಡೇ ಇರುತ್ತಾನೆ. ॥ ೨ ॥

ಪೀ—ಹೀಗೆ ಭಗವತ್ಸ್ವರೂಪವನ್ನು ತಿಳಿದವನಿಗೆ ಫಲಹೇಳುತ್ತಾರೆ—

ಉ. ॥ ತದ್ಯ ಏವೈತಂ ಬ್ರಹ್ಮಲೋಕಂ ಬ್ರಹ್ಮಚರ್ಯೇಣಾನುವಿಂದಂತಿ ತೇಷಾಮೇವೈಷ ಬ್ರಹ್ಮಲೋಕಸ್ತೇಷಾꣳ ಸರ್ವೇಷು ಲೋಕೇಷು ಕಾಮಚಾರೋ ಭವತಿ ॥ ಇತಿ ಚತುರ್ಥಃ ಖಂಡಃ ॥ ೧೦-೪ ॥ ॥ ೩ ॥

ಅ ॥ ಅಧಿಕಾರಿಗಳಲ್ಲಿ ಯಾವ ಅಧಿಕಾರಿಗಳು ಪೂರ್ಣನೂ ಸರ್ವಾಶ್ರಯನೂ ಆದ ಶ್ರೀವಿಷ್ಣುವನ್ನು ಮನಸ್ಸು ವಚನ ಕರ್ಮಗಳಿಂದ ವೇದದಲ್ಲಿ ಹೇಳಿದ ಪ್ರಕಾರ ಅನುಷ್ಠಾನ ಮಾಡಿ ತಿಳಿಯುತ್ತಾರೋ, ಹೊಂದುತ್ತಾರೋ. ಅವರಿಗೇನೇ ವೈಕುಂಠ ಲೋಕವು ಸಿಗುವುದು. ಅಥವಾ ಅವರನ್ನೇ ಬ್ರಹ್ಮನು

ಕೃಪೆಯಿಂದ ನೋಡುತ್ತಾನೆ. ತಂತಮಗೆ ಯೋಗ್ಯಗಳಾದ ಎಲ್ಲಾ ಲೋಕಗಳಲ್ಲಿ ಅವರಿಗೆ ಸ್ವೇಚ್ಛಾನುಸಾರ ಸಂಚಾರವಾಗುತ್ತದೆ. ॥ ೧೦—೪ ॥ ॥ ೩ ॥

ಪೀ—ಸೇತುಃ ವಿಧೃತಿಃ ಎಂಬ ಶಬ್ದಗಳ ಅರ್ಥ ಹೇಳುತ್ತಾರೆ—

ಭಾ. ॥ (೧) ಸೇತುಶ್ಚಾಪಿ ವಿಧಾರಣಾತ್ । ಸಿತಮಸ್ಮಿನ್ ಜಗತ್ಸರ್ವಮಿತಿ ಸೇತುರಿತೀರಿತಃ ॥ (೨) ಏತಂ ಸೇತುಂ ಪ್ರತಿ ಪುಮಾನನ್ಯತ್ರೀತ್ವಾ ಹ್ಯದೋಷವಾನ್ ॥ (೩) ಸ ಪ್ರಾಪ್ಯೋ ಬ್ರಹ್ಮಚರ್ಯೇಣ,ಮನೋವಾಕ್ಕರ್ಮಭಿಸ್ತು ಯತ್ । ಚರಣಂ ಬ್ರಹ್ಮಣಿ ಪರೇ ಬ್ರಹ್ಮಚರ್ಯಂ ಹಿ ತತ್ ಸ್ಮೃತಂ ॥ (೪) ತೇನೈವ ಬ್ರಹ್ಮಚರ್ಯೇಣ ಭವೇಯುರ್ಬ್ರಹ್ಮಲೋಕಗಾಃ ॥(೫)ಏತೇಷಾಂ ಬ್ರಹ್ಮಲೋಕಃ ಸ್ಯಾತ್ಪರಂ ಬ್ರಹ್ಮೈವ ಲೋಕನಾತ್ । ಬ್ರಹ್ಮ ಲೋಕ ಇತಿ ಪ್ರೋಕ್ತಂ ತಸ್ಯ ಲೋಕೋಽಪಿ ಕಥ್ಯತೇ ॥ ೧, ೨, ೩ ॥ ಇತಿ ಚತುರ್ಥಃ ಖಂಡಃ ॥ ೧೦—೪ ॥ ॥ ೧ ॥

ಅ ॥ (೧) (ವಾರ್ಸಶ್ರಯನಾದುದರಿಂದ ಶ್ರೀಹರಿಯು) **ಸೇತುವೆಂದೂ**, ಸರ್ವಧಾರಕನಾದುದರಿಂದ **ವಿಧೃತಿಃ** ಎಂದೂ ಎನ್ನಿಸುತ್ತಾನೆ. ಅಥವಾ ಶ್ರೀಹರಿಯಲ್ಲಿ ಸರ್ವಜಗತ್ತು ಆಶ್ರಿತವಾಗಿರುವುದರಿಂದ ಶ್ರೀಹರಿಯು **ಸೇತು** ಎನ್ನಿಸುತ್ತಾನೆ. (೨) (೨ನೇ ಮಂತ್ರದಲ್ಲಿದ್ದ **ಏತಂ ಸೇತುಂ ತೀರ್ತ್ವಾ** ಎಂಬುದರ ಅರ್ಥ ಹೇಳುತ್ತಾರೆ—) ಸರ್ವಾಶ್ರಯನಾದ ಶ್ರೀಹರಿಯ ಸಮೀಪಕ್ಕೆ ಹೋಗಲಿಕ್ಕೆ (ಸಂಸಾರಾದಿಗಳನ್ನು) ದಾಟಿದ ಮೇಲೆ ದೋಷವಿಲ್ಲದವನಾಗುತ್ತಾನೆ. (೩) (೩ನೇ ಮಂತ್ರದಲ್ಲಿದ್ದ **ತದ್ಯ ಏವೈತಂ** ಎಂಬುದಕ್ಕೆ ಅರ್ಥ ಹೇಳುತ್ತಾರೆ—) ಆ ಶ್ರೀಹರಿಯನ್ನು ಬ್ರಹ್ಮಚರ್ಯದಿಂದ ಹೊಂದಬೇಕು. ಮನಸ್ಸು ವಚನ **ಕರ್ಮ**ಗಳಿಂದ ಸರ್ವೋತ್ತಮನಾದ ಪರಬ್ರಹ್ಮನನ್ನು ತಿಳಿದುಕೊಳ್ಳುವುದೇ **ಬ್ರಹ್ಮಚರ್ಯ**ವೆನಿಸುತ್ತದೆ. (೪) ಅಂತಹ ಪರಬ್ರಹ್ಮಜ್ಞಾನರೂಪವಾದ ಬ್ರಹ್ಮಚರ್ಯದಿಂದಲೇ ಅಪರೋಕ್ಷಜ್ಞಾನಿಗಳು ಪರಬ್ರಹ್ಮನ ಲೋಕಕ್ಕೆ ಹೋಗುತ್ತಾರೆ. (೫) (೩ನೇ ಮಂತ್ರದಲ್ಲಿದ್ದ **ತೇಷಾಮೇವೈಷಃ** ಎಂಬ ವಾಕ್ಯಕ್ಕೆ ಅರ್ಥ ಹೇಳುತ್ತಾರೆ—) ಜ್ಞಾನಿಗಳಿಗೆ ಬ್ರಹ್ಮಲೋಕವಾಗುವುದು. ಅಂದರೆ ಪರಬ್ರಹ್ಮನೇ ತನ್ನ ಲೋಕದಲ್ಲಿರತಕ್ಕವರನ್ನು ನೋಡುವುದರಿಂದ **ಬ್ರಹ್ಮಲೋಕ**ನೆನಿಸುತ್ತಾನೆ. ಅಥವಾ ಜ್ಞಾನಿಗಳಿಗೆ ಆ ಪರಬ್ರಹ್ಮನ ದರ್ಶನವಾಗುತ್ತದೆ. ಅಥವಾ ಪರಬ್ರಹ್ಮನ ವೈಕುಂಠಾದಿ ಲೋಕವು ಪ್ರಾಪ್ತವಾಗುತ್ತದೆ. ಈ ಅಭಿಪ್ರಾಯದಿಂದಲೂ ಬ್ರಹ್ಮಲೋಕವೆಂದು ಹೇಳಲ್ಪಡುತ್ತದೆ. ॥ ೧೦-೪ ॥ ॥ ೧ ॥

ನಾಲ್ಕನೇ ಖಂಡವು ಮುಗಿಯಿತು.

ಐನೇ ಖಂಡವು

ಪೀ—ಜ್ಞಾನಕ್ಕೆ ಶ್ರವಣಾದಿರೂಪವಾದ ಬ್ರಹ್ಮಚರ್ಯವು ಸಾಧನವೆಂದಾದರೆ **ವಿವಿದಿಷಂತಿ ಯಜ್ಞೇನ** ಇತ್ಯಾದಿ ಪ್ರಮಾಣಗಳಿಂದ ಯಾಗಾದಿಗಳು ಜ್ಞಾನಸಾಧನಗಳೆಂದು ಹೇಳಿದ್ದು ಹೇಗೆ? ಎಂದರೆ—ಅವೆಲ್ಲವೂ ಬ್ರಹ್ಮಚರ್ಯವೇ ಎನ್ನುತ್ತಾರೆ—

ಉ. ॥ ಅಥ ಯದ್ಯಜ್ಞ ಇತ್ಯಾಚಕ್ಷತೇ ಬ್ರಹ್ಮಚರ್ಯಮೇವ ತದ್ಬ್ರಹ್ಮಚರ್ಯೇಣ ಹ್ಯೇವ ಯೋ ಜ್ಞಾತಾ ತಂ(ಅನು)ವಿಂದತೇಽಥ ಯದಿಷ್ಟಮಿತ್ಯಾ

ಚಕ್ಷತೇ ಬ್ರಹ್ಮಚರ್ಯಮೇವ ತದ್ಬ್ರಹ್ಮಚರ್ಯೇಣ ಹ್ಯೇವೇಷ್ಟ್ವಾತ್ಮಾನ-ಮನುವಿಂದತೇ ॥ ೧ ॥

ಅ ॥ ಜ್ಞಾನವೇ ಮೋಕ್ಷಕ್ಕೆ ಸಾಧನವೆಂದು ಪ್ರಸಿದ್ಧವಾಗಿರುವುದರಿಂದ ವಿದ್ವಾಂಸರು ಯಾವುದನ್ನು ಯಜ್ಞವೆಂದು ಹೇಳುತ್ತಾರೋ, ಅದು ಬ್ರಹ್ಮಚರ್ಯ (ಜ್ಞಾನ)ವೇ, ಮನಸ್ಸು ವಚನ ಕರ್ಮಗಳಿಂದ ಬ್ರಹ್ಮಜ್ಞಾನಕ್ಕೆ ಸಾಧನವಾದುದೇ. (ಹೇಗೆಂದರೆ **ಯಾತಿ ಜ್ಞಮಿತಿ** ಶ್ರೀಹರಿಯನ್ನು ತಿಳಿದುಕೊಳ್ಳುವುದು ಎಂಬ ವ್ಯುತ್ಪತ್ತಿಯಿಂದ **ಯಜ್ಞ**ವೆಂದರೆ ಜ್ಞಾನವು, ಎಂದು ತೋರಿಸುತ್ತಾರೆ-) **ಯಜ್ಞಃ** ಎಂಬಲ್ಲಿದ್ದ **ಯಃ** ಎಂದರೆ ತಿಳಿಯುವವನು. ಏವಂಚ ಯಾವ ಬ್ರಹ್ಮಚರ್ಯದಿಂದಲೇ ಜ್ಞಾನರೂಪನಾದ ಶ್ರೀಹರಿಯನ್ನು ತಿಳಿಯುತ್ತಾನೋ, ಆ ಜ್ಞಾನವು ಬ್ರಹ್ಮಚರ್ಯವು. ಯಾವುದನ್ನು ಇಷ್ಟಿಯೆಂದು ಹೇಳುತ್ತಾರೋ, ಅದೂ ಬ್ರಹ್ಮಚರ್ಯವೇ. (ಹೇಗೆಂದರೆ ಪರಮಾತ್ಮನ ಜ್ಞಾನಕ್ಕಾಗಿ ಬ್ರಹ್ಮಚರ್ಯದಿಂದ ಶ್ರೀಹರಿಯನ್ನು ಇಚ್ಛಿಸುತ್ತಾನೆ. ಆಮೇಲೆ ಶ್ರೀಹರಿಯನ್ನು ಹೊಂದುತ್ತಾನೆ. ಆದುಕಾರಣ ಮೋಕ್ಷಕ್ಕೆ ಕಾರಣವಾದ ಜ್ಞಾನವೂ ಬ್ರಹ್ಮಚರ್ಯವೆನಿಸುತ್ತದೆ.) ॥ ೧ ॥

ಉ. ॥ ಅಥ ಯತ್ಸತ್ತ್ರಾಯಣಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತದ್ಬ್ರಹ್ಮಚರ್ಯೇಣ ಹ್ಯೇವ ಸತ ಆತ್ಮನಸ್ತ್ರಾಣಂ ವಿಂದತೇಽಥ ಯನ್ಮೌನ-ಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತದ್ಬ್ರಹ್ಮಚರ್ಯೇಣ ಹ್ಯೇವಾತ್ಮಾನ-ಮನುವಿದ್ಯ ಮನುತೇ ॥ ೨ ॥

ಅ ॥ ಯಾವುದನ್ನು **ಸತ್ರಾಯಣ** ಎನ್ನುತ್ತಾರೋ, ಅದೂ ಬ್ರಹ್ಮಚರ್ಯವೇ. ಯಾವ ಬ್ರಹ್ಮಚರ್ಯದಿಂದ **ಸತ್** ಎನಿಸಿದ ಶ್ರೀರಿಯಿಂದ (ತ್ರಾಣಂ=) ರಕ್ಷಣೆಯನ್ನು (ಅಯತೇ=) ಹೊಂದುತ್ತಾನೋ, ಆ ಬ್ರಹ್ಮಚರ್ಯವು ಸತ್ರಾಯಣವೆನಿಸುತ್ತದೆ. (ಇದರಿಂದ ಸತಃ ತ್ರಾ ಅಯತೇ ಎಂದು ಸತ್ರಾಯಣಂ ಎಂದುಕ್ತವಾಯಿತು.) ಯಾವುದನ್ನು ಮೌನವೆನ್ನುತ್ತಾರೋ, ಅದೂ ಬ್ರಹ್ಮಚರ್ಯವೇ. ಬ್ರಹ್ಮಚರ್ಯದಿಂದಲೇ ಶ್ರೀಹರಿಯನ್ನು ಶ್ರವಣ ಮನನಾದಿಗಳಿಂದ ಪರೋಕ್ಷವಾಗಿ ತಿಳಿಯುತ್ತಾನೆ. ಆಮೇಲೆ ಪ್ರತ್ಯಕ್ಷವಾಗಿ ತಿಳಿದು ಮೋಕ್ಷದಲ್ಲಿ ಧ್ಯಾನಿಸುತ್ತಾನೆ. (ಇದರಿಂದ ಮನುತೇ ಅನೇನ=ಬ್ರಹ್ಮಚರ್ಯದಿಂದ ತಿಳಿಯುವುದರಿಂದ ಮೌನಂ=ಬ್ರಹ್ಮಚರ್ಯವು ಎಂದು ಸೂಚಿತವಾಯಿತು.) ॥ ೨ ॥

ಉ. ॥ ಅಥ ಯದನಾಶಕಾಯನಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತದೇಷ ಹ್ಯಾತ್ಮಾ ನ ನಶ್ಯತಿ ಯಂ ಬ್ರಹ್ಮಚರ್ಯೇಣಾನುವಿಂದತೇಽಥ ಯದರಣ್ಯಾಯನಮಿತ್ಯಾಚಕ್ಷತೇ ಬ್ರಹ್ಮಚರ್ಯಮೇವ ತದರಶ್ಚ ಹ ವೈ ಣ್ಯಶ್ಚಾರ್ಣವೌ ಬ್ರಹ್ಮಲೋಕೇ ತೃತೀಯಸ್ಯಾಮಿತೋ ದಿವಿ ತದ್ಯೈರಂ ಮದೀಯೇ ಸರಸ್ತದಶ್ವತ್ಥಃ ಸೋಮಸವನಸ್ತದಪರಾಜಿತಾ ಪೂರ್ವಬ್ರಹ್ಮಣಃ ಪ್ರಭುವಿಮಿತಂ ಹಿರಣ್ಮಯಂ ॥ ೩ ॥

ಅ ॥ ಯಾವುದನ್ನು ಅನಾಶಕಾಯನವೆನ್ನುತ್ತಾರೋ, ಅದೂ ಬ್ರಹ್ಮಚರ್ಯವೇ. ಯಾವ ಶ್ರೀಹರಿಯನ್ನು ಬ್ರಹ್ಮಚರ್ಯದಿಂದ ತಿಳಿಯುತ್ತಾನೋ, ಈ ಆತ್ಮನು ಜ್ಞಾನಿಗೆ ನಾಶನಾಗುವುದಿಲ್ಲ. (ಅಂದರೆ ಜ್ಞಾನಿಯನ್ನು ಆತ್ಮನು ಬಿಡುವುದಿಲ್ಲ. ಅತನಿಗೆ ಇಷ್ಟವನ್ನು ಕೊಡುತ್ತಾನೆ. **ತಸ್ಯಾಹಂ ನ ಪ್ರಣಶ್ಯಾಮಿ**

ಎಂದು ಗೀತೆಯಲ್ಲಿ ಹೇಳಿರುವರು.) (ಇದರಿಂದ ಅನಾಶಕಂ=ನಾಶವಿಲ್ಲದ ಪರಬ್ರಹ್ಮನನ್ನು ಅನೇನ=ಬ್ರಹ್ಮ ಚರ್ಯದಿಂದ ಅಯತೇ=ಹೊಂದುತ್ತಾನೆ. ಹೀಗೆ ಅನಾಶಕಾಯನಂ ಎನಿಸುತ್ತದೆಂದು ಸೂಚಿತವಾಯಿತು.) ಅರಣ್ಯಾಯನವೆಂದು ಯಾವುದನ್ನು ಹೇಳುತ್ತಾರೋ, ಅದೂ ಬ್ರಹ್ಮಚರ್ಯವೇ. (ಇಲ್ಲಿಯೂ ಅರ ಣ್ಯ ಎಂದು ಹೆಸರುಳ್ಳ ಎರಡು ಸಮುದ್ರಗಳನ್ನು ಯಾವ ಬ್ರಹ್ಮಚರ್ಯದಿಂದ ಅಯತೇ=ಹೊಂದುತ್ತಾನೋ, ಅದು ಅರ ಣ್ಯ ಅಯನ ಎಂದು ತಿಳಿಯಬೇಕು.) (ಅರ ಣ್ಯಗಳೆಂದರೆ ಯಾವುವು? ಎಲ್ಲಿರುವವುಗಳು? ಬ್ರಹ್ಮ ಚರ್ಯದಿಂದ ಯಾರ ಪ್ರಾಪ್ತಿಯಾಗುತ್ತದೆ? ಎಂದರೆ—) ಸುಖಜ್ಞಾನರೂಪಗಳಾಗಿರುವುದರಿಂದ ಅರ ಣ್ಯ ಎಂದು ಹೆಸರುಳ್ಳ ಚಿದಾನಂದರಸರೂಪಗಳಾದ ಅಮೃತಮಯಗಳಾದ ಸಮುದ್ರಗಳು. ಅಥವಾ ಸಮುದ್ರ ಸದೃಶಗಳಾದ ಸರೋವರಗಳೆರಡು ಭೂಲೋಕದಿಂದ ಅಥವಾ ಮೇರುವಿಗಿಂತ ಮೂರನೇದ್ದಾದ ದ್ಯು ಎನಿಸಿದ ಶ್ವೇತದ್ವೀಪದಲ್ಲಿ ಇರುತ್ತವೆ. (ಮರಳಿ ಪರಬ್ರಹ್ಮಲೋಕದ ಮಹಿಮೆ ಹೇಳುತ್ತಾರೆ -) ಆ ಶ್ವೇತದ್ವೀಪದಲ್ಲಿ ಈರಾ ಎಂಬ ವೃಕ್ಷಸಂಬಂಧಿಯಾದ ಮದ್ಯಪೂರ್ಣವಾದ ಲಕ್ಷಾತ್ಮಕವಾದ ಮದ(ಹರ್ಷ)ವನ್ನು ಹುಟ್ಟಿಸುವ ಸರೋವರವೂ ಇದೆ. ಆ ಲೋಕದಲ್ಲಿ ಅಮೃತವನ್ನು ಸುರಿಸುತ್ತಿರುವ ಅಶ್ವತ್ಥವೃಕ್ಷಸಮೂಹವು ಇದೆ. ಪರಬ್ರಹ್ಮನಿಗೆ ಅಪರಾಜಿತ ಎಂದು ಹೆಸರುಳ್ಳ ಪಟ್ಟಣವಿದೆ. ಆ ಚಿದ್ರೂಪ ಪಟ್ಟಣದಲ್ಲಿಯೂ ಪರಬ್ರಹ್ಮನ ಪರಿಮಾಣಕ್ಕೆ ಸಮಾನಪರಿಮಾಣವುಳ್ಳ ಚಿದ್ರೂಪವಾದ ಸುವರ್ಣಮಯವಾದ ಪರ್ಯಂಕ(ಹಾಸಿಗೆ)ಇದೆ. ॥೩॥

ಪೀ—ಹೀಗೆ ಅರ ಣ್ಯ ಎಂಬ ಅಮೃತಸಮುದ್ರಗಳನ್ನು ಹೇಳಿ. ಈಗ ಬ್ರಹ್ಮಚರ್ಯವು ಅವುಗಳಿಗೆ ಆಶ್ರಯವಾಗಿದೆ, ಎನ್ನುತ್ತಾ ಫಲಾಂತರವನ್ನು ಹೇಳುತ್ತಾರೆ—

ಉ. ॥ ತದ್ಯ ಏವೈತಾವರಂ ಚ ವೈ ಣ್ಯಂ ಚಾರ್ಣವೌ ಬ್ರಹ್ಮಲೋಕೇ ಬ್ರಹ್ಮಚರ್ಯೇಣಾನುವಿಂದಂತಿ ತೇಷಾಮೇವೈಷ ಬ್ರಹ್ಮಲೋಕಸ್ತೇಷಾಂ ಸರ್ವೇಷು ಲೋಕೇಷು ಕಾಮಚಾರೋ ಭವತಿ ॥ ಇತಿ ಪಂಚಮಃ ಖಂಡಃ ॥ ॥ ೧೦-೫ ॥ ॥ ೪ ॥

ಅ ॥ ಅದುಕಾರಣ ಯಾವ ಅಧಿಕಾರಿಗಳು ಪರಬ್ರಹ್ಮನ ಲೋಕದಲ್ಲಿರತಕ್ಕ ಅರ ಣ್ಯ ಎಂಬ ಸಮುದ್ರಗಳನ್ನು ಬ್ರಹ್ಮಚರ್ಯದಿಂದ ಹೊಂದುತ್ತಾರೋ, ಅವರಿಗೇನೇ ಪರಬ್ರಹ್ಮನ ಲೋಕವು ಸಿಗುತ್ತದೆ. ಅವರಿಗೇನೇ ಎಲ್ಲಾ ಲೋಕಗಳಲ್ಲಿಯೂ ಸ್ವೇಚ್ಛಾನುಸಾರ ಸಂಚಾರವಾಗುತ್ತದೆ. ॥ ೧೦-೫ ॥ ॥ ೪ ॥

ಪೀ—ಅಥ ಯದ್ಯಜ್ಞಃ ಎಂಬ ೧ನೇ ಮಂತ್ರ ಮೊದಲುಗೊಂಡು ೩ನೇ ಮಂತ್ರದಲ್ಲಿದ್ದ ಅರಃ ಎಂಬ ಪರ್ಯಂತ ವಾಕ್ಯಗಳ ಅರ್ಥ ಹೇಳುತ್ತಾರೆ—

ಭಾ. ॥ (೧) ಯಜ್ಞ ಇಷ್ಟಂ ಚ ಸತ್ರಂ ಚ ಮೌನಂ ಜ್ಞಾನಶನಂ ತಥಾ ॥ (೨) ಪರಸ್ಯ ಬ್ರಹ್ಮಣೋ ಜ್ಞಾನಂ ಸರ್ವಮೇತದುದೀರಿತಂ । ಪರಸ್ಯ ಬ್ರಹ್ಮಣೋ ಲೋಕೇ ಶ್ವೇತದ್ವೀಪಾಭಿಧೇ ಪರೇ । ಅರಣ್ಯೌ ಚಾ(ಆರೋ ಣ್ಯಶ್ಚಾ)ರ್ಣವಾ ದಿವ್ಯೌ ಚಿದಾನಂದರಸಾತ್ಮಕೌ ॥ (೩) ಯಾವಾನುಚ್ಚೈಃ ಸ್ವರ್ಗಲೋಕಸ್ತಾವಾನುಚ್ಚತಯಾ ಸ ಚ । ಶ್ವೇತದ್ವೀಪೋ ದಿವಿಷ್ಠೋಽತಃ ॥ (೪) ತತ್ರ ಮದ್ಯಂ ಸರೋವರಂ । ಸರ್ವಭೋಜ್ಯಾತ್ಮಕಂ ದಿವ್ಯಂ ತಲ್ಪಾಶ್ವತ್ಥಾಃ ಸುಧಾಸ್ರವಾಃ ॥ (೫) ತತ್ರ ವಿಷ್ಣೋಃ ಪುರಂ ದಿವ್ಯಮಪರಾಜಿತನಾಮಕಂ ॥ (೬) ವಿಮಿತಾಖ್ಯಂ ಚ ಪರ್ಯಂಕಂ ವಿಷ್ಣೋರ್ಮಾನೇನ ಸಮ್ಮಿತಂ । ಚಿತ್ಸುವರ್ಣಮಯಂ

ದಿವ್ಯಂ ಲಕ್ಷ್ಮೀಸ್ತತ್ತತ್ಸ್ವರೂಪಿಣೀ । ಸ ಶ್ವೇತದ್ವೀಪಗೋ ವಿಷ್ಣುಃ ಪರ್ಯಂಕಬ್ರಹ್ಮನಾಮಕಃ ॥ ೧, ೨, ೩, ೪ ॥ ಇತಿ ಪಂಚಮಃ ಖಂಡಃ ॥ ೧೦-೫ ॥ ॥ ೧ ॥

ಅ ॥ (೧) (1) **ಯಾತಿ ಜ್ಞಂ** ಅನೇನ=ಬ್ರಹ್ಮಚರ್ಯದಿಂದ ಜ್ಞಾನರೂಪನಾದ ಶ್ರೀ ಹರಿಯನ್ನು ಪ್ರತ್ಯಕ್ಷವಾಗಿ ತಿಳಿಯುತ್ತಾನೆ, ಎಂಬ ವ್ಯುತ್ಪತ್ತಿಯಿಂದ **ಯಜ್ಞಃ** (2) ಇಚ್ಛತ್ಯನೇನ=ಬ್ರಹ್ಮಚರ್ಯದಿಂದ ಶ್ರೀಹರಿಯ ಸಮೀಪವನ್ನು ಹೊಂದಲಿಚ್ಛಿಸುವುದರಿಂದ **ಇಷ್ಟಂ** (3) ಸತಃ-ತ್ರಾಣಂ ಯಸ್ಮಾತ್=ಬ್ರಹ್ಮಚರ್ಯದಿಂದ ಶ್ರೀಹರಿಯಿಂದ ರಕ್ಷಣೆಯನ್ನು ಇಚ್ಛಿಸುವುದರಿಂದ **ಸತ್ರಂ** (4) ಮನುತೇ ಅನೇನ=ಬ್ರಹ್ಮಚರ್ಯದಿಂದ ಪ್ರತ್ಯಕ್ಷವಾಗಿ ತಿಳಿಯುವುದರಿಂದ **ಮೌನಂ** (5) ಅನಶಂ ನೀಯತೇ ಅನೇನ=ಇದರಿಂದ ಪರೋಕ್ಷವಾಗಿ ತಿಳಿಯುವುದರಿಂದ **ಅನಶನಂ** (6) ಹಾಗೆಯೇ ಅರ ಣ್ಯೌ ಅಯತೇ ಅನೇನ=ಬ್ರಹ್ಮಚರ್ಯದಿಂದ ಅರಣ್ಯ ಎಂಬ ಅಮೃತಸಮುದ್ರಗಳನ್ನು ಹೊಂದುವುದರಿಂದ **ಅರಣ್ಯಾಯನಂ** ಇವೆಲ್ಲವೂ ಬ್ರಹ್ಮಚರ್ಯವು. (ಅಂದರೆ ಪರಬ್ರಹ್ಮನ ಜ್ಞಾನವೆಂದು ಹೇಳಲ್ಪಟ್ಟಿದೆ.) (೨) (ಇನೇ ಮಂತ್ರದಲ್ಲಿದ್ದ **ಬ್ರಹ್ಮಲೋಕೇ** ಎಂಬುದಕ್ಕೆ ಅರ್ಥ ಹೇಳುತ್ತಾರೆ—) ಪರಬ್ರಹ್ಮನ ಲೋಕವಾದ ಶ್ವೇತದ್ವೀಪ ಎಂಬ ಸರ್ವೋತ್ಕೃಷ್ಟವಾದ ಲೋಕದಲ್ಲಿ **ಅರ ಣ್ಯ** ಎಂಬ ದಿವ್ಯಗಳಾದ ಚಿದಾನಂದರಸಸ್ವರೂಪಗಳಾದ ಲಕ್ಷ್ಮ್ಯಾತ್ಮಕಗಳಾದ ಸಮುದ್ರಗಳಿರಡು ಇವೆ. (೩) (ಬ್ರಹ್ಮಲೋಕಶಬ್ದದಿಂದ ಶ್ವೇತದ್ವೀಪವನ್ನು ಇಟ್ಟುಕೊಳ್ಳಬೇಕೆಂದು ಹೇಳಿದ್ದು ಯುಕ್ತವಲ್ಲ, ಏಕೆಂದರೆ—**ತೃತೀಯಸ್ಯಾಮಿತೋ ದಿವಿ** ಎಂದು ಬ್ರಹ್ಮಲೋಕವು ಇಂದ್ರಸದನವೆಂಬ ಮೂರನೇ ದ್ಯುಲೋಕದಲ್ಲಿದೆ. ಎಂದು ಹೇಳಿದೆ. ಶ್ವೇತದ್ವೀಪವಾದರೂ ಕ್ಷೀರಸಮುದ್ರದ ಮಧ್ಯದಲ್ಲಿರುತ್ತದೆಂದು ಹೇಳಿದೆ. ಆದಕಾರಣ ಇನೇ ದ್ಯುಲೋಕದಲ್ಲಿದೆ ಎಂಬುವುದು ಕೂಡಲಾರದೆಂದರೆ—) ಸ್ವರ್ಗಲೋಕವು ಎಷ್ಟು ಎತ್ತರದಲ್ಲಿದೆಯೋ. ಅಷ್ಟು ಎತ್ತರವಾಗಿ ಕ್ಷೀರಸಮುದ್ರದಲ್ಲಿದ್ದ ಶ್ವೇತದ್ವೀಪವೂ ಇದೆ. ಮೂರನೇ ದ್ಯುಲೋಕ ಸಮವಾಗಿದೆ. (೪) (ಇನೇ ಮಂತ್ರದಲ್ಲಿದ್ದ **ತದ್ಧೈರಂ ಮದೀಯಂ ಸರಃ** ಎಂಬ ವಾಕ್ಯದ ಅರ್ಥ ಹೇಳುತ್ತಾರೆ—) ಆ ಶ್ವೇತದ್ವೀಪದಲ್ಲಿ ಸಮಸ್ತಭೋಜ್ಯಸ್ವರೂಪವೂ ದಿವ್ಯವೂ ಸುರಾಮಯವೂ ಮದಕಾರಿಯೂ ಆಗಿರುವ ಸರೋವರವು ಇದೆ. ಅಲ್ಲಿ ಅಮೃತವನ್ನು ಸುರಿಸುತ್ತಿರುವ ಅಶ್ವತ್ಥವೃಕ್ಷಗಳಿವೆ. (೫) (**ತದಪರಾಜಿತಾ ಪೂಃ** ಎಂಬ ವಾಕ್ಯಕ್ಕೆ ಅರ್ಥ ಹೇಳುತ್ತಾರೆ—) ಆ ಶ್ವೇತದ್ವೀಪದಲ್ಲಿ ಶ್ರೀವಿಷ್ಣುವಿಗೆ ಅಪರಾಜಿತ ಎಂದು ಹೆಸರುಳ್ಳ ದಿವ್ಯವಾದ ಪಟ್ಟಣವಿದೆ (೬) (**ಪ್ರಭುವಿಮಿತಂ** ಎಂಬ ವಾಕ್ಯದ ಅರ್ಥ ಹೇಳುತ್ತಾರೆ—)ವಿಮಿತ ಎಂದು ಹೆಸರುಳ್ಳ ಹಾಸಿಗೆಯು ವಿಷ್ಣುವಿನ ಪರಿಮಾಣಕ್ಕೆ ಸಮವಾದುದು, ಚಿದ್ರೂಪವು, ಸುವರ್ಣಮಯವು, ದಿವ್ಯವಾದುದು. (ಅದು ಹೇಗೆಂದರೆ—) ಆಯಾಯ ವಸ್ತುಗಳ ಸ್ವರೂಪವುಳ್ಳವಳು ಲಕ್ಷ್ಮೀದೇವಿಯು. (ಅಂದರೆ ಅಲ್ಲಿರುವ ಆ ವಸ್ತುಗಳೆಲ್ಲವೂ ಲಕ್ಷ್ಮ್ಯಾತ್ಮಕಸ್ವರೂಪಗಳು.) ಶ್ವೇತದ್ವೀಪದಲ್ಲಿರತಕ್ಕ ಹಾಸಿಗೆಯಲ್ಲಿರುವ ಶ್ರೀವಿಷ್ಣುವು **ಪರ್ಯಂಕಬ್ರಹ್ಮ**ನೆಂದು ಹೆಸರುಳ್ಳವನು. ॥ ೧೦-೫ ॥ ೧ ॥

ಐದನೇ ಖಂಡವು ಮುಗಿಯಿತು.

೬ನೇ ಖಂಡವು

ಹೀ—ಹೃದಯದಲ್ಲಿದ್ದ ಭಗವದ್ರೂಪದ ಉಪಾಸನಾಪ್ರಕಾರವನ್ನು ವಿವರಿಸಿ ಹೇಳುತ್ತಾರೆ—

ಉ. ॥ ಅಥ ಯಾ ಏತಾ ಹೃದಯಸ್ಯ ನಾಡ್ಯಸ್ತಾಃ ಪಿಂಗಲಸ್ಯಾಣಿಮ್ನಸ್ತಿಷ್ಠಂತಿ ಶುಕ್ಲಸ್ಯ ನೀಲಸ್ಯ ಪೀತಸ್ಯ ಲೋಹಿತಸ್ಯೇತ್ಯಸೌ ವಾ ಆದಿತ್ಯಃ ಪಿಂಗಲ ಏಷ ಶುಕ್ಲ ಏಷ ನೀಲ ಏಷ ಪೀತ ಏಷ ಲೋಹಿತಃ ॥ ೧ ॥

ಆ ॥ ವಿದ್ಯಾಂತರವನ್ನು ಹೇಳುತ್ತಾರೆ ಹೃದಯದಲ್ಲಿರತಕ್ಕ ಹೃದಯವೆನೆಂದು ಹೆಸರುಳ್ಳ ಐದು ರೂಪಗಳುಳ್ಳ ಶ್ರೀಹರಿಗೆ ಆಧಾರಗಳಾದ ಹೃದಯಕಮಲದ ಸುತ್ತಮುತ್ತಲೂ ಇರುವ ಸುಷುಮ್ನಾ ನಾಂದಿ ನೀ ಪಿಂಗಲಾ ವಜ್ರಿಕಾ ಇಡಾ ಎಂಬ ಐದು ನಾಡಿಗಳು ಪಿಂಗಲ (ಕೆಂಪುಕಪ್ಪು) ವರ್ಣವುಳ್ಳ ಅತಿಸೂಕ್ಷ್ಮನಾದ ಸಂಕರ್ಷಣನಿಗೆ, ಬಿಳಿಬಣ್ಣವುಳ್ಳ ಅತ್ಯಣುವಾದ ವಾಸುದೇವನಿಗೆ, ನೀಲವರ್ಣನಾದ ಅಣುವಾದ ಅನಿರುದ್ಧನಿಗೆ, ಪೀತವರ್ಣ (ಹಳದಿಬಣ್ಣ)ವುಳ್ಳ ಅಣುವಾದ ಪ್ರದ್ಯುಮ್ನನಿಗೆ, ರಕ್ತವರ್ಣವುಳ್ಳ ಅಣುವಾದ ನಾರಾಯಣನಿಗೆ ಆಧಾರಗಳಾಗಿ ಇರುತ್ತವೆ. (ಅಂದರೆ ಎಷ್ಟು ವಿನ ರೂಪಗಳು ಐದು ನಾಡಿಗಳಲ್ಲಿವೆ) ಎಂದು ಉಪಾಸನಾವಾಡಬೇಕು. (ಆದಿತ್ಯನಲ್ಲಿಯೂ ಪಿಂಗಲ ಮೊದಲಾದ ಐದು ರೂಪಗಳುಳ್ಳ ಶ್ರೀಹರಿಯನ್ನು ಧ್ಯಾನಿಸಬೇಕು, ಎನ್ನುತ್ತಾರೆ—) ಆದಿತ್ಯನ ಸುತ್ತಲೂ ಆದಿತ್ಯನೆಂದು ಹೆಸರುಳ್ಳ ಪಿಂಗಲವರ್ಣವುಳ್ಳ ಸಂಕರ್ಷಣನೂ, ಶುಕ್ಲವರ್ಣವುಳ್ಳ ವಾಸುದೇವನೂ, ನೀಲವರ್ಣವುಳ್ಳ ಅನಿರುದ್ಧನೂ, ಅರಸಿನಬಣ್ಣವುಳ್ಳ ಪ್ರದ್ಯುಮ್ನನೂ, ಕೆಂಪುಬಣ್ಣವುಳ್ಳ ಶ್ರೀನಾರಾಯಣನೂ ಹೀಗೆ ಐದು ರೂಪಗಳಿವೆ.

ವಿ—ಕೆಂಬಣ್ಣವುಳ್ಳ ಶ್ರೀನಾರಾಯಣನು ಹೃದಯಮಧ್ಯದಲ್ಲಿರುವ ಸುಷುಮ್ನಾ ನಾಡಿಯಲ್ಲಿಯೂ, ಬಿಳಿಬಣ್ಣವುಳ್ಳ ವಾಸುದೇವನು ಇದಿರು ಇರುವ ನಾಂದಿನೀ ನಾಡಿಯಲ್ಲಿಯೂ, ಪಿಂಗಲಬಣ್ಣವುಳ್ಳ ಸಂಕರ್ಷಣನು ಹಿಂದುಗಡೆ ಇರುವ ಪಿಂಗಲಾ ನಾಡಿಯಲ್ಲಿಯೂ, ಹಳದಿಬಣ್ಣವುಳ್ಳ ಪ್ರದ್ಯುಮ್ನನು ಎಡಭಾಗದಲ್ಲಿದ್ದ ವಜ್ರಿಕಾ ನಾಡಿಯಲ್ಲಿಯೂ, ನೀಲಬಣ್ಣವುಳ್ಳ ಅನಿರುದ್ಧನು ಬಲಭಾಗದಲ್ಲಿದ್ದ ಇಡಾ ಎಂಬ ನಾಡಿಯಲ್ಲಿಯೂ ಇರುತ್ತಾರೆ. ॥ ೧ ॥

ಪೀ—ಹೃದಯದಲ್ಲಿರತಕ್ಕ ಶ್ರೀಹರಿಯು ಆದಿತ್ಯನಲ್ಲಿರುವುದು ಮಾತ್ರವಲ್ಲ. ಪರಂತು ಆದಿತ್ಯನ ರಶ್ಮಿಗಳಲ್ಲಿಯೂ ವ್ಯಾಪಿಸುತ್ತಿದ್ದಾನೆನ್ನುತ್ತಾರೆ—

ಉ. ॥ ತದ್ಯಥಾ ಮಹಾಪಥ ಆತತ ಉಭೌ ಗ್ರಾಮೌ ಗಚ್ಛತೀಮಂ ಚಾಮುಂ ಚೈವಮೇವೈತಾ ಆದಿತ್ಯಸ್ಯ ರಶ್ಮಯ ಉಭೌ ಲೋಕೌ ಗಚ್ಛಂತೀಮಂ ಚಾಮುಂ ಚಾಮುಷ್ಮಾದಾದಿತ್ಯಾತ್ಪ್ರತಾ(ತೀ)ಯಂತೇ ತಆಸು ನಾಡೀಷು ಸೃಪ್ತಾ ಆಭ್ಯೋ ನಾಡೀಭ್ಯಃ ಪ್ರತಾ(ತೀ)ಯಂತೇಽಮುಷ್ಮಿನ್ನಾದಿತ್ಯೇ ಸೃಪ್ತಾಃ ॥ ೨ ॥

ಆ ॥ ಹೇಗೆ ದೊಡ್ಡ ಮಾರ್ಗವು ಸಮೀಪದಲ್ಲಿರುವ ಮತ್ತು ದೂರದಲ್ಲಿರುವ ಎರಡು ಗ್ರಾಮಗಳನ್ನು ವ್ಯಾಪಿಸಿಕೊಂಡು ಇರುತ್ತದೋ, ಹೀಗೆಯೇ ಆದಿತ್ಯನಲ್ಲಿರುವ ಆದಿತ್ಯನೆನಿಸಿದ ಶ್ರೀಹರಿಯ ರಶ್ಮಿಗಳು ಆದಿತ್ಯನ ಕಿರಣಗಳಲ್ಲಿ ವ್ಯಾಪ್ತಗಳಾಗಿ ಜೀವನನ್ನೂ ಆದಿತ್ಯನನ್ನೂ ಹೊಂದುತ್ತವೆ. (ಬರುವ ಪ್ರಕಾರವನ್ನು ವಿವರಿಸಿ ಹೇಳುತ್ತಾರೆ—) ಆದಿತ್ಯಾಂತರ್ಗತ ಭಗವದ್ರೂಪಗಳಿಂದ ಯಾವ ರಶ್ಮಿಗಳು ವ್ಯಾಪ್ತಗಳಾಗಿವೆಯೋ, ಅವುಗಳು ನಾಡಿಗಳಲ್ಲಿ ವ್ಯಾಪ್ತಗಳಾಗಿವೆ. ನಾಡ್ಯಂತರ್ಗತ ಭಗವದ್ರೂಪಗಳಿಂದ ಯಾವ ನಾಡಿಗಳಲ್ಲಿರತಕ್ಕ ರಶ್ಮಿಗಳು ವ್ಯಾಪ್ತಗಳಾಗಿವೆಯೋ, ಅವುಗಳು ಆದಿತ್ಯನಲ್ಲಿ ವ್ಯಾಪ್ತಗಳಾಗಿವೆ. ಅಂದರೆ ಆದಿತ್ಯನಲ್ಲಿ ತೋರುವ ರಶ್ಮಿಗಳು ನಾಡಿಗಳಲ್ಲಿಯೂ, ನಾಡಿಗಳಲ್ಲಿರುವ ರಶ್ಮಿಗಳು ಆದಿತ್ಯನಲ್ಲಿಯೂ ವ್ಯಾಪ್ತಗಳಾಗಿ ಇವೆ. ॥ ೨ ॥

ಪೀ—ಹೃದಯದೊಳಗಣ ನಾಡಿಗಳಲ್ಲಿರತಕ್ಕ ಶ್ರೀಹರಿಯನ್ನು ಹೊಂದಿದವನಿಗೆ ಪಾಪಲೇಪವಿಲ್ಲ, ಎನ್ನುತ್ತಾರೆ—

ಉ. ॥ ತದ್ಯತ್ರೈತತ್ಸುಪ್ತಃ ಸಮಸ್ತಃ ಸಂಪ್ರಸನ್ನಃ ಸ್ವಪ್ನಂ ನ ವಿಜಾನಾತ್ಯಾಸು ತದಾ ನಾಡೀಷು ಸೃಪ್ತೋ ಭವತಿ ತಂ ನ ಕಶ್ಚನ ಪಾಪ್ಮಾ ಸ್ಪೃಶತಿ ತೇಜಸಾ ಹಿ ತದಾ ಸಂಪನ್ನೋ ಭವತಿ ॥ ೩ ॥

ಅ ॥ ಆಗ ಶ್ರೀಹರಿಯಲ್ಲಿ ಸುಷುಪ್ತಿಯನ್ನು ಹೊಂದಿದ ಇಂದ್ರಿಯವ್ಯಾಪಾರಗಳಿಲ್ಲದಿರುವ ಜೆನ್ನಾಗಿ ಸಂತುಷ್ಟನಾಗಿ ಸ್ವರೂಪಸುಖವನ್ನನುಭವಿಸುವ ಜೀವನು ಸ್ವಾಪ್ನವಸ್ತುಗಳ ಸಮೂಹವನ್ನು ಯಾವಾಗ ತಿಳಿಯುವುದಿಲ್ಲವೋ, ಆಗ ಸುಷುಮ್ನಾನಾಡಿಯಲ್ಲಿರುವ ಶ್ರೀಹರಿಯಲ್ಲಿ ಇರುತ್ತಾನೆ. ಆ ಸುಪ್ತನು ಶ್ರೀಹರಿಯಿಂದ ಅಥವಾ ಶ್ರೀಹರಿಯ ತೇಜಸ್ಸಿನಿಂದ ಕೂಡಿರುವುದರಿಂದ ಆತನನ್ನು ಯಾವ ಪಾಪವೂ ಮುಟ್ಟುವುದಿಲ್ಲ. (ಅಂದರೆ ಆತನಿಗೆ ಪಾಪಲೇಪವಿಲ್ಲ.) ॥ ೩ ॥

ಪೀ—ನಾಡಿಗಳಲ್ಲಿರುವ ಶ್ರೀಹರಿಯನ್ನು ಪಾಸನ ಮಾಡಿದ್ದಕ್ಕೆ ಫಲ ಹೇಳುತ್ತಾರೆ—

ಉ. ॥ ಅಥ ಯತ್ರೈತದಬಲಿಮಾನಂ ನೀತೋ ಭವತಿ ತಮುಭಿತ ಆಸೀನಾ ಆಹುರ್ಜಾನಾಸಿ ಮಾಂ ಜಾನಾಸಿ ಮಾಮಿತಿ ಸ ಯಾವದಸ್ಮಾಚ್ಛರೀರಾದನುತ್ಕ್ರಾಂತೋ ಭವತಿ ತಾವಜ್ಜಾನಾತಿ ॥ ೪ ॥

ಅ ಆಮೇಲೆ ಯಾವಾಗ ಹೃದಯದಲ್ಲಿರತಕ್ಕ ಶ್ರೀಹರಿಯನ್ನು ಪಾಸನೆ ಮಾಡತಕ್ಕ ಜ್ಞಾನಿಯು ಜ್ವರಾದಿಗಳಿಂದ ದೇಹದಲ್ಲಿ ದೌರ್ಬಲ್ಯವನ್ನು ಹೊಂದುತ್ತಾನೋ, (ಅಂದರೆ ಸಾಯಲು ಸನ್ನದ್ಧನಾಗುತ್ತಾನೋ,) ಆಗ ಆತನ ಸುತ್ತಮುತ್ತಲೂ ಜ್ಞಾತಿಗಳು ಕುಳಿತುಕೊಂಡು ನನ್ನನ್ನು ತಿಳಿಯುತ್ತಿಯೋ, ನನ್ನನ್ನು ತಿಳಿಯುತ್ತಿಯೋ, ಎನ್ನುತ್ತಾರೆ. ಹೀಗೆ ಜ್ಞಾತಿಗಳಿಂದ ಪ್ರಶ್ನಿಸಿಗೊಂಡ ಆ ಜ್ಞಾನಿಯು ಈ ಶರೀರದಿಂದ ಹೊರಡದಿರುವ ಪರ್ಯಂತ ತಿಳಿಯುತ್ತಾನೆ. ॥ ೪ ॥

ಉ. ॥ ಅಥ ಯತ್ರೈತಸ್ಮಾಚ್ಛರೀರಾದುತ್ಕ್ರಾಮತ್ಯಥೈತೈರೇವ ರಶ್ಮಿಭಿರೂರ್ಧ್ವ ಆಕ್ರಮತೇ ಸ ಓಮಿತಿವಾಹೋದ್ವಾಮಿಯತೇ ಸ ಯಾವತ್ ಕ್ಷಿಪೇನ್ಮನಸ್ತಾವದಾದಿತ್ಯಂ ಗಚ್ಛತ್ಯೇತದ್ವೈ ಖಲು ಲೋಕದ್ವಾರಂ ವಿದುಷಾಂ ಪ್ರಪದನಂ ನಿರೋಧೋಽವಿದುಷಾಂ ॥ ೫ ॥

ಅ ॥ ಯಾವಾಗ ಜೀವನು ಈ ಶರೀರದಿಂದ ಹೊರಟು ಹೋಗುತ್ತಾನೋ, ಆಗ ನಾಡಿಗಳಲ್ಲಿರತಕ್ಕ ಸೂರ್ಯರಶ್ಮಿಗಳಿಂದ ಪ್ರಕಾಶಿಸಿಕೊಂಡ ನಾಡೀದ್ವಾರವುಳ್ಳವನಾಗಿ ಊರ್ಧ್ವಲೋಕಕ್ಕೆ ಹೋಗಲಿಕ್ಕೆ ಅಭಿಮುಖನಾಗಿ ಹೋಗುತ್ತಾನೆ. ಆ ಜ್ಞಾನಿಯಾದ ಉಪಾಸಕನು ಓಂ ಎಂದು ಹೆಸರುಳ್ಳ ಶ್ರೀಹರಿಯನ್ನು ಹೊರುತ್ತಿರುವ ಮುಖ್ಯಪ್ರಾಣನಿಂದ (ಊರ್ಧ್ವಲೋಕಕ್ಕೆ ಹೋಗುವಕಾಲದಲ್ಲಿ) ವಾಮಭಾವವನ್ನು (ಅಂದರೆ ದಿವ್ಯ ಚಿದ್ರೂಪವನ್ನು) ಹೊಂದುತ್ತಾನೆ. ಮಂಗಲನಾಗಿ ಮಾಡಲ್ಪಡುತ್ತಾನೆ. ಆ ವಾಯುವು ಯಾವಾಗ ಜ್ಞಾನಿಯನ್ನು ಕರೆದುಕೊಂಡು ಹೋಗಲಿಕ್ಕೆ ಮನಸ್ಸು ಮಾಡುತ್ತಾನೋ, ಆಗ ಜೀವನು ಭಗವತ್ಪ್ರಸಾದದಿಂದ ಆದಿತ್ಯನೊಳಗಣ ವಿಷ್ಣುವನ್ನು ಹೊಂದುತ್ತಾನೆ. (ಬ್ರಹ್ಮಜ್ಞಾನಿಯು ಬ್ರಹ್ಮಲೋಕವನ್ನೇ ಹೊಂದಬೇಕಾಗಿರುವುದರಿಂದ ಆದಿತ್ಯಾಂತರ್ಗತ ವಿಷ್ಣುಲೋಕವನ್ನು ಹೊಂದುವುದು ಏತಕ್ಕೆಂದರೆ—) ಆದಿತ್ಯಮಂಡಲವೇ, (ಆದಿತ್ಯಾಂತರ್ಗತ ಪರಬ್ರಹ್ಮಸ್ವರೂಪವೇ) ಪರಬ್ರಹ್ಮನ ಲೋಕಕ್ಕೆ ದ್ವಾರಭೂತನು. ವಿದ್ವಾಂಸರು ಹೊಂದತಕ್ಕುದು. ಅಜ್ಞಾನಿಗಳಿಗೆ ತನ್ನ ಪ್ರಾಪ್ತಿಗೆ ಕಾರಣವಾದ ಮಾರ್ಗವನ್ನು ತಡೆಯುತ್ತದೆ ॥ ೫ ॥

ಪೀ—ಹೃದಯದಲ್ಲಿರತಕ್ಕ ಶ್ರೀಹರಿಯನ್ನು ಪಾಶನೆ ಮಾಡಿದವನು ಸೂರ್ಯದ್ವಾರಾ ಮುಕ್ತನಾಗುತ್ತಾನೆ, ಎಂಬ ಅರ್ಥದಲ್ಲಿ ಮಂತ್ರ ಹೇಳುತ್ತಾರೆ. ಅಥವಾ ಐದು ನಾಡಿಗಳಿಂದಲೂ ಉತ್ಕ್ರಾಂತಿಯನ್ನು ಹೊಂದಿದವನಿಗೆ ಮೋಕ್ಷವಾಗುವುದಿಲ್ಲ. ಪರಂತು, ಮೋಕ್ಷಕ್ಕೆ ಕಾರಣವಾದ ನಾಡೀವಿಶೇಷವು ಒಂದೇ ಎಂಬುದನ್ನು ಪ್ರಮಾಣಕೊಟ್ಟು ಹೇಳುತ್ತಾರೆ—

ಉ. ॥ ತದೇಷ ಶ್ಲೋಕಃ । ಶತಂ ಚೈಕಾ ಚ ಹೃದಯಸ್ಯ ನಾಡ್ಯ ಸ್ತಾಸಾಂ ಮೂರ್ಧಾನಮಭಿನಿಃಸೃತೈಕಾ । ತಯೋರ್ಧ್ವಮಾಯನ್ನೃತತ್ವ-ಮೇತಿ ವಿಷ್ವಙನ್ಯಾ ಉತ್ಕ್ರಮಣೇ ಭವಂತಿ ಉತ್ಕ್ರಮಣೇ ಭವಂತಿ ॥ ಇತಿ ೫ ಖಂಡಃ ॥ ೧೦-೬ ॥ ॥ ೬ ॥

ಅ ॥ ಮೋಕ್ಷವನ್ನು ಹೊಂದಿಸತಕ್ಕ ನಾಡೀವಿಶೇಷವದೆ, ಎಂಬಲ್ಲಿ ಮುಂದಿನ ಶ್ಲೋಕವು ಸಮ್ಮತಿಯಾಗುತ್ತದೆ. ಹೃದಯನೆನಿಸಿದ ಶ್ರೀಹರಿಗೆ ಆಧಾರಗಳಾದ ಹೃದಯದಲ್ಲಿ ವ್ಯಾಪಿಸಿಕೊಂಡಿರುವವು ನೂರ ಒಂದು (೧೦೧) ನಾಡಿಗಳವೆ. ಅವುಗಳಲ್ಲಿ ಒಂದು ನಾಡಿಯು ಶಿರಸ್ಸಿನಲ್ಲಿ ವ್ಯಾಪಿಸಿಕೊಂಡಿದೆ. ಆ ಸುಷುಮ್ನಾನಾಡಿಯಿಂದ ಮೇಲೆ ಹೋದವನು ಮೋಕ್ಷಕ್ಕೆ ಹೋಗುತ್ತಾನೆ. ಸುಷುಮ್ನಾನಾಡಿಗಿಂತ ಬೇರೆ ನಾಡಿಗಳು ಬೇರೆ ಲೋಕಗಳಿಗೆ ಹೋಗಲಿಕ್ಕೆ ಉಪಯುಕ್ತಗಳಾಗುತ್ತವೆ. ॥ ೧೦—೬ ॥ ॥ ೬ ॥

ಪೀ—**ಅಥ ಯಾ ಏತಾ ಹೃದಯಸ್ಯ ನಾಡ್ಯಃ** ಎಂಬ ವಾಕ್ಯದ ಅರ್ಥ ಹೇಳುತ್ತಾರೆ—

ಭಾ. ॥ (೧) ಸ ಏಷ ಹೃದಿ ನಾಡೀಷು ಪಂಚರೂಪಃ ಪ್ರತಿಷ್ಠಿತಃ । ವಿಷ್ಣೋರಣೀ-ಮ್ನೋ ರೂಪಾಣಿ ಪಂಚನಾಡೀಸ್ಥಿತಾನಿ ತು ॥ (೨) ನಾರಾಯಣಾಖ್ಯಂ ಸೌಷುಮ್ನಂ ಮ-ಧ್ಯಸ್ಥಂ ರಕ್ತವರ್ಣಕಂ । ಶುಕ್ಲಂ ತು ವಾಸುದೇವಾಖ್ಯಂ ನಾದಿನ್ಯಾಮಗ್ರತಃ ಸ್ಥಿತಂ ॥ ಪಿಂಗಲಾಯಾಂ ಪಿಂಗಲಂ ತು (ಚ) ರೂಪಂ ಸಂಕರ್ಷಣಾಭಿಧಂ । ಪಶ್ಚಿಮೇ ವಜ್ರಿಕಾ-ಯಾಂ ಚ ಪೀತಂ ಪ್ರದ್ಯುಮ್ನನಾಮಕಂ । ಇಡಾಯಾಮನಿರುದ್ಧಾಖ್ಯಂ ನೀಲರೂಪಂ ವ್ಯ-ವಸ್ಥಿತಂ ॥ (೩) ಸೂರ್ಯೋಽಹ್ಯೇವಂ ಪಂಚರೂಪೋ ಭಗವಾನ್ ಸಂವ್ಯವಸ್ಥಿತಃ । ಆದಿತ್ಯ-ನಾಮಾ ಚಾದಿತ್ವಾತ್ ॥ (೪) ತದ್ರಾಶ್ಮಿಪ್ತಂ ಸೂರ್ಯಮಂಡಲಂ । ತದ್ರಶ್ಮಿಭಿಸ್ತಥಾ ವ್ಯಾಪ್ತಾಃ ಸಮಸ್ತಾಃ ಸೂರ್ಯರಶ್ಮಯಃ । ತಸ್ಮಿನ್ನಾಡೀಷು ಚ ಪ್ರೋಕ್ತಾಸ್ತಥಾ ನಾಡೀಸ್ಥ(ಷು)ರಶ್ಮ-ಯಃ ॥ (೫)ತನ್ನಾಡೀಸಂಸ್ಥಿತಂ ವಿಷ್ಣುಂ ಮಧ್ಯೇ ಜೀವಃ ಪ್ರಪದ್ಯತೇ ॥ (೬)ತತ್ತೇಜಸಾ ಹಿ ಸಂಪನ್ನಃ ಸುಪ್ತ ಇತ್ಯಭಿಧೀಯತೇ ॥ (೭) ಓಮಿತ್ಯೇವ ವಹನ್ನಿತ್ಯಂ ವಾಯುರೋಂ ವಾ-ಡಿ(ವ ಇ)ತೀರಿತಃ । ತೇನ ವಾಮತ್ವಮಾಯಾತಿ ಮುಕ್ತಿಕಾಲೇ ಹ್ಯುಪಾಸಕಃ । ದಿವ್ಯಚಿ-ದ್ರೂಪಭಾವೋ ಹಿ ವಾಮಭಾವ ಉದೀರಿತಃ ॥ (೮) ಯದೈನಂ ನೇತುಮನ್ವಿಚ್ಛನ್ಮನಃ ಕ್ಷಿಪತಿ ಮಾರುತಃ । ಆದಿತ್ಯಾಖ್ಯಂ ತದಾ ವಿಷ್ಣುಂ ಯಾತಿ ಜೀವಃ ಸ್ವವಿದ್ಯಯಾ ॥ ಇತಿ ಪರ್ಯಂಕೋಪಾಸನಾಯಾಂ ॥ ೧,೨,೩,೪,೫,೬ ॥ ಇತಿ ಷಷ್ಠಃ ಖಂಡಃ ॥ ೧೦—೬ ॥೧॥

ಅ ॥ (೧) ಶ್ರೀಪರಮಾತ್ಮನು ಹೃದಯದಲ್ಲಿ ಐದು ನಾಡಿಗಳಲ್ಲಿ ಐದು ರೂಪಗಳುಳ್ಳವನಾಗಿ ಇರುತ್ತಾನೆ ಅಣುವಾಗಿರತಕ್ಕ ಶ್ರೀಹರಿಯ ಐದು ರೂಪಗಳು ಐದು ನಾಡಿಗಳಲ್ಲಿವೆ (೨) (ಯಾವಯಾವ

ನಾಡಿಯಲ್ಲಿ ಯಾವಯಾವ ರೂಪವಿದೆ, ಎಂದರೆ) ರಕ್ತವರ್ಣವುಳ್ಳ ಶ್ರೀನಾರಾಯಣ ರೂಪವು ನಾಲ್ಕು ನಾಡಿಗಳ ಮಧ್ಯದಲ್ಲಿರತಕ್ಕ ಸುಷುಮ್ನಾ ನಾಡಿಯಲ್ಲಿಯೂ ಬಿಳಿರೂಪವುಳ್ಳ ವಾಸುದೇವನು ಇದಿರು ಇರುವ ನಾದಿನೀ ನಾಡಿಯಲ್ಲಿಯೂ ಪಿಂಗಲ ರೂಪವುಳ್ಳ ಸಂಕರ್ಷಣನು ಹಿಂಬದಿಯಲ್ಲಿರುವ ಪಿಂಗಲಾ ನಾಡಿಯಲ್ಲಿಯೂ ಪೀತರೂಪವುಳ್ಳ ಪ್ರದ್ಯುಮ್ನ ನು ಎಡಭಾಗದಲ್ಲಿದ್ದ ವಜ್ರಿಕಾ ನಾಡಿಯಲ್ಲಿಯೂ ನೀಲ ರೂಪವುಳ್ಳ ಅನಿರುದ್ಧನು ಬಲಭಾಗದಲ್ಲಿದ್ದ ಇಡಾ ನಾಡಿಯಲ್ಲಿಯೂ ಇದ್ದಾನೆ. (೩) (೧ನೇ ಮಂತ್ರದಲ್ಲಿದ್ದ **ಅಸೌ ವಾ ಆದಿತ್ಯಃ** ಎಂಬ ವಾಕ್ಯದ ಅರ್ಥಹೇಳುತ್ತಾರೆ) ಸೂರ್ಯನಲ್ಲಿಯೂ ಹೀಗೆಯೇ ಐದು ರೂಪಗಳುಳ್ಳ ಶ್ರೀಹರಿಯು ಇರುತ್ತಾನೆ. ಶ್ರೀಹರಿಯು ಸರ್ವರಿಗೆ ಆದಿಯಾದುದರಿಂದ ಆದಿತ್ಯನೆನಿಸುತ್ತಾನೆ. (೪) (೨ನೇ ಮಂತ್ರದಲ್ಲಿದ್ದ **ಅಮುಷ್ಮಾದಾದಿತ್ಯಾತ್** ಇತ್ಯಾದಿ ವಾಕ್ಯಗಳಿಗೆ ಅರ್ಥಹೇಳುತ್ತಾರೆ.) ನಾಡಿಗಳಲ್ಲಿರತಕ್ಕ ಎಲ್ಲಾ ರಶ್ಮಿಗಳು ಸೂರ್ಯಾಂತರ್ಗತ ಭಗವದ್ರೂಪಗಳಿಂದ ವ್ಯಾಪ್ತಗಳಾಗಿವೆ. ಹಾಗೆಯೇ ಸೂರ್ಯಮಂಡಲವೂ ಸೂರ್ಯನೆನಿಸಿದ ಶ್ರೀಹರಿಯ ರಶ್ಮಿಗಳಿಂದ ವ್ಯಾಪ್ತವಾಗಿದೆ. ಹಾಗೆಯೇ ಎಲ್ಲಾ ಸೂರ್ಯರಶ್ಮಿಗಳೂ ನಾಡಿಯಲ್ಲಿರತಕ್ಕ ಶ್ರೀಹರಿಯ ರಶ್ಮಿಗಳಿಂದ ವ್ಯಾಪ್ತಗಳಾಗಿವೆ. ಆ ನಾಡಿಯಲ್ಲಿರತಕ್ಕ ಶ್ರೀಹರಿಯಲ್ಲಿಯೂ ನಾಡಿಗಳಲ್ಲಿಯೂ, ನಾಡಿಗಳಲ್ಲಿರತಕ್ಕ ರಶ್ಮಿಗಳು ವ್ಯಾಪ್ತಗಳಾಗಿವೆ. (೫) (**ತದ್ಯ-ಶ್ಚೈತತ್ಸುಪ್ತಃ** ಎಂಬ ವಾಕ್ಯಕ್ಕೆ ಅರ್ಥಹೇಳುತ್ತಾರೆ.) ಮಧ್ಯದ ಸುಷುಮ್ನಾ ನಾಡಿಯಲ್ಲಿರುವ ವಿಷ್ಣುವನ್ನು ಜೀವನು ಹೊಂದುತ್ತಾನೆ. (೬) (೩ನೇ ಮಂತ್ರದಲ್ಲಿದ್ದ **ತೇಜಸಾ ಹಿ ತದಾ** ಎಂಬ ವಾಕ್ಯದ ಅರ್ಥಹೇಳುತ್ತಾರೆ.) ಆ ಶ್ರೀಹರಿಯು ತೇಜಸ್ಸಿನಿಂದ ಕೂಡಿದವನು **ಸುಪ್ತಃ** ಎನಿಸುತ್ತಾನೆ. (೭) (೫ನೇ ಮಂತ್ರದಲ್ಲಿದ್ದ **ಓಮಿತಿ ವಾಹಾ** ಎಂಬ ವಾಕ್ಯಕ್ಕೆ ಅರ್ಥಹೇಳುತ್ತಾರೆ.) ಓಂ ಎಂದು ಹೆಸರುಳ್ಳ ಶ್ರೀಹರಿಯನ್ನು ನಿತ್ಯದಲ್ಲಿಯೂ ಹೊರುತ್ತಿರುವ ವಾಯುದೇವರು ಓಂ ವಾಟ್ ಎನಿಸುತ್ತಾರೆ. ಆ ವಾಯುವಿನಿಂದ ಉಪಾಸಕನು ಮೋಕ್ಷಕಾಲದಲ್ಲಿ ವಾಮಭಾವವನ್ನು ಹೊಂದುತ್ತಾನೆ. (ವಾಮಭಾವವನ್ನು ವಿವರಿಸುತ್ತಾರೆ). ದಿವ್ಯವಾದ ಚಿದ್ರೂಪಭಾವನೇ ವಾಮಭಾವವೆನಿಸುತ್ತದೆ. (೮) ಯಾವಾಗ ವಾಯುದೇವರು ಈ ಜ್ಞಾನಿಯನ್ನು ಪರಲೋಕಕ್ಕೆ ಕರೆದುಕೊಂಡುಹೋಗಲಿಕ್ಕೆ ಇಚ್ಛಿಸಿ ಮನಸ್ಸು ಮಾಡುತ್ತಾರೋ, ಆಗ ಆ ಜ್ಞಾನಿಯು ತನ್ನ ವಿದ್ಯೆಯಿಂದ ಆದಿತ್ಯನೆನಿಸಿದ ವಿಷ್ಣುವನ್ನು ಹೊಂದುತ್ತಾನೆ, ಎಂದು ಪರ್ಯಂಕೋಪಾಸನೆಯಲ್ಲಿದೆ. ॥ ೧೦—೬ ॥ ॥ ೧ ॥

ಆರನೇ ಖಂಡವು ಮುಗಿಯಿತು.

೭ನೇ ಖಂಡವು

ಹೀ—ಬ್ರಹ್ಮಚರ್ಯಮೊದಲಾದ ಜ್ಞಾನಸಾಧನವನ್ನು ಮಾಡುವ ಸರ್ವರಿಗೂ ಜ್ಞಾನವು ಹುಟ್ಟುತ್ತದೋ, ಎಂದರೆ ಅಯೋಗ್ಯರಿಗೆ ಹುಟ್ಟುವುದಿಲ್ಲ, ಯೋಗ್ಯರಿಗೇನೇ ಜ್ಞಾನವು ಹುಟ್ಟುತ್ತದೆ, ಎಂದು ಹಿಂದಿನ ಕಥೆ ಹೇಳಿಕೊಂಡು ಹೇಳುತ್ತಾರೆ –

ಊ. ॥ ಯ ಆತ್ಮಾಽಪಹತಪಾಪ್ಮಾ ವಿಜರೋ ವಿಮೃತ್ಯುರ್ವಿ ಶೋಕೋ-ಽವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋಽನ್ವೇಷ್ಟವ್ಯಸ್ಸ ವಿಜಿ-ಜ್ಞಾಸಿತವ್ಯಃ ಸ ಸರ್ವಾಂಶ್ಚ ಲೋಕಾನಾಪ್ನೋತಿ ಸ ಸರ್ವಾಂಶ್ಚ ಕಾಮಾನ್ ಯಸ್ತಮಾತ್ಮಾನಮನುವಿದ್ಯ(ನ್ವಿಷ್ಯ)ವಿಜಾನಾತೀತಿ ಹ ಪ್ರಜಾಪತಿರುವಾಚ॥೧॥

ಅ ॥ *ಪರಬ್ರಹ್ಮನನ್ನು ಅನ್ವೇಷಣ ಮಾಡುವುದೆಂದರೆ ಶ್ರವಣಮನನಾದಿರೂಪವಾದ ವಿಚಾರ ಮಾಡಬೇಕೆಂದು ಅರ್ಥವು ಯಾವ ಅಧಿಕಾರಿಯು ಇಂತಹ ಶ್ರೀಹರಿಯನ್ನು ಶಾಸ್ತ್ರ ಆಚಾರ್ಯಾದಿಗಳನ್ನು ಅನುಸರಿಸಿ ಪರೋಕ್ಷವಾಗಿ ತಿಳಿದು ಅಪರೋಕ್ಷವಾಗಿ ತಿಳಿಯುತ್ತಾನೋ, ಅಂತಹ ಜ್ಞಾನಿಯು ವಿಷ್ಣುಲೋಕ ಮೊದಲಾದ ಎಲ್ಲಾ ಲೋಕಗಳನ್ನೂ, ಇಚ್ಛಿಸಿದ ಎಲ್ಲಾ ಭೋಗಗಳನ್ನೂ ಯೋಗ್ಯತಾನುಸಾರ ಹೊಂದುತ್ತಾನೆಂದು ಚತುರ್ಮುಖಬ್ರಹ್ಮನು (ದೇವತೆಗಳೂ ಅಸುರರೂ ಇವರ ಇದಿರು) ಹೇಳಿದನು. ॥ ೧ ॥

ಉ. ॥ ತದ್ಧೋಭಯೇ ದೇವಾಸುರಾ ಅನುಬುಬುಧಿರೇ(ಬುಧ್ಯ ಹೋಚುಃ) ತೇ ಹೋಚುರ್ಹಂತ ತಮಾತ್ಮಾನಮನ್ವಿಚ್ಛಾಮೋ ಯಮಾತ್ಮಾನಮನ್ವಿಷ್ಯ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನಿತೀಂದ್ರೋ ಹ ವೈ ದೇವಾನಾಮಭಿಪ್ರವವ್ರಾಜ ವಿರೋಚನೋಽಸುರಾಣಾಂ ತೌ ಹಾಸಂವಿದಾನಾವೇವ ಸಮಿತ್ಪಾಣೀ ಪ್ರಜಾಪತಿಸಕಾಶಮಾಜಗ್ಮತುಃ ॥ ೨ ॥

ಅ ॥ ಆಮೇಲೆ ಆತ್ಮಜ್ಞಾನವು ಸರ್ವಲೋಕಾದಿಗಳಿಗೆ ಸಾಧನವೆಂಬುದನ್ನು ದೇವತೆಗಳೂ ಅಸುರರೂ ಎಂಬೀ ಎರಡು ವರ್ಗದವರು ತಿಳಿದು ಹೇಳಿದರು ಯಾವ ಶ್ರೀಹರಿಯ ಪರೋಕ್ಷಜ್ಞಾನ ಅಪರೋಕ್ಷಜ್ಞಾನಗಳನ್ನು ಸಂಪಾದಿಸಿ ಎಲ್ಲಾ ಲೋಕಗಳನ್ನು ಎಲ್ಲಾ ಕಾಮಗಳನ್ನು ಯೋಗ್ಯತಾನುಸಾರ ಹೊಂದುತ್ತಾನೋ, ಅಂತಹ ಆತ್ಮನನ್ನು ನಾವು ಹುಡುಕುತ್ತೇವೆ. (ಅಂದರೆ ಶ್ರವಣಾದಿಗಳಿಂದ ವಿಚಾರಮಾಡಿ ಶ್ರೀಹರಿಯ ಪರೋಕ್ಷಜ್ಞಾನಾದಿಗಳನ್ನು ಸಂಪಾದಿಸುತ್ತೇವೆ.) ಹರ್ಷ. (ಅಂದರೆ ಇಂತಹ ಫಲ ಕೊಡುವ ಆತ್ಮಜ್ಞಾನವನ್ನು ಯಾರೂ ಸಂಪಾದಿಸಲಾರರು.) ಹೀಗೆ (ಇಂದ್ರ ವಿರೋಚನರಿಗೆ) ಹೇಳಿದರು. ಆದುದರಿಂದಲೇ ದೇವೇಂದ್ರನು ದೇವತೆಗಳಿಗೆ ಉಪದೇಶ ಕೊಡುವುದಕ್ಕಾಗಿ ತಾನು ಪರಮಾತ್ಮನನ್ನು ಕೇಳುವೆದಕ್ಕಾಗಿ ಚತುರ್ಮುಖನ ಸಮೀಪಕ್ಕೆ ಹೋದನು. ಪ್ರಸಿದ್ಧ. ಹೀಗೆಯೇ ವಿರೋಚನನೂ ಅಸುರರಿಗೆ ಉಪದೇಶಿಸುವುದಕ್ಕಾಗಿ ಬ್ರಹ್ಮನ ಬಳಿಗೆ ಹೋದನು. ಆ ಇಂದ್ರವಿರೋಚನರು ಒಬ್ಬ ಗುರುವಿನಲ್ಲಿ ಅವಾಸ ಮಾಡಲಿಚ್ಛಿಸಿಕೊಂಡು ಹೋಗುವ ಕಾಲದಲ್ಲಿಯೂ ಪರಸ್ಪರ ಪ್ರೀತಿರಹಿತರಾಗಿಯೂ ಪರಸ್ಪರ ಮಾತುಕತೆಯಿಲ್ಲದವರಾಗಿಯೂ ಕೈಯಲ್ಲಿ ಸಮಿಧೆ ಹಿಡಿದುಕೊಂಡು ಬ್ರಹ್ಮನ ಬಳಿಗೆ ಬಂದರು. ಆ ಸಮಯದಲ್ಲಿಯೂ ಪರಸ್ಪರ ಪ್ರೀತಿಯುಂಟಾಗದೆ ಇದ್ದುದು ಆಶ್ಚರ್ಯ! ॥ ೨ ॥

ಉ. ॥ ತೌ (ಯದ್ವಾ)ಹ ದ್ವಾತ್ರಿಂಶತಂ ವರ್ಷಾಣಿ ಬ್ರಹ್ಮಚರ್ಯಮೂಷತುಸ್ತೌ ಹ ಪ್ರಜಾಪತಿರುವಾಚ ಕಿಮಿಚ್ಛಂತಾವವಾಸ್ತಮಿತಿ ತೌ ಹೋಚತುರ್ಯ ಆತ್ಮಾಽಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋಽವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ ಸ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ಯಸ್ತಮಾತ್ಮಾನಮನುವಿದ್ಯ ವಿಜಾನಾತೀತಿ ಹ ಭಗವತೋ ವಾಚೋ ವೇದಯಂತೇ ತಮಿಚ್ಛಂತಾವವಾತ್ಸ್ಯಮಿತಿ (ಅವಾತ್ಸ್ಯೇತಿ) ॥ ೩ ॥

*ಯಮಾತ್ಮಾ.....ವಿಜಿಜ್ಞಾಸಿತವ್ಯಃ—ಇದರ ಅರ್ಥವು ಪುಟ ೪೨೯ರಲ್ಲಿ ಹೇಳಿಯಿದೆ

ಅ ॥ ಬ್ರಹ್ಮನ ಬಳಿಗೆ ಹೋಗಿ, ಅಂತಹ ಆತ್ಮನನ್ನು ಕೇಳುವುದಕ್ಕಾಗಿ ಅವರಿಬ್ಬರು ಯಾವಾಗ ಮೂವತ್ತೆರಡು ವರ್ಷ ಪರ್ಯಂತ ಬ್ರಹ್ಮಜ್ಞಾನ ಹೊಂದುವುದಕ್ಕಾಗಿ ಗುಹ್ಯೇಂದ್ರಿಯನಿಯಮನ ಮೊದಲಾದ ವ್ರತಗಳನ್ನು ಮಾಡುತ್ತಾ ಅವಾಸ ಮಾಡಿರುವರೋ, ಆಗ ಆ ಇಂದ್ರ ವಿರೋಚನರಿಗೆ ಬ್ರಹ್ಮನು ಯಾವುದಕ್ಕಾಗಿ ನನ್ನ ಬಳಿಯಲ್ಲಿ ಅವಾಸಮಾಡಿರುವಿರಿ?—ಎಂದನು. ಆಗ ಆ ಇಂದ್ರವಿರೋಚನರು **ಯ ಆತ್ಮಾಽಪಹತಪಾಪ್ಮಾ** ಇತ್ಯಾದಿ ಪೂಜ್ಯರಾದ ನಿಮ್ಮ ವಾಕ್ಯದ ಅರ್ಥಭೂತನಾದ ಪರಮಾತ್ಮನನ್ನು ದೇವಾಸುರರು ತಿಳಿಯಲಿಚ್ಛಿಸುತ್ತಾರೆ. ಅದುಕಾರಣ ಆ ಆತ್ಮನನ್ನು ಅವರಿಗೆ ಉಪದೇಶ ಮಾಡುವುದಕ್ಕಾಗಿ ನಿಮ್ಮಿಂದ ತಿಳಿಯಲಿಚ್ಛಿಸುತ್ತಾ ನಾವು ಇಲ್ಲಿ ಅವಾಸಮಾಡುವೆವು, ಹೀಗೆ ಹೇಳಿದರು. ॥ ೩ ॥

ಉ. ॥ ತೌ ಹ ಪ್ರಜಾಪತಿರುವಾಚ ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ಬ್ರಹ್ಮೇತ್ಯಥ ಯೋಽಯಂ ಭಗವೋಽಪ್ಸು ಪರಿಖ್ಯಾಯತೇ ಯಶ್ಚಾಯಮಾದರ್ಶೇ ಕತಮ ಏಷ ಇತ್ಯೇಷ ಉ ಏವೈಷು ಸರ್ವೇಷ್ವಂತೇಷು ಪರಿಖ್ಯಾಯತ ಇತಿ ಹೋವಾಚ ॥ ಇತಿ ಸಪ್ತಮಃ ಖಂಡಃ ॥ ೧೦-೭ ॥ ॥ ೪ ॥

ಅ ॥ ಆಗ ಪ್ರಜಾಪತಿಯು ಇಂದ್ರ–ವಿರೋಚನರಿಗೆ ಹೇಳಿದನು. (ಅಂದರೆ ತಾನು ಸುಳ್ಳು ಹೇಳಿದ್ದಲ್ಲ, ಎಂದಾಗುವುದಕ್ಕಾಗಿಯೂ, ವಿರೋಚನನಿಗೆ ಯಥಾರ್ಥಜ್ಞಾನವು ಬರಬಾರದೆಂಬುವುದಕ್ಕಾಗಿಯೂ, ಇಂದ್ರನು ಶುದ್ಧಸ್ವಭಾವದಿಂದಲೇ ಬಂದದ್ದೆಂದು ತಿಳಿದು ಅತನಿಗೆ ವಿಶೇಷಜ್ಞಾನ ಬರುವುದಕ್ಕಾಗಿಯೂ ಗೋಪ್ಯರೀತಿಯಿಂದ ಉಪದೇಶಿಸಿದನು.) ಮಹಾನುಭಾವರು ಅಯೋಗ್ಯರಿಗೆ ಜೆನ್ನಾಗಿ ಉಪದೇಶಿಸುವುದಿಲ್ಲವೆಂಬುದು ಆಶ್ಚರ್ಯ! **ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮಾ**=ಕಣ್ಣಿನೊಳಗೆ ಕಾಣಲ್ಪಡತಕ್ಕ ಪುರುಷನೇ ಆತ್ಮನು, ಮರಣವಿಲ್ಲದವನು. ಭಯವಿಲ್ಲದವನು ಎಂದು ಬ್ರಹ್ಮನು ಉಪದೇಶಿಸಿದನು. ಈ ವಾಕ್ಯಕ್ಕೆ ದೇವೇಂದ್ರನು ಹೀಗೆ ಅರ್ಥ ತಿಳಿದುಕೊಂಡನು ಜಾಗ್ರದವಸ್ಥೆಗೆ ಪ್ರೇರಕನಾದ ಕಣ್ಣಿನೊಳಗಿರುವ ಗುಣಪೂರ್ಣನಾದ ವಿಶ್ವ ಎಂದು ಹೆಸರುಳ್ಳ ಯಾವ ಶ್ರೀಹರಿಯು ದಿವ್ಯದೃಷ್ಟಿಗೆ ಕಾಣಿಸಲ್ಪಡುತ್ತಾನೋ, ಅಂತಹವನೇ ಅಪಹತಪಾಪಾದಿ ಗುಣಗಳುಳ್ಳ ಆತ್ಮನು, ಎಂದು ತಿಳಿದನು. (ಚಕ್ಷುರೊಳಗಣನು ಪರಮಾತ್ಮನೆಂಬುದು ಹೇಗೆ? ಎಂದರೆ—) ಚಕ್ಷುರಂತರ್ಗತನು ನಿತ್ಯಮುಕ್ತನು, ಯಾರಿಂದಲೂ ಭಯವಿಲ್ಲದವನು, ಗುಣಪೂರ್ಣನು, ಹೀಗೆ ತಿಳಿದುಕೊಂಡನು. (ಹೀಗೆ ಜತುರ್ಮುಖನು ಹೇಳಿದ ವಾಕ್ಯಕ್ಕೆ ವಿರೋಚನನು ಅಯೋಗ್ಯನಾಗಿರುವುದರಿಂದ ಕಣ್ಣಿನೊಳಗೆ ನನಗೆ ತೋರುವ ದೇಹಪ್ರತಿಬಿಂಬವೇ ಅಪಹತಪಾಪಾದಿ ಗುಣಗಳುಳ್ಳ ಆತ್ಮನೆಂದೂ, ಅಮೃತನು ಅಭಯನೆಂದೂ ಚತುರ್ಮುಖನ ಅಭಿಪ್ರಾಯವೆಂದು ತಿಳಿದು ಇದನ್ನು ಮರಳಿ ನಿರ್ಣಯಿಸುವುದಕ್ಕಾಗಿ ಇಂದ್ರನಿಂದ ಕೂಡಿಕೊಂಡೇ ಪುನಃ ಕೇಳುತ್ತಾನೆ—) (ಇಂದ್ರನು ಜ್ಞಾನಿಯಾಗಿದ್ದರೂ ವಿರೋಚನನು ತಮೋಯೋಗ್ಯನಾಗಿರುವುದರಿಂದ ಅತನಿಗೆ ವಿಪರೀತಜ್ಞಾನ ಹುಟ್ಟುವುದಕ್ಕಾಗಿ ಅವನನ್ನು ಅನುಸರಿಸಿಯೇ ಕೇಳಿರುತ್ತಾನೆ.) ಪೂಜ್ಯನಾದ ಬ್ರಹ್ಮನೇ **ಅಪ್ಸು ಪರಿಖ್ಯಾಯತೇ ಯಶ್ಚಾಯಮಾದರ್ಶೇ** ಕತಮಃ=ನೀರಿನಲ್ಲಿಯೂ, ಕನ್ನಡಿಯಲ್ಲಿಯೂ ತೋರುವ ರೂಪವು ಯಾವುದು? ಅಂದರೆ ಯಾವ ದೇಹಪ್ರತಿಬಿಂಬವು ನೀರಿನಲ್ಲಿ ಕಾಣುತ್ತದೋ, ಕನ್ನಡಿಯಲ್ಲಿ ಕಾಣುತ್ತದೋ, ಈ ಜಲಾದಿಗಳಲ್ಲಿ ಕಾಣತಕ್ಕ ಪ್ರತಿಬಿಂಬರೂಪವೇ ಹಿಂದೆ ಹೇಳಿದ ಪ್ರಕಾರ ಅಪಹತಪಾಪ್ಮತ್ವಾದಿ ಗುಣಗಳುಳ್ಳ ಆತ್ಮನೋ, ಅಥವಾ ಬೇರೆಯೋ? ಎಂದು (ವಿರೋಚನನ ಅಭಿಪ್ರಾಯವು.) ಜಲಾದಿಗಳಲ್ಲಿದ್ದ ಪ್ರತಿಬಿಂಬಾದಿಗಳಿಗೆ ಪ್ರವರ್ತಕನಾಗಿ ದಿವ್ಯದೃಷ್ಟಿಗೆ ಗೋಚರನಾಗಿರುವ ಶ್ರೀಹರಿಯು, ಕಣ್ಣಿನೊಳಗಣನಾದ ಶ್ರೀಹರಿಯೋ, ಅಥವಾ ಬೇರೆಯೋ? ಎಂದು (ಇಂದ್ರನ ಅಭಿಪ್ರಾಯವು.) ಹೀಗೆ

ಇಬ್ಬರು ಕೇಳಿದರು. (ಆಗ ಸಮ್ಯಗ್ಜ್ಞಾನಿಯಾಗಿಯೇ ಚತುರ್ಮುಖನು ಉತ್ತರ ಹೇಳಿದನು.) **ವಿಷ ಉ ವಿಷ್ಣು ಸರ್ವೇಷ್ವಂತೇಷು** ಕಣ್ಣಿನೊಳಗಿರುವ ಆತ್ಮಸ್ವರೂಪವೇ ಎಲ್ಲಾ ಸ್ಥಳಗಳಲ್ಲಿಯೂ ತೋರುತ್ತದೆ, ಎಂಬ ಸಾಮಾನ್ಯವಾದ ಬ್ರಹ್ಮೋಪದೇಶಕ್ಕೆ ಜಾಗ್ರದವಸ್ಥೆಗೆ ಪ್ರೇರಕನಾಗಿರುವ ಸರ್ವೋತ್ಕೃಷ್ಟನಾದ ಕಣ್ಣಿನೊಳಗಣ **ವಿಶ್ವರೂಪಿಯಾದ** ಶ್ರೀಹರಿಯೇ ಜಲಾದಿ ಸ್ಥಾನಗಳಲ್ಲಿ ಪ್ರತಿಬಿಂಬಾದಿಗಳಿಗೂ ಪ್ರೇರಕನಾಗಿ ದಿವ್ಯದೃಷ್ಟಿಗೆ ಗೋಚರನಾಗಿರುತ್ತಾನೆ, ಎಂದು ಇಂದ್ರನು ತಿಳಿದುಕೊಂಡನು. ಹೀಗೆ ಚತುರ್ಮುಖನು ಶ್ರೀಹರಿಯೆಂಬ ಅಭಿಪ್ರಾಯದಿಂದ ಉಪದೇಶಿಸಿದರೂ ವಿರೋಚನನು ಅಯೋಗ್ಯನಾಗಿರುವುದರಿಂದ ದೇಹದ ಪ್ರತಿಬಿಂಬವೇ ಜಲಾದಿಗಳಲ್ಲಿ ಉಪಹತಪಾಪಾದಿಗಳುಳ್ಳ ಆತ್ಮನು, ಹೀಗೆ ತಿಳಿದುಕೊಂಡು ದೇಹಪ್ರತಿಬಿಂಬವೇ ಎಲ್ಲಾ ಕಡೆಗಳಲ್ಲಿಯೂ ಅಪಹತವಾಪಾದಿ ಗುಣಗಳುಳ್ಳ ಆತ್ಮನೆಂದು ಚತುರ್ಮುಖನ ಅಭಿಪ್ರಾಯವೆಂದು ನಿಶ್ಚಯಮಾಡಿಕೊಂಡನು. ॥ ೧೦-೭ ॥ ॥ ೪ ॥

ಪೀ—ಬ್ರಹ್ಮಚರ್ಯವು ಮೋಕ್ಷಕ್ಕೆ ಸಾಧನವೆಂದು ಹಿಂದಿನ ಅಧಿಕರಣದಲ್ಲಿ ಹೇಳಿದೆ. ಆ ಬ್ರಹ್ಮಚರ್ಯವು ಆವ್ರತವನ್ನು ಮಾಡಿದವರಿಗೆಲ್ಲಾ ಮೋಕ್ಷವನ್ನು ಹೊಂದಿಸಿಕೊಡುತ್ತದೋ, ಕೆಲವರಿಗೆ ಮಾತ್ರವೋ? ಎಂದರೆ ಯೋಗ್ಯರಿಗೆ ಮಾತ್ರ ಬ್ರಹ್ಮಚರ್ಯದಿಂದ ಮೋಕ್ಷವಾಗುತ್ತದೆ, ಎಂಬ ಅರ್ಥವನ್ನು ಹಿಂದಿನ ಕಥೆ ಹೇಳಿಕೊಂಡು ಹೇಳುತ್ತಾರೆ—

ಭಾ. ॥ (೧) ಇಂದ್ರೋ ವಿರೋಚನಶ್ಚೈವ ಶ್ರುತ್ವಾ ತು ಬ್ರಹ್ಮಣೋಽಕ್ಷಿಗಂ । ವಿಷ್ಣು-ಮಾನಂದರೂಪಂ ತಂ ಸಮ್ಯಗ್ಜ್ಞಾನವಿಪರ್ಯಯೌ । ಆಪತುಃ ॥ (೨) ಕತ್ರ ದೇವೇಂ-ದ್ರೋ ಜಾನನ್ನಪಿ ವಿರೋಚನಂ । ಮೋಹಯನ್ನನುರೂಪಾಣಿ ತಸ್ಯ ವಾಕ್ಯಾನ್ಯುವಾಚ ಹ ॥ (೩) ಯಥಾ ವಿರೋಚನೋ ನೈವ ಜಾನೀಯಾದ್ವಿಷ್ಣು ಮಂಜಸಾ । ಸ್ವವಾಕ್ಯಂ ಚಾನೃತಂ ನ ಸ್ಯಾತ್ತಥಾ ಬ್ರಹ್ಮಾऽಪ್ಯುವಾಚ ಹ ॥ (೪) ಅಯೋಗ್ಯಾ ಹ್ಯಸುರಾ ಜ್ಞಾನೇ ವಕ್ತ-ವ್ಯಂ ಚೈ(ನೈ)ವ ನಾ(ಚಾ)ನೃತಂ । ಮಚ್ಛಾಪಾದಾಸುರೋ ಭಾವಃ ಪ್ರಹ್ಲಾದಾದೇರ್ನ ತು ಸ್ವತಃ । ಅಯಂ ಕ್ವಾ(ಚಾ)ಸುರ ಏವಾತೋ ವಕ್ಷ್ಯಾಮ್ಯಸ್ಯೋಭಯಂ ಯಥಾ ॥ (೫) ಇಂದ್ರಸ್ತು ಶುದ್ಧ ಭಾವತ್ವಾತ್ಪುನರಾಯಾಸ್ಯತಿ ಧ್ರುವಂ । ಇತ್ಯಭಿಪ್ರಾಯತಃ ಪ್ರೋಕ್ತೋ ಬ್ರಹ್ಮಣಾಽಕ್ಷಿಗತೋ ಹರಿಃ ॥ ಅಯೋಗ್ಯತ್ವಾತ್ತು ತಚ್ಛ್ರುತ್ವಾ ಪ್ರತಿರೂಪಂ ವಿರೋಚನಃ । ಮತ್ವಾಽಪ್ಸ್ವದರ್ಶಕೇ ಚೈವ ಪಪ್ರಚ್ಛ ಕತಮಸ್ತ್ವಿತಿ ॥ (೬) ಕತ್ರಾಪಿ ತು ಹರೇರ್ಭಾವಂ ಹೃದಿ ಕೃತ್ವಾ ಚತುರ್ಮುಖಃ । ದೃಶ್ಯತೇ ಹ್ಯೇಷ ಏವೇತಿ ತತ್ತ್ವವೇದಿವಿವಕ್ಷಯಾ ॥ ೧, ೨, ೩, ೪ ॥ ಇತಿ ಸಪ್ತಮಃ ಖಂಡಃ ॥ ೧೦-೭ ॥ ॥ ೧ ॥

ಅ ॥ (೧) ಇಂದ್ರ ವಿರೋಚನರಿಬ್ಬರು ಆತ್ಮಜ್ಞಾನಕ್ಕಾಗಿ ಬ್ರಹ್ಮನ ಬಳಿಗೆ ಹೋಗಿ ಆತ್ಮನು ಯಾರೆಂದು ಪ್ರಶ್ನೆಮಾಡಲು ಚತುರ್ಮುಖನಿಂದ **ಯ ಏಷೋऽಂತರಕ್ಷಿಣಿ ಪುರುಷೋದೃಶ್ಯತೇ ಏಷ ಆತ್ಮಾ** ಎಂಬ ಉಪದೇಶವನ್ನು ಕೇಳಿ, ಇಂದ್ರನು ಕಣ್ಣಿನೊಳಗಣ ಪ್ರತಿಬಿಂಬಕ್ಕೆ ನಿಯಾಮಕನಾದ ಆನಂದರೂಪನಾದ ವಿಷ್ಣುವೆ ಆತ್ಮನು, ಎಂದು ಬ್ರಹ್ಮನು ಉಪದೇಶಿರುವನು ಎಂಬ ಯಥಾರ್ಥಜ್ಞಾನವನ್ನೂ, ವಿರೋಚನನು ಕಣ್ಣಿನೊಳಗೆ ಕಾಣುವ ಪುರುಷರೂಪವೇ (ಪ್ರತಿಬಿಂಬವೇ)ಆತ್ಮನೆಂದು ಬ್ರಹ್ಮನು ಉಪದೇಶಿಸಿರುವನು, ಎಂಬ ಭ್ರಮೆಯನ್ನೂ ತಮ್ಮ ಯೋಗ್ಯತಾನುಸಾರ ಹೊಂದಿರುವರು (೨) (ಇಂದ್ರನು ಯಥಾರ್ಥಜ್ಞಾನವನ್ನು ಹೊಂದಿದನೆಂದಾದರೆ—ಆತನಿಗೆ ಪ್ರತಿಬಿಂಬವು ಪರಮಾತ್ಮನಲ್ಲವೆಂದು ನಿರ್ಣಯವಿರುವುದರಿಂದ **ಕತಮ ಏಷಃ** ಎಂದು ಪ್ರಶ್ನೆ ಮಾಡಿದ್ದು ಹೇಗೆ? ಎಂದರೆ) ಇಂದ್ರನು ತತ್ತ್ವವನ್ನು ತಿಳಿ

ದವನಾದರೂ ವಿರೋಚನನಿಗೆ ಅಜ್ಞಾನವನ್ನು ಹೊಂದಿಸಿಕೊಡುವವನಾಗಿ ವಿರೋಚನನಿಗೆ ಅಥವಾ ಮೋಹಕ್ಕೆ ಅನುರೂಪಗಳಾದ ವಾಕ್ಯಗಳನ್ನು ಹೇಳಿದನು. (೩) (ಹಾಗಾದರೆ—ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿಯೇ ಹೇಳಬೇಕಾಗಿರುವುದರಿಂದ ಬ್ರಹ್ಮನು ಸಮ್ಮುಗ್ಧಕಾರವಾಗಿ ಏಕೆ ಉಪದೇಶಿಸಿರುವನು? ಎಂದರೆ) ವಿರೋಚನನು ಹೇಗೆ ವಿಷ್ಣುವನ್ನು ಜೆನ್ನಾಗಿ ತಿಳಿಯಲಾರನೋ, ಮತ್ತು ತನ್ನ (ಬಹ್ಮನ) ಮಾತೂಕೂಡ ಅನೃತವು ಹೇಗೆ ಆಗಲಾರದೋ, ಹಾಗೆಯೇ ಬ್ರಹ್ಮನೂ ಉಪದೇಶಿಸಿರುವನು. (೪) (ವಿರೋಚನನಿಗೂ ತತ್ತ್ವಜ್ಞಾನವು ಬರಲಿ, ಬ್ರಹ್ಮನ ಮಾತು ಅನೃತವೂ ಆಗಲಿ. ದೋಷವೇನು? ಎಂದರೆ) ಅಸುರರು ಜ್ಞಾನಹೊಂದಲಿಕ್ಕೆ ಸರ್ವಥಾ ಯೋಗ್ಯರಲ್ಲ, ಅನೃತವನ್ನು ಸರ್ವಥಾ ಹೇಳಬಾರದು ಅದುಕಾರಣ ವಿರೋಚನನಿಗೆ ಜ್ಞಾನಪ್ರಾಪ್ತಿಯಾಗದಿರುವುದೂ, ತನ್ನ ಮಾತು ಸುಳ್ಳಾಗದಿರುವುದೂ, ಈ ಎರಡೂ ಹೇಗೆ ಆಗುವುದೋ ಹಾಗೆಯೇ ಹೇಳುವೆನು. (ಹಾಗಾದರೆ ಪ್ರಹ್ಲಾದ ಮೊದಲಾದ ಅಸುರರೂ ಜ್ಞಾನಿಗಳಾಗಿ ದೃಷ್ಟರಾಗಿರುತ್ತಾರೆ. ಆದಕಾರಣ ಅಸುರರು ಜ್ಞಾನಕ್ಕೆ ಅಯೋಗ್ಯರೆಂದು ಹೇಳಿದ್ದು ಹೇಗೆಂದರೆ) ಪ್ರಹ್ಲಾದ ಮೊದಲಾದವರಿಗೆ ನನ್ನ ಶಾಪದಿಂದಲೇ ಅಸುರಭಾವವು ಬಂದಿರುತ್ತದೆ. ಆಸುರ ಭಾವವು ಸ್ವಾಭಾವಿಕವಾದುದು ಅಲ್ಲವೇ ಅಲ್ಲ. ವಿರೋಚನನು ಸ್ವಾಭಾವಿಕವಾಗಿ ಅಸುರನೇ ಆಗಿರುತ್ತಾನೆ, ಆದುದರಿಂದಲೂ ವಿರೋಚನನಿಗೆ ಜ್ಞಾನ ಬಾರದಿರುವುದೂ, ತನ್ನ ಮಾತು ಅನೃತವು ಹೇಗೆ ಆಗಲಾರದೋ, ಹಾಗೆಯೇ ಎರಡನ್ನೂ ಹೇಳುವೆನು. (೫) (ಹಾಗಾದರೆ – ಉಪದೇಶವು ಸಮ್ಮುಗ್ಧವಾಗಿರುವುದರಿಂದ ಇಂದ್ರನಿಗೂ ವಿಪರೀತ ಜ್ಞಾನವೇ ಪ್ರಾಪ್ತವಾದೀತು ಎಂದರೆ—) ದೇವೇಂದ್ರನಾದರೂ ಪರಿಶುದ್ಧ ಸ್ವಭಾವವುಳ್ಳವನಾದುದರಿಂದ ನಿಶ್ಚಯವಾಗಿಯೂ ತತ್ತ್ವಜ್ಞಾನಕ್ಕಾಗಿ ಮರಳಿ ಬರುವನು. ಈ ಅಭಿಪ್ರಾಯದಿಂದ ಬ್ರಹ್ಮನು ಕಣ್ಣಿಗೆ ನಿಯಾಮಕನಾಗಿರುವ ಶ್ರೀಹರಿಯನ್ನು ಉಪದೇಶಿಸಿರುವನು. ವಿರೋಚನನು ಮೋಕ್ಷಹೊಂದಲಿಕ್ಕೆ ಅಯೋಗ್ಯನಾಗಿರುವುದರಿಂದ ಆ ಉಪದೇಶವನ್ನು ಕೇಳಿ ಪ್ರತಿಬಿಂಬವೇ ಪರಬ್ರಹ್ಮವೆಂದು ತಿಳಿದು ಪುನಃ ನಿರ್ಣಯಿಸಿಕೊಳ್ಳುವುದಕ್ಕಾಗಿ ನೀರಿನಲ್ಲಿಯೂ ಕನ್ನಡಿಯಲ್ಲಿಯೂ ಇರುವ ಪ್ರತಿಬಿಂಬರೂಪವು ಯಾವುದು? ಎಂದು ವಿರೋಚನನು ಕೇಳಿದನು. (೬) (**ಏಷ ಉ ಏವೈಷು ಸರ್ವೇಷು** ಎಂದು ಪರಿಹಾರವಾಕ್ಯದ ಅಭಿಪ್ರಾಯ ಹೇಳುತ್ತಾರೆ—) ಚತುರ್ಮುಖನು ಜಲಾದಿಗಳಲ್ಲಿಯೂ ಪ್ರತಿಬಿಂಬಾದಿಗಳಿಗೆ ಪ್ರೇರಕನಾಗಿ ಶ್ರೀಪರಬ್ರಹ್ಮನೇ ಇರುವುದೆಂದು ಅಭಿಪ್ರಾಯ ಮಾಡಿಕೊಂಡು ತತ್ತ್ವಜ್ಞಾನಿಗಳನ್ನು ವಿವಕ್ಷಾಮಾಡಿಕೊಂಡು ಅವ್ಯಕ್ತನಾದ ಶ್ರೀಹರಿಯು ತೋರುತ್ತಾನೆಂದು ಹೇಳಿರುತ್ತಾರೆ.॥೭॥

ಏಳನೇ ಖಂಡವು ಮುಗಿಯಿತು.

ಎಂಟನೇ ಖಂಡವು

ಪೀ—ದಿವ್ಯದೃಷ್ಟಿಗೆ ಗೋಚರನಾದ, ಕಣ್ಣಿನೊಳಗಣ ಶ್ರೀಹರಿಯೇ ಜಲಾದಿಗಳಲ್ಲಿ ತೋರುತ್ತಾನೆ, ಎಂಬ ಅಭಿಪ್ರಾಯದಿಂದ ಚತುರ್ಮುಖನು ಹೇಳಿದರೂ ವಿರೋಚನನು ಕಣ್ಣು ಮೊದಲಾದವುಗಳಲ್ಲಿ ತೋರುವ ದೇಹಪ್ರತಿಬಿಂಬವೇ ಆತ್ಮನೆಂದು ತಿಳಿದುಕೊಂಡನು. ಯೋಗ್ಯತೆಯಿದ್ದರೇನೇ ತತ್ತ್ವಜ್ಞಾನವು ಹುಟ್ಟುವುದೆಂಬ ಅಭಿಪ್ರಾಯದಿಂದ ಪ್ರತಿಬಿಂಬದಲ್ಲಿ ಬಿಂಬವಾದ ದೇಹದ ಗುಣದಿಂದ ಗುಣವೂ, ಬಿಂಬ ದೋಷವೂ ಕಂಡದ್ರಿಂದ ದೇಹಪ್ರತಿಬಿಂಬವೇ ಬ್ರಹ್ಮನು, ಎಂಬುದು ಕೂಡಲಾರದೆಂಬ ಅಭಿಪ್ರಾಯದಿಂದ ಪ್ರತಿಬಿಂಬದಲ್ಲಿ ದೋಷಗಳನ್ನು ಸೂಚಿಸುತ್ತಾರೆ—

ಓಂ ॥ ಉದಶರಾವ ಆತ್ಮಾನಮವೇಕ್ಷ್ಯ ಯದಾತ್ಮನೋ ನ ವಿಜಾನೀಥ-
ಸ್ತನ್ಮೇ ಭ್ರೂತಮಿತಿ ತೌ ಹೋದಶರಾವೇವೇಕ್ಷಾಂಚಕ್ರಾತೇ ತೌ ಹ ಪ್ರ-

ಜಾಪತಿರುವಾಚ ಕಿಂ ಪಶ್ಯಥ ಇತಿ ತೌ ಹೋಚತುಃ ಸರ್ವಮೇವೇದನ್ನೂವಾಂ ಭಗವ ಆತ್ಮಾನಂ ಪಶ್ಯಾವ ಆ ಲೋಮಭ್ಯ ಆ ನಖೇಭ್ಯಃ ಪ್ರತಿರೂಪಮಿತಿ ॥ ೧ ॥

ಆ ॥ ನೀರು ತುಂಬಿದ ಮಣ್ಣಿನಬಾವಡೆಯಲ್ಲಿ ತನ್ನ ಶರೀರವನ್ನು ನೋಡಿ, ತನಗಿದ್ದ ಯಾವ ಅಂಗಾದಿಗಳನ್ನು ನೋಡುವುದಿಲ್ಲವೋ, ಅಂತಹ ತಿಳಿಯದ ಅಂಗಾದಿಗಳನ್ನು ನನಗೆ ಕೇಳಿರಿ, ಎಂದು ಚಕ್ರುಃ ಋನು ಹೇಳಿದನು. ಆಗ ಇಂದ್ರ ವಿರೋಚನರು ನೀರುತುಂಬಿದ ಮಣ್ಣಿನ ಬಾವಡೆಯಲ್ಲಿ ತಮ್ಮ ಶರೀರಗಳನ್ನು ನೋಡಿಕೊಂಡರು. ಬ್ರಹ್ಮನು ಏನು ನೋಡಿದಿರಿ, ಎಂದು ಇಂದ್ರ ವಿರೋಚನರಿಗೆ ಕೇಳಿದನು. ಆಗ ಅವರಿಬ್ಬರು ಎಲೋ ಪೂಜ್ಯರೇ ಎಲ್ಲವನ್ನು ನೋಡಿದೆವೆಂದರು. ಅಂದರೆ ನಾವಿಬ್ಬರೂ ರೋಮ ಉಗುರು ಇತ್ಯಾದಿಗಳಿಂದೊಡಗೂಡಿದ ಪ್ರತಿಬಿಂಬಭೂತ ಶರೀರವನ್ನು ನೋಡಿದೆವೆಂದರು ॥ ೧ ॥

ಉ. ॥ ತೌ ಹ ಪ್ರಜಾಪತಿರುವಾಚ ಸಾಧ್ವಲಂಕೃತೌ ಸುವಸನೌ ಪರಿಷ್ಕೃತೌ ಭೂತ್ವೋದಶರಾವೇಽವೇಕ್ಷೇಥಾಮಿತಿ ತೌ ಹ ಸಾಧ್ವಲಂಕೃತೌ ಸುವಸನೌ ಪರಿಷ್ಕೃತೌ ಭೂತ್ವೋದಶರಾವೇಽವೇಕ್ಷಾಂಚಕ್ರಾತೇ ತೌ ಹ ಪ್ರಜಾಪತಿರುವಾಚ ಕಿಂ ಪಶ್ಯಥ ಇತಿ ॥ ೨ ॥

ಆ ॥ ಚೆನ್ನಾಗಿ ಅಲಂಕಾರ ಮಾಡಿಕೊಂಡು ಒಳ್ಳೇ ವಸ್ತ್ರವುಟ್ಟುಕೊಂಡು ಚೆನ್ನಾಗಿ ಗಂಧಾದಿಗಳನ್ನು ಲೇಪಿಸಿಕೊಂಡು ನೀವು ನೀರು ತುಂಬಿದ ಮಣ್ಣಿನ ಬಾವಡೆಯಲ್ಲಿ ನೋಡಿರಿ, ಎಂದು ಬ್ರಹ್ಮನು ಮರಳಿ ಅವರಿಗೆ ಹೇಳಿದನು. ಆಗ ಇಂದ್ರ ವಿರೋಚನರು ಚೆನ್ನಾಗಿ ಅಲಂಕರಿಸಿಕೊಂಡು ಒಳ್ಳೇ ಬಟ್ಟೆಯುಟ್ಟುಕೊಂಡು ಗಂಧಾದಿಗಳನ್ನು ಲೇಪಿಸಿಕೊಂಡು ಆ ನೀರಿನ ಬಾವಡೆಯಲ್ಲಿ ನೋಡಿದರು ಆ ಮೇಲೆ ಇಂದ್ರ ವಿರೋಚನರಿಗೆ ಬ್ರಹ್ಮನು ಏನು ನೋಡಿರುವಿರಿ, ಎಂದು ಕೇಳಿದನು ॥ ೨ ॥

ಉ. ॥ ತೌ ಹೋಚತುರ್ಯಥೈವೇದಮಾವಾಂ ಭಗವಃ ಸಾಧ್ವಲಂಕೃತೌ ಸುವಸನೌ ಪರಿಷ್ಕೃತೌ ಸ್ವ ಏವಮೇವೇಮೌ ಭಗವಃ ಸಾಧ್ವಲಂಕೃತೌ ಸುವಸನೌ ಪರಿಷ್ಕೃತಾವಿತಿ ಏಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ಬ್ರಹ್ಮೇತಿ ತೌ ಹ ಶಾಂತಹೃದಯೌ ಪ್ರವವ್ರಜತುಃ ॥ ೩ ॥

ಆ ॥ ಎಲೋ ಪೂಜ್ಯರೇ ನಾವಿಬ್ಬರು ಚೆನ್ನಾಗಿ ಅಲಂಕರಿಸಿಕೊಂಡು ಒಳ್ಳೇ ಬಟ್ಟೆಯುಟ್ಟುಕೊಂಡು ಗಂಧಾದಿಗಳನ್ನೇ ಲೇಪಿಸಿಕೊಂಡು ಇರುವವರು ಹೇಗೆ ಆಗಿರುವೆವೋ, ಹಾಗೆಯೇ ಈ ಪ್ರತಿಬಿಂಬಗಳೂ ಆಗಿವೆ, ಎಂದು ಇಂದ್ರ ವಿರೋಚನರು ಹೇಳಿದರು. ಆಮೇಲೆ ಹೀಗೆ ದೇಹಗುಣದಿಂದಲೂ ದೋಷದಿಂದಲೂ ಕೂಡಿರುವ ಪ್ರತಿಬಿಂಬವೇ ಆತ್ಮನೋ, ಅಮೃತನೋ, ಅಭಯನೋ? ಎಂದು ಬ್ರಹ್ಮನು ಕೇಳಿದನು. (ಆಂದರೆ ಪ್ರತಿಬಿಂಬವು ಆತ್ಮನೂ ಅಮೃತನೂ ಅಭಯನೂ ಹೇಗೆ ಆದೀತು?) ಹೀಗೆ ಕಾಕುಸ್ವರದಿಂದ ಹೇಳಿದ್ದನ್ನು ತಿಳಿಯದೆ ವಿರೋಚನನು ಪ್ರತಿಬಿಂಬವೇ ಬ್ರಹ್ಮನೆಂದು ತಿಳಿದು ಶಾಂತನಾಗಿ ಪರಬ್ರಹ್ಮನನ್ನು ತಿಳಿದುಕೊಂಡು ಹೋದನು ಮತ್ತು ಶ್ರೀಹರಿಯೇ ಬಿಂಬಕ್ಕೆ ಅನುಗುಣವಾದ ಪ್ರತಿಬಿಂಬವನ್ನು ಸೃಷ್ಟಿಸಿರುವ ಆತ್ಮನು ಅಮೃತನು ಅಭಯನು, ಎಂದು ಇಂದ್ರನು ತಿಳಿದು ಹೋದನು. ಹೀಗೆ ಶ್ರೀಹರಿಯು ಎಂಬ ಅಭಿಪ್ರಾಯದಿಂದ ಬ್ರಹ್ಮನು ಹೇಳಿದರೂ ವಿರೋಚನನು ಅಯೋಗ್ಯನಾಗಿರುವುದರಿಂದ ಪ್ರತಿ

ಬಿಂಬವೇ, ಬ್ರಹ್ಮನು. ಅವನ ಪೂಜೆಗಾಗಿ ತನ್ನ ಪೂಜೆಯನ್ನೇ ಮಾಡಬೇಕು, ಎಂದು ತಿಳಿದು ಬ್ರಹ್ಮನು ಸೂಚಿಸಿದ ದೋಷವನ್ನು ಗಣನೆಮಾಡದೆ ಇಂದ್ರನಿಂದೊಡಗೂಡಿ ವಿರೋಚನನು ಹೋದನು. ಎಂದು ವೇದಪುರುಷನು ಹೇಳಿದನು. ॥ ೩ ॥

ಉ. ॥ ತೌ ಹಾನ್ವೀಕ್ಷ್ಯ ಪ್ರಜಾಪತಿರುವಾಚಾನುಪಲಭ್ಯಾತ್ಮಾನಮನ-ನುವಿದ್ಯ ವ್ರಜತೋ ಯತರದಿತದುಪನಿಷದೋ ಭವಿಷ್ಯಂತಿ ದೇವಾ ವಾಽಸುರಾ ವಾ ತೇ ಪರಾಭವಿಷ್ಯಂತೀತಿ ಸಹ ಶಾಂತಹೃದಯ ಏವ ವಿರೋಚನೋಽಸು-ರಾನ್ ಜಗಾಮ ತೇಭ್ಯೋ ಹೈತಾಮುಪನಿಷದಂ ಪ್ರೋವಾಚಾತ್ಮೈವೇಹ ಮಹಯ್ಯ ಆತ್ಮಾ ಪರಿಚರ್ಯ ಆತ್ಮಾನಮೇವೇಹ ಮಹಯನ್ನಾತ್ಮಾನಂ ಪರಿಚರನ್ನುಭೌ ಲೋಕಾವವಾಪ್ನೋತೀಮಂ ಚಾಮುಂ ಚೇತಿ ॥ ೪ ॥

ಅ ॥ (ಪರಬ್ರಹ್ಮನ ತತ್ವವನ್ನು ಜಿನ್ನಾಗಿ ಚತುರ್ಮುಖನು ಉಪದೇಶಿಸಿರುವನು, ಎಂಬ ಅಭಿಪ್ರಾಯ ದಿಂದ) ಹೋಗುತ್ತಿರುವ ಇಂದ್ರ ವಿರೋಚನರನ್ನು ನೋಡಿ ಬ್ರಹ್ಮನು (ತಾನು ಮಧ್ಯಸ್ಥನು ಎಂದು ತಿಳಿಸುತ್ತಾ) ಹೇಳಿದನು. ಅಪಹತ ಪಾಪ್ಮತ್ವಾದಿಗುಣಗಳುಳ್ಳ ಆತ್ಮನನ್ನು ಹೊಂದದೆ (ಅಂದರೆ ಶ್ರವಣಮನನಾದಿ ಗಳಿಂದ ಜಿನ್ನಾಗಿ ತಿಳಿಯದೆ) ಪ್ರತ್ಯಕ್ಷವಾಗಿ ಹೋಗತಕ್ಕ ಪುರುಷನಿಂದ, ದೇವತೆಗಳಾಗಲೀ ಅಸುರರಾಗಲೀ ಯಾರಾದರೂ ಈ ಉಪನಿಷತ್ತಿನ ರಹಸ್ಯ ಪ್ರಮೇಯವನ್ನು ಉಪದೇಶ ಪಡೆದುಕೊಳ್ಳುತ್ತಾರೋ, ಅಥವಾ (ತನಗೆ ಅಭಿಪ್ರೇತವಾದ ಅರ್ಥವನ್ನು ತಿಳಿಯುವುದು ಅಸಾಧ್ಯವಾಗಿರುವುದರಿಂದ) ಉಪನಿಷತ್ತಿನಲ್ಲಿ ಆಪಾತತಃ ತೋರುವ ಅರ್ಥವನ್ನು ತಿಳಿದವರಾಗುತ್ತಾರೋ, ಅವರು ಪರಾಜಯವುಳ್ಳವರಾಗುತ್ತಾರೆ, ಎಂದು ಚತುರ್ಮುಖನು ಹೇಳಿದನು. ಆಗ ವಿರೋಚನನು ನಾನು ಪರಬ್ರಹ್ಮನನ್ನು ತಿಳಿದಿರುತ್ತೇನೆ, ಗಹನವೇನಿದೆ? ಎಂಬ ಅಭಿಪ್ರಾಯದಿಂದಲೇ ಅಸುರರ ಬಳಿಗೆ ಹೋದನು. ಆಶ್ಚರ್ಯ. ಅಸುರರಿಗೆ ದೇಹಪ್ರತಿಬಿಂಬವೇ ಬ್ರಹ್ಮನು, ಬಿಂಬ ಪ್ರತಿಬಿಂಬಗಳಿಗೆ ಐಕ್ಯವು, ಜೀವಾತ್ಮನೂ ಬ್ರಹ್ಮನೇ, ಎಂಬೀ ರಹಸ್ಯವನ್ನು ಉಪದೇಶಿಸಿದನು. (ಅದನ್ನೇ ವಿವರಿಸುತ್ತಾರೆ) ಜಗತ್ತಿನಲ್ಲಿ ತನ್ನ ದೇಹವೇ, ಅಥವಾ ಜೀವನೇ ವಸ್ತ್ರ ಆಲಂಕಾರ ಗಳಿಂದ ಪೂಜಿಸಿಕೊಳ್ಳಲ್ಪಡತಕ್ಕವನು. (ಜೀವನೇ ಬ್ರಹ್ಮನಾದುದರಿಂದ ಪರಬ್ರಹ್ಮನಿಗೆ ಪೂಜಾದಿಗಳನ್ನು ಮಾಡಬೇಕೆಂದು ಇಚ್ಛಿಸುವವರಿಂದ) ಜೀವನೇ ಸೇವಿಸಲ್ಪಡಬೇಕು. (ಹೀಗೆ ಜೀವನಿಗೆ ಪೂಜಾದಿಗಳನ್ನು ಮಾಡಿದರೆ ಫಲ ಹೇಳುತ್ತಾರೆ.) ಜಗತ್ತಿನಲ್ಲಿ ದೇಹವನ್ನೇ ಅಥವಾ ಜೀವನನ್ನೇ ಪೂಜಿಸುತ್ತಾ, ಸೇವಿಸುತ್ತಾ ಇರುವವನು ಈ ಲೋಕ, ಪರಲೋಕ, ಹೀಗೆ ಎರಡು ಲೋಕಗಳನ್ನು ಹೊಂದುತ್ತಾನೆ, ಎಂದು ವಿರೋಚನನು ಹೇಳಿದನು. (ಏವಂಚ ಬ್ರಹ್ಮನಿಂದ ಅಭಿನ್ನನಾದ ಜೀವನ ಪೂಜಾದಿಗಳೇ ಉಭಯ ಲೋಕಗಳಿಗೆ ಸಾಧನಗಳೆಂದು ವೇದಾದಿಗಳಲ್ಲಿ ಹೇಳಿವೆ.) ॥ ೪ ॥

ಟೀ—ವಿರೋಚನನು ತಿಳಿದದ್ದು ಅಸುರರ ಮತವು ಎಂದು ವೇದವು ಹೇಳುತ್ತದೆ

ಉ. ॥ ತಸ್ಮಾದಪ್ಯದ್ಯೇಹಾದದಾನಮಶ್ರದ್ಧಧಾನಮಯಜಮಾನಮಾಹು-ರಾಸುರೋ ಬತೇತ್ಯಸುರಾಣಾꣳ ಹ್ಯೇಷೋಪನಿಷತ್ತೇತಸ್ಯ ಶರೀರಂ ಭಿಕ್ಷಯಾ ವಸನೇನಾಲಂಕಾರೇಣೇತಿ ಸꣳಸ್ಕುರ್ವಂತ್ಯೇತೇನ ಹ್ಯಮುಂ ಲೋಕಂ ಜೇ-ಷ್ಯಂತೋ ಮನ್ಯಂತೇ ॥ ಇತಿ ಷಷ್ಠೋಽಖಂಡಃ ॥ ೧೦-೮ ॥ ॥ ೫ ॥

ಅ ॥ ದೇಹವನ್ನೇ ಪೂಜಿಸಬೇಕೆಂಬುವುದು ಅಸುರರ ಪಕ್ಷವಾದುದರಿಂದಲೇ ಅಥವಾ ಅಸುರರ ಪಕ್ಷದಲ್ಲಿ ಜೀವನೇ ಬ್ರಹ್ಮನೆಂದು ಪೂಜಿಸಲ್ಪಡುವುದರಿಂದ ಈಗಲೂ ಜೀವನಿಂದ ಬೇರೆಯಾದ ಈಶ್ವರನಿಗೆ ಪ್ರೀತಿಯಾಗಬೇಕೆಂಬ ಉದ್ದೇಶದಿಂದ ದಾನವನಾಡದಿರುವ ಜೀವನಿಂದ ಬೇರೆ ಈಶ್ವರನಿದ್ದಾನೆಂಬುವಲ್ಲಿ ಶ್ರದ್ಧೆಯಿಲ್ಲದಿರುವ, ಜೀವನಿಂದ ಬೇರೆಯಾದ ಈಶ್ವರನಿಗೆ ಪ್ರೀತಿಯಾಗಬೇಕೆಂಬ ಉದ್ದೇಶದಿಂದ ಯಾಗ ಮಾಡದಿರುವ, ಕೇವಲ ತನ್ನ ಭೋಗದಲ್ಲಿಯೇ ಆಸಕ್ತರಾದ ಜನರನ್ನು ಪ್ರಾಜ್ಞರು ನೋಡಿ, ಇವರು ಅಸುರಸ್ವಭಾವದವರು, ಆಶ್ಚರ್ಯ! ಶ್ರೀಹರಿಯು ಸರ್ವೋತ್ತಮನೆಂದು ತಿಳಿಯುವುದಿಲ್ಲ, ಎನ್ನುತ್ತಾರೆ. ಯಾಗಾದಿ ಸತ್ಕರ್ಮಗಳನ್ನು ಮಾಡದಿರುವುದು ಇತ್ಯಾದಿಗಳು ಅಸುರರ ರಹಸ್ಯವಾಗಿರುವುದರಿಂದ ವಿರೋಚನನಿಂದ ಉಪದೇಶ ಪಡೆದುಕೊಂಡ ಅಸುರರು ಈಗಲೂ ಪ್ರೇತಶರೀರವನ್ನು (ಜೀವವಿಲ್ಲದ ಹೆಣವನ್ನು) ಭಿಕ್ಷಾದಿಗಳಿಂದ ಪ್ರಾಪ್ತವಾದ ಗಂಧ ಮಾಲ್ಯ ವಸ್ತ್ರ ಅಲಂಕಾರಾದಿಗಳಿಂದ ಅಲಂಕರಿಸುತ್ತಾರೆ. ಪ್ರೇತ ದೇಹವನ್ನು ಅಲಂಕರಿಸುವವರು ಈ ಲೋಕವನ್ನೂ ಪರಲೋಕವನ್ನೂ ಹೊಂದುವರೆಂದು ಅಸುರರು ತಿಳಿಯುತ್ತಾರೆ.

ವಿ ॥ ಪ್ರತಿಬಿಂಬಭೂತ ಬ್ರಹ್ಮನಿಂದ ಅಭಿನ್ನನಾದ ಜೀವನ ಶರೀರವನ್ನು ಅಲಂಕರಿಸಿದರೆ ಜೀವಾಭಿನ್ನ ಬ್ರಹ್ಮನಿಗೂ ತೃಪ್ತಿಯಾಗುತ್ತದೆಂಬ ಅಭಿಪ್ರಾಯದಿಂದ ಅಸುರರು ಪೂಜಿಸುತ್ತಾರೆ ॥ ೧೦--೪ ॥ ॥೫ ।

ಪೀ—ಈ ಖಂಡದ ತಾತ್ಪರ್ಯ ಹೇಳುತ್ತಾರೆ—

ಭಾ. ॥ (೧) ತಥಾಽಪಿ ಯೋಗ್ಯತೈವಾತ್ರ ಭೂಯಸೀತಿ ನಿವೇದಿತುಂ । ದರ್ಶಯನ್ ಪ್ರತಿರೂಪಸ್ಯ ದೋಷಾನಾಹ ಪ್ರಜಾಪತಿಃ । ಅಲಂಕಾರಾದಿಭಿರ್ಯುಕ್ತಃ ಪಶ್ಯೈನೇತಿ ವಿವೇಚಯನ್ ॥ (೨) ಯಥಾ ದೇಹಗುಣೇ ಗೌಣ್ಯಂ ದೋಷೇ ದೋಷಾಸ್ತಥೈವ(ಥೇತಿ) ತು ॥ (೩) ತಥಾಽಪ್ಯರುದ್ಧ ಭಾವತ್ವಾತ್ಪ್ರತಿರೂಪಸ್ಯ ತದ್ಗುಣಾನ್ । ಪರಸ್ಯ ಬ್ರಹ್ಮಣೋ ಜಾನನ್ ಯಯೌ ತುಷ್ಟವನಾಃ ಸ್ವಯಂ ॥ (೪) ಅಸುರಾಣಾಮವಿಶ್ವಾಸನಿವೃತ್ಯರ್ಥಂ ಪಿತಾಮಹಃ। ಮಾಧ್ಯಸ್ಥ್ಯಂ ಜ್ಞಾಪಯಾನಶ್ಚ ಜಾನನ್ವೈರೋಚನಂ ಮನಃ । ಪ್ರಾಹಾಜ್ಞಾನಾಂ ಪರಾಭಾವ ಇತ್ಯುಜ್ಜೈತ್ರ ಪುನಃಪುನಃ ॥ (೫) ತಥಾಽಪ್ಯರುದ್ಧ ಭಾವತ್ವಾದಜಾನನ್ನೇವ ನಿರ್ಯಯೌ ॥ (೬) ಗತ್ವಾ ಚೈವ ಪರಂಬ್ರಹ್ಮ ಪ್ರತಿರೂಪಾತ್ಮಕಂ ಸದಾ । ದಿದೇಶ ಸರ್ವಾಸುರಾಣಾಂ ಶರೀರಾಲಂಕೃತೇರಪಿ । ಅಲಂಕೃತಿಂ ಬ್ರಹ್ಮಣಶ್ಚ ಪ್ರತ್ಯಕ್ಷೇಣೋಪಲಂಭಿತಾಂ ॥ (೭) ಅತೋಽಸುರಾ ನ ದಾಸ್ಯಂತಿ ನ ಯಜಂತ್ಯಾತ್ಮನಃ ಪರಂ । ಸ್ವಭೋಗೇನೈವ ತೃಪ್ತಿಃ ಸ್ಯಾದಿತಿ ಸರ್ವೇಽಪಿ ಮೇನಿರೇ ॥ ತತ್ಸಂಸ್ಕಾರವಶೇನೈವ ಸ್ವಯಂ ಬ್ರಹ್ಮೇತಿವಾದಿನಃ । ಅಭವನ್ನಪತಂಶ್ಚೈವ ತಮೋಽಂಧೇ ನಿತ್ಯದುಃಖಿತಾಃ ॥ ೧, ೨, ೩, ೪, ೫ ॥ ಇತ್ಯಷ್ಟಮಃ ಖಂಡಃ ॥ ೧೦-೪ ॥ ॥ ೧ ॥

ಅ ॥ (೧) (ಬಿಂಬವಾದ ದೇಹವು ಅಲಂಕೃತವಾಗಿದ್ದರೆ ಪ್ರತಿಬಿಂಬವೂ ಅಲಂಕೃತವಾಗಿ ತೋರುತ್ತದೆ. ದೇಹವು ಅಲಂಕರಿಸಲ್ಪಡದಿದ್ದರೆ ಅದರ ಪ್ರತಿಬಿಂಬವೂ ಅಲಂಕರಿಸಲ್ಪಡದಿದ್ದ ಹಾಗೆ ಕಾಣುತ್ತದೆ. ಈ ಎರಡು ಪ್ರತಿಬಿಂಬವೂ ಪರಬ್ರಹ್ಮನಲ್ಲವೆಂದು ಯದ್ಯಪಿ ಸ್ಪಷ್ಟವಾಗಿ ತಿಳಿಯಲು ಶಕ್ಯವಾಗಿದೆ.) ಆದರೂ (ವಿರೋಚನನು ಹಾಗೆ ತಿಳಿಯಲಿಲ್ಲ. ಅದುಕಾರಣ) ಈ ವಿಷಯದಲ್ಲಿ ಯೋಗ್ಯತೆಯೇ ಶ್ರೇಷ್ಠವು. ಎಂದು ತಿಳಿಸಲಿಕ್ಕೆ, ಚತುರ್ಮುಖ ಬ್ರಹ್ಮನು (ಪ್ರತಿಬಿಂಬದಿಂದ ಪರಬ್ರಹ್ಮನು ಬೇರೆಯೆಂದು) ತೋರ್ಪಡಿಸುವುದಕ್ಕಾಗಿ ಪ್ರತಿಬಿಂಬದಲ್ಲಿದ್ದ ದೋಷಗಳನ್ನು ಸೂಚಿಸುತ್ತಾ ಅಭರಣಾದಿಗಳನ್ನು ಧರಿಸಿ

ಕೊಂಡು ಪ್ರತಿಬಿಂಬವನ್ನು ನೋಡು ಎಂದು ಬ್ರಹ್ಮನು ವಿರೋಚನನಿಗೆ ಹೇಳಿದನು. (೨) (ಅಲಂಕಾರಾದಿ ಗಳಿಂದೊಡಗೂಡಿ ನೋಡು ಎಂಬುದರಿಂದ ದೋಷವು ಹೇಗೆ ಸೂಚಿತವಾಯಿತೆಂದರೆ) ದೇಹದಲ್ಲಿ ಗುಣ ವಿದ್ದರೆ ಪ್ರತಿಬಿಂಬದಲ್ಲಿಯೂ ಗುಣಗಳು ತೋರುತ್ತವೆ. ದೋಷಗಳಿದ್ದರೆ ಪ್ರತಿಬಿಂಬದಲ್ಲಿಯೂ ದೋಷ ಗಳು ತೋರತ್ತವೆ, ಹೀಗೆ ದೋಷಗಳನ್ನು ತೋರಿಸುವುದಕ್ಕಾಗಿ ಹೇಳಿದರು. (ಅದುಕಾರಣ ಜ್ಞಾನಿಗೆ ದೋಷವೂ ತಿಳಿಯಲು ಶಕ್ಯವಾಗುತ್ತದೆ.) (೩) (ಚತುರ್ಮುಖನು ದೋಷವನ್ನು ಸೂಚಿಸಿದರೂ ವಿರೋ ಚನನು ಶಾಂತಹೃದಯನಾಗಿಯೇ ಹೇಗೆ ಹೋದನು? ಎಂದರೆ) ಬ್ರಹ್ಮನು ದೋಷವನ್ನು ಸೂಚಿಸಿದರೂ ವಿರೋಚನನು ಶುದ್ಧಸ್ವಭಾವವುಳ್ಳವನಾಗಿರುವುದರಿಂದ ಪ್ರತಿಬಿಂಬದಲ್ಲಿದ್ದ ಎಲ್ಲಾ ಗುಣಗಳನ್ನು ಪರ ಬ್ರಹ್ಮನ ಗುಣಗಳನ್ನಾಗಿ ತಿಳಿದುಕೊಂಡು ತಾನು ಸಂತುಷ್ಟವಾದ ಮನಸ್ಸುಳ್ಳವನಾಗಿ ಹೊರಟುಹೋದನು. (೪) (ಇನೇ ಮೆಂತ್ರದಲ್ಲಿದ್ದ **ಅನುಪಲಭ್ಯಾತ್ಮಾನಂ—ಪರಾಭವಿಷ್ಯಂತಿ** ಎಂಬ ಚತುರ್ಮುಖ ವಚನದ ಅಭಿಪ್ರಾಯ ಹೇಳುತ್ತಾರೆ.) ಚತುರ್ಮುಖನು ಅಸುರರಿಗೆ ಅವಿಶ್ವಾಸವು ಬರಬಾರದು, ವಿಶ್ವಾಸವು ಹುಟ್ಟಬೇಕೆಂಬುದಕ್ಕಾಗಿ ಮಧ್ಯಸ್ಥನೆಂದು ತಿಳಿಸುತ್ತಾ ವಿರೋಚನನ ಮನಸ್ಸು ವ್ಯತಾಸವಾಗುವುದಿಲ್ಲ, ಎಂದು ತಾನು ತಿಳಿದುಕೊಂಡು, (ಉಪನಿಷತ್ತಿನ ರಹಸ್ಯ ಪ್ರಮೇಯವನ್ನು) ತಿಳಿಯದವರಿಗೆ ಪರಾಜಯವು ಉಂಟಾಗುತ್ತದೆ, ಎಂದು ಉಚ್ಚಸ್ವರದಿಂದ ಮತ್ತು ಮತ್ತು ಹೇಳಿದನು. (೫) (**ಸಹ ಶಾಂತಹೃದಯ ವಿವ** ಎಂಬ ವಾಕ್ಯದ ಅರ್ಥಹೇಳುತ್ತಾರೆ.) ಬ್ರಹ್ಮನು ಹೀಗೆ ಹೇಳಿದರೂ ವಿರೋಚನನು ಅಶುದ್ಧವಾದ ಸ್ವಭಾವವುಳ್ಳವನಾದುದರಿಂದ (ಈ ವಿಷಯದಲ್ಲಿ ಗಹನವೇನಿದೆ? ಎಂಬ ಅಭಿಪ್ರಾಯದಿಂದ ಗೋಪ್ಯಾರ್ಥ ವನ್ನು) ತಿಳಿಯದವನಾಗಿಯೇ ಹೊರಟುಹೋದನು. (೬) (**ತೇಭ್ಯೋ ಹೈತಾಮುಪನಿಷದಂ ಪ್ರೋವಾ-ಚ** ಇತ್ಯಾದಿ ವಾಕ್ಯಗಳ ಅರ್ಥಹೇಳುತ್ತಾರೆ.) ಅಸುರರ ಬಳಿಗೆ ವಿರೋಚನನು ಹೋಗಿ ಸದಾ ದೇಹ ಪ್ರತಿಬಿಂಬವೇ ಪರಬ್ರಹ್ಮನು, ಎಂಬುಪದೇಶಿಸಿದನು. ಶರೀರಕ್ಕೆ ಅಲಂಕಾರಾದಿಗಳು ಆದರೆ ಪ್ರತಿಬಿಂಬ ನಾದ ಬ್ರಹ್ಮನಿಗೇನೇ ಅಲಂಕಾರಾದಿಗಳು ಆಗುತ್ತವೆಂಬುದು ರಹಸ್ಯ ಪ್ರಮೇಯವೆಂದು ಅದನ್ನೂ ಎಲ್ಲಾ ಅಸುರರಿಗೆ ಉಪದೇಶಿಸಿದನು. (ಮತ್ತು ೭ನೇ ಖಂಡದ ೪ನೇ ಮಂತ್ರದಲ್ಲಿದ್ದ **ಪುರುಷೋ ದೃಶ್ಯತೇ** ಎಂ ಬುದರ ಅರ್ಥಹೇಳುತ್ತಾರೆ) ಕಣ್ಣಿನೊಳಗಣ ದೇಹ ಪ್ರತಿಬಿಂಬವೇ ಬ್ರಹ್ಮನಾದುದರಿಂದ ಪ್ರತಿಬಿಂಬವು ಪ್ರತ್ಯಕ್ಷವಾಗುವಾಗ ಬ್ರಹ್ಮನೂ ಪ್ರತ್ಯಕ್ಷವಾಗಿ ತೋರುತ್ತಾನೆ, ಎಂದು ರಹಸ್ಯ ಪ್ರಮೇಯವನ್ನು ಪದೇಶಿಸಿ ರುವನು. (೭) (**ತಸ್ಮಾದಪ್ಯದ್ಯ** ಎಂಬ ೫ನೇ ಮಂತ್ರದ ಅರ್ಥಹೇಳುತ್ತಾರೆ.) ಅಸುರರ ಪಕ್ಷದಲ್ಲಿ ಜೀವ ರನ್ನೇ ಬ್ರಹ್ಮನೆಂದು ಪೂಜಿಸಬೇಕಾಗಿರುವುದರಿಂದ ಅಸುರರು ತಮ್ಮಿಂದ (ಜೀವರಿಂದ) ಬೇರೆಯಾದ ಈಶ್ವರನ ಪ್ರೀತಿಗಾಗಿ ದಾನಮಾಡುವುದಿಲ್ಲ, ಯಾಗಮಾಡುವುದಿಲ್ಲ, (ತಮಗೂ ಬ್ರಹ್ಮನಿಗೂ ವಿಶ್ಯವಿದ್ದ ಪ್ರಯುಕ್ತ) ತಮ್ಮ ಭೋಗದಿಂದಲೇ ಬ್ರಹ್ಮನಿಗೂ ತೃಪ್ತಿಯಾಗುವುದೆಂದು ಎಲ್ಲಾ ಅಸುರರೂ ತಿಳಿದು ಕೊಂಡರು ಶರೀರಕ್ಕೆ ಅಲಂಕಾರವಾದರೆ ಪ್ರತಿಬಿಂಬಕ್ಕೂ ಅಲಂಕಾರವಾತ್ತದೆಂಬ ಸಂಸ್ಕಾರವಶದಿಂದಲೇ ಅಸುರರು ತಾವೇ ಬ್ರಹ್ಮ ಎಂದು ತಿಳಿದುಕೊಂಡರು. ಆಮೇಲೆ ನಿತ್ಯದಲ್ಲಿಯೂ ದುಃಖಿತರಾಗಿ ಅಂಧಂತ ಮನಸ್ಸಿನಲ್ಲಿ ಬಿದ್ದರು.

ವಿ ॥ ಜೀವರ ಶರೀರವನ್ನು ಅಲಂಕರಿಸಿದರೆ ಪ್ರತಿಬಿಂಬಕ್ಕೆ ಅಲಂಕಾರವಾಗುತ್ತದೆಂದು ತೋರಿಸಿ ದ್ರಿಂದ ಬಿಂಬಪ್ರತಿಬಿಂಬಗಳಿಗೆ ಅಭೇದವನ್ನೇ ಚತುರ್ಮುಖನು ತೋರಿಸಿರುವನು. ಬಿಂಬವಾದ ಜೀವ ಚೈತನ್ಯಶರೀರದಲ್ಲಿ ತೋರುವ ಪ್ರತಿಬಿಂಬಭೂತ ಬ್ರಹ್ಮಾಭೇದವು ಜೀವಾಭೇದದಲ್ಲಿ ಪರ್ಯವಸಾನವಾಗುತ್ತದೆ. ಏಕೆಂದರೆ - ಶರೀರವು ಮರಣಶೀಲವಾಗಿರುವುದರಿಂದ ಶರೀರದಲ್ಲಿ ಆಮೃತದಿಂದ ಅಭೇದವೂ ಬ್ರಹ್ಮನಿಂದ ಅಭೇದವೂ ಕೂಡಲಾರದು. ಆದುಕಾರಣ ಶರೀರಕ್ಕೆ ಅಭಿಮಾನಿಯಾದ ಜೀವನಿಗೇನೇ ಬ್ರಹ್ಮಾಭೇದವನ್ನು ಉಪದೇಶಿಸಿದ್ದೆಂದು ತಿಳಿದು **ಸ್ವಯಂ ಬ್ರಹ್ಮೇತಿ ವಾದಿನಃ** ತಾವೇ ಬ್ರಹ್ಮರು ಎಂದು ಅಸುರರು ತಿಳಿದು ಕೊಂಡರು ॥ ೧೦—೮ ॥ ॥ ೮ ॥

ಎಂಟನೇ ಖಂಡವು ಮುಗಿಯಿತು

೯ನೇ ಖಂಡವು

ಪೀ—ಹೀಗೆ ಜಾಗ್ರದವಸ್ಥೆಗೆ ಪ್ರೇರಕನಾದ ಕಣ್ಣಿನೊಳಗಣ ವಿಶ್ವನೆಂಬ ಶ್ರೀ ಹರಿಯು ಪ್ರತಿಬಿಂಬ ಮೊದಲಾದ ಬಾಹ್ಯ ಪದಾರ್ಥಗಳನ್ನು ಸೃಷ್ಟಿಸುವ ಅಪಹತಪಾಪ್ಮತ್ವಾದಿ ಗುಣಗಳುಳ್ಳ ಆತ್ಮನೆಂದು ಇಂದ್ರನು ತಿಳಿದುದು ಯುಕ್ತವು. ವಿರೋಚನನು ತಿಳಿದ ಪ್ರತಿಬಿಂಬವಾದರೂ ಅಪಹತಪಾಪ್ಮತ್ವಾದಿ ಗುಣಗಳುಳ್ಳ ಆತ್ಮನಲ್ಲವೆಂದು ಹೇಳುತ್ತಾರೆ—

ಉ. ॥ ಅಥ ಹೇಂದ್ರೋಽಪ್ರಾಪ್ಯೈವ ದೇವಾನೇತದ್ಭಯಂ ದದರ್ಶ ಯಥ್ಸೈವ ಖಲ್ವಯಮಸ್ಮಿಂಛರೀರೇ ಸಾಧ್ವಲಂಕೃತೇ ಸಾಧ್ವಲಂಕೃತೋ ಭವತಿ ಸುವಸನೇ ಸುವಸನಃ ಪರಿಷ್ಕೃತೇ ಪರಿಷ್ಕೃತ ಏವಮೇವಾಯಮಸ್ಮಿನ್ನಂಧೇಽಂಧೋ ಭವತಿ ಸ್ರಾಮೇ ಸ್ರಾಮಃ ಪರಿವೃಕ್ಣೇ ಪರಿವೃಕ್ಣೋಽಸ್ಯೈವ ಶರೀರಸ್ಯ ನಾಶಮನ್ವೇಷ ನಶ್ಯತಿ ನಾಹಮತ್ರ ಭೋಜ್ಯಂ ಪಶ್ಯಾಮೀತಿ ॥ ೧ ॥

ಆ ॥ ವಿರೋಚನನು ಹೋದ ಮೇಲೆ ಇಂದ್ರನು ದೇವತೆಗಳ ಬಳಿಗೆ ಹೋಗುವುದಕ್ಕಿಂತ ಮೊದಲೇ ಮಧ್ಯಮಾರ್ಗದಲ್ಲಿ ಭಯಂಕರವಾದ ಬ್ರಹ್ಮನಿಗೆ ಅಭಿಪ್ರೇತವಾದ ದೋಷವನ್ನು ಕಂಡನು. ಇಂತಹ ಮಹಾಭಿಪ್ಸಾಯವು ಯೋಗ್ಯರಿಗೇನೇ ಹುಟ್ಟುವುದು. ಅಯೋಗ್ಯರಿಗೆ ಹುಟ್ಟಲಾರದು. (ದೋಷವನ್ನು ಕಂಡನೆಂಬುವುದನ್ನು ವಿವರಿಸುತ್ತಾರೆ.) ಹೇಗೆ ಈ ಪ್ರತಿಬಿಂಬವಾದ ದೇಹವು ಶರೀರವು ಅಲಂಕೃತವಾದರೆ ಅಲಂಕೃತವಾಗುತ್ತದೋ, ಒಳ್ಳೇ ಬಟ್ಟೆಯುಟ್ಟುಕೊಂಡರೆ ಒಳ್ಳೇ ಬಟ್ಟೆಯುಟ್ಟುಕೊಂಡದ್ದಾಗುತ್ತದೋ, ಗಂಧಾದಿಗಳಿಂದ ಲೇಪಿಸಲ್ಪಟ್ಟಿದ್ದರೆ ಈ ಪ್ರತಿಬಿಂಬವಾದ ದೇಹವೂ ಲೇಪಿಸಲ್ಪಡುತ್ತದೋ, ಹೀಗೆಯೇ ಈ ಜೀವ ಶರೀರವು ಕಣ್ಣು ಇಲ್ಲದಿದ್ದುದಾದರೆ ಪ್ರತಿಬಿಂಬವೂ ಕಣ್ಣು ಇಲ್ಲದಿದ್ದುದಾಗುತ್ತದೆ. ಕುಷ್ಠಾದಿಗಳಿಂದ ವಿವರ್ಣವಾಗಿದ್ದರೆ ಇದೂ ವಿವರ್ಣವಾಗಿ ಕಾಣುತ್ತದೆ. ಅವಯವಗಳು ತುಂಡಾಗಿದ್ದರೆ ಇದೂ ಹಾಗೆಯೇ ಕಾಣುತ್ತದೆ ಈ ಬಾಹ್ಯ ಶರೀರವು ನಾಶ ಹೊಂದಿದರೆ ಪ್ರತಿಬಿಂಬವೂ ನಾಶ ಹೊಂದುತ್ತದೆ. ಆದಕಾರಣ ಪ್ರತಿಬಿಂಬವೇ ಬ್ರಹ್ಮನು ಎಂಬ ಜ್ಞಾನವಿದ್ದರೆ ಭೋಗ್ಯವಾದ ಮೋಕ್ಷಾದಿಗಳನ್ನು ಹೊಂದಲಾರನು.

ವಿ ॥ (1) ಇಂತಹ ವಸ್ತುವಿನ ಜ್ಞಾನದಿಂದ ಮೋಕ್ಷಾದಿಗಳು ಸರ್ವಥಾ ಆಗಲಾರವು. (2) ಹಿಂದೆ ಹೇಳಿದ ಅಮೃತತ್ವಾದಿಗಳಾವುದೂ ಪ್ರತಿಬಿಂಬಕ್ಕೆ ಕೂಡಲಾರದು, ಇತ್ಯಾದಿ ದೋಷಗಳು ಇಂದ್ರನಿಗೆ ತೋರಿದವು ॥ ೧ ॥

ಪೀ—ಆದುಕಾರಣ ವಿರೋಚನನು ತಿಳಿದ ಪ್ರಕಾರ ಪ್ರತಿಬಿಂಬವು ಸರ್ವಥಾ ಬ್ರಹ್ಮವಲ್ಲ. ಪರಂತು ತಾನು (ಇಂದ್ರನು) ತಿಳಿದುದೇ ಯುಕ್ತವೆಂದು ನಿಶ್ಚಯಿಸಿ ಈ ಅರ್ಥವನ್ನು ಚತುರ್ಮುಖನಿಗೆ ತಿಳಿಸಿ ಅವರ ಮುಖದಿಂದಲೂ ಪ್ರತಿಬಿಂಬವು ಬ್ರಹ್ಮನಲ್ಲ, ಎಂದು ದೃಢೀಕರಿಸಿಕೊಳ್ಳುವುದಕ್ಕಾಗಿಯೂ ಸ್ವಪ್ನಾವಸ್ಥಾ ಪ್ರವರ್ತಕತ್ವರೂಪವಾದ ಮಹಿಮೆಯನ್ನು ಕೇಳುವುದಕ್ಕಾಗಿಯೂ, ಮರಳಿ ಇಂದ್ರನು ಬ್ರಹ್ಮನ ಬಳಿಗೆ ಬಂದನೆಂದು ಹೇಳುತ್ತಾರೆ—

ಉ. ॥ ಸ ಸಮಿತ್ಪಾಣಿಃ ಪುನರೇಯಾಯ ತಂ ಹ ಪ್ರಜಾಪತಿರುವಾಚ ಮಘವನ್ಯತ್ಕಾಂತಹೃದಯಃ ಪ್ರಾವ್ರಾಜೀಃ ಸಾರ್ಧಂ ವಿರೋಚನೇನ ಕಿಮಿಚ್ಛನ್ನುನರಾಗನು ಇತಿ ಸ ಹೋವಾಚ ಯಥ್ಸೈವ ಖಲ್ವಯಂ ಭಗವೋಽಸ್ಮಿಂ-

ಛರೀರೇ ಸಾಧ್ವಲಂಕೃತೇ ಸಾಧ್ವಲಂಕೃತೋ ಭವತಿ ಸುವಸನೇ ಸುವಸನಃ ಪರಿಷ್ಕೃತೇ ಪರಿಷ್ಕೃತ ಏವಮೇವಾಯಮಸ್ಮಿನ್ನಂಧೇಽಂಧೋ ಭವತಿ ಸ್ರಾಮೇ ಸ್ರಾಮಃ ಪರಿವೃಕ್ಣೇ ಪರಿವೃಕ್ಣೋಽಸ್ಯೈವ ಶರೀರಸ್ಯ ನಾಶಮನ್ವೇಷ ಪಶ್ಯತಿ ನಾಹಮತ್ರ ಭೋಜ್ಯಂ ಪಶ್ಯಾಮೀತಿ ॥ ೨ ॥

ಅ ॥ ಇಂದ್ರನು ಕೈಯಲ್ಲಿ ಸಮಿಧೆ ಹಿಡಿದುಕೊಂಡು ಬ್ರಹ್ಮನ ಬಳಿಗೆ ಮರಳಿ ಒಂದನು. ಆಗ ಬ್ರಹ್ಮನು ಎಲೋ ಇಂದ್ರನೇ ಶಾಂತಹೃದಯನಾಗಿ ವಿರೋಚನನಿಂದೊಡಗೂಡಿ ಹೋಗಿರುವಿ. ಯಾವ ಉದ್ದೇಶದಿಂದ ಮರಳಿ ಬಂದಿರುತ್ತಿ, ಎಂದು ಇಂದ್ರನಿಗೆ ಕೇಳಿದನು. ಆಗ ಇಂದ್ರನು ಹೇಳಿದನು ಎಲೋ ಪೂಜ್ಯರೇ ಈ ಶರೀರವು ಹೇಗೆ ಇದೆಯೋ, ಹಾಗೆಯೇ *ನೀರಿನಲ್ಲಿಯೂ ಕನ್ನಡಿಯಲ್ಲಿಯೂ ಪ್ರತಿಬಿಂಬವು ತೋರುತ್ತದೆ. ಆದು ಕಾರಣ ಪ್ರತಿಬಿಂಬವೇ ಬ್ರಹ್ಮನು ಎಂಬ ಜ್ಞಾನವಿದ್ದರೆ ಮೋಕ್ಷಾದಿಗಳು ಆಗಲಾರವು, ಅದರ ತತ್ತ್ವ ನಿಶ್ಚಯಕ್ಕಾಗಿ ಬಂದೆನು. ಎಂದು ಇಂದ್ರನು ಹೇಳಿದನು ॥ ೨ ॥

ಉ. ॥ ಏವಮೇವೈಷ ಮಘವನ್ನಿತಿ ಹೋವಾಚೈತಂ ತ್ವೇವ ತೇ ಭೂಯೋಽನುವ್ಯಾಖ್ಯಾಸ್ಯಾಮಿ ವಸಾಪರಾಣಿ ದ್ವಾತ್ರಿಂಶತಂ ವರ್ಷಾಣೀತಿ ಸಹಾಪರಾಣಿ ದ್ವಾತ್ರಿಂಶತಂ ವರ್ಷಾಣ್ಯುವಾಸ ತಸ್ಮೈ ಸ ಹೋವಾಚ ॥ ಇತಿ ನವಮಃ ಖಂಂಡಃ ॥ ೧೦-೯ ॥ ॥ ೩ ॥

ಅ ॥ ಆಗ ಚತುರ್ಮುಖನು ಎಲೋ ಯಶಸ್ವಿಯಾದ ಇಂದ್ರನೇ ಪ್ರತಿಬಿಂಬವೆಂದು ಇಟ್ಟುಕೊಂಡರೆ ನೀನು ಹೇಳಿದ ಪ್ರಕಾರ ದೋಷವು ತೋರುವ ಕಾರಣ ಪ್ರತಿಬಿಂಬವೇ ಬ್ರಹ್ಮನೆಂಬುದು ನನಗೆ ಸಮ್ಮತವಾದ ಅರ್ಥವಲ್ಲ. ಪರಂತು ಜಾಗ್ರದಾದ್ಯವಸ್ಥೆಗಳಿಗೆ ಪ್ರೇರಕನಾದ ಶ್ರೀಹರಿಯು ಆತ್ಮನೆಂದು ನೀನು ತಿಳಿದುಕೊಂಡ ಅರ್ಥವೇ ನನಗೆ ಸಮ್ಮತವಾದುದು, ಎಂದನು. ಮತ್ತು ಎಲೋ ಇಂದ್ರನೇ ಜಾಗ್ರದವಸ್ಥಾ ಪ್ರೇರಕತ್ವಾದಿರೂಪ ಮಹಿಮೆಯುಳ್ಳ ಆತ್ಮನೇ ವಿಶೇಷವಾಗಿ ಸ್ವಪ್ನಾದ್ಯವಸ್ಥಾ ಪ್ರೇರಕತ್ವಾದಿರೂಪ ಮಹಿಮೆಯುಳ್ಳವನೆಂಬುದನ್ನು ಮೂವತ್ತೆರಡು ವರ್ಷಗಳಲ್ಲಿ ನಿನ್ನ ಯೋಗ್ಯತಾನುಸಾರ ನಿನಗೆ ನಾನು ಹೇಳುವೆನು, ಎಂದು ಬ್ರಹ್ಮನು ಹೇಳಿದನು. ಆಗ ಇಂದ್ರನು ಮೂವತ್ತೆರಡು ವರ್ಷಗಳಲ್ಲಿ ಆದಕ್ಕಾಗಿ ಆವಾಸ ಮಾಡಿದನು. ಬ್ರಹ್ಮನು ಇಂದ್ರನಿಗೆ ಆ ತತ್ತ್ವವನ್ನು ಉಪದೇಶಿಸಿದನು. ॥ ೧೦—೯ ॥ ॥ ೩ ॥

ಪೀ—ಈ ಖಂಡದ ತಾತ್ಪರ್ಯ ಹೇಳುತ್ತಾರೆ—

ಭಾ. ॥ (೧) ಇಂದ್ರಶ್ಚ(ಸ್ತು) ಜಾನನ್ನಪಿ ತು ಮೋಹಯನ್ನಸುರಂ ತದಾ । ಗತ್ವಾ ನಿವರ್ತತೇ ಪಶ್ಚಾದಿವ ಪಶ್ಯನ್ ಸದೋಷತಾಂ ॥ (೨) ಪುನಃಪುನಶ್ಚ ಮೋಹಾಯ ಗತ್ವಾ ಗತ್ವಾ ನಿವರ್ತತೇ । ಕಥಂಚಿದೇವ ವಿಜ್ಞಾತಂ ಮಯೇತ್ಯಜ್ಞಾನ್ನಿಮೋಹಿತುಂ ॥ ೧,೨,೩ ॥ ಇತಿ ನವಮಃ ಖಂಡಃ ॥ ೧೦—೯ ॥ ॥ ೧ ॥

ಅ ॥ (೧) ಇಂದ್ರನು ತತ್ತ್ವವನ್ನು ತಿಳಿದವನಾದರೂ ಅಸುರರಿಗೆ ಮೋಹ ಹುಟ್ಟಿಸುವುದಕ್ಕೆ ಮೋಹಕವಾಕ್ಯವೆಂದರಿಯದವನಂತೆ ಮುಂದೆಹೋಗಿ ಹಿಂತೆರಳಿದನು. (೨) (ಮುಂದೆಮುಂದೆ ಹೋಗಿ ಹಿಂತೆರಳಿಕ್ಕೆ ಕಾರಣ ಹೇಳುತ್ತಾರೆ.) ಮತ್ತು ಮತ್ತು ಮೋಹಹುಟ್ಟುವುದಕ್ಕಾಗಿ ಅಂದರೆ—ಇಂದ್ರನು ಬಹು

* ಹಿಂದಿನಂತೆ ಪುನಃ ರಂತೆಅರ್ಥ ಇಟ್ಟುಕೊಳ್ಳಬೇಕು.

ಪ್ರಯಾಸದಿಂದಲೇ ತತ್ತ್ವವನ್ನು ತಿಳಿದದ್ದು, ಎಂದು ಅಜ್ಞರಿಗೆ ಮೋಹಹುಟ್ಟಿಸುವುದಕ್ಕಾಗಿ ಅನೇಕಾವರ್ತಿ ಮುಂದೆ ಮುಂದೆ ಹೋಗಿ ಹಿಂತೆರಳಿ ಬಂದನು. ॥ ೧೦—೯ ॥ ॥ ೯ ॥

ಒಂಭತ್ತನೇ ಖಂಡವು ಮುಗಿಯಿತು

೧೦ನೇ ಖಂಡವು

ಪೀ—ಇಂದ್ರನಿಗೆ ಬ್ರಹ್ಮನು ಹೇಳಿದ್ದನ್ನು ವಿವರಿಸುತ್ತಾರೆ—

ಉ. ॥ ಯ ಏಷ ಸ್ವಪ್ನೇ ಮಹೀಯಾನಶ್ಚರತ್ಯೇಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ಬ್ರಹ್ಮೇತಿ ಸ ಹ ಶಾಂತಹೃದಯಃ ಪ್ರವವ್ರಾಜ ಸ ಹಾಪ್ರಾಪ್ಯೈವ ದೇವಾನೇತದ್ಭಯಂ ದದರ್ಶ ತದ್ಯದಪೀದꣳ ಶರೀರಮಂಧಂ ಭವತ್ಯನಂಧಃ ಸ ಭವತಿ ಯದಿ ಸ್ರಾಮ್ಯತಿಸ್ರಾಮ್ಯತೋ ನೈವೈಷೋಽಸ್ಯ ದೋಷೇಣ ದುಷ್ಯತಿ ॥ ೧ ॥

ಅ ॥ ಯಾವನು ಅಪಹತಪಾಪ್ಮಾದಿ ಲಕ್ಷಣಗಳುಳ್ಳವನೋ, ಯಾವನು ಕಣ್ಣಿನಲ್ಲಿದ್ದಾನೋ, ಯಾವನು ಸ್ವಪ್ನದಲ್ಲಿ (ಸ್ತ್ರೀಮೊದಲಾದವರಿಂದ) ಪೂಜಿಸಿಕೊಳ್ಳಲ್ಪಡುವವನಾಗಿ ಅನೇಕ ವಿಧಗಳಾದ ಸ್ವಪ್ನ ಭೋಗಗಳನ್ನು ಅನುಭವಿಸುತ್ತಾನೋ, ಇವನು ಆತ್ಮನೆಂದು ಅಪಾತತಃ ತೋರುವ ಅರ್ಥವು. (ಬ್ರಹ್ಮನಿಗೆ ಅಭಿಪ್ರೇತವಾದ ಅರ್ಥವು ಈ ರೀತಿಯಾದುದು.) ಕಂಠದೇಶದಲ್ಲಿರತಕ್ಕ ಯಾವ ಶ್ರೀಹರಿಯು ಜೀವನಿಗೆ ಸ್ವಪ್ನಾವಸ್ಥೆಯಲ್ಲಿ (ಇಂದ್ರಿಯಾಭಿಮಾನಿಗಳಾದ ಪ್ರಾಣಾದಿಗಳಿಂದ) ಪೂಜಿಸಿಕೊಳ್ಳಲ್ಪಡುವವನಾಗಿಯೇ ತಾನು ಸೃಷ್ಟಿಮಾಡಿದ ಆನೆ ಕುದುರೆ ಮೊದಲಾದವುಗಳನ್ನು ಜೀವನಿಗೆ ತೋರಿಸುತ್ತಾನೋ, ತಾನೂ ತಿಳಿದುಕೊಳ್ಳುತ್ತಾನೋ, ಇಂತಹ ಮಹಿಮೆಯುಳ್ಳವನು ಆತ್ಮನು. ನಿತ್ಯಮುಕ್ತನು, ಭಯವಿಲ್ಲದವನು, ಗುಣಪೂರ್ಣನು, ಎಂದು ಬ್ರಹ್ಮನ ಅಭಿಪ್ರಾಯವೆಂದು ಇಂದ್ರನು ತಿಳಿದನು. ಇಂದ್ರನು ಶಾಂತಹೃದಯನಾಗಿಯೇ ಹೊರಟುಹೋದನು. ಇಂದ್ರನು ಚತುರ್ಮುಖನ ಉಪದೇಶದಿಂದ ಸ್ವಪ್ನಾವಸ್ಥೆಗೆ ಪ್ರೇರಕನಾದವನು ಆತ್ಮನು, ಶ್ರೀಹರಿಯು, ಎಂದು ಜೀವಾತ್ಮನಿಗಿ ತಿಳಿದಿದ್ದರೂ ಅಸುರರಿಗೆ ಮೋಹಬರುವುಕ್ಕಾಗಿ, **ಸ್ವಪ್ನೇ ಮಹೀಯಮಾನಶ್ಚರತ್ಯೇಷ ಆತ್ಮಾ** ಎಂಬ ಶಬ್ದದಿಂದ ಅಪಾತತಃ ತೋರುವ, ಸ್ವಪ್ನದಲ್ಲಿ ಕಾಣಲ್ಪಡುವ ಜೀವನೇ ಅಪಹತ ಪಾಪ್ಮತ್ವಾದಿಗುಣಗಳುಳ್ಳ ಆತ್ಮನು, ಎಂದು ಬ್ರಹ್ಮನು ಹೇಳಿದನೆಂದು ತಿಳಿದವನಂತೆ ದೇವತೆಗಳ ಬಳಿಗೆ ಹೋಗುವುದಕ್ಕಿಂತ ಮೊದಲೇ ಮಧ್ಯದಲ್ಲಿಯೇ ಇಂದ್ರನು ಭಯಹೊಂದಿದನು (ಅಂದರೆ—ಅಪಾತತಃ ತೋರುವ ಅರ್ಥ ಇಟ್ಟುಕೊಂಡರೆ ಮಹಾದೋಷವಿದೆ, ಎಂದು ತಿಳಿದುಕೊಂಡನು) (ಭಯಂದದರ್ಶ ಎಂಬುದನ್ನು ವಿವರಿಸುತ್ತಾರೆ.) ಯದ್ಯಪಿ ಸ್ವಾಪ್ನ ಪದಾರ್ಥಗಳನ್ನು ನೋಡತಕ್ಕ ಜೀವನ ಬಾಹ್ಯಶರೀರದಲ್ಲಿ ಕಣ್ಣು ಇಲ್ಲವಾದರೂ ಶರೀರವು ಕುಷ್ಠಾದಿಗಳಿಂದ ವಿವರ್ಣವಾಗಿದ್ದರೂ ಸ್ವಪ್ನದಲ್ಲಿ ತೋರುವ ಜೀವನು ಅಂಧನಾಗುವುದಿಲ್ಲ. ಅಥವಾ ಸ್ವಪ್ನದಲ್ಲಿ ತೋರುವ ವಾಸನಾಮಯವಾದ ದೇಹವು ಕಣ್ಣು ಇಲ್ಲದ್ದಾಗುವುದಿಲ್ಲ ಕುಷ್ಠಾದಿಗಳಿಂದ ವಿವರ್ಣವಾಗುವುದಿಲ್ಲ ದೇಹದ ದೋಷವಥಾದಿಗಳಿಂದ ಸ್ವಾಪ್ನ ಜೀವನು ದೋಷವಥಾದಿಗಳನ್ನು ಹೊಂದುವುದಿಲ್ಲ ॥ ೧ ॥

ಉ. ॥ ನ ವಧೇನಾಸ್ಯ ಹನ್ಯತೇ ನಾಸ್ಯ ಸ್ರಾಮೇಣ ಸ್ರಾನೋ ಘ್ನೆಂತಿ ತ್ವೇವೈನಂ ವಿಚ್ಛಾದಯಂತೀವಾಪ್ರಿಯಮೇತ್ರೇವ ಭವತ್ಯಪಿ ರೋದಿತೀವ ನಾಹಮತ್ರ ಭೋಜ್ಯಂ ಪಶ್ಯಾಮೀತಿ ॥ ೨ ॥

ಅ ॥ ನೋಡತಕ್ಕ ಜೀವನ ಶರೀರದ ಹಸ್ತಾದಿ ಛೇದರೂಪವಾದ ದೋಷದಿಂದ ಸ್ವಾಪ್ನ ಜೀವನು ಹಸ್ತಾದಿ ಛೇದವುಳ್ಳವನಾಗುವುದಿಲ್ಲ. ಕುಷ್ಠಾದಿಗಳ ವಿವರ್ಣದಿಂದ ವಿವರ್ಣನಾಗುವುದಿಲ್ಲ. (ಏವಂಚ ಪ್ರತಿಬಿಂಬವೇ ಬ್ರಹ್ಮನು ಎಂಬ ಕಲ್ಪದಲ್ಲಿ ಹೇಳಿದ ದೋಷವು ಇಲ್ಲವಾದರೂ ದೋಷಾಂತರವಿದೆ, ಎನ್ನುತ್ತಾರೆ.) ಆದರೂ ಸ್ವಪ್ನದಲ್ಲಿ ಸ್ವಾಪ್ನ ಪದಾರ್ಥಗಳನ್ನು ಕಾಣುವ ಜೀವನನ್ನು ಸ್ವಪ್ನದಲ್ಲಿ (ಕಳ್ಳರು) ವಿಶೇಷವಾಗಿ ಸಂಹರಿಸುವಂತೆ ಕಾಣುವುದು. ವಿಶೇಷವಾಗಿ ಗರ್ತ (ಹೊಂಡ) ಮೊದಲಾದವುಗಳಲ್ಲಿ ಹುಗಿಯುವಂತೆ ಕಾಣುವುದು. ಅಥವಾ ತಿಂದುಬಿಡುವ ಹಾಗೆ ಕಾಣುವುದು. ಸ್ವಾಪ್ನ ಜೀವನು ಅಪ್ರಿಯವನ್ನು ಹೊಂದಿದವನಂತೆ ಕಾಣುತ್ತಾನೆ. ಅಥವಾ ದುಃಖವನ್ನು ಹುಟ್ಟಿಸುವ ವಿಷಯಗಳನ್ನು ಭೋಗಿಸುವವನಂತೆ ಕಾಣುತ್ತಾನೆ. ಮರುಗುವವನಂತೆ ತೋರುತ್ತಾನೆ ಇಂತಹ ವಸ್ತುವಿನ ಜ್ಞಾನದಿಂದ ಮೋಕ್ಷಾದಿಗಳು ಆಗಲಾರವು. ಹೀಗೆ ಭಯಂಕರವಾದ ದೋಷವನ್ನು ಕಂಡನು ॥ ೨ ॥

ಉ. ॥ ಸ ಸಮಿತ್ಪಾಣಿಃ ಪುನರೇಯಾಯ ತꣳ ಹ ಪ್ರಜಾಪತಿರುವಾಚ ಮಘವನ್ಮರ್ತ್ಯಂ ವಾ ಏತꣳ ಶರೀರಮಾತ್ತಂ ಮೃತ್ಯೋರೇತನ್ನಾತ್ತಾಽಮೃತಸ್ಯಾಶರೀರಸ್ಯಾತ್ಮನೋ ಽಧಿಷ್ಠಾನಮಾತ್ತೋ ವೈ ಸಶರೀರಃ ಪ್ರಿಯಾಪ್ರಿಯಾಭ್ಯಾಂ ನ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತ್ಯಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ ॥ ೩ ॥

ಉ. ॥ ಸ ವಾ ಏಷ ಏವಂ ಸಂಪ್ರಸಾದೋ ಽಸ್ಮಾಚ್ಛರೀರಾತ್ಸಮುತ್ಥಾಯ ಪರಂ ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಉತ್ತಮಃ ಪುರುಷಃ ಸ ತ್ವಂ ಭಗವಃ ಕಥಮಿತಿ ಹೋವಾಚ ಸಮ್ರಾಡಿತಿ ಹೋವಾಚ ಮಾ ಮಾ ಭಗವಾನ್ವಿಜಾನೀಯಾನ್ಮಾಯಮಸ್ಮೀತಿ ಭಗವಾಂಸ್ತ್ವೇವೈತದನುವಿಜಾನಾತ್ವಿತಿ ತಸ್ಮಾ ಉ ಹೈವೈತದುವಾಚಾಸುರೀಷು ವೈ ಬಲಿಷು ವೈರೋಚನೇಷ್ವೇತದ್ಭೂತಂ ತೇಷಾಂ ಹ ಪುರಾಣಾನಿ ಮಾಯಾಭಿರಾಸುರೀಭಿರುಪಜಗ್ರುಸ್ತೈರಯಮಾತ್ಮಾ ಪರಾಭವಾಯೈವಾಸುರಾಯ ಮಿಥ್ಯಾಪ್ರಸಾದಂ ಪ್ರಸಾದಯತಿ ಯಥಾ ಹ ವಾ ಇದಮಾಸುರೀಭಿರಾಸುರಾಣಾಂ ಪುರಾಣಾನಿ ಮಾಯಾ

ಪೀ--ಅಯೋಗ್ಯನಾದ ವಿರೋಚನನು ಹಿಂತಿರಿಗಿ ಹೋದಮೇಲೆ ತತ್ತ್ವ ತಿಳಿಯಲು ಯೋಗ್ಯನಾದ ಇಂದ್ರನಿಗೆ ಯ ವಿಷ ಸ್ವಪ್ನೇ ಮಹೀಯಮಾನಕ್ಷರತಿ ಎಂದು ಸಮ್ಮುಗ್ಧಾಕಾರವಾಗಿಯೇ ಬ್ರಹ್ಮನು ಏಕೆ ಉಪದೇಶಿಸಿರುವನು? ಎಂದರೆ—

ಭಾ. ॥ (೧)ತದ್ಯೋಗ್ಯಾನ್ಯೇವ ವಾಕ್ಯಾನಿ ಬ್ರಹ್ಮಾಪ್ಯಾಹ ಪುನಃಪುನಃ । ಗರೀಯಸೀ ಯೋಗ್ಯತೇತಿ ಜ್ಞಾಪಯನ್ಪೂರ್ವವತ್ಪುನಃ । ಸಂದಿಗ್ಧಾನ್ಯೇವ ವಾಕ್ಯಾನಿ ಪ್ರೋವಾಚೇಂದ್ರಾಯ ಚಾತ್ಮಭೂಃ ॥ (೨) ಸ್ವಪ್ನಂ ಪ್ರದರ್ಶಯನ್ಸ್ತು ಪೂಜ್ಯತೇ ಸರ್ವದೈವತೈಃ । ಸ ಏವ ವಿಷ್ಣುರಿತ್ಯಾಹ ॥ (೩) ತತ್ರಾಪ್ಯಾಹ ಪುರಂದರಃ । ದರ್ಶಯನ್ನಾಸುರೀಂ ಬುದ್ಧಿಂ ಸ್ವಪ್ನದೃಶ್ಯವಿವಕ್ಷಯಾ । ಘ್ನಂತೀವೈನಮದಂತೀವ ತಥಾ ನ ಸ್ಯಾತ್ಪರೋ ಹರಿಃ ॥೧,೨,೩,೪॥ ಇತಿ ದಶಮಃ ಖಂಡಃ ॥ ೧೦–೧೦ ॥ ॥ ೧ ॥

ಅ ॥ (೧) ಮೋಹಕ್ಕೆ ಯೋಗ್ಯಗಳೇ ಆದ ವಾಕ್ಯಗಳನ್ನು ಮತ್ತುಮತ್ತು ಬ್ರಹ್ಮನು ಹೇಳಿರುವನು. ಏಕೆಂದರೆ ಯೋಗ್ಯತೆಯು ಶ್ರೇಷ್ಠವಾಗಿರುವುದರಿಂದ (ಯೋಗ್ಯನಾದವನು ತನ್ನ ಯೋಗ್ಯತಾನುಸಾರ ಮೋಹಕ ವಾಕ್ಯದಲ್ಲಿ ತೋರುವ ಅಪಾತಾರ್ಥವನ್ನು ಬಿಟ್ಟು ಯೋಗ್ಯವಾದ ತತ್ತ್ವಾರ್ಥವನ್ನು ತಿಳಿದು ಕೊಳ್ಳಲಿ, ಎಂದು) ಜತುರ್ಮುಖನು ಇಂದ್ರನಿಗೆ ತಿಳಿಸುವುದಕ್ಕಾಗಿ ಸಂದಿಗ್ಧಗಳೇ ಆದ ವಾಕ್ಯಗಳನ್ನು ಹೇಳಿದನು. (೨) (ಯ ವಿಷ ಸ್ವಪ್ನೇ ಮಹೀಯಮಾನಃ ಎಂಬ ಉಪದೇಶದ ಅಭಿಪ್ರಾಯ ಹೇಳುತ್ತಾರೆ–) ಯಾವನು ಸ್ವಾಪ್ನವಸ್ತುಗಳನ್ನು ತೋರಿಸುತ್ತಾ ಎಲ್ಲಾ ದೇವತೆಗಳಿಂದ ಪೂಜಿಸಿ ಕೊಳ್ಳಲ್ಪಡುತ್ತಾನೋ, ಆತನೇ ವಿಷ್ಣುವೆಂದು ಅಭಿಪ್ರಾಯದಿಂದ ಬ್ರಹ್ಮನು ಉಪದೇಶಿಸಿದನು. (೩) (ಅಲ್ಲದೆ ಸ್ವಪ್ನದಲ್ಲಿ ಪೂಜಿಸಲ್ಪಡುವ ಜೀವನು ಆತ್ಮನೆಂಬುದು ಬ್ರಹ್ಮನಿಗೆ ಅಭಿಪ್ರೇತವಲ್ಲ,) (ಸ ಹಾಪ್ರಾಪ್ಯೈವ ದೇವಾನ್ ಇತ್ಯಾದಿ ವಾಕ್ಯಗಳ ತಾತ್ಪರ್ಯಹೇಳುತ್ತಾರೆ–) ಆ ವಾಕ್ಯಕ್ಕೂ ಇಂದ್ರನು ಅಸುರರಲ್ಲಿರುವ ಅಜ್ಞಾನವು ತನ್ನಲ್ಲಿದೆ ಎಂದು ತೋರಿಸುತ್ತಾ ಸ್ವಪ್ನದಲ್ಲಿ ತೋರುವವನು ಜೀವನೆಂದು ಇಟ್ಟುಕೊಂಡು ಈ ಜೀವನನ್ನು ಕಳ್ಳರು ಕೊಲ್ಲುತ್ತಾರೆಂಬುವ ಹಾಗೂ ತಿನ್ನುತ್ತಾರೆಂಬುವ ಹಾಗೂ ತೋರುವುದರಿಂದ ಆತನೇ ಪರಮಾತ್ಮನೆಂದು ತಿಳಿಯುವುದು ಹೇಗೆ? ಏಕೆಂದರೆ ಹಾಗೆ ದೋಷಗಳುಳ್ಳವನು ಸರ್ವೋತ್ತಮನಾಗಲಾರನು, ಎಂದು ಇಂದ್ರನು ಕೇಳಿದನು. ॥ ೧೦—೧೦ ॥ ॥ ೧ ॥

ಹತ್ತನೇ ಖಂಡವು ಮುಗಿಯಿತು.

೧೧ನೇ ಖಂಡವು

ಪೀ—ಜತುರ್ಮುಖನು ಇಂದ್ರನಿಗೆ ಏನು ಹೇಳಿದನೆಂದರೆ—

ಉ. ॥ ತದ್ಯತ್ರೈತತ್ಸುಪ್ತಃ ಸಮಸ್ತಃ ಸಂಪ್ರಸನ್ನಃ ಸ್ವಪ್ನಂ ನ ವಿಜಾನಾತ್ಯೇಷ ಆತ್ಮೇತಿ ಹೋವಾಚೈತದಮೃತಮಭಯಮೇತದ್ಬ್ರಹ್ಮೇತಿ ಸೇ ಹ ಶಾಂತಹೃದಯಃ ಪ್ರವವ್ರಾಜ ಸ ಹಾಪ್ರಾಪ್ಯೈವ ದೇವಾನೇತದ್ಭಯಂ ದದರ್ಶ ನಾಹಂ ಖಲ್ವಯಮೇವಸ್ಮಿ ಸಂಪ್ರತ್ಯಾತ್ಮಾನಂ ಜಾನಾತ್ಯಯಮಹಮಸ್ಮೀತಿ

ನೋ ಏವೇಮಾನಿ ಭೂತಾನಿ ವಿನಾ ಶಮೇವಾಪೀತೋ ಭವತಿ ನಾಹಮನುತ್ರ ಭೋಗ್ಯಂ ಪಶ್ಯಾಮೀತಿ ॥ ೧ ॥

ಅ ॥ ಗಾಢನಿದ್ದೆಯಲ್ಲಿದ್ದವನು ಇಂದ್ರಿಯವ್ಯಾಪಾರಗಳು ಯಾವುದೂ ಇಲ್ಲದವನಾಗಿ ಸಂತುಷ್ಟನಾಗಿ ಸ್ವಪ್ನವನ್ನು ತಿಳಿಯುವುದಿಲ್ಲ. ಇವನೇ ಆತ್ಮನು. ಇದರಿಂದ ಸುಷುಪ್ತಿಯಲ್ಲಿರುವ ಜೀವನೇ ಆತ್ಮನೆಂದು ಆಪಾತತಃ ತೋರುವ ಅರ್ಥವು. ಆ ಅವಸ್ಥೆಯಲ್ಲಿ ಯಾವ ಪ್ರಾಜ್ಞರೂಪಿಯಾದ ಶ್ರೀಹರಿಯಲ್ಲಿ ಸ್ವಾಪಹೊಂದಿದ (ನಿದ್ರಿತನಾದ) ಜೀವನು ಇಂದ್ರಿಯವ್ಯಾಪಾರಗಳಿಲ್ಲದವನಾಗಿ ಸ್ವರೂಪ ಸುಖಾನುಭವವುಳ್ಳವನಾಗಿ ಸ್ವಪ್ನವನ್ನು ತಿಳಿಯುವುದಿಲ್ಲವೋ, (ಜಾಗ್ರತ್ಪದಾರ್ಥವನ್ನು ತಿಳಿಯುವುದಿಲ್ಲವೆಂಬುದು ಸುತರಾಂ ಸಿದ್ಧವು.) ಅಂದರೆ ಸುಷುಪ್ತಿಯನ್ನು ಹೊಂದುತ್ತಾನೆ. ಅಂತಹ ಜೀವನಿಗೆ ನಿಯಾಮಕನಾದ ಪ್ರಾಜ್ಞರೂಪಿ ಪರಮಾತ್ಮನೇ ನಿಯಾಮಕನಾದ ಆತ್ಮನೆಂದು ಬ್ರಹ್ಮನು ಹೇಳಿದನು. ಆಗ ಸುಷುಪ್ತ್ಯವಸ್ಥೆಯನ್ನು ಹೊಂದಿಸಿಕೊಡತಕ್ಕ ಸುಪ್ತರಿಗೆ ಆಧಾರನಾದ ಪ್ರಾಜ್ಞರೂಪಿಯಾದ ಶ್ರೀಹರಿಯು ಆತ್ಮನು, ನಿತ್ಯವುಕ್ತನು, ಭಯವಿಲ್ಲದವನು, ಜೀವರಿಗಿಂತ ಭಿನ್ನನು, ಗುಣಪೂರ್ಣನು ಎಂದು ಬ್ರಹ್ಮನು ಹೇಳಿದುದು, ಇದು ಬ್ರಹ್ಮನ ಅಭಿಪ್ರಾಯವೆಂದು ಇಂದ್ರನು ತಿಳಿದುಕೊಂಡಿದ್ದರೂ ಅಸುರರಿಗೆ ಮೋಹ ಬರುವುದಕ್ಕಾಗಿ ಜೀವರಿಂದ ಭಿನ್ನನಾದವನನ್ನು ನೋಡುವುದಿಲ್ಲ, ಎಂದನು. ಇಂದ್ರನು ಶಾಂತಹೃದಯನಾಗಿ ಹೋದನು. ಇಂದ್ರನು ಹೋಗುತ್ತಿರುವಾಗ ಮಾರ್ಗಮಧ್ಯದಲ್ಲಿ ಸುಪ್ತಿಯಲ್ಲಿ ಜೀವನೇ ಆತ್ಮನು ಎಂದು ಬ್ರಹ್ಮನು ಹೇಗೆ ಹೇಳಿದನು, ಎಂದು ಆಪಾತತಃ ತೋರುವ ಅರ್ಥ ಇಟ್ಟುಕೊಂಡು ಜೀವರಿಂದ ಭಿನ್ನನಾದವನನ್ನು ತಿಳಿಯದವನಂತೆ, ದೇವತೆಗಳನ್ನು ಹೊಂದದೇನೇ ಇಂದ್ರನು ಭಯಪಟ್ಟವನಂತೆ ತೋರಿಸಿದನು. (ಅದನ್ನು ವಿವರಿಸುತ್ತಾರೆ—) ಸುಪ್ತನಾದ ನಾನು, ಇಂತಹನಾಗಿರುತ್ತೇನೆಂದು ತಿಳಿಯುವುದಿಲ್ಲ. ಹೀಗೆ ಬ್ರಹ್ಮನು ಹೇಳಿದ ಪ್ರಕಾರ ಆಧಾರನಾದ ಆತ್ಮನನ್ನು ನಾನು ತಿಳಿಯುವುದಿಲ್ಲ. ಈ ಪ್ರಾಣಿಗಳೂ ತಿಳಿಯುವುದಿಲ್ಲ. ಆದಕಾರಣ ಆಧಾರನಾದ ಆತ್ಮನು ಇಲ್ಲವೇ ಇಲ್ಲ. ಎಂದು ಆಪಾತತಃ ತೋರುವ ಅರ್ಥದಿಂದ ಭಯಹುಟ್ಟಿದವನಂತೆ ತೋರಿಸಿದನು. (ಹಾಗಾದರೆ. ಜೀವನು ಸುಷುಪ್ತಿಕಾಲದಲ್ಲಿ ಪರಮಾತ್ಮನಲ್ಲಿ ಐಕ್ಯ ಹೊಂದಲಿ, ಎಂದರೆ—ಜೀವನು ಸುಷುಪ್ತಿಕಾಲದಲ್ಲಿ ಶ್ರೀಹರಿಯಲ್ಲಿ ಪ್ರವೇಶ ಮಾಡುವುದಾದರೆ—ಸುಖವಿಲ್ಲದೇನೇ ಇರಬೇಕಾಗುವುದು ಅಂದರೆ—ಸುಖಾನುಭವವಿಲ್ಲದೆ ಇರಬೇಕಾಗುವುದು. (ಏಕೆಂದರೆ ತನ್ನ ಮನೆಬಿಟ್ಟು ಇನ್ನೊಂದು ಮನೆಗೆ ಹೋದವನಿಗೆ ಸುಖವಿಲ್ಲ ಹಾಗಂತ **ಏತಾವಂತಂ ಕಾಲಂ ಸುಖಮಹಮಸ್ವಾಪ್ಸಂ** ಇಷ್ಟುಕಾಲ ಸುಖವಾಗಿ ಮಲಗಿರುವೆನು, ಎಂದು ಗಾಢನಿದ್ದೆಯಿಂದ ಎಚ್ಚೆತ್ತವನಿಗೆ ಸುಖಾನುಭವವು ಬರುತ್ತದೆ. ಇದು ವಿರುದ್ಧವಾದೀತು. ಈ ಅರ್ಥದಲ್ಲಿ ಮೋಕ್ಷಾದಿ ಪುರುಷಾರ್ಥವು ಆಗಲಾರದೆಂದು ಇಂದ್ರನು ಹೇಳಿದನು ಅಥವಾ—ಹೀಗೆ ಸುಪ್ತಜೀವರಿಗೆ ಆಶ್ರಯನಾದ ಶ್ರೀಹರಿಯ ಮಹಿಮೆ ಹೇಳಿ ಶ್ರೀಹರಿಯು ಜೀವರಿಂದ ವಿಲಕ್ಷಣನೆಂದು ಜೆನ್ನಾಗಿ ತಿಳಿಯುವುದಕ್ಕಾಗಿ, ಅಸುರರ ಮತವನ್ನನುಸರಿಸಿ ಸುಷುಪ್ತ್ಯವಸ್ಥೆಯಲ್ಲಿ ಜೀವರಿಗೆ ಆಶ್ರಯನಾದ ಈಶ್ವರನು ಇಲ್ಲ ಎಂಬುದನ್ನು **ನಾಹಂಖಲು** ಇತ್ಯಾದಿಗಳಿಂದ ಯುಕ್ತಿಯಿಂದ ಸಾಧಿಸುತ್ತಾರೆ.) ಸುಷುಪ್ತ್ಯವಸ್ಥೆಯಲ್ಲಿ ಪರಮಾತ್ಮನು ಸುಪ್ತನಾದ ನನಗೆ ಆಶ್ರಯನು, ನಾನು ಈ ಪರಮಾತ್ಮನನ್ನು ಆಶ್ರಯಿಸುತ್ತೇನೆ, ಹೀಗೆ ಪರಮಾತ್ಮನನ್ನು ನನ್ನಿಂದ ಭಿನ್ನನನ್ನಾಗಿ ನಾನು ತಿಳಿಯುವುದಿಲ್ಲ. (ಹಾಗಾದರೆ ಗಾಢನಿದ್ದೆಯಲ್ಲಿ ಜೀವನಿಗೆ, ತನಗೆ ಆಶ್ರಯಭೂತ ಪರಮಾತ್ಮನ ಜ್ಞಾನವಿಲ್ಲವಾದರೂ ಪರಮಾತ್ಮನು ತನ್ನನ್ನು ಜೀವನಿಗೆ ಆಶ್ರಯನನ್ನಾಗಿ ತೋರಿಸುತ್ತಾನೆಂದು ಏಕೆ ಆಗಲಾರದೆಂದರೆ) ಜೀವರಿಗೆ ಆಶ್ರಯನು ನಾನಾಗಿರುತ್ತೇನೆಂದು ಪರಮಾತ್ಮನೂ ಕೂಡ ತನ್ನನ್ನು ಜೀವರಿಗೆ ತಿಳಿಸುವುದಿಲ್ಲ. (ಹಾಗಾದರೆ ಒಬ್ಬ ಜೀವನು ತನಗೆ ಆಶ್ರಯನಾದ ಶ್ರಪರಮಾತ್ಮನನ್ನು ಸುಷುಪ್ತಿಕಾಲದಲ್ಲಿ ಕಾಣದಿದ್ದರೂ ನಿದ್ರಿತರಿಗೆ ಆಧಾರನಾದ ಶ್ರೀಹರಿಯು ಇಲ್ಲವೆಂದಾಗುವುದಿಲ್ಲ. ಏಕೆಂದರೆ-ಬೇರೆ ಜೀವರಿಗೆ ಸುಷುಪ್ತಿಕಾಲದಲ್ಲಿ ಶ್ರೀಹರಿಯು ಕಾಣಬಹುದೆಂದರೆ-) ಎಲ್ಲಾ ಪ್ರಾಣಿಗಳೂ ಸುಷು

ಪ್ರತ್ಯವಸ್ಥೆಯಲ್ಲಿ ತಮಗೆ ಆಶ್ರಯನಾದ ಶ್ರೀಹರಿಯನ್ನು ತಿಳಿಯುವುದೇ ಇಲ್ಲ. (ಆದಕಾರಣ ಯಾರಿಗೂ ಕಾಣದಿರುವುದರಿಂದ ಪರಮಾತ್ಮನು ಇಲ್ಲ.) (ಹಾಗಾದರೆ ಸುಷುಪ್ತಿಕಾಲದಲ್ಲಿ ಜೀವನು ಈಶ್ವರನಲ್ಲಿ ಆಗಲೀ. ಈಶ್ವರನು ಜೀವನಲ್ಲಿ ಆಗಲೀ ಪ್ರವೇಶಮಾಡುತ್ತಾನೆ. ಆದಕಾರಣ ಆಶ್ರಯಾಶ್ರಯಿಭಾವವು ತೋರುವುದಿಲ್ಲ ಎಂದರೆ) ಜೀವನು ಈಶ್ವರನಲ್ಲಿ ಪ್ರವೇಶ ಮಾಡುತ್ತಾನೆಂದಾದರೆ ಸುಖವಿಲ್ಲದೇನೇ ಇರಬೇಕಾಗುವುದುದು. (ಅಂದರೆ ಜೀವನು ಸ್ವರೂಪ ಸುಖವನ್ನು ಅನುಭವಿಸುವವನಾಗದೆ ಹೋದಾನು. ಏವಂಚ ಗಾಢನಿದ್ರೆ ಮಾಡಿದ ಜೀವನಿಗೆ **ಸುಖಮಹಮಸ್ವಾಪ್ಸಂ** ಎಂದು ಎಚ್ಚತ್ತವನಿಗೆ ಜ್ಞಾನವು ಬಾರದೆ ಹೋದೀತು. ಅಥವಾ ಈಶ್ವರನು ಜೀವನಲ್ಲಿ ಪ್ರವೇಶಮಾಡುತ್ತಾನೆಂದಾದರೆ ಈಶ್ವರನಿಗೆ ಸುಖವೇ ಇಲ್ಲದೆಹೋಗಬೇಕಾಗುವುದು. (ಏವಂಚ ಶ್ರೀಹರಿಯು ಸದಾ ಸುಖವನ್ನೇ ಭೋಗಿಸುವವನೆಂದು ಹೇಳುವ ವೇದಾದಿಗಳಿಂದ ವಿರೋಧವು ಬರುವುದು. ಕಥಾಚ ಜೀವೇಶ್ವರರಿಗೆ ಪರಸ್ಪರವಾಗಿ ಪ್ರವೇಶವಿಲ್ಲ. ಜೀವೇಶ್ವರರು ಭಿನ್ನರಾಗಿಯೂ ತೋರುವುದಿಲ್ಲ. ಮತ್ತು ಸುಖಮಹಮಸ್ವಾಪ್ಸಂ ಎಂದು ಉತ್ತರ ಕಾಲದಲ್ಲಿ ಜ್ಞಾನವು ಬರುವುದರಿಂದ ಜೀವನೇ ತೋರುತ್ತಾನೆ. ಆದಕಾರಣ ಜೀವ ಹೊರತು ಈಶ್ವರನು ತೋರದಿರುವುದರಿಂದ ಶ್ರೀಹರಿಯು ಇಲ್ಲವೆಂದು ಅಂಜಕೆಯನ್ನು ಹುಟ್ಟಿಸುವ ಆಕ್ಷೇಪವು ತೋರಿತು ॥ ೧॥

ಹೀ—ಈ ಆಕ್ಷೇಪವನ್ನು ಚತುರ್ಮುಖನಿಗೆ ತಿಳಿಸಿ ಜೀವನಿಂದ ಪರಮಾತ್ಮನು ಭಿನ್ನನೆಂಬುದನ್ನು ಜೆನ್ನಾಗಿ ತಿಳಿದುಕೊಳ್ಳುವುದಕ್ಕಾಗಿ ದೇವೇಂದ್ರನು ಮರಳಿ ಬಂದನೆಂದು ಹೇಳುತ್ತಾರೆ—

ಉ. ॥ ಸ ಸಮಿತ್ಪಾಣಿಃ ಪುನರೇಯಾಯ ತಂ ಹ ಪ್ರಜಾಪತಿರುವಾಚ ಮಘವನ್ಮರ್ತ್ಯಂತಹ್ಯದಯಃ ಪ್ರಾವ್ರಾಜೀಃ ಕಿಮೇವೇಚ್ಛನ್ ಪುನರಾಗಮ ಇತಿಸ ಹೋವಾಚ ನಾಹಂ ಖಲ್ವಯಂ ಭಗವ ಏವಂ ಸಂಪ್ರತ್ಯಾತ್ಮಾನಂ ಜಾನಾತ್ಯಯಮಹಮಸ್ಮೀತಿ ನೋ ಏವೇಮಾನಿ ಭೂತಾನಿ ವಿನಾ ಶಮೇವಾಪೀತೋ ಭವತಿ ನಾಹಮತ್ರ ಭೋಗ್ಯಂ ಪಶ್ಯಾಮೀತಿ ॥ ೨ ॥

ಅ ॥ ಹೀಗೆ ದೇವೇಂದ್ರನು ಆಲೋಚಿಸಿ ಕೈಯಲ್ಲಿ ಸಮಿಧೆ ಹಿಡಿದುಕೊಂಡು ಮರಳಿ ಬಂದನು ಆಗ ಚತುರ್ಮುಖನು ಎಲೋ ಇಂದ್ರನೇ ಶಂಕಹ್ಯದಯನಾಗಿ ಹೋಗಿರುತ್ತಿ. ಯಾವ ಉದ್ದೇಶದಿಂದ ಮರಳಿ ಬಂದಿರುತ್ತಿ, ಎಂದು ಕೇಳಿದನು. ಆಗ ಇಂದ್ರನು ಹೇಳಿದನು.*..... ॥ ೨ ॥

ಉ ॥ ಏವಮೇವೈಷ ಮಘವನ್ನಿತಿ ಸ ಹೋವಾಚೈತಂ ತ್ವೇವ ತೇ ಭೂಯೋಽನುವ್ಯಾಖ್ಯಾಸ್ಯಾಮಿ ನೋ ಏವಾನ್ಯತ್ರೈತಸ್ಮಾದ್ವಸಾಪರಾಣಿ ಪಂಚ ವರ್ಷಾಣೀತಿ ಸಹಾಪರಾಣಿ ಪಂಚವರ್ಷಾಣ್ಯುವಾಸ ತಾನ್ಯೇಕಶತಂ ಸಂಪೇದುರೇತತ್ತದ್ಯದಾಹುರೇಕಶತಂ ಹ ವೈ ವರ್ಷಾಣಿ ಮಘವಾನ್ ಪ್ರಜಾಪತೌ ಬ್ರಹ್ಮಚರ್ಯಮುವಾಸ ತಸ್ಮೈ ಸ ಹೋವಾಚ ॥ ಇತ್ಯೇಕಾದಶಃ ಖಂಡಃ ॥ ॥ ೧೦ ೧೧ ॥ ॥ ೩ ॥

ಅ ॥ ಎಲೋ ಇಂದ್ರನೇ, ಶ್ರೀಪರಮಾತ್ಮನು ಸುಷುಪ್ತ್ಯಾದಿ ಕಾಲಗಳಲ್ಲಿ ಜೀವರಿಂದ ಭಿನ್ನನೆಂದು ಪ್ರತ್ಯಕ್ಷವಾಗಿ ತೋರುವುದೇ ಇಲ್ಲ. ಪರಂತು ಶ್ರೀಹರಿಯು ಜೀವರಿಂದ ಭಿನ್ನನೆಂಬುವುದನ್ನು ಜೀವರಲ್ಲಿ

*ಹಿಂದಿನಂತೆ ಆರ್ಥ ೪೫೯ನೇ ಪುಟದಲ್ಲಿ ಹೇಳಿದೆ.

ಇಲ್ಲದ ಧರ್ಮಗಳಿಂದ ಊಹಿಸಬೇಕು. ಅದುಕಾರಣ ಶ್ರೀಹರಿಯು ಜೀವರಲ್ಲಿಲ್ಲದ ಧರ್ಮಗಳುಳ್ಳವನೆಂದು ನಿನಗೆ ಹೇಳುವೆನು. ಆದರೆ ನೀನು ಸ್ವಲ್ಪಕಾಲ ಬ್ರಹ್ಮಚರ್ಯವ್ರತ ಮಾಡದಿದ್ದರೆ ಸರ್ವಥಾ ಉಪದೇಶಿಸಲಾರೆ. ಅಥವಾ ಶ್ರೀಪರಮಾತ್ಮನು ಹೊರತು ಉಪದೇಶಿಸಲಿಕ್ಕೆ ಯೋಗ್ಯವಾದುದು ಇಲ್ಲವೇಇಲ್ಲ. ಆ ಪರಮಾತ್ಮನನ್ನೇ ನಿನಗೆ ಮರಳಿ ಹೇಳುವೆನು, ಆದಕ್ಕಾಗಿ ಐದುಸಂವತ್ಸರ ನನ್ನ ಸಮೀಪದಲ್ಲಿ ಅವಾಸಮಾಡು, ಎಂದು ಬ್ರಹ್ಮನುಹೇಳಿದನು. ಆಗ ಇಂದ್ರನು ಬ್ರಹ್ಮನ ಆಜ್ಞಾನುಸಾರ ಐದು ಸಂವತ್ಸರಗಳಲ್ಲಿ ಅವಾಸ ಮಾಡಿದನು. ಹೀಗೆ ಇಂದ್ರನು ನಾಲ್ಕುಸಲ ಗುರುಕುಲ ವಾಸಮಾಡಿದಾಗ ಒಟ್ಟಿಗೆ ಚತುರ್ಮುಖನ ಬಳಿಯಲ್ಲಿ ಪರಬ್ರಹ್ಮನ ತತ್ತ್ವಜ್ಞಾನಕ್ಕಾಗಿ ಅವಾಸಮಾಡಿದ ವರ್ಷಗಳು ನೂರಒಂದು (೧೦೧) ಆದವು. ನೂರ ಒಂದು ವರ್ಷಗಳಲ್ಲಿ ಇಂದ್ರನು ಬ್ರಹ್ಮನ ಬಳಿಯಲ್ಲಿ ಬ್ರಹ್ಮಚರ್ಯ ವ್ರತವನ್ನು ಮಾಡಿದನೆಂದು ವ್ಯಾಜ್ಞರು ಹೇಳುವುದು ದ್ವಾತ್ರಿಂಶತಂ ಇತ್ಯಾದಿ ಪೂರ್ವದಲ್ಲಿ ಹೇಳಿದ ಪ್ರಕಾರ ಪ್ರಸಿದ್ಧವು. ಹೀಗೆ ಬ್ರಹ್ಮಚರ್ಯ ವ್ರತವನ್ನು ಮಾಡಿದ ಇಂದ್ರನಿಗೆ ಆ ಚತುರ್ಮುಖನು (ಶ್ರೀಹರಿಯು ಜೀವರಿಂದ ಭಿನ್ನನೆಂಬುದನ್ನು ಊಹಿಸಿಕೊಡುವ, ಜೀವರಲ್ಲಿಲ್ಲದ ಧರ್ಮಗಳನ್ನು) ಉಪದೇಶಿಸಿದನು. ॥೩॥

ಪೀ—ಈ ಖಂಡದ ತಾತ್ಪರ್ಯ ಹೇಳುತ್ತಾರೆ—

ಭಾ. ॥ (೧) ಇತ್ಯುಕ್ತ ಆಹ ಬ್ರಹ್ಮೈನಂ ಸುಪ್ತಿಸ್ಥೋ ಭಗವಾನಿತಿ । ಯತ್ರ ಸುಪ್ತೋ ಹ್ಯಯಂ ಜೀವಃ ॥ (೨) ಇತ್ಯುಕ್ತಃ ಪ್ರಾಹ ವಾಸವಃ । ನಾಹಂ ಜಾನಾಮಿ ಮತ್ತೋಽನ್ಯಂ ಸುಪ್ತೌ ॥ (೩) ನಾನ್ಯೋಽಪಿ ದರ್ಶಯೇತ್ । ಅಹಮಸ್ಮೀತಿ ಭೂತಾನಿ ನ ಚ ಪಶ್ಯಂತಿ ಕಾನಿಚಿತ್ ॥ (೪) ಯದಿ ಜೀವಃ ಪರಾತ್ಮಾ ವಾಪ್ಯ(ಚಾಥಾ)ನ್ಯೋನ್ಯಸ್ಮಿನ್ನಪೀತತಾಂ । ಗತೌ ತದಾಪ್ಯಪೀತಸ್ತು ಶಂ ವಿನ್ದೈವ ಭವೇದಿತಿ ॥ ೧, ೨, ೩ ॥ ಇತ್ಯೇಕಾದಶಃ ಖಂಡಃ ॥ ॥ ೧೦–೧೧ ॥ ॥ ೧ ॥

ಆ ॥ (೧) ಯಾವ ಶ್ರೀಹರಿಯಲ್ಲಿ ಜೀವನು ನಿದ್ರಿತನಾಗುತ್ತಾನೋ, ಅಂತಹ ಸುಷುಪ್ತ್ಯವಸ್ಥೆಗೆ ಪ್ರೇರಕನಾದ ಶ್ರೀಹರಿಯು ಆತ್ಮನೆಂದು ಚತುರ್ಮುಖನು ಇಂದ್ರನಿಗೆ ಹೇಳಿದನು. (೨) ಆಗ ಇಂದ್ರನು (ನಾನು ಶ್ರೀಹರಿಯಲ್ಲಿ ಆಶ್ರಿತನು, ಹರಿಯು ನನಗೆ ಆಶ್ರಯನು, ಹೀಗೆ) ನನ್ನಿಂದ ಭಿನ್ನನಾದ ಪರಮಾತ್ಮನನ್ನು ಸುಷುಪ್ತಿಯಲ್ಲಿ ನಾನು ತಿಳಿಯುವುದಿಲ್ಲ ಎಂಬುವ ಹಾಗೆ ತೋರಿಸಿದನು. (೩) ಪರಮಾತ್ಮನೂ ಕೂಡ ನಾನು ಜೀವರಿಗೆ ಆಶ್ರಯನಾಗಿರುತ್ತೇನೆಂದು ತನ್ನನ್ನು ಜೀವರಿಗೆ ತೋರಿಸುವುದಿಲ್ಲ. ಯಾವ ಪ್ರಾಣಿಗಳೂ ಕೂಡ ಸುಷುಪ್ತಿಕಾಲದಲ್ಲಿ ತಮಗೆ ಆಶ್ರಯನಾದ ಪರಮಾತ್ಮನನ್ನು ನೋಡುವುದಿಲ್ಲ. (ಹೀಗೆ ಯಾರಿಗೂ ಕಾಣದಿರುವುದರಿಂದ ಜೀವರಿಗೆ ಆಶ್ರಯನಾದ ಪರಮಾತ್ಮನು ಸುಷುಪ್ತಿ ಕಾಲದಲ್ಲಿ ಇಲ್ಲ.) (೪) (ಕಾಣದಿರುವುದರಿಂದ ಶ್ರೀಹರಿಯು ಸುಷುಪ್ತಿಕಾಲದಲ್ಲಿ ಇಲ್ಲವೆಂಬುದು ಯುಕ್ತವಲ್ಲ, ಸುಷುಪ್ತಿಯಲ್ಲಿ ಜೀವನು ಶ್ರೀಹರಿಯಲ್ಲಿಯೂ ಶ್ರೀಹರಿಯು ಜೀವನಲ್ಲಿಯೂ ಪ್ರವೇಶಿಸುವುದರಿಂದ ಆಶ್ರಯಾಶ್ರಯಿಭಾವವು ಕೂಡಬಹುದೆಂದರೆ) ಜೀವನಾಗಲೀ ಪರಮಾತ್ಮನಾಗಲೀ ಪರಸ್ಪರವಾಗಿ ಪ್ರವೇಶಮಾಡಿದ್ದೆಂದಾದರೆ ಆವಾಗ ಜೀವನಿಗೆ ಶ್ರೀಹರಿಯಲ್ಲಿ ಪ್ರವೇಶವೆಂದಾದರೆ ಜೀವನಿಗೆ ಸುಖಾನುಭವವು ಇಲ್ಲದೆ ಹೋಗುವುದು. ಮತ್ತೊಬ್ಬನ ಮನೆಯಲ್ಲಿದ್ದವನಿಗೆ ಸುಖವು ತೋರಿಬರುವುದಿಲ್ಲವಷ್ಟೆ! ಶ್ರೀಹರಿಗೆ ಜೀವನಲ್ಲಿ ಪ್ರವೇಶವೆಂದಾದರೆ—ಆವಾಗಲೂ ಸುಖವಿಲ್ಲವೆಂದಾದೀತು. ಏವಂಚ ವೇದಾದಿಗಳಿಂದ ವಿರೋಧವು. ॥ ೧೧ ॥

ಹನ್ನೊಂದನೇಖಂಡವು ಮುಗಿಯಿತು

೧೫ನೇ ಖಂಡವು

ಪೀ –ಯ ವಿಷೋಣಂತರಕ್ಷಜಿ ಇತ್ಯಾದಿಗಳಿಂದ ಜೀವರಿಗೆ ಶ್ರೀಹರಿಯು ಜಾಗ್ರತ ಸ್ವಪ್ನ ಸುಷುಪ್ತ್ಯವಸ್ಥೆಗಳನ್ನು ಕೊಡುವವನೆಂದುಪದೇಶಿಸಿ ಈಗ ಜರಾಮರಣವಿರುವ ಶರೀರವಿಲ್ಲದಿರುವ ಶ್ರೀಹರಿಯು ಜರಾಮರಣಗಳಿರುವ ಶರೀರವುಳ್ಳ ಜೀವರಿಗಿಂತ ವಿಲಕ್ಷಣನೆಂಬುವುದನ್ನು ದೃಢೀಕರಿಸುತ್ತಾರೆ—

ಉ. ॥ ಮಘವನ್ ಮರ್ತ್ಯಂ ವಾವ ಇದಂ ಶರೀರಮಾತ್ತಂ ಮೃತ್ಯುನಾ ತದಸ್ಯಾಮೃತಸ್ಯಾಶರೀರಸ್ಯಾತ್ಮನೋಽಧಿಷ್ಠಾನಮಾತ್ತೋ ವೈ ಶರೀರಃ ಪ್ರಿಯಾಪ್ರಿಯಾಭ್ಯಾಂ ನ ಹ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತ್ಯಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ ॥ ೧ ॥

ಅ ॥ ಎಲೋ ಇಂದ್ರನೇ ಜೀವರ ಶರೀರದಲ್ಲಿ ಮರಣವು ವ್ಯಾಪಿಸಿಕೊಂಡಿದ್ದ ಪ್ರಯುಕ್ತ ಅದಕ್ಕೆ ವಿನಾಶವಿದೆ. ದೇಹನಾಶವಿದ್ದ ಪ್ರಯುಕ್ತಜೀವನೂ ನಾಶವುಳ್ಳವನೆನ್ನಿಸುತ್ತಾನೆ. ಜೀವರ ಶರೀರವು, ಪ್ರಾಕೃತ ದೇಹವೂ ನಾಶವೂ ಇಲ್ಲದಿರುವ ಶ್ರೀಹರಿಗೆ ಅಧಿಷ್ಠಾನ (ಆಶ್ರಯ)ವು. (ಇಂತಹ ಶ್ರೀಹರಿಯೂ ಕ್ರೀಡಾರ್ಥವಾಗಿ ಮನುಷ್ಯರ ಶರೀರದಲ್ಲಿರುತ್ತಾನೆ.) (ಜೀವರಿಗೆ ಪ್ರಿಯ ಅಪ್ರಿಯಗಳಿವೆ. ಈಶ್ವರನಿಗೆ ಪ್ರಿಯ ಅಪ್ರಿಯಗಳು ಇಲ್ಲವೆನ್ನುತ್ತಾರೆ.) ಪಾಂಚಭೌತಿಕ ಶರೀರವಿರುವ ಜೀವನಿಗೆ ಸುಖ ದುಃಖಗಳಿವೆ. ಹೇಗೆಂದರೆ ಶರೀರದಿಂದ ಕೂಡಿರುವಾಗ ಪ್ರಿಯ ಅಪ್ರಿಯಗಳು ಬಿಟ್ಟಿರುವುದಿಲ್ಲ ಪ್ರಸಿದ್ಧ . ಸದಾ ಶರೀರಾಭಿಮಾನವಿಲ್ಲದಿರುವ ಶ್ರೀಹರಿಗೆ ಸುಖದುಃಖಗಳು ಇರುವುದೇ ಇಲ್ಲ. (ಅಂದರೆ ಶ್ರೀಹರಿಗೆ ಪ್ರಿಯ (ಪರರಿಂದ ಸಿಗುವ ಸುಖ) ಇಲ್ಲ, ಅಮಂಗಲವೂ ಇಲ್ಲವೇ ಇಲ್ಲ.) ॥ ೧ ॥

ಪೀ—ಜೀವನ್ಮುಕ್ತರಾದ ವಾಯ್ವಾದಿಗಳಿಗೂ ಪ್ರಿಯ ಅಪ್ರಿಯಗಳು ಇಲ್ಲ. ಆಗ ಪ್ರಾಕೃತ ಶರೀರವಿಲ್ಲದಿರುವ ವಿಷ್ಣುವಿಗೆ ಇಲ್ಲವೆಂಬುದು ಸುತರಾಂ ಸಿದ್ಧವೆನ್ನುತ್ತಾರೆ—

ಉ. ॥ ಅಶರೀರೋ ವಾಯುರಭ್ರಂ ವಿದ್ಯುತ್ಸ್ತನಯಿತ್ನುರಶರೀರಾಣ್ಯೇತಾನಿ ತದ್ಯಥೈತಾನ್ಯಮುಷ್ಮಾದಾಕಾಶಾತ್ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯಂತೇ ॥ ೨॥

ಅ ॥ ಮುಖ್ಯವಾಯುವಿಗೆ ಶರೀರಾಭಿಮಾನವಿಲ್ಲದಿರುವುದರಿಂದ ವಾಯುವು ಅಶರೀರನೆನ್ನಿಸುತ್ತಾನೆ. ಜಗತ್ತನ್ನು ವ್ಯಾಪಿಸಿಕೊಂಡಿರುವುದರಿಂದ **ಆಪ್** ಎನಿಸಿದ ಶ್ರೀಹರಿಯು ಧರಿಸುವುದರಿಂದ **ಅಭ್ರ**ನೆನ್ನಿಸಿದ ಚತುರ್ಮುಖನೂ, ವಿಶೇಷವಾಗಿ ಪ್ರಕಾಶಿಸಿಕೊಂಡಿರುವುದರಿಂದ **ವಿದ್ಯುತ್** ಎನಿಸಿದ ಭಾರತಿಯೂ, ಎಲ್ಲಾ ಶಬ್ದಗಳಿಗೂ ಅಭಿಮಾನಿಯಾಗಿರುವುದರಿಂದ **ಸ್ತನಯಿತ್ನು** ಎನಿಸಿದ ಸರಸ್ವತಿಯೂ ಈ ಮೂವರಿಗೆ ವಿಶೇಷಜ್ಞಾನವಿರುವುದರಿಂದ ಶರೀರದ ಅತ್ಯಂತ ಸಂಬಂಧವಿಲ್ಲ (ಅಂದರೆ ಈ ಮುಖ್ಯವಾಯು ಮೊದಲಾದ ನಾಲ್ವರಿಗೆ ದೇಹಸಂಬಂಧವಿದ್ದರೂ ದೇಹದಲ್ಲಿ ತಮ್ಮದೆಂದು ಅಭಿಮಾನವಿಲ್ಲದಿರುವುದರಿಂದ ಆ ನಾಲ್ವರು ಶರೀರವಿಲ್ಲದವರು ಎನಿಸುತ್ತಾರೆ. ಆ ನಾಲ್ವರಿಗೇನೇ ಪ್ರಿಯ ಅಪ್ರಿಯಗಳು ಇಲ್ಲದಿರಲು ಶ್ರೀಹರಿಗೆ ಇಲ್ಲವೆಂಬುದು ಸುತರಾಂ ಸಿದ್ಧಿಸುತ್ತದೆ.) (ಇಲ್ಲಿ ಯದ್ಯಪಿ ಬ್ರಹ್ಮ ವಾಯುಗಳಿಗೆ ಪೃ=ಪರೇಣ, ಇಯಂ=ಪ್ರಿಯಂ) ಶ್ರೀಹರಿಯಿಂದ ಹೊಂದಲ್ಪಡುವ ಪ್ರಿಯವದೆ, ಭಾರತೀ ಸರಸ್ವತಿಯರಿಗೆ ಶ್ರೀಹರಿಯ ದರ್ಶನಾದಿಗಳಿಂದುಂಟಾಗುವ ಸುಖವೂ, ತಮ್ಮ ತಮ್ಮ ಪತಿಗಳಿಂದ ಸಂಭೋಗಾದಿಗಳಿಂದ ಹೊಂದಲ್ಪಡುವ

ಸುಖವೂ ಇದೆ. ಆದರೂ ಬೇರೆಯವರಿಂದ ಹೊಂದಲ್ಪಡುವ ಸುಖವಿಲ್ಲದಿರುವುದರಿಂದ ಈ ನಾಲ್ವರಿಗೆ ಪ್ರಿಯಸಂಬಂಧವಿಲ್ಲವೆಂದು ಹೇಳಿದೆ.) (ಮೋಕ್ಷವನ್ನು ಹೊಂದಿದವನೂ ಕೂಡ ಶ್ರೀಹರಿಯ ಪ್ರಸಾದದಿಂದಲೇ ಇಷ್ಟಭೋಗಗಳನ್ನು ಉಣ್ಣುತ್ತಾನೆ. ಆದುದರಿಂದಲೂ ಜೀವೇಶರಿಗೆ ಭೇದವಿದೆ, ಎನ್ನುತ್ತಾರೆ. ಆ ವಿಷಯದಲ್ಲಿ ದೃಷ್ಟಾಂತ ಹೇಳುತ್ತಾರೆ. ಹೇಗೆ ವಾಯು ಅಭ್ರ ವಿದ್ಯುತ್ ಸ್ತನಯಿತ್ನು ಶಬ್ದಗಳಿಂದ ಹೇಳಲ್ಪಡುವ ಮುಖ್ಯಪ್ರಾಣಮೊದಲಾದವರು ಜೆನ್ನಾಗಿ ಪ್ರಕಾಶಿಸುವುದರಿಂದ ಆಕಾಶನೆನಿಸಿದ ಪರಮಾತ್ಮನ ಪ್ರಸಾದದಿಂದ ಪ್ರಾಕೃತ ಶರೀರದಿಂದ ಹೊರಟು ಪರಮಾತ್ಮನ ಸಮೀಪಕ್ಕೆ ಹೋಗಿ ತಮ್ಮ ತಮ್ಮ ಸ್ವರೂಪಾನಂದಾದಿಗಳಿಂದ ಯುಕ್ತರಾಗುತ್ತಾರೋ, ॥ ೨ ॥

ಉ. ॥ ಏವಮೇವೈಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಉತ್ತಮಃ ಪುರುಷಃ ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾಽಜ್ಞಾತಿಭಿರ್ವಾ ನೋಪಜನꣳ ಸ್ಮರನ್ನಿದꣳ ಶರೀರꣳ ಸ ಯಥಾ ಪ್ರಾಯೋಗ್ಯ ಆಚರಣೇ ಯುಕ್ತ ಏವಮೇವಾಯಮಸ್ಮಿನ್ಶರೀರೇ ಪ್ರಾಣೋ ಯುಕ್ತಃ ॥ ೩ ॥

ಅ ॥ ಹೀಗೆಯೇ ಜ್ಞಾನಿಯಾದ ಜೀವನೂ ಜೆನ್ನಾಗಿ ಪರಮಾತ್ಮನ ಪ್ರಸಾದವುಳ್ಳವನಾಗಿ ಈ ಅಂತಿಮ ಶರೀರದಿಂದ ಹೊರಟು ಪರಮಾತ್ಮನ ಬಳಿಗೆ ಹೋಗಿ ಸ್ವಾಭಾವಿಕವಾಗಿ ಆನಂದವನ್ನು ಅನುಭವಿಸುತ್ತಾನೆ. (ಜ್ಞಾನಿಯು ಯಾವ ಶ್ರೀಹರಿಯನ್ನು ಹೊಂದಿ ಮುಕ್ತನಾಗಿರುವನೋ,) ಅಂತಹ ಪರಂಜ್ಯೋತಿಃ ಎನಿಸಿಕೊಂಡ ಶ್ರೀಹರಿಯು ಸರ್ವೋತ್ತಮನಾದ ಪುರುಷನು. ಆ ಮುಕ್ತಜೀವನು ವೈಕುಂಠಲೋಕದಲ್ಲಿ ಶ್ರೀಹರಿಯ ಅನುಗ್ರಹದಿಂದಲೇ ಇಷ್ಟವಾದ ಆಹಾರವನ್ನು ತಿನ್ನುತ್ತಾ ನಗುತ್ತಾ ಕ್ರೀಡಿಸುತ್ತಾ ಸ್ತ್ರೀಯರಿಂದ ವಿಹರಿಸುತ್ತಾ ತನ್ನೊಡನೆ ಮುಕ್ತರಾದವರಿಂದಲೂ ಪೂರ್ವದಲ್ಲಿ ಮುಕ್ತರಾದವರಿಂದಲೂ ಸಖಿಯರಿಂದಲೂ ಕೂಡಿಕೊಂಡು ವಾಹನಗಳಿಂದ ಸಂಚರಿಸುತ್ತಾನೆ. (ರಮಣಾಧಿಕ್ಯ ಪ್ರಕಾರವನ್ನು ಹೇಳುತ್ತಾರೆ.) ತನ್ನ ಸಮೀಪದಲ್ಲಿರತಕ್ಕ ಜನವನ್ನೂ, ತನ್ನ ಶರೀರವನ್ನೂ ಸ್ಮರಿಸದೇನೇ ಕ್ರೀಡಿಸುತ್ತಾನೆ, (ಅಂದರೆ ಕೇವಲ ಶ್ರೀಹರಿಯನ್ನನುಸಂಧಾನಮಾಡಿಕೊಂಡೇ ಪರಮ ಸುಖವನ್ನು ಭೋಗಿಸುವ ಮುಕ್ತರಿಗೆ ತಮ್ಮ ಸಮೀಪದಲ್ಲಿದ್ದ ಜನರ ದರ್ಶನಾದಿಗಳೂ ಆಗುವುದಿಲ್ಲ.) (ಮೊದಲು ಜೀವರ ಶರೀರವು ಅಶರೀರನಾದ ಶ್ರೀಹರಿಗೆ ಆಶ್ರಯವೆಂದು ಹೇಳಿದೆ. ಅದರಲ್ಲಿ ಜೀವನಾಗಲೀ ಚಕ್ಷುರಾದಿಗಳಾಗಲೀ ಆಶ್ರಯಗಳಾಗಬಹುದೆಂದರೆ—ಜೀವರಿಗೆ ಸಾಮರ್ಥ್ಯವಿಲ್ಲ, ಚಕ್ಷುರಾದಿಗಳು ಕರಣಗಳಾಗಿರುವುದರಿಂದ ಆಶ್ರಯಗಳಾಗುವುದಿಲ್ಲವೆಂಬುದನ್ನು ದೃಷ್ಟಾಂತಕೊಟ್ಟು ಹೇಳುತ್ತಾರೆ—) ಅದು ಹೇಗೆಂದರೆ—ರಥವನ್ನು ನಡಿಸಲಿಕ್ಕೆ ಸಾರಥಿಯು ರಥದಲ್ಲಿ ಹೇಗೆ ರಥಸ್ವಾಮಿಯಿಂದ ಪ್ರೇರಿಸಲ್ಪಡುತ್ತಾನೋ, ಹೀಗೆಯೇ ಮುಖ್ಯಪ್ರಾಣನೂ ಶರೀರದಲ್ಲಿ ಶರೀರವನ್ನು ಪ್ರವರ್ತಿಸಲಿಕ್ಕೆ ಸಾರಥಿಯಾಗಿ ಶ್ರೀಹರಿಯಿಂದ ಪ್ರೇರಿಸಲ್ಪಟ್ಟಿದ್ದಾನೆ.

ವಿ—ವಾಹನದಲ್ಲಿ ಸಾರಥಿಯಂತೆ ಶರೀರದಲ್ಲಿ ಮುಖ್ಯಪ್ರಾಣನು ಸಾರಥಿಸ್ಥಾನನು. ಉತ್ಕೃಷ್ಟ ಆನಂದರೂಪನಾದುದರಿಂದ ಪ್ರಾಣನೆನಿಸಿದ ವಿಷ್ಣುವು ರಥಿಕನಂತೆ ದೇಹಕ್ಕೆ ನಿಯಾಮಕನು ವಹಿಸ್ತೊಬ್ಬನು ಸ್ವಾಮಿಯಾಗಿ ಉಳ್ಳ ರಥದಲ್ಲಿರುವ ಪುರುಷನಂತೆ ಶರೀರದಲ್ಲಿ ಜೀವನು ಇರುತ್ತಾನೆ. ಕಣ್ಣುಮೊದಲಾದ ಇಂದ್ರಿಯಗಳು ಕುದುರೆಯಂತೆ ಇರುವವುಗಳು. ಏವಂಚ ಜೀವನು ಇನ್ನೊಬ್ಬನು ಸ್ವಾಮಿಯಾಗಿ ಉಳ್ಳ ರಥದಲ್ಲಿ ಕೂತವನಂತೆ ಇರುವವನಾದುದರಿಂದ ಶರೀರಕ್ಕೆ ನಿಯಾಮಕನಾಗಲಾರನು. ॥ ೩ ॥

ಪೀ—ಕಣ್ಣು ಮೊದಲಾದ ಇಂದ್ರಿಯಗಳು ಕರಣಗಳು (ಅಂದರೆ ಇತರರಿಂದ ಪ್ರೇರಿಸಲ್ಪಡತಕ್ಕವುಗಳು) ಆಗಿರುವುದರಿಂದ ಇಂದ್ರಿಯಗಳು ದೇಹನಿಯಾಮಕಗಳಾಗಲಾರವೆಂಬ ಅಭಿಪ್ರಾಯದಿಂದ ಅವುಗಳು ಕರಣಗಳೆನ್ನುತ್ತಾರೆ—

ಉ. ॥ ಅಥ ಯತ್ರೈತದಾಕಾಶಮನುವಿಷಣ್ಣಂ ಚಕ್ಷುಃ ಸ ಚಾಕ್ಷುಷಃ ಪುರುಷೋ ದರ್ಶನಾಯ ಚಕ್ಷುರಥ ಯೋ ವೇದೇದಂ ಜಿಘ್ರಾಣೀತಿ ಸ ಆತ್ಮಾ ಗಂಧಾಯ ಘ್ರಾಣಮಥ ಯೋ ವೇದೇದಮಭಿವ್ಯಾಹರಾಣೀತಿ ಸ ಆತ್ಮಾಭಿವ್ಯಾಹಾರಾಯ ವಾಗಥ ಯೋ ವೇದೇದꣳ ಶೃಣವಾನೀತಿ ಸ ಆತ್ಮಾ ಶ್ರವಣಾಯ ಶ್ರೋತ್ರಂ ॥ ೪ ॥

ಉ. ॥ ಅಥ ಯೋ ವೇದೇದಂ ಮನ್ವಾನೀತಿ ಸ ಆತ್ಮಾ ಮನೋಽಸ್ಯ ದೈವಂ ಮನಃ ದೈವಂ ಚಕ್ಷುಃ ಸೈವಾ ಏಷ ಏತೇನ ದೈವೇನ ಚಕ್ಷುಷಾ ಮನಸೈತಾನ್ಕಾಮಾನ್ ಪಶ್ಯನ್ರಮತೇ ॥ ೫ ॥

ಅ ॥ ಚಕ್ಷುರಿಂದ್ರಿಯವು ವಿಷ್ಣುವಿನಲ್ಲಿ ಪ್ರಕಾಶಮಾನ ರೂಪವೆಂಬ ವಿಷಯದಿಂದ ಕೂಡಿದ್ದು. (ಅಂದರೆ ಚಕ್ಷುರಿಂದ್ರಿಯವೂ, ಕಣ್ಣಿಗೆ ಗೋಚರವಾದ ವಸ್ತುವೂ ವಿಷ್ಣುವಿನ ಅಧೀನವು.) ಯಾವ ವಿಷ್ಣುವಿನ ದರ್ಶನಸಾಧ್ಯ ಭೋಗಕ್ಕಾಗಿ ಚಕ್ಷುರಿಂದ್ರಿಯವೋ ಯಾವ ಚಕ್ಷುಸ್ಸಿನಲ್ಲಿದ್ದ ಶ್ರೀಹರಿಯು ಕಣ್ಣಿನಿಂದ ನೋಡುತ್ತೇನೆಂದು ಸ್ವತಂತ್ರವಾಗಿ ತಿಳಿಯುತ್ತಾನೋ, ಯಾವ ಶ್ರೀಹರಿಯು ಚಕ್ಷುರಿಂದ್ರಿಯವನ್ನು ಅದರ ವಿಷಯಾದಿಗಳನ್ನು ಸ್ವತಂತ್ರವಾಗಿ ತಿಳಿಯುತ್ತಾನೋ, ಆತನೇ ಸರ್ವೋತ್ತಮನಾದ ಪುರುಷನು. ಹೀಗೆಯೇ ಗಂಧಮೊದಲಾದ ವಿಷಯಗಳಿಂದೊಡಗೂಡಿದ ಘ್ರಾಣೇಂದ್ರಿಯ ಮೊದಲಾದುದೂ ವಿಷ್ಣುವಿನ ಅಧೀನವು. ಯಾವ ಶ್ರೀಹರಿಗೆ ಗಂಧಮೊದಲಾದವುಗಳಿಂದ ಸಾಧ್ಯವಾದ ಭೋಗಕ್ಕಾಗಿ ಘ್ರಾಣೇಂದ್ರಿಯ ಮೊಲಾದುದೋ, ಯಾವ ಶ್ರೀಹರಿಯು ಪುಷ್ಪ ಮೊದಲಾದುವುಗಳ ಗಂಧ ತೆಗೆದುಕೊಳ್ಳುವೆನೆಂದು ತಿಳಿಯುತ್ತಾನೋ, ಯಾವನು ಘ್ರಾಣಮೊದಲಾದ ಇಂದ್ರಿಯವನ್ನೂ, ಅದರ ವಿಷಯವನ್ನೂ ಜ್ಞಾನಕ್ಕಾಗಿ ತಿಳಿಯುತ್ತಾನೋ, ಅವನೇ ಸರ್ವೋತ್ತಮ ಪುರುಷನು. ಹೀಗೆಯೇ ವಚನವೆಂಬ ವಿಷಯದಿಂದೊಡಗೂಡಿದ ವಾಗಿಂದ್ರಿಯವು ಶ್ರೀಹರಿಯ ಅಧೀನವು. ವ್ಯವಹಾರಕ್ಕಾಗಿ ವಾಗಿಂದ್ರಿಯವು. ಯಾವ ಶ್ರೀಹರಿಯು ಈ ಮಾತನ್ನು ಆಡುತ್ತೇನೆಂದು ತಿಳಿಯುತ್ತಾನೋ, ಅವನೇ ಉತ್ತಮ ಪುರುಷನು ಶಬ್ದ ಎಂಬ ವಿಷಯದಿಂದ ಕೂಡಿದ ಕಿವಿಯು ಶ್ರೀಹರಿಯ ಅಧೀನವು. ಯಾರಿಗೆ ಕೇಳುವುದಕ್ಕಾಗಿ ಕಿವಿಯೋ, ಯಾವನು ಇದನ್ನು ಕೇಳುತ್ತೇನೆಂದು ಸ್ವತಂತ್ರವಾಗಿ ತಿಳಿಯುತ್ತಾನೋ ಅವನೇ ಉತ್ತಮ ಪುರುಷನು. ಎಲ್ಲಾ ವಿಷಯಗಳಿಂದ ಕೂಡಿದ ಮನಸ್ಸು ಶ್ರೀಹರಿಯ ಅಧೀನವು. ಯಾರಿಗೆ ತಿಳಿಯುವುದಕ್ಕಾಗಿ ಮನಸ್ಸೋ, ಯಾವನು ಇದನ್ನು ತಿಳಿಯುತ್ತೇನೆಂದು ಸ್ವತಂತ್ರನಾಗಿ ತಿಳಿಯುತ್ತಾನೋ, ಅವನೇ ಸರ್ವಸ್ವಾಮಿಯು. ಹೀಗೆಯೇ ಯಾವ ಮುಖ್ಯಪ್ರಾಣ, ಮತ್ತು ಜೀವ ಇವರ ಅಧೀನವಾಗಿ ತಂತಮ್ಮ ವಿಷಯಗಳಿಂದ ಸಂಬಂಧ್ಧವಾದ ಕಣ್ಣು ಮೊದಲಾದ ಇಂದ್ರಿಯಗಳೋ, ಯಾವ ಮುಖ್ಯಪ್ರಾಣ ಜೀವ ಇವರ ಭೋಗಕ್ಕಾಗಿ ಚಕ್ಷುಸ್ಸು ಮೊದಲಾದ ಇಂದ್ರಿಯವೋ, (ಯಾವ ಮುಖ್ಯಪ್ರಾಣ, ಮತ್ತು ಜೀವ ಇವರು ಇದನ್ನು ನೋಡುತ್ತೇನೆಂದು ಅನುಸಂಧಾನವುಳ್ಳವರೋ, ಅಂತಹ ಮುಖ್ಯಪ್ರಾಣ ಮತ್ತು ಜೀವ ಇವರು ಯಾವ ಶ್ರೀಹರಿಯ ಅಧೀನರಾಗಿರುತ್ತಾರೋ, ಅಂತಹ ಶ್ರೀಹರಿಯು ಸರ್ವೋತ್ತಮನಾದ ಪುರುಷನು. ಹೀಗೆ ಈ ವಾಕ್ಯಗಳನ್ನು ಮುಖ್ಯಪ್ರಾಣ ಮತ್ತು ಜೀವಪರವಾಗಿಯೂ ಇಟ್ಟುಕೊಳ್ಳಬೇಕು. ಅವರು ಕ್ರಮವಾಗಿ ಅಮುಖ್ಯವಾಗಿ ವಿಷಯಗಳನ್ನು ಭೋಗಿಸುವವರು. ಇಲ್ಲಿ ಚಕ್ಷುರಾದಿ ಶಬ್ದಗಳು ಅಭಿಮಾನಿಗಳಾದ ದೇವತಾ ಪರಗಳೂ

ಆಗಿವೆ.) (ಜೀವರ ಇಂದ್ರಿಯಗಳಿಂದ ಶ್ರೀಹರಿಯು ವಿಷಯಗಳನ್ನು ಭೋಗಿಸುತ್ತಾನೆಂದಾದರೆ— ಶ್ರೀಹರಿಗೆ ಇಂದ್ರಿಯಗಳಿಲ್ಲವೆಂದಾಯಿತು. ಸಹಸ್ರಾಕ್ಷಃ ಸಹಸ್ರಪಾತ್ ಇತ್ಯಾದಿ ವೇದಗಳಿಂದ ವಿರೋಧವು ಎಂದರೆ) ಈ ಶ್ರೀಹರಿಯ ಚಕ್ಷುಸ್ಸು ಮೊದಲಾದ ಇಂದ್ರಿಯವು ಜೀವರ ಇಂದ್ರಿಯಗಳಿಗಿಂತ ಹೆಚ್ಚು ಪ್ರಕಾಶಿಸಿಕೊಂಡಿರುವುದರಿಂದ ದೈವಂ ಎನಿಸುತ್ತದೆ. ಅದು ಸ್ವರೂಪಾತ್ಮಕವು. ಈ ಪರಮಾತ್ಮನು ಜೀವರ ಚಕ್ಷುಸ್ಸು ಮೊದಲಾದ ಇಂದ್ರಿಯಗಳಲ್ಲಿ ಪ್ರವೇಶ ಮಾಡಿದ ತನ್ನ ಸ್ವರೂಪವಾದ ಪ್ರಕಾಶಿಸಿಕೊಂಡಿರುವ, ಚಕ್ಷುಸ್ಸು ಮನಸ್ಸುಮೊದಲಾದ ಎಲ್ಲಾ ಇಂದ್ರಿಯಗಳಿಂದ. ಯೋಗ್ಯ ಎಲ್ಲಾ ವಿಷಯಗಳನ್ನು ನೋಡುತ್ತಾ-ಭೋಗಿಸುತ್ತಾ ತನ್ನ ಇಚ್ಛೆಯಿಂದ ರಮಿಸುತ್ತಾನೆ.

ವಿ ॥ (1) ಜೀವರ ಚಕ್ಷುಸ್ಸುಮೊದಲಾದ ಇಂದ್ರಿಯಗಳು ಶ್ರೀಹರಿಯ ಅಧೀನಗಳಾಗಿ ರಶ್ಮಿಗಳಿಂದ ಆಕಾಶದಲ್ಲಿ ವ್ಯಾಪ್ತವಾಗಿವೆ. ಅಂತಹ ಕಣ್ಣಿನೊಳಗಣ ಶ್ರೀಹರಿಯು ರಥಿಕನಂತೆ ದೇಹಕ್ಕೆ ಅಧಿಪತಿಯು. ನೋಡಲಿಕ್ಕೆ ಚಕ್ಷುಸ್ಸು ಕರಣವಾಗಿದೆ. (2) ಶ್ರೀಹರಿಯು ತನ್ನ ಸ್ವರೂಪೇಂದ್ರಿಯಗಳಿಂದ ಸರ್ವ ಭೋಗಗಳನ್ನು ಭೋಗಿಸಲಿಕ್ಕೆ ಶಕ್ತನಾದರೂ ಕ್ರೀಡಾರ್ಥವಾಗಿ ಜೀವರ ದೇಹದಲ್ಲಿದ್ದು ತನ್ನ ಇಂದ್ರಿಯಗಳಿಂದ ನಿಯಮಿತಗಳಾದ ಜೀವರ ದೇಹದಲ್ಲಿರತಕ್ಕ ಚಕ್ಷುರಾದೀಂದ್ರಿಯಗಳಿಂದ ಜೀವಭೋಗ್ಯ ಎಲ್ಲಾ ವಿಷಯಗಳ ಸಾರವನ್ನು ಣ್ಣುತ್ತಾನೆ. (3) ಜೀವರ ಇಂದ್ರಿಯಗಳಿಗಿಂತ ಇಂದ್ರಿಯಾಭಿಮಾನಿಗಳು ಪ್ರಕಾಶಿಸಿಕೊಂಡಿರುವುದರಿಂದ ಅವರು ದೈವವೆನಿಸುತ್ತಾರೆ ಅವರಿಗೂ ನಿಯಾಮಕನಾಗಿರುವ ಶ್ರೀಹರಿಯ ಸ್ವರೂಪೇಂದ್ರಿಯಗಳು ಹೆಚ್ಚು ಪ್ರಕಾಶಿಸುವುದರಿಂದ ದೈವವೆನಿಸುತ್ತದೆ. ॥ ೪ ॥ ೫ ॥

ಪೀ—ಹೀಗಾದರೆ ಅಶುಭಭೋಗಗಳೂ ಶ್ರೀಹರಿಗೆ ಬರಬೇಕಾದೀತು ಎಂದರೆ—ಅಥವಾ ಶ್ರೀ ಹರಿಯೇ ಜೀವರ ಶರೀರದಲ್ಲಿದ್ದು ಸಾರಥ್ಯಾದಿರೂಪರಾದ ಪ್ರಾಣಾದಿಗಳನ್ನು ನಿಯಮಿಸುತ್ತಾನೆಂದು ಉಪಾಸನೆ ಮಾಡುವವನಿಗೆ ಫಲ ಹೇಳುತ್ತಾರೆ—

ಉ. ॥ ಯ ಏತೇ ಬ್ರಹ್ಮಲೋಕೇ ತಂ ವಾ ಏತಂ ದೇವಾ ಆತ್ಮಾನಮುಪಾಸತೇ ತಸ್ಮಾತ್ತೇಷಾꣳ ಸರ್ವೇ ಚ ಲೋಕಾ ಆತ್ತಾಃ ಸರ್ವೇ ಚ ಕಾಮಾಃ ಸರ್ವಾꣳಶ್ಚ ಲೋಕಾನಾಪ್ನೋತಿ ಸರ್ವಾꣳಶ್ಚ ಕಾಮಾನ್ಯಸ್ತಮಾತ್ಮಾನಮನುವಿದ್ಯ ವಿಜಾನಾತೀತಿ ಹ ಪ್ರಜಾಪತಿರುವಾಚ ಪ್ರಜಾಪತಿರುವಾಚ ॥ ಇತಿ ದ್ವಾದಶಃ ಖಂಡಃ ॥ ೧೦-೧೨ ॥ ॥ ೬ ॥

ಆ ॥ ಬ್ರಹ್ಮಲೋಕದಲ್ಲಿ ಯಾವ ದೇವತೆಗಳು ಶ್ರೀಹರಿಯನ್ನು ಪಾಸನೆಮಾಡುತ್ತಾರೋ, ಆ ದೇವತೆಗಳಲ್ಲಿ ಶ್ರೀಹರಿಯು ಕ್ರೀಡಿಸುತ್ತಾನೆ ಅಥವಾ ಬ್ರಹ್ಮಲೋಕದಲ್ಲಿ ಯಾವ ಶುಭಕಾಮಗಳು ಇದ್ದಾವೋ. ಅವುಗಳನ್ನು ಮಾತ್ರ ಭೋಗಿಸುತ್ತಾನೆ. ಅಥವಾ ವೈಕುಂಠಾದಿಗಳಲ್ಲಿರುವ ವಿಷಯಗಳನ್ನು ಸ್ವರೂಪಭೂತಗಳಾದ ಇಂದ್ರಿಯಗಳಿಂದಲೇ ಅನುಭವಿಸುತ್ತಾನೆ. ಅಪಹತಪಾಪ್ಮತ್ವಾದಿ ಗುಣಗಳುಳ್ಳ, ಸರ್ವಭೋಕ್ತೃವಾದ ಶ್ರೀಹರಿಯನ್ನು ವಾಯುಮೊದಲಾದ ದೇವತೆಗಳು ಉಪಾಸನೆಮಾಡುತ್ತಾರೆ. ಆ ಉಪಾಸನೆಯಿಂದ ಭಗವತ್ಪ್ರಸಾದವು ಸಿಗುವುದರಿಂದ ಆ ವಾಯುಮೊದಲಾದ ದೇವತೆಗಳಿಗೆ ಎಲ್ಲಾ ಜನರೂ. ಎಲ್ಲಾ ಲೋಕಗಳೂ ಲೋಕಗಳಲ್ಲಿ ಎಲ್ಲಾ ಕಾಮಗಳೂ ಅಧೀನಗಳಾಗುತ್ತವೆ. ಆದಕಾರಣ ಈಗಲೂ ಯಾರು ಆ ಶ್ರೀಹರಿಯನ್ನು ಶಾಸ್ತ್ರಶ್ರವಣಾದಿಗಳಿಂದ ವಿಚಾರವಾಡಿ ಪ್ರತ್ಯಕ್ಷವಾಗಿ ತಿಳಿಯುತ್ತಾನೋ, ಆ ಜ್ಞಾನಿಯು ಎಲ್ಲಾ ಲೋಕಗಳನ್ನೂ ಎಲ್ಲಾ ಕಾಮಗಳನ್ನೂ ಯೋಗ್ಯತಾನುಸಾರ ಹೊಂದುತ್ತಾನೆ, ಹೀಗೆ ಬ್ರಹ್ಮನು ಹೇಳಿದ್ದನ್ನು ವೇದಪುರುಷನು ಮುಗಿಸಿದನು. ಹೀಗೆ ಪ್ರಜಾಪತಿಯು ಹೇಳಿದನು. ॥ ೧೦—೧೨ ॥ ॥ ೬ ॥

ಪೀ—ಮಘವನ್ ಮರ್ತ್ಯಂವಾವ ಎಂಬ ಈ ಖಂಡದ ತಾತ್ಪರ್ಯ ಹೇಳುತ್ತಾರೆ—

ಭಾ. ॥ (೧) ಉಕ್ತೋ ಬ್ರಹ್ಮಾಬ್ರವೀಚ್ಛಕ್ರಂ ಜ್ಞಾಪಯಂಸ್ತತ್ತ್ವಮಂಜಸಾ ॥ (೨) ಯೋಽಯಂ ಶರೀರಸಂಬಂಧೀ ಜೀವ ಇತ್ಯವಧಾರ್ಯತಾಂ ॥ (೩) ಭೂತೈಷ್ಯದ್ವರ್ತಮಾನೇಷು ಯಸ್ಯ ನೋ ದೇಹಸಂಗತಿಃ । ಸೋಽಶರೀರಃ ಪರೋ ವಿಷ್ಣುರಮೃತೋ ನಿತ್ಯಮೂ(ಪೂ)ರ್ತಿಮಾನ್ ॥ (೪) ಅಧಿಷ್ಠಾಯ ತಥಾಽಪೀಮಂ ದೇಹಮಾಸ್ತೇ ಸ ಈಶ್ವರಃ । ಜರಾಮೃತ್ಯುಪರೀತೋಽಯಂ ಜೀವಾತ್ಮಾ ದೇಹಸಂಗತೇ ॥ ೧ ॥

ಆ ॥ (೧) ಆಗ ಬ್ರಹ್ಮನು ದೇವೇಂದ್ರನಿಗೆ ಸಂಮ್ಮುಗ್ಧಗಳಾದ ಮಾತನ್ನಾಡದೆ ಸ್ಪಷ್ಟವಾದ ಮಾತಿನಿಂದ ತತ್ತ್ವವನ್ನು ತಿಳಿಸುತ್ತಾ ಹೇಳಿದನು. (೨) (೧ನೇ ಮಂತ್ರದಲ್ಲಿದ್ದ ಇದಂ ಶರೀರಂ ಎಂಬುದಕ್ಕೆ ಅರ್ಥ ಹೇಳುತ್ತಾರೆ—) ಈ ಜೀವನಿಗೆ ಶರೀರದ ಸಂಬಂಧವಿದೆ, ಎಂದು ನಿಶ್ಚಯಿಸಿಕೊ. (೩) (ಅಶರೀರಸ್ಯ ಎಂದು ಹೇಳಿದ ಅಶರೀರತ್ವವು ಮುಕ್ತರಲ್ಲಿಯೂ ಇದ್ದಪ್ರಯುಕ್ತ ಪರಮಾತ್ಮನಿಗೆ ಲಕ್ಷಣವು ಹೇಗೆ ಆಗುವುದು? ಎಂದರೆ –) ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ಯಾರಿಗೆ ಸ್ವಾಭಾವಿಕವಾಗಿ ಪ್ರಾಕೃತ ದೇಹ ಸಂಬಂಧವೇ ಇಲ್ಲವೋ, ಅಂತಹ ಸರ್ವೋತ್ತಮನಾದ ವಿಷ್ಣುವು ಅಶರೀರನೆನಿಸುತ್ತಾನೆ. ಅಮೃತಃ= ಮೂರು ಕಾಲಗಳಲ್ಲಿಯೂ ಸ್ವಾಭಾವಿಕವಾಗಿಯೇ ನಿತ್ಯವಾದ ಸ್ವರೂಪದೇಹವುಳ್ಳವನು. (೪) (ತದಸ್ಯಾತ್ಮ. ನೋಽಧಿಷ್ಠಾನಂ ಎಂಬುದಕ್ಕೆ ಅರ್ಥ ಹೇಳುತ್ತಾರೆ—) ಪಾಂಚಭೌತಿಕ ಶರೀರಾದಿಗಳಿಲ್ಲದಿದ್ದರೂ ಪ್ರಾಕೃತ ದೇಹಕ್ಕೆ ನಿಯಾಮಕನಾಗಿ ಇರುತ್ತಾನೆ. ಅಘಟ್ಯಘಟಕ ಅಚಿಂತ್ಯ ಐಶ್ವರ್ಯವಿದ್ದುದರಿಂದ (ಜರಾದಿ ದೋಷಗಳಿಲ್ಲದವನು.) ಜೀವಾತ್ಮನು ದೇಹಾಭಿಮಾನವಿದ್ದುದರಿಂದ ಜರಾಮರಣಗಳಿಂದೊಡಗೂಡಿದ ದೇಹವುಳ್ಳವನು ॥ ೧ ॥

ಪೀ—೧ನೇ ಮಂತ್ರದಲ್ಲಿದ್ದ ಪ್ರಿಯ ಅಪ್ರಿಯ ಶಬ್ದಗಳ ಅರ್ಥಗಳನ್ನು ಹೇಳುತ್ತಾರೆ—

ಭಾ. ॥ (೧) ಪರೇಣೇಯಂ ಸುಖಂ ಪ್ರೋಕ್ತಂ ಪ್ರಿಯಮಿತ್ಯೇವ ಪಂಡಿತೈಃ । ಪರೇಣೇಯಮಭದ್ರಂ ಯದಪ್ರಿಯಂ ತದುದೀರಿತಂ ॥ (೨) ನ ಜೀವಸ್ಯ ತಯೋರ್ಹಾನಿಃ ಕದಾಚಿದ್ವಿದ್ಯತೇ ಕ್ವಚಿತ್ । ಅಶರೀರಂ ಪರಂಬ್ರಹ್ಮ ನೈವ ತೇ ಸ್ಪೃಶತಃ ಕ್ವಚಿತ್ ॥ (೩) ಅಮ್ನಾಮೂ ಭಗವಾನ್ವಿಷ್ಣುರ್ವ್ಯಾಪ್ತತ್ವಾತ್ಪರಮೇಶ್ವರಃ । ತೇನೈವ ಭ್ರಿಯಮಾಣತ್ವಾದ್ಭ್ರಾಹ್ಮಾಭ್ಯಮಿತಿ ಕೀರ್ತಿತಃ॥ವಾಯೋಃ ಪತ್ನೀವಿದ್ಯುದುಕ್ತಾ ವಿಶೇಷದ್ಯುತಿಹೇತುತಃ।ಬ್ರಹ್ಮಾಣೀ ಸ್ತನಯಿತ್ನುಃ ಸ್ಯಾತ್ಸರ್ವರಬ್ದಾತ್ಮಿಕಾ ಯತಃ ॥ (೪) ಏತೇಷಾಂ ಜ್ಞಾನವೈಶೇಷ್ಯಾನ್ನಾತಿದೇಹೇನ ಸಂಗತಿಃ ॥ (೫) ಅತಃ ಪ್ರಿಯಾಪ್ರಿಯೇ ತೇಷಾಮಪಿ ನ ಬ್ರಹ್ಮಣಃ ಕಿಮು ॥ ೨ ॥

ಅ ॥ (೧) ಮತ್ತೊಬ್ಬನಿಂದ ಹೊಂದಲ್ಪಡುವ ಸುಖವು (ಅಂದರೆ ಪರಮಾತ್ಮನ ಅಧೀನವಾದ ಸುಖವು) ಪ್ರಿಯವೆಂದೂ, ಮತ್ತೊಬ್ಬನಿಂದ ಹೊಂದಲ್ಪಡುವ ಅಮಂಗಲವು ಅಪ್ರಿಯವೆಂದೂ ಪಂಡಿತರಿಂದ ಹೇಳಲ್ಪಡುತ್ತದೆ. (೨) (ನ ಹಿ ವೈ !ಎಂಬ ವಾಕ್ಯದ ಅರ್ಥ ಹೇಳುತ್ತಾರೆ—) ಜೀವನು ಯಾವಾಗಲೂ ಎಲ್ಲಿಯೂ ಪ್ರಿಯ–ಅಪ್ರಿಯಗಳನ್ನು ಬಿಟ್ಟು ಇರುವುದಿಲ್ಲ. ಪ್ರಾಕೃತ ಶರೀರವಿಲ್ಲದಿರುವ ಪರಬ್ರಹ್ಮನಿಗೆ ಅವುಗಳ ಸಂಬಂಧವು ಎಂದಿಗೂ ಇರುವುದಿಲ್ಲ. (೩) (೨ನೇ ಮಂತ್ರದಲ್ಲಿದ್ದ ಆಭ್ಯ ಮೊದಲಾದ ಶಬ್ದಗಳ ಅರ್ಥ ಹೇಳುತ್ತಾರೆ—) ಸರ್ವೇಶ್ವರನಾದ ಶ್ರೀಹರಿಯು ಸರ್ವಜಗತ್ತನ್ನು ವ್ಯಾಪಿಸಿಕೊಂಡಿದ್ದ ಪ್ರಯುಕ್ತ ಆಪ್ ಎನಿಸುತ್ತಾನೆ. ಆ ಶ್ರೀಹರಿಯಿಂದ ಘೋಷಿಸಲ್ಪಡುವುದರಿಂದ ಚತುರ್ಮುಖನು ಆಭ್ಯ ಎನ್ನಿಸು

ತ್ತಾನೆ. ಮುಖ್ಯವಾಯುವಿನ ಹೆಂಡತಿಯಾದ ಭಾರತಿಯು ವಿಶೇಷವಾಗಿ ಪ್ರಕಾಶಿಸಿಕೊಂಡಿರುವುದರಿಂದ **ವಿದ್ಯುತ್** ಎನಿಸುತ್ತಾಳೆ. ಸರಸ್ವತಿಯು ಎಲ್ಲಾ ಶಬ್ದಗಳಿಗೆ ಅಭಿಮಾನಿನಿಯಾದುದರಿಂದ **ಸ್ತನಯಿತ್ನು** ಎನಿಸುತ್ತಾಳೆ. (೪) (ಹೀಗೆ ಪದಾರ್ಥಗಳನ್ನು ಹೇಳಿದರು. ಈಗ ಸಪತ್ನೀಕರಾದ ವಾಯುಬ್ರಹ್ಮರಿಗೆ ಶರೀರವಿದ್ದುದರಿಂದ ಅಶರೀರತ್ವವು ಹೇಗೆ? ಎಂಬೀ ಆಶಂಕೆಯನ್ನು ಪರಿಹರಿಸಿಕೊಂಡು ವಾಕ್ಯದ ಅರ್ಥ ಹೇಳುತ್ತಾರೆ—) ಈ ನಾಲ್ವರಿಗೆ ವಿಶೇಷಜ್ಞಾನವಿದ್ದುದರಿಂದ ಅತಿಶಯವಾಗಿ ಪ್ರಾಕೃತದೇಹಸಂಬಂಧವಿಲ್ಲ. (ಅದಕಾರಣ ಸ್ವಲ್ಪ ಹಣವುಳ್ಳವರನ್ನು ನಿರ್ಧನರು(ದರಿದ್ರರು) ಎಂದು ಹೇಳುವಂತೆ ನಾಲ್ವರನ್ನು ಅಶರೀರರೆಂದು ಹೇಳಿದ್ದು.) (೫) **(ಅಶರೀರೋ ವಾಯುಃ** ಇದುಮೊದಲಾದ ವಾಕ್ಯಕ್ಕೆ ಸಂಗತಿ ಹೇಳುತ್ತಾರೆ—) ಅಶರೀರರಾದುದರಿಂದ ನಾಲ್ವರಿಗೆ ಪ್ರಿಯ-ಅಪ್ರಿಯಗಳು ಇಲ್ಲ. ಪರಬ್ರಹ್ಮನಿಗೆ ಪ್ರಿಯ-ಅಪ್ರಿಯಗಳ ಸಂಪರ್ಕವಿಲ್ಲವೆಂಬುದು ಸುತರಾಂ ಸಿದ್ಧವಾಗುತ್ತದೆ. ॥ ೨ ॥

ಪೀ—ದೇಹಾಭಿಮಾನವಿಲ್ಲದಿರುವ ಆ ನಾಲ್ವರಿಗೆ ಅಪ್ರಿಯವಿಲ್ಲವಾದರೂ ಪ್ರಿಯವು ಇದೆ. ಹೇಗೆಂದರೆ—ವಾಯುಬ್ರಹ್ಮರಿಗೆ ವಿಷ್ಣ್ವಧೀನ ಸುಖವೂ, ಅವರ ಹೆಂಡಂದಿರಿಗೆ ತಂತಮ್ಮ ಪತಿಗಳ ಅಧೀನವಾದ ಸುಖವೂ ಇದೆ, ಎಂದರೆ —

ಭಾ. ॥ (೧) ವಿಷ್ಣ್ವೀಯಂ ಹಿ ಸುಖಂ ತೇಷಾಂ ಸ್ವಭರ್ತ್ರೀಯಮಥಾಪಿ ಚ । ನ ಹ್ಯನ್ಯೇಯಂ ಸುಖಂ ತೇಷಾಮತಸ್ತೇ ಪ್ರಿಯವರ್ಜಿತಾಃ ॥ (೨) ಯಥಾ ತೇ ಪರಮಾಕಾಶಾದ್ವಿಷ್ಣೋರೇವ ಸಮುತ್ಥಿತಾಃ । ತಮೇವ ಪ್ರಾಪ್ಯ ಸಂಯಾಂತಿ ನೈಜಮಾನಂದಮೂರ್ಜಿತಂ । ಏವಂ ಸಮ್ಯಕ್ಪ್ರಸಾದೇನ ವಿಷ್ಣೋರ್ಮುಕ್ತೋಽಪಿ ಯೋ ಪರಃ ॥ (೩) ಯಂ ಪ್ರಾಪ್ಯ ತೇ ನಿಜಾನಂದಮಾಪ್ನುವಂತಿ ಸ ಕೇಶವಃ । ತಂ ಪ್ರಾಪ್ಯ ರಮತೇ ಮುಕ್ತಃ ಸ್ತ್ರೀಭಿರ್ಯಾನೈಶ್ಚ ಬಂಧುಭಿಃ ॥ (೪) ಯಥೈವ ಸಾರಥಿರ್ಯಾನೇ ಏವಂ ದೇಹೇ ಚ ಮಾರುತಃ । ಯಥಾ ರಥೀ ತಥಾ ವಿಷ್ಣುರ್ಜೀವೋಽನ್ಯರಥಗೋ ಯಥಾ ॥ (೫) ಯದಾಶ್ರಿತಾನೀಂದ್ರಿಯಾಣಿ ಪ್ರಾಣಶ್ಚಾಪಿ ಯದಾಶ್ರಯಃ । ಯದಾಶ್ರಯೋಽಪ್ಯಯಂ ಜೀವೋ ಯೋ ವೇದೈಷಾಂ ಪ್ರವರ್ತನಂ ॥ ದರ್ಶನಂ ಶ್ರವಣಂ ಘ್ರಾಣಂ ಜಿಹ್ವಾಂ ಸ್ಪರ್ಶಂ ಮನಸ್ತಥಾ । ತದೀಯಾನ್ವಿಷಯಾಂಶ್ಚೈವ ಯೋ ವೇದಾಖಿಲಮಂಜಸಾ ॥ ಸ ವಿಷ್ಣುಃ ಪರಮೋ ಜ್ಞೇಯೋ ದೇವತಾಃ ಕರಣಾನಿ ಚ । ಸ ಏತೈರಿಂದ್ರಿಯೈರ್ವಿಷ್ಣುರ್ಭೋಗಾನನುಭವತ್ಯಜಃ ॥ ೩ ॥

ಅ ॥ (೧)ಆ ನಾಲ್ವರಿಗೆ ವಿಷ್ಣುವಿನ ಅಧೀನವಾದ ಸುಖವು ಇದೆ. (ಭಾರತೀಸರಸ್ವತಿಯರಿಗೆ) ತಂತಮ್ಮ ಪತಿಗಳ ಅಧೀನವಾದ ಸುಖವೂ ಇದೆ. ವಿಷ್ಣು, ಸ್ವಭರ್ತೃಗಳಿಂದ ಜೇರೆಯವರ ಅಧಿನವಾದ ಸುಖವು ಆ ನಾಲ್ವರಿಗೆ ಇಲ್ಲ. ಅಂತಹ ಸುಖವಿಲ್ಲದಿರುವುದರಿಂದ ಪ್ರಿಯವಿಲ್ಲದವರು ಎಂದು ಹೇಳಿದ್ದು. (೨) (೨ನೇ ಮಂತ್ರದಲ್ಲಿದ್ದ **ತದ್ಯಥಾ**.....**ನಿಷ್ಪದ್ಯಂತೇ** ಎಂಬ ವಾಕ್ಯದ ಅರ್ಥ ಹೇಳ ತ್ತಾರೆ—) ಆ ವಾಯ್ವಾದಿಗಳು ಹೇಗೆ ಜೆನ್ನಾಗಿ ಪ್ರಕಾಶಿಸುವ ವಿಷ್ಣುವಿನ ಪ್ರಸಾದದಿಂದಲೇ ಶರೀರದಿಂದ ಹೊರಟವರಾಗಿ ಪರಮಾತ್ಮನ ಬಳಿಗೆ ಹೋಗಿ ಸ್ವಾಭಾವಿಕವಾದ ಉತ್ಕೃಷ್ಟವಾದ ಆನಂದವನ್ನು ಹೊಂದುತ್ತಾರೋ. (೩ನೇ ಮಂತ್ರದ ಲ್ಲಿದ್ದ **ಏವಮೇವೈಷ ಸಂಪ್ರಸಾದಃ** ಎಂಬ ವಾಕ್ಯದ ಅರ್ಥ ಹೇಳುತ್ತಾರೆ—) ಹೀಗೆಯೇ ವಿಷ್ಣುವಿನ ಪೂರ್ಣಾನುಗ್ರಹದಿಂದ ಬೇರೆ ಮುಕ್ತರೂ ಕೂಡ ಶರೀರದಿಂದ ಹೊರಟು ಶ್ರೀಹರಿಯ ಬಳಿಗೆ ಹೋಗಿ ತಮ್ಮ ಸ್ವರೂಪಾನಂದವನ್ನು ಹೊಂದುತ್ತಾರೆ.) (೩) (೩ನೇ ಮಂತ್ರದಲ್ಲಿದ್ದ **ಸ ಉತ್ತಮಃ ಪುರುಷಃ** ಎಂಬು ದಕ್ಕೆ ಅರ್ಥ ಹೇಳುತ್ತಾರೆ-) ಮುಕ್ತರು ಯಾವ ಶ್ರೀಹರಿಯ ಸಮೀಪಕ್ಕೆ ಹೋಗಿ ಸ್ವರೂಪಭೂತ ಆನಂದ

ವನ್ನು ಹೊಂದುತ್ತಾರೋ, ಆ ಶ್ರೀಹರಿಯು ಬ್ರಹ್ಮರುದ್ರರಿಗೆ ಪ್ರವರ್ತಕನು, ನಿಯಾಮಕನು, ನಿತ್ಯಮುಕ್ತನು. ಶ್ರೀಹರಿಯ ಸಮೀಪಕ್ಕೆ ಹೋಗಿ ಸ್ತ್ರೀಯರಿಂದಲೂ ವಾಹನಗಳಿಂದಲೂ ಬಂಧುಗಳಿಂದಲೂ ಸಂತೋಷ ಗೊಳ್ಳುತ್ತಾನೆ. (೪) (ಸ ಯಥಾ ಪ್ರಾಯೋಗ್ಯಃ ಎಂಬ ವಾಕ್ಯಕ್ಕೆ ಅರ್ಥಹೇಳುತ್ತಾರೆ–) ವಾಹನದಲ್ಲಿ ಸಾರಥಿಯು ಹೇಗೋ, ಹಾಗೆಯೇ ಶರೀರದಲ್ಲಿ ಮುಖ್ಯಪ್ರಾಣನು. ರಥಿಕನಂತೆ ವಿಷ್ಣುವು ಹೇಗೆ ಒಬ್ಬ ಪುರುಷನು ಇತರರು ನಿಯಾಮಕರಾಗಿರುವ ರಥದಲ್ಲಿರುತ್ತಾನೋ, ಹಾಗೆಯೇ ಜೀವನು ಶ್ರೀಪರಮಾತ್ಮ ನಿಂದ ಅಧಿಷ್ಠಿತವಾದ ಶರೀರದಲ್ಲಿರುತ್ತಾನೆ. (ಇಂದ್ರಿಯಗಳು ಕುದುರೆಗಳಂತೆ ಇರುವವುಗಳು.) (೫) (೪ನೇ ಮಂತ್ರದಲ್ಲಿದ್ದ **ಅಥ ಯತ್ರೈತದಾಕಾಶಂ....**೫ನೇ ಮಂತ್ರದಲ್ಲಿದ್ದ **ದೈವಂ ಜಕ್ಷ್ಣಃ** ಎಂಬ ಪರ್ಯಂತ ವಾಕ್ಯದ ಅರ್ಥ ಹೇಳುತ್ತಾರೆ–) ಇಂದ್ರಿಯಗಳೂ ಇಂದ್ರಿಯಾಭಿಮಾನಿ ದೇವತೆಗಳೂ ಯಾರ ಅಧೀನಗ ಳಾಗಿರುತ್ತಾರೋ, ಮುಖ್ಯಪ್ರಾಣನೂ ಯಾರನ್ನಾ ಶ್ರಯಿಸಿರುತ್ತಾನೋ, ಜೀವನೂ ಯಾರನ್ನಾ ಶ್ರಯಿಸಿರು ತ್ತಾನೋ, ಯಾವ ಶ್ರೀಹರಿಯು ಮುಖ್ಯಪ್ರಾಣ ಜೀವ ಇವರಿಗೆ ಯಥಾಯೋಗ್ಯವಾಗಿ ಭೋಕ್ತೃತ್ವಾದಿಗ ಳಿವೆ ಎಂದೂ, ಇಂದ್ರಿಯಗಳು ಆಯಾಯ ವಿಷಯಗಳ ಜ್ಞಾನವನ್ನು ಹುಟ್ಟಿಸುತ್ತವೆ ಎಂದೂ, ಜೀನ್ನಾಗಿ ತಿಳಿಯುತ್ತಾನೋ, ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಕ್, ಮನಸ್ಸು ಈ ಆರು ಇಂದ್ರಿಯಗಳನ್ನೂ ಆ ಯಾಯ ಇಂದ್ರಿಯಗಳ ವಿಷಯಗಳನ್ನೂ ಜೀನ್ನಾಗಿ ತಿಳಿಯುತ್ತಾನೋ, ಆ ವಿಷ್ಣುವೇ ಸರ್ವೋತ್ತಮನೆಂದು ತಿಳಿಯಬೇಕು. ಜುಕ್ಷ್ವರಾದಿ ಶಬ್ದಗಳಿಂದ ಇಂದ್ರಿಯಾಭಿಮಾನಿ ದೇವತೆಗಳನ್ನೂ ಇಂದ್ರಿಯಗಳನ್ನೂ ಇಟ್ಟು ಕೊಳ್ಳಬೇಕೆಂದು ಯಾವನು ತಿಳಿಯುತ್ತಾನೋ, ಆ ವಿಷ್ಣುವು ಈ ಇಂದ್ರಿಯಗಳಿಂದ ಎಲ್ಲಾ ಭೋಗಗ ಳನ್ನು ಅನುಭವಿಸುತ್ತಾನೆ. ॥ ೩ ॥

ಪೀ—ಜೀವರ ಇಂದ್ರಿಯಗಳನ್ನು ಬಿಟ್ಟು ವಿಷ್ಣುವಿಗೆ ಭೋಗಗಳನ್ನು ಅನುಭವಿಸಲಿಕ್ಕೆ ಶಕ್ತಿಯಿ ಲ್ಲವೋ? ಎಂದರೆ—

ಭಾ. ॥ (೧) ಸ್ವರೂಪೇಣೈವ ಶಕ್ತೋಽಪಿ ಜೀವದೇಹಸ್ಥಿತೋ ಹರಿಃ । ಭುಂಕ್ತೇ ತದಿಂದ್ರಿಯೈರ್ಭೋಗಾಂಛರಿಕೈರಿಂದ್ರಿಯೈಃ ಸ್ವಕೈಃ ॥ (೨) ಜೀವಂ ತದಿಂದ್ರಿಯಾಣ್ಯೇವಂ ಪ್ರಾಣಂ ಚ ವ್ಯಾಪ್ಯ ಕೃತ್ಸ್ನಶಃ । ಭುಂಕ್ತೇ ತತ್ತದ್ಗುಣಾನ್ವಿಷ್ಣುರ್ನೈವ ದೋಷಾನ್ಕದಾಚನ ॥ (೩) ತಮೇವಂ ದೇವತಾಃ ಸರ್ವಾ ವಾಯ್ವಾದ್ಯಾಃ ಸಮುಪಾಸತೇ । ತಸ್ಮಾದ್ದೇವವಶಾ ಲ್ಲೋಕಾಃ ಸರ್ವಕಾಮಾಃ ಸಜೀವಕಾಃ ॥ (೪) ತಮೇತಂ ಯೋ ಯಥಾ ಜ್ಞಾತ್ವಾ ಪಶ್ಯೇದ್ವಿಷ್ಣುಂ ಸನಾತನಂ । ಆಪ್ನೋತಿ ಸರ್ವಕಾಮಾಂಶ್ಚ ಸರ್ವಲೋಕಾಂಶ್ಚ ಕಾಮತಃ ॥ ಇತಿ ಸಾಮಸಂಹಿತಾಯಾಂ ॥ ೪ ॥

ಅ ॥ (೧) ಶ್ರೀಹರಿಯು ಸ್ವರೂಪಭೂತಗಳಾದ ಇಂದ್ರಿಯಗಳಿಂದಲೇ ಸಮಸ್ತ ಭೋಗಗಳನ್ನು ಅನುಭವಿಸಲಿಕ್ಕೆ ಶಕ್ತನಾದರೂ ಜೀವರ ದೇಹದಲ್ಲಿದ್ದವನಾಗಿ ವ್ಯಾಪ್ತಗಳಾದ ತನ್ನ ಇಂದ್ರಿಯಗಳಿಂದ ಕೂಡಿದ ಜೀವರ ದೇಹಗಳಲ್ಲಿರತಕ್ಕ ಇಂದ್ರಿಯಗಳಿಂದ ಭೋಗ್ಯ ವಿಷಯಗಳನ್ನುಣ್ಣುತ್ತಾನೆ. (೨) (ಹೀಗೆ ಶ್ರೀಹರಿಗೆ ದುಷ್ಟವಿಷಯಗಳ ಭೋಗವೂ ಬರಬೇಕಾದೀತು ಎಂದರೆ–) ಶ್ರೀಹರಿಯು ಜೀವನನ್ನು ಮುಖ್ಯ ಪ್ರಾಣನನ್ನೂ ಸ್ವರೂಪದಿಂದಲೂ ಆಯಾಯ ಇಂದ್ರಿಯಗಳನ್ನು ತನ್ನ ಇಂದ್ರಿಯಗಳಿಂದಲೂ ವ್ಯಾಪಿಸಿ ಕೊಂಡು ಶುಭವಿಷಯಗಳನ್ನೇ ಉಣ್ಣುತ್ತಾನೆ. ಅಶುಭವಿಷಯಗಳನ್ನು ಯಾವಾಗಲೂ ಉಣ್ಣುವುದೇ ಇಲ್ಲ. (೩) (೬ನೇ ಮಂತ್ರದಲ್ಲಿದ್ದ **ತಂ ವಾ ಏತಂ ದೇವಾಃ** ಎಂಬುದಕ್ಕೆ ಅರ್ಥಹೇಳುತ್ತಾರೆ–) ಆ ಶ್ರೀಹರಿ ಯನ್ನು ವಾಯು ಮೊದಲಾದ ಎಲ್ಲಾ ದೇವತೆಗಳೂ ಉಪಾಸನೆ ಮಾಡುತ್ತಾರೆ. ಆದಕಾರಣ ವಾಯ್ವಾದಿ ಗಳಿಗೆ ಎಲ್ಲಾ ಲೋಕಗಳೂ ಎಲ್ಲಾ ಕಾಮಗಳೂ ಎಲ್ಲಾ ಜೀವರೂ ಅಧೀನರಾಗಿರುತ್ತಾರೆ (೪) ಅಂತಹ

ಶ್ರೀಹರಿಯನ್ನು ಶಾಸ್ತ್ರದಿಂದ ವಿಚಾರಮಾಡಿ ಪ್ರತ್ಯಕ್ಷವಾಗಿ ತಿಳಿಯುತ್ತಾನೋ, ಆತನು ಇಚ್ಛಾನುಸಾರ ಯಥಾಯೋಗ್ಯವಾಗಿ ಎಲ್ಲಾ ಕಾಮಗಳನ್ನೂ ಎಲ್ಲಾ ಲೋಕಗಳನ್ನೂ ಹೊಂದುತ್ತಾನೆ, ಎಂದು ಸಾಮ ಸಂಹಿತೆಯಲ್ಲಿದೆ. ॥ ೪ ॥

ಪೀ—(1) ವಿರೋಚನನು ಚತುರ್ಮುಖನ ಉಪದೇಶದಿಂದ ದೇಹಪ್ರತಿಬಿಂಬವೇ ಪರಬ್ರಹ್ಮನು, ಬಿಂಬಪ್ರತಿಬಿಂಬಗಳಿಗೆ ಐಕ್ಯವು, ಆದು ದೇಹಾಭಿಮಾನಿಜೀವೈಕ್ಯದಲ್ಲಿ ಪರ್ಯವಸಿತವಾಗುತ್ತದೆ, ಆದ ಕಾರಣ ಜೀವಾತ್ಮನು ಬ್ರಹ್ಮನೇ. ಅವನಿಗೇನೇ ಪೂಜಿಸಬೇಕು. ಹೀಗೆ ಚತುರ್ಮುಖನ ಅಭಿಪ್ರಾಯವು ಎಂದು ಅದ್ವೈತವನ್ನೇ ವಿರೋಚನನು ತಿಳಿದನು. ಏಕೆಂದರೆ ಅದ್ವೈತ ಸಿದ್ಧಾಂತದಲ್ಲಿ ಜೀವಾತ್ಮನಿಗೆ ಬ್ರಹ್ಮನಿಂದ ಅಭೇದವು ಹೇಳಲ್ಪಟ್ಟಿದೆ. ವಿರೋಚನನು ಅದನ್ನೇ ಅಸುರರಿಗೆ ಉಪದೇಶಿಸಿರುವನು. (2) ಶ್ರೀಹರಿಯು ಜೀವರಿಗೆ ಜಾಗ್ರದಾದ್ಯವಸ್ಥೆಗಳನ್ನು ಹೊಂದಿಸಿಕೊಡುವವನು, ಶರೀರಾಭಿಮಾನವಿಲ್ಲದವನು, ಪ್ರಿಯ ಅಪ್ರಿಯಗಳ ಸಂಬಂಧವಿಲ್ಲದವನು, ಮುಕ್ತರಿಂದ ಹೊಂದಲ್ಪಡುವವನು, ದೇಹವು ರಥವಾಗಿ ಉಳ್ಳವನು, ಜೀವರಿಗೂ ಮುಖ್ಯಪ್ರಾಣನಿಗೂ ಇಂದ್ರಿಯಾದಿಗಳಿಗೂ ಆಶ್ರಯನು, ಎಲ್ಲಾ ಶುಭ ಗಳನ್ನು ಉಣ್ಣುವವನೇ, ವಾಯು ಮೊದಲಾದವರಿಂದ ಉಪಾಸನೆಮಾಡಲ್ಪಡತಕ್ಕವನು, ಇಂಥವನು ಆತ್ಮನು. ಜೀವನು ಈ ರೀತಿಯಾಗಿ ಸರ್ವದಾ ಇಲ್ಲದವನು, ಹೀಗೆ ಭೇದವಾದವನ್ನೇ ಇಂದ್ರನು ತಿಳಿದಿರುವನು. ಇಂತಹ ಭೇದವಾದವನ್ನೇ ಇಂದ್ರನು ದೇವತೆಗಳಿಗೆ ಉಪದೇಶಮಾಡಿರುವನೆಂದು ಸಪ್ರಮಾಣವಾಗಿ ವ್ಯಾಖ್ಯಾನಮಾಡಿ ಆದನ್ನು ದೃಢೀಕರಿಸುವುದಕ್ಕಾಗಿ ಆತ್ಮಾ=ದೇಹವೇ ಪೂಜಿಸಲ್ಪಡತಕ್ಕದು, ದೇಹಾತಿರಿಕ್ತ ಆತ್ಮನು ಇಲ್ಲ' ಎಂಬ ಚಾರ್ವಾಕಮತವನ್ನು ವಿರೋಚನನು ತಿಳಿದಿರುವನು. ಹಾಗೆಯೇ ದೈತ್ಯರಿಗೆ ಉಪದೇಶಮಾಡಿದನೆಂದು ಕೆಲವರು ಹೇಳುವರು. ಆದು ಅಯುಕ್ತವೆಂದು ಹೇಳುತ್ತಾ ಹಿಂದೆ ಹೇಳಿದ ಪ್ರಕಾರ ವಿರೋಚನನು ಅದ್ವೈತವನ್ನೇ ತಿಳಿದನು, ಮತ್ತು ಉಪದೇಶಿಸಿರುವನೆಂದು ಉಪಪಾದಿಸುತ್ತಾರೆ—

ಭಾ. ॥ (೧) ಉಭೌ ಲೋಕಾವವಾಪ್ನೋತೀತಿ ವಚನಾನ್ನ ಲೋಕಾಯತಿಕಮತಂ ವಿರೋಚನೋಕ್ತಂ ॥ (೨) ಕಿಂ ತು ಬಿಂಬಪ್ರತಿಬಿಂಬಯೋರಭಿಮಾನ್ಯೈಕ್ಯಾಭಿಪ್ರಾಯೇಣ ಜೀವಾತ್ಮೈವ ಮಹಯ್ಯ ಇತಿ ಮಾಯಾವಾದ ಏವ ॥ (೩) ನ ಚಾ(ನ್ಯ)ತ್ರ ಜೀವ ಆತ್ಮಶಬ್ದೋಕ್ತಃ । ತದಸ್ಯಾಮೃತಸ್ಯಾಶರೀರಸ್ಯಾತ್ಮನೋಽಧಿಷ್ಠಾನಮಾತ್ರೋ ವೈ ಸಶರೀರಃ ಪ್ರಿಯಾಪ್ರಿಯಾಭ್ಯಾಂ ನ ಹ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತ್ಯಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತ ಇತೀಶಜೀವಯೋಃ ಸತಾತ್ಪರ್ಯಂ ಭೇದಾಭಿಧಾನಾತ್ । ನ ಹಿ ಜೀವಾದನ್ಯಸ್ಯ ಪ್ರಿಯಾಪ್ರಿಯಾನುಭವೋಽಸ್ತಿ ॥ (೪) ನ ಚ ಮುಕ್ತಾನ್ಯಾಪಿ ಪ್ರಿಯಾಪಹತಿರಸ್ತಿ ॥ (೫) ನ ಚ ವಿಷ್ಣೋರತ್ರ ವಿವಕ್ಷಿತಂ ಪ್ರಿಯಂ । ಪರಾಧೀನರತಿಪ್ರಾಪ್ತಿರ್ಹಿ ಪ್ರಿಯಮತ್ರ ವಿವಕ್ಷಿತಂ ನ ಹಿ ತದ್ಭಗವತಃ । ಮುಕ್ತಾನಾಂ ತು ಭಗವದಧೀನರತಿಕ್ಷಾತ್ಪ್ರಿಯಮಸ್ತ್ಯೇವ ॥ ೫ ॥

ಅ ॥ **ಉಭೌ ಲೋಕಾವವಾಪ್ನೋತಿ** ಎಂಬ ವಚನದಿಂದ ಚಾರ್ವಾಕಮತವನ್ನು ವಿರೋಚನನು ಹೇಳಿದುದು ಅಲ್ಲ. ಅಂದರೆ ಇಲ್ಲಿ ವಿರೋಚನನು ಚಾರ್ವಾಕಮತವನ್ನು ತಿಳಿದನು, ಅಸುರರಿಗೆ ಉಪದೇಶಿಸಿದನು, ಎಂದು ಹೇಳಲಾಗುವುದಿಲ್ಲ, ಏಕೆಂದರೆ ಅನೇ ಖಂಡದ ಜನೇ ಮಂತ್ರದಲ್ಲಿ **ಉಭೌ ಲೋಕಾವವಾಪ್ನೋತೀಮಂ ಚಾಮುಂ ಚ** ಎಂದು ಫಲವಾಕ್ಯದಿಂದ ವಿರೋಧವು ಬರುವುದು. ಚಾರ್ವಾಕನು ಪರಲೋಕವನ್ನೇ ಒಡಂಬಡಲಿಲ್ಲ.) (೨) (ಹಾಗಾದರೆ ಏನು ತಿಳಿದಿರುವನು, ಏನು ಉಪದೇಶಿಸಿರುವನು, ಎಂದರೆ—) ಪರಂತು ಬಿಂಬಪ್ರತಿಬಿಂಬಗಳಿಗೆ ಯಾವುದು ಐಕ್ಯವಿದೆಯೋ, ಅದು ಹಿಂದೆ ಹೇಳಿದ

ಪ್ರಕಾರ ಬಿಂಬಭೂತ ದೇಹಾಭಿಮಾನಿ ಜೀವೈಕ್ಯದಲ್ಲಿ ಪರ್ಯವಸಿತವಾಗುತ್ತದೆಂಬ ಅಭಿಪ್ರಾಯದಿಂದ ಜೀವಾತ್ಮನೇ ಪೂಜಿಸಲ್ಪಡಬೇಕೆಂದು ಆದ್ಯೈತವನ್ನೇ ವಿರೋಚನನು ತಿಳಿದಿರುವನು, ಮತ್ತು ಉಪದೇಶಿಸಿರುವನು. (೩) (ಇಲ್ಲಿ ವಿರೋಚನನು ತಿಳಿದ ಆತ್ಮನೆಂದರೆ ಜಾರ್ವಾಕರ ರೀತಿಯಾಗಿ ದೇಹವೆಂದು ಹೇಳುವುದಾದರೆ ಇಂದ್ರನು ತಿಳಿದದ್ದು ದೇಹಾತಿರಿಕ್ತ ಜೀವನೇ ಎಂದು ಹೇಳಬೇಕು. ಅದು ಯುಕ್ತವಲ್ಲ. ಏಕೆಂದರೆ—) ಬ್ರಹ್ಮನು ಇಂದ್ರನಿಗೆ ಉಪದೇಶಿಸಿದುದರಲ್ಲಿ ಜೀವನು ಆತ್ಮಶಬ್ದದಿಂದ ಹೇಳಲ್ಪಡುತ್ತಾನೆಂದು ಹೇಳಲಾಗುವುದಿಲ್ಲ (ಏಕೆಂದರೆ—) *ತದಸ್ಯಾಮೃತಸ್ಯ ಇತ್ಯಾದಿಗಳಲ್ಲಿ ಬ್ರಹ್ಮನು ಇಂದ್ರನಿಗೆ ಉಪದೇಶಿಸಿದ ಆತ್ಮನು ಅಮೃತನು, ಶರೀರವಿಲ್ಲದವನು, ಜೀವರ ದೇಹಕ್ಕೆ ಅಧಿಷ್ಠಾತನು, ಪ್ರಿಯ-ಅಪ್ರಿಯಗಳ ಸಂಬಂಧವಿಲ್ಲದವನು, ಇದುಮೊದಲಾದ ಜೀವರಲ್ಲಿ ಸರ್ವಥಾ ಇಲ್ಲದಿರುವ ಧರ್ಮಗಳುಳ್ಳವನು. ಶ್ರೀ ಹರಿಯು ಜೀವರಿಂದ ವಿಲಕ್ಷಣನು. ಹೀಗೆ ಈಶಜೀವರಿಗೆ ತಾತ್ಪರ್ಯಪೂರ್ವಕವಾಗಿ ಸ್ಪಷ್ಟವಾಗಿ ಭೇದವನ್ನು ಹೇಳಿದ್ದಾರೆ. ಜೀವರು ಹೊರತು ಇತರರಿಗೆ ಸರ್ವಥಾ ಪ್ರಿಯ-ಅಪ್ರಿಯಾಗಳ ಅನುಭವವು ಇರುವುದಿಲ್ಲ. (ಏವಂಚ ಪ್ರಿಯ-ಅಪ್ರಿಯಾಸ್ಪೃಷ್ಟತ್ವವು ಜೀವರಲ್ಲಿಲ್ಲ. ಅದು ವಿಷ್ಣುಲಕ್ಷಣವೆಂದುಕ್ತವಾಯಿತು.) (೪) (ಹಾಗಾದರೆ ಜೀವರಿಗೆ ಸಂಸಾರದಶೆಯಲ್ಲಿಯೇ ಪ್ರಿಯಾಪ್ರಿಯಗಳ ಅನುಭವವು. ಮುಕ್ತಿಯಲ್ಲಿ ಇಲ್ಲ. ಅದುಕಾರಣ ಜೀವರಲ್ಲಿಲ್ಲ ಎಂಬುದು ಹೇಗೆ? ಎಂದರೆ—) ಮುಕ್ತನಿಗೂ ಪ್ರಿಯವಿದ್ದ ಪ್ರಯುಕ್ತ ಪ್ರಿಯಾಸ್ಪೃಷ್ಟತ್ವವು ಇಲ್ಲ. (ಅದುಕಾರಣ ಇದು ವಿಷ್ಣುವಿನ ಲಕ್ಷಣವೇ.) (೫) (ಹಾಗಾದರೆ ವಿಷ್ಣುವಿಗೂ ಪ್ರಿಯವಿದ್ದ ಪ್ರಯುಕ್ತ ಪ್ರಿಯಾಸ್ಪೃಷ್ಟತ್ವವು ವಿಷ್ಣುವಿನಲ್ಲಿ ಹೇಗೆ ಇರುವುದೆಂದರೆ—) ಇಲ್ಲಿ ಇಷ್ಟವಾದ ಪ್ರಿಯವು ವಿಷ್ಣುವಿನಲ್ಲಿರತಕ್ಕುದಲ್ಲ. ಏಕೆಂದರೆ ಇಲ್ಲಿ ಇಷ್ಟವಾದ ಪ್ರಿಯವೆಂದರೆ ಪರಾಧೀನ ಸುಖಪ್ರಾಪ್ತಿಯು. ಇಂತಹ ಪ್ರಿಯವು ಶ್ರೀಹರಿಗೆ ಇಲ್ಲ. ಮುಕ್ತರಿಗಾದರೂ ಶ್ರೀಹರಿಯ ಅಧೀನವಾದ ಸುಖವಿದ್ದ ಪ್ರಯುಕ್ತ ಪ್ರಿಯವು ಇದ್ದೇ ಇದೆ. ॥ ೫ ॥

ಪೀ—ಪ್ರಿಯಾದ್ಯಸ್ಪೃಷ್ಟತ್ವವು ಜೀವರಲ್ಲಿಲ್ಲ. ಶ್ರೀಹರಿಯಲ್ಲಿ ಮಾತ್ರ ಇರತಕ್ಕದೆಂಬುವಲ್ಲಿ ಪ್ರಮಾಣ ಹೇಳುತ್ತಾರೆ—

ಭಾ. ॥ (೧) ಜೀವಾ ಮುಕ್ತಾ ಅಮುಕ್ತಾಶ್ಚ ಪರಾಧೀನರತಿತ್ವತಃ । ನ ಪ್ರಿಯಾಪ್ತಿಃ ಕ್ವಾಪಿ ಸ್ವಾತಂತ್ರ್ಯಾನ್ನ ಹರೇಃ ಪ್ರಿಯಂ । ಪರಾಧೀನರತಿರ್ಯಸ್ಮಾತ್ತ್ವಿಯಮಿತ್ಯುಚ್ಯತೇ ಬುಧೈಃ ॥ (೨) ಹರೇರಧೀನತಾ ತು ಸ್ಯಾದ್ಯದ್ಯಪಿ ಬ್ರಹ್ಮವಾಯುವೋಃ । ತದನ್ಯವಶತಾಭಾವಾದಪ್ರಿಯಾವಿತಿ ತೌ ಶ್ರುತೌ ॥ (೩) ಯಥಾ ರಾಜ್ಞಃ ಸ್ವರಾಟ್ಪಿಣ್ಡೋ ರುದ್ರಸ್ಯೇಶ್ವರತಾ ತಥಾ । ಯಥಾ ಶಕ್ರಸ್ಯ ಚೇಂದ್ರತ್ವಂ ತದ್ವದಪ್ರಿಯತಾ ತಯೋಃ ॥ (೪) ಯಥಾ ರಾಜ್ಞಾಶ್ಚ ರಾಜ್ಞೀತ್ವಂ ಯಥಾ ಚೋ(ಥೈವೋ)ಮೇಶ್ವರೀ ಸ್ಮೃತಾ । ವಿದ್ಯುತಃ ಸ್ತನಯಿತ್ನೋಶ್ಚ ತಥೈವಾಪ್ರಿಯತಾ ಶ್ರುತಾ ॥ ಇತಿ ಚ ಪರಮಶ್ರುತೌ ॥ ೬ ॥

ಅ ॥ (೧) ಮುಕ್ತರಾದ ಜೀವರಿಗೂ ಅಮುಕ್ತರಿಗೂ ಪರಾಧೀನವಾದ ಸುಖವಿದ್ದುದರಿಂದ ಅವರಿಗೆ ಪ್ರಿಯವದೆ. ಮತ್ತು ಅಮುಕ್ತರಿಗೆ ಎಲ್ಲಿಯೂ ಪ್ರಿಯಾಸ್ಪೃಷ್ಟತ್ವವು ಇಲ್ಲ. ಪರಾಧೀನವಾದ ಸುಖವೇ ಪ್ರಿಯವೆಂದು ಜ್ಞಾನಿಗಳಿಂದ ಇಲ್ಲಿ ಹೇಳಲ್ಪಡುತ್ತದೆ. ಶ್ರೀಹರಿಯು ಸರ್ವಸ್ವತಂತ್ರನಾದುದರಿಂದ (ಪರಾಧೀನ ಸುಖವು ಇಲ್ಲದಿರುವವನಾದುದರಿಂದ) ಅತನಿಗೆ ಇಂತಹ ಪ್ರಿಯವಿಲ್ಲ. (೨) (ಹಾಗಾದರೆ ಪ್ರಿಯಾದ್ಯಸ್ಪೃಷ್ಟತ್ವವು ವಿಷ್ಣುವಿನಲ್ಲಿ ಮಾತ್ರ ಇರತಕ್ಕುದ್ದಲ್ಲ ಏಕೆಂದರೆ ವಾಯು ಮೊದಲಾದವರಿಗೆ ಶರೀರವಿಲ್ಲವೆಂದು ಹೇಳಿದ ಕಾರಣ ಅವರಿಗೆ ಪ್ರಿಯಾದ್ಯಸ್ಪೃಷ್ಟತ್ವವೂ ಇದೆ ಎಂದರೆ—) ಯದ್ಯಪಿ ಬ್ರಹ್ಮವಾಯುಗಳ

* ಪುಟಕೆಳಗಡೆಯಲ್ಲಿ ಇದು ವ್ಯಾಖ್ಯಾತವಾಗಿದೆ.

ಸುಖವು ಶ್ರೀಹರಿಯ ಅಧೀನವೇ ಆಗಿದೆ. ಆದರೂ ಇತರರ ಅಧೀನದಲ್ಲಿಲ್ಲದಿರುವುದರಿಂದ ಬ್ರಹ್ಮವಾಯುಗಳು ಅಪ್ರಿಯರೆಂದು ಹೇಳಿದೆ. (ಏನಂಚ ಆಮುಖ್ಯವಾದ ಪ್ರಿಯಾಸ್ಪೃಷ್ಟತ್ವವು ಬ್ರಹ್ಮವಾಯುಗಳಲ್ಲಿರುವುದು.) (೩) ಹೇಗೆ ರಾಜನಿಗೆ ಸ್ವರಾಟ್ ಎಂಬ ಶಬ್ದವು, ರುದ್ರನಿಗೆ ಈಶ್ವರ ಎಂಬ ಶಬ್ದವು, ಇಂದ್ರನಿಗೆ ಇಂದ್ರ ಎಂಬ ಶಬ್ದವಿದೆಯೋ, ಹೀಗೆಯೇ ಬ್ರಹ್ಮವಾಯುಗಳಿಗೆ ಅಪ್ರಿಯತ್ವವು (ಪ್ರಿಯಾಸ್ಪೃಷ್ಟತ್ವವು) ಇರುವುದು. (೪) ಹೇಗೆ ರಾಜನ ಹೆಂಡತಿಗೆ ರಾಜ್ಞೀ ಎಂಬ ಶಬ್ದವೋ, ಪಾರ್ವತಿಗೆ ರುದ್ರನ ಅಧೀನವಾಗಿ ಈಶ್ವರೀ ಎಂಬ ಶಬ್ದವಿದೆಯೋ, ಹಾಗೆಯೇ ಭಾರತೀ ಸರಸ್ವತಿಯರಿಗೆ, ತಮ್ಮ ತಮ್ಮ ಪತಿಗಳ ಅಧೀನವಾದ ಸುಖಮಾತ್ರವಿದ್ದುದರಿಂದ ಅವರಿಬ್ಬರೂ ಅಪ್ರಿಯರೆಂದು ಹೇಳಲ್ಪಡುತ್ತಾರೆ. (ಆದಕಾರಣ ಅಪರಲ್ಲಿಯೂ ಆಮುಖ್ಯವಾದ ಪ್ರಿಯಾಸ್ಪೃಷ್ಟತ್ವವು) ಎಂದು ಪರಮಶ್ರುತಿಯಲ್ಲಿ ಹೇಳಿದೆ. ॥ ೬ ॥

ಪೀ ಪ್ರಿಯಾಸ್ಪೃಷ್ಟತ್ವವು ಶ್ರೀಹರಿಯಲ್ಲಿ ಮಾತ್ರ ಇರುವುದರಿಂದ ಬ್ರಹ್ಮನು ಇಂದ್ರನಿಗೆ ಶ್ರೀಹರಿಯನ್ನೇ ಉಪದೇಶಿಸಿರುವನು, ಎಂದು ಹೇಳಿದೆ. ಕಾರಣಾಂತರದಿಂದಲೂ ಶ್ರೀಹರಿಯೇ ಎನ್ನುತ್ತಾರೆ—

ಭಾ. ॥ (೧) ಸ ಏವ(ಪ) ಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ ಪರಂ-ಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತ ಇತಿ ಮುಕ್ತಸ್ಯ ತತ್ಪ್ರಸಾದಾತ್ತತ್ಪ್ರಾಪ್ತ್ಯಾ ನಿಜಾನಂದಾನುಭವಶ್ರುತೇಶ್ಚ ॥ (೨) ಸ ಉತ್ತಮಃ ಪುರುಷ ಇತಿ ತಸ್ಯ ಜೀವಾದುತ್ತಮತ್ವ-ಶ್ರುತೇಶ್ಚ ॥ (೩) ಅಪರಪುರುಷಾಪೇಕ್ಷಯಾ ಹ್ಯುತ್ತಮಪುರುಷಶಬ್ದೋ ಭವತಿ । ಅನ್ಯಥೋ-ತ್ತಮಶಬ್ದ ಏವ ಸ್ಯಾತ್ ॥ (೪) ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ । ಇತಿ ಚ ॥ (೫) ಬ್ರಹ್ಮೇಶಾನಾದಿಭಿರ್ದೇವೈರ್ಯತ್ಪ್ರಾಪ್ತುಂ ನೈವ ಶಕ್ಯತೇ । ತದ್ಯತ್ಸ್ವಭಾವಃ ಕೈವಲ್ಯಂ ಸ ಭವಾನ್ಕೇವಲೋ ಹರೇ ॥ (೬) ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಮನ್ವಶ್ನುವಂತಿ ॥ ೭ ॥

ಅ ॥ (೧) ಈ ಜೀವನು ಶರೀರದಿಂದ ಹೊರಟು ಪರಬ್ರಹ್ಮನ ಬಳಿಗೆ ಹೋಗಿ ಸ್ವರೂಪಭೂತ ಆನಂದದಿಂದ ಸಂಪನ್ನನಾಗುತ್ತಾನೆ. ಹೀಗೆ ಮುಕ್ತನು ಪರಮಾತ್ಮನ ಪ್ರಸಾದದಿಂದ ಶ್ರೀಹರಿಯ ಸಮೀಪಕ್ಕೆ ಹೋಗಿ ಸ್ವರೂಪ ಆನಂದವನ್ನು ಅನುಭವಿಸುತ್ತಾನೆಂದು ವೇದವಿದೆ (೨) ಚತುರ್ಮುಖನು ಇಂದ್ರನಿಗೆ ಹೇಳಿದ ಆತ್ಮನನ್ನು ಸರ್ವೋತ್ತಮ ಪುರುಷನೆಂದು ಹೇಳಿರುತ್ತಾನೆ. ಆದಕಾರಣ ಆತ್ಮನು ಜೀವರಿಗಿಂತ ಉತ್ತಮನೆಂದು ವೇದದಲ್ಲಿ ಹೇಳಿದ ಕಾರಣ ಆತ್ಮನೆಂದರೆ ಜೀವನಲ್ಲ. (೩) (ಜಡಗಳಿಗಿಂತ ಉತ್ತಮತ್ವವು ಜೀವರಿಗೂ ಕೂಡುವುದರಿಂದ **ಉತ್ತಮಃ ಪುರುಷಃ** ಎಂದು ಹೇಳಿದ ಉತ್ತಮತ್ವವು ಜೀವರಿಗೂ ಕೂಡಬಹುದು, ಎಂದರೆ–) **ಉತ್ತಮಃ ಪುರುಷಃ** ಎಂಬುವಲ್ಲಿ **ಪುರುಷಃ** ಎಂಬ ಶಬ್ದವಿದ್ದ ಕಾರಣ ಬೇರೆ ಪುರುಷರಿಗಿಂತ ಉತ್ತಮನೆಂದೇ ಹೇಳಬೇಕು. (ಜಡಗಳಿಂದ ಉತ್ತಮನೆಂದು ಹೇಳಲಾಗುವುದಿಲ್ಲ.) ಜಡಗಳಿಗಿಂತ ಉತ್ತಮನೆಂದು ಹೇಳುವುದಾದರೆ ಪುರುಷಶಬ್ದವು ವ್ಯರ್ಥವಾದೀತು. ಉತ್ತಮ ಎಂಬ ಶಬ್ದವೇ ಸಾಕಾಗುವುದು. (೪) ಉತ್ತಮ ಪುರುಷನು ಕ್ಷರ ಅಕ್ಷರ ಪುರುಷರಿಗಿಂತ ಭಿನ್ನನು ಪರಮಾತ್ಮನೆನಿಸುತ್ತಾನೆಂದು ಗೀತೆಯಲ್ಲಿ ಹೇಳಿರುವರು. (೫) (ಉತ್ತಮ ಪುರುಷತ್ವವು ತಮ್ಮಲ್ಲಿ ಕೂಡದಿದ್ದರೂ ಬ್ರಹ್ಮರುದ್ರಾದಿಗಳಲ್ಲಿ ಕೂಡಬಹುದೆಂದರೆ—) ಬ್ರಹ್ಮರುದ್ರಾದಿ ದೇವತೆಗಳಿಗೂ ಯಾವ ಸರ್ವೋತ್ತಮತ್ವವು ಹೊಂದಲು ಸಾಧ್ಯವಿಲ್ಲವೋ, ಅಂತಹ ಸರ್ವೋತ್ತಮತ್ವವು ಶ್ರೀಹರಿಯ ಸ್ವಭಾವವು. ಅದುಕಾರಣ ಶ್ರೀಹರಿಯು ಸರ್ವೋತ್ತಮನೇ. (೬) ಪರಿಮಿತಿಯಿಲ್ಲದವನು, ಸ್ವರೂಪದಿಂದಲೇ ಅಭಿವೃದ್ಧನಾದವನೇ ನಿನ್ನ ಸರ್ವೋತ್ತಮತ್ವಾದಿಗಳನ್ನು ಯಾರೂ ಹೊಂದುವುದಿಲ್ಲ. ॥ ೭ ॥

ಪೀ-ಉತ್ತಮಃ ಪುರುಷಃ ಎಂಬಲ್ಲಿ ಬೇರೆ ಪುರುಷರಿಗಿಂತ ಉತ್ತಮನೆಂದು ಹೇಳಬೇಕೆಂದು ಹೇಳಿದ್ದು ಯುಕ್ತವಲ್ಲ. ಏಕೆಂದರೆ ಇದು ಮೋಕ್ಷಾವಸ್ಥೆಯಲ್ಲಿ ಹೇಳುವಂಥಾದ್ದು. ಮೋಕ್ಷದಲ್ಲಿ ಪರೇವ್ಯಯೇ ಸರ್ವ ವಿಕೀಭವಂತಿ ಎಂದು ಐಕ್ಯವನ್ನು ಹೇಳಿರುವುದರಿಂದ ಬೇರೆ ಪುರುಷರೇ ಇಲ್ಲ, ಎಂದರೆ ಮೋಕ್ಷದಲ್ಲಿಯೂ ಬೇರೆ ಪುರುಷರು ಇದ್ದಾರೆಂಬುವಲ್ಲಿ ಪ್ರಮಾಣಗಳನ್ನು ಹೇಳುತ್ತಾರೆ –

ಭಾ. ॥ (೧) ಇದಂ ಜ್ಞಾನಮುಪಾಶ್ರಿತ್ಯ ಮಮ ಸಾಧರ್ಮ್ಯಮಾಗತಾಃ ॥(೨) ಸೋಽಶ್ನುತೇ ಸರ್ವಾನ್ಕಾಮಾನ್ಸಹ ಬ್ರಹ್ಮಣಾ ವಿಪಶ್ಚಿತೇತಿ ॥ (೩) ಏಕಮಾನಂದಮಯಮಾತ್ಮಾನಮುಪಸಂಕ್ರಾಮ್ಯೇಮಾಂಲ್ಲೋಕಾನ್ಕಾಮಾನ್ನೀ ಕಾಮರೂಪ್ಯನುಸಂಚರನ್॥(೪)(1)ನ ಯತ್ರ ಮಾಯಾ ಕಿಮುತಾಪರೇ ಹರೇರನುವ್ರತಾ ಯತ್ಕ ಸುರಾಸುರಾರ್ಚಿತಾಃ(2)ಕೃಷ್ಣೋ ಮುಕ್ತೈರಿಜ್ಯತೇ ವೀತಮೋಹೈಃ । ಇತ್ಯಾದೇಶ್ಚ ॥ (೫)(1)ಸ ತತ್ರ ಪರ್ಯೇತಿ ಜಕ್ಷನ್ ಕ್ರೀಡನ್ರಮಮಾಣಃ ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾ(2)ನೋಪಜನಂ ಸ್ಮರನ್ನಿದಂ ಶರೀರಮಿತ್ಯಾದಾಪಿ ಭೇದೇನಾವಸ್ಥಾನಶ್ರುತೇಃ ॥ (೬) ಉಪಶಬ್ದಾದಂತರಶಬ್ದಾಚ್ಚ ಮುಕ್ತಸ್ಯ ಪರಂಜ್ಯೋತಿಸ್ಸಮಿಪಾವಸ್ಥಾನಶ್ರುತೇಶ್ಚ ॥ (೭) ನ ಚ ಜೀವಮಾತ್ರಂ ದೇವಾ ಉಪಾಸತೇ । ಊರ್ಜಂ ಪೃಥಿವ್ಯಾ ಭಕ್ತ್ಯಾಯೋರುಗಾಯಮುಪಾಸತೇ । ಇತಿ ಹಿ ಶ್ರುತಿಃ ॥ (೮) ಭೇದದೃಷ್ಟ್ಯಾಽಭಿಮಾನೇನ ನಿಸ್ಸಂಗೇನಾಪಿ ಕರ್ಮಣಾ । ಇತ್ಯಾದೇಶ್ಚ ॥ ೮ ॥

ಅ ॥ (೧) ಮುಕ್ತರು ಹರಿಸರ್ವೋತ್ತಮತ್ವಾದಿ ಜ್ಞಾನವನ್ನು ಹೊಂದಿ ಜ್ಞಾನಾನಂದಾದಿಗಳಿಂದ ತನ್ಮ ಯೋಗ್ಯತಾನುಸಾರ ನನ್ನ ಸಾಧರ್ಮ್ಯವನ್ನು ಹೊಂದಿರುತ್ತಾರೆ. (೨) ಮುಕ್ತನು ಜ್ಞಾನಿಯಾದ ಚತುರ್ಮುಖನಿಂದ ಅಥವಾ ಪರಬ್ರಹ್ಮನಿಂದ ಕೂಡಿ ತನಗೆ ಯೋಗ್ಯಗಳಾದ ಎಲ್ಲಾ ಅಭೀಷ್ಟಗಳನ್ನು ಹೊಂದುತ್ತಾನೆ. (೩) ಆನಂದರೂಪಿಯಾದ ಶ್ರೀಹರಿಯ ಬಳಿಗೆ ಹೋಗಿ ಇಚ್ಛಾನುಸಾರ ಅನ್ನವುಳ್ಳವನೂ ಇಚ್ಛಾನುಸಾರವಾದ ರೂಪವುಳ್ಳವನೂ ಆಗಿ ಭೂರಾದಿ ಲೋಕಗಳಲ್ಲಿ ಸಂಚರಿಸುತ್ತಾನೆ. (೪)(1)ಮೋಕ್ಷದಲ್ಲಿ ಅಜ್ಞಾನವಿಲ್ಲ, ಯಾವ ದೋಷಗಳೂ ಇಲ್ಲ, ದೇವತೆಗಳೂ ತತ್ತ್ವಾಭಿಮಾನಿ ದೇವತೆಗಳೂ ಇವರಿಂದ ಮುಕ್ತರು ಪೂಜಿಸಿಕೊಳ್ಳಲ್ಪಟ್ಟವರಾಗಿ ಶ್ರೀಹರಿಗೆ ಅನುವ್ರತರಾಗಿರುತ್ತಾರೆ(2)ಮೂಲರೂಪಿಯು ಅಜ್ಞಾನವಿಲ್ಲದ ಮುಕ್ತರಿಂದ ಪೂಜಿಸಲ್ಪಡುತ್ತಾನೆ, ಇದುಮೊದಲಾದ ಪ್ರಮಾಣಗಳಿಂದ(ಕ್ಷರ ಅಕ್ಷರ ಪುರುಷರು ಇದ್ದಾರೆಂದು ಮೋಕ್ಷದಲ್ಲಿ ತಿಳಿಯುತ್ತದೆ.) (೫) (ಈ ವಿಷಯದಲ್ಲಿ ಈ ಉಪನಿಷತ್ತಿನ ವಾಕ್ಯಗಳನ್ನು ಹೇಳುತ್ತಾರೆ.) (1) *ಸ ತತ್ರ ಪರ್ಯೇತಿ(2) ನೋಪಜನಂ ಸ್ಮರನ್ ಎಂಬ ವಾಕ್ಯವಲ್ಲಿಯೂ ಮೋಕ್ಷದಲ್ಲಿ ಜೀವರು ಭಿನ್ನರಾಗಿರುತ್ತಾರೆಂದು ಹೇಳಿದೆ. (೬) (ಮತ್ತು ಸ ಉತ್ತಮಃ ಪುರುಷಃ ಎಂಬ ವಾಕ್ಯದ ಸವಿಾಪದಲ್ಲಿಯೇ ಮೋಕ್ಷದಲ್ಲಿ ಶ್ರೀಹರಿಯಿಂದ ಬೇರೆ ಪುರುಷರು ಇದ್ದಾರೆಂದು ತಿಳಿಯತಕ್ಕದಿದೆ ಎನ್ನುತ್ತಾರೆ—) ಪರಂಜ್ಯೋತಿರುಪಸಂಪದ್ಯ ಎಂದು ಉಪಶಬ್ದವಿದ್ದುದರಿಂದಲೂ (ಬೇರೆ ಶಾಪೆಯಲ್ಲಿ) ಆಂತರ ಶಬ್ದವಿದ್ದುದರಿಂದಲೂ ಮುಕ್ತನು ಪರಮಾತ್ಮನ ಸವಿಾಪದಲ್ಲಿದ್ದಾನೆಂದು ತಿಳಿಯುತ್ತದೆ. (ಏನಂಜ ಬಹುಪ್ರಮಾಣವಿರೋಧವಿದ್ದ ಪ್ರಯುಕ್ತ ಐಕ್ಯಪ್ರತಿಪಾದಕವಂತೆ ತೋರುವ ವಾಕ್ಯಗಳು ಸ್ವಾನ್ಯೈಕ್ಯ ಮತ್ತೈಕ್ಯರೂಪವಾದ ಅರ್ಥವನ್ನು ಹೇಳುತ್ತವೆಂದು ಇಟ್ಟುಕೊಳ್ಳಬೇಕು.) (೭) ಮತ್ತು ಮೋಕ್ಷದಲ್ಲಿ ತಂ ವಾ ಏತಂ ದೇವಾ ಆತ್ಮಾನಮುಪಾಸತೇ ಎಂದು ಒನೇ ಮಂತ್ರದಲ್ಲಿ ಆತ್ಮನನ್ನು ದೇವತೆಗಳು ಉಪಾಸನೆ ಮಾಡುತ್ತಾರೆಂದು ತೋರುತ್ತದೆ. ಶ್ರೀಹರಿಯು ಹೊರತು ಜೀವನು ಮಾತ್ರ ದೇವತೆಗಳಿಂದ ಉಪಾಸನೆಮಾಡಲ್ಪಡುತ್ತಾನೆಂಬುದು ಕೂಡಲಾರದು. (ಆದುದರಿಂದಲೂ ಬ್ರಹ್ಮನು ಜೀವನನ್ನು ಇಂದ್ರನಿಗೆ ಉಪದೇಶಿಸಿದ್ದೆಂದು ಕೂಡಲಾರದು.)

*ಇವೆರಡೂ ೧೬ನೆಯಲ್ಲಿ ವ್ಯಾಖ್ಯಾತವಾಗಿದೆ.

(ಏಕೆ ಕೂಡಲಾರದೆಂದರೆ) ದೇವತೆಗಳು ಪೃಥಿವಿಯಿಂದ ಆಕಾಶವನ್ನು ಉಣ್ಣುವುದಕ್ಕಾಗಿ ಎಲ್ಲರಿಂದಲೂ ಜೆನ್ನಾಗಿ ಗಾನ ಮಾಡಲ್ಪಡುವುದರಿಂದ ಉರುಗಾಯನೆಂದು ಪ್ರಸಿದ್ಧನಾದ ಶ್ರೀ ವಿಷ್ಣುವನ್ನು ಪಾಸನೆಮಾಡುತ್ತಾರೆ, ಎಂಬ ವೇದವು ವಿಷ್ಣುವನ್ನೇ ದೇವತೆಗಳು ಉಪಾಸನೆಮಾಡುತ್ತಾರೆಂದು ಹೇಳುತ್ತದೆ. (೮) (ಚತುರ್ಮುಖನು ಶ್ರೀಹರಿಯನ್ನು ಉಪಾಸನೆಮಾಡುತ್ತಾನೆನ್ನುವಾಗ ಬೇರೆ ಎಲ್ಲಾ ದೇವತೆಗಳೂ ಉಪಾಸನೆಮಾಡುತ್ತಾರೆಂಬುದು ಸುತರಾಂ ಸಿದ್ಧವೆಂಬ ಅಭಿಪ್ರಾಯದಿಂದ ದೇವೋತ್ತಮನಾದ ಚತುರ್ಮುಖನು ಉಪಾಸನೆ ಮಾಡುತ್ತಾನೆಂದು ಭಾಗವತದಲ್ಲಿ ಬೇಳೆದೆ ಎನ್ನುತ್ತಾರೆ. ಅಥವಾ **ಸ ಉತ್ತಮಃ ಪುರುಷಃ** ಎಂದು ಹೇಳಿದ, ಮುಕ್ತರಿಂದ ಹೊಂದಲ್ಪಡುವವನು ಎಲ್ಲಾ ಪುರುಷರಿಂದಲೂ ಉತ್ತಮನೆಂದು ಭಾಗವತ ವಾಕ್ಯದಿಂದಲೂ ದೃಢೀಕರಿಸುತ್ತಾರೆ—) ಚತುರ್ಮುಖನು ಜೀವಾದಿಗಳಿಂದ ಭಿನ್ನನೆಂದು ಶ್ರೀಹರಿಯನ್ನು ಪಾಸನೆ ಮಾಡಿದುದರಿಂದಲೂ ಗುಣಪರಿಪೂರ್ಣನೆಂಬ ಜ್ಞಾನದಿಂದಲೂ ಆಕಾಮ್ಯ ಕರ್ಮದಿಂದಲೂ ಸರ್ವೋತ್ತಮನಾದ ಶ್ರೀಹರಿಯನ್ನು ಕೊಂದಿರುತ್ತಾನೆ, ಇತ್ಯಾದಿ ವಾಕ್ಯದಿಂದಲೂ ಮುಕ್ತಗಮ್ಯನು ಪುರುಷೋತ್ತಮನೆಂದು ಸ್ಪಷ್ಟವಾಗಿ ತಿಳಿಯುತ್ತದೆ. ॥ ೪ ॥

ಪೀ—ಇಲ್ಲಿ **ದರ್ಶನಾಯ ಚಕ್ಷುಃ ಗಂಧಾಯ ಘ್ರಾಣಂ** ಇದುಮೊದಲಾದ ವಾಕ್ಯಗಳಿಂದ ಇಂದ್ರಿಯಗಳಿಂದ ವಿಷಯಗಳನ್ನು ಭೋಗಿಸುವ ಆತ್ಮನನ್ನು ಇಂದ್ರನಿಗೆ ಉಪದೇಶಿಸಿದ್ದೆಂದು ಹೇಳಿದೆ. ಆ ವಿಷಯ ಭೋಗವು ಜೀವನಿಗೇನೇ ಹೇಳಬೇಕು ಶ್ರೀಹರಿಯು ಪೂರ್ಣನಾದುದರಿಂದ ಆತನಿಗೆ ವಿಷಯಭೋಗವು ಕೂಡಲಾರದು. ಅದುಕಾರಣ ಇಂದ್ರನಿಗೆ ಉಪದೇಶಿಸಿದ ಆತ್ಮನೆಂದರೆ-ಜೀವನೇ ಆಗಬೇಕು, ಎಂದು ಶಂಕಾ ಬಂದರೆ ಶ್ರೀಹರಿಯು ಸರ್ವಗುಣಪೂರ್ಣನಾದರೂ ಕ್ರೀಡೆಯಿಂದ ಮುಖ್ಯವಾದ ವಿಷಯಭೋಕ್ತೃತ್ವವೂ ಶ್ರೀಹರಿಗೇನೇ ಇರುವುದೆಂಬ ಅಭಿಪ್ರಾಯದಿಂದ ಭಾಗವತವಾಕ್ಯವನ್ನು ಹೇಳುತ್ತಾರೆ—

ಭಾ. ॥ (೧) ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭುರ್ನಿರ್ಮಾಯ ಶೇತೇ ಯದಮೂಷು ಪೂರುಷಃ । ಭುಂಕ್ತೇ ಗುಣಾನ್ ಷೋಡಶ ಷೋಡಶಾತ್ಮಕಃ ಸೋಽಲಂಕಃ । ಷೀಷ್ಟ ಭಗವಾನ್ ವಚಾಂಸಿ ಮೇ । ಇತ್ಯಾದೌ ಭಗವತ ಏವೇಂದ್ರಿಯೈರ್ಭೋಗೋಕ್ತೇಶ್ಚ-(೨) ಋತಂ ಪಿಬಂತೌ ಸುಕೃತಸ್ಯ ಲೋಕೇ ಗುಹಾಂ ಪ್ರವಿಷ್ಟೌ ಪರಮೇ ಪರಾರ್ಧೇ ॥ ಇತಿ ಚ ॥ (೩) ಓಂ ಗುಹಾಂ ಪ್ರವಿಷ್ಟಾವಾತ್ಮಾನೌ ಹಿ ತದ್ದರ್ಶನಾದಿತಿ ಭಗವದ್ವಚನಂ ಚ ॥ (೪) ಇದಂ ಪಶ್ಯಾಮಿ ಜಿಘ್ರಾಣೇತ್ಯಪಿ ಜೀವಾ ನ ವೈ ವಿದುಃ । ದ್ರವ್ಯಾಣಾಮಪರಿಜ್ಞಾನಾದ್ವೇದಾಸೌ ಪುರುಷೋತ್ತಮಃ ॥ ಇತಿ ಚ ॥ (೫) ಸ ಉತ್ತಮಃ ಪುರುಷ ಇತಿ ಭಗವತ ಏವಾಯಂ ಪರಾಮರ್ಶಃ ॥ (೬) ಓಂ ಅನ್ಯಾರ್ಥಸ್ಯ ಪರಾಮರ್ಶ ಇತಿ ಭಗವದ್ವಚನಾತ್ ॥ (೭) ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತ ಇತಿ ಚ ॥ ೯ ॥

ಅ ॥ (೧) ಯಾವ ವಿಷ್ಣುವು ವ್ಯಾಪ್ತಗಳಾದ ಪೃಥಿವ್ಯಾದಿ ಭೂತಗಳಿಂದ ಶರೀರವನ್ನು ನಿರ್ಮಾಣ ಮಾಡಿ ಈ ಶರೀರಗಳಲ್ಲಿ ಆತ್ಮಾದಿರೂಪಗಳಿಂದ ಯಾವ ಕಾರಣದಿಂದ ಇರುತ್ತಾನೋ, ಆದಕಾರಣ ಆತನು ಪುರುಷಃ ಎನಿಸುತ್ತಾನೆ ಆ ಶ್ರೀಹರಿಯು (೧೧) ಹನ್ನೊಂದು ಇಂದ್ರಿಯ, ಮತ್ತು (೫) ಪಂಚ ಭೂತ ಇವುಗಳಲ್ಲಿ ವ್ಯಾಪಿಸಿಕೊಂಡಿದ್ದವನಾಗಿ ಶಬ್ದಮೊದಲಾದ ವಿಷಯಗಳ ಸಾರಗಳನ್ನು ಅಥವಾ ಚಕ್ಷುಸ್ಸುಮೊದಲಾದ ಹತ್ತು ಇಂದ್ರಿಯ, ಮನಸ್ಸುಮೊದಲಾಯುದು *ಐದು, ಸಾಕ್ಷಿ. ಈ ೧೬ರ ಗುಣಗಳನ್ನು ಅನುಭವಿಸುತ್ತಾನೆ. (ದುಃಖಾದಿಗಳನ್ನು ಉಣ್ಣುವುದಿಲ್ಲ.) ಅಂತಹ ಶ್ರೀಹರಿಯು ಪುರಾಣವನ್ನು

* ಮನಃ ಬುದ್ಧಿಃ ಅಹಂಕಾರಃ ಚಕ್ಷಂ ಜೇತನಾ ಎಂದು ಐದು

ಹೇಳತಕ್ಕ ನನ್ನ (ಶುಕಾಚಾರ್ಯರ) ಮಾತನ್ನು ಶ್ರೀತಿಯನ್ನು ಹುಟ್ಟಿಸುವುದನ್ನಾಗಿ ಮಾಡಲಿ. (ಭಾ. ಸ್ಕಂ. ೨. ಅಳ ಶ್ಲೋ. ೨೩) ಇತ್ಯಾದಿಗಳಲ್ಲಿ ಶ್ರೀಹರಿಗೇನೇ ಸ್ವರೂಪಭೂತ ಇಂದ್ರಿಯಗಳಿಂದ ಸಾರ ಭೋಕ್ತೃತ್ವನ್ನು ಹೇಳಿರುತ್ತಾರೆ. (೨) (ಈ ವಿಷಯದಲ್ಲಿ ವೇದವನ್ನು ಹೇಳಿರುತ್ತಾರೆ-) ಯಾವ ಆತ್ಮ ಅಂತರಾತ್ಮ ಎಂಬ ಭಗವದ್ರೂಪಗಳು ಪುಣ್ಯನಿರ್ಮಿತ ಶರೀರದ ಹೃದಯದ ಗುಹೆಯಲ್ಲಿ ಪ್ರವೇಶಮಾಡಿರುವವೋ, ಅವರಲ್ಲಿಯೂ ಸರ್ವಜೀವೋತ್ತಮರಾದ ರುದ್ರಾದಿಗಳಿಗಿಂತ ಜ್ಞಾನಾದಿಗುಣಗಳಿಂದ ಅತಿಪೂರ್ಣರಾದ ವಾಯುದೇವರಲ್ಲಿ ಪ್ರವಿಷ್ಟರಾಗಿ ಸುಕೃತಫಲವನ್ನು ಇಚ್ಛಿಸುತ್ತಿರುವರೋ, ಆ ಆತ್ಮಾ ಅಂತರಾತ್ಮ ಎಂಬ ಭಗವದ್ರೂಪಗಳು ಸಜ್ಜನರಿಗೆ ಸುಖ, ದುರ್ಜನರಿಗೆ ದುಃಖ ಇವುಗಳನ್ನು ಕೊಡುತ್ತಾರೆಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ.)(ಕಾಶ. ಆ. ೧. ವ. ೩. ಮ. ೧.) (೩) (ಈ ವೇದಕ್ಕೆ ಹೀಗೆಯೇ ಅರ್ಥಮಾಡಬೇಕೆಂದು ನಿರ್ಣಯಿಸಲಕ್ಕೆ ಸೂತ್ರ ಹೇಳುತ್ತಾರೆ-) ಹೃದಯಗುಹೆಯನ್ನು ಪ್ರವೇಶಮಾಡಿಕೊಂಡಿರುವವುಗಳು ಆತ್ಮಾ ಅಂತರಾತ್ಮ ಎಂಬ ಭಗವದ್ರೂಪಗಳೇ, ಶ್ರೀಹರಿಯು ಎರಡು ರೂಪಗಳಿಂದ ಶರೀರದಲ್ಲಿದ್ದಾನೆಂದು **ಧರ್ಮಾ ಸಮಂತಾ** ಎಂಬ ವೇದದಲ್ಲಿ ಹೇಳಿದೆ. (ಬ್ರ. ಸೂ. ಅ. ೧. ಪಾ. ೨ ಸೂ. ೧೧) ಎಂದು ಬ್ರಹ್ಮ ಸೂತ್ರವು. (೪) **(ಯೋ ವೇದೇದಂ ಜಿಘ್ರಾಣಿ** ಇತ್ಯಾದಿಗಳಿಂದ ವಿಷಯಭೋಗಾನುಸಂಧಾನವು ಜೀವರ ಲಿಂಗವೆಂದು ತೋರುತ್ತದೆ. ಅದುಕಾರಣ ವಿಷಯಭೋಗವೂ ಜೀವನಿಗೇನೇ ಹೇಳಬೇಕು, ಎಂದರೆ—) ಇದನ್ನು ಕಣ್ಣಿನಿಂದ ನೋಡುತ್ತೇನೆ, ಮೂಗಿನಿಂದ ಮೂಸುತ್ತೇನೆ, ಇತ್ಯಾದಿಗಳನ್ನು ದ್ರವ್ಯಗಳ ಜ್ಞಾನವಿಲ್ಲದಿರುವುದರಿಂದ ಜೀವರು ಮುಖ್ಯವಾಗಿ ತಿಳಿಯುವುದೇ ಇಲ್ಲ. ಕ್ಷರ-ಅಕ್ಷರ ಪುರುಷರಿಂದುತ್ತಮನಾದ ಶ್ರೀಹರಿಯು ಮುಖ್ಯವಾಗಿ ತಿಳಿಯುತ್ತಾನೆ. (ಏವಂಚ ವಿಷಯಭೋಗಾನುಸಂಧಾನವು ಮುಖ್ಯವಾಗಿ ಜೀವರಿಗೆ ಇಲ್ಲ. ಶ್ರೀಹರಿಗೇನೇ ಇರುವುದು.) (೫) (೩ನೇ ಮಂತ್ರದಲ್ಲಿ **ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ** ಎಂದು ಪ್ರಕೃತ ಮುಕ್ತಜೀವರಿಗೇನೇ ಪರಾಮರ್ಶವು ತೋರುವುದರಿಂದ **ಸ ಉತ್ತಮಃ ಪುರುಷಃ** ಎಂಬುದು ಜೀವನನ್ನು ಹೇಳುವುದಿಲ್ಲವೆಂದು ಹೇಳಕೂಡದು. ಜೀವನನ್ನೇ ಹೇಳುತ್ತದೆ, ಎಂದರೆ—) **ಸ ಉತ್ತಮಃ ಪುರುಷಃ** ಎಂಬಲ್ಲಿ ತತ್‌ಶಬ್ದದಿಂದ ಪರಮಾತ್ಮನನ್ನೇ ಇಟ್ಟುಕೊಳ್ಳಬೇಕು. (೬) (ಏಕೆಂದರೆ—) **ಯಂ ಪ್ರಾಪ್ಯ ಜೀವಃ ಸ್ವರೂಪೇಣಾಭಿನಿಷ್ಪದ್ಯತೇ, ಸ ಏಷ ಆತ್ಮಾ** ಎಂಬಲ್ಲಿ ಪರಮಾತ್ಮನನ್ನು ಇಟ್ಟುಕೊಳ್ಳಬೇಕೆಂಬುವುದಕ್ಕಾಗಿ **ಸ ಏಷಃ** ಎಂದು ಹೇಳಿದ್ದು. (ಬ್ರ. ಸೂ ಅ. ೧, ಪಾ. ೩, ಸೂ ೨೦.) ಎಂದು ನಿರ್ಣಾಯಕ ಬ್ರಹ್ಮಸೂತ್ರದ ಅರ್ಥವು. (ಜೀವನನ್ನು ಇಟ್ಟುಕೊಳ್ಳುವುದಾದರೆ—**ಸ ಏಷಃ** ಎಂಬುದು ವ್ಯರ್ಥವಾಗುವುದು.) (೭) ಕ್ಷರ-ಅಕ್ಷರ ಪುರುಷರಿಂದ ಭಿನ್ನನಾದ ಉತ್ತಮಪುರುಷನು ಪರಮಾತ್ಮನೆನಿಸುತ್ತಾನೆ, (ಎಂಬ ಗೀತೆಯಿಂದಲೂ ಉತ್ತಮ ಪುರುಷನು ಭಗವಂತನೇ, ಎಂದು ಸಿದ್ಧವಾಗುತ್ತದೆ.) ॥ ೯ ॥

ಪೀ—ಹೀಗಾದರೂ ಶ್ರೀ ಹರಿಯೇ ಉತ್ತಮ ಪುರುಷನೆಂದು ಇಲ್ಲಿ ಇಟ್ಟುಕೊಳ್ಳಬೇಕೆಂದು ಹೇಗೆ ನಿರ್ಣಯವಾಗುತ್ತದೆ? ಜೀವನೆಂದೇ ಏಕೆ ಇಟ್ಟುಕೊಳ್ಳಕೂಡದೆಂದರೆ—

ಭಾ. ॥ (೧) ಓಂ ಜಗದ್ವ್ಯಾಪಾರವರ್ಜಮಿತ್ಯಪ್ಯೈಶ್ವರ್ಯತ್ವಂ ಮುಕ್ತಸ್ಯ ಭಗವತ್ಯಾಭಿಹಿತಂ ॥ (೨) ಅತೋ ಯಂ ಪ್ರಾಪ್ಯ ಜೀವಃ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಭಗವಾನುತ್ತಮಃ ಪುರುಷ ಇತಿ ಪರಾಮರ್ಶಃ ॥ (೩) ಸ್ವಪ್ನೇ ಮಹೀಯಮಾನಶ್ಚರತಿ ಯತ್ರೈತತ್ಸುಪ್ತ ಇತಿ ಪುರಸ್ತಾದಪಿ ಭೇದೋಕ್ತೇಃ ॥ (೪) ನ ಹಿ ಮಹೀಯಮಾನ ಏವ ಜೀವಶ್ಚರತಿ । (೫) ಪ್ರಾಯೋಗ್ಯಃ ಸಾರಥಿಃ ಪ್ರಯೋಗೇಣ ಯಾನಸ್ಯ । ಯಂತಾ ಸಾರಥಿರಾನೇತಾ ಪ್ರಾಯೋಗ್ಯ ಇತಿ ಕೀರ್ತಿತಃ ಕ್ಷ್ಯತೇ) ॥ ಇತ್ಯಭಿಧಾನಾತ್ ॥ (೬) ಅನ್ಯೇಭ್ಯೋ ದೀಪ್ಯಮಾನತ್ವಾದ್ದೈವಂ ಚಕ್ಷುರ್ಮನಃ ಸ್ಮೃತಂ । ಇತಿ ಚ ॥ (೭) ಯ ಏತೇ ಬ್ರಹ್ಮ-

ಲೋಕೇ ತೇಷು ರಮತೇ ಅನುವಿದ್ಯ । ಶಾಸ್ತ್ರಾಚಾರ್ಯಾನುಸಾರೇಣ ವಿದಿತ್ವಾ ವಿಜಾನಾತ್ಯಾಪರೋಕ್ಷೇಣ । ವೇದನಂ ಶಾಸ್ತ್ರತೋ ಜ್ಞಾನಂ ವಿಜ್ಞಾನಂ ಬ್ರಹ್ಮದರ್ಶನಂ ॥ ಇತಿ ಚ ॥ ॥ ೧, ೨, ೩, ೪, ೫, ೬ ॥ ಇತಿ ದ್ವಾದಶಃ ಖಂಡಃ ॥ ೧೦–೧೨ ॥ ॥ ೧೦ ॥

ಆ ॥ (೧) ಮುಕ್ತನು ಜಗತ್ತಿನ ಸೃಷ್ಟ್ಯಾದಿ ವ್ಯಾಪಾರಗಳನ್ನು ಬಿಟ್ಟು ಎಲ್ಲಾ ಕಾಮಗಳನ್ನು ಹೊಂದುತ್ತಾನೆಂದು (ಬ್ರ. ಸೂ. ಅ. ೪, ಪಾ. ೪, ಸೂ. ೧೭) ಮುಕ್ತನಿಗೆ ಅಷ್ಟೈಶ್ವರ್ಯಗಳನ್ನು ವೇದವ್ಯಾಸರು ಸೂತ್ರದಲ್ಲಿ ಹೇಳಿರುವರು. (ಅಲ್ಪ ಐಶ್ವರ್ಯವುಳ್ಳವನಿಗೆ ಉತ್ತಮಪುರುಷತ್ವವು ಯುಕ್ತವಲ್ಲ.) (೨) (ಹೀಗೆ **ಸ ಏಷಃ** ಎಂಬ ಪರಾಮರ್ಶವು ಜೀವರಿಗಿಂತ ಭಿನ್ನನಾದ ಶ್ರೀಹರಿಯನ್ನು ಹೇಳುತ್ತದೆಂದು ಹೇಳಿ ಈಗ ವಾಕ್ಯಾರ್ಥವನ್ನು ಹೇಳುತ್ತಾರೆ—) ಆದಕಾರಣ ಜೀವನು ಯಾವ ಶ್ರೀಹರಿಯನ್ನು ಹೊಂದಿ ತನ್ನ ಸ್ವರೂಪಭೂತವಾದ ಆನಂದದಿಂದ ಯುಕ್ತನಾಗುತ್ತಾನೋ, ಆ ಶ್ರೀಹರಿಯು ಸರ್ವೋತ್ತಮನಾದ ಪುರುಷನು, ಎಂದು ಪರಾಮರ್ಶವಾಕ್ಯದ ಅರ್ಥವು. (೩) (**ಸ್ವಪ್ನೇ ಮಹೀಯಮಾನಃ** ಎಂದು ಆತ್ಮನು ಸ್ವಪ್ನಾವಸ್ಥೆಯಲ್ಲಿ ಪೂಜಿಸಲ್ಪಡುತ್ತಾನೆಂದು ಹೇಳಿದುದರಿಂದಲೂ **ಯತ್ಕೈತತ್ಸುಪ್ತಃ** ಎಂದು ಸುಪ್ತರಾದ ಜೀವರಿಗೆ ಆಶ್ರಯನೆಂದು ಹೇಳಿದುದರಿಂದಲೂ ಬ್ರಹ್ಮನು ಇಂದ್ರನಿಗೆ ಉಪದೇಶಿಸಿದ ಆತ್ಮನೆಂದರೆ ಜೀವನಲ್ಲ, ಎನ್ನುತ್ತಾರೆ—) ೧೦ನೇ ಖಂಡದ ೧ನೇ ಮಂತ್ರದಲ್ಲಿ **ಸ್ವಪ್ನೇ ಮಹೀಯಮಾನಶ್ಚರತಿ** ಎಂದೂ, ೧೧ನೇ ಖಂಡದ ೧ನೇ ಮಂತ್ರದಲ್ಲಿ **ಯತ್ಕೈತತ್ಸುಪ್ತಃ** ಎಂದೂ ಪೂರ್ವದಲ್ಲಿ ಭೇದಕ ಧರ್ಮಗಳನ್ನು ಹೇಳಿದ ಕಾರಣ ಆತ್ಮನೆಂದರೆ ಜೀವನಲ್ಲ. (೪) (ಜೀವನಿಗೆ ದುಃಖಾನುಭವವೂ ಇದ್ದುದರಿಂದ) ಜೀವನು ಪೂಜಿಸಿಕೊಳ್ಳಲ್ಪಡುವವನಾಗಿಯೇ ಸಂಚರಿಸುವವನಲ್ಲ. (೫) (೩ನೇ ಮಂತ್ರದಲ್ಲಿದ್ದ ಪ್ರಾಯೋಗ್ಯಶಬ್ದಾರ್ಥವನ್ನು ಪ್ರಮಾಣದಿಂದ ವ್ಯಾಖ್ಯಾನಮಾಡಿ ಈಗ ಅದನ್ನು ವಿವರಿಸುತ್ತಾರೆ—) ವಾಹನವನ್ನು ನಡಿಸುವುದರಿಂದ ಪ್ರಾಯೋಗ್ಯಃ=ಸಾರಥಿಯು. ಯಂತಾ, ಸಾರಥಿಃ, ಆನೇತಾ, ಪ್ರಾಯೋಗ್ಯಃ ಇವೆಲ್ಲಾ ಏಕಾರ್ಥಕವು ಎಂದು ಕೋಶವು (೬) (೫ನೇ ಮಂತ್ರದಲ್ಲಿದ್ದ **ದೈವಂ ಚಕ್ಷುಃ** ಎಂಬುದರ ಅರ್ಥ ಹೇಳುತ್ತಾರೆ—) ಜೀವರ ಇಂದ್ರಿಯಗಳಿಗಿಂತ ಶ್ರೀಹರಿಯ ಚಕ್ಷುರಾದಿ ಇಂದ್ರಿಯಗಳೂ, ಮನಸ್ಸೂ ಹೆಚ್ಚು ಪ್ರಕಾಶಿಸುವುದರಿಂದ ಅಂದರೆ ಪರಮಾತ್ಮನೂ ಇಂದ್ರಿಯಾಭಿಮಾನಿಗಳೂ ಹೆಚ್ಚು ಪ್ರಕಾಶಿಸುವುದರಿಂದ ಚಕ್ಷುಸ್ಸೂ ಮನಸ್ಸೂ ದೈವವು ಸ್ವರೂಪಾತ್ಮಕವೆನಿಸುತ್ತದೆ (೭) (೬ನೇ ಮಂತ್ರದಲ್ಲಿದ್ದ **ಯ ಏತೇ ಬ್ರಹ್ಮಲೋಕೇ** ಎಂಬುದಕ್ಕೆ ಅನ್ವಯ ತೋರಿಸುತ್ತಾರೆ—) ವೈಕುಂಠಲೋಕದಲ್ಲಿ ಯಾವ ದೇವತೆಗಳು ಇದ್ದಾರೋ, ಆ ದೇವತೆಗಳಲ್ಲಿ ಶ್ರೀಹರಿಯು ಕ್ರೀಡಿಸುತ್ತಾನೆ. (**ಅನುವಿದ್ಯ** ಇತ್ಯಾದಿ ಶಬ್ದಗಳ ಅರ್ಥಗಳನ್ನು ಪ್ರಮಾಣದಿಂದ ಹೇಳಿದುದನ್ನು ವಿವರಿಸುತ್ತಾರೆ—) ಅನುವಿದ್ಯ=ಶಾಸ್ತ್ರಗಳನ್ನು ಅನುಸರಿಸಿ ಸೇವಾದಿಗಳನ್ನು ಮಾಡಿ, ಗುರುಗಳಿಂದ ತತ್ತ್ವವನ್ನು ತಿಳಿದು, ಪ್ರತ್ಯಕ್ಷವಾಗಿ ತಿಳಿಯುತ್ತಾನೆ. ಶಾಸ್ತ್ರಾನುಸಾರ ತಿಳಿದುಕೊಳ್ಳುವುದು **ವೇದನ**ವೆನ್ನಿಸುತ್ತದೆ. ಪರಬ್ರಹ್ಮನನ್ನು ಪ್ರತ್ಯಕ್ಷೀಕರಿಸಿಕೊಳ್ಳುವುದು **ವಿಜ್ಞಾನ**ವೆನಿಸುತ್ತದೆ, ಎಂದು ಕೋಶವು. ॥ ೧೦–೧೨ ॥ ॥ ೧೦ ॥

ಹದಿನೆರಡನೇ ಖಂಡವು ಮುಗಿಯಿತು

೧೩ನೇ ಖಂಡವು

ಪೀ—ಹೀಗೆ ಶರೀರದಲ್ಲಿರತಕ್ಕ ಶ್ರೀಹರಿಯ ಉಪಾಸನೆಯನ್ನು ಹೇಳಿ ವಿಶ್ವರೂಪೋಪಾಸನೆಗೆ ಯೋಗ್ಯರಾದವರಿಗೆ ವಿಶ್ವರೂಪೋಪಾಸನೆಯನ್ನು ಹೇಳುತ್ತಾರೆ—

ಉ. ॥ ಶ್ಯಾಮಾಚ್ಛಬಲಂ ಪ್ರಪದ್ಯೇ ಶಬಲಾಚ್ಛ್ಯಾಮಂ ಪ್ರಪದ್ಯೇ ಅಶ್ವ ಇವ ರೋಮಾಣಿ ವಿಧೂಯ ಪಾಪಂ ಚಂದ್ರ ಇವ ರಾಹೋರ್ಮುಖಾತ್ ಪ್ರಮುಚ್ಯ ಧೂತ್ವಾ ಶರೀರಮಕೃತಂ ಕೃತಾತ್ಮಾ ಬ್ರಹ್ಮಲೋಕಮಭಿಸಂಭವಾಮಿತ್ಯಭಿಸಂಭವಾಮೀತಿ ॥ ಇತಿ ತ್ರಯೋದಶಃ ಖಂಡಃ ॥ ೧೦–೧೩ ॥ ೧ ॥

ಅ ॥ ನೀಲವರ್ಣವುಳ್ಳ ಹೃದಯದೊಳಗಣ ಶ್ರೀಹರಿಯ ಉಪಾಸನೆಯಿಂದ ಶಬಲ (ಮಿಶ್ರ) ಬಣ್ಣವುಳ್ಳ ಚಕ್ಷುವಿನೊಳಗಣ ವಿಶ್ವರೂಪೋಪಾಸನೆಮಾಡಿ ತಿಳಿದವನಾಗಿರುತ್ತೇನೆ. ಆ ವಿಶ್ವರೂಪಾನುಗ್ರಹದಿಂದ ಶ್ಯಾಮವರ್ಣವುಳ್ಳ ಹೃದ್ಗತ ರೂಪವನ್ನು ಉಪಾಸನೆಮಾಡಿ ಹೊಂದಿರುತ್ತೇನೆ. (ಹೀಗೆ ಹೃದಯ ಕಣ್ಣು ಇವುಗಳಲ್ಲಿರತಕ್ಕ ಭಗವದ್ರೂಪಗಳ ಉಪಾಸನೆ ಹೇಳಿ, ಆ ಭಗವದ್ರೂಪಗಳನ್ನು ಪ್ರಾರ್ಥಿಸುವ ಪ್ರಕಾರ ಹೇಳುತ್ತಾರೆ—) ಕುದುರೆಯು ತನ್ನ ರೋಮಗಳನ್ನು ಹೇಗೆ ಉದುರಿಸಿ ಶ್ರಮವನ್ನು ಕಳೆದು ನಿರ್ಮಲವಾಗುತ್ತದೋ, ಹಾಗೆಯೇ ನಾನು ಬ್ರಹ್ಮಜ್ಞಾನದಿಂದ ಆರಬ್ಧವಾದ ಪಾಪವನ್ನು ಅನಾದರದಿಂದಲೇ ಹೋಗಲಾಡಿಸಿ, ರಾಹುವಿನ ಮುಖದಿಂದ ಚಂದ್ರನು ಬಿಡುಗಡೆ ಹೊಂದಿ ಪ್ರಕಾಶಿಸುವಂತೆ, ಕ್ರಮವಾಗಿ ಭೋಗದಿಂದ ಕ್ಷೀಣವಾಗುವ ಪ್ರಾರಬ್ಧಪಾಪದಿಂದ ಸ್ಥೂಲ ಮತ್ತು ಸೂಕ್ಷ್ಮ ಶರೀರವನ್ನು ನಡುಗಿಸಿಬಿಟ್ಟು ಕೃತಾರ್ಥನಾದ (ಸ್ವರೂಪಾನಂದಾವಿರ್ಭಾವವನ್ನು ಹೊಂದಿದ) ನಾನು ನಿತ್ಯವಾದ ವೈಕುಂಠವನ್ನು ಹೊಂದುತ್ತೇನೆ, (ಎಂದು ವೇದಪುರುಷನ ಪ್ರಾರ್ಥನಾಪ್ರಕಾರವನ್ನು ಹೇಳಿರುತ್ತಾನೆ. ॥ ೧ ॥

ಭಾ. ॥ (೧) ಶ್ಯಾಮೋ ಹೃದಿ ಸ್ಥಿತೋ ವಿಷ್ಣುಃ ಶಬಲೋ ವಿಶ್ವರೂಪವಾನ್ ॥ (೨) ಜೀವವರ್ಣೋ ಜೀವಗತೋ ಲೋಹಿತಶ್ಚಕ್ಷುಷಿ ಸ್ಥಿತಃ । ಇತಿ ಮಾನಸೇ ॥ (೩) ಹಯಗ್ರೀವಮುಪೋತ್ಥಾನಿ ಯಾನಿ ವಾಕ್ಯಾನಿ ತಾನಿ ತು । ರಮಾ ದದರ್ಶ ತಾನ್ಯೇವ ಬ್ರಹ್ಮಾ ತಾನ್ಯೇವ ನಾರದಃ ॥ ಯಾನಿ ವಿಷ್ಣೋರಯೋಗ್ಯಾನಿ ಪ್ರಾರ್ಥನಾದ್ಯಾತ್ಮಕಾನಿ ತು । ತಾನ್ಯುತ್ತರೇಷಾಂ ವಾಕ್ಯಾನಿ ಭವಿಷ್ಯಾಣ್ಯವದದ್ಧರಿಃ ॥ ಏವಂ ರಮಾ ತಥಾ ಬ್ರಹ್ಮಾ ಛಾಂದೋಗ್ಯೋಪನಿಷದ್ವಿ ಸಾ । ಇತಿ ಸಾಮಸಂಹಿತಾಯಾಂ ॥ ೧ ॥ ಇತಿ ತ್ರಯೋದಶಃ ಖಂಡಃ ॥ ॥ ೧೦–೧೩ ॥ ॥ ೧ ॥

ಅ ॥ (೧) ಹೃದಯದಲ್ಲಿರತಕ್ಕ ಶ್ರೀವಿಷ್ಣುವು ಶ್ಯಾಮರೂಪವುಳ್ಳವನು. ಶಬಲಃ=ವಿಶ್ವರೂಪವುಳ್ಳವನು ಅಂದರೆ ಹಲವು ಬಣ್ಣಗಳ ಬೆರಕೆಯುಳ್ಳವನು. (ಏವಂಚ ಶ್ಯಾಮ ಶಬಲರೂಪಗಳುಳ್ಳ ಭಗವನ್ಮೂರ್ತಿ ವಿಶೇಷಗಳು ಹೃದಯದಲ್ಲಿರತಕ್ಕವುಗಳು. ಅವುಗಳ ಉಪಾಸನಾದಲ್ಲಿ ಕ್ರಮವಿಲ್ಲ ಶ್ಯಾಮೋಪಾಸನಾನಂತರದಲ್ಲಿ ಶಬಲಪ್ರಾಪ್ತಿಯು, ಅಥವಾ ಶಬಲೋಪಸನಾನಂತರದಲ್ಲಿ ಶ್ಯಾಮಪ್ರಾಪ್ತಿಯು ಎಂಬೀ ನಿಯಮವೇ ಇಲ್ಲ, ಎಂದು ವೇದಪುರುಷನ ಮಾತು.) (೨) ಹೀಗೆಯೇ ಜೀವನಲ್ಲಿರತಕ್ಕ ಶ್ರೀಹರಿಯು ಜೀವರ ರೂಪದಂತೆ ರೂಪವುಳ್ಳವನು (ಇದರಿಂದ ಗಾಯತ್ರೀವಿದ್ಯೆಯಲ್ಲಿ ಹೇಳಿದ, ಜೀವರಲ್ಲಿ ವ್ಯಾಪಿಸಿಕೊಂಡು ಇರುವ ಭಗವತ್ಸ್ವರೂಪಕ್ಕೆ ಜೀವರ ರೂಪದಂತೆ ರೂಪವು. ಅದನ್ನು ಉಪಾಸನೆ ಮಾಡಬೇಕೆಂದು ಉಕ್ತವಾಯಿತು.) ಯ ಏಷೋಽಂತರಕ್ಷಿಣಿ ಎಂದು ಹೇಳಲ್ಪಟ್ಟ ಕಣ್ಣಿನೊಳಗಣ ಶ್ರೀಹರಿಯು ಕೆಂಬಣ್ಣವುಳ್ಳವನು ಎಂದು ಉಪಾಸನೆ ಮಾಡಲ್ಪಡಬೇಕು, ಎಂದು ಮಾನಸಗ್ರಂಥದಲ್ಲಿದೆ (೩) ಬ್ರಹ್ಮಲೋಕಮಭಿಸಂಭವಾಮಿ ಎಂದು ವೇದಪುರುಷನ ಮಾತು ಎಂದು ಹೇಳಿದ್ದು ಅಯುಕ್ತವು ಏಕೆಂದರೆ—ಹಯಗ್ರೀವದೇವರು ಮತ್ತು ರಮಾದೇವಿ ಇವರು ಉಪಸಿಷದ್ವಾಕ್ಯಗಳಾಗಿರುತ್ತಾರೆ. ಇಬ್ಬರೂ ನಿತ್ಯಮುಕ್ತರು. ಅಕಾರಣ ಇವರಿಗೆ ಇಂತಹ ಅಭಿಪ್ರಾಯವೇ ಕೂಡಲಾರದು. ಆದಪ್ರಯುಕ್ತ ಅಭಿಸಂಭ-

ವಾಮಿ ಎಂಬುದು ವೇದಪುರುಷನ ವಚನವಾಗುವುದು ಹೇಗೆ? ಎಂದರೆ—) ಹಯಗ್ರೀವದೇವರ ಮುಖದಿಂದ ಹೊರಟಿರುವ ವೇದವಾಕ್ಯಗಳನ್ನು ಲಕ್ಷ್ಮೀದೇವಿಯು ಕಂಡಳು. ಅವುಗಳನ್ನೇ ಚತುರ್ಮುಖನು ಕಂಡನು. ಅವುಗಳನ್ನೇ ನಾರದರೂ (ಸೋಮನೂ) ಕಂಡರು. ಪ್ರಾರ್ಥನಾದಿರೂಪಗಳಾದ ಯಾವ ವಾಕ್ಯಗಳು ವಿಷ್ಣುವಿಗೆ ಅಯೋಗ್ಯಗಳಾಗಿ ಕಾಣುತ್ತವೋ, ಅವುಗಳನ್ನು ಮುಂದಿನ ನಾರದಾದಿಗಳ ವಾಕ್ಯಗಳೆಂದು ಶ್ರೀಹರಿಯು ಹೇಳಿದನು. ಹೀಗೆಯೇ ಲಕ್ಷ್ಮೀದೇವಿಯೂ, ಬ್ರಹ್ಮನೂ ಕೂಡ ಹೇಳಿದರು. ಯಾವ ವಾಕ್ಯಸಮುದಾಯವು ಹಯಗ್ರೀವಾದಿಗಳಿಂದ ಕಾಣಲ್ಪಟ್ಟಿದೋ, ಅದು ಛಾಂದೋಗ್ಯೋಪನಿಷತ್ತು, ಎಂದು ಸಾಮಸಂಹಿತೆಯಲ್ಲಿ ಹೇಳಿದೆ. ॥ ೧೦—೧೩ ॥ ॥ ೧ ॥

ಹದಿಮೂರನೇ ಖಂಡವು ಮುಗಿಯಿತು.

೧೪ನೇ ಖಂಡವು

ಪೀ—**ಯಾವಾನ್ವಾ ಅಯಮಾಕಾಶಃ** ಇತ್ಯಾದಿಗಳಿಂದ ಮೊದಲು ಹೇಳಿದ ವ್ಯಾಪ್ತನಾದ ಶ್ರೀಹರಿಯ ಉಪಾಸನೆಯನ್ನು ಹೇಳುತ್ತಾರೆ—

ಉ. ॥ ಆಕಾಶೋ ನಾಮ ವೈ ನಾಮರೂಪಯೋರ್ನಿರ್ವಹಿತಾ ತೇ ಯದಂತರಾ ತದ್ಬ್ರಹ್ಮ ತದಮೃತಂ ಸ ಆತ್ಮಾ ಪ್ರಜಾಪತೇಃ ಸಭಾಂ ವೇಶ್ಮ ಪ್ರಪದ್ಯೇ ಯಶೋಽಹಂ ಭವಾನಿ ಬ್ರಾಹ್ಮಣಾನಾಂ ಯಶೋ ರಾಜ್ಞಾಂ ಯಶೋ ವಿಶಾಂ ಯಶೋಽಹಮನುಪ್ರಾಪತ್ಸಿ ಸಹಾಹಂ ಯಶಸಾಂ ಯಶಃ ಶ್ವೇತಮದತ್ಯಮುದತ್ಯಂ ಶ್ವೇತಂ ಲಿಂದುಮಾಭಿಗಾಂ ಲಿಂದುಮಾಭಿಗಾಂ ॥ ಇತಿ ಚತುರ್ದಶಃ ಖಂಡಃ ॥ ೧೦-೧೪ ॥ ॥ ೧ ॥

ಅ ॥ ಜೆನ್ನಾಗಿ ಪ್ರಕಾಶಿಸುವುದರಿಂದ ಆಕಾಶನೆನಿಸಿದ ಹೃದಯಕಮಲದಲ್ಲಿದ್ದ ಶ್ರೀವಿಷ್ಣುವು ಶಬ್ದಪ್ರಪಂಚ ಅರ್ಥಪ್ರಪಂಚಗಳನ್ನು ಸೃಷ್ಟಿಸಿದವನು. ಅತಿಪ್ರಸಿದ್ಧವು. (**ಅನಾಮಾ ಸೋಽಪ್ರಸಿದ್ಧತ್ವಾದ್ರೂಪೋ ಭೂತವರ್ಜನಾತ್** ಎಂದು ಹೇಳಿದ ಪ್ರಕಾರ) ನಾಮರೂಪಗಳನ್ನು ಬಿಟ್ಟು ಇದ್ದವನು ಪರಬ್ರಹ್ಮನು, ನಿತ್ಯಮುಕ್ತನು ಅಂತಹವನು ಆತ್ಮನೆಂದು ಉಪಾಸನೆ ಮಾಡಬೇಕು. (ಆ ಆತ್ಮನನ್ನು ಉಪಾಸನೆಮಾಡುವ ಕಾಲದಲ್ಲಿ ಕರ್ತವ್ಯವನ್ನು ಹೇಳುತ್ತಾರೆ—) ಶ್ರೀ ವಿಷ್ಣುವಿನ ಸಭೆಯನ್ನೂ, ಮನೆಯನ್ನೂ ಹೊಂದಿರುವೆನು. ಬ್ರಾಹ್ಮಣರೂ ಕ್ಷತ್ರಿಯರೂ ಇವರ ಮಧ್ಯದಲ್ಲಿ ಯಶಸ್ಸುಳ್ಳವನಾಗಿರುತ್ತೇನೆ. ವೈಶ್ಯರಲ್ಲಿಯೂ ಯಶಸ್ಸನ್ನು ಹೊಂದಿರುವೆನು. ಅಂತಹ ನಾನು ಕೀರ್ತಿಯುಳ್ಳವರಿಗೆ ಕೀರ್ತಿಯನ್ನು ಕೊಡುವವನಾಗುವೆನು. ಅಥವಾ ಯಶಸ್ಸುಳ್ಳವರಿಗೆ ಯಶಸ್ಸನ್ನು ಕೊಡುವ ಮುಖ್ಯಪ್ರಾಣನಲ್ಲಿರತಕ್ಕ, ಸ್ವರೂಪಭೂತ ಆನಂದವನ್ನು ಅನುಭವಿಸುತ್ತಿರುವ ಪರಬ್ರಹ್ಮನ ಅನುಗ್ರಹದಿಂದ ಯಶಸ್ಸನ್ನು ಹೊಂದಿರುವೆನು. ಅಂತಹ ನಾನು ನನಗೆ ಯಶಸ್ಸನ್ನು ಕೊಟ್ಟಿರುವ, ಸ್ವರೂಪಾನಂದವನ್ನುಣ್ಣುತ್ತಿರುವ ಮುಖ್ಯವಾಯುವಿನಲ್ಲಿರುವ, ಆನಂದವನ್ನು ಕೊಡುವ ಶ್ರೀ ಪರಬ್ರಹ್ಮನನ್ನು ಹೊಂದಿದವನಾಗಿರುತ್ತೇನೆ, ಎಂದು (ವೇದಪುರುಷನಾದ ಚತುರ್ಮುಖನ ವಾಕ್ಯವು.) ॥ ೧ ॥

ಪೀ—ಈ ಖಂಡಕ್ಕೆ ಪ್ರಮಾಣ ಹೇಳಿ ಅರ್ಥ ಹೇಳುತ್ತಾರೆ—

ಭಾ. ॥ (೧) ಆಕಾಶೋಽತಿಪ್ರಕಾಶತ್ವಾನ್ನಾಮರೂಪೇ ಋತೇ ಸ್ಥಿತಃ । ಬ್ರಹ್ಮಾಜ್ಯೋ ಭಗವಾನ್ವಿಷ್ಣು ಸ್ತದ್ವೇಶ್ಮ ಪ್ರಾಪ್ನುಯಾಮಹಂ ॥ (೨) ಯಶೋಽಹಂ ಸರ್ವವರ್ಣಾನಾಂ ಮತ್ತೋಽನ್ಯೇ(ಹ್ಯೇ)ಷಾಂ ಯಶೋ ಭವೇತ್॥(೩)ಸೋಽಹಂ ಮಮ ಯಶೋದಾತ್ಮ ಯಶ-ಸಾಂ ಯಶ ಉತ್ತಮಂ । ವಿಷ್ಣ್ವಾಖ್ಯಂ ಪರಮಂ ಬ್ರಹ್ಮ ॥(೪) ಶ್ವೇತಂ ಶ್ವಸನಗಂ ಯತಃ । ಅದತ್ಯಮದ್ಯಮಾನಂ ಕಂ ಸ್ವಾನಂದಾನುಭವಾತ್ಮಕಂ । ಲಿಂದು ತದ್ರತಿದಂ ಯಸ್ಮಾತ್ತದಹಂ ಪ್ರಾಪ್ನುಯಾಂ ಸದಾ ॥ ೧ ॥ ಇತಿ ಚತುರ್ದಶಃ ಖಂಡಃ ॥ ೧೦–೧೪ ॥ ॥ ೧ ॥

ಅ ॥ (೧) ಪರಬ್ರಹ್ಮನೆನಿಸಿದ ಶ್ರೀವಿಷ್ಣುವು ಅತ್ಯಂತ ಪ್ರಕಾಶಸ್ವರೂಪನಾದುದರಿಂದ ಆಕಾಶನೆನಿಸುತ್ತಾನೆ. ಆತನು ನಾಮರೂಪಗಳನ್ನು ಬಿಟ್ಟು ಇರುತ್ತಾನೆ. ಆ ಶ್ರೀಹರಿಯ ಮಂದಿರವನ್ನು ನಾನು ಹೊಂದಿರುವೆನು. (೨) ಬ್ರಾಹ್ಮಣಾದಿ ವರ್ಣಗಳಲ್ಲಿ ಯಶಸ್ಸುಳ್ಳವನಾಗುವೆನು. ಇತರರಿಗೆ ನನ್ನಿಂದ ಕೀರ್ತಿಯು ಬರುವುದು. (೩) ಅಂತಹ ನಾನು ನನಗೆ ಯಶಸ್ಸನ್ನು ಕೊಡತಕ್ಕ, ಉತ್ತಮ ಯಶೋರೂಪನಾದ ಪರಬ್ರಹ್ಮನ ಅನುಗ್ರಹದಿಂದ ನಾನು ಯಶಸ್ಸನ್ನು ಹೊಂದಿರುವೆನು. (೪) ಆ ಪರಬ್ರಹ್ಮನು ಮುಖ್ಯಪ್ರಾಣನಲ್ಲಿದ್ದ ಪ್ರಯುಕ್ತ ಶ್ವೇತನು. ಸ್ವರೂಪಭೂತ ಆನಂದವನ್ನು ಅನುಭವಿಸುವವನಾದುದರಿಂದ ಅದತ್ಯನು. ಆನಂದವನ್ನು ಕೊಡುವವನಾದುದರಿಂದ ಲಿಂದು ಎನಿಸುತ್ತಾನೆ. ಅಂತಹ ಪರಬ್ರಹ್ಮನನ್ನು ಸದಾ ಹೊಂದಿರುವೆನು, ಎಂದು ಚತುರ್ಮುಖನ ಮಾತು ॥ ೧೦–೧೪ ॥ ॥ ೧ ॥

ಹದಿನಾಲ್ಕನೇ ಖಂಡವು ಮುಗಿಯಿತು.

೧೫ನೇ ಖಂಡವು.

ಪೀ—ಆದರ ಹುಟ್ಟುವುದಕ್ಕಾಗಿ ಉಪನಿಷತ್ಪ್ರವರ್ತಕರನ್ನು ವೇದಪುರುಷನು ಹೇಳುತ್ತಾನೆ—

ಉ. ॥ ತದ್ಧೈತದ್ಬ್ರಹ್ಮಾ ಪ್ರಜಾಪತಯೇ ಉವಾಚ ಪ್ರಜಾಪತಿರ್ಮ-ನವೇ ಮನುಃ ಪ್ರಜಾಭ್ಯ ಆಚಾರ್ಯಕುಲಾದ್ವೇದಮಧೀತ್ಯ ಯಥಾವಿಧಾನಂ ಗುರೋಃ ಕರ್ಮಾತಿಶೇಷೇಣಾಭಿಸಮಾವೃತ್ಯ ಕುಟುಂಬೀ ಶುಚೌ ದೇಶೇ ಸ್ವಾ-ಧ್ಯಾಯಮಧೀಯಾನೋ ಧಾರ್ಮಿಕಾನ್ವಿದಧದಾತ್ಮನಿ ಸರ್ವೇಂದ್ರಿಯಾಣಿ ಸಂಪ್ರತಿಷ್ಠಾಪ್ಯಾಹಿಂಸನ್ ಸರ್ವಾಣಿ ಭೂತಾನ್ಯನ್ಯತ್ರ ತೀರ್ಥೇಭ್ಯಃ ಸ ಖಲ್ವೇ-ವಂ ವರ್ತಯನ್ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ ನ ಚ ಪುನ-ರಾವರ್ತತೇ ನ ಚ ಪುನರಾವರ್ತತೇ ॥ ಇತಿ ಪಂಚದಶಃ ಖಂಡಃ ॥ ೧೦-೧೫ ॥

ಇತಿ ಶ್ರೀಮಚ್ಛಾಂದೋಗ್ಯೋಪನಿಷದಿ ದಶಮೋಽಧ್ಯಾಯಃ ॥ ೧೦ ॥

ಅ ॥ ಹಿಂದೆ ಹೇಳಿದ ಉಪನಿಷದ್ರೂಪವಾದ ವಾಕ್ಯಸಮುದಾಯವನ್ನು ಪರಬ್ರಹ್ಮನು ಚತುರ್ಮುಖನಿಗೂ, ಚತುರ್ಮುಖನು ಸ್ವಾಯಂಭುವಮನುವಿಗೂ, ಸ್ವಾಯಂಭುವಮನುವು ಪ್ರಜೆಗಳಿಗೂ ಉಪದೇಶಿಸಿರುವರು. (ಹೀಗೆ ಈ ಉಪನಿಷತ್ತು ಪರಂಪರಾಪ್ರಾಪ್ತವಾಗಿರುವುದರಿಂದ ಈಗಲೂ ನೋಕ್ಷವನ್ನು ಹೊಂದ

ಲಿಚ್ಛಿಸಿ ಈ ಉಪನಿಷತ್ತನ್ನು ಅಭ್ಯಾಸಮಾಡಿದರೆ ಆತನಿಗೆ ಮೋಕ್ಷಫಲವನ್ನು ಹೇಳುತ್ತಾರೆ –) (ಉಪನಿಷತ್ತಿನಲ್ಲಿ ಹೇಳಿದ ಅರ್ಥವನ್ನು ಅವಶ್ಯವಾಗಿ ಆದರದಿಂದ ಕೇಳಬೇಕಾಗಿರುವುದರಿಂದ ಮೋಕ್ಷಾಪೇಕ್ಷೆಯು) ಆಚಾರ್ಯರಿಂದ ವೇದವನ್ನು ವಿಧಿಪ್ರಕಾರ ಅರ್ಥಸಹಿತ ಅಧ್ಯಯನಮಾಡಿ ಗುರುಗಳ ಸೇವಾ ಮಾಡಿ ಗುರುದಕ್ಷಿಣೆಯಿತ್ತು ಗುರುಕುಲವಾಸವನ್ನು ಸಮಾಪಿಸಿ ಗೃಹಸ್ಥಾಶ್ರಮದಲ್ಲಿರುವವನಾಗಿ ಶುಚಿಯಾದ ಪ್ರದೇಶದಲ್ಲಿ ವೇದಾಧ್ಯಯನವನ್ನು ಮಾಡುತ್ತಾ ಧಾರ್ಮಿಕ ವ್ಯಾಪಾರಗಳನ್ನೆಲ್ಲಾ ಮಾಡಿಕೊಂಡು ಪರಮಾತ್ಮನಲ್ಲಿ ಎಲ್ಲಾ ಇಂದ್ರಿಯಗಳನ್ನು ಸ್ಥಿರಗೊಳಿಸಿ ವಿಷಯಗಳಲ್ಲಿ ಹೋಗದಿದ್ದಂತೆ ಮಾಡಿ (ಅಂದರೆ ಬಾಹ್ಯ ವ್ಯಾಪಾರದಲ್ಲಿ ಆಸಕ್ತವಾದ ಮನಸ್ಸನ್ನು ಪರಮಾತ್ಮನಲ್ಲಿಯೇ ಜೆನ್ನಾಗಿ ಇಟ್ಟು) ಯಾಗಗಳ ಹೊರತು (ಅಂದರೆ ಯಾವ ಯಾಗಾದಿಗಳಲ್ಲಿ ಹಿಂಸೆ ಮಾಡಬಹುದೆಂದು ಶಾಸ್ತ್ರದಲ್ಲಿ ಹೇಳಿಯದೋ, ಅದು ವಿನಹ) ಎಲ್ಲಿಯೂ ಯಾವ ಪ್ರಾಣಿಗಳನ್ನೂ ಹಿಂಸೆಮಾಡದಿರುವವನಾಗಿ ಆಯುಷ್ಯವು ಇರುವಪರ್ಯಂತ ಹೀಗೆಯೇ ಇರುವವನಾಗಿ ಪರಮಾತ್ಮನನ್ನು ಪ್ರತ್ಯಕ್ಷೀಕರಿಸಿ ವೈಕುಂಠಕ್ಕೆ ಹೋಗುತ್ತಾನೆ ಯಾವಾಗಲೂ ಎಲ್ಲಿಯೂ ಯಾವ ನಿಮಿತ್ತದಿಂದಲೂ ಅಲ್ಲಿಂದ ಹಿಂತಿರುಗಿ ಬರುವುದಿಲ್ಲ. (ಮೋಕ್ಷದಲ್ಲಿಯೇ ಯಾವಾಗಲೂ ಸ್ವರೂಪ ಭೂತ ಆನಂದವನ್ನು ಅನುಭವಿಸುತ್ತಿರುತ್ತಾನೆ) ಹಿಂದೆ ಹೇಳಿದ ಎಲ್ಲಾ ಪ್ರಮೇಯವೂ ಯಥಾರ್ಥವೆಂದು ತಿಳಿಸುವುದಕ್ಕಾಗಿ ಎರಡು ಸಲ ಹೇಳಿರುವರು. ॥ ೧ ॥

ಛಾಂದೋಗ್ಯೋಪನಿಷತ್ತಿನಲ್ಲಿ ಹತ್ತನೇ ಅಧ್ಯಾಯವು ಮುಗಿಯಿತು.

ಪೀ—ಮೋಕ್ಷಾಭಿಲಾಷಿಗಳು ಈ ಉಪನಿಷತ್ತನ್ನು ಅವಶ್ಯವಾಗಿ ಆದರದಿಂದ ಕೇಳಬೇಕೆಂಬ ಉದ್ದೇಶದಿಂದ ವೇದಪುರುಷನು ಈ ಉಪನಿಷತ್ಪ್ರವರ್ತಕರನ್ನು ಹೇಳುತ್ತಾ, ಈ ಉಪನಿಷತ್ತಿನಲ್ಲಿ ಹೇಳಿದ ಭಗವದ್ಗುಣಗಳನ್ನು ಉಪಾಸನೆಮಾಡಿದವರಿಗೆ ಅವಶ್ಯವಾಗಿ ಅಪೇಕ್ಷಿತಗಳಾದ *ಯಮ ನಿಯಮಗಳನ್ನು ತೋರಿಸುತ್ತಾ ಪುನರಾವೃತ್ತಿರಹಿತವಾದ ಮೋಕ್ಷರೂಪ ಫಲ ಹೇಳುತ್ತಾರೆ—

ಛಾ. ॥ ಉಪದಿಷ್ಟಃ ಪರೇಣೈವ ತ್ವೇವಮೂಹ ಚತುರ್ಮುಖಃ । ಉವಾಚ ಚ ಮನೋರ್ವಿದ್ಯಾಂ ಪ್ರಜಾಭ್ಯೋ ಮನುರೇವ ಚ ॥ ತಸ್ಮಾತ್ಸರ್ವೇಂದ್ರಿಯಾಣೀಶೇ ನಿಧಾಯ ಪುರುಷೋತ್ತಮೇ । ದೃಷ್ಟ್ವಾ ತಂ ಪರಮಂ ವಿಷ್ಣುಂ ತಲ್ಲೋಕಂ ಪ್ರತಿಪದ್ಯತೇ ॥ ನಾವರ್ತೇತ(ರ್ತತೇ) ಪುನಸ್ತಸ್ಮಾತ್ತದಾಚಿಕ್ಕೇನಚಿತ್ ಕ್ವಚಿತ್ (ಹರೇಃ) ಇತಿ ಚ ॥ ೧ ॥ ಇತಿ ಪಂಚದಶಃ ಖಂಡಃ ॥ ೧೦–೧೫ ॥ ॥ ೧ ॥

ಆ ॥ ಹಿಂದೆ ಹೇಳಿದಪ್ರಕಾರ ಸರ್ವೋತ್ತಮನಾದ ಶ್ರೀವಿಷ್ಣುವಿನಿಂದಲೇ ಉಪದೇಶ ಪಡೆದುಕೊಂಡ ಚತುರ್ಮುಖನು ತನ್ನ ಪುತ್ರನಾದ ಸ್ವಾಯಂಭುವ ಮನುವಿಗೂ, ಸ್ವಾಯಂಭುವ ಮನುವು ಪ್ರಜೆಗಳಿಗೂ ಈ ಉಪನಿಷತ್ತನ್ನು ಉಪದೇಶಿಸಿರುವರು. ಹೀಗೆ ಈ ಉಪನಿಷತ್ತು ಪರಂಪರೆಯಿಂದ ಬಂದಿರುವಪ್ರಯುಕ್ತ ಆದರಲ್ಲಿ ಹೇಳಿದ ಅರ್ಥದಲ್ಲಿ ಅತ್ಯಂತ ವಿಶ್ವಾಸವಿಡಬೇಕಾಗಿರುವುದರಿಂದ ಪುರುಷೋತ್ತಮನೂ, ಸರ್ವನಿಯಾಮಕನೂ, ಈ ಉಪನಿಷತ್ತಿನಲ್ಲಿ ಹೇಳಿದ ಗುಣವಿಶಿಷ್ಟನೂ ಆದ ಶ್ರೀಹರಿಯಲ್ಲಿ ಎಲ್ಲಾ ಇಂದ್ರಿಯಗಳನ್ನು ಇಟ್ಟು ಸರ್ವೋತ್ತಮನಾದ ಶ್ರೀವಿಷ್ಣುವನ್ನು ಪ್ರತ್ಯಕ್ಷೀಕರಿಸಿ ವೈಕುಂಠಕ್ಕೆ ಹೋಗುತ್ತಾನೆ. ಆ ವೈಕುಂಠ ಲೋಕದಿಂದ ಯಾವಾಗಲೂ ಎಲ್ಲಿಯೂ ಯಾವ ಕಾರಣದಿಂದಲೂ ಹಿಂತಿರಿಗಿ ಬರುವುದಿಲ್ಲ. (ಸಂಸಾರಕ್ಕೆ ತಿರುಗಿ ಬರುವುದಿಲ್ಲ.) ॥ ೧೦–೧೫ ॥ ॥ ೧ ॥

ಹದಿನೈದನೇ ಖಂಡವು ಮುಗಿಯಿತು.

---

*ಅಹಿಂಸಾ ಸತ್ಯಮಸ್ತೇಯಂ ಬ್ರಹ್ಮಚರ್ಯಾಪರಿಗ್ರಹೌ । ಯಮಾಃ ॥ ಶೌಚಂ ತಪಸ್ತುಷ್ಟಿಃ ಸ್ವಾಧ್ಯಾಯೋ ಹರಿಪೂಜನಂ । ನಿಯಮಾಃ

ಉ. ॥ ಆಪ್ಯಾಯಂತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷುಃ ಶ್ರೋತ್ರಮ-
ಥೋ ಬಲಮಿಂದ್ರಿಯಾಣಿ ಚ ಸರ್ವಾಣಿ ಸರ್ವಂ ಬ್ರಹ್ಮೌಪನಿಷದಂ ಮಾಽ-
ಹಂ ಬ್ರಹ್ಮ ನಿರಾಕುರ್ಯಾಂ ಮಾಮಾ ಬ್ರಹ್ಮ ನಿರಾಕರೋದನಿರಾಕರಣಮ-
ಸ್ತ್ವನಿರಾಕರಣಂ ಮೇಽಸ್ತು ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಸ್ತೇ
ಮಯಿ ಸಂತು ತೇ ಮಯಿ ಸಂತು ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥ ಓಂ ॥

ಇತಿ ಶ್ರೀಮಚ್ಛಾಂದೋಗ್ಯೋಪನಿಷತ್ ಸಂಪೂರ್ಣಾ ॥

ಪೀ—ಹೀಗೆ ಶ್ರೀವಾದಾಚಾರ್ಯರು ಭಾಷ್ಯವನ್ನು ಸಮಾಪಿಸಿ ಅಂತ್ಯದಲ್ಲಿಯೂ ಈ ಉಪನಿಷತ್ತಿನಲ್ಲಿ ಹೇಳಿದ ಗುಣವಿಶಿಷ್ಟನಾದ ಶ್ರೀ ಪರಮಾತ್ಮನ ಸ್ತೋತ್ರಮಾಡಿ ಪ್ರೀತನಾಗಬೇಕೆಂದು ಪ್ರಾರ್ಥಿಸುತ್ತಾರೆ—

ಭಾ. ॥ ಪೂರ್ಣಾನಂದಮಹೋದಧಿಃ ಪರತಮೋ ನಿತ್ಯಃ ಪರಸ್ಮಾತ್ಪರಾ ಸರ್ವಜ್ಞಃ
ಸಕಲೇಶಿತಾ ಗುಣನಿಧಿರ್ನಿತ್ಯೋತ್ಸವಸ್ತದ್ವಿದಾಂ । ಸರ್ವಸ್ಮಾದಧಿಕಂ ಮಮ ಪ್ರಿಯತಮ-
ಸ್ತ್ವಿಷ್ಟಾಪೀಷ್ಟೋತ್ತಮಃ ಸರ್ವಸ್ಮಾಚ್ಚ ಹಿತಾತ್ಪರಾ ಹಿತತಮಃ ಪ್ರೀತೋ ಭವೇನ್ಮೇ
ಹರಿಃ ॥ ೧ ॥

ಅ ॥ ಅಪರಿಮಿತವಾದ ಆನಂದದಿಂದ ಮಹಾಸಮುದ್ರದಂತಿರುವ ಉತ್ತಮೋತ್ತಮನೂ, ನಿತ್ಯನೂ, ಸರ್ವಜ್ಞನೂ, ಸರ್ವದಾ ಸಕಲರಿಗೆ ನಿಯಾಮಕನೂ, ಸರ್ವಗುಣಗಳಿಗೆ ನಿಧಿಭೂತನೂ, ಜ್ಞಾನಿಗಳಿಗೆ ನಿತ್ಯದಲ್ಲಿ ಹರ್ಷಕಾರಿಯೂ, ರುದ್ರಾದಿಗಳಿಗಿಂತ ಹೆಚ್ಚು ನನಗೆ ಪರಮಪುರುಷಾರ್ಥರೂಪನೂ, ಇಷ್ಟವಾದ ವಸ್ತುವಿಗಿಂತಲೂ ಅತಿಶಯ ಇಷ್ಟನೂ, ಹಿತಕರರಾದ ಎಲ್ಲಾ ಆಪ್ತರಿಗಿಂತಲೂ ಅತಿಶಯ ಆಪ್ತನೂ ಆಗಿರುವ ಶ್ರೀಹರಿಯು ನನಗೆ ಸರ್ವದಾ ಪ್ರೀತನಾಗಲಿ. ॥ ೧ ॥

ಪೀ—ಶ್ರೀಮದಾಚಾರ್ಯರು ತಾನು ಮಾಡಿದ ಭಾಷ್ಯವು ಆಪ್ತಿಮೂಲಕವೆಂದು ತೋರಿಸುವುದಕ್ಕಾಗಿ ತಾನು ಪರಮಾಪ್ತನೆಂದು ವೇದದಲ್ಲಿ ಹೇಳಿದುದನ್ನು ತೋರಿಸುತ್ತಾರೆ—

ಭಾ. ॥ ಯಸ್ಯ ತ್ರೀಣ್ಯುದಿತಾನಿ ವೇದವಚನೇ ರೂಪಾಣಿ ದಿವ್ಯಾನ್ಯಲಂ ಬಟ್ ತದ್ದ-
ರ್ಶನಮಿತ್ಥಮೇವ ನಿಹಿತಂ ದೇವಸ್ಯ ಭರ್ಗೋ ಮಹತ್ । ವಾಯೋ ರಾಮವಚೋನಯಂ
ಪ್ರಥಮಕಂ ಪೃಕ್ವೋ ದ್ವಿತೀಯಂ ವಪುರ್ಮಧ್ವೋ ಯತ್ತು ತೃತೀಯಕಂ ಕೃತಮಿದಂ
ಭಾಷ್ಯಂ ಹರೌ ತೇನ ಹಿ ॥ ೨ ॥

ಅ ॥ ವಾಯುದೇವರ ಕ್ರೀಡಾದಿ ಗುಣವಿಶಿಷ್ಟಗಳೂ ಆಶ್ಚರ್ಯಕರಗಳೂ ಆದ ಹನುಮತ್ ಭೀಮ ಮಧ್ವ ಎಂಬ ಮೂರು ಅವತಾರಗಳು ಬಳಿಕ್ಕ ತದ್ಭಪುಷೇ ಇದುವೊದಲಾದ ವೇದಗಳಲ್ಲಿ ಸ್ತುತಿ ಸಲ್ಪಟ್ಟವೆ. ಮೂಲರೂಪವು ಅವತಾರ ಮಾಡುವುದಕ್ಕಾಗಿಯೇ ಶ್ರೀಹರಿಯಿಂದ ಪ್ರೇರಿತವಾಗಿ ಅವತಾರ ಮಾಡಿದೆ. ವಾಯುದೇವರ ಮೂಲರೂಪದಂತೆ ಅವತಾರರೂಪವೂ ಬಲರೂಪವು. ಅಥವಾ ಶ್ರೀಹರಿಯನ್ನು ಸರ್ವದಾ ಪ್ರತ್ಯಕ್ಷೀಕರಿಸಿಕೊಂಡಿರತಕ್ಕುದು. ಜಗತ್ತನ್ನು ಪೋಷಿಸಿಕೊಂಡು ಸಜ್ಜನರಿಗೆ ಜ್ಞಾನೋಪದೇಶ ಮಾಡತಕ್ಕುದು. ಅಥವಾ ದುರ್ಜನರನ್ನು ಸಂಹರಿಸುವುದು. ಪರಮಪೂಜ್ಯವು. ಮೂಲರೂಪಕ್ಕೆ ಸರ್ವಗುಣಗಳು ಇವ್ವಂತೆಯೇ ಅವತಾರರೂಪಕ್ಕೂ ಎಲ್ಲಾ ಗುಣಗಳಿವೆ ವ್ಯತ್ಯಾಸವೇನೂ ಇಲ್ಲ.

ವಾಯುದೇವರ ಅವತಾರಗಳಲ್ಲಿ ಒಂದನೇದ್ದಾದ ಹನುಮದವತಾರವು ರಾಮದೇವರ ಮಾತುಗಳನ್ನು ಸೀತಾದೇವಿಗೂ, ಸೀತಾದೇವಿಯ ಪ್ರಾರ್ಥನೆಗಳನ್ನು ರಾಮದೇವರಿಗೂ ಹೊಂದಿಸಿಕೊಡುತ್ತದೆ. ರಾಮದೇವರ ಚರಿತ್ರೆಗಳನ್ನು ಹೇಳುವ ಮೂಲರಾಮಾಯಣ ಮೊದಲಾದುವುಗಳನ್ನು ಶಿಷ್ಯರಿಗೆ ಉಪದೇಶಿಸುತ್ತದೆ. ರಾಮದೇವರ ಆಜ್ಞೆಯನ್ನು ಪರಿಪಾಲಿಸುತ್ತದೆ. ಎರಡನೇ ಭೀಮರೂಪವು ಕುರುಗಳ ಸೈನ್ಯವನ್ನು ನಾಶಪಡಿಸಿರುತ್ತದೆ. ಮಧ್ವ ಎಂಬ ಮೂರನೇ ಅವತಾರವು ಶ್ರೀಪರಮಾತ್ಮನನ್ನು ದ್ವೇಶಿಸಿ ಭಾಷ್ಯವನ್ನು ಮಾಡಿರುತ್ತದೆ. (ಆದಕಾರಣ ಪರಮಾಪ್ತರಾದ ಶ್ರೀಮದಾಚಾರ್ಯರು ಭಾಷ್ಯವನ್ನು ಮಾಡಿರುವುದರಿಂದ ಎಲ್ಲಾ ಸಜ್ಜನರೂ ಆತ್ಯಾದರದಿಂದ ಅಂಗೀಕರಿಸಬೇಕು) ॥ ೨ ॥

ಪೀ—ಬಳಿತ್ಥಾ ಇದುಮೊದಲಾದ ವೇದಗಳಲ್ಲಿ ವಾಯುದೇವರ ಮೂರು ರೂಪಗಳು ಹೇಳಲ್ಪಡುತ್ತವೆಂದು ಹೇಳುವುದು ಅಯುಕ್ತವು. ಏಕೆಂದರೆ ಆ ಸೂಕ್ತವು ದಕ್ಷಿಣಾಗ್ನಿ ಗಾರ್ಹಪತ್ಯ ಆಹವನೀಯ ಎಂಬ ಮೂರು ಅಗ್ನಿಗಳನ್ನು ಹೇಳುತ್ತದೆ, ಎಂದರೆ—ಆ ಸೂಕ್ತವು ವಾಯುದೇವರ ಮೂರು ಅವತಾರಗಳನ್ನು ಹೇಳುತ್ತದೆಂಬಲ್ಲಿ ಪ್ರಮಾಣ ಹೇಳುತ್ತಾ ಯದೀಮುಪಹ್ವರತೇ ಸಾಧತೇ ಮತಿಃ ಎಂದು ಹೇಳಿದ ಮತಿ ಶಬ್ದಕ್ಕೆ ಅರ್ಥ ಹೇಳುತ್ತಾರೆ—

ಭಾ ॥ (೧) *ಹನಶಬ್ದೋ ಜ್ಞಾನವಾಚೀ ಹನೂ(ನು)ಮಾನ್ಮತಿಶಬ್ದತಃ ॥ (೨) ರಾಮಸ್ಯ ಸ್ವೃತರೂಪಸ್ಯ ವಾ(ವ)ಚೋನೇತಾ ಗುಣೋದಧಿಃ ॥ (೩) ಭೃತಮೋ ಭೀಮ ಇತ್ಯುಕ್ತೋ ವಾಚೋಮಾ ಮಾತರಃ ಸ್ಮೃತಾಃ । ಋಗಾದ್ಯಾ ಇತಿಹಾಸಶ್ಚ ಪುರಾಣಂ ಪಂಚರಾತ್ರಕಂ । ಪ್ರೋಕ್ತಾಃ ಸಪ್ತಶಿವಾಸ್ತತ್ರ ಶಯೋ ಭೀಮಸ್ತತಃ ಸ್ಮೃತಃ॥(೪) ಮಧ್ವಿತ್ಯಾನಂದ ಉದ್ದಿಷ್ಟೋ ವೇತಿ ತೀರ್ಥಮುದಾಹೃತಂ । ಮಧ್ವ ಆನಂದತೀರ್ಥಃ ಸ್ಯಾತ್ಕೃತೀಯಾ ಮೂರುತೀ ತನುಃ ॥ ಇತಿ ಸೂಕ್ತಗತಂ ರೂಪತ್ರಯಮೇತನ್ಮಹಾತ್ಮನಃ । ಯೋ ವೇದ ವೇದವಿತ್ಸ ಸ್ಯಾತ್ತತ್ತ್ವವಿತ್ತತ್ವಸಾದತಃ ॥ ಇತಿ ಸದ್ಭಾವೇ ॥ ೩ ॥

ಅ ॥ (೧) ಹನು ಎಂಬ ಶಬ್ದವು ಜ್ಞಾನವೆಂಬ ಅರ್ಥವನ್ನು ಹೇಳುತ್ತದೆ. ಹನುಮಂತನಿಗೆ ಮತಿ ಎಂದು ಹೆಸರು. (೨) (ಋತಸ್ಯ ಧೇನಾ ಅನಯಂತ ಸಸ್ರುತಃ ಎಂಬುದಕ್ಕೆ ಅರ್ಥ ಹೇಳುತ್ತಾರೆ -) ಹನುಮಂತನು ಜ್ಞಾನಿಗಿ ಸರ್ವದಾ ಎಲ್ಲಾ ಕಡೆಗಳಲ್ಲಿ ಸತ್ಯರೂಪನಾದ ಅಥವಾ ಸರ್ವದಾ ಏಕಪ್ರಕಾರನಾಗಿರುವ ಶ್ರೀರಾಮದೇವರ ಆಜ್ಞೆಗಳನ್ನು ಸೀತಾದೇವಿಗೆ ತಿಳಿಸಿರುತ್ತಾನೆ. ಮೂಲರಾಮಾಯಣಾದಿಗಳನ್ನು ಶಿಷ್ಯರಿಗೆ ಉಪದೇಶಿಸಿರುವನು. ಗುಣಗಳಿಂದ ಸಮುದ್ರದಂತಿರುವವನು (೩) (ಸಪ್ತ ಶಿವಾಸು ಮಾತೃಷು ಎಂಬುದಕ್ಕೆ ಅರ್ಥ ಹೇಳುತ್ತಾರೆ-) ಎಲ್ಲಾ ಪ್ರಮಾಣಗಳನ್ನು ಜ್ಞಾನಿಗಿ ತಿಳಿದಿರುವುದರಿಂದ ಭೀಮಃ ಎನಿಸುತ್ತಾನೆ. ಪ್ರಮಾಣಭೂತಗಳಾದ ವಚನಗಳು ಭಗವಂತನ ತತ್ತ್ವವನ್ನು ತಿಳಿಸಿಕೊಡುವುದರಿಂದ ಮಾತರಃ ಎನಿಸುತ್ತವೆ. ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದ ಇತಿಹಾಸ ಪುರಾಣ ಪಂಚರಾತ್ರ ಇವುಗಳು ಅತಿಮಂಗಲಕರಗಳು. ಆ ಪ್ರಮಾಣಗಳ ವಿಚಾರದಲ್ಲಿ ಭೀಮನು ಮುಖ್ಯವಾಗಿ ಆಸಕ್ತನಾಗಿಯುವುದರಿಂದ ಭೀಮನೆನಿಸುತ್ತಾನೆ. (೪) (ಪ್ರದಿವೋ ಮಧ್ವ ಆದವೇ ಎಂಬುದಕ್ಕೆ ಅರ್ಥ ಹೇಳುತ್ತಾರೆ—) ಮಧು ಎಂದರೆ ಆನಂದವು ವ ಎಂದರೆ ಶಾಸ್ತ್ರವು ಆನಂದವನ್ನುಂಟುಮಾಡುವ ಶಾಸ್ತ್ರಗಳನ್ನು ನಿರ್ಮಾಣ ಮಾಡಿರುವುದರಿಂದ ವಾಯುದೇವರ ಮೂರನೇ ಅವತಾರಕ್ಕೆ ಮಧ್ವಃ ಎಂದೂ ಆನಂದ ತೀರ್ಥಃ ಎಂದೂ ಹೆಸರು. ಹೀಗೆ ಈ ಬಳಿತ್ಥಾ ಸೂಕ್ತದಲ್ಲಿ ಹೇಳಿದ ವಾಯುದೇವರ ಮೂರು ಅವತಾರಗ

* ಬಳಿತ್ಥಾ ಸೂಕ್ತವು, ಅದರ ಅರ್ಥವೂ ಬೃಹದಾರಣ್ಯಕೋಪನಿಷತ್ತು ಪುಟ ೫೧೧—೫೧೨ರಲ್ಲಿ ಹೇಳಿದೆ.

ಗಳನ್ನು ತಿಳಿದವನು ವೇದಾರ್ಥವನ್ನು ತಿಳಿದವನಾಗಿ ವಾಯುದೇವರ ಅನುಗ್ರಹದಿಂದ ಯಥಾರ್ಥಜ್ಞಾನವು ಳ್ಳವನಾಗುತ್ತಾನೆಂದು ಸದ್ಭಾವ ಎಂಬ ಗ್ರಂಥದಲ್ಲಿದೆ. ॥ ೩ ॥

ಪೀ—ಆಚಾರ್ಯರು ತಾನು ಮಾಡಿದ ಭಾಷ್ಯವನ್ನು ಶ್ರೀಹರಿಯಲ್ಲಿ ಅರ್ಪಿಸುತ್ತಾರೆ—

ಭಾ. ॥ ಆನಂದತೀರ್ಥ ಇತಿ ತು ಯಸ್ಯ ನಾಮ ತೃತೀಯಕಂ । ಪೂರ್ಣಪ್ರಜ್ಞೇನ ತೇನೇದಂ ಕೃತಂ ಭಾಷ್ಯಂ ಹರೇಃ ಪ್ರಿಯಂ ॥ ೪ ॥

ಅ ॥ ಯಾವ ವಾಯುದೇವರ ಆನಂದತೀರ್ಥ ಎಂಬ ಮೂರನೇ ಅವತಾರವೋ, ಅಂತಹ ಪೂರ್ಣ ಪ್ರಜ್ಞಾಚಾರ್ಯರು ಮಾಡಿದ ಭಾಷ್ಯವು ಶ್ರೀಹರಿಗೆ ಪ್ರೀತಿಯನ್ನುಂಟುಮಾಡಲಿ.

ವಿ—ದಶೇತಿ ಸರ್ವಮುದ್ದಿಷ್ಟಂ ಸರ್ವಂ ಪೂರ್ಣಮಿಹೋಚ್ಯತೇ । ಪ್ರಜ್ಞಾ ಪ್ರಮತಿರುದ್ದಿಷ್ಟಾ ಪೂರ್ಣಪ್ರಜ್ಞಸ್ತತಃ ಸ್ಮೃತಃ ಮಧ್ವಿತ್ಯಾನಂದ ಉದ್ದಿಷ್ಟಃ ಎಂಬೀ ಪ್ರಮಾಣಗಳಿಂದವಾಯು ದೇವರ ಮೂರನೇ ಅವತಾರಕ್ಕೆ ಮಧ್ವ=ಆನಂದತೀರ್ಥ, ದಶಪ್ರಮತಿ=ಪೂರ್ಣಪ್ರಜ್ಞ ಎಂಬ ಎರಡು ನಾಮಧೇಯಗಳೂ ಇವೆ. ॥ ೪ ॥

ಪೀ—ಶ್ರೀಹರಿಯ ಸ್ತೋತ್ರ ನಮಸ್ಕಾರಗಳಿಂದಲೇ ಗ್ರಂಥವನ್ನು ಸಮಾಪಿಸಬೇಕು. ತನ್ನ ಸ್ವರೂಪವನ್ನು ನಿರೂಪಿಸಿ ತನ್ನ ಸ್ತುತಿಯಿಂದಲೇ ಗ್ರಂಥವನ್ನು ಸರ್ವಥಾ ಸಮಾಪಿಸಬಾರದೆಂಬ ಅಭಿಪ್ರಾಯದಿಂದ ಭಕ್ತ್ಯಾಧಿಕ್ಯದಿಂದ ಅಂತ್ಯದಲ್ಲಿಯೂ ಶ್ರೀಹರಿಯ ಪ್ರೀತಿಪ್ರಾರ್ಥನ ನಮಸ್ಕಾರರೂಪ ಮಂಗಲವನ್ನು ಮಾಡಿರುತ್ತಾರೆ—

ಭಾ. ॥ ನಿತ್ಯಾನಂದೋ ಹರಿಃ ಪೂರ್ಣೋ ನಿತ್ಯದಾ ಪ್ರೀಯತಾಂ ಮಮ । ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ಚ ವಿಷ್ಣವೇ ॥ ೫ ॥

ಅ ॥ ನಿತ್ಯಾನಂದವುಳ್ಳವನೂ, ಸರ್ವಗುಣಪರಿಪೂರ್ಣನೂ, ಪಾಪಪರಿಹಾರಕನೂ ಆದ ಶ್ರೀ ಪರಮಾತ್ಮನು ನನಗೆ ನಿತ್ಯದಲ್ಲಿಯೂ ಪ್ರೀತನಾಗಲಿ. ಉಪನಿಷತ್ತಿನಲ್ಲಿ ಹೇಳಿದ ಗುಣವಿಶಿಷ್ಟನಾದ ವಿಷ್ಣುವಿಗೆ ನಮಸ್ಕಾರವು ಆಗಲಿ.

ವಿ—ಭಕ್ತಿಪೂರ್ವಕವಾಗಿ ಈ ಉಪನಿಷತ್ತನ್ನು ಅಧ್ಯಯನಮಾಡುವವರಿಗೆ ಶ್ರೀಪರಮಾತ್ಮನು ಪಾಪಪರಿಹಾರಮಾಡಿ ನಿತ್ಯದಲ್ಲಿಯೂ ಪ್ರೀತನಾಗಿ ನಿತ್ಯಾನಂದವುಳ್ಳ ಮೋಕ್ಷಾದಿ ಪುರುಷಾರ್ಥಗಳನ್ನು ಕೊಡುತ್ತಾನೆಂದುಕ್ತವಾಯಿತು. ॥ ೫ ॥

ಓಂ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮಚ್ಛಾಂದೋಗ್ಯ-ಉಪನಿಷದ್ಭಾಷ್ಯೇ ದಶಮೋಽಧ್ಯಾಯಃ ॥ ೧೦ ॥

ಶ್ರೀಮಚ್ಛಾಂದೋಗ್ಯೋಪನಿಷದ್ಭಾಷ್ಯಂ ಸಂಪೂರ್ಣಂ ॥

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಮಾಡಿದ ಶ್ರೀಮತ್ ಛಾಂದೋಗ್ಯ ಉಪನಿಷದ್ಭಾಷ್ಯದಲ್ಲಿ ಹತ್ತನೇ ಅಧ್ಯಾಯವು ಮುಗಿಯಿತು.

ಶ್ರೀಮತ್ ಛಾಂದೋಗ್ಯ ಉಪನಿಷದ್ಭಾಷ್ಯವು ಸಂಪೂರ್ಣವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

ವ್ಯಾಸಂ ಪೂರ್ಣಮತೇರ್ವಿದೋಷಹೃದಯಾಂಭೋಜೇ ಸದಾ ವಾಸಿನಂ
ಶ್ರೀಶಂ ಕಂಜಭವಾದಿಸರ್ವವಿಬುಧೈರ್ನೀಚೋಚ್ಚಭಾವಸ್ಥಿತೈಃ ।
ಉಚ್ಚೈರ್ಗೀಯಮನಂತಸಾಮವಿಭವೈರೋಂಕಾರವಾಚ್ಯಂ ಪರಂ
ವಂದೇ ಸುಂದರವಿಗ್ರಹಂ ಕರುಣಯಾ ಜ್ಞಾನಾಭಯೇತಂ ಮುಹುಃ ॥ ೧ ॥

ಅಗಾಧೇಽಸ್ಮಿನ್ಬಾಷ್ಯೇ ಸುರವರಹರೇಂದ್ರಾದಿವಿಬುಧೈಃ
ಅಲಂ ವ್ಯಾಖ್ಯೇಯೇ ಮೇ ಕೃತಿರಹಹ ಹಾಸಾಸ್ಪದತಮಾ ।
ತಥಾಽಪಿ ಶ್ರೀವ್ಯಾಸಾಲವಮತಿಪದಾಸಕ್ತಿವಶತೋ
ಗುರೂಣಾಂ ಕಾರುಣ್ಯಾದಪಿ ಭವತಿ ಭೂಷಾಕೃತಿರಿಯಂ ॥ ೨ ॥

ಸಮಸ್ತಗುಣಪೂರ್ಣೇನ ಶ್ರೀಪ್ರಾಜಪತಿನೇರಿತಃ ।
ಯದಪವೋಜಮಹಂ ತೇನ ಪ್ರೀಣಾತು ಪುರುಷೋತ್ತಮಃ ॥ ೩ ॥

ವಿದ್ವದಾಪ್ತಃ ಸ ಮಧ್ವೋಽದ್ಯ ಪ್ರೋದ್ಯತ್ಪ್ರದ್ಯೋತನದ್ಯುತಿಃ ।
ಹೃದ್ಯೋಽನವದ್ಯೋ ಬುದ್ಧಿಂ ಮೇ ದದ್ಯಾಜ್ಜ್ಞಾದ್ಧಿಪ್ರಸಿದ್ಧಿಮಾನ್ ॥ ೪ ॥

ಶ್ರೀಕೃಷ್ಣೋ ವಿಟ್ಠಲಃ ಕೋಲಃ ಶ್ರೀವ್ಯಾಸೋ ಹಯಕಂಧರಃ ।
ಪುಷ್ಣಾತ್ವಭೀಷ್ಟಮಸ್ಮಾಕಂ ಪ್ರಸೀದೇದ್ದ ಕಧೀರಪಿ ॥ ೧ ॥

ಶ್ರೀಮಧ್ವಭಾಷ್ಯರುಚಿರಾಂ ಟಪ್ಪಣೀಸಾರಭಾಸುರಾಂ ।
ಛಾಂದೋಗ್ಯಾಖ್ಯೋಪನಿಷದಂ ಕರ್ನಾಟಕಸುಭಾಷಯಾ ॥ ೨ ॥

ಶ್ರೀಮದ್ಭಾರ್ಗವಗೋತ್ರೋತ್ಥತೌಲವಾನ್ವಯಜೋ ದ್ವಿಜಃ ।
ಗುರುರಾಯಸುತಂತ್ರ್ಯಾಖ್ಯತನುಜಾತಃ ಶಿರೋಮಣಿಃ ॥ ೩ ॥

ತಂತ್ರಿನಾರಾಯಣಃ ಶ್ರೀಮದ್ವೈತವಿದ್ವಾನ್ ಸತಾಂ ಮುದೇ ।
ವ್ಯಾಖ್ಯಾತವಾನ್ ಮಧ್ವಮುನಿಸೇವಾಸಂಘನಿದೇಶತಃ ॥ ೪ ॥

ದಶೋಪನಿಷದಾಮೇವಂ ಭಾಷಾಟೀಕಾ ಸಮಾಪಿತಾ ।
ಹರೇರ್ದಶಮತೇಶಾಪಿ ಪ್ರಸಾದಂ ಸಾಧಯೇಚ್ಚಿರಂ ॥ ೫ ॥

ಕೃತ್ಯಾನಯಾ ಯಥಾಬೋಧಂ ಕೃತಯಾ ಪ್ರೀಯತಾಂ ಹರಿಃ ।
ಶ್ರೀಮಧ್ವವಾದಿರಾಜಾದ್ಯಾಃ ಪ್ರೀಯಂತಾಂ ಗುರವಶ್ಚ ನಃ ॥ ೬ ॥

ಆಚಾರ್ಯಃ ಪವನೋಽಸ್ಮಾಕಮಾಚಾರ್ಯಾಣೀ ಚ ಭಾರತೀ ।
ದೇವೋ ನಾರಾಯಣಃ ಶ್ರೇಶೋ ದೇವೀ ಮಂಗಲದೇವತಾ ॥ ೭ ॥

ಈ ಗ್ರಂಥವು ಸಮಾಪ್ತವಾಯಿತು.

॥ ಓಂ ಹರಿಃ ಓಂ ॥

॥ ಶ್ರೀಲಕ್ಷ್ಮೀಹಯಗ್ರೀವಃ ಪ್ರೀಯತಾಂ ॥

॥ ಶ್ರೀಕೃಷ್ಣಾರ್ಪಣಮಸ್ತು ॥